ಶ್ರೀಮನ್ಮಹಾಭಾರತ

ಭಾರತ ದರ್ಶನ ಪ್ರಕಾಶನ



ಅನುಶಾಸನಪರ್ವ

ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್ ।
ದೇವೀಂ ಸರಸ್ವತೀಂ ಚೈವ ತತೋ ಜಯಮುದೀರಯೇತ್ ॥

ಸಂಪುಟ ೨೯

ಭಾರತ ದರ್ಶನ ಪ್ರಕಾಶನ

ಶ್ರೀಮನ್ಮಹಾಭಾರತ

(ವ್ಯಾಸಭಾರತದ ಕನ್ನಡ ಸರಳಾನುವಾದ)

ಭಾತಿ ಸರ್ವೇಷು ವೇದೇಷು
ರತಿಃ ಸರ್ವೇಷು ಜನ್ತುಷು ।
ತರಣಂ ಸರ್ವತೀರ್ಥಾನಾಂ
ತೇನ ಭಾರತಮುಚ್ಯತೇ ॥

ಸಂಪುಟ 29

ಮುದ್ರಕರು:

ಭಾರತ ದರ್ಶನ ಮುದ್ರಣಾಲಯ

163, ಮಂಜುನಾಥ ರಸ್ತೆ, 2ನೇ ಬ್ಲಾಕ್, ತ್ಯಾಗರಾಜನಗರ,
ಬೆಂಗಳೂರು - 560 028
ದೂರವಾಣಿ: 080-26765381

ಪ್ರಥಮ ಇ-ಮುದ್ರಣ ಜನವರಿ ೨೦೧೪

ವಿನಮ್ರವಚಚನಗಳು

ಪರಮಕಾರುಣಿಕನಾದ ಭಗವಂತನ ದಯೆಯಿಂದಲೂ, ದಯಾ ಸಮುದ್ರನಾದ ಗುರುಭಗವಂತನ ದಿವ್ಯಾಶೀರ್ವಾದಗಳಿಂದಲೂ, ಸತ್ಪುರುಷರ ಸಹಕಾರ-ಸದಾಶಯಗಳಿಂದಲೂ ಸಿದ್ಧವಾಗಿರುವ ಶ್ರೀಮನ್ಮಹಾಭಾರತದ ಇಪ್ಪತ್ತೊಂಬತ್ತನೆಯ ವಿಕಸಿತಕುಸುಮವನ್ನು 'ಕೆರೆಯ ನೀರನ್ನು ಕೆರೆಗೆ ಚೆಲ್ಲಿ' ಎಂಬ ಹರಿದಾಸರ ನುಡಿಯಂತೆ ದಿವ್ಯಪುರುಷನ ದಿವ್ಯಪಾದಗಳಲ್ಲರ್ಪಿಸಿ ಅವನ ದಿವ್ಯಪ್ರಸಾದರೂಪವಾದ ಈ ಸಂಪುಟವನ್ನು ನಮ್ಮ ಪ್ರಿಯಗ್ರಾಹಕರ ಅಂಜಲಿಪುಟಗಳಲ್ಲಿಡುತ್ತಿದ್ದೇವೆ. ನಮ್ಮ ಪ್ರಿಯಗ್ರಾಹಕರೆಲ್ಲರೂ ಭಗವತ್ಪ್ರಸಾದರೂಪವಾದ ಈ ಸಂಪುಟವನ್ನು ಭಕ್ತಿ-ಶ್ರದ್ಧೆಗಳಿಂದ ಸ್ವೀಕರಿಸಿ ಇದರಲ್ಲಿರುವ ಮಹಾವಿಷ್ಣುವಿನ ಸಹಸ್ರನಾಮಗಳನ್ನು ಅನವರತ ವಾಗಿ ಪಠಿಸುತ್ತಾ ಪಾವನರಾಗಬೇಕೆಂದು ಆಶಿಸುತ್ತೇವೆ.

ಈ ಮಹಾಕಾರ್ಯವು ಅವನದೇ ಎಂಬುದನ್ನು ಮತ್ತೊಂದು ಪವಾಡ ದಿಂದಲೂ ಪರಮಾತ್ಮನೂ ತೋರಿಸಿಕೊಟ್ಟಿದ್ದಾನೆ. ನಮಗೆ ಹಿಂದೆ ಸಿಕ್ಕುತ್ತಿದ್ದಂತೆ ರಿಯಾಯಿತಿದರದಲ್ಲಿ ಕಾಗದವು ಸಿಕ್ಕದಿದ್ದ ವಿಷಯವು ನಮ್ಮ ಗ್ರಾಹಕರೆಲ್ಲರಿಗೂ ತಿಳಿದೇ ಇದೆ. 26, 27 ಮತ್ತು 28ನೇ ಸಂಪುಟಗಳನ್ನು ನಾವು ಮಾರುಕಟ್ಟೆಯಲ್ಲಿ ಕೊಂಡ ಕಾಗದದಿಂದಲೇ ಸಿದ್ಧಗೊಳಿಸಬೇಕಾಯಿತು. 5 ಮತ್ತು 6 ನೇ ಸಂಪುಟಗಳ ಪುನರ್ಮುದ್ರಣವನ್ನೂ ಮಾರುಕಟ್ಟೆಯಲ್ಲಿ ಪಡೆದ ಕಾಗದದಿಂದಲೇ ಮಾಡಬೇಕಾಯಿತು. ಇದರಿಂದ ಲಕ್ಷಾಂತರ ರೂಪಾಯಿಗಳು ಹೆಚ್ಚು ವೆಚ್ಚವಾದುವು. ನಾವು ಪುನಃ-ಪುನಃ ಪ್ರಯತ್ನಿಸುತ್ತಿದ್ದರೂ ರಿಯಾಯಿತಿ ದರದಲ್ಲಿ ಕಾಗದವು ಸಿಕ್ಕುವುದೆಂಬ ಭರವಸೆಯು ಸ್ವಲ್ಪವಾದರೂ ಇರಲೇ ಇಲ್ಲ. 29ನೇ ಸಂಪುಟವನ್ನು ಪ್ರಾರಂಭಿಸುವ ವೇಳೆಗೆ ಕಾಗದದ ಬೆಲೆಯು ಕಳೆದವರ್ಷಕ್ಕಿಂತಲೂ ಅಧಿಕವಾಯಿತು. ಮುಂದೇನು?–ಎಂಬ ಪ್ರಶ್ನೆ ಹಗಲು-ರಾತ್ರಿ ಕಾಡುತ್ತಿದ್ದಿತು. ಮಾರ್ಗವನ್ನು ತೋರಿಸುವಂತೆ ದಯಾಮಯನಾದ ಪರಮಾತ್ಮನಲ್ಲಿ ಪ್ರತಿಕ್ಷಣದಲ್ಲಿಯೂ ಮೊರೆಯಿಡಲಾಗುತ್ತಿತ್ತು. ಹೆಳವನನ್ನು ಬೆಟ್ಟದ ತುದಿಗೆ ಹತ್ತಿಸಿರುವ ಮಹಾಪುರುಷನಲ್ಲವೇ ಅವನು! ಅವನು ಇಚ್ಛಿಸಿದರೆ ಯಾವುದು ತಾನೇ ಅಸಾಧ್ಯ? ರಿಯಾಯಿತಿ ದರದಲ್ಲಿ ಕಾಗದವು ಸಿಕ್ಕಿತು. ಅನಿರೀಕ್ಷಿತವಾಗಿ ಸಿಕ್ಕಿತು. ಧರ್ಮಾಭಿಮಾನಿಗಳಾದ

ಅಧಿಕಾರಿಗಳು 3 ಸಂಪುಟಗಳಿಗೆ ಸಾಕಾಗುವಷ್ಟು ರಿಯಾಯಿತಿ ದರದ ಕಾಗದವನ್ನು ಮಂಜೂರು ಮಾಡಿರುತ್ತಾರೆ. ಪರಮಾತ್ಮನ ಪ್ರೇರಣೆಯಂತೆ ರಿಯಾಯಿತಿ ದರದ ಕಾಗದವನ್ನು ದೊರಕಿಸಿಕೊಡಲು ನೆರವಾದವರೆಲ್ಲರಿಗೂ ನಮ್ಮ ಹೃತ್ಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತೇವೆ. ಅವರೆಲ್ಲರಿಗೂ ದಯಾಮಯನಾದ ಪರಮಾತ್ಮನು ಸಕಲೇಷ್ಟಾರ್ಥಗಳನ್ನೂ ದಯಪಾಲಿಸಲಿ.

28ನೆಯ ಸಂಪುಟವನ್ನು ಮುಗಿಸಿ 6ನೇ ಸಂಪುಟದ ಪುನರ್ಮುದ್ರಣ ಮಾಡಿದೆವು. ಅನಂತರ 29ನೇ ಸಂಪುಟವನ್ನು ಮುದ್ರಣಕ್ಕೆ ತೆಗೆದುಕೊಳ್ಳಲಾಯಿತು. ಜುಲೈ ತಿಂಗಳಿನಲ್ಲಿಯೇ ಪ್ರಕಟಿಸಬೇಕೆನ್ನುವ ಆಶಯವಿದ್ದಿತು. ಆದರೆ ವಿದ್ಯುಚ್ಛಕ್ತಿಯ ಅನವರತವಾದ ತೊಂದರೆಯಿಂದಾಗಿ ಎರಡು ತಿಂಗಳು ತಡವಾಯಿತು. ಮೇಲಾಗಿ ಈ ಸಂಪುಟದಲ್ಲಿ 100 ಪುಟಗಳು ಹೆಚ್ಚಾಗಿರುವುದೂ ಸಾವಕಾಶಕ್ಕೆ ಸ್ವಲ್ಪ ಕಾರಣವೆನ್ನಬಹುದು. ಅನುಶಾಸನ ಪರ್ವದ 149ನೆಯ ಅಧ್ಯಾಯವಾಗಿ ವಿಷ್ಣುಸಹಸ್ರನಾಮವು ಈ ಸಂಪುಟದಲ್ಲಿ ಬಂದಿರುತ್ತದೆ. ಪ್ರಚಲಿತವಾಗಿರುವ ಶಾಂಕರ, ಪಾರಾಶರ್ಯ ಮತ್ತು ಸತ್ಯಸಂಧೀಯ ವ್ಯಾಖ್ಯಾನಗಳನ್ನು ಕೊಡಲಾಗಿದೆ. ಪಾರಾಯಣಕ್ಕೆ ಅನುಕೂಲವಾಗುವಂತೆ ಪೂರ್ವಾಂಗ ಮತ್ತು ಉತ್ತರಾಂಗಯುಕ್ತವಾದ ಸ್ತೋತ್ರವನ್ನೂ ಮತ್ತು ನಾಮಾವಳಿಯನ್ನೂ ಪ್ರತ್ಯೇಕವಾಗಿ ಕೊಡಲಾಗಿದೆ. ನಮ್ಮ ಗ್ರಾಹಕರೆಲ್ಲರೂ ವಿಷ್ಣುಸಹಸ್ರನಾಮಸ್ತೋತ್ರವನ್ನು ಪಾರಾಯಣಮಾಡಿ ಐಹಿಕ ಮತ್ತು ಆಮುಷ್ಮಿಕಫಲಗಳನ್ನು ಪಡೆದುಕೊಳ್ಳಲಿ–ಎಂಬ ಸದಾಶಯದಿಂದ ಇವೆಲ್ಲವನ್ನೂ ಪ್ರಕಟಿಸಲಾಗಿದೆ. ನಮ್ಮ ಪ್ರಿಯಗ್ರಾಹಕರು ನಮ್ಮ ಸದುದ್ದೇಶವನ್ನು ಸಾರ್ಥಕಗೊಳಿಸುವರೆಂಬ ಭರವಸೆಯಿದೆ. ಮಹಾಭಾರತವನ್ನು ಮುಗಿಸಲು ಇನ್ನೂ 3 ಸಂಪುಟಗಳನ್ನು ಪ್ರಕಟಿಸಬೇಕಾಗಿದೆ. 30 ಸಂಪುಟಗಳಿಗೆ ಮಾತ್ರ ನಾವು ನಮ್ಮ ಗ್ರಾಹಕರಿಂದ ಹಣವನ್ನು ಪಡೆದಿರುತ್ತೇವೆ. ಉಳಿದೆರಡು ಸಂಪುಟಗಳಿಗೆ ನಮ್ಮ ಪೂರ್ಣಮಾಲೆಯ ಗ್ರಾಹಕರು ದಯಮಾಡಿ ಹಣವನ್ನು ಕಳುಹಿಸಬೇಕು. ಸಂಪುಟ 1ಕ್ಕೆ ಪ್ರಕಾಶನಾತ್ಪೂರ್ವ ಬೆಲೆ ಸಾಧಾರಣ ಪ್ರತಿ 12/- ರೂ. ಅಥವಾ ಕ್ಯಾಲಿಕೋ ಪ್ರತಿ 14/- ರೂ.ಗಳಂತೆ 24/- ಅಥವಾ 28/- ರೂ.ಗಳನ್ನು ಮುಂದಾಗಿಯೇ ಕಳುಹಿಸಿದರೆ ಹೆಚ್ಚು ಉಪಕಾರವಾಗುತ್ತದೆ. ಮಹಾಭಾರತವನ್ನು ಮುಗಿಸಿದನಂತರ ಶ್ರೀಮದ್ವಾಲ್ಮೀಕಿರಾಮಾ

ಯಣವನ್ನು 640 ಪುಟಗಳ ಹತ್ತು ಸಂಪುಟಗಳಲ್ಲಿ ಪ್ರಕಟಿಸಲು ಗುರುಭಗವಂತನ ಪ್ರೇರಣೆಯಂತೆ ನಿಶ್ಚಯಿಸಿರುತ್ತೇವೆ. ಕ್ರೋಧನಸಂವತ್ಸರದ ಶ್ರೀರಾಮನವಮಿಯಿಂದ ಪ್ರಕಟಣೆಯನ್ನು ಪ್ರಾರಂಭಿಸುವ ಆಶಯವಿದೆ. ಇದರ ಪೂರ್ಣಮಾಲೆಯ ಚಂದಾಹಣ : ಸಾಧಾರಣಪ್ರತಿಗಳಿಗೆ 120/- ರೂ.ಗಳು. ಕ್ಯಾಲಿಕೋಪ್ರತಿಗಳಿಗೆ 150/- ರೂ.ಗಳು. ಮಹಾಭಾರತದ ಗ್ರಾಹಕರೆಲ್ಲರೂ ಅವಶ್ಯವಾಗಿ ರಾಮಾಯಣವಿಭಾಗಕ್ಕೂ ಗ್ರಾಹಕರಾಗಬೇಕೆಂದು ವಿನಂತಿಸುತ್ತೇವೆ. ನಮ್ಮ ಪ್ರಿಯಗ್ರಾಹಕರೇ ನಮ್ಮ ಬಂಡವಾಳ. ದಯಮಾಡಿ ಸಹಕರಿಸಿರಿ. ವ್ಯವಸ್ಥಾಪಕ, 'ಭಾರತ ದರ್ಶನ' ಎಂಬ ವಿಳಾಸಕ್ಕೆ ಶ್ರೀಮದ್ರಾಮಾಯಣದ ಪೂರ್ಣಮಾಲೆಯ ಚಂದಾಹಣವನ್ನು ಈಗಿನಿಂದಲೇ ಕಳುಹಿಸಬಹುದು.

ಶ್ರೀಮನ್ಮಹಾಭಾರತದ 28ನೆಯ ಸಂಪುಟದ ಪ್ರಕಾಶನವು ತಾ.11-2-84ನೇ ಸಾಯಂಕಾಲ 6-15ಕ್ಕೆ ನರಸಿಂಹರಾಜಾಕಾಲೋನಿಯಲ್ಲಿರುವ ಶ್ರೀರಾಮಮಂದಿರದಲ್ಲಿ ಶ್ರೀ ರಾಮಕೃಷ್ಣಾಶ್ರಮದ ಅಧ್ಯಕ್ಷರಾದ ಪೂಜ್ಯ ಶ್ರೀ ಸ್ವಾಮೀ ಚಿದಾನಂದಜೀಮಹಾರಾಜರ ಅಧ್ಯಕ್ಷತೆಯಲ್ಲಿ ನೆರವೇರಿತು. ಮಾಸ್ಟರ್ ಹಿರಣ್ಮಯ್ಯನವರು ಮುಖ್ಯ ಅತಿಥಿಗಳಾಗಿದ್ದರು. ಸಮಾರಂಭವು ವೇದಘೋಷದೊಡನೆ ಪ್ರಾರಂಭವಾಯಿತು. ಕುಮಾರೀ ನಾಗಮಣಿಯವರು ಸ್ವಾಗತಪದ್ಯಮಾಲಿಕೆಯನ್ನು ಸುಶ್ರಾವ್ಯವಾಗಿ ಹಾಡಿದರು. ಹಿರಿಯ ಸಂಪಾದಕರಾದ ವಿದ್ವಾನ್ ಹೆಚ್. ಎನ್. ರಂಗಸ್ವಾಮಿಯವರು ಸ್ವಾಗತಭಾಷಣವನ್ನು ಮಾಡಿದರು. ವೇದಘೋಷ-ಮಂಗಳವಾದ್ಯಗಳು ಮೊಳಗುತ್ತಿರಲಾಗಿ ಮಾಸ್ಟರ್ ಹಿರಣ್ಣಯ್ಯನವರು ಸಂಪುಟವನ್ನು ಪ್ರಕಾಶನಗೊಳಿಸಿದರು. ಕುಮಾರೀ ನಾಗವೇಣಿಯವರು ಸಂಪುಟದಿಂದ ಆಯ್ದ ಶ್ಲೋಕಗಳನ್ನು ಸುಶ್ರಾವ್ಯವಾಗಿ ಹಾಡಿದರು. ಬಳಿಕ ಪ್ರಕಾಶನದ ಅಧ್ಯಕ್ಷರಾದ ವಿದ್ವಾನ್ ವರದದೇಶಿಕಾಚಾರ್ಯರಂಗಪ್ರಿಯರು ತಮ್ಮ ಅಸ್ಖಲಿತವಾದ ವಾಣಿಯಿಂದ ಸಂಪುಟದ ಪರಿಚಯವನ್ನು ಮಾಡಿಕೊಟ್ಟರು. ಅನಂತರ ಮಾಸ್ಟರ್ ಹಿರಣ್ಣಯ್ಯನವರು ಮಹಾಭಾರತದ ಮಹತ್ತ್ವದ ಬಗೆಗೆ ಸ್ಫೂರ್ತಿದಾಯಕವಾದ ಮಾತುಗಳನ್ನಾಡಿ ಕಡೆಯಲ್ಲಿ ಭಾರತದರ್ಶನ ಸಂಸ್ಥೆಯ ಸಹಾಯಾರ್ಥವಾಗಿ ಒಂದು ನಾಟಕವನ್ನು ಪ್ರದರ್ಶಿಸುವುದಾಗಿ ಆಶ್ವಾಸನೆಯನ್ನಿತ್ತರು.

ಅನಂತರ ಅನುಗ್ರಹಭಾಷಣಮಾಡಿದ ಪರಮಪೂಜ್ಯ ಶ್ರೀ ಚಿದಾನಂದಜೀ ಮಹಾರಾಜರವರು 'ಭಾರತೀಯಧರ್ಮ, ಚಿಂತನೆ, ಸಂಸ್ಕೃತಿ, ಸಾಹಿತ್ಯಗಳ ಭವ್ಯಸೌಧವು ನಿಂತಿರುವುದು ವೇದ, ಉಪನಿಷತ್ತು, ರಾಮಾಯಣ, ಮಹಾಭಾರತ, ಹದಿನೆಂಟು ಪುರಾಣಗಳ ಅಸ್ತಿಭಾರದ ಮೇಲೆ. ಎಂದಿನವರೆಗೆ ನಾವು ಈ ಮಹಾಗ್ರಂಥಗಳಿಗೆ ಸರಿಯಾದ ರೀತಿಯಲ್ಲಿ ಮರ್ಯಾದೆಯನ್ನು ಕೊಟ್ಟು ಅವುಗಳ ಅಧ್ಯಯನಮಾಡಿ ಅವುಗಳನ್ನು ಉಳಿಸಿಕೊಳ್ಳುತ್ತೇವೆಯೋ–ಅಲ್ಲಿನವರೆಗೆ ನಮ್ಮ ಭಾರತೀಯಸಂಸ್ಕೃತಿಯು ಅಚ್ಚಳಿಯದೇ ಉಳಿಯುತ್ತದೆ'–ಎಂದು ಉದ್ಘೋಷಿಸಿ ಭಾರತ ದರ್ಶನ ಸಂಸ್ಥೆಯು ಮಾಡುತ್ತಿರುವ ಈ ಕಾರ್ಯವನ್ನು ಬಹಳವಾಗಿ ಪ್ರಶಂಸಿಸಿದರು.

ಪರಮಹಂಸಪರಿವ್ರಾಜಕಾಚಾರ್ಯ ಜಗದ್ಗುರು ಶ್ರೀ ಶಂಕರಾಚಾರ್ಯ ಶ್ರೀ ಶ್ರೀ ರಾಘವೇಂದ್ರಭಾರತೀಸ್ವಾಮಿಗಳವರು, ರಾಮಚಂದ್ರಾಪುರಮಠ–ಇವರು ಕಳುಹಿಸಿಕೊಟ್ಟಿದ್ದ ಸುವರ್ಣಮಂತ್ರಾಕ್ಷತೆಯನ್ನೂ, ಶ್ರೀ ಸಾಲೀ ಗುಂಡಪ್ಪಶಾಸ್ತ್ರಿ ಉರುಫ್ ಸುಬ್ರಹ್ಮಣ್ಯಶಾಸ್ತ್ರೀ ಜ್ಯೋತಿಷಿ–ಇವರು ಕೊಟ್ಟ ಸಂಭಾವನೆಯನ್ನೂ ಶ್ರೀ ಶ್ರೀ ಚಿದಾನಂದಜೀಮಹಾರಾಜರು ತಮ್ಮ ಅಮೃತ ಹಸ್ತದಿಂದ ಸಂಪಾದಕಮಂಡಲಿಯ ಸದಸ್ಯರಿಗೆ ದಯಪಾಲಿಸಿದರು. ವಿದ್ವಾನ್ ರಾಮೇಶ್ವರಾವಧಾನಿಗಳು ವಂದನಾರ್ಪಣೆಯನ್ನು ಮಾಡಿದನಂತರ ಶಾಂತಿ ಪಾಠದೊಂದಿಗೆ ಸಮಾರಂಭವು ಮುಕ್ತಾಯವಾಯಿತು.

ಸನ್ಮಾನ್ಯ ಮಾಸ್ಟರ್ ಹಿರಣ್ಣಯ್ಯನವರು ಆಶ್ವಾಸನೆಯಿತ್ತಿದ್ದಂತೆ "ನಡುಬೀದಿ ನಾರಾಯಣ" ಎಂಬ ಸಹಾಯಾರ್ಥ ನಾಟಕವನ್ನು ತಾ : 20-5-1984ನೆಯ ಭಾನುವಾರ ಬೆಳಗ್ಗೆ 11 ಘಂಟೆಗೆ ರವೀಂದ್ರ ಕಲಾಕ್ಷೇತ್ರದಲ್ಲಿ ಮಾಸ್ಟರ್ ಹಿರಣ್ಣಯ್ಯ ಮಿತ್ರಮಂಡಲಿಯವರು ನಡೆಸಿಕೊಟ್ಟರು. ಭಾರತ ದರ್ಶನದ ಬಂಧುಗಳ ಮೂಲಕವಾಗಿ ಟಿಕೆಟ್‌ಗಳು ಮಾರಾಟವಾಗಿ 24,635/- ರೂ. ಗಳು ಸಂಗ್ರಹವಾಯಿತು. ಖರ್ಚು ಕಳೆದು ಸುಮಾರು 20,600/- ರೂ.ಗಳಷ್ಟು ಹಣವು ಭಾರತ ದರ್ಶನ ಪ್ರಕಾಶನ ಸಂಸ್ಥೆಗೆ ಲಭಿಸಿತು. ಹೀಗೆ ತಾವು ಹೇಳಿದ ಮಾತನ್ನು ನಡೆಸಿಕೊಟ್ಟು ಧರ್ಮಸಂಸ್ಥೆಗೆ ಸಹಾಯ ಮಾಡಿದುದಕ್ಕಾಗಿ ಮಾಸ್ಟರ್ ಹಿರಣ್ಣಯ್ಯ ಮತ್ತು ಮಿತ್ರಮಂಡಲಿಯವರಿಗೆ ಕೃತಜ್ಞರಾಗಿದ್ದೇವೆ. ಆ ಸಮಯದಲ್ಲಿ ಟಿಕೆಟ್‌ಗಳ ಮಾರಾಟಕ್ಕೆ ಸಹಕಾರವಿತ್ತು

ಸಹಕರಿಸಿದ ನೂರಾರು ಮಂದಿ ಸನ್ಮಿತ್ರರಿಗೆ ನಮ್ಮ ಅನಂತಾನಂತ ವಂದನೆಗಳು.

ಇತ್ತೀಚೆಗೆ ಹಲವಾರು ಮಂದಿ ನಮ್ಮ ಸಂಸ್ಥೆಗೆ ಅಪ್ರಾರ್ಥಿತವಾಗಿ ಧನ ಸಹಾಯಮಾಡಿರುತ್ತಾರೆ. ಇಂತಹ ಕೊಡುಗೆಗಳು ಸಾತ್ವಿಕವಾದುದೆಂದೂ– ಶುದ್ಧವಾದುದೆಂದೂ ಭಾವಿಸಿ ಕೃತಜ್ಞತೆಯಿಂದ ಸ್ವೀಕರಿಸಲಾಗಿದೆ.

ಕೆನರಾ ಬ್ಯಾಂಕಿನವರು ತಮ್ಮ ಸುಮಾರು 100 ಶಾಖೆಗಳ ಮೂಲಕ ಇದುವರೆಗೆ ಸುಮಾರು 1,300 ಮಂದಿಗೆ ಮಹಾಭಾರತಕ್ಕಾಗಿ ಸಾಲವನ್ನು ನೀಡಿ ಪ್ರೋತ್ಸಾಹಿಸಿದ್ದಾರೆ. ಸಿಂಡಿಕೇಟ್ ಬ್ಯಾಂಕಿನವರು ತಮ್ಮ ಸುಮಾರು 80 ಶಾಖೆಗಳ ಮೂಲಕ ಸುಮಾರು 800 ಮಂದಿಗೆ ಸಾಲವನ್ನು ಒದಗಿಸಿದ್ದಾರೆ. ಹಾಗೆಯೇ ಕಾರ್ಪೋರೇಷನ್ ಮತ್ತು ಕರ್ನಾಟಕ ಬ್ಯಾಂಕಿನವರೂ ನೂರಾರು ಸದಸ್ಯರಿಗೆ ತಮ್ಮ ಸುಮಾರು 50-60 ಶಾಖೆಗಳ ಮೂಲಕ ಮಹಾಭಾರತವನ್ನು ಕೊಳ್ಳಲು ಸಾಲಸೌಲಭ್ಯವನ್ನು ಕಲ್ಪಿಸಿಕೊಟ್ಟಿರುತ್ತಾರೆ. ಇವರೆಲ್ಲರಿಗೂ ನಮ್ಮ ಹೃತ್ಪೂರ್ವಕ ಅಭಿನಂದನೆಗಳು. ಈ ವರ್ಷದ ಕಡೆಯವರಿಗೂ ಇವರು ಸಾಧ್ಯವಾದಷ್ಟು ಹೆಚ್ಚು ಮಂದಿಗೆ ಸಾಲಸೌಲಭ್ಯವನ್ನು ಕಲ್ಪಿಸಿಕೊಟ್ಟು ಸಾವಿರಾರು ಮಂದಿ ಗ್ರಾಹಕರಾಗುವಂತೆ ಮಾಡಬೇಕೆಂದು ಕಳಕಳಿಯಿಂದ ಪ್ರಾರ್ಥಿಸುತ್ತೇವೆ.

ಕೇಂದ್ರವೊಂದೇ ಇರುವ ದಿ ನ್ಯಾಷನಲ್ ಕೋ-ಆಪರೇಟಿವ್ ಬ್ಯಾಂಕಿನ ವಿಷಯವಾಗಿ ಒಂದು ಮಾತು ಬರೆಯದಿದ್ದರೆ ತಪ್ಪಾದೀತು. ನಗರದ ಬಸವನಗುಡಿ ರಸ್ತೆಯಲ್ಲಿರುವ ಈ ಬ್ಯಾಂಕ್ ಇದುವರೆಗೆ 241 ಮಂದಿಗೆ ಸಾಲಸೌಲಭ್ಯವನ್ನು ಒದಗಿಸಿಕೊಟ್ಟು ಮಹಾಭಾರತಕ್ಕೆ ಮೀಸಲಾದ ಬ್ಯಾಂಕ್– ಎಂದು ಕೀರ್ತಿಯನ್ನು ಗಳಿಸಿದೆ. ಈ ವರ್ಷದ ಕಡೆಯೊಳಗಾಗಿ ಐದು ನೂರು ಮಂದಿಗೆ ಸಾಲದ ಸೌಲಭ್ಯವನ್ನು ಒದಗಿಸಿ ಕೊಡಬೇಕೆಂದು ನಾವು ಇವರನ್ನು ಪ್ರಾರ್ಥಿಸಿದ್ದೇವೆ. ನಡೆಸಿಕೊಡುವರೆಂಬ ಭರವಸೆಯಿದೆ. ಮಹಾಭಾರತದ ಪೂರ್ಣಮಾಲೆಗೆ ಸದಸ್ಯರಾಗಲು ಅಪೇಕ್ಷಿಸುವವರಿಗೆ ಸಂಪೂರ್ಣವಾಗಿ ಸಹಕಾರವನ್ನು ಕೊಡುತ್ತಿರುವ ಈ ಬ್ಯಾಂಕಿನ ಮ್ಯಾನೇಜರ್‌ರವರಿಗೂ ಮತ್ತು ಆಡಳಿತವರ್ಗದವರಿಗೂ ನಮ್ಮ ಹೃತ್ಪೂರ್ವಕವಂದನೆಗಳು.

ವಿಷ್ಣುಸಹಸ್ರನಾಮದ ವಿವರಣೆಯು ಪ್ರಕಾಶನದ ಅಧ್ಯಕ್ಷರಾದ ವಿದ್ವಾನ್ ಹೆಚ್. ಎಸ್. ವರದದೇಶಿಕಾಚಾರ್ಯರಂಗಪ್ರಿಯರ ನೇತೃತ್ವದಲ್ಲಿ ಸಂಪಾದಕಮಂಡಲಿಯ ಸಹಕಾರದೊಡನೆ ಸಿದ್ಧವಾಗಿದೆ. ಸಂಪಾದಕ ಮಂಡಲಿಯ ವಿದ್ವಾಂಸರು ಯಥಾಪೂರ್ವಶ್ರದ್ಧೆಯಿಂದಲೂ, ಪ್ರೀತ್ಯಾದರ ಗಳಿಂದಲೂ, ನಿಃಸ್ಪೃಹತೆಯಿಂದಲೂ ಈ ಮಹಾಗ್ರಂಥವನ್ನು ಸಂಪಾದಿಸಿ ಕೊಡುತ್ತಿದ್ದಾರೆ. ಇಂತಹ ಸೌಜನ್ಯಶೀಲರಾದ, ಸರಳರಾದ, ಕಾರ್ಯನಿಷ್ಠ ರಾದ, ಸಾತ್ತ್ವಿಕರಾದ, ತಪೋನಿಷ್ಠರಾದ, ನಿಃಸ್ಪೃಹರಾದ ವಿದ್ವಾಂಸರನ್ನು ಒದಗಿಸಿಕೊಟ್ಟು ಭಗವಂತನು ಈ ಮಹಾಕಾರ್ಯವನ್ನು ಆಗುಮಾಡಿಸಿ ಕೊಡುತ್ತಿದ್ದಾನೆ. ಅವನ ಮಹಾಸಂಕಲ್ಪವು ಎಂತಹುದು?–ಎಂಬುದನ್ನು ಯಾರಿಂದಲೂ ಅರಿಯಲು ಸಾಧ್ಯವಾಗುವುದಿಲ್ಲ. ಪ್ರಸಕ್ತಸಂದರ್ಭದಲ್ಲಿ ಇದು ಅಚ್ಚರಿಯಾಗಿ ಕಾಣದಿದ್ದರೂ ಕಾಲವು ಗತಿಸಿದನಂತರ ಇದೊಂದು ಪರಮಾತ್ಮನ ಅದ್ಭುತ ಪವಾಡವೇ ಎಂಬುದನ್ನು ಎಲ್ಲರೂ ತಿಳಿಯುತ್ತಾರೆ. ಅಂತಹ ಅದ್ಭುತಪರಾಕ್ರಮನಾದ ಪರಮಾತ್ಮನು ನಮ್ಮ ಸಂಪಾದಕ ಮಂಡಲಿಯ ವಿದ್ವಾಂಸರಿಗೆ ಅವರ ಮನೋವಾಂಛಿತಗಳನ್ನಿತ್ತು ಕಾಪಾಡ ಲೆಂದು ಅನನ್ಯಚಿತ್ತರಾಗಿ ಪ್ರಾರ್ಥಿಸುವುದರ ಹೊರತಾಗಿ ಬೇರೇನು ತಾನೆ ಮಾಡಲು ಸಾಧ್ಯ?

ಪ್ರಕಾಶನದ ಅಧ್ಯಕ್ಷರಾದ ವಿದ್ವಾನ್ ಹೆಚ್. ಎಸ್. ವರದದೇಶಿಕಾ ಚಾರ್ಯರಂಗಪ್ರಿಯರೇ ಈ ಸಂಪುಟಕ್ಕೆ ವಿದ್ವತ್ಪೂರ್ಣವಾದ ಪೀಠಿಕೆಯನ್ನೂ ಬರೆದುಕೊಟ್ಟು ಉಪಕರಿಸಿರುತ್ತಾರೆ. ಇವರಿಗೆ ನಮ್ಮ ಹೃತ್ಪೂರ್ವಕ ವಂದನೆ ಗಳು.

ತೆರೆಮರೆಯಲ್ಲೇ ಇದ್ದುಕೊಂಡು ಮಹಾಭಾರತಕ್ಕೆ ಗ್ರಾಹಕರನ್ನು ಸಂಗ್ರಹಿಸಿಕೊಡಲು ಸತತವಾಗಿ ಪ್ರಯತ್ನಿಸುತ್ತಿರುವ ನಮ್ಮ ನೂರಾರು ಸನ್ಮಿತ್ರರಿಗೆ ನಮ್ಮ ಅನಂತಾನಂತವಂದನೆಗಳು.

ಸ್ವರ್ಗಾರೋಹಣಪರ್ವಕ್ಕೆ ಇನ್ನು ಮೂರು ಮೆಟ್ಟಿಲುಗಳಿವೆ. ಅವು ಗಳನ್ನು ಸುಲಭವಾಗಿ ಹತ್ತುವ ಚೈತನ್ಯವನ್ನು ಪರಮಾತ್ಮನು ದಯಪಾಲಿಸ ಲೆಂಬ ದೈನ್ಯಪ್ರಾರ್ಥನೆಯೊಡನೆ ವಿರಮಿಸುವೆವು.

–ಪ್ರಕಾಶಕರು.

ಓಂ ನಮೋ ಭಗವತೇ ವಾಸುದೇವಾಯ

ಪೀಠಿಕೆ

ಶ್ರೀಮನ್ಮಹಾಭಾರತಮಹಾವೃಕ್ಷದಲ್ಲಿ ಧರ್ಮದ ಮತ್ತು ಬ್ರಹ್ಮದ ವಿಷಯದಲ್ಲಿ ಪ್ರಾಮಾಣಿಕವಾದ ಅನುಶಾಸನಗಳನ್ನು ನೀಡುವ ಒಂದು ಮಹಾಪರ್ವವಾಗಿದೆ ಅನುಶಾಸನಪರ್ವ. ಅದರಲ್ಲಿ ವಿಕಾಸಗೊಂಡಿರುವ ಭಗವದ್ಭಕ್ತಿ ಮತ್ತು ಜ್ಞಾನಪುಷ್ಪಗಳ ಗೊಂಚಲಾಗಿರುವ ಶ್ರೀಮದ್ವಿಷ್ಣುಸಹಸ್ರ ನಾಮಸ್ತೋತ್ರವು ಈ ಮಹಾಭಾರತಸಂಪುಟವನ್ನು ಪ್ರಧಾನವಿಷಯವಾಗಿ ಅಲಂಕರಿಸಿದೆ.

೧) ಸಹಸ್ರನಾಮಗಳ ಸ್ಥಾನ-ಮಾನಗಳು

'ಸಹಸ್ರನಾಮ'ಕ್ಕೆ ನಮ್ಮ ಸಂಪ್ರದಾಯದಲ್ಲಿ ಅತ್ಯಂತಪೂಜ್ಯವಾದ ಮತ್ತು ಪ್ರಮುಖವಾದ ಸ್ಥಾನವಿದೆ. ವೈದಿಕರ ಮನೆಗಳಲ್ಲಿ ನಿತ್ಯಕರ್ಮಗಳ ಬಗೆಗೆ ವಿಚಾರಮಾಡುವಾಗ, "ಸ್ನಾನವಾಯಿತೇ? ಸಂಧ್ಯಾವಂದನೆಯಾ ಯಿತೇ? ಸಹಸ್ರನಾಮವಾಯಿತೇ? ದೇವರ ಪೂಜೆಯಾಯಿತೇ?"–ಎಂದು ಮೊದಲಾಗಿ ಕೇಳುವುದು ಪದ್ಧತಿ. ಸಂಧ್ಯಾವಂದನೆಯನಂತರ ಮಾಡಬೇಕಾದ ಅಷ್ಟೇಮುಖ್ಯವಾದ ಕರ್ಮ ಸಹಸ್ರನಾಮದ ಪಾರಾಯಣ–ಎಂದು ಇದರಿಂದ ಸೂಚಿತವಾಗುತ್ತದೆ. ಮನೆಗಳಲ್ಲಿಯೂ ದೇವಾಲಯಗಳಲ್ಲಿಯೂ ಪ್ರತಿ ನಿತ್ಯದ ದೇವರ ಪೂಜೆಯ ಅಂಗವಾಗಿಯೂ ಸಹಸ್ರನಾಮಸ್ತೋತ್ರದ ಪಾರಾ ಯಣವನ್ನೂ ಮತ್ತು ಅದರ ನಾಮಾವಳಿಗಳಿಂದ ಅರ್ಚನೆಯನ್ನೂ ಮಾಡುವ ರೂಢಿಯೂ ನಮಗೆ ತಿಳಿದಿದೆ. ಇದಲ್ಲದೇ ವಿಶೇಷಸಂದರ್ಭಗಳಲ್ಲಿ ಅನಿಷ್ಟ ಪರಿಹಾರ ಮತ್ತು ಇಷ್ಟಾರ್ಥಗಳ ಪ್ರಾಪ್ತಿಗಳಿಗಾಗಿ ಸಹಸ್ರನಾಮಗಳ ಜಪ ವನ್ನೂ ಸಹಸ್ರನಾಮಾರ್ಚನೆಯನ್ನೂ ದೇವರಿಗೆ ಮಾಡಿಸುವ ವಾಡಿಕೆಯೂ ಇದೆ. ಈ ಸಂಬಂಧದಿಂದ ದೇವರನ್ನೇ, 'ಸಾವಿರ ನಾಮಗಳ ಸ್ವಾಮಿ' (ದೇವೋ ನಾಮಸಹಸ್ರವಾನ್)* ಎಂದು ಭಕ್ತರು ಭಾವಿಸಿ ಕರೆದಿರುವುದೂ

---

* ಸಹಸ್ರನಾಮ್ನೇ ಪುರುಷಾಯ ಶಾಶ್ವತೇ ಸಹಸ್ರಕೋಟೀಯುಗಧಾರಿಣೇ ನಮಃ (ವಿಷ್ಣುಸಹಸ್ರನಾಮದ ಉತ್ತರಪೀಠಿಕೆ). ನಾಮಮಾಯಿರಮೇತ್ತಿ ನಿನ್ರ ನಾರಾಯಣಾನರನೇ (ನಾಚ್ಚಿಯಾರ್ ತಿರುಮೊಳಿ). ದಾಸನ ಮಾಡಿಕೋ ನೀ ಎನ್ನ ಸ್ವಾಮಿ ಸಾಸಿರನಾಮದ ಹೇ ಶ್ರೀನಿವಾಸ (ವಿಠ್ಠಲದಾಸರ ದೇವರನಾಮ)

ಉಂಟು. ಹೀಗೆ ನಮ್ಮ ಧಾರ್ಮಿಕವಾದ ಮತ್ತು ಭಗವದಾರಾಧನಾಮಯ ವಾದ ಜೀವನದೊಡನೆ ನಿತ್ಯವೂ-ಆತ್ಮೀಯವೂ ಆದ ಸಂಬಂಧವನ್ನು ಹೊಂದಿರುವ ಭವ್ಯವಾದ ಸಾಹಿತ್ಯದ ಬಗೆಗೆ ಮತ್ತು ಅದರಲ್ಲಿಯೂ ವಿಶಿಷ್ಟ ವಾಗಿರುವ ವಿಷ್ಣುಸಹಸ್ರನಾಮಸರಸ್ವತಿಯ ಬಗೆಗೆ ಸಂಕ್ಷಿಪ್ತವಾಗಿ ವಿವೇಚನೆ ಮಾಡಲು ಇಲ್ಲಿ ಪ್ರಯತ್ನಿಸಲಾಗಿದೆ.

೨) ಸಹಸ್ರನಾಮ-ಎಂದರೇನು? ಅದರ ಮಂತ್ರರೂಪ ಮತ್ತು ಸ್ತೋತ್ರರೂಪ

'ಸಹಸ್ರನಾಮಗಳು' ಎಂದರೆ ಸಾವಿರ ಹೆಸರುಗಳು. ಯಾರನ್ನು ಕುರಿತ ಹೆಸರುಗಳು? ಎಂತಹ ಹೆಸರುಗಳು? ಯಾವ ರೂಪದಲ್ಲಿರುವ ಹೆಸರು ಗಳು? ಯಾರು ಕಂಡುಕೊಂಡು, ಸಂಗ್ರಹಮಾಡಿದ ಹೆಸರುಗಳು?– ಎಂದರೆ 'ಪರಾದೇವತಾ' ಎಂದು ಪ್ರಸಿದ್ಧನಾಗಿರುವ ಪರಮಾತ್ಮನ ಅಥವಾ ಆತನ ವಿಭೂತಿಗಳಾದ ದೇವ-ದೇವಿಯರ ಅಥವಾ ದಿವ್ಯಗುರುಗಳ ದಿವ್ಯ ವಾದ ಹೆಸರುಗಳು ; ಅವರಿಗೆ ಅಂಕಿತವಾಗಿರುವ ಮತ್ತು ಗುಣಸಂಬಂಧ ದಿಂದ ಬಂದಿರುವ ಹೆಸರುಗಳು. 'ಸಹಸ್ರನಾಮ'ವು ಆ ಹೆಸರುಗಳನ್ನು ಒಂದು ವಿಶಿಷ್ಟಕ್ರಮದಲ್ಲಿ ಜೋಡಿಸಿರುವ ಛಂದೋಬದ್ಧವಾಗಿರುವ ಸಾಹಿತ್ಯ. ಆದರೆ ಸಾಮಾನ್ಯಜನರು ರಚಿಸಿದ ಸಾಹಿತ್ಯಕ್ಕೆ ಸಹಸ್ರನಾಮದ ಪಟ್ಟ ಬರುವು ದಿಲ್ಲ. ಆ ಸಾಹಿತ್ಯವು 'ಮಂತ್ರ' ರೂಪವಾಗಿರಬೇಕು. ತಪೋಜ್ಞಾನ-ಸಮಾಧಿಗಳಿಂದ ಮಂತ್ರದ್ರಷ್ಟಾರರಾದ ಮಹರ್ಷಿಗಳು ಗೋಚರಮಾಡಿಕೊಂಡು, ಸಾಕ್ಷಾತ್ತಾಗಿ ಅನುಭವಿಸಿ ತಮ್ಮ ಅನುಭೂತಿಯನ್ನು ಅದರ ಮುಡಿಗುಸುಮವು ಬಾಡದಂತೆ, ಸಹಜವಾಗಿ ಹೊರಹೊಮ್ಮಿಸಿದ ಹೆಸರುಗಳನ್ನೊಳಗೊಂಡಿರಬೇಕು ಮತ್ತು ಆ ಹೆಸರುಗಳನ್ನು ವಿಶಿಷ್ಟರೀತಿಯಲ್ಲಿ ಗ್ರಥನಮಾಡಿ ಗಾನಮಾಡಿ, ಲೋಕಕಲ್ಯಾಣಾರ್ಥವಾಗಿ ಅನುಗ್ರಹಮಾಡಿದವರೂ ಮಹರ್ಷಿ ಗಳಾಗಿರಬೇಕು.

ಯಾನಿ ನಾಮಾನಿ ಗೌಣಾನಿ ವಿಖ್ಯಾತಾನಿ ಮಹಾತ್ಮನಃ ।
ಋಷಿಭಿಃ ಪರಿಗೀತಾನಿ ತಾನಿ ವಕ್ಷ್ಯಾಮಿ ಭೂತಯೇ ॥

ಎಂಬ ಆರ್ಷಶ್ಲೋಕದಲ್ಲಿ ಈ ವಿವರಣೆಯು ಅಡಕವಾಗಿದೆ.

ಈ ನಾಮಧೇಯಗಳನ್ನು ಬಿಡಿ-ಬಿಡಿಯಾಗಿಯೂ ಪಠಿಸಿ ದೇವರಿಗೆ

ಸಮರ್ಪಿಸಬಹುದು. ಪ್ರತಿಯೊಂದು ನಾಮವೂ ಶಕ್ತಿ-ಸೌಂದರ್ಯಸಂಪನ್ನ ವಾಗಿದೆ.

ಆದರೆ ಮಹರ್ಷಿಗಳು ಯೋಜನೆಮಾಡಿ ಅಳವಡಿಸಿರುವ ರೀತಿಯಲ್ಲಿ ಅವುಗಳನ್ನು ಅನುಸಂಧಾನಮಾಡಿದಾಗ ಇನ್ನೂ ಅತಿಶಯವಾದ ಶಕ್ತಿ-ಸೌಂದರ್ಯಗಳು ಅದರಲ್ಲಿ ಕೂಡಿಬರುತ್ತವೆ. ಗೋಮೇಧಿಕ-ಪುಷ್ಯರಾಗ ಮುಂತಾದ ಮಣಿಗಳು ಬಿಡಿ-ಬಿಡಿಯಾಗಿದ್ದರೂ ತೊಳಗಿ ಬೆಳಗುತ್ತವೆ. ಆದರೆ ಕುಶಲನಾದ ಶಿಲ್ಪಿಯು ಅವುಗಳನ್ನು ತಕ್ಕ ಸ್ಥಾನಗಳಲ್ಲಿ ಜೋಡಿಸಿ ಒಂದು ಕಿರೀಟವನ್ನು ನಿರ್ಮಾಣಮಾಡಿ ಅದನ್ನು ದೇವರ ಶಿರಸ್ಸಿನಲ್ಲಿ ಸಮರ್ಪಿಸಿದಾಗ—ಅವುಗಳ ಕಾಂತಿ ಮತ್ತು ಮೂಲ್ಯಗಳು ಇನ್ನೂ ಅತಿಶಯ ವಾಗುತ್ತವೆಯಲ್ಲವೇ? ಉತ್ತಮವಾದ ವರ್ಣ, ಪರಿಮಳ ಮತ್ತು ಸುಖ ಸ್ಪರ್ಶಗಳಿಂದ ಕೂಡಿದ ಪುಷ್ಪಗಳನ್ನು ಬಿಡಿ-ಬಿಡಿಯಾಗಿ ನೋಡಿದರೂ ಅವು ನೇತ್ರೋತ್ಸವವಾಗಿರುತ್ತವೆ. ಆದರೆ ಅವುಗಳೇ ಕುಶಲಮತಿಯಿಂದ ಪೋಣಿಸ ಲ್ಪಟ್ಟ ಪುಷ್ಪಹಾರದ ರೂಪವನ್ನು ತಳೆದು ದೇವರಿಗೆ ಅರ್ಪಿಸಲ್ಪಟ್ಟಾಗ—ಎಣೆ ಯಿಲ್ಲದ ರಮಣೀಯತೆಯನ್ನು ಪಡೆಯುತ್ತವೆಯಲ್ಲವೇ? ಹಾಗೆಯೇ ಜ್ಞಾನಿ ಗಳಿಂದ ಛಂದೋಬದ್ಧವಾದ ಸಾಹಿತ್ಯರೂಪದಲ್ಲಿ ಜೋಡಿಸಲ್ಪಟ್ಟಿರುವ ಸಹಸ್ರನಾಮಗಳಿಗೆ ಎಣೆಯಿಲ್ಲದ ಸೌಂದರ್ಯ ಮತ್ತು ಶಕ್ತಿಗಳು ಬರುತ್ತವೆ.

ಸಹಸ್ರನಾಮಗಳು ಹೀಗೆ ಮಂತ್ರರೂಪವನ್ನು ಪಡೆದಿರುವುದರಿಂದಲೇ ಅವುಗಳನ್ನು ಜಪಿಸುವುದಕ್ಕೆ ಮೊದಲು ಅವುಗಳಿಗೆ ವಿಶಿಷ್ಟವಾಗಿರುವ ಋಷಿ, ದೇವತೆ ಮತ್ತು ಛಂದಸ್ಸುಗಳನ್ನು ಅವಶ್ಯವಾಗಿ ಅನುಸಂಧಾನಮಾಡುವ ಸಂಪ್ರದಾಯವು ಬಂದಿದೆ.

ಋಷಿ—ಎಂದರೆ ಜ್ಞಾನಿಯು ಮತ್ತು ಮಂತ್ರಸ್ವರೂಪವನ್ನೂ, ಆಕಾರ ವನ್ನೂ ಗೋಚರಮಾಡಿಕೊಂಡವನು. ಅಧ್ಯಯನಮಾಡದೆಯೇ ಭಗವದನು ಗ್ರಹದಿಂದ ಮಂತ್ರವನ್ನು ಮೊಟ್ಟಮೊದಲಿಗೆ ಕಂಡುಕೊಂಡವನು.* ಮಹಾ ತಪಸ್ಯೆಯ ಫಲವಾಗಿ ಅವನು ಕಂಡುಕೊಂಡು ಜಗತ್ತಿಗೆ ಅನುಗ್ರಹಮಾಡಿದ ಆ ಮಂತ್ರವನ್ನು ಜಪಿಸುವಾಗ ಆ ಋಷಿಯನ್ನು ಸ್ಮರಿಸದಿದ್ದರೆ ಅದು ಕೃತಘ್ನತೆ

---

* ಅತೀನ್ದ್ರಿಯಸ್ಯ ವೇದಸ್ಯ ಪರಮೇಶ್ವರಾನುಗ್ರಹೇಣ ಪ್ರಥಮತೋ ದರ್ಶನಂ ಋಷಿತ್ವಂ ।

ಯಾಗುತ್ತದೆ. ಅವನ ಸ್ಮರಣೆಯನ್ನು ಮಾಡಿದಾಗ ಹೃದಯವು ಕೃತಜ್ಞತೆಯಿಂದ ಆರ್ದ್ರವಾಗುತ್ತದೆ ಮತ್ತು ಸ್ಮರಿಸಲ್ಪಟ್ಟ ಋಷಿಯ ಅನುಗ್ರಹವೂ ಹರಿದು ಬಂದು ಮಂತ್ರಜಪವು ವೀರ್ಯವತ್ತಾಗುತ್ತದೆಯೆಂಬುದರಲ್ಲಿ ಸಂಶಯವಿಲ್ಲ.

ಛಂದಸ್ಸು ಎಂದರೆ ಮಂತ್ರಾಕ್ಷರಗಳ ಕ್ರಮಬದ್ಧವಾದ ಯೋಜನೆ. ದೇವತೆಗಳನ್ನು ಪ್ರಸನ್ನಗೊಳಿಸಿಕೊಳ್ಳುವುದಕ್ಕೆ ಅನುಗುಣವಾದ ಒಂದು ಅಳವು. ಇಂತಹ ಛಂದಸ್ಸುಗಳಿಂದಲೇ ದೇವತೆಗಳನ್ನು ಸಂತೋಷಗೊಳಿಸಿ ಅವರ ಬಳಿಗೆ ಧಾವಿಸಲು ಋಷಿಗಳಿಗೆ ಸಾಧ್ಯವಾಯಿತು. **ಯದಕ್ಷರ ಪರಿಮಾಣಂ ತತ್ ಛನ್ದಃ। ಅಥೇಪ್ಸವೋ ಋಷಯೋ ದೇವತಾಃ ಛಂದೋಭಿರುಪಾಧಾವನ್ ।** ನಾವು ಅಂತಹ ಉಚಿತವಾದ ಛಂದಸ್ಸನ್ನು ಮಂತ್ರಪುರಶ್ಚರಣೆಮಾಡುವಾಗ ಅನುಸಂಧಾನಮಾಡಬೇಕು. ನಾವು ಆ ಅಳವನ್ನು ಮೀರಿದರೆ ಅಸುರರ ಕ್ಷೇತ್ರಕ್ಕೆ ನಮ್ಮ ಮನಸ್ಸು ಒಯ್ಯಲ್ಪಡುತ್ತದೆ.

ದೇವತೆ–ಎಂದರೆ ಮಂತ್ರವು ಯಾರನ್ನು ಪ್ರತಿಪಾದಿಸುತ್ತದೆಯೋ, ಮಂತ್ರಫಲವನ್ನು ಯಾವುದು ಅನುಗ್ರಹಿಸುತ್ತದೆಯೋ–ಅಂತಹ ದಿವ್ಯ ಶಕ್ತಿಯು. **ಯಾ ತೇನೋಚ್ಯತೇ ಸಾ ದೇವತಾ ।**

ಈ ಋಷಿ-ದೇವತೆ-ಛಂದಸ್ಸುಗಳನ್ನು ಅನುಸಂಧಾನಮಾಡದಿದ್ದರೆ ಮಂತ್ರದ ಫಲವು ಈಡೇರುವುದಿಲ್ಲ. ಅಷ್ಟೇ ಅಲ್ಲ ; ಅನಿಷ್ಟಪ್ರಾಪ್ತಿಯೂ ಆಗುತ್ತದೆ.

ಅವಿದಿತ್ವಾ ಋಷಿಂ ಛಂದೋ ದೈವತಂ ಯೋಗಮೇವ ಚ ।
ಯೋಽಧ್ಯಾಪಯೇಜ್ಜಪೇದ್ವಾಪಿ ಪಾಪೀಯಾನ್ ಜಾಯತೇ ತು ಸಃ ॥

ಎಲ್ಲ ಸಹಸ್ರನಾಮಮಂತ್ರಗಳೂ ತಮ್ಮ-ತಮ್ಮ ಋಷಿ, ದೇವತೆ ಮತ್ತು ಛಂದಸ್ಸುಗಳನ್ನು ಹೊಂದಿರುತ್ತವೆ. ಜಪಮಾಡುವವನಿಗೆ ಅವುಗಳನ್ನು ಯಾವ ಇಷ್ಟಾರ್ಥದ ಸಿದ್ಧಿಗಾಗಿ ಹೇಗೆ ಬಳಸಿಕೊಳ್ಳಬೇಕು ಎಂಬ ಅರಿವೂ ಇರಬೇಕು. ಈ ಪ್ರಯೋಜನದ ಅಳವಡಿಕೆಗೆ 'ವಿನಿಯೋಗ' ಎಂದು ಹೆಸರು.

ಇದಲ್ಲದೇ ಮಹಾಮಂತ್ರವನ್ನು ಜಪಿಸುವುದಕ್ಕೆ ಮೊದಲು 'ಅಂಗ ನ್ಯಾಸ', 'ಕರನ್ಯಾಸ'ಗಳನ್ನು ಮಾಡಿಕೊಳ್ಳುವ ಪದ್ಧತಿಯೂ ಇದೆ. ಈ ಅಂಗ ನ್ಯಾಸ-ಕರನ್ಯಾಸಗಳನ್ನು ಅನಾವಶ್ಯಕವಾದ ಶಾರೀರಕವ್ಯಾಯಾಮ ಅಥವಾ

ಚಮತ್ಕಾರ ಎಂದು ತಿಳಿಯಬಾರದು. ಮಹಾಮಂತ್ರದ ಜೀವನಾಡಿಗಳಾಗಿರುವ ಮಂತ್ರಖಂಡಗಳಿಂದ ಹಸ್ತದ ಮತ್ತು ಶರೀರದ ಇತರ ಅಂಗೋಪಾಂಗಗಳನ್ನು ಆಗ ಸ್ಪರ್ಶಮಾಡಿಕೊಳ್ಳುತ್ತೇವೆ. ಅದರಿಂದ ಶರೀರವು ಮಂತ್ರಮಯವಾಗುತ್ತದೆ. ಪ್ರಕೃತಿಯು ಮಂತ್ರದ ಅನುಸಂಧಾನಕ್ಕೆ ಯೋಗ್ಯವಾಗುತ್ತದೆ. ಚಿಟಕಿ-ಚಪ್ಪಾಳೆಗಳಿಂದ ದಿಗ್ಬಂಧನವನ್ನು ಮಾಡಿದಾಗ ದುಷ್ಟಶಕ್ತಿಗಳ ಉಚ್ಚಾಟನೆಯಾಗಿ ಅವು ಪುನಃ ಮಂತ್ರಜಪದ ಸಮಯದಲ್ಲಿ ಜಾಪಕನನ್ನು ಆಕ್ರಮಿಸದಂತೆ ಒಂದು ಸಂರಕ್ಷಣೆಯ ಪರಿಧಿಯು ನಿರ್ಮಿತವಾಗುತ್ತದೆ. ಮಂತ್ರಬೀಜವು ಶರೀರವೆಂಬ ಕ್ಷೇತ್ರದಲ್ಲಿ ಬೆಳವಣಿಗೆಹೊಂದುವ ಶಕ್ತಿಯನ್ನು ಪಡೆಯುತ್ತದೆ. ಕೀಲಕ (ಬೀಗದ ಕೈ) ಎಂದು ಹೇಳಲ್ಪಡುವ ಮಂತ್ರಭಾಗದಿಂದ ಮಂತ್ರದ್ವಾರವು ತೆರೆಯುತ್ತದೆ. ಅದರ ಮೂಲಕ ದೇವತಾಸ್ಥಾನವನ್ನು ಪ್ರವೇಶಿಸಿ ದೇವತೆಯನ್ನು ಧ್ಯಾನದಿಂದಲೂ–ಸ್ತೋತ್ರ (ಜಪ) ದಿಂದಲೂ ಪ್ರಸನ್ನಗೊಳಿಸಬೇಕು.

ಸಹಸ್ರನಾಮಗಳು ದೇವತೆಯ ಸ್ವರೂಪ, ರೂಪ, ಗುಣ, ವೈಭವ, ಐಶ್ವರ್ಯ–ಇತ್ಯಾದಿಗಳನ್ನು ಪ್ರಕಟಪಡಿಸಿ ಹೊಗಳುವುದರಿಂದ ಅವುಗಳನ್ನು ಸ್ತೋತ್ರ ಎಂದು ಕರೆಯುತ್ತಾರೆ. ಸಹಸ್ರನಾಮ, ನಾಮಸಹಸ್ರ, ನಾಮ ಸಹಸ್ರಕ, ಸಹಸ್ರನಾಮಮಹಾಮಂತ್ರ, ಸಹಸ್ರನಾಮಸ್ತೋತ್ರ–ಇತ್ಯಾದಿ ಹೆಸರುಗಳಿಂದ ಈ ಸಾಹಿತ್ಯವು ಕರೆಯಲ್ಪಡುತ್ತದೆ.

ಖ) ಸಹಸ್ರನಾಮಗಳ ವೈವಿಧ್ಯ

ಇಂತಹ ಅನೇಕ ಸಹಸ್ರನಾಮಗಳು ನಮ್ಮ ಇತಿಹಾಸ, ಪುರಾಣ, ಉಪಪುರಾಣ–ಮುಂತಾದ ಸಾಹಿತ್ಯವನ್ನು ಅಲಂಕರಿಸಿವೆ. ಸಹಸ್ರನಾಮವು ಯಾವ ದೇವತೆಯನ್ನು ಕುರಿತಿದೆಯೋ–ಆ ದೇವತೆಯ ಹೆಸರಿನಿಂದ ಆ ಸಹಸ್ರನಾಮಕ್ಕೆ ಹೆಸರು ಬರುತ್ತದೆ. ಆದುದರಿಂದ ವಿಷ್ಣುಸಹಸ್ರನಾಮ, ಶಿವಸಹಸ್ರನಾಮ, ರಾಮಸಹಸ್ರನಾಮ, ಕೃಷ್ಣಸಹಸ್ರನಾಮ, ಲಲಿತಾಸಹಸ್ರನಾಮ, ಲಕ್ಷ್ಮೀಸಹಸ್ರನಾಮ, ಗಂಗಾಸಹಸ್ರನಾಮ, ಗಣೇಶಸಹಸ್ರನಾಮ ಮುಂತಾದ ಬೇರೆ ಬೇರೆ ಹೆಸರುಗಳ ಸಹಸ್ರನಾಮಗಳನ್ನು ನೋಡುತ್ತೇವೆ. ಒಂದೇ ದೇವತೆಯ ವಿಷಯವಾಗಿಯೂ ಅನೇಕಸಹಸ್ರನಾಮಗಳುಂಟು. ಉದಾಹರಣೆಗೆ–ವಿಷ್ಣುಸಹಸ್ರನಾಮವು ಪದ್ಮಮಹಾಪುರಾಣದ ಎಪ್ಪತ್ತೆರಡ

ನೆಯ ಅಧ್ಯಾಯಯದಲ್ಲಿ ಬರುತ್ತದೆ. ಮಹಾಭಾರತದ ಅನುಶಾಸನಪರ್ವದಲ್ಲಿ 149ನೆಯ ಅಧ್ಯಾಯದಲ್ಲಿ ಬರುವ ಪ್ರಸಿದ್ಧವಾದ ವಿಷ್ಣುಸಹಸ್ರನಾಮ ಸ್ತೋತ್ರವು ಹೆಚ್ಚು ಬಳಕೆಯಲ್ಲಿದೆ. ಶಿವಸಹಸ್ರನಾಮವೆಂಬ ಹೆಸರಿನ ಸಾಹಿತ್ಯವು ಮಹಾಭಾರತದಲ್ಲಿಯೇ ಬರುತ್ತದೆ. ಶಿವಪುರಾಣದಲ್ಲಿಯೂ ಅದನ್ನು ಕಾಣುತ್ತೇವೆ. ಆಯಾ ದೇವತೆಯ ಪ್ರಸನ್ನತೆಯನ್ನು ಸಂಪಾದಿಸಿ ಅನಿಷ್ಟಪರಿಹಾರವನ್ನೂ–ಇಷ್ಟಪ್ರಾಪ್ತಿಯನ್ನೂ ಪಡೆಯಲು ಈ ಎಲ್ಲ ಸಹಸ್ರನಾಮಗಳನ್ನೂ ಭಕ್ತರು ಬಳಸಿಕೊಳ್ಳಬಹುದು. ಈ ಎಲ್ಲ ಸಹಸ್ರನಾಮಗಳೂ ಆಯಾ ಸಹಸ್ರನಾಮಪಾರಾಯಣವಿಧಿಯಲ್ಲಿ ಅತ್ಯಂತಶ್ರೇಷ್ಠವೇ ಆಗಿವೆ. ಅವು ಪಾರಾಯಣಮಾಡುವವನ ಭಕ್ತಿ-ಶ್ರದ್ಧಾ-ಬಲಗಳಿಂದಲೂ ತಮ್ಮ ಸ್ವರೂಪಯೋಗ್ಯತೆಯಿಂದಲೂ ಉದ್ದಿಷ್ಟಫಲಗಳನ್ನು ಈಡೇರಿಸುತ್ತವೆ. **ವ್ರತಾನಾಮುತ್ತಮಂ ವ್ರತಂ ।*** ಎಂಬಂತೆ ಪ್ರತಿಯೊಂದು ಸಹಸ್ರನಾಮವೂ ತನ್ನ ಫಲಶ್ರುತಿಯಲ್ಲಿ ತನ್ನ ಶ್ರೇಷ್ಠತೆಯನ್ನು ಘೋಷಣೆಮಾಡಿಕೊಳ್ಳುತ್ತದೆ. ಇದು ಸತ್ಯವೆಂದೇ ನಾವು ಮಾನ್ಯಮಾಡಬೇಕು. ಆದರೆ ಈ ನಾನಾಸಹಸ್ರನಾಮಗಳಲ್ಲಿ ವೇದಾಂತದರ್ಶನದ ಎಲ್ಲ ಸಂಪ್ರದಾಯಗಳ ಆಚಾರ್ಯರಿಂದಲೂ ಮನ್ನಣೆ ಪಡೆದು, ಅವರಿಗಿಂತಲೂ ಅತ್ಯಂತಪ್ರಾಚೀನಕಾಲದಿಂದಲೂ ಜನಪ್ರಿಯವಾಗಿದ್ದು ಹೆಚ್ಚು ಪ್ರಸಿದ್ಧವಾಗಿರುವುದು ಮಹಾಭಾರತದಲ್ಲಿ ಬರುವ ಶ್ರೀಮದ್ವಿಷ್ಣುಸಹಸ್ರನಾಮಸ್ತೋತ್ರ.

೪) ವಿಷ್ಣುಸಹಸ್ರನಾಮದ ವಿಶೇಷಪ್ರಶಂಸೆ

1) ಪಂಚಮವೇದವೆಂದು ಖ್ಯಾತವಾಗಿರುವ ಮಹಾಭಾರತಮಹಾಸಮುದ್ರದಲ್ಲಿ ಐದು ಅಮೂಲ್ಯರತ್ನಗಳುಂಟು. ಅವು ಯಾವುವೆಂದರೆ : ಭಗವದ್ಗೀತೆ, ಸಹಸ್ರನಾಮ, ಭೀಷ್ಮಸ್ತವರಾಜ, ಅನುಸ್ಮೃತಿ ಮತ್ತು ಗಜೇಂದ್ರಮೋಕ್ಷ–ಎಂದು ವಿಷ್ಣುಧರ್ಮೋತ್ತರವು ಹೇಳುತ್ತದೆ.

ಗೀತಾ ಸಹಸ್ರನಾಮೈವ ಸ್ತವರಾಜೋ ಹ್ಯನುಸ್ಮೃತಿಃ ।
ಗಜೇಂದ್ರಮೋಕ್ಷಣಂ ಚೈವ ಪಂಚ ರತ್ನಾನಿ ಭಾರತೇ ॥

---

* ವ್ರತಗಳಲ್ಲೆಲ್ಲಾ ಅತ್ಯಂತ ಶ್ರೇಷ್ಠವಾದುದು ಈ ವ್ರತ. ಆಯಾ ವ್ರತವನ್ನು ಆಚರಿಸುವಾಗ ಆಯಾ ವ್ರತವೇ ಶ್ರೇಷ್ಠತಮವಾದುದು–ಎಂದು ಅದರ ಹೊಗಳಿಕೆಯಲ್ಲಿ ಇದಕ್ಕೆ ತಾತ್ಪರ್ಯವೇ ಹೊರತು ಇತರ ವ್ರತಗಳ ನಿಂದೆಯಲ್ಲಿ ತಾತ್ಪರ್ಯವಿಲ್ಲ.

ಹೀಗೆ ಶ್ರೀಮದ್ವಿಷ್ಣುಸಹಸ್ರನಾಮಸ್ತೋತ್ರವು ಭಗವದ್ಗೀತೆಗೆ ಸಮ ಕಕ್ಷೆಯಲ್ಲಿ ಮೋಕ್ಷಶಾಸ್ತ್ರವಾಗಿ ಪರಿಗಣಿಸಲ್ಪಟ್ಟಿರುವ ದಿವ್ಯಗ್ರಂಥವಾಗಿದೆ.

2) ಇದು ಮೋಕ್ಷಶಾಸ್ತ್ರವಾಗಿರುವುದು ಮಾತ್ರವಲ್ಲದೇ ಮಹಾ ರೋಗನಿವಾರಕವಾದ ಮಹಾಮಂತ್ರವೂ ಆಗಿದೆಯೆಂದು ಪ್ರಾಚೀನರಾದ ಆಯುರ್ವೇದಾಚಾರ್ಯರು ಘೋಷಣೆಮಾಡಿದ್ದಾರೆ.

"ಸಹಸ್ರಶೀರ್ಷಗಳುಳ್ಳ ಪುರುಷನೂ, ಚರಾಚರಗಳಿಗೆ ಅಧಿಪತಿಯೂ ಆಗಿರುವ ವಿಷ್ಣುವನ್ನು ನಾಮಸಹಸ್ರದಿಂದ ಸ್ತೋತ್ರಮಾಡಿದರೆ, ಎಲ್ಲ ಜ್ವರ ಗಳೂ (ಮೂರು ಬಗೆಯ ತಾಪಗಳೂ) ಆಧಿ-ವ್ಯಾಧಿಗಳೂ ನಿವಾರಣೆ ಹೊಂದುತ್ತವೆ.

ವಿಷ್ಣುಂ ಸಹಸ್ರಮೂರ್ಧಾನಂ ಚರಾಚರಪತಿಂ ವಿಭುಮ್ ।
ಸ್ತುವನ್ನಾಮಸಹಸ್ರೇಣ ಜ್ವರಾನ್ಸರ್ವಾನ್ವ್ಯಪೋಹತಿ ॥

(ಚರಕಸಂಹಿತಾ)

ಮೇಹರೋಗದ ಚಿಕಿತ್ಸೆಯಲ್ಲಿ ಪುರುಷಸೂಕ್ತದ ಜಪದಂತೆ ಈ ಸಹಸ್ರನಾಮದ ಜಪವನ್ನೂ ಮಾಡಲು ಸಲಹೆನೀಡಿದೆ. ಕ್ಷಯರೋಗದ ನಿವಾರಣೆಗೂ ಗ್ರಹಚಿಕಿತ್ಸೆಗೂ ಇದರ ಅನುಸಂಧಾನವನ್ನು ಹೇಳಿದೆ.

ಜಪ್ಯಂ ಪುರುಷಸೂಕ್ತಕಮ್ । ತಥೈವ ಭಗವನ್ನಾಮಸಹಸ್ರಂ ಭಾರತೋದಿತಮ್ । ಆಸತ್ಮತಂ ಮರುತ್ಸೂಕ್ತಂ ವಿಷ್ಣೋರ್ನಾಮ ಸಹಸ್ರಕಮ್ ।

3) ಬಾಣಭಟ್ಟನ ಕಾದಂಬರಿಯಲ್ಲಿ ಸೂತಿಕಾಗೃಹವನ್ನು ವರ್ಣನೆ ಮಾಡುವಾಗ–'ಅಲ್ಲಿ ವಿಷ್ಣುಸಹಸ್ರನಾಮವು ನಿರಂತರವಾಗಿ ಪಾರಾಯಣ ಮಾಡಲ್ಪಡುತ್ತಿತ್ತು'–ಎಂಬ ಹೇಳಿಕೆಯನ್ನು ನೋಡುತ್ತೇವೆ.

ಅವಿಚ್ಛಿನ್ನ ಪಠ್ಯಮಾನನಾರಾಯಣನಾಮಸಹಸ್ರಕಮ್ ।

4) ಅಪೌರುಷೇಯವಾಣಿಯಾದ ವೇದಕ್ಕೆ ಮಹಾಮಹಿಮೆಯುಂಟು–ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಆದರೆ ವೇದವನ್ನು ಪಾರಾಯಣ ಮಾಡಲು ಸರ್ವರಿಗೂ ಅಧಿಕಾರವಿಲ್ಲ. ಕುಲ-ಚರಣ-ಗೋತ್ರಗಳೇ ಮುಂತಾದ ಅಧಿಕಾರವಿಭಾಗದ ವ್ಯವಸ್ಥೆಯುಂಟು. ಆದರೆ ಅಂತಹ ಯಾವ

ವಿಭಾಗದ ವ್ಯವಸ್ಥೆಯೂ ಇಲ್ಲದೇ ಸರ್ವರೂ ಪರಿಗ್ರಹಿಸಬಹುದಾಗಿ, ಸರ್ವ ಸಾಧಾರಣವಾಗಿದ್ದರೂ ಅಸಾಧಾರಣವಾಗಿರುವ ಅಮೃತವಾಣಿಯಾಗಿದೆ ಶ್ರೀವಿಷ್ಣುಸಹಸ್ರನಾಮಸ್ತೋತ್ರ.

5) ಶ್ರುತಿಯು ಲೇಖನಕ್ಕೆ ಬರಬಾರದು. ಆದರೆ ಜಪ, ಹೋಮ, ವ್ಯಾಖ್ಯಾನ, ಪೂಜನ ಮತ್ತು ಲೇಖನ–ಎಲ್ಲ ರೀತಿಗಳಲ್ಲಿಯೂ ವಿನಿಯೋಗಿಸ ಲ್ಪಟ್ಟು ಪುರುಷಾರ್ಥವನ್ನು ದಯಪಾಲಿಸುವ ಕಾಮಧೇನುವಾಗಿದೆ ವಿಷ್ಣು ಸಹಸ್ರನಾಮ.

6) ಇದು ಸ್ತೋತ್ರರೂಪವಾಗಿದ್ದರೂ ಇದರ ಮೇಲೆ ರಚಿತವಾಗಿರು ವಷ್ಟು ಭಾಷ್ಯಗಳು ಬೇರೆ ಯಾವ ಸ್ತೋತ್ರದ ಮೇಲೂ ರಚಿತವಾಗಿಲ್ಲ. ಹದಿನೈದಕ್ಕೂ ಮೀರಿದ ಭಾಷ್ಯಗಳು ಈ ದಿವ್ಯಗ್ರಂಥವನ್ನು ಅಲಂಕರಿಸಿವೆ.

7) ದ್ವೈತ, ಅದ್ವೈತ, ವಿಶಿಷ್ಟಾದ್ವೈತ–ಮುಂತಾದ ವೇದಾಂತದರ್ಶನದ ಎಲ್ಲ ಶಾಖೆಗಳ ಆಚಾರ್ಯರೂ ಇದಕ್ಕೆ ತಮ್ಮ ಭಾಷ್ಯರೂಪವಾದ ಕಾಣಿಕೆ ಗಳನ್ನು ಸಮರ್ಪಿಸಿದ್ದಾರೆ. ನಿರ್ವಿಶೇಷಾದ್ವೈತದ ಸ್ಥಾಪಕಾಚಾರ್ಯರಾದ ಶ್ರೀಶಂಕರಭಗವತ್ಪಾದರು–"ಸಕಲಪುರುಷಾರ್ಥಸಾಧನ ; ಸುಖವಾಗಿ ಅನು ಷ್ಠಾನಮಾಡಲು ಸಾಧ್ಯವಾದುದ್ದು ; ಅಲ್ಪಪ್ರಯಾಸದಿಂದಲೇ ಮಹಾಫಲ ವನ್ನು ಕೊಡತಕ್ಕ ದಿವ್ಯಸಾಧನ ಇದು. ಈ ಜಪಯಜ್ಞದ ಆಚರಣೆಯಲ್ಲಿ ಯಾರಿಗೂ ಹಿಂಸೆಯಿಲ್ಲ. ಇತರ ಪುರುಷರ, ದ್ರವ್ಯಗಳ ಆವಶ್ಯಕತೆಯಿಲ್ಲ. ದೇಶ-ಕಾಲಗಳೇ ಮುಂತಾದ ನಿಯಮದ ಅವಶ್ಯಕತೆಯೂ ಇಲ್ಲ. ಆದ್ದರಿಂದ ಅಧಿಕಮಾನ್ಯತೆಯ ಯಜ್ಞ ಇದು"–ಎಂದು ತಮ್ಮ ವಿಷ್ಣುಸಹಸ್ರನಾಮದ ಭಾಷ್ಯದಲ್ಲಿ ಅಪ್ಪಣೆಕೊಡಿಸಿರುತ್ತಾರೆ.

ಸಕಲಪುರುಷಾರ್ಥಸಾಧನಂ ಸುಖಸಂಪಾದ್ಯಂ ಅಲ್ಪಪ್ರಯಾಸಂ ಅನಲ್ಪಫಲಂ ಹಿಂಸಾದಿರಹಿತಂ ಪುರುಷಾನ್ತರದ್ರವ್ಯಾನ್ತರದೇಶಕಾಲಾದಿ ನಿಯಮಾನಪೇಕ್ಷತ್ವಂ ಚ ಆಧಿಕ್ಯೇ ಕಾರಣಮ್ ।

8) ಗಾನಕ್ಕೆ ಶ್ರೇಷ್ಠತಮವಾದ ವಿಷಯವು ಭಗವದ್ಗೀತೆಯು ಆಗಿರು ವಂತೆ ಶ್ರೀವಿಷ್ಣುಸಹಸ್ರನಾಮಸ್ತೋತ್ರವೂ ಆಗಿದೆ–ಎಂದು ಅವರು ಭಜ ಗೋವಿಂದ ಸ್ತೋತ್ರದಲ್ಲಿ ಉಪದೇಶಿಸುತ್ತಾರೆ. **ಗೇಯಂ ಗೀತಾ ನಾಮ ಸಹಸ್ರಂ ।**

ಶ್ರೀಶಂಕರಭಗವತ್ಪಾದರು ರಚಿಸಿದ ಮೊಟ್ಟಮೊದಲನೆಯ ಗ್ರಂಥ ವಿಷ್ಣುಸಹಸ್ರನಾಮಭಾಷ್ಯ. ಭಗವತ್ಪಾದರು–ತಾವು ಯಾವ ಗ್ರಂಥವನ್ನು ಮೊದಲು ರಚಿಸಬೇಕು?–ಎಂದು ಯೋಚಿಸುತ್ತಾ, ತಮ್ಮ ಬೇರೆ-ಬೇರೆ ಶಿಷ್ಯ ರನ್ನು ತಮ್ಮ ಗ್ರಂಥಭಂಡಾರದ ಬೇರೆ-ಬೇರೆ ಕಡೆಗೆ ಕಳುಹಿಸಿ–'ನಿಮ್ಮ ಕೈಗೆ ಸಿಕ್ಕಿದ ಮೊದಲನೆಯ ಗ್ರಂಥವನ್ನು ತೆಗೆದುಕೊಂಡು ಬನ್ನಿ'–ಎಂದು ಆಜ್ಞೆ ಮಾಡಿದರು. ಆಗ ಅವರೆಲ್ಲರ ಕೈಗಳಿಗೂ ಶ್ರೀವಿಷ್ಣುಸಹಸ್ರನಾಮದ ಬೇರೆ-ಬೇರೆ ಪ್ರತಿಗಳೇ ಸಿಕ್ಕಿದುವು. ಆಗ ಭಗವತ್ಪಾದರು ಅದು ಭಗವಂತನ ಆದೇಶ ವೆಂದು ತಿಳಿದು ಆ ಗ್ರಂಥಕ್ಕೇ ಮೊಟ್ಟಮೊದಲು ಭಾಷ್ಯವನ್ನು ಮಂಡಿಸಿದರು–ಎಂಬ ಕಥೆಯನ್ನು ಕೇಳುತ್ತೇವೆ. ಶ್ರೀಶಂಕರಭಗವತ್ಪಾದರಿಗೆ ಈ ಗ್ರಂಥದ ವಿಷಯದಲ್ಲಿ ಅಸಾಧಾರಣವಾದ ಗೌರವಿತ್ತು ಎಂಬುದರಲ್ಲಿ ಯಾವ ಸಂಶ ಯವೂ ಇಲ್ಲ. ಈ ಗ್ರಂಥರತ್ನದಲ್ಲಿ ಅವರು ತೋರಿಸಿರುವ ಪ್ರಸನ್ನಗಂಭೀರ ವಾದ ಶೈಲಿಯನ್ನೇ ಅವರ ಇತರ ಗ್ರಂಥಗಳಲ್ಲಿಯೂ ನಾವು ಕಾಣುತ್ತೇವೆ.

9) ವಿಶಿಷ್ಟಾದ್ವೈತಸ್ಥಾಪಕಾಚಾರ್ಯರಾದ ಭಗವದ್ರಾಮಾನುಜರ ಎಲ್ಲ ಗ್ರಂಥಗಳೂ ಶ್ರೀವಿಷ್ಣುಸಹಸ್ರನಾಮದ ಅನುಸಂಧಾನದಿಂದ ಪ್ರಭಾವಿತ ವಾಗಿವೆ–ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಅವರು ಅದಕ್ಕೆ ತಾವೇ ಭಾಷ್ಯವನ್ನು ಬರೆಯದಿದ್ದರೂ ತಮ್ಮ ಶಿಷ್ಯಶ್ರೇಷ್ಠರಾದ ಪರಾಶರಭಟ್ಟರ ಮೂಲಕ ಭಾಷ್ಯವನ್ನು ಬರೆಯಿಸಿ ಸಂಭಾವನೆಯನ್ನು ಮಾಡಿದ್ದಾರೆ. ಶ್ರೀ ಪರಾಶರಭಟ್ಟರು ತಮ್ಮ ಆ ವಿಷ್ಣುಸಹಸ್ರನಾಮಭಾಷ್ಯದ ಅವತರಣಿಕೆಯಲ್ಲಿ ಈ ಸಹಸ್ರನಾಮದ ಮಹಿಮೆಯನ್ನು ಕುರಿತು ಅನೇಕಶಾಸ್ತ್ರ ಮತ್ತು ಉಪಪತ್ತಿಗಳಿಂದ ಕೂಡಿದ ವಿಸ್ತಾರವಾದ ಲೇಖನವನ್ನು ಮಂಡಿಸಿದ್ದಾರೆ. "ಇದು ಮಹಾಭಾರತದ ಸಾರ ; ಮಹರ್ಷಿಗಳಿಂದ ಗಾನಮಾಡಲ್ಪಟ್ಟಿದ್ದು ; ವೇದಾಚಾರ್ಯರಾದ ವೇದವ್ಯಾಸನಾರಾಯಣರಿಂದ ಉಪದೇಶಮಾಡಲ್ಪ ಟ್ಟಿದ್ದು ; ಮಹಾಯೋಗೀಶ್ವರರಾದ ಭೀಷ್ಮಾಚಾರ್ಯರಿಗೆ ಅತ್ಯಂತ ಶ್ರೇಷ್ಠವೆಂದು ಅಭಿಮತವಾದದ್ದು ; ಅತ್ಯಂತ ಅತಿಶಯವಾದ ಪರಿಗ್ರಹವುಳ್ಳದ್ದು ; ಗೀತಾ, ನಾರಾಯಣೀಯ–ಮುಂತಾದುವುಗಳೊಡನೆ ಸಮಾನಾರ್ಥಕವಾದದ್ದು"–ಎಂದು ಅದರ ಶ್ರೇಷ್ಠತೆಗೆ ಆರು ಕಾರಣಗಳನ್ನು ಸಾರರೂಪವಾಗಿ ಸಂಗ್ರಹಿಸಿ ವಿಸ್ತಾರವಾಗಿ ನಿರೂಪಿಸಿದ್ದಾರೆ.

[II]

ಮಹಾಭಾರತಸಾರತ್ವಾದೃಷಿಭಿಃ ಪರಿಗಾನತಃ ।
ವೇದಾಚಾರ್ಯಸಮಾಹಾರಾದ್ಭೀಷ್ಮೋತ್ಕೃಷ್ಟಮತತ್ವತಃ ॥

ಪರಿಗ್ರಹಾತಿಶಯತೋ ಗೀತಾದ್ಯೈಕಾರ್ಥ್ಯತಶ್ಚ ನಃ ।
ಸಹಸ್ರನಾಮ್ನಾಮಧ್ಯಾಯಃ ಉಪಾದೇಯತಮೋ ಮತಃ ॥

"ಮಹಾಪಾತಕಗಳ ಪ್ರಾಯಶ್ಚಿತ್ತಕ್ಕೆ, ಐಹಿಕಾಮುಷ್ಮಿಕಾಭ್ಯುದಯಗಳ ಸಾಧನೆಗೆ, ಸಂಸಾರದ ಗಂಟನ್ನು ಕತ್ತರಿಸಿ ಹಾಕುವುದಕ್ಕೆ, ವೈಷ್ಣವ ಪರಮ ಪದವನ್ನು ಹೊಂದುವುದಕ್ಕೆ, ಅನುಸಂಧಾನಸಮಯದಲ್ಲಿಯೂ ಕೂಡ ಭಗವಂತನ ಗುಣಾಮೃತವನ್ನು ಅನುಭವಿಸುವುದಕ್ಕೆ ಮತ್ತು ಸರ್ವ ಪರಿಗ್ರಹಕ್ಕೆ–ಸಹಸ್ರನಾಮಕ್ಕೆ ಸರಿಸಾಟಿಯಾದ ಸಾಧನವು ಬೇರೊಂದಿಲ್ಲ"– ಎಂದೂ ಅವರು ಘೋಷಣೆಮಾಡುತ್ತಾರೆ.

10) ದ್ವೈತಮತಸ್ಥಾಪಕಾಚಾರ್ಯರಾದ ಶ್ರೀಮನ್ಮಧ್ವಾಚಾರ್ಯರು ತಮ್ಮ ಗೀತಾತಾತ್ಪರ್ಯನಿರ್ಣಯದಲ್ಲಿ–"ಶಾಸ್ತ್ರಗಳಲ್ಲಿ ಸಾರವಾದದ್ದು ಭಾರತ. ಅದರಲ್ಲಿಯೂ ಸಾರತರವಾದದ್ದು ವಿಷ್ಣುಸಹಸ್ರನಾಮ ಮತ್ತು ಕೃಷ್ಣಗೀತೆ. ಇವುಗಳ ಜ್ಞಾನದಿಂದ ಶೀಘ್ರದಲ್ಲಿಯೇ ಮುಕ್ತಿಯು ದೊರೆಯುತ್ತದೆ"–ಎಂದು ಘೋಷಣೆಮಾಡಿದ್ದಾರೆ.

ಶಾಸ್ತ್ರೇಷು ಭಾರತಂ ಸಾರಂ ತತ್ರ ನಾಮಸಹಸ್ರಕಮ್ ।
ವೈಷ್ಣವಂ ಕೃಷ್ಣಗೀತಾ ಚ ತಜ್ಜ್ಞಾನಾನ್ಮುಚ್ಯತೇಽಂಜಸಾ ॥

11) ಮಹಾರಾಷ್ಟ್ರದ ಸಂತ ಶ್ರೀ ತುಕಾರಾಮರು ಈ ವಿಷ್ಣುಸಹಸ್ರ ನಾಮದ ಸಾವಿರ ನಾಮಗಳೂ ಸಾವಿರ ಶಾಸ್ತ್ರಗಳಾಗಿವೆ–ಎಂದು ಸಾರಿದ್ದಾರೆ. ಇದಲ್ಲದೇ ತಮ್ಮ ಮಗಳ ಮದುವೆಯಲ್ಲಿ ಅವರು ಅಳಿಯನಿಗೆ ಕೊಟ್ಟ ಉಡುಗೊರೆ ಶ್ರೀವಿಷ್ಣುಸಹಸ್ರನಾಮದ ಒಂದು ಪ್ರತಿ–ಎಂದು ನಾವು ಕೇಳುತ್ತೇವೆ.

ಹೀಗೆ ನಾನಾ ಆಚಾರ್ಯರು ಮತ್ತು ಸಾಧು-ಸಂತರು ಇದರ ಮೇಲೆ ಪ್ರಶಂಸೆಯ ಮಳೆಗಳನ್ನೇ ಸುರಿಸಿದ್ದಾರೆ. ವಿಷ್ಣುಸಹಸ್ರನಾಮಕ್ಕೆ ಪ್ರತಿಪಾದ್ಯ ವಿಷಯನಾಗಿರುವ ಸಾಕ್ಷಾತ್ ಶ್ರೀಕೃಷ್ಣಪರಮಾತ್ಮನೇ ತನ್ನ ಅಧ್ಯಕ್ಷತೆಯಿಂದ ಅದನ್ನು ಅನುಗ್ರಹಿಸಿದ್ದಾನೆ.

ಈ ವಿಷಯದಲ್ಲಿ ಶ್ರೀಮದ್ರಾಮಾಯಣದೊಡನೆ ವಿಷ್ಣುಸಹಸ್ರ ನಾಮಕ್ಕೆ ಹೋಲಿಕೆ ಇದೆ. ಶ್ರೀಮದ್ರಾಮಾಯಣದ ಗಾನವು ಸಾಕ್ಷಾತ್ ಶ್ರೀರಾಮದೇವರ ಅಧ್ಯಕ್ಷತೆಯಲ್ಲಿ ಅವರ ಪುತ್ರರತ್ನರಾದ ಲವ-ಕುಶರಿಂದ ಸಮರ್ಪಿಸಲ್ಪಟ್ಟಿತು. ಶ್ರೀವಿಷ್ಣುಸಹಸ್ರನಾಮವು ಶ್ರೀಕೃಷ್ಣಪರಮಾತ್ಮನ ಅಧ್ಯಕ್ಷತೆಯಲ್ಲಿ ಅವನ ಭಕ್ತಶ್ರೇಷ್ಠರಾದ ಯೋಗಿರಾಜ ಭೀಷ್ಮಾಚಾರ್ಯರಿಂದ ಸಮರ್ಪಿಸಲ್ಪಟ್ಟಿತು. ಎರಡು ಗ್ರಂಥಗಳೂ ಕೂಡ ತಮಗೆ ಪ್ರತಿಪಾದ್ಯ ವಿಷಯನಾಗಿರುವ ಸಾಕ್ಷಾತ್ ಮಹಾವಿಷ್ಣುವಿನಿಂದಲೇ ಮನ್ನಣೆಪಡೆದುವು.

5) ವಿಷ್ಣುಸಹಸ್ರನಾಮದ ಋಷಿ-ದೇವತಾ-ಛಂದಸ್ಸುಗಳು

ಮಹಾಭಾರತದ ಅನುಶಾಸನಪರ್ವಕ್ಕೆ ಅಲಂಕಾರವಾಗಿರುವ ಈ ವಿಷ್ಣುಸಹಸ್ರನಾಮಕ್ಕೆ ಋಷಿಯು ಸಾಕ್ಷಾನ್ನಾರಾಯಣಾವತಾರರಾದ ಭಗ ವಾನ್ ವೇದವ್ಯಾಸಮಹರ್ಷಿಗಳು. ಅನುಷ್ಟುಪ್ ಛಂದಸ್ಸು. ಪರಮಾತ್ಮನಾದ ಮಹಾವಿಷ್ಣು ಶ್ರೀಮನ್ನಾರಾಯಣನೇ ದೇವತೆ. (ಪದ್ಮಪುರಾಣದಲ್ಲಿ ಬರುವ ವಿಷ್ಣುಸಹಸ್ರನಾಮಸ್ತೋತ್ರಕ್ಕೆ ಋಷಿಯು ಶ್ರೀಮಹಾದೇವ, ಅನುಷ್ಟುಪ್ ಛಂದಸ್ಸು, ಪರಮಾತ್ಮನೇ ದೇವತೆ.) ಬೀಜ, ಕೀಲಕ ಮುಂತಾದುವುಗಳನ್ನು ಗ್ರಂಥದ ಮೂಲದಲ್ಲಿಯೇ ನಿರೂಪಿಸಿದೆ. (ಪುಟ. 5421)

6) ಶ್ರೀವಿಷ್ಣುಸಹಸ್ರನಾಮವನ್ನು ಹೇಗೆ ಅನುಸಂಧಾನ ಮಾಡ ಬೇಕು?

ಶ್ರೀವಿಷ್ಣುಸಹಸ್ರನಾಮವು ಭಕ್ತಿರಸಾಯನ. ಭಕ್ತಿರಸದಿಂದ ಪರಿ ಪೂರ್ಣವಾದ ಹೃದಯವುಳ್ಳ ಭಕ್ತರು ಹೇಗೆ ಪಾರಾಯಣಮಾಡಿದರೂ ಅದು ಭಗವಂತನಿಗೆ ಪ್ರಿಯವಾಗುತ್ತದೆ. ಅಬದ್ಧವಾದ ಪಾಠವನ್ನು ಹೇಳಿದರೂ ಅದರಿಂದ ಪಾಪಪರಿಹಾರವುಂಟಾಗುತ್ತದೆ.

ಸ ವಾಗ್ವಿಸರ್ಗೋ ಜನತಾಘವಿಪ್ಲವೋ ಯಸ್ಮಿನ್ಪ್ರತಿಶ್ಲೋಕಮ ಬದ್ಧ-ವತ್ಯಪಿ ।

ತಿಳಿದು ಮಾಡಲಿ, ತಿಳಿಯದೇ ಮಾಡಲಿ, ಶುದ್ಧಾಶುದ್ಧವಾದ ಪಾಠ ವನ್ನು ಮಾಡಲಿ, ಸ್ವರ-ತಾಳ-ಲಯಗಳೊಡನೆ ಗಾನಮಾಡಲಿ ಅಥವಾ ಅಪಸ್ವರದಿಂದ ಅರಚಿಕೊಳ್ಳಲಿ—ಹೇಗೆ ಅನುಸಂಧಾನಮಾಡಿದರೂ ಅದರ

ಪಾರಾಯಣದಿಂದ ಲಾಭವುಂಟು. ಅದು ಭಕ್ತಿಯ ಮಹಿಮೆ. ಆದರೆ ಭಕ್ತಿರಸದೊಡನೆ ವ್ಯಾಕರಣಶುದ್ಧವಾದ ಪಾಠ, ಅರ್ಥಾನುಸಂಧಾನ, ಸ್ವರಾದಿಶುದ್ಧಿ-ಇವುಗಳೊಡನೆ ಮಂತ್ರಪಾರಾಯಣವನ್ನೂ ಗಾನವನ್ನೂ ಮಾಡಿದರೆ-ಅದು ಇನ್ನೂ ಹೆಚ್ಚು ವೀರ್ಯವತ್ತರವಾಗುತ್ತದೆ ಎಂಬುದರಲ್ಲಿ ಸಂಶಯವಿಲ್ಲ.

ಶ್ರೀವಿಷ್ಣುಸಹಸ್ರನಾಮವನ್ನು ರಾಮಾಯಣ ಮತ್ತು ಭಗವದ್ಗೀತೆಗಳಂತೆ ಶುದ್ಧವಾಗಿ ಗಾನಮಾಡುವುದು ಉತ್ತಮಕಲ್ಪ. "ಗೀತೆಯನ್ನೂ ಮತ್ತು ಸಹಸ್ರನಾಮವನ್ನೂ ಗಾನಮಾಡಬೇಕು" ಎಂದು ಮಹಾಯೋಗಿ ಗಳಾದ ಶ್ರೀಶಂಕರಭಗವತ್ಪಾದರು ಉಪದೇಶಮಾಡಿರುವುದನ್ನು ಹಿಂದೆ ಗಮನಿಸಿದ್ದೇವೆ.

ಶ್ರೀವಿಷ್ಣುಸಹಸ್ರನಾಮವನ್ನು ಹೇಗೆ ಪಾರಾಯಣಮಾಡಬೇಕು? ಎಂದು ನಾವು ಜ್ಞಾನ-ವಿಜ್ಞಾನತೃಪ್ತರಾಗಿದ್ದ ನಾದಯೋಗಿ, ಗಾನಯೋಗಿ, ಅಷ್ಟಾಂಗಯೋಗವಿಜ್ಞಾನಮಂದಿರದ ಅಧ್ಯಕ್ಷಸ್ವಾಮಿಗಳಾದ ಶ್ರೀರಂಗಮಹಾ ಗುರುಗಳಲ್ಲಿ ಪ್ರಶ್ನೆಯನ್ನು ಅರಿಕೆಮಾಡಿಕೊಂಡೆವು. ಅದಕ್ಕೆ ಅವರು ಒಂದು ಸೂತ್ರಪ್ರಾಯವಾದ ಉತ್ತರವನ್ನು ಅಪ್ಪಣೆಕೊಡಿಸಿದರು.

"ಪರಾಯಣನಾಗಿ ಪಾರಾಯಣವನ್ನು ಮಾಡಬೇಕು"-ಎಂಬುದು ಅವರು ಕೊಟ್ಟ ಉತ್ತರ. ಇದು ಶಬ್ದಚಮತ್ಕಾರದ ಮಾತಲ್ಲ. ಪರಮಾತ್ಮನಲ್ಲಿ ನಿಜವಾದ ಪರಾಯಣತೆಯು ಉಂಟಾದರೆ ಸರಿಯಾದ ಪಾರಾಯಣದ ಕ್ರಮವೂ ಅದರೊಡನೆಯೇ ಹುಟ್ಟಿಕೊಳ್ಳುತ್ತದೆ. **ಪರಮಂ ಯಃ ಪರಾಯಣಮ್ । ಯದ್ಭಕ್ತ್ಯಾ ಪುಂಡರೀಕಾಕ್ಷಂ ಸ್ತವೈರರ್ಚೇನ್ನರಃ ಸದಾ । ಪಾರಾಯಣಪ್ರವಣವಿಪ್ರಪರಾಯಣಸ್ಯ ।** ಎಂಬ ಭಕ್ತಿಶಾಸ್ತ್ರದ ವಚನಗಳ ಸಾರವಾಗಿದೆ ಅವರ ಆ ಉತ್ತರ.

"ನಮಗೆ ಸಂಗೀತದ ಆವಶ್ಯಕತೆಯಿಲ್ಲ. ಸುಮ್ಮನೆ ಪಾರಾಯಣ ಮಾಡುತ್ತೇವೆ"-ಎಂದು ಹೇಳಿದ್ದಕ್ಕೆ ಅವರು ಮಂದಹಾಸದೊಡನೆ-"ನೀವು ಹೇಗೆ ಪಾರಾಯಣಮಾಡಿದರೂ ಅದರಲ್ಲಿ ಯಾವುದಾದರೂ ಸ್ವರ-ರಾಗಗಳು ಇದ್ದೇ ಇರುತ್ತವೆ. ಅವುಗಳಲ್ಲಿ ಆದರ್ಶವಾದುದನ್ನು ಆರಿಸಿಕೊಂಡು ಪಾರಾಯಣಮಾಡಬೇಕಪ್ಪಾ"-ಎಂದು ಉತ್ತರ ನೀಡಿದರು.

ಸಹಸ್ರನಾಮದ ಶ್ಲೋಕಗಳನ್ನು ಹೇಗೆ ಗಾನಮಾಡಬೇಕು? ಅದರ ಸ್ವರ, ರಾಗ, ಗ್ರಾಮ ಮುಂತಾದುವುಗಳು ಹೇಗಿರಬೇಕು? ಎಂದು ಪ್ರಶ್ನೆ ಮಾಡಿದಾಗ ಅವರು :

"ಸಹಸ್ರನಾಮದ ಅರ್ಥಗಳನ್ನು ತನ್ಮಯತೆಯಿಂದ ಅನುಸಂಧಾನ ಮಾಡುತ್ತಿದ್ದರೆ ಆ ಅನುಸಂಧಾನವು ತನಗೆ ಬೇಕಾದ ಸ್ವರ-ರಾಗ-ಗ್ರಾಮ ಮುಂತಾದುವುಗಳನ್ನು ತಾನೇ ಬರಮಾಡಿಕೊಳ್ಳುತ್ತದೆ"–ಎಂದು ಹೇಳಿ ಆ ವಿಷಯವನ್ನು ಪ್ರಯೋಗದಿಂದ ತೋರಿಸಿಕೊಟ್ಟರು. "ಸಂಗೀತದ ಹೆಚ್ಚು ಪರಿಚಯವಿಲ್ಲದವರು ಸಹಸ್ರನಾಮದ ಎಲ್ಲ ಶ್ಲೋಕಗಳನ್ನೂ ಪಾರಾಯಣ ಮಾಡಬಹುದಾದ ಒಂದು ಸಾಮಾನ್ಯವಾದ ಕ್ರಮವನ್ನು ಉಪದೇಶಮಾಡ ಬೇಕು"–ಎಂದು ಪ್ರಾರ್ಥನೆಮಾಡಿದಾಗ ಅವರು ಸ್ವಲ್ಪಹೊತ್ತು ಧ್ಯಾನಸ್ಥ ರಾಗಿದ್ದು ಅನಂತರ–"ಹೀಗೆ ಹಾಡಬಹುದಪ್ಪಾ"–ಎಂದು, ಹಾಡಿ ತೋರಿ ಸಿದರು.

"ವೇದದಲ್ಲಿ ಸ್ವರಗಳು ಸರಿಯಾಗಿ ತಿಳಿಯದೇ ಇದ್ದಾಗ ಉದಾತ್ತಸ್ವರ ದಲ್ಲಿ ಪಠಿಸಿದರೆ ದೋಷವಾಗುವುದಿಲ್ಲ. ಹಾಗೆಯೇ ಸಹಸ್ರನಾಮದ ಶ್ಲೋಕ ಗಳನ್ನು ಈ ರೀತಿಯಲ್ಲಿ ಈ ಸ್ವರದಿಂದ ಪಠಿಸಿದರೆ ದೋಷವು ತಗುಲು ವುದಿಲ್ಲ" ಎಂದು ತಿಳಿವಳಿಕೆ ನೀಡಿದರು. "ಇದು ಸಾಮಾನ್ಯರಿಗಾಗಿ. ಆದರೆ ಬೇರೆ ಬೇರೆ ನಾಮಗಳ ಅರ್ಥಾನುಸಂಧಾನಕ್ಕೆ ಅನುಗುಣವಾಗಿ ಸಹಸ್ರನಾಮ ಶ್ಲೋಕದ ರಾಗಗಳು ಬೇರೆ ಬೇರೆಯಾಗುತ್ತವೆ. ಅದಕ್ಕೆ ವಿಶೇಷವಾದ ತಿಳಿವಳಿಕೆ ಬೇಕಾಗುತ್ತದೆ"–ಎಂದು ಬೋಧಿಸಿದರು. ಅವರು ಎಲ್ಲ ಶ್ಲೋಕ ಗಳಿಗೂ ಸಾಮಾನ್ಯವಾಗಿ ಇದು ಹೊಂದಿಕೆಯಾಗುತ್ತದೆ–ಎಂದು ಹೇಳಿದ್ದ ಸ್ವರದ ವಿವರಣೆಯನ್ನು ಈ ಕೆಳಗೆ ಕೊಟ್ಟಿದೆ :

ಕೇದಾರಗೌಳ :

	. . . .	. .	. .	. .
ಪ	ಪ್ಪನಿಸರಿಗಾರಿ	ರಿರ್ರೀ	ರಿ ರಿ	ರೀ ರೀ
ವಿ	ಶ್ವಂ.....	ವಿಷ್ಣು	ರ್ವ಼ಷ	ಟ್ಕಾರೋ

. . . .

ಗಾಗ ರಿಸಾ ಸ ಸಸಸ್ಸರಿ ಸರಿಸನೀ ॥

ಭೂತ ಭ ವ್ಯ ಭವತ್ಪ್ರಭು ಃ....

. . . .

ನಿ ಸರೀಸ ಸಾ ಸ ಸಾ ಸ ಸಾ ನಿದಾಪಾ ।

ಭೂ.. ತ ಕೃ ದ್ ಭೂತ ಭೃದ್ ಭಾ. . ವಃ

ಮ ಪ ದಾ ಪಾ ಪಾ ಪ ಮಾ ಮಗ ಗಾರಿ ॥

ಭೂ. ತಾತ್ಮಾ ಭೂ ತ ಭಾ ವ ನ ಃ ..

ಭ್ರೂಮಧ್ಯಸ್ಥಾನದಲ್ಲಿ ದೃಷ್ಟಿಯನ್ನು ನಿಲ್ಲಿಸಿಕೊಂಡು ಗಾನಮಾಡಬೇಕು. ಪುಸ್ತಕವನ್ನಿಟ್ಟುಕೊಂಡು ಪಾರಾಯಣಮಾಡುವ ಹಾಗಿದ್ದರೆ ಪುಸ್ತಕವನ್ನು ಆ ನೇರದಲ್ಲಿ ಇರಿಸಿಕೊಂಡು ಇದನ್ನು ಗಾನಮಾಡಬೇಕು. ಗಾನವು ಗಾಂಧಾರಗ್ರಾಮದಲ್ಲಿರಬೇಕು. ಮಂತ್ರದೇವತೆಯನ್ನು ಧ್ಯಾನಿಸುತ್ತಾ ಮಂತ್ರದ ಅರ್ಥಾನುಸಂಧಾನದೊಡನೆ ಹಾಡಬೇಕು"–ಎಂದೂ ಅವರು ಉಪದೇಶಿಸಿದ್ದರು. ಇದಲ್ಲದೇ ಸಹಸ್ರನಾಮದ ಕೆಲವು ಶಬ್ದಗಳ ವಿಶೇಷಾರ್ಥಗಳನ್ನೂ ಮನಮುಟ್ಟುವಂತೆ ವೈಜ್ಞಾನಿಕವಾದ ಉದಾಹರಣೆಗಳೊಡನೆ ಅವರು ಅನೇಕಬಾರಿ ನಮಗೆ ವಿವರಿಸುತ್ತಿದ್ದರು.* ಸತ್ಯಾರ್ಥಭಾವಕ್ಕೆ ತಮ್ಮನ್ನೊಪ್ಪಿಸಿಕೊಂಡು ಆ ಅನುಭವದ ಪ್ರೇರಣೆಯಿಂದ ಬಂದ ಅರ್ಥ ಗಳನ್ನು ಸುಲಭತಮವಾದ ದೃಷ್ಟಾಂತ, ಯುಕ್ತಿ ಮತ್ತು ಪ್ರಯೋಗಗಳ ಮೂಲಕ ನಮಗೆ ಮನವರಿಕೆ ಮಾಡಿಕೊಡುತ್ತಿದ್ದರು. ಇದಕ್ಕೆ ಒಂದೆರಡು ಉದಾಹರಣೆಗಳನ್ನು ಕೊಡಬಹುದು.

ವಿಷ್ಣುಸಹಸ್ರನಾಮದಲ್ಲಿ ಓಂ ಪ್ರಥಮವಾಗಿರುವ "ವಿಶ್ವಂ" ಎಂಬ ಶಬ್ದಕ್ಕೆ ವಿಶ್ವರೂಪಿ, ವಿಶ್ವಕಾರಣ, ಪ್ರವೇಶಮಾಡಿರುವನು, ಪ್ರವೇಶಕ್ಕೆ ಅಧಿಕರಣನಾದವನು, ಪರಿಪೂರ್ಣನು, ವಿಶ್ವವನ್ನು ನಡೆಸುವವನು–ಎಂದು ನಾನಾ ಅರ್ಥಗಳನ್ನು ಹೇಳಬಹುದು. ಯಾವ ಅರ್ಥವನ್ನು ಹೇಳಿದರೂ

* ಅವರು ಹೇಳುತ್ತಿದ್ದ ಅರ್ಥವಿವರಣೆಗಳನ್ನು ಸ್ಥಳಾಭಾವದಿಂದ ನಾವು ಭಾಷ್ಯದಲ್ಲಿ ಹೇಳಿಲ್ಲ. ಅವರು ನೇರವಾಗಿ ಹೇಳಿದ್ದ ಮತ್ತು ಅವರ ಉಪದೇಶಸಂಸ್ಕಾರದಿಂದ ಲಬ್ಧವಾಗಿರುವ ಅರ್ಥಗಳನ್ನು ಮಾತ್ರ ಹೇಳಿದ್ದೇವೆ.

ಅದು ಭಗವಂತನನ್ನು ಪ್ರತಿಪಾದಿಸುತ್ತದೆ. ಆದರೆ ಮಹಾಗುರುಗಳ ಸ್ಫೂರ್ತಿಯ ವಿಷಯಕ್ಕೆ ಬಂದುದು ಪರಮಾತ್ಮನು ವಿಶ್ವರೂಪಿ, ವಿಶ್ವವೆಲ್ಲವೂ ಬ್ರಹ್ಮಸ್ವರೂಪವೇ ಆಗಿದೆ–ಎಂಬ ಅದರ ನೇರವಾದ ಅರ್ಥ. ಆ ಮುಖ್ಯಾರ್ಥ ವನ್ನೇ ಅವರು ಮೊದಲು ಬೋಧಿಸುತ್ತಿದ್ದರು.

ಇಲ್ಲಿ ಒಂದು ಪ್ರಶ್ನೆ ಏಳುತ್ತದೆ. ಭಗವಂತನು ಜ್ಞಾನ-ಆನಂದ-ಚೈತನ್ಯ ಸ್ವರೂಪಿ. ವಿಶ್ವದಲ್ಲಿ ನಾವು ನೋಡುವ ಗೋಡೆ, ಗುಡಿಸಲು ಮುಂತಾದುವು ಜಡದ್ರವ್ಯಗಳು. ಅವುಗಳ ರೂಪ, ಗುಣ, ಎಲ್ಲವೂ ಬೇರೆ-ಬೇರೆ. ಅವೆಲ್ಲ ವನ್ನೂ ಜ್ಞಾನಾನಂದಚೈತನ್ಯಸ್ವರೂಪಿಯಾದ ಬ್ರಹ್ಮವೆಂದು ನಿರೂಪಿಸುವುದು ಹೇಗೆ ಸರಿಹೊಂದುತ್ತದೆ?–ಎಂಬುದು ಆ ಪ್ರಶ್ನೆ. ಅದನ್ನು ಅರಿಕೆಮಾಡಿ ಕೊಂಡಾಗ, ಮಹಾಗುರುಗಳು ಒಂದು ಸುಂದರವೂ ಸುಬೋಧವೂ ಆದ ಉದಾಹರಣೆಯ ಮೂಲಕ ಸತ್ಯಾಂಶವನ್ನು ಮನವರಿಕೆ ಮಾಡಿಕೊಟ್ಟು ಸಮಾಧಾನವನ್ನು ತಂದರು.

ವಜ್ರ, ಕಲ್ಲಿದ್ದಲು, ಕಲ್ಲುಸಕ್ಕರೆ, ಸೀಮೆಯಸುಣ್ಣ–ಇವೆಲ್ಲವೂ ಬೇರೆ ಬೇರೆ ಪದಾರ್ಥಗಳು. ಅವುಗಳ ಗುಣ, ರೂಪ, ಪ್ರಯೋಜನ ಎಲ್ಲವೂ ಬೇರೆ ಬೇರೆ. ಇವೆಲ್ಲವೂ ಏಕಸ್ವರೂಪವಾಗಿದೆ–ಎಂದು ಹೇಳಿದರೆ ಜನ ಸಾಮಾನ್ಯರು ಅದನ್ನು ನಂಬುವುದಿಲ್ಲ. ಆದರೆ ರಸಾಯನವಿಜ್ಞಾನಿಯು– 'ಅವೆಲ್ಲವೂ ಏಕಸ್ವರೂಪ'–ಎಂದು ಪ್ರತಿಪಾದನೆಮಾಡುತ್ತಾನೆ. 'ಅವೆಲ್ಲವೂ ಇಂಗಾಲದ (Carbon) ರೂಪಗಳು. ಆ ನಾನಾರೂಪಗಳಲ್ಲಿ ಕಾಣುತ್ತಿರುವುದು ಇಂಗಾಲವೊಂದೇ. ಇವೆಲ್ಲವೂ 'ಇಂಗಾಲಮಯಂ'–ಎನ್ನುತ್ತಾನೆ. ಆದರೆ ಭೌತವಿಜ್ಞಾನಿಯು ಇನ್ನೂ ಆಳವಾಗಿ ವಿಸ್ತಾರಮಾಡಿ ಇವೆಲ್ಲವೂ 'ಎಲೆಕ್ಟ್ರಾನ್ ಪ್ರೋಟಾನ್ ಮಯಂ'–ಎಂದು ಘೋಷಣೆಮಾಡುತ್ತಾನೆ. ಹಾಗೆಯೇ ವಿಶ್ವಮೂಲದಲ್ಲಿ ನಿಂತು ನೋಡುವ ಜ್ಞಾನಿಯು 'ಸರ್ವಂ ಬ್ರಹ್ಮಮಯಂ'–ಎಂದು ಹೇಳುತ್ತಾನೆ.

'ಪುರುಷ ಏವೇದಂ ಸರ್ವಂ', 'ಸರ್ವಂ ಖಲ್ವಿದಂ ಬ್ರಹ್ಮ' ಇತ್ಯಾದಿ ಶ್ರುತಿಗಳು ಇದನ್ನು ಸಾರುತ್ತವೆ. ಪರಮಾತ್ಮನೇ ಎಲ್ಲದರ ಸಾರ, ಎಲ್ಲದರ ಚೈತನ್ಯ ಮತ್ತು ಎಲ್ಲದರ ಮೂಲರೂಪ.

"ಪರಮಾತ್ಮನು ನಿರ್ವಿಕಾರಿ. ಜಗತ್ತು ಪ್ರತಿಕ್ಷಣದಲ್ಲಿಯೂ ವಿಕಾರ ಹೊಂದುತ್ತಿದೆ. ಇಂತಹ ಜಗತ್ತು ನಿರ್ವಿಕಾರನಾದ ಪರಮಾತ್ಮನ ರೂಪವು

ಹೇಗಾಗುತ್ತದೆ?"–ಎಂದು ನಾವು ಪ್ರಶ್ನೆಮಾಡಿದಾಗ, ಅವರು ತಂಬೂರಿ ಯನ್ನು ತೆಗೆದುಕೊಂಡು ಒಂದೇ ಶ್ರುತಿಯಲ್ಲಿ ನಾನಾ ರಾಗಗಳು ಬರುವು ದನ್ನು ತೋರಿಸಿದರು. ಈ ಸ್ವರ-ರಾಗ ಮುಂತಾದುವುಗಳು ಬೇರೆ-ಬೇರೆ ರೂಪಗಳನ್ನು ಪಡೆಯುತ್ತಿದ್ದರೂ ಅವುಗಳ ಹಿಂದಿರುವ ಶ್ರುತಿಯು ಮಾತ್ರ ನಿರ್ವಿಕಾರವಾಗಿರುವಂತೆ ಪರಮಾತ್ಮನು ನಿರ್ವಿಕಾರನಾಗಿರುತ್ತಾನೆ ಎಂದು ತಿಳಿಸಿದ್ದರು.

ಸಹಸ್ರನಾಮದಲ್ಲಿ ಬರುವ ಕೆಲವು ನಾಮಗಳನ್ನು ಅರ್ಥಸಹಿತ ವಾಗಿಯೇ ಅವರು ಪ್ರವಚನಗಳಲ್ಲಿ ಹೇಳುತ್ತಿದ್ದುದೂ ಉಂಟು. ವ್ಯಾಪಕನಾದ ವಿಷ್ಣು, ಹೃದಯಪುಂಡರೀಕದಲ್ಲಿ ನೆಲೆಸಿರುವ ಪುಂಡರೀಕಾಕ್ಷ, ವಿಕುಂಠಿತ ವಾದ ಧಾಮದಲ್ಲಿರುವ ವೈಕುಂಠ ಇತ್ಯಾದಿಗಳು ಇದಕ್ಕೆ ಉದಾಹರಣೆಗಳು.

೭) ಶ್ರೀವಿಷ್ಣುಸಹಸ್ರನಾಮದ ಮೇಲಿನ ಭಾಷ್ಯಗಳು

ಈ ಹಿಂದೆಯೇ ನಾವು ಗಮನಿಸಿರುವಂತೆ ಶ್ರೀವಿಷ್ಣುಸಹಸ್ರನಾಮದ ಮೇಲೆ ಹದಿನೈದಕ್ಕಿಂತಲೂ ಹೆಚ್ಚು ಸಂಖ್ಯೆಯ ಭಾಷ್ಯಗಳು ನಮಗೆ ದೊರಕಿವೆ. ಅವುಗಳಲ್ಲಿ ಪ್ರಸಿದ್ಧವಾದುವುಗಳನ್ನು ಇಲ್ಲಿ ಗಮನಿಸಬಹುದು.

1) ಶ್ರೀಶಂಕರಭಗವತ್ಪಾದರ ಭಾಷ್ಯ :– ನಮಗೆ ದೊರಕಿರುವ ವಿಷ್ಣುಸಹಸ್ರನಾಮಭಾಷ್ಯಗಳಲ್ಲಿ ಅತ್ಯಂತಪ್ರಾಚೀನವಾದುದು ಮತ್ತು ಇತರ ಎಲ್ಲ ಭಾಷ್ಯಕಾರರಿಗೂ ಸ್ಫೂರ್ತಿಯನ್ನು ನೀಡಿರುವುದು ಈ ಭಾಷ್ಯವೇ. ಇದರ ಕೆಲವು ಪ್ರತಿಗಳು ಕ್ರಿ.ಶ. 14 ಮತ್ತು 15ನೇ ಶತಮಾನಗಳಿಗೆ ಸೇರಿದ್ದು. ದೇಶದ ನಾನಾಭಾಗಗಳಲ್ಲಿ ಇದರ ಪ್ರತಿಗಳು ದೊರಕಿವೆ. ಗ್ರಂಥದ ಜನಪ್ರಿಯತೆಗೆ ಈ ವಿಷಯವು ಕೈಗನ್ನಡಿಯಾಗಿದೆ. ಶ್ರೀಶಂಕರಭಗವತ್ಪಾದರ ಇತರ ಭಾಷ್ಯಗಳಂತೆಯೇ ಈ ಭಾಷ್ಯವೂ ಅತ್ಯಂತಸುಲಭವೂ, ಗಂಭೀರವೂ, ಪ್ರಸನ್ನವೂ ಆದ ಭಾಷೆಯಲ್ಲಿ ರಚಿತವಾಗಿದೆ. ಆಚಾರ್ಯರ ಭಕ್ತಿ-ಜ್ಞಾನ ಪರಿಪೂರ್ಣವಾದ ಹೃದಯವು ಇಲ್ಲಿ ಎದ್ದು ಕಾಣುತ್ತದೆ. ಇದು ಶ್ರೀಮದಾ ಚಾರ್ಯರೇ ಹೇಳಿರುವಂತೆ–"ಶ್ರುತಿ-ಸ್ಮೃತಿ-ನ್ಯಾಯಮೂಲವಾಗಿದೆ." ಭಾಷ್ಯದಲ್ಲಿ ಪ್ರಮಾಣಗ್ರಂಥಗಳು ಹೇರಳವಾಗಿ ಉದ್ಧರಿಸಲ್ಪಟ್ಟಿವೆ. ಆಚಾ ರ್ಯರ ಸ್ವಾನುಭವದ ರಸಾಯನವಾಗಿರುವ ವಾಕ್ಯಗಳನ್ನು ಅನೇಕಕಡೆಗಳಲ್ಲಿ ನೋಡುತ್ತೇವೆ. ಅದ್ವೈತದರ್ಶನವನ್ನೂ ಮತ್ತು ಅದಕ್ಕೆ ಅವಿರೋಧಿಯಾದ

ಭಕ್ತಿದರ್ಶನವನ್ನೂ ಹಾಸು-ಹೊಕ್ಕಾಗಿ ಸೇರಿಸಿ ಹೆಣೆದಿರುವ ಅಲಂಕಾರವಸ್ತ್ರದಂತಿದೆ ಈ ಭಾಷ್ಯ. "ಇದು ಆದಿಶಂಕರಾಚಾರ್ಯರ ರಚನೆಯಲ್ಲ. ಇತ್ತೀಚಿನ ಯಾರೋ ಶಂಕರಾಚಾರ್ಯರು ಇದನ್ನು ರಚಿಸಿದರು. ಏಕೆಂದರೆ : ಇದಕ್ಕೂ ಶ್ರೀಮದಾಚಾರ್ಯರ ಇತರ ಭಾಷ್ಯಗ್ರಂಥಗಳಿಗೂ ಶೈಲಿಯಲ್ಲಿ ವ್ಯತ್ಯಾಸವಿದೆ. ಅಭಿಪ್ರಾಯಗಳಲ್ಲೂ ವ್ಯತ್ಯಾಸಗಳಿವೆ"–ಎಂದು ಕೆಲವರು ವಾದಿಸುತ್ತಾರೆ. ಇದು ನಮಗೆ ಸರಿಯೆನಿಸುವುದಿಲ್ಲ. ಏಕೆಂದರೆ : ಶ್ರೀಆದಿಶಂಕರಾಚಾರ್ಯರಿಗೆ ಹತ್ತಿರದವರಾದ ಶ್ರೀರಾಮಾನುಜಾಚಾರ್ಯರ ಶಿಷ್ಯಶ್ರೇಷ್ಠರಾಗಿದ್ದ ಪರಾಶರಭಟ್ಟರು ಮೇಲ್ಕಂಡ ಭಾಷ್ಯವನ್ನು ಗಮನಿಸಿದ್ದಾರೆ. ಆದರೆ ಅವರು ಅದನ್ನು ಆಧುನಿಕಶಂಕರಾಚಾರ್ಯಕೃತವೆಂದು ಟೀಕೆ ಮಾಡಿಲ್ಲ. ಆದಿಶಂಕರರು ವಿಷ್ಣುಸಹಸ್ರನಾಮಕ್ಕೆ ಭಾಷ್ಯವನ್ನು ರಚಿಸಿದರೆಂದು ನಾರಾಯಣೀಯದ ಕರ್ತೃವಾದ ಕೇರಳದ ನಾರಾಯಣನಂಬೂದರಿಯು ಸ್ಪಷ್ಟವಾಗಿ ಹೇಳಿದ್ದಾನೆ. ಈ ಸಹಸ್ರನಾಮಭಾಷ್ಯಕ್ಕೂ ಮತ್ತು ಶ್ರೀಶಂಕರಾಚಾರ್ಯರ ಇತರ ಗ್ರಂಥಗಳಿಗೂ ದಾರ್ಶನಿಕವಾಗಿ ನಿಜವಾದ ವಿರೋಧಗಳು ಸಾಂಪ್ರದಾಯಿಕವಾಗಿ ಕಾಣಿಸುವುದಿಲ್ಲ. ಶೈಲೀಭೇದವೂ ಹೆಚ್ಚಾಗಿಲ್ಲ.

ಈ ಭಾಷ್ಯರತ್ನಕ್ಕೆ ತಾರಕಬ್ರಹ್ಮಾನಂದಸರಸ್ವತೀ–ಎನ್ನುವವರು ವಿವೃತಿಯನ್ನು ರಚಿಸಿದ್ದಾರೆ. ಕವಿಪಂಡಿತ ಗಂಭೀರಭಾರತಿಯವರ "ಪದ್ಯ ಪ್ರಸೂನಾಂಜಲಿ" ಎಂಬ ಗ್ರಂಥವು ವಿವರಣರೂಪವಾಗಿದೆ. ಇತ್ತೀಚಿಗೆ ಶ್ರೀರಾಮಶಾಸ್ತ್ರಿಗಳು ರಚಿಸಿರುವ ಶಾಂಕರಭಾಷ್ಯಾರ್ಥಸಂಗ್ರಹ ಮತ್ತು ನಾಮನಿರ್ವಚನಗಳು ಭಾಷ್ಯಕ್ಕೆ ಭೂಷಣವಾಗಿವೆ. ಶಂಕರರ ಅದ್ವೈತ ಸಂಪ್ರದಾಯದಲ್ಲಿ ವಿಷ್ಣುಸಹಸ್ರನಾಮಕ್ಕೆ ಇರುವ ಉನ್ನತಸ್ಥಾನಕ್ಕೆ ಈ ಗ್ರಂಥಗಳು ಸಾಕ್ಷಿಗಳಾಗಿವೆ.

2) ಶ್ರೀಪರಾಶರಭಟ್ಟರ ಭಾಷ್ಯ :– ವಿಷ್ಣುಭಕ್ತಿಪರಾಯಣವಾದ ವಿಶಿಷ್ಟಾದ್ವೈತಸಂಪ್ರದಾಯದಲ್ಲಿಯೂ ವಿಷ್ಣುಸಹಸ್ರನಾಮಕ್ಕೆ ಪರಮೋನ್ನತ ಸ್ಥಾನವು ಇರುವುದು ಸಹಜವಾಗಿದೆ. ಶ್ರೀಮದ್ರಾಮಾನುಜಾಚಾರ್ಯರ ಆದೇಶದಂತೆ ಅವರ ಶಿಷ್ಯಶ್ರೇಷ್ಠರಾದ ಹಾರೀತಕುಲತಿಲಕ ಶ್ರೀರಂಗನಾಥ ಪರಾಶರಭಟ್ಟರು ವಿಷ್ಣುಸಹಸ್ರನಾಮಕ್ಕೆ "ಭಗವದ್ಗುಣದರ್ಪಣ" ಎಂಬ ಭಾಷ್ಯವನ್ನು ಮಂಡಿಸಿದ್ದಾರೆ.

ಅವರ ದೃಷ್ಟಿಯಲ್ಲಿ–ಭಾಷ್ಯದ ಶೀರ್ಷಿಕೆಯೇ ಹೇಳುವಂತೆ ಸಹಸ್ರ ನಾಮಗಳಲ್ಲಿ ಪ್ರತಿಯೊಂದು ನಾಮಧೇಯವೂ ಭಗವಂತನ ಕಲ್ಯಾಣಗುಣಕ್ಕೆ ವಾಚಕವಾದ ಒಂದು ಶಬ್ದಮಂಗಲವಾಗಿದೆ. ಗ್ರಂಥದಲ್ಲಿ ಅಧಿಕಸಂಖ್ಯೆಯ ನಾಮಗಳು ಭಗವಂತನ ಅವತಾರ ಮತ್ತು ಅರ್ಚಾಮೂರ್ತಿಗಳಿಗೆ ಅನ್ವಯಿಸುವಂತೆ ವ್ಯಾಖ್ಯಾನಿಸಲ್ಪಟ್ಟಿವೆ. ಗ್ರಂಥದ ಭಾಷೆಯು ರಮಣೀಯ ವಾದ ಗದ್ಯಕಾವ್ಯದೋಪಾದಿಯಲ್ಲಿ ಕಂಗೊಳಿಸುತ್ತದೆ. ಶಬ್ದಶಾಸ್ತ್ರಕ್ಕೆ ಅನುಗುಣ ವಾಗಿ ಶಬ್ದಗಳ ಪ್ರಕ್ರಿಯೆಯು ವಿಸ್ತಾರವಾಗಿ ತೋರಿಸಲ್ಪಟ್ಟಿದೆ. ಶ್ರುತಿ-ಸ್ಮೃತಿ-ಪುರಾಣೇತಿಹಾಸ–ಆಗಮಗಳಿಂದ ಪ್ರಮಾಣವಾಕ್ಯಗಳು ಪುಷ್ಕಳವಾಗಿ ಉದ್ಧರಿ ಸಲ್ಪಟ್ಟಿವೆ. ಭಾಷ್ಯವು ಭಗವದ್ಗುಣದರ್ಪಣವಾಗಿರುವಂತೆಯೇ ಭಾಷ್ಯಕಾರರ ಆಳವಾದ ಮತ್ತು ವಿಶಾಲವಾದ ವೈದುಷ್ಯಕ್ಕೂ ದರ್ಪಣವಾಗಿದೆ. ಶ್ರೀ ವರದಾಚಾರ್ಯಸೂರಿ ಎನ್ನುವವರು ಈ ಭಾಷ್ಯಕ್ಕೆ ಅನುಗುಣವಾದ ನಿರುಕ್ತಿ ಶ್ಲೋಕಗಳನ್ನು ಭಾಷ್ಯಭಕ್ತಿಯಿಂದ ಪ್ರೇರಿತರಾಗಿ ಬರೆದಿದ್ದಾರೆ.* ಆದರೆ ಕೆಲವು ಕಡೆ ಭಾಷ್ಯದಲ್ಲಿ ಹೇಳಿರುವುದಕ್ಕಿಂತಲೂ ಬೇರೆಯಾದ ಅರ್ಥಗಳೂ ನಿರುಕ್ತಿಯಲ್ಲಿ ಕಂಡುಬಂದಿವೆ.

3) ಶ್ರೀಸತ್ಯಸಂಧೀಯ :– ವಿಷ್ಣುಭಕ್ತಿಸಾರ್ವಭೌಮರಾಗಿದ್ದ ದ್ವೈತ ಸಿದ್ಧಾಂತಪ್ರವರ್ತಕರಾದ ಶ್ರೀಮಧ್ವಾಚಾರ್ಯ ಆನಂದತೀರ್ಥರ ಸಂಪ್ರ ದಾಯದಲ್ಲಿ ವಿಷ್ಣುಸಹಸ್ರನಾಮಕ್ಕೆ ಪರಮೋನ್ನತವಾದ ಸ್ಥಾನವುಂಟು. ಇದನ್ನು ಶ್ರೀಮಧ್ವಾಚಾರ್ಯರು 'ಭಾರತದ ಸಾರ' ವೆಂದು ಕರೆದು ಗೌರವಿಸಿದ್ದಾರೆ. ಪಂಡಿತರ ಸವಾಲನ್ನು ಎದುರಿಸಲು ಅವರು ವಿಷ್ಣುಸಹಸ್ರನಾಮದ ಮೊದಲನೆಯ ಶಬ್ದಕ್ಕೆ ನೂರು ಅರ್ಥಗಳನ್ನು ನಿರೂಪಿಸಿದಾಗ–ಪಂಡಿತರು ಅವುಗಳನ್ನು ಧರಿಸಲು ಸಮರ್ಥರಾಗದೇ ಪರಾಭೂತರಾದರೆಂದು ಸುಮಧ್ವ

---

* ನಿರುಕ್ತಿಯನ್ನು ಪರಾಶರಭಟ್ಟೀಯದ ಕೆಳಗೆ ಕೊಟ್ಟಿದ್ದೇವೆ. ಶ್ರೀರಾಮಶಾಸ್ತ್ರಿಗಳು ಬರೆದಿರುವ ನಿರುಕ್ತಿಯೂ ಬಹಳ ಚೆನ್ನಾಗಿದೆ. ಆದರೆ ಈ ಪುಸ್ತಕವು ನಮಗೆ ತುಂಬಾ ತಡವಾಗಿ ಸಿಕ್ಕಿದ್ದರಿಂದ ಅದನ್ನು ಇಲ್ಲಿ ಮುದ್ರಿಸಲಾಗಲಿಲ್ಲ. ಮಹಾಮಹೋಪಾಧ್ಯಾಯ ಅನಂತಕೃಷ್ಣಶಾಸ್ತ್ರಿಗಳು ಸಂಪಾದನೆಮಾಡಿರುವ ವಿಷ್ಣುಸಹಸ್ರನಾಮ (ಇಂಗ್ಲೀಷ್ ಅನುವಾದ ಸಹಿತ) ಭೂಮಿಕೆಯನ್ನೂ, ಪ್ರೊ॥ ಎಸ್. ಎಸ್. ರಾಘವಾಚಾರ್ಯರು ಸತ್ಯಸಂಧೀಯ ವನ್ನನುಸರಿಸಿದ ವಿಷ್ಣುಸಹಸ್ರನಾಮ ಕನ್ನಡ ಅನುವಾದಸಹಿತ ಗ್ರಂಥಕ್ಕೆ ಬರೆದಿರುವ ಮುನ್ನುಡಿಯನ್ನೂ ಗಮನಿಸಬೇಕು.

ವಿಜಯವು ತಿಳಿಸುತ್ತದೆ. “ವರ್ಣಿತಾವಧೃತಿದುರ್ಬಲಚಿತ್ತಾಸ್ತಾವದಾಕುಲ ಹೃದೋ ಹ್ಯಭವಂಸ್ತೇ” (೬-೪) ಸಹಸ್ರನಾಮಗಳ ಅರ್ಥಗಳು ಎಷ್ಟು ಗಂಭೀರವೂ ಮತ್ತು ವ್ಯಾಪಕವೂ ಆಗಿವೆಯೆಂಬುದು ಇದರಿಂದ ಸ್ಪಷ್ಟ ಪಡುತ್ತದೆ.

ಆಚಾರ್ಯರ ಶಿಷ್ಯಪರಂಪರೆಯಲ್ಲಿ ಸುಪ್ರಸಿದ್ಧರಾದ ರಾಘವೇಂದ್ರ ಸೂರಿಗಳೂ ಮತ್ತು ಉತ್ತರಾದಿಮಠಕ್ಕೆ ಅಧಿಪತಿಗಳಾಗಿದ್ದ ಶ್ರೀಸತ್ಯಸಂಧ ತೀರ್ಥ ಯತಿರಾಜರೂ ರಚಿಸಿರುವ ಎರಡು ಭಾಷ್ಯಗಳೂ ದ್ವೈತಸಿದ್ಧಾಂತಕ್ಕೆ ಅನುಗುಣವಾದ ವಿಷ್ಣುಸಹಸ್ರನಾಮ ಭಾಷ್ಯಗಳಾಗಿವೆ. ಅವುಗಳಲ್ಲಿ ಸತ್ಯ ಸಂಧೀಯಭಾಷ್ಯದಂತೆ ಅರ್ಥಗಳನ್ನು ಇಲ್ಲಿ ಕೊಟ್ಟಿದೆ. ಮೊದಲನೆಯ ಪುಸ್ತಕವು ನಮಗೆ ದೊರೆಯಲಿಲ್ಲ. ಸತ್ಯಸಂಧೀಯಭಾಷ್ಯದ ಭಾಷೆಯು ಸಂಕ್ಷಿಪ್ತವಾಗಿದೆ. ಸುಲಭಶೈಲಿಯಲ್ಲಿದೆ. ಭಾಷ್ಯಕಾರರು ಆಚಾರ್ಯರ ‘ಸರ್ವಮೂಲ’ ಗ್ರಂಥದಲ್ಲಿ ಆಳವಾಗಿ ಅವಗಾಹನೆಮಾಡಿರುವುದು ಎದ್ದುಕಾಣುತ್ತದೆ. ಇದಲ್ಲದೇ ಪದ-ವಾಕ್ಯ-ಪ್ರಮಾಣಶಾಸ್ತ್ರಗಳಿಗೆ ಅನುಗುಣವಾದ ಪದಾರ್ಥವಿವರಣೆ, ಅನೇಕಾರ್ಥಪ್ರದರ್ಶನದ ಕೌಶಲ, ಆಚಾರ್ಯಭಕ್ತಿ, ಭಗವದ್ಭಕ್ತಿ–ಮುಂತಾದ ಗುಣಸಂಪತ್ತು ಈ ಗ್ರಂಥವನ್ನು ಅಮೂಲ್ಯವನ್ನಾಗಿ ಮಾಡಿದೆ.

೮) ಭಾಷ್ಯಾರ್ಥಗಳನ್ನು ಭಾವಿಸಬೇಕಾದ ದೃಷ್ಟಿ

ಶ್ರೀವಿಷ್ಣುಸಹಸ್ರನಾಮಸ್ತೋತ್ರಕ್ಕೆ ಅದ್ವೈತ, ವಿಶಿಷ್ಟಾದ್ವೈತ ಮತ್ತು ದ್ವೈತ ಮುಂತಾದ ನಾನಾದರ್ಶನಗಳ ಆಚಾರ್ಯರು ಭಾಷ್ಯಮಾಡಿದ್ದಾರೆ. ನಾನಾ ಕಾಲಗಳಲ್ಲಿನ ಆಚಾರ್ಯರೂ ಸಾಧು-ಸಂತರೂ ಇದಕ್ಕೆ ಭಾಷ್ಯಗಳನ್ನು ಮಂಡಿಸಿದ್ದಾರೆ. ನಾವು ಗುಣಗ್ರಹಣಬುದ್ಧಿಯಿಂದ ಎಲ್ಲ ಭಾಷ್ಯಗಳನ್ನೂ ಮಾನ್ಯಮಾಡಬೇಕು. ವಿಷ್ಣುಸಹಸ್ರನಾಮದಲ್ಲಿ ಭಕ್ತಿ-ಶ್ರದ್ಧೆಗಳಿಂದ ಕೂಡಿದ ವರೂ, ಶ್ರುತಿ-ಸ್ಮೃತಿ-ಇತಿಹಾಸ-ಪುರಾಣ-ಆಗಮಗಳಲ್ಲಿ ನಿಷ್ಣಾತರೂ, ಪದ (ವ್ಯಾಕರಣ) ವಾಕ್ಯ (ಮೀಮಾಂಸ) ಮತ್ತು ಪ್ರಮಾಣ (ತರ್ಕ) ಶಾಸ್ತ್ರಗಳಲ್ಲಿ ಪ್ರವೀಣರೂ ಆಗಿರುವ ಯಾವ ಭಾಷ್ಯಕಾರರ ಅಭಿಪ್ರಾಯಗಳನ್ನೂ ತಿರಸ್ಕರಿಸಬಾರದು. ಅವರ ಎಲ್ಲ ನಾಮಭಾಷ್ಯಗಳೂ ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಮುಂತಾದ ಮತೀಯಆಗ್ರಹದಿಂದಲೇ ಕೂಡಿರುತ್ತದೆ–ಎಂಬ ಪೂರ್ವಗ್ರಹವನ್ನು ಬಿಟ್ಟು ನಾವು ಅವುಗಳನ್ನು ಪರಿಶೀಲಿಸಬೇಕು.

ಇದಲ್ಲದೇ ಬ್ರಹ್ಮಾಪರೋಕ್ಷಜ್ಞಾನವುಳ್ಳ ಮಹಾತ್ಮರು ಯಾವ ಜಾತಿ-ಮತ-ಪಂಥಗಳಿಗೆ ಸೇರಿದ್ದರೂ, ಅವರು ದೈವಪ್ರೇರಣೆಯಿಂದ ಆಡುವ ದಿವ್ಯಾರ್ಥಗಳನ್ನು ಆಪ್ತವಾಕ್ಯವೆಂದೇ ಗೌರವಿಸಬೇಕು. ಪೂರ್ವಸೂರಿಗಳ ಭಾಷ್ಯಸಾಹಿತ್ಯದಲ್ಲಿ ಪ್ರಮಾದವಶದಿಂದ ದೋಷಗಳು ಸೇರಿಕೊಂಡಿದ್ದರೆ ಅವುಗಳನ್ನು ಬಿಟ್ಟು ಗುಣಭಾಗವನ್ನು ಗ್ರಹಿಸಿದರೆ ಅದು ಅವರಿಗೆ ನಾವು ಮಾಡಿದ ಸಂಭಾವನೆಯೇ ಆಗುತ್ತದೆ.

ನಾವು ಈ ಗ್ರಂಥದಲ್ಲಿ ವಿಷ್ಣುಸಹಸ್ರನಾಮಕ್ಕೆ ಶ್ರೀಶಂಕರಭಗವತ್ಪಾದರ, ಶ್ರೀಪರಾಶರಭಟ್ಟರ, ಸತ್ಯಸಂಧಯತಿರಾಜರ ಭಾಷ್ಯದಂತೆ ಅರ್ಥಗಳನ್ನು ಕೊಟ್ಟಿದ್ದೇವೆ. ನಮಗೆ ದೊರಕಿರುವ ಒಂದು ನಿರುಕ್ತಿಯನ್ನೂ ಅದರ ಭಾಷ್ಯಾರ್ಥದ ಕೆಳಗೆ ತೋರಿಸಿದ್ದೇವೆ. ಯೋಗಾಚಾರ್ಯರಾದ ಮಹಾಗುರು ಶ್ರೀರಂಗರ ಸೇವಾಸಂಸ್ಕಾರದಿಂದ ಲಬ್ಧವಾದ ಅರ್ಥಗಳನ್ನು ಮೊದಲು ಕೊಟ್ಟಿರುತ್ತೇವೆ. ಇಷ್ಟೆಲ್ಲಾ ಅರ್ಥಗಳನ್ನು ನೋಡಿ ಮನಸ್ಸಿಗೆ ಗೊಂದಲಮಾಡಿ ಕೊಳ್ಳಬಾರದು. ತನ್ನ ಉಪಾಸನೆಗೂ ಆಯಾ ಪ್ರಕರಣಕ್ಕೂ ಅನುಗುಣವಾದ ಒಳ್ಳೆಯ ಅರ್ಥಗಳು ಎಲ್ಲಿದ್ದರೂ ಅವುಗಳನ್ನು ಆರಿಸಿಕೊಂಡು ಭಗವಂತನನ್ನು ಪೂಜಿಸಲು ಸಹಾಯವಾಗಲೆಂದು ನಾವು ಈ ಎಲ್ಲ ಭಾಷ್ಯಾರ್ಥಗಳನ್ನೂ ಕೊಟ್ಟಿದ್ದೇವೆ.

ನಮ್ಮ ಈ ಆಶಯವು ಸರಳವಾದ ಮನಸ್ಸಿನಿಂದ ಗ್ರಹಿಸಲ್ಪಟ್ಟು, ಸದುಪಯೋಗಕ್ಕೆ ಬರುವುದು—ಎಂದು ನಮ್ಮ ನಂಬಿಕೆ.

೯) ನಾಮಸಂಖ್ಯೆ-ನಾಮಾವಳಿಗಳು

ನಮಗೆ ದೊರಕಿರುವ ವಿಷ್ಣುಸಹಸ್ರನಾಮಸ್ತೋತ್ರದ ಶ್ಲೋಕಗಳಲ್ಲಿರುವ ನಾಮಧೇಯಗಳನ್ನು ಬಿಡಿ-ಬಿಡಿಯಾಗಿ ತೆಗೆದುಕೊಂಡರೆ ನಾಮಗಳ ಸಂಖ್ಯೆಯು ಸಾವಿರಕ್ಕಿಂತಲೂ ಹೆಚ್ಚಾಗುತ್ತದೆ. ನಾಮಗಳಲ್ಲಿ ಪಾಠಾಂತರಗಳೂ ಪುಷ್ಕಳವಾಗಿವೆ. ಆದರೆ ಗ್ರಂಥದ ಉಪಕ್ರಮ-ಉಪಸಂಹಾರಗಳಲ್ಲಿ ಸಹಸ್ರ ಎಂಬ ಪದವು ಸ್ಪಷ್ಟವಾಗಿರುವುದರಿಂದ ಅನೇಕಕಡೆಗಳಲ್ಲಿ ಭಾಷ್ಯಕಾರರು ಅನೇಕಪದಗಳನ್ನು ಏಕಪದಗಳನ್ನಾಗಿ ತೆಗೆದುಕೊಂಡು ವ್ಯಾಖ್ಯಾನಿಸಿ ಸಹಸ್ರಸಂಖ್ಯೆಯನ್ನು ನಿರ್ವಾಹಮಾಡಿದ್ದಾರೆ. ನಾಮಧೇಯಗಳನ್ನು ಚತುರ್ಥೀವಿಭಕ್ತ್ಯಂತವನ್ನಾಗಿ ಮಾಡಿ ಅವುಗಳ ಮುಂದೆ ನಮಃ ಎಂಬ

ಶಬ್ದವನ್ನು ಸೇರಿಸಿ ಆ ನಾಮಾವಳಿಗಳನ್ನು ಸ್ತೋತ್ರಕ್ಕೂ, ಪೂಜೆಗೂ ಮತ್ತು ಅರ್ಚನೆಗೂ ವಿನಿಯೋಗಿಸಿಕೊಳ್ಳುವ ವಾಡಿಕೆಯಿದೆ.

೧೦) ಉಪೋದ್ಘಾತ ಮತ್ತು ಉಪಸಂಹಾರ

ಗ್ರಂಥದ ಅವತರಣಿಕೆಯ ಶ್ಲೋಕಗಳಲ್ಲಿ ಮಹಾತ್ಮನಾದ ಯುಧಿಷ್ಠಿರನು ಶ್ರೀಕೃಷ್ಣಪರಮಾತ್ಮನ ವರಪ್ರದಾನದಿಂದಲೂ ವಿದ್ವಾಂಸರ ಶುಶ್ರೂಷೆಯಿಂದಲೂ ಅದ್ವಿತೀಯಜ್ಞಾನಿಗಳಾಗಿದ್ದ ಮಹಾಯೋಗಿ ಭೀಷ್ಮಪಿತಾಮಹರಲ್ಲಿ ಆರು ಪ್ರಶ್ನೆಗಳನ್ನಿಡುತ್ತಾನೆ. 'ಲೋಕದಲ್ಲಿ ಅದ್ವಿತೀಯನಾದ ದೇವನು ಯಾರು? ಯಾವುದು ಏಕಪರಾಯಣ? ಶುಭವನ್ನು ಪಡೆಯಲು ಯಾರನ್ನು ಸ್ತುತಿಸಬೇಕು ಮತ್ತು ಅರ್ಚಿಸಬೇಕು? ಶ್ರೇಷ್ಠತಮವಾದ ಧರ್ಮವು ಯಾವುದು? ಯಾವುದನ್ನು ಜಪಿಸಿದರೆ ಮನುಷ್ಯನು ಜನ್ಮ-ಸಂಸಾರಬಂಧನಗಳಿಂದ ಬಿಡುಗಡೆ ಹೊಂದುತ್ತಾನೆ?'–ಎಂಬಿವು ಆ ಪ್ರಶ್ನೆಗಳು. ಭೀಷ್ಮಾಚಾರ್ಯರು ಮಹಾವಿಷ್ಣುವನ್ನೂ ಮತ್ತು ಅವನ ಸಹಸ್ರನಾಮಗಳ ಅನುಸಂಧಾನವನ್ನೂ ಆ ಪ್ರಶ್ನೆಗಳಿಗೆ ಉತ್ತರಗಳನ್ನಾಗಿ ಹೇಳಿ, ಸಕಲ ಪುರುಷಾರ್ಥಗಳನ್ನೂ ಪಡೆಯಲು ಸುಲಭತಮಸಾಧನವಾದ ಶ್ರೀವಿಷ್ಣುಸಹಸ್ರನಾಮಮಂತ್ರವನ್ನು ಉಪದೇಶಮಾಡುತ್ತಾರೆ.

ಶ್ರೀವಿಷ್ಣುಸಹಸ್ರನಾಮಸ್ತೋತ್ರದ ಉಪಸಂಹಾರಭಾಗವು ಫಲ ಶ್ರುತಿಯ ರೂಪದಲ್ಲಿದೆ. ಈ ಸಹಸ್ರನಾಮಮಂತ್ರದ ಪಾರಾಯಣದಿಂದ ಯಾರು ಯಾರಿಗೆ ಯಾವ ಯಾವ ಇಷ್ಟಾರ್ಥಗಳು ಸಿದ್ಧಿಸುತ್ತವೆ? ಯಾವ ಯಾವ ಪೀಡೆಗಳ ಪರಿಹಾರವಾಗುತ್ತದೆ?–ಇತ್ಯಾದಿ ವಿಷಯಗಳನ್ನು ಅಲ್ಲಿ ವಿಸ್ತಾರವಾಗಿ ಹೇಳಿದೆ.

ಈ ಸಹಸ್ರನಾಮವನ್ನು ಕೇವಲ ಭಗವಂತನ ಪ್ರೀತ್ಯರ್ಥವಾಗಿ ಜಪಿಸುವುದು ಉತ್ತಮಕಲ್ಪ. ಆರೋಗ್ಯ, ಐಶ್ವರ್ಯ, ಆಯುಷ್ಯ–ಮುಂತಾದ ಫಲಗಳೂ ಅದರಿಂದ ದೊರೆಯುತ್ತವೆ. ವಿಪತ್ತುಗಳು ಅದರ ಅನುಸಂಧಾನದಿಂದ ತೊಲಗುತ್ತವೆ. ಇವೆಲ್ಲವೂ ನಿಜವೇ ಇರಬಹುದು. ಆದರೆ ಕೇವಲ ಪರಮಾತ್ಮನ ಪ್ರೀತಿಗೋಸ್ಕರವಾಗಿ, ನಿಷ್ಕಾಮರಾಗಿ ಸಹಸ್ರನಾಮವನ್ನು ಪಾರಾಯಣಮಾಡುವವರೂ ಇದ್ದಾರೆ. ಅಂತಹ ಪರಮೈಕಾಂತಿಗಳಾದ ಭಕ್ತರು ಫಲಶ್ರುತಿಯನ್ನು ಪಠಿಸುವ ಆವಶ್ಯಕತೆ ಉಂಟೇ? ಎಂದು ಕೆಲವರು

ಪ್ರಶ್ನೆಮಾಡುತ್ತಾರೆ. ಕಾಲಾವಕಾಶವಿದ್ದರೆ ಫಲಶ್ರುತಿಯನ್ನು ಪಠಿಸುವುದು ಒಳ್ಳೆಯದು. ಅಂತಹ ಜಾಪಕನಿಗೆ ಅಲ್ಲಿ ಹೇಳಿರುವ ವಿವಿಧಫಲಗಳಲ್ಲಿ ಆಸಕ್ತಿಯು ಇಲ್ಲದಿರಬಹುದು. ಆದರೆ ಸಹಸ್ರನಾಮವು ವಿಷ್ಣುವನ್ನು ಸ್ತುತಿಸುವಂತೆಯೇ–ಅದರ ಫಲಶ್ರುತಿಯ ಭಾಗವು ವಿಷ್ಣುಸಹಸ್ರನಾಮಸ್ತೋತ್ರದ ಮಹಾಮಹಿಮೆಯನ್ನೇ ಸ್ತುತಿಸುತ್ತದೆ–ಎಂಬುದನ್ನು ಅವರು ಗಮನಿಸಿ ಆ ದೃಷ್ಟಿಯಿಂದ ಫಲಶ್ರುತಿಯನ್ನೂ ಪಠಿಸಬೇಕು.

೧೧) ಶ್ರೀವಿಷ್ಣುಸಹಸ್ರನಾಮಕ್ಕೆ ಅಧಿಕಾರಿಗಳು

ಭಗವಂತನಲ್ಲಿ ಭಕ್ತಿ-ಶ್ರದ್ಧೆಗಳಿಂದ ಕೂಡಿದ ಎಲ್ಲರೂ (ಭಗವಂತನ ಸ್ವರೂಪ-ರೂಪ-ಗುಣ-ವಿಭವ-ಐಶ್ವರ್ಯಗಳನ್ನು ಯಥಾವತ್ತಾಗಿ ಹೇಳುವ) ಈ ದಿವ್ಯಸಾಹಿತ್ಯವನ್ನು ಸೇವಿಸಲು ಅಧಿಕಾರಿಗಳು. ಅದರ ಪಾರಾಯಣವನ್ನು ಮಾಡಲಾಗದವರು ಶ್ರವಣಮಾಡಿದರೂ ಒಳ್ಳೆಯ ಫಲವುಂಟು. **ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದಸೇವನಮ್ । ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮನಿವೇದನಮ್ ॥** ಎಂದು ಪರಮಭಾಗವತೋತ್ತಮನಾದ ಪ್ರಹ್ಲಾದನು ಹೇಳಿರುವ ನವವಿಧಭಕ್ತಿಗಳಲ್ಲಿ ಶ್ರವಣ-ಕೀರ್ತನಗಳೆರಡೂ ಸೇರಿವೆಯಲ್ಲವೇ!

ಧರ್ಮ-ಅರ್ಥ-ಕಾಮ-ಮೋಕ್ಷಗಳೆಂಬ ಎಲ್ಲ ಪುರುಷಾರ್ಥಗಳನ್ನೂ ಬಯಸುವವರಿಗೂ ಕಲ್ಪತರುವಿನಂತಿರುವ ದಿವ್ಯಸರಸ್ವತಿಯಾಗಿದೆ ಈ ಶ್ರೀವಿಷ್ಣುಸಹಸ್ರನಾಮ. ಸಾಧಕರು ಮಾತ್ರವಲ್ಲದೇ ಸಿದ್ಧರೂ ಕೂಡ ಪರಮ ಸಂತೋಷದಿಂದ ಇದನ್ನು ಅನುಸಂಧಾನಮಾಡುತ್ತಾರೆ. ಹಸುವಿನ ಹಾಲು ಮಕ್ಕಳಿಗೂ ಒಳ್ಳೆಯ ಆಹಾರ, ವೃದ್ಧರಿಗೂ ಒಳ್ಳೆಯ ಆಹಾರ, ತರುಣರಿಗೂ ಒಳ್ಳೆಯ ಆಹಾರ. ದೇಹಬಲವನ್ನು ಬಯಸುವ ಜಟ್ಟಿಗಳಿಗೂ ಒಳ್ಳೆಯ ಪಥ್ಯ. ಹಸಿವು-ಬಾಯಾರಿಕೆಗಳು ಇಲ್ಲದೇ ಇದ್ದರೂ ಕೇವಲ ಸಂತೋಷಕ್ಕಾಗಿ ಹಾಲುಕುಡಿಯುವವರೂ ಉಂಟು. ಹೀಗೆಯೇ ಸರ್ವರಿಗೂ ಭೋಗ್ಯವಾಗಿರುವ ದಿವ್ಯಾಮೃತವಾಗಿದೆ–ಶ್ರೀವಿಷ್ಣುಸಹಸ್ರನಾಮ. ವಕ್ರಬುದ್ಧಿಯಿಂದ ಬರುವ ಕಪಟ-ಕುಚೋದ್ಯ-ಕುಹಕಗಳ ಹುಳಿಯನ್ನು ಇದಕ್ಕೆ ಹಿಂಡಬಾರದು.

೧೨) ವಿಷ್ಣುಸಹಸ್ರನಾಮದಲ್ಲಿ ಇತರ ಮತಗಳ ಪ್ರಭಾವ

'ವಿಷ್ಣುಸಹಸ್ರನಾಮದಲ್ಲಿ ನಾರಾಯಣನ ಪ್ರಸಿದ್ಧವಾದ ಮತ್ತು ಗೌಣವಾದ ನಾನಾನಾಮಧೇಯಗಳಲ್ಲದೇ ಸರ್ವರಿಗೂ ಭೋಗ್ಯವಾಗಿರುವ ಹೆಸರುಗಳಾದ ಶಿವ-ಸ್ಥಾಣು ಇತ್ಯಾದಿ ಶಿವಪರವಾದ ಪದಗಳೂ, ಶಿವ-ವಿಷ್ಣು ಉಭಯವಾಚಕವಾದ ವೃಷಾಕಪಿಶಬ್ದವೂ, ಷಣ್ಮುಖಸ್ವಾಮಿಯ ಹೆಸರಾದ 'ಸ್ಕಂದ' ಶಬ್ದವೂ, ವಿನಾಯಕನ ನಾಮಧೇಯವಾದ 'ಗಣೇಶ್ವರ' ಶಬ್ದವೂ, ಸೂರ್ಯ ಮತ್ತು ಅಗ್ನಿವಾಚಕಗಳಾದ ಭಾನು, ಆದಿತ್ಯ, ವಹ್ನಿ, ಧನಂಜಯ– ಮುಂತಾದ ಅನೇಕಶಬ್ದಗಳೂ ಕಂಡುಬರುತ್ತವೆ. ಆದುದರಿಂದ ಈ ಎಲ್ಲ ಮತಗಳ ಸಮನ್ವಯವಾಗಿ ವಿಷ್ಣುಸಹಸ್ರನಾಮವು ರಚಿತವಾಯಿತು'–ಎಂದು ಕೆಲವರು ಹೇಳುತ್ತಾರೆ. ಆದರೆ ಅವಕ್ಕೆ ಈ ಉದ್ದೇಶವನ್ನು ಕಲ್ಪಿಸಬೇಕಾಗಿಲ್ಲ. ಪರಮಾತ್ಮನು ಸಹಜವಾಗಿಯೇ ಸರ್ವದೇವರೂಪಿಯು, ಸರ್ವದೇವ ವಿಭೂತಿಸಹಿತನಾದವನು, ಸರ್ವಾಂತರ್ಯಾಮಿಯು, ಸರ್ವದೇವ ನಿಧಾನನು. **ಯಸ್ಮಿನ್ ಸರ್ವಂ ಯತಃ ಸರ್ವಂ ಯಃ ಸರ್ವಂ ಸರ್ವತಶ್ಚ ಯಃ । ಯಶ್ಚ ಸರ್ವಮಯೋ ದೇವಃ ತಸ್ಮೈ ಸರ್ವಾತ್ಮನೇ ನಮಃ॥**ಎಂದು ಮಹಾಭಾರತವು ಹೇಳುವಂತೆ–ಅವನು ಸಹಜವಾಗಿಯೇ ಸರ್ವ ದೇವತೆಗಳ ನಾಮ ಮತ್ತು ರೂಪಗಳಿಂದ ಸಮನ್ವಿತನೇ ಆಗಿದ್ದಾನೆ.

ಇಂದ್ರಂ ಮಿತ್ರಂ ವರುಣಮಗ್ನಿಮಾಹುರಥೋ ದಿವ್ಯಸ್ಸ ಸುಪರ್ಣೋ ಗರುತ್ಮಾನ್ ।ಏಕಂ ಸದ್ವಿಪ್ರಾ ಬಹುಧಾ ವದನ್ತ್ಯಗ್ನಿಂ ಯಮಂ ಮಾತರಿಶ್ವಾನಮಾಹುಃ॥ ಯೋ ದೇವಾನಾಂ ನಾಮಧಾ ಏಕ ಏವ॥ ಏಕೈವ ದೇವತಾ ಮಹಾಭಾಗ್ಯಾತ್ ಬಹುಧಾ ಸ್ತೂಯತೇ॥ ಎಂಬ ಶ್ರುತಿವಚನ, ನಿರುಕ್ತಕಾರರ ವಚನಗಳನ್ನು ಗಮನಿಸಿದಾಗಲೂ ಇದೇ ಅಭಿಪ್ರಾಯವೇ ದೃಢಪಡುತ್ತದೆ. ಶಿವಸಹಸ್ರನಾಮದಲ್ಲಿ ವಿಷ್ಣುವಿನ ಅನೇಕ ಹೆಸರುಗಳೂ ಲಕ್ಷ್ಮೀ-ಲಲಿತಾ-ಸರಸ್ವತೀಸಹಸ್ರನಾಮಗಳಲ್ಲಿ ಪರಸ್ಪರವಾಚಕಗಳಾದ ನಾನಾನಾಮಗಳೂ ಬಂದಿರುವುದನ್ನೂ ಗಮನಿಸಬೇಕು.

'ಸಿದ್ಧಾರ್ಥ' ಎಂಬ ಗೌತಮನ ಹೆಸರೂ, 'ಋಷಭಃ' 'ವರ್ಧಮಾನಃ' ಎಂಬ ಜೈನಾಚಾರ್ಯರ ಹೆಸರುಗಳೂ ಇಲ್ಲಿ ಬಂದಿರುವುದರಿಂದ ಜೈನ-ಬೌದ್ಧಮತಗಳ ಆಚಾರ್ಯರ ಹೆಸರುಗಳನ್ನೂ ಪ್ರಯತ್ನಪೂರ್ವಕವಾಗಿ

ಸೇರಿಸಿ ಇಲ್ಲಿ ಸಮನ್ವಯಮಾಡಿದ್ದಾರೆ–ಎಂದು ಕೆಲವರು ವಾದಿಸುತ್ತಾರೆ. ಹೀಗೆ ವಾದಮಾಡುವವರು ಎರಡು ವಿಷಯಗಳನ್ನು ಗಮನಿಸಬೇಕು. (1) 'ಋಷಭಃ', 'ಸಿದ್ಧಾರ್ಥಃ', 'ವರ್ಧಮಾನಃ'–ಎಂಬ ಸಂಸ್ಕೃತಭಾಷಾಶಬ್ದಗಳು ಇತಿಹಾಸದಲ್ಲಿ ಬರುವ ಆಯಾ ಹೆಸರುಗಳ ಮತಾಚಾರ್ಯರ ಕಾಲ ಕ್ಕಿಂತಲೂ ಎಷ್ಟೋ ಮೊದಲಿನಿಂದಲೂ ಇದ್ದುವು. ಪ್ರಾಚೀನಕಾಲದಿಂದಲೂ ನಡೆದು ಬಂದಿದ್ದ ಆ ಶಬ್ದಗಳನ್ನೇ ಆ ಹೆಸರಿನ ಮಹಾಪುರುಷರಿಗೆ ಅವರ ಬಂಧುಗಳೋ, ಭಕ್ತರೋ ಅಥವಾ ಶಿಷ್ಯರೋ ಇಟ್ಟರು. (2) ಜೈನ-ಬೌದ್ಧ ಮತಗಳು ವೈದಿಕಮತಕ್ಕೆ ಪರಕೀಯಗಳಲ್ಲ. ವೈದಿಕಮತದಲ್ಲಿ ಹೇಳಿರುವ ಧರ್ಮಗಳಲ್ಲಿ ಭೂತದಯೆ, ದಮ, ದಾನ–ಮುಂತಾದ ಆತ್ಮಗುಣಕರ್ಮ ಗಳಲ್ಲಿ ತತ್ತ್ವವಿಶೇಷದಲ್ಲಿ ಜನರ ಮನಸ್ಸನ್ನು ಕೇಂದ್ರೀಕರಿಸಲು ಆ ಮತಗಳು ಹುಟ್ಟಿದುವು. ಮೌಲಿಕವಾಗಿ ಅವು ವೈದಿಕವಿರೋಧಿಗಳಲ್ಲ. ವೈದಿಕಮಹಾ ಪ್ರಸ್ಥಾನದ ಪಾಂಥರ ಮತಗಳೇ ಆಗಿದ್ದುವು ಅವು. ಆದುದರಿಂದ ಋಷಭ ದೇವ, ಬುದ್ಧದೇವ–ಮುಂತಾದವರು ಭಗವಂತನ ವಿಭೂತಿಗಳೆಂದೂ, ಇತಿಹಾಸದಲ್ಲಿ ಹೇಳುವ ತೀರ್ಥಂಕರ-ಬುದ್ಧರಿಗಿಂತಲೂ ಹಿಂದಿನಿಂದಲೂ ಅವರಂತಹ ಸಿದ್ಧಿಗಳನ್ನು ಪಡೆದ ಮಹಾತ್ಮರು ಇದ್ದರೆಂದೂ ನಮ್ಮ ಪ್ರಾಚೀನ ವಾದ ಇತಿಹಾಸ-ಪುರಾಣಗಳು ಅಭಿಪ್ರಾಯಪಡುತ್ತವೆ.

ಇತ್ತೀಚಿನ ಮತಗಳಾದ ಕ್ರೈಸ್ತ, ಇಸ್ಲಾಂಮತಗಳಲ್ಲಿ ಭಗವಂತನ ಮಹಿಮೆಯನ್ನು ಹೇಳುವ ಪವಿತ್ರಶಬ್ದಗಳನ್ನು ನೋಡುತ್ತೇವೆ. 'ಅಲ್ಲಾಹು, ಗುರುಸ್ಸಮಾವಾತಿ ವಲ್ ಅರದ್' (ಮುಗಿಲಿನ ಪ್ರಕಾಶವು 'ಅಲ್ಲಾ'), ಅಲ್‌ಮಲಿಕು (ಲೋಕಸ್ವಾಮಿ), ಸಲಾಂ (ಶಾಂತಿ), ಗಫಾರ್ (ಅತ್ಯಂತ ಕ್ಷಮೆ) ಎಂಬ ಶಬ್ದಗಳು ಇಸ್ಲಾಂಧರ್ಮದಲ್ಲಿ ಪ್ರಸಿದ್ಧವಾಗಿವೆ. ಕ್ರೈಸ್ತಧರ್ಮದಲ್ಲಿ ಏಸುಕ್ರಿಸ್ತ, ಪವಿತ್ರಾತ್ಮ ಮತ್ತು ಪರಮಾತ್ಮ–ಎಂಬ ಟ್ರಿನಿಟಿ (ತ್ರಿತತ್ತ್ವ)ಯಲ್ಲಿ ನಂಬಿಕೆಯಿದೆ. ವಿಷ್ಣುಸಹಸ್ರನಾಮದಲ್ಲಿ ಬರುವ '**ಪ್ರಕಾಶಾತ್ಮಾ ಪ್ರತಾಪನಃ**' **ಲೋಕಸ್ವಾಮೀ ತ್ರಿಲೋಕಧೃತ್**' '**ಶುಭಾಙ್ಗಃ ಶಾಂತಿದಃ**' '**ಕ್ಷಮಿಣಾಂ ವರಃ**' '**ಪೂತಾತ್ಮಾ ಪರಮಾತ್ಮಾ ಚ ಮುಕ್ತಾನಾಂ ಪರಮಾ ಗತಿಃ**' ಎಂಬ ಶಬ್ದಗಳಿಗೂ ಮೇಲ್ಕಂಡ ಶಬ್ದಗಳಿಗೂ ಅರ್ಥದಲ್ಲಿ ಹೋಲಿಕೆಯಿದೆ. ಆದರೆ ಇದರಿಂದ ವಿಷ್ಣುಸಹಸ್ರನಾಮವು ಕ್ರೈಸ್ತ-ಇಸ್ಲಾಂಮತಗಳಿಂದ ಪ್ರಭಾವಿತ ವಾಯಿತು ಎಂದು ವಾದಿಸುವುದು ಮೂರ್ಖತನ. ಏಕೆಂದರೆ : ವಿಷ್ಣುಸಹಸ್ರ

ನಾಮದಲ್ಲಿ ಹೇಳಿರುವ ಶಬ್ದಾರ್ಥಗಳು ಬುದ್ಧನಿಗಿಂತಲೂ ಹಿಂದಿನಕಾಲದ ಭಾರತೀಯಸಾಹಿತ್ಯದಲ್ಲಿ ಕಂಡುಬರುತ್ತವೆ. ಉಪನಿಷತ್ತಿನ ಧರ್ಮದ ಪ್ರಭಾವವು ಬೌದ್ಧಧರ್ಮದ ಮೇಲೂ ಬೌದ್ಧಧರ್ಮದ ಪ್ರಭಾವವು ಕ್ರೈಸ್ತ ಮತ್ತು ಅದರ ಮೂಲಕ ಇಸ್ಲಾಂಧರ್ಮದ ಮೇಲೂ ಆಗಿದೆಯೆಂದು ಅನೇಕ ಇತಿಹಾಸಕಾರರು ಹೇಳುತ್ತಾರೆ. ಇದಲ್ಲದೇ ಭಗವಂತನಲ್ಲಿ ವಿಶ್ವಾಸ, ಭಗವದ್ಭಕ್ತಿ ಮತ್ತು ಭಗವನ್ಮಹಿಮಾಸ್ತುತಿಗಳ ಸಾಹಿತ್ಯವು ಯಾವುದೇ ದೇಶ-ಕಾಲ-ಮತಗಳ ಏಕಸ್ವಾಮ್ಯ (Monopoly) ಅಲ್ಲ. ಅವು ಬೇರೆ-ಬೇರೆ ದೇಶ-ಕಾಲಗಳ ಮತಾಚಾರ್ಯ-ಸಾಧುಸಂತರಲ್ಲಿ ಸ್ವತಂತ್ರವಾಗಿಯೇ ಉಂಟಾಗಿರುವುದೂ ಸಾಧ್ಯ.

೧೩) ವಿಷ್ಣುಸಹಸ್ರನಾಮದ ರಚನಾಕಾಲ

ವಿಷ್ಣುಸಹಸ್ರನಾಮಸ್ತೋತ್ರದಲ್ಲಿ ಜೈನ-ಬೌದ್ಧಮತಾಚಾರ್ಯರ ಹೆಸರುಗಳು ಬಂದಿರುವುದರಿಂದ ಈ ಗ್ರಂಥವು ಅವರ ಕಾಲಕ್ಕಿಂತಲೂ ಈಚಿನದು ಮತ್ತು ಬಾಣಭಟ್ಟನ ಹರ್ಷಚರಿತದಲ್ಲಿ ಇದರ ಪಾರಾಯಣದ ಸಂಪ್ರದಾಯದ ಉಲ್ಲೇಖವು ಇರುವುದರಿಂದ ಇದು ಅವನ ಕಾಲಕ್ಕಿಂತಲೂ ಹಿಂದಿನದು ಎಂದು ಆಧುನಿಕ ವಿಮರ್ಶಕರು ಹೇಳುತ್ತಾರೆ.

ಗ್ರಂಥದ ರಸಾನುಭಕ್ಕೆ ಈ ಕಾಲವಿಮರ್ಶೆಯಿಂದ ಹೆಚ್ಚು ಪ್ರಯೋಜನ ವಿಲ್ಲವೆಂಬುದು ನಮ್ಮ ಅಭಿಪ್ರಾಯ. "ಮಾವಿನ ಮರಗಳ ಉದ್ಯಾನಕ್ಕೆ ಹೋಗಿ ಅಲ್ಲಿರುವ ಮರಗಳ ಎಲೆಗಳನ್ನು ಎಣಿಸುವುದರಲ್ಲಿ ಕಾಲವನ್ನು ಪೋಲುಮಾಡಬಾರದು. ಅಲ್ಲಿರುವ ರಸಮಯವಾದ ಹಣ್ಣುಗಳನ್ನು ಅನುಭವಿಸುವುದು ವಿವೇಕ"–ಎಂಬ ಸೂಕ್ತಿಯನ್ನು ಇಲ್ಲಿ ಸ್ಮರಿಸುತ್ತೇವೆ. ಕಾಲವಿವೇಚನೆಯು ತಪ್ಪು ಎಂಬ ಅಭಿಪ್ರಾಯವಲ್ಲ. ಆದರೆ ಅದಕ್ಕೆ ಮಿತಿಯು ಇರಬೇಕು. ಭಗವದ್ಗೀತೆಯಂತೆಯೇ ಭಾಗವತಧರ್ಮದ ಕೈಪಿಡಿಯಾಗಿ **'ಗೇಯಂ ಗೀತಾನಾಮಸಹಸ್ರಂ'** ಎಂದು ಶಂಕರಭಗವತ್ಪಾದರಿಂದ ಗೀತೆಯೊಡನೆ ಸಮಪಂಕ್ತಿಯಲ್ಲಿ ಸಂಭಾವಿತವಾಗಿರುವ ಈ ಗ್ರಂಥರತ್ನವು ಆ ಜ್ಞಾನಭಕ್ತಿಗೀತೆಯಷ್ಟೇ ಸನಾತನವಾದದ್ದು–ಎಂದು ನಾವು ತಿಳಿಯುತ್ತೇವೆ.

೧ಳ) ವಿಷ್ಣುಸಹಸ್ರನಾಮದ ಮೇಲೆ ಕೆಲವು ಆರೋಪ-ಆಕ್ಷೇಪಗಳು

1) ವಿಷ್ಣುಸಹಸ್ರನಾಮದಲ್ಲಿ ಕೇವಲ ಪಾದಪೂರಣಕ್ಕಾಗಿ ಸೇರಿಸಲ್ಪಟ್ಟಿರುವ 'ಏವ, ಚ' ಇತ್ಯಾದಿ ನಿರರ್ಥಕವಾದ ಅವ್ಯಯಗಳು ತುಂಬಿವೆ. ಒಂದೇ ಪದಗಳನ್ನು ಮತ್ತೆ ಮತ್ತೆ ಹೇಳುವ ದ್ವಿರುಕ್ತಿ, ತ್ರಿರುಕ್ತಿ, ಚತುರುಕ್ತಿರೂಪವಾದ ಪುನರುಕ್ತಿದೋಷವಿದೆ–ಎಂದು ಭಾಸ್ಕರರಾಯ ಎಂಬ ವಿದ್ವಾಂಸರು ಆರೋಪಣೆಮಾಡಿದ್ದಾರೆ.

"ಯಥಾ ವಿಷ್ಣುಸಹಸ್ರನಾಮಾದಿಷು 'ಕ್ಷೇತ್ರಜ್ಞಃ ಅಕ್ಷರ ಏವ ಚ' ಇತ್ಯಾದೌ ನಿರರ್ಥಕಃ ಅವ್ಯಯಪ್ರಯೋಗಃ ಶತಾವಧಿ ನಾಮ್ನಾಂ ದ್ವಿರುಕ್ತಿಃ, ಕೇಷಾಂಚಿತ್ ತ್ರಿರುಕ್ತಿಃ ನ ತಥೇಹ ಸ್ತೋಭ ಪ್ರಯೋಗಃ ಪುನರುಕ್ತಿರ್ವಾ ।" ಈ ಆರೋಪಣೆಯಲ್ಲಿ ಆಳವಾದ ವಿಚಾರವಿಲ್ಲ. ಏಕೆಂದರೆ :

1) ವಿಷ್ಣುಸಹಸ್ರನಾಮವು ಒಂದು ಮಹಾಮಂತ್ರವು. ಸಾಹಿತ್ಯಶಾಸ್ತ್ರಕ್ಕೆ ಅನುಗುಣವಾದ ಗುಣ-ದೋಷವಿಮರ್ಶೆಯು ಮಂತ್ರಗಳಿಗೆ ಸಲ್ಲುವುದಿಲ್ಲ–ಎಂಬುದನ್ನು ನಾವು ನೆನಪಿನಲ್ಲಿಡಬೇಕು.

2) ಈ ಸ್ತೋತ್ರದಲ್ಲಿ 'ಏವ ಚ' ಮುಂತಾದ ಅವ್ಯಯಗಳು ಅನೇಕ ಕಡೆಗಳಲ್ಲಿದ್ದರೂ ಅವು ನಿರರ್ಥಕಗಳಲ್ಲ. ಶಬ್ದದಾರಿದ್ರ್ಯದ ಕಾರಣದಿಂದ ಸೇರಿಸಲ್ಪಟ್ಟುವುಗಳಲ್ಲ–ಎಂಬುದು ಆಯಾ ಪ್ರಕರಣಗಳನ್ನು ಸೂಕ್ಷ್ಮವಾಗಿ ವಿಮರ್ಶೆಮಾಡಿದಾಗ ತಿಳಿದುಬರುತ್ತದೆ.

ಉದಾಹರಣೆಗೆ : 1) **ಪೂತಾತ್ಮಾ ಪರಮಾತ್ಮಾ ಚ** ಎಂಬಲ್ಲಿರುವ 'ಚ' ಕಾರವು ಭಗವಂತನು ಪವಿತ್ರಾತ್ಮನಾಗಿರುವುದು ಮಾತ್ರವಲ್ಲದೇ ಪರಮಾತ್ಮನೂ ಆಗಿದ್ದಾನೆ. ಅವನು ಪೂತಾತ್ಮನಾಗಿರುವುದರಿಂದಲೇ ಪರಮಾತ್ಮನಾಗಿದ್ದಾನೆ. ಈ ಎರಡೂ ಆಗಿರುವುದರಿಂದಲೇ ಅವನು ಮುಕ್ತರಿಗೆ ಪರಮ ಗತಿಯಾಗಿದ್ದಾನೆ–**ಮುಕ್ತಾನಾಂ ಪರಮಾ ಗತಿಃ ।** ಎಂಬ ವಿಶೇಷಾರ್ಥವನ್ನು ಮನವರಿಕೆ ಮಾಡಿಕೊಡುತ್ತದೆ.

ವರ್ಧನೋ ವರ್ಧಮಾನಶ್ಚ–ಎಂಬಲ್ಲಿರುವ ಚಕಾರವು ಭಗವಂತನ ಸೃಷ್ಟಿವಿಕಾಸವು ನಿರಂತರವಾದುದು ಎಂಬುದನ್ನು ಸ್ಪಷ್ಟಪಡಿಸುತ್ತದೆ. **ಕ್ಷೇತ್ರಜ್ಞಃ ಅಕ್ಷರ ಏವ ಚ**–ಎಂಬಲ್ಲಿರುವ ಅವ್ಯಯಗಳು ಕ್ಷೇತ್ರಜ್ಞನೂ ಮತ್ತು ಅಕ್ಷರನೂ ಒಬ್ಬನೇ ಆಗಿದ್ದಾನೆ ಎಂಬುದನ್ನು ಒತ್ತಿಹೇಳಿ–**ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ**–ಎಂಬ ಗೀತಾವಾಕ್ಯದಲ್ಲಿನ (ಗೀತಾ. ೧೩-೩) ಅವ್ಯಯಗಳನ್ನು ನೆನಪಿಗೆ ತರುತ್ತವೆ. **ಅನ್ನಂ ಅನ್ನಾದ ಏವ ಚ** ಎಂಬಲ್ಲಿ ಬಂದಿರುವ ಅವ್ಯಯಗಳು ಭಗವಂತನು ಸರ್ವರೂಪಿಯಾಗಿರುವುದು ಮಾತ್ರವಲ್ಲದೇ ಸರ್ವಕಾರಣನೂ, ಸರ್ವಸಂಹಾರಕನೂ, ಸರ್ವಾತೀತನೂ ಆಗಿದ್ದಾನೆ–ಎಂಬ ವಿಶೇಷಾರ್ಥವನ್ನು ಸ್ಪಷ್ಟಪಡಿಸುತ್ತದೆ. **ಆತ್ಮೈವಾ ಭೂದ್ವಿಜಾನತಃ। ಯಸ್ಯ ಬ್ರಹ್ಮ ಚ ಕ್ಷತ್ರಂ ಚ।** ಇತ್ಯಾದಿ ಉಪನಿಷದ್ವಾಕ್ಯಗಳಲ್ಲಿರುವ ಅವ್ಯಯ ಗಳನ್ನೂ ನಮ್ಮ ಸ್ಮೃತಿಪಥಕ್ಕೆ ತರುತ್ತವೆ. ಅವುಗಳಿಂದ ಕರ್ಣಾನಂದವೂ ಉಂಟಾಗುತ್ತದೆ.

ಧರ್ಮಜ್ಞಶ್ಚ ಕೃತಜ್ಞಶ್ಚ। ವಿದ್ವಾನ್ ಕಃ। ಕಃ ಸಮರ್ಥಶ್ಚ। ಇತ್ಯಾದಿ ರಾಮಾಯಣಸಾರಸ್ವತದಲ್ಲಿ ಅವ್ಯಯಪ್ರಯೋಗದಿಂದ ಓದುಗರಿಗೆ ಯಾವ ಸೌಂದರ್ಯಾನುಭವವುಂಟಾಗುತ್ತದೆಯೋ–ಅದನ್ನೇ ವಿಷ್ಣುಸಹಸ್ರನಾಮದಲ್ಲಿ ಬಂದಿರುವ ಅವ್ಯಯಗಳಲ್ಲಿಯೂ ನಾವು ಕಾಣುತ್ತೇವೆ.

ಇನ್ನು ಪುನುರುಕ್ತಿಯ ವಿಷಯ. ಅರ್ಥಪುನರುಕ್ತಿಯು ದೋಷವೇ ಹೊರತು ಶಬ್ದಪುನರುಕ್ತಿಯು ದೋಷವಲ್ಲವೆಂಬ ಸಾಹಿತ್ಯವಿಮರ್ಶಕರೂ ಒಪ್ಪುತ್ತಾರೆ. ಈ ಸಹಸ್ರನಾಮದಲ್ಲಿ **ದಕ್ಷಃ, ಶುಭಾಂಗಃ, ಉದ್ಭವಃ** ಮುಂತಾದ ಶಬ್ದಗಳು ಎರಡೆರಡು ಬಾರಿಯೂ, **ಮಾಧವಃ, ವೀರಹಾ** ಮುಂತಾದ ಶಬ್ದಗಳು ಮೂರು ಬಾರಿಯೂ, **ಶ್ರೀಮಾನ್ ಪ್ರಾಣದಃ** ಎಂಬ ಶಬ್ದಗಳು ನಾಲ್ಕು ಬಾರಿಯೂ ಬರುತ್ತವೆ. ಆದರೆ ಆ ಶಬ್ದಗಳಿಗೆ ಬೇರೆ ಬೇರೆ ಪ್ರಕರಣಗಳಲ್ಲಿ ಬೇರೆ ಬೇರೆ ಅರ್ಥಗಳಾಗುತ್ತವೆಯೆಂದು ಭಾಷ್ಯಕಾರರು ತೋರಿಸಿಕೊಟ್ಟಿದ್ದಾರೆ. ಇದಲ್ಲದೇ ಜಪಮಾಡಬೇಕಾದ ಸಾಹಿತ್ಯದಲ್ಲಿ ಮತ್ತು ಉಪದೇಶಸಾಹಿತ್ಯದಲ್ಲಿ ಅಭಿಪ್ರಾಯಗಳ ಪುನರುಕ್ತಿಯಾದರೂ ಅದು ದೋಷವಾಗುವುದಿಲ್ಲ. ಉದ್ದಿಷ್ಟವಾದ ವಿಷಯವು ಆ ಪುನರುಕ್ತಿಯಿಂದ ದೃಢಪಡುತ್ತದೆ. ಒಂದು ಅಭಿಪ್ರಾಯವನ್ನು ಹೇಳಿ ಬೇರೆ ಕೆಲವು ಅಭಿಪ್ರಾಯ ಗಳನ್ನೂ ಹೇಳಿದ ಬಳಿಕ, ಹಳೆಯ ಅಭಿಪ್ರಾಯವನ್ನು ಮತ್ತೆ ಜ್ಞಾಪಿಸಿಕೊಳ್ಳು

ವುದೂ ಸಹಜವಾಗಿದೆ. ಮಂತ್ರಶಾಸ್ತ್ರದಲ್ಲಿ ನಿಯತವಾದ ಕೆಲವು ಶಬ್ದಗಳನ್ನು ಬೇರೆ ಬೇರೆ ಕಡೆಗಳಲ್ಲಿ ಅಥವಾ ಒಂದೇ ಕಡೆಯಲ್ಲಿ ಪುನರುಕ್ತಿಮಾಡುವುದರಿಂದ ವಿಶೇಷವಾದ ಶಕ್ತಿಯು ಉಂಟಾಗುತ್ತದೆಯೆಂಬುದನ್ನು ಗಮನಿಸಬೇಕು.*

2) 'ಒಂದೇ ಸಹಸ್ರನಾಮವನ್ನು ನಿತ್ಯವೂ ಪಾರಾಯಣಮಾಡುತ್ತಿದ್ದರೆ ಯಾರಿಗೆ ತಾನೇ ಬೇಸರವುಂಟಾಗುವುದಿಲ್ಲ? ನಿಂತಲ್ಲಿಯೇ ನಿಂತು ಕೊಳೆತು ನಾರುವ ನೀರಿನಂತೆ ಅದು ಹೊಸ ರಸವಾಹಿನಿಗೆ ಅವಕಾಶವನ್ನೇ ಕೊಡುವುದಿಲ್ಲ. ಎಷ್ಟೇ ಒಳ್ಳೆಯ ಪದಾರ್ಥವಾದರೂ ಅದನ್ನು ನಾವು ಹೆಚ್ಚು ಹೆಚ್ಚಾಗಿ ಉಪಯೋಗಿಸಿದಷ್ಟೂ ಅದರ ಉಪಯೋಗವು ಕಡಿಮೆಯಾಗುತ್ತದೆ. ಅದರಲ್ಲಿ ಭಾವುಕರಿಗೆ ರುಚಿಯುಂಟಾಗುವುದಿಲ್ಲ'–ಎಂದು ಕೆಲವರು ಆಕ್ಷೇಪಮಾಡುತ್ತಾರೆ. ಈ ಆಕ್ಷೇಪವು ಅನಾದಿಕಾಲದಿಂದಲೂ ಏಕರೂಪದಲ್ಲಿ ಸಾವಿರಾರು ಬಾರಿ ಜಪಿಸಲ್ಪಡುತ್ತಿರುವ ಗಾಯತ್ರಿಯೇ ಮುಂತಾದ ಮಂತ್ರಗಳಿಗೂ ಅನ್ವಯಿಸುತ್ತದೆ.

ಈ ಆಕ್ಷೇಪವನ್ನು ಎತ್ತುವವರು ಪದಾರ್ಥಗಳ ಸ್ವರೂಪಭೇದವನ್ನರಿಯದವರು. ವಿಶೇಷಪದಾರ್ಥಗಳಿಗೂ ಸಾಮಾನ್ಯನಿಯಮವನ್ನು ಅನ್ವಯಿಸುವ ಪಾಮರರು ಮತ್ತು ಅರಸಿಕರು. ಒಂದೇ ಪದಾರ್ಥವನ್ನು ಮತ್ತೆ ಮತ್ತೆ ಅನುಭವಿಸುತ್ತಿದ್ದರೆ–ಅದರ ಭೋಗ್ಯತೆಯು ಕಡಿಮೆಯಾಗುತ್ತದೆಯೆಂಬ ನಿಯಮಕ್ಕೆ ಒಳಪಡದ ವಿಶೇಷಪದಾರ್ಥಗಳೂ ಉಂಟು. ಸದಾ ಅನುಭವಿಸಲ್ಪಡುತ್ತಿದ್ದರೂ ಪ್ರತಿಕ್ಷಣದಲ್ಲಿಯೂ ಹೊಸತನವನ್ನು ತೋರುತ್ತಾ ಅವು ಆನಂದವನ್ನು ವೃದ್ಧಿಪಡಿಸುತ್ತವೆ. ಉದಾಹರಣೆಗೆ : ನಾವು ಪ್ರತಿದಿನವೂ ಕಾಣುವ ಉದಯಕಾಲದ ಸೂರ್ಯ. ಅವನು ಭಾವುಕರಿಗೆ ದಿನ-ದಿನವೂ ಹೊಸಬನಾಗಿಯೇ ಕಂಗೊಳಿಸುತ್ತಾನೆ. **ನವೋ ನವೋ ಭವತಿ ಜಾಯಮಾನಃ ।** ಅನಂತವೈವಿಧ್ಯಗಳುಳ್ಳ ಸಮುದ್ರವೂ ಹೀಗೆಯೇ. ಸಲಿಲನಿಧಿರವ **ಪ್ರತಿಕ್ಷಣಂ ಮೇ ಭವತಿ ಸ ಏವ ನವೋ ನವೋಽಯಮಕ್ಷ್ಣೋಃ ।** ಅದು ಚಿರಪುರಾತನವಾಗಿದ್ದರೂ ನಿತ್ಯನೂತನವೇ. ರಾಮಾಯಣ-ರಘುವಂಶಗಳೇ

---

* ವಿಷ್ಣುಸಹಸ್ರನಾಮದ ಸತತಾಧ್ಯಯನದಲ್ಲಿ ನಿರತರಾಗಿರುವ ಶ್ರದ್ಧೇಯರಾದ ಡಾ॥ ಕೆ. ಜನಾರ್ದನಾಚಾರ್ಯರು ಬರೆದಿರುವ A Dip into Vishnu Sahasranama ಎಂಬ ಗ್ರಂಥವನ್ನು ಇಲ್ಲಿ ನೋಡಬಹುದು.

ಮುಂತಾದ ಅಮರಕಾವ್ಯಗಳನ್ನು ಎಷ್ಟೇ ಬಾರಿ ಓದಿದರೂ ಬೇಸರವುಂಟಾಗುವುದಿಲ್ಲ. ನಿತ್ಯತೃಪ್ತಿಯನ್ನು ತುಂಬುತ್ತಿರುವ ಶಕ್ತಿಯು ಅವುಗಳಿಗೆ ಇದೆ.

ಶ್ರೀವಿಷ್ಣುಸಹಸ್ರನಾಮದಲ್ಲಿಯೂ ಅಂತಹ ಸೌಂದರ್ಯ-ಶಕ್ತಿಗಳು ಇವೆಯೆಂದು ಅದನ್ನು ಪಾರಾಯಣಮಾಡುವ ಭಕ್ತರು ಹೇಳುತ್ತಾರೆ. ಶ್ರೇಷ್ಠವಾದ ಸಾಹಿತ್ಯವನ್ನು ಅನೇಕ ಬಾರಿ ಓದಿ 'ಬೇಸರವಾಯಿತು' ಎಂದು ಯಾರಾದರೂ ಹೇಳಿದರೆ–'ಅವರಿಗೆ ಸಹೃದಯತೆ ಇಲ್ಲ ; ಅವರು ಅರಸಿಕರು'– ಎಂದು ಹೇಳುತ್ತೇವೆ. ಕಾವ್ಯವನ್ನು ಅನುಭವಿಸಲು ಸಹೃದಯತೆಯು ಹೇಗೆ ಆವಶ್ಯಕವೋ ಹಾಗೆಯೇ ವಿಷ್ಣುಸಹಸ್ರನಾಮದಂತಹ ಭಕ್ತಿಸಾರಸ್ವತವನ್ನು ಅನುಭವಿಸಬೇಕಾದರೂ ಶ್ರದ್ಧಾಪೂರ್ವಕವಾದ ಸಹೃದಯತೆಯು ಆವಶ್ಯಕ. ಅದು ಇಲ್ಲದವರು ಈ ಗ್ರಂಥದ ಅನುಸಂಧಾನಕ್ಕೆ ಅನಧಿಕಾರಿಗಳು. ಅರ್ಥಾನುಸಂಧಾನವಿಲ್ಲದೇ ಕೇವಲ ಶ್ರದ್ಧೆಯಿಂದ ಮಹಾಮಂತ್ರದ ಪುನಶ್ಚರಣವನ್ನು ಹೆಚ್ಚು ಹೆಚ್ಚಾಗಿ ಮಾಡಿದರೂ ಅದರಿಂದ ಹೆಚ್ಚು-ಹೆಚ್ಚು ಶಕ್ತಿವೃದ್ಧಿಯೂ ಆನಂದವೃದ್ಧಿಯೂ ಆಗುತ್ತದೆ. ಅರ್ಥಾನುಸಂಧಾನದ ಜೊತೆಯಲ್ಲಿ ಅದನ್ನು ಹೆಚ್ಚಾಗಿ ಪುನಶ್ಚರಣಮಾಡಿದರೆ ಶಕ್ತಿ ಮತ್ತು ಆನಂದಗಳ ವೃದ್ಧಿಯುಂಟಾಗುವುದಿಲ್ಲವೇ? ನಾಮವೈವಿಧ್ಯದಿಂದ ಮೊದಲು ರಸವೈವಿಧ್ಯವನ್ನುಂಟುಮಾಡಿ ಕೊನೆಗೆ ಏಕರಸನಾದ ಪರಮಾತ್ಮನಲ್ಲಿ ತನ್ಮಯತೆಯನ್ನುಂಟುಮಾಡುವ ದಿವ್ಯಮಹಾಮಂತ್ರಕ್ಕೆ ಹೀಗೆ ಶಕ್ತಿ-ಆನಂದಗಳನ್ನು ನಿರಂತರವಾಗಿ ವೃದ್ಧಿಪಡಿಸುವ ಸ್ವರೂಪಯೋಗ್ಯತೆ ಮತ್ತೂ ಹೆಚ್ಚಾಗಿ ಇದೆಯೆಂದು ಭಾವುಕರು ಅನುಭವದಿಂದ ಹೇಳುತ್ತಾರೆ.

3) 'ಏಕಮೇವಾದ್ವಿತೀಯವಾಗಿರುವ ಪರಬ್ರಹ್ಮಕ್ಕೆ ಏಕೆ ಸಹಸ್ರನಾಮಸ್ತೋತ್ರ? ಪರಮಾತ್ಮನು ಒಬ್ಬನೇ. **ಏಕಮೇವಾದ್ವಿತೀಯ ಬ್ರಹ್ಮ । ಏಕಂ ಸದ್ವಿಪ್ರಾ ಬಹುಧಾ ವದನ್ತಿ । ಯೋ ದೇವಾನಾಂ ನಾಮಧಾ ಏಕ ಏವ ।** ಎಂದು ಶ್ರುತಿಗಳು ಸ್ಪಷ್ಟವಾಗಿ ಮೊಳಗುತ್ತವೆ. ಹೀಗಿರುವಾಗ ಅವನಿಗೆ ಸಹಸ್ರನಾಮಗಳು ಹೇಗೆ ಸಲ್ಲುತ್ತವೆ? ಇದೂ ಅಲ್ಲದೇ ದೇವರಿಗೆ ಒಂದು ಸಹಸ್ರನಾಮವಲ್ಲ. ಶಿವ, ವಿಷ್ಣು, ಸೂರ್ಯ, ಲಲಿತಾ–ಇತ್ಯಾದಿ ನಾನಾಸಹಸ್ರನಾಮಗಳಂತೆ ಈ ಸಾವಿರ ದೇವರು–ಸಾವಿರ ನಾಮಗಳಿಂದಲೇ ಸನಾತನಭಾರತೀಯರಲ್ಲಿ ಒಡಕುಬಂದಿದೆ. ಈ ನಾನಾದೈವ-ನಾನಾಸಹಸ್ರ

ನಾಮಗಳ ಗೊಂದಲವನ್ನು ಬಿಟ್ಟು ಒಬ್ಬ ದೇವ, ಅವನಿಗೆ ಒಂದೆರಡು ನಾಮ ಗಳಿಂದ ಪೂಜೆ ಸಲ್ಲಿಸಿದರೆ ಸಾಲದೇ?'–ಎಂದು ಕೆಲವರು ಆಕ್ಷೇಪಿಸುತ್ತಾರೆ.

ಇಲ್ಲಿ ಗಮನಿಸಬೇಕಾದ ವಿಷಯವೇನೆಂದರೆ : ಒಡಕನ್ನು ತಂದು ಕೊಳ್ಳುವುದು ತಪ್ಪು. ಆದರೆ ಅದಕ್ಕೆ ಸಹಸ್ರನಾಮಗಳನ್ನು ಹೊಣೆಮಾಡ ಬೇಕಾಗಿಲ್ಲ. ದೇವರಿಗೆ ಸಹಸ್ರನಾಮಗಳು ಹೇಗೆ ಬಂದುವು? ಎಂಬುದನ್ನು ವೈಜ್ಞಾನಿಕವಾಗಿ ವಿಚಾರಮಾಡಬೇಕು. ಲೋಕದಲ್ಲಿ ಯಾವನಾದರೊಬ್ಬ ಮನುಷ್ಯನಿಗೆ ಒಂದು ಬಹುಮಾನವು ಬಂತು–ಎಂದು ಇಟ್ಟುಕೊಳ್ಳೋಣ. ಬಹುಮಾನವು ಯಾರಿಗೆ ಬಂತು?–ಎಂದು ಪ್ರಶ್ನಿಸಿದರೆ–'ನನ್ನ ಮಗನಿಗೆ ಬಂತು'–ಎಂದು ಅವನ ತಂದೆ-ತಾಯಿಗಳು ಹೆಮ್ಮೆಯಿಂದ ಹೇಳುತ್ತಾರೆ. 'ನಮ್ಮ ಯಜಮಾನರಿಗೆ ಬಂತು'–ಎಂದು ಅವನ ಹೆಂಡತಿಯು ಹೇಳುತ್ತಾಳೆ. 'ಅಣ್ಣನಿಗೆ ಬಂತು'–ಎಂದು ಅವನ ತಮ್ಮನು ಹೇಳುತ್ತಾನೆ. 'ತಮ್ಮನಿಗೆ ಬಂತು'–ಎಂದು ಅವನ ಅಣ್ಣನು ಹೇಳುತ್ತಾನೆ. 'ಅಳಿಯನಿಗೆ ಬಂತು'– ಎಂದು ಅವನ ಮಾವನೂ, 'ಗೆಳೆಯನಿಗೆ ಬಂತು'–ಎಂದು ಅವನ ಮಿತ್ರರೂ, 'ಶಿಷ್ಯನಿಗೆ ಬಂತು'–ಎಂದು ಅವನ ಗುರುಗಳೂ ಹೇಳುತ್ತಾರೆ. ಬಹುಮಾನಪಡೆದಿರುವವನು ಒಬ್ಬನೇ ಆಗಿರುವಾಗ–ಮಗನಿಗೆ, ಯಜ ಮಾನರಿಗೆ, ಅಣ್ಣನಿಗೆ, ತಮ್ಮನಿಗೆ, ಅಳಿಯನಿಗೆ, ಗೆಳೆಯನಿಗೆ, ಶಿಷ್ಯನಿಗೆ– ಇತ್ಯಾದಿ ಹಲವು ಹೆಸರುಗಳು ಇಲ್ಲಿ ಏಕೆ ಬಂದುವು?–ಎಂದರೆ : ಬಹುಮಾನಪಡೆದವನಿಗೆ ಅಷ್ಟೆಲ್ಲಾ ಹೆಸರುಗಳು ಇರಬಹುದಾದರೆ ಅನಾದ್ಯ ನಂತನಾಗಿ, ವಿಶ್ವರೂಪಿಯಾಗಿ, ವಿಶ್ವೇಶ್ವರನಾಗಿ ವಿಶ್ವದ ಭೂತಗಳೊಡನೆ ಅನಂತಸಂಬಂಧ-ಗುಣ-ಕರ್ಮಗಳುಳ್ಳ ಪರಮಾತ್ಮನಿಗೆ ಸಾವಿರಾರು ಹೆಸರು ಗಳು ಇರಬಾರದೇ? ಅವನು ಅನಂತ ; ಅವನ ಅವತಾರಗಳೂ ಅನಂತ. **'ಅವತಾರಾ ಹ್ಯಸಂಖ್ಯೇಯಾಃ ।'** ಆದ್ದರಿಂದ ವಾಸ್ತವವಾಗಿ ನೋಡಿದರೆ ಅವನಿಗೆ ಸಾವಿರ ನಾಮಗಳು ಯಾವ ಲೆಕ್ಕ? ಕೋಟಿ-ಕೋಟಿ ನಾಮಗಳನ್ನು ಹೇಳಿದರೂ ಅಲ್ಪವೇ. ಆದ್ದರಿಂದ ಅವನು ಸಹಸ್ರನಾಮವುಳ್ಳವನು ಎಂದರೆ ಅನಂತನಾಮವುಳ್ಳವನು ಎಂದೇ ಅರ್ಥ. ಆದರೆ ಸಾವಿರ ಎನ್ನುವುದು 3,7,10,25,50,100 ಗಳಂತೆ ತತ್ತ್ವಪರಿಗಣನೆಗೆ ಸಂಬಂಧಪಟ್ಟ ಒಂದು ರಹಸ್ಯ ಸಂಕೇತದ ಶಬ್ದವಾದ್ದರಿಂದ ಅವನಿಗೆ ಸಹಸ್ರನಾಮಗಳನ್ನು ಹೇಳುತ್ತಾರೆ. ನಾನಾದೇವತಾಸಂಜ್ಞೆಗಳುಳ್ಳ ಸಹಸ್ರನಾಮಗಳನ್ನು ಹೇಳಿದರೂ ಅವುಗಳನ್ನು

ಅಂತರ್ಯಾಮಿಯಾಗಿ ಸ್ವೀಕರಿಸುವ ಪರಮಾತ್ಮನು ಒಬ್ಬನೇ ಎಂಬ ಅರಿವು ಇದ್ದರೆ ಒಡಕಿನ ಭಾವನೆಗೆ ಅವಕಾಶವೇ ಇರುವುದಿಲ್ಲ.

ನಮೋಸ್ತ್ವನಂತಾಯ ಸಹಸ್ರಮೂರ್ತಯೇ
ಸಹಸ್ರಪಾದಾಕ್ಷಿಶಿರೋರುಬಾಹವೇ ।
ಸಹಸ್ರನಾಮ್ನೇ ಪುರುಷಾಯ ಶಾಶ್ವತೇ
ಸಹಸ್ರಕೋಟೀಯುಗಧಾರಿಣೇ ನಮಃ ॥

ಭಗವಂತನಿಗೆ ಅನಂತಗುಣ-ಕರ್ಮಸಂಬಂಧದಿಂದ ಸಹಸ್ರನಾಮಗಳು ಇರಬಹುದು. ಆದರೆ ಆ ನಾಮಗಳಿಂದ ನಾವು ಅವನನ್ನು ಏಕೆ ಸ್ತೋತ್ರ ಮಾಡಬೇಕು? ಅವನು 'ಸ್ತವಪ್ರಿಯಃ' ಸ್ತೋತ್ರಮಾಡಿಸಿಕೊಳ್ಳುವುದರಲ್ಲಿ ಇಷ್ಟವುಳ್ಳವನು–ಎಂದು ಸಹಸ್ರನಾಮಸ್ತೋತ್ರವು ಏಕೆ ಹೇಳುತ್ತದೆ? ಹಿಂದಿನ ಕಾಲದಲ್ಲಿ ರಾಜರು ಸಂಬಳವನ್ನು ಕೊಟ್ಟು ಹೊಗಳುಭಟರನ್ನು ನೇಮಿಸಿ ಅವರಿಂದ ತಮ್ಮನ್ನು ಹೊಗಳಿಸಿಕೊಂಡು ಅದರಿಂದ ಹಿಗ್ಗುತ್ತಿದ್ದರಂತೆ. ಆ ಮಾದರಿಯಲ್ಲಿ ಭಾವುಕರಾದ ಭಕ್ತರಿಂದ ಭಗವಂತ ಎಂಬುವವನು ಕಲ್ಪಿಸಲ್ಪಟ್ಟಿರಬಹುದು–ಎಂದು ಕೆಲವರು ಕುಚೋದ್ಯಮಾಡುತ್ತಾರೆ. ಇದು ಸರಿಯಲ್ಲ. ಏಕೆಂದರೆ :

1) ಭಗವಂತನು ಕಲ್ಪನೆಯ ಕುಸುಮವಲ್ಲ. ಸತ್ಯಾನುಭವದ ಚೈತನ್ಯ–ಎಂದು ಜ್ಞಾನಿಗಳು ಹೇಳುತ್ತಾರೆ.

2) ಸ್ತೋತ್ರಕ್ಕೆ ಯೋಗ್ಯನಾದವನು (ಸ್ತವ್ಯಃ) ಅವನೊಬ್ಬನೇ. ಸ್ತುತಿ ಎಂದರೆ ಗುಣಶಾಲಿಯಲ್ಲಿರುವ ಗುಣಗಳನ್ನು ಹೇಳುವುದೂ (ಸ್ತುತಿಃ) ಅವನೇ. **ಗುಣಿನಿಷ್ಠಗುಣಾಭಿಧಾನಂ ಸ್ತುತಿಃ ।**

ಅನಂತಕಲ್ಯಾಣಗುಣಪರಿಪೂರ್ಣನಾಗಿ ನಿಜವಾಗಿಯೂ ಗುಣಶಾಲಿ ಯಾಗಿರುವವನು ಭಗವಂತನು ಒಬ್ಬನೇ ಆಗಿರುವುದರಿಂದ ಸ್ತೋತ್ರಕ್ಕೆ ಯೋಗ್ಯನಾದವನು ಅವನು ತಾನೇ!

ನಾವು ಭಗವಂತನನ್ನು ಸ್ತೋತ್ರಮಾಡಿದ್ದರಿಂದ ಅವನಿಗೇನೂ ಲಾಭ ವಿಲ್ಲ. ಅವನು ಆಪ್ತಸಮಸ್ತಕಾಮನು. ಆದರೆ ಅವನನ್ನು ಸ್ತೋತ್ರಮಾಡಿ ದರೆ ಅದರಿಂದ ಸ್ತೋತ್ರಮಾಡುವ ಜೀವಿಗಳಿಗೆ ಶ್ರೇಯಸ್ಸುಂಟಾಗುತ್ತದೆ. ಅವರ ಆತ್ಮೋದ್ಧಾರವಾಗುತ್ತದೆ. ಆದ್ದರಿಂದ ಭಗವಂತನು ಜೀವಿಗಳ

ಉದ್ಧಾರಕ್ಕಾಗಿ ಅವರು ತನ್ನನ್ನು ಸ್ತೋತ್ರಮಾಡುವುದರಲ್ಲಿ ಪ್ರೀತಿಯನ್ನು ತೋರಿಸುತ್ತಾನೆ.

೧೫) ವಿಷ್ಣುವಿನ ಸ್ತುತಿಯು ವಿಶ್ವಧರ್ಮವಾಗುತ್ತದೆಯೇ?

'ವಿಷ್ಣು, ಶಿವ ಮುಂತಾದವರು ಯಾವುದೋ ಒಂದು ದೇಶದ ಕೆಲವು ಪಂಗಡಗಳ ಜನರ ಮತೀಯದೇವತೆಗಳು. ಅವರನ್ನು ಕುರಿತು ಸಹಸ್ರನಾಮಗಳು ಸಂಕುಚಿತಧರ್ಮದ ಸಾಹಿತ್ಯವಾಗುತ್ತದೆಯೇ ಹೊರತು ವಿಶ್ವಧರ್ಮದ ಸಾಹಿತ್ಯವಾಗುವುದಿಲ್ಲ'–ಎಂದು ಕೆಲವರು ಆಕ್ಷೇಪಮಾಡುತ್ತಾರೆ. ಇದು ಆಳವಾದ ವಿಚಾರದ ಫಲವಾಗಿ ಬಂದ ಆಕ್ಷೇಪಣೆಯಲ್ಲ. ವಿಷ್ಣು-ಶಿವ ಮುಂತಾದ ಪದಗಳನ್ನು ಸಂಕುಚಿತವಾದ ಅರ್ಥದಲ್ಲಿ ತೆಗೆದುಕೊಂಡು ಹೂಡಿರುವ ಆಕ್ಷೇಪಣೆ ಅದು. ಹಾಗೆ ಆಕ್ಷೇಪಣೆಮಾಡುವವರು ಈ ಕೆಳಗಿನ ವಿಷಯಗಳನ್ನು ಗಮನಿಸಬೇಕು.

ವಿಷ್ಣುಸಹಸ್ರನಾಮದ ಮೊದಲನೆಯ ಶಬ್ದವೇ "ವಿಶ್ವಂ" ಎನ್ನುವುದು. ಆ ವಿಶ್ವಪುರುಷನನ್ನು ಆರಾಧಿಸುವುದು ವಿಶ್ವಧರ್ಮವಾಗುವುದಿಲ್ಲವೇ? 'ವಿಶ್ವೇಶ್ವರಮಜಂ ದೇವಂ' ಎಂದು ಹೇಳಲ್ಪಟ್ಟಿರುವ ವಿಶ್ವೇಶನಾದ ವಿಷ್ಣುವಿನ ಸ್ತುತಿಯು ವಿಶ್ವಧರ್ಮವಾಗುವುದಿಲ್ಲವೇ? ವಿಷ್ಣು–ಎಂಬ ಶಬ್ದಕ್ಕೆ ಅರ್ಥವೂ ಕೂಡ ವ್ಯಾಪಕನಾದ ದೇವನು ಎಂದಲ್ಲವೇ? ಶಿವನಿಗೂ ಕೂಡ 'ವಿಶ್ವೇಶ್ವರ' ಎಂದು ಹೆಸರು. ಅವನನ್ನು ಕುರಿತ ಸಹಸ್ರನಾಮಗಳೂ ಕೂಡ ವಿಶ್ವಧರ್ಮಕ್ಕೆ ಸೇರಿದುವುಗಳು ತಾನೇ ಆಗಿರಬೇಕು? ವಿಷ್ಣು, ಶಿವ, ಸೂರ್ಯ–ಮುಂತಾದ ವಿಭಾಗಗಳು ಆರಾಧನೆಯ ಸೌಕರ್ಯಕ್ಕೋಸ್ಕರ ಮಾಡಲ್ಪಟ್ಟಿವೆ. ಇವರನ್ನು ಕುರಿತ ಆರ್ಷಸ್ತುತಿಗಳೆಲ್ಲವೂ ವಿಶ್ವನಿಷ್ಠವೇ ಆಗಿರುವುದರಿಂದ ಅವುಗಳನ್ನು ವಿಶ್ವಧರ್ಮವೆಂದೇ ಕರೆಯಬೇಕು.

೧೬) ಉಪಾಸನೆಯ ಫಲ :

'ವಿಷ್ಣುಸಹಸ್ರನಾಮವನ್ನು ಪಾರಾಯಣಮಾಡಿದರೆ ಎಲ್ಲ ಪುರುಷಾರ್ಥಗಳೂ ಸಿದ್ಧಿಸುತ್ತವೆ–ಎಂದು ಅದರ ಫಲಶ್ರುತಿಯು ಹೇಳುತ್ತದೆ. ಇದು ಕೇವಲ ಅರ್ಥವಾದವೋ ಅಥವಾ ಸತ್ಯಾರ್ಥವೋ?'–ಎಂದು ಕೆಲವರು ಕೇಳುತ್ತಾರೆ. ಇದು ಕೇವಲ ಪ್ರಶಂಸಾಪರವಾದ ವಾಕ್ಯವಲ್ಲ ; ಸತ್ಯಾರ್ಥಗಳು–ಎಂದೇ ನಮ್ಮ ಅಭಿಪ್ರಾಯ. ಆದರೆ ಸಹಸ್ರನಾಮಸ್ತುತಿಯು ಹೇಳು

ವಂತೆ ಭಕ್ತಿಯಿಂದ ನಿಯತೇಂದ್ರಿಯನಾಗಿ ಅದನ್ನು ಪಾರಾಯಣಮಾಡಬೇಕು. ಇಲ್ಲದಿದ್ದರೆ ಫಲಸಿದ್ಧಿಯು ಆಗುವುದಿಲ್ಲ. ಹಾಗೆ ವಿಷ್ಣುಸಹಸ್ರನಾಮದ ಪಾರಾಯಣದಿಂದ ಅನಿಷ್ಟಪರಿಹಾರ ಮತ್ತು ಇಷ್ಟಲಾಭಗಳನ್ನು ಪಡೆದ ಮತ್ತು ಪಡೆಯುತ್ತಿರುವ ಅನೇಕ ಸಂತರು ನಮಗೆ ತಿಳಿದಿದ್ದಾರೆ. ವಿಷ್ಣುಸಹಸ್ರನಾಮವನ್ನು ಭಕ್ತಿ-ಶ್ರದ್ಧೆಗಳಿಂದ ಪಠಿಸಬೇಕು ಮತ್ತು ನಾವು ಅದರಿಂದ ಅಪೇಕ್ಷಿಸುವ ಫಲಗಳು ಧರ್ಮ-ಕರ್ಮಗಳಿಗೆ ಅನುಗುಣವಾಗಿರಬೇಕು. ಆದರೆ ಸಹಸ್ರನಾಮವನ್ನು ಪಾರಾಯಣಮಾಡುವವನಿಗೆ ಭಕ್ತಿ-ಶ್ರದ್ಧೆಗಳಲ್ಲಿ ವೈಕಲ್ಯವಿದ್ದರೆ ಫಲದಲ್ಲಿಯೂ ವೈಕಲ್ಯವುಂಟಾಗುತ್ತದೆ.

ಹೀಗೆ ಸರ್ವತಾಪನಿವಾರಕವಾಗಿ, ಸುಧಾನಿಷ್ಯಂದವಾಗಿ, ಸರ್ವಪುರುಷಾರ್ಥಪ್ರದವಾದ ಸುರದ್ರುಮವಾಗಿ, ಅನವದ್ಯ ಆರ್ಷಮಹಾಮಂತ್ರರೂಪವಾದ ಧರ್ಮಬ್ರಹ್ಮಸಂಹಿತೆಯಿಂದ ಸುರಭಿತವಾಗಿರುವ ಈ ಭಾರತ ದರ್ಶನ ಪ್ರಕಾಶನದ ವಿಷ್ಣುಸಹಸ್ರನಾಮಸ್ತೋತ್ರವು ಸಹೃದಯರ ಹೃದಯ ಭೂಷಣವಾಗುತ್ತದೆಯೆಂಬುದು ನಮ್ಮ ವಿಶ್ವಾಸ.

ಓಂ ನಮೋ ಭಗವತೇ ವಾಸುದೇವಾಯ

ಬೆಂಗಳೂರು **ಹೆಚ್. ಎಸ್. ವರದದೇಶಿಕಾಚಾರ್ಯರಂಗಪ್ರಿಯ**
ರಕ್ತಾಕ್ಷಿ-ಭಾದ್ರಪದ ಶುದ್ಧ ಅಷ್ಟಾಂಗಯೋಗವಿಜ್ಞಾನಮಂದಿರಮ್
ಗಣೇಶ ಚತುರ್ಥೀ 30-8-84

ದ್ವ್ಯಾವರ್ತವಾಗಿರುವ ನಾಮಗಳು

ಅಕ್ಷೋಭ್ಯಃ	೮೦೧-೯೯೯	ಗೋಪತಿಃ	೪೯೫-೫೯೨
ಅಚ್ಯುತಃ	೧೦೦-೩೧೮	ಗೋಪ್ತಾ	೪೯೬-೫೯೩
ಅನಘಃ	೧೪೬-೮೩೧	ಗೋವಿನ್ದಃ	೧೮೭-೫೩೯
ಅನನ್ತಃ	೬೫೯-೮೮೬	ಚಕ್ರೀ	೯೦೮-೯೯೫
ಅನಲಃ	೨೯೩-೭೧೧	ಚತುರಾತ್ಮಾ	೧೩೭-೭೬೯
ಅನಿರುದ್ಧಃ	೧೮೫-೬೩೮	ಚತುರ್ವ್ಯೂಹಃ	೧೩೮-೭೬೭
ಅನಿರ್ದೇಶ್ಯವಪುಃ	೧೭೭-೬೫೯	ತಾರಃ	೩೩೮-೯೬೮
ಅನಿರ್ವಿಣ್ಣಃ	೪೩೫-೮೯೨	ದಕ್ಷಃ	೪೨೩-೯೧೭
ಅನಿಲಃ	೨೩೪-೮೧೨	ದುರ್ಧರಃ	೨೬೬-೭೧೫
ಅಪರಾಜಿತಃ	೭೧೬-೮೬೨	ನಿಯಮಃ	೧೬೧-೮೬೫
ಅಮಿತವಿಕ್ರಮಃ	೫೧೬-೬೪೧	ಪಾವನಃ	೨೯೨-೮೧೧
ಅಮೇಯಾತ್ಮಾ	೧೦೨-೧೭೯	ಪುಣ್ಯಃ	೬೮೭-೯೨೫
ಅಮೋಘಃ	೧೧೦-೧೫೪	ಪುರುಷಃ	೧೪-೪೦೬
ಅರ್ಹಃ	೪೩೦-೮೭೩	ಪುಷ್ಕರಾಕ್ಷಃ	೪೦-೫೫೬
ಆದಿತ್ಯಃ	೩೯-೫೬೩	ಪ್ರಜಾಪತಿಃ	೬೯-೧೯೭
ಆದಿದೇವಃ	೩೩೪-೪೯೦	ಪ್ರಣವಃ	೪೦೯-೯೫೭
ಈಶ್ವರಃ	೩೬-೭೪	ಪ್ರಭುಃ	೩೫-೨೯೯
ಉದ್ಭವಃ	೩೭೩-೭೯೦	ಪ್ರಮಾಣಮ್	೪೨೮-೯೫೯
ಋದ್ಧಃ	೨೭೮-೩೫೧	ಭೀಮಃ	೨೫೭-೯೪೮
ಕಾನ್ತಃ	೨೯೬-೬೫೪	ಮಹಾಕರ್ಮಾ	೬೭೨-೭೮೭
ಕುಮುದಃ	೫೮೯-೮೦೭	ಮಹೀಧರಃ	೩೧೭-೩೬೯
ಕೃತಜ್ಞಃ	೮೨-೫೩೨	ಮಾರ್ಗಃ	೩೬೫-೩೯೭
ಕೃತಾಗಮಃ	೬೫೫-೭೮೯	ಯಜ್ಞಃ	೪೪೫-೯೭೧
ಕೃಷ್ಣಃ	೫೭-೫೫೦	ವಸುಪ್ರದಃ	೬೯೩-೬೯೪
ಕೇಶವಃ	೨೩-೬೪೮	ವಸುಮನಾಃ	೧೦೫-೬೯೭
ಕ್ಷಾಮಃ	೪೪೩-೮೫೪	ವಾಯುವಾಹನಃ	೩೩೧-೮೫೬
ಗಹನಃ	೩೮೨-೫೪೪	ವಿಕ್ರಮೀ	೭೫-೯೦೯

ವಿಭುಃ	೨೪೦-೮೮೦	ಸಹಿಷ್ಣುಃ	೧೪೪-೫೬೫
ವಿಶ್ವಯೋನಿಃ	೧೧೭-೧೪೯	ಸಿದ್ಧಃ	೯೭-೮೧೯
ವೇದವಿತ್	೧೨೮-೧೩೧	ಸಿಂಹಃ	೨೦೦-೪೮೮
ಶಿವಃ	೨೭-೬೦೦	ಸುಖದಃ	೪೫೯-೮೮೯
ಶುಚಿಃ	೧೫೫-೨೫೧	ಸುಪರ್ಣಃ	೧೯೨-೮೫೫
ಶುಭಾಂಗಃ	೫೮೬-೭೮೨	ಸುವ್ರತಃ	೪೫೫-೮೧೮
ಶೌರಿಃ	೩೪೦-೬೪೪	ಸಂವತ್ಸರಃ	೯೧-೪೨೨
ಶ್ರೀನಿವಾಸಃ	೧೮೩-೬೦೭	ಸ್ಥವಿಷ್ಠಃ	೫೩-೪೩೬
ಸತಾಂಗತಿಃ	೧೮೪-೪೫೦	ಸ್ರಷ್ಟಾ	೫೮೮-೯೯೦
ಸರ್ವಜ್ಞಃ	೪೫೩-೮೧೫	ಹಿರಣ್ಯಗರ್ಭಃ	೭೦-೪೧೧
ಸವಿತಾ	೮೮೪-೯೬೯	ಹುತಭುಕ್	೮೭೯-೮೮೭

ತ್ರಿರಾವರ್ತವಾಗಿರುವ ನಾಮಗಳು

ಅಜಃ	೯೫-೨೦೪-೫೨೧	ವಸುಃ	೧೦೪-೨೭೦-೬೯೬
ನಿವೃತ್ತಾತ್ಮಾ	೨೨೯-೫೯೭-೭೭೪	ವಾಸುದೇವಃ	೩೩೨-೬೯೫-೭೦೯
ಪದ್ಮನಾಭಃ	೪೮-೧೯೬-೩೪೬	ವಿಷ್ಣುಃ	೨-೨೫೮-೬೫೭
ಪ್ರಾಣಃ	೬೬-೩೨೦-೪೦೭	ವೀರಹಾ	೧೬೬-೭೪೧-೯೨೭
ಭೋಕ್ತಾ	೧೪೩-೫೦೦-೮೮೮	ವೀರಃ	೪೦೧-೬೪೩-೬೫೮
ಮಾಧವಃ	೭೨-೧೬೭-೭೩೫	ಸತ್ಯಃ	೧೦೬-೨೧೨-೮೬೯

ಚತುರಾವರ್ತವಾಗಿರುವ ನಾಮಗಳು

ಪ್ರಾಣದಃ	೬೫-೩೨೧-೪೦೮-೯೫೬
ಶ್ರೀಮಾನ್	೨೨-೧೭೮-೨೨೦-೬೧೩

❄

ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಶ್ರೀಮಜ್ಜಗದ್ಗುರು ಶಂಕರಾಚಾರ್ಯ
ಶ್ರೀಮದ್ರಾಮಚಂದ್ರಾಪುರಮಠಸ್ಥ



ಶ್ರೀಮದ್ರಾಘವೇಂದ್ರಭಾರತೀ ಶ್ರೀಸ್ವಾಮಿಭಿಃ

ಶ್ರೀಯುತ ಕೇಶವ ಸುಬ್ರಹ್ಮಣ್ಯ ಕೌಶಿಕರು, ಸಂಪಾದಕರು, ಭಾರತ ದರ್ಶನ ಪ್ರಕಾಶನ, ತ್ಯಾಗರಾಜನಗರ, ಬೆಂಗಳೂರು – 28 ಇವರಿಗೆ

|| ಶ್ರೀಮನ್ನಾರಾಯಣಸ್ಮರಣಪುರಸ್ಸರಂ
ಸಂದಿಷ್ಟೋಽಯಂ ಸಂದೇಶಃ ||

ಅದಾಗಿ :– ಮಾನವನ ಲೌಕಿಕಾಲೌಕಿಕಮಾರ್ಗವನ್ನು ತಿಳಿಸುವ ಸಕಲ ವಿಚಾರಗಳನ್ನೊಳಗೊಂಡ, ಲಕ್ಷ ಶ್ಲೋಕಾತ್ಮಕ ಸಂಸ್ಕೃತಮಹಾಭಾರತವನ್ನು ಸಂಪುಟ-ಸಂಪುಟವಾಗಿ ಕನ್ನಡಕ್ಕೆ ಭಾಷಾಂತರಿಸುವ ಕಾರ್ಯವನ್ನು ಕೈಗೊಂಡ ನೀವು ಪರಮಪಾವನವೂ, ಸಕಲಜನೋದ್ಧಾರಕವೂ ಆದ ಶ್ರೀವಿಷ್ಣುಸಹಸ್ರ ನಾಮವನ್ನೊಳಗೊಂಡ ಶ್ರೀಮನ್ಮಹಾಭಾರತದ ಇಪ್ಪತ್ತೊಂಬತ್ತನೆಯ ಸಂಪುಟವನ್ನು ಪ್ರಕಟಿಸಲಿರುವ ಸಂಗತಿ ತಿಳಿದು ಸಂತಸವಾಯಿತು. ಈ ಸಂಪುಟದಲ್ಲಿ ವರ್ಣಾಶ್ರಮಧರ್ಮಪ್ರತಿಪಾದಕವಾದ ಶ್ರೀಉಮಾಮಹೇಶ್ವರ ಸಂವಾದವು ಮನೋಹರವಾಗಿದೆ ಮತ್ತು ಎಲ್ಲರಿಗೂ ಮಾರ್ಗದರ್ಶಕ ವಾಗಿದೆ.

ಶ್ರೀವಿಷ್ಣುವಿನ ಸಹಸ್ರನಾಮಗಳ ಅರ್ಥವಿವರಣೆಯಲ್ಲಿ ನೀವು ಅನುಸರಿಸಿರುವ ಮಾರ್ಗವು ಅನುಕರಣೀಯವಾಗಿದೆ. ಶ್ರೀವಿಷ್ಣುಸಹಸ್ರನಾಮವು ಪಂಡಿತ-ಪಾಮರರನ್ನು ಪಾವನಗೊಳಿಸುವ ಮತ್ತು ಸಕಲ ಇಷ್ಟಾರ್ಥಗಳನ್ನೂ ದಯಪಾಲಿಸುವ ಮಹಾಮಂತ್ರವೆಂದು ಪರಿಗಣಿತವಾಗಿದೆ. ಶ್ರೀವಿಷ್ಣುಸಹಸ್ರನಾಮದ ಸತತಜಪದಿಂದ ದುಷ್ಟಶಕ್ತಿಗಳ ನಿರಸನವಾಗಿ ವಾತಾವರಣವು ಶುದ್ಧವಾಗುವುದು. ಇದು ಮನುಷ್ಯನಲ್ಲಿ ಸಾತ್ತ್ವಿಕತೆಯನ್ನು ಹೆಚ್ಚಿಸುತ್ತದೆ. ಫಲಗಳೆಲ್ಲವೂ ಅನುಭವೈಕವೇದ್ಯವಾದುವು. ಶ್ರೀವಿಷ್ಣುಸಹಸ್ರನಾಮಜಪವು ಪರಮೋತ್ಕೃಷ್ಟವಾದುದೆಂದು ಭೀಷ್ಮರೇ ಹೇಳಿರುವುದಲ್ಲದೇ **"ಗೇಯಂ ಗೀತಾನಾಮಸಹಸ್ರಂ"** ಸಹಸ್ರನಾಮವನ್ನು ಗಾನಮಾಡುತ್ತಲೇ ಇರಬೇಕೆಂದು ಭಗವಾನ್ ಶ್ರೀಶಂಕರಭಗವತ್ಪಾದರೂ ಉದ್ಘೋಷಿಸಿರುವರು. ನಾವು ಈ ವಿಷಯದಲ್ಲಿ ಹೆಚ್ಚು ಹೇಳುವ ಅವಶ್ಯಕತೆಯೇ ಇಲ್ಲ.

ಶ್ರೀಮನ್ಮಹಾಭಾರತದ ಈ ದಿವ್ಯಕುಸುಮವನ್ನು ಸರ್ವರೂ ಭಕ್ತಿ-ಶ್ರದ್ಧೆಗಳಿಂದ ಪಡೆದುಕೊಂಡು ಶ್ರೀವಿಷ್ಣುಸಹಸ್ರನಾಮಸ್ತೋತ್ರದ ಪಾರಾಯಣವನ್ನು ಆರಂಭಿಸುವುದು ಸರ್ವವಿಧಶ್ರೇಯಸ್ಕರವೆಂದು ತಿಳಿಸಬಯಸುತ್ತೇವೆ.

ಇಂತಹ ಪರಮೋತ್ಕೃಷ್ಟವಾದ ಸಂಪುಟವನ್ನು ಪ್ರಕಾಶಿಸಿದ ನೀವು ಶ್ರೀಸೀತಾರಾಮಚಂದ್ರ-ಚಂದ್ರಮೌಳೀಶ್ವರರ ಪರಮಾನುಗ್ರಹದಿಂದ ಮುಂದಿನ ಸಂಪುಟಗಳನ್ನೂ ಶೀಘ್ರವಾಗಿ ನಿರ್ವಿಘ್ನದಿಂದ ಹೊರಡಿಸುವಂತಾಗಲೆಂದು ಸುವರ್ಣಮಂತ್ರಾಕ್ಷತೆಯೊಂದಿಗೆ ಆಶೀರ್ವದಿಸುತ್ತೇವೆ!

ಕನ್ನಡಿಗರೆಲ್ಲರೂ ಇದರ ಪ್ರಯೋಜನವನ್ನು ಪಡೆದು ಎಲ್ಲರೂ ಭಗವತ್ಕೃಪಾಪಾತ್ರರಾಗಲೆಂದು ಹಾರೈಸುತ್ತೇವೆ.

ಇತಿ, ಶ್ರೀಮನ್ನಾರಾಯಣಸ್ಮೃತಯಃ

ಮಿತ್ತಿ : ಶ್ರೀರಕ್ತಾಕ್ಷಿ ಸಂ ॥ ದ ಭಾದ್ರಪದ ಶುಕ್ಲ ಏಕಾದಶಿ ಯು (ತಾ : ೬.೯.೮೪)
ಗುರುವಾಸರೇ.

ವಸತಿ : ಬಿ. ಕೃಷ್ಣಭಟ್ಟರು, ಅಧ್ಯಕ್ಷರು, ವಿಶ್ವಭಾರತಿ ಗೃಹನಿರ್ಮಾಣ ಸಹಕಾರಿ ಸಂಘ (ರಿ)
ನಂ. ೩೯, ಜೆ.ಪಿ. ರಸ್ತೆ, ೧ನೇ ಫೇಸ್, ಗಿರಿನಗರ, ಬೆಂಗಳೂರು-೫೮, ಇವರ ಗೃಹೇ

ಮಹಾಭಾರತದ ೨೯ನೆಯ ಸಂಪುಟದ ವಿಷಯಾನುಕ್ರಮಣಿಕೆ

ದ್ವಿತೀಯ ಮುದ್ರಣದ ಪ್ರಸ್ತಾವನೆ

ದಯಾಮಯನಾದ ಪರಮಾತ್ಮನ ಅನುಗ್ರಹದಿಂದಲೂ ಶ್ರೀರಂಗ ಮಹಾಗುರುಗಳ ದಿವ್ಯಾಶೀರ್ವಾದದಿಂದಲೂ, ಸಾಧುಸತ್ಪುರುಷರ ಸಹಕಾರ-ಸದಾಶಯಗಳಿಂದಲೂ 29ನೇ ಸಂಪುಟದ 2ನೆಯ ಪುನರ್ ಮುದ್ರಣವನ್ನು ಮುಗಿಸುತ್ತಿದ್ದೇವೆ. ಇನ್ನು 3 ಸಂಪುಟಗಳ ಪುನರ್ಮುದ್ರಣ ವಾಗಬೇಕಾಗಿದೆ. ನಮ್ಮ ಮಿತ್ರರು ಭಾರತ ದರ್ಶನ ಅಭಿನಂದನ ಸಮಿತಿ ಎಂಬ ಹೆಸರಿನಿಂದ ಭಾರತ ದರ್ಶನಕ್ಕೆ ಸಹಾಯ ನೀಡಲು ಮುಂದು ಬಂದಿರುತ್ತಾರೆ. ಅವರು ನಿರೀಕ್ಷಿಸಿದಷ್ಟು ವಂತಿಗೆಯು ಸಂಗ್ರಹವಾಗದಿದ್ದರೂ 2, 3 ಸಂಪುಟಗಳ ಪುನರ್ಮುದ್ರಣಕ್ಕೆ ಸಾಕಾಗುವಷ್ಟು ವಂತಿಗೆ ಸಂಗ್ರಹವಾಗಬಹುದೆಂದು ನಿರೀಕ್ಷಿಸಿದ್ದೇವೆ. ಸತ್ಪುರುಷರು ಕಾಲ-ಕಾಲಕ್ಕೆ ಉದಾರಬುದ್ಧಿಯಿಂದ ಕಳುಹಿಸುತ್ತಿರುವ ವಂತಿಗೆಯಿಂದಲೇ ನಮ್ಮ ಈ ಧರ್ಮಪ್ರಚಾರ ಕಾರ್ಯವು ನಿರ್ವಿಘ್ನವಾಗಿ ಮುಂದುವರೆಯಲು ಸಾಧ್ಯವಾಗಿದೆ. ಆದುದರಿಂದ ಧರ್ಮಾಭಿಮಾನಿಗಳಾದವರು ಯಥಾಶಕ್ತಿ ದೇಣಿಗೆಯನ್ನು ಶ್ರೀಕೃಷ್ಣಾರ್ಪಣ ಬುದ್ಧಿಯಿಂದ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ವಿನಂತಿಸುತ್ತೇವೆ.

ಶಾನ್ತಿಃ ಪುಷ್ಟಿಸ್ತುಷ್ಟಿಶ್ಚಾಸ್ತು ಸಮಸ್ತಸನ್ಮಙ್ಗಲಾನಿ ಭವನ್ತು

–ಪ್ರಕಾಶಕರು.

ಶ್ರೀಮಹಾಗಣಪತಯೇ ನಮಃ ಶ್ರೀಸರಸ್ವತ್ಯೈ ನಮಃ ಶ್ರೀಸದ್ಗುರವೇ ನಮಃ

ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್ ।
ದೇವೀಂ ಸರಸ್ವತೀಂ ಚೈವ ತತೋ ಜಯಮುದೀರಯೇತ್ ॥

ಮಹಾಭಾರತ-ಅನುಶಾಸನಪರ್ವ ;
ಇಪ್ಪತ್ತೊಂಬತ್ತನೆಯ ಸಂಪುಟ

೧೩೮ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಐದು ಬಗೆಯ ದಾನಗಳ ವರ್ಣನೆ

ಮರುದಿನ ಪ್ರಾತಃಕಾಲವಾಗುತ್ತಲೇ ಯುಧಿಷ್ಠಿರನು ಪ್ರಾತರ್ವಿಧಿಗಳನ್ನು ಮುಗಿಸಿಕೊಂಡು ಭೀಷ್ಮನ ಬಳಿಗೆ ಬಂದು ಅವನಿಗೆ ನಮಸ್ಕರಿಸಿ ಹೇಳಿದನು :

ಶ್ರುತಂ ಮೇ ಭವತಸ್ತಾತ ಸತ್ಯವ್ರತಪರಾಕ್ರಮ ।
ದಾನಧರ್ಮೇಣ ಮಹತಾ ಯೇ ಪ್ರಾಪ್ತಾಸ್ತ್ರಿದಿವಂ ನೃಪಾಃ ॥೧॥

"ಪಿತಾಮಹನೇ! ಸತ್ಯವ್ರತನೇ! ಸತ್ಯಪರಾಕ್ರಮಿಯೇ! ಯಾವ ಯಾವ ರಾಜರು ಮಹತ್ತರವಾದ ದಾನಧರ್ಮದಿಂದ ಸದ್ಗತಿಯನ್ನು ಪಡೆದರೆಂಬುದನ್ನು ನಿನ್ನಿಂದ ಕೇಳಿದೆನು.

ಧರ್ಮಾತ್ಮರಲ್ಲಿ ಶ್ರೇಷ್ಠನಾದವನೇ! ದಾನದ ಸಂಬಂಧದಲ್ಲಿ ಈ ಧರ್ಮಗಳ ವಿಷಯವಾಗಿ ಕೇಳಬೇಕೆಂದಿರುವೆನು.

ದಾನಂ ಕತಿವಿಧಂ ದೇಯಂ ಕಿಂ ತಸ್ಯ ಚ ಫಲಂ ಲಭೇತ್ ॥೨॥

ದಾನದಲ್ಲಿ ಎಷ್ಟು ಭೇದಗಳಿವೆ? ಯಾವ ಯಾವ ದಾನದಿಂದ ಯಾವ ಯಾವ ಫಲವು ಲಭಿಸುತ್ತದೆ? ಯಾರಿಗೆ ಹೇಗೆ ಧರ್ಮಾನುಸಾರವಾಗಿ

ದಾನಮಾಡಬೇಕು? ಯಾವ ಸಂದರ್ಭದಲ್ಲಿ ಯಾವ ಕಾರಣಗಳಿಂದ ದಾನ ಮಾಡಬೇಕು?–ಈ ಎಲ್ಲವನ್ನೂ ಕೇಳಿ ತಿಳಿಯಬಯಸುತ್ತೇನೆ.”

ಭೀಷ್ಮನು ಹೇಳುತ್ತಾನೆ :

“ಕೌಂತೇಯನೇ! ನಿಷ್ಪಾಪನೇ! ಎಲ್ಲ ವರ್ಣಗಳ ಜನರೂ ದಾನವನ್ನು ಯಾವ ರೀತಿಯಲ್ಲಿ ಮಾಡಬೇಕೆಂಬುದನ್ನು ಯಥಾವತ್ತಾಗಿ ಹೇಳುವೆನು ; ಕೇಳು :

ಧರ್ಮಾದರ್ಥಾದ್ಭಯಾತ್ಕಾಮಾತ್ಕಾರುಣ್ಯಾದಿತಿ ಭಾರತ ।
ದಾನಂ ಪಞ್ಚವಿಧಂ ಜ್ಞೇಯಂ ಕಾರಣೈರ್ಯೈರ್ನಿಬೋಧ ತತ್ ॥೫॥

ಭಾರತನೇ! ಧರ್ಮ, ಅರ್ಥ, ಭಯ, ಕಾಮನೆ ಮತ್ತು ದಯೆ–ಈ ಐದು ಕಾರಣಗಳಿಂದ ಒಬ್ಬನು ಮತ್ತೊಬ್ಬನಿಗೆ ದಾನವನ್ನು ಕೊಡುತ್ತಾನೆ. ಆದುದರಿಂದ ದಾನವು ಐದು ಬಗೆಯೆಂದು ತಿಳಿಯಬೇಕು. ಯಾವ ಕಾರಣಗಳಿಂದ ದಾನಮಾಡಬೇಕೆಂಬುದನ್ನು ಹೇಳುವೆನು ; ಕೇಳು.

ಇಹ ಕೀರ್ತಿಮವಾಪ್ನೋತಿ ಪ್ರೇತ್ಯ ಚಾನುತ್ತಮಂ ಸುಖಮ್ ।
ಇತಿ ದಾನಂ ಪ್ರದಾತವ್ಯಂ ಬ್ರಾಹ್ಮಣೇಭ್ಯೋಽನಸೂಯತಾ ॥೬॥

‘ದಾನಿಯು ಇಲ್ಲಿ ಕೀರ್ತಿಯನ್ನು ಹೊಂದುತ್ತಾನೆ. ಪರಲೋಕದಲ್ಲಿಯೂ ಶ್ರೇಷ್ಠವಾದ ಸುಖವನ್ನು ಅನುಭವಿಸುತ್ತಾನೆ’–ಹೀಗೆ ಭಾವಿಸಿಕೊಂಡು ದೋಷದೃಷ್ಟಿಯಿಲ್ಲದೇ (ಅಸೂಯಾರಹಿತನಾಗಿ) ಬ್ರಾಹ್ಮಣರಿಗೆ ದಾನಮಾಡಬೇಕು. (ಇದನ್ನು ಧರ್ಮಮೂಲವಾದ ದಾನವೆನ್ನುತ್ತಾರೆ.)

ದದಾತಿ ವಾ ದಾಸ್ಯತಿ ವಾ ಮಹ್ಯಂ ದತ್ತಮನೇನ ವಾ ।
ಇತ್ಯರ್ಥಿಭ್ಯೋ ನಿಶಮ್ಯೈವ ಸರ್ವಂ ದಾತವ್ಯಮರ್ಥಿನೇ ॥೭॥

‘ಇವನು ದಾನಮಾಡುತ್ತಾನೆ’–‘ಇವನು ಮುಂದೆ ದಾನಕೊಡುವವನಿದ್ದಾನೆ’–‘ಇವನು ನನಗೆ ಇಂತಹ ದಾನವನ್ನು ಕೊಟ್ಟನು’–ಎಂಬುದಾಗಿ ದಾನಿಯ ಕೀರ್ತನವನ್ನು ಯಾಚಕರು ಮಾಡುತ್ತಿರುವುದನ್ನು ಕೇಳಿ (ತನ್ನ ಕೀರ್ತಿಯನ್ನು ಹೆಚ್ಚಿಸಿಕೊಳ್ಳುವ ಸಲುವಾಗಿ) ಯಾಚಕನಾಗಿ ಬಂದವನಿಗೆ

ತನ್ನಲ್ಲಿರುವ ಸರ್ವಸ್ವವನ್ನೂ ಕೊಟ್ಟುಬಿಡುತ್ತಾನೆ. (ಇದನ್ನು ಅರ್ಥಮೂಲವಾದ ದಾನವೆನ್ನುತ್ತಾರೆ.)

ನಾಸ್ಯಾಹಂ ನ ಮದೀಯೋಽಯಂ ಪಾಪಂ ಕುರ್ಯಾದ್ವಿಮಾನಿತಃ ।
ಇತಿ ದದ್ಯಾದ್ಭಯಾದೇವ ದೃಢಂ ಮೂಢಾಯ ಪಣ್ಡಿತಃ ॥೮॥

'ನಾನು ಇವನಿಗೆ ಸಂಬಂಧಿಸಿದವನೂ ಅಲ್ಲ ; ಇವನು ನನ್ನವನೂ ಅಲ್ಲ. (ನಮ್ಮಿಬ್ಬರಲ್ಲಿಯೂ ಪರಸ್ಪರವಾಗಿ ಯಾವ ಸಂಬಂಧವೂ ಇಲ್ಲ.) ಆದರೂ ಇವನಿಗೇನಾದರೂ ಕೊಡದಿದ್ದರೆ ಇವನು ಅದನ್ನೇ ಅನಾದರಣೆಯೆಂದು ಭಾವಿಸಿ ನನಗೆ ಅನಿಷ್ಟವನ್ನು ಮಾಡಿಯಾನು'–ಎಂಬ ಭಯದಿಂದಲೇ ಮೂಢನಾದವನೊಬ್ಬನಿಗೆ ಪಂಡಿತನು ದಾನಮಾಡುತ್ತಾನೆ. (ಇದನ್ನು ಭಯಮೂಲವಾದ ದಾನವೆನ್ನುತ್ತಾರೆ.)

ಪ್ರಿಯೋ ಮೇಽಯಂ ಪ್ರಿಯೋಽಸ್ಯಾಹಮಿತಿ ಸಮ್ಪ್ರೇಕ್ಷ್ಯ ಬುದ್ಧಿಮಾನ್ ।
ವಯಸ್ಯಾಯೈವಮಕ್ಲಿಷ್ಟಂ ದಾನಂ ದದ್ಯಾದತನ್ದ್ರಿತಃ ॥೯॥

'ಇವನು ನನಗೆ ಪ್ರಿಯನಾಗಿದ್ದಾನೆ. ನಾನು ಇವನಿಗೆ ಅತ್ಯಂತಪ್ರಿಯ ನಾಗಿದ್ದೇನೆ'–ಎಂಬುದನ್ನು ವಿಚಾರಮಾಡಿ ಬುದ್ಧಿವಂತನಾದವನೊಬ್ಬನು ಯಾವ ವಿಧವಾದ ಆಲಸ್ಯವೂ ಇಲ್ಲದೇ ಪ್ರಸನ್ನತೆಯಿಂದ ತನ್ನ ಮಿತ್ರನಿಗೆ ದಾನಮಾಡುತ್ತಾನೆ. (ಇದನ್ನು ಕಾಮನಾಮೂಲವಾದ ದಾನವೆನ್ನುತ್ತಾರೆ.)

ದೀನಶ್ಚ ಯಾಚತೇ ಚಾಯಮಲ್ಪೇನಾಪಿ ಹಿ ತುಷ್ಯತಿ ।
ಇತಿ ದದ್ಯಾದ್ದರಿದ್ರಾಯ ಕಾರುಣ್ಯಾದಿತಿ ಸರ್ವಥಾ ॥೧೦॥

'ಈತನು ಹೆಚ್ಚು ಬಡವನಾಗಿ ಯಾಚನೆಯನ್ನು ಮಾಡುತ್ತಿದ್ದಾನೆ. ಅಲ್ಪವಾದ ದಾನದಿಂದಲೇ ಸಂತುಷ್ಟನಾಗುತ್ತಾನೆ'–ಹೀಗೆ ಭಾವಿಸಿಕೊಂಡು ಕರುಣೆಯಿಂದ ದರಿದ್ರನಿಗೆ ದಾನಮಾಡಬೇಕು. (ಅದನ್ನು ಕರುಣಾಮೂಲ ವಾದ ದಾನವೆನ್ನುತ್ತಾರೆ.)

ಹೀಗೆ ಪುಣ್ಯ ಮತ್ತು ಕೀರ್ತಿಗಳನ್ನು ಹೆಚ್ಚಿಸುವ ಐದು ದಾನಗಳಿವೆ.

ಸತ್ಪಾತ್ರರಲ್ಲಿ ಯಥಾಶಕ್ತಿ ದಾನವನ್ನು ಮಾಡಬೇಕು. ಹೀಗೆ ಈ ಐದು ಬಗೆಯ ದಾನಗಳನ್ನು ಪ್ರಜಾಪತಿಯೇ ಹೇಳಿರುವನು.”

೧೩೮ನೆಯ ಅಧ್ಯಾಯವು ಮುಗಿಯಿತು.

೧೩೯ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ತಪಶ್ಚರಣೆಯಲ್ಲಿದ್ದ ಶ್ರೀಕೃಷ್ಣನ ಬಳಿಗೆ ಋಷಿಗಳ ಆಗಮನ ಮತ್ತು ಸಂಭಾಷಣೆ

ಯುಧಿಷ್ಠಿರನು ಹೇಳುತ್ತಾನೆ :

ಪಿತಾಮಹ ಮಹಾಪ್ರಾಜ್ಞ ಸರ್ವಶಾಸ್ತ್ರವಿಶಾರದ ।
ಆಗಮೈರ್ಬಹುಭಿಃ ಸ್ಫೀತೋ ಭವಾನ್ನಃ ಪ್ರವರೇ ಕುಲೇ ॥೧॥

“ಮಹಾಪ್ರಾಜ್ಞನೇ! ಪಿತಾಮಹನೇ! ಸರ್ವಶಾಸ್ತ್ರವಿಶಾರದನೇ! ಅನೇಕವಿಧವಾದ ಶಾಸ್ತ್ರಗಳ ಜ್ಞಾನದಿಂದ ನೀನು ನಮ್ಮ ಶ್ರೇಷ್ಠವಾದ ಕುಲದಲ್ಲಿ ಪರಿಪೂರ್ಣನಾಗಿರುವೆ.

ಅರಿಂದಮನೇ! ಈಗ ನಾನು ನಿನ್ನಿಂದ ಧರ್ಮಾರ್ಥಯುಕ್ತವಾದ, ಮುಂದೆ ಸುಖೋದಯಕ್ಕೆ ಕಾರಣವಾಗುವ, ಲೋಕಕ್ಕೆ ಪರಮಾಶ್ಚರ್ಯಕರವಾಗಿ ಕಾಣುವ ವಿಷಯವನ್ನು ಕೇಳಬೇಕೆಂದಿರುವೆನು. ಜ್ಞಾತಿ-ಬಾಂಧವರಾರೂ ಇಲ್ಲದ ಕಾಲವೀಗ ಸನ್ನಿಹಿತವಾಗಿದೆ. ಪುರುಷಶ್ರೇಷ್ಠನೇ! ನಿನ್ನೊಬ್ಬನನ್ನು ಬಿಟ್ಟು ನಮಗೆ ಧರ್ಮೋಪದೇಶವನ್ನು ಮಾಡುವವರೇ ಯಾರೂ ಇಲ್ಲವಾಗಿದೆ. ಸಹೋದರರಿಂದ ಯುಕ್ತನಾಗಿರುವ ನನ್ನ ಮೇಲೆ ನಿನಗೆ ಅನುಗ್ರಹಬುದ್ಧಿಯಿರುವುದಾದರೆ–ನಾನು ಕೇಳಲಿರುವ ಪ್ರಶ್ನೆಗಳಿಗೆ ಯಥಾವತ್ತಾದ ಉತ್ತರವನ್ನು ನೀಡುವ ಕೃಪೆಮಾಡು.

ಎಲ್ಲ ರಾಜರಿಂದಲೂ ಸಮ್ಮಾನಿಸಲ್ಪಡುವ ಈ ಶ್ರೀಮನ್ನಾರಾಯಣನು (ಶ್ರೀಕೃಷ್ಣನು) ನಿನ್ನನ್ನು ಅತ್ಯಾದರದಿಂದಲೂ ವಿನಯಪೂರ್ವಕವಾಗಿಯೂ ಸೇವಿಸುತ್ತಿದ್ದಾನೆ. ಇವನ ಮತ್ತು ಇಲ್ಲಿ ನೆರೆದಿರುವ ರಾಜರ ಸಮಕ್ಷದಲ್ಲಿ ನನಗೆ ಮತ್ತು ನನ್ನ ಅನುಜರಿಗೆ ಪ್ರಿಯವನ್ನುಂಟುಮಾಡುವ ಸಲುವಾಗಿ

ಸ್ನೇಹಪೂರ್ವಕವಾಗಿ ಈ ಮಹಾನುಭಾವನ ಚರಿತ್ರೆಯನ್ನು ಹೇಳುವ ಕೃಪೆಮಾಡು."

ವೈಶಂಪಾಯನರು ಹೇಳುತ್ತಾರೆ :

ಜನಮೇಜಯ! ಯುಧಿಷ್ಠಿರನ ಆ ಮಾತನ್ನು ಕೇಳಿ ಭಾಗೀರಥಿಯ ಮಗನಾದ ಭೀಷ್ಮನು ಸ್ನೇಹಾವೇಶದಿಂದ ಯುಕ್ತನಾಗಿ ಈ ಮಾತನ್ನು ಹೇಳಿದನು :

"ಮಗು! ಯುಧಿಷ್ಠಿರ! ಈಗ ನಾನು ನಿನಗೆ ಅತ್ಯಂತಮನೋಹರವಾದ ಕಥಾನಕವನ್ನು ಹೇಳುತ್ತೇನೆ. ಈ ಹಿಂದೆ ನಾನು ಮಹಾವಿಷ್ಣುವಿನ ಮತ್ತು ಮಹಾದೇವನ ಯಾವ ಅದ್ಭುತವಾದ ಪ್ರಭಾವವನ್ನು ಕೇಳಿದ್ದೆನೋ ಅದನ್ನೇ ನಿನಗೂ ಹೇಳುತ್ತೇನೆ. ಆ ಸಮಯದಲ್ಲಿ ರುದ್ರಾಣಿಗೆ (ಪಾರ್ವತಿಗೆ) ಉಂಟಾದ ಸಂದೇಹವನ್ನೂ ಮತ್ತು ಆ ದಿವ್ಯದಂಪತಿಗಳ ಸಂಭಾಷಣೆಯನ್ನೂ ಯಥಾಶ್ರುತವಾಗಿ ಹೇಳುತ್ತೇನೆ. ಏಕಾಗ್ರಚಿತ್ತನಾಗಿ ಕೇಳು.

ಹಿಂದೊಮ್ಮೆ ಧರ್ಮಾತ್ಮನಾದ ಈ ಶ್ರೀಕೃಷ್ಣನು ಹನ್ನೆರಡು ವರ್ಷಗಳಲ್ಲಿ ಮುಗಿಯುವ ವ್ರತವೊಂದನ್ನು ಕೈಗೊಂಡು ಒಂದು ಪರ್ವತದ ಮೇಲೆ ಕಠೋರವಾದ ತಪಸ್ಸನ್ನು ಮಾಡುತ್ತಿದ್ದನು. ಆ ಸಮಯದಲ್ಲಿ ದೀಕ್ಷಾಬದ್ಧನಾಗಿದ್ದ ಶ್ರೀಕೃಷ್ಣನನ್ನು ಸಂದರ್ಶಿಸಲು ನಾರದ-ಪರ್ವತರಿಬ್ಬರೂ ಅಲ್ಲಿಗೆ ಆಗಮಿಸಿದರು. ಅವರನ್ನೇ ಅನುಸರಿಸಿ ಕೃಷ್ಣದ್ವೈಪಾಯನವ್ಯಾಸರು, ಜಪಿಸುವವರಲ್ಲಿ ಶ್ರೇಷ್ಠರಾದ ಧೌಮ್ಯರು, ದೇವಲ, ಕಾಶ್ಯಪ, ಹಸ್ತಿಕಾಶ್ಯಪ, ದೀಕ್ಷಾವ್ರತಗಳಿಂದಲೂ ಇಂದ್ರಿಯಸಂಯಮದಿಂದಲೂ ಸಂಪನ್ನರಾದ ಸತ್ಪುರುಷರು, ಋಷಿಗಳು–ಇವರೆಲ್ಲರೂ ಶಿಷ್ಯರಿಂದಲೂ, ದೇವಸದೃಶರಾದ ತಪೋಧನರಿಂದಲೂ, ಸಿದ್ಧರಿಂದಲೂ ಕೂಡಿದವರಾಗಿ ಅಲ್ಲಿಗೆ ಆಗಮಿಸಿದರು. ದೇವಕಿಯ ಮಗನಾದ ಭಗವಾನ್ ಶ್ರೀಕೃಷ್ಣನು ಅವರ ಆಗಮನದಿಂದ ಸಂತೋಷಗೊಂಡವನಾಗಿ ದೇವೋಚಿತವಾದ ಉಪಚಾರಗಳಿಂದ ಆ ಮಹರ್ಷಿಗಳನ್ನು ತನ್ನ ಕುಲಾಚಾರಕ್ಕೆ ಅನುಗುಣವಾಗಿ ಸತ್ಕರಿಸಿದನು. ಶ್ರೀಕೃಷ್ಣನ ಆತಿಥ್ಯದಿಂದ ಸುಪ್ರೀತರಾದ ಮಹರ್ಷಿಗಳು ಹಚ್ಚಹಸಿರಾಗಿಯೂ, ಚಿನ್ನದ ಬಣ್ಣದಿಂದಲೂ ಕೂಡಿದ್ದ ನೂತನವಾದ ದರ್ಭಾಸನಗಳಲ್ಲಿ ಕುಳಿತುಕೊಂಡರು. ಅನಂತರ ಅವರು

ರಾಜರ್ಷಿಗಳ, ದೇವತೆಗಳ ಮತ್ತು ಅಲ್ಲಿ ವಾಸಮಾಡುತ್ತಿದ್ದ ತಪಸ್ವಿಗಳ ಸಂಬಂಧವಾದ ಧರ್ಮಯುಕ್ತವಾದ ಮತ್ತು ಮಧುರವಾದ ಕಥೆಗಳನ್ನು ಪರಸ್ಪರವಾಗಿ ಹೇಳುತ್ತಿದ್ದರು. ಆ ಸಮಯದಲ್ಲಿ ಕಠೋರವ್ರತಚರ್ಯಾ ರೂಪವಾದ ಕಟ್ಟಿಗೆಯಿಂದ ಹುಟ್ಟಿದ ನಾರಾಯಣನ ತೇಜಸ್ಸು ಅದ್ಭುತಕರ್ಮ ನಾದ ಶ್ರೀಕೃಷ್ಣನ ಮುಖಾರವಿಂದದಿಂದ ಹೊರಟು ಅಗ್ನಿಯ ರೂಪದಲ್ಲಿ ಪ್ರಕಟವಾಗಿ–ವೃಕ್ಷಗಳು, ಲತೆಗಳು, ಚಿಕ್ಕಚಿಕ್ಕ ಮರಗಳು, ಪಕ್ಷಿಗಳು, ಮೃಗಗಳ ಸಮೂಹಗಳು, ಹಿಂಸ್ರಮೃಗಗಳು, ಸರ್ಪಗಳು–ಇವುಗಳಿಂದ ಕೂಡಿದ ಪರ್ವತವನ್ನೇ ದಹಿಸತೊಡಗಿತು. ನಿಶ್ಚೇತನವಾಗಿದ್ದ ಆ ಪರ್ವತದ ಶಿಖರವು ವಿಧ-ವಿಧವಾದ ಜೀವಜಂತುಗಳ ಹಾಹಾಕಾರಶಬ್ದಗಳಿಂದ ತುಂಬಿ ಹೋಯಿತು. ಅಗ್ನಿಯಿಂದ ಸಂಪೂರ್ಣವಾಗಿ ದಗ್ಧವಾಗಿಹೋಗಿದ್ದ ಆ ಪರ್ವತದ ಶಿಖರವು ಅತ್ಯಂತ ದಯನೀಯವಾಗಿ ಕಾಣುತ್ತಿದ್ದಿತು. ಮಹಾಜ್ವಾಲೆಗಳಿಂದ ಕೂಡಿದ್ದ ಆ ಬೆಂಕಿಯು ಪರ್ವತದಲ್ಲಿದ್ದ ಎಲ್ಲವನ್ನೂ ನಿಃಶೇಷವಾಗಿ ಸುಟ್ಟುಹಾಕಿ ವಿಷ್ಣುವಿನ ಬಳಿಗೆ ಬಂದು ಶಿಷ್ಯನೋಪಾದಿಯಲ್ಲಿ ಅವನ ಎರಡು ಪಾದಗಳನ್ನೂ ಮುಟ್ಟಿತು.

ಬಳಿಕ ಶತ್ರುಕರ್ಶನನಾದ ಶ್ರೀಹರಿಯು ಸಂಪೂರ್ಣವಾಗಿ ಸುಟ್ಟು ಹೋಗಿದ್ದ ಆ ಪರ್ವತವನ್ನು ನೋಡಿ ತನ್ನ ಸೌಮ್ಯದೃಷ್ಟಿಯನ್ನು ಅದರ ಮೇಲೆ ಚೆಲ್ಲಿ ಪುನಃ ಆ ಪರ್ವತವನ್ನು ಪೂರ್ವರೂಪಕ್ಕೆ ತಂದನು. ಶ್ರೀಕೃಷ್ಣನ ಕೃಪಾದೃಷ್ಟಿಯು ಬೀಳುತ್ತಲೇ ಆ ಪರ್ವತವು ಪುನಃ ಪುಷ್ಪಿತವಾದ ಲತಾ ವೃಕ್ಷಗಳಿಂದ ಶೋಭಿಸತೊಡಗಿತು. ಪಕ್ಷಿಗಳ ಚಿಲಿ-ಪಿಲಿಧ್ವನಿಗಳಿಂದ ನಿನಾದಿತ ವಾಯಿತು. ಕ್ರೂರಪ್ರಾಣಿಗಳಿಂದಲೂ–ಸರ್ಪಗಳಿಂದಲೂ ಸಮಾವೃತ ವಾಯಿತು. ಅಂತಹ ಅದ್ಭುತವಾದ ಮತ್ತು ಅಚಿಂತ್ಯವಾದ ಘಟನೆಯನ್ನು ನೋಡಿ ಋಷಿಗಳೆಲ್ಲರೂ ವಿಸ್ಮಿತರಾದರು. ಅವರ ರೋಮಕೋಟಿಗಳು ನಿಮಿರಿನಿಂತುವು. ಎಲ್ಲರ ಕಣ್ಣುಗಳಲ್ಲಿಯೂ ಆನಂದಬಾಷ್ಪಗಳು ತುಂಬಿ ಕೊಂಡುವು. ಅನಂತರ ವಾಗ್ಮಿಗಳಲ್ಲಿ ಶ್ರೇಷ್ಠನಾದ ಶ್ರೀಮನ್ನಾರಾಯಣನು ವಿಸ್ಮಯಾವಿಷ್ಟರಾಗಿದ್ದ ಋಷಿಗಳನ್ನು ನೋಡಿ ವಿನಯಪೂರ್ವಕವಾದ, ಸ್ನೇಹ ಮಯವಾದ, ಸುಮಧುರವಾದ ಮಾತುಗಳಿಂದ ಪ್ರಶ್ನಿಸಿದನು :

ಕಿಮರ್ಥಮೃಷಿಪೂಗಸ್ಯ ತ್ಯಕ್ತಸಙ್ಗಸ್ಯ ನಿತ್ಯಶಃ ।
ನಿರ್ಮಮಸ್ಯಾಗಮವತೋ ವಿಸ್ಮಯಃ ಸಮುಪಾಗತಃ ॥೨೪॥

“ಮಹರ್ಷಿಗಳೇ! ನೀವೆಲ್ಲರೂ ಸರ್ವಸಂಗಪರಿತ್ಯಾಗವನ್ನು ಮಾಡಿರುವಿರಿ. ನಿಮಗೆ ಮಮಕಾರವೆಂಬುದೇ ಇಲ್ಲ. ನೀವು ವೇದಾಂತಶಾಸ್ತ್ರಜ್ಞರು. ಹೀಗಿರುವಾಗ ನಿಮಗೆ ವಿಸ್ಮಯವಾದರೂ ಹೇಗುಂಟಾಯಿತು?

ತಪೋಧನರೇ! ಅನಿಂದ್ಯರೇ! ಈ ವಿಷಯದಲ್ಲಿ ನನಗೆ ಸಂಶಯವುಂಟಾಗಿದೆ. ಆದುದರಿಂದ ನೀವು ಈ ವಿಷಯವನ್ನು ಯಥಾವತ್ತಾಗಿ ಮತ್ತು ನಿಶ್ಚಿತವಾದ ರೀತಿಯಲ್ಲಿ ಪುನಃ ಸಂಶಯಕ್ಕೆ ಎಡೆಯೇ ಇಲ್ಲದಂತೆ ಹೇಳುವ ಕೃಪೆಮಾಡಿರಿ.”

ಋಷಿಗಳು ಹೇಳುತ್ತಾರೆ :

ಭವಾನ್ವಿಸೃಜತೇ ಲೋಕಾನ್ಭವಾನ್ಸಂಹರತೇ ಪುನಃ ।
ಭವಾಞ್ಶೀತಂ ಭವಾನುಷ್ಣಂ ಭವಾನೇವ ಚ ವರ್ಷತಿ ॥೨೬॥

“ಮಹಾನುಭಾವನೇ! ನೀನೇ ಲೋಕಗಳನ್ನು ಸೃಷ್ಟಿಸುವೆ. ಪುನಃ ನೀನೇ ಉಪಸಂಹಾರವನ್ನೂ ಮಾಡುವೆ. ಶೀತಸ್ವರೂಪನೂ, ಉಷ್ಣಸ್ವರೂಪನೂ ನೀನೇ ಆಗಿರುವೆ. ನೀನೇ ಮಳೆಗರೆಯುವೆ.

ಪೃಥಿವ್ಯಾಂ ಯಾನಿ ಭೂತಾನಿ ಸ್ಥಾವರಾಣಿ ಚರಾಣಿ ಚ ।
ತೇಷಾಂ ಪಿತಾ ತ್ವಂ ಮಾತಾ ತ್ವಂ ಪ್ರಭುಃ ಪ್ರಭವ ಏವ ಚ ॥೨೭॥

ಪೃಥಿವಿಯಲ್ಲಿ ಸ್ಥಾವರ-ಜಂಗಮಗಳೆಂಬ ಯಾವ ಪ್ರಾಣಿಗಳಿವೆಯೋ–ಅವೆಲ್ಲಕ್ಕೂ ನೀನೇ ತಂದೆ ; ನೀನೇ ತಾಯಿ ; ನೀನೇ ಒಡೆಯ ಮತ್ತು ಎಲ್ಲದರ ಉತ್ಪತ್ತಿಸ್ಥಾನವೂ ನೀನೇ ಆಗಿರುವೆ.

ಮಧುಸೂದನನೇ! ನಿನ್ನ ಮುಖದಿಂದ ಅಗ್ನಿಯು ಪ್ರಾದುರ್ಭವಿಸಿದುದೇ ನಮ್ಮ ಈ ವಿಸ್ಮಯಕ್ಕೆ ಕಾರಣವಾಗಿದೆ. ಈ ಕಾರಣದಿಂದಲೇ ನಾವು ಸಂಶಯಗ್ರಸ್ತರೂ ಆಗಿದ್ದೇವೆ.

ಕಲ್ಯಾಣಮಯನಾದ ಶ್ರೀಕೃಷ್ಣನೇ! ಅಗ್ನಿಯು ಪ್ರಾದುರ್ಭವಿಸಿದ ಕಾರಣವನ್ನು ನೀನೇ ತಿಳಿಸಿ ನಮ್ಮ ಸಂಶಯವನ್ನು ನಿವಾರಿಸುವ ಕೃಪೆ

ಮಾಡು. ಹರಿಯೇ! ಶತ್ರುಸೂದನನೇ! ನಿನ್ನ ಮಾತನ್ನು ಕೇಳಿದನಂತರ ನಾವೆಲ್ಲರೂ ನಿರ್ಭಯರಾಗುತ್ತೇವೆ. ನಾವು ಆಶ್ಚರ್ಯಕರವಾದ ಯಾವ ದೃಶ್ಯ ವನ್ನು ನೋಡಿದೆವೋ–ಯಾವ ಶಬ್ದವನ್ನು ಕೇಳಿದೆವೋ–ಆ ಎಲ್ಲವನ್ನೂ ಲೋಕದ ಜನರಿಗೆ ಹೇಳುತ್ತೇವೆ."

ಶ್ರೀಕೃಷ್ಣನು ಹೇಳುತ್ತಾನೆ :

"ಮುನಿಶ್ರೇಷ್ಠರೇ! ನನ್ನ ಮುಖದಿಂದ ವೈಷ್ಣವತೇಜಸ್ಸು ಹೊರಟಿತು. ಪ್ರಳಯಕಾಲದ ಅಗ್ನಿಗೆ ಸಮಾನವಾಗಿದ್ದ ಆ ನನ್ನ ತೇಜಸ್ಸು ಈ ಪರ್ವತವನ್ನೇ ಸುಟ್ಟುಹಾಕಿತು. ಆ ಮಹಾತೇಜಸ್ಸನ್ನೂ ಮತ್ತು ಅದು ಮಾಡಿದ ಅದ್ಭುತಕಾರ್ಯವನ್ನೂ ನೋಡಿ ಜಿತೇಂದ್ರಿಯರಾದ, ಜಿತಕ್ರೋಧರಾದ, ದೇವಸದೃಶರಾದ, ತಪೋಧನರಾದ ನೀವು ಪೀಡಿತರಾದಿರಿ ಮತ್ತು ವ್ಯಥೆಗೊಂಡಿರಿ. ನಾನು ವ್ರತಾನುಷ್ಠಾನಪರನಾಗಿದ್ದೆನು. ತಪಸ್ವಿಗಳ ವ್ರತವನ್ನು (ತಪಸ್ಸನ್ನು) ಮಾಡುತ್ತಿದ್ದುದರಿಂದ ನನ್ನ ತೇಜಸ್ಸು ಅಗ್ನಿಯ ರೂಪದಲ್ಲಿ ಪ್ರಕಟವಾಯಿತು. ಅದಕ್ಕಾಗಿ ನೀವು ವ್ಯಥೆಪಡಬೇಕಾದ ಕಾರಣವಿಲ್ಲ. ನಾನು ತಪಸ್ಸಿನ ಮೂಲಕವಾಗಿ ವೀರ್ಯದಲ್ಲಿ ನನಗೆ ಸಮಾನನಾದ ಪುತ್ರನನ್ನು ಪಡೆದುಕೊಳ್ಳಲು ಬಯಸಿ ವ್ರತಾನುಷ್ಠಾನಗಳನ್ನು ಮಾಡುವ ಸಲುವಾಗಿ ಈ ಮಂಗಳಮಯವಾದ ಪರ್ವತಕ್ಕೆ ಆಗಮಿಸಿದೆನು. ನನ್ನ ಶರೀರದಲ್ಲಿದ್ದ ಆತ್ಮವೇ ಅಗ್ನಿಯ ರೂಪದಲ್ಲಿ ಹೊರಬಂದು ಸರ್ವಲೋಕಪಿತಾಮಹನಾದ, ವರದನಾದ ಬ್ರಹ್ಮನನ್ನು ನೋಡುವ ಸಲುವಾಗಿ ಅವನ ಲೋಕಕ್ಕೆ ಹೊರಟುಹೋಯಿತು. ಮುನಿಶ್ರೇಷ್ಠರೇ! 'ಶಂಕರನು ತನ್ನ ಅರ್ಧಭಾಗ ತೇಜಸ್ಸಿನಿಂದ ಕೂಡಿ ನಿನ್ನ ಪುತ್ರನಾಗಿ ಹುಟ್ಟುವನು'–ಎಂದು ಬ್ರಹ್ಮನು ನನ್ನ ಆತ್ಮಕ್ಕೆ ಸಂದೇಶವನ್ನಿತ್ತನು. ಆ ದಿವ್ಯಸಂದೇಶವನ್ನು ಹೊತ್ತು ಅಗ್ನಿಯ ರೂಪದಲ್ಲಿದ್ದ ನನ್ನ ಆತ್ಮವು ಹಿಂದಿರುಗಿ ನನ್ನ ಬಳಿಗೆ ಬಂದು ಸೇವೆಮಾಡಲು ಸಿದ್ಧನಾಗಿರುವ ಶಿಷ್ಯನಂತೆ ನನ್ನ ಪಾದಗಳ ಬಳಿಯಲ್ಲಿ ನಿಂತುಕೊಂಡಿತು. ಅನಂತರ ಶಾಂತವಾಗಿ ನನ್ನಲ್ಲಿ ಲೀನವಾಗಿ ತನ್ನ ಪೂರ್ವಭಾವವನ್ನು ಹೊಂದಿತು.

ತಪೋಧನರೇ! ಧೀಮಂತನಾದ ಪದ್ಮನಾಭನ ರಹಸ್ಯವನ್ನು ಸಂಕ್ಷೇಪ

ವಾಗಿ ಹೇಳಿದ್ದೇನೆ. ಆದುದರಿಂದ ನೀವು ಆ ಅಗ್ನಿಯ ವಿಷಯವಾಗಿ ಭಯ ಪಡುವ ಕಾರಣವಿಲ್ಲ. ನಿಮಗೆ ದೂರದೃಷ್ಟಿಯಿರುವುದರಿಂದ ನಿಮ್ಮ ಗಮನವು ಎಲ್ಲ ಕಡೆಗಳಲ್ಲಿಯೂ ಅನಿರ್ಬಾಧಿತವಾಗಿರುವುದು. ನೀವು ತಪಸ್ವಿಗಳಿಗೆ ಉಚಿತವಾದ ವ್ರತಾಚರಣೆಗಳಿಂದಲೂ, ಪ್ರದೀಪ್ತವಾದ ತೇಜಸ್ಸಿನಿಂದಲೂ ಕೂಡಿರುವಿರಿ. ಜ್ಞಾನ-ವಿಜ್ಞಾನಗಳಿಂದ ಶೋಭಿಸುತ್ತಿರುವಿರಿ. ಸ್ವರ್ಗದಲ್ಲಾಗಲೀ ಭೂಮಿಯಲ್ಲಾಗಲೀ–ನೀವು ಆಶ್ಚರ್ಯಕರವಾದ ಯಾವ ದೃಶ್ಯವನ್ನು ಕಂಡಿರೋ, ಯಾವ ಶಬ್ದವನ್ನು ಕೇಳಿದಿರೋ–ಅವೆಲ್ಲವನ್ನೂ ನನಗೆ ಹೇಳಿರಿ. ತಪೋವನಗಳಲ್ಲಿ ವಾಸಮಾಡುವ ನಿಮ್ಮಿಂದ ಹೇಳಲ್ಪಡುವ ಅಮೃತಕ್ಕೆ ಸಮಾನವಾದ ಮಧುರವಚನಗಳನ್ನು ಕೇಳುವ ಇಚ್ಛೆಯು ನನಗಿದೆ.

ಯದ್ಯಪ್ಯಹಮದೃಷ್ಟಂ ವೋ ದಿವ್ಯಮದ್ಭುತದರ್ಶನಮ್ ।
ದಿವಿ ವಾ ಭುವಿ ವಾ ಕಿಂಚಿತ್ಪಶ್ಯಾಮ್ಯಮರದರ್ಶನಾಃ ॥೪೧॥

ಪ್ರಕೃತಿಃ ಸಾ ಮಮ ಪರಾ ನ ಕ್ವಚಿತ್ಪ್ರತಿಹನ್ಯತೇ ।
ನ ಚಾತ್ಮಗತಮೈಶ್ವರ್ಯಮಾಶ್ಚರ್ಯಂ ಪ್ರತಿಭಾತಿ ಮೇ ॥೪೨॥

ಶ್ರದ್ಧೇಯಃ ಕಥಿತೋ ಹ್ಯರ್ಥಃ ಸಜ್ಜನಶ್ರವಣಂ ಗತಃ ।
ಚಿರಂ ತಿಷ್ಠತಿ ಮೇದಿನ್ಯಾಂ ಶೈಲೇ ಲೇಖ್ಯಮಿವಾರ್ಪಿತಮ್ ॥೪೩॥

ದೇವತೆಗಳಂತೆಯೇ ದಿವ್ಯತೇಜಸ್ಸಿನಿಂದ ಬೆಳಗುತ್ತಿರುವ ಮಹರ್ಷಿಗಳೇ! ದೇವಲೋಕದಲ್ಲಾಗಲೀ ಭೂಲೋಕದಲ್ಲಾಗಲೀ–ಅದ್ಭುತವಾಗಿ ಕಾಣುವ ಯಾವ ದಿವ್ಯವಸ್ತುಗಳಿವೆಯೋ ಮತ್ತು ಯಾವ ಅದ್ಭುತವಸ್ತುಗಳನ್ನು ನೀವು ಕಂಡಿಲ್ಲವೋ–ಅವೆಲ್ಲವನ್ನೂ ನಾನು ನೋಡುತ್ತಿದ್ದೇನೆ. ಅದು ನನ್ನ ಶ್ರೇಷ್ಠವಾದ ಪ್ರಕೃತಿಯೇ ಆಗಿದೆ. ಆ ನನ್ನ ಪ್ರಕೃತಿವ್ಯಾಪಾರಕ್ಕೆ ಎಲ್ಲಿಯೂ ತಡೆಯುಂಟಾಗುವುದಿಲ್ಲ. ನನ್ನ ಆತ್ಮಗತವಾಗಿರುವ ಪ್ರಾಕೃತಿಕವಾದ ಐಶ್ವರ್ಯದ ವಿಷಯವಾಗಿ ನನಗೆ ಆಶ್ಚರ್ಯವೂ ಉಂಟಾಗುವುದಿಲ್ಲ. ಆದರೂ ಸತ್ಪುರುಷರ ಕಿವಿಗಳಲ್ಲಿ ಬಿದ್ದ ವಿಷಯವು ಮಾತಿನ ಮೂಲಕವಾಗಿ ಹೊರಬಂದರೆ ಎಲ್ಲರ ನಂಬಿಕೆಗೂ ಪಾತ್ರವಾಗುತ್ತದೆ. ಅಂತಹ ವಿಷಯವು ಪರ್ವತದ ಮೇಲೆ ಬರೆದಿಟ್ಟ ವಾಕ್ಯದಂತೆ (ಶಿಲಾಶಾಸನದಂತೆ) ಭೂಮಿಯಲ್ಲಿ ಬಹಳ ಕಾಲದವರೆಗೂ ಉಳಿದಿರುತ್ತದೆ.

ಆದುದರಿಂದ ನಾನು ಸತ್ಪುರುಷರ ಮುಖದಿಂದ ಹೊರಬರುವ, ಮನುಷ್ಯರ ಬುದ್ಧಿಯನ್ನು ವಿಕಾಸಗೊಳಿಸುವ ಅಂತಹ ಸೂಕ್ತಿಗಳನ್ನು ಸತ್ಪುರುಷರ ಸಮಾಗಮವಾದ ಕಾಲದಲ್ಲಿ ಅವರೊಡನೆ ಹೇಳುತ್ತೇನೆ."

ಶ್ರೀಕೃಷ್ಣನು ಹೇಳಿದ ಆ ಮಾತನ್ನು ಕೇಳಿ ಅವನ ಬಳಿಯಲ್ಲಿದ್ದ ಎಲ್ಲ ಮುನಿಗಳೂ ಅತ್ಯಂತವಿಸ್ಮಿತರಾಗಿ ಪದ್ಮದಳಸದೃಶವಾದ (ಅರಳಿದ) ಕಣ್ಣು ಗಳಿಂದ ಜನಾರ್ದನನನ್ನು ನೋಡಿದರು. ಕೆಲವು ಮುನಿಗಳು ಶ್ರೀಕೃಷ್ಣನನ್ನು ಅಭಿನಂದಿಸುತ್ತಿದ್ದರು. ಕೆಲವರು ಪೂಜಿಸುತ್ತಿದ್ದರು. ಕೆಲವರು ಋಗ್ವೇದದ ಅರ್ಥಯುಕ್ತವಾದ ಋಕ್ಕುಗಳ ಮೂಲಕವಾಗಿ ಮಧುಸೂದನನನ್ನು ಸ್ತೋತ್ರ ಮಾಡುತ್ತಿದ್ದರು. ಬಳಿಕ ಆ ಮುನಿಗಳೆಲ್ಲರೂ ಸೇರಿ ವಾಕ್ಯಕೋವಿದರಾದ, ದೇವದರ್ಶನರಾದ ನಾರದರನ್ನು ಶ್ರೀಕೃಷ್ಣನೊಡನೆ ಸಂಭಾಷಣೆಗೆ ನಿಯೋಜಿಸುತ್ತಾ ಹೇಳಿದರು :

ಯದಾಶ್ಚರ್ಯಮಚಿನ್ತ್ಯಂ ಚ ಗಿರೌ ಹಿಮವತಿ ಪ್ರಭೋ ।
ಅನುಭೂತಂ ಮುನಿಗಣೈಸ್ತೀರ್ಥಯಾತ್ರಾಪರೈರ್ಮುನೇ ॥೪೮॥

ತದ್ಭವಾನೃಷಿಸಂಘಸ್ಯ ಹಿತಾರ್ಥಂ ಸರ್ವಮಾದಿತಃ ।
ಯಥಾ ದೃಷ್ಟಂ ಹೃಷೀಕೇಶೇ ಸರ್ವಮಾಖ್ಯಾತುಮರ್ಹಸಿ ॥೪೯॥

"ನಾರದಮಹರ್ಷಿಗಳೇ! ತೀರ್ಥಯಾತ್ರಾಪರಾಯಣರಾದ ಮುನಿ ಗಳು (ಇಲ್ಲಿಗೆ ಬರುವ ಮೊದಲು) ಹಿಮವತ್ಪರ್ವತದಲ್ಲಿ ಹಿಂದೆ ಯಾವ ದೃಶ್ಯವನ್ನು ಕಂಡರೋ ಮತ್ತು ಅದರಿಂದ ಊಹೆಗೂ ನಿಲುಕದ ಆಶ್ಚರ್ಯ ಕರವಾದ ಯಾವ ಅನುಭವವನ್ನು ಪಡೆದರೋ–ಅವೆಲ್ಲವನ್ನೂ ನೀವು ಮೊದಲಿನಿಂದ ಕಡೆಯವರಿಗೂ ಮುನಿಸಮೂಹದ ಹಿತಕ್ಕಾಗಿ ಹೃಷೀಕೇಶನಿಗೆ ಹೇಳಿರಿ."

ಯುಧಿಷ್ಠಿರ! ಮುನಿಗಳೆಲ್ಲರೂ ಸೇರಿ ಹೀಗೆ ಹೇಳಿದನಂತರ ಪೂಜ್ಯರಾದ ದೇವರ್ಷಿಗಳಾದ ನಾರದಮುನಿಗಳು ಹಿಂದೆ ನಡೆದ ಕಥೆಯನ್ನು ಶ್ರೀಕೃಷ್ಣನಿಗೆ ಹೇಳತೊಡಗಿದರು."

ಗ೩೯ನೆಯ ಅಧ್ಯಾಯವು ಮುಗಿಯಿತು.

೧೪೦ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ನಾರದರಿಂದ ಹಿಮವತ್ಪರ್ವತದಲ್ಲಿ ನಡೆದ ಘಟನೆಗಳ ವರ್ಣನೆ

ಭೀಷ್ಮನು ಹೇಳುತ್ತಾನೆ :

ತತೋ ನಾರಾಯಣಸುಹೃನ್ನಾರದೋ ಭಗವಾನೃಷಿಃ ।
ಶಙ್ಕರಸ್ಯೋಮಯಾ ಸಾರ್ಧಂ ಸಂವಾದಂ ಪ್ರತ್ಯಭಾಷತ ॥೧॥

ಬಳಿಕ ಶ್ರೀಮನ್ನಾರಾಯಣನ ಸ್ನೇಹಿತರಾದ ಪೂಜ್ಯರಾದ ನಾರದರು ಶ್ರೀ ಶಂಕರನಿಗೂ ಮತ್ತು ಉಮಾದೇವಿಗೂ ನಡೆದ ಸಂಭಾಷಣೆಯನ್ನು ಹೇಳಲು ಉಪಕ್ರಮಿಸಿದರು.

“ಮಾಧವನೇ! ಸಿದ್ಧ-ಚಾರಣರಿಂದಲೂ, ಭೂತಗಣಗಳಿಂದಲೂ ಸಂಸೇವಿತವಾಗಿದ್ದ, ಅಪ್ಸರೆಯರ ಸಮೂಹದಿಂದ ವ್ಯಾಪ್ತವಾಗಿದ್ದ, ನಾನಾ ವಿಧವಾದ ಮರ-ಬಳ್ಳಿಗಳಿಂದಲೂ ಪುಷ್ಪಗಳಿಂದಲೂ ಸಮಾಕುಲವಾಗಿದ್ದ, ರಮ್ಯವಾದ ಮತ್ತು ಪವಿತ್ರವಾದ ಹಿಮವತ್ಪರ್ವತದ ತಪ್ಪಲಿನಲ್ಲಿ ಸುರೇಶ್ವರನಾದ, ಧರ್ಮಾತ್ಮನಾದ, ವೃಷಭಾಂಕನಾದ ಶಂಕರನು ತಪಸ್ಸನ್ನು ಮಾಡುತ್ತಿದ್ದನು. ಅಲ್ಲಿ ಮಹಾದೇವನು ಹಲವು ಬಗೆಯ ಸುರೂಪಗಳಿಂದಲೂ, ವಿರೂಪಗಳಿಂದಲೂ, ದಿವ್ಯರೂಪಗಳಿಂದಲೂ, ಅದ್ಭುತರೂಪಗಳಿಂದಲೂ ಯುಕ್ತವಾಗಿದ್ದ ನೂರಾರು ಭೂತಗಣಗಳೊಡನೆ ಆನಂದದಿಂದಿದ್ದನು. ಕೆಲವು ಭೂತಗಳು ಸಿಂಹದ ಆಕಾರವನ್ನು ಹೊಂದಿದ್ದುವು. ಕೆಲವು ವ್ಯಾಘ್ರದ ಆಕಾರವನ್ನೂ ಕೆಲವು ಆನೆಯ ಆಕಾರವನ್ನೂ ಹೊಂದಿದ್ದುವು. ಸಾಮಾನ್ಯ ವಾಗಿ ಎಲ್ಲ ಪ್ರಾಣಿಗಳ ಆಕಾರಗಳನ್ನೂ ಹೊಂದಿದ್ದ ಭೂತಗಳೂ ಅಲ್ಲಿದ್ದುವು. ಕೆಲವು ಭೂತಗಳು ನರಿಯ ಮುಖಗಳನ್ನು ಹೊಂದಿದ್ದುವು. ಕೆಲವು ಭೂತಗಳು ಚಿರತೆಗಳ ಮುಖಗಳನ್ನೂ ಕೆಲವು ಭೂತಗಳು ಕರಡಿಗಳ ಮುಖಗಳನ್ನೂ ಹೊಂದಿದ್ದುವು. ಕೆಲವು ಭೂತಗಳು ಭಯಂಕರವಾದ ಗೂಬೆಯ ಮುಖಗಳನ್ನೂ ಕೆಲವು ತೋಳ, ಗಿಡಗಗಳ ಮುಖಗಳನ್ನೂ ಹೊಂದಿದ್ದುವು. ನಾನಾವರ್ಣಗಳ ಭೂತಗಳಿದ್ದುವು. ಕೆಲವು ಜಿಂಕೆಯ ಮುಖಗಳನ್ನು ಹೊಂದಿದ್ದುವು. ಸಾಮಾನ್ಯವಾಗಿ ಎಲ್ಲ ಜಾತಿಯ ಪ್ರಾಣಿಗಳ ಮುಖಗಳುಳ್ಳ

ಭೂತಗಳೂ ಅಲ್ಲಿದ್ದುವು. ಅಂತಹ ಭೂತಗಣಗಳಿಂದಲೂ, ಕಿನ್ನರರಿಂದಲೂ, ಯಕ್ಷ-ಗಂಧರ್ವರಿಂದಲೂ, ರಾಕ್ಷಸರಿಂದಲೂ, ಪರಶಿವನು ಸಮಾವೃತನಾಗಿದ್ದನು. ವೃಷಭಾಂಕನಾದ ಮಹಾದೇವನ ಆ ಸಭೆಯು ದಿವ್ಯವಾದ ಪುಷ್ಪಗಳಿಂದ ವ್ಯಾಪ್ತವಾಗಿದ್ದಿತು. ದಿವ್ಯವಾದ ತೇಜಸ್ಸಿನಿಂದ ದೇದೀಪ್ಯಮಾನವಾಗಿದ್ದಿತು. ದಿವ್ಯವಾದ ಚಂದನದಿಂದ ಚರ್ಚಿತವಾಗಿದ್ದಿತು. ದಿವ್ಯವಾದ ಧೂಪದಿಂದ ಧೂಪಿತವಾಗಿದ್ದಿತು. ದಿವ್ಯವಾದ ವಾದ್ಯಗಳಿಂದಲೂ ಶಂಖ ಮತ್ತು ಭೇರಿಗಳಿಂದಲೂ ನಿನಾದಿತವಾಗಿದ್ದಿತು. ನರ್ತನಮಾಡುತ್ತಿದ್ದ ಭೂತಗಳ ಸಮುದಾಯದಿಂದಲೂ ನವಿಲುಗಳಿಂದಲೂ ಸಮಾವೃತವಾಗಿದ್ದಿತು. ಆ ದಿವ್ಯಸಭೆಯು ನರ್ತನಮಾಡುತ್ತಿದ್ದ ಅಪ್ಸರೆಯರಿಂದ ಶೋಭಾಯಮಾನವಾಗಿ ಕಾಣುತ್ತಿದ್ದಿತು. ದೇವರ್ಷಿಗಳ ಸಮೂಹಗಳಿಂದ ಸೇವಿಸಲ್ಪಡುತ್ತಿದ್ದಿತು. ಕಣ್ಣುಗಳಿಗೆ ಆನಂದವನ್ನುಂಟುಮಾಡುತ್ತಿದ್ದಿತು. ಅನಿರ್ವಚನೀಯವಾಗಿದ್ದಿತು. ದಿವ್ಯವಾಗಿದ್ದಿತು. ಪರಮಾದ್ಭುತವಾಗಿ ಕಾಣುತ್ತಿದ್ದಿತು.

ಪೂಜ್ಯನಾದ ಶಂಕರನ ತಪಸ್ಸಿನಿಂದ ಆ ಪರ್ವತವು ದೇದೀಪ್ಯಮಾನವಾಗಿ ಕಾಣುತ್ತಿದ್ದಿತು. ಸ್ವಾಧ್ಯಾಯಪರಾಯಣರಾದ ಬ್ರಾಹ್ಮಣರು ಅಲ್ಲಿ ವೇದಘೋಷಗಳನ್ನು ಮಾಡುತ್ತಿದ್ದರು.

ಮಾಧವನೇ! ಅಪ್ರತಿಮವಾದ ಮತ್ತು ಅನುಪಮವಾದ ಆ ಹಿಮವತ್ಪರ್ವತವು ದುಂಬಿಗಳ ಝೇಂಕಾರನಿನಾದದಿಂದ ಕೂಡಿದ್ದಿತು. ಭಯಂಕರಾಕಾರವಾಗಿದ್ದ–ಆದರೂ ಮಹೋತ್ಸವಸದೃಶವಾಗಿದ್ದ ಆ ಮಹಾಸಭೆಯನ್ನು ನೋಡಿ ಮುನಿಗಳು ಪರಮಪ್ರೀತರಾದರು.

ಮಹಾಸೌಭಾಗ್ಯಶಾಲಿಗಳಾದ ಮುನಿಗಳೂ, ಊರ್ಧ್ವರೇತಸ್ಕರಾದ ಸಿದ್ಧರೂ, ಸಪ್ತಮರುತ್ತುಗಳೂ, ಅಷ್ಟವಸುಗಳೂ, ಸಾಧ್ಯರೂ, ವಿಶ್ವೇದೇವತೆಗಳೂ, ಯಕ್ಷ-ನಾಗ-ಪಿಶಾಚರೂ, ಲೋಕಪಾಲರೂ, ಅಗ್ನಿಗಳೂ, ವಾಯುಗಳೂ, ಪಂಚಭೂತಗಳೂ–ಇಂದ್ರನೊಡನೆ ಮಹಾದೇವನ ಆ ಸಭೆಯಲ್ಲಿ ಉಪಸ್ಥಿತರಾಗಿದ್ದರು. ಆರು ಋತುಗಳೂ ಅಲ್ಲಿ ಉಪಸ್ಥಿತವಾಗಿದ್ದು ಮಹಾದ್ಭುತವಾಗಿದ್ದ ಪುಷ್ಪಗಳನ್ನು ಸರ್ವತ್ರ ಎರಚುತ್ತಿದ್ದುವು. ಜ್ಯೋತಿರ್ಲತೆಗಳು ಆ ವನವನ್ನು ಪ್ರಕಾಶಗೊಳಿಸುತ್ತಿದ್ದುವು. ರಮ್ಯವಾದ ಪರ್ವತದ ತಪ್ಪಲು

ಗಳಲ್ಲಿ ಪಕ್ಷಿಗಳು ಸಂತೋಷದಿಂದ ಕೂಡಿದ್ದು ನೃತ್ಯಮಾಡಲೂ, ಕಲ-ಕಲನಿನಾದಗಳನ್ನು ಮಾಡುತ್ತಲೂ ಜನರಿಗೆ ಪ್ರಿಯವಾದ ಮಾತುಗಳನ್ನು ಹೇಳುತ್ತಲೂ ಇದ್ದುವು. ದಿವ್ಯವಾದ ಗೈರಿಕಧಾತುಗಳಿಂದ ವಿಭೂಷಿತವಾದ, ಪರ್ಯಂಕಕ್ಕೆ ಸಮಾನವಾಗಿದ್ದ ಆ ಪರ್ವತಶಿಖರದಲ್ಲಿ ಮಹಾತ್ಮನಾದ ಮಹಾದೇವನು ಕುಳಿತು ವಿರಾಜಿಸುತ್ತಿದ್ದನು.

ವ್ಯಾಘ್ರಚರ್ಮಾಮ್ಬರಧರಃ ಸಿಂಹಚರ್ಮೋತ್ತರಚ್ಛದಃ ।
ವ್ಯಾಲಯಜ್ಞೋಪವೀತೀ ಚ ಲೋಹಿತಾಙ್ಗದಭೂಷಣಃ ॥೧೮॥

ಹರಿಶ್ಮಶ್ರುರ್ಜಟೀ ಭೀಮೋ ಭಯಕರ್ತಾ ಸುರದ್ವಿಷಾಮ್ ।
ಅಭಯಃ ಸರ್ವಭೂತಾನಾಂ ಭಕ್ತಾನಾಂ ವೃಷಭಧ್ವಜಃ ॥೧೯॥

ಭಕ್ತರಿಗೂ ಮತ್ತು ಸರ್ವಪ್ರಾಣಿಗಳಿಗೂ ಅಭಯಪ್ರದನಾದ ವೃಷಭಧ್ವಜನಾದ ಶಂಕರನು–ವ್ಯಾಘ್ರದ ಚರ್ಮವನ್ನೇ ಉಡುವ ಬಟ್ಟೆಯನ್ನಾಗಿ ಧರಿಸಿದ್ದನು. ಸಿಂಹದ ಚರ್ಮವನ್ನು ಉತ್ತರೀಯವನ್ನಾಗಿ ಹೊದ್ದಿದ್ದನು. ವಿಷಸರ್ಪವನ್ನೇ ಯಜ್ಞೋಪವೀತವನ್ನಾಗಿ ಮಾಡಿಕೊಂಡಿದ್ದನು. ಕೆಂಪಾದ ಭುಜಕೀರ್ತಿಗಳನ್ನು ಧರಿಸಿದ್ದನು. ಅವನಿಗೆ ಹೊಂಬಣ್ಣದ ಗಡ್ಡ-ಮೀಸೆಗಳಿದ್ದುವು. ಜಟಾಧಾರಿಯಾಗಿದ್ದನು. ಭಯಂಕರನಾಗಿದ್ದನು. ದೇವತೆಗಳ ಶತ್ರುಗಳಿಗೆ ಭಯವನ್ನುಂಟುಮಾಡುವವನಾಗಿದ್ದನು. ಅಂತಹ ಮಹಾನುಭಾವನಾದ ಮಹೇಶ್ವರನನ್ನು ನೋಡಿದೊಡನೆಯೇ ಮಹರ್ಷಿಗಳೆಲ್ಲರೂ ತಲೆಗಳನ್ನು ನೆಲಕ್ಕೆ ಬಗ್ಗಿಸಿ ನಮಸ್ಕರಿಸಿದರು. ಅವನ ದರ್ಶನಮಾತ್ರದಿಂದಲೇ ಎಲ್ಲರೂ ಸಮಸ್ತವಾದ ಪಾಪಗಳಿಂದಲೂ ಮುಕ್ತರಾದರು. (ಕ್ಷಮಿಸಲ್ಪಟ್ಟರು.) ಮನಸ್ಸಿನಲ್ಲಿದ್ದ ಕಲ್ಮಷಗಳೆಲ್ಲವನ್ನೂ ಕಳೆದುಕೊಂಡರು. ಭೂತನಾಥನಾದ ಭಗವಂತನಾದ ಪರಶಿವನ ಭಯಂಕರರೂಪದ ಆ ಸ್ಥಾನವು ಆ ಸಮಯದಲ್ಲಿ ಬಹಳವಾಗಿ ಪ್ರಕಾಶಿಸಿತು. ಆ ಸ್ಥಾನವು ಯಾರಿಂದಲೂ ಎದುರಿಸಲು ಅಸಾಧ್ಯವಾಗಿದ್ದಿತು ಮತ್ತು ಮಹಾಸರ್ಪಗಳಿಂದಲೂ ವ್ಯಾಪ್ತವಾಗಿದ್ದಿತು.

ಮಧುಸೂದನನೇ! ಭಯಂಕರರೂಪವನ್ನು ಹೊಂದಿದ್ದ ವೃಷಭಧ್ವಜನ ಆ ಸಭೆಯು ಕ್ಷಣಮಾತ್ರದಲ್ಲಿ ಪರಮಾದ್ಭುತವಾಗಿ ಶೋಭಿಸಿತು. ಆ ಸಮಯದಲ್ಲಿ ಭೂತಸ್ತ್ರೀಗಣಗಳಿಂದ ಪರಿವೃತಳಾದ, ಮಹಾದೇವನಂತೆಯೇ

ವ್ಯಾಘ್ರ-ಸಿಂಹಾಜಿನಗಳನ್ನುಟ್ಟಿದ್ದ, ಪರಮೇಶ್ವರನಂತೆಯೇ ವ್ರತಾನುಷ್ಠಾನಪರಳಾಗಿದ್ದ, ಪರ್ವತರಾಜಕುಮಾರಿಯಾದ ಪಾರ್ವತಿಯು ಸರ್ವತೀರ್ಥಗಳ ಶುಭೋದಕಗಳಿಂದ ತುಂಬಿದ್ದ ಸುವರ್ಣಮಯವಾದ ಕಲಶವನ್ನೆತ್ತಿಕೊಂಡು ಪರಮೇಶ್ವರನ ಬಳಿಗೆ ಬಂದಳು. ಪರ್ವತದ ಮತ್ತು ನದಿಗಳ ಅಧಿದೇವತೆಗಳಿಂದ ಅನುಸೃತಳಾಗಿ ಬಂದ, ಶುಭಲಕ್ಷಣಯುಕ್ತಳಾದ ಪಾರ್ವತಿಯು ಪುಷ್ಪವೃಷ್ಟಿಯನ್ನು ಸುರಿಸುತ್ತಾ, ಹಲವು ಬಗೆಯ ಗಂಧೋದಕಗಳನ್ನು ಚುಮುಕಿಸುತ್ತಾ ಹಿಮವತ್ಪರ್ವತದ ಪಾರ್ಶ್ವಭಾಗವನ್ನು ಸಂಸೇವಿಸುತ್ತಾ ಹರನ ಪಕ್ಕಕ್ಕೆ ಬಂದುನಿಂತಳು.

ಚಾರುಹಾಸಿನಿಯಾದ ಪಾರ್ವತೀದೇವಿಯು ನಸುನಗುತ್ತಾ ವಿನೋದಕ್ಕಾಗಿ ಶುಭಲಕ್ಷಣಗಳಿಂದ ಕೂಡಿದ ಹರನ ಎರಡು ಕಣ್ಣುಗಳನ್ನೂ ತನ್ನೆರಡು ಕೈಗಳಿಂದಲೂ ಮುಚ್ಚಿಬಿಟ್ಟಳು. ಶಿವನ ಆ ಎರಡು ಕಣ್ಣುಗಳೂ ಪಾರ್ವತಿಯ ಕೈಗಳಿಂದ ಮುಚ್ಚಲ್ಪಟ್ಟೊಡನೆಯೇ ಸಂಪೂರ್ಣವಾದ ಜಗತ್ತು ಅಂಧಕಾರಮಯವಾಯಿತು. ಚೇತನಾಶೂನ್ಯವಾಯಿತು. ಹೋಮಗಳಿಂದಲೂ, ವಷಟ್ಕಾರಗಳಿಂದಲೂ ರಹಿತವಾಯಿತು. ಎಲ್ಲ ಜನರೂ ಬುದ್ಧಿಗೆಟ್ಟವರಾದರು. ಭಯಗ್ರಸ್ತರಾದರು. ಭೂತನಾಥನ ಕಣ್ಣುಗಳು ಮುಚ್ಚಲ್ಪಡಲಾಗಿ ಪ್ರಪಂಚವು ಸೂರ್ಯನಿಂದ ರಹಿತವಾಗಿರುವಂತೆಯೇ ಕಾಣುತ್ತಿದ್ದಿತು. ಮರುಕ್ಷಣದಲ್ಲಿಯೇ ಅಂಧಕಾರದ ನಿರಸನವಾಯಿತು. ಪರಶಿವನ ಹಣೆಯಿಂದ ದೇದೀಪ್ಯಮಾನವಾಗಿದ್ದ ಮಹಾಜ್ವಾಲೆಯು ಹೊರಟಿತು. ಅವನ ಹಣೆಯಲ್ಲಿ ಸೂರ್ಯನ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಕೂಡಿದ್ದ ಮೂರನೆಯ ಕಣ್ಣು ಹುಟ್ಟಿಕೊಂಡಿತು. ಆ ನೇತ್ರವು ಯುಗಾಂತದ ಪ್ರಲಯಾಗ್ನಿಯಂತೆ ದೇದೀಪ್ಯಮಾನವಾಗಿದ್ದಿತು. ಫಾಲನೇತ್ರದಿಂದ ಹುಟ್ಟಿದ ಆ ಅಗ್ನಿಯಿಂದ ಆ ಪರ್ವತವು ಭಸ್ಮವಾಗಿಹೋಯಿತು. ಬಳಿಕ ಗಿರಿಸುತೆಯಾದ, ವಿಶಾಲನೇತ್ರೆಯಾದ ಪಾರ್ವತೀದೇವಿಯು ಅಗ್ನಿಗೆ ಸದೃಶವಾದ ಮೂರನೆಯ ಕಣ್ಣನ್ನು ಹೊಂದಿದ್ದ ಮಹಾದೇವನನ್ನು ನೋಡಿ, ಅವನಿಗೆ ತಲೆಬಾಗಿ ನಮಸ್ಕರಿಸಿ ಅವನ ಕಡೆಗೆ ದೃಷ್ಟಿಯನ್ನು ಹಾಯಿಸಿದಳು. ಆ ಸಮಯದಲ್ಲಿ ಸಾಲ-ಸರಲ ವೃಕ್ಷಗಳಿಂದಲೂ, ಶ್ರೇಷ್ಠವಾದ ಚಂದನವೃಕ್ಷಗಳಿಂದಲೂ, ದಿವ್ಯೌಷಧಗಳಿಂದಲೂ ಪ್ರಕಾಶಿಸುತ್ತಿದ್ದ ಸುರಮ್ಯವಾಗಿದ್ದ ಆ ವನವು ಫಾಲನೇತ್ರದಿಂದ

ಹೊರಟ ಅಗ್ನಿಯ ಜ್ವಾಲೆಗಳಿಂದ ದಹಿಸಲ್ಪಡುತ್ತಿರಲಾಗಿ–ಭಯಗೊಂಡು ದಿಕ್ಕಾಪಾಲಾಗಿ ಓಡಿಹೋಗುತ್ತಿದ್ದ ಮೃಗಗಳ ಸಮೂಹಗಳು ಎಲ್ಲಿಯೂ ರಕ್ಷಣೆಯನ್ನು ಕಾಣದೇ ಪರಮೇಶ್ವರನ ಬಳಿಗೇ ಬಂದು ರಕ್ಷಣೆಯನ್ನು ಪಡೆದುವು. ಮೃಗಗಳಿಂದ ಸಮಾಕುಲವಾಗಿದ್ದ ಈಶ್ವರನ ಆ ಸಭಾಸ್ಥಳವು ಬಹಳವಾಗಿ ಪ್ರಕಾಶಿಸಿತು. ಫಾಲನೇತ್ರದಿಂದ ಹುಟ್ಟಿದ್ದ ಆ ಅಗ್ನಿಯ ಜ್ವಾಲೆಯು ಆಕಾಶವನ್ನು ಮುಟ್ಟುತ್ತಿದ್ದಿತು. ವಿದ್ಯುತ್ತಿನಂತೆ ಚಂಚಲವಾಗಿದ್ದ ಆ ಜ್ವಾಲೆಯು ಬಹಳ ಭಯಂಕರವಾಗಿ ಕಾಣುತ್ತಿದ್ದಿತು. ದ್ವಾದಶಾದಿತ್ಯರ ಪ್ರಭೆಗೆ ಸಮಾನವಾದ ಪ್ರಭೆಯಿಂದ ಕೂಡಿದ್ದ ಆ ಅಗ್ನಿಯು–ಮತ್ತೊಂದು ಪ್ರಳಯಕಾಲದ ಅಗ್ನಿಯು ಆವಿರ್ಭವಿಸಿರುವುದೋ–ಎಂಬಂತೆ ಕಾಣುತ್ತಿದ್ದಿತು. ಗೈರಿಕಾದಿಧಾತುಗಳಿಂದಲೂ, ವಿಶಾಲವಾದ ಶಿಖರಗಳಿಂದಲೂ, ಲತೆಗಳಿಂದಲೂ, ಓಷಧಿಲತೆಗಳಿಂದಲೂ ಕೂಡಿದ್ದ ಹಿಮವತ್ಪರ್ವತವು ಕ್ಷಣಮಾತ್ರದಲ್ಲಿ ಭಸ್ಮವಾಗಿ ಹೋಯಿತು. ತನ್ನ ತೌರುಮನೆಯು ಸಂಪೂರ್ಣವಾಗಿ ಸುಟ್ಟುಹೋದುದನ್ನು ನೋಡಿ ಪರ್ವತರಾಜನ ಮಗಳಾದ ಉಮೆಯು ಕೈಗಳೆರಡನ್ನೂ ಜೋಡಿಸಿ ನಿಂತು ಪೂಜ್ಯನಾದ ಶಂಕರನನ್ನು ಶರಣು ಹೊಂದಿದಳು. ಸ್ತ್ರೀಸ್ವಭಾವಕ್ಕೆ ಅನುಗುಣವಾಗಿ ಕರಗಿಹೋದ ಮನಸ್ಸುಳ್ಳವಳಾಗಿದ್ದ, ತಂದೆಗುಂಟಾದ ಆ ದೈನ್ಯಸ್ಥಿತಿಯನ್ನು ನೋಡಲು ಇಚ್ಛಿಸದಿದ್ದ ಉಮಾದೇವಿಯನ್ನು ಶರ್ವನು ನೋಡಿ, ಅವಳನ್ನು ಸಾಂತ್ವನಗೊಳಿಸುವ ಸಲುವಾಗಿ ಹಿಮವತ್ಪರ್ವತವನ್ನು ಪ್ರಸನ್ನದೃಷ್ಟಿಯಿಂದ ನೋಡಿದನು. ಪರಶಿವನ ಕೃಪಾದೃಷ್ಟಿಯು ಬಿದ್ದೊಡನೆಯೇ ಹಿಮವತ್ಪರ್ವತವು ತನ್ನ ಪೂರ್ವಸ್ಥಿತಿಯನ್ನು ಪಡೆದುಕೊಂಡಿತು. ಪ್ರಹೃಷ್ಟವಾದ ಪಕ್ಷಿಗಳು ಕಲ-ಕಲನಿನಾದಗಳನ್ನು ಮಾಡತೊಡಗಿದುವು. ಸುಪುಷ್ಪಿತವಾದ ಅರಣ್ಯವೃಕ್ಷಗಳಿಂದ ಕೂಡಿದ್ದ ಆ ಪರ್ವತವು ಮೊದಲಿನಂತೆಯೇ ನೋಡಲು ಅತಿ ಸುಂದರವಾಗಿ ಕಾಣುತ್ತಿದ್ದಿತು.

ಪೂರ್ವಸ್ಥಿತಿಯನ್ನು ಪಡೆದುಕೊಂಡ ತನ್ನ ತಂದೆಯನ್ನು ನೋಡಿ ಪರಮಪ್ರೀತಳಾದ ಅನಿಂದ್ಯಳಾದ ಉಮಾದೇವಿಯು ಸರ್ವಲೋಕಗಳಿಗೂ ಪತಿಯಾದ, ಮಂಗಳಸ್ವರೂಪನಾದ ದೇವದೇವನಾದ ಮಹೇಶ್ವರನಿಗೆ ಹೇಳಿದಳು :

ಭಗವನ್ಸರ್ವಭೂತೇಶ ಶೂಲಪಾಣೇ ಮಹಾವ್ರತ ।
ಸಂಶಯೋ ಮೇ ಮಹಾಂಜ್ಞಾತಸ್ತನ್ಮೇ ವ್ಯಾಖ್ಯಾತುಮರ್ಹಸಿ ॥೪೦॥

"ಪೂಜ್ಯನೇ! ಸರ್ವಭೂತೇಶ್ವರನೇ! ಶೂಲಪಾಣಿಯೇ! ಮಹಾವ್ರತನೇ! ನನ್ನ ಮನಸ್ಸಿನಲ್ಲಿ ಸಂಶಯವೊಂದು ಹುಟ್ಟಿಕೊಂಡಿದೆ. ಅದನ್ನು ಪರಿಹರಿಸುವ ಕೃಪೆಮಾಡು.

ಕಿಮರ್ಥಂ ತೇ ಲಲಾಟೇ ವೈ ತೃತೀಯಂ ನೇತ್ರಮುತ್ಥಿತಮ್ ।
ಕಿಮರ್ಥಂ ಚ ಗಿರಿರ್ದಗ್ಧಃ ಸಪಕ್ಷಿಗಣಕಾನನಃ ॥೪೧॥

ಕಿಮರ್ಥಂ ಚ ಪುನರ್ದೇವ ಪ್ರಕೃತಿಸ್ಥಸ್ತ್ವಯಾ ಕೃತಃ ।
ತಥೈವ ದ್ರುಮಸಂಛನ್ನಃ ಕೃತೋಽಯಂ ತೇ ಪಿತಾ ಮಮ ॥೪೨॥

ಯಾವ ಕಾರಣದಿಂದ ನಿನ್ನ ಹಣೆಯಲ್ಲಿ ಮೂರನೆಯ ಕಣ್ಣು ಹುಟ್ಟಿತು? ಅದರಿಂದ ಹುಟ್ಟಿದ ಅಗ್ನಿಯು ಯಾವ ಕಾರಣದಿಂದ ಪಕ್ಷಿಗಳ ಸಮೂಹಗಳಿಂದಲೂ ಅರಣ್ಯಗಳಿಂದಲೂ ಯುಕ್ತವಾಗಿದ್ದ ಹಿಮವತ್ಪರ್ವತವನ್ನು ಸುಟ್ಟುಹಾಕಿತು? ದೇವ! ನೀನು ಯಾವ ಕಾರಣದಿಂದ ಸುಟ್ಟುಹಾಕಿದ್ದ ಈ ಪರ್ವತವನ್ನು ಪೂರ್ವರೂಪಕ್ಕೆ ತಂದೆ? ನನ್ನ ತಂದೆಯಾದ ಹಿಮವಂತನನ್ನು ಮೊದಲಿನಂತೆಯೇ ಮರ-ಬಳ್ಳಿಗಳಿಂದ ಆಚ್ಛಾದಿತನನ್ನಾಗಿ ಏಕೆ ಮಾಡಿದೆ?"

ಮಹೇಶ್ವರನು ಹೇಳುತ್ತಾನೆ :

"ಅನಿಂದ್ಯಳೇ! ದೇವಿ! ನೀನು ಬಾಲ್ಯಚಾಪಲ್ಯದಿಂದ ಹಾಸ್ಯಕ್ಕಾಗಿ ನನ್ನೆರಡು ಕಣ್ಣುಗಳನ್ನೂ ಮುಚ್ಚಿಬಿಟ್ಟೆ. ಮರುಕ್ಷಣದಲ್ಲಿಯೇ ಪ್ರಪಂಚವೆಲ್ಲವೂ ದೃಷ್ಟಿಯನ್ನೇ ಕಳೆದುಕೊಂಡುಬಿಟ್ಟಿತು. (ಅಂಧಕಾರಮಯವಾಯಿತು.)

ಗಿರಿರಾಜಕುಮಾರಿಯೇ! ಸೂರ್ಯನೂ ಅದೃಶ್ಯನಾದನು. ಲೋಕವೆಲ್ಲವೂ ಅಂಧಕಾರಮಯವಾಯಿತು. ಆ ಸಮಯದಲ್ಲಿ ಪ್ರಜೆಗಳನ್ನು ರಕ್ಷಿಸುವ ಸಲುವಾಗಿ ಪ್ರದೀಪ್ತವಾದ ಮೂರನೆಯ ಕಣ್ಣನ್ನು ಸೃಷ್ಟಿಸಿದೆನು. ಆ ನನ್ನ ಮೂರನೆಯ ಕಣ್ಣು ಭಯಂಕರವಾದ ತೇಜಸ್ಸಿನಿಂದ ಕೂಡಿದೆ. ಅದರಿಂದಲೇ ಈ ಪರ್ವತವು ದಹಿಸಲ್ಪಟ್ಟಿತು. ನಿನಗೆ ಪ್ರಿಯವನ್ನುಂಟುಮಾಡುವ ಸಲುವಾಗಿಯೇ ನಾನು ಈ ಪರ್ವತವನ್ನು ಪುನಃ ಪೂರ್ವರೂಪಕ್ಕೆ ತಂದೆನು."

ಉಮೆಯು ಹೇಳುತ್ತಾಳೆ :

ಭಗವನ್ಕೇನ ತೇ ವಕ್ತ್ರಂ ಚನ್ದ್ರವತ್ಪ್ರಿಯದರ್ಶನಮ್ ।
ಪೂರ್ವಂ ತಥೈವ ಶ್ರೀಕಾನ್ತಮುತ್ತರಂ ಪಶ್ಚಿಮಂ ತಥಾ ॥೪೬॥

ದಕ್ಷಿಣಂ ಚ ಮುಖಂ ರೌದ್ರಂ ಕೇನೋರ್ಧ್ವಂ ಕಪಿಲಾ ಜಟಾಃ ।
ಕೇನ ಕಣ್ಠಶ್ಚ ತೇ ನೀಲೋ ಬರ್ಹಿಬರ್ಹನಿಭಃ ಕೃತಃ ॥೪೭॥

"ಪೂಜ್ಯನೇ! ನಿನ್ನ ಪೂರ್ವದಿಕ್ಕಿನಲ್ಲಿರುವ ಮುಖವು ಚಂದ್ರನಕಾಂತಿಗೆ ಸಮಾನವಾದ ಕಾಂತಿಯಿಂದ ಕೂಡಿದ್ದು ನೋಡಲು ಪ್ರಿಯಕರವಾಗಿದೆ. ಉತ್ತರದಿಕ್ಕಿಗಿರುವ ಮತ್ತು ಪಶ್ಚಿಮದಿಕ್ಕಿಗಿರುವ ಮುಖಗಳೂ ಪೂರ್ವ ದಿಕ್ಕಿಗಿರುವ ಮುಖದಂತೆಯೇ ಕಮನೀಯವಾದ ಕಾಂತಿಯಿಂದ ಯುಕ್ತ ವಾಗಿವೆ. ಆದರೆ ದಕ್ಷಿಣದಿಕ್ಕಿಗಿರುವ ಮುಖವು ಬಹುಭಯಂಕರವಾಗಿ ಕಾಣುತ್ತಿದೆ. ಈ ವ್ಯತ್ಯಾಸಕ್ಕೆ ಕಾರಣವೇನು? ಹಾಗೆಯೇ ನಿನ್ನ ಜಟೆಗಳು ಕಪಿಲವರ್ಣವಾಗಿರುವುದಕ್ಕೂ–ನಿನ್ನ ಕುತ್ತಿಗೆಯು ನವಿಲುಗರಿಯಂತೆ ನೀಲ ವಾಗಿರುವುದಕ್ಕೂ ಕಾರಣವೇನು?

ಹಸ್ತೇ ದೇವ ಪಿನಾಕಂ ತೇ ಸತತಂ ಕೇನ ತಿಷ್ಠತಿ ।
ಜಟಿಲೋ ಬ್ರಹ್ಮಚಾರೀ ಚ ಕಿಮರ್ಥಮಸಿ ನಿತ್ಯದಾ ॥೪೮॥

ದೇವ! ಯಾವ ಕಾರಣದಿಂದ ಪಿನಾಕಧನುಸ್ಸು ಸತತವಾಗಿ ನಿನ್ನ ಕೈಯಲ್ಲೇ ಇರುತ್ತದೆ? ನೀನು ನಿತ್ಯವೂ ಜಟಾಧಾರಿಯಾದ ಬ್ರಹ್ಮಚಾರಿಯ ವೇಷದಲ್ಲಿ ಏಕಿರುವೆ?

ವೃಷಭಧ್ವಜನೇ! ಪ್ರಭುವೇ! ಇದು ನನ್ನ ಸಂಶಯವಾಗಿದೆ. ಎಲ್ಲ ವಿಷಯಗಳನ್ನೂ ಹೇಳಿ ನನ್ನ ಈ ಸಂಶಯವನ್ನು ನಿವಾರಿಸುವ ಕೃಪೆಮಾಡು. ನಾನು ನಿನ್ನ ಅರ್ಧಾಂಗಿಯಾಗಿದ್ದೇನೆ ಮತ್ತು ಭಕ್ತಳೂ ಆಗಿದ್ದೇನೆ."

ಭೀಷ್ಮನು ಹೇಳುತ್ತಾನೆ :

"ಧರ್ಮಜ! ಶೈಲರಾಜನ ಪುತ್ರಿಯಾದ ಉಮಾದೇವಿಯು ಹೀಗೆ ಹೇಳಿದನಂತರ ಪ್ರಭುವಾದ ಪಿನಾಕಪಾಣಿಯಾದ ಭಗವಾನ್ ಪರಶಿವನು

ಉಮೆಯ ಧೈರ್ಯವನ್ನೂ ಬುದ್ಧಿಯನ್ನೂ ನೋಡಿ ಪರಮಪ್ರೀತನಾಗಿ ಅವಳನ್ನು ಕುರಿತು ಹೇಳಿದನು :

"ಸುಭಗಳೇ! ಸುಂದರವಾದ ಮುಖವುಳ್ಳವಳೇ! ಯಾವ ಕಾರಣ ಗಳಿಂದ ನನಗೆ ಈ ರೂಪಗಳು ಪ್ರಾಪ್ತವಾಗಿವೆಯೆಂಬುದನ್ನು ಹೇಳುವೆನು ; ಕೇಳು."

೧೪೦ನೆಯ ಅಧ್ಯಾಯವು ಮುಗಿಯಿತು.

೧೪೧ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಶಿವ-ಪಾರ್ವತಿಯರ ಸಂವಾದ : ವರ್ಣಾಶ್ರಮಧರ್ಮಗಳ ಮತ್ತು ಪ್ರವೃತ್ತಿ-ನಿವೃತ್ತಿಧರ್ಮಗಳ ನಿರೂಪಣೆ

ಮಹೇಶ್ವರನು ಹೇಳುತ್ತಾನೆ :

ತಿಲೋತ್ತಮಾ ನಾಮ ಪುರಾ ಬ್ರಹ್ಮಣಾ ಯೋಷಿದುತ್ತಮಾ ।
ತಿಲಂ ತಿಲಂ ಸಮುದ್ಧೃತ್ಯ ರತ್ನಾನಾಂ ನಿರ್ಮಿತಾ ಶುಭಾ ॥೧॥

"ಪ್ರಿಯೇ! ಹಿಂದೆ ಬ್ರಹ್ಮನು ಎಲ್ಲ ವಿಧವಾದ ಉತ್ತಮರತ್ನಗಳಿಂದಲೂ ತಿಲಾಂಶವನ್ನು (ಎಳ್ಳಿನ ಕಾಳಿನಷ್ಟು ಭಾಗವನ್ನು) ತೆಗೆದುಕೊಂಡು ಒಟ್ಟಾಗಿ ಸೇರಿಸಿ ಅದರಿಂದಲೇ ಶುಭಲಕ್ಷಣಗಳಿಂದ ಯುಕ್ತಳಾದ 'ತಿಲೋತ್ತಮಾ'– ಎಂಬ ಹೆಸರಿನ ಶ್ರೇಷ್ಠಳಾದ ಸ್ತ್ರೀಯನ್ನು ನಿರ್ಮಿಸಿದನು.

ಭೂಮಿಯಲ್ಲಿಯೇ ಅಪ್ರತಿಮರೂಪವತಿಯಾಗಿದ್ದ ತಿಲೋತ್ತಮೆಯು ನನ್ನ ಬಳಿಗೆ ಆಗಮಿಸಿದಳು. ಸುಂದರವಾದ ಮುಖದಿಂದ ಕೂಡಿದ್ದ ಅವಳು ತನ್ನ ರೂಪಸಂಪತ್ತಿನಿಂದ ನನ್ನನ್ನು ಪ್ರಲೋಭನಗೊಳಿಸುತ್ತಾ–ನನ್ನ ಸುತ್ತಲೂ ತಿರುಗತೊಡಗಿದಳು. ಸುಂದರವಾದ ಹಲ್ಲುಗಳಿಂದ ಯುಕ್ತಳಾಗಿದ್ದ ಅವಳು ಪ್ರದಕ್ಷಿಣೆಮಾಡುತ್ತಾ ಯಾವ ಯಾವ ದಿಕ್ಕಿಗೆ ಹೋಗುತ್ತಿದ್ದಳೋ–ಆಯಾ ದಿಕ್ಕುಗಳಲ್ಲಿ ನನ್ನ ಒಂದು ಸುಂದರವಾದ ಮುಖವು ಅವಳನ್ನು ನೋಡುವ ಸಲುವಾಗಿಯೇ ಪ್ರಕಟವಾಗತೊಡಗಿತು. ತಿಲೋತ್ತಮೆಯ ರೂಪವನ್ನು ನೋಡುವ ಇಚ್ಛೆಯಿಂದಲೇ ನಾನು ನನ್ನಲ್ಲಿದ್ದ ಯೋಗಶಕ್ತಿಯನ್ನು ಪ್ರದರ್ಶಿ ಸುತ್ತಾ ಚತುರ್ಮೂರ್ತಿಯೂ–ಚತುರ್ಮುಖನೂ ಆದೆನು.

ಪೂರ್ವೇಣ ವದನೇನಾಹಮಿನ್ದ್ರತ್ವಮನುಶಾಸ್ಮಿ ಹ ।
ಉತ್ತರೇಣ ತ್ವಯಾ ಸಾರ್ಧಂ ರಮಾಮ್ಯಹಮನಿನ್ದಿತೇ ॥೫॥

ಅನಿಂದ್ಯಳೇ! ನಾನು ಪೂರ್ವಾಭಿಮುಖವಾಗಿರುವ ನನ್ನ ಮುಖದಿಂದ ಇಂದ್ರಪದವಿಯನ್ನು ಅನುಶಾಸನಮಾಡುತ್ತೇನೆ. ಉತ್ತರಾಭಿಮುಖವಾಗಿರುವ ನನ್ನ ಮುಖದಿಂದ ನಿನ್ನೊಡನೆ ರಮಿಸುತ್ತೇನೆ.

ಪಶ್ಚಿಮಂ ಮೇ ಮುಖಂ ಸೌಮ್ಯಂ ಸರ್ವಪ್ರಾಣಿಸುಖಾವಹಮ್ ।
ದಕ್ಷಿಣಂ ಭೀಮಸಂಕಾಶಂ ರೌದ್ರಂ ಸಂಹರತಿ ಪ್ರಜಾಃ ॥೬॥

ಪಶ್ಚಿಮದಿಕ್ಕಿನ ನನ್ನ ಮುಖವು ಸೌಮ್ಯವಾಗಿದ್ದು ಎಲ್ಲ ಪ್ರಾಣಿಗಳಿಗೂ ಸುಖವನ್ನುಂಟುಮಾಡುತ್ತದೆ. ಭಯಂಕರವಾದ ಮತ್ತು ರೌದ್ರಾಕಾರದ ದಕ್ಷಿಣದಿಕ್ಕಿನ ನನ್ನ ಮುಖವು ಪ್ರಜೆಗಳನ್ನು ಸಂಹರಿಸುತ್ತದೆ.

ಜಟಿಲೋ ಬ್ರಹ್ಮಚಾರೀ ಚ ಲೋಕಾನಾಂ ಹಿತಕಾಮ್ಯಯಾ ।
ದೇವಕಾರ್ಯಾರ್ಥಸಿದ್ಧ್ಯರ್ಥಂ ಪಿನಾಕಂ ಮೇ ಕರೇ ಸ್ಥಿತಮ್ ॥೭॥

ಲೋಕಗಳಿಗೆ ಹಿತವನ್ನುಂಟುಮಾಡುವ ಇಚ್ಛೆಯಿಂದ ನಾನು ಜಟೆ ಯನ್ನು ಧರಿಸಿ ಬ್ರಹ್ಮಚಾರಿಯ ವೇಷದಲ್ಲಿದ್ದೇನೆ. ದೇವತೆಗಳ ಕಾರ್ಯದ ಸಿದ್ಧಿಗಾಗಿ ಪಿನಾಕಧನುಸ್ಸು ಯಾವಾಗಲೂ ನನ್ನ ಕೈಯಲ್ಲಿರುತ್ತದೆ.

ಇನ್ದ್ರೇಣ ಚ ಪುರಾ ವಜ್ರಂ ಕ್ಷಿಪ್ತಂ ಶ್ರೀಕಾಂಕ್ಷಿಣಾ ಮಮ ।
ದಗ್ಧ್ವಾ ಕಣ್ಠಂ ತು ತದ್ಯಾತಂ ತೇನ ಶ್ರೀಕಣ್ಠತಾ ಮಮ ॥೮॥

ಹಿಂದೊಮ್ಮೆ ಇಂದ್ರನು ನನ್ನಲ್ಲಿದ್ದ ಶ್ರೀಯನ್ನು ಪಡೆಯಬೇಕೆಂಬ ಇಚ್ಛೆ ಯಿಂದ ನನ್ನ ಮೇಲೆ ವಜ್ರಾಯುಧವನ್ನು ಪ್ರಯೋಗಿಸಿದನು. ಆ ವಜ್ರಾ ಯುಧವು ನನ್ನ ಕಂಠವನ್ನು ದಹಿಸಿ ಹೊರಟುಹೋಯಿತು. ಈ ಕಾರಣದಿಂದ ನನಗೆ ಶ್ರೀಕಂಠತ್ವವು ಪ್ರಾಪ್ತವಾಯಿತು. (ಶ್ರೀಕಂಠನೆಂಬ ಹೆಸರಿನಿಂದ ಪ್ರಸಿದ್ಧನಾದೆನು.)”*

---

* ಕಲ್ಪಾಂತರದಲ್ಲಿ ಪರಶಿವನಿಗೆ ನೀಲಕಂಠತ್ವಪ್ರಾಪ್ತಿಯಾದ ಕಾರಣವನ್ನು ಈ ಪ್ರಸಂಗವು ಹೇಳುತ್ತದೆ.

ಪಾರ್ವತಿಯು ಪ್ರಶ್ನಿಸುತ್ತಾಳೆ :

ವಾಹನೇಷ್ವತ್ರ ಸರ್ವೇಷು ಶ್ರೀಮತ್ಸ್ವನ್ಯೇಷು ಸತ್ತಮ ।
ಕಥಂ ಚ ವೃಷಭೋ ದೇವ ವಾಹನತ್ವಮುಪಾಗತಃ ॥೯॥

"ಸತ್ಪುರುಷರಲ್ಲಿ ಶ್ರೇಷ್ಠನಾದವನೇ! ಮಹಾದೇವನೇ! ಈ ಪ್ರಪಂಚದಲ್ಲಿ ಅನೇಕವಿಧವಾದ ಕಾಂತಿಯುಕ್ತವಾದ ವಾಹನಗಳಿರುವಾಗ ನಿನಗೆ ವೃಷಭವು ಹೇಗೆ ವಾಹನವಾಯಿತು?"

ಮಹೇಶ್ವರನು ಹೇಳುತ್ತಾನೆ :

ಸುರಭೀಮಸೃಜದ್ಬ್ರಹ್ಮಾ ದೇವಧೇನುಂ ಪಯೋಮುಚಮ್ ।
ಸಾ ಸೃಷ್ಟಾ ಬಹುಧಾ ಜಾತಾ ಕ್ಷರಮಾಣಾ ಪಯೋಽಮೃತಮ್ ॥

"ಬ್ರಹ್ಮನು ದೇವತೆಗಳಿಗಾಗಿ ಹಾಲುಕೊಡುವ ಸುರಭೀ ಎಂಬ ಧೇನುವನ್ನು ಸೃಷ್ಟಿಸಿದನು. ಹಾಗೆ ಬ್ರಹ್ಮನಿಂದ ಸೃಷ್ಟಿಸಲ್ಪಟ್ಟ ಅಮೃತಮಯವಾದ ಹಾಲನ್ನು ಕರೆಯುತ್ತಿದ್ದ ಆ ಸುರಭಿಯು ನಾನಾರೂಪಗಳನ್ನು ತಾಳಿತು. (ಸುರಭಿಯ ಸಂತಾನವು ಬೆಳೆಯಿತು.)

ಸತ್ಯಾ ವತ್ಸಮುಖೋತ್ಸೃಷ್ಟಃ ಫೇನೋ ಮದ್ಗಾತ್ರಮಾಗತಃ ।
ತತೋ ದಗ್ಧಾ ಮಯಾ ಗಾವೋ ನಾನಾವರ್ಣತ್ವಮಾಗತಾಃ ॥೧೧॥

ಒಮ್ಮೆ ಸುರಭಿಯು ತನ್ನ ಕರುವಿಗೆ ಹಾಲುಣಿಸುತ್ತಿದ್ದಾಗ ಕರುವಿನ ಬಾಯಿಂದ ಹೊರಬಂದ ನೊರೆಯು ನನ್ನ ಮೇಲೆ ಬಿದ್ದಿತು. ಅದರಿಂದ ಕೋಪಗೊಂಡ ನಾನು ಗೋಸಂತತಿಯನ್ನೇ ದಹಿಸಲು ಪ್ರಾರಂಭಿಸಿದೆನು. ನನ್ನ ಕೋಪದಿಂದ ಹಸುಗಳ ಚರ್ಮವು ಸುಟ್ಟು ಅವು ನಾನಾವಿಧವಾದ ಬಣ್ಣಗಳನ್ನು ಹೊಂದಿದುವು.

ತತೋಽಹಂ ಲೋಕಗುರುಣಾ ಶಮಂ ನೀತೋಽರ್ಥವೇದಿನಾ ।
ವೃಷಂ ಚೈನಂ ಧ್ವಜಾರ್ಥಂ ಮೇ ದದೌ ವಾಹನಮೇವ ಚ ॥೧೨॥

ಆ ಸಮಯದಲ್ಲಿ ಈ ವಿಷಯವನ್ನು ತಿಳಿದ ಲೋಕಗುರುವಾದ ಬ್ರಹ್ಮನು ಸಾಂತ್ವನದ ಮಾತುಗಳಿಂದ ನನ್ನನ್ನು ಶಾಂತನನ್ನಾಗಿ ಮಾಡಿದನು. ಧ್ವಜಕ್ಕಾಗಿ ಮತ್ತು ವಾಹನದ ಸಲುವಾಗಿ ವೃಷಭವನ್ನು ನನಗೆ

ಕೊಟ್ಟನು. ಅಂದಿನಿಂದ ನಾನು ವೃಷಭವನ್ನೇ ವಾಹನವನ್ನಾಗಿ ಇಟ್ಟು ಕೊಂಡಿದ್ದೇನೆ. ನನ್ನ ಧ್ವಜವೂ ವೃಷಭಾಂಕಿತವಾಗಿದೆ."

ಉಮೆಯು ಪ್ರಶ್ನಿಸುತ್ತಾಳೆ :

ನಿವಾಸಾ ಬಹುರೂಪಾಸ್ತೇ ದಿವಿ ಸರ್ವಗುಣಾನ್ವಿತಾಃ ।
ತಾಂಶ್ಚ ಸಂತ್ಯಜ್ಯ ಭಗವಞ್ಶ್ಮಶಾನೇ ರಮಸೇ ಕಥಮ್ ॥೧೩॥

"ಪೂಜ್ಯನೇ! ಪಶುಪತಿಯೇ! ನಿನಗೆ ಸ್ವರ್ಗಲೋಕದಲ್ಲಿ ಬಹುರೂಪ ವಾದ, ಸರ್ವಗುಣಗಳಿಂದ ಯುಕ್ತವಾದ ಅನೇಕನಿವಾಸಗಳಿವೆ. ಅವುಗಳೆಲ್ಲ ವನ್ನೂ ಪರಿತ್ಯಜಿಸಿ ನೀನು ಶ್ಮಶಾನದಲ್ಲೇಕೆ ಕ್ರೀಡಿಸುವೆ?

ಕೇಶಾಸ್ಥಿಕಲಿಲೇ ಭೀಮೇ ಕಪಾಲಘಟಸಂಕುಲೇ ।
ಗೃಧ್ರಗೋಮಾಯುಬಹುಲೇ ಚಿತಾಗ್ನಿಶತಸಂಕುಲೇ ॥೧೪॥

ಅಶುಚೌ ಮಾಂಸಕಲಿಲೇ ವಸಾಶೋಣಿತಕರ್ದಮೇ ।
ವಿಕೀರ್ಣಾನ್ತ್ರಾಸ್ಥಿನಿಚಯೇ ಶಿವಾನಾದವಿನಾದಿತೇ ॥೧೫॥

ಶ್ಮಶಾನವಾದರೋ ಕೂದಲುಗಳಿಂದಲೂ, ಮೂಳೆಗಳಿಂದಲೂ ತುಂಬಿರುತ್ತದೆ. ಭಯಂಕರವಾಗಿರುತ್ತದೆ. ಕಪಾಲಗಳಿಂದಲೂ, ಒಡೆದ ಮಡಕೆಗಳಿಂದಲೂ ತುಂಬಿರುತ್ತದೆ. ಬಹುಸಂಖ್ಯಾತವಾದ ರಣಹದ್ದುಗಳೂ, ಗುಳ್ಳೇನರಿಗಳೂ ಅಲ್ಲಿ ಸಂಚರಿಸುತ್ತಿರುತ್ತವೆ. ನೂರಾರು ಚಿತಾಗ್ನಿಗಳು ಉರಿಯುತ್ತಿರುತ್ತವೆ. ಮಾಂಸದಿಂದಲೂ, ವಸಾ-ರಕ್ತಗಳ ಕೆಸರಿನಿಂದಲೂ ಕೂಡಿರುತ್ತದೆ. ನರಗಳೂ, ಮೂಳೆಗಳೂ ಸರ್ವತ್ರ ಹರಡಿರುತ್ತವೆ. ಅಲ್ಲಿ ಗುಳ್ಳೇನರಿಗಳು ಕೂಗಿಕೊಳ್ಳುತ್ತಿರುತ್ತವೆ. ಇಂತಹ ಅಮಂಗಳವಾದ ಅಪವಿತ್ರ ವಾದ ಶ್ಮಶಾನಭೂಮಿಯಲ್ಲಿ ನೀನೇಕೆ ವಾಸಮಾಡುವೆ?"

ಮಹೇಶ್ವರನು ಹೇಳುತ್ತಾನೆ :

ಮೇಧ್ಯಾನ್ವೇಷೀ ಮಹೀಂ ಕೃತ್ಸ್ನಾಂ ವಿಚರಾಮ್ಯನಿಶಂ ಸದಾ ।
ನ ಚ ಮೇಧ್ಯತರಂ ಕಿಂಚಿಚ್ಛ್ಮಶಾನಾದಿಹ ಲಕ್ಷ್ಯತೇ ॥೧೬॥

"ಭಾಮಿನಿಯೇ! ಪವಿತ್ರವಾದ ಸ್ಥಾನವನ್ನು ಹುಡುಕಿಕೊಂಡು ನಾನು ಹಗಲು-ರಾತ್ರಿಗಳಲ್ಲಿ ಸಮಗ್ರವಾದ ಭೂಮಂಡಲವನ್ನೂ ಸುತ್ತುತ್ತಲೇ ಇರು

ವೆನು. ಆದರೆ ಶ್ಮಶಾನಕ್ಕಿಂತಲೂ ಪವಿತ್ರತರವಾದ ಸ್ಥಾನವು ನನ್ನ ಲಕ್ಷ್ಯಕ್ಕೆ ಬೇರೆ ಯಾವುದೂ ಬಿದ್ದಿರುವುದಿಲ್ಲ.

ತೇನ ಮೇ ಸರ್ವವಾಸಾನಾಂ ಶ್ಮಶಾನೇ ರಮತೇ ಮನಃ ।
ನ್ಯಗ್ರೋಧಶಾಖಾಸಂಛನ್ನೇ ನಿರ್ಭುಗ್ನಸ್ರಗ್ವಿಭೂಷಿತೇ ॥೧೭॥

ತತ್ರ ಚೈವ ರಮನ್ತೀಮೇ ಭೂತಸಂಘಾಃ ಶುಚಿಸ್ಮಿತೇ ।
ನ ಚ ಭೂತಗಣೈರ್ದೇವಿ ವಿನಾಹಂ ವಸ್ತುಮುತ್ಸಹೇ ॥೧೮॥

ಆಲದ ಮರದ ರೆಂಬೆಗಳಿಂದ ಆಚ್ಛಾದಿತವಾಗಿರುವ, ತಿರುಚಿಹಾಕಲ್ಪಟ್ಟ ಪುಷ್ಪಹಾರಗಳಿಂದ ವಿಭೂಷಿತವಾಗಿರುವ ಶ್ಮಶಾನನಿವಾಸವೇ ಎಲ್ಲ ನಿವಾಸಗಳಿಗಿಂತಲೂ ನನ್ನ ಮನಸ್ಸಿಗೆ ಬಹಳವಾಗಿ ರುಚಿಸಿದೆ. ಆ ಶ್ಮಶಾನಭೂಮಿಯಲ್ಲಿಯೇ ಈ ನನ್ನ ಭೂತಗಣಗಳೆಲ್ಲವೂ ವಾಸಮಾಡುತ್ತವೆ. ಶುಚಿ ಸ್ಮಿತೆಯೇ! ನಾನು ನನ್ನ ಭೂತಗಣಗಳನ್ನು ಬಿಟ್ಟು ಬೇರೆಲ್ಲೂ ವಾಸಮಾಡಲು ಉತ್ಸುಕನಾಗಿಲ್ಲ.

ಏಷ ವಾಸೋ ಹಿ ಮೇ ಮೇಧ್ಯಃ ಸ್ವರ್ಗೀಯಶ್ಚ ಮತಃ ಶುಭೇ ।
ಪುಣ್ಯಃ ಪರಮಕಶ್ಚೈವ ಮೇಧ್ಯಕಾಮೈರುಪಾಸ್ಯತೇ ॥೧೯॥

ಶುಭಾಂಗಿಯೇ! ಆದುದರಿಂದ ಈ ಶ್ಮಶಾನವೇ ನನಗೆ ಪರಮಪವಿತ್ರವಾದ ಸ್ವರ್ಗಕ್ಕೆ ಸಮಾನವಾದ ವಾಸಸ್ಥಾನವಾಗಿದೆ. ಇದು ಪರಮಪುಣ್ಯಸ್ಥಳವಾಗಿದೆ. ಪವಿತ್ರವಸ್ತುಗಳನ್ನು ಬಯಸುವ ಮನುಷ್ಯರು ಕಾರ್ಯಸಿದ್ಧಿಗಾಗಿ ಈ ಶ್ಮಶಾನಭೂಮಿಯನ್ನೇ ಆಶ್ರಯಿಸುತ್ತಾರೆ." (ವ್ಯಾಖ್ಯಾನಕಾರರು ಶ್ಮಶಾನ ಎಂಬುದಕ್ಕೆ ಮಹಾಶ್ಮಶಾನವೆಂದು ಪ್ರಸಿದ್ಧವಾಗಿರುವ ಕಾಶಿಯೆಂದೂ, ಮೇಧ್ಯ ಎಂಬುದಕ್ಕೆ ಬ್ರಹ್ಮವೆಂದೂ ವ್ಯಾಖ್ಯಾನಮಾಡಿರುತ್ತಾರೆ. **ಮೇಧ್ಯಂ- ಬ್ರಹ್ಮ ತತ್ಪ್ರಾಪ್ತಿಕಾಮೈಃ ಇದಂ ಶ್ಮಶಾನಂ ಉಪಾಸ್ಯತೇ**–ಬ್ರಹ್ಮತ್ವವನ್ನು ಹೊಂದಲು ಇಚ್ಛಿಸುವವರು ಮಹಾಶ್ಮಶಾನವಾದ ಕಾಶೀಕ್ಷೇತ್ರವನ್ನು ಆಶ್ರಯಿಸುತ್ತಾರೆ.)

ಉಮೆಯು ಹೇಳುತ್ತಾಳೆ :

"ಪೂಜ್ಯನೇ! ಸರ್ವಪ್ರಾಣಿಗಳಿಗೂ ಈಶನೇ! ಧರ್ಮವನ್ನು ತಿಳಿದಿರು

ವವರಲ್ಲಿ ಶ್ರೇಷ್ಠನಾದವನೇ! ಪಿನಾಕಪಾಣಿಯೇ! ವರದನೇ! ನನ್ನ ಮನಸ್ಸಿನಲ್ಲಿ ಒಂದು ಮಹಾಸಂಶಯವುಂಟಾಗಿದೆ.

ಪ್ರಭುವೇ! ಅರಿಂದಮನೇ! ಇಲ್ಲಿ ಉಪಸ್ಥಿತರಾಗಿರುವ ಮುನಿಗಳು ಯಾವಾಗಲೂ ತಪಸ್ಸಿನಲ್ಲಿಯೇ ನಿರತರಾಗಿರುತ್ತಾರೆ. ನಾನಾವಿಧವಾದ ಆಕೃತಿಗಳುಳ್ಳ ಇವರೆಲ್ಲರೂ ತಪಸ್ವಿಗಳ ವೇಷಗಳನ್ನು ಧರಿಸಿ ಲೋಕದಲ್ಲಿ ಸಂಚರಿಸುತ್ತಿರುತ್ತಾರೆ. ಇವರೆಲ್ಲರ ಹಿತದ ಸಲುವಾಗಿಯೂ ಮತ್ತು ನನಗೆ ಪ್ರಿಯವನ್ನುಂಟುಮಾಡುವ ಸಲುವಾಗಿಯೂ ನೀನು ನನ್ನ ಈ ಸಂದೇಹವನ್ನು ಪರಿಹರಿಸುವ ಕೃಪೆಮಾಡು.

ಧರ್ಮಃ ಕಿಂಲಕ್ಷಣಃ ಪ್ರೋಕ್ತಃ ಕಥಂ ವಾ ಚರಿತುಂ ನರೈಃ ।
ಶಕ್ಯೋ ಧರ್ಮಮವಿನ್ದದ್ಭಿರ್ಧರ್ಮಜ್ಞ ವದ ಮೇ ಪ್ರಭೋ ॥೨೩॥

ಪ್ರಭುವೇ! ಧರ್ಮಜ್ಞನೇ! ಧರ್ಮಕ್ಕೆ ಯಾವ ಲಕ್ಷಣವು ಹೇಳಲ್ಪಟ್ಟಿದೆ? ಧರ್ಮವನ್ನು ತಿಳಿಯದವರು ಧರ್ಮವನ್ನು ಆಚರಿಸುವುದು ಹೇಗೆ? ಈ ವಿಷಯವನ್ನು ನನಗೆ ಹೇಳು."

ನಾರದರು ಹೇಳುತ್ತಾರೆ :

ಪಾರ್ವತಿಯು ಮಹೇಶ್ವರನನ್ನು ಈ ರೀತಿಯಲ್ಲಿ ಪ್ರಶ್ನಿಸಲು, ಅಲ್ಲಿ ನೆರೆದಿದ್ದ ಎಲ್ಲ ಮುನಿಗಳೂ ಪಾರ್ವತಿಯನ್ನು ಋಗ್ವೇದಮಂತ್ರಗಳಿಂದ ಭೂಷಿತವಾದ ವಾಣಿಯಿಂದಲೂ ಉತ್ತಮವಾದ ಮತ್ತು ಅರ್ಥಯುಕ್ತವಾದ ಸ್ತೋತ್ರಗಳಿಂದಲೂ ಸ್ತುತಿಸಿದರು. ಬಳಿಕ ಮಹೇಶ್ವರನು ಪಾರ್ವತಿಗೆ ಉತ್ತರಿಸಿದನು :

ಅಹಿಂಸಾ ಸತ್ಯವಚನಂ ಸರ್ವಭೂತಾನುಕಮ್ಪನಮ್ ।
ಶಮೋ ದಾನಂ ಯಥಾಶಕ್ತಿ ಗಾರ್ಹಸ್ಥ್ಯೋ ಧರ್ಮ ಉತ್ತಮಃ ॥೨೫॥

"ದೇವಿ! ಯಾವುದೇ ಪ್ರಾಣಿಗಾದರೂ ಹಿಂಸೆಕೊಡದಿರುವುದು ; ಸತ್ಯವನ್ನೇ ಹೇಳುವುದು ; ಎಲ್ಲ ಪ್ರಾಣಿಗಳ ವಿಷಯದಲ್ಲಿಯೂ ಅನುಕಂಪದಿಂದಿರುವುದು ; ಮನಸ್ಸು ಮತ್ತು ಇಂದ್ರಿಯಗಳನ್ನು ಹತೋಟಿಯಲ್ಲಿಟ್ಟುಕೊಳ್ಳು

ವುದು ; ಯಥಾಶಕ್ತಿ ದಾನಮಾಡುವುದು–ಇವು ಗೃಹಸ್ಥಾಶ್ರಮದ ಉತ್ತಮ ಧರ್ಮಗಳಾಗಿವೆ.

ಪರದಾರೇಷ್ವಸಂಸರ್ಗೋ ನ್ಯಾಸಸ್ತ್ರೀಪರಿರಕ್ಷಣಮ್ ।
ಅದತ್ತಾದಾನವಿರಮೋ ಮಧುಮಾಂಸಸ್ಯ ವರ್ಜನಮ್ ॥೨೬॥

ಏಷ ಪಞ್ಚವಿಧೋ ಧರ್ಮೋ ಬಹುಶಾಖಃ ಸುಖೋದಯಃ ।
ದೇಹಿಭಿರ್ಧರ್ಮಪರಮೈಶ್ಚರ್ತವ್ಯೋ ಧರ್ಮಸಮ್ಭವಃ ॥೨೭॥

ಪರಸ್ತ್ರೀಯರನ್ನು ಸಂಪರ್ಕಿಸದೇ ಇರುವುದು. ರಕ್ಷಣಾರ್ಥವಾಗಿ ಬೇರೊಬ್ಬರಿಂದ ನ್ಯಾಸರೂಪವಾಗಿ ಇಟ್ಟ ವಸ್ತುಗಳನ್ನೂ ಸ್ತ್ರೀಯನ್ನೂ ಸಂರಕ್ಷಿಸುವುದು. ದಾನವಾಗಿ ಕೊಡದಿರುವ ವಸ್ತುಗಳನ್ನು ತೆಗೆದುಕೊಳ್ಳದೇ ಇರುವುದು ಮತ್ತು ಮದ್ಯವನ್ನೂ ಮಾಂಸವನ್ನೂ ಪರಿತ್ಯಾಗಮಾಡುವುದು– ಈ ಐದು ಪ್ರಕಾರವಾಗಿರುವ ಧರ್ಮವು ಸುಖವನ್ನುಂಟುಮಾಡುವುದು. ಈ ಧರ್ಮಕ್ಕೆ ಅನೇಕಶಾಖೆಗಳಿವೆ. (ಈ ಐದು ಮುಖ್ಯಧರ್ಮಗಳಿಂದ ಅನೇಕವಾದ ಉಪಧರ್ಮಗಳು ಬೆಳೆದಿವೆ.) ಇದು ಪುಣ್ಯಪ್ರಾಪಕವಾದುದು. ಧರ್ಮವನ್ನೇ ಪರಮಶ್ರೇಯಸ್ಕರವೆಂದು ತಿಳಿದಿರುವ ಮನುಷ್ಯರು ಪಂಚಧರ್ಮಗಳಿಂದ ಯುಕ್ತವಾದ ಈ ಧರ್ಮವನ್ನು ಅನುಷ್ಠಾನಮಾಡಬೇಕು.”

ಉಮೆಯು ಹೇಳುತ್ತಾಳೆ :

ಭಗವನ್ಸಂಶಯಃ ಪೃಷ್ಟಸ್ತನ್ಮೇ ಶಂಸಿತುಮರ್ಹಸಿ ।
ಚಾತುರ್ವರ್ಣ್ಯಸ್ಯ ಯೋ ಧರ್ಮಃ ಸ್ವೇ ಸ್ವೇ ವರ್ಣೇ ಗುಣಾವಹಃ ॥

“ಪೂಜ್ಯನೇ! ನನಗೆ ಮತ್ತೂ ಒಂದು ಸಂಶಯವು ಉಂಟಾಗಿದೆ. ಈ ನನ್ನ ಸಂಶಯವನ್ನು ನಿವಾರಿಸುವ ಕೃಪೆಮಾಡು. ಬ್ರಹ್ಮ-ಕ್ಷತ್ರಾದಿ ನಾಲ್ಕು ವರ್ಣದವರಿಗೂ ಇರುವ ಧರ್ಮಗಳಲ್ಲಿ ಯಾವ ವಿಶೇಷಧರ್ಮವು ಆಯಾ ವರ್ಣದವರಿಗೆ ಶ್ರೇಯಸ್ಸನ್ನು ಉಂಟುಮಾಡುತ್ತದೆ?

ಬ್ರಾಹ್ಮಣೇ ಕೀದೃಶೋ ಧರ್ಮಃ ಕ್ಷತ್ರಿಯೇ ಕೀದೃಶೋಽಭವತ್ ।
ವೈಶ್ಯೇ ಕಿಂಲಕ್ಷಣೋ ಧರ್ಮಃ ಶೂದ್ರೇ ಕಿಂಲಕ್ಷಣೋ ಭವೇತ್ ॥

ಬ್ರಾಹ್ಮಣನಲ್ಲಿರುವ ಧರ್ಮವು ಯಾವ ಲಕ್ಷಣದಿಂದ ಕೂಡಿದೆ?

ಕ್ಷತ್ರಿಯನಲ್ಲಿರುವ ಧರ್ಮವು ಎಂತಹುದು? ವೈಶ್ಯನಲ್ಲಿರುವ ಮತ್ತು ಶೂದ್ರನಲ್ಲಿರುವ ಧರ್ಮವು ಯಾವ ಲಕ್ಷಣವನ್ನು ಹೊಂದಿದೆ?"

ಮಹೇಶ್ವರನು ಹೇಳುತ್ತಾನೆ :

ನ್ಯಾಯತಸ್ತೇ ಮಹಾಭಾಗೇ ಸಂಶಯಃ ಸಮುದೀರಿತಃ ।
ಭೂಮಿದೇವಾ ಮಹಾಭಾಗಾಃ ಸದಾ ಲೋಕೇ ದ್ವಿಜಾತಯಃ ॥೩೦॥

"ಮಹಾಭಾಗ್ಯಶಾಲಿನಿಯೇ! ನೀನು ನ್ಯಾಯವಾದ ರೀತಿಯಲ್ಲಿಯೇ ನಿನ್ನ ಸಂಶಯವನ್ನು ವ್ಯಕ್ತಪಡಿಸಿರುವೆ. ಮಹಾಭಾಗ್ಯಶಾಲಿಗಳಾದ ಬ್ರಾಹ್ಮಣರು ಈ ಲೋಕದಲ್ಲಿ ಭೂದೇವತೆಗಳೆಂದೇ ಕರೆಯಲ್ಪಡುತ್ತಾರೆ.

ಉಪವಾಸಃ ಸದಾ ಧರ್ಮೋ ಬ್ರಾಹ್ಮಣಸ್ಯ ನ ಸಂಶಯಃ ।
ಸ ಹಿ ಧರ್ಮಾರ್ಥಸಮ್ಪನ್ನೋ ಬ್ರಹ್ಮಭೂಯಾಯ ಕಲ್ಪತೇ ॥೩೧॥

ಬ್ರಾಹ್ಮಣನಿಗೆ ಉಪವಾಸಧರ್ಮವೇ (ಪರಮಾತ್ಮನ ಸಮೀಪದಲ್ಲಿ ವಾಸಮಾಡುವ ಧರ್ಮವೇ) ಸರ್ವಕಾಲದಲ್ಲಿಯೂ ಆಚರಿಸಲ್ಪಡಬೇಕಾದ ಧರ್ಮವೆಂಬುದರಲ್ಲಿ ಸಂಶಯವೇ ಇಲ್ಲ. ಧರ್ಮಾರ್ಥಸಂಪನ್ನನಾದ ಅವನೇ ಅವಸಾನಾನಂತರದಲ್ಲಿ ಬ್ರಹ್ಮಭಾವವನ್ನು ಹೊಂದುತ್ತಾನೆ*

ತಸ್ಯ ಧರ್ಮಕ್ರಿಯಾ ದೇವಿ ಬ್ರಹ್ಮಚರ್ಯಾ ಚ ನ್ಯಾಯತಃ ।
ವ್ರತೋಪನಯನಂ ಚೈವ ದ್ವಿಜೋ ಯೇನೋಪಪದ್ಯತೇ ॥೩೨॥

ದೇವಿ! ಬ್ರಾಹ್ಮಣನಿಗೆ ಧರ್ಮಾನುಷ್ಠಾನವೂ ಹೇಳಲ್ಪಟ್ಟಿದೆ. ನ್ಯಾಯೋಚಿತವಾದ ಬ್ರಹ್ಮಚರ್ಯದ ಪಾಲನೆಯೂ ಹೇಳಲ್ಪಟ್ಟಿದೆ. ವ್ರತಗಳೂ ಮತ್ತು ಉಪನಯನಾದಿಗಳೂ ಬ್ರಾಹ್ಮಣನಿಗೆ ಹೇಳಲ್ಪಟ್ಟಿವೆ. ಇವುಗಳಿಂದಲೇ ಬ್ರಾಹ್ಮಣನು ದ್ವಿಜನೆನಿಸಿಕೊಳ್ಳುತ್ತಾನೆ.

---

* ಪುರಾಣದ ಉಪವಾಸನಿರುಕ್ತಿಯೂ ಈ ಸಂದರ್ಭಕ್ಕೆ ಹೊಂದಿಕೊಳ್ಳುತ್ತದೆ.

ಉಪವಾಸವೆಂಬುದಕ್ಕೆ ವ್ಯಾಖ್ಯಾನಕಾರರು ಸಮಯೋಚಿತವಾಗಿ ಇಂದ್ರಿಯ ಸಂಯಮ–ಎಂದು ವ್ಯಾಖ್ಯಾನಿಸಿದ್ದಾರೆ. ಬ್ರಹ್ಮವಸ್ತುವಿನ ಸಮೀಪದಲ್ಲಿರುವವನು ಅಥವಾ ಯಾವಾಗಲೂ ಬ್ರಹ್ಮನಿಧಿಧ್ಯಾಸನದಲ್ಲಿಯೇ ಇರುವವನು–ಎಂಬ ಅರ್ಥವು ಉತ್ತರಾರ್ಧಕ್ಕೆ ಹೊಂದಿಕೊಳ್ಳುತ್ತದೆ. ಉಪಾವೃತಸ್ಯ ಪಾಪೇಭ್ಯೋ ಯಶ್ಚ ವಾಸೋ ಗುಣೈಃ ಸಹ । ಉಪವಾಸಃ ಸ ವಿಜ್ಞೇಯಃ ಸರ್ವಭೋಗವಿವರ್ಜಿತಃ ॥ ಅಂದರೆ

ಗುರುದೈವತಪೂಜಾರ್ಥಂ ಸ್ವಾಧ್ಯಾಯಾಭ್ಯಸನಾತ್ಮಕಃ ।
ದೇಹಿಭಿರ್ಧರ್ಮಪರಮೈಶ್ಚರ್ತವ್ಯೋ ಧರ್ಮಸಮ್ಭವಃ ॥೩೩॥

ಧರ್ಮದಲ್ಲಿ ಪರಮನಿಷ್ಠೆಯುಳ್ಳ ಮನುಷ್ಯರು ಗುರುಜನರ ಮತ್ತು ದೇವತೆಗಳ ಪೂಜಾರ್ಥವಾಗಿ ಧರ್ಮಕ್ಕೆ ಮೂಲವಾದ ವೇದಾಭ್ಯಾಸವೆಂಬ ಧರ್ಮವನ್ನೇ ಆಚರಿಸಬೇಕು."

ಉಮೆಯು ಹೇಳುತ್ತಾಳೆ :

ಭಗವನ್ಸಂಶಯೋ ಮೇಽಸ್ತಿ ತನ್ಮೇ ವ್ಯಾಖ್ಯಾತುಮರ್ಹಸಿ ।
ಚಾತುರ್ವರ್ಣ್ಯಸ್ಯ ಧರ್ಮಂ ವೈ ನೈಪುಣ್ಯೇನ ಪ್ರಕೀರ್ತಯ ॥೩೪॥

"ಪೂಜ್ಯನೇ! ಈಗಲೂ ನನ್ನ ಮನಸ್ಸಿನಲ್ಲಿ ಸಂಶಯವಿದ್ದೇ ಇದೆ. ಅದನ್ನು ವಿವರಿಸಿ ಹೇಳುವ ಕೃಪೆಮಾಡು. ನಾಲ್ಕು ವರ್ಣಗಳ ಧರ್ಮಗಳನ್ನು ಕುಶಲತೆಯಿಂದ (ನನ್ನ ಮನಸ್ಸಿಗೆ ಹಿಡಿಸುವ ರೀತಿಯಲ್ಲಿ) ಹೇಳು."

ಮಹೇಶ್ವರನು ಹೇಳುತ್ತಾನೆ :

ರಹಸ್ಯಶ್ರವಣಂ ಧರ್ಮೋ ವೇದವ್ರತನಿಷೇವಣಮ್ ।
ಅಗ್ನಿಕಾರ್ಯಂ ತಥಾ ಧರ್ಮೋ ಗುರುಕಾರ್ಯಪ್ರಸಾಧನಮ್ ॥೩೫॥

"ದೇವಿ! ಧರ್ಮದ ರಹಸ್ಯವನ್ನು ಕೇಳುವುದು, ಆಯಾ ಕಾಲಗಳಲ್ಲಿ ಪ್ರಾಜಾಪತ್ಯಾದಿ ವೇದವ್ರತಗಳನ್ನು ಪರಿಪಾಲಿಸುವುದು, ಸಮಿದಾಧಾನವನ್ನು ಮಾಡುವುದು, ಗುರುಗಳು ಹೇಳಿದ ಕಾರ್ಯವನ್ನು ಮಾಡಿ ಅವರನ್ನು ಸಂತೋಷಗೊಳಿಸುವುದು–ಇವು ಬ್ರಹ್ಮಚರ್ಯದ ಧರ್ಮಗಳು.

ಭೈಕ್ಷಚರ್ಯಾ ಪರೋ ಧರ್ಮೋ ನಿತ್ಯಯಜ್ಞೋಪವೀತಿತಾ ।
ನಿತ್ಯಂ ಸ್ವಾಧ್ಯಾಯಿತಾ ಧರ್ಮೋ ಬ್ರಹ್ಮಚರ್ಯಾಶ್ರಮಸ್ತಥಾ ॥೩೬॥

ಪಾಪಕಾರ್ಯಗಳನ್ನು ಬಿಟ್ಟು–ಪ್ರಾಣಿದಯೆ, ಸಹನೆ, ದ್ವೇಷಾಸೂಯೆಗಳ ಪರಿತ್ಯಾಗ, ಅಕಾರ್ಪಣ್ಯ,ನಿಃಸ್ಪೃಹತೆ–ಇತ್ಯಾದಿ ಗುಣಗಳನ್ನು ಹೊಂದಿ ಸಮಸ್ತವಾದ ಭೋಗವಸ್ತುಗಳನ್ನೂ ತ್ಯಾಗಮಾಡುವುದನ್ನು ಉಪವಾಸವೆಂದು ತಿಳಿಯಬೇಕು–ಎಂಬ ಭವಿಷ್ಯಪುರಾಣದ ನಿರುಕ್ತಿಯೂ ಈ ಸಂದರ್ಭಕ್ಕೆ ಹೊಂದಿಕೊಳ್ಳುತ್ತದೆ.

ಬ್ರಹ್ಮಚರ್ಯದಲ್ಲಿರುವವನಿಗೆ ಭಿಕ್ಷಾಟನೆಯೇ ಪರಮಶ್ರೇಷ್ಠವಾದ ಧರ್ಮವಾಗಿದೆ. (ಭಿಕ್ಷಾಟನೆಯನ್ನು ಮಾಡಿ ಸಂಗ್ರಹಿಸಿದ ಅನ್ನವನ್ನು ಗುರುಗಳಿಗೆ ಸಮರ್ಪಿಸಿ ಅವರ ಅನುಮತಿಯನ್ನು ಪಡೆದು ತಿನ್ನಬೇಕು.) ನಿತ್ಯವೂ ಯಜ್ಞೋಪವೀತಿಯಾಗಿರಬೇಕು. ನಿತ್ಯವೂ ಅಧ್ಯಯನಶೀಲನಾಗಿರಬೇಕು. ಇವು ಬ್ರಹ್ಮಚರ್ಯಾಶ್ರಮೋಕ್ತವಾದ ಧರ್ಮಗಳಾಗಿವೆ.

ಗುರುಣಾ ಚಾಭ್ಯನುಜ್ಞಾತಃ ಸಮಾವರ್ತೇತ ವೈ ದ್ವಿಜಃ ।
ವಿನ್ದೇತಾನನ್ತರಂ ಭಾರ್ಯಾಮನುರೂಪಾಂ ಯಥಾವಿಧಿ ॥೩೭॥

ಬ್ರಹ್ಮಚರ್ಯಾಶ್ರಮದ ಅವಧಿಯು (ವಿದ್ಯಾಭ್ಯಾಸವು) ಮುಗಿದನಂತರ ದ್ವಿಜನು ಗುರುವಿನ ಅನುಮತಿಯನ್ನು ಪಡೆದು ಸಮಾವರ್ತನವನ್ನು ಮಾಡಿಕೊಳ್ಳಬೇಕು. ಅನಂತರ ಯಥಾವಿಧಿಯಾಗಿ ಅನುರೂಪಳಾದ ಭಾರ್ಯೆಯನ್ನು ಪಡೆಯಬೇಕು.

ಶೂದ್ರಾನ್ನವರ್ಜನಂ ಧರ್ಮಸ್ತಥಾ ಸತ್ಪಥಸೇವನಮ್ ।
ಧರ್ಮೋ ನಿತ್ಯೋಪವಾಸಿತ್ವಂ ಬ್ರಹ್ಮಚರ್ಯಂ ತಥೈವ ಚ ॥೩೮॥

ಶೂದ್ರಾನ್ನವನ್ನು ಪರಿತ್ಯಜಿಸುವುದು ಬ್ರಾಹ್ಮಣರ ಧರ್ಮವಾಗಿದೆ. ಸತ್ಪುರುಷರ ಮಾರ್ಗವನ್ನೇ ಆಶ್ರಯಿಸಬೇಕು. ನಿತ್ಯೋಪವಾಸಿಯಾಗಿರ ಬೇಕು. (ಯುಕ್ತಾಹಾರ-ವಿಹಾರನಾಗಿರಬೇಕು.) ಬ್ರಹ್ಮಚರ್ಯದಿಂದಿರಬೇಕು.* ಇದು ಗೃಹಸ್ಥನ ಧರ್ಮವಾಗಿದೆ.

ಆಹಿತಾಗ್ನಿರಧೀಯಾನೋ ಜುಹ್ವಾನಃ ಸಂಯತೇನ್ದ್ರಿಯಃ ।
ವಿಘಸಾಶೀ ಯತಾಹಾರೋ ಗೃಹಸ್ಥಃ ಸತ್ಯವಾಕ್ಶುಚಿಃ ॥೩೯॥

ಗೃಹಸ್ಥನು ಜಿತೇಂದ್ರಿಯನಾಗಿ ಅಗ್ನಿಯನ್ನು ಸಿದ್ಧಮಾಡಿಕೊಂಡು ಅಗ್ನಿ ಹೋತ್ರವನ್ನು ಮಾಡುತ್ತಿರಬೇಕು. ವಿಘಸಾಶಿಯಾಗಿರಬೇಕು. (ಎಲ್ಲರೂ ಊಟಮಾಡಿದನಂತರ ಯಜ್ಞಶೇಷವನ್ನು ಊಟಮಾಡಬೇಕು.) ನಿಯತ

---

* ಗೃಹಸ್ಥನ ದೃಷ್ಟಿಯಿಂದ ಬ್ರಹ್ಮಚರ್ಯ : ತನ್ನ ಪತ್ನಿಯಲ್ಲಿ ಮಾತ್ರವೇ ರತಿಯನ್ನು ಹೊಂದಿ ಋತುಕಾಲದಲ್ಲಿ ಮಾತ್ರ ಆಕೆಯ ಸಮಾಗಮಮಾಡುತ್ತಾ ಬ್ರಹ್ಮನಿಷ್ಠನಾಗಿರುವ ಗೃಹಸ್ಥನನ್ನು ಶಾಸ್ತ್ರಗಳು ಬ್ರಹ್ಮಚಾರೀ ಎಂದೇ ಕರೆಯುತ್ತವೆ.

ವಾದ ಆಹಾರವುಳ್ಳವನಾಗಬೇಕು. ಸತ್ಯವನ್ನೇ ಹೇಳಬೇಕು. ಪರಿಶುದ್ಧನಾಗಿರಬೇಕು.

ಅತಿಥಿವ್ರತತಾ ಧರ್ಮೋ ಧರ್ಮಸ್ತ್ರೇತಾಗ್ನಿಧಾರಣಮ್ ।
ಇಷ್ಟೀಶ್ಚ ಪಶುಬನ್ಧಾಂಶ್ಚ ವಿಧಿಪೂರ್ವಂ ಸಮಾಚರೇತ್ ॥೪೦॥

ಅತಿಥಿಗಳನ್ನು ಸತ್ಕರಿಸುವುದೂ, ಗಾರ್ಹಪತ್ಯಾದಿ ಅಗ್ನಿತ್ರಯವನ್ನು ರಕ್ಷಿಸುವುದೂ–ಗೃಹಸ್ಥನ ಧರ್ಮವಾಗಿದೆ. ಗೃಹಸ್ಥನು ಇಷ್ಟಿಗಳನ್ನೂ–ಪಶು ಬಂಧಗಳನ್ನೂ ವಿಧಿಪೂರ್ವಕವಾಗಿ ಆಚರಿಸಬೇಕು.

ಯಜ್ಞಶ್ಚ ಪರಮೋ ಧರ್ಮಸ್ತಥಾಹಿಂಸಾ ಚ ದೇಹಿಷು ।
ಅಪೂರ್ವಭೋಜನಂ ಧರ್ಮೋ ವಿಘಸಾಶಿತ್ವಮೇವ ಚ ॥೪೧॥

ಯಜ್ಞಗಳನ್ನು ಮಾಡುವುದು, ಯಾವುದೇ ಪ್ರಾಣಿಯನ್ನಾದರೂ ಹಿಂಸಿಸದೇ ಇರುವುದು ಪರಮೋತ್ಕೃಷ್ಟವಾದ ಧರ್ಮವಾಗಿದೆ. ಮೊದಲು ಭೋಜನವನ್ನು ಮಾಡದಿರುವುದೂ, ಅತಿಥಿಗಳು-ಬಂಧುಗಳು-ಸೇವಕರು–ಈ ಎಲ್ಲರಿಗೂ ಭೋಜನವಾದನಂತರ ಯಜ್ಞಹವಿಶ್ಶೇಷವನ್ನು ಭೋಜನ ಮಾಡುವುದು ಗೃಹಸ್ಥನ ಧರ್ಮವಾಗಿದೆ.

ಭುಕ್ತೇ ಪರಿಜನೇ ಪಶ್ಚಾದ್ಭೋಜನಂ ಧರ್ಮ ಉಚ್ಯತೇ ।
ಬ್ರಾಹ್ಮಣಸ್ಯ ಗೃಹಸ್ಥಸ್ಯ ಶ್ರೋತ್ರಿಯಸ್ಯ ವಿಶೇಷತಃ ॥೪೨॥

ಬ್ರಾಹ್ಮಣಗೃಹಸ್ಥನಿಗೆ–ಅದರಲ್ಲಿಯೂ ವಿಶೇಷವಾಗಿ ಶ್ರೋತ್ರಿಯನಿಗೆ–ಪರಿಜನರು ಊಟಮಾಡಿದನಂತರವೇ ಊಟಮಾಡುವುದು ಧರ್ಮವೆಂದು ಹೇಳಲ್ಪಟ್ಟಿದೆ.

ದಮ್ಪತ್ಯೋಃ ಸಮಶೀಲತ್ವಂ ಧರ್ಮಃ ಸ್ಯಾದ್ಗೃಹಮೇಧಿನಃ ।
ಗೃಹ್ಯಾಣಾಂ ಚೈವ ದೇವಾನಾಂ ನಿತ್ಯಪುಷ್ಪಬಲಿಕ್ರಿಯಾ ।
ನಿತ್ಯೋಪಲೇಪನಂ ಧರ್ಮಸ್ತಥಾ ನಿತ್ಯೋಪವಾಸಿತಾ ॥೪೩॥

ಗೃಹಸ್ಥಾಶ್ರಮದಲ್ಲಿ ಪತಿ-ಪತ್ನಿಯರ ಸ್ವಭಾವ-ಶೀಲಗಳು ಒಂದೇ ಆಗಿರುವುದು ಧರ್ಮವಾಗಿದೆ. ಗೃಹದೇವತೆಗಳನ್ನೂ ಮತ್ತು ದೇವತೆಗಳನ್ನೂ ಪುಷ್ಪಾದಿಗಳಿಂದ ಪೂಜಿಸುವುದೂ, ಬಲಿಹರಣವನ್ನಿಡುವುದೂ, ಅನುದಿನವೂ

ಮನೆಯನ್ನು ಗುಡಿಸಿ-ಸಾರಿಸಿ ಚೊಕ್ಕಟವಾಗಿಡುವುದೂ, ನಿತ್ಯವೂ ವ್ರತಾನುಷ್ಠಾನಾದಿಗಳಲ್ಲಿ ತೊಡಗಿರುವುದೂ, ಉಕ್ತಕಾಲಗಳಲ್ಲಿ ಉಪವಾಸಮಾಡುವುದೂ ಗೃಹಸ್ಥನ ಧರ್ಮವಾಗಿದೆ.

ಸುಸಂಮೃಷ್ಟೋಪಲಿಪ್ತೇ ಚ ಸಾಜ್ಯಧೂಮೋ ಭವೇದ್ಗೃಹೇ ।
ಏಷ ದ್ವಿಜಜನೇ ಧರ್ಮೋ ಗಾರ್ಹಸ್ಥ್ಯೋ ಲೋಕಧಾರಣಃ ॥೪೪॥

ದ್ವಿಜಾನಾಂ ಚ ಸತಾಂ ನಿತ್ಯಂ ಸದೈವೈಷ ಪ್ರವರ್ತತೇ ॥೪೫॥

ಗುಡಿಸಿ-ಸಾರಿಸಿ ಸ್ವಚ್ಛಗೊಳಿಸಿದ ಮನೆಯಲ್ಲಿ ಆಜ್ಯಾಹುತಿಗಳಿಂದ ಉದ್ಭೂತವಾದ ಹೊಗೆಯು ಸರ್ವದಾ ವ್ಯಾಪಿಸಿರಬೇಕು. (ಸರ್ವಕಾಲದಲ್ಲಿಯೂ ಮನೆಯಲ್ಲಿ ಹೋಮ-ಹವನಾದಿಗಳು ನಡೆಯುತ್ತಿರಬೇಕು.) ಬ್ರಾಹ್ಮಣಜನರಲ್ಲಿರುವ ಈ ಧರ್ಮವು ಲೋಕವನ್ನೇ ಧರಿಸಿರುವ ಧರ್ಮವಾಗಿರುತ್ತದೆ.

ಪಾರ್ವತೀದೇವಿಯೇ! ಕ್ಷತ್ರಿಯರಿಗೆ ಸಂಬಂಧಿಸಿದಂತೆ ನನ್ನಿಂದ ಯಾವ ಧರ್ಮಗಳು ಹಿಂದೆ ಹೇಳಲ್ಪಟ್ಟಿದ್ದುವೋ–ಅವನ್ನೇ ಈಗ ಪುನಃ ಹೇಳುತ್ತೇನೆ. ಏಕಾಗ್ರಚಿತ್ತಳಾಗಿ ಆ ಕ್ಷತ್ರಧರ್ಮವನ್ನು ಕೇಳು.

ಕ್ಷತ್ರಿಯಸ್ಯ ಸ್ಮೃತೋ ಧರ್ಮಃ ಪ್ರಜಾಪಾಲನಮಾದಿತಃ ।
ನಿರ್ದಿಷ್ಟಫಲಭೋಕ್ತಾ ಹಿ ರಾಜಾ ಧರ್ಮೇಣ ಯುಜ್ಯತೇ ॥೪೭॥

ಕ್ಷತ್ರಿಯನಿಗೆ ಎಲ್ಲಕ್ಕಿಂತಲೂ ಮುಖ್ಯವಾದ ಧರ್ಮವೆಂದರೆ ಪ್ರಜಾಪಾಲನೆ. ಪ್ರಜೆಗಳಿಂದ ಕ್ಲೃಪ್ತವಾದ ಆರನೆಯ ಒಂದು ಭಾಗ ಆದಾಯವನ್ನು ರಾಜನು ತೆಗೆದುಕೊಳ್ಳುವನಲ್ಲವೇ? ಅದಕ್ಕೆ ಪ್ರತಿಯಾಗಿ ಪ್ರಜೆಗಳನ್ನು ರಕ್ಷಿಸುವ ರಾಜನು ಧರ್ಮದಿಂದ ಯುಕ್ತನಾಗುತ್ತಾನೆ. (ಧಾರ್ಮಿಕನಾದ ರಾಜನಾಗುತ್ತಾನೆ.)

ಪ್ರಜಾಃ ಪಾಲಯತೇ ಯೋ ಹಿ ಧರ್ಮೇಣ ಮನುಜಾಧಿಪಃ ।
ತಸ್ಯ ಧರ್ಮಾರ್ಜಿತಾ ಲೋಕಾಃ ಪ್ರಜಾಪಾಲನಸಂಚಿತಾಃ ॥೪೮॥

ಯಾವ ರಾಜನು ಧರ್ಮದಿಂದ ಪ್ರಜೆಗಳನ್ನು ಪರಿಪಾಲಿಸುವನೋ

ಅವನು ಆ ಪ್ರಜಾಪಾಲನಧರ್ಮದ ಪ್ರಭಾವದಿಂದ ಉತ್ತಮಲೋಕಗಳನ್ನು ಪಡೆದುಕೊಳ್ಳುತ್ತಾನೆ.

ತಸ್ಯ ರಾಜ್ಞಃ ಪರೋ ಧರ್ಮೋ ದಮಃ ಸ್ವಾಧ್ಯಾಯ ಏವ ಚ ।
ಅಗ್ನಿಹೋತ್ರಪರಿಸ್ಪನ್ದೋ ದಾನಾಧ್ಯಯನಮೇವ ಚ ॥೪೯॥

ಯಜ್ಞೋಪವೀತಧರಣಂ ಯಜ್ಞೋ ಧರ್ಮಕ್ರಿಯಾಸ್ತಥಾ ।
ಭೃತ್ಯಾನಾಂ ಭರಣಂ ಧರ್ಮಃ ಕೃತೇ ಕರ್ಮಣ್ಯಮೋಘತಾ ॥೫೦॥

ಸಮ್ಯಗ್ದಣ್ಡೇ ಸ್ಥಿತಿರ್ಧರ್ಮೋ ಧರ್ಮೋ ವೇದಕ್ರತುಕ್ರಿಯಾಃ ।
ವ್ಯವಹಾರಸ್ಥಿತಿರ್ಧರ್ಮಃ ಸತ್ಯವಾಕ್ಯರತಿಸ್ತಥಾ ॥೫೧॥

ಇಂದ್ರಿಯಸಂಯಮ, ಸ್ವಾಧ್ಯಾಯ, ಅಗ್ನಿಹೋತ್ರಕರ್ಮ, ದಾನ, ಅಧ್ಯಯನ, ಯಜ್ಞೋಪವೀತಧಾರಣ, ಯಜ್ಞಾನುಷ್ಠಾನ, ಧರ್ಮಕಾರ್ಯಕರಣ, ಭೃತ್ಯರ ಭರಣ-ಪೋಷಣೆಗಳು, ಕೆಲಸವನ್ನು ಮಾಡಿದವನಿಗೆ ತಕ್ಕ ವೇತನವನ್ನು ಕೊಡುವುದು, ಅಪರಾಧಕ್ಕೆ ಅನುಗುಣವಾಗಿ ಅಪರಾಧಿಗಳನ್ನು ಶಿಕ್ಷಿಸುವುದು, ವೈದಿಕಕರ್ಮಗಳ ಮತ್ತು ಯಜ್ಞಾದಿಗಳ ಅನುಷ್ಠಾನ, ಸರ್ವರಿಗೂ ನ್ಯಾಯವು ಸಿಕ್ಕುವ ರೀತಿಯಲ್ಲಿ ವ್ಯವಹರಿಸುವುದು, ಸತ್ಯವನ್ನು ಹೇಳುವುದರಲ್ಲಿಯೇ ಅನುರಕ್ತನಾಗಿರುವುದು–ಈ ಎಲ್ಲವೂ ರಾಜನ ಪರಮಧರ್ಮಗಳಾಗಿವೆ.

ಆರ್ತಹಸ್ತಪ್ರದೋ ರಾಜಾ ಪ್ರೇತ್ಯ ಚೇಹ ಮಹೀಯತೇ ।
ಗೋಬ್ರಾಹ್ಮಣಾರ್ಥೇ ವಿಕ್ರಾನ್ತಃ ಸಂಗ್ರಾಮೇ ನಿಧನಂ ಗತಃ ॥೫೨॥

ಅಶ್ವಮೇಧಜಿತಾಲ್ಲೋಕಾನಾಪ್ನೋತಿ ತ್ರಿದಿವಾಲಯೇ ॥೫೩॥

ಯಾವ ರಾಜನು ಆರ್ತನಾದವನಿಗೆ ಆಶ್ರಯವನ್ನೀಯುವನೋ–ಅವನು ಇಹ-ಪರಗಳೆರಡರಲ್ಲಿಯೂ ಸಮ್ಮಾನಿತನಾಗುತ್ತಾನೆ. ಯಾವ ರಾಜನು ಗೋ-ಬ್ರಾಹ್ಮಣರನ್ನು ರಕ್ಷಿಸುವ ಸಲುವಾಗಿ ಪರಾಕ್ರಮವನ್ನು ತೋರುತ್ತಾ ಯುದ್ಧದಲ್ಲಿ ಮರಣಹೊಂದುವನೋ–ಅವನು ಅಶ್ವಮೇಧಯಾಗ ಮಾಡುವುದರಿಂದ ಪ್ರಾಪ್ತವಾಗುವ ಲೋಕಗಳನ್ನು ಸ್ವರ್ಗದಲ್ಲಿ ಹೊಂದುತ್ತಾನೆ.

ವೈಶ್ಯಸ್ಯ ಸತತಂ ಧರ್ಮಃ ಪಾಶುಪಾಲ್ಯಂ ಕೃಷಿಸ್ತಥಾ ।
ಅಗ್ನಿಹೋತ್ರಪರಿಸ್ಪನ್ದೋ ದಾನಾಧ್ಯಯನಮೇವ ಚ ॥೫೪॥

ವಾಣಿಜ್ಯಂ ಸತ್ಪಥಸ್ಥಾನಮಾತಿಥ್ಯಂ ಪ್ರಶಮೋ ದಮಃ ।
ವಿಪ್ರಾಣಾಂ ಸ್ವಾಗತಂ ತ್ಯಾಗೋ ವೈಶ್ಯಧರ್ಮಃ ಸನಾತನಃ ॥೫೫॥

ಪಶುಪಾಲನೆ, ಕೃಷಿ, ವ್ಯಾಪಾರ, ಅಗ್ನಿಹೋತ್ರಕರ್ಮ, ದಾನ, ಅಧ್ಯಯನ, ಸನ್ಮಾರ್ಗವನ್ನೇ ಆಶ್ರಯಿಸಿರುವುದು, ಅತಿಥಿಸತ್ಕಾರ, ಶಮ, ದಮ, ಬ್ರಾಹ್ಮಣರನ್ನು ಸ್ವಾಗತಿಸಿ ಸತ್ಕರಿಸುವುದು ಮತ್ತು ತ್ಯಾಗ–ಇವುಗಳು ವೈಶ್ಯರ ಸನಾತನಧರ್ಮವಾಗಿದೆ.

ತಿಲಾನ್ಗನ್ಧಾನ್ರಸಾಂಶ್ಚೈವ ವಿಕ್ರೀಣೀಯಾನ್ನ ಚೈವ ಹಿ ।
ವಣಿಕ್ಪಥಮುಪಾಸೀನೋ ವೈಶ್ಯಃ ಸತ್ಪಥಮಾಶ್ರಿತಃ ।
ಸರ್ವಾತಿಥ್ಯಂ ತ್ರಿವರ್ಗಸ್ಯ ಯಥಾಶಕ್ತಿ ಯಥಾರ್ಹತಃ ॥೫೬॥

ಸದಾಚಾರಿಯಾದ ವ್ಯಾಪಾರಿಯಾದ ವೈಶ್ಯನು ಎಳ್ಳು, ಸುಗಂಧದ್ರವ್ಯಗಳು ಮತ್ತು ರಸಗಳನ್ನು ಮಾಡಬಾರದು. ಬ್ರಾಹ್ಮಣ-ಕ್ಷತ್ರಿಯ-ವೈಶ್ಯ ಈ ಮೂರು ವರ್ಗದವರಿಗೂ ಯಥಾಯೋಗ್ಯವಾಗಿ ಯಥಾಶಕ್ತಿ ಅತಿಥಿಸತ್ಕಾರವನ್ನು ಮಾಡಬೇಕು.

ಶೂದ್ರಧರ್ಮಃ ಪರೋ ನಿತ್ಯಂ ಶುಶ್ರೂಷಾ ಚ ದ್ವಿಜಾತಿಷು ।
ಸ ಶೂದ್ರಃ ಸಂಶಿತತಪಾಃ ಸತ್ಯವಾದೀ ಜಿತೇನ್ದ್ರಿಯಃ ॥೫೭॥

ಶುಶ್ರೂಷುರತಿಥಿಂ ಪ್ರಾಪ್ತಂ ತಪಃ ಸಂಚಿನುತೇ ಮಹತ್ ॥೫೮॥

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ–ಈ ಮೂರು ವರ್ಗದವರನ್ನೂ ಸೇವಿಸುವುದು ಶೂದ್ರನ ಪರಮಧರ್ಮವಾಗಿದೆ. ಯಾವ ಶೂದ್ರನು ಸತ್ಯವಾದಿಯಾಗಿ, ಜಿತೇಂದ್ರಿಯನಾಗಿ ಮನೆಗೆ ಬಂದ ಅತಿಥಿಯನ್ನು ಸತ್ಕರಿಸುವನೋ–ಅವನು ಮಹಾತಪಸ್ಸಿನ ಫಲವನ್ನೇ ಪಡೆದುಕೊಳ್ಳುತ್ತಾನೆ. ಸೇವಾರೂಪವಾದ ಧರ್ಮವೇ ಶೂದ್ರನಿಗೆ ಕಠೋರವಾದ ತಪಸ್ಸಾಗಿದೆ.

ನಿತ್ಯಂ ಸ ಹಿ ಶುಭಾಚಾರೋ ದೇವತಾದ್ವಿಜಪೂಜಕಃ ।
ಶೂದ್ರೋ ಧರ್ಮಫಲೈರಿಷ್ಟೈಃ ಸಮ್ಪ್ರಯುಜ್ಯೇತ ಬುದ್ಧಿಮಾನ್ ॥೫೯॥

ನಿತ್ಯವೂ ಸದಾಚಾರಿಯಾದ, ದೇವತಾ-ದ್ವಿಜಪೂಜಕನಾದ, ಬುದ್ಧಿ

ವಂತನಾದ ಶೂದ್ರನು–ಈ ಧರ್ಮದ ಫಲವಾಗಿ ಮನೋವಾಂಛಿತವಾದ ಕಾಮನೆಗಳೆಲ್ಲವನ್ನೂ ಪಡೆದುಕೊಳ್ಳುತ್ತಾನೆ.

ಶೋಭನಳೇ! ಪಾರ್ವತಿದೇವಿ! ಹೀಗೆ ನಿನಗೆ ಪ್ರತ್ಯೇಕ-ಪ್ರತ್ಯೇಕವಾಗಿ ನಾಲ್ಕು ವರ್ಣಗಳ ಸಮಗ್ರಧರ್ಮಗಳನ್ನೂ ಹೇಳಿದ್ದೇನೆ. ಪುನಃ ನೀನು ಮತ್ತೇನನ್ನು ಕೇಳಲು ಬಯಸುವೆ?"

ಉಮೆಯು ಹೇಳುತ್ತಾಳೆ :

"ಪೂಜ್ಯನೇ! ನೀನು ನಾಲ್ಕು ವರ್ಣದವರಿಗೂ ಹಿತಕರವಾದ ಮತ್ತು ಶುಭಕರವಾದ ಧರ್ಮಗಳನ್ನು ಪ್ರತ್ಯೇಕ-ಪ್ರತ್ಯೇಕವಾಗಿ ಹೇಳಿರುವೆ. ಈಗ ನೀನು ಎಲ್ಲ ವರ್ಣದವರಿಗೂ ಸಮಾನವಾಗಿರುವ ಸರ್ವವ್ಯಾಪಿಯಾದ ಧರ್ಮಗಳನ್ನು ಹೇಳು."

ಮಹೇಶ್ವರನು ಹೇಳುತ್ತಾನೆ :

"ಉಮಾದೇವಿಯೇ! ಸದ್ಗುಣಗಳ ಸಮುದಾಯವನ್ನೇ ಏಕತ್ರ ಕಾಣಲು ಇಚ್ಛಿಸಿದ ಜಗತ್ಸ್ರಷ್ಟನಾದ ಬ್ರಹ್ಮನು ಸಮಸ್ತವಾದ ಲೋಕಗಳನ್ನೂ ಉದ್ಧರಿಸಲು ಜಗತ್ತಿನ ಸಾರವಾದ ವಸ್ತುಗಳ ಮೂಲಕವಾಗಿ ಮನುಷ್ಯಲೋಕಗಳಲ್ಲಿ ಬ್ರಾಹ್ಮಣರನ್ನು ಸೃಷ್ಟಿಸಿದನು. ಬ್ರಾಹ್ಮಣರು ಈ ಭೂಮಂಡಲದ ದೇವತೆಗಳಾಗಿದ್ದಾರೆ. ಆದುದರಿಂದ ಮೊದಲು ಅವರ ಧರ್ಮಕರ್ಮ ಗಳನ್ನೂ–ಅದರಿಂದ ಪ್ರಾಪ್ತವಾಗುವ ಫಲಗಳನ್ನೂ ವಿವರಿಸಿ ಹೇಳುತ್ತೇನೆ. ಏಕೆಂದರೆ :

ಬ್ರಾಹ್ಮಣೇಷು ಹಿ ಯೋ ಧರ್ಮಃ ಸ ಧರ್ಮಃ ಪರಮೋ ಮತಃ ॥೬೩॥

ಬ್ರಾಹ್ಮಣರಲ್ಲಿ ಯಾವ ಧರ್ಮವಿರುವುದೋ–ಆ ಧರ್ಮವೇ ಪರಮ ಶ್ರೇಷ್ಠವಾದ ಧರ್ಮವೆಂದು ಹೇಳಲ್ಪಟ್ಟಿದೆ. ಬ್ರಹ್ಮನು ಜಗತ್ತಿನ ರಕ್ಷಣಾರ್ಥವಾಗಿ ಮೂರು ಪ್ರಕಾರವಾದ ಧರ್ಮಗಳನ್ನು ವಿಧಾಯಕಮಾಡಿದ್ದಾನೆ. ಪೃಥ್ವಿಯ ಸೃಷ್ಟಿಯೊಡನೆಯೇ ಈ ಮೂರು ಧರ್ಮಗಳ ಸೃಷ್ಟಿಯೂ ಆಯಿತು. ಆ ಮೂರು ಧರ್ಮಗಳು ಯಾವುವೆಂಬುದನ್ನು ಕೇಳು :

ವೇದೋಕ್ತಃ ಪರಮೋ ಧರ್ಮಃ ಸ್ಮೃತಿಶಾಸ್ತ್ರಗತೋಽಪರಃ ।
ಶಿಷ್ಟಾಚೀರ್ಣೋಽಪರಃ ಪ್ರೋಕ್ತಸ್ತ್ರಯೋ ಧರ್ಮಾಃ ಸನಾತನಾಃ ॥೬೫॥

ಮೊದಲನೆಯದಾದ ವೇದೋಕ್ತಧರ್ಮವು ಅತ್ಯಂತಶ್ರೇಷ್ಠವಾದ ಧರ್ಮವಾಗಿದೆ. ಎರಡನೆಯದು ಸ್ಮೃತಿಗಳಲ್ಲಿ ಮತ್ತು ಶಾಸ್ತ್ರಗಳಲ್ಲಿ ಹೇಳಿರುವ ಧರ್ಮ. ಶಿಷ್ಟಪುರುಷರಿಂದ ಆಚರಿಸಲ್ಪಟ್ಟುದು (ಶಿಷ್ಟಾಚಾರವು) ಮೂರನೆಯ ಧರ್ಮ. ಈ ಮೂರು ಧರ್ಮಗಳೂ ಸನಾತನಧರ್ಮಗಳೇ ಆಗಿವೆ.

ತ್ರೈವಿದ್ಯೋ ಬ್ರಾಹ್ಮಣೋ ವಿದ್ವಾನ್ನ ಚಾಧ್ಯಯನಜೀವಕಃ ।
ತ್ರಿಕರ್ಮಾ ತ್ರಿಪರಿಕ್ರಾನ್ತೋ ಮೈತ್ರ ಏಷ ಸ್ಮೃತೋ ದ್ವಿಜಃ ॥೬೬॥

ಯಾವ ವಿದ್ವಾಂಸನು ಮೂರು ವೇದಗಳನ್ನೂ ಅಧ್ಯಯನಮಾಡಿರುವನೋ, ವೇದವನ್ನು ಹೇಳಿಕೊಟ್ಟು ಜೀವಿಕೆಯನ್ನು ನಡೆಸುವುದಿಲ್ಲವೋ, ದಾನ-ಧರ್ಮ-ಯಜ್ಞಗಳೆಂಬ ತ್ರಿಕರ್ಮಗಳಲ್ಲಿ ಯಾವಾಗಲೂ ನಿರತನಾಗಿರುವನೋ, ಕಾಮ-ಕ್ರೋಧ-ಲೋಭಗಳನ್ನು ಪರಿತ್ಯಜಿಸಿರುವನೋ, ಎಲ್ಲ ಪ್ರಾಣಿಗಳ ವಿಷಯದಲ್ಲಿಯೂ ಮೈತ್ರಭಾವದಿಂದಿರುವನೋ–ಅವನೇ ಬ್ರಾಹ್ಮಣನು.

ಸಕಲಭುವನಗಳಿಗೂ ಸ್ವಾಮಿಯಾದ ಬ್ರಹ್ಮನು ಬ್ರಾಹ್ಮಣರ ಜೀವಿಕೆಗಾಗಿ ಆರು ಕರ್ಮಗಳನ್ನು ಹೇಳಿದ್ದಾನೆ. ಸನಾತನವಾದ ಆ ಆರು ಧರ್ಮ ಕರ್ಮಗಳು ಯಾವುವೆಂಬುದನ್ನು ಕೇಳು.

ಯಜನಂ ಯಾಜನಂ ಚೈವ ತಥಾ ದಾನಪ್ರತಿಗ್ರಹೌ ।
ಅಧ್ಯಾಪನಂ ಚಾಧ್ಯಯನಂ ಷಟ್ಕರ್ಮಾ ಧರ್ಮಭಾಗ್ದ್ವಿಜಃ ॥೬೮॥

ಯಜ್ಞಮಾಡುವುದು ಮತ್ತು ಮಾಡಿಸುವುದು ; ದಾನವನ್ನು ಕೊಡುವುದು ಮತ್ತು ಪ್ರತಿಗ್ರಹಿಸುವುದು ; ವೇದವನ್ನು ಗುರುಗಳಿಂದ ಕಲಿಯುವುದು ಮತ್ತು ವೇದವನ್ನು ಶಿಷ್ಯರಿಗೆ ಹೇಳಿಕೊಡುವುದು–ಈ ಆರೂ ಬ್ರಾಹ್ಮಣನ ಕರ್ಮಗಳು. ಷಟ್ಕರ್ಮನಿರತನಾದ ಬ್ರಾಹ್ಮಣನು ಧರ್ಮಕ್ಕೆ (ಪುಣ್ಯಕ್ಕೆ) ಭಾಗಿಯಾಗುತ್ತಾನೆ.

ನಿತ್ಯಸ್ವಾಧ್ಯಾಯಿತಾ ಧರ್ಮೋ ಧರ್ಮೋ ಯಜ್ಞಃ ಸನಾತನಃ ।
ದಾನಂ ಪ್ರಶಸ್ಯತೇ ಚಾಸ್ಯ ಯಥಾಶಕ್ತಿ ಯಥಾವಿಧಿ ॥೬೯॥

ಯಾವಾಗಲೂ ಅಧ್ಯಯನಶೀಲನಾಗಿರುವುದು ಬ್ರಾಹ್ಮಣನ ಮುಖ್ಯ ಧರ್ಮವಾಗಿದೆ. ಯಜ್ಞಮಾಡುವುದು ಸನಾತನಧರ್ಮವಾಗಿದೆ. ಯಥಾಶಕ್ತಿ ಮತ್ತು ಯಥಾವಿಧಿಯಾಗಿ ದಾನಮಾಡುವುದು ಬ್ರಾಹ್ಮಣನಿಗೆ ಹೇಳಿರುವ ಪ್ರಶಸ್ತಧರ್ಮವಾಗಿದೆ.

ಶಮಸ್ತೂಪರಮೋ ಧರ್ಮಃ ಪ್ರವೃತ್ತಃ ಸತ್ಸು ನಿತ್ಯಶಃ ।
ಗೃಹಸ್ಥಾನಾಂ ವಿಶುದ್ಧಾನಾಂ ಧರ್ಮಸ್ಯ ನಿಚಯೋ ಮಹಾನ್ ॥೨೦॥

ವಿಷಯಗಳಿಂದ ಮನಸ್ಸನ್ನು ಹಿಂದಿರುಗಿಸುವುದಕ್ಕೆ 'ಶಮ'–ಎಂದು ಹೆಸರು. ಈ ಧರ್ಮವು ಸತ್ಪುರುಷರಲ್ಲಿ ಸದಾ ಜಾಗ್ರತವಾಗಿರುತ್ತದೆ. ಶಮವೆಂಬ ಈ ಧರ್ಮವನ್ನು ಪರಿಪಾಲಿಸುವುದರಿಂದ ವಿಶುದ್ಧಾತ್ಮರಾದ ಗೃಹಸ್ಥರಿಗೆ ಧರ್ಮದ ಮಹಾರಾಶಿಯೇ ಪ್ರಾಪ್ತವಾಗುತ್ತದೆ.

ಪಞ್ಚಯಜ್ಞವಿಶುದ್ಧಾತ್ಮಾ ಸತ್ಯವಾಗನಸೂಯಕಃ ।
ದಾತಾ ಬ್ರಾಹ್ಮಣಸತ್ಕರ್ತಾ ಸುಸಂಮೃಷ್ಟನಿವೇಶನಃ ॥೨೧॥
ಅಮಾನೀ ಚ ಸದಾಜಿಹ್ಮಃ ಸ್ನಿಗ್ಧವಾಣೀಪ್ರದಸ್ತಥಾ ।
ಅತಿಥ್ಯಭ್ಯಾಗತರತಿಃ ಶೇಷಾನ್ನಕೃತಭೋಜನಃ ॥೨೨॥
ಪಾದ್ಯಮರ್ಘ್ಯಂ ಯಥಾನ್ಯಾಯಮಾಸನಂ ಶಯನಂ ತಥಾ ।
ದೀಪಂ ಪ್ರತಿಶ್ರಯಂ ಚೈವ ಯೋ ದದಾತಿ ಸ ಧಾರ್ಮಿಕಃ ॥೨೩॥

ಗೃಹಸ್ಥನು ಪಂಚಮಹಾಯಜ್ಞಗಳನ್ನು ಮಾಡುತ್ತಾ ಆತ್ಮವನ್ನು (ಮನಸ್ಸನ್ನು) ಶುದ್ಧಿಗೊಳಿಸಿಕೊಳ್ಳಬೇಕು. ಸತ್ಯನಿಷ್ಠನಾಗಿರಬೇಕು. ದೋಷದೃಷ್ಟಿಯನ್ನು ಹೊಂದಿರಬಾರದು. ದಾನಿಯಾಗಿರಬೇಕು. ಬ್ರಾಹ್ಮಣರನ್ನು ಸತ್ಕರಿಸಬೇಕು. ಮನೆಯನ್ನು ಗುಡಿಸಿ-ಸಾರಿಸಿ ಚೊಕ್ಕಟವಾಗಿಟ್ಟುಕೊಳ್ಳಬೇಕು. ದುರಭಿಮಾನವನ್ನು ತೊರೆಯಬೇಕು. ಯಾವಾಗಲೂ ಸರಳತೆಯಿಂದಿರಬೇಕು. ಇತರರೊಡನೆ ಸ್ನೇಹಯುಕ್ತವಾದ ಮಾತುಗಳನ್ನಾಡಬೇಕು. ಅತಿಥಿ-ಅಭ್ಯಾಗತರ ಸೇವೆಯಲ್ಲಿ ಸದಾ ನಿರತನಾಗಿರಬೇಕು. ಯಜ್ಞಶಿಷ್ಟವಾದ ಮತ್ತು ಎಲ್ಲರೂ ಊಟಮಾಡಿದ ನಂತರ ಉಳಿದ ಅನ್ನವನ್ನು ಭೋಜನ ಮಾಡಬೇಕು. ಶಾಸ್ತ್ರಾನುಸಾರವಾಗಿ ಅತಿಥಿಗಳನ್ನುಅರ್ಘ್ಯ-ಪಾದ್ಯ-ಆಸನ-ಶಯ್ಯಾ-ದೀಪ-ನಿವಾಸಸ್ಥಾನಪ್ರದಾನಗಳಿಂದಲೂ ಸತ್ಕರಿಸಬೇಕು. ಇಂತಹವನೇ ಧಾರ್ಮಿಕನು.

ಪ್ರಾತರುತ್ಥಾಯ ಚಾಚಮ್ಯ ಭೋಜನೇನೋಪಮನ್ತ್ರ್ಯ ಚ ।
ಸತ್ಕೃತ್ಯಾನುವ್ರಜೇದ್ಯಸ್ತು ತಸ್ಯ ಧರ್ಮಃ ಸನಾತನಃ ॥೭೪॥

ಬೆಳಗಾಗಿ ಎದ್ದೊಡನೆಯೇ ಆಚಮನಮಾಡಿ ಬ್ರಾಹ್ಮಣನನ್ನು ಭೋಜನಕ್ಕೆ ಆಮಂತ್ರಿಸಬೇಕು. ಯಥಾಯೋಗ್ಯವಾದ ಸಮಯದಲ್ಲಿ ಆಗಮಿಸಿದ ಬ್ರಾಹ್ಮಣನನ್ನು ಯಥಾವಿಧಿಯಾಗಿ ಸತ್ಕರಿಸಿ ಭೋಜನಮಾಡಿಸಿ ಅನಂತರ ಅವನ ಹಿಂದೆಯೇ ಸ್ವಲ್ಪದೂರ ಹೋಗಿ ಅವನನ್ನು ನಮ್ರತೆಯಿಂದ ಕಳುಹಿಸಿಕೊಡಬೇಕು. ಹಾಗೆ ಮಾಡಿದವನಿಗೆ ಸನಾತನವಾದ ಧರ್ಮದ ಪಾಲನೆಯಾಗುತ್ತದೆ.

ಸರ್ವಾತಿಥ್ಯಂ ತ್ರಿವರ್ಗಸ್ಯ ಯಥಾಶಕ್ತಿ ದಿವಾನಿಶಮ್ ।
ಶೂದ್ರಧರ್ಮಃ ಸಮಾಖ್ಯಾತಸ್ತ್ರಿವರ್ಗಪರಿಚಾರಣಮ್ ॥೭೫॥

ಯಾವಾಗಲೂ ಸರ್ವಪ್ರಕಾರಗಳಿಂದಲೂ ಯಥಾಶಕ್ತಿ ಅತಿಥಿಸೇವೆ ಮಾಡುವುದು ಬ್ರಾಹ್ಮಣ-ಕ್ಷತ್ರಿಯ-ವೈಶ್ಯರ ಧರ್ಮವಾಗಿದೆ. ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯ–ಈ ಮೂರು ವರ್ಣದವರನ್ನೂ ಸೇವಿಸುವುದು ಶೂದ್ರನ ಪ್ರಧಾನಧರ್ಮವೆಂದು ಹೇಳಲ್ಪಟ್ಟಿದೆ.

ಪ್ರವೃತ್ತಿಲಕ್ಷಣೋ ಧರ್ಮೋ ಗೃಹಸ್ಥೇಷು ವಿಧೀಯತೇ ।
ತಮಹಂ ವರ್ತಯಿಷ್ಯಾಮಿ ಸರ್ವಭೂತಹಿತಂ ಶುಭಮ್ ॥೭೬॥

ಪ್ರವೃತ್ತಿರೂಪವಾದ ಧರ್ಮವು ಗೃಹಸ್ಥನಿಗಾಗಿಯೇ ವಿಧಿಸಲ್ಪಟ್ಟಿದೆ. ಸಮಸ್ತಪ್ರಾಣಿಗಳಿಗೂ ಹಿತಕರವೂ-ಶುಭಕರವೂ ಆಗಿರುವ ಪ್ರವೃತ್ತಿಧರ್ಮ ವನ್ನು ವಿವರಿಸುತ್ತೇನೆ.

ದಾತವ್ಯಮಸಕೃಚ್ಛಕ್ತ್ಯಾ ಯಷ್ಟವ್ಯಮಸಕೃತ್ತಥಾ ।
ಪುಷ್ಟಿಕರ್ಮವಿಧಾನಂ ಚ ಕರ್ತವ್ಯಂ ಭೂತಿಮಿಚ್ಛತಾ ॥೭೭॥

ಆತ್ಮಕಲ್ಯಾಣವನ್ನು ಬಯಸುವ ಮನುಷ್ಯನು–ತನ್ನ ಶಕ್ತಿಗೆ ಅನುಸಾರ ವಾಗಿ ದಾನಮಾಡುತ್ತಲೇ ಇರಬೇಕು. ಯಜ್ಞಗಳನ್ನು ಮಾಡುತ್ತಲೇ ಇರ ಬೇಕು. ಶಾಂತಿ-ಪುಷ್ಟಿ-ತುಷ್ಟಿಗಳನ್ನು ಕೊಡುವ ಕರ್ಮಗಳನ್ನು ಮಾಡುತ್ತಲೇ ಇರಬೇಕು.

ಧರ್ಮೇಣಾರ್ಥಃ ಸಮಾಹಾರ್ಯೋ ಧರ್ಮಲಬ್ಧಂ ತ್ರಿಧಾ ಧನಮ್ ।
ಕರ್ತವ್ಯಂ ಧರ್ಮಪರಮಂ ಮಾನವೇನ ಪ್ರಯತ್ನತಃ ॥೭೮॥

ಮನುಷ್ಯನು ಧರ್ಮದ ಮೂಲಕವಾಗಿ ಧನವನ್ನು ಸಂಪಾದಿಸಬೇಕು. ಹಾಗೆ ಸಂಪಾದಿಸಿದ ಧನವನ್ನು ಮೂರು ಪ್ರಕಾರವಾಗಿ ವಿಭಾಗಿಸಬೇಕು. ಮನುಷ್ಯನು ಪ್ರಯತ್ನಪೂರ್ವಕವಾಗಿ ಧರ್ಮಪ್ರಧಾನವಾದ ಕರ್ಮಗಳನ್ನೇ ಮಾಡುತ್ತಿರಬೇಕು.

ಏಕೇನಾಂಶೇನ ಧರ್ಮಾರ್ಥೌ ಕರ್ತವ್ಯೌ ಭೂತಿಮಿಚ್ಛತಾ ।
ಏಕೇನಾಂಶೇನ ಕಾಮಾರ್ಥ ಏಕಮಂಶಂ ವಿವರ್ಧಯೇತ್ ॥೭೯॥

ತನ್ನ ಕಲ್ಯಾಣವನ್ನು ಬಯಸುವವನು ಧರ್ಮಮೂಲವಾಗಿ ಸಂಪಾದಿಸಿದ ಹಣದ ಮೂರನೆಯ ಒಂದು ಭಾಗವನ್ನು ಧರ್ಮಾರ್ಥಗಳ ಸಿದ್ಧಿಗಾಗಿ ಉಪಯೋಗಿಸಬೇಕು. ಮತ್ತೊಂದಂಶವನ್ನು ಕಾಮೋಪಭೋಗಕ್ಕಾಗಿ ಉಪಯೋಗಿಸಬೇಕು. ಉಳಿದ ಒಂದು ಅಂಶವನ್ನು ಪುನಃ ಧರ್ಮಮೂಲವಾದ ಕಾರ್ಯದಲ್ಲಿ ತೊಡಗಿಸಿ ವೃದ್ಧಿಪಡಿಸಬೇಕು. (ಇದು ಪ್ರವೃತ್ತಿಧರ್ಮವಾಗಿದೆ.)

ಪಾರ್ವತಿ! ನಿವೃತ್ತಿರೂಪವಾದ ಧರ್ಮವು ಪ್ರವೃತ್ತಿಧರ್ಮಕ್ಕಿಂತಲೂ ಭಿನ್ನವಾದುದು. ಇದು ಮೋಕ್ಷಕ್ಕೆ ಸಾಧನವಾಗುತ್ತದೆ. ನಾನೀಗ ಯಥಾವತ್ತಾಗಿ ನಿವೃತ್ತಿಧರ್ಮವನ್ನು ಹೇಳುತ್ತೇನೆ ; ಏಕಾಗ್ರಚಿತ್ತಳಾಗಿ ಕೇಳು.

ಸರ್ವಭೂತದಯಾ ಧರ್ಮೋ ನ ಚೈಕಗ್ರಾಮವಾಸಿತಾ ।
ಆಶಾಪಾಶವಿಮೋಕ್ಷಶ್ಚ ಶಸ್ಯತೇ ಮೋಕ್ಷಕಾಂಕ್ಷಿಣಾಮ್ ॥೮೦॥

ಸರ್ವಪ್ರಾಣಿಗಳಲ್ಲಿಯೂ ದಯಾಪರತೆಯಿಂದಿರುವುದೇ ನಿವೃತ್ತಿಮಾರ್ಗದ ಮುಖ್ಯಧರ್ಮವು. ನಿವೃತ್ತಿಮಾರ್ಗದಲ್ಲಿ ಅಥವಾ ಮೋಕ್ಷಮಾರ್ಗದಲ್ಲಿರತಕ್ಕವನು ಒಂದೇ ಊರಿನಲ್ಲಿ ವಾಸಮಾಡಬಾರದು. ಆಶಾಪಾಶದಿಂದ ಮುಕ್ತನಾಗಬೇಕು. ಮುಮುಕ್ಷುಗಳಿಗೆ ಈ ಧರ್ಮಗಳು ಅಪೇಕ್ಷಿತವಾಗಿವೆ.

ನ ಕುಟ್ಯಾಂ ನೋದಕೇ ಸಙ್ಗೋ ನ ವಾಸಸಿ ನ ಚಾಸನೇ ।
ನ ತ್ರಿದಣ್ಡೇ ನ ಶಯನೇ ನಾಗ್ನೌ ನ ಶರಣಾಲಯೇ ॥೮೧॥

ಮೋಕ್ಷಾಭಿಲಾಷಿಯಾದ ಪುರುಷನಿಗೆ ಪರ್ಣಶಾಲೆಯಲ್ಲಾಗಲೀ, ಜಲದಲ್ಲಿಯಾಗಲೀ (ಪುಣ್ಯತೀರ್ಥದಲ್ಲಾಗಲೀ), ಬಟ್ಟೆಯಲ್ಲಾಗಲೀ, ಆಸನದಲ್ಲಾಗಲೀ, ತ್ರಿದಂಡದಲ್ಲಾಗಲೀ, ಶಯ್ಯೆಯಲ್ಲಾಗಲೀ, ಅಗ್ನಿಪರಿಚರ್ಯೆಯಲ್ಲಾಗಲೀ (ಶೀತಕಾಲದಲ್ಲಿ ಅಗ್ನಿಯ ವಿಷಯದಲ್ಲಾಗಲೀ), ಆಶ್ರಯಸ್ಥಾನದಲ್ಲಾಗಲೀ ಆಸಕ್ತಿಯಿರಬಾರದು.

ಅಧ್ಯಾತ್ಮಗತಿಚಿತ್ತೋ ಯಸ್ತನ್ಮನಾಸ್ತತ್ಪರಾಯಣಃ ।
ಯುಕ್ತೋ ಯೋಗಂ ಪ್ರತಿ ಸದಾ ಪ್ರತಿಸಂಖ್ಯಾನಮೇವ ಚ ॥೮೩॥

ಮುಮುಕ್ಷುವು ಅಧ್ಯಾತ್ಮಮಾರ್ಗವನ್ನೇ ಯಾವಾಗಲೂ ಚಿಂತಿಸುತ್ತಿರಬೇಕು. ಮನನ-ನಿಧಿಧ್ಯಾಸನಗಳಲ್ಲಿಯೇ ನಿರತನಾಗಿರಬೇಕು. ಯಾವಾಗಲೂ ಯೋಗಾಭ್ಯಾಸದಲ್ಲಿಯೇ ನಿರತನಾಗಿರುತ್ತಾ ತತ್ತ್ವವನ್ನು ವಿಚಾರಮಾಡುತ್ತಿರಬೇಕು.

ವೃಕ್ಷಮೂಲಪರೋ ನಿತ್ಯಂ ಶೂನ್ಯಾಗಾರನಿವೇಶನಃ ।
ನದೀಪುಲಿನಶಾಯೀ ಚ ನದೀತೀರರತಿಶ್ಚ ಯಃ ॥೮೪॥

ವಿಮುಕ್ತಃ ಸರ್ವಸಙ್ಗೇಷು ಸ್ನೇಹಬನ್ಧೇಷು ಚ ದ್ವಿಜಃ ।
ಆತ್ಮನ್ಯೇವಾತ್ಮನೋ ಭಾವಂ ಸಮಾಸಜ್ಜೇತ ವೈ ದ್ವಿಜಃ ॥೮೫॥

ಮುಮುಕ್ಷುವಾದವನು ಸಕಲವಿಧವಾದ ಆಸಕ್ತಿಗಳಿಂದಲೂ–ಸ್ನೇಹಬಂಧಗಳಿಂದಲೂ ವಿಮುಕ್ತನಾಗಿ ಹಾಳುಮನೆಯಲ್ಲಾಗಲೀ, ವೃಕ್ಷದ ಬುಡದಲ್ಲಾಗಲೀ, ನದೀತೀರದಲ್ಲಾಗಲೀ ಇದ್ದುಕೊಂಡು ನದಿಯ ಮಳಲಿನ ಮೇಲೆಯೇ ಮಲಗುತ್ತಾ ಕಾಲಕಳೆಯಬೇಕು. ತನ್ನ ಆತ್ಮನಲ್ಲಿಯೇ ಪರಮಾತ್ಮನ ಭಾವವನ್ನಿಟ್ಟುಕೊಂಡು ಸರ್ವಕಾಲದಲ್ಲಿಯೂ ಧ್ಯಾನಮಾಡುತ್ತಿರಬೇಕು. (ಆತ್ಮತುಷ್ಟನಾಗಿರಬೇಕು.)

ಸ್ಥಾಣುಭೂತೋ ನಿರಾಹಾರೋ ಮೋಕ್ಷದೃಷ್ಟೇನ ಕರ್ಮಣಾ ।
ಪರಿವ್ರಜತಿ ಯೋ ಯುಕ್ತಸ್ತಸ್ಯ ಧರ್ಮಃ ಸನಾತನಃ ॥೮೬॥

ಯಾವನು ಪರಮಾತ್ಮನಲ್ಲಿಯೇ ನಿಯತವಾದ ಮನಸ್ಸುಳ್ಳವನಾಗಿ ಮೋಕ್ಷಸಾಧಕವಾದ ಶ್ರವಣ-ಮನನ-ನಿಧಿಧ್ಯಾಸನಾದಿಕರ್ಮಗಳಿಂದ ಕಾಲ

ವನ್ನು ಕಳೆಯುವನೋ, ಸ್ಥಾಣುಭೂತನಾಗಿರುವನೋ (ಧ್ಯಾನದ ಸಮಯ ದಲ್ಲಿ ಅಚಲನಾಗಿರುವನೋ), ನಿರಾಹಾರನಾಗಿರುವನೋ, ಒಂದೇ ಕಡೆಯಲ್ಲಿ ನಿಲ್ಲದೇ ಯಾವಾಗಲೂ ಸುತ್ತುತ್ತಿರುವನೋ (ಸಂನ್ಯಾಸಿಯಾಗಿರುವನೋ)– ಅಂತಹವನ ಧರ್ಮವೇ ಸನಾತನವಾದ ಮೋಕ್ಷಧರ್ಮವು.

ನ ಚೈಕತ್ರ ಸಮಾಸಕ್ತೋ ನ ಚೈಕಗ್ರಾಮಗೋಚರಃ ।
ಮುಕ್ತೋ ಹ್ಯಟತಿ ನಿರ್ಮುಕ್ತೋ ನ ಚೈಕಪುಲಿನೇಶಯಃ ॥೮೭॥

ಸಂನ್ಯಾಸಿಯಾದವನು ಯಾವುದಾದರೂ ಒಂದು ಸ್ಥಾನದಲ್ಲಿ (ಒಂದು ಆಶ್ರಮದಲ್ಲಿ ಅಥವಾ ಮಠದಲ್ಲಿ) ಆಸಕ್ತನಾಗಿರಬಾರದು. ಒಂದೇ ಗ್ರಾಮ ದಲ್ಲಿ ನಿರಂತರವಾಗಿ ವಾಸಮಾಡಬಾರದು. ನಿರ್ದಿಷ್ಟವಾದ ಒಂದು ಮಳಲಿನ ದಿಣ್ಣೆಯಮೇಲೆಯೇ ಅನುದಿನವೂ ಮಲಗಬಾರದು. ಹೀಗೆ ಎಲ್ಲ ವಿಧವಾದ ಆಸಕ್ತಿಗಳಿಂದಲೂ ಮುಕ್ತನಾದವನು ಸಕಲವಿಧವಾದ ಬಂಧನಗಳಿಂದಲೂ ಬಿಡುಗಡೆಯನ್ನು ಹೊಂದಿ ಸ್ವಚ್ಛಂದವಾಗಿ ಪರ್ಯಟನೆಮಾಡುತ್ತಿರುತ್ತಾನೆ.

ಏಷ ಮೋಕ್ಷವಿದಾಂ ಧರ್ಮೋ ವೇದೋಕ್ತಃ ಸತ್ಪಥಃ ಸತಾಮ್ ।
ಯೋ ಮಾರ್ಗಮನುಯಾತೀಮಂ ಪದಂ ತಸ್ಯ ಚ ವಿದ್ಯತೇ ॥೮೮॥

ಉಮಾದೇವಿಯೇ! ಇದೇ ಮೋಕ್ಷಧರ್ಮವನ್ನು ತಿಳಿದ ಸತ್ಪುರುಷರ ವೇದಪ್ರತಿಪಾದ್ಯವಾದ ಧರ್ಮವಾಗಿದೆ ಮತ್ತು ಸನ್ಮಾರ್ಗವಾಗಿದೆ. ಯಾರು ಈ ಮಾರ್ಗವನ್ನು ಅನುಸರಿಸಿ ಹೋಗುವರೋ–ಅವರಿಗೆ ಬ್ರಹ್ಮಪದದ ಪ್ರಾಪ್ತಿಯಾಗುತ್ತದೆ.

ಚತುರ್ವಿಧಾ ಭಿಕ್ಷವಸ್ತೇ ಕುಟೀಚಕಬಹೂದಕೌ ।
ಹಂಸಃ ಪರಮಹಂಸಶ್ಚ ಯೋ ಯಃ ಪಶ್ಚಾತ್ಸ ಉತ್ತಮಃ ॥೮೯॥

ಕುಟೀಚಕ, ಬಹೂದಕ, ಹಂಸ ಮತ್ತು ಪರಮಹಂಸ–ಎಂದು ನಾಲ್ಕು ವಿಧವಾದ ಸಂನ್ಯಾಸಿಗಳಿದ್ದಾರೆ. ಇವರಲ್ಲಿ ಕಡೆ-ಕಡೆಯವರು ಮೊದಲಿಗರಿ ಗಿಂತಲೂ ಶ್ರೇಷ್ಠರು. (ಕುಟೀಚಕನಿಗಿಂತಲೂ ಬಹೂದಕನು ಶ್ರೇಷ್ಠನು ; ಬಹೂದಕನಿಗಿಂತಲೂ ಹಂಸನು ಶ್ರೇಷ್ಠನು ; ಹಂಸನಿಗಿಂತಲೂ ಪರಮ ಹಂಸನು ಶ್ರೇಷ್ಠನು).

[ಕುಟೀಚಕನು ಕಾಷಾಯ-ತ್ರಿದಂಡಗಳನ್ನು ಧರಿಸಿ ಪುತ್ರನಿಂದ

ನಿರ್ಮಿಸಲ್ಪಟ್ಟ ಒಂದು ಕುಟೀರದಲ್ಲಿ ವಾಸಿಸುತ್ತಾ ತನ್ನ ಅಥವಾ ಬಂಧುಗಳ ಮನೆಯಲ್ಲಿ ಊಟಮಾಡುತ್ತಾ ಅಧ್ಯಾತ್ಮಪರನಾಗಿರುವನು. ಬಹೂದಕನು ಇದೇ ರೀತಿಯಲ್ಲಿರುತ್ತಾ ಏಳು ಮನೆಗಳಲ್ಲಿ ಭಿಕ್ಷೆಮಾಡಿ ಜೀವಿಸಬೇಕು. ಇವನಿಗೆ ನೀರಿನ ಆವಶ್ಯಕತೆಯು ಹೆಚ್ಚಾಗಿರುವುದರಿಂದಲೂ ಯಾವಾಗಲೂ ತೀರ್ಥಯಾತ್ರಾನಿರತನಾಗಿರುವುದರಿಂದಲೂ ಈ ಹೆಸರು. ಹಂಸನು ಇದೇ ಪ್ರಕಾರ ಏಕದಂಡಧಾರಿಯಾಗಿರತಕ್ಕವನು. ಕೋಪ-ತಾಪಾದಿಗಳನ್ನು ತೊರೆದು ಸುಖ-ದುಃಖಾದಿ ದ್ವಂದ್ವಗಳನ್ನು ಸಮಾನವಾಗಿ ಭಾವಿಸಿ ಶುದ್ಧ ಮನಸ್ಸಿನಿಂದ ಪ್ರಾಣಧಾರಣೆಗಾಗಿ ಮಾತ್ರವೇ ಕ್ಲೃಪ್ತಕಾಲದಲ್ಲಿ ಭಿಕ್ಷಾಟನೆ ಮಾಡುತ್ತಾ–ಶೂನ್ಯಗೃಹ, ದೇವಾಲಯ, ವೃಕ್ಷಸಮೂಹ, ನದೀತೀರ, ಪರ್ವತದ ಗುಹೆ–ಮೊದಲಾದ ವಿವಿಕ್ತಪ್ರದೇಶಗಳಲ್ಲಿ ವಾಸಮಾಡುತ್ತಾ, ಅಹಂಕಾರ-ಮಮಕಾರಶೂನ್ಯನಾಗಿ ಸರ್ವದಾ ಪ್ರಣವವನ್ನು ಜಪಿಸುತ್ತಾ ಶುಭಾಶುಭಕರ್ಮಗಳ ನಿರ್ಮೂಲನಕ್ಕಾಗಿ ಸಂನ್ಯಾಸದಿಂದ ದೇಹವನ್ನು ತ್ಯಜಿಸಲು ಯತ್ನಿಸುವವನು ಪರಮಹಂಸನು.

ಪ್ರಣವಾದ್ಯಾಸ್ತ್ರಯೋ ವೇದಾಃ ಪ್ರಣವೇ ಪರ್ಯವಸ್ಥಿತಾಃ ।
ತಸ್ಮಾತ್ಪ್ರಣವಮೇವೈಕಂ ಪರಹಂಸಃ ಸದಾ ಜಪೇತ್ ॥

ವಿವಿಕ್ತದೇಶಮಾಶ್ರಿತ್ಯ ಸುಖಾಸೀನಃ ಸಮಾಹಿತಃ ।
ಯಥಾಶಕ್ತಿ ಸಮಾಧಿಸ್ಥಃ ಭವೇತ್ಸಂನ್ಯಾಸಿನಾಂ ವರಃ ॥

[ಸೂತಸಂಹಿತಾ]

ಅತಃ ಪರತರಂ ನಾಸ್ತಿ ನಾವರಂ ನ ತಿರೋಗತಃ ।
ಅದುಃಖಮಸುಖಂ ಸೌಮ್ಯಮಜರಾಮರಮವ್ಯಯಮ್ ॥೯೦॥

ಪರಮಹಂಸಧರ್ಮದ ಮೂಲಕವಾಗಿ ಪ್ರಾಪ್ತವಾಗುವ ಬ್ರಹ್ಮಜ್ಞಾನಕ್ಕಿಂತಲೂ ಮಿಗಿಲಾದುದು ಬೇರೆ ಯಾವುದೂ ಇಲ್ಲ. ಇಂತಹ ಪರಮಹಂಸಧರ್ಮವು ಯಾವ ಧರ್ಮಕ್ಕೂ ನಿಕೃಷ್ಟವಾದುದಲ್ಲ. ಪರಮಹಂಸಧರ್ಮಿಗೆ ಆತ್ಮಜ್ಞಾನವು ಮರೆಯಾಗಿರುವುದಿಲ್ಲ. ಈ ಧರ್ಮವು ಸುಖ-ದುಃಖಗಳಿಂದ ರಹಿತವಾದುದು. ಸೌಮ್ಯವಾದುದು. ಮುಪ್ಪು-ಸಾವುಗಳಿಂದ ರಹಿತವಾದುದು ಮತ್ತು ಅವಿನಾಶಿಯೂ ಆದುದು."

ಉಮೆಯು ಹೇಳುತ್ತಾಳೆ :

“ಭಗವಂತನೇ! ನೀನು ಸತ್ಪುರುಷರಿಂದ ಆಚರಿಸಲ್ಪಡುವ ಗೃಹಸ್ಥ ಧರ್ಮವನ್ನೂ–ಮೋಕ್ಷಧರ್ಮವನ್ನೂ ಹೇಳಿರುವೆ. ಈ ಎರಡೂ ಜೀವ ಲೋಕಕ್ಕೆ ಮಹಾಶ್ರೇಯಸ್ಕರವಾದ ಮಾರ್ಗಗಳೇ ಆಗಿವೆ. ಈಗ ನಾನು ನಿನ್ನಿಂದ ಋಷಿಗಳ ಧರ್ಮವನ್ನು ಕೇಳಲು ಬಯಸಿದ್ದೇನೆ. ತಪೋವನದಲ್ಲಿ ವಾಸಮಾಡುವ ಋಷಿಗಳ ಧರ್ಮಗಳನ್ನು ತಿಳಿಯಬೇಕೆಂದು ನನಗೆ ಬಹಳ ಕಾಲದಿಂದಲೂ ಆಸೆಯಿದೆ.

ಆಜ್ಯಧೂಮೋದ್ಭವೋ ಗನ್ಧೋ ರುಣದ್ಧೀವ ತಪೋವನಮ್ ।
ತಂ ದೃಷ್ಟ್ವಾ ಮೇ ಮನಃ ಪ್ರೀತಂ ಮಹೇಶ್ವರ ಸದಾ ಭವೇತ್ ॥

ಮಹೇಶ್ವರನೇ! ಋಷಿಗಳು ದೇವತೆಗಳ ಪ್ರೀತ್ಯರ್ಥವಾಗಿ ಅರ್ಪಿಸುವ ಆಜ್ಯಾಹುತಿಗಳಿಂದ ಹೊರಬರುವ, ತಪೋವನವನ್ನೇ ಆಕ್ರಮಿಸಿಬಿಡುವುದೋ ಎಂಬಂತೆ ಕಾಣುವ ಹೊಗೆಯನ್ನು ನೋಡಿ, ಅದರ ವಾಸನೆಯನ್ನು ಆಘ್ರಾಣಿಸುತ್ತಿದ್ದರೆ ನನ್ನ ಮನಸ್ಸು ಸದಾ ಉಲ್ಲಾಸಗೊಳ್ಳುತ್ತದೆ.

ವಿಭುವೇ! ಈ ಮುನಿಧರ್ಮದ ವಿಷಯದಲ್ಲಿ ನನಗೆ ಜಿಜ್ಞಾಸೆ ಯುಂಟಾಗಿದೆ. ದೇವದೇವನೇ! ಮಹಾದೇವನೇ! ಸಕಲಧರ್ಮಾರ್ಥ ತತ್ತ್ವಜ್ಞನೇ! ನನ್ನ ಪ್ರಶ್ನೆಗೆ ಯಥಾವತ್ತಾಗಿ ವಿಶದವಾಗಿ ಉತ್ತರಿಸುವ ಕೃಪೆ ಮಾಡು.”

ಮಹೇಶ್ವರನು ಹೇಳುತ್ತಾನೆ :

“ಶುಭಸ್ವರೂಪಳೇ! ಉಮಾದೇವಿಯೇ! ಶ್ರೇಷ್ಠವಾದ ಮುನಿಧರ್ಮ ವನ್ನು ನಿನಗೆ ಸಂತೋಷದಿಂದ ಹೇಳುತ್ತೇನೆ. ಮುನಿಗಳೆಲ್ಲರೂ ಈ ಶ್ರೇಷ್ಠ ವಾದ ಧರ್ಮವನ್ನೇ ಆಶ್ರಯಿಸಿ ತಪಸ್ಸುಮಾಡುತ್ತಾ ಅದರ ಮೂಲಕ ವಾಗಿಯೇ ಸಿದ್ಧಿಯನ್ನು ಪಡೆಯುತ್ತಾರೆ.

ಮಹಾಭಾಗಳೇ! ಧರ್ಮಜ್ಞಳೇ! ಧರ್ಮವಿದರಾದ ಸತ್ಪುರುಷರಾದ ಫೇನಪ* ರೆಂಬ ಋಷಿಗಳ ಧರ್ಮವನ್ನು (ಋಷಿಗಳು ಅನುಸರಿಸುವ ಧರ್ಮವನ್ನು) ಮೊದಲು ಹೇಳುವೆನು, ಕೇಳು.

---

* ಫೇನಪರೆಂದರೆ : ನೊರೆಯನ್ನು ತಿಂದು ಜೀವಿಸುವವರು–ಎಂದರ್ಥ. ಕರುವು ಹಸುವಿನ ಹಾಲನ್ನು ಕುಡಿಯುವಾಗ ಅದರ ಎರಡು ಕಟವಾಯಿಗಳಲ್ಲಿಯೂ ನೊರೆಯು

ಉಞ್ಛನ್ತಿ ಸತತಂ ಯೇ ತೇ ಬ್ರಾಹ್ಮ್ಯಂ ಫೇನೋತ್ಕರಂ ಶುಭಮ್ ।
ಅಮೃತಂ ಬ್ರಹ್ಮಣಾ ಪೀತಮಧ್ವರೇ ಪ್ರಸೃತಂ ದಿವಿ ॥೯೭॥

ಪೂರ್ವಕಾಲದಲ್ಲಿ ಯಜ್ಞದ ಸಮಯದಲ್ಲಿ ಬ್ರಹ್ಮನಿಂದ ಕುಡಿಯಲ್ಪಟ್ಟ ಮತ್ತು ಸ್ವರ್ಗದಲ್ಲೆಲ್ಲಾ ವ್ಯಾಪಿಸಿರುವ, ಬ್ರಹ್ಮನು ಪಾನಮಾಡಿದ ಕಾರಣ 'ಬ್ರಾಹ್ಮ್ಯ' ಎಂಬ ಹೆಸರಿನಿಂದಲೂ ಪ್ರಸಿದ್ಧವಾಗಿರುವ, ಅಮೃತಸ್ವರೂಪವಾದ, ಶುಭಕರವಾದ ನೊರೆಯೊಡನೆ ಬರುವ ಅನ್ನವನ್ನು ಯಾರು ಸತತವಾಗಿ ಸಂಗ್ರಹಿಸಿ ಭುಂಜಿಸುವರೋ–ಅವರೇ ಫೇನಪರು.

ಏಷ ತೇಷಾಂ ವಿಶುದ್ಧಾನಾಂ ಫೇನಪಾನಾಂ ತಪೋಧನೇ ।
ಧರ್ಮಚರ್ಯಾಕೃತೋ ಮಾರ್ಗೋ ವಾಲಖಿಲ್ಯಗಣೈಃ ಶೃಣು ॥೯೮॥

ತಪೋಧನಳೇ! ಈ ಧರ್ಮಾಚರಣೆಯ ಮಾರ್ಗವು (ನೊರೆಯೊಡನೆ ಬಂದ ಅಗ್ರಾನ್ನವನ್ನೇ ಸಂಗ್ರಹಿಸಿ ತಿನ್ನುವುದು)–ವಿಶುದ್ಧರಾದ ಫೇನಪರ ಮಾರ್ಗವಾಗಿದೆ. ಮುಂದೆ ನಾನು ವಾಲಖಿಲ್ಯರೆಂಬ ಮುನಿಗಳಿಂದ ಅನುಸರಿಸಲ್ಪಡುವ ಧರ್ಮಮಾರ್ಗವು ಯಾವುದೆಂಬುದನ್ನು ಹೇಳುವೆನು ; ಕೇಳು.

ವಾಲಿಖಿಲ್ಯಾಸ್ತಪಃಸಿದ್ಧಾ ಮುನಯಃ ಸೂರ್ಯಮಣ್ಡಲೇ ।
ಉಞ್ಛೇ ತಿಷ್ಠನ್ತಿ ಧರ್ಮಜ್ಞಾಃ ಶಾಕುನೀಂ ವೃತ್ತಿಮಾಸ್ಥಿತಾಃ ॥೯೯॥

ವಾಲಖಿಲ್ಯರು ತಪಸ್ಸಿನಿಂದ ಸಿದ್ಧಿಯನ್ನು ಪಡೆದ ಮುನಿಗಳಾಗಿದ್ದಾರೆ. ಧರ್ಮಜ್ಞರಾದ ಅವರು ಸೂರ್ಯಮಂಡಲದಲ್ಲಿ ವಾಸಮಾಡುತ್ತಾರೆ. ಅವರು ಪಕ್ಷಿಗಳಂತೆ ಒಂದೊಂದೇ ಕಾಳುಗಳನ್ನು ಆರಿಸಿಕೊಂಡು ಉಂಛವೃತ್ತಿಯಿಂದ ಜೀವನವನ್ನು ಹೊರೆಯುತ್ತಾರೆ.

ಮೃಗನಿರ್ಮೋಕವಸನಾಶ್ಚೀರವಲ್ಕಲವಾಸಸಃ ।
ನಿರ್ದ್ವನ್ದ್ವಾಃ ಸತ್ಪಥಂ ಪ್ರಾಪ್ತಾ ವಾಲಖಿಲ್ಯಾಸ್ತಪೋಧನಾಃ ॥೧೦೦॥

ಮೃಗಗಳ ಚರ್ಮಗಳನ್ನೂ, ತೊಗಟೆಗಳನ್ನೂ, ನಾರುಮಡಿಯನ್ನೂ–

ಹೊರಬರುತ್ತದೆ. ಆ ನೊರೆಯನ್ನೇ ತಿಂದು ಜೀವಿಸುವ ಋಷಿಗಳಿಗೆ ಫೇನಪರೆಂದು ಹೆಸರು. ಅನ್ನವು ಕುದಿಯುವಾಗ ನೊರೆಯ ಜೊತೆಯಲ್ಲಿ ಮೇಲೆ ಬಂದ ಅನ್ನಕ್ಕೆ ಫೇನ–ಎಂದು ವ್ಯಾಖ್ಯಾನಕಾರರು ಅರ್ಥಮಾಡಿರುತ್ತಾರೆ. ಫೇನೋತ್ಕರಂ ಅಗ್ರಾನ್ನ ಸಮೂಹಂ ಉಂಛನ್ತಿ ಅಲ್ಪಶಃ ಆದದತೇ.

ಉಡುತ್ತಾರೆ ಮತ್ತು ಹೊದೆಯುತ್ತಾರೆ. ಶೀತೋಷ್ಣ, ಸುಖ-ದುಃಖಾದಿ ದ್ವಂದ್ವಗಳಿಂದ ರಹಿತರಾಗಿರುತ್ತಾರೆ. ತಪಸ್ಸೇ ಧನವಾಗಿರುವ ಅಂತಹ ಮುನಿಗಳು ಸಚ್ಚಿದಾನಂದಸ್ವರೂಪನಾದ ಪರಬ್ರಹ್ಮನ ಮಾರ್ಗವನ್ನು ಹೊಂದಿದವರಾಗಿದ್ದಾರೆ.

ಅಙ್ಗುಷ್ಠಪರ್ವಮಾತ್ರಾ ಯೇ ಭೂತ್ವಾ ಸ್ವೇ ಸ್ವೇ ವ್ಯವಸ್ಥಿತಾಃ ।
ತಪಶ್ಚರಣಮೀಹನ್ತೇ ತೇಷಾಂ ಧರ್ಮಫಲಂ ಮಹತ್ ॥೧೦೧॥

ಹೆಬ್ಬೆರಳಿನ ಗಿಣ್ಣಿನಷ್ಟು ಶರೀರಾಕೃತಿಯುಳ್ಳ ವಾಲಖಿಲ್ಯರು ತಮ್ಮ ತಮ್ಮ ಕರ್ಮಗಳಲ್ಲಿ ಯಾವಾಗಲೂ ನಿರತರಾಗಿರುತ್ತಾರೆ. ಅವರು ಯಾವಾಗಲೂ ತಪಶ್ಚರಣೆಯಲ್ಲಿಯೇ ಆಸಕ್ತರಾಗಿರುತ್ತಾರೆ. ಅವರ ಧರ್ಮದ ಫಲವೂ ಮಹತ್ತರವಾದುದು.

ತೇ ಸುರೈಃ ಸಮತಾಂ ಯಾನ್ತಿ ಸುರಕಾರ್ಯಾರ್ಥಸಿದ್ಧಯೇ ।
ದ್ಯೋತಯನ್ತಿ ದಿಶಃ ಸರ್ವಾಸ್ತಪಸಾ ದಗ್ಧ ಕಿಲ್ಬಿಷಾಃ ॥೧೦೨॥

ದೇವತೆಗಳ ಕಾರ್ಯಸಿದ್ಧಿಗಾಗಿ ತೊಡಗಿದಾಗ ಅವರು ದೇವತೆಗಳಿಗೆ ಸಮಾನವಾದ ರೂಪವನ್ನೇ ಧರಿಸುತ್ತಾರೆ. ತಪಸ್ಸಿನಿಂದ ದಗ್ಧವಾಗಿ ಮಾಡಲ್ಪಟ್ಟ ಪಾಪಗಳುಳ್ಳ ವಾಲಖಿಲ್ಯಮುನಿಗಳು ತಮ್ಮ ದಿವ್ಯವಾದ ತೇಜಸ್ಸಿನಿಂದ ಎಲ್ಲ ದಿಕ್ಕುಗಳನ್ನೂ ಬೆಳಗುತ್ತಾರೆ.

ಯೇ ತ್ವನ್ಯೇ ಶುದ್ಧ ಮನಸೋ ದಯಾಧರ್ಮಪರಾಯಣಾಃ ।
ಸನ್ತಶ್ಚಕ್ರಚರಾ ಪುಣ್ಯಾಃ ಸೋಮಲೋಕಚರಾಶ್ಚ ಯೇ ।
ಪಿತೃಲೋಕಸಮೀಪಸ್ಥಾಸ್ತ ಉಞ್ಛನ್ತಿ ಯಥಾವಿಧಿ ॥೧೦೩॥

ಇವರಿಗಿಂತಲೂ ಬೇರೆಯವರಾದ, ಶುದ್ಧಚಿತ್ತರಾದ, ದಯಾಧರ್ಮಪರಾಯಣರಾದ, ಪುಣ್ಯಾತ್ಮರಾದ ಇತರ ಸತ್ಪುರುಷರೂ ಇದ್ದಾರೆ. ಅವರಲ್ಲಿ ಕೆಲವರು ಚಕ್ರಚರರು (ಚಕ್ರದಂತೆ ಯಾವಾಗಲೂ ತಿರುಗುತ್ತಲೇ ಇರುವವರು) ; ಕೆಲವರು ಸೋಮಲೋಕದಲ್ಲಿ ಸಂಚರಿಸುತ್ತಿರುತ್ತಾರೆ ; ಕೆಲವರು ಪಿತೃಲೋಕದ ಸಮೀಪದಲ್ಲಿ ವಾಸಮಾಡುತ್ತಾರೆ. ಅವರೆಲ್ಲರೂ ಶಾಸ್ತ್ರವಿಧಿಗೆ ಅನುಸಾರವಾಗಿ ಉಂಛವೃತ್ತಿಯಿಂದ ಜೀವನವನ್ನು ನಿರ್ವಹಿಸುತ್ತಿರುತ್ತಾರೆ.

ಸಮ್ಪ್ರಕ್ಷಾಲಾಶ್ಮಕುಟ್ಟಾಶ್ಚ ದನ್ತೋಲೂಖಲಿಕಾಶ್ಚ ತೇ ।
ಸೋಮಪಾನಾಂ ಚ ದೇವಾನಾಮೂಷ್ಮಪಾಣಾಂ ತಥೈವ ಚ ॥೧೦೪॥

ಉಞ್ಛನ್ತಿ ಯೇ ಸಮೀಪಸ್ಥಾಃ ಸದಾರಾ ನಿಯತೇನ್ದ್ರಿಯಾಃ ॥೧೦೫॥

ಇವರೇ ಅಲ್ಲದೆ ಸಂಪ್ರಕ್ಷಾಲರು (ಒಂದು ದಿನಕ್ಕೆ ಬೇಕಾಗುವಷ್ಟು ಧಾನ್ಯ ವನ್ನು ಸಂಗ್ರಹಿಸಿ ಊಟವಾದನಂತರ ಅಡಿಗೆಯ ಪಾತ್ರೆಗಳನ್ನು ತೊಳೆದಿಡು ವವರು. ಮರುಊಟಕ್ಕಾಗಿ ಯೋಚಿಸದೇ ಇರುವವರು) ; ಅಶ್ಮಕುಟ್ಟರು (ಕಲ್ಲಿನಿಂದ ಭತ್ತವನ್ನು ಕುಟ್ಟಿ ಅಕ್ಕಿಮಾಡಿಕೊಂಡು ಭೋಜನಮಾಡು ವವರು) ; ದಂತೋಲೂಖಲಿಕರು (ಹಲ್ಲನ್ನೇ ಒನಕೆಯನ್ನಾಗಿ ಮಾಡಿಕೊಂಡು ಬತ್ತದಿಂದ ಹೊಟ್ಟನ್ನು ಬೇರ್ಪಡಿಸಿ ಹಾಗೆ ಸಂಗ್ರಹಿಸಿದ ಅಕ್ಕಿಯಿಂದ ಅನ್ನವನ್ನು ಮಾಡಿಕೊಂಡು ಭೋಜನಮಾಡುವವರು)–ಎಂಬ ಮುನಿಗಳೂ ಇದ್ದಾರೆ. ಅವರೆಲ್ಲರೂ ಸೋಮನ ಕಿರಣಗಳನ್ನೇ ತಿಂದು ಜೀವಿಸುವ (ಸೋಮಪದೇವತೆಗಳ) ಮತ್ತು ಸೂರ್ಯನ ಕಿರಣಗಳನ್ನೇ ತಿಂದು ಜೀವಿ ಸುವ (ಊಷ್ಮಪದೇವತೆಗಳ) ಸಮೀಪದಲ್ಲಿ ಪತ್ನಿಯರೊಡನಿದ್ದುಕೊಂಡು ಜಿತೇಂದ್ರಿಯರಾಗಿ ಉಂಛವೃತ್ತಿಯಿಂದ ಜೀವನವನ್ನು ನಿರ್ವಹಿಸುತ್ತಿರುತ್ತಾರೆ.

ತೇಷಾಮಗ್ನಿಪರಿಸ್ಪನ್ದಃ ಪಿತೄಣಾಂ ಚಾರ್ಚನಂ ತಥಾ ।
ಯಜ್ಞಾನಾಂ ಚೈವ ಪಞ್ಚಾನಾಂ ಯಜನಂ ಧರ್ಮ ಉಚ್ಯತೇ ॥

ಅಗ್ನಿಹೋತ್ರ, ಪಿತೃಗಳ ಪೂಜೆ (ಶ್ರಾದ್ಧ-ತರ್ಪಣಾದಿಗಳು), ಪಂಚ ಮಹಾಯಜ್ಞಗಳ ಅನುಷ್ಠಾನ–ಇವುಗಳು ಸಂಪ್ರಕ್ಷಾಲಾದಿ ಮುನಿಗಳ ಮುಖ್ಯ ಧರ್ಮವೆಂದು ಹೇಳಲ್ಪಟ್ಟಿದೆ.

ಏಷ ಚಕ್ರಚರೈರ್ದೇವಿ ದೇವಲೋಕಚರೈರ್ದ್ವಿಜೈಃ ।
ಋಷಿಧರ್ಮಃ ಸದಾ ಚೀರ್ಣೋ ಯೋಽನ್ಯಸ್ತಮಪಿ ಮೇ ಶೃಣು ॥

ಚಕ್ರದಂತೆ ಯಾವಾಗಲೂ ಸಂಚರಿಸುವ ಮತ್ತು ದೇವಲೋಕದಲ್ಲಿ ಸಂಚರಿಸುವ ಬ್ರಾಹ್ಮಣಮುನಿಗಳು ಈ ಋಷಿಧರ್ಮವನ್ನು ಸದಾ ಅನುಷ್ಠಾನ ಮಾಡುತ್ತಾರೆ. ಈ ಧರ್ಮಗಳೇ ಅಲ್ಲದೇ ಬೇರೆ ಋಷಿಧರ್ಮಗಳನ್ನೂ ಹೇಳುವೆನು ; ಕೇಳು.

ಸರ್ವೇಷ್ವೇವರ್ಷಿಧರ್ಮೇಷು ಜ್ಞೇಯೋಽಽತ್ಮಾ ಸಂಯತೇನ್ದ್ರಿಯೈಃ ।
ಕಾಮಕ್ರೋಧೌ ತತಃ ಪಶ್ಚಾಜ್ಜೇತವ್ಯಾವಿತಿ ಮೇ ಮತಿಃ ॥೧೦೮॥

ಜಿತೇಂದ್ರಿಯರಾಗಿ ಆತ್ಮಜ್ಞಾನವನ್ನು ಪಡೆಯುವುದೇ ಎಲ್ಲ ಋಷಿ ಧರ್ಮಗಳಲ್ಲಿರುವ ಮುಖ್ಯಧ್ಯೇಯವಾಗಿರುತ್ತದೆ. ಕಾಮ-ಕ್ರೋಧಗಳನ್ನೂ ಸಂಪೂರ್ಣವಾಗಿ ಜಯಿಸಬೇಕು. ಇದು ನನ್ನ ಅಭಿಮತವಾಗಿದೆ.

ಅಗ್ನಿಹೋತ್ರಪರಿಸ್ಪನ್ದೋ ಧರ್ಮರಾತ್ರಿಸಮಾಸನಮ್ ।
ಸೋಮಯಜ್ಞಾಭ್ಯನುಜ್ಞಾನಂ ಪಞ್ಚಮೀ ಯಜ್ಞದಕ್ಷಿಣಾ ॥೧೦೯॥

ಅಗ್ನಿಹೋತ್ರದ ಮೂಲಕವಾಗಿ ಅಗ್ನಿಯನ್ನು ಉಪಚರಿಸುವುದು ; ಧರ್ಮಕಾರ್ಯಗಳಲ್ಲಿಯೇ ಸಂಲಗ್ನನಾಗಿರುವುದು ; ಸೋಮಯಾಗವನ್ನು ಮಾಡುವುದು ; ಯಜ್ಞದ ವಿಧಿಯನ್ನು ತಿಳಿದಿರುವುದು ; ಯಜ್ಞದಲ್ಲಿ ದಕ್ಷಿಣೆಯನ್ನು ಕೊಡುವುದು–ಈ ಐದು ಧರ್ಮಗಳನ್ನು ಎಲ್ಲ ಋಷಿಗಳೂ ಅವಶ್ಯವಾಗಿ ಅನುಷ್ಠಾನಮಾಡಬೇಕು.

ನಿತ್ಯಂ ಯಜ್ಞಕ್ರಿಯಾ ಧರ್ಮಃ ಪಿತೃದೇವಾರ್ಚನೇ ರತಿಃ ।
ಸರ್ವಾತಿಥ್ಯಂ ಚ ಕರ್ತವ್ಯಮನ್ನೇನೋಞ್ಛಾರ್ಜಿತೇನ ವೈ ॥೧೧೦॥

ನಿತ್ಯವೂ ಯಜ್ಞಾನುಷ್ಠಾನವನ್ನು ಮಾಡಬೇಕಾದುದು ಧರ್ಮ. ಪಿತೃ ದೇವತೆಗಳ ಅರ್ಚನೆಯಲ್ಲಿಯೂ (ಶ್ರಾದ್ಧ-ತರ್ಪಣಾದಿಗಳಲ್ಲಿಯೂ) ಆಸಕ್ತಿ ಯುಳ್ಳವನಾಗಿರಬೇಕು. ಉಂಛವೃತ್ತಿಯಿಂದ ಸಂಪಾದಿಸಿದ ಅನ್ನದಿಂದ ಎಲ್ಲ ರಿಗೂ ಅತಿಥಿಸತ್ಕಾರಮಾಡುವುದೂ ಋಷಿಗಳ ಪರಮಧರ್ಮವಾಗಿದೆ.

ನಿವೃತ್ತಿರುಪಭೋಗೇಷು ಗೋರಸಾನಾಂ ಶಮೇ ರತಿಃ ।
ಸ್ಥಣ್ಡಿಲೇ ಶಯನೇ ಯೋಗಃ ಶಾಕಪರ್ಣನಿಷೇವಣಮ್ ॥೧೧೧॥

ಫಲಮೂಲಾಶನಂ ವಾಯುರಾಪಃ ಶೈವಲಭಕ್ಷಣಮ್ ।
ಋಷೀಣಾಂ ನಿಯಮಾ ಹ್ಯೇತೇ ಯೈರ್ಜಯನ್ತ್ಯಜಿತಾಂ ಗತಿಮ್ ॥೧೧೨॥

ಗೋರಸಗಳ (ಹಾಲು-ಮೊಸರು-ತುಪ್ಪ-ಮಜ್ಜಿಗೆ ಮುಂತಾದುವುಗಳ) ಉಪಭೋಗಗಳಿಂದ (ಸೇವನೆಯಿಂದ) ನಿವೃತ್ತಿ (ಇವುಗಳನ್ನು ಸೇವಿಸದೇ ಇರುವುದು), ಶಾಂತಿಯಲ್ಲಿ ಅಥವಾ ಮನೋನಿಗ್ರಹದಲ್ಲಿ ಆಸಕ್ತನಾಗಿರು ವುದು, ನೆಲದ ಮೇಲೆ ಮಲಗುವುದು, ಯೋಗಾಭ್ಯಾಸಮಾಡುವುದು, ಕಾಯಿ-ಪಲ್ಯೆಗಳನ್ನೂ–ಎಲೆಗಳನ್ನೂ ತಿನ್ನುವುದು, ಫಲಗಳನ್ನೂ ಗೆಡ್ಡೆ-

ಗೆಣಸುಗಳನ್ನೂ ತಿನ್ನುವುದು, ವಾಯು, ನೀರು ಮತ್ತು ಪಾಚಿ–ಇವುಗಳನ್ನೇ ಆಹಾರವನ್ನಾಗಿ ತೆಗೆದುಕೊಳ್ಳುವುದು–ಇವುಗಳೆಲ್ಲವೂ ಋಷಿಗಳು ಅನುಸರಿಸಬೇಕಾದ ನಿಯಮಗಳಾಗಿವೆ. ಈ ನಿಯಮಗಳನ್ನು ಪರಿಪಾಲಿಸುತ್ತಾ ಋಷಿಗಳು ಯಾರಿಂದಲೂ ಜಯಿಸಲು ಸಾಧ್ಯವಾಗದಂತಹ ಶ್ರೇಷ್ಠವಾದ ಗತಿಯನ್ನು ಪಡೆದುಕೊಳ್ಳುತ್ತಾರೆ.

ವಿಧೂಮೇ ಸನ್ನಮುಸಲೇ ವ್ಯಙ್ಗಾರೇ ಭುಕ್ತವಜ್ಜನೇ ।
ಅತೀತಪಾತ್ರಸಂಚಾರೇ ಕಾಲೇ ವಿಗತಭಿಕ್ಷುಕೇ ॥೧೧೩॥

ಅತಿಥಿಂ ಕಾಂಕ್ಷಮಾಣೋ ವೈ ಶೇಷಾನ್ನಕೃತಭೋಜನಃ ।
ಸತ್ಯಧರ್ಮರತಃ ಶಾನ್ತೋ ಮುನಿಧರ್ಮೇಣ ಯುಜ್ಯತೇ ॥೧೧೪॥

ನ ಸ್ತಮ್ಭೀ ನ ಚ ಮಾನೀ ಸ್ಯಾನ್ನಾಪ್ರಸನ್ನೋ ನ ವಿಸ್ಮಿತಃ ।
ಮಿತ್ರಾಮಿತ್ರಸಮೋ ಮೈತ್ರೋ ಯಃ ಸ ಧರ್ಮವಿದುತ್ತಮಃ ॥೧೧೫॥

ಗೃಹಸ್ಥರ ಮನೆಯ ಅಡಿಗೆಯ ಮನೆಯಿಂದ ಹೊಗೆಯು ಬರುವುದು ನಿಂತಾಗ (ಅವರ ಮನೆಗಳಲ್ಲಿ ಅಡಿಗೆಯ ಸಿದ್ಧತೆಗಳೆಲ್ಲವೂ ಮುಗಿದು ಹೋದಾಗ), ಭತ್ತದಿಂದ ಹೊಟ್ಟನ್ನು ಬೇರ್ಪಡಿಸಲು ಸತತವಾಗಿ ಮಾಡುವ ಒನಕೆಯ ಶಬ್ದವು ನಿಂತುಹೋದಾಗ, ಎಲ್ಲರೂ ಊಟಮಾಡಿ ಮುಗಿಸಿರುವಾಗ, ಅಡಿಗೆಯ ಅಥವಾ ಬಡಿಸುವ ಪಾತ್ರೆಗಳನ್ನು ಇಲ್ಲಿಂದಲ್ಲಿಗೂ ಅಲ್ಲಿಂದಿಲ್ಲಿಗೂ ಒಯ್ಯುವಾಗ ಆಗುವ ಶಬ್ದವೂ ನಿಂತುಹೋಗಿರುವಾಗ, ಭಿಕ್ಷುಕರಾರೂ ಇಲ್ಲದೇ ಇರುವಾಗ–ಅತಿಥಿಗಾಗಿ ಕಾಯುತ್ತಿದ್ದು, ಬೇರೆಲ್ಲೂ ಭೋಜನವು ಸಿಕ್ಕದೆ ತನ್ನ ಕುಟೀರಕ್ಕೆ ಬರುವ ಅತಿಥಿಯನ್ನು ಉಪಚರಿಸಿ ಸತ್ಕರಿಸಿ ಭೋಜನವನ್ನು ಮಾಡಿಸಿ ಅನಂತರ ಅನ್ನಶೇಷವನ್ನು ಭೋಜನಮಾಡುವ, ಸತ್ಯಧರ್ಮದಲ್ಲಿಯೇ ರತನಾದ, ಶಾಂತನಾದ ಮನುಷ್ಯನು ಋಷಿಧರ್ಮದಿಂದ ಕೂಡಿದವನಾಗುತ್ತಾನೆ. ಇಂತಹ ಪರಮಧರ್ಮವನ್ನು ಅನುಸರಿಸುವವನೇ ಋಷಿಯು. ಯಾವನಿಗೆ ಗರ್ವಾಭಿಮಾನಗಳಿಲ್ಲವೋ, ಯಾವನು ಯಾವಾಗಲೂ ಪ್ರಸನ್ನಚಿತ್ತನಾಗಿರುವನೋ, ಯಾವುದನ್ನೇ ನೋಡಿದರೂ ವಿಸ್ಮಿತನಾಗುವುದಿಲ್ಲವೋ, ಮಿತ್ರರಲ್ಲಿಯೂ–ಶತ್ರುಗಳಲ್ಲಿಯೂ ಸಮಭಾವ

ದಿಂದಿರುವನೋ, ಎಲ್ಲರ ವಿಷಯದಲ್ಲಿಯೂ ಮೈತ್ರಿಯಿಂದಿರುವನೋ– ಅವನೇ ಧರ್ಮವನ್ನು ತಿಳಿದವನು ಮತ್ತು ಶ್ರೇಷ್ಠನಾದ ಋಷಿಯು.”

ಗ೪ಗನೆಯ ಅಧ್ಯಾಯವು ಮುಗಿಯಿತು.

ಗ೪೨ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಉಮಾಮಹೇಶ್ವರಸಂವಾದ–ವಾನಪ್ರಸ್ಥಧರ್ಮ : ಅದರ ಪಾಲನೆ ಮತ್ತು ಮಹಿಮೆ

ಉಮೆಯು ಹೇಳುತ್ತಾಳೆ :

ದೇಶೇಷು ರಮಣೀಯೇಷು ನದೀನಾಂ ನಿರ್ಝರೇಷು ಚ ।
ಪ್ರವನ್ತೀನಾಂ ನಿಕುಞ್ಜೇಷು ಪರ್ವತೇಷು ವನೇಷು ಚ ॥೧॥

ದೇಶೇಷು ಚ ಪವಿತ್ರೇಷು ಫಲವತ್ಸು ಸಮಾಹಿತಾಃ ।
ಮೂಲವತ್ಸು ಚ ಮಧ್ಯೇಷು ವಸನ್ತಿ ನಿಯತವ್ರತಾಃ ॥೨॥

ತೇಷಾಮಪಿ ವಿಧಿಂ ಪುಣ್ಯಂ ಶ್ರೋತುಮಿಚ್ಛಾಮಿ ಶಙ್ಕರ ।
ವಾನಪ್ರಸ್ಥೇಷು ದೇವೇಶ ಸ್ವಶರೀರೋಪಜೀವಿಷು ॥೩॥

“ಪೂಜ್ಯನಾದ ಶಂಕರನೇ! ನಿಯಮಪೂರ್ವಕವಾಗಿ ವ್ರತಗಳನ್ನು ಪರಿಪಾಲಿಸುವ, ಏಕಾಗ್ರಚಿತ್ತರಾಗಿ ಕಾಯಕದಿಂದ ಜೀವಿಸುವ, ಮಹಾತ್ಮರಾದ ವಾನಪ್ರಸ್ಥಾಶ್ರಮಿಗಳು–ನದಿಗಳ ರಮಣೀಯವಾದ ತಟಪ್ರದೇಶಗಳಲ್ಲಿಯೂ, ಪರ್ವತಝರಿಗಳ ಪ್ರದೇಶಗಳಲ್ಲಿಯೂ, ನದಿಗಳ ತೀರಗಳಲ್ಲಿರುವ ಲತಾಕುಂಜಗಳಲ್ಲಿಯೂ, ಪರ್ವತಪ್ರದೇಶಗಳಲ್ಲಿಯೂ, ಅರಣ್ಯಗಳಲ್ಲಿಯೂ, ಫಲ-ಮೂಲಗಳಿಂದ ಸಮೃದ್ಧವಾದ ಪವಿತ್ರಸ್ಥಳಗಳಲ್ಲಿಯೂ ವಾಸ ಮಾಡುತ್ತಾರೆ. ಅವರು ಪಾಲಿಸಬೇಕಾಗಿರುವ ಪವಿತ್ರವಿಧಿಗಳನ್ನು ಕೇಳಲು ಅಪೇಕ್ಷೆಯಾಗಿದೆ. ದಯಮಾಡಿ ಹೇಳು.”

ಮಹೇಶ್ವರನು ಹೇಳುತ್ತಾನೆ :

ವಾನಪ್ರಸ್ಥೇಷು ಯೋ ಧರ್ಮಸ್ತಂ ಮೇ ಶೃಣು ಸಮಾಹಿತಾ ।
ಶ್ರುತ್ವಾ ಚೈಕಮನಾ ದೇವಿ ಧರ್ಮಬುದ್ಧಿ ಪರಾ ಭವ ॥೪॥

“ದೇವಿ! ವಾನಪ್ರಸ್ಥರಲ್ಲಿ ಯಾವ ಧರ್ಮವಿರುವುದೋ (ಯಾವ

ಧರ್ಮವನ್ನು ವಾನಪ್ರಸ್ಥರು ಆಚರಿಸಬೇಕೋ) ಅದನ್ನು ಹೇಳುವೆನು ; ಏಕಾಗ್ರಚಿತ್ತಳಾಗಿ ಕೇಳು. ಸಮಾಹಿತಚಿತ್ತಳಾಗಿ ಕೇಳಿದನಂತರ ಧರ್ಮ ಬುದ್ಧಿಯುಳ್ಳವಳಾಗು. (ನಿನ್ನ ಬುದ್ಧಿಯೂ ಯಾವಾಗಲೂ ಧರ್ಮದಲ್ಲಿಯೇ ಸಂಲಗ್ನವಾಗಿರಲಿ.)

ಸಂಸಿದ್ಧೈರ್ನಿಯಮೈಃ ಸದ್ಭಿರ್ವನವಾಸಮುಪಾಗತೈಃ ।
ವಾನಪ್ರಸ್ಥೈರಿದಂ ಕರ್ಮ ಕರ್ತವ್ಯಂ ಶೃಣು ಯಾದೃಶಮ್ ॥೫॥

ನಿಯಮವ್ರತಪಾಲನೆಗಳಿಂದ ಸಿದ್ಧಿಯನ್ನು ಪಡೆದ, ಸತ್ಪುರುಷರಾದ, ವನವಾಸಕ್ಕೆ ತೆರಳಿದ ವಾನಪ್ರಸ್ಥರು ಇಂತಹ ಕರ್ಮಗಳನ್ನು ಮಾಡಬೇಕು. ಅವು ಯಾವ ವಿಧವಾದ ಕರ್ಮಗಳೆಂಬುದನ್ನು ಹೇಳುವೆನು ; ಕೇಳು.

ತ್ರಿಕಾಲಮಭಿಷೇಕಂ ಚ ಪಿತೃದೇವಾರ್ಚನಂ ತಥಾ ।
ಅಗ್ನಿಹೋತ್ರಪರಿಸ್ಪನ್ದ ಇಷ್ಟಿಹೋಮವಿಧಿಸ್ತಥಾ ॥೬॥

ವಾನಪ್ರಸ್ಥಾಶ್ರಮಿಗಳು ಪ್ರಾತಃಕಾಲ-ಮಧ್ಯಾಹ್ನ-ಸಾಯಂಕಾಲಗಳಲ್ಲಿ ಸ್ನಾನಮಾಡಬೇಕು. ಪಿತೃಗಳ ಮತ್ತು ದೇವತೆಗಳ ಅರ್ಚನೆಯನ್ನು ಮಾಡ ಬೇಕು. ಅಗ್ನಿಹೋತ್ರವನ್ನೂ, ವಿಧಿವತ್ತಾಗಿ ಇಷ್ಟಿಗಳನ್ನೂ ಮಾಡಬೇಕು.

ನೀವಾರಗ್ರಹಣಂ ಚೈವ ಫಲಮೂಲನಿಷೇವಣಮ್ ।
ಇಙ್ಗುದೈರಣ್ಡತೈಲಾನಾಂ ಸ್ನೇಹಾರ್ಥೇ ಚ ನಿಷೇವಣಮ್ ॥೭॥

ವಾನಪ್ರಸ್ಥಾಶ್ರಮಿಗಳು ನವಣೇಅಕ್ಕಿಯನ್ನೂ (ಕೃಷಿಮಾಡದೇ ಕಾಡಿನಲ್ಲಿ ತಾನಾಗಿಯೇ ಬೆಳೆಯುವ ಧಾನ್ಯವನ್ನು) ಫಲ-ಮೂಲಗಳನ್ನೂ ಆಹಾರಕ್ಕಾಗಿ ಉಪಯೋಗಿಸಬೇಕು. ಮೈಗೆ ಹಚ್ಚಿಕೊಳ್ಳಲು ಇಂಗಳದ ಮತ್ತು ಹರಳಿನ ಎಣ್ಣೆಯನ್ನೇ ಉಪಯೋಗಿಸಬೇಕು.

ಯೋಗಚರ್ಯಾಕೃತೈಃ ಸಿದ್ಧೈಃ ಕಾಮಕ್ರೋಧವಿವರ್ಜಿತೈಃ ।
ವೀರಶಯ್ಯಾಮುಪಾಸದ್ಭಿರ್ವೀರಸ್ಥಾನೋಪಸೇವಿಭಿಃ ॥೮॥

ಯೋಗಾಭ್ಯಾಸಮಾಡುತ್ತಾ ಆಸನಸಿದ್ಧಿಯನ್ನು ಪಡೆದುಕೊಳ್ಳಬೇಕು. ಕಾಮ-ಕ್ರೋಧಗಳನ್ನು ತ್ಯಜಿಸಬೇಕು. ವೀರರಿಂದ ಮಾತ್ರವೇ ವಾಸಮಾಡಲು ಸಾಧ್ಯವಾಗುವ ಮಹಾರಣ್ಯದಲ್ಲಿ ವಾಸಮಾಡುತ್ತಾ ವೀರಾಸನದಲ್ಲಿ ಕುಳಿತು ಧ್ಯಾನಮಾಡಬೇಕು.

ಯುಕ್ತೈರ್ಯೋಗವಹೈಃ ಸದ್ಭಿರ್ಗ್ರೀಷ್ಮೇ ಪಞ್ಚತಪೈಸ್ತಥಾ ।
ಮಣ್ಡೂಕಯೋಗನಿಯತೈರ್ಯಥಾನ್ಯಾಯಂ ನಿಷೇವಿಭಿಃ ॥೯॥

ಏಕಾಗ್ರಚಿತ್ತರಾಗಿ ಯೋಗಸಾಧನೆಯಲ್ಲಿ ನಿರತರಾಗಿರಬೇಕು. ಶ್ರೇಷ್ಠರಾದ ವಾನಪ್ರಸ್ಥಾಶ್ರಮಿಗಳು ಗ್ರೀಷ್ಮರ್ತುವಿನಲ್ಲಿ ಪಂಚಾಗ್ನಿಗಳ ಮಧ್ಯದಲ್ಲಿ ಕುಳಿತು ತಪಸ್ಸನ್ನು ಮಾಡಬೇಕು. ಹಠಯೋಗದಲ್ಲಿ ಪ್ರಸಿದ್ಧವಾಗಿರುವ ಮಂಡೂಕಯೋಗದ ಯಥಾಶಾಸ್ತ್ರೀಯವಾದ ಅಭ್ಯಾಸದಲ್ಲಿ ನಿರತರಾಗಿರಬೇಕು.

ವೀರಾಸನರತೈರ್ನಿತ್ಯಂ ಸ್ಥಣ್ಡಿಲೇ ಶಯನಂ ತಥಾ ।
ಶೀತತೋಯಾಗ್ನಿಯೋಗಶ್ಚ ಚರ್ತವ್ಯೋ ಧರ್ಮಬುದ್ಧಿಭಿಃ ॥೧೦॥

ನಿತ್ಯವೂ ವೀರಾಸನದಲ್ಲಿ ಕುಳಿತಿರಬೇಕು. ನೆಲದ ಮೇಲೆ ಮಲಗ ಬೇಕು. ಶೀತಕಾಲದ ರಾತ್ರಿಗಳಲ್ಲಿ ನೀರಿನಲ್ಲಿರಬೇಕು. ಮಳೆಯು ಸುರಿಯುತ್ತಿರುವಾಗ ಬಯಲಿನಲ್ಲಿರಬೇಕು. ಉರಿಯುವ ಬೇಸಗೆಯಲ್ಲಿ ನಾಲ್ಕು ದಿಕ್ಕುಗಳಲ್ಲಿಯೂ ಅಗ್ನಿಯನ್ನು ಪ್ರತಿಷ್ಠಾಪಿಸಿಕೊಂಡು ವೀರಾಸನದಲ್ಲಿ ಕುಳಿತುಕೊಳ್ಳಬೇಕು. ಧರ್ಮಬುದ್ಧಿಯುಳ್ಳ ವಾನಪ್ರಸ್ಥಾಶ್ರಮಿಗಳು ಈ ವ್ರತಗಳನ್ನು ಮಾಡಬೇಕು.

ಅಬ್ಭಕ್ಷೈರ್ವಾಯುಭಕ್ಷೈಶ್ಚ ಶೈವಲೋತ್ತರಭೋಜನೈಃ ।
ಅಶ್ಮಕುಟ್ಟೈಸ್ತಥಾ ದಾನ್ತೈಃ ಸಮ್ಪ್ರಕ್ಷಾಲೈಸ್ತಥಾಪರೈಃ ॥೧೧॥

ವಾನಪ್ರಸ್ಥಾಸ್ರಮವು ನೀರನ್ನೇ ಅಥವಾ ವಾಯುವನ್ನೇ ಆಹಾರವನ್ನಾಗಿ ಮಾಡಿಕೊಂಡಿರುವವರಿಂದಲೂ, ಪಾಚಿಯನ್ನೇ ತಿಂದು ಜೀವಿಸುವವರಿಂದಲೂ, ಭತ್ತವನ್ನು ಕಲ್ಲಿನಿಂದ ಕುಟ್ಟಿ ಹೊಟ್ಟುತೆಗೆದು ಅಕ್ಕಿಯನ್ನು ಮಾಡಿಕೊಂಡು ಜೀವಿಸುವವರಿಂದಲೂ, ಹಲ್ಲಿನಿಂದಲೇ ಹೊಟ್ಟನ್ನು ಬೇರ್ಪಡಿಸಿದ ಧಾನ್ಯವನ್ನು ತಿಂದು ಜೀವಿಸುವವರಿಂದಲೂ, ನಾಳೆಗೇನೆಂಬುದನ್ನು ಯೋಚಿಸದೇ ಅಹನ್ಯಹನಿ ಕಾಲಕ್ಷೇಪಮಾಡುವವರಿಂದಲೂ ಯುಕ್ತವಾಗಿರುತ್ತದೆ.

ಚೀರವಲ್ಕಲಸಂವೀತೈರ್ಮೃಗಚರ್ಮನಿವಾಸಿಭಿಃ ।
ಕಾರ್ಯಾ ಯಾತ್ರಾ ಯಥಾಕಾಲಂ ಯಥಾಧರ್ಮಂ ಯಥಾವಿಧಿ ॥೧೨॥

ನಾರುಬಟ್ಟೆಗಳನ್ನು ಅಧೋವಸ್ತ್ರವನ್ನಾಗಿಯೂ – ಮೃಗಚರ್ಮವನ್ನು

ಉತ್ತರೀಯವನ್ನಾಗಿಯೂ ಧರಿಸುವ ವಾನಪ್ರಸ್ಥಾಶ್ರಮಿಗಳು ಸಮಯಾನುಸಾರವಾಗಿ ವಿಧಿಪೂರ್ವಕವಾಗಿ ಪುಣ್ಯಕ್ಷೇತ್ರಗಳ ಯಾತ್ರೆಯನ್ನು ಮಾಡಬೇಕು.

ವನನಿತ್ಯೈರ್ವನಚರೈರ್ವನಸ್ಥೈರ್ವನಗೋಚರೈಃ ।
ವನಂ ಗುರುಮಿವಾಸಾದ್ಯ ವಸ್ತವ್ಯಂ ವನಜೀವಿಭಿಃ ॥೧೩॥

ನಿತ್ಯವೂ ವನದಲ್ಲಿಯೇ ಇರುವ, ವನದಲ್ಲಿಯೇ ಸಂಚರಿಸುವ, ವನದಲ್ಲಿಯೇ ವಾಸಮಾಡುವ, ಅರಣ್ಯದಲ್ಲಿಯೇ ಅಡ್ಡಾಡುವ, ಅರಣ್ಯದಲ್ಲಿಯೇ ಮರಣಪರ್ಯಂತವಾಗಿ ಜೀವನವನ್ನು ನಿರ್ವಹಿಸುವ ವಾನಪ್ರಸ್ಥಾಶ್ರಮಿಗಳು ಶಿಷ್ಯನು ಗುರುವನ್ನು ಆಶ್ರಯಿಸುವಂತೆ–ಅರಣ್ಯವನ್ನೇ ಆಶ್ರಯಿಸಿ ವಾಸಮಾಡಬೇಕು.

ತೇಷಾಂ ಹೋಮಕ್ರಿಯಾ ಧರ್ಮಃ ಪಞ್ಚಯಜ್ಞನಿಷೇವಣಮ್ ।
ಭಾಗಂ ಚ ಪಞ್ಚಯಜ್ಞಸ್ಯ ವೇದೋಕ್ತಸ್ಯಾನುಪಾಲನಮ್ ॥೧೪॥

ಪ್ರತಿನಿತ್ಯವೂ ಅಗ್ನಿಹೋತ್ರವನ್ನೂ, ಪಂಚಮಹಾಯಜ್ಞಗಳನ್ನೂ ಮಾಡುವುದು ವಾನಪ್ರಸ್ಥರ ಧರ್ಮವಾಗಿದೆ. ಅವರು ವಿಭಾಗಪೂರ್ವಕವಾಗಿ ವೇದೋಕ್ತವಾದ ಪಂಚಯಜ್ಞಗಳನ್ನು ನಿರಂತರವಾಗಿ ಆಚರಿಸಬೇಕು.

ಅಷ್ಟಮೀಯಜ್ಞಪರತಾ ಚಾತುರ್ಮಾಸ್ಯನಿಷೇವಣಮ್ ।
ಪೌರ್ಣಮಾಸಾದಯೋ ಯಜ್ಞಾ ನಿತ್ಯಯಜ್ಞಸ್ತಥೈವ ಚ ॥೧೫॥

ಅಷ್ಟಮೀತಿಥಿಯಂದು ಮಾಡಬೇಕಾದ ಅಷ್ಟಕಾಶ್ರಾದ್ಧವನ್ನು ಮಾಡಬೇಕು. ಚಾತುರ್ಮಾಸ್ಯಯಜ್ಞವನ್ನು ಅನುಷ್ಠಾನಮಾಡಬೇಕು. ಪೌರ್ಣಮಾಸ ಮತ್ತು ದರ್ಶಾದಿ ಯಜ್ಞಗಳನ್ನೂ ನಿತ್ಯಯಜ್ಞಗಳನ್ನೂ ಮಾಡುವುದು ವಾನಪ್ರಸ್ಥಾಶ್ರಮಿಯ ಧರ್ಮವಾಗಿದೆ.

ವಿಮುಕ್ತಾ ದಾರಸಂಯೋಗೈರ್ವಿಮುಕ್ತಾಃ ಸರ್ವಸಂಕರೈಃ ।
ವಿಮುಕ್ತಾಃ ಸರ್ವಪಾಪೈಶ್ಚ ಚರನ್ತಿ ಮುನಯೋ ವನೇ ॥೧೬॥

ವಾನಪ್ರಸ್ಥಾಶ್ರಮಿಗಳಾದ ಮುನಿಗಳು ಪತ್ನೀಸಮಾಗಮದಿಂದ ವಿರತ

ರಾಗಿರುತ್ತಾರೆ. ಸಕಲವಿಧವಾದ ಸಂಪರ್ಕಗಳಿಂದಲೂ ಮುಕ್ತರಾಗಿರುತ್ತಾರೆ. ಸಕಲಪಾಪಗಳಿಂದಲೂ ಮುಕ್ತರಾಗಿ ಅರಣ್ಯದಲ್ಲಿ ಸಂಚರಿಸುತ್ತಿರುತ್ತಾರೆ.

ಸ್ರುಗ್ಭಾಣ್ಡಪರಮಾ ನಿತ್ಯಂ ತ್ರೇತಾಗ್ನಿಶರಣಾಃ ಸದಾ ।
ಸನ್ತಃ ಸತ್ಪಥನಿತ್ಯಾ ಯೇ ತೇ ಯಾನ್ತಿ ಪರಮಾಂ ಗತಿಮ್ ॥೧೭॥

ಸ್ರುಕ್-ಸ್ರುವ ಇವೇ ಮುಂತಾದ ಯಜ್ಞಪಾತ್ರೆಗಳೇ ವಾನಪ್ರಸ್ಥಾಶ್ರಮಿಗಳಿಗೆ ಉತ್ತಮವಾದ ಉಪಕರಣಗಳಾಗಿರುತ್ತವೆ. ಅವರು ಸರ್ವಕಾಲದಲ್ಲಿಯೂ ಗಾರ್ಹಪತ್ಯವೇ ಮೊದಲಾದ ಮೂರು ಅಗ್ನಿಗಳನ್ನು ಆಶ್ರಯಿಸಿ ಅಗ್ನಿಪರಿಚರ್ಯೆಯಲ್ಲಿಯೇ ನಿರತರಾಗಿರುತ್ತಾರೆ. ಸತ್ಪುರುಷರಾದ ಅವರು ಯಾವಾಗಲೂ ಸನ್ಮಾರ್ಗದಲ್ಲಿಯೇ ವ್ಯವಹರಿಸುತ್ತಿರುತ್ತಾರೆ. ಅಂತಹ ವಾನಪ್ರಸ್ಥಾಶ್ರಮಿಗಳು ಅವಸಾನಾನಂತರದಲ್ಲಿ ಶ್ರೇಷ್ಠವಾದ ಸದ್ಗತಿಯನ್ನು ಹೊಂದುತ್ತಾರೆ.

ಬ್ರಹ್ಮಲೋಕಂ ಮಹಾಪುಣ್ಯಂ ಸೋಮಲೋಕಂ ಚ ಶಾಶ್ವತಮ್ ।
ಗಚ್ಛನ್ತಿ ಮುನಯಃ ಸಿದ್ಧಾಃ ಸತ್ಯಧರ್ಮವ್ಯಪಾಶ್ರಯಾಃ ॥೧೮॥

ಸತ್ಯಧರ್ಮಗಳನ್ನೇ ಆಶ್ರಯಿಸಿರುವ, ಸಿದ್ಧರಾದ ಅಂತಹ ವಾನಪ್ರಸ್ಥ ಮುನಿಗಳು ಮಹಾಪುಣ್ಯಮಯವಾದ ಬ್ರಹ್ಮಲೋಕವನ್ನೂ–ಶಾಶ್ವತವಾದ ಸೋಮಲೋಕವನ್ನೂ ಹೊಂದುತ್ತಾರೆ.

ದೇವಿ! ಪಾರ್ವತಿ! ಹೀಗೆ ನಾನು ನಿನಗೆ ವಾನಪ್ರಸ್ಥಾಶ್ರಮವನ್ನು ಆಶ್ರಯಿಸಿರುವ ಶುಭಕರವಾದ ಧರ್ಮವನ್ನು ವಿಸ್ತಾರವಾಗಿ ವಿವರಿಸಿ ಹೇಳಿದ್ದೇನೆ."

ಉಮೆಯು ಹೇಳುತ್ತಾಳೆ :

ಭಗವನ್ಸರ್ವಭೂತೇಶ ಸರ್ವಭೂತನಮಸ್ಕೃತ ।
ಯೋ ಧರ್ಮೋ ಮುನಿಸಂಘಸ್ಯ ಸಿದ್ಧಿ ವಾದೇಷು ತಂ ವದ ॥೨೦॥

"ಪೂಜ್ಯನೇ! ಸರ್ವಭೂತೇಶ್ವರನೇ! ಸಕಲಪ್ರಾಣಿಗಳಿಂದಲೂ ವಂದಿಸಲ್ಪಡುವವನೇ! ಅಗ್ನಿಸ್ತಂಭ, ವಾಯುಸ್ತಂಭ, ಜಲಸ್ತಂಭ, ರಸವಾದ ಇವೇ ಮೊದಲಾದ ವಿದ್ಯೆಗಳಲ್ಲಿ ನಿಷ್ಣಾತರಾದ ಮುನಿಸಮುದಾಯದ ಧರ್ಮವು ಯಾವುದೆಂಬುದನ್ನು ಹೇಳು.

ಸಿದ್ಧಿವಾದೇಷು ಸಂಸಿದ್ಧಾಸ್ತಥಾ ವನನಿವಾಸಿನಃ ।
ಸ್ವೈರಿಣೋ ದಾರಸಂಯುಕ್ತಾಸ್ತೇಷಾಂ ಧರ್ಮಃ ಕಥಂ ಸ್ಮೃತಃ ॥೨೧॥

ಸಿದ್ಧಿ ಮತ್ತು ವಾದಗಳಲ್ಲಿ ಒಳ್ಳೆಯ ಸಿದ್ಧಿಯನ್ನು ಪಡೆದಿರುವ ಸ್ವಚ್ಛಂದವಾಗಿ ತಿರುಗುವವರಿಗೆ ಮತ್ತು ಪತ್ನೀಸಮೇತರಾದ ವನವಾಸಿಗಳಿಗೆ ಯಾವ ಧರ್ಮವು ಉಕ್ತವಾಗಿದೆ?"

ಮಹೇಶ್ವರನು ಹೇಳುತ್ತಾನೆ :
ಸ್ವೈರಿಣಸ್ತಪಸಾ ದೇವಿ ಸರ್ವೇ ದಾರವಿಹಾರಿಣಃ ।
ತೇಷಾಂ ಮೌಣ್ಡ್ಯಂ ಕಷಾಯಶ್ಚ ವಾಸೇ ರಾತ್ರಿಶ್ಚ ಕಾರಣಮ್ ॥೨೨॥

"ದೇವಿ! ಎಲ್ಲ ವಾನಪ್ರಸ್ಥಾಶ್ರಮಿಗಳೂ ತಪಸ್ಸಿನಲ್ಲಿಯೇ ನಿರತರಾಗಿರುತ್ತಾರೆ. ಅವರಲ್ಲಿ ಕೆಲವರು ಸ್ವಚ್ಛಂದವಿಹಾರಿಗಳಾಗಿರುತ್ತಾರೆ. ಪತ್ನಿಯರೊಡನೆ ಇರುವುದಿಲ್ಲ. ಕೆಲವರು ಪತ್ನಿಯರೊಡನೆ ಇರುತ್ತಾರೆ. ಸ್ವಚ್ಛಂದಚಾರಿಗಳಾದ ಮುನಿಗಳು ಮುಂಡನಮಾಡಿಸಿಕೊಂಡು ಕಾವಿಬಟ್ಟೆಯನ್ನು ಧರಿಸಿರುತ್ತಾರೆ. ಅವರು ಯಾವಾಗಲೂ ಒಂದು ಕಡೆಯಲ್ಲಿ ವಾಸವಾಗಿರುವುದಿಲ್ಲ. ಆದರೆ ಪತ್ನಿಯರೊಡನೆ ಇರುವ ವಾನಪ್ರಸ್ಥರು ರಾತ್ರಿಯ ವೇಳೆಯಲ್ಲಿ ಆಶ್ರಮಗಳಲ್ಲಿಯೇ ಇರುತ್ತಾರೆ.

ತ್ರಿಕಾಲಮಭಿಷೇಕಶ್ಚ ಹೋತ್ರಂ ತ್ವೃಷಿಕೃತಂ ಮಹತ್ ।
ಸಮಾಧಿಸತ್ಪಥಸ್ಥಾನಂ ಯಥೋದ್ದಿಷ್ಟನಿಷೇವಣಮ್ ॥೨೩॥

ಪ್ರತಿನಿತ್ಯವೂ ತ್ರಿಕಾಲಸ್ನಾನ, ಅಗ್ನಿಹೋತ್ರ, ಧ್ಯಾನಪರರಾಗಿ ಸಮಾಧಿಸ್ಥಿತಿಯನ್ನು ಹೊಂದುವುದು, ಸನ್ಮಾರ್ಗದಲ್ಲಿಯೇ ವ್ಯವಹರಿಸುವುದು ಮತ್ತು ಶಾಸ್ತ್ರೋದ್ದಿಷ್ಟವಾದ ಕರ್ಮಗಳನ್ನು ಮಾಡುವುದು–ಇವು ಎರಡೂ ಬಗೆಯ ಮುನಿಗಳ ಮುಖ್ಯಕರ್ತವ್ಯಗಳಾಗಿವೆ.

ಯೇ ಚ ತೇ ಪೂರ್ವಕಥಿತಾ ಧರ್ಮಾಸ್ತೇ ವನವಾಸಿನಾಮ್ ।
ಯದಿ ಸೇವನ್ತಿ ಧರ್ಮಾಂಸ್ತಾನಾಪ್ನುವನ್ತಿ ತಪಃಫಲಮ್ ॥೨೪॥

ಈ ಹಿಂದೆ ನಿನಗೆ ವಾನಪ್ರಸ್ಥರಿಗೆ ಉಕ್ತವಾದ ಯಾವ ಧರ್ಮಗಳನ್ನು ಹೇಳಿದೆನೋ–ಆ ಧರ್ಮಗಳೆಲ್ಲವನ್ನೂ ಮುನಿಗಳೂ ಅನುಷ್ಠಾನಮಾಡಿದರೆ ತಮ್ಮ ತಪಸ್ಸಿನ ಪೂರ್ಣಫಲವನ್ನು ಹೊಂದುತ್ತಾರೆ.

ಯೇ ಚ ದಮ್ಪತಿಧರ್ಮಾಣಃ ಸ್ವದಾರನಿಯತೇನ್ದ್ರಿಯಾಃ ।
ಚರನ್ತಿ ವಿಧಿವದ್ದೃಷ್ಟಂ ತದನುಕಾಲಾಭಿಗಾಮಿನಃ ॥೨೫॥
ತೇಷಾಮೃಷಿಕೃತೋ ಧರ್ಮೋ ಧರ್ಮಿಣಾಮುಪಪದ್ಯತೇ ।
ನ ಕಾಮಕಾರಾತ್ಕಾಮೋಽನ್ಯಃ ಸಂಸೇವ್ಯೋ ಧರ್ಮದರ್ಶಿಭಿಃ ॥೨೬॥

ಯಾವ ಗೃಹಸ್ಥರು ದಾಂಪತ್ಯಧರ್ಮವನ್ನು ಪರಿಪಾಲಿಸುತ್ತಾ ಪತ್ನಿಯ ರೊಡನೆ ಇದ್ದುಕೊಂಡು, ಜಿತೇಂದ್ರಿಯರಾಗಿ ವೇದವಿಹಿತವಾದ ಕರ್ಮಾನು ಷ್ಠಾನಗಳನ್ನು ಮಾಡುತ್ತಾ, ಋತುಕಾಲದಲ್ಲಿ ಮಾತ್ರವೇ ಪತ್ನೀಸಮಾಗಮ ಮಾಡುವರೋ–ಅಂತಹ ಧರ್ಮಾತ್ಮರಿಗೆ ಋಷಿಧರ್ಮವನ್ನು ಪರಿಪಾಲಿಸು ವುದರಿಂದ ಪ್ರಾಪ್ತವಾಗುವ ಪುಣ್ಯವೇ ಲಭಿಸುತ್ತದೆ. ಧರ್ಮದರ್ಶಿಗಳಾದ ಗೃಹಸ್ಥರು ಸ್ವಚ್ಛಂದತೆಯಿಂದ ಬೇರೆ ಯಾವ ಕಾಮೋಪಭೋಗವನ್ನೂ ಸೇವಿಸಬಾರದು.

ಸರ್ವಭೂತೇಷು ಯಃ ಸಮ್ಯಗ್ದದಾತ್ಯಭಯದಕ್ಷಿಣಾಮ್ ।
ಹಿಂಸಾದೋಷವಿಮುಕ್ತಾತ್ಮಾ ಸ ವೈ ಧರ್ಮೇಣ ಯುಜ್ಯತೇ ॥೨೭॥

ಯಾವನು ಹಿಂಸಾ-ದೋಷಗಳಿಂದ ಮುಕ್ತನಾಗಿ ಎಲ್ಲ ಪ್ರಾಣಿಗಳಿಗೂ ಅಭಯಪ್ರದಾನವನ್ನು ಮಾಡುವನೋ–ಅವನು ಪುಣ್ಯಾತ್ಮನಾಗುತ್ತಾನೆ.

ಸರ್ವಭೂತಾನುಕಮ್ಪೀ ಯಃ ಸರ್ವಭೂತಾರ್ಜವವ್ರತಃ ।
ಸರ್ವಭೂತಾತ್ಮಭೂತಶ್ಚ ಸ ವೈ ಧರ್ಮೇಣ ಯುಜ್ಯತೇ ॥೨೮॥

ಯಾವನು ಎಲ್ಲ ಪ್ರಾಣಿಗಳ ವಿಷಯದಲ್ಲಿಯೂ ದಯಾಪರತೆ ಯಿಂದಿರುವನೋ, ಎಲ್ಲರ ವಿಷಯದಲ್ಲಿಯೂ ಸರಳತೆಯಿಂದ ವ್ಯವಹರಿಸು ವನೋ, ಎಲ್ಲ ಪ್ರಾಣಿಗಳನ್ನೂ ಆತ್ಮಭಾವದಿಂದ ಕಾಣುವನೋ–ಅವನು ಪುಣ್ಯಾತ್ಮನಾಗುತ್ತಾನೆ.

ಸರ್ವವೇದೇಷು ವಾ ಸ್ನಾನಂ ಸರ್ವಭೂತೇಷು ಚಾರ್ಜವಮ್ ।
ಉಭೇ ಏತೇ ಸಮೇ ಸ್ಯಾತಾಮಾರ್ಜವಂ ವಾ ವಿಶಿಷ್ಯತೇ ॥೨೯॥

ನಾಲ್ಕು ವೇದಗಳಲ್ಲಿಯೂ ನಿಷ್ಣಾತನಾಗಿರುವಿಕೆ ಮತ್ತು ಎಲ್ಲರ ವಿಷಯ ದಲ್ಲಿಯೂ ಸರಳತೆಯಿಂದ ವ್ಯವಹರಿಸುವಿಕೆ–ಈ ಎರಡೂ ಸಮಾನವಾದ ಫಲಗಳನ್ನೇ ಕೊಡುತ್ತವೆ. ಅಥವಾ ಸರಳತೆಯಿಂದಿರುವುದು ನಾಲ್ಕು ವೇದಗಳ ಪಾಂಡಿತ್ಯಕ್ಕಿಂತಲೂ ಹೆಚ್ಚಿನದೂ ಆಗಬಹುದು.

ಆರ್ಜವಂ ಧರ್ಮಮಿತ್ಯಾಹುರಧರ್ಮೋ ಜಿಹ್ಮ ಉಚ್ಯತೇ ।
ಆರ್ಜವೇನೇಹ ಸಂಯುಕ್ತೋ ನರೋ ಧರ್ಮೇಣ ಯುಜ್ಯತೇ ॥೩೦॥

ಸರಳತೆಯನ್ನು ಧರ್ಮವೆನ್ನುತ್ತಾರೆ. ಕುಟಿಲತೆಯನ್ನು ಅಧರ್ಮವೆನ್ನುತ್ತಾರೆ. ಸರಳತೆಯಿಂದಿರುವ ಋಜುಮಾರ್ಗದ ಮನುಷ್ಯನೇ ಪುಣ್ಯಾತ್ಮನು.

ಆರ್ಜವೇ ತು ರತೋ ನಿತ್ಯಂ ವಸತ್ಯಮರಸಂನಿಧೌ ।
ತಸ್ಮಾದಾರ್ಜವಯುಕ್ತಃ ಸ್ಯಾದ್ಯ ಇಚ್ಛೇದ್ಧರ್ಮಮಾತ್ಮನಃ ॥೩೧॥

ಸರಳಸ್ವಭಾವದವನು ದೇವತೆಗಳ ಸಾನ್ನಿಧ್ಯವನ್ನು ಹೊಂದುತ್ತಾನೆ. ಆದುದರಿಂದ ಪುಣ್ಯಾತ್ಮನಾಗಲು ಇಚ್ಛಿಸುವವನು ಎಲ್ಲರೊಡನೆಯೂ ಋಜುವಾದ ವ್ಯವಹಾರವನ್ನಿಟ್ಟುಕೊಂಡಿರಬೇಕು.

ಕ್ಷಾನ್ತೋ ದಾನ್ತೋ ಜಿತಕ್ರೋಧೋ ಧರ್ಮಭೂತೋಽವಿಹಿಂಸಕಃ ।
ಧರ್ಮೇ ರತಮನಾ ನಿತ್ಯಂ ನರೋ ಧರ್ಮೇಣ ಯುಜ್ಯತೇ ॥೩೨॥

ಕ್ಷಮಾಶೀಲನಾದ, ಜಿತೇಂದ್ರಿಯನಾದ, ಕ್ರೋಧವನ್ನು ಜಯಿಸಿರುವ, ಧರ್ಮನಿಷ್ಠನಾದ, ಅಹಿಂಸಕನಾದ, ಸದಾ ಧರ್ಮಪರಾಯಣನಾದ ಮನುಷ್ಯನು ಪುಣ್ಯಾತ್ಮನಾಗುತ್ತಾನೆ.

ವ್ಯಪೇತತನ್ದ್ರಿರ್ಧರ್ಮಾತ್ಮಾ ಶಕ್ತ್ಯಾ ಸತ್ಪಥಮಾಶ್ರಿತಃ ।
ಚಾರಿತ್ರಪರಮೋ ಬುದ್ಧೋ ಬ್ರಹ್ಮಭೂಯಾಯ ಕಲ್ಪತೇ ॥೩೩॥

ಆಲಸ್ಯರಹಿತನಾದ, ಧರ್ಮಾತ್ಮನಾದ, ಶಕ್ತ್ಯನುಸಾರವಾಗಿ ಸನ್ಮಾರ್ಗದಲ್ಲಿಯೇ ವ್ಯವಹರಿಸುವ ಸಚ್ಚರಿತ್ರನಾದ ಜ್ಞಾನಿಯು ಬ್ರಹ್ಮಭಾವವನ್ನು ಹೊಂದುತ್ತಾನೆ."

ಉಮೆಯು ಹೇಳುತ್ತಾಳೆ :

ಆಶ್ರಮಾಭಿರತಾ ದೇವ ತಾಪಸಾ ಯೇ ತಪೋಧನಾಃ ।
ದೀಪ್ತಿಮನ್ತಃ ಕಯಾ ಚೈವ ಚರ್ಯಯಾಥ ಭವನ್ತಿ ತೇ ॥೩೪॥

"ಶಂಕರನೇ! ಆಶ್ರಮಗಳಲ್ಲಿ ವಾಸಮಾಡುವ ತಪೋಧನರಾದ ತಪಸ್ವಿಗಳು ಯಾವ ವಿಧವಾದ ಆಚರಣೆಯಿಂದ ಉತ್ತಮತೇಜಸ್ವಿಗಳಾಗುತ್ತಾರೆ?

ರಾಜಾನೋ ರಾಜಪುತ್ರಾಶ್ಚ ನಿರ್ಧನಾ ಯೇ ಮಹಾಧನಾಃ ।
ಕರ್ಮಣಾ ಕೇನ ಭಗವನ್ಪ್ರಾಪ್ನುವನ್ತಿ ಮಹಾಫಲಮ್ ॥೩೫॥

ರಾಜರಾಗಲೀ–ರಾಜಪುತ್ರರಾಗಲೀ, ನಿರ್ಧನರಾಗಲೀ–ಧನಿಕರಾಗಲೀ ಯಾವ ವಿಧವಾದ ಕರ್ಮವನ್ನು ಮಾಡುವುದರಿಂದ ಮಹಾಫಲವನ್ನು ಹೊಂದುತ್ತಾರೆ?

ನಿತ್ಯಂ ಸ್ಥಾನಮುಪಾಗಮ್ಯ ದಿವ್ಯಚನ್ದನಭೂಷಿತಾಃ ।
ಕೇನ ವಾ ಕರ್ಮಣಾ ದೇವ ಭವನ್ತಿ ವನಗೋಚರಾಃ ॥೩೬॥

ವನವಾಸಿಗಳಾದ ಮುನಿಗಳು ಯಾವ ವಿಧವಾದ ಕರ್ಮಾಚರಣೆಯಿಂದ ಶಾಶ್ವತವಾದ ಸ್ಥಾನವನ್ನು ಪಡೆದು ದಿವ್ಯಚಂದನದಿಂದ ಭೂಷಿತರಾಗುತ್ತಾರೆ?

ಮುಕ್ಕಣ್ಣನೇ! ತ್ರಿಪುರನಾಶಕನೇ! ತಪಸ್ಸಿನಿಂದ ಪ್ರಾಪ್ತವಾಗುವ ಶುಭಫಲಗಳ ವಿಷಯದಲ್ಲಿ ನನಗೆ ಈ ವಿಧವಾದ ಸಂದೇಹವುಂಟಾಗಿದೆ. ಈ ಎಲ್ಲ ವಿಷಯಗಳನ್ನೂ ಹೇಳಿ ನನ್ನ ಸಂದೇಹವನ್ನು ನಿವಾರಿಸುವ ಕೃಪೆ ಮಾಡು."

ಮಹೇಶ್ವರನು ಹೇಳುತ್ತಾನೆ :

ಉಪವಾಸವ್ರತೈರ್ದಾನ್ತಾ ಹ್ಯಹಿಂಸ್ರಾಃ ಸತ್ಯವಾದಿನಃ ।
ಸಂಸಿದ್ಧಾಃ ಪ್ರೇತ್ಯ ಗನ್ಧರ್ವೈಃ ಸಹ ಮೋದನ್ತ್ಯನಾಮಯಾಃ ॥೩೭॥

"ದೇವಿ! ಜಿತೇಂದ್ರಿಯರಾದ, ಅಹಿಂಸಕರಾದ, ಸತ್ಯನಿಷ್ಠರಾದ ಮುನಿಗಳು ಉಪವಾಸವ್ರತಗಳಿಂದ ನೀರೋಗದೃಢಕಾಯರಾಗಿ ಸಿದ್ಧಿಯನ್ನು ಪಡೆದು ಅವಸಾನಾನಂತರದಲ್ಲಿ ಗಂಧರ್ವರೊಡನೆ ಆನಂದಪಡುತ್ತಾರೆ.

ಮಣ್ಡೂಕಯೋಗಶಯನೋ ಯಥಾನ್ಯಾಯಂ ಯಥಾವಿಧಿ ।
ದೀಕ್ಷಾಂ ಚರತಿ ಧರ್ಮಾತ್ಮಾ ಸ ನಾಗೈಃ ಸಹ ಮೋದತೇ ॥೩೮॥

ಯಾವ ಧರ್ಮಾತ್ಮನಾದ ಪುರುಷನು ನ್ಯಾಯಾನುಸಾರವಾಗಿ ಮತ್ತು ವಿಧಿಪೂರ್ವಕವಾಗಿ ಹಠಯೋಗದಲ್ಲಿ ಪ್ರಸಿದ್ಧವಾಗಿರುವ ಮಂಡೂಕಯೋಗ ಮುದ್ರೆಯಲ್ಲಿ ಮಲಗುವನೋ ಮತ್ತು ದೃಢಸಂಕಲ್ಪಯುಕ್ತನಾಗಿರುವನೋ– ಅವನು ಅವಸಾನಾನಂತರದಲ್ಲಿ ನಾಗಲೋಕದಲ್ಲಿ ನಾಗರೊಡನೆ ಆನಂದಪಡುತ್ತಾನೆ.

ಶಷ್ಪಂ ಮೃಗಮುಖೋಚ್ಛಿಷ್ಟಂ ಯೋ ಮೃಗೈಃ ಸಹ ಭಕ್ಷತಿ ।
ದೀಕ್ಷಿತೋ ವೈ ಮುದಾ ಯುಕ್ತಃ ಸ ಗಚ್ಛತ್ಯಮರಾವತೀಮ್ ॥೪೦॥

ಮೃಗಚರ್ಯಾವ್ರತದ ದೀಕ್ಷೆಯನ್ನು ಕೈಗೊಂಡು ಜಿಂಕೆಗಳು ಹುಲ್ಲು ತಿನ್ನುವಾಗ ಅವುಗಳ ಕಟವಾಯಿಗಳಿಂದ ಹೊರಬರುವ ಚಿಗುರು ಹುಲ್ಲನ್ನು ಮೃಗಗಳೊಡನೆ ತಿನ್ನುವ ಮುನಿಯು ಅವಸಾನಾನಂತರದಲ್ಲಿ ಸಂತೋಷ ಭರಿತನಾಗಿ ಅಮರಾವತಿಗೆ ಹೋಗುತ್ತಾನೆ.

ಶೈವಾಲಂ ಶೀರ್ಣಪರ್ಣಂ ವಾ ತದ್ವ್ರತೀ ಯೋ ನಿಷೇವತೇ ।
ಶೀತಯೋಗವಹೋ ನಿತ್ಯಂ ಸ ಗಚ್ಛೇತ್ಪರಮಾಂ ಗತಿಮ್ ॥೪೧॥

ಪಾಚಿಯನ್ನೋ, ತರಗೆಲೆಗಳನ್ನೋ ತಿನ್ನುತ್ತಾ ಚಳಿಗಾಲದಲ್ಲಿ ನೀರಿನಲ್ಲಿದ್ದು ಶೀತವನ್ನು ಸಹಿಸಿಕೊಳ್ಳುವ ವ್ರತವನ್ನು ಕೈಗೊಳ್ಳುವ ವಾನಪ್ರಸ್ಥನು ಪರಮಗತಿಯನ್ನು ಹೊಂದುತ್ತಾನೆ.

ವಾಯುಭಕ್ಷೋಽಮ್ಬುಭಕ್ಷೋ ವಾ ಫಲಮೂಲಾಶನೋಽಪಿ ವಾ ।
ಯಕ್ಷೇಷ್ವೈಶ್ವರ್ಯಮಾಧಾಯ ಮೋದತೇಽಪ್ಸರಸಾಂ ಗಣೈಃ ॥೪೨॥

ವಾಯುಭಕ್ಷನಾಗಲೀ, ಜಲಭಕ್ಷನಾಗಲೀ, ಫಲಭಕ್ಷನಾಗಲೀ, ಕಂದಮೂಲಭಕ್ಷನಾಗಲೀ, ಅವಸಾನಾನಂತರದಲ್ಲಿ ಯಕ್ಷರ ಮೇಲೆ ಪ್ರಭುತ್ವವನ್ನು ಪಡೆದು, ಅಪ್ಸರೆಯರ ಸಮೂಹದೊಡನೆ ಆನಂದಪಡುತ್ತಾನೆ.

ಅಗ್ನಿಯೋಗವಹೋ ಗ್ರೀಷ್ಮೇ ವಿಧಿದೃಷ್ಟೇನ ಕರ್ಮಣಾ ।
ಚೀರ್ತ್ವಾ ದ್ವಾದಶವರ್ಷಾಣಿ ರಾಜಾ ಭವತಿ ಪಾರ್ಥಿವಃ ॥೪೩॥

ಯಾವನು ಗ್ರೀಷ್ಮರ್ತುವಿನಲ್ಲಿ ಶಾಸ್ತ್ರವಿಧಿಗೆ ಅನುಸಾರವಾಗಿ ಹನ್ನೆರಡು ವರ್ಷಗಳ ಪರ್ಯಂತವಾಗಿ ಪಂಚಾಗ್ನಿಗಳನ್ನು ಸಹಿಸಿಕೊಳ್ಳುವನೋ (ಪಂಚಾಗ್ನಿವ್ರತವನ್ನು ಮಾಡುವನೋ)–ಅವನು ಭೂಮಂಡಲದ ರಾಜನಾಗುತ್ತಾನೆ.

ಆಹಾರನಿಯಮಂ ಕೃತ್ವಾ ಮುನಿರ್ದ್ವಾದಶವಾರ್ಷಿಕಮ್ ।
ಮರುಂ ಸಂಸಾಧ್ಯ ಯತ್ನೇನ ರಾಜಾ ಭವತಿ ಪಾರ್ಥಿವಃ ॥೪೪॥

ಯಾವ ಮುನಿಯು ಹನ್ನೆರಡು ವರ್ಷಗಳವರೆಗೆ ಆಹಾರನಿಯಮ

ದಿಂದಿರುವನೋ, ಯತ್ನಪೂರ್ವಕವಾಗಿ ನೀರನ್ನೂ ತ್ಯಾಗಮಾಡುವನೋ–ಅವನು ಮರುಹುಟ್ಟಿನಲ್ಲಿ ಭೂಮಂಡಲದ ರಾಜನಾಗುತ್ತಾನೆ.

ಸ್ಥಣ್ಡಿಲೇ ಶುದ್ಧಮಾಕಾಶಂ ಪರಿಗೃಹ್ಯ ಸಮನ್ತತಃ ।
ಪ್ರವಿಶ್ಯ ಚ ಮುದಾ ಯುಕ್ತೋ ದೀಕ್ಷಾಂ ದ್ವಾದಶವಾರ್ಷಿಕೀಮ್ ।
ದೇಹಂ ಚಾನಶನೇ ತ್ಯಕ್ತ್ವಾ ಸ ಸ್ವರ್ಗೇ ಸುಖಮೇಧತೇ ॥೪೫॥

ವಿಶುದ್ಧವಾದ ಆಕಾಶವನ್ನೇ ಹೊದ್ದಿಕೆಯನ್ನಾಗಿ ಪರಿಗ್ರಹಿಸಿ ನೆಲದಲ್ಲಿ ಮಲಗುತ್ತಾ ಅತ್ಯಂತಸಂತೋಷದಿಂದ ಹನ್ನೆರಡು ವರ್ಷಗಳ ದೀಕ್ಷೆಯನ್ನು ಕೈಗೊಂಡು ಕಡೆಯಲ್ಲಿ ದೇಹವನ್ನು ಉಪವಾಸದಿಂದ ಪರಿತ್ಯಾಗಮಾಡುವ ಮುನಿಯು ಸ್ವರ್ಗದಲ್ಲಿ ಸುಖಪಡುತ್ತಾನೆ.

ಸ್ಥಣ್ಡಿಲಸ್ಯ ಫಲಾನ್ಯಾಹುರ್ಯಾನಾನಿ ಶಯನಾನಿ ಚ ।
ಗೃಹಾಣಿ ಚ ಮಹಾರ್ಹಾಣಿ ಚನ್ದ್ರಶುಭ್ರಾಣಿ ಭಾಮಿನಿ ॥೪೬॥

ಭಾಮಿನಿಯೇ! ಆವರಣವಿಲ್ಲದಿರುವ ಬಯಲಿನಲ್ಲಿ ನೆಲದ ಮೇಲೆ ಮಲಗುವುದರ ಫಲಗಳು ಹೀಗಿರುವುದೆಂದು ಮುನಿಗಳು ಹೇಳುತ್ತಾರೆ. ಅಂತಹವನಿಗೆ ಮರುಹುಟ್ಟಿನಲ್ಲಿ ಯಾನಗಳೂ, ಹಂಸತೂಲಿಕಾತಲ್ಪಗಳೂ, ಚಂದ್ರನಂತೆ ಶುಭ್ರವಾಗಿರುವ ಬಹುಮೂಲ್ಯವಾದ ಗೃಹಗಳೂ ಲಭಿಸುತ್ತವೆ.

ಆತ್ಮಾನಮುಪಜೀವನ್ಯೋ ನಿಯತೋ ನಿಯತಾಶನಃ ।
ದೇಹಂ ವಾನಶನೇ ತ್ಯಕ್ತ್ವಾ ಸ ಸ್ವರ್ಗಂ ಸಮುಪಾಶ್ನುತೇ ॥೪೭॥

ಯಾವನು ನಿಯಮಪೂರ್ವಕವಾಗಿ ನಿಯತವಾದ ಆಹಾರವನ್ನು ತೆಗೆದುಕೊಳ್ಳುತ್ತಾ ದೇಹವನ್ನು ಧಾರಣೆಮಾಡಿಕೊಂಡಿದ್ದು ಕಡೆಯಲ್ಲಿ ಉಪವಾಸದಿಂದಲೇ ದೇಹವನ್ನು ಪರಿತ್ಯಾಗಮಾಡುವನೋ–ಅವನು ಸ್ವರ್ಗವನ್ನು ಹೊಂದುತ್ತಾನೆ.

ಆತ್ಮಾನಮುಪಜೀವನ್ಯೋ ದೀಕ್ಷಾಂ ದ್ವಾದಶವಾರ್ಷಿಕೀಮ್ ।
ತ್ಯಕ್ತ್ವಾ ಮಹಾರ್ಣವೇ ದೇಹಂ ವಾರುಣಂ ಲೋಕಮಶ್ನುತೇ ॥೪೮॥

ಯಾವನು ಸ್ವಾವಲಂಬನೆಯಿಂದ ಜೀವನವನ್ನು ನಡೆಸುತ್ತಾ ಹನ್ನೆರಡು ವರ್ಷಗಳ ವ್ರತವನ್ನು ಕೈಗೊಂಡು ವ್ರತವು ಮುಗಿದನಂತರ ಮಹಾ

ಸಾಗರದಲ್ಲಿ ಶರೀರವನ್ನು ತ್ಯಾಗಮಾಡುವನೋ–ಅವನು ವರುಣನ ಲೋಕ ವನ್ನು ಹೊಂದುತ್ತಾನೆ.

ಆತ್ಮಾನಮುಪಜೀವನ್ಯೋ ದೀಕ್ಷಾಂ ದ್ವಾದಶವಾರ್ಷಿಕೀಮ್ ।
ಅಶ್ಮನಾ ಚರಣೌ ಭಿತ್ತ್ವಾ ಗುಹ್ಯಕೇಷು ಸ ಮೋದತೇ ॥೪೯॥

ಸಾಧಯಿತ್ವಾತ್ಮನಾತ್ಮಾನಂ ನಿರ್ದ್ವನ್ದ್ವೋ ನಿಷ್ಪರಿಗ್ರಹಃ ॥೫೦॥

ಯಾವನು ಸ್ವಾವಲಂಬನೆಯಿಂದ ಜೀವನವನ್ನು ನಡೆಸುತ್ತಾ ಶೀತೋಷ್ಣ-ಸುಖ-ದುಃಖಾದಿ ದ್ವಂದ್ವಗಳಿಂದ ರಹಿತನಾಗಿ, ಪರಿಗ್ರಹಶೂನ್ಯ ನಾಗಿ, ಹನ್ನೆರಡು ವರ್ಷಗಳ ವ್ರತವನ್ನು ಕೈಗೊಂಡು–ವ್ರತವು ಪೂರ್ಣವಾದ ನಂತರ ಕಾಲುಗಳನ್ನು ಕಲ್ಲಿನಿಂದ ಜಜ್ಜಿಕೊಂಡು ಆತ್ಮತ್ಯಾಗಮಾಡುವನೋ–ಅವನು ಅವಸಾನಾನಂತರದಲ್ಲಿ ಗುಹ್ಯಕರೊಡನೆ ಆನಂದಪಡುತ್ತಾನೆ.

ಚೀರ್ತ್ವಾ ದ್ವಾದಶವರ್ಷಾಣಿ ದೀಕ್ಷಾಮೇತಾಂ ಮನೋಗತಾಮ್ ।
ಸ್ವರ್ಗಲೋಕಮವಾಪ್ನೋತಿ ದೇವೈಶ್ಚ ಸಹ ಮೋದತೇ ॥೫೧॥

ಯಾವನು ಹನ್ನೆರಡು ವರ್ಷಗಳವರೆಗೆ ಮನೋಗತವಾದ ಈ ವ್ರತ ವನ್ನು ಪರಿಪಾಲಿಸುವನೋ–ಅವನು ಸ್ವರ್ಗಕ್ಕೆ ಹೋಗುತ್ತಾನೆ ಮತ್ತು ದೇವತೆಗಳೊಡನೆ ಆನಂದದಿಂದಿರುತ್ತಾನೆ.

ಆತ್ಮಾನಮುಪಜೀವನ್ಯೋ ದೀಕ್ಷಾಂ ದ್ವಾದಶವಾರ್ಷಿಕೀಮ್ ।
ಹುತ್ವಾಗ್ನೌ ದೇಹಮುತ್ಸೃಜ್ಯ ವಹ್ನಿಲೋಕೇ ಮಹೀಯತೇ ॥೫೨॥

ಯಾವನು ಹನ್ನೆರಡು ವರ್ಷಗಳ ವ್ರತಪಾಲನೆಯ ದೀಕ್ಷೆಯನ್ನು ಕೈ ಗೊಂಡು ಸ್ವಾವಲಂಬನೆಯಿಂದಲೇ ಜೀವಿಸುತ್ತಾ ಕೊನೆಯಲ್ಲಿ ಅಗ್ನಿಯಲ್ಲಿ ಆತ್ಮಾರ್ಪಣೆಯನ್ನು ಮಾಡಿಕೊಳ್ಳುವನೋ–ಅವನು ಅಗ್ನಿಲೋಕದಲ್ಲಿ ಪೂಜಿಸಲ್ಪಡುತ್ತಾನೆ.

ಯಸ್ತು ದೇವಿ ಯಥಾನ್ಯಾಯಂ ದೀಕ್ಷಿತೋ ನಿಯತೋ ದ್ವಿಜಃ ।
ಆತ್ಮನ್ಯಾತ್ಮಾನಮಾಧಾಯ ನಿರ್ಮಮೋ ಧರ್ಮಲಾಲಸಃ ॥೫೩॥

ಚೀರ್ತ್ವಾ ದ್ವಾದಶವರ್ಷಾಣಿ ದೀಕ್ಷಾಮೇತಾಂ ಮನೋಗತಾಮ್ ।
ಅರಣೀಸಹಿತಂ ಸ್ಕನ್ಧೇ ಬದ್ಧ್ವಾ ಗಚ್ಛತ್ಯನಾವೃತಃ ॥೫೪॥

ವೀರಾಧ್ವಾನಗತೋ ನಿತ್ಯಂ ವೀರಾಸನರತಸ್ತಥಾ ।
ವೀರಸ್ಥಾಯೀ ಚ ಸತತಂ ಸ ವೀರಗತಿಮಾಪ್ನುಯಾತ್ ॥೫೫॥

ಯಾವ ಬ್ರಾಹ್ಮಣನು ನಿಯಮಪೂರ್ವಕವಾಗಿರುತ್ತಾ, ವನವಾಸವ್ರತದ ದೀಕ್ಷೆಯನ್ನು ಕೈಗೊಂಡು ಮನಸ್ಸನ್ನು ಪರಮಾತ್ಮಚಿಂತನೆಯಲ್ಲಿಯೇ ತೊಡಗಿಸಿ, ಅಹಂಕಾರ-ಮಮಕಾರರಹಿತನಾಗಿ ಧರ್ಮದಲ್ಲಿಯೇ ಲಾಲಸೆಯನ್ನು ಹೊಂದಿ ಹನ್ನೆರಡು ವರ್ಷಗಳ ಕಾಲ ಮನೋಗತವಾದ ದೀಕ್ಷೆಯನ್ನು ಪರಿಪಾಲಿಸುತ್ತಾ , ಅಗ್ನಿಯನ್ನು ಅರಣೀಸಹಿತವಾಗಿ ಮರದ ಕಾಂಡಕ್ಕೆ ಕಟ್ಟಿ (ಅಗ್ನಿಯನ್ನು ಪರಿತ್ಯಜಿಸಿ), ಅನಾವೃತನಾಗಿ (ಯಾವ ವಿಧವಾದ ವಿಷಯ ವಾಸನೆಗಳೂ ಇಲ್ಲದವನಾಗಿ) ಯಾತ್ರೆಮಾಡುವನೋ, ವೀರರ ಮಾರ್ಗದಲ್ಲಿ ಹೋಗುವನೋ, ವೀರಾಸನದಲ್ಲಿ ಕುಳಿತುಕೊಳ್ಳುವನೋ, ವೀರರಂತೆ ನಿಲ್ಲುವನೋ ಅಂತಹ ಮುನಿಯು ವೀರರಾದವರು ಹೊಂದುವ ಸದ್ಗತಿಯನ್ನು ಹೊಂದುತ್ತಾನೆ.

ಸ ಶಕ್ರಲೋಕಗೋ ನಿತ್ಯಂ ಸರ್ವಕಾಮಪುರಸ್ಕೃತಃ ।
ದಿವ್ಯಪುಷ್ಪಸಮಾಕೀರ್ಣೋ ದಿವ್ಯಚನ್ದನಭೂಷಿತಃ ॥೫೬॥

ಅಂತಹ ಮುನಿಯು ಅವಸಾನಾನಂತರದಲ್ಲಿ ಸ್ವರ್ಗಕ್ಕೆ ಹೋಗಿ ಸಕಲ ವಿಧವಾದ ಕಾಮನಾವಸ್ತುಗಳಿಂದಲೂ ಸಂಪನ್ನನಾಗುತ್ತಾನೆ. ಅವನ ಮೇಲೆ ಪುಷ್ಪವೃಷ್ಟಿಯಾಗುತ್ತದೆ. ದಿವ್ಯವಾದ ಚಂದನದಿಂದ ಭೂಷಿತನಾಗುತ್ತಾನೆ.

ಸುಖಂ ವಸತಿ ಧರ್ಮಾತ್ಮಾ ದಿವಿ ದೇವಗಣೈಃ ಸಹ ।
ವೀರಲೋಕಗತೋ ನಿತ್ಯಂ ವೀರಯೋಗಸಹಃ ಸದಾ ॥೫೭॥

ವೀರರ ಸಾಧನೆಯನ್ನು ಸಹಿಸುವ, ವೀರರ ಸಾಧನೆಯಲ್ಲಿಯೇ ಸದಾ ನಿರತನಾಗಿರುವ ಧರ್ಮಾತ್ಮನಾದ ಆ ಮುನಿಯು, ವೀರಲೋಕಕ್ಕೆ ಹೋಗಿ ಅಲ್ಲಿ ದೇವತೆಗಳೊಡನೆ ಆನಂದವಾಗಿರುತ್ತಾನೆ.

ಸತ್ತ್ವಸ್ಥಃ ಸರ್ವಮುತ್ಸೃಜ್ಯ ದೀಕ್ಷಿತೋ ನಿಯತಃ ಶುಚಿಃ ।
ವೀರಾಧ್ವಾನಂ ಪ್ರಪದ್ಯೇದ್ಯಸ್ತಸ್ಯ ಲೋಕಾಃ ಸನಾತನಾಃ ॥೫೮॥

ಯಾವನು ಸರ್ವಸ್ವವನ್ನೂ ತ್ಯಾಗಮಾಡಿ ವನವಾಸದ ದೀಕ್ಷೆಯನ್ನು

ಕೈಗೊಂಡು ಸತ್ತ್ವಗುಣವನ್ನಾಶ್ರಯಿಸಿ ಪರಿಶುದ್ಧನಾಗಿ ವೀರಪಥವನ್ನಾಶ್ರಯಿಸುವನೋ–ಅಂತಹವನಿಗೆ ಶಾಶ್ವತವಾದ ಲೋಕಗಳು ಲಭಿಸುತ್ತವೆ.

ಕಾಮಗೇನ ವಿಮಾನೇನ ಸ ವೈ ಚರತಿ ಛನ್ದತಃ ।
ಶಕ್ರಲೋಕಗತಃ ಶ್ರೀಮಾನ್ಮೋದತೇ ಚ ನಿರಾಮಯಃ ॥೫೯॥

ವೀರಮಾರ್ಗವನ್ನು ಆಶ್ರಯಿಸಿ ಇಂದ್ರಲೋಕಕ್ಕೆ ಹೋಗಿ ಶ್ರೀಮಂತನಾದ ಆ ಮುನಿಯು ರೋಗರಹಿತನಾಗಿ ಅಲ್ಲಿ ಆನಂದಪಡುತ್ತಾನೆ. ಇಚ್ಛಾನುಸಾರವಾಗಿ ಹೋಗುವ ವಿಮಾನದಲ್ಲಿ ಕುಳಿತು ಸ್ವಚ್ಛಂದವಾಗಿ ಸಂಚಾರ ಮಾಡುತ್ತಾನೆ.”

೧೪೨ನೆಯ ಅಧ್ಯಾಯವು ಮುಗಿಯಿತು.

೧೪೩ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಬ್ರಾಹ್ಮಣಾದಿ ವರ್ಣಗಳ ಪ್ರಾಪ್ತಿಯಲ್ಲಿ ಶುಭಾಶುಭಕರ್ಮಗಳ ಪ್ರಧಾನತೆಯ ಪ್ರತಿಪಾದನೆ

ಉಮೆಯು ಪ್ರಶ್ನಿಸುತ್ತಾಳೆ :

ಭಗವನ್ಭಗನೇತ್ರಘ್ನ ಪೂಷ್ಣೋ ದನ್ತನಿಪಾತನ ।
ದಕ್ಷಕ್ರತುಹರ ತ್ರ್ಯಕ್ಷ ಸಂಶಯೋ ಮೇ ಮಹಾನಯಮ್ ॥೧॥

“ಪೂಜ್ಯನೇ! ಭಗದೇವತೆಯ ಕಣ್ಣುಗಳನ್ನು ಅಪಹರಿಸಿದವನೇ! ಪೂಷನ ಹಲ್ಲುಗಳನ್ನು ಮುರಿದು ಬೀಳಿಸಿದವನೇ! ದಕ್ಷನ ಯಜ್ಞವನ್ನು ಧ್ವಂಸಮಾಡಿದವನೇ! ಮುಕ್ಕಣ್ಣನೇ! ನನ್ನ ಮನಸ್ಸಿನಲ್ಲಿ ಮಹತ್ತರವಾದ ಒಂದು ಸಂಶಯವು ಮೂಡಿದೆ.

ಚಾತುರ್ವರ್ಣ್ಯಂ ಭಗವತಾ ಪೂರ್ವಂ ಸೃಷ್ಟಂ ಸ್ವಯಮ್ಭುವಾ ।
ಕೇನ ಕರ್ಮವಿಪಾಕೇನ ವೈಶ್ಯೋ ಗಚ್ಛತಿ ಶೂದ್ರತಾಮ್ ॥೨॥

ಪೂಜ್ಯನಾದ ಸ್ವಯಂಭುವು ಹಿಂದೆ ನಾಲ್ಕು ವರ್ಣಗಳನ್ನು ಸೃಷ್ಟಿಸಿದನು. ಆ ನಾಲ್ಕು ವರ್ಣಗಳಲ್ಲಿ ವೈಶ್ಯನು ಯಾವ ಕರ್ಮವಿಪಾಕದಿಂದ (ಪಾಪ ಕರ್ಮದಿಂದ) ಮರುಹುಟ್ಟಿನಲ್ಲಿ ಶೂದ್ರನಾಗಿ ಹುಟ್ಟುತ್ತಾನೆ?

ವೈಶ್ಯೋ ವಾ ಕ್ಷತ್ರಿಯಃ ಕೇನ ದ್ವಿಜೋ ವಾ ಕ್ಷತ್ರಿಯೋ ಭವೇತ್ ।
ಪ್ರತಿಲೋಮಃ ಕಥಂ ದೇವ ಶಕ್ಯೋ ಧರ್ಮೋ ನಿವರ್ತಿತುಮ್ ॥೩॥

ಅಥವಾ ಕ್ಷತ್ರಿಯನು ಯಾವ ಪಾಪಕರ್ಮದಿಂದ ಮರುಹುಟ್ಟಿನಲ್ಲಿ ವೈಶ್ಯನಾಗುತ್ತಾನೆ? ಬ್ರಾಹ್ಮಣನು ಯಾವ ಕರ್ಮವಿಪಾಕದಿಂದ ಕ್ಷತ್ರಿಯನಾಗಿ ಹುಟ್ಟುತ್ತಾನೆ? ಪ್ರತಿಲೋಮಧರ್ಮದಿಂದ ನಿವೃತ್ತಿಯನ್ನು ಪಡೆಯಲು (ಉಚ್ಚವರ್ಣದವನು ನೀಚವರ್ಣದಲ್ಲಿ ಹುಟ್ಟದಂತಾಗಲು) ಹೇಗೆ ಸಾಧ್ಯವಾಗುತ್ತದೆ?

ಕೇನ ವಾ ಕರ್ಮಣಾ ವಿಪ್ರಃ ಶೂದ್ರಯೋನೌ ಪ್ರಜಾಯತೇ ।
ಕ್ಷತ್ರಿಯಃ ಶೂದ್ರತಾಮೇತಿ ಕೇನ ವಾ ಕರ್ಮಣಾ ವಿಭೋ ॥೪॥

ವಿಭುವೇ! ಯಾವ ಪಾಪಕರ್ಮದಿಂದ ಬ್ರಾಹ್ಮಣನು ಶೂದ್ರಯೋನಿಯಲ್ಲಿ ಹುಟ್ಟುತ್ತಾನೆ? ಅಂತೆಯೇ ಯಾವ ಕರ್ಮವಿಪಾಕದಿಂದ ಕ್ಷತ್ರಿಯನು ಶೂದ್ರನಾಗಿ ಹುಟ್ಟುತ್ತಾನೆ?

ಏತನ್ಮೇ ಸಂಶಯಂ ದೇವ ವದ ಭೂತಪತೇಽನಘ ।
ತ್ರಯೋ ವರ್ಣಾಃ ಪ್ರಕೃತ್ಯೇಹ ಕಥಂ ಬ್ರಾಹ್ಮಣ್ಯಮಾಪ್ನುಯುಃ ॥೫॥

ಭೂತಪತಿಯೇ! ಅನಘನೇ! ನನ್ನ ಮತ್ತೊಂದು ಸಂಶಯಕ್ಕೂ ಸಮಾಧಾನವನ್ನು ಹೇಳು. ಕ್ಷತ್ರಿಯ, ವೈಶ್ಯ, ಶೂದ್ರ–ಈ ಮೂರು ವರ್ಣದವರು ಸ್ವಭಾವತಃ ಬ್ರಾಹ್ಮಣತ್ವವನ್ನು ಹೇಗೆ ಹೊಂದುತ್ತಾರೆ?"

ಮಹೇಶ್ವರನು ಹೇಳುತ್ತಾನೆ :

ಬ್ರಾಹ್ಮಣ್ಯಂ ದೇವಿ ದುಷ್ಪ್ರಾಪಂ ನಿಸರ್ಗಾದ್ಬ್ರಾಹ್ಮಣಃ ಶುಭೇ ।
ಕ್ಷತ್ರಿಯೋ ವೈಶ್ಯಶೂದ್ರೌ ವಾ ನಿಸರ್ಗಾದಿತಿ ಮೇ ಮತಿಃ ॥೬॥

"ದೇವಿ! ಶುಭದಳೇ! ಬ್ರಾಹ್ಮಣತ್ವವು ಸುದುರ್ಲಭವಾದುದು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ–ಈ ನಾಲ್ಕು ವರ್ಣಗಳೂ ಸ್ವಭಾವಸಿದ್ಧವಾದುವುಗಳೆಂಬುದೇ ನನ್ನ ಅಭಿಪ್ರಾಯವಾಗಿದೆ.

ಕರ್ಮಣಾ ದುಷ್ಕೃತೇನೇಹ ಸ್ಥಾನಾದ್ಭ್ರಶ್ಯತಿ ವೈ ದ್ವಿಜಃ ।
ಜ್ಯೇಷ್ಠಂ ವರ್ಣಮನುಪ್ರಾಪ್ಯ ತಸ್ಮಾದ್ರಕ್ಷೇತ ವೈ ದ್ವಿಜಃ ॥೭॥

ದುಷ್ಕರ್ಮಗಳನ್ನು ಮಾಡುವುದರಿಂದ ಬ್ರಾಹ್ಮಣನು ತನ್ನ ಉನ್ನತ ಸ್ಥಾನದಿಂದ ಭ್ರಷ್ಟನಾಗುತ್ತಾನೆ. ಆದುದರಿಂದ ಅಗ್ರವರ್ಣದಲ್ಲಿ ಹುಟ್ಟಿದ ಅವನು ತನ್ನ ಮರ್ಯಾದೆಯನ್ನು ರಕ್ಷಿಸಿಕೊಳ್ಳಬೇಕು.

ಸ್ಥಿತೋ ಬ್ರಾಹ್ಮಣಧರ್ಮೇಣ ಬ್ರಾಹ್ಮಣ್ಯಮುಪಜೀವತಿ ।
ಕ್ಷತ್ರಿಯೋ ವಾಥ ವೈಶ್ಯೋ ವಾ ಬ್ರಹ್ಮಭೂಯಂ ಸ ಗಚ್ಛತಿ ॥೮॥

ಕ್ಷತ್ರಿಯನಾಗಲೀ-ವೈಶ್ಯನಾಗಲೀ ಬ್ರಾಹ್ಮಣಧರ್ಮವನ್ನು ಪರಿಪಾಲಿ ಸುತ್ತಾ ಬ್ರಾಹ್ಮಣ ವರ್ಣದ ಜೀವಿಕೆಯನ್ನು ನಡೆಸುತ್ತಿದ್ದರೆ–ಅವನು ಮರು ಹುಟ್ಟಿನಲ್ಲಿ ಬ್ರಾಹ್ಮಣನಾಗುತ್ತಾನೆ.

ಯಸ್ತು ವಿಪ್ರತ್ವಮುತ್ಸೃಜ್ಯ ಕ್ಷಾತ್ರಂ ಧರ್ಮಂ ನಿಷೇವತೇ ।
ಬ್ರಾಹ್ಮಣ್ಯಾತ್ಸ ಪರಿಭ್ರಷ್ಟಃ ಕ್ಷತ್ರಯೋನೌ ಪ್ರಜಾಯತೇ ॥೯॥

ಯಾವ ಬ್ರಾಹ್ಮಣನು ಸ್ವವರ್ಣೋಚಿತವಾದ ಧರ್ಮಗಳನ್ನು ಪರಿ ತ್ಯಜಿಸಿ ಕ್ಷತ್ರಿಯೋಚಿತವಾದ ಧರ್ಮಗಳನ್ನು ಸೇವಿಸುವನೋ–ಅವನು ಬ್ರಾಹ್ಮಣ್ಯದಿಂದ ಭ್ರಷ್ಟನಾಗುತ್ತಾನೆ ಮತ್ತು ಅವಸಾನಾನಂತರದಲ್ಲಿ ಕ್ಷತ್ರ ಯೋನಿಯಲ್ಲಿ ಹುಟ್ಟುತ್ತಾನೆ.

ವೈಶ್ಯಕರ್ಮ ಚ ಯೋ ವಿಪ್ರೋ ಲೋಭಮೋಹವ್ಯಪಾಶ್ರಯಃ ।
ಬ್ರಾಹ್ಮಣ್ಯಂ ದುರ್ಲಭಂ ಪ್ರಾಪ್ಯ ಕರೋತ್ಯಲ್ಪಮತಿಃ ಸದಾ ॥೧೦॥

ಸ ದ್ವಿಜೋ ವೈಶ್ಯತಾಮೇತಿ ವೈಶ್ಯೋ ವಾ ಶೂದ್ರತಾಮಿಯಾತ್ ।
ಸ್ವಧರ್ಮಾತ್ಪ್ರಚ್ಯುತೋ ವಿಪ್ರಸ್ತತಃ ಶೂದ್ರತ್ವಮಾಪ್ನುತೇ ॥೧೧॥

ಅಲ್ಪಬುದ್ಧಿಯವನಾದ ಯಾವ ಬ್ರಾಹ್ಮಣನು ದುರ್ಲಭವಾದ ಬ್ರಾಹ್ಮಣ್ಯವನ್ನು ಪಡೆದು ಲೋಭ-ಮೋಹಗಳನ್ನಾಶ್ರಯಿಸಿ ವೈಶ್ಯನಿಗೆ ಹೇಳಿ ರುವ ಧರ್ಮಗಳನ್ನು ಪರಿಪಾಲಿಸುವನೋ–ಅವನು ಅವಸಾನಾನಂತರದಲ್ಲಿ ವೈಶ್ಯನಾಗಿ ಹುಟ್ಟುತ್ತಾನೆ. ವೈಶ್ಯನಾಗಿ ಹುಟ್ಟಿದವನು ಶೂದ್ರಧರ್ಮವನ್ನು ಸೇವಿಸಿದರೆ–ಅವಸಾನಾನಂತರದಲ್ಲಿ ಶೂದ್ರನಾಗಿ ಹುಟ್ಟುತ್ತಾನೆ. ಹೀಗೆ ಸ್ವಧರ್ಮದಿಂದ ಭ್ರಷ್ಟನಾದ ಬ್ರಾಹ್ಮಣನು ಅನುಕ್ರಮವಾಗಿ ಶೂದ್ರತ್ವವನ್ನು ಹೊಂದುತ್ತಾನೆ.

ತತ್ರಾಸೌ ನಿರಯಂ ಪ್ರಾಪ್ತೋ ವರ್ಣಭ್ರಷ್ಟೋ ಬಹಿಷ್ಕೃತಃ ।
ಬ್ರಹ್ಮಲೋಕಾತ್ಪರಿಭ್ರಷ್ಟಃ ಶೂದ್ರಃ ಸಮುಪಜಾಯತೇ ॥೧೨॥

ಬ್ರಾಹ್ಮಣನಾಗಿ ಹುಟ್ಟಿದವನು ಶೂದ್ರೋಚಿತವಾದ ಕರ್ಮಗಳನ್ನು ಮಾಡುವುದರಿಂದ ಬ್ರಾಹ್ಮಣತ್ವದಿಂದ ಭ್ರಷ್ಟನಾಗುತ್ತಾನೆ. ಸ್ವವರ್ಣದವರಿಂದ ಬಹಿಷ್ಕರಿಸಲ್ಪಡುತ್ತಾನೆ. ಅವಸಾನಾನಂತರ ಬ್ರಹ್ಮಲೋಕಪ್ರಾಪ್ತಿಯಿಂದ ವಂಚಿತನಾಗುವ ಅವನು ನರಕದಲ್ಲಿ ಬೀಳುತ್ತಾನೆ. ನಿಯತಕಾಲದವರೆಗೆ ನರಕವಾಸವನ್ನು ಅನುಭವಿಸಿದನಂತರ ಪುನಃ ಶೂದ್ರಯೋನಿಯಲ್ಲಿ ಜನ್ಮತಾಳುತ್ತಾನೆ.

ಕ್ಷತ್ರಿಯೋ ವಾ ಮಹಾಭಾಗೇ ವೈಶ್ಯೋ ವಾ ಧರ್ಮಚಾರಿಣಿ ।
ಸ್ವಾನಿ ಕರ್ಮಾಣ್ಯಪಾಹಾಯ ಶೂದ್ರಕರ್ಮ ನಿಷೇವತೇ ॥೧೩॥

ಸ್ವಸ್ಥಾನಾತ್ಸ ಪರಿಭ್ರಷ್ಟೋ ವರ್ಣಸಂಕರತಾಂ ಗತಃ ।
ಬ್ರಾಹ್ಮಣಃ ಕ್ಷತ್ರಿಯೋ ವೈಶ್ಯಃ ಶೂದ್ರತ್ವಂ ಯಾತಿ ತಾದೃಶಃ ॥೧೪॥

ಮಹಾಭಾಗಳೇ! ಧರ್ಮಚಾರಿಣಿಯೇ! ಕ್ಷತ್ರಿಯನಾಗಲೀ ವೈಶ್ಯನಾಗಲೀ–ಸ್ವವರ್ಣೋಚಿತವಾದ ಧರ್ಮಗಳನ್ನು ಪರಿತ್ಯಜಿಸಿ ಶೂದ್ರೋಚಿತವಾದ ಕರ್ಮಗಳನ್ನೇ ಮಾಡುತ್ತಿದ್ದರೆ, ಅವರು ಕೂಡ ತಮ್ಮ ತಮ್ಮ ವರ್ಣಗಳಿಂದ ಭ್ರಷ್ಟರಾಗಿ ವರ್ಣಸಾಂಕರ್ಯವನ್ನು ಹೊಂದುತ್ತಾರೆ. ಅಂತಹ ವ್ಯಕ್ತಿಯು ಬ್ರಾಹ್ಮಣನಾಗಿರಲಿ, ಕ್ಷತ್ರಿಯನಾಗಿರಲಿ, ವೈಶ್ಯನಾಗಿರಲಿ–ಶೂದ್ರಭಾವವನ್ನೇ ಹೊಂದುತ್ತಾನೆ.

ಯಸ್ತು ಶುದ್ಧಃ ಸ್ವಧರ್ಮೇಣ ಜ್ಞಾನವಿಜ್ಞಾನವಾಞ್ಶುಚಿಃ ।
ಧರ್ಮಜ್ಞೋ ಧರ್ಮನಿರತಃ ಸ ಧರ್ಮಫಲಮಶ್ನುತೇ ॥೧೫॥

ಬ್ರಾಹ್ಮಣ-ಕ್ಷತ್ರಿಯ-ವೈಶ್ಯ-ಶೂದ್ರರಲ್ಲಿ ಯಾರೇ ಆಗಲೀ ಯಾವನು ಸ್ವಧರ್ಮವನ್ನು ಸೇವನೆಮಾಡುತ್ತಾ ಶುದ್ಧನಾಗಿರುವನೋ, ಜ್ಞಾನ-ವಿಜ್ಞಾನಗಳಿಂದ ಸಂಪನ್ನನಾಗಿರುವನೋ, ಪವಿತ್ರನಾಗಿರುವನೋ, ಧರ್ಮಜ್ಞನೋ, ಧರ್ಮನಿರತನೋ–ಅಂತಹವನು ಧರ್ಮದ ಫಲವನ್ನು ಉಪಭೋಗಿಸುತ್ತಾನೆ.

ಇದಂ ಚೈವಾಪರಂ ದೇವಿ ಬ್ರಹ್ಮಣಾ ಸಮುದಾಹೃತಮ್ ।
ಅಧ್ಯಾತ್ಮಂ ನೈಷ್ಠಿಕಂ ಸದ್ಭಿರ್ಧರ್ಮಕಾಮೈರ್ನಿಷೇವ್ಯತೇ ॥೧೬॥

ದೇವಿ! ಬ್ರಹ್ಮನು ಈ ವಿಷಯವಾಗಿ ಈ ಒಂದು ಮಾತನ್ನು ಹೇಳಿರುವನು. "ಧರ್ಮಕಾಮರಾದ ಸತ್ಪುರುಷರು ನೈಷ್ಠಿಕಬ್ರಹ್ಮಚರ್ಯವನ್ನೂ ಮತ್ತು ಅಧ್ಯಾತ್ಮವನ್ನೂ ಜೀವಪರ್ಯಂತವಾಗಿ ಆಶ್ರಯಿಸಿರುತ್ತಾರೆ."

ಉಗ್ರಾನ್ನಂ ಗರ್ಹಿತಂ ದೇವಿ ಗಣಾನ್ನಂ ಶ್ರಾದ್ಧ ಸೂತಕಮ್ ।
ದುಷ್ಟಾನ್ನಂ ನೈವ ಭೋಕ್ತವ್ಯಂ ಶೂದ್ರಾನ್ನಂ ನೈವ ಕರ್ಹಿಚಿತ್ ॥೧೭॥

ಉಗ್ರಸ್ವಭಾವದವನ ಮನೆಯಲ್ಲಿ ಊಟಮಾಡುವುದು ನಿಂದ್ಯವಾದುದು. ಸಮುದಾಯದಲ್ಲಿ ಬಡಿಸುವ ಅನ್ನವನ್ನಾಗಲೀ, ಶ್ರಾದ್ಧಕ್ಕೆ ಸಂಬಂಧಿಸಿದ ಅನ್ನವನ್ನಾಗಲೀ, ಜಾತಾಶೌಚ-ಮೃತಾಶೌಚವಿರುವ ಮನೆಯ ಅನ್ನವನ್ನಾಗಲೀ, ದುಷ್ಟರ ಮನೆಯ ಅನ್ನವನ್ನಾಗಲೀ ಊಟಮಾಡಬಾರದು. ಶೂದ್ರಾನ್ನವನ್ನು–ಯಾವಾಗಲೂ ಯಾವುದೇ ಕಾರಣದಿಂದಲೂ ಊಟ ಮಾಡಬಾರದು.

ಶೂದ್ರಾನ್ನಂ ಗರ್ಹಿತಂ ದೇವಿ ಸದಾ ದೇವೈರ್ಮಹಾತ್ಮಭಿಃ ।
ಪಿತಾಮಹಮುಖೋತ್ಸೃಷ್ಟಂ ಪ್ರಮಾಣಮಿತಿ ಮೇ ಮತಿಃ ॥೧೮॥

ದೇವಿ! ಮಹಾತ್ಮರಿಂದಲೂ ದೇವತೆಗಳಿಂದಲೂ ಶೂದ್ರಾನ್ನವು ನಿಂದಿಸಲ್ಪಟ್ಟಿದೆ. ಈ ವಿಷಯವು ಪಿತಾಮಹಬ್ರಹ್ಮನ ಬಾಯಿಂದಲೇ ಬಂದಿದೆ. ಆದುದರಿಂದ ಇದು ಪ್ರಮಾಣವೆಂದು ನಾನು ಭಾವಿಸುತ್ತೇನೆ.

ಶೂದ್ರಾನ್ನೇನಾವಶೇಷೇಣ ಜಠರೇ ಯೋ ಮ್ರಿಯೇದ್ದ್ವಿಜಃ ।
ಆಹಿತಾಗ್ನಿಸ್ತಥಾ ಯಜ್ವಾ ಸ ಶೂದ್ರಗತಿಭಾಗ್ಭವೇತ್ ॥೧೯॥

ಯಾವ ಬ್ರಾಹ್ಮಣನು ಹೊಟ್ಟೆಯಲ್ಲಿ ಶೂದ್ರಾನ್ನವಿರುವಾಗ ಸಾಯುವನೋ–ಅವನು ಅಗ್ನಿಹೋತ್ರಿಯೇ ಆಗಿರಲಿ, ಯಾಜ್ಞಿಕನೇ ಆಗಿರಲಿ–ಪುನರ್ಜನ್ಮದಲ್ಲಿ ಶೂದ್ರನಾಗಿಯೇ ಹುಟ್ಟುತ್ತಾನೆ.

ತೇನ ಶೂದ್ರಾನ್ನಶೇಷೇಣ ಬ್ರಹ್ಮಸ್ಥಾನಾದಪಾಕೃತಃ ।
ಬ್ರಾಹ್ಮಣಃ ಶೂದ್ರತಾಮೇತಿ ನಾಸ್ತಿ ತತ್ರ ವಿಚಾರಣಾ ॥೨೦॥

ಮರಣಕಾಲದಲ್ಲಿ ಹೊಟ್ಟೆಯಲ್ಲಿ ಶೂದ್ರಾನ್ನಶೇಷವು ಉಳಿದ ಕಾರಣ

ದಿಂದಲೇ ಬ್ರಾಹ್ಮಣನು ಬ್ರಹ್ಮಲೋಕಪ್ರಾಪ್ತಿಯಿಂದ ವಂಚಿತನಾಗಿ ಶೂದ್ರತ್ವ ವನ್ನು ಪಡೆಯುತ್ತಾನೆ. ಈ ವಿಷಯದಲ್ಲಿ ಪುನಃ ವಿಚಾರಮಾಡುವ ಕಾರಣವೇ ಇಲ್ಲ.

ಯಸ್ಯಾನ್ನೇನಾವಶೇಷೇಣ ಜಠರೇ ಯೋ ಮ್ರಿಯೇದ್ದ್ವಿಜಃ ।
ತಾಂ ತಾಂ ಯೋನಿಂ ವ್ರಜೇದ್ವಿಪ್ರೋ ಯಸ್ಯಾನ್ನಮುಪಜೀವತಿ ॥೨೧॥

ಯಾವನ ಅನ್ನಶೇಷವು ಹೊಟ್ಟೆಯಲ್ಲಿರುವಾಗ ಬ್ರಾಹ್ಮಣನು ಸಾಯು ವನೋ, ಯಾವನ ಅನ್ನದಿಂದ ಜೀವಿಕೆಯನ್ನು ನಡೆಸುವನೋ–ಅಂತಹವನ ವರ್ಣದಲ್ಲಿಯೇ ಆ ಬ್ರಾಹ್ಮಣನು ಪುನಃ ಹುಟ್ಟುತ್ತಾನೆ. ವೈಶ್ಯಾನ್ನದಿಂದ ಜೀವಿಕೆಯನ್ನು ನಡೆಸುತ್ತಿದ್ದು ಸಾಯುವ ಕಾಲದಲ್ಲಿ ಆ ವೈಶ್ಯಾನ್ನಶೇಷವು ಹೊಟ್ಟೆಯಲ್ಲಿದ್ದರೆ ವೈಶ್ಯನಾಗಿ ಹುಟ್ಟುತ್ತಾನೆ. ಕ್ಷತ್ರಿಯನಿಂದ ಜೀವಿಕೆಯನ್ನು ನಡೆಸುತ್ತಿದ್ದು ಸಾಯುವ ಕಾಲದಲ್ಲಿ ಕ್ಷತ್ರಿಯಾನ್ನವು ಅವನ ಹೊಟ್ಟೆಯಲ್ಲಿದ್ದರೆ ಪುನರ್ಜನ್ಮದಲ್ಲವನು ಕ್ಷತ್ರಿಯಯೋನಿಯಲ್ಲಿ ಹುಟ್ಟುತ್ತಾನೆ.

ಬ್ರಾಹ್ಮಣತ್ವಂ ಶುಭಂ ಪ್ರಾಪ್ಯ ದುರ್ಲಭಂ ಯೋಽವಮನ್ಯತೇ ।
ಅಭೋಜ್ಯಾನ್ಯಾನಿ ಚಾಶ್ನಾತಿ ಸ ದ್ವಿಜತ್ವಾತ್ಪತೇತ ವೈ ॥೨೨॥

ದುರ್ಲಭವಾದ ಮತ್ತು ಶುಭಾವಹವಾದ ಬ್ರಾಹ್ಮಣತ್ವವನ್ನು ಹೊಂದಿಯೂ ಯಾವನು ತಾನು ಬ್ರಾಹ್ಮಣನಾಗಿ ಹುಟ್ಟಿದುದಕ್ಕಾಗಿ ಅವ ಹೇಳನಮಾಡಿಕೊಳ್ಳುವನೋ ಮತ್ತು ತಿನ್ನಲು ಯೋಗ್ಯವಲ್ಲದ ಅನ್ನವನ್ನು ಊಟಮಾಡುವನೋ–ಅವನು ಬ್ರಾಹ್ಮಣತ್ವದಿಂದ ಭ್ರಷ್ಟನಾಗುತ್ತಾನೆ.

ಸುರಾಪೋ ಬ್ರಹ್ಮಹಾ ಕ್ಷುದ್ರಶ್ಚೋರೋ ಭಗ್ನವ್ರತೋಽಶುಚಿಃ ।
ಸ್ವಾಧ್ಯಾಯವರ್ಜಿತಃ ಪಾಪೋ ಲುಬ್ಧೋ ನೈಕೃತಿಕಃ ಶಠಃ ॥೨೩॥

ಅವ್ರತೋ ವೃಷಲೀಭರ್ತಾ ಕುಣ್ಡಾಶೀ ಸೋಮವಿಕ್ರಯೀ ।
ನಿಹೀನಸೇವೀ ವಿಪ್ರೋ ಹಿ ಪತತಿ ಬ್ರಹ್ಮಯೋನಿತಃ ॥೨೪॥

ದುರ್ಲಭವಾದ ಮತ್ತು ಶುಭಪ್ರದವಾದ ಬ್ರಾಹ್ಮಣತ್ವವನ್ನು ಹೊಂದಿಯೂ ಯಾವನು ಸುರಾಪಾನಮಾಡುವನೋ, ಬ್ರಹ್ಮಹತ್ಯೆ ಮಾಡುವನೋ, ನೀಚನೋ, ಕಳ್ಳನೋ, ಸಂಕಲ್ಪಿಸಿದ ವ್ರತವನ್ನು ಪಾಲಿ ಸದೇ ಇರುವನೋ, ಅಪವಿತ್ರನೋ, ವೇದಾಧ್ಯಯನದಿಂದ ವರ್ಜಿತನೋ,

ಪಾಪಿಷ್ಠನೋ, ಲೋಭಿಯೋ, ಕಪಟಿಯೋ, ಶಠನೋ, ವ್ರತವನ್ನು ಪಾಲಿಸದೇ ಇರುವನೋ, ಶೂದ್ರಸ್ತ್ರೀಯ ಪತಿಯಾಗಿರುವನೋ, ಅಡಿಗೆ ಮಾಡಿದ ಪಾತ್ರೆಯಲ್ಲಿ ಊಟಮಾಡುವನೋ, ಸೋಮಲತೆಯನ್ನು ವಿಕ್ರಯಿಸುವನೋ, ನೀಚರ ಸೇವೆಮಾಡುವನೋ–ಅಂತಹವನು ಬ್ರಾಹ್ಮಣತ್ವದಿಂದ ಭ್ರಷ್ಟನಾಗುತ್ತಾನೆ.

ಗುರುತಲ್ಪೀ ಗುರುದ್ರೋಹೀ ಗುರುಕುತ್ಸಾರತಿಶ್ಚ ಯಃ ।
ಬ್ರಹ್ಮವಿಚ್ಚಾಪಿ ಪತತಿ ಬ್ರಾಹ್ಮಣೋ ಬ್ರಹ್ಮಯೋನಿತಃ ॥೨೫॥

ವೇದಾಧ್ಯಯನಪರಾಯಣನಾಗಿದ್ದರೂ–ಗುರುಪತ್ನೀಸಮಾಗಮ ಮಾಡುವವನೂ, ದ್ರೋಹಮಾಡುವವನೂ, ಗುರುನಿಂದೆಯಲ್ಲಿಯೇ ಆಸಕ್ತನಾಗಿರುವವನೂ–ಬ್ರಾಹ್ಮಣತ್ವದಿಂದ ಭ್ರಷ್ಟನಾಗುತ್ತಾನೆ.

ಏಭಿಸ್ತು ಕರ್ಮಭಿರ್ದೇವಿ ಶುಭೈರಾಚರಿತೈಸ್ತಥಾ ।
ಶೂದ್ರೋ ಬ್ರಾಹ್ಮಣತಾಂ ಯಾತಿ ವೈಶ್ಯಃ ಕ್ಷತ್ರಿಯತಾಂ ವ್ರಜೇತ್ ॥

ದೇವಿ! ನಾನು ಮುಂದೆ ಹೇಳುವ ಶುಭಕರ್ಮಗಳಿಂದಲೂ ಸದಾಚಾರಗಳಿಂದಲೂ ಶೂದ್ರನು ಅನುಕ್ರಮವಾಗಿ ಬ್ರಾಹ್ಮಣತ್ವವನ್ನು ಪಡೆಯುತ್ತಾನೆ. ವೈಶ್ಯನು ಕ್ಷತ್ರಿಯನಾಗಿ ಹುಟ್ಟುತ್ತಾನೆ.

ಶೂದ್ರಕರ್ಮಾಣಿ ಸರ್ವಾಣಿ ಯಥಾನ್ಯಾಯಂ ಯಥಾವಿಧಿ ।
ಶುಶ್ರೂಷಾಂ ಪರಿಚರ್ಯಾಂ ಚ ಜ್ಯೇಷ್ಠೇ ವರ್ಣೇ ಪ್ರಯತ್ನತಃ ॥೨೭॥

ಕುರ್ಯಾದವಿಮನಾಃ ಶೂದ್ರಃ ಸತತಂ ಸತ್ಪಥೇ ಸ್ಥಿತಃ ।
ದೇವದ್ವಿಜಾತಿಸತ್ಕರ್ತಾ ಸರ್ವಾತಿಥ್ಯಕೃತವ್ರತಃ ॥೨೮॥

ಋತುಕಾಲಾಭಿಗಾಮೀ ಚ ನಿಯತೋ ನಿಯತಾಶನಃ ।
ಚೋಕ್ಷಶ್ಚೋಕ್ಷಜನಾನ್ವೇಷೀ ಶೇಷಾನ್ನಕೃತಭೋಜನಃ ।
ವೃಥಾ ಮಾಂಸಂ ನ ಭುಞ್ಜೀತ ಶೂದ್ರೋ ವೈಶ್ಯತ್ವಮೃಚ್ಛತಿ ॥೨೯॥

ಶೂದ್ರನು ತನ್ನ ಎಲ್ಲ ಕಾರ್ಯಗಳನ್ನೂ ನ್ಯಾಯೋಚಿತವಾದ ರೀತಿ ಯಲ್ಲಿ ಶಾಸ್ತ್ರದೃಷ್ಟವಾದ ರೀತಿಯಲ್ಲಿ ಮಾಡಬೇಕು. ತನಗಿಂತಲೂ ಜ್ಯೇಷ್ಠ ವರ್ಣದವರ ಪರಿಚರ್ಯೆಯನ್ನು ಪ್ರಯತ್ನಪೂರ್ವಕವಾಗಿ ಮಾಡಬೇಕು.

ತನ್ನ ಕರ್ತವ್ಯಪಾಲನೆಯಲ್ಲಿ ಯಾವಾಗಲೂ ಮನಸ್ಸಿಲ್ಲದವನಾಗಬಾರದು. (ಏಕಾಗ್ರಚಿತ್ತನಾಗಿರಬೇಕು.) ಸದಾ ಸನ್ಮಾರ್ಗದಲ್ಲಿಯೇ ಇರಬೇಕು. ದೇವತೆಗಳನ್ನು ಪೂಜಿಸಬೇಕು. ದ್ವಿಜರನ್ನು ಸತ್ಕರಿಸಬೇಕು. ಅತಿಥಿಸತ್ಕಾರದ ವ್ರತವನ್ನು ಕೈಗೊಳ್ಳಬೇಕು. ಋತುಕಾಲದಲ್ಲಿ ಮಾತ್ರ ಭಾರ್ಯೆಯೊಡನೆ ಸಮಾಗಮಮಾಡಬೇಕು. ನಿಯಮಪೂರ್ವಕವಾಗಿರುತ್ತಾ ನಿಯತವಾದ ರೀತಿಯಲ್ಲಿ ಭೋಜನಮಾಡಬೇಕು. ತಾನೂ ಪರಿಶುದ್ಧನಾಗಿದ್ದು ಸತ್ಪುರುಷರ ಅನ್ವೇಷಣೆಯನ್ನೂ ಮಾಡುತ್ತಿರಬೇಕು. ಅತಿಥಿಗಳು ಮತ್ತು ಕುಟುಂಬದ ಜನರು ಊಟಮಾಡಿದನಂತರ ಉಳಿದ ಅನ್ನವನ್ನು ಊಟಮಾಡಬೇಕು. ವೃಥಾ ಮಾಂಸವನ್ನು ತಿನ್ನಬಾರದು. ಇಂತಹ ನಿಯಮಗಳಿಂದಿರುವ ಶೂದ್ರನು ಮುಂದಿನ ಜನ್ಮದಲ್ಲಿ ವೈಶ್ಯನಾಗಿ ಹುಟ್ಟುತ್ತಾನೆ.

ಋತವಾಗನಹಂವಾದೀ ನಿರ್ದ್ವನ್ದ್ವಃ ಶಮಕೋವಿದಃ ।
ಯಜತೇ ನಿತ್ಯಯಜ್ಞೈಶ್ಚ ಸ್ವಾಧ್ಯಾಯಪರಮಃ ಶುಚಿಃ ॥೩೦॥

ದಾನ್ತೋ ಬ್ರಾಹ್ಮಣಸತ್ಕರ್ತಾ ಸರ್ವವರ್ಣಬುಭೂಷಕಃ ।
ಗೃಹಸ್ಥವ್ರತಮಾತಿಷ್ಠನ್ ದ್ವಿಕಾಲಕೃತಭೋಜನಃ ॥೩೧॥

ಶೇಷಾಶೀ ವಿಜಿತಾಹಾರೋ ನಿಷ್ಕಾಮೋ ನಿರಹಂವದಃ ।
ಅಗ್ನಿಹೋತ್ರಮುಪಾಸಂಶ್ಚ ಜುಹ್ವಾನಶ್ಚ ಯಥಾವಿಧಿ ॥೩೨॥

ಸರ್ವಾತಿಥ್ಯಮುಪಾತಿಷ್ಠಞ್ಶೇಷಾನ್ನಕೃತಭೋಜನಃ ।
ತ್ರೇತಾಗ್ನಿಮನ್ತ್ರವಿಹಿತೋ ವೈಶ್ಯೋ ಭವತಿ ವೈ ದ್ವಿಜಃ ॥೩೩॥

ಸ ವೈಶ್ಯಃ ಕ್ಷತ್ರಿಯಕುಲೇ ಶುಚೌ ಮಹತಿ ಜಾಯತೇ ॥೩೪॥

ವೈಶ್ಯನಾಗಿ ಹುಟ್ಟಿದನಂತರ ಸತ್ಯನಿಷ್ಠನಾಗಿ, ಅಹಂಕಾರಶೂನ್ಯನಾಗಿ, ಶೀತೋಷ್ಣ-ಸುಖ-ದುಃಖಾದಿ ದ್ವಂದ್ವಗಳಿಂದ ರಹಿತನಾಗಿ, ಶಾಂತನಾಗಿ, ಸ್ವಾಧ್ಯಾಯಪರಾಯಣನಾಗಿ, ಶುಚಿಯಾಗಿ, ಜಿತೇಂದ್ರಿಯನಾಗಿದ್ದು ನಿತ್ಯಯಜ್ಞಗಳನ್ನು ಆಚರಿಸುತ್ತಿರಬೇಕು. ಬ್ರಾಹ್ಮಣರನ್ನು ಸತ್ಕರಿಸುತ್ತಾ ಎಲ್ಲ ವರ್ಣದವರ ಉನ್ನತಿಯನ್ನೂ ಆಶಿಸುವವನಾಗಬೇಕು. ಗೃಹಸ್ಥವ್ರತವನ್ನು ಪರಿಪಾಲಿಸುತ್ತಾ ದಿನವೂ ಎರಡು ಸಲ ಭೋಜನಮಾಡಬೇಕು. ಯಜ್ಞಶೇಷವನ್ನು ಊಟಮಾಡಬೇಕು. ನಿಯತವಾದಆಹಾರವುಳ್ಳವನಾಗಬೇಕು. ಎಲ್ಲ

ಕಾಮನೆಗಳನ್ನೂ ತ್ಯಾಗಮಾಡಬೇಕು. ಅಹಂಕಾರ-ಮಮಕಾರಗಳನ್ನು ತೊರೆಯಬೇಕು. ವಿಧಿಪೂರ್ವಕವಾಗಿ ಆಹುತಿಗಳನ್ನು ಕೊಡುತ್ತಾ ಅಗ್ನಿ ಹೋತ್ರವನ್ನು ಮಾಡಬೇಕು. ಮನೆಗೆ ಬಂದ ಎಲ್ಲ ಅತಿಥಿಗಳನ್ನೂ ಸತ್ಕರಿಸ ಬೇಕು. ಅನಂತರ ಉಳಿದ ಅನ್ನವನ್ನು ತಾನು ಭೋಜನಮಾಡಬೇಕು. ಗಾರ್ಹಪತ್ಯಾದಿ ಅಗ್ನಿತ್ರಯವನ್ನೂ ಮಂತ್ರಪೂರ್ವಕವಾಗಿ ಆರಾಧಿಸಬೇಕು. ವೈಶ್ಯನು ಇಂತಹ ಕರ್ಮಗಳನ್ನು ಮಾಡಿದ್ದೇ ಆದರೆ ಅಂತಹ ವೈಶ್ಯನು ಅವಸಾನಾನಂತರದಲ್ಲಿ ಪರಿಶುದ್ಧವಾದ ಮತ್ತು ಮಹತ್ತ್ವಪೂರ್ಣವಾದ ಕ್ಷತ್ರಿಯಕುಲದಲ್ಲಿ ಹುಟ್ಟುತ್ತಾನೆ.

ಸ ವೈಶ್ಯಃ ಕ್ಷತ್ರಿಯೋ ಜಾತೋ ಜನ್ಮಪ್ರಭೃತಿ ಸಂಸ್ಕೃತಃ ।
ಉಪನೀತೋ ವ್ರತಪರೋ ದ್ವಿಜೋ ಭವತಿ ಸತ್ಕೃತಃ ॥೩೫॥

ದದಾತಿ ಯಜತೇ ಯಜ್ಞೈಃ ಸಮೃದ್ಧೈರಾಪ್ತದಕ್ಷಿಣೈಃ ।
ಅಧೀತ್ಯ ಸ್ವರ್ಗಮನ್ವಿಚ್ಛಂಸ್ತ್ರೇತಾಗ್ನಿಶರಣಃ ಸದಾ ॥೩೬॥

ಆರ್ತಹಸ್ತಪ್ರದೋ ನಿತ್ಯಂ ಪ್ರಜಾ ಧರ್ಮೇಣ ಪಾಲಯನ್ ।
ಸತ್ಯಃ ಸತ್ಯಾನಿ ಕುರುತೇ ನಿತ್ಯಂ ಯಃ ಸುಖದರ್ಶನಃ ॥೩೭॥

ಸತ್ಕರ್ಮಗಳಿಂದ ಕ್ಷತ್ರಿಯನಾಗಿ ಹುಟ್ಟಿದ ವೈಶ್ಯನು ಹುಟ್ಟಿದ ಮೊದಲು ಗೊಂಡು ಜಾತಕರ್ಮಾದಿಸಂಸ್ಕಾರಗಳಿಂದ ಸಂಸ್ಕೃತನಾಗಿ ಉಪನಯನವಾದ ನಂತರ ಬ್ರಹ್ಮಚರ್ಯವ್ರತಪರಿಪಾಲನೆಯಲ್ಲಿ ತತ್ಪರನಾಗಿ ದ್ವಿಜನಾಗಿ ಸರ್ವ ರಿಂದಲೂ ಸತ್ಕೃತನಾಗುತ್ತಾನೆ. ಯಜನ-ಅಧ್ಯಯನ-ದಾನ ಈ ಮೂರು ಕರ್ಮಗಳುಳ್ಳ ಅವನು ದಾನಮಾಡುತ್ತಾನೆ. ಸಮೃದ್ಧವಾದ ಪರ್ಯಾಪ್ತವಾದ ದಕ್ಷಿಣೆಗಳುಳ್ಳ ಯಜ್ಞಗಳಿಂದ ದೇವತೆಗಳನ್ನು ಪೂಜಿಸುತ್ತಾನೆ. ವೇದಗಳನ್ನು ಅಧ್ಯಯನಮಾಡಿ ಸ್ವರ್ಗಕಾಮನಾಗಿ ಗಾರ್ಹಪತ್ಯಾದಿ ತ್ರೇತಾಗ್ನಿಗಳನ್ನು ಆಶ್ರಯಿಸಿರುತ್ತಾನೆ. ಆರ್ತರಾದವರಿಗೆ ಅಭಯಹಸ್ತವನ್ನು ನೀಡುತ್ತಾನೆ. ಪ್ರತಿ ದಿನವೂ ಪ್ರಜೆಗಳನ್ನು ಧರ್ಮದಿಂದ ಪರಿಪಾಲನಮಾಡುತ್ತಾ ಸತ್ಯನಿಷ್ಠ ನಾಗಿದ್ದುಕೊಂಡು ಸತ್ಯಪೂರ್ಣವಾದ ವ್ಯವಹಾರಗಳನ್ನೇ ಮಾಡುತ್ತಾನೆ. ದರ್ಶನಮಾತ್ರದಿಂದಲೇ ಪ್ರಜೆಗಳಿಗೆ ಸುಖದಾಯಕನಾಗಿರುತ್ತಾನೆ. (ಪ್ರಜೆ ಗಳಿಗೆ ಅಡ್ಡಿ-ಆತಂಕಗಳಿಲ್ಲದೆ ಸುಲಭವಾಗಿ ದರ್ಶನವನ್ನು ಕೊಡುತ್ತಾನೆ.)

ಧರ್ಮದಣ್ಡೋ ನ ನಿರ್ದಣ್ಡೋ ಧರ್ಮಕಾರ್ಯಾನುಶಾಸಕಃ ।
ಯನ್ತ್ರಿತಃ ಕಾರ್ಯಕರಣೈಃ ಷಡ್ಭಾಗಕೃತಲಕ್ಷಣಃ ॥೩೮॥

ಶ್ರೇಷ್ಠನಾದ ಕ್ಷತ್ರಿಯನು ಧರ್ಮಾನುಸಾರವಾಗಿ ಅಪರಾಧಿಗಳನ್ನು ದಂಡಿಸಬೇಕು. ದಂಡವನ್ನು ಪರಿತ್ಯಾಗಮಾಡಬಾರದು. ಧರ್ಮಕಾರ್ಯ ಮಾಡಲು ಪ್ರಜೆಗಳಿಗೆ ಆಜ್ಞೆಮಾಡಬೇಕು. ಆಲಸ್ಯವಿಲ್ಲದೆ ರಾಜಕಾರ್ಯ ಗಳಲ್ಲಿ ಧರ್ಮದಿಂದಲೂ ರಾಜನೀತಿಯಿಂದಲೂ ನಿಯಂತ್ರಿತನಾಗಬೇಕು. ಪ್ರಜೆಗಳ ಆದಾಯದಲ್ಲಿ ಆರನೆಯ ಒಂದು ಭಾಗವನ್ನು ತೆಗೆದುಕೊಳ್ಳಬೇಕು.

ಗ್ರಾಮ್ಯಧರ್ಮಂ ನ ಸೇವೇತ ಸ್ವಚ್ಛನ್ದೇನಾರ್ಥಕೋವಿದಃ ।
ಋತುಕಾಲೇ ತು ಧರ್ಮಾತ್ಮಾ ಪತ್ನೀಮುಪಶಯೇತ್ಸದಾ ॥೩೯॥

ಕಾರ್ಯಕುಶಲನಾದ ಧರ್ಮಾತ್ಮನಾದ ಕ್ಷತ್ರಿಯನು ಸ್ವಚ್ಛಂದತೆಯಿಂದ ಗ್ರಾಮ್ಯಧರ್ಮದಲ್ಲಿ (ಮೈಥುನದಲ್ಲಿ) ಆಸಕ್ತನಾಗಬಾರದು. ಋತುಕಾಲದಲ್ಲಿ ಮಾತ್ರ ಪತ್ನಿಯೊಡನೆ ಸಮಾಗಮಮಾಡಬೇಕು.

ಸದೋಪವಾಸೀ ನಿಯತಃ ಸ್ವಾಧ್ಯಾಯನಿರತಃ ಶುಚಿಃ ।
ಬರ್ಹಿಷ್ಯಾನ್ತರಿತೇ ನಿತ್ಯಂ ಶಯಾನೋಽಗ್ನಿಗೃಹೇ ಸದಾ ॥೪೦॥

ನಿಯತವಾಗಿ ಎರಡು ವೇಳೆ ಮಾತ್ರ ಭೋಜನಮಾಡುತ್ತಾ ಮಧ್ಯದಲ್ಲಿ ಏನನ್ನೂ ತಿನ್ನದೇ ಸದೋಪವಾಸಿಯಾಗಿರಬೇಕು. (ಸದೋಪವಾಸಕ್ಕೆ ಎರಡುಹೊತ್ತು ಭೋಜನಮಾಡಿ ಮಧ್ಯದಲ್ಲಿ ನೀರನ್ನೂ ಕುಡಿಯದೇ ಬೇರೆ ಯಾವ ಆಹಾರವನ್ನೂ ತಿನ್ನದೇ ಇರುವುದು–ಎಂದರ್ಥ. ಆಪಸ್ತಂಬಧರ್ಮ ಸೂತ್ರದಲ್ಲಿ ಒಂದು ಹೊತ್ತು ಊಟಮಾಡುವುದಕ್ಕೆ ಉಪವಾಸವೆಂದು ಹೇಳಿದ್ದಾರೆ. ಔಪವಸ್ತಮೇವ ಕಾಲಾನ್ತರೇ ಭೋಜನಂ.) ಸ್ವಾಧ್ಯಾಯನಿರತ ನಾಗಿರಬೇಕು. ಪ್ರತಿನಿತ್ಯವೂ ಅಗ್ನಿಗೃಹದಲ್ಲಿ ದರ್ಭೆಯ ಚಾಪೆಯ ಮೇಲೆ ಮಲಗಬೇಕು.

ಸರ್ವಾತಿಥ್ಯಂ ತ್ರಿವರ್ಗಸ್ಯ ಕುರ್ವಾಣಃ ಸುಮನಾಃ ಸದಾ ।
ಶೂದ್ರಾಣಾಂ ಚಾನ್ನಕಾಮಾನಾಂ ನಿತ್ಯಂ ಸಿದ್ಧಮಿತಿ ಬ್ರುವನ್ ॥೪೧॥

ಕ್ಷತ್ರಿಯನು ಸದಾ ಪ್ರಸನ್ನತೆಯಿಂದ ಮೂರು ವರ್ಣದವರಿಗೂ ಸರ್ವ ವಿಧಗಳಲ್ಲಿಯೂ ಆತಿಥ್ಯವನ್ನು ಮಾಡಬೇಕು. ಅನ್ನವನ್ನಪೇಕ್ಷಿಸುವ ಶೂದ್ರ ರಿಗೂ ಅನ್ನವು ಸಿದ್ಧವಾಗಿದೆಯೆಂದು ಹೇಳಿ ಭೋಜನಮಾಡಿಸಬೇಕು.

ಅರ್ಥಾದ್ವಾ ಯದಿ ವಾ ಕಾಮಾನ್ನ ಕಿಂಚಿದುಪಲಕ್ಷಯೇತ್ ।
ಪಿತೃದೇವಾತಿಥಿಕೃತೇ ಸಾಧನಂ ಕುರುತೇ ಚ ಯಃ ॥೪೨॥

ಪಿತೃಗಳ ಪ್ರೀತ್ಯರ್ಥವಾಗಿ, ದೇವತೆಗಳ ಪ್ರೀತ್ಯರ್ಥವಾಗಿ ಮತ್ತು ಅತಿಥಿಗಳ ಪ್ರೀತ್ಯರ್ಥವಾಗಿ ಯಾವನು ಸಾಧನೆಮಾಡುವನೋ–ಅಂತಹ ಕ್ಷತ್ರಿಯನು ಅರ್ಥಕಾಮಪರನಾಗಿ ಧರ್ಮವಿರುದ್ಧವಾದ ಯಾವ ಕಾರ್ಯವನ್ನೂ ಮಾಡಬಾರದು.

ಸ್ವವೇಶ್ಮನಿ ಯಥಾನ್ಯಾಯಮುಪಾಸ್ತೇ ಭೈಕ್ಷ್ಯಮೇವ ಚ ।
ತ್ರಿಕಾಲಮಗ್ನಿಹೋತ್ರಂ ಚ ಜುಹ್ವಾನೋ ವೈ ಯಥಾವಿಧಿ ॥೪೩॥

ಕ್ಷತ್ರಿಯನು ತನ್ನ ಮನೆಯಲ್ಲಿ ನ್ಯಾಯೋಚಿತವಾದ ರೀತಿಯಲ್ಲಿ ಭೋಜನಮಾಡಬೇಕು. ಮೂರು ಕಾಲಗಳಲ್ಲಿಯೂ ಸ್ನಾನಮಾಡಬೇಕು. ಯಥಾಶಾಸ್ತ್ರವಾಗಿ ಅಗ್ನಿಹೋತ್ರವನ್ನು ಮಾಡಬೇಕು.

ಗೋಬ್ರಾಹ್ಮಣಹಿತಾರ್ಥಾಯ ರಣೇ ಚಾಭಿಮುಖೋ ಹತಃ ।
ತ್ರೇತಾಗ್ನಿಮನ್ತ್ರಪೂತಾತ್ಮಾ ಸಮಾವಿಶ್ಯ ದ್ವಿಜೋ ಭವೇತ್ ॥೪೪॥

ಗಾರ್ಹಪತ್ಯಾದಿ ಮೂರು ಅಗ್ನಿಗಳ ಸೇವೆಯಿಂದಲೂ ಮಂತ್ರಗಳಿಂದಲೂ ಪೂತಾತ್ಮನಾದ ಕ್ಷತ್ರಿಯನು ಗೋವುಗಳ ಮತ್ತು ಬ್ರಾಹ್ಮಣರ ಹಿತಾರ್ಥವಾಗಿ ಯುದ್ಧಮಾಡುತ್ತಾ ಯುದ್ಧಭೂಮಿಯಲ್ಲಿ ಮಡಿದರೆ ಅಂತಹ ಕ್ಷತ್ರಿಯನು ಬ್ರಾಹ್ಮಣನಾಗಿ ಜನ್ಮತಾಳುತ್ತಾನೆ.

ಜ್ಞಾನವಿಜ್ಞಾನಸಮ್ಪನ್ನಃ ಸಂಸ್ಕೃತೋ ವೇದಪಾರಗಃ ।
ವಿಪ್ರೋ ಭವತಿ ಧರ್ಮಾತ್ಮಾ ಕ್ಷತ್ರಿಯಃ ಸ್ವೇನ ಕರ್ಮಣಾ ॥೪೫॥

ಹೀಗೆ ಧರ್ಮಾತ್ಮನಾದ ಕ್ಷತ್ರಿಯನು ತನ್ನ ಸತ್ಕರ್ಮಗಳಿಂದ ಸಂಸ್ಕೃತ ನಾಗಿ ಜನ್ಮಾಂತರದಲ್ಲಿ ಜ್ಞಾನ-ವಿಜ್ಞಾನಸಂಪನ್ನನಾದ ವೇದ-ವೇದಾಂಗ ಪಾರಂಗತನಾದ ವಿಪ್ರನಾಗುತ್ತಾನೆ.

ಏತೈಃ ಕರ್ಮಫಲೈರ್ದೇವಿ ನ್ಯೂನಜಾತಿಕುಲೋದ್ಭವಃ ।
ಶೂದ್ರೋಽಪ್ಯಾಗಮಸಮ್ಪನ್ನೋ ದ್ವಿಜೋ ಭವತಿ ಸಂಸ್ಕೃತಃ ॥೪೬॥

ದೇವಿ! ಇಂತಹ ಶುಭಕರ್ಮಗಳ ಪ್ರಭಾವದಿಂದ ಹೀನಕುಲದಲ್ಲಿ

ಹುಟ್ಟಿದ ಶೂದ್ರನು ಕೂಡ ಅನುಕ್ರಮವಾಗಿ ಸುಸಂಸ್ಕೃತನಾದ, ವೇದ ಪಾರಂಗತನಾದ ಬ್ರಾಹ್ಮಣನಾಗುತ್ತಾನೆ.

ಬ್ರಾಹ್ಮಣೋ ವಾಪ್ಯಸದ್ವೃತ್ತಃ ಸರ್ವಸಂಕರಭೋಜನಃ ।
ಬ್ರಾಹ್ಮಣ್ಯಂ ಸ ಸಮುತ್ಸೃಜ್ಯ ಶೂದ್ರೋ ಭವತಿ ತಾದೃಶಃ ॥೪೭॥

ಬ್ರಾಹ್ಮಣನಾಗಿಯೇ ಹುಟ್ಟಿದ್ದರೂ ದುರಾಚಾರಿಯಾಗಿ, ಎಲ್ಲ ಸಂಕರ ಜಾತೀಯರ ಮನೆಗಳಲ್ಲಿಯೂ ಯಾವ ಭೇದವನ್ನೂ ಎಣಿಸದೇ ಭೋಜನ ಮಾಡುತ್ತಿದ್ದರೆ–ಅಂತಹವನು ಬ್ರಾಹ್ಮಣ್ಯದಿಂದ ಭ್ರಷ್ಟನಾಗಿ ಮರುಹುಟ್ಟಿನಲ್ಲಿ ಶೂದ್ರನಾಗುತ್ತಾನೆ.

ಕರ್ಮಭಿಃ ಶುಚಿಭಿರ್ದೇವಿ ಶುದ್ಧಾತ್ಮಾ ವಿಜಿತೇನ್ದ್ರಿಯಃ ।
ಶೂದ್ರೋಽಪಿ ದ್ವಿಜವತ್ಸೇವ್ಯ ಇತಿ ಬ್ರಹ್ಮಾಬ್ರವೀತ್ಸ್ವಯಮ್ ॥೪೮॥

ದೇವಿ! ಪವಿತ್ರವಾದ ಕರ್ಮಗಳಿಂದ ಶುದ್ಧಾಂತಃಕರಣನಾಗಿರುವವನು ಮತ್ತು ಜಿತೇಂದ್ರಿಯನಾಗಿರತಕ್ಕವನು ಶೂದ್ರನೇ ಆಗಿದ್ದರೂ–ಅವನನ್ನು ಬ್ರಾಹ್ಮಣನನ್ನು ಸೇವಿಸುವಂತೆಯೇ ಸೇವಿಸಬೇಕು–ಎಂಬುದಾಗಿ ಸಾಕ್ಷಾತ್ ಬ್ರಹ್ಮನೇ ಹೇಳಿದ್ದಾನೆ.

ಸ್ವಭಾವಃ ಕರ್ಮ ಚ ಶುಭಂ ಯತ್ರ ಶೂದ್ರೇಽಪಿ ತಿಷ್ಠತಿ ।
ವಿಶಿಷ್ಟಃ ಸ ದ್ವಿಜಾತೇರ್ವೈ ವಿಜ್ಞೇಯ ಇತಿ ಮೇ ಮತಿಃ ॥೪೯॥

ಯಾವ ಶೂದ್ರನ ಸ್ವಭಾವವು ಒಳ್ಳೆಯದಾಗಿರುವುದೋ, ಕರ್ಮವು ಸಾತ್ತ್ವಿಕವಾಗಿರುವುದೋ–ಅಂತಹ ಶೂದ್ರನು ಸ್ವಕರ್ಮಭ್ರಷ್ಟರಾದ ಬ್ರಾಹ್ಮಣ-ಕ್ಷತ್ರಿಯ-ವೈಶ್ಯರಿಗಿಂತಲೂ ಶ್ರೇಷ್ಠನೆಂದು ನನ್ನ ಅಭಿಮತವಾಗಿದೆ.

ನ ಯೋನಿರ್ನಾಪಿ ಸಂಸ್ಕಾರೋ ನ ಶ್ರುತಂ ನ ಚ ಸಂತತಿಃ ।
ಕಾರಣಾನಿ ದ್ವಿಜತ್ವಸ್ಯ ವೃತ್ತಮೇವ ತು ಕಾರಣಮ್ ॥೫೦॥

ಬ್ರಾಹ್ಮಣಯೋನಿಯಲ್ಲಿ ಹುಟ್ಟುವುದಾಗಲೀ, ಜಾತಕರ್ಮಾದಿಸಂಸ್ಕಾರ ಗಳಾಗಲೀ, ವೇದಾಧ್ಯಯನವಾಗಲೀ, ಸತ್ಕುಲಪ್ರಸೂತಿಯಾಗಲೀ–ದ್ವಿಜತ್ವಕ್ಕೆ ಕಾರಣಗಳಾಗುವುದಿಲ್ಲ. ಸಚ್ಚಾರಿತ್ರ್ಯವೇ ದ್ವಿಜತ್ವಕ್ಕೆ ಮುಖ್ಯವಾದ ಕಾರಣ ವಾಗಿದೆ.

ಸರ್ವೋಽಯಂ ಬ್ರಾಹ್ಮಣೋ ಲೋಕೇ ವೃತ್ತೇನ ತು ವಿಧೀಯತೇ ।
ವೃತ್ತೇ ಸ್ಥಿತಸ್ತು ಶೂದ್ರೋಽಪಿ ಬ್ರಾಹ್ಮಣತ್ವಂ ನಿಗಚ್ಛತಿ ॥೫೧॥

ಈ ಲೋಕದಲ್ಲಿರುವ ಪ್ರತಿಯೊಬ್ಬ ಬ್ರಾಹ್ಮಣನೂ ಚಾರಿತ್ರ್ಯದಿಂದಲೇ ಬ್ರಾಹ್ಮಣನಾಗುವನೆಂದು ವಿಧಾಯಕವಾಗಿದೆ. ಸಚ್ಚಾರಿತ್ರ್ಯದಲ್ಲಿ ಸ್ಥಿರನಾಗಿರುವ ಶೂದ್ರನೂ ಕೂಡ ಅನುಕ್ರಮವಾಗಿ (ಹಿಂದೆ ಹೇಳಿದ ರೀತಿಯಲ್ಲಿ) ಬ್ರಾಹ್ಮಣತ್ವವನ್ನು ಹೊಂದುತ್ತಾನೆ.

ಬ್ರಾಹ್ಮಃ ಸ್ವಭಾವಃ ಸುಶ್ರೋಣಿ ಸಮಃ ಸರ್ವತ್ರ ಮೇ ಮತಿಃ ।
ನಿರ್ಗುಣಂ ನಿರ್ಮಲಂ ಬ್ರಹ್ಮ ಯತ್ರ ತಿಷ್ಠತಿ ಸ ದ್ವಿಜಃ ॥೫೨॥

ಸುಶ್ರೋಣಿಯೇ! ಬ್ರಹ್ಮಸ್ವಭಾವವು (ಬ್ರಹ್ಮವಸ್ತುವು) ಎಲ್ಲರಲ್ಲಿಯೂ ಸಮಾನವಾಗಿಯೇ ಇದೆ–ಎಂಬುದು ನನ್ನ ಅಭಿಪ್ರಾಯವಾಗಿದೆ. ಯಾವನ ಹೃನ್ಮಂದಿರದಲ್ಲಿ ನಿರ್ಮಲವಾದ ನಿರ್ಗುಣವಾದ ಬ್ರಹ್ಮವಸ್ತುವು ಪ್ರಕಟವಾಗಿ ಪ್ರಕಾಶಗೊಂಡಿರುವುದೋ (ಯಾವನು ತನ್ನ ಹೃನ್ಮಂದಿರದಲ್ಲಿ ಪರಬ್ರಹ್ಮವಸ್ತು ವನ್ನು ಕಂಡುಕೊಂಡಿರುವನೋ)–ಅವನೇ ಬ್ರಾಹ್ಮಣನು.

ಏತೇ ಯೋನಿಫಲಾ ದೇವಿ ಸ್ಥಾನಭಾಗನಿದರ್ಶಕಾಃ ।
ಸ್ವಯಂ ಚ ವರದೇನೋಕ್ತಾ ಬ್ರಹ್ಮಣಾ ಸೃಜತಾ ಪ್ರಜಾಃ ॥೫೩॥

ದೇವಿ! ನಾಲ್ಕು ವರ್ಣಗಳ ಸ್ಥಾನ ಮತ್ತು ವಿಭಾಗಗಳನ್ನು ತೋರಿಸಿ ಕೊಡುವ ಇವುಗಳೇ ಆಯಾ ವರ್ಣದಲ್ಲಿ ಹುಟ್ಟುವುದರ ಫಲಗಳಾಗಿವೆ. ಪ್ರಜೆಗಳನ್ನು ಸೃಷ್ಟಿಸುವ ಕಾಲದಲ್ಲಿ ವರದನಾದ ಬ್ರಹ್ಮನೇ ಈ ಮಾತುಗಳನ್ನು ಹೇಳಿದ್ದಾನೆ.

ಬ್ರಾಹ್ಮಣೋಽಪಿ ಮಹತ್ಕ್ಷೇತ್ರಂ ಲೋಕೇ ಚರತಿ ಪಾದವತ್ ।
ಯತ್ತತ್ರ ಬೀಜಂ ವಪತಿ ಸಾ ಕೃಷಿಃ ಪ್ರೇತ್ಯ ಭಾವಿನಿ ॥೫೪॥

ಭಾಮಿನಿಯೇ! ಬ್ರಾಹ್ಮಣನು ಈ ಲೋಕದಲ್ಲಿ ಮಹಾಕ್ಷೇತ್ರಪ್ರಾಯ ನಾಗಿದ್ದಾನೆ. ಗದ್ದೆ-ಹೊಲ ಮೊದಲಾದ ಇತರ ಕ್ಷೇತ್ರಗಳಿಗಿಂತಲೂ ಇವನ ಲ್ಲಿರುವ ವಿಶೇಷವೇನೆಂದರೆ–ಬ್ರಾಹ್ಮಣನು ತಿರುಗಾಡುವ ಮಹಾಕ್ಷೇತ್ರ ಸ್ವರೂಪನು. ಗದ್ದೆಯಲ್ಲಿ ಬೀಜವನ್ನು ಬಿತ್ತಿದರೆ ಅದು ಅಲ್ಲಿಯೇ ಫಲವನ್ನು

ಕೊಡುತ್ತದೆ. ಆದರೆ ಬ್ರಾಹ್ಮಣನೆಂಬ ಕ್ಷೇತ್ರದಲ್ಲಿ ಬೀಜಬಿತ್ತಿದರೆ (ಅಲ್ಪವನ್ನಾದರೂ ದಾನಮಾಡಿದರೆ) ಅದು ಪರಲೋಕದಲ್ಲಿ ಅಪಾರವಾದ ಫಲವನ್ನು ನೀಡುತ್ತದೆ.

ವಿಘಸಾಶಿನಾ ಸದಾ ಭಾವ್ಯಂ ಸತ್ಪಥಾಲಮ್ಬಿನಾ ತಥಾ ।
ಬ್ರಾಹ್ಮಂ ಹಿ ಮಾರ್ಗಮಾಕ್ರಮ್ಯ ವರ್ತಿತವ್ಯಂ ಬುಭೂಷತಾ ॥೫೫॥

ತನ್ನ ಕಲ್ಯಾಣವನ್ನು ಇಚ್ಛಿಸುವ ಬ್ರಾಹ್ಮಣನು–ಸತ್ಪುರುಷರ ಮಾರ್ಗವನ್ನು ಅವಲಂಬಿಸಬೇಕು. ಅತಿಥಿಗಳು ಮತ್ತು ಕುಟುಂಬವರ್ಗದವರು ಭೋಜನಮಾಡಿದನಂತರ ಉಳಿದ ಅನ್ನವನ್ನು ಊಟಮಾಡಬೇಕು. ವೇದೋಕ್ತವಾದ ಮಾರ್ಗವನ್ನು ಆಶ್ರಯಿಸಿ ಒಳ್ಳೆಯ ರೀತಿಯಲ್ಲಿ ವ್ಯವಹರಿಸ ಬೇಕು.

ಸಂಹಿತಾಧ್ಯಾಯಿನಾ ಭಾವ್ಯಂ ಗೃಹೇ ವೈ ಗೃಹಮೇಧಿನಾ ।
ನಿತ್ಯಂ ಸ್ವಾಧ್ಯಾಯಿನಾ ಭಾವ್ಯಂ ನ ಚಾಧ್ಯಯನಜೀವಿನಾ ॥೫೬॥

ಗೃಹಸ್ಥನಾದ ಬ್ರಾಹ್ಮಣನು ಮನೆಯಲ್ಲಿದ್ದುಕೊಂಡು ಪ್ರತಿನಿತ್ಯವೂ ಸಂಹಿತೆಯನ್ನು (ವೇದವನ್ನು) ಪಾರಾಯಣಮಾಡಬೇಕು. ಶಾಸ್ತ್ರಗಳನ್ನು ಅಧ್ಯಯನಮಾಡಬೇಕು. ಪಾರಾಯಣ-ಅಧ್ಯಾಪನಗಳನ್ನು ಜೀವಿಕೆಯ ಸಾಧನಗಳನ್ನಾಗಿ ಮಾಡಿಕೊಳ್ಳಬಾರದು.

ಏವಂಭೂತೋ ಹಿ ಯೋ ವಿಪ್ರಃ ಸತ್ಪಥಂ ಸತ್ಪಥೇ ಸ್ಥಿತಃ ।
ಆಹಿತಾಗ್ನಿರಧೀಯಾನೋ ಬ್ರಹ್ಮಭೂಯಾಯ ಕಲ್ಪತೇ ॥೫೭॥

ಹೀಗೆ ಯಾವ ಬ್ರಾಹ್ಮಣನು ಸನ್ಮಾರ್ಗವನ್ನಾಶ್ರಯಿಸಿ ಸತ್ಪುರುಷರ ಮಾರ್ಗದಲ್ಲಿರುವನೋ, ಅಹಿತಾಗ್ನಿಯಾಗಿರುವನೋ, ವೇದಾಧ್ಯಯನಿರತ ನಾಗಿರುವನೋ–ಅವನು ಬ್ರಹ್ಮಭಾವವನ್ನು ಹೊಂದುತ್ತಾನೆ.

ಬ್ರಾಹ್ಮಣ್ಯಂ ದೇವಿ ಸಮ್ಪ್ರಾಪ್ಯ ರಕ್ಷಿತವ್ಯಂ ಯತಾತ್ಮನಾ ।
ಯೋನಿಪ್ರತಿಗ್ರಹಾದಾನೈಃ ಕರ್ಮಭಿಶ್ಚ ಶುಚಿಸ್ಮಿತೇ ॥೫೮॥

ಶುಚಿಸ್ಮಿತೆಯೇ! ದೇವಿ! ಬ್ರಾಹ್ಮಣ್ಯವನ್ನು ಪಡೆದುಕೊಂಡನಂತರ ಮನಸ್ಸನ್ನೂ ಮತ್ತು ಇಂದ್ರಿಯಗಳನ್ನೂ ಹತೋಟಿಯಲ್ಲಿಟ್ಟುಕೊಂಡು, ಕುತ್ಸಿತವಾದ ಯೋನಿಯಲ್ಲಿ ಹುಟ್ಟಿದ ಸ್ತ್ರೀಯರೊಡನೆ ಸಂಬಂಧವನ್ನು

ಬೆಳೆಸದೇ, ನೀಚರಾದವರಿಂದ ದಾನವನ್ನು ಪ್ರತಿಗ್ರಹಿಸದೇ, ನೀಚರಾದವರ ಮನೆಯಿಂದ ಪದಾರ್ಥಗಳನ್ನು ಸಂಗ್ರಹಿಸದೇ ಶುಭಕರ್ಮಗಳಿಂದಲೇ ಬ್ರಾಹ್ಮಣ್ಯವನ್ನು ರಕ್ಷಿಸಿಕೊಳ್ಳಬೇಕು.

ಗಿರಿರಾಜನಂದಿನಿಯೇ! ಶೂದ್ರನು ಸತ್ಕರ್ಮಗಳನ್ನು ಮಾಡುವುದರಿಂದ ಹೇಗೆ ಬ್ರಾಹ್ಮಣನಾಗುವನು? ಅಂತೆಯೇ ಬ್ರಾಹ್ಮಣನು ದುಷ್ಕರ್ಮಗಳನ್ನು ಮಾಡಿ ಬ್ರಾಹ್ಮಣ್ಯದಿಂದ ಭ್ರಷ್ಟನಾಗಿ ಹೇಗೆ ಶೂದ್ರನಾಗುವನು?–ಎಂಬ ರಹಸ್ಯಯುಕ್ತವಾದ ಈ ಆಖ್ಯಾನವನ್ನು ನಿನಗೆ ಹೇಳಿರುತ್ತೇನೆ.”

ಂ೪೩ನೆಯ ಅಧ್ಯಾಯವು ಮುಗಿಯಿತು.

೧೪೪ನೆಯ ಅಧ್ಯಾಯ — ದಾನಧರ್ಮಪರ್ವ (ಮುಂದುವರಿದಿದೆ.)

ಬಂಧನ–ಮುಕ್ತಿ, ಸ್ವರ್ಗ–ನರಕ, ದೀರ್ಘಾಯುಷ್ಯ ಮತ್ತು ಅಲ್ಪಾಯುಷ್ಯಗಳನ್ನು ಉಂಟುಮಾಡುವ ಶರೀರ, ಮಾತು ಮತ್ತು ಮನಸ್ಸುಗಳ ಮೂಲಕವಾಗಿ ಮಾಡುವ ಶುಭಾಶುಭಕರ್ಮಗಳ ವಿವರಣೆ

ಉಮೆಯು ಹೇಳುತ್ತಾಳೆ :

ಭಗವನ್ಸರ್ವಭೂತೇಶ ದೇವಾಸುರನಮಸ್ಕೃತ ।
ಧರ್ಮಾಧರ್ಮೌ ನೃಣಾಂ ದೇವ ಬ್ರೂಹಿ ಮೇ ಸಂಶಯಂ ವಿಭೋ ॥

“ಭಗವಂತನೇ! ಸರ್ವಪ್ರಾಣಿಗಳಿಗೂ ಈಶನೇ! ದೇವತೆಗಳಿಂದಲೂ ರಾಕ್ಷಸರಿಂದಲೂ ವಂದಿಸಲ್ಪಡತಕ್ಕವನೇ! ದೇವನೇ! ಮನುಷ್ಯರ ಧರ್ಮಾಧರ್ಮಗಳನ್ನು ಸಂದೇಹವುಂಟಾಗದಂತೆ ಹೇಳುವ ಕೃಪೆಮಾಡು.

ಕರ್ಮಣಾ ಮನಸಾ ವಾಚಾ ತ್ರಿವಿಧಂ ಹಿ ನರಃ ಸದಾ ।
ಬಧ್ಯತೇ ಬನ್ಧನೈಃ ಪಾಶೈರ್ಮುಚ್ಯತೇಽಪ್ಯಥವಾ ಪುನಃ ॥೨॥

ಮನುಷ್ಯನು ಕ್ರಿಯೆ, ಮನಸ್ಸು ಮತ್ತು ಮಾತು ಈ ಮೂರರಿಂದ ಕೂಡಿದವನಾಗಿರುತ್ತಾನೆ. ಈ ಮೂರೂ ಅವನನ್ನು ಸಂಸಾರಪಾಶಗಳಿಂದ ಬಂಧಿಸಲೂ ಅನುವಾಗುತ್ತವೆ ; ಮುಕ್ತಗೊಳಿಸಲೂ ಅನುವಾಗುತ್ತವೆ.

ಕೇನ ಶೀಲೇನ ವೃತ್ತೇನ ಕರ್ಮಣಾ ಕೀದೃಶೇನ ವಾ ।
ಸಮಾಚಾರೈರ್ಗುಣೈಃ ಕೈರ್ವಾ ಸ್ವರ್ಗಂ ಯಾನ್ತೀಹ ಮಾನವಾಃ ॥೩॥

ಪ್ರಭುವೇ! ಯಾವ ವಿಧವಾದ ಶೀಲದಿಂದ, ಚಾರಿತ್ರ್ಯದಿಂದ, ಯಾವ ವಿಧವಾದ ಕರ್ಮದಿಂದ, ಸಮುದಾಚಾರಗಳಿಂದ, ಗುಣಗಳಿಂದ ಮನುಷ್ಯರು ಸ್ವರ್ಗಕ್ಕೆ ಹೋಗುತ್ತಾರೆ?"

ಮಹೇಶ್ವರನು ಹೇಳುತ್ತಾನೆ :

ದೇವಿ ಧರ್ಮಾರ್ಥತತ್ತ್ವಜ್ಞೇ ಧರ್ಮನಿತ್ಯೇ ದಮೇ ರತೇ ।
ಸರ್ವಪ್ರಾಣಿಹಿತಃ ಪ್ರಶ್ನಃ ಶ್ರೂಯತಾಂ ಬುದ್ಧಿವರ್ಧನಃ ॥೪॥

"ಧರ್ಮಾರ್ಥತತ್ತ್ವಗಳನ್ನು ತಿಳಿದವಳೇ! ಸದಾ ಧರ್ಮದಲ್ಲಿಯೇ ತತ್ಪರಳಾಗಿರುವವಳೇ! ಇಂದ್ರಿಯಸಂಯಮದಲ್ಲಿಯೇ ರತಳಾಗಿರುವವಳೇ! ದೇವಿ! ನೀನು ಕೇಳಿರುವ ಪ್ರಶ್ನೆಯು ಬುದ್ಧಿಯನ್ನು ಚುರುಕುಗೊಳಿಸತಕ್ಕುದೂ ಸರ್ವಪ್ರಾಣಿಗಳಿಗೂ ಹಿತವನ್ನುಂಟುಮಾಡತಕ್ಕುದೂ ಆಗಿದೆ. ಅದಕ್ಕೆ ಯಥೋಚಿತವಾದ ಉತ್ತರವನ್ನು ಕೇಳು.

ಸತ್ಯಧರ್ಮರತಾಃ ಸನ್ತಃ ಸರ್ವಲಿಪ್ಸಾವಿವರ್ಜಿತಾಃ ।
ಧರ್ಮಲಬ್ಧಾರ್ಥಭೋಕ್ತಾರಸ್ತೇ ನರಾಃ ಸ್ವರ್ಗಗಾಮಿನಃ ॥೫॥

ಯಾವ ಸತ್ಪುರುಷರು ಧರ್ಮದ ಮೂಲಕವಾಗಿ ಸಂಪಾದಿಸಿದ ಅರ್ಥವನ್ನು ಉಪಭೋಗಿಸುವರೋ, ಸಮಸ್ತವಾದ ಆಸೆಗಳನ್ನೂ ತೊರೆದಿರುವರೋ, ಸತ್ಯ-ಧರ್ಮಗಳಲ್ಲಿಯೇ ರತರಾಗಿರುವರೋ–ಅಂತಹ ವರು ಸ್ವರ್ಗಕ್ಕೆ ಹೋಗುತ್ತಾರೆ.

ನಾಧರ್ಮೇಣ ನ ಧರ್ಮೇಣ ಬಧ್ಯನ್ತೇ ಛಿನ್ನಸಂಶಯಾಃ ।
ಪ್ರಲಯೋತ್ಪತ್ತಿತತ್ತ್ವಜ್ಞಾಃ ಸರ್ವಜ್ಞಾಃ ಸರ್ವದರ್ಶಿನಃ ॥೬॥

ಸಮಸ್ತವಾದ ಸಂಶಯಗಳನ್ನೂ ಪರಿಹರಿಸಿಕೊಂಡಿರುವ, ಪ್ರಲಯದ ಮತ್ತು ಸೃಷ್ಟಿಯ ತತ್ತ್ವವನ್ನು ತಿಳಿದಿರುವ, ಸರ್ವಜ್ಞರಾದ, ಸರ್ವದರ್ಶಿಗಳಾದ ಅಂತಹ ಸತ್ಪುರುಷರು ಧರ್ಮದಿಂದಾಗಲೀ–ಅಧರ್ಮದಿಂದಾಗಲೀ ಬಂಧಿಸಲ್ಪಡುವುದಿಲ್ಲ.

ವೀತರಾಗಾ ವಿಮುಚ್ಯನ್ತೇ ಪುರುಷಾಃ ಕರ್ಮಬನ್ಧನೈಃ ।
ಕರ್ಮಣಾ ಮನಸಾ ವಾಚಾ ಯೇ ನ ಹಿಂಸನ್ತಿ ಕಿಂಚನ ॥೭॥

ಕ್ರಿಯೆಯಿಂದಾಗಲೀ, ಮನಸ್ಸಿನಿಂದಾಗಲೀ, ಮಾತಿನಿಂದಾಗಲೀ–ಯಾರು ಯಾವ ಪ್ರಾಣಿಯನ್ನೂ ಹಿಂಸಿಸುವುದಿಲ್ಲವೋ, ರಾಗ-ದ್ವೇಷಾದಿಗಳಿಂದ ವಿಮುಕ್ತರಾಗಿರುವರೋ–ಅಂತಹ ಪುರುಷರು ಕರ್ಮಬಂಧನ ಗಳಿಂದ ಮುಕ್ತರಾಗುತ್ತಾರೆ.

ಯೇ ನ ಸಜ್ಜನ್ತಿ ಕಸ್ಮಿಂಶ್ಚಿತ್ತೇ ನ ಬಧ್ಯನ್ತಿ ಕರ್ಮಭಿಃ ।
ಪ್ರಾಣಾತಿಪಾತಾದ್ವಿರತಾಃ ಶೀಲವನ್ತೋ ದಯಾನ್ವಿತಾಃ ।
ತುಲ್ಯದ್ವೇಷ್ಯಪ್ರಿಯಾ ದಾನ್ತಾ ಮುಚ್ಯನ್ತೇ ಕರ್ಮಬನ್ಧನೈಃ ॥೮॥

ಯಾರು ಯಾವುದರಲ್ಲಿಯೂ ಆಸಕ್ತರಾಗಿರುವುದಿಲ್ಲವೋ, ಪ್ರಾಣಹತ್ಯೆಯಿಂದ ವಿರತರಾಗಿರುವರೋ, ಸುಶೀಲರೋ, ದಯಾಳುಗಳೋ, ಶತ್ರುವನ್ನೂ ಮಿತ್ರನನ್ನೂ ಸಮಾನವಾಗಿ ಕಾಣುವರೋ, ಜಿತೇಂದ್ರಿಯರೋ–ಅಂತಹವರು ಕರ್ಮಬಂಧನಗಳಿಂದ ಮುಕ್ತರಾಗುತ್ತಾರೆ.

ಸರ್ವಭೂತದಯಾವನ್ತೋ ವಿಶ್ವಾಸ್ಯಾಃ ಸರ್ವಜನ್ತುಷು ।
ತ್ಯಕ್ತಹಿಂಸಾಸಮಾಚಾರಾಸ್ತೇ ನರಾಃ ಸ್ವರ್ಗಗಾಮಿನಃ ॥೯॥

ಎಲ್ಲ ಪ್ರಾಣಿಗಳಲ್ಲಿಯೂ ದಯಾವಂತರಾದ, ಎಲ್ಲ ಪ್ರಾಣಿಗಳ ವಿಶ್ವಾಸಕ್ಕೂ ಪಾತ್ರರಾದ, ಹಿಂಸಾಯುಕ್ತವಾದ ಆಚಾರಗಳನ್ನು ಸಂಪೂರ್ಣವಾಗಿ ತ್ಯಜಿಸಿರುವ ಸತ್ಪುರುಷರು ಸ್ವರ್ಗಕ್ಕೆ ಹೋಗುತ್ತಾರೆ.

ಪರಸ್ವೇ ನಿರ್ಮಮಾ ನಿತ್ಯಂ ಪರದಾರವಿವರ್ಜಕಾಃ ।
ಧರ್ಮಲಬ್ಧಾನ್ನಭೋಕ್ತಾರಸ್ತೇ ನರಾಃ ಸ್ವರ್ಗಗಾಮಿನಃ ॥೧೦॥

ಪರಸ್ವತ್ತಿನಲ್ಲಿ ಮಮಕಾರವನ್ನು ಹೊಂದದಿರುವ (ಇತರರ ಸ್ವತ್ತನ್ನು ಆಶಿಸದಿರುವ), ಪರಪತ್ನಿಯರಿಂದ ದೂರವಿರುವ, ಧರ್ಮಮಾರ್ಗದಿಂದ ಲಭಿಸಿದ ಅನ್ನವನ್ನೇ ಉಪಭುಂಜಿಸುವ ಸತ್ಪುರುಷರು ಸ್ವರ್ಗಕ್ಕೆ ಹೋಗುತ್ತಾರೆ.

ಮಾತೃವತ್ಸ್ವಸೃವಚ್ಚೈವ ನಿತ್ಯಂ ದುಹಿತೃವಚ್ಚ ಯೇ ।
ಪರದಾರೇಷು ವರ್ತನ್ತೇ ತೇ ನರಾಃ ಸ್ವರ್ಗಗಾಮಿನಃ ॥೧೧॥

ಯಾವ ಸತ್ಪುರುಷರು ಪರಸ್ತ್ರೀಯರ ವಿಷಯದಲ್ಲಿ ದೊಡ್ಡವರಾಗಿದ್ದರೆ ತಾಯಿಯೆಂದೂ, ಚಿಕ್ಕವರಾಗಿದ್ದರೆ ಒಡಹುಟ್ಟಿದವಳೆಂದೂ, ಮಗಳೆಂದೂ ಭಾವಿಸುವರೋ–ಅಂತಹವರು ಸ್ವರ್ಗಕ್ಕೆ ಹೋಗುತ್ತಾರೆ.

ಸ್ತೈನ್ಯಾನ್ನಿವೃತ್ತಾಃ ಸತತಂ ಸಂತುಷ್ಟಾಃ ಸ್ವಧನೇನ ಚ ।
ಸ್ವಭಾಗ್ಯಾನ್ಯುಪಜೀವನ್ತಿ ತೇ ನರಾಃ ಸ್ವರ್ಗಗಾಮಿನಃ ॥೧೨॥

ಯಾವ ಸತ್ಪುರುಷರು ಕಳ್ಳತನದಿಂದ ದೂರವಿರುವರೋ ತಮ್ಮಲ್ಲಿರುವ ಧನದಿಂದಲೇ ಸಂತುಷ್ಟರಾಗಿರುವರೋ, ತಮ್ಮ ಸೌಭಾಗ್ಯದಿಂದಲೇ ಜೀವನವನ್ನು ನಿರ್ವಹಿಸುವರೋ (ಮತ್ತೊಬ್ಬರನ್ನು ಆಶ್ರಯಿಸಿ ಜೀವಿಸುವುದಿಲ್ಲವೋ) ಅಂತಹವರು ಸ್ವರ್ಗಕ್ಕೆ ಹೋಗುತ್ತಾರೆ.

ಸ್ವದಾರನಿರತಾ ಯೇ ಚ ಋತುಕಾಲಾಭಿಗಾಮಿನಃ ।
ಅಗ್ರಾಮ್ಯಸುಖಭೋಗಾಶ್ಚ ತೇ ನರಾಃ ಸ್ವರ್ಗಗಾಮಿನಃ ॥೧೩॥

ಯಾವ ಸತ್ಪುರುಷರು ತಮ್ಮ ಪತ್ನಿಯರಲ್ಲಿ ಮಾತ್ರವೇ ಆಸಕ್ತರಾಗಿರುವರೋ, ಋತುಕಾಲದಲ್ಲಿ ಮಾತ್ರವೇ ಪತ್ನಿಯೊಡನೆ ಸಮಾಗಮಮಾಡುವರೋ, ಗ್ರಾಮ್ಯವಾದ ಸುಖಭೋಗಗಳಲ್ಲಿ ಆಸಕ್ತರಾಗಿರುವುದಿಲ್ಲವೋ–ಅಂತಹವರು ಸ್ವರ್ಗಕ್ಕೆ ಹೋಗುತ್ತಾರೆ.

ಪರದಾರೇಷು ಯೇ ನಿತ್ಯಂ ಚಾರಿತ್ರಾವೃತಲೋಚನಾಃ ।
ಜಿತೇನ್ದ್ರಿಯಾಃ ಶೀಲಪರಾಸ್ತೇ ನರಾಃ ಸ್ವರ್ಗಗಾಮಿನಃ ॥೧೪॥

ಯಾರು ತಮ್ಮ ಸಚ್ಚಾರಿತ್ರ್ಯದಿಂದ ಪರಪತ್ನಿಯರ ವಿಷಯದಲ್ಲಿ ಮುಚ್ಚಲ್ಪಟ್ಟ ಕಣ್ಣುಗಳುಳ್ಳವರಾಗಿರುವರೋ (ಪರಸ್ತ್ರೀಯರನ್ನು ತಲೆಯೆತ್ತಿಯೂ ನೋಡುವುದಿಲ್ಲವೋ, ಕುರುಡರಂತೆ ವರ್ತಿಸುವರೋ)–ಅಂತಹ ಜಿತೇಂದ್ರಿಯರಾದ ಶೀಲವಂತರಾದ ಸತ್ಪುರುಷರು ಸ್ವರ್ಗಕ್ಕೆ ಹೋಗುತ್ತಾರೆ.

ಏಷ ದೇವಕೃತೋ ಮಾರ್ಗಃ ಸೇವಿತವ್ಯಃ ಸದಾ ನರೈಃ ।
ಅಕಷಾಯಕೃತಶ್ಚೈವ ಮಾರ್ಗಃ ಸೇವ್ಯಃ ಸದಾ ಬುಧೈಃ ॥೧೫॥

ದೇವಿ! ಇದು ದೇವತೆಗಳೇ ಕಲ್ಪಿಸಿರುವ ಮಾರ್ಗವಾಗಿದೆ. ಈ ಮಾರ್ಗವನ್ನೇ ಮನುಷ್ಯರು ಆಶ್ರಯಿಸಬೇಕು. ಈ ಮಾರ್ಗವು ರಾಗ-ದ್ವೇಷಾದಿಗಳ

ನಿರಸನಕ್ಕಾಗಿ ಕಲ್ಪಿಸಿರುವ ಮಾರ್ಗವಾಗಿದೆ. ಆದುದರಿಂದ ಈ ಮಾರ್ಗವನ್ನು ವಿದ್ವಾಂಸರಾದವರು ಆಶ್ರಯಿಸಬೇಕು.

ದಾನಧರ್ಮತಪೋಯುಕ್ತಶೀಲಶೌಚದಯಾತ್ಮಕಃ ।
ವೃತ್ತ್ಯರ್ಥಂ ಧರ್ಮಹೇತೋರ್ವಾ ಸೇವಿತವ್ಯಃ ಸದಾ ನರೈಃ ॥೧೬॥

ಸ್ವರ್ಗವಾಸಮಭೀಪ್ಸದ್ಭಿರ್ನ ಸೇವ್ಯಸ್ತ್ವತ ಉತ್ತರಃ ॥೧೭॥

ಈ ಮಾರ್ಗವು ದಾನ-ಧರ್ಮ-ತಪಸ್ಸು-ಶೀಲ-ಶೌಚ ಮತ್ತು ದಯೆ ಇವುಗಳಿಂದ ಯುಕ್ತವಾಗಿದೆ. ಮನುಷ್ಯರು ಜೀವಿಕೆಗಾಗಿ ಅಥವಾ ಪುಣ್ಯ ಸಂಪಾದನೆಗಾಗಿ ಈ ಮಾರ್ಗವನ್ನೇ ಆಶ್ರಯಿಸಬೇಕು. ಸ್ವರ್ಗವಾಸವನ್ನು ಅಪೇಕ್ಷಿಸುವವರಿಗೆ ಇದಕ್ಕಿಂತಲೂ ಶ್ರೇಷ್ಠವಾದ ಮಾರ್ಗವು ಮತ್ತೊಂದಿಲ್ಲ."

ಉಮೆಯು ಪ್ರಶ್ನಿಸುತ್ತಾಳೆ :

ವಾಚಾ ತು ಬಧ್ಯತೇ ಯೇನ ಮುಚ್ಯತೇಽಪ್ಯಥವಾ ಪುನಃ ।
ತಾನಿ ಕರ್ಮಾಣಿ ಮೇ ದೇವ ವದ ಭೂತಪತೇಽನಘ ॥೧೮॥

"ಭೂತನಾಥನೇ! ಅನಘನೇ! ಮಹಾದೇವನೇ! ಯಾವ ವಿಧವಾದ ಮಾತನ್ನು ಹೇಳುವುದರಿಂದ ಮನುಷ್ಯನು ಸಂಸಾರಬಂಧನಕ್ಕೆ ಒಳಗಾಗು ತ್ತಾನೆ ಮತ್ತು ಯಾವ ವಿಧವಾದ ಮಾತನ್ನು ಹೇಳುವುದರಿಂದ ಸಂಸಾರ ಬಂಧನದಿಂದ ಬಿಡುಗಡೆಯನ್ನು ಹೊಂದುತ್ತಾನೆ?–ಅಂತಹ ವಾಚಿಕವಾದ ಕರ್ಮಗಳು ಯಾವುವೆಂಬುದನ್ನು ನನಗೆ ಹೇಳು."

ಮಹೇಶ್ವರನು ಹೇಳುತ್ತಾನೆ :

ಆತ್ಮಹೇತೋಃ ಪರಾರ್ಥೇ ವಾ ನರ್ಮಹಾಸ್ಯಾಶ್ರಯಾತ್ತಥಾ ।
ಯೇ ಮೃಷಾ ನ ವದನ್ತೀಹ ತೇ ನರಾಃ ಸ್ವರ್ಗಗಾಮಿನಃ ॥೧೯॥

"ಯಾರು ತಮ್ಮ ಸಲುವಾಗಿಯೇ ಆಗಲೀ, ಬೇರೆಯವರ ಸಲು ವಾಗಿಯೇ ಆಗಲೀ, ಹಾಸ್ಯಕ್ಕಾಗಲೀ, ವಿನೋದಕ್ಕಾಗಲೀ–ಸುಳ್ಳನ್ನು ಹೇಳುವು ದಿಲ್ಲವೋ–ಅಂತಹವರು ಸ್ವರ್ಗಕ್ಕೆ ಹೋಗುತ್ತಾರೆ.

ವೃತ್ತ್ಯರ್ಥಂ ಧರ್ಮಹೇತೋರ್ವಾ ಕಾಮಕಾರಾತ್ತಥೈವ ಚ ।
ಅನೃತಂ ಯೇ ನ ಭಾಷನ್ತೇ ತೇ ನರಾಃ ಸ್ವರ್ಗಗಾಮಿನಃ ॥೨೦॥

ಯಾರು ಜೀವಿಕೆಗಾಗಿ, ಧರ್ಮಕಾರ್ಯದ ಸಲುವಾಗಿ, ಫಲಾಭಿಸಂಧಿಗಾಗಿ ಸುಳ್ಳನ್ನಾಡುವುದಿಲ್ಲವೋ–ಅಂತಹವರು ಸ್ವರ್ಗಕ್ಕೆ ಹೋಗುತ್ತಾರೆ.

ಶ್ಲಕ್ಷ್ಣಾಂ ವಾಣೀಂ ನಿರಾಬಾಧಾಂ ಮಧುರಾಂ ಪಾಪವರ್ಜಿತಾಮ್ ।
ಸ್ವಾಗತೇನಾಭಿಭಾಷನ್ತೇ ತೇ ನರಾಃ ಸ್ವರ್ಗಗಾಮಿನಃ ॥೨೧॥

ಯಾರು ಸ್ನೇಹಯುಕ್ತವಾದ, ಮಧುರವಾದ, ನಿರಾತಂಕವಾದ, ಪಾಪರಹಿತವಾದ ಮಾತನ್ನು ಸ್ವಾಗತಸತ್ಕಾರಭಾವದಿಂದ ಆಡುವರೋ–ಅಂತಹ ಮನುಷ್ಯರು ಸ್ವರ್ಗಕ್ಕೆ ಹೋಗುತ್ತಾರೆ.

ಪರುಷಂ ಯೇ ನ ಭಾಷನ್ತೇ ಕಟುಕಂ ನಿಷ್ಠುರಂ ತಥಾ ।
ಅಪೈಶುನ್ಯರತಾಃ ಸನ್ತಸ್ತೇ ನರಾಃ ಸ್ವರ್ಗಗಾಮಿನಃ ॥೨೨॥

ಯಾವ ಸತ್ಪುರುಷರು ಕಠಿನವಾದ, ನಿಷ್ಠುರವಾದ, ಕಟುವಾದ ಮಾತುಗಳನ್ನು ಆಡುವುದಿಲ್ಲವೋ, ಚಾಡಿಯ ಮಾತುಗಳನ್ನಾಡುವುದಿಲ್ಲವೋ–ಅಂತಹವರು ಸ್ವರ್ಗಕ್ಕೆ ಹೋಗುತ್ತಾರೆ.

ಪಿಶುನಾಂ ನ ಪ್ರಭಾಷನ್ತೇ ಮಿತ್ರಭೇದಕರೀಂ ಗಿರಮ್ ।
ಋತಂ ಮೈತ್ರಂ ತು ಭಾಷನ್ತೇ ತೇ ನರಾಃ ಸ್ವರ್ಗಗಾಮಿನಃ ॥೨೩॥

ಇಬ್ಬರು ಮಿತ್ರರಲ್ಲಿ ವಿರಸವನ್ನುಂಟುಮಾಡುವ ಚಾಡಿಯ ಮಾತನ್ನು ಯಾರು ಆಡುವುದಿಲ್ಲವೋ, ಸತ್ಯವೂ–ಮೈತ್ರಭಾವದಿಂದ ಯುಕ್ತವೂ ಆದ ಮಾತನ್ನೇ ಯಾರು ಆಡುವರೋ–ಅಂತಹವರು ಸ್ವರ್ಗಕ್ಕೆ ಹೋಗುತ್ತಾರೆ.

ಯೇ ವರ್ಜಯನ್ತಿ ಪರುಷಂ ಪರದ್ರೋಹಂ ಚ ಮಾನವಾಃ ।
ಸರ್ವಭೂತಸಮಾ ದಾನ್ತಾಸ್ತೇ ನರಾಃ ಸ್ವರ್ಗಗಾಮಿನಃ ॥೨೪॥

ಯಾವ ಮನುಷ್ಯರು ಇತರರ ಮನಸ್ಸು ನೋಯುವಂತೆ ಕಠಿನವಾಗಿ ಮಾತನಾಡುವುದನ್ನು ವರ್ಜಿಸಿರುವರೋ, ಇತರರಿಗೆ ಯಾವುದೇ ಕಾರಣದಿಂದಲೂ ದ್ರೋಹವನ್ನೆಸಗುವುದಿಲ್ಲವೋ, ಸರ್ವಪ್ರಾಣಿಗಳನ್ನೂ ಸಮಭಾವದಿಂದ ಕಾಣುವರೋ–ಅಂತಹ ಜಿತೇಂದ್ರಿಯರಾದ ಸತ್ಪುರುಷರು ಸ್ವರ್ಗಕ್ಕೆ ಹೋಗುತ್ತಾರೆ.

ಶಠಪ್ರಲಾಪಾದ್ವಿರತಾ ವಿರುದ್ಧಪರಿವರ್ಜಕಾಃ ।
ಸೌಮ್ಯಪ್ರಲಾಪಿನೋ ನಿತ್ಯಂ ತೇ ನರಾಃ ಸ್ವರ್ಗಗಾಮಿನಃ ॥೨೫॥

ಯಾರು ಉದ್ಧಟತನದ ಮಾತುಗಳನ್ನಾಡುವುದಿಲ್ಲವೋ, ವಿರೋಧವುಂಟಾಗುವ ಮಾತುಗಳನ್ನು ವರ್ಜಿಸಿರುವರೋ, ಯಾವಾಗಲೂ ಸೌಮ್ಯಭಾವದಿಂದಿರುತ್ತಾ, ಮಧುರವಾದ ಮಾತುಗಳನ್ನಾಡುವರೋ–ಅಂತಹವರು ಸ್ವರ್ಗಕ್ಕೆ ಹೋಗುತ್ತಾರೆ.

ನ ಕೋಪಾದ್ವ್ಯಾಹರನ್ತೇ ಯೇ ವಾಚಂ ಹೃದಯದಾರಣೀಮ್ ।
ಸಾನ್ತ್ವಂ ವದನ್ತಿ ಕ್ರುದ್ಧಾಪಿ ತೇ ನರಾಃ ಸ್ವರ್ಗಗಾಮಿನಃ ॥೨೬॥

ಯಾರು ಕೋಪದಿಂದ ಹೃದಯಭೇದಿಯಾದ–ಕರ್ಣಕಠೋರವಾದ ಮಾತುಗಳನ್ನಾಡುವುದಿಲ್ಲವೋ, ಕೋಪಗೊಂಡಿದ್ದರೂ ಸಾಂತ್ವನಪೂರ್ವಕವಾದ ಸೌಮ್ಯವಾದ ಮಾತುಗಳನ್ನೇ ಆಡುವರೋ–ಅಂತಹವರು ಸ್ವರ್ಗಕ್ಕೆ ಹೋಗುತ್ತಾರೆ.

ದೇವಿ! ಇದು ಮಾತಿನ ಮೂಲಕವಾಗಿ ಆಚರಿಸಬೇಕಾದ ಧರ್ಮವಾಗಿದೆ. ಮಾತಿನ ಸಂಬಂಧವಾದ ಈ ಧರ್ಮವನ್ನು ಮನುಷ್ಯರು ಯಾವಾಗಲೂ ಆಶ್ರಯಿಸಬೇಕು. ಸತ್ಯವನ್ನೇ ಹೇಳುವ ಗುಣವು ಶುಭಕರವಾದುದು. ವಿದ್ವಾಂಸರಾದವರು ಸುಳ್ಳನ್ನು ಸರ್ವಥಾ ತ್ಯಜಿಸಬೇಕು.”

ಪಾರ್ವತಿಯು ಹೇಳುತ್ತಾಳೆ :

ಮನಸಾ ಬಧ್ಯತೇ ಯೇನ ಕರ್ಮಣಾ ಪುರುಷಃ ಸದಾ ।
ತನ್ಮೇ ಬ್ರೂಹಿ ಮಹಾಭಾಗ ದೇವದೇವ ಪಿನಾಕಧೃತ್ ॥೨೭॥

“ಮಹಾಭಾಗನೇ! ಪಿನಾಕಿಯೇ! ದೇವದೇವನೇ! ಯಾವ ವಿಧವಾದ ಮನಸ್ಸನ್ನು ಹೊಂದಿರುವುದರಿಂದ ಅಥವಾ ಮನಸ್ಸಿಗೆ ಸಂಬಂಧಿಸಿದ ಕರ್ಮದಿಂದ ಮನುಷ್ಯನು ಸದಾ ಸಂಸಾರಕ್ಕೆ ಕಟ್ಟುಬೀಳುತ್ತಾನೆ? ಈ ವಿಷಯವನ್ನು ನನಗೆ ಹೇಳು.”

ಪರಮೇಶ್ವರನು ಹೇಳುತ್ತಾನೆ :

ಮಾನಸೇನೇಹ ಧರ್ಮೇಣ ಸಂಯುಕ್ತಾಃ ಪುರುಷಾಃ ಸದಾ ।
ಸ್ವರ್ಗಂ ಗಚ್ಛನ್ತಿ ಕಲ್ಯಾಣಿ ತನ್ಮೇ ಕೀರ್ತಯತಃ ಶೃಣು ॥೨೮॥

“ಮಂಗಳಪ್ರದಳೇ! ಯಾವ ಪುರುಷರು ಮಾನಸಿಕಧರ್ಮದಿಂದ

ಯುಕ್ತರಾಗಿರುವರೋ, (ಮನಸ್ಸಿನಲ್ಲಿ ಧರ್ಮವನ್ನೇ ಚಿಂತಿಸುತ್ತಾ ಧರ್ಮಾಚರಣೆಗಳನ್ನು ಮಾಡುವರೋ) ಅಂತಹವರು ಸ್ವರ್ಗಕ್ಕೆ ಹೋಗುತ್ತಾರೆ. ನಾನು ಈ ವಿಷಯದಲ್ಲಿ ಹೇಳಲಿರುವ ವಿವರಣೆಯನ್ನು ಕೇಳು.

ದುಷ್ಪ್ರಣೀತೇನ ಮನಸಾ ದುಷ್ಪ್ರಣೀತತರಾ ಕೃತಿಃ ।
ಮನೋ ಬಧ್ಯತಿ ಯೇನೇಹ ಶೃಣು ವಾಕ್ಯಂ ಶುಭಾನನೇ ॥೩೦॥

ಶುಭಾನನೆಯೇ! ಮನುಷ್ಯನು ದುರ್ವಿಚಾರವುಳ್ಳ ಮನಸ್ಸನ್ನು ಹೊಂದಿದ್ದರೆ ಅವನು ಮಾಡುವ ಕಾರ್ಯವೂ ಅತಿದುಷ್ಟವಾಗಿಯೇ ಇರುತ್ತದೆ. ಮನಸ್ಸು ಯಾವುದರಿಂದ ಬಂಧಿಸಲ್ಪಡುವುದೆಂಬುದನ್ನು ಹೇಳುವೆನು, ಕೇಳು :

ಅರಣ್ಯೇ ವಿಜನೇ ನ್ಯಸ್ತಂ ಪರಸ್ವಂ ದೃಶ್ಯತೇ ಯದಾ ।
ಮನಸಾಪಿ ನ ಹಿಂಸನ್ತಿ ತೇ ನರಾಃ ಸ್ವರ್ಗಗಾಮಿನಃ ॥೩೧॥

ನಿರ್ಜನವಾದ ಅರಣ್ಯದಲ್ಲಿ ಇಡಲ್ಪಟ್ಟಿರುವ ಪರರ ಸ್ವತ್ತನ್ನು ಕಂಡಾಗ ಯಾವನು ಮನಸ್ಸಿನಿಂದ ಕೂಡ ಅದನ್ನು ತೆಗೆದುಕೊಂಡು ಓಡಿಹೋಗಲು ಆಶೆಪಡುವುದಿಲ್ಲವೋ–ಅಂತಹ ಮನುಷ್ಯನು ಸ್ವರ್ಗಕ್ಕೆ ಹೋಗುತ್ತಾನೆ.

ಗ್ರಾಮೇ ಗೃಹೇ ವಾ ಯೇ ದ್ರವ್ಯಂ ಪಾರಕ್ಯಂ ವಿಜನೇ ಸ್ಥಿತಮ್ ।
ನಾಭಿನನ್ದನ್ತಿ ವೈ ನಿತ್ಯಂ ತೇ ನರಾಃ ಸ್ವರ್ಗಗಾಮಿನಃ ॥೩೨॥

ಗ್ರಾಮದಲ್ಲಾಗಲೀ, ಮನೆಯಲ್ಲಾಗಲೀ, ನಿರ್ಜನಪ್ರದೇಶದಲ್ಲಾಗಲೀ ಇರುವ ಪರದ್ರವ್ಯವನ್ನು ತೆಗೆದುಕೊಳ್ಳಲು ಯಾರ ಮನಸ್ಸು ಪ್ರೋತ್ಸಾಹಿಸುವುದಿಲ್ಲವೋ–ಅಂತಹ ಮನುಷ್ಯರು ಸ್ವರ್ಗಕ್ಕೆ ಹೋಗುತ್ತಾರೆ.

ತಥೈವ ಪರದಾರಾನ್ಯೇ ಕಾಮವೃತ್ತಾನ್ರಹೋಗತಾನ್ ।
ಮನಸಾಪಿ ನ ಹಿಂಸನ್ತಿ ತೇ ನರಾಃ ಸ್ವರ್ಗಗಾಮಿನಃ ॥೩೩॥

ಅದೇ ರೀತಿಯಲ್ಲಿ ಕಾಮವೃತ್ತೆಯರಾದ (ಕಾಮಾಸಕ್ತರಾದ), ಏಕಾಂತದಲ್ಲಿ ಸಂಧಿಸಿದ ಪರಸ್ತ್ರೀಯರನ್ನು ಯಾವ ಮನುಷ್ಯರು ಮನಸ್ಸಿನಿಂದ ಕೂಡ ಕಾಮಿಸುವುದಿಲ್ಲವೋ–ಅಂತಹವರು ಸ್ವರ್ಗಕ್ಕೆ ಹೋಗುತ್ತಾರೆ.

ಶತ್ರುಂ ಮಿತ್ರಂ ಚ ಯೇ ನಿತ್ಯಂ ತುಲ್ಯೇನ ಮನಸಾ ನರಾಃ ।
ಭಜನ್ತಿ ಮೈತ್ರಾಃ ಸಂಗಮ್ಯ ತೇ ನರಾಃ ಸ್ವರ್ಗಗಾಮಿನಃ ॥೩೪॥

ಯಾರು ಎಲ್ಲರೊಡನೆಯೂ ಮೈತ್ರೀಭಾವದಿಂದಿರುತ್ತಾ, ಎಲ್ಲರೊಡನೆಯೂ ಸೇರಿ ನಡೆದುಕೊಳ್ಳುವರೋ, ಶತ್ರುವನ್ನೂ ಮತ್ತು ಮಿತ್ರನನ್ನೂ ಸಮಾನವಾದ ಮನೋಭಾವದಿಂದ ಕಾಣುವರೋ–ಅಂತಹವರು ಸ್ವರ್ಗಕ್ಕೆ ಹೋಗುತ್ತಾರೆ.

ಶ್ರುತವನ್ತೋ ದಯಾವನ್ತಃ ಶುಚಯಃ ಸತ್ಯಸಂಗರಾಃ ।
ಸ್ವೈರರ್ಥ್ಯೈಃ ಪರಿಸನ್ತುಷ್ಟಾಸ್ತೇ ನರಾಃ ಸ್ವರ್ಗಗಾಮಿನಃ ॥೩೫॥

ಯಾರು ಶಾಸ್ತ್ರಜ್ಞರೋ, ದಯಾವಂತರೋ, ಪರಿಶುದ್ಧರೋ, ಸತ್ಯನಿಷ್ಠರೋ, ತಮ್ಮಲ್ಲಿರುವ ಧನದಿಂದಲೇ ಪರಿತುಷ್ಟರಾಗಿರುವರೋ (ಯದೃಚ್ಛಾಲಾಭಸಂತುಷ್ಟರೋ)–ಅಂತಹವರು ಸ್ವರ್ಗಕ್ಕೆ ಹೋಗುತ್ತಾರೆ.

ಅವೈರಾ ಯೇ ತ್ವನಾಯಾಸಾ ಮೈತ್ರೀಚಿತ್ತರತಾಃ ಸದಾ ।
ಸರ್ವಭೂತದಯಾವನ್ತಸ್ತೇ ನರಾಃ ಸ್ವರ್ಗಗಾಮಿನಃ ॥೩೬॥

ಯಾರು ಯಾರೊಡನೆಯೂ ದ್ವೇಷವನ್ನು ಕಟ್ಟಿಕೊಳ್ಳುವುದಿಲ್ಲವೋ, ದೈಹಿಕಸುಖಕ್ಕಾಗಿ ಆಯಾಸಪಡುವುದಿಲ್ಲವೋ, ಮೈತ್ರಭಾವದಿಂದ ಪೂರ್ಣವಾದ ಹೃದಯವುಳ್ಳವರಾಗಿರುವರೋ, ಸರ್ವಪ್ರಾಣಿಗಳ ವಿಷಯದಲ್ಲಿಯೂ ದಯಾಳುಗಳಾಗಿರುವರೋ–ಅಂತಹವರು ಸ್ವರ್ಗಕ್ಕೆ ಹೋಗುತ್ತಾರೆ.

ಶ್ರದ್ಧಾವನ್ತೋ ದಯಾವನ್ತಶ್ಚೋಕ್ಷಾಶ್ಚೋಕ್ಷಜನಪ್ರಿಯಾಃ ।
ಧರ್ಮಾಧರ್ಮವಿದೋ ನಿತ್ಯಂ ತೇ ನರಾಃ ಸ್ವರ್ಗಗಾಮಿನಃ ॥೩೭॥

ಶ್ರದ್ಧಾಳುಗಳಾದ, ದಯಾಳುಗಳಾದ, ಶುದ್ಧರಾದ, ಶುದ್ಧಜನಪ್ರಿಯರಾದ, ಧರ್ಮಾಧರ್ಮಗಳನ್ನು ತಿಳಿದಿರುವ ಮನುಷ್ಯರು ಸ್ವರ್ಗಕ್ಕೆ ಹೋಗುತ್ತಾರೆ.

ಶುಭಾನಾಮಶುಭಾನಾಂ ಚ ಕರ್ಮಣಾಂ ಫಲಸಂಚಯೇ ।
ವಿಪಾಕಜ್ಞಾಶ್ಚ ಯೇ ದೇವಿ ತೇ ನರಾಃ ಸ್ವರ್ಗಗಾಮಿನಃ ॥೩೮॥

ದೇವಿ! ಶುಭಾಶುಭಕರ್ಮಗಳ ಫಲಸಂಗ್ರಹದ ವಿಷಯದಲ್ಲಿ ಅದರ ಪರಿಣಾಮವೇನೆಂಬುದನ್ನು ತಿಳಿದಿರುವ ಮನುಷ್ಯರು ಸ್ವರ್ಗಕ್ಕೆ ಹೋಗುತ್ತಾರೆ.

ನ್ಯಾಯೋಪೇತಾ ಗುಣೋಪೇತಾ ದೇವದ್ವಿಜಪರಾಃ ಸದಾ ।
ಸಮುತ್ಥಾನಮನುಪ್ರಾಪ್ತಾಸ್ತೇ ನರಾಃ ಸ್ವರ್ಗಗಾಮಿನಃ ॥೩೯॥

ನ್ಯಾಯವಂತರಾದ, ಗುಣವಂತರಾದ, ದೇವ-ದ್ವಿಜಭಕ್ತರಾದ, ಧರ್ಮ ಕಾರ್ಯಗಳಲ್ಲಿ ಔನ್ನತ್ಯವನ್ನು ಹೊಂದಿರುವ ಮನುಷ್ಯರು ಸ್ವರ್ಗಕ್ಕೆ ಹೋಗುತ್ತಾರೆ.

ಶುಭೈಃ ಕರ್ಮಫಲೈರ್ದೇವಿ ಮಯ್ಯೈತೇ ಪರಿಕೀರ್ತಿತಾಃ ।
ಸ್ವರ್ಗಮಾರ್ಗಪರಾ ಭೂಯಃ ಕಿಂ ತ್ವಂ ಶ್ರೋತುಮಿಹೇಚ್ಛಸಿ ॥೪೦॥

ಪ್ರಿಯಳೇ! ಶುಭವಾದ ಕರ್ಮಗಳ ಫಲಗಳಿಂದ ಸ್ವರ್ಗಮಾರ್ಗದಲ್ಲಿ ಹೋಗುವ ಮನುಷ್ಯರು ಯಾರೆಂಬುದನ್ನು ನಿನಗೆ ವಿವರಿಸಿ ಹೇಳಿದ್ದೇನೆ. ಪುನಃ ಯಾವ ವಿಷಯವನ್ನು ನೀನು ಕೇಳಲು ಬಯಸಿರುವೆ?"

ಉಮೆಯು ಹೇಳುತ್ತಾಳೆ :

ಮಹಾನ್ಮೇ ಸಂಶಯಃ ಕಶ್ಚಿನ್ಮರ್ತ್ಯಾನ್ಪ್ರತಿ ಮಹೇಶ್ವರ ।
ತಸ್ಮಾತ್ತ್ವಂ ನೈಪುಣೇನಾದ್ಯ ಮಮ ವ್ಯಾಖ್ಯಾತುಮರ್ಹಸಿ ॥೪೧॥

"ಮಹೇಶ್ವರನೇ! ಮನುಷ್ಯರ ವಿಷಯದಲ್ಲಿ ನನಗೆ ಯಾವುದೋ ಒಂದು ಸಂಶಯವಿದೆ. ಆ ನನ್ನ ಸಂದೇಹಕ್ಕೆ ಉತ್ತರವನ್ನು ನೀನು ನೈಪುಣ್ಯ ದಿಂದ ವಿವರಿಸಿ ಹೇಳಬೇಕಾಗಿದೆ.

ಕೇನಾಯುರ್ಲಭತೇ ದೀರ್ಘಂ ಕರ್ಮಣಾ ಪುರುಷಃ ಪ್ರಭೋ ।
ತಪಸಾ ವಾಪಿ ದೇವೇಶ ಕೇನಾಯುರ್ಲಭತೇ ಮಹತ್ ॥೪೨॥

ಪ್ರಭುವೇ! ದೇವೇಶನೇ! ಪುರುಷನು ಯಾವ ಕರ್ಮದಿಂದ ದೀರ್ಘಾಯುಷ್ಯವನ್ನು ಪಡೆಯುತ್ತಾನೆ? ಯಾವ ತಪಸ್ಸನ್ನು ಮಾಡುವುದರಿಂದ ದೀರ್ಘಾಯುಷ್ಯವನ್ನು ಹೊಂದುತ್ತಾನೆ?

ಕ್ಷೀಣಾಯುಃ ಕೇನ ಭವತಿ ಕರ್ಮಣಾ ಭುವಿ ಮಾನವಃ ।
ವಿಪಾಕಂ ಕರ್ಮಣಾಂ ದೇವ ವಕ್ತುಮರ್ಹಸ್ಯನಿನ್ದಿತ ॥೪೩॥

ದೇವದೇವನೇ! ಅನಿಂದ್ಯನೇ! ಮನುಷ್ಯನು ಯಾವ ಕಾರ್ಯವನ್ನು ಮಾಡುವುದರಿಂದ ಅಲ್ಪಾಯುವಾಗುತ್ತಾನೆ? ಶುಭಾಶುಭಕರ್ಮಗಳ ಪರಿಣಾಮವನ್ನು ಹೇಳುವ ಕೃಪೆಮಾಡು.

ಅಪರೇ ಚ ಮಹಾಭಾಗ್ಯಾ ಮನ್ದಭಾಗ್ಯಾಸ್ತಥಾಪರೇ ।
ಅಕುಲೀನಾಸ್ತಥಾ ಚಾನ್ಯೇ ಕುಲೀನಾಶ್ಚ ತಥಾಪರೇ ॥೪೪॥

ಈ ಜಗತ್ತಿನಲ್ಲಿ ಕೆಲವರು ಮಹಾಭಾಗ್ಯಶಾಲಿಗಳಾಗಿರುತ್ತಾರೆ. ಕೆಲವರು ನಿರ್ಭಾಗ್ಯರಾಗಿರುತ್ತಾರೆ. ಕೆಲವರು ಸತ್ಕುಲಪ್ರಸೂತರಾಗಿರುತ್ತಾರೆ. ಕೆಲವರು ದುಷ್ಕುಲದಲ್ಲಿ ಹುಟ್ಟಿರುತ್ತಾರೆ.

ದುರ್ದರ್ಶಾಃ ಕೇಚಿದಾಭಾನ್ತಿ ನರಾಃ ಕಾಷ್ಠಮಯಾ ಇವ ।
ಪ್ರಿಯದರ್ಶಾಸ್ತಥಾ ಚಾನ್ಯೇ ದರ್ಶನಾದೇವ ಮಾನವಾಃ ॥೪೫॥

ಕೆಲವು ಮನುಷ್ಯರು ಮರದಿಂದ ಮಾಡಲ್ಪಟ್ಟವರಂತೆ (ಮರದ ಗೊಂಬೆಗಳಂತೆ) ನೋಡಲು ಭಯಂಕರರಾಗಿ ಕಾಣುತ್ತಾರೆ. ಕೆಲವು ಮನುಷ್ಯರನ್ನು ನೋಡಿದೊಡನೆಯೇ ಮನಸ್ಸು ಪ್ರಸನ್ನವಾಗುತ್ತದೆ. ನೋಡಬೇಕೆನಿಸುವ ಚೆಲುವಿನ ಮನುಷ್ಯರಾಗಿರುತ್ತಾರೆ.

ದುಷ್ಪ್ರಜ್ಞಾಃ ಕೇಚಿದಾಭಾನ್ತಿ ಕೇಚಿದಾಭಾನ್ತಿ ಪಣ್ಡಿತಾಃ ।
ಮಹಾಪ್ರಾಜ್ಞಾಸ್ತಥೈವಾನ್ಯೇ ಜ್ಞಾನವಿಜ್ಞಾನಭಾವಿನಃ ॥೪೬॥

ಕೆಲವರು ದುರ್ಬುದ್ಧಿಯುಳ್ಳವರಾಗಿ ಕಾಣುತ್ತಾರೆ. ಕೆಲವರು ವಿದ್ವಾಂಸರಾಗಿರುತ್ತಾರೆ. ಮತ್ತೆ ಕೆಲವರು ಜ್ಞಾನ-ವಿಜ್ಞಾನಗಳನ್ನು ತಿಳಿದಿರುವ ಮಹಾಪ್ರಾಜ್ಞರಾಗಿರುತ್ತಾರೆ.

ಅಲ್ಪಬಾಧಾಸ್ತಥಾ ಕೇಚಿನ್ಮಹಾಬಾಧಾಸ್ತಥಾಪರೇ ।
ದೃಶ್ಯನ್ತೇ ಪುರುಷಾ ದೇವ ತನ್ಮೇ ವ್ಯಾಖ್ಯಾತುಮರ್ಹಸಿ ॥೪೭॥

ಕೆಲವರು ಸ್ವಲ್ಪ ಕಷ್ಟವಿರುವವರಾಗಿ ಕಾಣುತ್ತಾರೆ. ಮತ್ತೆ ಕೆಲವರು ಮಹಾಸಂಕಟದಲ್ಲಿ ಸಿಕ್ಕಿದವರಾಗಿ ಕಾಣುತ್ತಾರೆ. ದೇವ! ಈ ವಿಪರ್ಯಾಸಕ್ಕೆ ಕಾರಣಗಳನ್ನು ವಿವರಿಸಿ ಹೇಳುವ ಕೃಪೆಮಾಡು."

ಮಹೇಶ್ವರನು ಹೇಳುತ್ತಾನೆ :

"ದೇವಿ! ನಿನಗೆ ಕರ್ಮವಿಪಾಕವನ್ನು ಸಂತೋಷದಿಂದ ಹೇಳುತ್ತೇನೆ. ಈ ಮರ್ತ್ಯಲೋಕದಲ್ಲಿರುವ ಎಲ್ಲ ಮನುಷ್ಯರೂ ತಾವು ಮಾಡಿದ ಕರ್ಮಗಳ ಫಲವನ್ನು ಯಾವ ರೀತಿಯಲ್ಲಿ ಉಪಭೋಗಿಸುವರೆಂಬುದನ್ನೂ ಹೇಳುತ್ತೇನೆ.

ಪ್ರಾಣಾತಿಪಾತೇ ಯೋ ರೌದ್ರೋ ದಣ್ಡಹಸ್ತೋದ್ಯತಃ ಸದಾ ।
ನಿತ್ಯಮುದ್ಯತಶಸ್ತ್ರಶ್ಚ ಹನ್ತಿ ಭೂತಗಣಾನ್ನರಃ ॥೪೯॥

ನಿರ್ದಯಃ ಸರ್ವಭೂತಾನಾಂ ನಿತ್ಯಮುದ್ವೇಗಕಾರಕಃ ।
ಅಪಿ ಕೀಟಪಿಪೀಲಾನಾಮಶರಣ್ಯಃ ಸುನಿರ್ಘೃಣಃ ।
ಏವಂಭೂತೋ ನರೋ ದೇವಿ ನಿರಯಂ ಪ್ರತಿಪದ್ಯತೇ ॥೫೦॥

ದೇವಿ! ಯಾವ ಮನುಷ್ಯನು ಇತರರ ಪ್ರಾಣಗಳನ್ನು ಹರಣಮಾಡುವ ಸಲುವಾಗಿ ಕೈಯಲ್ಲಿ ದಂಡವನ್ನು ಹಿಡಿದು ಸರ್ವಕಾಲದಲ್ಲಿಯೂ ಭಯಂಕರ ರೂಪವನ್ನು ತಾಳಿರುವನೋ, ನಿತ್ಯವೂ ಶಸ್ತ್ರವನ್ನು ಹಿಡಿದು ಪ್ರಾಣಿಗಳನ್ನು ಕೊಲ್ಲುವನೋ, ಪ್ರಾಣಿಗಳ ಬಗೆಗೆ ನಿರ್ದಯನಾಗಿರುವನೋ, ಎಲ್ಲ ಪ್ರಾಣಿಗಳಿಗೂ ನಿತ್ಯವೂ ಉದ್ವೇಗವನ್ನುಂಟುಮಾಡುವನೋ, ಹುಳು-ಹುಪ್ಪಟೆಗಳಿಗೂ ಇರುವೆಗಳಿಗೂ ಕೂಡ ಆಶ್ರಯವನ್ನು ಕೊಡುವುದಿಲ್ಲವೋ– ಅತ್ಯಂತಕ್ರೂರಿಯಾದ ಅಂತಹ ಮನುಷ್ಯನು ನರಕದಲ್ಲಿ ಬೀಳುತ್ತಾನೆ.

ವಿಪರೀತಸ್ತು ಧರ್ಮಾತ್ಮಾ ರೂಪವಾನಭಿಜಾಯತೇ ।
ಪಾಪೇನ ಕರ್ಮಣಾ ದೇವಿ ವಧ್ಯೋ ಹಿಂಸಾರತಿರ್ನರಃ ॥೫೧॥

ಅಪ್ರಿಯಃ ಸರ್ವಭೂತಾನಾಂ ಹೀನಾಯುರುಪಜಾಯತೇ ॥೫೨॥

ಇದಕ್ಕೆ ವಿಪರೀತವಾದ ಸ್ವಭಾವವು ಯಾವನಿಗಿರುವುದೋ (ಯಾವನು ಪ್ರಾಣಿದಯೆ ಮುಂತಾದ ಸದ್ಗುಣಗಳಿಂದ ಸಂಪನ್ನನಾಗಿರುವನೋ) ಅವನು ರೂಪವಂತನಾಗಿ ಹುಟ್ಟುತ್ತಾನೆ. ಪ್ರಾಣಿಹಿಂಸೆಯಲ್ಲಿಯೇ ಆಸಕ್ತನಾದ ಮನುಷ್ಯನು ಪಾಪಕರ್ಮದ ಫಲವಾಗಿ ಮರುಹುಟ್ಟಿನಲ್ಲಿ ಎಲ್ಲ ಪ್ರಾಣಿಗಳಿಗೂ ಅಪ್ರಿಯನಾಗಿ, ಅಲ್ಪಾಯುವಾಗಿ ಹುಟ್ಟಿ ಇತರರಿಂದ ವಧಿಸಲ್ಪಡುತ್ತಾನೆ.

ನಿರಯಂ ಯಾತಿ ಹಿಂಸಾತ್ಮಾ ಯಾತಿ ಸ್ವರ್ಗಮಹಿಂಸಕಃ ।
ಯಾತನಾಂ ನಿರಯೇ ರೌದ್ರಾಂ ಸ ಕೃಚ್ಛ್ರಾಂ ಲಭತೇ ನರಃ ॥೫೩॥

ಪ್ರಾಣಿಗಳನ್ನು ಹಿಂಸಿಸದೇ ಇರುವವನು ಸ್ವರ್ಗಕ್ಕೆ ಹೋಗುತ್ತಾನೆ. ಪ್ರಾಣಿಗಳನ್ನು ಹಿಂಸಿಸುವವನು ನರಕಕ್ಕೆ ಹೋಗುತ್ತಾನೆ. ಅಲ್ಲಿ ಅತ್ಯಂತ ಕಷ್ಟಕರವಾದ ಭಯಂಕರವಾದ ಯಾತನೆಯನ್ನು ಅನುಭವಿಸುತ್ತಾನೆ.

ಯಃ ಕಶ್ಚಿನ್ನಿರಯಾತ್ತಸ್ಮಾತ್ಸಮುತ್ತರತಿ ಕರ್ಹಿಚಿತ್ ।
ಮಾನುಷ್ಯಂ ಲಭತೇ ಚಾಪಿ ಹೀನಾಯುಸ್ತತ್ರ ಜಾಯತೇ ॥೫೪॥

ಹಾಗೆ ನರಕಕ್ಕೆ ಬಿದ್ದವರಲ್ಲಿ ಯಾವನಾದರೂ ಯಾವಾಗಲಾದರೂ ಹೊರಬಂದು ಮನುಷ್ಯನಾಗಿ ಹುಟ್ಟಿದರೂ ಅಲ್ಪಾಯುವಾಗಿಯೇ ಹುಟ್ಟು ತ್ತಾನೆ.

ಪಾಪೇನ ಕರ್ಮಣಾ ದೇವಿ ಬದ್ಧೋ ಹಿಂಸಾರತಿರ್ನರಃ ।
ಅಪ್ರಿಯಃ ಸರ್ವಭೂತಾನಾಂ ಹೀನಾಯುರುಪಜಾಯತೇ ॥೫೫॥

ಪ್ರಾಣಿಹಿಂಸೆಯಲ್ಲಿಯೇ ಆಸಕ್ತನಾದ, ಸರ್ವಪ್ರಾಣಿಗಳಿಗೂ ಅಪ್ರಿಯ ನಾದ ಮನುಷ್ಯನು ಪಾಪಫಲದಿಂದ ಬಂಧಿಸಲ್ಪಟ್ಟವನಾಗಿ ಮರುಹುಟ್ಟಿನಲ್ಲಿ ಅಲ್ಪಾಯುವಾಗುತ್ತಾನೆ.

ಯಸ್ತು ಶುಕ್ಲಾಭಿಜಾತೀಯಃ ಪ್ರಾಣಿಘಾತವಿವರ್ಜಕಃ ।
ನಿಕ್ಷಿಪ್ತಶಸ್ತ್ರೋ ನಿರ್ದಣ್ಡೋ ನ ಹಿಂಸತಿ ಕದಾಚನ ॥೫೬॥

ನ ಘಾತಯತಿ ನೋ ಹನ್ತಿ ಘ್ನನ್ತಂ ನೈವಾನುಮೋದತೇ ।
ಸರ್ವಬೂತೇಷು ಸಸ್ನೇಹೋ ಯಥಾತ್ಮನಿ ತಥಾಪರೇ ॥೫೭॥

ಈದೃಶಃ ಪುರುಷೋತ್ಕರ್ಷೋ ದೇವಿ ದೇವತ್ವಮಶ್ನುತೇ ।
ಉಪಪನ್ನಾನ್ಸುಖಾನ್ಭೋಗಾನುಪಾಶ್ನಾತಿ ಮುದಾ ಯುತಃ ॥೫೮॥

ಇದಕ್ಕೆ ವ್ಯತಿರಿಕ್ತವಾಗಿ ಯಾವನು ಸತ್ಕುಲಪ್ರಸೂತನೋ, ಪ್ರಾಣಿ ಹಿಂಸೆಯನ್ನು ವರ್ಜಿಸಿರುವನೋ, ಶಸ್ತ್ರ ಮತ್ತು ದಂಡಗಳನ್ನು ತ್ಯಾಗಮಾಡಿರು ವನೋ, ಯಾವುದೇ ಕಾರಣದಿಂದಲೂ ಯಾವಾಗಲೂ ಪ್ರಾಣಿಗಳನ್ನು ಹಿಂಸಿ ಸುವುದಿಲ್ಲವೋ, ಪ್ರಾಣಿಗಳನ್ನು ಗಾಯಗೊಳಿಸುವುದಿಲ್ಲವೋ, ಕೊಲ್ಲಲು ಮತ್ತೊಬ್ಬರಿಗೆ ಹೇಳುವುದಿಲ್ಲವೋ, ತಾನೂ ಕೊಲ್ಲುವುದಿಲ್ಲವೋ, ಕೊಲ್ಲುವವನನ್ನು ಅನುಮೋದಿಸುವುದಿಲ್ಲವೋ, ಎಲ್ಲ ಪ್ರಾಣಿಗಳ ವಿಷಯ ದಲ್ಲಿಯೂ ಸ್ನೇಹಯುಕ್ತನಾಗಿರುವನೋ, ತನ್ನಂತೆಯೇ ಬೇರೆಯವರು ಎಂದು ತಿಳಿಯುವನೋ–ಅಂತಹ ಪುರುಷಶ್ರೇಷ್ಠನು ದೇವತ್ವವನ್ನು ಹೊಂದುತ್ತಾನೆ. ದೇವಲೋಕದಲ್ಲಿ ಲಭಿಸುವ ಸುಖೋಪಭೋಗಗಳನ್ನು ಸಂತೋಷದಿಂದ ಅನುಭವಿಸುತ್ತಾನೆ.

ಅಥ ಚೇನ್ಮಾನುಷೇ ಲೋಕೇ ಕದಾಚಿದುಪಪದ್ಯತೇ ।
ತತ್ರ ದೀರ್ಘಾಯುರುತ್ಪನ್ನಃ ಸ ನರಃ ಸುಖಮೇಧತೇ ॥೫೯॥

ಅಂತಹವನೇನಾದರೂ ಯಾವಾಗಲಾದರೂ ಮನುಷ್ಯಲೋಕದಲ್ಲಿ ಹುಟ್ಟಿದ್ದೇ ಆದರೆ–ದೀರ್ಘಾಯುವಾಗಿ ಈ ಲೋಕದಲ್ಲಿಯೂ ಸುಖವನ್ನು ಅನುಭವಿಸುತ್ತಾನೆ. ವೃದ್ಧಿಹೊಂದುತ್ತಾನೆ.

ಏಷ ದೀರ್ಘಾಯುಷಾಂ ಮಾರ್ಗಃ ಸುವೃತ್ತಾನಾಂ ಸುಕರ್ಮಿಣಾಮ್ ।
ಪ್ರಾಣಿಹಿಂಸಾವಿಮೋಕ್ಷೇಣ ಬ್ರಹ್ಮಣಾ ಸಮುದೀರಿತಃ ॥೬೦॥

ಇದು ಸತ್ಕರ್ಮಾನುಷ್ಠಾನಮಾಡುವ ಸದಾಚಾರಿಗಳ ಮತ್ತು ದೀರ್ಘ ಜೀವಿಗಳ ಲಕ್ಷಣವಾಗಿದೆ. ಬ್ರಹ್ಮನೇ ಈ ಮಾರ್ಗವನ್ನು ಉಪದೇಶಿಸಿದ್ದಾನೆ. ಪ್ರಾಣಿಹಿಂಸೆಯನ್ನು ಪರಿತ್ಯಾಗಮಾಡುವುದರಿಂದ ಈ ಮಾರ್ಗವು ಲಭಿಸುತ್ತದೆ.”

ಗಳಳನೆಯ ಅಧ್ಯಾಯವು ಮುಗಿಯಿತು.

ಗಳಜನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಸ್ವರ್ಗ–ನರಕಗಳ ಪ್ರಾಪ್ತಿಗೂ ಮತ್ತು ಉತ್ತಮಾಧಮವರ್ಣಗಳಲ್ಲಿ ಜನ್ಮಪ್ರಾಪ್ತಿಗೂ ಕಾರಣಗಳಾದ ಕರ್ಮಗಳ ವರ್ಣನೆ

ಉಮೆಯು ಪ್ರಶ್ನಿಸುತ್ತಾಳೆ :

ಕಿಂಶೀಲಃ ಕಿಂಸಮಾಚಾರಃ ಪುರುಷಃ ಕೈಶ್ಚ ಕರ್ಮಭಿಃ ।
ಸ್ವರ್ಗಂ ಸಮಭಿಪದ್ಯೇತ ಸಮ್ಪ್ರದಾನೇನ ಕೇನ ವಾ ॥೧॥

“ಪ್ರಭುವೇ! ಪುರುಷನು ಯಾವ ವಿಧವಾದ ಶೀಲವುಳ್ಳವನಾಗಿದ್ದರೆ–ಯಾವ ಸಮುದಾಚಾರವುಳ್ಳವನಾಗಿದ್ದರೆ–ಸ್ವರ್ಗಕ್ಕೆ ಹೋಗುತ್ತಾನೆ? ಯಾವ ವಿಧವಾದ ಕರ್ಮಗಳಿಂದ ಮತ್ತು ಯಾವ ಪದಾರ್ಥಗಳನ್ನು ದಾನವಾಗಿ ಕೊಡುವುದರಿಂದ ಸ್ವರ್ಗಕ್ಕೆ ಹೋಗುತ್ತಾನೆ?”

ಮಹೇಶ್ವರನು ಹೇಳುತ್ತಾನೆ :

ದಾತಾ ಬ್ರಾಹ್ಮಣಸತ್ಕರ್ತಾ ದೀನಾರ್ತಕೃಪಣಾದಿಷು ।
ಭಕ್ಷ್ಯಭೋಜ್ಯಾನ್ನಪಾನಾನಾಂ ವಾಸಸಾಂ ಚ ಪ್ರದಾಯಕಃ ॥೨॥

ಪ್ರತಿಶ್ರಯಾನ್ಸಭಾಃ ಕೂಪಾನ್ಪ್ರಪಾಃ ಪುಷ್ಕರಿಣೀಸ್ತಥಾ ।
ನೈತ್ಯಕಾನಿ ಚ ಸರ್ವಾಣಿ ಕಿಮಿಚ್ಛಕಮತೀವ ಚ ॥೩॥

ಆಸನಂ ಶಯನಂ ಯಾನಂ ಗೃಹಂ ರತ್ನಂ ಧನಂ ತಥಾ ।
ಸಸ್ಯಜಾತಾನಿ ಸರ್ವಾಣಿ ಗಾಃ ಕ್ಷೇತ್ರಾಣ್ಯಥ ಯೋಷಿತಃ ॥೪॥

ಸುಪ್ರತೀತಮನಾ ನಿತ್ಯಂ ಯಃ ಪ್ರಯಚ್ಛತಿ ಮಾನವಃ ।
ಏವಂಭೂತೋ ನರೋ ದೇವಿ ದೇವಲೋಕೇಽಭಿಜಾಯತೇ ॥೫॥

"ದೇವಿ! ಯಾವನು ಬ್ರಾಹ್ಮಣರನ್ನು ಸತ್ಕರಿಸಿ ದಾನಮಾಡುವನೋ, ದೀನರಿಗೂ, ದುಃಖಿಗಳಿಗೂ, ದರಿದ್ರರಿಗೂ ಭಕ್ಷ್ಯಭೋಜ್ಯಗಳನ್ನೂ ಅನ್ನ-ಪಾನಗಳನ್ನೂ ವಸ್ತ್ರಗಳನ್ನೂ ನೀಡುವನೋ, ಯಾತ್ರಾರ್ಥಿಗಳು ಉಳಿದು ಕೊಳ್ಳಲು ಧರ್ಮಶಾಲೆಗಳನ್ನು ಕಟ್ಟಿಸುವನೋ, ಸಭಾಭವನಗಳನ್ನು ನಿರ್ಮಿಸಿ ಕೊಡುವನೋ, ಬಾವಿಗಳನ್ನು ತೋಡಿಸುವನೋ, ಅರವಟ್ಟಿಗೆಗಳನ್ನಿಟ್ಟು ಬಾಯಾರಿಬಂದವರಿಗೆ ನೀರನ್ನು ಕೊಡುವನೋ, ಏನನ್ನು ಬಯಸುವೆ ಯೆಂದು ಕೇಳಿ ಯಾಚಕರ ಅಪೇಕ್ಷೆಯನ್ನು ತಿಳಿದು ಅವರಿಗೆ ಪ್ರತಿದಿನವೂ ಬೇಕಾಗುವ ಪದಾರ್ಥಗಳನ್ನು ದಾನಮಾಡುವನೋ, ಆಸನ-ಹಾಸಿಗೆ-ಯಾನ-ಮನೆ-ರತ್ನ-ಧನ-ಧಾನ್ಯಗಳು, ಗೋವುಗಳು, ತೋಟ-ಗದ್ದೆಗಳು, ಕನ್ಯೆಯರು–ಇವನ್ನು ಒಳ್ಳೆಯ ಮನಸ್ಸಿನಿಂದ ಸತ್ಪಾತ್ರರಲ್ಲಿ ದಾನಮಾಡು ವನೋ–ಅಂತಹವನು ದೇವಲೋಕದಲ್ಲಿ ಹುಟ್ಟುತ್ತಾನೆ. (ಸ್ವರ್ಗಕ್ಕೆ ಹೋಗು ತ್ತಾನೆ.)

ತತ್ರೋಷ್ಯ ಸುಚಿರಂ ಕಾಲಂ ಭುಕ್ತ್ವಾ ಭೋಗಾನನುತ್ತಮಾನ್ ।
ಸಹಾಪ್ಸರೋಭಿರ್ಮುದಿತೋ ರಮತೇ ನನ್ದನಾದಿಷು ॥೬॥

ಅಲ್ಲವನು ಬಹಳ ಕಾಲದವರೆಗೆ ವಾಸವಾಗಿರುತ್ತಾನೆ. ಶ್ರೇಷ್ಠವಾದ ಭೋಗಗಳನ್ನು ಉಪಭೋಗಿಸುತ್ತಾ ನಂದನಾದಿ ಉದ್ಯಾನವನಗಳಲ್ಲಿ ಅಪ್ಸರೆ ಯರೊಡನೆ ಆನಂದದಿಂದ ರಮಿಸುತ್ತಿರುತ್ತಾನೆ.

ತಸ್ಮಾತ್ಸ್ವರ್ಗಾಚ್ಚ್ಯುತೋ ಲೋಕಾನ್ಮಾನುಷೇಷು ಪ್ರಜಾಯತೇ ।
ಮಹಾಭೋಗಕುಲೇ ದೇವಿ ಧನಧಾನ್ಯಸಮನ್ವಿತಃ ॥೭॥

ಸ್ವರ್ಗದಿಂದ ಚ್ಯುತನಾದನಂತರವೂ ಅವನು ಮನುಷ್ಯಕುಲದಲ್ಲಿ ಸಮಸ್ತಸುಖೋಪಭೋಗಗಳಿಂದಲೂ ಸಂಪನ್ನವಾದ ಕುಲದಲ್ಲಿ ಹುಟ್ಟಿ ಧನ-ಧಾನ್ಯಗಳಿಂದ ಸಮೃದ್ಧನಾಗಿರುತ್ತಾನೆ.

ತತ್ರ ಕಾಮಗುಣೈಃ ಸರ್ವೈಃ ಸಮುಪೇತೋ ಮುದಾ ಯುತಃ ।
ಮಹಾಭೋಗೋ ಮಹಾಕೋಶೋ ಧನೀ ಭವತಿ ಮಾನವಃ ॥೮॥

ಮನುಷ್ಯನಾಗಿ ಹುಟ್ಟಿದ ಅವನು ಸಮಸ್ತವಾದ ಕಮನೀಯಗುಣ ಗಳಿಂದಲೂ ಯುಕ್ತನಾಗಿದ್ದು ಸಂತೋಷಭರಿತನಾಗಿರುತ್ತಾನೆ. ಮಹಾಭೋಗ ಶಾಲಿಯಾಗಿರುತ್ತಾನೆ. ಮಹೈಶ್ವರ್ಯಸಂಪನ್ನನಾಗಿರುತ್ತಾನೆ. ಧನವಂತ ನಾಗಿರುತ್ತಾನೆ.

ಏತೇ ದೇವಿ ಮಹಾಭಾಗಾಃ ಪ್ರಾಣಿನೋ ದಾನಶೀಲಿನಃ ।
ಬ್ರಹ್ಮಣಾ ವೈ ಪುರಾ ಪ್ರೋಕ್ತಾಃ ಸರ್ವಸ್ಯ ಪ್ರಿಯದರ್ಶನಾಃ ॥೯॥

ದೇವಿ! ದಾನಶೀಲರಾದ ಮನುಷ್ಯರು ಹೀಗೆ ಮಹಾಸೌಭಾಗ್ಯಶಾಲಿ ಗಳಾಗುತ್ತಾರೆ. ಹೀಗೆ ದಾನಿಗಳು ಎಲ್ಲರಿಗೂ ಪ್ರಿಯರಾಗುವರೆಂದು ಬ್ರಹ್ಮನೇ ಹಿಂದೆ ಹೇಳಿರುವನು.

ಅಪರೇ ಮಾನವಾ ದೇವಿ ಪ್ರದಾನಕೃಪಣಾ ದ್ವಿಜೈಃ ।
ಯಾಚಿತಾ ನ ಪ್ರಯಚ್ಛನ್ತಿ ವಿದ್ಯಮಾನೇಽಪ್ಯಬುದ್ಧಯಃ ॥೧೦॥

ಮತ್ತೆ ಕೆಲವರು ದಾನಮಾಡುವುದರಲ್ಲಿ ಕೃಪಣರಾಗಿರುತ್ತಾರೆ. ಮಂದ ಬುದ್ಧಿಗಳಾದ ಅವರು ಬ್ರಾಹ್ಮಣರು ಬೇಡಲು ಬಂದಾಗ ತಮ್ಮಲ್ಲಿ ಧನ ವಿದ್ದರೂ ಕೊಡುವುದಿಲ್ಲ.

ದೀನಾನ್ಧಕೃಪಣಾನ್ದೃಷ್ಟ್ವಾ ಭಿಕ್ಷುಕಾನತಿಥೀನಪಿ ।
ಯಾಚ್ಯಮಾನಾ ನಿವರ್ತನ್ತೇ ಜಿಹ್ವಾಲೋಭಸಮನ್ವಿತಾಃ ॥೧೧॥

ಯಾಚಿಸುತ್ತಿರುವ ದೀನರನ್ನೂ, ಕುರುಡರನ್ನೂ, ದರಿದ್ರರನ್ನೂ, ಭಿಕ್ಷುಕರನ್ನೂ, ಅತಿಥಿಗಳನ್ನೂ ನೋಡಿದೊಡನೆಯೇ ಮಾತನಾಡಿದರೂ

ಮುತ್ತು ಉದುರಿಹೋಗುವುದೆಂದು ಅಥವಾ ಎಲ್ಲ ಆಹಾರವನ್ನೂ ತಾವೇ ತಿನ್ನಬೇಕೆಂದು ಭಾವಿಸುವ ಜಿಹ್ವಾಚಾಪಲ್ಯವುಳ್ಳ ಜಿಪುಣರು ಅವರು ಬೇಡಿಕೊಳ್ಳುತ್ತಿದ್ದರೂ ಯಾವ ಮಾತನ್ನೂ ಆಡದೇ ಅಲ್ಲಿಂದ ಕಾಲು ಕೀಳುತ್ತಾರೆ.

ನ ಧನಾನಿ ನ ವಾಸಾಂಸಿ ನ ಭೋಗಾನ್ನ ಚ ಕಾಞ್ಚನಮ್ ।
ನ ಗಾವೋ ನಾನ್ನವಿಕೃತಿಂ ಪ್ರಯಚ್ಛನ್ತಿ ಕದಾಚನ ॥೧೨॥

ಅಂತಹ ಜಿಪುಣರು ಧನವನ್ನಾಗಲೀ, ವಸ್ತ್ರಗಳನ್ನಾಗಲೀ, ಭೋಗವಸ್ತು ಗಳನ್ನಾಗಲೀ, ಸುವರ್ಣವನ್ನಾಗಲೀ, ಗೋವುಗಳನ್ನಾಗಲೀ, ಅನ್ನದಿಂದ ಮಾಡಿದ ನಾನಾಪ್ರಕಾರವಾದ ಖಾದ್ಯವಸ್ತುಗಳನ್ನಾಗಲೀ (ಚಿತ್ರಾನ್ನ-ಶಾಲ್ಯನ್ನ ಇತ್ಯಾದಿ) ಯಾವಾಗಲೂ ದಾನಕೊಡುವುದಿಲ್ಲ.

ಅಪ್ರವೃತ್ತಾಶ್ಚ ಯೇ ಲುಬ್ಧಾನಾಸ್ತಿಕಾ ದಾನವರ್ಜಿತಾಃ ।
ಏವಂಭೂತಾ ನರಾ ದೇವಿ ನಿರಯಂ ಯಾನ್ತ್ಯಬುದ್ಧಯಃ ॥೧೩॥

ಹೀಗೆ ಸತ್ಕರ್ಮಗಳನ್ನು ಮಾಡಲು ಪ್ರವೃತ್ತಿಯೇ ಇಲ್ಲದ, ನಾಸ್ತಿಕರಾದ, ದಾನಧರ್ಮದಿಂದ ದೂರವಿರುವ ಬುದ್ಧಿಹೀನರಾದ ಮನುಷ್ಯರು ನರಕದಲ್ಲಿ ಬೀಳುತ್ತಾರೆ.

ತೇ ವೈ ಮನುಷ್ಯತಾಂ ಯಾನ್ತಿ ಯದಾ ಕಾಲಸ್ಯ ಪರ್ಯಯಾತ್ ।
ಧನರಿಕ್ತೇ ಕುಲೇ ಜನ್ಮ ಲಭನ್ತೇ ಸ್ವಲ್ಪಬುದ್ಧಯಃ ॥೧೪॥

ಮೂಢರಾದ ಅವರೇನಾದರೂ ಕಾಲಚಕ್ರದ ಪರಿವರ್ತನೆಯಲ್ಲಿ ಮನುಷ್ಯಯೋನಿಯಲ್ಲಿ ಹುಟ್ಟಿದರೂ ದರಿದ್ರರ ವಂಶದಲ್ಲಿ ದರಿದ್ರರಾಗಿಯೇ ಹುಟ್ಟುತ್ತಾರೆ.

ಕ್ಷುತ್ಪಿಪಾಸಾಪರೀತಾಶ್ಚ ಸರ್ವಲೋಕಬಹಿಷ್ಕೃತಾಃ ।
ನಿರಾಶಾಃ ಸರ್ವಭೋಗೇಭ್ಯೋ ಜೀವನ್ತ್ಯಧರ್ಮಜೀವಿಕಾಮ್ ॥೧೫॥

ಹಾಗೆ ದರಿದ್ರರಾಗಿ ಹುಟ್ಟಿದ ಅವರು ಯಾವಾಗಲೂ ಹಸಿವು-ಬಾಯಾ ರಿಕೆಗಳಿಂದ ಪೀಡಿಸಲ್ಪಡುತ್ತಿರುತ್ತಾರೆ. ಎಲ್ಲರಿಂದಲೂ ಬಹಿಷ್ಕೃತರಾಗುತ್ತಾರೆ. ಸಕಲವಿಧವಾದ ಭೋಗಗಳಿಂದಲೂ ವಂಚಿತರಾಗುತ್ತಾರೆ. ಪಾಪಭೂಯಿಷ್ಠ ವಾದ ಜೀವನವನ್ನು ನಡೆಸುತ್ತಿರುತ್ತಾರೆ.

ಅಲ್ಪಭೋಗಕುಲೇ ಜಾತಾ ಅಲ್ಪಭೋಗರತಾ ನರಾಃ ।
ಅನೇನ ಕರ್ಮಣಾ ದೇವಿ ಭವನ್ತ್ಯಧನಿನೋ ನರಾಃ ॥೧೬॥

ನಾಸ್ತಿಕ್ಯದ ಪಾಪಕರ್ಮದಿಂದ ಜನರು ಅಲ್ಪಭೋಗವಿರುವ ಕುಲದಲ್ಲಿ ಹುಟ್ಟಿ ಅಲ್ಪಭೋಗದಲ್ಲಿಯೇ ಜೀವನವನ್ನು ನಿರ್ವಹಿಸುತ್ತಾ ನಿರ್ಧನರಾಗಿ ತಮ್ಮ ಜೀವನವನ್ನು ಕಳೆಯುತ್ತಾರೆ.

ಅಪರೇ ಸ್ತಮ್ಭಿನೋ ನಿತ್ಯಂ ಮಾನಿನಃ ಪಾಪತೋ ರತಾಃ ।
ಆಸನಾರ್ಹಸ್ಯ ಯೇ ಪೀಠಂ ನ ಪ್ರಯಚ್ಛನ್ತ್ಯಚೇತಸಃ ॥೧೭॥

ಇವರಲ್ಲದೆ ಇನ್ನೂ ಕೆಲವರು ಗರ್ವಿಷ್ಠರಾಗಿಯೂ, ದುರಭಿಮಾನಿಗಳಾಗಿಯೂ ಇರುತ್ತಾರೆ. ಪಾಪಕಾರ್ಯದಲ್ಲಿಯೇ ಸದಾ ನಿರತರಾಗಿರುತ್ತಾರೆ. ಅಲ್ಪಬುದ್ಧಿಗಳಾದ ಅವರು ಆಸನವನ್ನು ಕೊಟ್ಟು ಉಪಚರಿಸಲು ಯೋಗ್ಯನಾದವನಿಗೆ ದುರಹಂಕಾರದ ಕಾರಣದಿಂದ ಕುಳಿತುಕೊಳ್ಳಲು ಆಸನವನ್ನೂ ಕೊಡುವುದಿಲ್ಲ.

ಮಾರ್ಗಾರ್ಹಸ್ಯ ಚ ಯೇ ಮಾರ್ಗಂ ನ ಯಚ್ಛನ್ತ್ಯಲ್ಪಬುದ್ಧಯಃ ।
ಪಾದ್ಯಾರ್ಹಸ್ಯ ಚ ಯೇ ಪಾದ್ಯಂ ನ ದದತ್ಯಲ್ಪಬುದ್ಧಯಃ ॥೧೮॥

ದೊಡ್ಡವರು ಎದುರಾಗಿ ಬಂದರೆ ಪಕ್ಕಕ್ಕೆ ಸರಿದು ನಿಂತು ಅವರು ಮುಂದೆ ಹೋಗಲು ಹಾದಿಯನ್ನು ಬಿಟ್ಟುಕೊಡಬೇಕು. ಇದು ಶಿಷ್ಟಸಂಪ್ರ ದಾಯ, ಆದರೆ ಗರ್ವಿಷ್ಠರು ಹಾಗೆ ಎದುರಾಗಿ ಬಂದ ಮಾನ್ಯರಿಗೆ ಹಾದಿ ಯನ್ನು ಬಿಟ್ಟುಕೊಡುವುದೇ ಇಲ್ಲ. ಎದುರಾಗಿ ಬಂದ ಮಹಾತ್ಮನೇ ತಮಗೆ ಹಾದಿಯನ್ನು ಬಿಟ್ಟುಕೊಡಬೇಕೆಂದು ಅಪೇಕ್ಷಿಸುತ್ತಾರೆ. ಮೂಢರಾದ ಅವರು ಪಾದ್ಯಾರ್ಹನಾದ ಅತಿಥಿಗೆ ಪಾದ್ಯವನ್ನಿತ್ತು ಸತ್ಕರಿಸುವುದಿಲ್ಲ.

ಅರ್ಘ್ಯಾರ್ಹಾನ್ನ ಚ ಸತ್ಕಾರೈರರ್ಚಯನ್ತಿ ಯಥಾವಿಧಿ ।
ಅರ್ಘ್ಯಮಾಚಮನೀಯಂ ವಾ ನ ಯಚ್ಛನ್ತ್ಯಲ್ಪಬುದ್ಧಯಃ ॥೧೯॥

ಮಧುಪರ್ಕಮೂಲಕವಾಗಿ ಪೂಜಿಸಲು ಯೋಗ್ಯರಾದವರನ್ನೂ ಮಂದಬುದ್ಧಿಯವರಾದ ಜನರು ಯಥಾವಿಧಿಯಾಗಿ ಅರ್ಘ್ಯಪ್ರದಾನಾದಿ ಸತ್ಕಾರಗಳಿಂದ ಪೂಜಿಸುವುದಿಲ್ಲ. ಅರ್ಘ್ಯವನ್ನಾಗಲೀ, ಆಚಮನೀಯವನ್ನಾಗಲೀ ಕೊಡುವುದಿಲ್ಲ.

ಗುರುಂ ಚಾಭಿಗತಂ ಪ್ರೇಮ್ಣಾ ಗುರುವನ್ನ ಬುಭೂಷತೇ ।
ಅಭಿಮಾನಪ್ರವೃತ್ತೇನ ಲೋಭೇನ ಸಮವಸ್ಥಿತಾಃ ॥೨೦॥

ಸಮ್ಮಾನ್ಯಾಂಶ್ಚಾವಮನ್ಯನ್ತೇ ವೃದ್ಧಾನ್ಪರಿಭವನ್ತಿ ಚ ।
ಏವಂವಿಧಾ ನರಾ ದೇವಿ ಸರ್ವೇ ನಿರಯಗಾಮಿನಃ ॥೨೧॥

ಅಭಿಮಾನದಿಂದ ಹುಟ್ಟಿದ ಲೋಭದಿಂದ ಸಮಾವೃತರಾದ ಅವರು ಶಿಷ್ಯನ ಮೇಲಿನ ಪ್ರೀತಿಯಿಂದ ಆಗಮಿಸಿದ ಗುರುವನ್ನು ಗುರುವಿನಂತೆ ಗೌರವಿಸಲು ಇಚ್ಛಿಪಡುವುದಿಲ್ಲ. ಸಮ್ಮಾನಿಸಬೇಕಾದವರನ್ನೂ ಸಮ್ಮಾನಕ್ಕೆ ಅರ್ಹರಾದವರನ್ನೂ ಅವಮಾನಿಸುತ್ತಾರೆ. ವೃದ್ಧರನ್ನು ಅನಾದರಿಸುತ್ತಾರೆ. ದೇವಿ! ಇಂತಹ ಮನುಷ್ಯರೆಲ್ಲರೂ ಅವಸಾನಾನಂತರದಲ್ಲಿ ನರಕಕ್ಕೆ ಹೋಗುತ್ತಾರೆ.

ತೇ ವೈ ಯದಿ ನರಾಸ್ತಸ್ಮಾನ್ನಿರಯಾದುತ್ತರನ್ತಿ ವೈ ।
ವರ್ಷಪೂಗೈಸ್ತತೋ ಜನ್ಮ ಲಭನ್ತೇ ಕುತ್ಸಿತೇ ಕುಲೇ ॥೨೨॥

ಶ್ವಪಾಕಪುಲ್ಕಸಾದೀನಾಂ ಕುತ್ಸಿತಾನಾಮಚೇತಸಾಮ್ ।
ಕುಲೇಷು ತೇಷು ಜಾಯನ್ತೇ ಗುರುವೃದ್ಧಾಪಚಾಯಿನಃ ॥೨೩॥

ಹಲವಾರು ವರ್ಷಗಳು ಕಳೆದನಂತರ ಅವರೇನಾದರೂ ಅಂತಹ ಭಯಂಕರವಾದ ನರಕದಿಂದ ಹೊರಬಂದರೂ–ಕುತ್ಸಿತವಾದ ಕುಲದಲ್ಲಿ ಜನ್ಮತಾಳುತ್ತಾರೆ. ಗುರುಜನರ ವಿಷಯದಲ್ಲಿಯೂ ವೃದ್ಧರ ವಿಷಯದಲ್ಲಿಯೂ ಅಪರಾಧಮಾಡಿದವರು ಕುತ್ಸಿತರಾದ ಮತ್ತು ಬುದ್ಧಿಹೀನರಾದ ಚಾಂಡಾಲ-ಪುಲ್ಕಸಾದಿಗಳ ಕುಲಗಳಲ್ಲಿ ಹುಟ್ಟುತ್ತಾರೆ.

ನ ಸ್ತಮ್ಭೀ ನ ಚ ಮಾನೀ ಯೋ ದೇವತಾದ್ವಿಜಪೂಜಕಃ ।
ಲೋಕಪೂಜ್ಯೋ ನಮಸ್ಕರ್ತಾ ಪ್ರಶ್ರಿತೋ ಮಧುರಂ ವಚಃ ॥೨೪॥

ಸರ್ವವರ್ಣಪ್ರಿಯಕರಃ ಸರ್ವಭೂತಹಿತಃ ಸದಾ ।
ಅದ್ವೇಷೀ ಸುಮುಖಃ ಶ್ಲಕ್ಷ್ಣಃ ಸ್ನಿಗ್ಧವಾಣೀಪ್ರದಃ ಸದಾ ॥೨೫॥

ಸ್ವಾಗತೇನೈವ ಸರ್ವೇಷಾಂ ಭೂತಾನಾಮವಿಹಿಂಸಕಃ ।
ಯಥಾರ್ಹಸತ್ಕ್ರಿಯಾಪೂರ್ವಮರ್ಚಯನ್ನವತಿಷ್ಠತಿ ॥೨೬॥

ಮಾರ್ಗಾರ್ಹಾಯ ದದನ್ಮಾರ್ಗಂ ಗುರುಂ ಗುರುವದರ್ಚಯನ್ ।
ಅತಿಥಿಪ್ರಗ್ರಹರತಸ್ತಥಾಭ್ಯಾಗತಪೂಜಕಃ ॥೨೭॥

ಏವಂಭೂತೋ ನರೋ ದೇವಿ ಸ್ವರ್ಗತಿಂ ಪ್ರತಿಪದ್ಯತೇ ।
ತತೋ ಮಾನುಷತಾಂ ಪ್ರಾಪ್ಯ ವಿಶಿಷ್ಟಕುಲಜೋ ಭವೇತ್ ॥೨೮॥

ದೇವಿ! ಯಾವನು ಉದ್ಧಟನಲ್ಲವೋ, ದುರಭಿಮಾನಿಯಲ್ಲವೋ, ದೇವತೆಗಳನ್ನೂ ಬ್ರಾಹ್ಮಣರನ್ನೂ ಪೂಜಿಸುವನೋ, ಲೋಕಪೂಜ್ಯನೋ (ಯಾವನನ್ನು ಲೋಕವೂ ಸಮ್ಮಾನಿಸುವುದೋ), ನಮಸ್ಕಾರಾರ್ಹರನ್ನು ನಮಸ್ಕರಿಸುವನೋ, ವಿನಯಶೀಲನೋ, ಸವಿಮಾತನಾಡುವನೋ, ಎಲ್ಲ ವರ್ಣದವರಿಗೂ ಪ್ರಿಯನಾಗಿರುವನೋ, ಯಾವಾಗಲೂ ಸಮಸ್ತಪ್ರಾಣಿಗಳ ಹಿತದಲ್ಲಿಯೇ ಆಸಕ್ತನಾಗಿರುವನೋ, ಎಲ್ಲರೊಡನೆಯೂ ಸ್ವಾಗತಪೂರ್ವಕ ವಾದ ಸ್ನೇಹಭಾವದಿಂದ ಮಾತನಾಡುವನೋ, ಯಾವ ಪ್ರಾಣಿಯನ್ನೂ ಹಿಂಸಿಸುವುದಿಲ್ಲವೋ, ಎಲ್ಲರನ್ನೂ ಯಥಾಯೋಗ್ಯವಾಗಿ ಸತ್ಕರಿಸುತ್ತಿರು ವನೋ, ಹಾದಿಯನ್ನು ಬಿಟ್ಟುಕೊಡಬೇಕಾದ ಯೋಗ್ಯಪುರುಷರು ಎದುರಾಗಿ ಬಂದಾಗ ಪಕ್ಕಕ್ಕೆ ಸರಿದು ನಿಂತು ಮಾರ್ಗವನ್ನು ಬಿಟ್ಟುಕೊಡುವನೋ, ಗುರು ಗಳನ್ನು ಯೋಗ್ಯವಾದ ರೀತಿಯಲ್ಲಿ ಸಮಾದರಿಸುವನೋ, ಅತಿಥಿಗಳನ್ನು ಆಹ್ವಾನಿಸಿ ಸತ್ಕರಿಸುವುದರಲ್ಲಿ ನಿರತನಾಗಿರುವನೋ, ಅಭ್ಯಾಗತರನ್ನು (ತಾವಾಗಿಯೇ ಬಂದವರನ್ನು) ಯಥಾಯೋಗ್ಯವಾಗಿ ಪೂಜಿಸುವನೋ– ಅಂತಹವನು ಸ್ವರ್ಗಕ್ಕೆ ಹೋಗುತ್ತಾನೆ. ಅನಂತರ ಅವನು ಭೂಮಿಯಲ್ಲಿ ಜನ್ಮತಾಳುವಾಗಲೂ ಶ್ರೇಷ್ಠವಾದ ಕುಲದಲ್ಲಿಯೇ ಹುಟ್ಟುತ್ತಾನೆ.

ತತ್ರಾಸೌ ವಿಪುಲೈರ್ಭೋಗೈಃ ಸರ್ವರತ್ನಸಮಾಯುತಃ ।
ಯಥಾರ್ಹದಾತಾ ಚಾರ್ಹೇಷು ಧರ್ಮಚರಯಾಪರೋ ಭವೇತ್ ॥

ಆ ಜನ್ಮದಲ್ಲಿಯೂ ಅವನು ವಿಪುಲವಾದ ಭೋಗೈಶ್ವರ್ಯಗಳಿಂದ ಕೂಡಿದವನಾಗಿರುತ್ತಾನೆ. ನವರತ್ನಗಳಿಂದಲೂ ಸಂಪನ್ನನಾಗಿರುತ್ತಾನೆ. ಯೋಗ್ಯರಾದ ಬ್ರಾಹ್ಮಣರಿಗೆ ಯಥಾಯೋಗ್ಯವಾಗಿ ದಾನಗಳನ್ನು ಕೊಡು ತ್ತಿದ್ದು ಧರ್ಮಾನುಷ್ಠಾನದಲ್ಲಿಯೇ ತತ್ಪರನಾಗಿರುತ್ತಾನೆ.

ಸಮ್ಮತಃ ಸರ್ವಭೂತಾನಾಂ ಸರ್ವಲೋಕನಮಸ್ಕೃತಃ ।
ಸ್ವಕರ್ಮಫಲಮಾಪ್ನೋತಿ ಸ್ವಯಮೇವ ನರಃ ಸದಾ ॥೩೦॥

ಉದಾತ್ತಕುಲಜಾತೀಯ ಉದಾತ್ತಾಭಿಜನಃ ಸದಾ ।
ಏಷ ಧರ್ಮೋ ಮಯಾ ಪ್ರೋಕ್ತೋ ವಿಧಾತ್ರಾ ಸ್ವಯಮೀರಿತಃ ॥೩೧॥

ಶ್ರೇಷ್ಠವಾದ ಕುಲಜಾತಿಗಳನ್ನು ಪಡೆದ, ಶ್ರೇಷ್ಠರಾದ ತಾತ-ಮುತ್ತಾತರಿಂದ ಕೂಡಿರುವ ಅವನು ಸರ್ವಪ್ರಾಣಿಗಳಿಗೂ ಸಮ್ಮತನಾಗುತ್ತಾನೆ. ಎಲ್ಲರಿಂದಲೂ ನಮಸ್ಕೃತನಾಗುತ್ತಾನೆ. (ಅಂತಹವನನ್ನು ಎಲ್ಲರೂ ನೋಡಿದೊಡನೆಯೇ ನಮಸ್ಕರಿಸುತ್ತಾ ಸಮ್ಮಾನಿಸುತ್ತಾರೆ.) ಹೀಗೆ ಮನುಷ್ಯನು ತಾನು ಮಾಡಿದ ಕರ್ಮಫಲವನ್ನು ತಾನೇ ಅನುಭವಿಸುತ್ತಾನೆ. ದೇವಿ! ಬ್ರಹ್ಮನು ಸ್ವಯಂ ಹೇಳಿದ ಈ ಧರ್ಮಗಾಥೆಯನ್ನು ನಿನಗೆ ಹೇಳಿರುವೆನು.

ಯಸ್ತು ರೌದ್ರಸಮಾಚಾರಃ ಸರ್ವಸತ್ತ್ವಭಯಂಕರಃ ।
ಹಸ್ತಾಭ್ಯಾಂ ಯದಿ ವಾ ಪದ್ಭ್ಯಾಂ ರಜ್ಜ್ವಾ ದಣ್ಡೇನ ವಾ ಪುನಃ ॥೩೨॥

ಲೋಷ್ಟೈಃ ಸ್ತಮ್ಭೈರಾಯುಧೈರ್ವಾ ಜನ್ತೂನ್ಬಾಧತಿ ಶೋಭನೇ ।
ಹಿಂಸಾರ್ಥಂ ನಿಕೃತಿಪ್ರಜ್ಞಃ ಪ್ರೋದ್ವೇಜಯತಿ ಚೈವ ಹ ॥೩೩॥

ಉಪಕ್ರಾಮತಿ ಜನ್ತೂಂಶ್ಚ ಉದ್ವೇಗಜನನಃ ಸದಾ ।
ಏವಂಶೀಲಸಮಾಚಾರೋ ನಿರಯಂ ಪ್ರತಿಪದ್ಯತೇ ॥೩೪॥

ದೇವಿ! ಯಾವನು ಕ್ರೂರವಾದ ಸ್ವಭಾವವುಳ್ಳವನಾಗಿ, ಸಮಸ್ತ ಪ್ರಾಣಿಗಳಿಗೂ ಭಯಂಕರನಾಗಿ, ಸಾಧುಪ್ರಾಣಿಗಳನ್ನು ಕೈಗಳಿಂದ ಪ್ರಹರಿಸುತ್ತಾ, ಕಾಲುಗಳಿಂದ ಒದೆಯುತ್ತಾ, ಹಗ್ಗದಿಂದ ಬಿಗಿದು ದಂಡದಿಂದ ಪ್ರಹರಿಸುತ್ತಾ, ಮಣ್ಣುಹೆಂಟೆಯಿಂದ ಹೊಡೆಯುತ್ತಾ, ಕಂಬಕ್ಕೆ ಕಟ್ಟಿ ಕಟ್ಟಿಗೆಯಿಂದ ಪ್ರಹರಿಸುತ್ತಾ, ಮಾರಕವಾದ ಆಯುಧಗಳಿಂದ ಪ್ರಹರಿಸುತ್ತಾ, ಹಿಂಸಿಸುತ್ತಾ ಯಾವಾಗಲೂ ಅವುಗಳನ್ನು ತನ್ನ ಭಯಂಕರಕೃತ್ಯಗಳಿಂದ ಉದ್ವೇಗಗೊಳಿಸುತ್ತಲೇ ಇರುವನೋ–ಅಂತಹವನು ನರಕಕ್ಕೆ ಹೋಗುತ್ತಾನೆ.

ಸ ವೈ ಮನುಷ್ಯತಾಂ ಗಚ್ಛೇದ್ಯದಿ ಕಾಲಸ್ಯ ಪರ್ಯಯಾತ್ ।
ಬಹ್ವಾಬಾಧಪರಿಕ್ಲಿಷ್ಟೇ ಜಾಯತೇ ಸೋಽಧಮೇ ಕುಲೇ ॥೩೫॥

ಒಂದು ವೇಳೆ ಅವನೇನಾದರೂ ಕಾಲಚಕ್ರಗತಿಯಿಂದ ಮನುಷ್ಯನಾಗಿ ಹುಟ್ಟುವುದಾದರೂ–ವಿಘ್ನಗಳಿಂದಲೂ ಈತಿಬಾಧೆಗಳಿಂದಲೂ ಕೂಡಿರುವ ಅಧಮವಾದ ಕುಲದಲ್ಲಿಯೇ ಹುಟ್ಟುತ್ತಾನೆ.

ಲೋಕದ್ವೇಷ್ಯೋऽಧಮಃ ಪುಂಸಾಂ ಸ್ವಯಂ ಕರ್ಮಫಲೈಃ ಕೃತೈಃ ।
ಏಷ ದೇವಿ ಮನುಷ್ಯೇಷು ಬೋದ್ಧವ್ಯೋ ಜ್ಞಾತಿಬನ್ಧುಷು ॥೩೬॥

ಅಂತಹ ಅಧಮಮನುಷ್ಯನು ತಾನು ಮಾಡಿದ ಕುತ್ಸಿತವಾದ ಕರ್ಮ ಗಳ ಫಲದಿಂದಲೇ ಮನುಷ್ಯರಲ್ಲಿ ಮತ್ತು ತನ್ನ ಜ್ಞಾತಿ-ಬಾಂಧವರಲ್ಲಿ ನೀಚ ನೆಂದು ಭಾವಿಸಲ್ಪಡುತ್ತಾನೆ. ಲೋಕಕ್ಕೆ ದ್ವೇಷ್ಯನಾಗುತ್ತಾನೆ. (ಲೋಕವೇ ಅಂತಹವನನ್ನು ದ್ವೇಷಿಸುತ್ತದೆ.)

ಅಪರಃ ಸರ್ವಭೂತಾನಿ ದಯಾವಾನನುಪಶ್ಯತಿ ।
ಮೈತ್ರದೃಷ್ಟಿಃ ಪಿತೃಸಮೋ ನಿರ್ವೈರೋ ನಿಯತೇನ್ದ್ರಿಯಃ ॥೩೭॥

ನೋದ್ವೇಜಯತಿ ಭೂತಾನಿ ನ ವಿಘಾತಯತೇ ತಥಾ ।
ಹಸ್ತಪಾದೈಃ ಸುನಿಯತೈರ್ವಿಶ್ವಾಸ್ಯಃ ಸರ್ವಜನ್ತುಷು ॥೩೮॥

ನ ರಜ್ಜ್ವಾ ನ ಚ ದಣ್ಡೇನ ನ ಲೋಷ್ಟೈರ್ನಾಯುಧೇನ ಚ ।
ಉದ್ವೇಜಯತಿ ಭೂತಾನಿ ಶ್ಲಕ್ಷ್ಣ ಕರ್ಮಾ ದಯಾಪರಃ ॥೩೯॥

ಏವಂಶೀಲಸಮಾಚಾರಃ ಸ್ವರ್ಗೇ ಸಮುಪಜಾಯತೇ ।
ತತ್ರಾಸೌ ಭವನೇ ದಿವ್ಯೇ ಮುದಾ ವಸತಿ ದೇವವತ್ ॥೪೦॥

ದಯಾವಂತನಾದ ಮತ್ತೊಬ್ಬ ಮನುಷ್ಯನು ಎಲ್ಲ ಪ್ರಾಣಿಗಳನ್ನೂ ದಯಾಪೂರ್ಣವಾದ ದೃಷ್ಟಿಯಿಂದ ನೋಡುತ್ತಾನೆ. ಎಲ್ಲರ ಮೇಲೂ ಅವನಿಗೆ ಮಿತ್ರಭಾವವೇ ಇರುತ್ತದೆ. ಎಲ್ಲ ಪ್ರಾಣಿಗಳಿಗೂ ಪಿತೃಸಮಾನನಾಗಿರು ತ್ತಾನೆ. ಯಾರೊಡನೆಯೂ ದ್ವೇಷವನ್ನು ಕಟ್ಟಿಕೊಳ್ಳುವುದಿಲ್ಲ. ಆದುದರಿಂದ ಅವನಿಗೆ ವೈರಿಗಳೇ ಇರುವುದಿಲ್ಲ. ಅವನು ಅಜಾತಶತ್ರುವಾಗಿರುತ್ತಾನೆ. ಜಿತೇಂದ್ರಿಯನಾಗಿರುತ್ತಾನೆ. ಪ್ರಾಣಿಗಳನ್ನು ಉದ್ವೇಗಗೊಳಿಸುವುದಿಲ್ಲ. ಕೈ ಗಳಿಂದಾಗಲೀ, ಕಾಲುಗಳಿಂದಾಗಲೀ ಪ್ರಹರಿಸುವುದಿಲ್ಲ. ಎಲ್ಲ ಪ್ರಾಣಿಗಳ ವಿಶ್ವಾಸಕ್ಕೂ ಪಾತ್ರನಾಗಿರುತ್ತಾನೆ. ಹಗ್ಗದಿಂದಾಗಲೀ, ದಂಡದಿಂದಾಗಲೀ,

ಮಣ್ಣುಹೆಂಟೆಗಳಿಂದಾಗಲೀ, ಆಯುಧದಿಂದಾಗಲೀ ಪ್ರಾಣಿಗಳನ್ನು ಹೊಡೆಯುವುದಿಲ್ಲ. ಅವುಗಳನ್ನು ಉದ್ವೇಗಗೊಳಿಸುವುದಿಲ್ಲ. ಅವನು ಮಾಡುವ ಕರ್ಮವು ಕೋಮಲವೂ ನಿರ್ದುಷ್ಟವೂ ಆಗಿರುತ್ತದೆ. ಯಾವಾಗಲೂ ಅವನು ಎಲ್ಲ ಪ್ರಾಣಿಗಳ ವಿಷಯದಲ್ಲಿಯೂ ದಯಾಪರನಾಗಿರುತ್ತಾನೆ. ಇಂತಹ ಸೌಶೀಲ್ಯ-ಸಮುದಾಚಾರಗಳುಳ್ಳವನು ಸ್ವರ್ಗಕ್ಕೆ ಹೋಗುತ್ತಾನೆ. ಅಲ್ಲವನು ದಿವ್ಯವಾದ ಭವನದಲ್ಲಿ ದೇವತೆಯಂತೆಯೇ ವಾಸಮಾಡಿಕೊಂಡಿರುತ್ತಾನೆ.

ಸ ಚೇತ್ಕರ್ಮಕ್ಷಯಾನ್ಮರ್ತ್ಯೋ ಮನುಷ್ಯೇಷೂಪಜಾಯತೇ ।
ಅಲ್ಪಾಬಾಧೋ ನಿರಾತಙ್ಕಃ ಸ ಜಾತಃ ಸುಖಮೇಧತೇ ॥೪೧॥

ಸುಖಭಾಗೀ ನಿರಾಯಾಸೋ ನಿರುದ್ವೇಗಃ ಸದಾ ನರಃ ।
ಏಷ ದೇವಿ ಸತಾಂ ಮಾರ್ಗೋ ಬಾಧಾ ಯತ್ರ ನ ವಿದ್ಯತೇ ॥೪೨॥

ಅವನ ಪುಣ್ಯವೆಲ್ಲವೂ ಕ್ಷಯಿಸಿ ಅವನೇನಾದರೂ ಮರ್ತ್ಯಲೋಕದಲ್ಲಿ ಪುನಃ ಹುಟ್ಟಬೇಕಾಗಿಬಂದರೂ ಸತ್ಕುಲದಲ್ಲಿಯೇ ಹುಟ್ಟುತ್ತಾನೆ. ಅವನಿಗೆ ಈತಿಬಾಧೆಗಳೆಲ್ಲವೂ ಅಲ್ಪವಾಗಿರುತ್ತವೆ. ಯಾವ ಆತಂಕಗಳೂ ಇರುವುದಿಲ್ಲ. ಸುಖಿಯಾಗಿ, ಆಯಾಸವಿಲ್ಲದವನಾಗಿ ಉದ್ವೇಗರಹಿತನಾಗಿ ಆ ಮನುಷ್ಯನು ಜೀವನವನ್ನು ನಿರ್ವಹಿಸುತ್ತಿರುತ್ತಾನೆ. ಯಾವ ವಿಧವಾದ ಈತಿಬಾಧೆಗಳೂ ಇಲ್ಲದ ಈ ಮಾರ್ಗವು ಸತ್ಪುರುಷರ ಮಾರ್ಗವಾಗಿದೆ.”

ಉಮೆಯು ಪ್ರಶ್ನಿಸುತ್ತಾಳೆ :

ಇಮೇ ಮನುಷ್ಯಾ ದೃಶ್ಯನ್ತೇ ಊಹಾಪೋಹವಿಶಾರದಾಃ ।
ಜ್ಞಾನವಿಜ್ಞಾನಸಮ್ಪನ್ನಾಃ ಪ್ರಜ್ಞಾವನ್ತೋಽರ್ಥಕೋವಿದಾಃ ॥೪೩॥

ದುಷ್ಪ್ರಜ್ಞಾಶ್ಚಾಪರೇ ದೇವ ಜ್ಞಾನವಿಜ್ಞಾನವರ್ಜಿತಾಃ ।
ಕೇನ ಕರ್ಮವಿಶೇಷೇಣ ಪ್ರಜ್ಞಾವಾನ್ಪುರುಷೋ ಭವೇತ್ ॥೪೪॥

“ದೇವನೇ! ಪರಮೇಶ್ವರನೇ! ಮನುಷ್ಯರಲ್ಲಿ ಕೆಲವರು ಊಹೆಗಳನ್ನು ಮಾಡುವುದರಲ್ಲಿಯೂ ಮತ್ತು ಸಂಶಯವನ್ನು ವಿನಾಶಗೊಳಿಸುವುದರಲ್ಲಿಯೂ ವಿಶಾರದರಾಗಿರುತ್ತಾರೆ. ಜ್ಞಾನ-ವಿಜ್ಞಾನಸಂಪನ್ನರಾಗಿರುತ್ತಾರೆ. ಮಹಾಬುದ್ಧಿಶಾಲಿಗಳಾಗಿರುತ್ತಾರೆ. ಬೇರೆ ಕೆಲವರು ಜ್ಞಾನ-ವಿಜ್ಞಾನ

ಶೂನ್ಯರಾಗಿ ದುರ್ಬುದ್ಧಿಯುಳ್ಳವರಾಗಿರುತ್ತಾರೆ. ಮಹಾದೇವನೇ! ಯಾವ ಕರ್ಮವಿಶೇಷದಿಂದ ಮನುಷ್ಯನು ಪ್ರಜ್ಞಾವಂತನಾಗಿ ಹುಟ್ಟುತ್ತಾನೆ?

ಅಲ್ಪಪ್ರಜ್ಞೋ ವಿರೂಪಾಕ್ಷ ಕಥಂ ಭವತಿ ಮಾನವಃ ।
ಏತಂ ಮೇ ಸಂಶಯಂ ಛಿನ್ಧಿ ಸರ್ವಧರ್ಮವಿದಾಂ ವರ ॥೪೫॥

ವಿರೂಪಾಕ್ಷನೇ! ಮನುಷ್ಯನು ಅಲ್ಪವಾದ ಬುದ್ಧಿಯುಳ್ಳವನು ಹೇಗಾಗುತ್ತಾನೆ? ಧರ್ಮವಿದರಲ್ಲಿ ಶ್ರೇಷ್ಠನಾದವನೇ! ಈ ನನ್ನ ಸಂಶಯವನ್ನು ಬಗೆಹರಿಸುವ ಕೃಪೆಮಾಡು.

ಜಾತ್ಯನ್ಧಾಶ್ಚಾಪರೇ ದೇವ ರೋಗಾರ್ತಾಶ್ಚಾಪರೇ ತಥಾ ।
ನರಾಃ ಕ್ಲೀಬಾಶ್ಚ ದೃಶ್ಯನ್ತೇ ಕಾರಣಂ ಬ್ರೂಹಿ ತತ್ರ ವೈ ॥೪೬॥

ಕೆಲವರು ಹುಟ್ಟುವಾಗಲೇ ಕುರುಡರಾಗಿರುತ್ತಾರೆ. ಕೆಲವರು ಹುಟ್ಟುವಾಗಲೇ ರೋಗಪೀಡಿತರಾಗಿರುತ್ತಾರೆ. ಕೆಲವರು ನಪುಂಸಕರಾಗಿಯೂ ಹುಟ್ಟುತ್ತಾರೆ. ಹೀಗಾಗುವುದಕ್ಕೆ ಕಾರಣವೇನೆಂಬುದನ್ನು ಹೇಳುವ ಕೃಪೆಮಾಡು."

ಮಹೇಶ್ವರನು ಹೇಳುತ್ತಾನೆ :

ಬ್ರಾಹ್ಮಣಾನ್ವೇದವಿದುಷಃ ಸಿದ್ಧಾನ್ಧರ್ಮವಿದಸ್ತಥಾ ।
ಪರಿಪೃಚ್ಛನ್ತ್ಯಹರಹಃ ಕುಶಲಾಃ ಕುಶಲಂ ತಥಾ ॥೪೭॥

ವರ್ಜಯನ್ತೋಽಶುಭಂ ಕರ್ಮ ಸೇವಮಾನಾಃ ಶುಭಂ ತಥಾ ।
ಲಭನ್ತೇ ಸ್ವರ್ಗತಿಂ ನಿತ್ಯಮಿಹಲೋಕೇ ತಥಾ ಸುಖಮ್ ॥೪೮॥

"ದೇವಿ! ಕುಶಲರಾದ ಯಾವ ಮನುಷ್ಯರು ವೇದವಿದರಾದ ಬ್ರಾಹ್ಮಣರ, ಸಿದ್ಧರ ಮತ್ತು ಧರ್ಮವಿದರ ಕುಶಲವನ್ನು ಅನುದಿನವೂ ಪ್ರಶ್ನಿಸುವರೋ, ಅಶುಭವಾದ (ಅಧರ್ಮಯುಕ್ತವಾದ) ಕರ್ಮಗಳನ್ನು ತ್ಯಜಿಸುವರೋ, ಶುಭಕರ್ಮಗಳನ್ನೇ ಮಾಡುವರೋ–ಅಂತಹವರು ಇಹದಲ್ಲಿಯೂ ಸುಖಿಗಳಾಗಿರುತ್ತಾರೆ. ಅವಸಾನಾನಂತರದಲ್ಲಿ ಸ್ವರ್ಗವನ್ನೂ ಹೊಂದುತ್ತಾರೆ.

ಸ ಚೇನ್ಮಾನುಷತಾಂ ಯಾತಿ ಮೇಧಾವೀ ತತ್ರ ಜಾಯತೇ ।
ಶ್ರುತಂ ಪ್ರಜ್ಞಾನುಗಂ ಯಸ್ಯ ಕಲ್ಯಾಣಮುಪಜಾಯತೇ ॥೪೯॥

ಅಂತಹವನೇನಾದರೂ ಪುಣ್ಯವು ಕ್ಷಯಿಸಿದನಂತರ ಈ ಲೋಕದಲ್ಲಿ ಹುಟ್ಟಬೇಕಾಗಿ ಬಂದರೆ ಮೇಧಾವಿಯಾಗಿಯೇ ಹುಟ್ಟುತ್ತಾನೆ. ಶಾಸ್ತ್ರವು ಅವನ ಬುದ್ಧಿಯನ್ನು ಅನುಸರಿಸುತ್ತದೆ. (ಅವನು ಶಾಸ್ತ್ರಜ್ಞನೂ ಆಗುತ್ತಾನೆ.) ಅವನಿಗೆ ಕಲ್ಯಾಣವೂ ಉಂಟಾಗುತ್ತದೆ.

ಪರದಾರೇಷು ಯೇ ಚಾಪಿ ಚಕ್ಷುರ್ದುಷ್ಟಂ ಪ್ರಯುಞ್ಜತೇ ।
ತೇನ ದುಷ್ಟಸ್ವಭಾವೇನ ಜಾತ್ಯನ್ಧಾಸ್ತೇ ಭವನ್ತಿ ಹ ॥೫೦॥

ಯಾರು ಪರಸ್ತ್ರೀಯರನ್ನು ದೋಷಯುಕ್ತವಾದ ದೃಷ್ಟಿಯಿಂದ (ಕಾಮುಕದೃಷ್ಟಿಯಿಂದ) ಕಾಣುವರೋ–ಅವರು ಅಂತಹ ದುಷ್ಟಸ್ವಭಾವದ ಕಾರಣದಿಂದ ಜಾತ್ಯಂಧರಾಗಿ ಹುಟ್ಟುತ್ತಾರೆ.

ಮನಸಾ ತು ಪ್ರದುಷ್ಟೇನ ನಗ್ನಾಂ ಪಶ್ಯನ್ತಿ ಯೇ ಸ್ತ್ರಿಯಮ್ ।
ರೋಗಾರ್ತಾಸ್ತೇ ಭವನ್ತೀಹ ನರಾ ದುಷ್ಕೃತಕರ್ಮಿಣಃ ॥೫೧॥

ಯಾರು ದುಷ್ಟವಾದ ಮನಸ್ಸಿನಿಂದ ಕೂಡಿ ನಗ್ನಳಾದ ಸ್ತ್ರೀಯನ್ನು ನೋಡುವರೋ–ಅಂತಹ ದುಷ್ಕರ್ಮಿಗಳು ಈ ಲೋಕದಲ್ಲಿ ರೋಗಗಳಿಂದ ಪೀಡಿತರಾಗುತ್ತಾರೆ.

ಯೇ ತು ಮೂಢಾ ದುರಾಚಾರಾ ವಿಯೋನೌ ಮೈಥುನೇ ರತಾಃ ।
ಪುರುಷೇಷು ಸುದುಷ್ಪ್ರಜ್ಞಾಃ ಕ್ಲೀಬತ್ವಮುಪಯಾನ್ತಿ ತೇ ॥೫೨॥

ಪುರುಷರಲ್ಲಿ ದುರ್ಬುದ್ಧಿಯುಳ್ಳ, ದುರಾಚಾರಿಗಳಾದ ಯಾವ ಮನುಷ್ಯರು ಪಶ್ವಾದಿ ಯೋನಿಗಳಲ್ಲಿ ಮೈಥುನಮಾಡುವರೋ–ಅಂತಹವರು ನಪುಂಸಕರಾಗಿ ಹುಟ್ಟುತ್ತಾರೆ.

ಪಶೂಂಶ್ಚ ಯೇ ಘಾತಯನ್ತಿ ಯೇ ಚೈವ ಗುರುತಲ್ಪಗಾಃ ।
ಪ್ರಕೀರ್ಣಮೈಥುನಾ ಯೇ ಚ ಕ್ಲೀಬಾ ಜಾಯನ್ತಿ ತೇ ನರಾಃ ॥೫೩॥

ಯಾರು ಪಶುಹತ್ಯೆಯನ್ನು ಮಾಡುವರೋ, ಗುರುಪತ್ನೀಸಮಾಗಮವನ್ನು ಮಾಡುವರೋ, ಸಂಕರದಿಂದ ಹುಟ್ಟಿದ ಸ್ತ್ರೀಯೊಡನೆ ಸಮಾಗಮವನ್ನು ಮಾಡುವರೋ–ಅಂತಹವರು ನಪುಂಸಕರಾಗಿ ಹುಟ್ಟುತ್ತಾರೆ.”

ಉಮೆಯು ಪ್ರಶ್ನಿಸುತ್ತಾಳೆ :

ಸಾವದ್ಯಂ ಕಿನ್ನು ವೈ ಕರ್ಮ ನಿರವದ್ಯಂ ತಥೈವ ಚ ।
ಶ್ರೇಯಃ ಕುರ್ವನ್ನವಾಪ್ನೋತಿ ಮಾನವೋ ದೇವಸತ್ತಮ ॥೫೪॥

“ದೇವಶ್ರೇಷ್ಠನೇ! ದೋಷಯುಕ್ತವಾದ ಕರ್ಮವು ಯಾವುದು? ದೋಷರಹಿತವಾದ ಕರ್ಮವು ಯಾವುದು? ಯಾವ ವಿಧವಾದ ಕರ್ಮವನ್ನು ಮಾಡಿದರೆ ಮನುಷ್ಯನು ಶ್ರೇಯಸ್ಸನ್ನು ಹೊಂದುತ್ತಾನೆ?”

ಮಹೇಶ್ವರನು ಹೇಳುತ್ತಾನೆ :

ಶ್ರೇಯಾಂಸಂ ಮಾರ್ಗಮನ್ವಿಚ್ಛನ್ಸದಾ ಯಃ ಪೃಚ್ಛತಿ ದ್ವಿಜಾನ್ ।
ಧರ್ಮಾನ್ವೇಷೀ ಗುಣಾಕಾಂಕ್ಷೀ ಸ ಸ್ವರ್ಗಂ ಸಮುಪಾಶ್ನುತೇ ॥೫೫॥

“ದೇವಿ! ಶ್ರೇಯಸ್ಕರವಾದ ಮಾರ್ಗವನ್ನು ಹುಡುಕುತ್ತಾ ಯಾವನು ಯಾವಾಗಲೂ ಬ್ರಾಹ್ಮಣರನ್ನು ಆ ವಿಷಯವಾಗಿ ಪ್ರಶ್ನಿಸುತ್ತಿರುವನೋ– ಅಂತಹ ಧರ್ಮಾನ್ವೇಷಣದಲ್ಲಿ ಆಸಕ್ತನಾದ, ಸದ್ಗುಣಗಳನ್ನು ತಿಳಿದು ಕೊಳ್ಳುವುದರಲ್ಲಿ ಅಭಿಲಾಷೆಯಿರುವ ಮನುಷ್ಯನು ಸ್ವರ್ಗಲೋಕದ ಸುಖವನ್ನು ಅನುಭವಿಸುತ್ತಾನೆ.

ಯದಿ ಮಾನುಷತಾಂ ದೇವಿ ಕದಾಚಿತ್ಸ ನಿಗಚ್ಛತಿ ।
ಮೇಧಾವೀ ಧಾರಣಾಯುಕ್ತಃ ಪ್ರಾಯಸ್ತತ್ರಾಭಿಜಾಯತೇ ॥೫೬॥

ಪುಣ್ಯವು ಕ್ಷಯಿಸಿದನಂತರ ಅವನೇನಾದರೂ ಯಾವಾಗಲಾದರೂ ಮನುಷ್ಯನಾಗಿ ಹುಟ್ಟಿದರೆ ಮೇಧಾವಿಯಾಗಿಯೂ ಧಾರಣಾಶಕ್ತಿಯಿಂದ ಸಂಪನ್ನನಾಗಿಯೂ ಹುಟ್ಟುತ್ತಾನೆ.

ದೇವಿ! ಇದೇ ಸತ್ಪುರುಷರ ಧರ್ಮವಾಗಿದೆ. ಈ ಧರ್ಮವು ಕಲ್ಯಾಣ ಕರವೆಂಬುದನ್ನು ತಿಳಿಯಬೇಕು. ಮನುಷ್ಯರ ಹಿತಸಾಧನೆಗಾಗಿ ನಾನು ಈ ಧರ್ಮವನ್ನು ನಿನಗೆ ಹೇಳಿರುವೆನು.”

ಉಮೆಯು ಪ್ರಶ್ನಿಸುತ್ತಾಳೆ :

ಅಪರೇ ಸ್ವಲ್ಪವಿಜ್ಞಾನಾ ಧರ್ಮವಿದ್ವೇಷಿಣೋ ನರಾಃ ।
ಬ್ರಾಹ್ಮಣಾನ್ವೇದವಿದುಷೋ ನೇಚ್ಛನ್ತಿ ಪರಿಸರ್ಪಿತುಮ್ ॥೫೭॥

"ಪೂಜ್ಯನೇ! ಅಲ್ಪಬುದ್ಧಿಯವರಾದ ಧರ್ಮದ್ವೇಷಿಗಳಾದ ಇನ್ನೂ ಕೆಲವು ಮನುಷ್ಯರು ವೇದವಿದರಾದ ಬ್ರಾಹ್ಮಣರ ಬಳಿಗೆ (ಧರ್ಮದ ರಹಸ್ಯವನ್ನು ತಿಳಿಯುವ ಸಲುವಾಗಿ) ಹೋಗಲು ಇಷ್ಟಪಡುವುದಿಲ್ಲ.

ವ್ರತವನ್ತೋ ನರಾಃ ಕೇಚಿಚ್ಛ್ರದ್ಧಾಧರ್ಮಪರಾಯಣಾಃ ।
ಅವ್ರತಾ ಭ್ರಷ್ಟನಿಯಮಾಸ್ತಥಾನ್ಯೇ ರಾಕ್ಷಸೋಪಮಾಃ ॥೫೯॥

ಕೆಲವು ಮನುಷ್ಯರು ವ್ರತಧಾರಿಗಳಾಗಿಯೂ, ಶ್ರದ್ಧಾವಂತರಾಗಿಯೂ, ಧರ್ಮಪರಾಯಣರಾಗಿಯೂ ಇರುತ್ತಾರೆ. ಮತ್ತೆ ಕೆಲವರು ವ್ರತಹೀನ ರಾಗಿಯೂ ನಿಯಮಭ್ರಷ್ಟರಾಗಿಯೂ, ರಾಕ್ಷಸರಂತೆ ಭಯಂಕರರಾಗಿಯೂ ಇರುತ್ತಾರೆ.

ಯಜ್ವಾನಶ್ಚ ತಥೈವಾನ್ಯೇ ನಿರ್ಹೋಮಾಶ್ಚ ತಥಾಪರೇ ।
ಕೇನ ಕರ್ಮವಿಪಾಕೇನ ಭವನ್ತೀಹ ವದಸ್ವ ಮೇ ॥೬೦॥

ಕೆಲವರು ಯಜ್ಞಶೀಲರಾಗಿರುತ್ತಾರೆ. ಇನ್ನೂ ಕೆಲವರು ಯಜ್ಞಾದಿ ಗಳಿಂದ ದೂರವಿರುತ್ತಾರೆ. ಯಾವ ಕರ್ಮವಿಪಾಕ (ಫಲ) ದಿಂದ ಹೀಗೆ ಮನುಷ್ಯರು ಪರಸ್ಪರವಿರುದ್ಧವಾದ ಸ್ವಭಾವಗಳಿಂದ ಕೂಡಿ ಹುಟ್ಟುತ್ತಾರೆ? ಈ ವಿಷಯವನ್ನು ನನಗೆ ಹೇಳು."

ಮಹೇಶ್ವರನು ಹೇಳುತ್ತಾನೆ :

ಆಗಮಾ ಲೋಕಧರ್ಮಾಣಾಂ ಮರ್ಯಾದಾಃ ಸರ್ವನಿರ್ಮಿತಾಃ ।
ಪ್ರಾಮಾಣ್ಯೇನಾನುವರ್ತನ್ತೇ ದೃಶ್ಯನ್ತೇ ಚ ದೃಢವ್ರತಾಃ ॥೬೧॥

"ದೇವಿ! ವೇದ-ಶಾಸ್ತ್ರಗಳು ಲೋಕಧರ್ಮಗಳ ಮರ್ಯಾದೆಯನ್ನು ಸ್ಥಾಪಿಸಿವೆ. ಇವು ಪ್ರಜೆಗಳ ಹಿತಕ್ಕಾಗಿಯೇ ಸ್ಥಾಪಿಸಲ್ಪಟ್ಟಿವೆ. ಯಾರು ವೇದ-ಶಾಸ್ತ್ರಗಳನ್ನು ಪ್ರಮಾಣವನ್ನಾಗಿ ಅನುಸರಣೆಮಾಡುವರೋ–ಅವರು ದೃಢ ವ್ರತರಾಗಿರುವುದು ಕಂಡುಬರುತ್ತದೆ.

ಅಧರ್ಮಂ ಧರ್ಮಮಿತ್ಯಾಹುರ್ಯೇ ಚ ಮೋಹವಶಂ ಗತಾಃ ।
ಅವ್ರತಾ ನಷ್ಟಮರ್ಯಾದಾಸ್ತೇ ಪ್ರೋಕ್ತಾ ಬ್ರಹ್ಮರಾಕ್ಷಸಾಃ ॥೬೨॥

ಯಾರು ಮೋಹವಶರಾಗಿ ಅಧರ್ಮವನ್ನೇ ಧರ್ಮವೆನ್ನುವರೋ–

ಅಂತಹ ವ್ರತಹೀನರಾದ, ವೇದಮರ್ಯಾದೆಯನ್ನು ಮೀರಿದ ಪುರುಷರೇ ಬ್ರಹ್ಮರಾಕ್ಷಸರೆಂದು ಕರೆಯಲ್ಪಡುತ್ತಾರೆ.

ತೇ ಚೇತ್ಕಾಲಕೃತೋದ್ಯೋಗಾತ್ಸಮ್ಭವನ್ತೀಹ ಮಾನುಷಾಃ ।
ನಿರ್ಹೋಮಾ ನಿರ್ವಷಟ್ಕಾರಾಸ್ತೇ ಭವನ್ತಿ ನರಾಧಮಾಃ ॥೬೩॥

ಅಂತಹವರೇನಾದರೂ ಕಾಲಯೋಗದಿಂದ ಈ ಲೋಕದಲ್ಲಿ ಮನುಷ್ಯರಾಗಿ ಹುಟ್ಟಿದರೆ-ಹೋಮ-ವಷಟ್ಕಾರಗಳಿಂದ ರಹಿತವಾದ ನರಾಧಮರಾಗುತ್ತಾರೆ.

ದೇವಿ! ಸಾಗರರೂಪವಾದ ಈ ಧರ್ಮವು ಧರ್ಮಾತ್ಮರಿಗೆ ಪ್ರಿಯವೂ ಅಧರ್ಮಿಗಳಿಗೆ ಅಪ್ರಿಯವೂ ಆಗಿದೆ. ನಾನು ನಿನ್ನ ಸಂದೇಹವನ್ನು ನಿವಾರಿಸುವ ಸಲುವಾಗಿ ಎಲ್ಲವನ್ನೂ ವಿಸ್ತಾರವಾಗಿಯೇ ಹೇಳಿದ್ದೇನೆ.”

೧೪೫ನೆಯ ಅಧ್ಯಾಯವು ಮುಗಿಯಿತು.

೧೪೬ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಪಾರ್ವತಿಯಿಂದ ಸ್ತ್ರೀಧರ್ಮಗಳ ವರ್ಣನೆ

ನಾರದರು ಹೇಳುತ್ತಾರೆ :

ಏವಮುಕ್ತ್ವಾ ಮಹಾದೇವಃ ಶ್ರೋತುಕಾಮಃ ಸ್ವಯಂ ಪ್ರಭುಃ ।
ಅನುಕೂಲಾಂ ಪ್ರಿಯಾಂ ಭಾರ್ಯಾಂ ಪಾರ್ಶ್ವಸ್ಥಾಂ ಸಮಭಾಷತ ॥೧॥

“ಪ್ರಭುವಾದ ಮಹಾದೇವನು ಹೀಗೆ ಹೇಳಿ ತಾನು ಕೂಡ ಪಾರ್ವತಿಯ ಮುಖಾರವಿಂದದಿಂದ ಧರ್ಮಪ್ರವಚನವನ್ನು ಕೇಳುವ ಅಭಿಲಾಷೆಯಿಂದ ಕೂಡಿದವನಾಗಿ ಪಕ್ಕದಲ್ಲಿಯೇ ಇದ್ದ, ಮನೋನುಕೂಲ ಳಾದ ಪ್ರಿಯಭಾರ್ಯೆಯನ್ನು ಕುರಿತು ಹೇಳಿದನು :

ಪರಾವರಜ್ಞೇ ಧರ್ಮಜ್ಞೇ ತಪೋವನನಿವಾಸಿನಿ ।
ಸಾಧ್ವಿ ಸುಭ್ರು ಸುಕೇಶಾನ್ತೇ ಹಿಮವತ್ಪರ್ವತಾತ್ಮಜೇ ॥೨॥

ದಕ್ಷೇ ಶಮದಮೋಪೇತೇ ನಿರ್ಮಮೇ ಧರ್ಮಚಾರಿಣಿ ।
ಪೃಚ್ಛಾಮಿ ತ್ವಾಂ ವರಾರೋಹೇ ಪೃಷ್ಟಾ ವದ ಮಮೇಪ್ಸಿತಮ್ ॥೩॥

“ಭೂತ-ಭವಿಷ್ಯಗಳನ್ನು ತಿಳಿದಿರತಕ್ಕವಳೇ! ಧರ್ಮಜ್ಞಳೇ! ತಪೋ ವನದಲ್ಲಿ ವಾಸಮಾಡುವವಳೇ! ಸುಂದರವಾದ ಹುಬ್ಬುಗಳುಳ್ಳವಳೇ! ಸುಂದರವಾದ ಕೇಶರಾಶಿಯುಳ್ಳವಳೇ! ಪರ್ವತರಾಜನಾದ ಹಿಮವಂತನ ಕುಮಾರಿಯೇ! ಕಾರ್ಯಕುಶಲಳೇ! ಇಂದ್ರಿಯನಿಗ್ರಹ-ಮನೋನಿಗ್ರಹ ವುಳ್ಳವಳೇ! ಅಹಂಕಾರ-ಮಮಕಾರಗಳಿಂದ ರಹಿತಳಾಗಿರುವವಳೇ! ಧರ್ಮಚಾರಿಣಿಯೇ! ಸಾಧ್ವಿಯೇ! ರೂಪ-ಲಾವಣ್ಯಗಳಿಂದ ಕೂಡಿರು ವವಳೇ! ಪಾರ್ವತಿ! ನಾನೂ ಕೆಲವು ಪ್ರಶ್ನೆಗಳನ್ನು ಕೇಳುತ್ತೇನೆ. ಅನಂತರ ನನಗೆ ಅಭೀಷ್ಟವಾದ ವಿಷಯಗಳನ್ನು ಹೇಳು.

ಸಾವಿತ್ರೀ ಬ್ರಹ್ಮಣಃ ಸಾಧ್ವೀ ಕೌಶಿಕಸ್ಯ ಶಚೀ ಸತೀ ।
ಮಾರ್ಕಣ್ಡೇಯಸ್ಯ ಧೂಮೋರ್ಣಾ ಋದ್ಧಿರ್ವೈಶ್ರವಣಸ್ಯ ಚ ॥೪॥

ವರುಣಸ್ಯ ತಥಾ ಗೌರೀ ಸೂರ್ಯಸ್ಯ ಚ ಸುವರ್ಚಲಾ ।
ರೋಹಿಣೀ ಶಶಿನಃ ಸಾಧ್ವೀ ಸ್ವಾಹಾ ಚೈವ ವಿಭಾವಸೋಃ ॥೫॥

ಅದಿತಿಃ ಕಶ್ಯಪಸ್ಯಾಥ ಸರ್ವಾಸ್ತಾಃ ಪತಿದೇವತಾಃ ।
ಪೃಷ್ಟಾಶ್ಚೋಪಾಸಿತಾಶ್ಚೈವ ತಾಸ್ತ್ವಯಾ ದೇವಿ ನಿತ್ಯಶಃ ॥೬॥

ತೇನ ತ್ವಾಂ ಪರಿಪೃಚ್ಛಾಮಿ ಧರ್ಮಜ್ಞೇ ಧರ್ಮವಾದಿನಿ ।
ಸ್ತ್ರೀಧರ್ಮಂ ಶ್ರೋತುಮಿಚ್ಛಾಮಿ ತ್ವಯೋದಾಹೃತಮಾದಿತಃ ॥೭॥

ಬ್ರಹ್ಮನ ಪತ್ನಿಯಾದ ಸಾವಿತ್ರೀ, ಇಂದ್ರನ ಪತ್ನಿಯಾದ ಶಚೀದೇವಿ, ಮಾರ್ಕಂಡೇಯನ ಪತ್ನಿಯಾದ ಧೂಮೋರ್ಣಾ, ಕುಬೇರನ ಪತ್ನಿಯಾದ ಋದ್ಧಿ, ವರುಣನ ಪತ್ನಿಯಾದ ಗೌರೀ, ಸೂರ್ಯನ ಪತ್ನಿಯಾದ ಸುವರ್ಚಲಾ, ಚಂದ್ರನ ಪತ್ನಿಯಾದ ರೋಹಿಣೀ, ಅಗ್ನಿಯ ಪತ್ನಿಯಾದ ಸ್ವಾಹಾ, ಕಶ್ಯಪನ ಪತ್ನಿಯಾದ ಅದಿತಿ–ಇವರೆಲ್ಲರೂ ಸಾಧ್ವಿಯರು. ಪತಿವ್ರತಾಶಿರೋಮಣಿಯರು. ಪತಿಯೇ ದೇವರೆಂದು ಭಾವಿಸಿರುವವರು. ನೀನು ಇವರೆಲ್ಲರ ಉಪಾಸನೆಯನ್ನೂ ಮಾಡಿರುವೆ. ಧರ್ಮದ ಸಂಬಂಧ ವಾಗಿ ಪ್ರಶ್ನಿಸಿಯೂ ಇರುವೆ. ಧರ್ಮಜ್ಞಳೇ! ಧರ್ಮವಾದಿನಿಯೇ! ಈ ಕಾರಣದಿಂದ ನಿನ್ನನ್ನು ಪ್ರಶ್ನಿಸುತ್ತಿದ್ದೇನೆ. ಸ್ತ್ರೀಧರ್ಮವನ್ನು ಅಮೂಲಾಗ್ರವಾಗಿ ನಿನ್ನಿಂದ ಕೇಳಬೇಕೆಂದಿರುತ್ತೇನೆ.

ಸಧರ್ಮಚಾರಿಣೀ ಮೇ ತ್ವಂ ಸಮಶೀಲಾ ಸಮವ್ರತಾ ।
ಸಮಾನಸಾರವೀರ್ಯಾ ಚ ತಪಸ್ತೀವ್ರಂ ಕೃತಂ ಚ ತೇ ॥೮॥

ನೀನು ನನ್ನ ಸಹಧರ್ಮಿಣಿಯಾಗಿರುವೆ. ನಿನ್ನ ಶೀಲ-ಸ್ವಭಾವ-ವ್ರತ ಗಳು ನನ್ನ ಶೀಲ-ಸ್ವಭಾವ-ವ್ರತಗಳಿಗೆ ಅನುರೂಪವಾಗಿಯೇ ಇವೆ. ನಿನ್ನ ಬಲವೂ ಶಕ್ತಿಯೂ ನನ್ನ ಬಲ ಮತ್ತು ಶಕ್ತಿಗಳಿಗೆ ಸಮಾನವಾಗಿಯೇ ಇವೆ. ಮೇಲಾಗಿ ನೀನೂ ನನ್ನಂತೆಯೇ ತೀವ್ರವಾದ ತಪಸ್ಸನ್ನೂ ಮಾಡಿರುವೆ.

ತ್ವಯಾ ಹ್ಯುಕ್ತೋ ವಿಶೇಷೇಣ ಗುಣವಾನ್ಸ ಭವಿಷ್ಯತಿ ।
ಲೋಕೇ ಚೈವ ತ್ವಯಾ ದೇವಿ ಪ್ರಮಾಣತ್ವಮುಪೈಷ್ಯತಿ ॥೯॥

ನಿನ್ನಿಂದ ಹೇಳಲ್ಪಡುವ ಸ್ತ್ರೀಧರ್ಮವು ವಿಶೇಷಗುಣವುಳ್ಳದ್ದಾಗುತ್ತದೆ. ಆ ನಿನ್ನ ಧರ್ಮವಾಕ್ಯಗಳು ಲೋಕದಲ್ಲಿ ಪ್ರಮಾಣಭೂತವಾಗುತ್ತವೆ.

ಸ್ತ್ರಿಯಶ್ಚೈವ ವಿಶೇಷೇಣ ಸ್ತ್ರೀಜನಸ್ಯ ಗತಿಃ ಪರಾ ।
ಗೌರ್ಯಾಂ ಗಚ್ಛತಿ ಸುಶ್ರೋಣಿ ಲೋಕೇಷ್ವೇಷಾ ಗತಿಃ ಸದಾ ॥೧೦॥

ಅದರಲ್ಲಿಯೂ ವಿಶೇಷವಾಗಿ ಸ್ತ್ರೀಯರೇ ಸ್ತ್ರೀಜನಕ್ಕೆ ಪರಮಗತಿಯಾಗಿ ದ್ದಾರೆ. ಭೂಮಿಯಲ್ಲಿ ಈ ವಿಷಯವು ಪರಂಪರೆಯಿಂದ ನಡೆದುಕೊಂಡು ಬಂದಿದೆ. ಇದೇ ಯಾವಾಗಲೂ ಲೋಕಗಳಲ್ಲಿ ಸ್ಥಿರವಾದ ಗತಿಯಾಗಿದೆ.

ಮಮ ಚಾರ್ಧಂ ಶರೀರಸ್ಯ ತವ ಚಾರ್ಧೇನ ನಿರ್ಮಿತಮ್ ।
ಸುರಕಾರ್ಯಕರೀ ಚ ತ್ವಂ ಲೋಕಸಂತಾನಕಾರಿಣೀ ॥೧೧॥

ನನ್ನ ಅರ್ಧಶರೀರವು ನಿನ್ನ ಶರೀರಾರ್ಧದಿಂದ ನಿರ್ಮಿತವಾಗಿದೆ. (ಅದುದರಿಂದಲೇ ನಾನು ಅರ್ಧನಾರೀಶ್ವರನಾಗಿದ್ದೇನೆ.) ನೀನು ದೇವತೆಗಳಿಗೆ ಹಿತಕರವಾದ ಕಾರ್ಯಗಳನ್ನು ಮಾಡುವೆ. ಲೋಕಸಂತಾನವನ್ನು ವಿಸ್ತರಿಸು ವವಳೂ ನೀನೇ ಆಗಿರುವೆ.

ತವ ಸರ್ವಃ ಸುವಿದಿತಃ ಸ್ತ್ರೀಧರ್ಮಃ ಶಾಶ್ವತಃ ಶುಭೇ ।
ತಸ್ಮಾದಶೇಷತೋ ಬ್ರೂಹಿ ಸ್ವಧರ್ಮಂ ವಿಸ್ತರೇಣ ಮೇ ॥೧೨॥

ಶುಭಾಂಗಿಯೇ! ನಿನಗೆ ಸನಾತನವಾದ ಸ್ತ್ರೀಧರ್ಮವು ಸಂಪೂರ್ಣವಾಗಿ

ತಿಳಿದಿರುವುದು. ಆದುದರಿಂದ ನಿನ್ನ ಧರ್ಮವನ್ನು ಸಂಪೂರ್ಣವಾಗಿ ವಿಸ್ತಾರ ವಾಗಿ ಹೇಳು.

ಉಮೆಯು ಹೇಳುತ್ತಾಳೆ :

ಭಗವನ್ಸರ್ವಭೂತೇಶ ಭೂತಭವ್ಯಭವೋತ್ತಮ ।
ತ್ವತ್ಪ್ರಭಾವಾದಿಯಂ ದೇವ ವಾಕ್ಚೈವ ಪ್ರತಿಭಾತಿ ಮೇ ॥೧೩॥

ಇಮಾಸ್ತು ನದ್ಯೋ ದೇವೇಶ ಸರ್ವತೀರ್ಥೋದಕೈರ್ಯುತಾಃ ।
ಉಪಸ್ಪರ್ಶನಹೇತೋಸ್ತ್ವಾಮುಪಯಾನ್ತಿ ಸಮೀಪತಃ ॥೧೪॥

ಏತಾಭಿಃ ಸಹ ಸಮ್ಮನ್ತ್ರ್ಯ ಪ್ರವಕ್ಷ್ಯಾಮ್ಯನುಪೂರ್ವಶಃ ।
ಪ್ರಭವನ್ಯೋಽನಹಂವಾದೀ ಸ ವೈ ಪುರುಷ ಉಚ್ಯತೇ ॥೧೫॥

“ಪೂಜ್ಯನೇ! ಸರ್ವಭೂತೇಶ್ವರನೇ! ಭೂತ-ಭವಿಷ್ಯ-ವರ್ತಮಾನ ಕಾಲಸ್ವರೂಪನೇ! ಸರ್ವಶ್ರೇಷ್ಠನೇ! ಮಹಾದೇವನೇ! ನಿನ್ನ ಪ್ರಭಾವ ದಿಂದಲೇ ನನ್ನ ವಾಣಿಯು ಪ್ರತಿಭಾಸಂಪನ್ನವಾಗಿದೆ. ಈ ಕಾರಣದಿಂದ ನಾನು ಸ್ತ್ರೀಧರ್ಮವನ್ನು ಹೇಳಬಲ್ಲೆನು. ಆದರೆ ನಿನ್ನ ಸ್ನಾನ ಮತ್ತು ಆಚಮನಗಳಿಗೂ ಮತ್ತು ನಿನ್ನ ಪಾದಗಳನ್ನು ಸ್ಪರ್ಶಿಸುವ ಇಚ್ಛೆಯಿಂದಲೂ–ಸಮಸ್ತ ತೀರ್ಥೋದಕಗಳಿಂದಲೂ ಪರಿಪೂರ್ಣವಾಗಿರುವ ಈ ನದಿಗಳು ನಿನ್ನ ಸಮೀಪಕ್ಕೆ ಬಂದಿವೆ. ನಾನು ಈ ದಿವ್ಯನದಿಗಳೊಡನೆ ಸಮಾಲೋಚಿಸಿ ಸ್ತ್ರೀಧರ್ಮಗಳನ್ನು ಮೊದಲಿನಿಂದಲೂ ಹೇಳುವೆನು. ಮನುಷ್ಯನು ಎಷ್ಟೇ ಸಮರ್ಥನಾಗಿದ್ದರೂ ಅಹಂಕಾರಶೂನ್ಯನಾಗಿದ್ದರೆ ಅವನನ್ನೇ ಜನರು ಯೋಗ್ಯಪುರುಷನೆಂದು ಹೇಳುತ್ತಾರೆ.

ಸ್ತ್ರೀ ಚ ಭೂತೇಶ ಸತತಂ ಸ್ತ್ರಿಯಮೇವಾನುಧಾವತಿ ।
ಮಯಾ ಸಮ್ಮಾನಿತಾಶ್ಚೈವ ಭವಿಷ್ಯನ್ತಿ ಸರಿದ್ವರಾಃ ॥೧೬॥

ಭೂತನಾಥನೇ! ಹೆಂಗಸು ಯಾವಾಗಲೂ ಹೆಂಗಸನ್ನೇ ಅನುಸರಣೆ ಮಾಡುತ್ತಾಳೆ. ನಾನು ಈ ಶ್ರೇಷ್ಠನದಿಗಳೊಡನೆ ಸಮಾಲೋಚಿಸಿದರೆ–ಎಲ್ಲ ನದಿಗಳ ಅಧಿದೇವತೆಗಳೂ ಸಮ್ಮಾನಿತರೂ ಆಗುತ್ತಾರೆ.

ಏಷಾ ಸರಸ್ವತೀ ಪುಣ್ಯಾ ನದೀನಾಮುತ್ತಮಾ ನದೀ ।
ಪ್ರಥಮಾ ಸರ್ವಸರಿತಾಂ ನದೀ ಸಾಗರಗಾಮಿನೀ ॥೧೭॥

ವಿಪಾಶಾ ಚ ವಿತಸ್ತಾ ಚ ಚನ್ದ್ರಭಾಗಾ ಇರಾವತೀ ।
ಶತದ್ರೂರ್ದೇವಿಕಾ ಸಿನ್ಧುಃ ಕೌಶಿಕೀ ಗೌತಮೀ ತಥಾ ॥೧೮॥

ಎಲ್ಲ ನದಿಗಳಿಗಿಂತಲೂ ಶ್ರೇಷ್ಠವಾದ, ಎಲ್ಲ ನದಿಗಳಿಗೂ ಮೊದಲನೆಯದಾದ, ಸಾಗರಗಾಮಿನಿಯಾದ ಇದು ಸರಸ್ವತೀನದಿಯು. ಪಿಪಾಶಾ, ವಿತಸ್ತಾ, ಚಂದ್ರಭಾಗಾ, ಇರಾವತೀ, ಶತದ್ರೂ, ದೇವಿಕಾ, ಸಿಂಧು, ಕೌಶಿಕೀ, ಗೌತಮೀ–ಈ ಎಲ್ಲ ಪುಣ್ಯನದಿಗಳೂ ಇಲ್ಲಿಯೇ ಇವೆ.

ತಥಾ ದೇವನದೀ ಚೇಯಂ ಸರ್ವತೀರ್ಥಾಭಿಸಮ್ಭೃತಾ ।
ಗಗನಾದ್ಗಾಂ ಗತಾ ದೇವೀ ಗಙ್ಗಾ ಸರ್ವಸರಿದ್ವರಾ ॥೧೯॥

ಸಮಸ್ತತೀರ್ಥಗಳಿಂದಲೂ ಸೇವಿಸಲ್ಪಡುತ್ತಿರುವ, ಎಲ್ಲ ನದಿಗಳಿಗೂ ಶ್ರೇಷ್ಠಳಾಗಿರುವ, ಆಕಾಶದಿಂದ ಭೂಮಿಗೆ ಇಳಿದುಬಂದಿರುವ ದೇವನದಿಯಾದ ಗಂಗಾದೇವಿಯೂ ಇಲ್ಲಿಯೇ ವಿರಾಜಮಾನಳಾಗಿದ್ದಾಳೆ."

ದೇವದೇವನ ಪತ್ನಿಯಾದ, ಧರ್ಮಾತ್ಮರಲ್ಲಿ ಶ್ರೇಷ್ಠಳಾದ, ಧರ್ಮವತ್ಸಲೆಯಾದ, ಮಹಾದೇವಮಹಿಷಿಯಾದ ಉಮಾದೇವಿಯು ಪರಮೇಶ್ವರನೊಡನೆ ಹೀಗೆ ಹೇಳಿ-ಸ್ತ್ರೀಧರ್ಮವನ್ನು ತಿಳಿದಿರುವವರಲ್ಲಿ ಅತ್ಯಂತ ಕುಶಲೆಯರಾದ, ಗಂಗೆಯೇ ಮೊದಲಾದ ಶ್ರೇಷ್ಠನದಿಗಳನ್ನು ಮಂದಹಾಸಪೂರ್ವಕವಾಗಿ ಸ್ತ್ರೀಧರ್ಮದ ವಿಷಯವಾಗಿ ಪ್ರಶ್ನಿಸಿದಳು.

ಅಯಂ ಭಗವತಾ ಪ್ರೋಕ್ತಃ ಪ್ರಶ್ನಃ ಸ್ತ್ರೀಧರ್ಮಸಂಶ್ರಿತಃ ।
ತಂ ತು ಸಮ್ಮನ್ತ್ರ್ಯ ಯುಷ್ಮಾಭಿರ್ವಕ್ತುಮಿಚ್ಛಾಮಿ ಶಂಕರಮ್ ॥

"ಪುಣ್ಯನದಿಗಳೇ! ಭಗವಾನ್ ಶಂಕರನು ಸ್ತ್ರೀಧರ್ಮಸಂಬಂಧವಾದ ಪ್ರಶ್ನೆಯನ್ನು ಕೇಳಿರುವನು. ಈ ವಿಷಯದಲ್ಲಿ ನಿಮ್ಮೆಲ್ಲರ ಸಲಹೆಗಳನ್ನು ಪಡೆದು ಬಳಿಕ ಶಂಕರನಿಗೆ ಉತ್ತರಿಸಬೇಕೆಂದಿರುವೆನು.

ನ ಚೈಕಸಾಧ್ಯಂ ಪಶ್ಯಾಮಿ ವಿಜ್ಞಾನಂ ಭುವಿ ಕಸ್ಯಚಿತ್ ।
ದಿವಿ ವಾ ಸಾಗರಗಮಾಸ್ತೇನ ವೋ ಮಾನಯಾಮ್ಯಹಮ್ ॥೨೩॥

ಸಾಗರಗಾಮಿನಿಗಳಾದ ನದಿಗಳೇ! ಸ್ವರ್ಗದಲ್ಲಾಗಲೀ ಭೂಮಿಯಲ್ಲಾಗಲೀ ಯಾವುದೇ ವಿಜ್ಞಾನವನ್ನಾದರೂ ಒಬ್ಬನಿಂದಲೇ ಸಮಗ್ರವಾಗಿ

ತಿಳಿದುಕೊಳ್ಳಲು ಸಾಧ್ಯವಿಲ್ಲವೆಂದು ನಾನು ಭಾವಿಸಿದ್ದೇನೆ. (ಒಬ್ಬ ವ್ಯಕ್ತಿಯೇ ಎಲ್ಲವನ್ನೂ ತಿಳಿಯಲು ಸಾಧ್ಯವಿಲ್ಲವೆಂದು ಭಾವಿಸುತ್ತೇನೆ.) ಆದುದರಿಂದ ನಿಮ್ಮ ಸಲಹೆಗಳನ್ನು ನಾನು ಮಾನ್ಯಮಾಡುತ್ತೇನೆ."

ಹೀಗೆ ಪಾರ್ವತಿಯು ಕಲ್ಯಾಣಸ್ವರೂಪರಾದ, ಮಂಗಳಮಯಿಗಳಾದ ಎಲ್ಲ ಶ್ರೇಷ್ಠನದಿಗಳನ್ನೂ ಪ್ರಶ್ನಿಸಿದಳು. ಆಗ ಆ ಎಲ್ಲ ನದಿಗಳ ಅಧಿದೇವತೆಗಳೂ ಪಾರ್ವತಿಗೆ ಉತ್ತರಕೊಡುವ ಸಲುವಾಗಿ ಗಂಗೆಯನ್ನು ಸಮ್ಮಾನಪೂರ್ವಕವಾಗಿ ನಿಯೋಜಿಸಿದರು.

ಬಹ್ವೀಭಿರ್ಬುದ್ಧಿಭಿಃ ಸ್ಫೀತಾ ಸ್ತ್ರೀಧರ್ಮಜ್ಞಾ ಶುಚಿಸ್ಮಿತಾ ।
ಶೈಲರಾಜಸುತಾಂ ದೇವೀಂ ಪುಣ್ಯಾಪಾಪಭಯಾಪಹಾ ॥೨೫॥

ಬುದ್ಧ್ಯಾ ವಿನಯಸಂಪನ್ನಾ ಸರ್ವಧರ್ಮವಿಶಾರದಾ ।
ಸಸ್ಮಿತಂ ಬಹುಬುದ್ಧ್ಯಾಢ್ಯಾ ಗಙ್ಗಾ ವಚನಮಬ್ರವೀತ್ ॥೨೬॥

ನಾನಾವಿಧವಾದ ವಿಷಯಗಳ ಪರಿಜ್ಞಾನವುಳ್ಳ, ಸ್ತ್ರೀಧರ್ಮವನ್ನು ತಿಳಿದಿರುವ, ಶುಭ್ರವಾದ ಮುಗುಳ್ನಗೆಯುಳ್ಳ, ಪುಣ್ಯಾತ್ಮಳಾದ, ಪಾಪದ ಭಯವನ್ನು ದೂರಗೊಳಿಸುವ, ಸಮಸ್ತಧರ್ಮಗಳಲ್ಲಿಯೂ ಪಾಂಡಿತ್ಯವನ್ನು ಹೊಂದಿರುವ, ಪ್ರಚುರವಾದ ಬುದ್ಧಿಯಿಂದ ಕೂಡಿರುವ ಗಂಗಾದೇವಿಯು–ಶೈಲರಾಜಕುಮಾರಿಯಾದ ಪಾರ್ವತೀದೇವಿಯನ್ನು ಕುರಿತು ನಗುನಗುತ್ತಾ ಹೇಳಿದಳು :

ಧನ್ಯಾಸ್ಮ್ಯನುಗೃಹೀತಾಸ್ಮಿ ದೇವಿ ಧರ್ಮಪರಾಯಣೇ ।
ಯಾ ತ್ವಂ ಸರ್ವಜಗನ್ಮಾನ್ಯಾ ನದೀಂ ಮಾನಯಸೇಽನಘೇ ॥೨೭॥

"ಧರ್ಮಪರಾಯಣೆಯೇ! ಪಾರ್ವತೀದೇವಿಯೇ! ನಾನು ಧನ್ಯಳಾದೆನು. ಅನುಗೃಹೀತಳಾದೆನು. ಅಖಿಲಜಗತ್ತಿಗೂ ಸಮ್ಮಾನ್ಯಳಾಗಿರುವ ನೀನು ನದಿಯಾದ ನನ್ನನ್ನು ಗೌರವಿಸುತ್ತಿರುವೆಯಲ್ಲವೇ?

ಪ್ರಭವನ್ಪೃಚ್ಛತೇ ಯೋ ಹಿ ಸಮ್ಮಾನಯತಿ ವಾ ಪುನಃ ।
ನೂನಂ ಜನಮದುಷ್ಟಾತ್ಮಾ ಪಣ್ಡಿತಾಖ್ಯಾಂ ಸ ಗಚ್ಛತಿ ॥೨೮॥

ಯಾವನು ಎಲ್ಲ ಪ್ರಕಾರಗಳಿಂದಲೂ ಸಮರ್ಥನಾಗಿದ್ದರೂ–ಸರ್ವವಿಷಯಗಳನ್ನೂ ತಿಳಿದಿದ್ದರೂ–ಮತ್ತೊಬ್ಬನನ್ನು ಕೇಳುವನೋ, ಹಾಗೆ ಕೇಳ

ವಾಗಲೂ ಮನಸ್ಸಿನಲ್ಲಿ ಕೊಂಕಿಲ್ಲದೇ ದುಷ್ಟವಾದ ಭಾವನೆಯಿಲ್ಲದೇ ಕೇಳು ವನೋ ಮತ್ತು ಸಮ್ಮಾನಿಸುವನೋ–ಅಂತಹವನು ಪಂಡಿತನೆಂಬ ಖ್ಯಾತಿ ಯನ್ನು ನಿಶ್ಚಯವಾಗಿಯೂ ಪಡೆಯುತ್ತಾನೆ.

ಜ್ಞಾನವಿಜ್ಞಾನಸಮ್ಪನ್ನಾನೂಹಾಪೋಹವಿಶಾರದಾನ್ ।
ಪ್ರವಕ್ಷ್ಯಾನ್ಪೃಚ್ಛತೇ ಯೋಽನ್ಯಾನ್ಸ ವೈ ನಾಪದಮೃಚ್ಛತಿ ॥೨೯॥

ಅನ್ಯಥಾ ಬಹುಬುದ್ಧ್ಯಾಢ್ಯೋ ವಾಕ್ಯಂ ವದತಿ ಸಂಸದಿ ।
ಅನ್ಯಥೈವ ಹ್ಯಹಂವಾದೀ ದುರ್ಬಲಂ ವದತೇ ವಚಃ ॥೩೦॥

ಯಾವ ಮನುಷ್ಯನು ಜ್ಞಾನ-ವಿಜ್ಞಾನಸಂಪನ್ನರಾದ, ಊಹಾಪೋಹ ಕುಶಲರಾದ ವಾಗ್ಮಿಗಳನ್ನು ತನ್ನ ಸಂದೇಹದ ವಿಷಯವಾಗಿ ಕೇಳುವನೋ– ಅಂತಹವನು ಆಪತ್ತಿನಲ್ಲಿ ಬೀಳುವುದಿಲ್ಲ. ಬಹುಬುದ್ಧಿವಂತನಾದವನೊಬ್ಬನು ಸಭೆಯಲ್ಲಿ ಮಾತನಾಡುವಾಗ ಬೇರೆಯ ರೀತಿಯಲ್ಲಿ (ಉತ್ತಮ ರೀತಿಯಲ್ಲಿ) ಮಾತನಾಡುತ್ತಾನೆ. ಅಹಂಕಾರಿಯಾದವನು ದುರ್ಬಲವಾದ ಸತ್ತ್ವವಿಲ್ಲದ ಮಾತುಗಳನ್ನಾಡುತ್ತಾನೆ.

ದಿವ್ಯಜ್ಞಾನೇ ದಿವಿ ಶ್ರೇಷ್ಠೇ ದಿವ್ಯಪುಣ್ಯೇ ಸದೋತ್ಥಿತೇ ।
ತ್ವಮೇವಾರ್ಹಸಿ ನೋ ದೇವಿ ಸ್ತ್ರೀಧರ್ಮಾನನುಭಾಷಿತುಮ್ ॥೩೧॥

ದಿವ್ಯಜ್ಞಾನವನ್ನು ಹೊಂದಿರುವವಳೇ! ದೇವಲೋಕದಲ್ಲಿ ಸರ್ವಶ್ರೇಷ್ಠ ಳಾದವಳೇ! ದಿವ್ಯಪುಣ್ಯಳೇ (ಪುಣ್ಯಾತ್ಮಳೇ!) ಸದಾ ಉತ್ಸಾಹಶೀಲಳಾ ಗಿರುವವಳೇ! ಉಮಾದೇವಿಯೇ! ಸ್ತ್ರೀಧರ್ಮದ ವಿಷಯವಾಗಿ ನಮ್ಮೆಲ್ಲರಿಗೂ ತಿಳಿಯಹೇಳಲು ನೀನೇ ಅರ್ಹಳಾಗಿರುವೆ.”

ಹೀಗೆ ಗಂಗಾದೇವಿಯಿಂದ ಬಹುಗುಣಯುಕ್ತವಾದ (ಪ್ರಶಂಸಾಯುಕ್ತ ವಾದ) ಮಾತುಗಳಿಂದ ಆರಾಧಿಸಲ್ಪಟ್ಟ ಸುರಸುಂದರಿಯಾದ ಉಮಾ ದೇವಿಯು ಸ್ತ್ರೀಧರ್ಮವನ್ನು ಸಮಗ್ರವಾಗಿ ಹೇಳಲು ಉಪಕ್ರಮಿಸಿದಳು :

ಸ್ತ್ರೀಧರ್ಮೋ ಮಾಂ ಪ್ರತಿ ಯಥಾ ಪ್ರತಿಭಾತಿ ಯಥಾವಿಧಿ ।
ತಮಹಂ ಕೀರ್ತಯಿಷ್ಯಾಮಿ ತಥೈವ ಪ್ರಥಿತೋ ಭವೇತ್ ॥೩೨॥

“ಗಂಗಾದೇವಿಯೇ! ಸ್ತ್ರೀಧರ್ಮವು ನನ್ನ ಬುದ್ಧಿಯಲ್ಲಿ ಹೇಗೆ ಸ್ಫುರಿಸು

ವುದೋ ಹಾಗೆಯೇ ಹೇಳುತ್ತೇನೆ. ವಿಧಿಪೂರ್ವಕವಾಗಿ ಹೇಳುತ್ತೇನೆ. ನಾನು ಹೇಳಿದಂತೆಯೇ ಅದು ಲೋಕದಲ್ಲಿ ಪ್ರಸಿದ್ಧಿಯನ್ನು ಹೊಂದಲಿ.

ಸ್ತ್ರೀಧರ್ಮಃ ಪೂರ್ವ ಏವಾಯಂ ವಿವಾಹೇ ಬನ್ಧುಭಿಃ ಕೃತಃ ।
ಸಹಧರ್ಮಚರೀ ಭರ್ತುರ್ಭವತ್ಯಗ್ನಿಸಮೀಪತಃ ॥೩೪॥

ವಿವಾಹಸಮಯದಲ್ಲಿ ಕನ್ಯೆಯ ಬಂಧುಗಳೇ ಸ್ತ್ರೀಧರ್ಮವನ್ನು ಅವಳಿಗೆ ಉಪದೇಶಿಸುತ್ತಾರೆ. ಕನ್ಯೆಯು ಅಗ್ನಿಸಾಕ್ಷಿಕವಾಗಿ ಪತಿಯ ಸಹಧರ್ಮ ಚಾರಿಣಿಯಾಗುತ್ತಾಳೆ.

ಸುಸ್ವಭಾವಾ ಸುವಚನಾ ಸುವೃತ್ತಾ ಸುಖದರ್ಶನಾ ।
ಅನನ್ಯಚಿತ್ತಾ ಸುಮುಖೀ ಭರ್ತುಃ ಸಾ ಧರ್ಮಚಾರಿಣೀ ॥೩೫॥

ಸಾ ಭವೇದ್ಧರ್ಮಪರಮಾ ಸಾ ಭವೇದ್ಧರ್ಮಭಾಗಿನೀ ।
ದೇವವತ್ಸತತಂ ಸಾಧ್ವೀ ಯಾ ಭರ್ತಾರಂ ಪ್ರಪಶ್ಯತಿ ॥೩೬॥

ಯಾವಳ ಸ್ವಭಾವಗುಣಗಳು ಉತ್ತಮವಾಗಿರುವುದೋ, ಯಾವಳು, ಯಾವಾಗಲೂ ಒಳ್ಳೆಯ ಮಾತುಗಳನ್ನಾಡುವಳೋ, ಸಚ್ಚಾರಿತ್ರ್ಯಳೋ, ಪತಿಯು ನೋಡಿದೊಡನೆಯೇ ಅವನ ಮನಸ್ಸಿಗೆ ಸುಖವುಂಟಾಗುವ ರೀತಿ ಯಲ್ಲಿರುವಳೋ, ಪರಪುರುಷನ ಕಡೆಗೆ ಯಾವಾಗಲೂ ಮನಸ್ಸನ್ನು ಹರಿಸು ವುದಿಲ್ಲವೋ, ಪತಿಯ ಸಮ್ಮುಖದಲ್ಲಿ ಯಾವಾಗಲೂ ನಗುಮುಖದಿಂದಲೇ ಇರುವಳೋ–ಅಂತಹವಳು ಸ್ತ್ರೀಧರ್ಮದಂತೆ ನಡೆದುಕೊಳ್ಳುವವಳಾಗು ತ್ತಾಳೆ. ಯಾವ ಸಾಧ್ವೀಶಿರೋಮಣಿಯು ಸರ್ವಕಾಲದಲ್ಲಿಯೂ ಪತಿಯನ್ನು ದೇವತೆಯಂತೆಯೇ ಕಾಣುವಳೋ–ಅಂತಹವಳೇ ಪತಿವ್ರತಾಧರ್ಮ ಪರಾಯಣಳು. ಅವಳೇ ಪುಣ್ಯಫಲಕ್ಕೆ ಭಾಗಿನಿಯಾಗತಕ್ಕವಳು.

ಶುಶ್ರೂಷಾಂ ಪರಿಚಾರಂ ಚ ದೇವವದ್ಯಾ ಕರೋತಿ ಚ ।
ನಾನ್ಯಭಾವಾ ಹ್ಯವಿಮನಾಃ ಸುವ್ರತಾ ಸುಖದರ್ಶನಾ ॥೩೭॥

ಪುತ್ರವಕ್ತ್ರಮಿವಾಭೀಕ್ಷ್ಣಂ ಭರ್ತುರ್ವದನಮೀಕ್ಷತೇ ।
ಯಾ ಸಾಧ್ವೀ ನಿಯತಾಹಾರಾ ಸಾ ಭವೇದ್ಧರ್ಮಚಾರಿಣೀ ॥೩೮॥

ಯಾವ ಸಾಧ್ವಿಯು ಪತಿಯನ್ನು ದೇವತೆಯೆಂದೇ ಭಾವಿಸಿ, ಅವನು ಹೇಳಿದಂತೆ ಕೇಳಿಕೊಂಡು ಅವನ ಸೇವೆಯನ್ನು ಮಾಡುವಳೋ, ಪತಿಯನ್ನು

ಬಿಟ್ಟು ಬೇರೆಯವನಲ್ಲಿ ಪ್ರೇಮಭಾವವನ್ನಿಡುವುದಿಲ್ಲವೋ, ಒಮ್ಮೆಯೂ ವಿಮನಸ್ಕಳಾಗುವುದಿಲ್ಲವೋ (ಪತಿಶುಶ್ರೂಷೆಯಲ್ಲಿಯೇ ಅನನ್ಯಮನಸ್ಕಳಾಗಿರುವಳೋ), ಒಳ್ಳೆಯ ನಿಯಮಗಳನ್ನು ಪರಿಪಾಲಿಸುವಳೋ, ಸುಖದರ್ಶನಳೋ, ಮಗನ ಮುಖವನ್ನು ಬಾರಿ ಬಾರಿಗೂ ನೋಡುವಂತೆ ಪತಿಯ ಮುಖವನ್ನು ವೀಕ್ಷಿಸುತ್ತಿರುವಳೋ, ನಿಯತವಾದ ಆಹಾರವನ್ನು ಸೇವಿಸುವಳೋ–ಅಂತಹವಳು ಸ್ತ್ರೀಧರ್ಮಚಾರಿಣಿಯು.

ಶ್ರುತ್ವಾ ದಮ್ಪತಿಧರ್ಮಂ ವೈ ಸಹಧರ್ಮಂ ಕೃತಂ ಶುಭಮ್ ।
ಯಾ ಭವೇದ್ಧರ್ಮಪರಮಾ ನಾರೀ ಭರ್ತೃಸಮವ್ರತಾ ॥೩೯॥

'ಪತಿ-ಪತ್ನಿಯರು ಒಂದೇ ಕಡೆಯಲ್ಲಿದ್ದುಕೊಂಡು ಒಂದೇ ಮನಸ್ಸಿನಿಂದ ಧರ್ಮಕಾರ್ಯಗಳನ್ನು ಮಾಡಬೇಕು'–ಎಂಬ ಮಂಗಲಮಯವಾದ ದಾಂಪತ್ಯಧರ್ಮದಂತೆ ಯಾವ ಸ್ತ್ರೀಯು ಧರ್ಮಪರಾಯಣಳಾಗಿರುವಳೋ–ಅಂತಹವಳೇ ಪತಿಗೆ ಸಮಾನವಾದ ವ್ರತವುಳ್ಳವಳು. (ಪತಿವ್ರತೆಯು).

ದೇವವತ್ಸತತಂ ಸಾಧ್ವೀ ಭರ್ತಾರಮನುಪಶ್ಯತಿ ।
ದಮ್ಪತ್ಯೋರೇಷ ವೈ ಧರ್ಮಃ ಸಹಧರ್ಮಕೃತಃ ಶುಭಃ ॥೪೦॥

ಸಾಧ್ವಿಯಾದ ಸ್ತ್ರೀಯು ತನ್ನ ಪತಿಯನ್ನು ದೇವತೆಯಂತೆಯೇ ಕಾಣುತ್ತಾಳೆ. ದಂಪತಿಗಳ ಸಹಧರ್ಮವು (ಜೊತೆಯಲ್ಲಿ ಸೇರಿ ಧರ್ಮಕಾರ್ಯಗಳನ್ನು ಮಾಡುವುದು) ಶುಭಪ್ರದವಾದುದು.

ಶುಶ್ರೂಷಾಂ ಪರಿಚಾರಂ ಚ ದೇವತುಲ್ಯಂ ಪ್ರಕುರ್ವತೀ ।
ವಶ್ಯಾ ಭಾವೇನ ಸುಮನಾಃ ಸುವ್ರತಾ ಸುಖದರ್ಶನಾ ।
ಅನನ್ಯಚಿತ್ತಾ ಸುಮುಖೀ ಭರ್ತುಃ ಸಾ ಧರ್ಮಚಾರಿಣೀ ॥೪೧॥

ಪರುಷಾಣ್ಯಪಿ ಚೋಕ್ತಾ ಯಾ ದೃಷ್ಟಾ ದುಷ್ಟೇನ ಚಕ್ಷುಷಾ ।
ಸುಪ್ರಸನ್ನಮುಖೀ ಭರ್ತುರ್ಯಾ ನಾರೀ ಸಾ ಪತಿವ್ರತಾ ॥೪೨॥

ಯಾವಳು ಪತಿಯನ್ನು ದೇವತೆಯೆಂದೇ ಭಾವಿಸಿ ಅವನು ಹೇಳಿದಂತೆ ಕೇಳಿಕೊಂಡಿರುವಳೋ, ಅವನ ಸೇವೆಯಲ್ಲಿಯೇ ನಿರತಳಾಗಿರುವಳೋ, ಪ್ರೇಮಭಾವದಿಂದ ಪತಿಗೆ ಅಧೀನಳಾಗಿರುವಳೋ, ಒಳ್ಳೆಯ ಮನಸ್ಸಿ

ನಿಂದ ಕೂಡಿರುವವಳೋ, ಸಚ್ಚಾರಿತ್ರ್ಯವುಳ್ಳವಳಾಗಿರುವಳೋ, ಪತಿಯ ಕಣ್ಣು ಗಳಿಗೆ ಸುಖವಾಗುವಂತೆ ಸಿಂಗರಿಸಿಕೊಂಡಿರುವಳೋ, ಮನಸ್ಸಿನಿಂದಲೂ ಪತಿಯನ್ನು ಬಿಟ್ಟು ಬೇರೆಯವನನ್ನು ಚಿಂತಿಸುವುದಿಲ್ಲವೋ, ಪತಿಯ ಸಮಕ್ಷ ದಲ್ಲಿ ಯಾವಾಗಲೂ ಮಂದಸ್ಮಿತಳಾಗಿರುವಳೋ–ಅಂತಹವಳು ಸ್ತ್ರೀಧರ್ಮ ಚಾರಿಣಿಯು. ಪತಿಯು ಕಠೋರವಾದ ಮಾತುಗಳನ್ನಾಡಿದರೂ, ದೋಷ ಪೂರ್ಣವಾದ ದೃಷ್ಟಿಯಿಂದ ನೋಡಿದರೂ–ಯಾವಳು ಪತಿಯ ಸಮ್ಮುಖ ದಲ್ಲಿ ಸುಪ್ರಸನ್ನವಾದ ಮುಖಭಾವದಿಂದಲೇ ಕೂಡಿರುವಳೋ–ಅವಳೇ ಪತಿವ್ರತೆಯು.

ನ ಚನ್ದ್ರಸೂರ್ಯೌ ನ ತರುಂ ಪುಂನಾಮ್ನಾ ಯಾ ನಿರೀಕ್ಷತೇ ।
ಭರ್ತೃವರ್ಜಂ ವರಾರೋಹಾ ಸಾ ಭವೇದ್ಧರ್ಮಚಾರಿಣೀ ॥೪೩॥

ದರಿದ್ರಂ ವ್ಯಾಧಿತಂ ದೀನಮಧ್ವನಾ ಪರಿಕರ್ಶಿತಮ್ ।
ಪತಿಂ ಪುತ್ರಮಿವೋಪಾಸ್ತೇ ಸಾ ನಾರೀ ಧರ್ಮಭಾಗಿನೀ ॥೪೪॥

ಯಾವ ಸುಂದರಸ್ತ್ರೀಯು ಪತಿಯನ್ನು ಬಿಟ್ಟು ಸೂರ್ಯನನ್ನಾಗಲೀ, ಚಂದ್ರನನ್ನಾಗಲೀ, ಯಾವುದಾದರೂ ವೃಕ್ಷವನ್ನಾಗಲೀ–ಪುರುಷನೆಂಬ ಭಾವನೆಯಿಂದ ನೋಡುವುದಿಲ್ಲವೋ–ಅಂತಹವಳೇ ಪತಿವ್ರತಾಧರ್ಮ ಪರಾಯಣೆಯು. ಪತಿಯು ದರಿದ್ರನಾಗಿರಲಿ, ರೋಗಿಯಾಗಿರಲಿ, ಹಾದಿ ಯನ್ನು ನಡೆದು ಬಳಲಿರಲಿ–ಅವನನ್ನು ಪುತ್ರನಂತೆ ಉಪಚರಿಸುವ ಸ್ತ್ರೀಯು ಪುಣ್ಯಕ್ಕೆ ಭಾಗಿಯಾಗುತ್ತಾಳೆ.

ಯಾ ನಾರೀ ಪ್ರಯತಾ ದಕ್ಷಾ ಯಾ ನಾರೀ ಪುತ್ರಿಣೀ ಭವೇತ್ ।
ಪತಿಪ್ರಿಯಾ ಪತಿಪ್ರಾಣಾ ಸಾ ನಾರೀ ಧರ್ಮಭಾಗಿನೀ ॥೪೫॥

ಶುಶ್ರೂಷಾಂ ಪರಿಚರ್ಯಾಂ ಚ ಕರೋತ್ಯವಿಮನಾಃ ಸದಾ ।
ಸುಪ್ರತೀತಾ ವಿನೀತಾ ಚ ಸಾ ನಾರೀ ಧರ್ಮಭಾಗಿನೀ ॥೪೬॥

ಯಾವ ಸ್ತ್ರೀಯು ಪರಿಶುದ್ಧವಾದ ಅಂತಃಕರಣವುಳ್ಳವಳಾಗಿರುವಳೋ, ಪತಿಶುಶ್ರೂಷೆಯಲ್ಲಿ ಕುಶಲಳೋ, ಪುತ್ರವತಿಯೋ, ಪತಿಗೆ ಪ್ರಿಯಳಾಗಿರು ವಳೋ, ಪತಿಯನ್ನು ತನ್ನ ಪ್ರಾಣಗಳಿಗೆ ಸಮಾನವನ್ನಾಗಿ ಭಾವಿಸಿರುವಳೋ– ಅಂತಹವಳು ಪುಣ್ಯಕ್ಕೆ ಭಾಗಿಯಾಗುತ್ತಾಳೆ. ಯಾವ ಸ್ತ್ರೀಯು ಪ್ರಸನ್ನ ವಾದ ಮನಸ್ಸಿನಿಂದ ಪತಿಯ ಸೇವೆಯಲ್ಲಿಯೂ–ಶುಶ್ರೂಷೆಯಲ್ಲಿಯೂ

ಯಾವಾಗಲೂ ನಿರತಳಾಗಿರುವಳೋ, ಪತಿಯ ವಿಷಯದಲ್ಲಿ ಅಚಲವಾದ ವಿಶ್ವಾಸವನ್ನಿಟ್ಟಿರುವಳೋ, ವಿನಯಶೀಲಳೋ–ಅಂತಹವಳು ಪುಣ್ಯಕ್ಕೆ ಭಾಗಿಯಾಗುತ್ತಾಳೆ.

ನ ಕಾಮೇಷು ನ ಭೋಗೇಷು ನೈಶ್ವರ್ಯೇ ನ ಸುಖೇ ತಥಾ ।
ಸ್ಪೃಹಾ ಯಸ್ಯಾ ಯಥಾ ಪತ್ಯೌ ಸಾ ನಾರೀ ಧರ್ಮಭಾಗಿನೀ ॥೪೭॥

ಯಾವಳಿಗೆ ಪತಿಯಲ್ಲಿರುವಷ್ಟು ಬಯಕೆಯು ಕಾಮವಿಷಯಗಳಲ್ಲಾಗಲೀ, ಭೋಗವಸ್ತುಗಳಲ್ಲಾಗಲೀ, ಐಶ್ವರ್ಯದಲ್ಲಾಗಲೀ, ಸುಖದಲ್ಲಾಗಲೀ ಇರುವುದಿಲ್ಲವೋ–ಅಂತಹ ಸಾಧ್ವಿಯು ಪುಣ್ಯಕ್ಕೆ ಭಾಗಿಯಾಗುತ್ತಾಳೆ.

ಕಲ್ಯೋತ್ಥಾನರತಿರ್ನಿತ್ಯಂ ಗೃಹಶುಶ್ರೂಷಣೇ ರತಾ ।
ಸುಸಮ್ಮೃಷ್ಟಕ್ಷಯಾ ಚೈವ ಗೋಶಕೃತ್ಕೃತಲೇಪನಾ ॥೪೮॥

ಅಗ್ನಿಕಾರ್ಯಪರಾ ನಿತ್ಯಂ ಸದಾ ಪುಷ್ಪಬಲಿಪ್ರದಾ ।
ದೇವತಾತಿಥಿಭೃತ್ಯಾನಾಂ ನಿರ್ವಾಪ್ಯ ಪತಿನಾ ಸಹ ॥೪೯॥

ಶೇಷಾನ್ನಮುಪಭುಞ್ಜಾನಾ ಯಥಾನ್ಯಾಯಂ ಯಥಾವಿಧಿ ।
ತುಷ್ಟಪುಷ್ಟಜನಾ ನಿತ್ಯಂ ನಾರೀ ಧರ್ಮೇಣ ಯುಜ್ಯತೇ ॥೫೦॥

ಯಾವಳು ಪ್ರಾತಃಕಾಲದಲ್ಲಿ ಬಹಳ ಬೇಗ ಏಳುವ ಅಭಿರುಚಿಯುಳ್ಳವಳಾಗಿರುವಳೋ, ಎದ್ದೊಡನೆಯೇ ಗೃಹಕೃತ್ಯದಲ್ಲಿ ತೊಡಗುವಳೋ, ಮನೆಯನ್ನು ಗುಡಿಸಿ ಸಗಣಿಯಿಂದ ಸಾರಿಸಿ ಚೊಕ್ಕಟವಾಗಿಟ್ಟಿರುವಳೋ, ಪತಿಯೊಡನೆ ಅಗ್ನಿಹೋತ್ರಮಾಡುವಳೋ, ದೇವತೆಗಳಿಗೆ ಪುಷ್ಪಬಲಿಯನ್ನು ಅರ್ಪಿಸುವಳೋ, ಪತಿಯೊಡನೆ ದೇವತೆಗಳನ್ನು ಪೂಜಿಸಿ ಅತಿಥಿಗಳಿಗೂ ಸೇವಕರಿಗೂ ಭೋಜನಮಾಡಿಸಿದನಂತರ ಉಳಿದ ಅನ್ನವನ್ನು ಯಥಾವಿಧಿಯಾಗಿ ಭುಂಜಿಸುವಳೋ, ಮನೆಯಲ್ಲಿನ ಜನರು ಹೃಷ್ಟ-ಪುಷ್ಟರಾಗಿರುವಂತೆ ನೋಡಿಕೊಳ್ಳುವಳೋ–ಅಂತಹ ಸಾಧ್ವಿಯು ಪುಣ್ಯಕ್ಕೆ ಭಾಗಿಯಾಗುತ್ತಾಳೆ.

ಶ್ವಶ್ರೂಶ್ವಶುರಯೋಃ ಪಾದೌ ಜೋಷಯನ್ತೀ ಗುಣಾನ್ವಿತಾ ।
ಮಾತಾಪಿತೃಪರಾ ನಿತ್ಯಂ ಯಾ ನಾರೀ ಸಾ ತಪೋಧನಾ ॥೫೧॥

ಬ್ರಾಹ್ಮಣಾನ್ದುರ್ಬಲಾನಾಥಾನ್ದೀನಾನ್ಧಕೃಪಣಾಂಸ್ತಥಾ ।
ಬಿಭರ್ತ್ಯನ್ನೇನ ಯಾ ನಾರೀ ಸಾ ಪತಿವ್ರತಭಾಗಿನೀ ॥೫೨॥

ಯಾವ ಸ್ತ್ರೀಯು ಸದ್ಗುಣಗಳಿಂದ ಕೂಡಿದವಳಾಗಿ ಅತ್ತೆ-ಮಾವಂದಿರ ಚರಣಸೇವೆಯಲ್ಲಿ ಆಸಕ್ತಳಾಗಿರುವಳೋ, ತನ್ನ ತಂದೆ-ತಾಯಿಗಳ ವಿಷಯ ದಲ್ಲಿಯೂ ಭಕ್ತಿಭಾವದಿಂದಿರುವಳೋ–ಅಂತಹವಳು ನಿಶ್ಚಯವಾಗಿಯೂ ತಪೋಧನಳೇ ಸರಿ. (ಪತಿಯ, ಅತ್ತೆ-ಮಾವಂದಿರ ಮತ್ತು ತಂದೆ-ತಾಯಿಗಳ ಸೇವೆಯೇ ಅವಳಿಗೊಂದು ಮಹಾತಪಸ್ಸಾಗಿರುತ್ತದೆ.) ಬ್ರಾಹ್ಮಣರನ್ನೂ, ದುರ್ಬಲರನ್ನೂ, ಅನಾಥರನ್ನೂ, ದೀನರನ್ನೂ, ಕುರುಡರನ್ನೂ, ದರಿದ್ರ ರನ್ನೂ–ಯಾವಳು ಅನ್ನವನ್ನಿಟ್ಟು ಪೋಷಿಸುವಳೋ–ಅಂತಹವಳು ಪತಿವ್ರತಾಧರ್ಮದ ಫಲಕ್ಕೆ ಭಾಗಿಯಾಗುತ್ತಾಳೆ.

ವ್ರತಂ ಚರತಿ ಯಾ ನಿತ್ಯಂ ದುಶ್ಚರಂ ಲಘುಸತ್ತ್ವಯಾ ।
ಪತಿಚಿತ್ತಾ ಪತಿಹಿತಾ ಸಾ ಪತಿವ್ರತಭಾಗಿನೀ ॥೫೩॥

ಅಲ್ಪಶಕ್ತಿಯವಳು ಮಾಡಲಾಗದ ಅತ್ಯಂತಕಠಿನವಾದ ವ್ರತವನ್ನು (ಪತಿಸೇವೆಯನ್ನು) ಯಾವಳು ನಿತ್ಯವೂ ಮಾಡುವಳೋ, ಪತಿಯಲ್ಲಿಯೇ ನೆಟ್ಟ ಮನಸ್ಸುಳ್ಳವಳಾಗಿರುವಳೋ, ಪತಿಯ ಹಿತದಲ್ಲಿಯೇ ಯಾವಾಗಲೂ ಆಸಕ್ತಳಾಗಿರುವಳೋ–ಅಂತಹವಳು ಪತಿವ್ರತಾಧರ್ಮದ ಫಲಕ್ಕೆ ಭಾಗಿನಿ ಯಾಗುತ್ತಾಳೆ.

ಪುಣ್ಯಮೇತತ್ತಪಶ್ಚೈತತ್ಸ್ವರ್ಗಶ್ಚೈಷ ಸನಾತನಃ ।
ಯಾ ನಾರೀ ಭರ್ತೃಪರಮಾ ಭವೇದ್ಭರ್ತೃವ್ರತಾ ಸತೀ ॥೫೪॥

ಯಾವ ಸಾಧ್ವಿಯು ಪತಿವ್ರತಾಧರ್ಮವನ್ನು ಪರಿಪಾಲಿಸುತ್ತಾ ಪತಿಯ ಸೇವೆಯಲ್ಲಿಯೇ ನಿರತಳಾಗಿರುವಳೋ–ಅಂತಹವಳಿಗೆ ಪತಿಯಸೇವೆಯೆಂಬ ಈ ಕಾರ್ಯವೇ ಮಹಾಪುಣ್ಯಪ್ರಾಪಕವಾಗುತ್ತದೆ. ಅದೇ ಅವಳಿಗೆ ಮಹತ್ತರವಾದ ತಪಸ್ಸೂ, ಸನಾತನವಾದ ಸ್ವರ್ಗವೂ (ಸ್ವರ್ಗಕ್ಕೆ ಸಾಧನವೂ) ಆಗಿದೆ.

ಪತಿರ್ಹಿ ದೇವೋ ನಾರೀಣಾಂ ಪತಿರ್ಬನ್ಧುಃ ಪತಿರ್ಗತಿಃ ।
ಪತ್ಯಾ ಸಮಾ ಗತಿರ್ನಾಸ್ತಿ ದೈವತಂ ವಾ ಯಥಾ ಪತಿಃ ॥೫೫॥

ಸ್ತ್ರೀಗೆ ಪತಿಯೇ ದೈವವು ; ಪತಿಯೇ ಬಂಧುವು ; ಪತಿಯೇ ಪರ

ಮಾಶ್ರಯನು. ಸ್ತ್ರೀಗೆ ಪತಿಗೆ ಸಮಾನವಾದ ಆಶ್ರಯವು ಬೇರೆ ಯಾವುದೂ ಇರುವುದಿಲ್ಲ. ದೇವನು ಕೂಡ ಪತಿಗೆ ಸಮಾನವಾದ ಆಶ್ರಯನಾಗಲಾರನು."

ಪಾರ್ವತಿಯು ಈಶ್ವರನ ಕಡೆಗೆ ತಿರುಗಿ ಹೇಳುತ್ತಾಳೆ :

ಪತಿಪ್ರಸಾದಃ ಸ್ವರ್ಗೋ ವಾ ತುಲ್ಯೋ ನಾರ್ಯಾ ನ ವಾ ಭವೇತ್ ।
ಅಹಂ ಸ್ವರ್ಗಂ ನ ಹೀಚ್ಛೇಯಂ ತ್ವಯ್ಯಪ್ರೀತೇ ಮಹೇಶ್ವರೇ ॥೫೬॥

"ದೇವದೇವನೇ! ಒಂದುಕಡೆ ಪತಿಯ ಅನುಗ್ರಹ ಮತ್ತೊಂದು ಕಡೆ ಸ್ವರ್ಗ–ಇವೆರಡೂ ಸಾಧ್ವಿಗೆ ಸಮಾನವಾಗಿರಬಹುದು ಅಥವಾ ಇಲ್ಲದಿರಬಹುದು. ಪ್ರಾಣನಾಥನಾದ, ಮಹೇಶ್ವರನಾದ ನೀನು ಸುಪ್ರೀತನಾಗದಿದ್ದರೆ ನಾನು ಮಾತ್ರ ಸ್ವರ್ಗವನ್ನೂ ಇಚ್ಛಿಸುವುದಿಲ್ಲ. (ಪತಿಯು ಪ್ರಸನ್ನನಾಗಿರುವುದೇ ನನಗೆ ಸ್ವರ್ಗಸುಖ.)

ಯದ್ಯಕಾರ್ಯಮಧರ್ಮಂ ವಾ ಯದಿ ವಾ ಪ್ರಾಣನಾಶನಮ್ ।
ಪತಿರ್ಬ್ರೂಯಾದ್ದರಿದ್ರೋ ವಾ ವ್ಯಾಧಿತೋ ವಾ ಕಥಂಚನ ॥೫೭॥

ಆಪನ್ನೋ ರಿಪುಸಂಸ್ಥೋ ವಾ ಬ್ರಹ್ಮಶಾಪಾರ್ದಿತೋಽಪಿ ವಾ ।
ಆಪದ್ಧರ್ಮಾನನುಪ್ರೇಕ್ಷ್ಯ ತತ್ಕಾರ್ಯಮವಿಶಙ್ಕಯಾ ॥೫೮॥

ಪತಿಯು ದರಿದ್ರನಾಗಿರಲಿ, ಯಾವುದಾದರೂ ರೋಗದಿಂದ ಪೀಡಿತನಾಗಿರಲಿ, ಯಾವುದೇ ಆಪತ್ತಿನಲ್ಲಿರಲಿ, ಶತ್ರುಗಳ ಮಧ್ಯದಲ್ಲಿರಲಿ, ಬ್ರಾಹ್ಮಣಶಾಪದಿಂದ ಪೀಡಿತನಾಗಿರಲಿ–ಸತಿಯಾದವಳು ಅವನು ಹೇಳಿದಂತೆ ನಡೆದುಕೊಳ್ಳಬೇಕು. ಆ ಸಮಯದಲ್ಲಿ ಅವನು ಹೇಳುವುದು ಅಕಾರ್ಯವಾಗಿದ್ದರೂ, ಅಧರ್ಮವಾಗಿದ್ದರೂ, ಪ್ರಾಣನಾಶಕವಾಗಿದ್ದರೂ–ಆಪದ್ಧರ್ಮವೆಂದು ಭಾವಿಸಿ ಯಾವ ಶಂಕೆಯೂ ಇಲ್ಲದೇ ಆ ಕಾರ್ಯವನ್ನು ಮಾಡಿಬಿಡಬೇಕು.

ದೇವನೇ! ನಿನ್ನ ಅಣತಿಯಂತೆ ನಾನು ಈ ಸ್ತ್ರೀಧರ್ಮವನ್ನು ಹೇಳಿರುವೆನು. ಯಾವ ಸ್ತ್ರೀಯು ನಾನು ಹೇಳಿರುವ ಈ ಸ್ತ್ರೀಧರ್ಮಾನುಸಾರವಾಗಿ ನಡೆದುಕೊಳ್ಳುವಳೋ–ಅವಳು ಪತಿವ್ರತಾಧರ್ಮದ ಫಲಕ್ಕೆ ಭಾಗಿಯಾಗುವಳು."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಪರ್ವತರಾಜಕುಮಾರಿಯು ಹೇಳಿದ ಸ್ತ್ರೀಧರ್ಮವನ್ನು ಕೇಳಿದನಂತರ ಮಹಾದೇವನು ಅವಳನ್ನು ಸಮ್ಮಾನಿಸಿದನು. ಬಳಿಕ ಎಲ್ಲ ಅನುಚರರಿಂದ ಸಮಾವೃತರಾಗಿದ್ದ ಜನರನ್ನು ಬೀಳ್ಕೊಟ್ಟನು. ಭೂತಗಣಗಳೂ, ನದಿಗಳೂ, ಗಂಧರ್ವಾಪ್ಸರೆಯರೂ ಶಿವನಿಗೆ ತಲೆಬಾಗಿ ನಮಸ್ಕರಿಸಿ ತಮ್ಮ ತಮ್ಮ ನಿವಾಸಗಳಿಗೆ ತೆರಳಿದರು."

೧೪೬ನೆಯ ಅಧ್ಯಾಯವು ಮುಗಿಯಿತು.

೧೪೭ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ವಂಶಪರಂಪರೆಯ ವಿವರಣೆ :
ಶಂಕರನಿಂದ ಶ್ರೀಕೃಷ್ಣನ ಮಹಿಮಾವರ್ಣನೆ

* ಋಷಿಗಳು ಹೇಳುತ್ತಾರೆ :

ಪಿನಾಕಿನ್ಭಗನೇತ್ರಘ್ನ ಸರ್ವಲೋಕನಮಸ್ಕೃತ ।
ಮಾಹಾತ್ಮ್ಯಂ ವಾಸುದೇವಸ್ಯ ಶ್ರೋತುಮಿಚ್ಛಾಮಿ ಶಙ್ಕರ ॥೧॥

"ಪಿನಾಕಿಯೇ! ಭಗದೇವತೆಯ ನೇತ್ರಾಪಹಾರಕನೇ! ಸರ್ವಲೋಕ ನಮಸ್ಕೃತನೇ! ವಾಸುದೇವನ ಮಾಹಾತ್ಮ್ಯವನ್ನು ಕೇಳಲು ಇಚ್ಛಿಸಿದ್ದೇನೆ. ಹೇಳುವ ಕೃಪೆಮಾಡು."

ಈಶ್ವರನು ಹೇಳುತ್ತಾನೆ :

ಪಿತಾಮಹಾದಪಿ ವರಃ ಶಾಶ್ವತಃ ಪುರುಷೋ ಹರಿಃ ।
ಕೃಷ್ಣೋ ಜಾಮ್ಬೂನದಾಭಾಸೋ ವ್ಯಭ್ರೇ ಸೂರ್ಯ ಇವೋದಿತಃ ॥೨॥

* ಈ ಅಧ್ಯಾಯವು 'ಋಷಯ ಊಚುಃ' ಎಂಬುದರಿಂದ ಪ್ರಾರಂಭವಾಗುತ್ತದೆ. ಹೇಗೆ ಯಾವ ಸಮಯದಲ್ಲಿ ಋಷಿಗಳು ಈ ಪ್ರಶ್ನೆಯನ್ನು ಕೇಳಿದರು ಎಂಬುದು ವ್ಯಕ್ತವಾಗಿಲ್ಲ. ೧೪೦ನೆಯ ಅಧ್ಯಾಯದಿಂದ ಈ ಹಿಂದಿನ ಅಧ್ಯಾಯದವರೆಗೂ ನಾರದರು ಉಮಾಮಹೇಶ್ವರಸಂವಾದದ ಕಥೆಯನ್ನು ಶ್ರೀಕೃಷ್ಣನ ಸನ್ನಿಧಿಯಲ್ಲಿ

"ಪೂಜ್ಯನಾದ ಸನಾತನನಾದ ಶ್ರೀಕೃಷ್ಣನು ಬ್ರಹ್ಮನಿಗಿಂತಲೂ ಶ್ರೇಷ್ಠನಾದವನು. ಜಾಂಬೂನದದ (ಚಿನ್ನದ) ಕಾಂತಿಯಂತೆ ಕಾಂತಿಯುಳ್ಳವನು. ಮೋಡಗಳಿಂದ ರಹಿತವಾದ ಆಕಾಶದಲ್ಲಿ ಉದಯಿಸಿದ ಸೂರ್ಯನಂತೆ ಮಹಾತೇಜಸ್ವಿಯು.

ದಶಬಾಹುರ್ಮಹಾತೇಜಾ ದೇವತಾರಿನಿಷೂದನಃ |
ಶ್ರೀವತ್ಸಾಙ್ಕೋ ಹೃಷೀಕೇಶಃ ಸರ್ವದೈವತಪೂಜಿತಃ ||೩||

ಹತ್ತು ತೋಳುಗಳನ್ನು ಹೊಂದಿರುವ, ಮಹಾತೇಜಸ್ವಿಯಾದ, ದೇವತೆಗಳ ಶತ್ರುಗಳನ್ನು ನಾಶಗೊಳಿಸುವ, ಶ್ರೀವತ್ಸವೆಂಬ ಮಚ್ಚೆಯಿಂದ ವಿಭೂಷಿತನಾದ ಹೃಷೀಕೇಶನು ಸರ್ವದೇವತೆಗಳಿಂದಲೂ ಪೂಜಿಸಲ್ಪಡುತ್ತಾನೆ.

ಬ್ರಹ್ಮಾ ತಸ್ಯೋದರಭವಸ್ತಸ್ಯಾಹಂ ಚ ಶಿರೋಭವಃ |
ಶಿರೋರುಹೇಭ್ಯೋ ಜ್ಯೋತೀಂಷಿ ರೋಮಭ್ಯಶ್ಚ ಸುರಾಸುರಾಃ ||೪||

ಬ್ರಹ್ಮನು ಶ್ರೀಮನ್ನಾರಾಯಣನ ಉದರದಿಂದ (ನಾಭಿಯಿಂದ) ಹುಟ್ಟಿದನು. ನಾನು ಅವನ ತಲೆಯಿಂದ ಹುಟ್ಟಿರುವೆನು. ಅವನ ತಲೆಯ ಕೂದಲುಗಳಿಂದ ಅಖಿಲವಾದ ನಕ್ಷತ್ರತಾರೆಗಳು ಹುಟ್ಟಿದುವು. ಅವನ ಶರೀರದ ರೋಮಗಳಿಂದ ದೇವತೆಗಳೂ ಮತ್ತು ಅಸುರರೂ ಹುಟ್ಟಿದರು.

ಋಷಯೋ ದೇಹಸಮ್ಭೂತಾಸ್ತಸ್ಯ ಲೋಕಾಶ್ಚ ಶಾಶ್ವತಾಃ |
ಪಿತಾಮಹಗೃಹಂ ಸಾಕ್ಷಾತ್ಸರ್ವದೇವಗೃಹಂ ಚ ಸಃ ||೫||

ಸಮಸ್ತಋಷಿಗಳೂ ಮತ್ತು ಸನಾತನವಾದ ಸಮಸ್ತಲೋಕಗಳೂ ಶ್ರೀಹರಿಯ ಶರೀರದಿಂದಲೇ ಹುಟ್ಟಿದುವು. ಆದುದರಿಂದ ಶ್ರೀಹರಿಯೇ ಪಿತಾಮಹನಿಗೂ ಆಶ್ರಯನಾಗಿದ್ದಾನೆ. ಸಕಲದೇವತೆಗಳಿಗೂ ಆಶ್ರಯನಾಗಿದ್ದಾನೆ.

ಋಷಿಗಳ ಸಮೂಹದಲ್ಲಿ ಹೇಳುತ್ತಿದ್ದಾರೆ. ೧೪೬ನೆಯ ಅಧ್ಯಾಯದಲ್ಲಿ ಈ ಪ್ರಕರಣವು ಪೂರ್ಣವಾದಂತಿದೆ. ಪ್ರಾರಂಭದಲ್ಲಿ 'ಋಷಯ ಊಚುಃ' ಎಂಬುದು ಎಲ್ಲ ಪುಸ್ತಕಗಳಲ್ಲಿದ್ದರೂ ಶ್ಲೋಕದಲ್ಲಿ ಒಬ್ಬನೇ (ಋಷಿಯ) ಈಶ್ವರನನ್ನು ಪ್ರಶ್ನಿಸಿದಂತಿದೆ. ಈ ಸಂದರ್ಭದಲ್ಲಿ 'ಪಾರ್ವತ್ಯುವಾಚ' ಎಂದು ಇದ್ದಿದ್ದರೆ ಸಂಗತವಾಗುತ್ತಿತ್ತೆಂದು ತೋರುತ್ತದೆ. ಈ ಪ್ರಕಣದಲ್ಲಿರುವ ಎರಡು ಅಧ್ಯಾಯಗಳೂ ಭಂಡಾರ್‌ಕರ್ ರಿಸರ್ಚ್‌ಇನ್‌ಸ್ಟಿಟ್ಯೂಟ್‌ನವರು ಪ್ರಕಟಿಸಿರುವ ಪುಸ್ತಕದಲ್ಲಿ ಕಂಡುಬರುವುದಿಲ್ಲ.

ಸೋಽಸ್ಯಾಃ ಪೃಥಿವ್ಯಾಃ ಕೃತ್ಸ್ನಾಯಾಃ ಸ್ರಷ್ಟಾ ತ್ರಿಭುವನೇಶ್ವರಃ ।
ಸಂಹರ್ತಾ ಚೈವ ಭೂತಾನಾಂ ಸ್ಥಾವರಸ್ಯ ಚರಸ್ಯ ಚ ॥೬॥

ಸಮಗ್ರವಾದ ಈ ಪೃಥ್ವಿಯ ಸೃಷ್ಟಿಗೂ ಅವನೇ ಕಾರಣನು. ಮೂರು ಲೋಕಗಳಿಗೂ ಶ್ರೀಹರಿಯೇ ಪ್ರಭುವಾಗಿದ್ದಾನೆ. ಚರಾಚರಪ್ರಾಣಿಗಳ ಸಂಹಾರಕನೂ ಅವನೇ ಆಗಿದ್ದಾನೆ.

ಸ ಹಿ ದೇವವರಃ ಸಾಕ್ಷಾದ್ದೇವನಾಥಃ ಪರಂತಪಃ ।
ಸರ್ವಜ್ಞಃ ಸರ್ವಸಂಶ್ಲಿಷ್ಟಃ ಸರ್ವಗಃ ಸರ್ವತೋಮುಖಃ ॥೭॥

ಶ್ರೀಕೃಷ್ಣನು ದೇವತೆಗಳೆಲ್ಲರಿಗೂ ಶ್ರೇಷ್ಠನು. ದೇವತೆಗಳ ರಕ್ಷಕನು. ಶತ್ರುಗಳಿಗೆ ತಾಪವನ್ನುಂಟುಮಾಡುವವನು. ಸರ್ವಜ್ಞನು. ಎಲ್ಲರಲ್ಲಿಯೂ ಸೇರಿಕೊಂಡಿರುವವನು. ಸರ್ವವ್ಯಾಪಕನು. ಸರ್ವತ್ರ ಮುಖವಿರತಕ್ಕವನು.

ಪರಮಾತ್ಮಾ ಹೃಷೀಕೇಶಃ ಸರ್ವವ್ಯಾಪೀ ಮಹೇಶ್ವರಃ ।
ನ ತಸ್ಮಾತ್ಪರಮಂ ಭೂತಂ ತ್ರಿಷು ಲೋಕೇಷು ಕಿಂಚನ ॥೮॥

ಶ್ರೀಕೃಷ್ಣನೇ ಪರಮಾತ್ಮನು. ಇಂದ್ರಿಯಗಳಿಗೆ ಪ್ರೇರಕನು. ಸರ್ವ ವ್ಯಾಪಿಯು. ಮಹೇಶ್ವರನು. ಮೂರು ಲೋಕಗಳಲ್ಲಿಯೂ ಅವನಿಗಿಂತಲೂ ಅಧಿಕವಾದುದು ಬೇರೆ ಯಾವುದೂ ಇಲ್ಲ. (ಏಕೋ ವಿಷ್ಣುರ್ಮಹದ್ಭೂತಂ ಎಂಬ ಪುರಾಣವಚನವೂ ಇದನ್ನೇ ಪ್ರತಿಪಾದಿಸುತ್ತದೆ.)

ಸನಾತನೋ ವೈ ಮಧುಹಾ ಗೋವಿನ್ದ ಇತಿ ವಿಶ್ರುತಃ ।
ಸ ಸರ್ವಾನ್ಪಾರ್ಥಿವಾನ್ಸಂಖ್ಯೇ ಘಾತಯಿಷ್ಯತಿ ಮಾನದಃ ॥೯॥

ಶ್ರೀಹರಿಯು ಸನಾತನನು. ಮಧುವೆಂಬ ರಾಕ್ಷಸನನ್ನು ಸಂಹರಿಸಿದ ವನು. 'ಗೋವಿಂದ' ಎಂಬ ಹೆಸರಿನಿಂದ ವಿಖ್ಯಾತನಾಗಿರುವನು. ಸಜ್ಜನ ರನ್ನು ಆದರಿಸುವ ಶ್ರೀಕೃಷ್ಣನು ಎಲ್ಲ ರಾಜರನ್ನೂ ಯುದ್ಧದಲ್ಲಿ ಸಂಹರಿಸುವನು.

ಸುರಕಾರ್ಯಾರ್ಥಮುತ್ಪನ್ನೋ ಮಾನುಷಂ ವಪುರಾಸ್ಥಿತಃ ।
ನ ಹಿ ದೇವಗಣಾಃ ಶಕ್ತಾಸ್ತ್ರಿವಿಕ್ರಮವಿನಾಕೃತಾಃ ॥೧೦॥

ದೇವತೆಗಳ ಕಾರ್ಯಸಿದ್ಧಿಗಾಗಿ ಭೂಮಿಯಲ್ಲಿ ಮಾನವಶರೀರವನ್ನು ಧರಿಸಿ ಅವತರಿಸಿದ್ದಾನೆ. ಭಗವಾನ್ ತ್ರಿವಿಕ್ರಮನ ಸಹಾಯವಿಲ್ಲದೇ ದೇವತೆಗಳು ಯಾವ ಕಾರ್ಯವನ್ನೂ ಮಾಡಲಾರರು.

ಭುವನೇ ದೇವಕಾರ್ಯಾಣಿ ಕರ್ತುಂ ನಾಯಕವರ್ಜಿತಾಃ ।
ನಾಯಕಃ ಸರ್ವಭೂತಾನಾಂ ಸರ್ವದೇವನಮಸ್ಕೃತಃ ॥೧೧॥

ಪ್ರಪಂಚದಲ್ಲಿ ನಾಯಕನಿಲ್ಲದೇ ದೇವಕಾರ್ಯಗಳನ್ನು ಮಾಡಲು ದೇವತೆಗಳೂ ಸಮರ್ಥರಲ್ಲ. ಸರ್ವದೇವತೆಗಳಿಂದಲೂ ನಮಸ್ಕರಿಸಲ್ಪಡುವ ಶ್ರೀಕೃಷ್ಣನು ಸರ್ವಪ್ರಾಣಿಗಳಿಗೂ ನಾಯಕನಾಗಿದ್ದಾನೆ.

ಏತಸ್ಯ ದೇವನಾಥಸ್ಯ ದೇವಕಾರ್ಯಪರಸ್ಯ ಚ ।
ಬ್ರಹ್ಮಭೂತಸ್ಯ ಸತತಂ ಬ್ರಹ್ಮರ್ಷಿಶರಣಸ್ಯ ಚ ॥೧೨॥

ಬ್ರಹ್ಮಾ ವಸತಿ ಗರ್ಭಸ್ಥಃ ಶರೀರೇ ಸುಖಸಂಸ್ಥಿತಃ ।
ಶರ್ವಃ ಸುಖಂ ಸಂಶ್ರಿತಶ್ಚ ಶರೀರೇ ಸುಖಸಂಸ್ಥಿತಃ ॥೧೩॥

ದೇವತೆಗಳ ರಕ್ಷಣೆಯಲ್ಲಿಯೂ ಮತ್ತು ಕಾರ್ಯಸಾಧನೆಯಲ್ಲಿಯೂ ತೊಡಗಿರುವ, ಬ್ರಹ್ಮಸ್ವರೂಪನಾದ, ಬ್ರಹ್ಮರ್ಷಿಗಳಿಗೆ ಶರಣ್ಯನಾದ ವಾಸುದೇವನ ಶರೀರದಲ್ಲಿ ಬ್ರಹ್ಮನು ಗರ್ಭಸ್ಥನಾಗಿ ಸುಖವಾಗಿ ವಾಸಮಾಡು ತ್ತಿದ್ದಾನೆ. ಶಂಕರನೂ ಕೂಡ (ನಾನೂ ಕೂಡ) ಶ್ರೀಕೃಷ್ಣನ ಶರೀರದಲ್ಲಿ ಆಶ್ರಯವನ್ನು ಹೊಂದಿ ಸುಖವಾಗಿದ್ದಾನೆ.

ಸರ್ವಾಃ ಸುಖಂ ಸಂಶ್ರಿತಾಶ್ಚ ಶರೀರೇ ತಸ್ಯ ದೇವತಾಃ ।
ಸ ದೇವಃ ಪುಣ್ಡರೀಕಾಕ್ಷಃ ಶ್ರೀಗರ್ಭಃ ಶ್ರೀಸಹೋಷಿತಃ ॥೧೪॥

ಎಲ್ಲ ದೇವತೆಗಳೂ ಶ್ರೀಹರಿಯ ಶರೀರದಲ್ಲಿ ಆಶ್ರಯವನ್ನು ಕಲ್ಪಿಸಿಕೊಂಡು ಸುಖವಾಗಿ ವಾಸಮಾಡುತ್ತಿದ್ದಾರೆ. ಪುಂಡರೀಕಾಕ್ಷನಾದ ಆ ಶ್ರೀಹರಿಯು ಶ್ರೀಗರ್ಭನು (ಶ್ರೀನಿವಾಸನು). ಲಕ್ಷ್ಮೀದೇವಿಯೊಡನೆ ವಾಸಮಾಡುತ್ತಿದ್ದಾನೆ.

ಶಾರ್ಙ್ಗಚಕ್ರಾಯುಧಃ ಖಡ್ಗೀ ಸರ್ವನಾಗರಿಪುಧ್ವಜಃ ।
ಉತ್ತಮೇನ ಸ ಶೀಲೇನ ದಮೇನ ಚ ಶಮೇನ ಚ ॥೧೫॥

ಶ್ರೀಹರಿಯು ಶಾರ್ಙ್ಗವೆಂಬ ಧನುಸ್ಸನ್ನು ಧರಿಸಿದ್ದಾನೆ. ಸುದರ್ಶನ ಚಕ್ರಾಯುಧಧಾರಿಯು. ನಂದಕಖಡ್ಗಪಾಣಿಯು. ಸರ್ಪಗಳ ಶತ್ರುವಾದ ಗರುಡನನ್ನು ಧ್ವಜದಲ್ಲಿ ಧರಿಸಿದ್ದಾನೆ. ಉತ್ತಮಶೀಲದಿಂದಲೂ ಶಮ-ದಮ ಗಳಿಂದಲೂ ಯುಕ್ತನಾಗಿದ್ದಾನೆ.

ಪರಾಕ್ರಮೇಣ ವೀರ್ಯೇಣ ವಪುಷಾ ದರ್ಶನೇನ ಚ ।
ಆರೋಹೇಣ ಪ್ರಮಾಣೇನ ಧೈರ್ಯೇಣಾರ್ಜವಸಮ್ಪದಾ ॥೧೬॥

ಆನೃಶಂಸ್ಯೇನ ರೂಪೇಣ ಬಲೇನ ಚ ಸಮನ್ವಿತಃ ।
ಅಸ್ತ್ರೈಃ ಸಮುದಿತಃ ಸರ್ವೈರ್ದಿವ್ಯೈರದ್ಭುತದರ್ಶನೈಃ ॥೧೭॥

ಶ್ರೀಹರಿಯು ಪರಾಕ್ರಮದಿಂದಲೂ ವೀರ್ಯದಿಂದಲೂ, ಸುಂದರ ವಾದ ಶರೀರದಿಂದಲೂ ಪುಣ್ಯಕರವಾದ ದರ್ಶನದಿಂದಲೂ, ಔನ್ನತ್ಯ ದಿಂದಲೂ ಆಕಾರಪ್ರಮಾಣದಿಂದಲೂ, ಧೈರ್ಯದಿಂದಲೂ ಸರಳತೆ ಯಿಂದಲೂ, ಕಾರುಣ್ಯದಿಂದಲೂ, ರೂಪದಿಂದಲೂ ಬಲದಿಂದಲೂ ಸಂಪನ್ನನಾಗಿದ್ದಾನೆ. ಅದ್ಭುತವಾಗಿ ಕಾಣುವ ಸಕಲದಿವ್ಯಾಸ್ತ್ರಗಳಿಂದಲೂ ಯುಕ್ತನಾಗಿದ್ದಾನೆ.

ಯೋಗಮಾಯಃ ಸಹಸ್ರಾಕ್ಷೋ ನಿರಪಾಯೋ ಮಹಾಮನಾಃ ।
ವೀರೋ ಮಿತ್ರಜನಶ್ಲಾಘೀ ಜ್ಞಾತಿಬನ್ಧುಜನಪ್ರಿಯಃ ॥೧೮॥

ಕ್ಷಮಾವಾಂಶ್ಚಾನಹಂವಾದೀ ಬ್ರಹ್ಮಣ್ಯೋ ಬ್ರಹ್ಮನಾಯಕಃ ।
ಭಯಹರ್ತಾ ಭಯಾರ್ತಾನಾಂ ಮಿತ್ರಾಣಾಂ ನನ್ದಿವರ್ಧನಃ ॥೧೯॥

ಶ್ರೀಹರಿಯು ಯೋಗಮಾಯೆಯಿಂದ ಕೂಡಿರುವವನು. ಸಾವಿರ ಕಣ್ಣುಗಳನ್ನು ಹೊಂದಿರುವವನು. ಅವಿನಾಶಿಯು. ಉದಾರವಾದ ಮನಸ್ಸುಳ್ಳ ವನು ; ವೀರನು. ಮಿತ್ರಜನರಿಂದ ಶ್ಲಾಘಿಸಲ್ಪಡತಕ್ಕವನು. (ಮಿತ್ರರನ್ನು ಶ್ಲಾಘಿಸುವವನು ; ಮಿತ್ರರನ್ನು ಶ್ಲಾಘ್ಯರಾಗುವಂತೆ ಮಾಡತಕ್ಕವನು.) ಜ್ಞಾತಿಗಳಿಗೂ, ಬಂಧುಗಳಿಗೂ ಪ್ರಿಯನಾದವನು. ಕ್ಷಮಾವಂತನು. ಅಹಂಕಾರರಹಿತನು. ಬ್ರಾಹ್ಮಣಪ್ರಿಯನು. ಬ್ರಹ್ಮನಿಗೂ ನಾಯಕನು. (ವೇದೋದ್ಧಾರಕನು). ಭಯದಿಂದ ಪೀಡಿತರಾದವರಿಗೆ ಭಯವನ್ನು ಹೋಗಲಾಡಿಸತಕ್ಕವನು. ಮಿತ್ರರಿಗೆ ಆನಂದವನ್ನುಂಟುಮಾಡತಕ್ಕವನು.

ಶರಣ್ಯಃ ಸರ್ವಭೂತಾನಾಂ ದೀನಾನಾಂ ಪಾಲನೇ ರತಃ ।
ಶ್ರುತವಾನರ್ಥಸಮ್ಪನ್ನಃ ಸರ್ವಭೂತನಮಸ್ಕೃತಃ ॥೨೦॥

ಸಮಾಶ್ರಿತಾನಾಂ ವರದಃ ಶತ್ರೂಣಾಮಪಿ ಧರ್ಮವಿತ್ ।
ನೀತಿಜ್ಞೋ ನೀತಿಸಂಪನ್ನೋ ಬ್ರಹ್ಮವಾದೀ ಜಿತೇನ್ದ್ರಿಯಃ ॥೨೧॥

ಮಹಾವಿಷ್ಣುವು ಸಮಸ್ತಪ್ರಾಣಿಗಳಿಗೂ ಶರಣ್ಯನು. ದೀನರ ಪಾಲನೆಯಲ್ಲಿ ಆಸಕ್ತನಾಗಿರತಕ್ಕವನು. ಶಾಸ್ತ್ರಜ್ಞಾನಸಂಪನ್ನನು. ಧನವಂತನು. ಸರ್ವಪ್ರಾಣಿಗಳಿಂದಲೂ ವಂದಿಸಲ್ಪಡತಕ್ಕವನು. ಆಶ್ರಯಿಸಿದ ಶತ್ರುಗಳಿಗೂ ವರವನ್ನು ದಯಪಾಲಿಸತಕ್ಕವನು. ಧರ್ಮವನ್ನು ತಿಳಿದವನು. ನೀತಿಯನ್ನು ತಿಳಿದವನು. ನೀತಿಸಂಪನ್ನನು. ಬ್ರಹ್ಮವಾದಿಯು. ಜಿತೇಂದ್ರಿಯನು.

ಭವಾರ್ಥಮಿಹ ದೇವಾನಾಂ ಬುದ್ಧ್ಯಾ ಪರಮಯಾ ಯುತಃ ।
ಪ್ರಾಜಾಪತ್ಯೇ ಶುಭೇ ಮಾರ್ಗೇ ಮಾನವೇ ಧರ್ಮಸಂಸ್ಕೃತೇ ॥೨೨॥

ಸಮುತ್ಪತ್ಸ್ಯತಿ ಗೋವಿನ್ದೋ ಮನೋರ್ವಂಶೇ ಮಹಾತ್ಮನಃ ।
ಅಙ್ಗೋ ನಾಮ ಮನೋಃ ಪುತ್ರೋ ಅನ್ತರ್ಧಾಮಾ ತತಃ ಪರಃ ॥೨೩॥

ಮಹಾಬುದ್ಧಿಯಿಂದ ಯುಕ್ತನಾದ ಭಗವಾನ್ ಗೋವಿಂದನು ದೇವತೆಗಳ ಅಭ್ಯುದಯಕ್ಕಾಗಿ ಪ್ರಜಾಪತಿಯ ಶುಭದಾಯಕವಾದ ಮಾರ್ಗವನ್ನನುಸರಿಸಿ (ಸೃಷ್ಟಿಯ ಮಾರ್ಗವನ್ನು ಆಶ್ರಯಿಸಿ) ಧರ್ಮದಿಂದ ಸಂಸ್ಕೃತವಾದ ಮಹಾತ್ಮನಾದ ಮನುವಿನ ವಂಶದಲ್ಲಿ ಅವತರಿಸುತ್ತಾನೆ. ಅಂಗ ಎಂಬುವವನು ಮನುವಿನ ಮಗನಾಗಿ ಹುಟ್ಟುತ್ತಾನೆ. ಅಂಗನಿಗೆ ಅಂತರ್ಧಾಮಾ ಎಂಬ ಮಗನು ಹುಟ್ಟುತ್ತಾನೆ.

ಅನ್ತರ್ಧಾಮ್ನೋ ಹವಿರ್ಧಾಮಾ ಪ್ರಜಾಪತಿರನಿನ್ದಿತಃ ।
ಪ್ರಾಚೀನಬರ್ಹಿರ್ಭವಿತಾ ಹವಿರ್ಧಾಮ್ನಃ ಸುತೋ ಮಹಾನ್ ॥೨೪॥

ಅಂತರ್ಧಾಮನಿಗೆ ಹವಿರ್ಧಾಮಾ ಎಂಬ ನಿಷ್ಕಳಂಕನಾದ ಪ್ರಜಾಪತಿಯು ಹುಟ್ಟುತ್ತಾನೆ. ಹವಿರ್ಧಾಮನ ಪುತ್ರನು ಮಹಾತ್ಮನಾದ ಪ್ರಾಚೀನಬರ್ಹಿಯು.

ತಸ್ಯ ಪ್ರಚೇತಃಪ್ರಮುಖಾ ಭವಿಷ್ಯನ್ತಿ ದಶಾತ್ಮಜಾಃ ।
ಪ್ರಾಚೇತಸಸ್ತಥಾ ದಕ್ಷೋ ಭವಿತೇಹ ಪ್ರಜಾಪತಿಃ ॥೨೫॥

ಪ್ರಾಚೀನಬರ್ಹಿಗೆ ಪ್ರಚೇತಸನೇ ಮೊದಲಾದ ಹತ್ತು ಮಕ್ಕಳು ಹುಟ್ಟು ತ್ತಾರೆ. ಪ್ರಚೇತಸನ ಮಗನು ದಕ್ಷಪ್ರಜಾಪತಿಯು.

ದಾಕ್ಷಾಯಣ್ಯಾಸ್ತಥಾದಿತ್ಯೋ ಮನುರಾದಿತ್ಯತಸ್ತಥಾ ।
ಮನೋಶ್ಚ ವಂಶಜ ಇಲಾ ಸುದ್ಯುಮ್ನಶ್ಚ ಭವಿಷ್ಯತಿ ॥೨೬॥

ದಕ್ಷಕನ್ಯೆಯಾದ ಅದಿತಿಯಿಂದ ಆದಿತ್ಯನು (ಸೂರ್ಯನು) ಹುಟ್ಟುತ್ತಾನೆ. ಸೂರ್ಯನಿಗೆ ಮನುವೆಂಬ ಪುತ್ರನು ಜನಿಸುವನು. ಇಲಾ ಎಂಬುವಳು ಮನುವಿನ ವಂಶದಲ್ಲಿ ಹುಟ್ಟುತ್ತಾಳೆ. ಮುಂದೆ ಅವಳೇ ವಸಿಷ್ಠರ ಅನುಗ್ರಹದಿಂದ ಪುರುಷತ್ವವನ್ನು ಪಡೆದು ಸುದ್ಯುಮ್ನನಾಗಿ ಪರಿವರ್ತನೆ ಗೊಳ್ಳುತ್ತಾಳೆ.

ಬುಧಾತ್ಪುರೂರವಾಶ್ಚಾಪಿ ತಸ್ಮಾದಾಯುರ್ಭವಿಷ್ಯತಿ ।
ನಹುಷೋ ಭವಿತಾ ತಸ್ಮಾದ್ಯಯಾತಿಸ್ತಸ್ಯ ಚಾತ್ಮಜಃ ॥೨೭॥

ಬುಧ ಮತ್ತು ಇಲಾ ಇವರ ಸಮಾಗಮದಿಂದ ಪುರೂರವನು ಹುಟ್ಟುತ್ತಾನೆ. ಆಯುವು ಪುರೂರವನ ಮಗನು. ಆಯುವಿನ ಪುತ್ರನು ನಹುಷನು. ಯಯಾತಿಯು ನಹುಷನ ಪುತ್ರನು.

ಯದುಸ್ತಸ್ಮಾನ್ಮಹಾಸತ್ತ್ವಃ ಕ್ರೋಷ್ಟಾ ತಸ್ಮಾದ್ಭವಿಷ್ಯತಿ ।
ಕ್ರೋಷ್ಟುಶ್ಚೈವ ಮಹಾನ್ಪುತ್ರೋ ವೃಜಿನೀವಾನ್ಭವಿಷ್ಯತಿ ॥೨೮॥

ಯಯಾತಿಗೆ ಮಹಾಬಲಶಾಲಿಯಾದ ಯದು ಎಂಬುವನು ಹುಟ್ಟು ತ್ತಾನೆ. ಯದುವಿನಿಂದ ಕ್ರೋಷ್ಟ ಎಂಬುವನು ಹುಟ್ಟುತ್ತಾನೆ. ಕ್ರೋಷ್ಟನಿಗೆ ವೃಜಿನೀವಂತನೆಂಬ ಮಗನು ಹುಟ್ಟುತ್ತಾನೆ.

ವೃಜಿನೀವತಶ್ಚ ಭವಿತಾ ಉಷಙ್ಗುರಪರಾಜಿತಃ ।
ಉಷಙ್ಗೋರ್ಭವಿತಾ ಪುತ್ರಃ ಶೂರಶ್ಚಿತ್ರರಥಸ್ತಥಾ ॥೨೯॥

ವೃಜಿನೀವಂತನಿಗೆ ಅಪರಾಜಿತನಾದ ಉಷಂಗು ಎಂಬುವನು ಹುಟ್ಟು ತ್ತಾನೆ. ಉಷಂಗುವಿಗೆ ಚಿತ್ರರಥನೆಂಬ ಶೂರನಾದ ಮಗನು ಜನಿಸುವನು.

ತಸ್ಯ ತ್ವವರಜಃ ಪುತ್ರಃ ಶೂರೋ ನಾಮ ಭವಿಷ್ಯತಿ ।

ಚಿತ್ರರಥನ ಕಿರಿಯ ಮಗನು ಶೂರ ಎಂಬ ಹೆಸರಿನಿಂದ ವಿಖ್ಯಾತನಾಗುತ್ತಾನೆ.

ತೇಷಾಂ ವಿಖ್ಯಾತವೀರ್ಯಾಣಾಂ ಚರಿತ್ರಗುಣಶಾಲಿನಾಮ್ ।
ಯಜ್ವನಾಂ ಸುವಿಶುದ್ಧಾನಾಂ ವಂಶೇ ಬ್ರಾಹ್ಮಣಸಮ್ಮತೇ ॥೩೦॥

ಸ ಶೂರಃ ಕ್ಷತ್ರಿಯಶ್ರೇಷ್ಠೋ ಮಹಾವೀರ್ಯೋ ಮಹಾಯಶಾಃ ।
ಸ್ವವಂಶವಿಸ್ತರಕರಂ ಜನಯಿಷ್ಯತಿ ಮಾನದಃ ॥೩೧॥

ವಸುದೇವ ಇತಿ ಖ್ಯಾತಂ ಪುತ್ರಮಾನಕದುನ್ದುಭಿಮ್ ।
ತಸ್ಯ ಪುತ್ರಶ್ಚತುರ್ಬಾಹುರ್ವಾಸುದೇವೋ ಭವಿಷ್ಯತಿ ॥೩೨॥

ವಿಖ್ಯಾತವೀರ್ಯರಾದ, ಚಾರಿತ್ರಸಂಪನ್ನರಾದ, ಗುಣಶಾಲಿಗಳಾದ, ಯಜ್ಞಶೀಲರಾದ, ಪರಿಶುದ್ಧರಾದ, ಯಾದವರ ಬ್ರಾಹ್ಮಣಸಮ್ಮತವಾದ ವಂಶದಲ್ಲಿ–ಕ್ಷತ್ರಿಯಶ್ರೇಷ್ಠನಾದ, ಮಹಾವೀರ್ಯನಾದ, ಮಹಾಯಶೋವಂತನಾದ, ಮಾನದನಾದ ಶೂರರಾಜನು ತನ್ನ ವಂಶವನ್ನು ವಿಸ್ತರಿಸುವ ಆನಕದುಂದುಭಿ ಎಂಬ ಉಪನಾಮದಿಂದ ವಿಖ್ಯಾತನಾಗುವ ವಸುದೇವನೆಂಬ ಪುತ್ರನನ್ನು ಪಡೆಯುತ್ತಾನೆ. ವಸುದೇವನ ಮಗನು ನಾಲ್ಕು ತೋಳುಗಳುಳ್ಳ ವಾಸುದೇವನಾಗುತ್ತಾನೆ.

ದಾತಾ ಬ್ರಾಹ್ಮಣಸತ್ಕರ್ತಾ ಬ್ರಹ್ಮಭೂತೋ ದ್ವಿಜಪ್ರಿಯಃ ।
ರಾಜ್ಞೋ ಮಾಗಧಸಂರುದ್ಧಾನ್ಮೋಕ್ಷಯಿಷ್ಯತಿ ಯಾದವಃ ॥೩೩॥

ವಾಸುದೇವನು ಮಹಾದಾನಿಯಾಗುತ್ತಾನೆ. ಬ್ರಾಹ್ಮಣರನ್ನು ಸತ್ಕರಿಸುತ್ತಾನೆ. ಬ್ರಾಹ್ಮಣರಿಗೆ ಪ್ರಿಯನಾಗಿರುತ್ತಾನೆ. ಸದಾ ಬ್ರಹ್ಮಭಾವದಲ್ಲಿರು ತ್ತಾನೆ. ಮಗಧರಾಜನಾದ ಜರಾಸಂಧನಿಂದ ಬಂಧಿಸಲ್ಪಡುವ ಎಲ್ಲ ರಾಜರನ್ನೂ ವಿಮೋಚಿಸುತ್ತಾನೆ.

ಜರಾಸನ್ಧಂ ತು ರಾಜಾನಂ ನಿರ್ಜಿತ್ಯ ಗಿರಿಗಹ್ವರೇ ।
ಸರ್ವಪಾರ್ಥಿವರತ್ನಾಢ್ಯೋ ಭವಿಷ್ಯತಿ ಸ ವೀರ್ಯವಾನ್ ॥೩೪॥

ವೀರ್ಯವಂತನಾದ ಶ್ರೀಕೃಷ್ಣನ ಗಿರಿಗಹ್ವರದಲ್ಲಿ ಜರಾಸಂಧರಾಜ

ನನ್ನು ಜಯಿಸಿ ಬಂಧಮುಕ್ತರಾದ ಎಲ್ಲ ರಾಜರೂ ಕಾಣಿಕೆಯ ರೂಪದಲ್ಲಿ ಕೊಡುವ ರತ್ನಗಳಿಂದಲೇ ಸಂಪದ್ಭರಿತನಾಗುತ್ತಾನೆ.

ಪೃಥಿವ್ಯಾಮಪ್ರತಿಹತೋ ವೀರ್ಯೇಣ ಚ ಭವಿಷ್ಯತಿ ।
ವಿಕ್ರಮೇಣ ಚ ಸಮ್ಪನ್ನಃ ಸರ್ವಪಾರ್ಥಿವಪಾರ್ಥಿವಃ ॥೩೫॥

ರಾಜಾಧಿರಾಜನಾಗುವ ಶ್ರೀಕೃಷ್ಣನು ಪೃಥ್ವಿಯಲ್ಲಿ ತನ್ನ ವೀರ್ಯ-ಪರಾಕ್ರಮಗಳಿಂದ ಅಪ್ರತಿಹತನಾಗುತ್ತಾನೆ. ಇತರರಿಂದ ಎದುರಿಸಲ್ಪಡದವ ನಾಗುತ್ತಾನೆ.

ಶೂರಸೇನೇಷು ಭೂತ್ವಾ ಸ ದ್ವಾರಕಾಯಾಂ ವಸನ್ಪ್ರಭುಃ ।
ಪಾಲಯಿಷ್ಯತಿ ಗಾಂ ದೇವೀಂ ವಿಜಿತ್ಯ ನಯವಿತ್ಸದಾ ॥೩೬॥

ನೀತಿಶಾಸ್ತ್ರವಿಶಾರದನಾದ ಶ್ರೀಕೃಷ್ಣನು ಶೂರಸೇನದೇಶಗಳಲ್ಲಿ (ಮಧುರಾಮಂಡಲದಲ್ಲಿ) ಹುಟ್ಟಿ ದ್ವಾರಕಾಪಟ್ಟಣಕ್ಕೆ ಹೋಗಿ ಅದನ್ನೇ ರಾಜಧಾನಿಯನ್ನಾಗಿ ಮಾಡಿಕೊಂಡು ಎಲ್ಲ ರಾಜರನ್ನು ಜಯಿಸಿ ಪೃಥ್ವೀದೇವಿ ಯನ್ನು ಪರಿಪಾಲಿಸುತ್ತಾನೆ.

ತಂ ಭವನ್ತಃ ಸಮಾಸಾದ್ಯ ವಾಙ್ಮಾಲ್ಯೈರರ್ಹಣೈರ್ವರೈಃ ।
ಅರ್ಚಯನ್ತು ಯಥಾನ್ಯಾಯಂ ಬ್ರಹ್ಮಾಣಮಿವ ಶಾಶ್ವತಮ್ ॥೩೭॥

ನೀವೆಲ್ಲರೂ ಆ ಭಗವಂತನ ಬಳಿಗೆ ಹೋಗಿ ವಾಗ್ರೂಪವಾದ ಮಾಲೆ ಗಳಿಂದಲೂ ಶ್ರೇಷ್ಠವಾದ ಪೂಜೋಪಚಾರಗಳಿಂದಲೂ ಶಾಶ್ವತನಾದ ಪರಬ್ರಹ್ಮನನ್ನು ಅರ್ಚಿಸುವಂತೆ ಅವನನ್ನು ಪೂಜಿಸಿ.

ಯೋ ಹಿ ಮಾಂ ದ್ರಷ್ಟುಮಿಚ್ಛೇತ ಬ್ರಹ್ಮಾಣಂ ಚ ಪಿತಾಮಹಮ್ ।
ದ್ರಷ್ಟವ್ಯಸ್ತೇನ ಭಗವಾನ್ವಾಸುದೇವಃ ಪ್ರತಾಪವಾನ್ ॥೩೮॥

ಯಾವನು ನನ್ನನ್ನು ಸಂದರ್ಶಿಸಲು ಬಯಸುವನೋ, ಪಿತಾಮಹ ಬ್ರಹ್ಮನನ್ನು ಸಂದರ್ಶಿಸಲು ಬಯಸುವನೋ–ಅವನು ಪ್ರತಾಪವಂತನಾದ ವಾಸುದೇವನನ್ನು ಸಂದರ್ಶಿಸಲೇಬೇಕು.

ದೃಷ್ಟೇ ತಸ್ಮಿನ್ನಹಂ ದೃಷ್ಟೋ ನ ಮೇಽತ್ರಾಸ್ತಿ ವಿಚಾರಣಾ ।
ಪಿತಾಮಹೋ ವಾ ದೇವೇಶ ಇತಿ ವಿತ್ತ ತಪೋಧನಾಃ ॥೩೯॥

ತಪೋಧನರೇ! ವಾಸುದೇವನನ್ನು ಸಂದರ್ಶಿಸಿದರೆ ನನ್ನನ್ನು ಸಂದರ್ಶಿಸಿದಂತೆಯೇ–ಎಂದು ತಿಳಿಯಿರಿ. ದೇವೇಶ್ವರನಾದ, ಪಿತಾಮಹನ ದರ್ಶನವಾಯಿತೆಂದೂ ಭಾವಿಸಿರಿ.

ಸ ಯಸ್ಯ ಪುಣ್ಡರೀಕಾಕ್ಷಃ ಪ್ರೀತಿಯುಕ್ತೋ ಭವಿಷ್ಯತಿ ।
ತಸ್ಯ ದೇವಗಣಃ ಪ್ರೀತೋ ಬ್ರಹ್ಮಪೂರ್ವೋ ಭವಿಷ್ಯತಿ ॥೪೦॥

ಯಾವನ ವಿಷಯದಲ್ಲಿ ಕಮಲಲೋಚನನಾದ ಶ್ರೀಕೃಷ್ಣನು ಸುಪ್ರೀತನಾಗುವನೋ–ಅಂತಹವನ ವಿಷಯದಲ್ಲಿ ಬ್ರಹ್ಮನೇ ಮೊದಲಾದ ದೇವತೆಗಳ ಸಮೂಹವೂ ಸುಪ್ರೀತವಾಗುವುದು.

ಯಶ್ಚ ತಂ ಮಾನವೇ ಲೋಕೇ ಸಂಶ್ರಯಿಷ್ಯತಿ ಕೇಶವಮ್ ।
ತಸ್ಯ ಕೀರ್ತಿರ್ಜಯಶ್ಚೈವ ಸ್ವರ್ಗಶ್ಚೈವ ಭವಿಷ್ಯತಿ ॥೪೧॥

ಮನುಷ್ಯಲೋಕದಲ್ಲಿ ಯಾವನು ಶ್ರೀಕೃಷ್ಣನನ್ನು ಆಶ್ರಯಿಸುವನೋ–ಅವನಿಗೆ ಇಲ್ಲಿ ಕೀರ್ತಿಯೂ ವಿಜಯವೂ ಲಭಿಸುತ್ತದೆ. ಅವಸಾನಾನಂತರ ದಲ್ಲಿ ಸ್ವರ್ಗಪ್ರಾಪ್ತಿಯೂ ಆಗುತ್ತದೆ.

ಧರ್ಮಾಣಾಂ ದೇಶಿಕಃ ಸಾಕ್ಷಾತ್ಸ ಭವಿಷ್ಯತಿ ಧರ್ಮಭಾಕ್ ।
ಧರ್ಮವದ್ಭಿಃ ಸ ದೇವೇಶೋ ನಮಸ್ಕಾರ್ಯಃ ಸದೋದ್ಯತೈಃ ॥೪೨॥

ದೇವೇಶನಾದ ಆ ವಾಸುದೇವನು ಧರ್ಮವನ್ನು ಉಪದೇಶಿಸುವ ಧರ್ಮಾಚಾರ್ಯನಾಗಿ (ಗೀತೋಪದೇಶಕನಾಗಿ) ಧರ್ಮಫಲಕ್ಕೂ ಭಾಗಿಯಾಗುತ್ತಾನೆ. ಆದುದರಿಂದ ಧರ್ಮಾತ್ಮರಾದ ಪುರುಷರು ಸದಾ ಪ್ರಯತ್ನಶೀಲರಾಗಿ ದೇವೇಶ್ವರನಾದ ವಾಸುದೇವನಿಗೆ ನಮಸ್ಕಾರಮಾಡಬೇಕು.

ಧರ್ಮ ಏವ ಪರೋ ಹಿ ಸ್ಯಾಸ್ತಸ್ಮಿನ್ನಭ್ಯರ್ಚಿತೇ ವಿಭೌ ।
ಸ ಹಿ ದೇವೋ ಮಹಾತೇಜಾಃ ಪ್ರಜಾಹಿತಚಿಕೀರ್ಷಯಾ ॥೪೩॥

ಧರ್ಮಾರ್ಥಂ ಪುರುಷವ್ಯಾಘ್ರ ಋಷಿಕೋಟೀಃ ಸಸರ್ಜ ಹ ।
ತಾಃ ಸೃಷ್ಟಾಸ್ತೇನ ವಿಭುನಾ ಪರ್ವತೇ ಗನ್ಧಮಾದನೇ ॥೪೪॥

ಸನತ್ಕುಮಾರಪ್ರಮುಖಾಸ್ತಿಷ್ಠನ್ತಿ ತಪಸಾನ್ವಿತಾಃ ।
ತಸ್ಮಾತ್ಸ ವಾಗ್ಮೀ ಧರ್ಮಜ್ಞೋ ನಮಸ್ಯೋ ದ್ವಿಜಪುಙ್ಗವಾಃ ॥೪೫॥

ದ್ವಿಜಶ್ರೇಷ್ಠರೇ! ಸರ್ವವ್ಯಾಪಿಯಾದ ಶ್ರೀಕೃಷ್ಣನನ್ನು ಪೂಜಿಸುವುದರಿಂದ ಪರಮಧರ್ಮದ ಸಿದ್ಧಿಯಾಗುತ್ತದೆ. ಅವನು ಮಹಾತೇಜಸ್ವಿಯಾದ ದೇವತೆಯು. ಪುರುಷಸಿಂಹನಾದ ವಾಸುದೇವನು ಪ್ರಜೆಗಳಿಗೆ ಹಿತವನ್ನುಂಟು ಮಾಡುವ ಇಚ್ಛೆಯಿಂದ ಧರ್ಮಪ್ರಚಾರದ ಸಲುವಾಗಿ ಕೋಟಿ-ಕೋಟಿ ಋಷಿಗಳನ್ನು ಸೃಷ್ಟಿಸಿದನು. ಅವನಿಂದ ಸೃಷ್ಟಿಸಲ್ಪಟ್ಟ ಸನತ್ಕುಮಾರಪ್ರಮುಖರಾದ ಋಷಿಗಳು ಗಂಧಮಾದನಪರ್ವತದಲ್ಲಿ ತಪಶ್ಚರಣೆಯಲ್ಲಿ ನಿರತರಾಗಿದ್ದಾರೆ. ಆದುದರಿಂದ ಧರ್ಮಜ್ಞನಾದ, ವಾಗ್ಮಿಯಾದ, ವಾಸುದೇವನು ನಿಮ್ಮೆಲ್ಲರ ನಮಸ್ಕಾರಗಳಿಗೂ ಯೋಗ್ಯನಾಗಿದ್ದಾನೆ.

ದಿವಿ ಶ್ರೇಷ್ಠೋ ಹಿ ಭಗವಾನ್ಹರಿರ್ನಾರಾಯಣಃ ಪ್ರಭುಃ ।
ವನ್ದಿತೋ ಹಿ ಸ ವನ್ದೇತ ಮಾನಿತೋ ಮಾನಯೀತ ಚ ।
ಅರ್ಹಿತಶ್ಚಾರ್ಹಯೇನ್ನಿತ್ಯಂ ಪೂಜಿತಃ ಪ್ರತಿಪೂಜಯೇತ್ ॥೪೬॥

ದೇವಲೋಕದಲ್ಲಿರುವ ಪೂಜ್ಯನಾದ, ಪ್ರಭುವಾದ, ಸರ್ವಪಾಪಗಳನ್ನು ನಿವಾರಿಸುವ ಶ್ರೀಮನ್ನಾರಾಯಣನು ಸರ್ವಶ್ರೇಷ್ಠನು. ಯಾವನು ಅವನನ್ನು ವಂದಿಸುವನೋ ಅವನನ್ನು ಹರಿಯೂ ವಂದಿಸುತ್ತಾನೆ. ಆದರಿಸಿದವನನ್ನು ಆದರಿಸುತ್ತಾನೆ. ಅರ್ಚಿಸಿದವನನ್ನು ಅರ್ಚಿಸುತ್ತಾನೆ. ಪೂಜಿಸಿದವನನ್ನು ಪೂಜಿಸುತ್ತಾನೆ.

ದೃಷ್ಟಃ ಪಶ್ಯೇದಹರಹಃ ಸಂಶ್ರಿತಃ ಪ್ರತಿಸಂಶ್ರಯೇತ್ ।
ಅರ್ಚಿತಶ್ಚಾರ್ಚಯೇನ್ನಿತ್ಯಂ ಸ ದೇವೋ ದ್ವಿಜಸತ್ತಮಾಃ ॥೪೭॥

ದ್ವಿಜಶ್ರೇಷ್ಠರೇ! ಯಾವನು ಶ್ರೀಹರಿಯನ್ನು ಅನುದಿನವೂ ನೋಡುವನೋ–ಅಂತಹವನನ್ನು ಶ್ರೀಹರಿಯೂ ಅನುದಿನವೂ ಕೃಪಾದೃಷ್ಟಿಯಿಂದ ನೋಡುವನು. ಆಶ್ರಯಿಸಿದವನನ್ನು ಆಶ್ರಯಿಸುತ್ತಾನೆ. ಪೂಜಿಸಿದವನನ್ನು ಪೂಜಿಸುತ್ತಾನೆ.

ಏತತ್ತಸ್ಯಾನವದ್ಯಸ್ಯ ವಿಷ್ಣೋರ್ವೈ ಪರಮಂ ವ್ರತಮ್ ।
ಆದಿದೇವಸ್ಯ ಮಹತಃ ಸಜ್ಜನಾಚರಿತಂ ಸದಾ ॥೪೮॥

ಹೀಗೆ ಮಾಡುವುದು ಪ್ರಶಂಸ್ಯನಾದ ಆದಿದೇವನಾದ ಮಹಾವಿಷ್ಣುವಿನ ಶ್ರೇಷ್ಠವಾದ ವ್ರತವಾಗಿದೆ. ಈ ವ್ರತವನ್ನೇ ಸತ್ಪುರುಷರು ಯಾವಾಗಲೂ ಆಚರಿಸಿರುತ್ತಾರೆ.

ಭುವನೇಽಭ್ಯರ್ಚಿತೋ ನಿತ್ಯಂ ದೇವೈರಪಿ ಸನಾತನಃ ।
ಅಭಯೇನಾನುರೂಪೇಣ ಯುಜ್ಯನ್ತೇ ತಮನುವ್ರತಾಃ ॥೯೯॥

ಮಹಾವಿಷ್ಣುವು ಶಾಶ್ವತನು ; ಸನಾತನನು. ಆದುದರಿಂದ ತ್ರಿಭುವನದಲ್ಲಿರುವ ದೇವತೆಗಳೂ ಅವನನ್ನು ಪೂಜಿಸುತ್ತಾರೆ. ಯಾರು ಅವನನ್ನೇ ಮಹಾಶ್ರಯನನ್ನಾಗಿ ಭಾವಿಸಿರುವನೋ, ಪರಮಭಕ್ತರೋ–ಅಂತಹವರು ತಮ್ಮ ದೃಢವಿಶ್ವಾಸಕ್ಕೆ ಅನುರೂಪವಾದ ಅಭಯವನ್ನು ಮಹಾವಿಷ್ಣುವಿನಿಂದ ಪಡೆದುಕೊಳ್ಳುತ್ತಾರೆ.

ಕರ್ಮಣಾ ಮನಸಾ ವಾಚಾ ಸ ನಮಸ್ಯೋ ದ್ವಿಜೈಃ ಸದಾ ।
ಯತ್ನವದ್ಭಿರುಪಸ್ಥಾಯ ದ್ರಷ್ಟವ್ಯೋ ದೇವಕೀಸುತಃ ॥೫೦॥

ದ್ವಿಜರು ಮನಸ್ಸಿನಿಂದ, ಮಾತಿನಿಂದ ಮತ್ತು ಕೃತಿಯಿಂದ ಶ್ರೀಕೃಷ್ಣನನ್ನು ಸರ್ವಕಾಲದಲ್ಲಿಯೂ ನಮಿಸುತ್ತಿರಬೇಕು. ಪ್ರಯತ್ನಪೂರ್ವಕವಾಗಿ ಅವನ ಉಪಾಸನೆಯನ್ನೇ ಸದಾ ಮಾಡುತ್ತಿದ್ದು ಅವನನ್ನು ಸಂದರ್ಶಿಸಬೇಕು.

ಮುನಿಶ್ರೇಷ್ಠರೇ! ನಾನು ನಿಮಗೆ ಈ ಉತ್ತಮಮಾರ್ಗವನ್ನು ಉಪದೇಶಿಸಿದ್ದೇನೆ.

ತಂ ದೃಷ್ಟ್ವಾ ಸರ್ವಶೋ ದೇವಂ ದೃಷ್ಟಾಃ ಸ್ಯುಃ ಸುರಸತ್ತಮಾಃ ॥೫೧॥

ಶ್ರೀಕೃಷ್ಣಪರಮಾತ್ಮನನ್ನು ಭಕ್ತಿಭಾವದಿಂದ ಆರಾಧಿಸುತ್ತಾ ಎಲ್ಲೆಲ್ಲಿಯೂ ಕಾಣುವ ಯೋಗವನ್ನು ಪಡೆದರೆ ಇತರ ಸಮಸ್ತದೇವತೆಗಳನ್ನೂ ನೋಡಿದಂತೆಯೇ ಆಗುತ್ತದೆ.

ಮಹಾವರಾಹಂ ತಂ ದೇವಂ ಸರ್ವಲೋಕಪಿತಾಮಹಮ್ ।
ಅಹಂ ಚೈವ ನಮಸ್ಯಾಮಿ ನಿತ್ಯಮೇವ ಜಗತ್ಪತಿಮ್ ॥೫೨॥

ಮಹಾವರಾಹರೂಪಧರನಾದ, ಸರ್ವಲೋಕಗಳಿಗೂ ಪಿತಾಮಹನಾದ ಜಗತ್ಪತಿಯಾದ ಆ ದೇವನನ್ನು ನಾನು ಕೂಡ ಅನುದಿನವೂ ನಮಸ್ಕರಿಸುತ್ತೇನೆ.

ತತ್ರ ಚ ತ್ರಿತಯಂ ದೃಷ್ಟಂ ಭವಿಷ್ಯತಿ ನ ಸಂಶಯಃ ।
ಸಮಸ್ತಾ ಹಿ ವಯಂ ದೇವಾಸ್ತಸ್ಯ ದೇಹೇ ವಸಾಮಹೇ ॥೫೩॥

ದೇವತೆಗಳಾದ ನಾವೆಲ್ಲರೂ ಅವನ ದಿವ್ಯಶರೀರದಲ್ಲಿ ವಾಸಮಾಡುತ್ತಿ

ದ್ದೇವೆ. ಆದುದರಿಂದ ಅವನೊಬ್ಬನನ್ನು ಸಂದರ್ಶಿಸಿದರೆ ಮೂವರನ್ನು (ಬ್ರಹ್ಮ-ವಿಷ್ಣು-ಮಹೇಶ್ವರರನ್ನೂ) ಸಂದರ್ಶಿಸಿದಂತಾಗುತ್ತದೆ.

ತಸ್ಯ ಚೈವಾಗ್ರಜೋ ಭ್ರಾತಾ ಸಿತಾದ್ರಿನಿಚಯಪ್ರಭಃ ।
ಹಲೀ ಬಲ ಇತಿ ಖ್ಯಾತೋ ಭವಿಷ್ಯತಿ ಧರಾಧರಃ ॥೩೪॥

ಪೃಥ್ವಿಯನ್ನು ಧರಿಸಿರುವ ಶೇಷನಾಗನು ಶ್ರೀಕೃಷ್ಣನ ಹಿರಿಯಣ್ಣನಾಗಿ ಹುಟ್ಟುತ್ತಾನೆ. ಅವನು ಹಿಮವತ್ಪರ್ವತಸಮೂಹದ ಪ್ರಭೆಯಂತೆ ಪ್ರಭೆ ಯುಳ್ಳವನಾಗಿರುತ್ತಾನೆ. ನೇಗಿಲನ್ನೇ ಆಯುಧವನ್ನಾಗಿ ಧರಿಸುವ ಅವನು ಬಲದೇವ ಎಂಬ ಹೆಸರಿನಿಂದ ವಿಖ್ಯಾತನಾಗುತ್ತಾನೆ.

ತ್ರಿಶಿರಾಸ್ತಸ್ಯ ದಿವ್ಯಶ್ಚ ಶಾತಕುಮ್ಭಮಯೋ ದ್ರುಮಃ ।
ಧ್ವಜಸ್ತೃಣೇನ್ದ್ರೋ ದೇವಸ್ಯ ಭವಿಷ್ಯತಿ ರಥಾಶ್ರಿತಃ ॥೩೫॥

ಬಲದೇವನ ರಥದ ಮೇಲೆ ಮೂರು ರೆಂಬೆಗಳಿಂದ ಯುಕ್ತವಾದ ಸುವರ್ಣಮಯವಾದ, ದಿವ್ಯವಾದ ತಾಲವೃಕ್ಷವು ಧ್ವಜರೂಪದಲ್ಲಿ ಶೋಭಿಸು ತ್ತಿರುತ್ತದೆ.

ಶಿರೋ ನಾಗೈರ್ಮಹಾಭೋಗೈಃ ಪರಿಕೀರ್ಣಂ ಮಹಾತ್ಮಭಿಃ ।
ಭವಿಷ್ಯತಿ ಮಹಾಬಾಹೋಃ ಸರ್ವಲೋಕೇಶ್ವರಸ್ಯ ಚ ॥೩೬॥

ಸರ್ವಲೋಕೇಶ್ವರನಾದ ಮಹಾಬಾಹುವಾದ ಬಲದೇವನ ಶಿರಸ್ಸು ವಿಸ್ತಾರವಾದ ಹೆಡೆಗಳನ್ನು ಬಿಚ್ಚಿರುವ ಮಹಾಸರ್ಪಗಳಿಂದ ಪರಿವೃತವಾಗಿರು ತ್ತದೆ.

ಚಿನ್ತಿತಾನಿ ಸಮೇಷ್ಯನ್ತಿ ಶಸ್ತ್ರಾಣ್ಯಸ್ತ್ರಾಣಿ ಚೈವ ಹ ।
ಅನನ್ತಶ್ಚ ಸ ಏವೋಕ್ತೋ ಭಗವಾನ್ಹರಿರವ್ಯಯಃ ॥೩೭॥

ಅವನು ಚಿಂತಿಸಿದ ಅಸ್ತ್ರಗಳಾಗಲೀ ಶಸ್ತ್ರಗಳಾಗಲೀ ಒಡನೆಯೇ ಅವನ ಬಳಿಗೆ ಬಂದುಬಿಡುತ್ತವೆ. ಶಾಶ್ವತನಾದ, ಪೂಜ್ಯನಾದ ಹರಿಯೇ ಅನಂತ ನೆಂದು (ಶೇಷನಾಗನೆಂದು) ಹೇಳಲ್ಪಟ್ಟಿದ್ದಾನೆ.

ಸಮಾದಿಷ್ಟಶ್ಚ ವಿಬುಧೈರ್ದರ್ಶಯ ತ್ವಮಿತಿ ಪ್ರಭೋ ।

ಸುಪರ್ಣೋ ಯಸ್ಯ ವೀರ್ಯೇಣ ಕಶ್ಯಪಸ್ಯಾತ್ಮಜೋ ಬಲೀ ।
ಅನ್ತಂ ನೈವಾಶಕದ್ದ್ರಷ್ಟುಂ ದೇವಸ್ಯ ಪರಮಾತ್ಮನಃ ॥೫೮॥

ಹಿಂದೊಮ್ಮೆ ದೇವತೆಗಳೆಲ್ಲರೂ ಸೇರಿ ಗರುಡನನ್ನು 'ಪ್ರಭೋ! ತ್ವಂ ದರ್ಶಯ ಹರಿಂ' 'ಪ್ರಭುವೇ! ನೀನು ಹರಿಯನ್ನು (ಶೇಷನಾಗನನ್ನು) ತೋರಿಸು'–ಎಂದು ಆಜ್ಞಾಪಿಸಿದರು. ಗರುಡನೂ ದೇವತೆಗಳಿಗೆ ಪರಮಾತ್ಮನ ದಿವ್ಯರೂಪವನ್ನು ತೋರಿಸಲು ಪ್ರಯತ್ನಿಸಿದನು. ಆದರೆ ಕಶ್ಯಪನ ಮಗನಾದ, ಬಲಿಷ್ಠನಾದ ಸುಪರ್ಣನು ತನ್ನ ಮಹಾಶಕ್ತಿಯಿಂದಲೂ ದೇವದೇವನಾದ ಪರಮಾತ್ಮನ ಅಂತವನ್ನು ಕಾಣಲು ಸಮರ್ಥನಾಗಲಿಲ್ಲ.

ಸ ಚ ಶೇಷೋ ವಿಚರತೇ ಪರಯಾ ವೈ ಮುದಾ ಯುತಃ ।
ಅನ್ತರ್ವಸತಿ ಭೋಗೇನ ಪರಿರಭ್ಯ ವಸುನ್ಧರಾಮ್ ॥೫೯॥

ಆ ಶೇಷನಾಗನು ಮಹಾನಂದದಿಂದ ಯುಕ್ತನಾಗಿ ಸರ್ವತ್ರ ಸಂಚರಿಸುತ್ತಿರುತ್ತಾನೆ. ತನ್ನ ವಿಶಾಲವಾದ ಹೆಡೆಯಿಂದ ಪೃಥ್ವೀದೇವಿಯನ್ನು ಆಲಿಂಗನಮಾಡಿಕೊಂಡು ಪಾತಾಳಲೋಕದಲ್ಲಿ ವಾಸಮಾಡುತ್ತಿದ್ದಾನೆ.

ಯು ಏವ ವಿಷ್ಣುಃ ಸೋಽನನ್ತೋ ಭಗವಾನ್ವಸುಧಾಧರಃ ।
ಯೋ ರಾಮಃ ಸ ಹೃಷೀಕೇಶೋ ಯೋಽಚ್ಯುತಃ ಸ ಧರಾಧರಃ ॥೬೦॥

ಯಾವನು ಪೂಜ್ಯನಾದ ವಿಷ್ಣುವೋ–ಅವನೇ ಧರೆಯನ್ನು ಧರಿಸಿರುವ ಪೂಜ್ಯನಾದ ಅನಂತನೂ ಆಗಿದ್ದಾನೆ. ಯಾವನು ಬಲರಾಮನೋ–ಅವನೇ ಶ್ರೀಕೃಷ್ಣನು. ಯಾವನು ಶ್ರೀಕೃಷ್ಣನೋ–ಅವನೇ ಭೂಧರನಾದ ಶೇಷನಾಗ ರೂಪನಾದ ಬಲರಾಮನು.

ತಾವುಭೌ ಪುರುಷವ್ಯಾಘ್ರೌ ದಿವ್ಯೌ ದಿವ್ಯಪರಾಕ್ರಮೌ ।
ದ್ರಷ್ಟವ್ಯೌ ಮಾನನೀಯೌ ಚ ಚಕ್ರಲಾಙ್ಗಲಧಾರಿಣೌ ॥೬೧॥

ಆ ಕೃಷ್ಣ-ಬಲರಾಮರಿಬ್ಬರೂ ದಿವ್ಯರೂಪರೂ, ಪುರುಷಸಿಂಹರೂ, ದಿವ್ಯಪರಾಕ್ರಮರೂ, ಅನುಕ್ರಮವಾಗಿ ಚಕ್ರ-ಹಲಾಯುಧಗಳನ್ನು ಧರಿಸಿರುವವರೂ ಆಗಿದ್ದಾರೆ. ಇಬ್ಬರನ್ನೂ ಸಂದರ್ಶಿಸಬೇಕು ಮತ್ತು ಸಂಪೂಜಿಸಬೇಕು.

ತಪೋಧನರೇ! ನಿಮ್ಮನ್ನು ಅನುಗ್ರಹಿಸುವ ಸಲುವಾಗಿ ಪುಣ್ಯಪ್ರದ

ವಾದ ಬಲರಾಮ-ಕೃಷ್ಣರ ಮಹಿಮೆಯನ್ನು ಹೇಳಿರುವೆನು. ನೀವು ಪ್ರಯತ್ನ ಪೂರ್ವಕವಾಗಿ ಯದುಶ್ರೇಷ್ಠನಾದ ಶ್ರೀಕೃಷ್ಣನನ್ನು ಪೂಜಿಸುವಿರೆಂಬ ಆಶಯದಿಂದ ಹೇಳಿದ್ದೇನೆ.”

೧೪೭ನೆಯ ಅಧ್ಯಾಯವು ಮುಗಿಯಿತು.

೧೪೮ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಶ್ರೀಕೃಷ್ಣನ ಮಹಿಮೆ : ಭೀಷ್ಮನು ಯುಧಿಷ್ಠಿರನಿಗೆ ರಾಜ್ಯಭಾರ ಮಾಡಲು ಆದೇಶವಿತ್ತುದು

ನಾರದರು ಹೇಳುತ್ತಾರೆ :

ಅಥ ವ್ಯೋಮ್ನಿ ಮಹಾಞ್ಛಬ್ದಃ ಸವಿದ್ಯುತ್ಸ್ತನಯಿತ್ನುಮಾನ್ ।
ಮೇಘೈಶ್ಚ ಗಗನಂ ನೀಲಂ ಸಂರುದ್ಧಮಭವದ್ಘನೈಃ ॥೧॥

“ಶಿವನು ತಪೋಧನರಿಗೆ ಹೀಗೆ ಹೇಳಿದನಂತರ ಮಿಂಚು ಮತ್ತು ಗುಡುಗುಗಳೊಡನೆ ಸಿಡಿಲಿನ ಮಹಾಶಬ್ದವುಂಟಾಯಿತು. ದಟ್ಟವಾದ ಮೇಘ ಗಳಿಂದ ಆವೃತವಾಗಿದ್ದ ಆಕಾಶವು ನೀಲವಾಗಿ ಕಾಣುತ್ತಿದ್ದಿತು. ವರ್ಷಾಕಾಲ ದಂತೆಯೇ ಪರ್ಜನ್ಯನು ನಿರ್ಮಲವಾದ ಮಳೆಯನ್ನು ಸುರಿಸತೊಡಗಿದನು. ಘೋರವಾದ ಕತ್ತಲೆಯು ಸರ್ವತ್ರ ಆವರಿಸಿತು. ದಿಕ್ಕುಗಳೊಂದೂ ಕಾಣು ತ್ತಿರಲಿಲ್ಲ. ಆ ಸಮಯದಲ್ಲಿ ರಮ್ಯವಾದ, ಪುಣ್ಯತಮವಾದ ಸನಾತನವಾದ ಆ ದೇವಗಿರಿಯಲ್ಲಿ ಋಷಿಗಳು ಶಿವನನ್ನಾಗಲೀ ಭೂತಸಮೂಹಗಳನ್ನಾಗಲೀ ಕಾಣಲಿಲ್ಲ. ಮರುಕ್ಷಣದಲ್ಲಿಯೇ ಆಕಾಶವು ಮೇಘಗಳಿಂದ ವಿಹೀನ ವಾಯಿತು. ಅಲ್ಲಿದ್ದ ಬ್ರಾಹ್ಮಣರಲ್ಲಿ ಕೆಲವರು ತೀರ್ಥಯಾತ್ರೆಗೆ ತೆರಳಿದರು. ಉಳಿದವರು ತಮ್ಮ ತಮ್ಮ ಸ್ಥಳಗಳಿಗೆ ಪ್ರಯಾಣಮಾಡಿದರು. ಅದ್ಭುತವಾದ ಮತ್ತು ಅಚಿಂತ್ಯವಾದ ಆ ಘಟನೆಯನ್ನು ನೋಡಿ ಎಲ್ಲರೂ ವಿಸ್ಮಿತರಾದರು. ಪುರುಷಸಿಂಹನಾದ ದೇವಕೀನಂದನನೇ! ಶಂಕರನಿಗೂ ಮತ್ತು ಉಮಾ ದೇವಿಗೂ ನಿನ್ನ ಸಂಬಂಧವಾಗಿ ನಡೆದ ಸಂವಾದವನ್ನು ಕೇಳಿ ನೀನೇ ಸನಾತನಪರಬ್ರಹ್ಮವಸ್ತುವೆಂದು ನಿಶ್ಚಯಿಸಿದೆವು.* ಈ ಕಾರಣದಿಂದಲೇ

---

* ಉಮಾಮಹೇಶ್ವರಸಂವಾದದಲ್ಲಿ ಶ್ರೀಕೃಷ್ಣನ ಮಾಹಾತ್ಮ್ಯಕಥನವು ಬರುವುದಿಲ್ಲ. ಆದುದರಿಂದ ೧೪೭ನೇ ಅಧ್ಯಾಯದ ಪ್ರಾರಂಭದಲ್ಲಿ ಋಷಯ ಊಚುಃ–ಎಂಬು

ಮಹಾತ್ಮನಾದ ಶಿವನು ನಿನ್ನ ಮಹಾತ್ಮ್ಯವನ್ನು ಹಿಮವತ್ಪರ್ವತದ ಶಿಖರದಲ್ಲಿ ನಮಗೆ ಉಪದೇಶಿಸಿದನು. ಕೃಷ್ಣ! ನಿನ್ನ ತೇಜಸ್ಸು ಎರಡನೆಯದಾದ ಪರಮಾದ್ಭುತವೊಂದನ್ನು ಪ್ರಕಟಿಸಿತು. ಅದನ್ನು ನೋಡಿ ನಾವೆಲ್ಲರೂ ವಿಸ್ಮಿತರಾಗಿ ಶ್ರೀಶಂಕರನು ಹಿಂದೆ ಹೇಳಿದ್ದ ಮಾತುಗಳನ್ನೂ ಸ್ಮರಿಸಿಕೊಂಡೆವು. ಪ್ರಭುವೇ! ಮಹಾಬಾಹುವೇ! ಜನಾರ್ದನನೇ! ನಾನೀಗ ನಿನ್ನ ಸಮಕ್ಷದಲ್ಲಿ ಜಟಾಜೂಟಧರನಾದ ಗಿರೀಶನಾದ ಪರಶಿವನ ಮಾಹಾತ್ಮ್ಯವನ್ನು ಹೇಳಿದ್ದೇನೆ."

ತಪೋವನವಾಸಿಗಳಾದ ನಾರದಪ್ರಮುಖರಾದ ಮುನಿಗಳಿಂದ ಹೀಗೆ ಹೇಳಲ್ಪಟ್ಟ ಶ್ರೀಕೃಷ್ಣನು ಆ ಎಲ್ಲ ಋಷಿಗಳನ್ನೂ ಸಮಾದರಿಸಿದನು. ತತ್ಕಾಲೋಚಿತವಾದ ಸತ್ಕಾರದಿಂದ ಸಂತಸಗೊಂಡ ಋಷಿಗಳು ಶ್ರೀಕೃಷ್ಣನಿಗೆ ಹೇಳಿದರು :

ಪುನಃ ಪುನಃ ದರ್ಶಯಾಸ್ಮಾನ್ಸದೈವ ಮಧುಸೂದನ ॥೧೦॥

"ಮಧುಸೂದನನೇ! ಮತ್ತೆ-ಮತ್ತೆ ನಮಗೆ ದರ್ಶನವನ್ನು ಕೊಡು ತ್ತಿರು. ಸರ್ವಕಾಲದಲ್ಲಿಯೂ ನಿನ್ನ ದರ್ಶನವು ಲಭಿಸುವಂತಾಗಲಿ.

ನ ಹಿ ನಃ ಸಾ ರತಿಃ ಸ್ವರ್ಗೇ ಯಾ ಚ ತ್ವದ್ದರ್ಶನೇ ವಿಭೋ ।
ತಾದೃಶಂ ಚ ಮಹಾಬಾಹೋ ಯದಾಹ ಭಗವಾನ್ಭವಃ ॥೧೧॥

ಪ್ರಭುವೇ! ನಮಗೆ ನಿನ್ನನ್ನು ಸಂದರ್ಶಿಸುವುದರಲ್ಲಿ ಎಷ್ಟು ಆಸಕ್ತಿಯಿರುವುದೋ ಅಷ್ಟು ಆಸಕ್ತಿಯು ಸ್ವರ್ಗದಲ್ಲಿಯೂ ಇಲ್ಲ. ಮಹಾಬಾಹುವೇ! ಪೂಜ್ಯನಾದ ಶಿವನು ನಿನ್ನ ವಿಷಯದಲ್ಲಿ ಹೇಳಿದುದೆಲ್ಲವೂ ಸತ್ಯವೇ ಆಗಿದೆ. ಶತ್ರುಸೂದನನೇ! ಈ ದೇವರಹಸ್ಯವನ್ನು ನಿನಗೆ ಹೇಳಿ

ದಕ್ಕಿಂತಲೂ 'ಉಮೋವಾಚ' ಎಂಬುದೇ ಹೊಂದಿಕೊಳ್ಳುತ್ತದೆ. ಶಂಕರಸ್ಯೋಮಯಾಸಾರ್ಧಂ ಸಂವಾದಂ ತ್ವತ್ಕಥಾಶ್ರಯಮ್–ಎಂಬ ಈ ಶ್ಲೋಕಕ್ಕೂ ಸಮರ್ಥನೆಯು ಸಿಕ್ಕಿದಂತಾಗುತ್ತದೆ. ಆದರೆ ಈ ಪ್ರಕರಣದಲ್ಲಿ ಮಧ್ಯೆ ಮಧ್ಯೆ ಶಂಕರನು ಮುನಿಸತ್ತಮಾಃ ! ಎಂದೇ ಸಂಬೋಧಿಸಿದ್ದಾನೆ. ಪಾರ್ವತಿಯು ಪ್ರಶ್ನೆಯನ್ನು ಕೇಳಿದಳು : ಈಶ್ವರನು ಸುತ್ತಲೂ ಇದ್ದ ಋಷಿಗಳನ್ನು ಸಂಬೋಧಿಸಿ ಹೇಳಿದನು. ಎಂಬುದು ಸಂದರ್ಭೋಚಿತವಾಗಿದೆ.

ದ್ದೇವೆ. ನೀನೇ ಅರ್ಥತತ್ತ್ವಜ್ಞನಾಗಿರುವೆ. ಆದರೂ ನಮ್ಮನ್ನು ಪ್ರಶ್ನಿಸಿದೆ. ಅದರಂತೆ ನಿನ್ನ ಪ್ರೀತಿಗಾಗಿ ಗೋಪನೀಯವಾದ ಈ ರಹಸ್ಯವಿಷಯವನ್ನು ನಿನ್ನೊಡನೆ ಹೇಳಿದೆವು.

ಆದರೆ ಈ ಮೂರು ಲೋಕಗಳಲ್ಲಿಯೂ ನಿನಗೆ ತಿಳಿಯದೇ ಇರುವ ಯಾವ ವಿಷಯವೂ ಇಲ್ಲ.

ಜನ್ಮ ಚೈವ ಪ್ರಸೂತಿಶ್ಚ ಯಚ್ಚಾನ್ಯತ್ಕಾರಣಂ ವಿಭೋ ।
ವಯಂ ತು ಬಹುಚಾಪಲ್ಯಾದಶಕ್ತಾ ಗುಹ್ಯಧಾರಣೇ ॥೧೪॥

ಪ್ರಭುವೇ! ನಿನ್ನ ಅವತಾರ ; ಮಾನವಶರೀರದಲ್ಲಿ ಜನ್ಮ ; ಈ ನಿನ್ನ ಅವತಾರಕ್ಕಿದ್ದ ರಹಸ್ಯಕಾರಣ–ಈ ಎಲ್ಲ ವಿಷಯಗಳೂ ನಿನಗೆ ತಿಳಿದೇ ಇವೆ. ನಾವಾದರೋ ಚಪಲಬುದ್ಧಿಯವರಾದುದರಿಂದ ನಿನ್ನ ಅವತಾರದ ರಹಸ್ಯ ವನ್ನು ಗುಪ್ತವಾಗಿಟ್ಟುಕೊಳ್ಳಲು ಅಸಮರ್ಥರು. ಆದುದರಿಂದಲೇ ಈ ವಿಷಯವನ್ನು ನಿನ್ನೊಡನೆ ಹೇಳಿದೆವು.

ತತಃ ಸ್ಥಿತೇ ತ್ವಯಿ ವಿಭೋ ಲಘುತ್ವಾತ್ಪ್ರಲಪಾಮಹೇ ।
ನ ಹಿ ಕಿಂಚಿತ್ತದಾಶ್ಚರ್ಯಂ ಯನ್ನ ವೇತ್ತಿ ಭವಾನಿಹ ।
ದಿವಿ ವಾ ಭುವಿ ವಾ ದೇವ ಸರ್ವಂ ಹಿ ವಿದಿತಂ ತವ ॥೧೫॥

ವಿಭುವೇ! ನಾವು ಅಲ್ಪಬುದ್ಧಿಯವರಾದ ಕಾರಣದಿಂದ ನಿನ್ನ ಸಮಕ್ಷದಲ್ಲಿಯೇ ಹರಟುತ್ತಿದ್ದೇವೆ. ಸ್ವರ್ಗದಲ್ಲಾಗಲೀ, ಭೂಮಿಯಲ್ಲಾಗಲೀ ನಡೆದ ಆಶ್ಚರ್ಯಘಟನೆಗಳಲ್ಲಿ ನಿನಗೆ ತಿಳಿಯದೇ ಇರುವುದು ಯಾವುದೂ ಇಲ್ಲ. ಎಲ್ಲವನ್ನೂ ನೀನು ತಿಳಿದುಕೊಂಡಿರುವೆ.

ಸಾಧಯಾಮ ವಯಂ ಕೃಷ್ಣ ಬುದ್ಧಿಂ ಪುಷ್ಟಿಮವಾಪ್ನುಹಿ ॥೧೬॥

ಕೃಷ್ಣ! ನಾವಿನ್ನು ಹೊರಡುತ್ತೇವೆ. ನೀನು ಬುದ್ಧಿಯನ್ನೂ, ಪುಷ್ಟಿ ಯನ್ನೂ ಹೊಂದು.

ಪುತ್ರಸ್ತೇ ಸದೃಶಸ್ತಾತ ವಿಶಿಷ್ಟೋ ವಾ ಭವಿಷ್ಯತಿ ।
ಮಹಾಪ್ರಭಾವಸಂಯುಕ್ತೋ ದೀಪ್ತಿಕೀರ್ತಿಕರಃ ಪ್ರಭುಃ ॥೧೭॥

ತಾತ! ನಿನಗೆ ಸಮಾನನಾದ ಅಥವಾ ನಿನಗಿಂತಲೂ ವಿಶಿಷ್ಟನಾದ, ಮಹಾಪ್ರಭಾವಸಂಪನ್ನನಾದ, ವಂಶಕ್ಕೆ ದೀಪ್ತಿಯನ್ನೂ ಕೀರ್ತಿಯನ್ನೂ ತರುವ ಪ್ರಭಾವಶಾಲಿಯಾದ ಪುತ್ರನು ಹುಟ್ಟುತ್ತಾನೆ."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಬಳಿಕ ಮಹರ್ಷಿಗಳೆಲ್ಲರೂ ಯದುಕುಲನಂದನನಾದ, ದೇವೇಶನಾದ ಪುರುಷೋತ್ತಮನಿಗೆ ಪ್ರದಕ್ಷಿಣ-ನಮಸ್ಕಾರಗಳನ್ನು ಮಾಡಿ ತೆರಳಿದರು. ಅನಂತರ ಪರಮಕಾಂತಿಯುಕ್ತನಾದ, ಶ್ರೀಕೃಷ್ಣರೂಪಿಯಾದ ಶ್ರೀಮನ್ನಾರಾಯಣನು ಯಥಾವಿಧಿಯಾಗಿ ತಾನು ಕೈಗೊಂಡಿದ್ದ ವ್ರತವನ್ನು ಮುಗಿಸಿಕೊಂಡು ದ್ವಾರವತಿಗೆ ಹಿಂದಿರುಗಿದನು. ಹತ್ತು ಮಾಸಗಳು ತುಂಬಿದ ನಂತರ ರುಕ್ಮಿಣೀದೇವಿಯ ಗರ್ಭದಲ್ಲಿ ಪರಮಾದ್ಭುತರೂಪನಾದ, ಮನೋಹರನಾದ, ವೀರನಾದ ಯದುವಂಶೋದ್ಧಾರಕನಾದ ಪುತ್ರನು ಹುಟ್ಟಿದನು.

ಸ ಕಾಮಃ ಸರ್ವಭೂತಾನಾಂ ಸರ್ವಭಾವಗತೋ ನೃಪ ।
ಅಸುರಾಣಾಂ ಸುರಾಣಾಂ ಚ ಚರತ್ಯನ್ತರ್ಗತಃ ಸದಾ ॥೨೧॥

ಯಾವನು ಎಲ್ಲ ಪ್ರಾಣಿಗಳ ಮಾನಸಿಕವಾದ ಸಂಕಲ್ಪದಲ್ಲಿ ವ್ಯಾಪ್ತನಾಗಿರುವನೋ ದೇವತೆಗಳ ಮತ್ತು ಅಸುರರ ಅಂತಃಕರಣದಲ್ಲಿ ಸದಾ ಚಲಿಸುತ್ತಿರುವನೋ–ಕಾಮದೇವನೇ ಶ್ರೀಕೃಷ್ಣನ ವಂಶೋದ್ಧಾರಕನಾದ ಮಗನು.

ಶ್ಯಾಮಲವರ್ಣನಾದ, ಚತುರ್ಭುಜನಾದ ಪುರುಷಸಿಂಹನಾದ ಈ ಶ್ರೀಕೃಷ್ಣನು ಪ್ರೇಮಪೂರ್ವಕವಾಗಿ ನಿಮ್ಮನ್ನು ಆಶ್ರಯಿಸಿರುವನು. ಅಂತೆಯೇ ನೀವೂ ಇವನನ್ನು ಆಶ್ರಯಿಸಿರುವಿರಿ.

ಕೀರ್ತಿರ್ಲಕ್ಷ್ಮೀರ್ಧೃತಿಶ್ಚೈವ ಸ್ವರ್ಗಮಾರ್ಗಸ್ತಥೈವ ಚ ।
ಯತ್ರೈಷ ಸಂಸ್ಥಿತಸ್ತತ್ರ ದೇವೋ ವಿಷ್ಣುಸ್ತ್ರಿವಿಕ್ರಮಃ ॥೨೩॥

ಎಲ್ಲಿ ತ್ರಿವಿಕ್ರಮನಾದ ಈ ವಿಷ್ಣುದೇವನು ಉಪಸ್ಥಿತನಾಗಿರುವನೋ–ಅಲ್ಲಿ ಕೀರ್ತಿ, ಲಕ್ಷ್ಮೀ, ಧೃತಿ ಮತ್ತು ಸ್ವರ್ಗಮಾರ್ಗಗಳಿರುತ್ತವೆ. ಇಂದ್ರಾದಿ ಮೂವತ್ತು ಮೂರು ದೇವತೆಗಳೂ ಇವನ ಸ್ವರೂಪರೇ ಆಗಿ

ದ್ದಾರೆ. ಈ ವಿಷಯದಲ್ಲಿ ಅನ್ಯರೀತಿಯಲ್ಲಿ ವಿಚಾರಮಾಡಬೇಕಾಗಿಯೇ ಇಲ್ಲ. ಸಮಸ್ತಪ್ರಾಣಿಗಳಿಗೂ ಆಶ್ರಯದಾತನಾದ ಆದಿದೇವನಾದ ಮಹಾದೇವನು ಇವನೇ ಆಗಿದ್ದಾನೆ. ಮಹಾತ್ಮನಾದ ಈ ಮಧುಸೂದನನು ಆದಿ-ಅಂತ್ಯ ಗಳೆರಡೂ ಇಲ್ಲದವನು. ಅವ್ಯಕ್ತನು. ದೇವತೆಗಳ ಕಾರ್ಯಸಿದ್ಧಿಗಾಗಿ ಮಹಾತೇಜಸ್ವಿಯಾದ ಇವನು ಅವತರಿಸಿರುವನು. ದುರ್ಬೋಧವಾದ ಬ್ರಹ್ಮತತ್ತ್ವದ ಕರ್ತೃವೂ ಮತ್ತು ಪ್ರವಚನಕಾರನೂ ಈ ಮಾಧವನೇ ಆಗಿದ್ದಾನೆ.

ಕುಂತೀನಂದನನೇ! ವಿಜಯ, ಅತುಲವಾದ ಕೀರ್ತಿ, ಅಖಂಡ ಭೂಮಂಡಲದ ಆಧಿಪತ್ಯ—ಈ ಎಲ್ಲವೂ ನಿನಗೆ ಶ್ರೀಮನ್ನಾರಾಯಣನ ಕೃಪಾಶ್ರಯದಿಂದಲೇ ಲಭಿಸಿವೆ. ಅಚಿಂತ್ಯಸ್ವರೂಪನಾದ ಈ ನಾರಾಯಣನೇ ನಿನಗೆ ನಾಥನೂ—ಪರಮಗತಿಯೂ ಆಗಿರುವನು. ನೀನೇ ಸ್ವತಃ ಅಧ್ವರ್ಯು ವಾಗಿ ಪ್ರಳಯಕಾಲದ ಅಗ್ನಿಗೆ ಸಮಾನವಾದ ಮಹತ್ತರವಾದ ಶ್ರೀಕೃಷ್ಣರೂಪ ವಾದ ಸ್ರುವದ ಮೂಲಕವಾಗಿ ಸಮರಾಗ್ನಿಯ ಜ್ವಾಲೆಯಲ್ಲಿ ಎಲ್ಲ ರಾಜ ರನ್ನೂ ಹೋಮಮಾಡಿರುವೆ. ಪುತ್ರ-ಭ್ರಾತೃ-ಬಂಧುಗಳ ಸಮೇತನಾಗಿ ದುರ್ಯೋಧನನಿಂದು ಶೋಕಕ್ಕೆ ವಿಷಯನಾಗಿದ್ದಾನೆ. ಏಕೆಂದರೆ : ಮೂರ್ಖ ನಾದ ಅವನು ಕೋಪಕ್ಕೆ ವಶನಾಗಿ ಕೃಷ್ಣಾರ್ಜುನರೊಡನೆ ಯುದ್ಧದಲ್ಲಿ ತೊಡಗಿದನು. ಮಹಾಕಾಯರಾದ, ಮಹಾಬಲರಾದ ಅನೇಕಾನೇಕ ದೈತ್ಯ-ದಾನವರು ಶ್ರೀಕೃಷ್ಣನ ಚಕ್ರಾಗ್ನಿಗೆ ಸಿಕ್ಕಿ ದಾವಾಗ್ನಿಯಲ್ಲಿ ಬಿದ್ದ ಪತಂಗದ ಹುಳುಗಳಂತೆ ವಿನಾಶವನ್ನು ಹೊಂದಿದರು. ಸತ್ತ್ವ-ಧೈರ್ಯ-ಶಕ್ತಿ-ಬಲಾದಿ ಗಳಿಂದ ಹೀನರಾದ ಮನುಷ್ಯರು ಈ ಶ್ರೀಕೃಷ್ಣನನ್ನು ಯುದ್ಧದಲ್ಲಿ ಎದುರಿಸಿ ನಿಲ್ಲಲಾರರು. ಯೋಗಶಕ್ತಿಸಂಪನ್ನನಾದ, ಯುಗಾಂತದ ಅಗ್ನಿಯ ಪ್ರಭೆಗೆ ಸಮಾನವಾದ ಪ್ರಭೆಯಿಂದ ಕೂಡಿರುವ, ಎಡಗೈಯಿಂದಲೂ ಬಾಣಗಳನ್ನು ಬಿಡಲು ಸಮರ್ಥನಾದ ಜಯನು (ಅರ್ಜುನನು) ತನ್ನ ಪರಾಕ್ರಮದಿಂದ ದುರ್ಯೋಧನನ ಸಮಸ್ತವಾದ ಸೈನ್ಯವನ್ನೂ ಸಂಹರಿಸಿದನು. ವೃಷಭಾಂಕ ನಾದ ಭಗವಾನ್ ಶಂಕರನು ಹಿಮವತ್ಪರ್ವತದ ಶಿಖರದಲ್ಲಿ ಋಷಿಗಳಿಗೆ ಪುರಾತನವಾದ ಯಾವ ರಹಸ್ಯವಿಷಯವನ್ನು ಹೇಳಿದನೋ—ಆ ರಹಸ್ಯವನ್ನೇ ನಿನ್ನೊಡನೆ ಹೇಳುವೆನು ; ಕೇಳು.

ಯಾವತ್ತಸ್ಯ ಭವೇತ್ತುಷ್ಟಿಸ್ತೇಜೋ ದೀಪ್ತಿಃ ಪರಾಕ್ರಮಃ ।
ಪ್ರಭಾವಃ ಸನ್ನತಿರ್ಜನ್ಮ ಕೃಷ್ಣೇ ತತ್ತ್ರಿಗುಣಂ ವಿಭೋ ॥೩೪॥

ಅರ್ಜುನನಲ್ಲಿ ಪುಷ್ಟಿ, ತೇಜಸ್ಸು, ಕಾಂತಿ, ಪರಾಕ್ರಮ, ಪ್ರಭಾವ, ವಿನಯ, ಹುಟ್ಟಿನ ಔನ್ನತ್ಯ–ಇವುಗಳು ಎಷ್ಟಿವೆಯೋ ಅವಕ್ಕೆ ಮೂರರಷ್ಟು ಹೆಚ್ಚಾಗಿ ಈ ಗುಣಗಳು ಶ್ರೀಕೃಷ್ಣನಲ್ಲಿವೆ. ನಾನು ಹೇಳಲಿರುವ ಈ ಮಾತು ಸರಿಯಾಗಿಲ್ಲವೆಂದೂ ಬೇರೆಯ ರೀತಿಯಲ್ಲಿರುವುದೆಂದೂ ಸಿದ್ಧಪಡಿಸಲು ಸಮರ್ಥರಾದವರು ಈ ಜಗತ್ತಿನಲ್ಲಿ ಯಾರಿದ್ದಾರೆ? ಈ ಮಾತನ್ನು ಕೇಳು :

ಯತ್ರ ಕೃಷ್ಣೋ ಹಿ ಭಗವಾಂಸ್ತತ್ರ ಪುಷ್ಟಿರನುತ್ತಮಾ ॥೩೫॥

ಪೂಜ್ಯನಾದ ಶ್ರೀಕೃಷ್ಣನೆಲ್ಲಿರುವನೋ–ಅಲ್ಲಿ ಶ್ರೇಷ್ಠವಾದ ಪುಷ್ಟಿಯೂ (ಅಭಿವೃದ್ಧಿಯೂ) ಇರುತ್ತದೆ.

ನಾವಾದರೋ ಈ ಜಗತ್ತಿನಲ್ಲಿ ಅಲ್ಪಬುದ್ಧಿಯವರೂ, ಅಸ್ವತಂತ್ರರೂ, ವ್ಯಾಕುಲಚಿತ್ತರೂ ಆಗಿದ್ದೇವೆ. ತಿಳಿದೂ-ತಿಳಿದೂ ಮೃತ್ಯುವಿನ ಶಾಶ್ವತವಾದ ಮಾರ್ಗದಲ್ಲಿ ಕಾಲಿಡುತ್ತಿದ್ದೇವೆ.

ಭವಾಂಶ್ಚಾಪ್ಯಾರ್ಜವಪರಃ ಪೂರ್ವಂ ಕೃತ್ವಾ ಪ್ರತಿಶ್ರಯಮ್ ।
ರಾಜವೃತ್ತಂ ನ ಲಭತೇ ಪ್ರತಿಜ್ಞಾಪಾಲನೇ ರತಃ ॥೩೭॥

ಅಪ್ಯೇವಾತ್ಮವಧಂ ಲೋಕೇ ರಾಜಂಸ್ತ್ವಂ ಬಹು ಮನ್ಯಸೇ ।
ನ ಹಿ ಪ್ರತಿಜ್ಞಾ ಯಾ ದತ್ತಾ ತಾಂ ಪ್ರಹಾತುಮರಿಂದಮ ॥೩೮॥

ಯುಧಿಷ್ಠಿರ! ನೀನು ಅತ್ಯಂತಸರಳನು. ಜೂಜಿನಲ್ಲಿ ಸೋತರೆ ಹನ್ನೆರಡು ವರ್ಷಗಳ ಕಾಲ ವನವಾಸ ಒಂದು ವರ್ಷದ ಅಜ್ಞಾತವಾಸ–ಇವು ಗಳನ್ನು ಮಾಡುವೆನೆಂದು ಒಪ್ಪಿ ಜೂಜಾಡಿ ಸೋತೆ. ಅನಂತರ ಪ್ರತಿಜ್ಞಾಪಾಲನೆಯಲ್ಲಿ ನಿರತನಾಗಿ ಪ್ರತಿಜ್ಞೆಯನ್ನು ಪೂರ್ಣಗೊಳಿಸಿದನಂತರ ಅನಿವಾರ್ಯವಾಗಿ ಶತ್ರುಗಳನ್ನು ನಾಶಮಾಡಿದರೂ ರಜೋಚಿತವಾದ ರೀತಿಯಲ್ಲಿ ವ್ಯವಹರಿಸುತ್ತಿಲ್ಲ. ಆತ್ಮನಾಶವೇ ಮೇಲೆಂದು ಭಾವಿಸುತ್ತಿರುವೆ. ಶತ್ರುಗಳನ್ನು ಜಯಿಸಿ ಧರ್ಮದಿಂದ ರಾಜ್ಯಪರಿಪಾಲನೆಯನ್ನು ಮಾಡುವೆನೆಂಬ ಪ್ರತಿಜ್ಞೆಯನ್ನು ಭಂಗಗೊಳಿಸುವುದು ನಿನಗೆ ತರವಲ್ಲ.

ಕಾಲೇನಾಯಂ ಜನಃ ಸರ್ವೋ ನಿಹತೋ ರಣಮೂರ್ಧನಿ ।
ವಯಂ ಚ ಕಾಲೇನ ಹತಾಃ ಕಾಲೋ ಹಿ ಪರಮೇಶ್ವರಃ ॥೬೯॥

ಈ ಎಲ್ಲ ರಾಜರೂ ರಣಾಂಗಣದಲ್ಲಿ ಕಾಲನಿಂದ ಸಂಹರಿಸಲ್ಪಟ್ಟಿದ್ದಾರೆ. ಅಂತಹ ಕಾಲನಿಂದಲೇ ನಾವೂ ಮರಣಹೊಂದುವೆವು. ಕಾಲನೇ ಪರಮೇಶ್ವರನು. ಆದುದರಿಂದ ಕಾಲನನ್ನು ಅತಿಕ್ರಮಿಸಿ ಯಾರೂ ನಡೆಯಲಾರರು.

ನ ಹಿ ಕಾಲೇನ ಕಾಲಜ್ಞಃ ಸ್ಪೃಷ್ಟಃ ಶೋಚಿತುಮರ್ಹಸಿ ।
ಕಾಲೋ ಲೋಹಿತರಕ್ತಾಕ್ಷಃ ಕೃಷ್ಣೋ ದಣ್ಡೀ ಸನಾತನಃ ॥೭೦॥

ಕಾಲನ ಸ್ವರೂಪವನ್ನು ತಿಳಿದಿರುವವನು ಕಾಲನಿಂದ ಆಕ್ರಮಿಸಲ್ಪಟ್ಟಾಗ ದುಃಖಪಡಬಾರದು. ಶ್ರೀಕೃಷ್ಣನೇ–ರಕ್ತಾಕ್ಷನಾದ ದಂಡಧಾರಿಯಾದ ಸನಾತನನಾದ ಕಾಲನಾಗಿದ್ದಾನೆ.

ಯುಧಿಷ್ಠಿರ! ಆದುದರಿಂದ ನಿನ್ನ ಜ್ಞಾತಿ-ಬಾಂಧವರು ಮರಣಹೊಂದಿದುದಕ್ಕಾಗಿ ಶೋಕಿಸುವುದು ಯೋಗ್ಯವಲ್ಲ. ಶೋಕರಹಿತನಾಗು. ನಾನು ಈ ಶ್ರೀಕೃಷ್ಣನ ಮಹಿಮೆಯನ್ನು ಹೇಗೆ ಕೇಳಿದ್ದೆನೋ ಹಾಗೆಯೇ ನಿನಗೆ ಹೇಳಿದ್ದೇನೆ.

ಇವನ ಮಹಿಮೆಯನ್ನು ತಿಳಿಯಲು ಇಷ್ಟು ಮಾತ್ರವೇ ಸಾಕು. ಸಜ್ಜನರಿಗೆ ಈ ಕಥನವು ಮಾರ್ಗದರ್ಶಕವಾಗುತ್ತದೆ. ಯುಧಿಷ್ಠಿರ! ವ್ಯಾಸರ ಮತ್ತು ಬುದ್ಧಿಶಾಲಿಗಳಾದ ನಾರದರ ಮಾತುಗಳನ್ನು ಹಲವಾರು ಬಾರಿ ಕೇಳಿರುವ ನಾನು ಪರಮಪೂಜ್ಯನಾದ ಶ್ರೀಕೃಷ್ಣನ ಮತ್ತು ಮಹರ್ಷಿಗಳ ಮಹಾಮಹಿಮೆಗಳನ್ನು ಹೇಳಿರುತ್ತೇನೆ. ಉಮಾ-ಮಹೇಶ್ವರರ ಸಂವಾದವನ್ನೂ ಯಥಾವತ್ತಾಗಿ ಹೇಳಿರುತ್ತೇನೆ.

ಧಾರಯಿಷ್ಯತಿ ಯಶ್ಚೈನಂ ಮಹಾಪುರುಷಸಮ್ಭವಮ್ ।
ಶೃಣುಯಾತ್ಕಥಯೇದ್ವಾ ಯಃ ಸ ಶ್ರೇಯೋ ಲಭತೇ ಪರಮ್ ॥೭೫॥

ಯಾವನು ಮಹಾಪುರುಷನಾದ ಶ್ರೀಕೃಷ್ಣನ ಜನ್ಮವೃತ್ತಾಂತವನ್ನೂ ಮತ್ತು ಮಹಿಮೆಯನ್ನೂ ಕೇಳುವನೋ ಮತ್ತು ಮತ್ತೊಬ್ಬರಿಗೆ ಹೇಳು

ವನೋ ಮತ್ತು ದೃಢವಾಗಿ ಅನುಸಂಧಾನಮಾಡುವನೋ–ಅವನು ಪರಮ ಶ್ರೇಯಸ್ಸನ್ನು ಹೊಂದುತ್ತಾನೆ.

ಭವಿತಾರಶ್ಚ ತಸ್ಯಾಥ ಸರ್ವೇ ಕಾಮಾ ಯಥೇಪ್ಸಿತಾಃ ।
ಪ್ರೇತ್ಯ ಸ್ವರ್ಗಂ ಚ ಲಭತೇ ನರೋ ನಾಸ್ತ್ಯತ್ರ ಸಂಶಯಃ ॥೪೬॥

ಅವನು ಅಪೇಕ್ಷಿಸುವ ಕಾಮನೆಗಳೆಲ್ಲವೂ ಪೂರ್ಣಗೊಳ್ಳುತ್ತವೆ. ಅವಸಾನಾನಂತರದಲ್ಲಿ ಅವನು ಸ್ವರ್ಗವನ್ನೂ ಪಡೆದುಕೊಳ್ಳುತ್ತಾನೆ. ಇದರಲ್ಲಿ ಸಂಶಯವೇ ಇಲ್ಲ.

ನ್ಯಾಯ್ಯಂ ಶ್ರೇಯೋಽಭಿಕಾಮೇನ ಪ್ರತಿಪತ್ತುಂ ಜನಾರ್ದನಃ ।
ಏಷ ಏವಾಕ್ಷಯೋ ವಿಪ್ರೈಃ ಸ್ತುತೋ ರಾಜಞ್ಜನಾರ್ದನಃ ॥೪೭॥

ಶ್ರೇಯಸ್ಕಾಮಿಯಾದವನು ಜನಾರ್ದನನನ್ನು ಶರಣುಹೊಂದುವುದು ನ್ಯಾಯವಾಗಿಯೇ ಇದೆ. ಅವಿನಾಶಿಯಾದ ಶ್ರೀಕೃಷ್ಣನನ್ನೇ ಬ್ರಾಹ್ಮಣರೂ ಸ್ತುತಿಸಿದ್ದಾರೆ.

ಧರ್ಮಜ! ಧರ್ಮಕ್ಕೆ ಸಂಬಂಧಿಸಿದ ಯಾವ ಗುಣಗಳು ಮಹೇಶ್ವರನ ಮುಖದಿಂದ ಹೇಳಲ್ಪಟ್ಟವೋ–ಅವನ್ನು ನೀನು ಮನಸ್ಸಿನಿಂದ ಧಾರಣೆ ಮಾಡಿಕೊಳ್ಳಬೇಕು. ಹಗಲು-ರಾತ್ರಿ ಸ್ಮರಿಸುತ್ತಲೇ ಇರಬೇಕು. ಶಂಕರನು ಹೇಳಿರುವ ನ್ಯಾಯೋಚಿತವಾದ ರೀತಿಯಲ್ಲಿ ವ್ಯವಹರಿಸುತ್ತಾ, ನ್ಯಾಯೋಚಿತ ವಾದ ರೀತಿಯಲ್ಲಿ ದುಷ್ಟರ ವಿಷಯದಲ್ಲಿ ದಂಡವನ್ನು ಪ್ರಯೋಗಿಸುತ್ತಾ ಕೌಶಲ್ಯದಿಂದ ಪ್ರಜೆಗಳನ್ನು ಪಾಲಿಸುತ್ತಿದ್ದರೆ–ನಿನಗೆ ಅವಸಾನಾನಂತರ ಸ್ವರ್ಗಲೋಕವು ಲಭಿಸುತ್ತದೆ. ಧರ್ಮಪೂರ್ವಕವಾಗಿ ಸದಾ ಪ್ರಜೆಗಳನ್ನು ರಕ್ಷಿಸುವುದು ನಿನಗೆ ಯೋಗ್ಯವಾಗಿದೆ. ಶಿಷ್ಟರನ್ನು ರಕ್ಷಿಸುವಾಗ ದುಷ್ಟರ ವಿಷಯದಲ್ಲಿ ಪ್ರಯೋಗಿಸುವ ವಿಪುಲವಾದ ದಂಡವು (ವಿಧಿಸುವ ಕ್ರೂರ ಶಿಕ್ಷೆಯು) ಸದ್ಧರ್ಮವೆಂದೇ ಹೇಳಲ್ಪಡುತ್ತದೆ. ಶಂಕರ-ಪಾರ್ವತಿಯರ ನಡುವೆ ನಡೆದ ಧರ್ಮಯುಕ್ತವಾದ ಸಂಭಾಷಣೆಯನ್ನು ನಿನಗೆ ಈ ಸತ್ಪುರುಷರ ಸಮ್ಮುಖದಲ್ಲಿ ಹೇಳಿರುತ್ತೇನೆ. ತನ್ನ ಕಲ್ಯಾಣವನ್ನು ಬಯಸು ವವನು ಶಂಕರ-ಪಾರ್ವತಿಯರ ಈ ಸಂವಾದವನ್ನು ಕೇಳಿ ಅಥವಾ ಕೇಳಲು ಅಪೇಕ್ಷಿಸಿ ಪರಿಶುದ್ಧವಾದ ಮನಸ್ಸಿನಿಂದ ವೃಷಭಧ್ವಜನನ್ನು ಅರ್ಚಿಸಬೇಕು.

ಮಹಾದೇವನನ್ನು ಪೂಜಿಸಬೇಕೆಂಬುದು ಅನಿಂದ್ಯರಾದ, ಮಹಾತ್ಮರಾದ ನಾರದರ ಸಂದೇಶವೇ ಆಗಿದೆ. ಆದುದರಿಂದ ನೀನೂ ಹಾಗೆಯೇ ಮಾಡು. ಪರಶಿವನನ್ನು ಪೂಜಿಸು. ಪೂಜ್ಯತಮರಾದ ಶ್ರೀಕೃಷ್ಣ ಮತ್ತು ಮಹಾದೇವರ ಇಂತಹ ಅದ್ಭುತವಾದ ಮತ್ತು ಸ್ವಾಭಾವಿಕವಾದ ಘಟನೆಯು ಹಿಂದೆ ಪುಣ್ಯ ತಮವಾದ ಹಿಮವತ್ಪರ್ವತದ ಶಿಖರದಲ್ಲಿ ನಡೆಯಿತು. ಸನಾತನನಾದ ಈ ಶ್ರೀಕೃಷ್ಣನು ಗಾಂಡೀವಧನುರ್ಧರನಾದ ಅರ್ಜುನನೊಡನೆ (ನರ-ನಾರಾ ಯಣರ ರೂಪದಲ್ಲಿದ್ದಾಗ) ಬದರಿಕಾಶ್ರಮದಲ್ಲಿ ಹತ್ತುಸಾವಿರ ವರ್ಷಗಳ ಕಾಲ ವಿಪುಲವಾದ ತಪಸ್ಸನ್ನು ಮಾಡಿದನು. ಕೃತ, ತ್ರೇತಾ, ದ್ವಾಪರ–ಈ ಮೂರು ಯುಗಗಳಲ್ಲಿಯೂ ಪ್ರಕಟಗೊಳ್ಳುವ ಕಮಲನಯನರಾದ ವಾಸು ದೇವ-ಧನಂಜಯರ ಸ್ವರೂಪವನ್ನು ನಾರದರೂ ವ್ಯಾಸರೂ ತಿಳಿದಿರುತ್ತಾರೆ. ವ್ಯಾಸರಿಂದಲೂ ಮತ್ತು ನಾರದರಿಂದಲೂ ಇವರ ನಿಜಸ್ವರೂಪವೂ ನನಗೆ ತಿಳಿಯಿತು. ಮಹಾಬಾಹುವಾದ, ಕಮಲನಯನನಾದ ಶ್ರೀಕೃಷ್ಣನು ಬಾಲಕ ನಾಗಿದ್ದಾಗಲೇ ಜ್ಞಾತಿ-ಬಾಂಧವರನ್ನು ರಕ್ಷಿಸುವ ಸಲುವಾಗಿ ಕಂಸನೊಡನೆ ಮಹಾಯುದ್ಧವನ್ನೇ ಮಾಡಿ ಅವನನ್ನು ಸಂಹರಿಸಿದನು. ಸನಾತನಪುರುಷ ನಾದ ಶ್ರೀಕೃಷ್ಣನ ಅದ್ಭುತಕರ್ಮಗಳ ಸಂಖ್ಯೆಯನ್ನು ಎಣಿಕೆಮಾಡಲು ಸಾಧ್ಯವೇ ಇಲ್ಲ. ಅವನ ಅದ್ಭುತಕಾರ್ಯಗಳಿಗೆ ಕಡೆ ಎಂಬುದೇ ಇಲ್ಲ.

ಮಗು! ಪುರುಷಸಿಂಹನಾದ ಜನಾರ್ದನನೇ ನಿನಗೆ ಮಿತ್ರನಾಗಿದ್ದಾನೆ. ಆದುದರಿಂದ ನಿನಗೆ ನಿಶ್ಚಯವಾಗಿಯೂ ಉತ್ತಮವಾದ ಶ್ರೇಯಸ್ಸು ಲಭಿಸು ತ್ತದೆ. ದುರ್ಬುದ್ಧಿಯವನಾದ ದುರ್ಯೋಧನನು ಯದ್ಯಪಿ ಈಗ ಪರಲೋಕಕ್ಕೆ ಹೋಗಿದ್ದರೂ–ಅವನ ಸಲುವಾಗಿ ನಾನು ಶೋಕಪಡುತ್ತೇನೆ. ಏಕೆಂದರೆ : ಅವನೊಬ್ಬನ ಸಲುವಾಗಿ ಅಸಂಖ್ಯಾತವಾದ ಕುದುರೆಗಳ ಮತ್ತು ಆನೆಗಳ ಸಮೇತವಾಗಿ ಈ ಭೂಮಂಡಲವೇ ವಿನಾಶವಾಯಿತು. ದುರ್ಯೋಧನ, ದುಃಶಾಸನ, ಕರ್ಣ ಮತ್ತು ಶಕುನಿ–ಈ ನಾಲ್ವರ ಅಪರಾಧ ದಿಂದ ಕೌರವರೆಲ್ಲರೂ ನಿಧನಹೊಂದಿದರು.”

ವೈಶಂಪಾಯನರು ಹೇಳುತ್ತಾರೆ :

ಜನಮೇಜಯ! ಪುರುಷಶ್ರೇಷ್ಠನಾದ ಗಂಗಾಪುತ್ರನಾದ ಭೀಷ್ಮನು

ಹೀಗೆ ಮಾತನಾಡುತ್ತಿದ್ದಾಗ–ಯುಧಿಷ್ಠಿರನು ಆ ಮಹಾತ್ಮರ ಮಧ್ಯದಲ್ಲಿ ಮೌನವಾಗಿ ಕುಳಿತಿದ್ದನು. ಭೀಷ್ಮನು ಹೇಳಿದ ಶ್ರೀಕೃಷ್ಣನ ಮಹಿಮೆಯನ್ನು ಕೇಳಿ ಧೃತರಾಷ್ಟ್ರನೇ ಮೊದಲಾದ ರಾಜರು ವಿಸ್ಮಿತರಾದರು. ಮನಸ್ಸಿನಿಂದಲೇ ಶ್ರೀಕೃಷ್ಣನನ್ನು ಪೂಜಿಸಿ ಬದ್ಧಾಂಜಲಿಗಳಾಗಿ ಕುಳಿತರು.

ನಾರದಪ್ರಮುಖರಾದ ಸಮಸ್ತಋಷಿಗಳೂ ಶ್ರೀಕೃಷ್ಣನ ಸಂಬಂಧವಾಗಿ ಭೀಷ್ಮನು ಹೇಳಿದುದನ್ನು ಅಂಗೀಕರಿಸಿ ಅವನನ್ನು ಯಥೋಚಿತವಾಗಿ ಪೂಜಿಸಿ ಪ್ರಶಂಸಿಸಿದರು. ಹೀಗೆ ಪಾಂಡುಪುತ್ರನಾದ ಯುಧಿಷ್ಠಿರನು ತನ್ನ ಅನುಜರೊಡನೆ ಅತ್ಯಾಶ್ಚರ್ಯಕರವಾದ ಪವಿತ್ರವಾದ ಭೀಷ್ಮನ ಅನುಶಾಸನವನ್ನು ಕೇಳಿದನು. ಅನಂತರ ಮಹಾಬುದ್ಧಿವಂತನಾದ, ಮಹೀಪತಿಯಾದ ಯುಧಿಷ್ಠಿರನು ಯಜ್ಞಗಳಲ್ಲಿ ಹೇರಳವಾಗಿ ದಕ್ಷಿಣೆಗಳನ್ನು ಕೊಡುತ್ತಿದ್ದ ಗಂಗಾಪುತ್ರನಾದ ಭೀಷ್ಮನು ವಿಶ್ರಮಿಸಿಕೊಳ್ಳುತ್ತಿರುವಾಗ ಪುನಃ ಪ್ರಶ್ನಿಸಿದನು.”

೧೪೮ನೆಯ ಅಧ್ಯಾಯವು ಮುಗಿಯಿತು.

✡

೧೪೯ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಶ್ರೀವಿಷ್ಣುಸಹಸ್ರನಾಮಸ್ತೋತ್ರ

ವೈಶಂಪಾಯನರು ಹೇಳುತ್ತಾರೆ :

ಶ್ರುತ್ವಾ ಧರ್ಮಾನಶೇಷೇಣ ಪಾವನಾನಿ ಚ ಸರ್ವಶಃ ।
ಯುಧಿಷ್ಠಿರಃ ಶಾನ್ತನವಂ ಪುನರೇವಾಭ್ಯಭಾಷತ ॥೧॥

"ಜನಮೇಜಯ! ಸಮಸ್ತಧರ್ಮಗಳನ್ನೂ ಮತ್ತು ಪವಿತ್ರವಾದ ಬ್ರಹ್ಮವಿದ್ಯಾವಿಷಯಗಳನ್ನೂ ಸಮಗ್ರವಾಗಿಯೂ ಸರ್ವಪ್ರಕಾರಗಳಿಂದಲೂ ಕೇಳಿಯಾದ ಬಳಿಕ ಧರ್ಮಪುತ್ರನು ಭೀಷ್ಮನನ್ನು ಮತ್ತೆ ಪ್ರಶ್ನಿಸಿದನು."

(ಈ ಶ್ರೀವಿಷ್ಣುಸಹಸ್ರನಾಮಸ್ತೋತ್ರಮಹಾಮಂತ್ರಕ್ಕೆ ಉಪೋದ್ಘಾತ ರೂಪವಾದ ಹದಿಮೂರು ಶ್ಲೋಕಗಳಿವೆ. ಆ ಶ್ಲೋಕಗಳಿಗೂ ಮತ್ತು ಸಹಸ್ರ ನಾಮಗಳಿಗೂ ಅನೇಕ ಪೂರ್ವಾಚಾರ್ಯರುಗಳು ಭಾಷ್ಯಗಳನ್ನು ಮಂಡಿಸಿ ದ್ದಾರೆ. ಅವರಲ್ಲಿ ಅದ್ವೈತಸಂಪ್ರದಾಯದ ಮಹಾಚಾರ್ಯರಾದ ಶಂಕರ ಭಗವತ್ಪಾದರೂ ಮತ್ತು ವಿಶಿಷ್ಟಾದ್ವೈತಸಂಪ್ರದಾಯದ ಮಹಾಚಾರ್ಯರಾದ ಭಗವದ್ರಾಮಾನುಜರ ಶಿಷ್ಯಶ್ರೇಷ್ಠರಾದ ಪರಾಶರಭಟ್ಟರೂ ಸಹಸ್ರನಾಮ ಗಳಿಗೆ ಮಾತ್ರವಲ್ಲದೇ ಉಪೋದ್ಘಾತದ ಶ್ಲೋಕಗಳಿಗೂ ಭಾಷ್ಯಗಳನ್ನು ರಚಿಸಿದ್ದಾರೆ. ದ್ವೈತಸಂಪ್ರದಾಯದ ಮಹಾಚಾರ್ಯರಾದ ಶ್ರೀಮದಾನಂದ ತೀರ್ಥರ ಪರಂಪರೆಗೆ ಸೇರಿದ ಶ್ರೀಸತ್ಯಸಂಧ ಯತಿರಾಜಮಹಾಸ್ವಾಮಿಗಳು ಸಹಸ್ರನಾಮಗಳಿಗೆ ಮಾತ್ರ ಭಾಷ್ಯವನ್ನು ಬರೆದಿದ್ದಾರೆ.)

ಇಲ್ಲಿಯವರೆಗೆ ಧರ್ಮರಾಜನು ಶ್ರೀಭೀಷ್ಮಾಚಾರ್ಯರಿಂದ ಎಲ್ಲ ಬಗೆಯ ಧರ್ಮಗಳನ್ನೂ ಕೇಳಿ ತಿಳಿದುಕೊಂಡಿದ್ದಾನೆ. ಧರ್ಮವೆಂದರೆ ಎಲ್ಲವನ್ನೂ ಧರಿಸಿರುವ ನಿಯಮ. "**ಧಾರಣಾತ್ ಧರ್ಮ ಇತ್ಯಾಹುಃ**". ಆ ನಿಯಮವನ್ನರಿತ ಜ್ಞಾನಿಗಳು ಮಾಡಿರುವ ಅನುಶಾಸನಗಳು ಧರ್ಮ ಎನಿಸುತ್ತವೆ. ಜೀವಿಗಳ ಅಭ್ಯುದಯ ಮತ್ತು ನಿಃಶ್ರೇಯಸಗಳೆರಡಕ್ಕೂ ಕಾರಣವಾದದ್ದು ಧರ್ಮ. "**ಯತೋಽಭ್ಯುದಯನಿಃಶ್ರೇಯಸಸಿದ್ಧಿಃ ಸ ಧರ್ಮಃ**" ಅಂತಹ ಸಾಮಾನ್ಯಧರ್ಮ, ವಿಶೇಷಧರ್ಮ, ವರ್ಣಧರ್ಮ,

ಆಶ್ರಮಧರ್ಮ, ಪ್ರವೃತ್ತಿಧರ್ಮ, ನಿವೃತ್ತಿಧರ್ಮ–ಇತ್ಯಾದಿ ವಿಭಾಗಗಳಿಂದ ಕೂಡಿದ ಎಲ್ಲ ಧರ್ಮಗಳನ್ನೂ ಮತ್ತು ಪವಿತ್ರವಿಷಯಗಳನ್ನೂ ಸಾಕ್ಷಾತ್ತಾದ ಉಪದೇಶ, ಪರಂಪರೆಯ ಉಪದೇಶ, ದೃಷ್ಟಾಂತ, ಉಪಾಖ್ಯಾನಾದಿ ಸಹಿತವಾದ ಉಪದೇಶ–ಇತ್ಯಾದಿ ಸರ್ವಪ್ರಕಾರಗಳಿಂದಲೂ ಧರ್ಮರಾಜನು ಆಚಾರ್ಯರಿಂದ ಕೇಳಿಯಾಗಿದೆ.

ಪಾವನಾನಿ=ಪವಿತ್ರವಾದ ಬ್ರಹ್ಮವಿದ್ಯಾವಿಷಯಗಳನ್ನು. ಧರ್ಮವೇ ಪವಿತ್ರವಾದದ್ದು. ಪಾಪಪರಿಹಾರಕವಾದದ್ದು. ಹಾಗಿರುವಾಗ **ಪಾವನಾನಿ** ಎಂದು ಪ್ರತ್ಯೇಕವಿಷಯವನ್ನು ಏಕೆ ಹೇಳಿದೆ? ಎಂದರೆ : **ಧರ್ಮಾನ್** ಎಂಬುದು ಪ್ರವೃತ್ತಿಧರ್ಮವನ್ನೂ ಮತ್ತು **ಪಾವನಾನಿ** ಎಂಬುದು ಮೋಕ್ಷಕ್ಕೆ ಕಾರಣವಾದ ನಿವೃತ್ತಿಧರ್ಮವನ್ನೂ ಹೇಳುತ್ತದೆ–ಎಂದು ವ್ಯಾಖ್ಯಾನಿಸ ಬಹುದು. ನಿವೃತ್ತಿಧರ್ಮವೂ ಧರ್ಮದಲ್ಲಿಯೇ ಅಂತರ್ಗತವಾಗುತ್ತದೆ ಯಲ್ಲವೇ?–ಎಂದರೆ **ಪಾವನಾನಿ** ಎಂಬ ಪ್ರತ್ಯೇಕಶಬ್ದವಿರುವುದರಿಂದ ಇಲ್ಲಿ ಹೇಳಿರುವ **ಧರ್ಮ**ಪದವು ಪ್ರವೃತ್ತಿಧರ್ಮಕ್ಕೆ ಮಾತ್ರ ಅನ್ವಯಿಸುತ್ತದೆ ಎಂಬ ವಿವರಣೆಯನ್ನು ನೋಡುತ್ತೇವೆ. ೨) **ಪಾವನಾನಿ** ಎಂಬ ಪದದಿಂದ ಹೇಳಲ್ಪಟ್ಟಿರುವುದು ಪರಾವಿದ್ಯೆಯ, ಪರಬ್ರಹ್ಮವಿದ್ಯೆಯ ವಿಷಯಗಳು. **ಅಥ ಪರಾ ಯಯಾ ತದಕ್ಷರಮಧಿಗಮ್ಯತೇ ಚತುಃಷಷ್ಟಿತಮೀ ಬ್ರಹ್ಮವಿದ್ಯಾ ತ್ವಮೃತದಾಯಿನೀ** ಎಂಬಂತೆ ಪವಿತ್ರತಮವಾದುದರಿಂದ ಇದು ಪ್ರತ್ಯೇಕವಾಗಿ ಹೇಳಲ್ಪಟ್ಟಿದೆ. ಅಥವಾ **ಧರ್ಮಾನ್** ಎಂಬುದು ಪವಿತ್ರವಾದ ಸಾಧನವಿಚಾರವನ್ನು ಹೇಳುತ್ತದೆ. **ಪಾವನಾನಿ** ಎಂಬುದು ಸಾಧ್ಯವಾದ ಮತ್ತು ಪವಿತ್ರತಮವಾದ ಪರಬ್ರಹ್ಮಸ್ವರೂಪವನ್ನು ಕುರಿತದ್ದಾಗಿದೆ.

ಶಂಕರಭಾಷ್ಯ: ಧರ್ಮಾನ್= ಅಭ್ಯುದಯ-ನಿಃಶ್ರೇಯಸಗಳಿಗೆ ಕಾರಣ ವಾಗಿರುವ ಶಾಸ್ತ್ರವಿಧಿರೂಪವಾಗಿರುವ ಧರ್ಮಗಳನ್ನು, **ಪಾವನಾನಿ**= ಪಾಪಕ್ಷಯಕರಗಳಾದ ಧರ್ಮರಹಸ್ಯಗಳನ್ನು.

ಪರಾಶರಭಟ್ಟೀಯ : ಪಾವನಾನಿ= ತಪಸ್ಸು, ತೀರ್ಥಸೇವನೆ– ಮುಂತಾದ ಶುದ್ಧಿಕರವಿಷಯಗಳನ್ನು.

ಶಂ. ಭಾ. :– ಹೀಗೆ ಸರ್ವಧರ್ಮಗಳನ್ನೂ ಮತ್ತು ಸರ್ವಪವಿತ್ರ

ತತ್ತ್ವವಿಚಾರಗಳನ್ನೂ ಸರ್ವಪ್ರಕಾರಗಳಿಂದಲೂ ಕೇಳಿದ ಬಳಿಕ ಧರ್ಮರಾಜನು ಮತ್ತೆ ತಿಳಿದುಕೊಳ್ಳಬೇಕಾದ ವಿಷಯವಾದರೂ ಏನು? ಎಂದರೆ :

ಇಲ್ಲಿಯವರೆಗೂ ಅವನು ಕೇಳಿರುವ ಪ್ರಕಾರ ಬೇರೆ-ಬೇರೆ ಪುರುಷಾರ್ಥಗಳಿಗೆ ಬೇರೆ-ಬೇರೆ ಸಾಧನಧರ್ಮಗಳು. ಇಹಲೋಕದ ಸುಖಕ್ಕೆ ಬೇರೆ ಧರ್ಮಗಳು. ಪರಲೋಕದ ಸುಖಕ್ಕೆ ಬೇರೆ ಧರ್ಮಗಳು. ಪರಲೋಕಕ್ಕೆ ಕಾರಣವಾದ ಧರ್ಮಗಳಲ್ಲಿ ನಾನಾಲೋಕಗಳ ಪ್ರಾಪ್ತಿಗೆ ಬೇರೆ ಬೇರೆ ಧರ್ಮಗಳು. ಸ್ವರ್ಗಾದಿ ಸುಖಗಳ ಪ್ರಾಪ್ತಿಗೆ ನಾನಾಯಜ್ಞಗಳು, ತಪಸ್ಸುಗಳು ಹೇಳಲ್ಪಟ್ಟುವು. ಇವು ಅತ್ಯಂತಕಷ್ಟಸಾಧ್ಯವಾದ ಉಪಾಯಗಳು. ಅಧ್ಯಾತ್ಮವಿದ್ಯೆಯ ಸಾಧನವಂತೂ ಅವುಗಳಿಗಿಂತಲೂ ಅತ್ಯಂತಕಷ್ಟ. ಕತ್ತಿಯ ಅಲುಗಿನ ಮೇಲೆ ನಡೆದಂತೆ ಅದರ ಸಾಧನೆ. **ಕ್ಷುರಸ್ಯ ಧಾರಾ ನಿಶಿತಾ ದುರತ್ಯಯಾ ದುರ್ಗಂ ಪಥಸ್ತತ್ಕವಯೋ ವದನ್ತಿ ||** ಆದರೆ– ೧) ಎಲ್ಲ ಪುರುಷಾರ್ಥಗಳನ್ನೂ ಕೊಡಬೇಕು. ೨) ಸುಖವಾಗಿ ಸಂಪಾದಿಸಲು ಸಾಧ್ಯವಾಗಿರಬೇಕು. ೩) ಅಲ್ಪಪ್ರಯಾಸದಿಂದ ಸಾಧ್ಯವಾಗಬೇಕು. ೪) ಮಹತ್ತಮವಾದ ಪ್ರಯೋಜನವನ್ನು ಕೊಡಬೇಕು–ಇಷ್ಟೆಲ್ಲಾ ಗುಣಗಳಿಂದ ಕೂಡಿರುವ ಶ್ರೇಷ್ಠತಮವಾದ ವಿಷಯವೊಂದನ್ನು ಭೀಷ್ಮನಿಂದ ಧರ್ಮಜನು ಇಲ್ಲಿಯವರೆಗೂ ಕೇಳಿಲ್ಲ. ಅದನ್ನು ಕೇಳಿ ತಿಳಿದುಕೊಳ್ಳಲು ಈ ಪ್ರಶ್ನೆ. **ಸಕಲಪುರುಷಾರ್ಥಸಾಧನಂ ಸುಖಸಂಪಾದ್ಯಂ ಅಲ್ಪಪ್ರಯಾಸಂ ಅನಲ್ಪಫಲಂ ಅನುಕ್ತಮಿತಿ ಕೃತ್ವಾ ಪುನಃ ಪ್ರಶ್ನಂ ಕೃತವಾನ್.**

* * *

ಪ. ಭ. :– ಇಲ್ಲಿಯವರೆಗೂ ಅವನು ಭೀಷ್ಮನಿಂದ ಕೇಳಿರುವ ಧರ್ಮಗಳು ಪ್ರಾಮಾಣಿಕವಾದುವುಗಳೇ. ಆದರೆ ಅವುಗಳಲ್ಲಿ ಆಚಾರ್ಯನಾದ ಭೀಷ್ಮನಿಗೆ ಅತ್ಯಂತಸಮ್ಮತವಾದದ್ದು ಯಾವುದು? ಹಿತತಮವಾದುದು ಯಾವುದು? ಉಪಾಯ ಮತ್ತು ಉಪೇಯಗಳಲ್ಲಿ ದೋಷಗಂಧವೂ ಇಲ್ಲದೇ ಶುದ್ಧತಮವಾಗಿರುವುದು ಯಾವುದು? ಕ್ಲೇಶ-ಕರ್ಮ-ವಿಪಾಕ-ಆಶಯ-ವಿಕಾರಗಳು ಇಲ್ಲದ ಉಪೇಯವಸ್ತುವು ಯಾವುದು? ವ್ಯಯವಿಲ್ಲದೇ, ಹೆಚ್ಚು ಆಯಾಸವಿಲ್ಲದೇ ಪುಷ್ಕಳವಾದ ಫಲವನ್ನು ನಿಯತವಾಗಿ ಕೊಡುವ ಉಪಾಯವು ಯಾವುದು?–ಎಂಬುದನ್ನು ತಿಳಿದುಕೊಳ್ಳುವುದ

ಕ್ಕಾಗಿ ಭೀಷ್ಮಾಚಾರ್ಯರನ್ನು ಧರ್ಮರಾಜನು ಮತ್ತೆ ಪ್ರಶ್ನಿಸುತ್ತಾನೆ. **ಸರ್ವಶಃ** = ಸರ್ವಪ್ರಕಾರಗಳಿಂದಲೂ, ಲಿಂಗ, ಸ್ವರೂಪ ಮತ್ತು ಅಧಿಕಾರ– ಎಂಬ ಎಲ್ಲ ಪ್ರಕಾರಗಳಿಂದಲೂ.

* * *

ಯುಧಿಷ್ಠಿರನು ಕೇಳುತ್ತಾನೆ :

ಕಿಮೇಕಂ ದೈವತಂ ಲೋಕೇ ಕಿಂ ವಾಪ್ಯೇಕಂ ಪರಾಯಣಮ್ ।
ಸ್ತುವನ್ತಃ ಕಂ ಕಮರ್ಚನ್ತಃ ಪ್ರಾಪ್ನುಯುರ್ಮಾನವಾಃ ಶುಭಮ್ ॥

"ಪಿತಾಮಹನೇ! ಲೋಕದಲ್ಲಿ ಏಕಮಾತ್ರ ದೇವತೆಯು ಯಾವುದು? ಏಕಮಾತ್ರವಾದ ಶ್ರೇಷ್ಠಗಮ್ಯಸ್ಥಾನವು ಯಾವುದು? ಯಾವನನ್ನು ಸ್ತುತಿಸುತ್ತಾ, ಯಾವನನ್ನು ಪೂಜಿಸುತ್ತಾ ಮನುಷ್ಯರು ಶುಭವನ್ನು ಹೊಂದುವರು?

ಶಂ. ಭಾ. :-**ಲೋಕೇ**=ಎಲ್ಲ ವಿದ್ಯಾಸ್ಥಾನಗಳಲ್ಲಿಯೂ, **ಪರಾಯಣಂ**= ಶ್ರೇಷ್ಠವಾದ ಗಮ್ಯಸ್ಥಾನ. ಯಾವುದರ ಆಜ್ಞೆಯಿಂದ ಎಲ್ಲರೂ ನಡೆಯುತ್ತಿದ್ದಾರೆಯೋ, ಯಾವುದನ್ನು ಪಡೆದರೆ ಹೃದಯದ ಎಲ್ಲ ಗಂಟುಗಳೂ ಬಿಚ್ಚಿಹೋಗುತ್ತವೆಯೋ, ಯಾವುದರ ಜ್ಞಾನಮಾತ್ರದಿಂದಲೇ ಮೋಕ್ಷವು ದೊರೆಯುತ್ತದೆಯೋ, ಯಾವುದನ್ನರಿತವನಿಗೆ ಯಾವುದರಿಂದಲೂ ಭಯವಿಲ್ಲವೋ, ಯಾವುದನ್ನು ಹೊಕ್ಕವನಿಗೆ ಮರುಹುಟ್ಟು ಇಲ್ಲವೋ, ಯಾವುದನ್ನರಿತವನು ಅದೇ ಆಗಿಬಿಡುತ್ತಾನೆಯೋ, ಯಾವುದನ್ನು ಬಿಟ್ಟು ಜನರಿಗೆ ಬೇರೆ ದಾರಿಯೇ ಇಲ್ಲವೋ–ಅದೇ ಪರಾಯಣ. **ಭಿದ್ಯತೇ ಹೃದಯಗ್ರಂಥಿಃ ಛಿದ್ಯನ್ತೇ ಸರ್ವಸಂಶಯಾಃ ।** (ಮು. ೨.೨.೮) **ಬ್ರಹ್ಮವೇದ ಬ್ರಹ್ಮೈವ ಭವತಿ ।** (ಮು. ೩-೨-೯) **ನಾನ್ಯಃ ಪಂಥಾ ವಿದ್ಯತೇಽಯನಾಯ ।** (ಶ್ವೇ. ೬-೧೫)

ಅರ್ಚನ್ತಃ =ಒಳ-ಹೊರ ಪೂಜೆಗಳನ್ನು ಮಾಡುತ್ತಾ. **ಶುಭಂ**=ಸ್ವರ್ಗ-ಮೋಕ್ಷಗಳೇ ಮುಂತಾದ ಫಲಗಳನ್ನು.

* * *

ಪ. ಭ. :– ಪರತತ್ತ್ವರೂಪವಾದ ಉಪೇಯವನ್ನು ಕುರಿತು ಇಲ್ಲಿ ಧರ್ಮರಾಜನು ಪ್ರಶ್ನೆಮಾಡುತ್ತಾನೆ. ಉಪಾಯವನ್ನು ಆಚರಿಸುವುದು

ಉಪೇಯವನ್ನು ಪಡೆಯುವುದಕ್ಕೋಸ್ಕರ. ಆದುದರಿಂದ ಉಪೇಯವು ಪ್ರಧಾನವಾದುದು. ಅದು ಯಾವುದು ಎಂದು ಇಲ್ಲಿ ಧರ್ಮರಾಜನ ಪ್ರಶ್ನೆ.

ಲೋಕಃ= ಶ್ರುತಿ-ಸ್ಮೃತಿಗಳೇ ಮುಂತಾದ ರೂಪದ ಶರೀರವುಳ್ಳ ಶಾಸ್ತ್ರ. **ಏಕಂ**= ಪ್ರಧಾನವಾದದ್ದು ; ತನಗೆ ಎಣೆಯಾದದ್ದು ಮತ್ತು ಮಿಗಿಲಾದದ್ದು ಇಲ್ಲದೇ ಇರುವುದು. ಸಮಾನಾಧಿಕವರ್ಜಿತ. (ಕೇವಲ ಏಕತ್ವ ಸಂಖ್ಯಾವಾಚಕವಲ್ಲ ಏಕ ಎಂಬ ಶಬ್ದ) **ದೈವತಂ**= ಪ್ರಕಾಶಿಸುವುದೇ ಮುಂತಾದ ಪರಮೈಶ್ವರ್ಯಕ್ಕೆ ಅಸಾಧಾರಣವಾದ ಗುಣಗಳಿಂದ ಗುರುತುಳ್ಳದ್ದೆನಿಸಿ ಶಾಸ್ತ್ರಗಳಲ್ಲಿ ಪ್ರತಿಪಾದಿಸಲ್ಪಟ್ಟಿರುವುದು. **ಪರಾಯಣಂ**=ನಿರ್ದುಷ್ಟ, ನಿರತಿಶಯಮಂಗಲಸ್ವಭಾವವನ್ನು ಹೊಂದಿರುವುದರಿಂದ ಉತ್ಕೃಷ್ಟತಮವಾದದ್ದು. **ಅಯನಂ**= ಪುರುಷನು ಐಹಿಕ-ಆಮುಷ್ಮಿಕಗಳಲ್ಲಿ ಬಯಸಬೇಕಾದ ಪರಮಪುರುಷಾರ್ಥ. **ಕಂ ಸ್ತುವನ್ತಃ**=ಯಾವನ ಗುಣಸಂಕೀರ್ತನಮಾತ್ರವಾದ ಆರಾಧನೆಯಿಂದ, **ಕಂ ಅರ್ಚನ್ತಃ**= ಉಪಾಸನಾರೂಪವಾದ ಭಕ್ತಿಯಿಂದ ಯಾವನ ಪರಮಪೂಜೆಯನ್ನು ಮಾಡುವುದರಿಂದ, **ಮಾನವಾಃ**= ಅವನ ಈ ಸ್ತೋತ್ರ. ಪೂಜೆಗಳಿಗೆ ಮನುಷ್ಯತ್ವವೆಂಬ ಪರಿಕರವೊಂದಿದ್ದರೆ ಸಾಕು. **ಶುಭಂ**=ಅಭ್ಯುದಯ-ನಿಃಶ್ರೇಯಸಗಳೆಂಬ ಎರಡು ಬಗೆಯ ಧರ್ಮಫಲಗಳನ್ನು ಲಘುವಾದ ಉಪಾಯದಿಂದ ದೊರಕುವ ಸಿದ್ಧೋಪಾಯವು ಯಾವುದು?–ಎಂಬುದು ಶ್ಲೋಕದ ಉತ್ತರಾರ್ಧದಲ್ಲಿ ಕೇಳಿರುವ ಪ್ರಶ್ನೆ.

* * *

ಕೋ ಧರ್ಮಃ ಸರ್ವಧರ್ಮಾಣಾಂ ಭವತಃ ಪರಮೋ ಮತಃ ।
ಕಿಂ ಜಪನ್ಮುಚ್ಯತೇ ಜನ್ತುಃ ಜನ್ಮಸಂಸಾರಬಂಧನಾತ್ ॥೩॥

ಎಲ್ಲ ಧರ್ಮಗಳಲ್ಲಿಯೂ ಶ್ರೇಷ್ಠತಮಧರ್ಮವೆಂದು ನಿನಗೆ ಅಭಿಮತವಾದದ್ದು ಯಾವುದು? ಯಾವುದನ್ನು ಜಪಿಸುವುದರಿಂದ ಪ್ರಾಣಿಗಳು ಜನ್ಮ-ಸಂಸಾರಗಳ ಕಟ್ಟಿನಿಂದ ಬಿಡುಗಡೆಯನ್ನು ಹೊಂದುತ್ತವೆ?"

ಶಂ. ಭಾ. :– ಜಪನ್= ಗಟ್ಟಿಯಾಗಿ ಜಪಿಸುವಿಕೆ, ಮೆಲ್ಲಗೆ ಜಪಿಸುವಿಕೆ ಮತ್ತು ಮನಸ್ಸಿನಲ್ಲಿ ಜಪಿಸುವಿಕೆ–ಎಂಬ ಮುಬ್ಬಗೆಯ ಜಪವನ್ನು ಮಾಡು

ವುದರಿಂದ. **ಜನ್ತುಃ** = ಜನಿಸುವ ಧರ್ಮವುಳ್ಳದ್ದು ಪ್ರಾಣಿ. ಜಪ, ಅರ್ಚನೆ ಮತ್ತು ಸ್ತೋತ್ರಗಳನ್ನು ತಮ್ಮ ತಮ್ಮ ಯೋಗ್ಯತಾನುಸಾರವಾಗಿ ಮಾಡಲು ಎಲ್ಲ ಪ್ರಾಣಿಗಳಿಗೂ ಅಧಿಕಾರವುಂಟೆಂದು ಈ ಶಬ್ದದಿಂದ ಸೂಚಿತವಾಗುತ್ತದೆ. **ಜನ್ಮಸಂಸಾರಬಂಧನಾತ್**= ಅಜ್ಞಾನದ ವಿಸ್ತಾರವಾಗಿರುವ ಎಲ್ಲ ಅವಿದ್ಯಾಕಾರ್ಯಗಳನ್ನೂ ಈ ಪದವು ಸೂಚಿಸುತ್ತದೆ. ಹಾಗೆಯೇ ಜನ್ಮ ಸಂಸಾರಬಂಧನದಿಂದ ಬಿಡುಗಡೆ ಎಂಬುದರಿಂದ ಇತರ ಫಲಗಳ ಪ್ರಾಪ್ತಿಯೂ ಸೂಚಿತವಾಗುತ್ತದೆ. ಮೋಕ್ಷವು ಮುಖ್ಯತಮವಾದ ಫಲವೆಂದು ಘೋಷಿಸಲು ಅದೊಂದನ್ನು ಮಾತ್ರ ಹೇಳಿದೆ. ಹೀಗೆ ಧರ್ಮರಾಜನು ಒಟ್ಟು ಆರು ಪ್ರಶ್ನೆಗಳನ್ನು ಕೇಳುತ್ತಾನೆ.

* * *

ಪ. ಭ. :**– ಕೋ ಧರ್ಮಃ ಸರ್ವಧರ್ಮಾಣಾಂ**= ಇಲ್ಲಿ ಪರಮಸಾಧ್ಯವಾದ ಉಪಾಯವನ್ನು ಕುರಿತು ಪ್ರಶ್ನಿಸಲಾಗಿದೆ. ವಾಕ್ಕು, ಮನಸ್ಸು ಮತ್ತು ಕಾರ್ಯಗಳಿಂದ ಮಾಡಲ್ಪಡುವ ಜಪ, ಧ್ಯಾನ, ಅರ್ಚನೆಗಳು–ಮುಂತಾದ ದೇವತಾಪೂಜಾರೂಪವಾದ ಅನೇಕಧರ್ಮಗಳುಂಟು. ಆ ಎಲ್ಲ ಧರ್ಮಗಳಲ್ಲಿಯೂ ಎಣೆಯಿಲ್ಲದ್ದೂ ಮಿಗಿಲು ಇಲ್ಲದ್ದೂ ಆದ ಶ್ರೇಷ್ಠತಮ ಧರ್ಮವು ಯಾವುದು? **ಭವತಃ ಪರಮೋ ಮತಃ**= ಪೂಜ್ಯನಾದ ನೀನು ಚೆನ್ನಾಗಿ ನಿಶ್ಚಯಿಸಿಕೊಂಡು ಆಪದ್ಧನದಂತೆ ಸ್ವೀಕರಿಸಿರುವುದು. **ಕಿಂ ಜಪನ್**= ಸಾಲಂಬನವಾದ ಉಪಕರಣಗಳೂ **"ಜಪೇನೈವ ತು ಸಂಸಿಧ್ಯೇತ್ ಬ್ರಾಹ್ಮಣೋ ನಾತ್ರ ಸಂಶಯಃ** (ಮನು ೨-೮೭), **ದ್ರವ್ಯಯಜ್ಞಾಜ್ಜಪಯಜ್ಞಃ ವಿಶಿಷ್ಟೋ ದಶಭಿರ್ಗುಣೈಃ** (ಮನು ೨-೮೫) **ಯಜ್ಞಾನಾಂ ಜಪಯಜ್ಞೋಽಸ್ಮಿ** (ಗೀತಾ ೧೦-೨೫) ಎಂದು ಹೇಳಿರುವಂತೆ ಶ್ರೇಷ್ಠತಮವಾದ ಜಪಯಜ್ಞಕ್ಕೆ ವಿಷಯವು ಯಾವುದು? **ಜನ್ಮ ಸಂಸಾರಬಂಧನಾತ್**= ಮುಪ್ಪು, ಸಾವು, ಗರ್ಭವಾಸ, ನರಕಯಾತನೆ–ಮುಂತಾದ ಸಂಸಾರದ ಕಾರ್ಯವರ್ಗವನ್ನು ಈ ಪದವು ಸೂಚಿಸುತ್ತದೆ. **ಬಂಧನಂ**= ಪರಮಪದಪ್ರಾಪ್ತಿಗೆ ಪ್ರತಿಬಂಧಕವಾದದ್ದು. **ಅಶೇಷೇಣ ಸರ್ವಶಃ** –ಎಂದು ಪ್ರಾರಂಭಿಸಿದೆ. **ಲೋಕೇ ಮಾನವಾಃ ಶುಭಂ**–ಎಂಬ ವಿಶೇಷಣಗಳನ್ನೂ ಕೊಟ್ಟಿದೆ. ಇದರಿಂದ ಶ್ರೇಷ್ಠತಮವಾದ ಕಾಲ, ಅಧಿಕಾರಿ,

ಅಂಗ ಮತ್ತು ಫಲಗಳ ಪ್ರಕಾರವಿಶೇಷಗಳನ್ನು ಕುರಿತೂ ಪ್ರಶ್ನೆಮಾಡಲಾಗಿದೆ–ಎಂದು ಸೂಚಿತವಾಗುತ್ತದೆ.

*   *   *

ಭೀಷ್ಮನು ಹೇಳುತ್ತಾನೆ :

ಜಗತ್ಪ್ರಭುಂ ದೇವದೇವಮನನ್ತಂ ಪುರುಷೋತ್ತಮಮ್ ।
ಸ್ತುವನ್ನಾಮಸಹಸ್ರೇಣ ಪುರುಷಃ ಸತತೋತ್ಥಿತಃ ॥೪॥

"ಯುಧಿಷ್ಠಿರ! ಮನುಷ್ಯನು ಸದಾ ಎದ್ದಿರುವವನಾಗಿ (ಉದ್ಯೋಗಶೀಲನಾಗಿದ್ದು) ಜಗತ್ತಿಗೆ ಸ್ವಾಮಿಯೂ, ದೇವತೆಗಳಿಗೂ ದೇವನೂ, ಪರಿಚ್ಛೇದರಹಿತನೂ ಆದ ಪುರುಷೋತ್ತಮನನ್ನು ಸಾಸಿರಹೆಸರುಗಳಿಂದ ಸ್ತುತಿಸುವುದರಿಂದ (ಎಲ್ಲ ದುಃಖಗಳನ್ನೂ ದಾಟಿಬಿಡುತ್ತಾನೆ.)

ಶಂ. ಭಾ. :– ಧರ್ಮರಾಜನು ಮಾಡಿದ ಜಪವಿಷಯಕವಾದ ಆರನೆಯ ಪ್ರಶ್ನೆಗೆ ಇಲ್ಲಿ ಭೀಷ್ಮನು ಉತ್ತರವನ್ನು ಹೇಳುತ್ತಾನೆ :

ಭೀಷ್ಮಃ = ಒಳಗಿನ ಮತ್ತು ಹೊರಗಿನ ಶತ್ರುಗಳಿಗೆ ಭಯವನ್ನುಂಟುಮಾಡುವವನು. ಮೋಕ್ಷಧರ್ಮವೇ ಮುಂತಾದುವುಗಳನ್ನು ಉಪದೇಶಮಾಡಿದ ಸರ್ವಜ್ಞ. **ಸರ್ವೇಷಾಂ ಬಹಿರನ್ತಃಶತ್ರೂಣಾಂ ಭಯಹೇತುಃ ಭೀಷ್ಮಃ. ಮೋಕ್ಷಧರ್ಮಾದೀನಾಂ ಪ್ರವಕ್ತಾ ಸರ್ವಜ್ಞಃ. ಜಗತ್ಪ್ರಭುಂ**= ಜಂಗಮ-ಸ್ಥಾವರರೂಪವಾದ ಜಗತ್ತಿಗೆ ಸ್ವಾಮಿಯಾದವನನ್ನು. **ದೇವದೇವಂ**= ಬ್ರಹ್ಮಾದಿದೇವರಿಗೂ ದೇವನಾದವನನ್ನು. **ಅನನ್ತಂ**= ದೇಶ, ಕಾಲ ಮತ್ತು ವಸ್ತುಪರಿಚ್ಛೇದಗಳಿಲ್ಲದವನನ್ನು. **ಪುರುಷೋತ್ತಮಂ**= ಕ್ಷರಪುರುಷ ಮತ್ತು ಅಕ್ಷರಪುರುಷರೆಂಬ ಕಾರ್ಯ-ಕಾರಣಗಳಿಗಿಂತಲೂ ಉತ್ಕೃಷ್ಟನಾದವನನ್ನು. **ಪುರುಷಃ** = ಪುರದಲ್ಲಿ ಶಯನಿಸಿಕೊಂಡಿರುವುದರಿಂದ ಅಥವಾ ಪೂರ್ಣನಾಗಿರುವುದರಿಂದ ಜೀವನಿಗೆ ಪುರುಷನೆಂದು ಹೆಸರು.

*   *   *

ಪ. ಭ. :– ದೇವದೇವಂ= ದೇವರು ಮನುಷ್ಯರಿಗಿಂತಲೂ ಐಶ್ವರ್ಯ ಮತ್ತು ಪರಿಚರ್ಯೆಗಳಿಂದ ಅಧಿಕರಾಗಿರುವಂತೆ ಆ ಎಲ್ಲ ದೇವರುಗಳಿಗಿಂತಲೂ ಐಶ್ವರ್ಯ ಮತ್ತು ಪರಿಚರ್ಯೆಗಳಿಂದ ಮಿಗಿಲಾದವನನ್ನು.

ಅನನ್ತಂ= ಸರ್ವಪ್ರಕಾರಗಳಿಂದಲೂ ಪರಿಚ್ಛೇದವಿಲ್ಲದ ವೈಭವವುಳ್ಳವನನ್ನು. **ಪುರುಷೋತ್ತಮಂ**= ಪರಮೋದ್ಧಾರಕನನ್ನು. **ಸತತೋತ್ಥಿತಃ ಪುರುಷಃ** = ನಿರಂತರವಾಗಿ ಉದ್ಯೋಗದಿಂದ ಕೂಡಿದ ಚೇತನನು. ಭಗವಂತನ ಸ್ತುತಿ-ಧ್ಯಾನ ಮುಂತಾದುವುಗಳನ್ನು ನಿರಂತರವಾಗಿ ಮಾಡುತ್ತಿರುವುದು ಪರಮ ಪ್ರಿಯವಾದ ಹಿತ. ಅವುಗಳಲ್ಲಿ ವಿಚ್ಛೇದವುಂಟಾದರೆ ಮೃತ್ಯುಭಯವೆಂದು ಶ್ರುತಿ-ಸ್ಮೃತ್ಯಾದಿಗಳು ಮೊಳಗುತ್ತವೆ.

ಯನ್ಮುಹೂರ್ತಂ ಕ್ಷಣಂ ವಾಪಿ ವಾಸುದೇವೋ ನ ಚಿನ್ತ್ಯತೇ ।
ಸಾ ಹಾನಿಸ್ತನ್ಮಹಚ್ಛಿದ್ರಂ ಸಾ ಭ್ರಾನ್ತಿಃ ಸಾ ಚ ವಿಕ್ರಿಯಾ ॥

(ಗಾರುಡ ೨೨೨.೨೨)

* * *

ತಮೇವ ಚಾರ್ಚಯನ್ನಿತ್ಯಂ ಭಕ್ತ್ಯಾ ಪುರುಷಮವ್ಯಯಮ್ ।
ಧ್ಯಾಯಂಸ್ತುವನ್ನಮಸ್ಯಂಶ್ಚ ಯಜಮಾನಸ್ತಮೇವ ಚ ॥೫॥

ಅವಿಕಾರಿಯಾದ ಆ ಪುರುಷನನ್ನೇ ಭಕ್ತಿಯಿಂದ ಪೂಜಿಸುವುದರಿಂದ, ಅವನನ್ನೇ ಧ್ಯಾನಿಸುವುದರಿಂದ, ಸ್ತುತಿಸುವುದರಿಂದ ಮತ್ತು ನಮಸ್ಕರಿಸುವುದರಿಂದ ಯಜಮಾನನು (ಪೂಜಕನು) ಎಲ್ಲ ದುಃಖಗಳನ್ನೂ ದಾಟುತ್ತಾನೆ.

ಶಂ. ಭಾ. :– ಇಲ್ಲಿ ಯುಧಿಷ್ಠಿರನ ನಾಲ್ಕನೆಯ ಪ್ರಶ್ನೆಗೆ ಉತ್ತರ ಹೇಳಿದೆ:

ಅರ್ಚಯನ್ = ಬಾಹ್ಯಪೂಜೆಯನ್ನು ಮಾಡುತ್ತಾ, **ಧ್ಯಾಯನ್**= ಒಳಗಿನ ಪೂಜೆಯನ್ನು ಮಾಡುತ್ತಾ, ಅಥವಾ **ಅರ್ಚಯನ್**= ಒಳ-ಹೊರ ಪೂಜೆಗಳನ್ನು ಮಾಡುತ್ತಾ. **ಧ್ಯಾಯನ್ ಸ್ತುವನ್ ನಮಸ್ಯನ್**= ಮಾನಸ, ವಾಚಿಕ ಮತ್ತು ಕಾಯಕಪೂಜೆಮಾಡುತ್ತಾ, **ಯಜಮಾನಃ** = ಪೂಜಕ, ಫಲಭೋಕ್ತಾ, **ಭಕ್ತಿಃ** = ಭಜನೆ, ತತ್ಪರತೆ.

* * *

ಪ. ಭ. :– ಜಪಾಲಂಬನಕ್ಕೆ ವಿಷಯವೆಂದು ಹಿಂದೆ ಯಾವನನ್ನು ಹೇಳಿದೆಯೋ–ಅವನೇ ಪೂಜ್ಯತಮನೂ ಆಗಿದ್ದಾನೆ. **ತಮಿಮಂ ಸರ್ವಸಂಪನ್ನಮಾಚಾರ್ಯಂ ಪಿತರಂ ಗುರುಮ್ ।** ಅರ್ಚ್ಯಮರ್ಚಿತುಮಿಚ್ಛಾಮಃ ಸರ್ವೇ ಸಂಮನ್ತುಮರ್ಹಥ ॥ (ಮು.ಸ. ೩೮-೨೧)

ತಸ್ಮಾತ್ಪೂಜ್ಯತಮಂ ನಾನ್ಯಮಹಂ ಮನ್ಯೇ ಜನಾರ್ದನಾತ್ । ಅವನನ್ನು ಬಿಟ್ಟು ಇತರ ದೇವತೆ-ಪಿತೃ-ಭೂತಾದಿಗಳನ್ನು ಪೂಜಿಸಿದರೆ ಅವುಗಳ ಫಲಕ್ಕೆ ಅಂತವುಂಟು. **ಅನ್ತವತ್ತು ಫಲಂ ತೇಷಾಂ** (ಗೀತಾ. ೭-೨೩) **ಪುರುಷಂ**= ಪುಂಡರೀಕಾಕ್ಷನನ್ನು. **ಅವ್ಯಯಂ**= ಸದಾ ಅನುಭವಿಸುತ್ತಿದ್ದರೂ ಅನುರೂಪ ವಾದ ಅಕ್ಷಯವಾದ ಉತ್ತರೋತ್ತರಗುಣಪರಿಚಯವುಳ್ಳವನನ್ನು. **ಅರ್ಚಯನ್**= ಆ ಭಗವಂತನ ದಾಸ್ಯರೂಪದಿಂದ ಭಕ್ತಿಯೋಗವನ್ನು ಕೈಗೊಂಡ ಅಧಿಕಾರಿಯು. **ಮಚ್ಚಿತ್ತಾ ಮದ್ಗತಪ್ರಾಣಾಃ** (ಗೀತಾ ೧೦.೯) ಎಂಬಂತೆ ಆ ಭಕ್ತಿಯಿಲ್ಲದೇ ಕ್ಷಣಕಾಲವೂ ಇರಲು ಆಗದ ಭಾಗವತೋತ್ತಮರು. **ಭಕ್ತಿ** ಎಂದರೆ ಸ್ವಾಮಿಯಲ್ಲಿ ದಾಸನಿಗೆ ಇರುವ ಅನುರಾಗಮಯವಾದ ಸ್ಮೃತಿ. **ಧ್ಯಾಯನ್**= ಮಾನಸವಾಗಿ ನಿರಂತರಾಮೃತ ಧಾರಾಕಾರವಾದ, ನಿಶ್ಶೇಷವಾಗಿ ಸಂಸಾರತಾಪತ್ರಯದ ಶಮನವನ್ನುಂಟು ಮಾಡುವ ಭಗವದ್ಗುಣಚಿಂತನೆಯನ್ನು ಮಾಡುವುದರಿಂದ. **ಸ್ತುವನ್**= ಆ ಪರಮಾತ್ಮನ ಅನುಭವದಿಂದುಂಟಾದ ಹರ್ಷಾತಿರೇಕದಿಂದ ಪುಲಕಿತದೇಹ ನಾಗಿ ಬಾಷ್ಪಗದ್ಗದಕಂಠದಿಂದ ವಾಚಿಕವಾಗಿ ಅವನ ಗುಣಸಂಕೀರ್ತನ ಮಾಡುವುದರಿಂದ. **ನಮಸ್ಯನ್**=ಅತ್ಯಂತನಮ್ರನಾಗಿ, ಭಕ್ತಿಪರಾಧೀನನಾಗಿ, ಒಳ-ಹೊರಕರಣಗಳೆಲ್ಲವೂ ಮಮಕಾರವನ್ನು ತೊರೆದಿರಲು–'ನಿನ್ನದಾಗಿ ರುವ ಇವೆಲ್ಲವನ್ನೂ ನೀನೇ ಸ್ವೀಕರಿಸೈ'–ಎಂದು ಭಗವತ್ಪಾದಪದ್ಮಗಳಲ್ಲಿ ತನ್ನನ್ನು ಸಮರ್ಪಿಸಿಕೊಳ್ಳುವುದರಿಂದ. **ಯಜಮಾನಃ** = ಅವನು ತನಗೆ ಮಾಡಿದ ಉಪಕಾರಕ್ಕೆ ಪ್ರತಿಯಾಗಿ ತಾನೇನೂ ಮಾಡಲಾರೆನೆಂದು ತಿಳಿದು ಅಕೃತ್ರಿಮವಾದ ಭಕ್ತಿಯಿಂದ ಸಂಪಾದಿಸಿದ ಅರ್ಘ್ಯ-ಪುಷ್ಪಾದಿಗಳಿಂದ ಅವನ ಆರಾಧನೆಯನ್ನು ಮಾಡುವವನು. ಉಪನಿಷತ್ತುಗಳಲ್ಲಿ ಹೇಳಿರುವ ವೇದನವೂ ಈ ಭಕ್ತಿಯೇ. **ವೇದನಮುಪಾಸನಂ ಸ್ಯಾತ್ತದ್ವಿಷಯೇ ಶ್ರವಣಾತ್**–ಎಂದು ವಾಕ್ಯಕಾರರು ಅದನ್ನು ವಿವರಿಸುತ್ತಾರೆ. **ಹೃದಾ ಮನೀಷಾ ಮನಸಾಭಿಕ್ಲೃಪ್ತೋ ಯ ಏನಂ ವಿದುರಮೃತಾಸ್ತೇ ಭವನ್ತಿ**–ಎಂಬ ಶ್ರುತಿವಾಕ್ಯದಲ್ಲಿರುವ **'ಹೃತ್'** ಎಂಬ ಶಬ್ದವೂ ಈ ಭಕ್ತಿಯನ್ನೇ ಹೇಳುತ್ತದೆ.

ಅನಾದಿನಿಧನಂ ವಿಷ್ಣುಂ ಸರ್ವಲೋಕಮಹೇಶ್ವರಮ್ ।
ಲೋಕಾಧ್ಯಕ್ಷಂ ಸ್ತುವನ್ನಿತ್ಯಂ ಸರ್ವದುಃಖಾತಿಗೋ ಭವೇತ್ ॥೬॥

ಆದ್ಯಂತರಹಿತನೂ, ಎಲ್ಲ ಲೋಕಗಳಿಗೂ ಈಶ್ವರನೂ, ಲೋಕಗಳಿಗೆ ಅಧ್ಯಕ್ಷನೂ ಆದ ಆ ಶ್ರೀವಿಷ್ಣುವನ್ನು (ವ್ಯಾಪಕನಾದ ಭಗವಂತನನ್ನು) ನಿರಂತರವಾಗಿ ಸ್ತೋತ್ರಮಾಡುವುದರಿಂದ ಪುರುಷನು ಎಲ್ಲ ದುಃಖಗಳನ್ನೂ ಮೀರಿ ಹೋಗುತ್ತಾನೆ.

* * *

ಶಂ. ಭಾ. :– **ಅನಾದಿನಿಧನಂ**=ಹುಟ್ಟು, ಸಾವು–ಇತ್ಯಾದಿ ಆರು ಭಾವ ವಿಕಾರಗಳಿಲ್ಲದವನನ್ನು ; **ವಿಷ್ಣುಂ**=ವ್ಯಾಪಕನನ್ನು ; **ಸರ್ವಲೋಕಮಹೇಶ್ವರಂ**= ಎಲ್ಲ ಲೋಕ (ದೃಶ್ಯವರ್ಗ) ಗಳನ್ನೂ ಆಳುತ್ತಿರುವ ಬ್ರಹ್ಮಾದಿಗಳಿಗೂ ಈಶ್ವರನಾದವನನ್ನು ; **ಲೋಕಾಧ್ಯಕ್ಷಂ**= ದೃಶ್ಯವರ್ಗವೆಲ್ಲವನ್ನೂ ಸ್ವಾಭಾವಿಕವಾಗಿ, ಜ್ಞಾನದಿಂದ ಸದಾ ನೋಡುತ್ತಿರುವವನನ್ನು. **ಸ್ತುವನ್**= ನಿತ್ಯವೂ ಸ್ತೋತ್ರಮಾಡುವ ಪುರುಷನು **ಸರ್ವದುಃಖಾತಿಗಃ** = ಆಧ್ಯಾತ್ಮಿಕ-ಆಧಿದೈವಕ-ಆಧಿಭೌತಿಕಗಳೆಂಬ ಎಲ್ಲ ದುಃಖಗಳನ್ನೂ ಮೀರಿ ಹೋಗುತ್ತಾನೆ.

ಆರು ಭಾವವಿಕಾರಗಳು : ಆಗುವಿಕೆ, ಹುಟ್ಟುವಿಕೆ, ವೃದ್ಧಿಹೊಂದುವಿಕೆ, ಪರಿಣಾಮಹೊಂದುವಿಕೆ, ಕ್ಷಯಹೊಂದುವಿಕೆ ಮತ್ತು ನಾಶಹೊಂದುವಿಕೆ. ಇವುಗಳು ಇಲ್ಲದ ಭಗವಂತನು–'ಅನಾದಿನಿಧನನು.'

* * *

ಪ. ಭ. :– ಮೇಲ್ಕಂಡ ಭಕ್ತಿಯು ಬಹೂನಾಂ ಜನ್ಮನಾಮನ್ತೇ ಜ್ಞಾನವಾನ್ಮಾಂ ಪ್ರಪದ್ಯತೇ (ಗೀತಾ ೭-೧೯) ಜನ್ಮಾನ್ತರಸಹಸ್ರೇಷು (ವಿಷ್ಣುಧರ್ಮ ಅಧ್ಯಾಯ-೧೯) ಇತ್ಯಾದಿ ಶಾಸ್ತ್ರವಚನಗಳು ಹೇಳುವಂತೆ ಅನೇಕಜನ್ಮಗಳಲ್ಲಿ ಪುಣ್ಯಮಾಡಿ ಅದರ ಫಲವಾಗಿ ಮನಸ್ಸಿನ ಕಷಾಯಗಳನ್ನು ಕಳೆದುಕೊಂಡವರಿಗೆ ಮಾತ್ರವೇ ದೊರೆಯುವುದು. ದೀರ್ಘಕಾಲದವರೆಗೆ ನಿರಂತರವಾಗಿ ಸೇವಿಸಿದರೆ ಮಾತ್ರವೇ ಅದರ ನೆಲೆಯು ದೃಢವಾಗುತ್ತದೆ. **ದೀರ್ಘಕಾಲನೈರಂತರ್ಯಸೇವಿತೋ ದೃಢಭೂಮಿಃ** (ಪಾತಂಜಲ ಸೂತ್ರ)

ಶಾಸ್ತ್ರೀಯವಾದ ಈ ಯಾವ ಉಪಾಯವನ್ನೂ ಆಚರಿಸಲಾಗದ ಪಾಮರಪ್ರಾಣಿಗಳಿಗೆ ಗತಿಯೇನು?–ಎಂಬ ಭಯವನ್ನು ನಿವಾರಣೆಮಾಡಲು ಅವರಿಗೆ ಸುಲಭವಾದ ಉಪಾಯವನ್ನು ತೋರಿಸುತ್ತಾ ಭೀಷ್ಮಾಚಾರ್ಯರು ಹೇಳುತ್ತಾರೆ.

ಅನಾದಿನಿಧನಂ–ಮುಂತಾದ ಪದಗಳು ಭಗವಂತನಿಗೆ ಮಾತ್ರವೇ ಅನ್ವಯಿಸುತ್ತವೆ. ಅವನೊಬ್ಬನೇ ಎಲ್ಲ ದೃಷ್ಟಿಗಳಿಂದಲೂ ಸ್ತುತಿಯೋಗ್ಯನಾದ ವನು ಎಂಬುದನ್ನು ಅದು ವ್ಯಕ್ತಪಡಿಸುತ್ತದೆ.

ಅನಾದಿನಿಧನಂ= ಆದ್ಯಂತಗಳಿಲ್ಲದವನನ್ನು. ಆದ್ದರಿಂದ ಕಾಲೋಪಾ ಧಿಗೆ ಒಳಪಡದೇ ಉಪಕಾರಮಾಡುವವನನ್ನು.

ವಿಷ್ಣುಂ= ವ್ಯಾಪಕನನ್ನು ; ದೇಶ ಎಂಬ ಉಪಾಧಿಗೆ ಒಳಪಡದೇ ಇರು ವವನನ್ನು. **ಸರ್ವಲೋಕಮಹೇಶ್ವರಂ**=ಸ್ತೋತ್ರಮಾಡುವವರ ಮನೋ ರಥವನ್ನು ಈಡೇರಿಸಲು ಪರ್ಯಾಪ್ತವಾದ ಮಹಾವಿಭೂತಿಯುಳ್ಳವನನ್ನು. **ಲೋಕಾಧ್ಯಕ್ಷಂ** = ಅದಕ್ಕೆ ಉಚಿತವಾದ ನಿರುಪಾಧಿಕವಾದ ಅನುಸಂಧಾನ ವುಳ್ಳವನು ; ಅಂತಹವನನ್ನು ನಿತ್ಯವೂ ಸ್ತೋತ್ರಮಾಡುವ ಪುರುಷನು ಎಲ್ಲ ದುಃಖಗಳನ್ನೂ ಮೀರಿ ಹೋಗುತ್ತಾನೆ.

* * *

ಬ್ರಹ್ಮಣ್ಯಂ ಸರ್ವಧರ್ಮಜ್ಞಂ ಲೋಕಾನಾಂ ಕೀರ್ತಿವರ್ಧನಮ್ ।
ಲೋಕನಾಥಂ ಮಹದ್ಭೂತಂ ಸರ್ವಭೂತಭವೋದ್ಭವಮ್ ॥೭॥

ಬ್ರಹ್ಮಣ್ಯನೂ (ಸೃಷ್ಟಿಕರ್ತನಾದ ಬ್ರಹ್ಮನಿಗೂ ಮತ್ತು ವೇದ-ತಪಸ್ಸು ಗಳೆಂಬ ಬ್ರಹ್ಮಕ್ಕೂ ಹಿತನಾದವನೂ), ಎಲ್ಲ ಧರ್ಮಗಳನ್ನೂ ಅರಿತವನೂ, ಲೋಕಗಳ ಕೀರ್ತಿಯನ್ನು ಅಭಿವೃದ್ಧಿಪಡಿಸುವವನೂ, ಲೋಕಗಳಿಗೆ ಒಡೆಯನೂ, ಮಹಾಸತ್ತ್ವವೂ, ಎಲ್ಲ ಭೂತಗಳ ಉತ್ಪತ್ತಿಸ್ಥಾನವೂ ಆಗಿರುವ ಮಹಾವಿಷ್ಣುವನ್ನು ಸ್ತುತಿಸುವುದರಿಂದ ಮನುಷ್ಯನು ಎಲ್ಲ ದುಃಖಗಳನ್ನೂ ದಾಟುತ್ತಾನೆ.

(ಬ್ರಹ್ಮಾ ಎಂದರೆ ಸೃಷ್ಟಿಕರ್ತಾ. ಬ್ರಹ್ಮಜ್ಞಾನಿಗಳಾದ ಬ್ರಾಹ್ಮಣರೂ ಬ್ರಹ್ಮಾ ಎನಿಸಿಕೊಳ್ಳುತ್ತಾರೆ. ಬ್ರಹ್ಮ–ಎಂದರೆ ವೇದ ಮತ್ತು ತಪಸ್ಸು–

ವೇದಸ್ತತ್ತ್ವಂ ತಪೋ ಬ್ರಹ್ಮ. ಇವೆಲ್ಲಕ್ಕೂ ಹಿತವಾಗಿರುವುದರಿಂದ ಭಗವಂತನು ಬ್ರಹ್ಮಣ್ಯನು. ಬ್ರಹ್ಮಣೇ ಹಿತಃ. ಲೋಕ ಎಂದರೆ ಪ್ರಪಂಚ ಅಥವಾ ಪ್ರಾಣಿ. 'ಲೋಕಾನಾಂ ಕೀರ್ತಿವರ್ಧನಂ' ಭಗವಂತನು ಎಲ್ಲ ಲೋಕಗಳಲ್ಲಿಯೂ ಅನುಪ್ರವಿಷ್ಟನಾಗಿದ್ದಾನೆ. ಎಲ್ಲ ಪ್ರಾಣಿಗಳನ್ನೂ ಅನ್ತಃ ಪ್ರವಿಷ್ಟಶ್ಶಾಸ್ತಾ ಜನಾನಾಂ ಎಂಬಂತೆ ಒಳಹೊಕ್ಕು ಆಳುತ್ತಿದ್ದಾನೆ. ಅವನು ಯಾವ ಯಾವ ಲೋಕಗಳಲ್ಲಿ ಪ್ರಕಟನಾದರೆ ಆ ಲೋಕವು ಪುಣ್ಯತಮವೆಂದು ಕೀರ್ತಿಸಲ್ಪಡುತ್ತದೆ. ಯದಧ್ಯಾಸಿತ ಮರ್ಹದ್ಭಿಃ ತದ್ಧಿ ತೀರ್ಥಂ ಪ್ರಚಕ್ಷತೇ. ಲೋಕವೆಂದರೆ ಪ್ರಾಣಿಯೆಂದೂ ಅರ್ಥವಾಗುತ್ತದೆ. ಭಗವಂತನು ಎಲ್ಲ ಪ್ರಾಣಿಗಳಲ್ಲೂ ಅಂತರ್ಯಾಮಿಯಾಗಿದ್ದು ಅವುಗಳಿಗೆ ನಾಮ-ರೂಪಗಳು ಬರುವಂತೆ ಮಾಡುತ್ತಾನೆ. ಅವುಗಳಿಂದ ಶ್ರೇಷ್ಠವಾದ ಕಾರ್ಯಗಳನ್ನು ಮಾಡಿಸಿ ಅವುಗಳಿಗೆ ಕೀರ್ತಿಬರುವಂತೆ ಮಾಡುವವನು ಅವನೇ. ಉದಾಹರಣೆಗೆ : ಇಂದ್ರಾದಿದೇವತೆಗಳು ದೈತ್ಯರನ್ನು ಜಯಿಸಿ ಕೀರ್ತಿಶಾಲಿಗಳಾಗಲು ಕಾರಣ–ಪರಮಚೈತನ್ಯಸ್ವರೂಪಿಯಾದ ಭಗವಂತನು ಅವರಲ್ಲಿ ಅಂತರ್ಯಾಮಿಯಾಗಿರುವುದರಿಂದಲೇ. ಇದಲ್ಲದೇ ಭಗವಂತನು ಲೋಕಗಳಲ್ಲಿ ನಾಮ-ರೂಪ-ವ್ಯಾಕರಣವನ್ನು ಉಂಟುಮಾಡದಿದ್ದರೆ ಅವು ಅವ್ಯಕ್ತವಾಗಿದ್ದು ಕೀರ್ತನೆಗೆ ವಿಷಯವೇ ಆಗುತ್ತಿರಲಿಲ್ಲ. ಹೀಗೆ ನಾನಾದೃಷ್ಟಿ ಗಳಿಂದ ಭಗವಂತನು ಲೋಕಗಳ ಕೀರ್ತಿವರ್ಧನನಾಗಿದ್ದಾನೆ.)

ಶಂ. ಭಾ. :– ಬ್ರಹ್ಮಣ್ಯಃ = ಬ್ರಹ್ಮಕ್ಕೆ ಹಿತವಾಗಿರುವವನು ; ಸೃಷ್ಟಿ ಕರ್ತನಿಗೆ, ಬ್ರಾಹ್ಮಣರಿಗೆ, ತಪಸ್ಸು ಮತ್ತು ಶ್ರುತಿಗಳಿಗೆ ಹಿತವಾಗಿರುವವನು.

ಲೋಕಾನಾಂ ಕೀರ್ತಿವರ್ಧನಃ = ಲೋಕ ಮತ್ತು ಪ್ರಾಣಿಗಳನ್ನು ತನ್ನ ಶಕ್ತಿಯಿಂದ ಅನುಪ್ರವೇಶಮಾಡಿ ವೃದ್ಧಿಪಡಿಸುವವನು.

ಲೋಕನಾಥಃ = ಲೋಕಗಳಿಂದ ಪ್ರಾರ್ಥಿಸಲ್ಪಡುವವನು ಅಥವಾ ಲೋಕಗಳನ್ನು ಅನುತಾಪಗೊಳಿಸುವವನು, ಶಾಸನಮಾಡುವವನು ಅಥವಾ ಲೋಕಗಳಿಗೆ ಅಧಿಪತಿಯಾದವನು.

ಮಹದ್ಭೂತಂ= ಮಹತ್ ಎಂದರೆ ಎಲ್ಲ ಉತ್ಕರ್ಷದಿಂದ ಕೂಡಿದ್ದು ಅಂದರೆ ಬ್ರಹ್ಮ. ಭೂತಂ–ಎಂದರೆ ಸತ್ಯ. ಆದ್ದರಿಂದ **ಮಹದ್ಭೂತಂ** ಎಂದರೆ ಪರಮಸತ್ಯವಾದ ಪರಬ್ರಹ್ಮ.

* * *

ಪ. ಭ. :– ಬ್ರಹ್ಮಣ್ಯಂ=ಅನಂತಶಾಖೆಗಳುಳ್ಳ ವೇದಗಳಿಂದ ಪ್ರತಿಪಾದಿಸಲ್ಪಡುವುದರಿಂದ ಅವುಗಳಿಗೆ ಹಿತನಾದವನು. ಆದ್ದರಿಂದಲೇ ಪ್ರಾರಂಭ ವಾದ ಸ್ತುತಿಗೆ ವಿಷಯನಾದವನು. **ಸರ್ವಧರ್ಮಜ್ಞಂ**= ಆದ್ದರಿಂದಲೇ ತನ್ನ ಸ್ತುತಿಯ ಪರಮಧರ್ಮವನ್ನರಿತವನು.

ಲೋಕಾನಾಂ ಕೀರ್ತಿವರ್ಧನಂ= ಸರ್ವಲೋಕಗಳಲ್ಲಿಯೂ ತನ್ನನ್ನು ಸ್ತೋತ್ರಮಾಡುವ ಭಕ್ತರೇ ಮುಂತಾದವರಿಗೆ **ಯಂ ಸ್ತುವನ್ ಸ್ತವ್ಯತಾಮೇತಿ** (ವಿಷ್ಣುಧರ್ಮ ೬-೭೫) ಎಂಬಂತೆ ತನ್ನಂತೆಯೇ ಕೀರ್ತಿಬರುವಂತೆ ಮಾಡುವವನು. ಸಮಸ್ತಲೋಕಗಳಲ್ಲಿ ಮತ್ತು ವೇದಗಳಲ್ಲಿ ಹೊಗಳಲ್ಪಡುವ ಕೀರ್ತಿಯನ್ನು ತನ್ನ ಭಕ್ತರಿಗೂ ಉಂಟುಮಾಡುವ ಉದಾರಿಯು. **ಲೋಕ ನಾಥಂ**= ಲೋಕಗಳ ಒಡೆಯ ಅಥವಾ ಸ್ತುತಿಯೇ ಮುಂತಾದ ಸಕಲಸೇವೆ ಗಳಿಗೂ ಯೋಗ್ಯನಾದವನು.

ಮಹದ್ಭೂತಂ = ಈಶ್ವರಧರ್ಮವಾದ ಪರಮಮಹತ್ತ್ವದಿಂದ ಕೂಡಿ ದವನು. ಆದ್ದರಿಂದ ಕ್ಲೇಶವಿಲ್ಲದೇ ಅನಾಯಾಸವಾಗಿ ಮಾಡಲ್ಪಡುವ ಸ್ತೋತ್ರ ಮಾತ್ರದಿಂದಲೇ ಸಂತೋಷಪಡುವವನು. ತಮ್ಮ ಅನುಗ್ರಹಸಂವಾದವನ್ನು ಸೂಚನೆಮಾಡಿದರೂ ಕೂಡ ಸಂತೋಷಪಡುತ್ತಾರಲ್ಲವೇ ಮಹಾತ್ಮರು? ಅದಕ್ಕೇ ಮಹಾಭಾರತದ ಉದ್ಯೋಗಪರ್ವದಲ್ಲಿ–

ಅನ್ಯತ್ಪೂರ್ಣಾದಪಾಂ ಕುಂಭಾತ್ ಅನ್ಯತ್ಪಾದಾವಸೇಚನಾತ್ ।
ಅನ್ಯತ್ಕುಶಲಸಂಪ್ರಶ್ನಾನ್ನ ಚೇಚ್ಛತಿ ಜನಾರ್ದನಃ ॥

ಪೂರ್ಣಕುಂಭ, ಪಾದಪ್ರಕ್ಷಾಳನ ಮತ್ತು ಕುಶಲಪ್ರಶ್ನೆ–ಇಷ್ಟು ಮಾತ್ರ ದಿಂದಲೇ ಸಂತೋಷಪಡುವವನು ಕೇಶವ–ಎಂದು ಹೇಳಿರುವುದು.

ಸರ್ವಭೂತಭವೋದ್ಭವಂ =ಎಲ್ಲ ಪ್ರಾಣಿಗಳ ಸತ್ತೆಗೆ ಕಾರಣನಾದ ವನು ; ಎಲ್ಲ ಸದ್ವಸ್ತುಗಳಿಗೂ ಅವಶ್ಯವಾಗಿ ಅನುಗ್ರಹಮಾಡುವವನು.

* * *

ಏಷ ಮೇ ಸರ್ವಧರ್ಮಾಣಾಂ ಧರ್ಮೋಽಧಿಕತಮೋ ಮತಃ ।
ಯದ್ಭಕ್ತ್ಯಾ ಪುಂಡರೀಕಾಕ್ಷಂ ಸ್ತವೈರರ್ಚೇನ್ನರಃ ಸದಾ ॥೮॥

ಮನುಷ್ಯನು ಭಕ್ತಿಯಿಂದ ಸದಾ ಪುಂಡರೀಕಾಕ್ಷ (ನಾರಾಯಣ)ನನ್ನು ಸ್ತೋತ್ರಗಳಿಂದ ಆರಾಧನೆಮಾಡುವುದೇ ಎಲ್ಲ ಧರ್ಮಗಳಲ್ಲಿಯೂ ಅಗ್ಗಳಿಕೆಯ ಧರ್ಮ–ಎಂಬುದು ನನ್ನ ಅಭಿಪ್ರಾಯ.

ಶಂ. ಭಾ. :– **ಸರ್ವಧರ್ಮಾಣಾಂ**=ವಿಧಿರೂಪವಾದ ಎಲ್ಲ ಧರ್ಮಗಳಲ್ಲಿಯೂ. **ಭಕ್ತ್ಯಾ** = ತತ್ಪರತೆಯಿಂದ. **ಪುಂಡರೀಕಾಕ್ಷಂ**= ಹೃದಯಪುಂಡರೀಕದಲ್ಲಿ ಪ್ರಕಾಶಿಸುತ್ತಿರುವ ವಾಸುದೇವನನ್ನು.

ಪರಮಾತ್ಮನ ಸ್ತುತಿರೂಪವಾದ ಆರಾಧನೆಯು ಇತರ ಆರಾಧನೆಗಳಿಗಿಂತಲೂ ಏಕೆ ಶ್ರೇಷ್ಠ? ಎಂದರೆ : ಇದರಲ್ಲಿ ಹಿಂಸೆಯೇ ಮುಂತಾದ ಪಾಪಕರ್ಮಗಳಿಲ್ಲ. ಇದನ್ನು ಮಾಡುವುದಕ್ಕೆ ಇತರ ಪುರುಷರು, ದ್ರವ್ಯಗಳು, ದೇಶ, ಕಾಲ–ಮುಂತಾದ ನಿಯಮಗಳ ಆವಶ್ಯಕತೆ ಇಲ್ಲ–**ಹಿಂಸಾದಿ ಪುರುಷಾನ್ತರ–ದ್ರವ್ಯಾನ್ತರ–ದೇಶಕಾಲಾದಿನಿಯಮಾನಪೇಕ್ಷತ್ವಂ ಆಧಿಕ್ಯೇ ಕಾರಣಂ ।**–ಆದ್ದರಿಂದಲೇ ವಿಷ್ಣುಪುರಾಣ, ಮನುಸ್ಮೃತಿ ಮತ್ತು ಮಹಾಭಾರತಗಳು ಜಪಯಜ್ಞವು ಸರ್ವೋತ್ತಮವೆಂದು ಕೊಂಡಾಡುತ್ತವೆ.

ಧ್ಯಾಯನ್ಕೃತೇ ಯಜನ್ಯಜ್ಞೈಸ್ತ್ರೇತಾಯಾಂ ದ್ವಾಪರೇಽರ್ಚಯನ್ ।
ಯದಾಪ್ನೋತಿ ತದಾಪ್ನೋತಿ ಕಲೌ ಸಂಕೀರ್ತ್ಯ ಕೇಶವನ್ ॥
(ವಿ.ಪು. ೬-೨-೧೭)

ಜಪ್ಯೇನೈವ ತು ಸಂಸಿಧ್ಯೇತ್ ಬ್ರಾಹ್ಮಣೋ ನಾತ್ರ ಸಂಶಯಃ ।
ಕುರ್ಯಾದನ್ಯನ್ನ ವಾ ಕುರ್ಯಾನ್ಮೈತ್ರೋ ಬ್ರಾಹ್ಮಣ ಉಚ್ಯತೇ ॥
(ಮನು ೨-೮೭)

ಜಪಸ್ತು ಸರ್ವಧರ್ಮೇಭ್ಯಃ ಪರಮೋ ಧರ್ಮ ಉಚ್ಯತೇ ।
ಅಹಿಂಸಯಾ ಚ ಭೂತಾನಾಂ ಜಪಯಜ್ಞಃ ಪ್ರವರ್ತತೇ ॥
(ಮ. ಭಾ. ಮೋಕ್ಷಧರ್ಮ)

ಯಜ್ಞಾನಾಂ ಜಪಯಜ್ಞೋಽಸ್ಮಿ (ಗೀತಾ ೧೦-೨೫)

(ಈ ಶ್ಲೋಕದಲ್ಲಿ ಧರ್ಮರಾಜನ ಐದನೆಯ ಪ್ರಶ್ನೆಗೆ ಉತ್ತರವು ಬಂದಿದೆ.)

* * *

ಪ. ಭ. :– ಪಶು-ಪುತ್ರರೇ ಮುಂತಾದ ಪ್ರಯೋಜನಗಳುಳ್ಳ ಧರ್ಮಗಳು ಐಹಿಕಧರ್ಮಗಳು. ಸ್ವರ್ಗಾದಿ ಪ್ರಯೋಜನಗಳುಳ್ಳ ಧರ್ಮಗಳು ಆಮುಷ್ಮಿಕಧರ್ಮಗಳು. ನಿರ್ಲಿಪ್ತರಾಗಿ ಭಗವದಾರಾಧನವೆಂಬ ಜ್ಞಾನದಿಂದ ಮಾಡುವ ಇಷ್ಟಾಪೂರ್ತಾದಿಕರ್ಮಗಳಿಂದ ಉಂಟಾದ ತತ್ತ್ವಜ್ಞಾನ ಸಮಾಧಿ ರೂಪವಾದುವು ಮೋಕ್ಷಧರ್ಮಗಳು. ಇವಲ್ಲದೇ ಅನುರಾಗಪೂರ್ವಕವಾಗಿ ಮಾಡುವ ಭಗವಂತನ ಸ್ಮರಣೆ, ಕೀರ್ತನೆ, ಪ್ರಣಾಮಗಳೇ ಮುಂತಾದ ಭಗವದಾರಾಧನಾತ್ಮಕಧರ್ಮಗಳು–ಹೀಗೆ ಧರ್ಮಗಳಲ್ಲಿ ನಾಲ್ಕು ಬಗೆಗಳು. ಅವುಗಳಲ್ಲಿ ಭಕ್ತಿಯಿಂದ ಭಗವಂತನನ್ನು ಸ್ತೋತ್ರಗಳಿಂದ ಆರಾಧಿಸುವುದು ಉತ್ಕೃಷ್ಟತಮವಾದ ಧರ್ಮ.

ಭಕ್ತ್ಯಾ= ಪ್ರೀತಿರೂಪವಾಗಿ–ಎಂದು ಹೇಳಿರುವುದರಿಂದ ಅದರ ಕಾರಣವೂ ಸುಖಸ್ವರೂಪವಾಗಿದೆಯೆಂದು ತಿಳಿಯಬೇಕು. **ಸುಸುಖಂ ಕರ್ತುಮವ್ಯಯಮ್** (ಗೀತಾ ೯-೨) ಪ್ರಿಯತಮನಾದ ಪತಿಯ ಸ್ಮರಣೆಯು ಪ್ರಿಯತಮವಾಗಿರುವುದು ಯುಕ್ತವೇ ಆಗಿದೆ. ಇದು ಅಮೃತಪಾನದಂತೆ. (ಇತರರ ಉಪಾಸನೆಯನ್ನು ಹಿತಬುದ್ಧಿಯಿಂದ ಮಾಡಿದರೂ ಅದು ಕಷಾಯ ಸೇವನೆಯಂತೆ.)

ಪುಂಡರೀಕಾಕ್ಷಂ= ಇತರತತ್ತ್ವಗಳಂತೆ ವಿಕೃತವಾಗಿ ಭಯಂಕರವಾಗಿಲ್ಲದೇ ಸುಂದರತಮನಾದವನು ಈ ಪರಮಾತ್ಮನು. **ಸ್ತವೈಃ** = ವಾಙ್ಮಾತ್ರದಿಂದಲೇ ಇಷ್ಟಸಿದ್ಧಿಯಾಗುವುದು. ವಿಶ್ವಜಿತ್, ಚಾಂದ್ರಾಯಣ–ಮುಂತಾದುವುಗಳಿಗಾದರೆ ಹೆಚ್ಚು ವ್ಯಯಮಾಡಬೇಕು. ಅಲ್ಲಿ ಆಯಾಸವೂ ಹೆಚ್ಚು. **ಸಂಕೀರ್ತ್ಯ ನಾರಾಯಣಶಬ್ದಮಾತ್ರಂ ವಿಮುಕ್ತದುಃಖಾಃ ಸುಖಿನೋ ಭವನ್ತಿ॥ ಅವಶೇನಾಪಿ ಯನ್ನಾಮ್ನಿ ಕೀರ್ತಿತೇ ।** (ವಿಷ್ಣುಪುರಾಣ.)

ಅಸ್ಯ ಜಾನನ್ತೋ ನಾಮ ಚಿದ್ವಿವಿಕ್ತನ
ಧ್ರುವಾಸೋ ಅಸ್ಯ ಕೀರಯೋ ಜನಾಸಃ ।

(ಇವನನ್ನು ಕೀರ್ತಿಸುವವರು ಪುನರಾವೃತ್ತಿರಹಿತರಾಗುತ್ತಾರೆ.)

(ವಿಷ್ಣುಸೂಕ್ತ)

ಈ ಭಗವದರ್ಚನೆಯನ್ನು ಮಾಡಲು ಎಲ್ಲ ಚೇತನರಿಗೂ ಅಧಿಕಾರವುಂಟು. ಮಹಾಯೋಗಗಳಂತೆ ಅನೇಕಸಹಕಾರಿಗಳು ಇದಕ್ಕೆ ಬೇಕಾಗಿಲ್ಲ. ಗುಣ, ಆಚಾರ ಮತ್ತು ಜನ್ಮಗಳಿಂದ ನಿಂದ್ಯರಾಗಿರುವವರೂ ಕೂಡ ಇದನ್ನು ಮಾಡಿ ಶುದ್ಧರಾಗಬಹುದು. **ಅಪಿ ಚೇತ್ಸುದುರಾಚಾರಃ** (ಗೀತಾ. ೯.೩೦) ಮತ್ತು **ಮಾಂ ಹಿ ಪಾರ್ಥ ವ್ಯಪಾಶ್ರಿತ್ಯ ಯೇಽಪಿ ಸ್ಯುಃ ಪಾಪ ಯೋನಯಃ**(ಗೀತಾ ೯-೩೨)

ಎಲ್ಲ ವರ್ಣ ಮತ್ತು ಆಶ್ರಮದವರಿಗೂ, ಆಶ್ರಮವೇ ಇಲ್ಲದವರಿಗೂ ಇದರಲ್ಲಿ ಅಧಿಕಾರವುಂಟು. **ಶಮದಮಾದ್ಯುಪೇತಃ ಸ್ಯಾತ್** (೩-೪-೨೭) **ಅಂತರಾ ಚಾಪಿ ತು ತದ್ದೃಷ್ಟೇಃ** ಎಂಬ (೩-೪-೩೬) ಬ್ರಹ್ಮಸೂತ್ರಗಳ ಅರ್ಥಗಳನ್ನು ಇಲ್ಲಿ ಗಮನಿಸಬೇಕು. ಶಬರೀ, ವಿದುರ, ಧರ್ಮವ್ಯಾಧ–ಮುಂತಾದ ಅನಾಶ್ರಮಿಗಳು ಇದಕ್ಕೆ ಉದಾಹರಣೆಗಳು.

ಧರ್ಮವ್ಯಾಧಾದಯೋಽಪ್ಯನ್ಯೇ ಪೂರ್ವಾಭ್ಯಾಸಾಜ್ಜುಗುಪ್ಸಿತೇ ।
ವರ್ಣಾವರತ್ವೇ ಸಂಪ್ರಾಪ್ತಾಃ ಸಂಸಿದ್ಧಿಂ ಶ್ರಮಣೀ ಯಥಾ ॥

(ವಿಷ್ಣುಧರ್ಮ-೧೦೦)

ಭಗವಂತನ ಧ್ಯಾನ, ಅರ್ಚನೆ, ಸ್ತುತಿಗಳಿಗೆ ಕಾಲ, ದೇಶ, ಅಧಿಕಾರಿ ಮೊದಲಾದ ಯಾವ ನಿಯಮವೂ ಬೇಕಿಲ್ಲ. ಅವನ ಸ್ತುತಿಗೆ ಯಾವ ಕಾಲ ದೇಶಗಳಾದರೂ ಆಗಬಹುದು.

'ಕೇವಲ ನಾಮಸಂಕೀರ್ತನೆಯೆಂಬ ಲಘುವಾದ ಉಪಾಯದಿಂದ ಮಹಾತಪಸ್ಸಿನ ಫಲವಾದ ಜ್ಞಾನ-ಮೋಕ್ಷಗಳು ಹೇಗೆ ದೊರಕುತ್ತವೆ?'– ಎಂದರೆ : ಇಲ್ಲಿ 'ಭಾವಶುದ್ಧಿ' ಎಂಬ ವಿಶೇಷವಾದ ಶಕ್ತಿಯಿದೆ. ಮನುಷ್ಯರಿಗೆ ಧರ್ಮಾಧರ್ಮಗಳಿಗೆ ಕಾರಣವಾದದ್ದು ಭಾವಶುದ್ಧಿಯೇ ಹೊರತು ಕ್ರಿಯಾ ವಿಶೇಷವಲ್ಲ.

ಭಾವಶುದ್ಧಿರ್ಮನುಷ್ಯಾಣಾಂ ಪ್ರಮಾಣಂ ಸರ್ವವಸ್ತುಷು ।
ಅನ್ಯಥಾಲಿಂಗ್ಯತೇ ಕಾನ್ತಾ ಸ್ನೇಹೇನ ದುಹಿತಾನ್ಯಥಾ ॥

ಆದ್ದರಿಂದ 1) ಪ್ರಿಯತಮನ ವಿಷಯವಾದ್ದರಿಂದ ಸುಖಕರವಾಗಿರುವುದರಿಂದಲೂ, 2) ವ್ಯಯ-ಆಯಾಸಗಳು ಇಲ್ಲದೇ ಇರುವುದರಿಂದ ಸುಲಭವಾಗಿರುವುದರಿಂದಲೂ, 3) ತುಂಬಾ ಪರೋಕ್ಷವಲ್ಲದೇ ಒಳಗೆ ಇರುವ ಆತ್ಮನಾಥನಿಗೆ ಪ್ರಿಯವನ್ನುಂಟುಮಾಡುವುದರಿಂದ ಆಕರ್ಷಕವಾಗಿರುವುದರಿಂದಲೂ, 4) ಅತಿಲಘುವಾಗಿದ್ದರೂ ಅತ್ಯಂತಗುರುವಾಗಿರುವ ಭವಭಯವನ್ನು ನಿರ್ಮೂಲಗೊಳಿಸುವ ಮಹಾಫಲವನ್ನು ಹೊಂದಿರುವುದರಿಂದಲೂ, 5) ಪ್ರತ್ಯವಾಯದೋಷವಿಲ್ಲದೇ ಇರುವುದರಿಂದಲೂ, 6) ಸರ್ವರಿಗೂ ಅಧಿಕಾರಸಂಪತ್ತು ಇದರಲ್ಲಿ ಇರುವುದರಿಂದಲೂ, 7) ನಿರ್ದಿಷ್ಟವಾದ ದೇಶ, ಕಾಲ, ಅವಸ್ಥೆ–ಇತ್ಯಾದಿಗಳ ಅಪೇಕ್ಷೆಯಿಲ್ಲದೇ ನಿರ್ವ್ಯಾಜವಾಗಿರುವುದರಿಂದಲೂ, 8) ವಿಷಯಪ್ರಭಾವದಿಂದ ನಿರ್ವಿಘ್ನವಾಗಿರುವುದರಿಂದಲೂ (ಇವೇ ಮುಂತಾದ ನಾನಾಕಾರಣಗಳಿಂದ) ಭಗವಂತನ ಸ್ತುತಿ-ಕೀರ್ತನಾದಿ ರೂಪವಾದ ಧರ್ಮವು ಭೀಷ್ಮಾಚಾರ್ಯರಿಗೆ ಪ್ರಿಯವಾದುದು. ಹಾಗೆಯೇ ಇತರ ಪರಮರ್ಷಿಗಳಿಗೂ ಅತ್ಯಂತೇಷ್ಟವಾದುದು. **ಸರ್ವೇಷಾಮಪಿ ಧರ್ಮಾಣಾಮುತ್ತಮೋ ವೈಷ್ಣವೋ ವಿಧಿಃ । ರಕ್ಷತೇ ಭಗವಾನ್ವಿಷ್ಣುಃ ಭಕ್ತಾನಾತ್ಮಶರೀರವತ್ । ಗೋವಿಂದಭಕ್ತ್ಯಾಭ್ಯಧಿಕಂ ಶ್ರೇಯಶ್ಚಾನ್ಯನ್ನ ವಿದ್ಯತೇ ॥**

* * *

ಪರಮಂ ಯೋ ಮಹತ್ತೇಜಃ ಪರಮಂ ಯೋ ಮಹತ್ತಪಃ ।
ಪರಮಂ ಯೋ ಮಹದ್ಬ್ರಹ್ಮ ಪರಮಂ ಯಃ ಪರಾಯಣಮ್ ॥

ಯಾವನು–ಉತ್ತಮವೂ ಮಹತ್ತೂ ಆದ ತೇಜಸ್ಸು ಆಗಿದ್ದಾನೆಯೋ, ಯಾವನು–ಉತ್ತಮವೂ ಮಹತ್ತೂ ಆದ ಬ್ರಹ್ಮನಾಗಿದ್ದಾನೆಯೋ ಮತ್ತು ಯಾವನು–ಉತ್ತಮವಾದ ಪರಮಲಕ್ಷ್ಯವಾಗಿದ್ದಾನೆಯೋ–(ಆ ವಿಷ್ಣುವಿನ ಸಹಸ್ರನಾಮಗಳನ್ನು ನನ್ನಿಂದ ಕೇಳು.)

ಶಂ. ಭಾ. :– ಇಲ್ಲಿ ಧರ್ಮರಾಜನ ಎರಡನೆಯ ಪ್ರಶ್ನೆಗೆ ಸಮಾಧಾನವನ್ನು ಹೇಳಿದೆ.

ಪರಮಂ ಮಹತ್ ತೇಜಃ= ಉತ್ಕೃಷ್ಟವೂ ದೊಡ್ಡದೂ ಆಗಿರುವ ಚೈತನ್ಯಲಕ್ಷಣವಾದ ತೇಜಸ್ಸು. **ಯೇನ ಸೂರ್ಯಸ್ತಪತಿ ತೇಜಸೇದ್ಧಃ** (ತೈ.ಬ್ರಾ.೩-೧೨-೭) **ಯದಾದಿತ್ಯಗತಂ ತೇಜಃ** (ಗೀತಾ ೧೫-೧೨) ಇತ್ಯಾದಿ ಸ್ಮೃತಿಗಳೂ ಹೇಳುವಂತೆ ಎಲ್ಲಕ್ಕೂ ಪ್ರಕಾಶಕವಾಗಿರುವ ತೇಜಸ್ಸು.

ಪರಮಂ ಮಹತ್ ತಪಃ= ಉತ್ಕೃಷ್ಟವೂ ದೊಡ್ಡದೂ ಆಗಿರುವ ತಪಸ್ಸು. **ತಪಃ**–ಎಂದರೆ ತಪಿಸುವವನು ಅಥವಾ ಆಜ್ಞಾಪಿಸುವವನು. **ಯ ಇಮಂ ಚ ಲೋಕಂ ಪರಂ ಚ ಲೋಕಂ ಸರ್ವಾಣಿ ಚ ಭೂತಾನಿ ಯೋಽನ್ತರೋ ಯಮಯತಿ** (ಬೃ.ಉ.೩-೭-೧) ಎಂದು ಅಂತರ್ಯಾಮಿ ಬ್ರಾಹ್ಮಣದಲ್ಲಿ ಆತನು ಸರ್ವನಿಯಾಮಕನೆಂದು ಹೇಳಿದೆ. **ಭೀಷಾಸ್ಮಾದ್ವಾತಃ ಪವತೇ** (ತೈ.ಉ. ೨-೮-೧) ಎಂದು ತೈತ್ತಿರೀಯವೂ ಹೇಳುತ್ತದೆ. ಅಥವಾ **ತಪಃ**–ಎಂದರೆ ಶಾಸನಮಾಡುವವನು, ಅಪರಿಮಿತವಾದ ಐಶ್ವರ್ಯವುಳ್ಳವನು. **ಏಷ ಸರ್ವೇಶ್ವರಃ** (ಮಾಂ.ಉ.೬)

ಪರಮಂ ಮಹತ್ ಬ್ರಹ್ಮ= ಸತ್ಯಲಕ್ಷಣವುಳ್ಳ ಪರಬ್ರಹ್ಮವು ಮಹತ್ತ್ವವುಳ್ಳದ್ದು, ಶ್ರೇಷ್ಠವಾದದ್ದು, ಪುನರಾವೃತ್ತಿಶಂಕೆಯೂ ಇಲ್ಲದ್ದು.

'ಪರಮಂ' ಎಂಬ ವಿಶೇಷಣವನ್ನು ಕೊಟ್ಟಿರುವುದರಿಂದ ಆದಿತ್ಯಾದಿ ತೇಜಸ್ಸುಗಳಿಂದ ಇದು ಬೇರೆಯಾದದ್ದು ಎಂದು ಸೂಚಿತವಾಗಿದೆ. ಅವೆಲ್ಲವೂ ಅವನ ತೇಜಸ್ಸಿನಿಂದಲೇ ಬೆಳಗುತ್ತವೆ.

ಪರಾಯಣಂ=ಉತ್ಕೃಷ್ಟವಾದ ಆಶ್ರಯ. ಯಾವ ದೇವನು ಪರಮ ತೇಜಸ್ಸು, ಪರಮತಪಸ್ಸು, ಪರಮಬ್ರಹ್ಮನಾಗಿದ್ದಾನೆಯೋ–ಅವನೊಬ್ಬನೇ ಎಲ್ಲ ಭೂತಗಳಿಗೂ ಪರಾಯಣ (ಪರಮಗತಿ) ನಾಗಿದ್ದಾನೆ ಎಂದು ಒಟ್ಟು ವಾಕ್ಯಾರ್ಥ. (**ದೇವಃ**–ಎಂಬುದು ಈ ಎಲ್ಲ ವಿಶೇಷಣಗಳಿಗೂ ವಿಶೇಷ್ಯ.)

* * *

ಪ. ಭ. :– ಅತ್ಯಂತಸ್ಪೃಹಣೀಯನಾಗಿರುವುದರಿಂದ ಅವನೇ ಪರಮ ಪುರುಷಾರ್ಥವೆಂಬುದನ್ನು ಸ್ಪಷ್ಟಪಡಿಸಲು **ಪರಮಂ ತೇಜಃ** ಇತ್ಯಾದಿ ಆರು ವಿಶೇಷಣಗಳನ್ನು ಕೊಟ್ಟಿದೆ.

ತೇಜಃ = ಸ್ವಯಂಪ್ರಕಾಶವಾದದ್ದು ಮತ್ತು ಉಳಿದುವುಗಳನ್ನು ಪ್ರಕಾಶ ಪಡಿಸುವುದು. ಪರಂ ಜ್ಯೋತಿರುಪಸಂಪದ್ಯ (ಛಾಂ.ಉ.೮-೧೨) **ತಸ್ಯಾದಿತ್ಯೋ ಭಾಮುಪಯುಜ್ಯ ಭಾತಿ** ಎಂದು ಹೇಳುವಂತೆ ನಿರವ ಧಿಕವಾದ ಪ್ರಕಾಶ. **ಮಹತ್ ಪರಮಂ**–ಎಂಬ ವಿಶೇಷಣಗಳು ಅವನಿಗೆ ಸಮನಾದ ಅಥವಾ ಮಿಗಿಲಾದ ತೇಜಸ್ಸು ಇರುವ ಸಂಭವವೇ ಇಲ್ಲ–ಎಂಬು ದನ್ನು ತೋರಿಸುತ್ತವೆ.

ತಪಃ = ಆಳುವವನು. **ಯೋ ದೇವೇಭ್ಯ ಆತಪತಿ** (ತೈ.ಆ.೩-೧೨)

ಬ್ರಹ್ಮ = ನಿರವಧಿಕಕಲ್ಯಾಣಸ್ವರೂಪಗುಣನಾಗಿ ಬೃಹತ್ತ್ವವುಳ್ಳವನು ಮತ್ತು ಸರ್ವಶಕ್ತನಾಗಿ ಎಲ್ಲವನ್ನೂ ಉಪಬೃಂಹಣ (ವೃದ್ಧಿ) ಪಡಿಸುವವನು.

* * *

ಪವಿತ್ರಾಣಾಂ ಪವಿತ್ರಂ ಯೋ ಮಂಗಲಾನಾಂ ಚ ಮಂಗಲಮ್ ।
ದೈವತಂ ದೇವತಾನಾಂ ಚ ಭೂತಾನಾಂ ಯೋಽವ್ಯಯಃ ಪಿತಾ ॥

ಯಾವನು ಪವಿತ್ರಪದಾರ್ಥಗಳಲ್ಲಿಯೂ ಪವಿತ್ರನಾಗಿದ್ದಾನೆಯೋ, ಮಂಗಲಪದಾರ್ಥಗಳಲ್ಲಿಯೂ ಅತ್ಯಂತಮಂಗಲವಾಗಿದ್ದಾನೆಯೋ, ದೇವತೆ ಗಳಿಗೂ ದೇವತೆಯಾಗಿದ್ದಾನೆಯೋ, ಎಲ್ಲ ಪ್ರಾಣಿಗಳಿಗೂ ಅವ್ಯಯನಾದ (ಅವಿಕಾರಿಯಾದ) ತಂದೆಯಾಗಿದ್ದಾನೆಯೋ–(ಆ ಮಹಾವಿಷ್ಣುವಿನ ಸಹಸ್ರ ನಾಮಗಳನ್ನು ನನ್ನಿಂದ ಕೇಳು.)

ಶಂ. ಭಾ.:– ಪವಿತ್ರಾಣಾಂ ಪವಿತ್ರಂ= ಪವಿತ್ರಮಾಡುವ ತೀರ್ಥಾ ದಿಗಳಲ್ಲಿಯೂ ಪವಿತ್ರನಾದವನು ಪರಮಪುರುಷ ಪರಮಾತ್ಮಾ. ಧ್ಯಾನಿಸಿದರೆ, ನೋಡಿದರೆ, ಕೀರ್ತನೆಮಾಡಿದರೆ, ಸ್ತೋತ್ರಮಾಡಿದರೆ, ಪೂಜಿಸಿದರೆ, ಸ್ಮರಿಸಿದರೆ, ನಮಸ್ಕರಿಸಿದರೆ–ಎಲ್ಲ ಪಾಪಗಳನ್ನೂ ನಿರ್ಮೂಲಗೊಳಿಸು ವವನು. ಅಥವಾ ತನ್ನ ಸ್ವರೂಪದ ಯಥಾರ್ಥಜ್ಞಾನದಿಂದ ಸಂಸಾರಬಂಧನಕ್ಕೆ ಕಾರಣವಾದ ಕರ್ಮವನ್ನೂ, ಅದಕ್ಕೆ ಕಾರಣವಾದ ಅಜ್ಞಾನ ವನ್ನೂ–ಎಲ್ಲವನ್ನೂ ನಾಶಪಡಿಸುವವನು. ಈ ಅಭಿಪ್ರಾಯವನ್ನು ನೂರಾರು ಶ್ರುತಿ-ಸ್ಮೃತಿ-ಇತಿಹಾಸ-ಪುರಾಣವಾಕ್ಯಗಳು ಪ್ರಮಾಣಿಸುತ್ತವೆ.

ಮಂಗಲಾನಾಂ ಚ ಮಂಗಲಂ = ಮಂಗಲಂ ಎಂದರೆ ಸುಖ-

ಸುಖಕ್ಕೆ ಸಾಧನ ಮತ್ತು ಜ್ಞಾಪಕವಾಗಿರುವುದೂ ಮಂಗಲ ಎನಿಸುತ್ತದೆ. ಅವುಗಳಿಗೂ ಕೂಡ ಪರಮಾನಂದಲಕ್ಷಣವಾದ ಪರಮಮಂಗಲವಾಗಿರುವುದರಿಂದ ಭಗವಂತನು ಮಂಗಲಗಳಿಗೂ ಮಂಗಲ ಎಂದು ಹೇಳಲ್ಪಟ್ಟಿದ್ದಾನೆ.

ದೈವತಂ ದೇವತಾನಾಂ ಚ: =ದೇವರುಗಳಿಗೂ ದೇವನಾದವನು. ಏಕೆಂದರೆ : ಪ್ರಕಾಶನವೇ ಮುಂತಾದುವುಗಳಲ್ಲಿ ಎಲ್ಲರಿಗಿಂತಲೂ ಉತ್ಕೃಷ್ಟನಾದವನು. **ಭೂತಾನಾಂ ಯಃ ಅವ್ಯಯಃ ಪಿತಾ**= ಎಲ್ಲ ಪ್ರಾಣಿಗಳಿಗೂ ನಾಶರಹಿತನಾದ ತಂದೆ ಅವನು. ಇಂತಹ ಯಾವ ದೇವರುಂಟೋ, ಲೋಕದಲ್ಲಿ ಅವನೊಬ್ಬನು ತಾನೇ ದೇವನು–ಎಂಬುದು ಇಲ್ಲಿಯ ವಾಕ್ಯಾರ್ಥ.

ಏಕೋ ದೇವಃ ಸರ್ವಭೂತೇಷು ಗೂಢಃ
ಸರ್ವವ್ಯಾಪೀ ಸರ್ವಭೂತಾನ್ತರಾತ್ಮಾ ।
ಕರ್ಮಾಧ್ಯಕ್ಷಃ ಸರ್ವಭೂತಾಧಿವಾಸಃ
ಸಾಕ್ಷೀ ಚೇತಾಃ ಕೇವಲೋ ನಿರ್ಗುಣಶ್ಚ ॥ (6-11)

ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ
ಯೋ ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ ।
ತಗ್ಂಹ ದೇವಮಾತ್ಮಬುದ್ಧಿಪ್ರಕಾಶಂ ।
ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೇ ॥ (6-18)

ಎಂದು ಶ್ವೇತಾಶ್ವತರಮಂತ್ರೋಪನಿಷತ್ತಿನಲ್ಲಿ ಇದನ್ನೇ ಹೇಳಿದೆ.

* * *

ಪ. ಭ. :– ಭಗವಂತನು ಪವಿತ್ರಗಳ ಮಧ್ಯದಲ್ಲಿ ಪರಮಪವಿತ್ರನು. ಶುದ್ಧಿವಿಶೇಷವನ್ನು ಉಂಟುಮಾಡುವವನು. ಶುದ್ಧಿ ಎಂದರೆ ದೋಷವಿಶೇಷದ ಪೊರೆಯು ಹೋಗುವಿಕೆ. ಅಚೇತನವು–ರಜಸ್ಸು ಮತ್ತು ತಮೋರೂಪಗಳಿಂದ ದೋಷಪರಿಣಾಮಗಳಿಗೆ ಬಹುಮಟ್ಟಿಗೆ ಆಶ್ರಯವಾಗಿದೆ. ಚೇತನವು ಅದನ್ನು ಆಲಿಂಗಿಸಿದ್ದರಿಂದ ಅವಿದ್ಯೆ, ಭಗವದಪರಾಧವಾದ ರಾಗ-ದ್ವೇಷಾದಿಗಳು ಉಂಟಾಗುತ್ತವೆ. ಅವುಗಳನ್ನು ಬೇರುಸಹಿತ ಧ್ವಂಸಮಾಡುವವನು ಭಗವಂತನೊಬ್ಬನೇ. ಅವನ ಸ್ವಭಾವವೇ ಸರ್ವಥಾ ದೋಷಕ್ಕೆ ವಿರೋಧವಾದದ್ದು.

ಶಾಸ್ತ್ರಗಳು ಅದೇ ಆಶಯವನ್ನೇ ಉದ್ಘೋಷಿಸುತ್ತವೆ. "ಏತಗ್ಂ ಹವಾವನತಪತಿ" (ತೈ. ಆ. ೯) "ಯಥಾ ಪುಷ್ಕರಪಲಾಶೇ ಆಪಃ ಶ್ಲಿಷ್ಯನ್ತೇ" (ಛಾಂ. ೪-೧೪-೩) "ತದ್ಯಥೇಷೀಕಾತೂಲಮಗ್ನೌ ಪ್ರೋತಂ ಪ್ರದೂಯೇತ" (ಛಾಂ. ೫-೨೪-೩)

ಧ್ಯಾಯೇನ್ನಾರಾಯಣಂ ದೇವಂ ಸ್ನಾನಾದಿಷು ಚ ಕರ್ಮಸು ।
ಪ್ರಾಯಶ್ಚಿತ್ತಿರ್ಹಿ ಸರ್ವಸ್ಯ ದುಷ್ಕೃತಸ್ಯೇತಿ ವೈ ಶ್ರುತಿಃ ॥

ಯಥಾಗ್ನಿರುದ್ಧತಶಿಖಃ ಕಕ್ಷಂ ದಹತಿ ಸಾನಿಲಃ ।
ತಥಾ ಚಿತ್ತಸ್ಥಿತೋ ವಿಷ್ಣುಃ ಯೋಗಿನಾಂ ಸರ್ವಕಿಲ್ಬಿಷಮ್ ॥
(ವಿ.ಪು. ೬-೭-೧೪)

ಇತರ ತೀರ್ಥಾದಿಗಳಿಗೆ ಪವಿತ್ರತ್ವವು ಉಂಟಾಗುವುದೂ ಅವನ ಸಂತೋಷಕ್ಕೆ ಅಧೀನವಾಗಿದೆ. ದೇವತೆಗಳಿಗೆ ಪಾವನತ್ವವು ಉಂಟಾಗುವುದೂ ಅವನ ಉಪಾಸನೆ-ಅರ್ಚನೆ-ಪಾದೋದಕಸೇವನೆಗಳಿಂದಲೇ.

ವಿಷ್ಣುವಾಮಪದಾಂಗುಷ್ಠವಿನಿಃಸೃತಸ್ಯ ಜಲಸ್ಯೈತಾವಾನ್ಮಾಹಾತ್ಮ್ಯಃ (ವಿ. ಪು. ೪-೪-೩೦) **ವಿಷ್ಣೋರಾಯತನಂ ಹ್ಯಾಪಃ ಸ ಹ್ಯಪಾಂ ಪತಿರುಚ್ಯತೇ ।**

ಎಂಬಂತೆ ಜಲಮಾತ್ರಕ್ಕೂ ಅವನ ಸಂಬಂಧದಿಂದ ಪವಿತ್ರತೆ. ಕಾಲಕ್ಕೂ ಹಾಗೆಯೇ. ಉದಾ : ಉತ್ಥಾನದ್ವಾದಶೀ, ಜಯಂತೀ ಶ್ರವಣಾದಿಗಳು. ಶಮ-ದಮಾದಿ ಆತ್ಮಗುಣಗಳು ಅವನ ಜ್ಞಾನಕ್ಕೆ ಅನುಗುಣವಾಗಿರುವುದರಿಂದಲೂ, ಯಜ್ಞ-ದಾನ-ಶ್ರಾದ್ಧಾದಿಕರ್ಮಗಳು ಅವನ ಆರಾಧನಾರೂಪವಾಗಿರುವುದ ರಿಂದಲೂ, ಬ್ರಾಹ್ಮಣಾದಿ ಜಾತಿಗಳು–ಆ ಭಗವತ್ಪರವಾದ ವೇದಾಧ್ಯಯನಾದಿ ಗಳು ಸಾಕ್ಷಾದಧಿಕಾರಿಗಳಾಗಿರುವುದರಿಂದಲೂ ಪವಿತ್ರತೆಯನ್ನು ಹೊಂದು ತ್ತವೆ. **ವಿಷ್ಣುಂ ಕ್ರಾನ್ತಂ ವಾಸುದೇವಂ ವಿಜಾನನ್ ವಿಪ್ರೋ ವಿಪ್ರತ್ವ ಮಾಪ್ನುಯಾತ್ ॥ ತತ್ತ್ವದರ್ಶೀ.** ಶ್ರುತಿ-ಸ್ಮೃತ್ಯಾದಿಗಳು ಅವನ ಪರವಾಗಿ ಅವನ ಶಾಸನವಾಗಿರುವುದರಿಂದ ಪವಿತ್ರವೆನಿಸುತ್ತವೆ. **ನಾರಾಯಣ ಪರಾವೇದಾಃ ಶ್ರುತೀಸ್ಮೃತಿರ್ಮಮೈವಾಜ್ಞೇ ।** ತೀರ್ಥಕ್ಷೇತ್ರಗಳಿಗೂ ಅವನಿಂದಲೇ ಪವಿತ್ರತ್ವವು. **ಪುಣ್ಯಾ ದ್ವಾರಾವತಿ ।**

ಆಸ್ತೇ ಹರಿರಚಿನ್ತ್ಯಾತ್ಮಾತತ್ರೈವ ಮಧುಸೂದನಃ ।
ತತ್ಪುಣ್ಯಂ ತತ್ಪರಂ ಬ್ರಹ್ಮ ತತ್ತೀರ್ಥಂ ತತ್ತಪೋವನಮ್ ॥
ಪವಿತ್ರಾಣಾಂ ಹಿ ಗೋವಿಂದಃ ಪವಿತ್ರಂ ಪರಮುಚ್ಯತೇ ।
ಪುಣ್ಯಾನಾಮಪಿ ಪುಣ್ಯೋಽಸೌ.......

ಅವನು ಮಂಗಲಗಳಿಗೂ ಮಂಗಲತಮನು-ಸುವಾಸಿತ ಪುಷ್ಪಮಾಲೆ, ಅಂಗರಾಗ, ಸುಧಾರಸಾದಿ ಮಂಗಲಗಳಿಗಿಂತಲೂ ಮತ್ತು ಸಂಸಾರಸಂಬಂಧವನ್ನು ಪೂರ್ಣವಾಗಿ ಕಳೆದುಕೊಂಡು ಜ್ಞಾನಾನಂದಸಾಂದ್ರನಾಗಿರುವ ಪ್ರತ್ಯಗಾತ್ಮನಿಗಿಂತಲೂ ಮಂಗಳತಮನು. ಅಂತಹ ಪರಿಶುದ್ಧಪ್ರತ್ಯಗಾತ್ಮನಿಗೂ ವರಣೀಯನಾದವನು.

ಏಕದೇವತೆ : ದೇವತೆಗಳಿಗೂ ದೇವತೆಯು ಅವನೇ. ಬ್ರಹ್ಮಾದಿ ದೇವತೆಗಳಿಗೂ ಮಹಾದೈವತವಾದ ಪರತತ್ತ್ವವೇ ಅವನು. ಏಕೆಂದರೆ ಅವರೆಲ್ಲರಿಗೂ ಅವನೇ ತಂದೆ. ಅನಂತರ ಬಂದ ಆಧುನಿಕ ಪಿತೃಗಳಿಗಿಂತಲೂ ಅವನ ವಿಶೇಷತೆಯುಂಟು. ಏಕೆಂದರೆ ಅವನು ಅವ್ಯಯ-ಅವಿಕಾರಿ. ಆ ಸನಾತನಪಿತನೇ ಅವರೆಲ್ಲರಿಗೂ ತಂದೆ.

* * *

ಯತಃ ಸರ್ವಾಣಿ ಭೂತಾನಿ ಭವನ್ತ್ಯಾದಿಯುಗಾಗಮೇ ।
ಯಸ್ಮಿಂಶ್ಚ ಪ್ರಲಯಂ ಯಾನ್ತಿ ಪುನರೇವ ಯುಗಕ್ಷಯೇ ॥೧೧॥

ಆದಿಯುಗವು (ಸತ್ಯಯುಗವು) ಬಂದಾಗ (ಕಲ್ಪದ ಪ್ರಾರಂಭದಲ್ಲಿ) ಯಾವನಿಂದ ಎಲ್ಲ ಭೂತಗಳೂ ಹುಟ್ಟುತ್ತವೆಯೋ ಮತ್ತು ಯುಗಗಳು ಮುಗಿದಾಗ (ಮಹಾಪ್ರಲಯಸಮಯದಲ್ಲಿ) ಯಾವನಲ್ಲಿಯೇ ಮತ್ತೆ ನಾಶ ಹೊಂದುತ್ತವೆಯೋ (ಆ ವಿಷ್ಣುವಿನ ಸಹಸ್ರನಾಮಗಳನ್ನು ನನ್ನಿಂದ ಕೇಳು.)

ಶಂ. ಭಾ. :– **ಆದಿಯುಗಾಗಮೇ**=ಕಲ್ಪದ ಪ್ರಾರಂಭದಲ್ಲಿ, **ಯುಗಕ್ಷಯೇ**=ಮಹಾಪ್ರಲಯದಲ್ಲಿ ಏವ–ಎಂಬ ಪದವು ಅವಧಾರಣಾರ್ಥಕ. ಯಾವನಿಂದ ಉತ್ಪನ್ನವಾದುವೋ ಅವನಲ್ಲಿಯೇ ಲೀನವಾಗುತ್ತವೆ–ಎಂದು ತಾತ್ಪರ್ಯ.

ಸೃಷ್ಟಿ ಮತ್ತು ಲಯಗಳ ಮಧ್ಯಕಾಲದಲ್ಲಿಯೂ ಅವನಲ್ಲಿಯೇ ಎಲ್ಲ

ಭೂತಗಳೂ ಇರುತ್ತವೆ–ಎಂಬುದನ್ನು **“ಚ”** ಎಂಬ ಪದವು ಸೂಚಿಸುತ್ತದೆ. **“ಯತೋ ವಾ ಇಮಾನಿ ಭೂತಾನಿ ಜಾಯನ್ತೇ । ಯೇನ ಜಾತಾನಿ ಜೀವನ್ತಿ, ಯತ್ಪ್ರಯನ್ತ್ಯಭಿಸಂವಿಶನ್ತಿ’’** (ತೈ.ಉ.೩-೧) ಎಂದು ತೈತ್ತಿರೀಯಶಾಂತಿಯು ಇದನ್ನೇ ಹೇಳುತ್ತದೆ.

* * *

ಪ. ಭ.:– ಯತಃ ಸರ್ವಾಣಿ ಭೂತಾನಿ ಭವನ್ತಿ–ಯಾವ ನಿಮಿತ್ತಕಾರಣದಿಂದ ಬ್ರಹ್ಮಾದಿಸ್ತಂಬಪರ್ಯಂತವಾದ ಎಲ್ಲ ಭೂತಗಳೂ ಉತ್ಪನ್ನವಾಗುತ್ತವೆಯೋ, (ಬ್ರಹ್ಮಸೃಷ್ಟಿಯ ನಂತರ ಆಗುವ ಅವಾಂತರ ಸೃಷ್ಟಿಯಲ್ಲಿ ಭಗವಂತನು ಬ್ರಹ್ಮ–ಮುಂತಾದವರ ಮುಖವಾಗಿಯೇ ಸೃಷ್ಟಿ ಮಾಡುತ್ತಾನೆ. ಆದರೂ ಪ್ರಥಮಸೃಷ್ಟಿಯಲ್ಲಿ ಅವನೇ ನೇರವಾಗಿ ಸೃಷ್ಟಿಸು ತ್ತಾನೆ. **‘ಆದಿಯುಗಾಗಮೇ’** ಎಂಬ ಪದದಿಂದ ಇದು ಸೂಚಿತವಾಗಿದೆ.) ಉಪಾದಾನಕಾರಣವೂ ಕೂಡ ಆ ಭಗವಂತನೇ ಎಂಬುದು ಮಹಾಪ್ರಳಯ ದಲ್ಲಿ ಯಾವ ಅವನಲ್ಲಿಯೇ ಲಯಹೊಂದುತ್ತವೆಯೋ **“ಯಸ್ಮಿಂಶ್ಚ ಪ್ರಲಯಂ ಯಾನ್ತಿ ಪುನರೇವ ಯುಗಕ್ಷಯೇ’’** ಎಂಬ ಶ್ಲೋಕಭಾಗದಿಂದ ಇದು ಸೂಚಿತವಾಗುತ್ತದೆ. ಕಾರ್ಯವು ಲಯಹೊಂದುವುದು ಉಪಾದಾನ ಕಾರಣದಲ್ಲಿ ತಾನೇ! (ಉದಾ : ಜೇಡರ ನೂಲು ಮುಂತಾದ್ದು ಆ ಹುಳುವಿನ ಲಾಲಾರಸ ಮುಂತಾದುದರಲ್ಲಿ ಲಯಹೊಂದುತ್ತದೆ. ಅಲ್ಲಿ ಲಾಲಾರಸವೇ ಉಪಾದಾನಕಾರಣ.) ಅವನೇ ಎಲ್ಲ ಭೂತಗಳ ಸ್ಥಿತಿ-ಪ್ರವೃತ್ತಿಗಳಿಗೆ ಕಾರಣವಾಗಿದ್ದಾನೆ ; ಸಹಕಾರಿಕಾರಣನಾಗಿದ್ದಾನೆ–ಎಂಬುದು **“ಚ”** ಕಾರದಿಂದ ಸ್ಪಷ್ಟಪಡುತ್ತದೆ. ಹೀಗೆ ಸರ್ವಪ್ರಕಾರದಲ್ಲಿಯೂ ಕಾರಣವಾಗಿರು ವಿಕೆಯೇ ಪರತತ್ತ್ವದ ಲಕ್ಷಣ. **“ಯತೋ ವಾ ಇಮಾನಿ ಭೂತಾನಿ ಜಾಯನ್ತೇ’’** (ತೈ.ಉ.೧) **“ಜನ್ಮಾದ್ಯಸ್ಯ ಯತಃ’’** (ಬ್ರಹ್ಮಸೂ ೧-೧-೧) ಮುಬ್ಬಗೆಯ ಕಾರಣವೂ ಅವನೇ.

“ ಬ್ರಹ್ಮವನಂ ಬ್ರಹ್ಮಸವೃಕ್ಷ ಆಸೀತ್ ” (ತೈ. ಬ್ರಾ. ೨-೮-೭) ಎಂದು ಉದಾಹರಿಸಿ ಬ್ರಹ್ಮಸೂತ್ರದಲ್ಲಿ **“ ಪ್ರಕೃತಿಶ್ಚ ಪ್ರತಿಜ್ಞಾದೃಷ್ಟಾ ನ್ತಾನುರೋಧಾತ್ ”** ಎಂಬ ಅಧಿಕರಣದಲ್ಲಿ ಈ ವಿಷಯವು ನಿರ್ಣಯಿಸ ಲ್ಪಟ್ಟಿದೆ.

ಯಃ ದೈವತಂ–ಎಂಬ ಅನುವಾದವು ಶಾಸ್ತ್ರಪ್ರಸಿದ್ಧಿಯನ್ನು ಸ್ಪಷ್ಟ ಪಡಿಸುತ್ತದೆ. ನಾರಾಯಣನೇ ಪರತತ್ತ್ವವೆಂಬುದು ವೇದ-ಶಾಸ್ತ್ರಗಳ ಅಭಿಪ್ರಾಯ. **ನಾರಾಯಣಂ ಪರಂ ಬ್ರಹ್ಮ ತತ್ತ್ವಂ ನಾರಾಯಣಃ ಪರಃ ।** (ತೈ.ನಾ.೧೧) **ತದ್ವಿಷ್ಣೋಃ ಪರಮಂ ಪದಂ ।** (ಕಠ ೩-೯) **ಯಸ್ಮಾತ್ಪರಂ ನಾಪರಮಸ್ತಿ ಕಿಂಚಿತ್ ।** (ಶ್ವೇ.ಉ.೩-೯) **ಪುರುಷಾನ್ನಪರಂ ಕಿಂಚಿತ್ ।** (ಕಠ. ೩-೧೧) **ಉತ್ತಮಃ ಪುರುಷಸ್ತ್ವನ್ಯಃ ।** (ಗೀತಾ ೧೫-೧೭). ಸತ್, ಬ್ರಹ್ಮ–ಮುಂತಾದ ಸಾಮಾನ್ಯಶಬ್ದಗಳೂ ಪರತತ್ತ್ವವಾದ ಇವನಲ್ಲೇ ವಿಶ್ರಾಂತಿ ಹೊಂದುತ್ತವೆ. ಪರತತ್ತ್ವವನ್ನು ಹೇಳಲು ಹೊರಟಿರುವ ಪುರುಷಸೂಕ್ತ, ಉತ್ತರನಾರಾಯಣ, ಸುಬಾಲ, ಮೈತ್ರಾಯಿಣೀ, ಮಹೋಪನಿಷತ್ತು, ಛಂದಸ್ಸು, ತೈತ್ತಿರೀಯ, ಐತರೇಯ, ಕಠವಲ್ಲಿ–ಮುಂತಾದ ಬಹಳ ಉಪನಿಷತ್ತುಗಳೂ, ದೇವತಾಪಾರಮಾರ್ಥ್ಯವನ್ನು ಬಲ್ಲ ಪರಾಶರರ ಸೂಕ್ತಿಯಾದ ವಿಷ್ಣುಪುರಾಣವೂ, ಶ್ರೀಮದ್ರಾಮಾಯಣವೂ ಇದನ್ನೇ ದೃಢಪಡಿಸುತ್ತವೆ. **ತ್ವಾಂ ಶೀಲರೂಪಚರಿತೈಃ ।** ಎಂಬ ಶ್ರೀಯಾಮುನಾಚಾರ್ಯ ವಾಣಿಯೂ **ತತ್ತ್ವಾರ್ಥತತ್ಪರಪರಶ್ಶತ ವೇದವಾಕ್ಯೈಃ ರೂಪಶ್ರಿಯಾ ಪರಮಯಾ ಪರಮೇಣ ಧಾಮ್ನಾ ।**ಎಂಬ ತಾತಪಾದವಚನಗಳೂ ಇದನ್ನೇ ಸಮರ್ಥಿಸುತ್ತವೆ.

* * *

ತಸ್ಯ ಲೋಕಪ್ರಧಾನಸ್ಯ ಜಗನ್ನಾಥಸ್ಯ ಭೂಪತೇಃ ।
ವಿಷ್ಣೋರ್ನಾಮಸಹಸ್ರಂ ಮೇ ಶೃಣು ಪಾಪಭಯಾಪಹಮ್ ॥೧೨॥

ಓ ಭೂಪತಿಯೇ! ಲೋಕಗಳಲ್ಲಿ ಪ್ರಧಾನನೂ, ಜಗನ್ನಾಥನೂ ಆದ ಆ ಮಹಾವಿಷ್ಣುವಿನ ಪಾಪಭಯಪರಿಹಾರಕರವಾದ ನಾಮಸಹಸ್ರವನ್ನು ನನ್ನಿಂದ ಕೇಳು.

ಶಂ. ಭಾ. :– **ತಸ್ಯ**=ಹಿಂದೆ ಹೇಳಿದ ಲಕ್ಷಣಗಳುಳ್ಳ ಏಕದೇವತೆಯಾದ, **ಲೋಕಪ್ರಧಾನಸ್ಯ**=ಲೋಕ ಎಂದರೆ ವಿದ್ಯಾಸ್ಥಾನಗಳು ಅವುಗಳಲ್ಲಿ ಪ್ರತಿಪಾದಿಸಲ್ಪಟ್ಟಿರುವ. **ಜಗನ್ನಾಥಸ್ಯ**=ಜಗತ್ತಿಗೆ ಒಡೆಯನಾದ ಮಾಯಾಶಬಲಿತನಾಗಿದ್ದರೂ ನಿರ್ಲಿಪ್ತನಾಗಿರುವ **ವಿಷ್ಣೋಃ** =ವ್ಯಾಪಿಸುವ ಸ್ವಭಾವವುಳ್ಳ, ಪರಮಾತ್ಮನ, **ಪಾಪಭಯಾಪಹಂ**=ಅಶುಭಕರ್ಮಗಳಿಂದ ಉಂಟಾದ

ಪಾಪವನ್ನೂ ಸಂಸಾರವೆಂಬ ಭಯವನ್ನೂ ಪರಿಹರಿಸುವ, **ನಾಮಸಹಸ್ರಂ ಮಯಾ ಶೃಣು**= ಏಕಾಗ್ರವಾದ ಮನಸ್ಸಿನಿಂದ ಕೇಳು.

ಏಕಸ್ಯೈವ ಸಮಸ್ತಸ್ಯ ಬ್ರಹ್ಮಣೋ ದ್ವಿಜಸತ್ತಮ ।
ನಾಮ್ನಾಂ ಬಹುತ್ವಂ ಲೋಕಾನಾಂ ಉಪಕಾರಕರಂ ಶೃಣು ॥

ನಿಮಿತ್ತಶಕ್ತಯೋ ನಾಮ್ನಾಂ ಭೇದಿನ್ಯಸ್ತದುದೀರಣಾತ್ ।
ವಿಭಿನ್ನಾನ್ಯೇವ ಸಾಧ್ಯನ್ತೇ ಫಲಾನಿ ದ್ವಿಜಸತ್ತಮ ॥

ಯಚ್ಛಕ್ತಿ ನಾಮ ಯತ್ತಸ್ಯ ತತ್ತಸ್ಮಿನ್ನೇವ ವಸ್ತುನಿ ।
ಸಾಧಕಂ ಪುರುಷವ್ಯಾಘ್ರ ಸೌಮ್ಯೇ ಕ್ರೂರೇಷು ವಸ್ತುಷು ॥

ಎಂಬ ವಿಷ್ಣುಧರ್ಮವಚನದಂತೆ ಪರಬ್ರಹ್ಮದಲ್ಲಿ ಗುಣ-ಕ್ರಿಯಾ-ಜಾತಿ-ರೂಢಿಗಳೆಂಬ ನಿಮಿತ್ತಶಕ್ತಿಗಳ ಸಂಭವವೇ ಇಲ್ಲ. ಆದರೂ ಪರಮಾತ್ಮನು ಸರ್ವಾತ್ಮಕ, ಸಗುಣ. ಬ್ರಹ್ಮದಲ್ಲಿ ಆ ಶಬ್ದಪ್ರವೃತ್ತಿಯ ಹೇತುಗಳು ಇರುವುದು ಸಂಭವ. ಆದ್ದರಿಂದ ಸಂಪೂರ್ಣಶಬ್ದಗಳೂ ಪರಮಪುರುಷಪರಮಾತ್ಮನಿಗೆ ಹೊದಿಕೆಯಾಗುತ್ತವೆ.

ಪ. ಭ. :– **ಲೋಕಪ್ರಧಾನಸ್ಯ**=ಸಮಸ್ತಕ್ಕೂ ಶೇಷಿಯಾಗಿರುವ **ಜಗನ್ನಾಥಸ್ಯ**=ಎಲ್ಲಕ್ಕೂ ನಿಯಾಮಕನಾಗಿರುವ ಯಾವ ವಿಷ್ಣುವುಂಟೋ ಅವನ ಸಹಸ್ರನಾಮವೇ ಪಾಪಭಯಪರಿಹಾರಕವಾದುದು. ಸರ್ವಪ್ರಕಾರವಾದ ಪಾಪಗಳನ್ನೂ ಅವುಗಳಿಂದ ಉಂಟಾಗುವ ಭಯವನ್ನೂ ಬೇರುಸಹಿತ ನಾಶಮಾಡುವುದು. ಅದನ್ನು ನನ್ನಿಂದ ಅಥವಾ ನನಗೋಸ್ಕರ ಕೇಳು.

ಭೀಷ್ಮರು ಹೇಳುತ್ತಿರುವಂತೆ ಧರ್ಮರಾಜನು ತಾನಾಗಿಯೇ ಕೇಳುತ್ತಾನೆ. ಆದರೂ 'ಕೇಳು' ಎಂದು ಕರೆಕೊಟ್ಟಿರುವುದಕ್ಕೆ ಕಾರಣವೇನು? 'ಭೂಪತೇ' (ಓ ರಾಜನೇ) ಎಂದು ಸಂಬೋಧಿಸಿರುವುದಕ್ಕೆ ಕಾರಣವೇನು?–ಎಂದರೆ : ಇದರ ಶ್ರವಣದಿಂದ ಹೇಳುವವನಿಗೂ ಉಂಟಾಗುವ ಮಹಾಲಾಭವನ್ನೂ ಮತ್ತು ಅದರ ಶ್ಲಾಘ್ಯತೆಯನ್ನೂ ಸೂಚಿಸುವುದಕ್ಕಾಗಿ.

*   *   *

ಯಾನಿ ನಾಮಾನಿ ಗೌಣಾನಿ ವಿಖ್ಯಾತಾನಿ ಮಹಾತ್ಮನಃ ।
ಋಷಿಭಿಃ ಪರಿಗೀತಾನಿ ತಾನಿ ವಕ್ಷ್ಯಾಮಿ ಭೂತಯೇ ॥೧೩॥

ಆ ಮಹಾತ್ಮನಾದ ವಿಷ್ಣುವಿನ ಗುಣಸಂಬಂಧದಿಂದ ಉಂಟಾಗಿರುವ (ಗೌಣವಾಗಿರುವ) ಮತ್ತು ಪ್ರಸಿದ್ಧವಾಗಿರುವ ಮಂತ್ರದರ್ಶಿ (ಋಷಿ)ಗಳಿಂದ ಹಾಡಲ್ಪಟ್ಟಿರುವ ಯಾವ ನಾಮಧೇಯಗಳುಂಟೋ–ಅವುಗಳನ್ನು ಭೂತಿಗೋಸ್ಕರ (ಪುರುಷಾರ್ಥಚತುಷ್ಟಯದ ಸಿದ್ಧಿಗೋಸ್ಕರ) ಹೇಳುವೆನು.

ಶಂ. ಭಾ. :– **ಗೌಣಾನಿ**=ಗುಣಸಂಬಂಧವಾದ, ಗುಣಯೋಗದಿಂದ ಉಂಟಾಗಿರುವ, **ಋಷಿಭಿಃ** = ಮಂತ್ರಗಳಿಂದಲೂ ಮತ್ತು ಮಂತ್ರದ್ರಷ್ಟಾರರಿಂದಲೂ, **ಪರಿಗೀತಾನಿ**=ಭಗವತ್ಕಥೆಗಳಲ್ಲಿ ಎಲ್ಲೆಡೆಗಳಲ್ಲಿಯೂ ಗಾನಮಾಡಲ್ಪಟ್ಟಿರುವ, **ಮಹಾತ್ಮನಃ** = ಅಚಿಂತ್ಯಪ್ರಭಾವನಾದ ದೇವನ, ಮಹಾಪುರುಷನ, **ಮಹಾಂಶ್ಚಾಸೌ ಆತ್ಮಾ ಚ=ಮಹಾತ್ಮಾ । ಆತ್ಮಾ** = ಎಂಬ ಶಬ್ದವನ್ನು ಲಿಂಗಪುರಾಣವು ಹೀಗೆ ವಿವರಿಸುತ್ತದೆ :

ಯಚ್ಚಾಪ್ನೋತಿ ಯದಾದತ್ತೇ ಯಚ್ಚಾತ್ತಿ ವಿಷಯಾನಿಹ ।
ಯಚ್ಚಾಸ್ತಿ ಸಂತತೋ ಭಾವಃ ತಸ್ಮಾದಾತ್ಮೇತಿ ಕೀರ್ತ್ಯತೇ ॥

ಆತ್ಮಾ–ಎಂದರೆ ಪುರುಷನು ಸುಷುಪ್ತಿಯಲ್ಲಿ ಬ್ರಹ್ಮಭಾವವನ್ನು ಹೊಂದುತ್ತಾನೆ (ಆಪ್ನೋತಿ) ; ಸ್ವಪ್ನದಲ್ಲಿ ಇಂದ್ರಿಯಗಳಿಲ್ಲದೆಯೇ ವಿಷಯಗಳನ್ನು ಗ್ರಹಣಮಾಡುತ್ತಾನೆ (ಆದತ್ತೇ) ; ಜಾಗ್ರದವಸ್ಥೆಯಲ್ಲಿ ವಿಷಯಗಳನ್ನು ಭೋಗಿಸುತ್ತಾನೆ. (ವಿಷಯಾನ್ ಇಹ ಅತ್ತಿ) ; ಮತ್ತು (ನಿರಂತರವಾಗಿ) ಇರುತ್ತಾನೆ (ಅಸ್ತಿ ಸಂತತೋ ಭಾವಃ). ಆದ್ದರಿಂದ ಆತ್ಮಾ ಎಂದರೆ ಪುರುಷನೇ.

ಭೂತಯೇ=ಪುರುಷಾರ್ಥಚತುಷ್ಟಯವನ್ನು ಬಯಸುವವರ ಇಷ್ಟಸಿದ್ಧಿಗಾಗಿ.

ಪ. ಭ. :– **ಗೌಣಾನಿ ಯಾನಿ ನಾಮಾನಿ**=ಗುಣಗಳ ಮತ್ತು ಕರ್ಮಗಳ ನಿಮಿತ್ತದಿಂದ ಉಂಟಾದ ಯಾವ ನಾಮಗಳುಂಟೋ, (ಗುಣ ಶಬ್ದವು ಕರ್ಮವನ್ನೂ ಸೂಚಿಸುತ್ತದೆ. **ಪ್ರಸನ್ನಾತ್ಮಾತ್ಮನೋ ನಾಮ್ನಾಂ ನಿರುಕ್ತಂ ಗುಣಕರ್ಮಜಮ್** (ಮ. ಭಾ. ಶಾಂತಿ ೩೪೧-೩) **ಗೌಣಾನಿ**

ಮಮ ನಾಮಾನಿ ಕೀರ್ತಿತಾನಿ ಚ ಕಾನಿಚಿತ್ (ಮ. ಭ. ಶಾಂತಿ ೩೪೧-೧೦) **ನಾಮಕರ್ಮಾರ್ಥವಿತ್ತಾತ** (ಮ. ಭಾ. ಉ. ೫೯-೧) **ನಿರುಕ್ತಂ ಕರ್ಮಜಾನಾಂ ಚ ಶೃಣುಷ್ವ ಪ್ರಯತೋಽನಘ** (ಮ. ಭಾ. ಶಾಂತಿ ೩೪೧-೧೦)

ಇವು ಆಕಸ್ಮಿಕವಾಗಿ ಬಂದ ಶಬ್ದಗಳಲ್ಲ. ಏಕೆಂದರೆ : ಇವುಗಳಿಗೆ ಉದ್ದಿಷ್ಟವಾದ ಅವಯವಾರ್ಥಗಳಿವೆ ಮತ್ತು ಇವು ಸಂಕೇತನಾಮಗಳಲ್ಲ.

ವಿಖ್ಯಾತಾನಿ ನಾಮಾನಿ= ವೈದಿಕ-ಲೌಕಿಕವಾಙ್ಮಯದಲ್ಲಿ ಪ್ರಸಿದ್ಧವಾಗಿ ರುವ ರೂಢನಾಮಗಳು. ಆ ಭಗವಂತನ ಅಸಾಧಾರಣನಾಮಧೇಯಗಳೆಂದು ರೂಢವಾಗಿರುವ ನಾಮಧೇಯಗಳು.

ಋಷಿಭಿಃ = ಅಶೇಷವೇದಾರ್ಥಗಳನ್ನು ತಿಳಿದವರಿಂದ, ಸನಕ-ಸನತ್ಕು ಮಾರ-ನಾರದಾದಿಗಳಿಂದ.

ಪರಿಗೀತಾನಿ=ಇವುಗಳ ರೂಪ ಹೀಗೆ, ನಿಮಿತ್ತ ಹೀಗೆ, ಇವು ಇವನಿಗೇ ವಾಚಕಗಳು–ಎಂಬುದಾಗಿ ಹಸುವು ತನ್ನ ಕರುವನ್ನು ಪ್ರೀತಿಯಿಂದ ಕೂಗು ವಂತೆ–ಪ್ರೀತಿಯಿಂದ ಪ್ರಯೋಗಿಸಲ್ಪಟ್ಟ ನಾಮಧೇಯಗಳು. ಅವುಗಳಲ್ಲಿ ಒಂದೊಂದರಿಂದಲೂ ಜೇನುಹುಳುವು ಜೇನನ್ನು ಸಂಗ್ರಹಿಸುವಂತೆ ಸಂಗ್ರಹಮಾಡಿ ಭಗವಾನ್ ವೇದವ್ಯಾಸರಿಂದ ಕೀರ್ತಿಸಲ್ಪಟ್ಟು ಸಂಪ್ರದಾಯ ಪರಂಪರೆಯಿಂದ ನಮ್ಮವರೆಗೂ ಬಂದಿರುವ ನಾಮಧೇಯಗಳು. ಅವುಗಳನ್ನು ನಿನಗೆ 'ಭೂತಿ' ಗೋಸ್ಕರ ಹೇಳುತ್ತೇನೆ. ಭೂತಿ ಎಂದರೆ ಸತ್ತೆ. ಅನಾದಿಸಂಸಾರದೃಷ್ಟಿಯಿಂದ ಆತ್ಮಸತ್ತೆಯನ್ನು ಕಳೆದುಕೊಂಡಿರುವವನ ಪುನರುಜ್ಜೀವನಕ್ಕಾಗಿ. ಅವನ ಜ್ಞಾನದಿಂದಲೇ ಸತ್ತೆ.

ಅಸ್ತಿ ಬ್ರಹ್ಮೇತಿ ಚೇದ್ವೇದ । ಸನ್ತಮೇನಂ ತತೋ ವಿದುರಿತಿ ।

ಅವನ ಮಹಿಮೆಯು ಅಪರಿಮಿತವಾದುದು. ಅರ್ಥಜ್ಞಾನವೂ ಅಪರಿಮಿತವಾದುದು. ಆದ್ದರಿಂದ ಅವನ ಎಲ್ಲ ನಾಮಗಳನ್ನೂ ಗ್ರಹಿಸುವುದು ಅಸಾಧ್ಯ. ಆದರೆ ಎಷ್ಟನ್ನು ಗ್ರಹಿಸಿದರೂ ಅದರಿಂದ ಆತ್ಮಲಾಭ.

ಶ್ರುತಮೇತಸ್ಯ ದೇವಸ್ಯ ನಾಮನಿರ್ವಚನಂ ಶುಭಮ್ ।
ಯಾವತ್ತತ್ರಾಭಿಜಾನೇಽಹಮಪ್ರಮೇಯೋ ಹಿ ಕೇಶವಃ ॥

ಭಗವಂತನ ನಾಮಧೇಯಗಳು ಗೌಣ ; ಗುಣಕರ್ಮಗಳ ನಿಮಿತ್ತದಿಂದ ಬಂದಿವೆ–ಎಂದು ಹೇಳಿರುವುದರಿಂದ ಭಗವಂತನು ಸಗುಣನೆಂಬುದು ಸ್ಪಷ್ಟಪಡುತ್ತದೆ. ಈ ಸಗುಣಬ್ರಹ್ಮವಿದ್ಯೆಯು ಮುಮುಕ್ಷುಗಳಿಗಲ್ಲ ; ಇತರ ಫಲಗಳನ್ನು ಅಪೇಕ್ಷಿಸುವವರಿಗೆ ಮಾತ್ರ ಎಂದು ವಾದಿಸುವುದು ಸರಿಯಲ್ಲ. ಏಕೆಂದರೆ : **ಇಲ್ಲಿಯೇ–ಮುಚ್ಯತೇ ಜನ್ಮಸಂಸಾರಬಂಧನಾತ್**–ಎಂದು ಮೋಕ್ಷವನ್ನು ಇದಕ್ಕೆ ಫಲವನ್ನಾಗಿ ಸ್ಪಷ್ಟವಾಗಿ ಹೇಳಿದೆ.

ಅಪಹತಪಾಪ್ಮಾ ವಿಜರಃ (ಛಾಂ. ಉ. ೮-೧-೫) **ಸತ್ಯಕಾಮಃ ಸತ್ಯಸಂಕಲ್ಪಃ ।** (ಛಾಂ. ಉ. ೮-೧-೫) **ಏತಂ ಹಿ ಸರ್ವಕಾಮಾನ್ಯಭಿ ಸಂವಿಶನ್ತಿ ಸರ್ವಸ್ಯ ವಶೀ ಸರ್ವಸ್ಯೇಶಾನಃ ।** (ಬೃ. ಉ. ೬-೪-೨೨) **ಯಃ ಸರ್ವಜ್ಞಃ ಸರ್ವವಿತ್ ।** (ಮುಂ. ೧-೧-೯) **ಪರಾಸ್ಯ ಶಕ್ತಿರ್ವಿವಿಧೈವ ಶ್ರೂಯತೇ ಸ್ವಾಭಾವಿಕೀ ಜ್ಞಾನಬಲಕ್ರಿಯಾ ಚ ।** (ಶ್ವೇ. ಉ.೬೧) **ಮಾತಾ ಪಿತಾ ಭ್ರಾತಾ ನಿವಾಸಃ ಶರಣಂ ಸುಹೃದ್ಗತಿರ್ನಾರಾಯಣಃ** (ಸುಬಾಲೋಪನಿಷತ್ ೬) **ಸರ್ವಕರ್ಮಾ ಸರ್ವಕಾಮಃ ಸರ್ವಗಂಧಃ ಸರ್ವರಸಃ**(ಛಾಂ .ಉ. ೩-೧೪)

ತೈತ್ತಿರೀಯ ಆನಂದವಲ್ಲಿಯಲ್ಲಿ ಪರಮಾತ್ಮನ ಜ್ಞಾನ-ಬಲಾದಿಗಳು ಅಪರಿಮಿತವಾದ್ದರಿಂದ ಮಾತು, ಮನಸ್ಸು–ಮುಂತಾದುವು ಅವನನ್ನು ಮುಟ್ಟಲಾರವೆಂದು ಸಾರಿದೆ. **ಯತೋ ವಾಚೋ ನಿವರ್ತನ್ತೇ ಅಪ್ರಾಪ್ಯ ಮನಸಾ ಸಹ**

ವಿಷ್ಣುಪುರಾಣದಲ್ಲಿ ಭಗವತ್‌ಶಬ್ದಕ್ಕೆ ನಿರ್ವಚನವನ್ನು ಹೇಳುವಾಗ **ಶುದ್ಧೇ ಮಹಾವಿಭೂತ್ಯಾಖ್ಯೇ** ಎಂಬುದನ್ನು ಗಮನಿಸಿ. (೬-೧೫-೭೨)

ಮಹಾಭಾರತದ ಸಭಾಪರ್ವದಲ್ಲಿ ಭೀಷ್ಮರೇ–

ಜ್ಞಾನವೃದ್ಧಾ ಮಯಾ ರಾಜನ್ ಬಹವಃ ಪರ್ಯುಪಾಸಿತಾಃ ।
ತೇಷಾಂ ಗುಣವತಾಂ ಶೌರೇರಹಂ ಗುಣವತೋ ಗುಣಾನ್ ।
ಸಮಾಗತಾನಾಮಶ್ರೌಷಂ ಬಹೂನ್ಬಹುಮತಾನ್ಸತಾಮ್ ॥ (೧೮-೧೨).

ಗುಣೈರ್ವೃದ್ಧಾನತಿಕ್ರಮ್ಯ ಹರಿರರ್ಚ್ಯತಮೋ ಮತಃ ॥ (ಸಭಾ ೩೮-೧೭) ಎನ್ನುತ್ತಾರೆ.

ಕರ್ಣಪರ್ವದಲ್ಲಿ ಅವನು ಅಪರಿಮಿತಗುಣಸಂಪನ್ನನೆಂದು ಸಾರಿದೆ.

ವರ್ಷಾಯುತೈರ್ಯಸ್ಯ ಗುಣಾ ನ ಶಕ್ಯಾ
ವಕ್ತುಂ ಸಮೇತೈರಪಿ ಸರ್ವಲೋಕೈಃ ।
ಮಹಾತ್ಮನಃ ಶಂಖಚಕ್ರಾಸಿಪಾಣೇಃ
ವಿಷ್ಣೋರ್ಜಿಷ್ಣೋರ್ವಸುದೇವಾತ್ಮಜಸ್ಯ ॥

(ಮ.ಭಾ.ಕರ್ಣ ೭೯-೬೫)

ಯಥಾ ರತ್ನಾನಿ ಜಲಧೇರಸಂಖ್ಯೇಯಾನಿ ಪುತ್ರಕ ।
ತಥಾ ಗುಣಾ ಹ್ಯನನ್ತಸ್ಯ ಅಸಂಖ್ಯೇಯಾ ಮಹಾತ್ಮನಃ ॥

(ಮತ್ಸ್ಯಪುರಾಣ)

ನ ಹಿ ತಸ್ಯ ಗುಣಾಃ ಸರ್ವೇ ಸರ್ವೈರ್ಮುನಿಗಣೈರಪಿ ।
ವಕ್ತುಂ ಶಕ್ಯಾ ವಿಯುಕ್ತಸ್ಯ ಸತ್ತ್ವಾದ್ಯೈರಖಿಲೈರ್ಗುಣೈಃ ॥

(ವಿಷ್ಣುಧರ್ಮ ೬೬-೧೬)

ನಾಮಕರ್ಮಸ್ವರೂಪಾಣಿ ನ ಪರಿಚ್ಛೇದಗೋಚರೇ ।
ಯಸ್ಯಾಖಿಲಪ್ರಮಾಣಾನಿ ಸ ವಿಷ್ಣುರ್ಗರ್ಭಗಸ್ತವ ॥

(ವಿ.ಪು. ೫-೨-೧೯)

ಎಂಬ ಪುರಾಣವಚನಗಳೂ ಗಮನಿಸಲ್ಪಡಬೇಕು.

ಹೀಗೆ ಅವನಿಗೆ ಶುದ್ಧವಾದ ಗುಣಗಳನ್ನು ಶಾಸ್ತ್ರಗಳು ಹೇಳಿರುವುದರಿಂದ 'ನಿರ್ಗುಣ' ಶ್ರುತಿಗಳಿಗೆ ಅವನಲ್ಲಿ 'ಹೇಯಗುಣಗಳಿಲ್ಲ' ಎಂಬ ಅರ್ಥವನ್ನೇ ಹೇಳಬೇಕು.

ಹೀಗೆ ಕಲ್ಯಾಣಗುಣಪರಿಪೂರ್ಣನಾದ ಭಗವಂತನ ಸಹಸ್ರನಾಮಗಳ ನಿರುಕ್ತಿಯನ್ನು ಹೇಳುತ್ತೇನೆ.

* * *

ಶಂ. ಭಾ. :– (1) ಈ ನಾಮಸಹಸ್ರದಲ್ಲಿ 'ಆದಿತ್ಯ' ಮುಂತಾದ ಶಬ್ದಗಳು ಬರುತ್ತವೆ. ಅವುಗಳಿಗೆ 'ಸೂರ್ಯ' ಮುಂತಾದ ಪ್ರಸಿದ್ಧವಾದ ಅರ್ಥಗಳಿದ್ದರೂ ಅವೆಲ್ಲವೂ ಭಗವಂತನ ವಿಭೂತಿಗಳಾಗಿರುವುದರಿಂದ ಭಗವಂತನಿಂದ ಬೇರೆಯಲ್ಲ. ಆದ್ದರಿಂದ ಆ ಪ್ರಸಿದ್ಧವಾದ ಅರ್ಥಗಳನ್ನು ಹೇಳಿದರೂ ಅವುಗಳಿಂದ ಭಗವಂತನೇ ಸ್ತುತಿಸಲ್ಪಡುತ್ತಾನೆ.

ಭೂತಾತ್ಮಾ ಚೇಂದ್ರಿಯಾತ್ಮಾ ಚ ಪ್ರಧಾನಾತ್ಮಾ ತಥಾ ಭವಾನ್ ।
ಆತ್ಮಾ ಚ ಪರಮಾತ್ಮಾ ಚ ತ್ವಮೇಕಃ ಪಂಚಧಾ ಸ್ಥಿತಃ (೫-೧೮-೫೦)

ಜ್ಯೋತೀಂಷಿ ವಿಷ್ಣುರ್ಭುವನಾನಿ ವಿಷ್ಣುರ್ವನಾನಿ ವಿಷ್ಣುರ್ಗಿರಯೋ ದಿಶಶ್ಚ ।
ನದ್ಯಃ ಸಮುದ್ರಾಶ್ಚ ಸ ಏವ ಸರ್ವಂ ಯದಸ್ತಿ ಯನ್ನಾಸ್ತಿ ಚ ವಿಪ್ರವರ್ಯ ॥ (೨.೧೨.೩೮)

ಎಂದು ವಿಷ್ಣುಪುರಾಣವು ಇದೇ ಅರ್ಥವನ್ನು ಹೇಳುತ್ತದೆ.

ಆದಿತ್ಯಾನಾಮಹಂ ವಿಷ್ಣುಃ । ಅಥವಾ ಬಹುನೈತೇನ ಕಿಂ ಜ್ಞಾತೇನ ತವಾರ್ಜುನ । ವಿಷ್ಟಭ್ಯಾಹಮಿದಂ ಕೃತ್ಸ್ನಮೇಕಾಂಶೇನ ಸ್ಥಿತೋ ಜಗತ್। ಎಂಬ ಗೀತಾಸೂಕ್ತಗಳನ್ನೂ,–**ಬ್ರಹ್ಮೈವೇದಂ ವಿಶ್ವಮಿದಂ ವರಿಷ್ಠಂ ।** (ಮುಂ. ೨-೨-೧೧) **ಪುರುಷ ಏವೇದಂ ವಿಶ್ವಂ ।** (ಮುಂ.೨-೧-೧೦) ಎಂಬ ಶ್ರುತಿವಾಕ್ಯಗಳನ್ನು ಪರಿಶೀಲಿಸಿದರೂ ಇದೇ ಅಭಿಪ್ರಾಯವೇ ಸ್ಥಿರಪಡುತ್ತದೆ.

(2) ಈ ಸಹಸ್ರನಾಮಸ್ತೋತ್ರದಲ್ಲಿ 'ವಿಷ್ಣು' ಮುಂತಾದ ಶಬ್ದಗಳು ಹಲವು ಬಾರಿ ಬಂದಿವೆ. ಇದು ಪುನರುಕ್ತಿದೋಷವಲ್ಲವೇ? ಎಂದರೆ ಇಲ್ಲ. ವೃತ್ತಿಭೇದದಿಂದ ಅವುಗಳಿಗೆ ಅರ್ಥಭೇದವುಂಟು.

ಹಾಗೆಯೇ 'ಶ್ರೀಪತಿ, ಮಾಧವ' ಇತ್ಯಾದಿ ಶಬ್ದಗಳಲ್ಲಿ ವೃತ್ತಿಭೇದ ವಿಲ್ಲದಿದ್ದರೂ ಶಬ್ದಭೇದವಿರುವುದರಿಂದ ಪುನರುಕ್ತಿದೋಷವಿಲ್ಲ. ಅರ್ಥದ ಐಕ್ಯವಿದ್ದರೂ ಇಲ್ಲಿನ ಪುನರುಕ್ತಿಯು ದೋಷಕ್ಕೆ ಕಾರಣವಾಗುವುದಿಲ್ಲ. ಏಕೆಂದರೆ : ಈ ಸಹಸ್ರನಾಮಗಳೂ–'**ಕಿಮೇಕಂ ದೈವತಂ**' ಏಕಮಾತ್ರ ಪರಾದೇವತೆಯು ಯಾವುದು?–ಎಂದು ಕೇಳಿರುವುದರಿಂದ ಏಕದೇವತಾ ವಿಷಯಗಳೇ ಆಗಿವೆ. ಸಹಸ್ರನಾಮಗಳಲ್ಲಿ ಪುಲ್ಲಿಂಗಶಬ್ದಗಳು ಇರುವೆಡೆ ಯಲ್ಲೆಲ್ಲಾ ವಿಶೇಷ್ಯವು 'ವಿಷ್ಣು'. ಸ್ತ್ರೀಲಿಂಗಶಬ್ದಗಳು ಇರುವೆಡೆಯಲ್ಲೆಲ್ಲಾ 'ದೇವತಾ' ಎಂಬುದು ವಿಶೇಷ್ಯ. ನಪುಂಸಕಲಿಂಗಶಬ್ದಗಳು ಇರುವ ಜಾಗಗಳಲ್ಲಿ 'ಬ್ರಹ್ಮ' ಎಂಬುದು ವಿಶೇಷ್ಯ.

* * *

ಓಂ॥ ವಿಶ್ವಂ ವಿಷ್ಣುರ್ವಷಟ್ಕಾರೋ ಭೂತಭವ್ಯಭವತ್ಪ್ರಭುಃ ।
ಭೂತಕೃದ್ಭೂತಭೃದ್ಭಾವೋ ಭೂತಾತ್ಮಾ ಭೂತಭಾವನಃ ॥೧೪॥

1) ವಿಶ್ವಂ=ವಿಶ್ವರೂಪಿಯು. **ಪುರುಷ ಏವೇದಂ ವಿಶ್ವಂ ।** (ಮುಂ. ೨-೧-೧೦) ಜಾಗ್ರದವಸ್ಥೆಯಲ್ಲಿ ಮತ್ತು ಸ್ಥೂಲಶರೀರವ್ಯಷ್ಟಿಯಲ್ಲಿ ತೃಪ್ತಿಯನ್ನು ಹೊಂದುವ ಚೈತನ್ಯನು. **ಸ್ಥೂಲಂ ತರ್ಪಯತೇ ವಿಶ್ವಂ** (ಮಾಂಡೂಕ್ಯ ಗೌ. ಕಾ. ೪) ಪ್ರಣವದ ಪ್ರಥಮಮಾತ್ರೆಯಿಂದ ಸೂಚಿತವಾಗುವ ಚೈತನ್ಯನು.

ಶಂಕರಭಾಷ್ಯ:– ನಿರುಪಾಧಿಕವಾದ ಮತ್ತು ಉಪಾಧಿಸಹಿತವಾದ ಬ್ರಹ್ಮವನ್ನು ಈ ಶಬ್ದವು ಹೇಳುತ್ತದೆ.

ವಿಶ್ವಕ್ಕೆ ಅಥವಾ ಜಗತ್ತಿಗೆ ಕಾರಣವಾದ ಬ್ರಹ್ಮವು. ವಿಶ್ವವು ಭಗವಂತನ ಕಾರ್ಯ. ಆದರೂ ಅದು ಕಾರಣನಾದ ಭಗವಂತನನ್ನೇ ನಿರ್ದೇಶಿಸುತ್ತದೆ. ಕಾರ್ಯಭೂತರಾಗಿರುವ ಬ್ರಹ್ಮ ಮುಂತಾದವರ ನಾಮಧೇಯಗಳಿಂದಲೂ ಕಾರಣನಾದ ವಿಷ್ಣುವೇ ಸ್ತುತಿಸಲ್ಪಡುತ್ತಾನೆ ಎಂಬುದನ್ನು ಇದರಿಂದ ತಿಳಿಯಬೇಕು. **ಬ್ರಹ್ಮೈವೇದಂ ವಿಶ್ವಮಿದಂ ವರಿಷ್ಠಮ್** (ಮುಂ. ೨-೨-೧೧) ಎಂದು ಶ್ರುತಿಯು ಹೇಳುವಂತೆ ಈ ವಿಶ್ವವು ಪರಮ ಪುರುಷನಿಂದ ಭಿನ್ನವಾದುದೇ ಅಲ್ಲ. ಅಥವಾ ವಿಶತೀತಿ ವಿಶ್ವಂ= ಬ್ರಹ್ಮ । **ತದೇವಾನುಪ್ರಾವಿಶತ್ ।** (ತೈ.ಉ. ೨-೬). ಅಥವಾ ಸಂಹಾರಸಮಯದಲ್ಲಿ ಎಲ್ಲ ಭೂತಗಳೂ ಯಾವನಲ್ಲಿ ಪ್ರವೇಶಮಾಡುತ್ತವೆಯೋ–ಅವನು. **ಯತ್ಪ್ರಯನ್ತ್ಯಭಿಸಂವಿಶನ್ತಿ ।** (ತೈ.ಉ.೩-೧)

ಓಂಕಾರಸ್ವರೂಪಿಯು. **ಓಮಿತ್ಯೇಕಾಕ್ಷರಂ ಬ್ರಹ್ಮ ।** (ಗೀತಾ ೮-೧೩) **ಏತದ್ವೈ ಸತ್ಯಕಾಮ ಪರಂ ಚಾಪರಂ ಚ ಬ್ರಹ್ಮ ಯದೋಂಕಾರಃ ।** (ಪ್ರಶ್ನ ಉ.೫-೨) **ಪ್ರಣವೋ ಹ್ಯಪರಂ ಬ್ರಹ್ಮ ಪ್ರಣವಶ್ಚ ಪರಂ ಸ್ಮೃತಃ ।** (ಮಾಂ. ಕಾ. ೧-೨೬) ಓಂಕಾರವು ಪರಮಾತ್ಮನಿಗೆ ವಾಚಕ. ವಾಚ್ಯ-ವಾಚಕಗಳಿಗೆ ಅತ್ಯಂತಭೇದವಿಲ್ಲವಾದ್ದರಿಂದ ವಿಶ್ವಶಬ್ದದಿಂದ ಓಂಕಾರವು ಹೇಳಲ್ಪಡುತ್ತದೆ. ಹಿಂಸಾದಿರಹಿತನಾಗಿ ವಿಶ್ವ

ಮಾತ್ರವನ್ನು ಬ್ರಹ್ಮವೆಂದರಿತು ಶ್ರದ್ಧೆಯಿಂದ ಸ್ತುತಿ-ನಮಸ್ಕಾರಾದಿಗಳನ್ನು ಮಾಡಬೇಕು.

ಕಿಮೇಕಂ ದೈವತಂ ಲೋಕೇ–ಇತ್ಯಾದಿಯಾಗಿ ಧರ್ಮರಾಜನು ಮಾಡುವ ಪ್ರಶ್ನೆಗಳಿಗೆ **ಯತಃ ಸರ್ವಾಣಿ ಭೂತಾನಿ**–ಎಂದು ಉತ್ತರವಾಗಿ ಭೀಷ್ಮಾಚಾರ್ಯರಿಂದ ಹೇಳಲ್ಪಟ್ಟಿರುವ ಯಾವ 'ಬ್ರಹ್ಮ' ವುಂಟೋ ಅದೇ ವಿಶ್ವಶಬ್ದದಿಂದ ಹೇಳಲ್ಪಡುತ್ತದೆ.

1) **ಪರಾಶರಭಟ್ಟೀಯ :** ಸ್ವಾಭಾವಿಕ, ನಿರವಧಿಕ ಮತ್ತು ಕಲ್ಯಾಣ ತಮವಾದ ಸ್ವರೂಪ-ರೂಪ-ಗುಣ-ವೈಭವಗಳಿಂದ ಎಲ್ಲೆಡೆಗಳಲ್ಲಿಯೂ ಪರಿಪೂರ್ಣನಾದವನು. **ವಿಶತಿ ಅವಯವಾನ್ ಇತಿ ವಿಶ್ವಃ ।**

ವೇಶನಾದ್ವಿಶ್ವಮಿತ್ಯಾಹುರ್ಲೋಕಾನಾಂ ಕಾಶಿಸತ್ತಮ ।
ಲೋಕಾಂಶ್ಚ ವಿಶ್ವಮೇವೇತಿ ಪ್ರವದನ್ತಿ ನರಾಧಿಪ ॥
(ಮ. ಭಾ. ಮೋಕ್ಷಧರ್ಮ ಪಂಚಶಿಖರ ಉಕ್ತಿ)

ನಿರುಕ್ತಿಃ: **ವಿಶ್ವಂ ಸರ್ವತ್ರ ಪೂರ್ಣತ್ವಾತ್ಸ್ವರೂಪಗುಣವೈಭವೈಃ ॥**

1) **ಸತ್ಯಸನ್ಧೀಯ :** ಜಗತ್ತನ್ನು ಪ್ರವೇಶಮಾಡಿರುವವನು ; ಜ್ಞಾನರೂಪಿ ಯಾಗಿರುವವನು ; ಗರುಡವಾಹನನು ; ವಿಶೇಷವಾಗಿ ವ್ಯಾಪಿಸುವವನು ; ವೃದ್ಧಿಹೊಂದಿರುವವನು ; ವಾಯುವನ್ನು ಅಂತರ್ಯಾಮಿಯನ್ನಾಗಿ ನಡೆಸುವವನು ; ವಿಶ್ವವನ್ನು ನಡೆಸುವವನು ; ವಿಶ್ವಕ್ಕೆ ಕಾರಣನಾದವನು ; ಜೀವನಿಯಾಮಕ ; ವಿಶ್ವಂ= ಶರೀರದಲ್ಲಿ ಪ್ರವೇಶಮಾಡಿರುವವನು–ಅಂದರೆ ಜೀವ. ಅವನು ವಿಷ್ಣುವಿಗೆ ಅಧೀನನಾಗಿರುವುದರಿಂದ ವಿಷ್ಣುವಿಗೆ ವಿಶ್ವ– ಎಂದು ಹೆಸರು.

ಶರೀರೇಷು ಪ್ರವಿಷ್ಟತ್ವಾದ್ವಿಶ್ವೋ ಜೀವ ಉದೀರ್ಯತೇ ।
ಜೀವಸ್ಯ ತದಧೀನತ್ವಾದ್ವಿಷ್ಣುರ್ವಿಶ್ವ ಇತಿ ಸ್ಮೃತಃ ॥

* * *

2) **ವಿಷ್ಣುಃ :–** ವ್ಯಾಪಕನು

ಶಂ. ಭಾ. :– ಹಿಂದಿನ ನಾಮಧೇಯದಲ್ಲಿ ಹೇಳಿರುವ ವಿಶ್ವಶಬ್ದ

ವಾಚ್ಯವಾದ ಬ್ರಹ್ಮವು ಯಾವುದು? ಎಂದರೆ ವಿಷ್ಣುವು. ವ್ಯಾಪಿಸಿರುವವನು ಅಥವಾ ಪ್ರವೇಶಮಾಡಿರುವವನು.

ತಮು ಸ್ತೋತಾರಃ ಪೂರ್ವ್ಯಂ ಯಥಾವಿದ ಋತಸ್ಯ ಗರ್ಭಂ ಜನುಷಾ ಪಿಪರ್ತನ । ಆಽಸ್ಯ ಜಾನನ್ತೋ ನಾಮ ಚಿದ್ವಿವಕ್ತನ । ಮಹಸ್ತೇ ವಿಷ್ಣೋ ಸುಮತಿಂ ಭಜಾಮಹೇ । (ಋ. ಸಂ.೨-೨-೨೬) ಇತ್ಯಾದಿ ಶ್ರುತಿಗಳಿಂದ ಮಾಡಿದ ಯಾವನ ನಾಮಸಂಕೀರ್ತನವು ಸಮ್ಯಗ್ ಜ್ಞಾನದ ಪ್ರಾಪ್ತಿಗಾಗಿ ವಿಹಿತವಾಗಿದೆಯೋ–ಅವನು. ವ್ಯಾಪಿಸಿರುವವನು. **ವೇವೇಷ್ಟಿ ವ್ಯಾಪ್ನೋತಿ ಇತಿ ವಿಷ್ಣುಃ ।**–ದೇಶ-ಕಾಲ-ವಸ್ತುಪರಿಚ್ಛೇದವಿಲ್ಲದವನು.

ವ್ಯಾಪ್ತಾ ಮೇ ರೋದಸೀ ಪಾರ್ಥ ಕಾನ್ತಿಶ್ಚಾಭ್ಯಧಿಕಾ ಮಮ ।
ಕ್ರಮಣಾಚ್ಚಾಪ್ಯಹಂ ಪಾರ್ಥ ವಿಷ್ಣುರಿತ್ಯಭಿಸಂಜ್ಞಿತಃ ॥

(ಮ. ಭಾ. ಶಾ. ೩೪೧-೪೨-೪೩)

ಯಚ್ಚ ಕಿಂಚಿಜ್ಜಗತ್ಸರ್ವಂ ದೃಶ್ಯತೇ ಶ್ರೂಯತೇಽಪಿ ವಾ ।
ಅನ್ತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಃ ಸ್ಥಿತಃ ॥

(ಮ.ನಾ. ೧೩-೧-೨)

ಸರ್ವಭೂತಸ್ಥಿತಂ ನಾರಾಯಣಂ ಕಾರಣಪುರುಷಮಕಾರಣಮ್ ।
ಪರಂ ಬ್ರಹ್ಮ ಶೋಕಮೋಹವಿನಿರ್ಮುಕ್ತಂ ವಿಷ್ಣುಂ ಧ್ಯಾಯನ್ನ
ಸೀದತಿ ॥ (ಆತ್ಮಬೋಧೋಪನಿಷತ್)

ಪ್ರವೇಶಮಾಡಿರುವವನು. **ವಿಶತಿ ಇತಿ ವಿಷ್ಣುಃ**=ಮಹಾತ್ಮನಾದ ಯಾವನಿಂದ ಮತ್ತು ಯಾವನ ಶಕ್ತಿಯಿಂದ ಈ ಜಗತ್ತೆಲ್ಲವೂ ಪ್ರವಿಷ್ಟವಾಗಿದೆಯೋ–ಅವನು.

ಯಸ್ಮಾದ್ವಿಷ್ಟಮಿದಂ ಸರ್ವಂ ಯಸ್ಯ ಶಕ್ತ್ಯಾ ಮಹಾತ್ಮನಃ ।
ತಸ್ಮಾದ್ವಿಷ್ಣುರಿತಿ ಖ್ಯಾತೋ ವಿಶೇರ್ಧಾತೋಃ ಪ್ರವೇಶನಾತ್ ॥

(ವಿ.ಪು.೩-೧-೪೫)

2) **ಪ. ಭ. :–** (ತನ್ನ ವಿಭೂತಿಯಾಗಿರುವ ಚಿದಚಿದಾತ್ಮಕವಾದ ಎಲ್ಲವನ್ನೂ) ಪ್ರವೇಶಮಾಡಿರುವವನು. **"ವಿವೇಶ ಭೂತಾನಿ ಚರಾಚರಾಣಿ"** (ತೈ. ನಾ. ೬-೧-೪) **"ತದೇವಾನುಪ್ರಾವಿಶತ್"** (ತೈ. ಉ. ೨-೬)

ವ್ಯಾಪ್ಯ ಸರ್ವಾನಿಮಾನ್ ಲೋಕಾನ್ ಸ್ಥಿತಃ ಸರ್ವತ್ರ ಕೇಶವಃ ।
ತತಶ್ಚ ವಿಷ್ಣುನಾಮಾಸಿ ವಿಶೇರ್ಧಾತೋಃ ಪ್ರವೇಶನಾತ್ ॥

(ಹರಿವಂಶ)

ನಿರುಕ್ತಿ : ಚರಾಚರೇಷು ಭೂತೇಷು ವೇಶನಾದ್ವಿಷ್ಣುರುಚ್ಯತೇ ॥

2) **ಸ. ಸಂ. :–** ಸರ್ವವ್ಯಾಪಿಯು ; (ವಿಷ್‌ಲೃ-ವ್ಯಾಪ್ತೌ) ಸರ್ವ ಪ್ರವೇಶಿ ; (ವಿಶ–ಪ್ರವೇಶನೇ) ತ್ರಿವಿಕ್ರಮರೂಪದಿಂದ ಪಾದಕ್ರಮಣ ಮಾಡಿದವನು. (ವಯತಿ=ಗಚ್ಛತೀತಿ ವಿಷ್ಣುಃ)

*　　　　*　　　　*

3) **ವಷಟ್ಕಾರಃ :–** ವಷಟ್ ಎಂಬ ಯಜ್ಞಮಂತ್ರರೂಪಿಯಾಗಿ ಅದಕ್ಕೆ ಉದ್ದೇಶವೂ ಆಗಿರುವವನು.

೧) ಆಶ್ರಾವಯ, ೨) ಅಸ್ತು ಶ್ರೌಷಟ್, ೩) ಯಜ, ೪) ಯೇ ಯಜಾಮಹೇ ಮತ್ತು ೫) ವಷಟ್–ಈ ಐದೂ ಯಜ್ಞಮಂತ್ರಗಳು.

ಶಂ.ಭಾ. :– 'ವಷಟ್' ಮಂತ್ರವುಳ್ಳ ಯಜ್ಞಸ್ವರೂಪಿಯು. "ಯಜ್ಞೋ ವೈ ವಿಷ್ಣುಃ" (ತೈ.ಸಂ.೧-೭-೪). ವಷಟ್ಕಾರಾದಿ ಮಂತ್ರಾತ್ಮನಾಗಿ ದೇವತೆಗಳನ್ನು ಸಂತೋಷಪಡಿಸುವವನು. ವಷಟ್ಕಾರ ದೇವತೆ. ಪ್ರಜಾಪತಿಶ್ಚ ವಷಟ್‌ಕಾರಶ್ಚ (ಐ.ಬ್ರಾ.೧-೨-೧೦)

ಚತುರ್ಭಿಶ್ಚ ಚತುರ್ಭಿಶ್ಚ ದ್ವಾಭ್ಯಾಂ ಪಂಚಭಿರೇವ ಚ ।
ಹೂಯತೇ ಚ ಪುನರ್ದ್ವಾಭ್ಯಾಂ ಸ ಮೇ ವಿಷ್ಣುಃ ಪ್ರಸೀದತು ॥

(ಮ.ಭಾ. ಭೀಷ್ಮಸ್ತವರಾಜ)

3) **ಪ. ಭ. :–** ಸರ್ವವನ್ನೂ ವಶಪಡಿಸಿಕೊಂಡವನು. ತನ್ನ ಇಚ್ಛೆಗೆ ಅನುಗುಣವಾಗಿ ನಡೆಯುವಂತೆ ಮಾಡಿಕೊಂಡಿರುವವನು.

ಸರ್ವಸ್ಯ ವಶೀ ಸರ್ವಸ್ಯೇಶಾನಃ (ಬೃ.ಉ.೬-೪-೨೨) **ಜಗದ್ವಶೇ ವರ್ತತೇದಂ** (ಮ.ಭಾ.ಅನು. ೧೪೯-೧೩೫)

ನಿರುಕ್ತಿ :– ಸ್ವೇಚ್ಛಯಾ ಯೋ ವಶೇ ಸರ್ವಂ ವಷಟ್ಕಾರಃ ಕರೋತಿ ಸಃ ॥

3) **ಸ. ಸಂ. :–** ಐಶ್ವರ್ಯ, ವೀರ್ಯ, ಯಶಸ್ಸು, ಶ್ರೀ, ಜ್ಞಾನ, ವೈರಾಗ್ಯ ಎಂಬ ಆರೂ ಯಾವನಲ್ಲಿವೆಯೋ–ಅವನು ; ಷಡ್ಗುಣಗಳಿಂದ ವರ್ತಿಸುವವನು ; ವಷಟ್ ಎಂದು ಆಹ್ವಾನಿಸಲ್ಪಡುವವನು.

*   *   *

4) **ಭೂತಭವ್ಯಭವತ್ಪ್ರಭುಃ**–ತ್ರಿಕಾಲನಿಯಾಮಕನು, ಕಾಲತ್ರಯಾತೀತನು.

ಶಂ. ಭಾ. :– ಭೂತ, ಭವಿಷ್ಯತ್ ಮತ್ತು ವರ್ತಮಾನಗಳಿಗೆ ಪ್ರಭುವಾದವನು. ಈ ದೇವನ ಸತ್ತಾಮಾತ್ರರೂಪವಾದ ಐಶ್ವರ್ಯವು ಎಲ್ಲ ಕಾಲಭೇದವನ್ನೂ ಉಪೇಕ್ಷಿಸಿದೆ. ಕಾಲಾತೀತವಾದ ಸನ್ಮಾತ್ರಸ್ವರೂಪೀ.

ಕಾಲಭೇದಮನಾದೃತ್ಯ ಸನ್ಮಾತ್ರಪ್ರತಿಯೋಗಿಕಂ ಐಶ್ವರ್ಯಂ ಅಸ್ಯ ಇತಿ ಪ್ರಭುತ್ವಮ್

4) **ಪ. ಭ. :–** ಕಾಲತ್ರಯದಲ್ಲಿ ಇರುವುದಕ್ಕೆ ಶೇಷಿಯಾದವನು ; (ಇವೆಲ್ಲವೂ ಇರುವುದು ಅವನಿಗೋಸ್ಕರ ಮತ್ತು ಅವನೇ ಇವೆಲ್ಲದರ ಸ್ವಾಮಿಯು) **ಕೃಷ್ಣಸ್ಯ ಹಿ ಕೃತೇ ವಿಶ್ವಮಿದಂ ಭೂತಂ ಚರಾಚರಮ್** (ಮ.ಭಾ. ಸಭಾ.೩೮-೨೩) **ಭೂತಭವ್ಯಭವನ್ನಾಥಃ ಕೇಶವಃ ಕೇಶಿಸೂದನಃ ||**

ನಿರುಕ್ತಿ :– **ತ್ರಿಕಾಲವರ್ತಿನಾಂ ಶೇಷೀ ಭೂತಭವ್ಯಭವತ್ಪ್ರಭುಃ ||**

4) **ಸ. ಸಂ. :–** ಅತೀತ, ಆಗಾಮಿ, ವರ್ತಮಾನಗಳ ಪ್ರಭು ; ಪುಷ್ಕಳ ಮಂಗಳವನ್ನುಂಟುಮಾಡುವವನೂ ಮತ್ತು ಪ್ರಭುವೂ ಆದವನು.

*   *   *

5) **ಭೂತಕೃತ್ :–** ಭೂತಗಳನ್ನು ಸೃಷ್ಟಿಸುವವನು.

ಶಂ. ಭಾ. :– ರಜೋಗುಣವನ್ನಾಶ್ರಯಿಸಿ ಬ್ರಹ್ಮರೂಪದಿಂದ ಭೂತಗಳನ್ನು ರಚಿಸುವವನು (**ಕರೋತಿ**) ಅಥವಾ ತಮೋಗುಣವನ್ನಾಶ್ರಯಿಸಿ ರುದ್ರಾತ್ಮನಾಗಿ ಭೂತಗಳನ್ನು ಕತ್ತರಿಸಿಹಾಕುವವನು. (**ಕೃನ್ತತಿ, ಕೃಣೋತಿ, ಹಿನಸ್ತೀತಿ ವಾ**)

5) **ಪ. ಭಾ. :–** ಇಲ್ಲಿಂದ ಪ್ರಾರಂಭವಾಗುವ ಐದು ನಾಮಗಳೂ ಭಗವಂತನು ಶೇಷಿಯೆಂಬುದನ್ನೇ ಪ್ರತಿಪಾದಿಸುತ್ತವೆ.

ಭೂತಕೃತ್–ಎಂದರೆ ಎಲ್ಲ ಭೂತಗಳನ್ನೂ ಸ್ವತಂತ್ರವಾಗಿ ಸೃಷ್ಟಿಸುವವನು. **ಸರ್ವಂ ಹ್ಯೇದಂ ಬ್ರಹ್ಮಣಾ ಹೈವ ಸೃಷ್ಟಮ್ । ಯತೋ ವಾ ಇಮಾನಿ ಭೂತಾನಿ ಜಾಯನ್ತೇ ।**

ನಿರುಕ್ತಿ : ಭೂತಾನಿ ಯೋಽಸೌ ಸೃಜತಿ ಸ್ವಾತಂತ್ರ್ಯೇಣ ಸ ಭೂತಕೃತ್ ॥

5) **ಸ. ಸಂ. :–** ಭೂತಗಳನ್ನು ಕತ್ತರಿಸಿಹಾಕುವವನು (**ಕೃತೀ–ಛೇದನೇ**) ಅಂದರೆ ಭೂತಾದಿ ಉಪದ್ರವಗಳನ್ನು ಪರಿಹಾರಮಾಡುವವನು ಅಥವಾ ಭೂತಗಳನ್ನು ಸೃಷ್ಟಿಮಾಡುವವನು **(ಕರೋತಿ).**

* * *

6) **ಭೂತಭೃತ್**= ಭೂತಗಳನ್ನು ಭರಿಸುವವನು.

ಶಂ. ಭಾ. :– ಸತ್ತ್ವಗುಣವನ್ನಾಶ್ರಯಿಸಿ ಭೂತಗಳನ್ನು ಪಾಲಿಸುವವನು, ಧರಿಸುವವನು ಅಥವಾ ಪೋಷಿಸುವವನು. **(ಬಿಭರ್ತಿ–ಪಾಲಯತಿ, ಧಾರಯತಿ, ಪೋಷಯತೀತಿ ವಾ)**

6) **ಪ. ಭ. :–** ಭೂತಗಳನ್ನು ಭರಿಸುವವನು.

ವಿಶ್ವಂ ಬಿಭರ್ತಿ ಭುವನಸ್ಯ ನಾಭಿಃ (ತೈ. ನಾ. ೧-೨೧)

ತದ್ಯಥಾ ರಥಸ್ಯಾರೇಷು ನೇಮಿರರ್ಪಿತಾ ನಾಭಾವರಾ ಅರ್ಪಿತಾ, ಏವಮೇವೈತಾ ಭೂತಮಾತ್ರಾ ಪ್ರಜ್ಞಾಮಾತ್ರಾಸ್ವರ್ಪಿತಾಃ ಪ್ರಜ್ಞಾಮಾತ್ರಾಃ ಪ್ರಾಣೇಷ್ವರ್ಪಿತಾಃ (ಕೌಷೀತಕೀ ೩-೯)

ಬಿಭರ್ತ್ಯವ್ಯಯ ಈಶ್ವರಃ (ಗೀ. ೧೫-೧೭)

ನಿರುಕ್ತಿ :– ಭೂತಭೃದ್ಭೂತಭರಣಾತ್ ।

6) **ಸ. ಸಂ. :–** ಭೂತಗಳನ್ನು ಭರಿಸುವವನು.

* * *

7) **ಭಾವಃ :–** ಸತ್ತಾಸ್ವರೂಪಿಯು. **ಸರ್ವಭೂತಿಭಿರ್ವಿಶಿಷ್ಟತಯಾ**

ಭವತಿ । ಭೂ-ಸತ್ತಾಯಾಂ. ಎಲ್ಲ ವಿಭೂತಿಪುರುಷರಿಗಿಂತಲೂ ವಿಶಿಷ್ಟ ನಾಗಿರತಕ್ಕವನು.

ಶಂ. ಭಾ. :– ಪ್ರಪಂಚರೂಪದಲ್ಲಿ ಉತ್ಪನ್ನವಾಗುವವನು ಅಥವಾ ಕೇವಲನೇ ಆಗಿರುವವನು. ಸತ್ತಾಸ್ವರೂಪಿಯು. **ಪ್ರಪಂಚರೂಪೇಣ ಭವತೀತಿ, ಕೇವಲಂ ಭವತೀತಿ ವಾ ಭಾವಃ ।ಭವನಂ=ಭಾವಃ ಸತ್ತಾತ್ಮಕೋ ವಾ ।**

7) **ಪ. ಭ. :–** ವಿಭೂತಿಗಳೆಲ್ಲವೂ ಯಾವನಲ್ಲಿ ಅಂತರ್ಭಾವವನ್ನು ಹೊಂದಿವೆಯೋ–ಅವನು. ಅಂದರೆ ತನ್ನ ವಿಭೂತಿಗಳಿಂದ ಸಂಶ್ಲಿಷ್ಟನಾಗಿರು ವವನು. ಸರ್ವವಿಭೂತಿವಿಶಿಷ್ಟನಾದವನು ; ತನ್ನ ಎಲ್ಲ ವಿಭೂತಿಗಳನ್ನೂ ಭಾವಿಸುವವನು ; (ಹೊಂದಿರುವವನು.)

ನಿರುಕ್ತಿ :– ಶ್ಲಿಷ್ಟತ್ವಾದ್ಭಾವ ಈರಿತಃ ॥

7) **ಸ. ಸಂ. :–** ಜಗತ್ತುಗಳನ್ನು ಭಾವಿಸುವವನು (ಉತ್ಪಾದನೆ ಮಾಡುವವನು) ಅಥವಾ ಕಾಂತಿಗಳನ್ನು ಚಂದ್ರನೇ ಮುಂತಾದವರಿಗೆ ಕೊಡುವವನು. ಅರ್ಥಾತ್ ನಕ್ಷತ್ರಗಳಲ್ಲಿ ಪ್ರವೇಶಮಾಡಿರುವವನು.

*　　*　　*

8) **ಭೂತಾತ್ಮಾ** = ಭೂತಗಳಿಗೆ (ಪ್ರಾಣಿಗಳಿಗೆ) ಅಂತರ್ಯಾಮಿ ಯಾದವನು.

ಶಂ. ಭಾ. :– ಭೂತಗಳಿಗೆ ಅಂತರ್ಯಾಮಿಯಾಗಿರುವವನು.

ಏಷ ತ ಆತ್ಮಾ ಅಂತರ್ಯಾಮ್ಯಮೃತಃ (ಬೃ. ಉ. ೩-೭-೩ ರಿಂದ ೨೨)

8) **ಪ. ಭ. :–** ಎಲ್ಲ ಭೂತಗಳಿಗೂ ಆತ್ಮನಾಗಿರುವವನು ; ಎಲ್ಲ ಭೂತಗಳೂ ಇವನಿಗೆ ಶರೀರದಂತೆ. ಜೀವಾತ್ಮಗಳು ತಮ್ಮ ಶರೀರಗಳಲ್ಲಿದ್ದು ಅವುಗಳಿಗೆ ಚೈತನ್ಯವಾಗಿ ಅವುಗಳನ್ನು ನಿಯಮಿಸುತ್ತಿವೆ. ಆ ಶರೀರಗಳು ಇರುವುದು ಆ ಜೀವಗಳ ಪ್ರಯೋಜನಕ್ಕಾಗಿ. ಹಾಗೆಯೇ ಚೇತನಾಚೇತನ ಗಳೆಲ್ಲವೂ ಪರಮಾತ್ಮನಿಗೆ ಶರೀರಭೂತವಾಗಿವೆ. ಅವುಗಳ ಸ್ವರೂಪ-ಸ್ಥಿತಿ-ಪ್ರವೃತ್ತಿಗಳು ಅವನಿಗೆ ಅಧೀನ. ಅವುಗಳು ಇರುವುದು ಅವನಿಗೋಸ್ಕರವೇ.

ಅವನ ವಿಭೂತಿಗಳಿಗೂ ಅವನಿಗೂ ಇರುವ ಸಂಬಂಧವು ಶರೀರಾತ್ಮಭಾವ ಸಂಬಂಧ. **ಏಷ ಸರ್ವಭೂತಾನ್ತರಾತ್ಮಾ** (ಸು. ಉ. ೭) **ಜಗತ್ಸರ್ವಂ ಶರೀರಂ ತೇ |** (ರಾಮಾ.ಯುದ್ಧ.೧೨-೨೬) **ತಾನಿಸರ್ವಾಣಿ ತದ್ವಪುಃ |** (ವಿ. ಪು. ೧-೨೨-೮೬) **ತತ್ಸರ್ವಂ ವೈ ಹರೇಸ್ತನುಃ |** (ವಿ. ಪು. ೧-೨೨-೩೮) ಇತ್ಯಾದಿ.

ನಿರುಕ್ತಿ :– **ಶರೀರಭೂತಭೂತಾನಾಂ ಭೂತಾತ್ಮಾऽऽತ್ಮತಯಾ ಸ್ಥಿತಃ ||**

8) **ಸ. ಸಂ. :–** ಭೂತಗಳಿಗೆ ನಿಯಾಮಕನು ಅಥವಾ ಭೂಮಿಯಲ್ಲಿ ವ್ಯಾಪಿಸಿರುವ ಆತ್ಮನು.

* * *

9) **ಭೂತಭಾವನಃ** = ಭೂತಗಳನ್ನು ಸಂಕಲ್ಪಮಾತ್ರದಿಂದ ಸೃಷ್ಟಿಸಿ ಪೋಷಿಸುವವನು.

ಶಂ. ಭಾ. :– ಭೂತಗಳನ್ನು ಉತ್ಪತ್ತಿಮಾಡುವವನು ಅಥವಾ ವೃದ್ಧಿ ಪಡಿಸುವವನು.

9) **ಪ. ಭ. :–** ಭೂತಗಳಿಗೆ ಧಾರಕನಾಗಿ, ಪೋಷಕನಾಗಿ ಭೋಗ್ಯ ವಸ್ತುಗಳನ್ನು ಅನುಗ್ರಹಿಸಿ ಬೆಳೆಸುವವನು. (**ಧಾರಕ–ಪೋಷಕ–ಭೋಗ್ಯ ಪ್ರದಾನೇನ ವರ್ಧಯತಿ**) ಅವುಗಳ ಸ್ವರೂಪ-ಸ್ಥಿತಿ-ಪ್ರವೃತ್ತಿಗಳಿಗೆ ನಿಯಾ ಮಕನಾಗಿ ಅವುಗಳನ್ನು ಪಾಲಿಸುತ್ತಾ ಶೇಷಿಯಾಗಿರುವವನು.

ಎಲ್ಲವೂ ಅವನಿಗೆ "ಶೇಷ" ಭೂತವಾಗಿದೆ. (**ಉತ್ಪಾದನಪೋಷಣಾದಿಭಿರುಪಾದೀಯಮಾನಂ ಪ್ರತ್ಯುದ್ದೇಶಂ ಹಿ ಶೇಷೀ**) **ಶೇಷಃ ಪರಾರ್ಥತ್ವಾತ್** (ಪೂ. ಮೀ. ೩-೧-೧) ಶೇಷವು ಇರುವುದು ಶೇಷಿಯ ಪ್ರಯೋಜನಕ್ಕಾಗಿ. **ಭೂತಭಾವನ ಭೂತೇಶ** (ಗೀ. ೧೦-೧೫) **ಏಷ ಭೂತಪಾಲಃ |** (ಬೃ. ಉ. ೬-೪-೨೨).

ನಿರುಕ್ತಿ :– **ದಾರಕಾದಿ ಪ್ರದಾನೇನ ಯಶ್ಚ ವರ್ಧಯತಿ ಸ್ವಯಮ್ |**
ಭೂತಾನಿ ನಿತ್ಯಂ ಝಟಿತಿ ಸ ತು ಸ್ಯಾದ್ಭೂತಭಾವನಃ ||

9) **ಸ. ಸಂ. :–** ಭೂತಗಳ ಭಾವ (ಮನಸ್ಸು) ಗಳನ್ನು ಒಯ್ಯುವ

ವನು ; ಭೂತಗಳನ್ನು ಒಯ್ಯುವವನು ; ಭೂಮಿಯಲ್ಲಿ ವ್ಯಾಪಿಸಿದ ಕಾಂತಿಯುಳ್ಳವನು ಮತ್ತು ರಕ್ಷಿಸುವವನು.

* * *

ಪೂತಾತ್ಮಾ ಪರಮಾತ್ಮಾ ಚ ಮುಕ್ತಾನಾಂ ಪರಮಾ ಗತಿಃ ।
ಅವ್ಯಯಃ ಪುರುಷಃ ಸಾಕ್ಷೀ ಕ್ಷೇತ್ರಜ್ಞೋऽಕ್ಷರ ಏವ ಚ ॥೧೫॥

10) **ಪೂತಾತ್ಮಾ** :– ಪವಿತ್ರಸ್ವರೂಪಿಯು, ಪವಿತ್ರನಾಗಿರುವ ಆತ್ಮನು.

ಶಂ. ಭಾ. :– ಪವಿತ್ರಸ್ವರೂಪನು. **ಭೂತಕೃತ್** ಇತ್ಯಾದಿ ಹಿಂದಿನ ಶಬ್ದಗಳಿಂದ ಅವನು ಗುಣಾಧೀನನೆಂಬ ದೋಷದ ಸಂಭಾವನೆಯು ಬರಬಹುದು. ಅದನ್ನು ನಿಷೇಧಿಸುತ್ತದೆ ಈ ನಾಮಧೇಯ. ಯಾವನ ಆತ್ಮವು ಪವಿತ್ರವಾಗಿದೆಯೋ ಅವನು (ಬಹುವ್ರೀಹಿಸಮಾಸ) ಅಥವಾ ಪವಿತ್ರವಾದ ಆತ್ಮನು ಅವನು. (ಕರ್ಮಧಾರಯಸಮಾಸ) **ಕೇವಲೋ ನಿರ್ಗುಣಶ್ಚ** (ಶ್ವೇ. ಉ. ೬-೧೧) ಗುಣಸಂಬಂಧವನ್ನು ಅವನು ತನ್ನ ಇಚ್ಛೆಯಿಂದ ಪಡೆದಿದ್ದಾನೆಯೇ ಹೊರತು ಅವನು ಅವುಗಳಿಗೆ ಪರತಂತ್ರನಲ್ಲ.

10) **ಪ. ಭ.** :– ಶುದ್ಧಸ್ವಭಾವವುಳ್ಳವನು. ಚೇತನಾಚೇತನಗಳೆಲ್ಲವೂ ಅವನ ಶರೀರ. ಅವನು ಎಲ್ಲಕ್ಕೂ ಆತ್ಮವಾಗಿದ್ದರೂ ಜೀವಾತ್ಮರಂತೆ ಶರೀರದ ದೋಷಗಳ ಅಂಟು ಇಲ್ಲದವನು. ಜೀವ-ಪರಮಾತ್ಮರಿಬ್ಬರೂ ಶರೀರದಲ್ಲಿದ್ದರೂ ಅವನಲ್ಲಿ ಕರ್ಮಫಲವನ್ನು ಭುಜಿಸುವವನು ಜೀವನು ಮಾತ್ರ. ಪರಮಾತ್ಮನು ಏನನ್ನೂ ತಿನ್ನದೇ ನಿರ್ಲಿಪ್ತನಾಗಿ ಬೆಳಗುತ್ತಿದ್ದಾನೆ.
ಅನಶ್ನನ್ನನ್ಯೋ ಅಭಿಚಾಕಶೀತಿ (ಮು. ೩-೧-೧) **ಜಹಾತ್ಯೇನಾಂ ಭುಕ್ತಭೋಗಾಮಜೋऽನ್ಯಃ ।** (ತೈ. ನಾ. ೬-೧೦-೪)

ಪರಮಾತ್ಮನು ಜೀವನಂತೆಯೇ ದೇಹದಲ್ಲಿದ್ದರೂ ಸ್ವತಂತ್ರನು. ಜೀವನಿಗೆ ಕರ್ಮಫಲವನ್ನು ಭೋಜನಮಾಡಿಸಿ ತಾನು ಮಾತ್ರ ಅವುಗಳನ್ನು ತಿನ್ನದೇ ನಿರಂಜನನಾಗಿ ಬೆಳಗುತ್ತಿದ್ದಾನೆ. ಉದಾ : ಶಿಕ್ಷೆಕೊಡುವ ಅಧಿಕಾರಿ ಮತ್ತು ಶಿಕ್ಷೆಪಡೆಯುವ ಅಪರಾಧಿ–ಇಬ್ಬರಿಗೂ ಹಗ್ಗದ ಸ್ಪರ್ಶವಿದ್ದರೂ ಹಗ್ಗದ ಏಟಿನ ಪೀಡೆಯುಂಟಾಗುವುದು ಅಪರಾಧಿಗೆ ಮಾತ್ರ.

ಏಷ ಸರ್ವಭೂತಾನ್ತರಾತ್ಮಾ ಅಪಹತಪಾಪ್ಮಾ (ಸು.ಉ.೭)

ಪಶ್ಯ ದೇವಸ್ಯ ಮಾಹಾತ್ಮ್ಯಂ ಮಹಿಮಾನಂ ಚ ನಾರದ ।
ಶುಭಾಶುಭೈಃ ಕರ್ಮಭಿರ್ಯೋ ನ ಲಿಪ್ಯತಿ ಕದಾಚನ ॥

(ಮ.ಭಾ.ಶಾನ್ತಿ ೩೪೦-೨೬)

ನಿರುಕಿ :– ಶರೀರತ್ವಾಚ್ಚ ಜಗತಃ ತದ್ದೋಷೈರ್ನ ಕದಾಚನ ।
ಲಿಪ್ಯತೇ ಯಃ ಸ ಪೂತಾತ್ಮಾ ನ ಭುಂಕ್ತೇ ಚ ಫಲಾನಿ ಯಃ ॥

10) **ಸ. ಸಂ. :–** ಯಾವನಿಂದ ಜೀವಗಳು ಪವಿತ್ರವಾಗುತ್ತವೆಯೋ– ಅವನು ; ಪವಿತ್ರಜೀವಗಳ (ಆತ್ಮವು) ಮನಸ್ಸು ಯಾವನಲ್ಲಿದೆಯೋ– ಅವನು ; ಪವಿತ್ರನಾಗಿರುವ ಆತ್ಮನು.

* * *

11) **ಪರಮಾತ್ಮಾ :–** ಶ್ರೇಷ್ಠವಾದ ಆತ್ಮವು.

ಶಂ. ಭಾ. :– ಪರಮನಾದ ಆತ್ಮನು. ಕಾರ್ಯ-ಕಾರಣವಿಲಕ್ಷಣನಾದ ನಿತ್ಯ-ಶುದ್ಧ-ಬುದ್ಧ-ಮುಕ್ತಸ್ವಭಾವವುಳ್ಳವನು.

11) **ಪ. ಭ. :–** ಪರಮನಾದ ಆತ್ಮನು. ಎಲ್ಲ ಭೂತಗಳಿಗೂ ಇವನು ಆತ್ಮವಾಗಿರುವಂತೆ ಇವನಿಗೂ ಆತ್ಮವಾದವನು ಯಾರೂ ಇಲ್ಲ. ಆತ್ಮೇಶ್ವರನು; ತನಗೆ ಬೇರೆ ಯಾರೂ ಈಶ್ವರನಿಲ್ಲದವನು. ಇವನಿಗೆ ಪರವಾದುದಿಲ್ಲ. **"ಪರಮಃ ಆತ್ಮಾ ಅಸ್ಯ"**. ಅಂತಹ ಮಿಗಿಲಿಲ್ಲದ ಆತ್ಮನು ಪರಮಾತ್ಮನು.
ಆತ್ಮೇಶ್ವರಗ್ಂ ಶಾಶ್ವತಗ್ಂ ಶಿವಮಚ್ಯುತಮ್ (ತೈ. ನಾ. ೬-೧೧)
ಯಸ್ಮಾತ್ಪರಂ ನಾಪರಮಸ್ತಿ ಕಿಂಚಿತ್ (ಶ್ವೇ. ಉ. ೩-೯)

ನ ಪರಂ ಪುಂಡರೀಕಾಕ್ಷಾತ್ ದೃಶ್ಯತೇ ಭರತರ್ಷಭ ।
ಪರಂ ಹಿ ಪುಂಡರೀಕಾಕ್ಷಾನ್ನ ಭೂತಂ ನ ಭವಿಷ್ಯತಿ ॥

ನಿರುಕ್ತಿ :– ಯೇನ ಭೂತಾನ್ಯಾತ್ಮವನ್ತಿ ನಾಯಮನ್ಯೇನ ಚಾತ್ಮವಾನ್ ।
ಅತೋ ಹ್ಯಾತ್ಮೇಶ್ವರತ್ವಾಚ್ಚ ಪರಮಾತ್ಮಾ ಪ್ರಕೀರ್ತಿತಃ ॥

11) **ಸ. ಸಂ. :–** ಉತ್ತಮವಾದ ಆತ್ಮನು ; ಪರನನ್ನು (ಶತ್ರುವನ್ನು)

ಸಂಹರಿಸುವ ಆತ್ಮನು ; ಶ್ರೇಷ್ಠಳಾದ ಅಥವಾ ರಕ್ಷಕಳಾದ ರಮಾದೇವಿಗೆ ಆತ್ಮ (ಪತಿ) ನಾದವನು ; ಭೃತ್ಯರನ್ನು ತನ್ನವರೆಂದು ಸ್ವೀಕರಿಸುವವನು. ನಿರ್ಮಾಣಕಾರ್ಯವನ್ನು ವಹಿಸಿಕೊಂಡಿರುವವನು ಅಥವಾ ಜ್ಞಾನವನ್ನು ಪಡೆದವನು.

ಯಚ್ಚಾಪ್ನೋತಿ ಯದಾದತ್ತೇ ಯಚ್ಚಾತ್ತಿ ವಿಷಯಾನಿಹ ।
ಯಚ್ಚಾಸ್ಯ ಸನ್ತತೋ ಭಾವಃ ತಸ್ಮಾದಾತ್ಮೇತಿ ಭಣ್ಯತೇ ॥ (ಭಾಗವತ)

ಯೋ ಗುಣೈಃ ಸರ್ವತೋಽಹೀನಃ ಸರ್ವದೋಷವಿವರ್ಜಿತಃ ।
ಹೇಯೋಪಾದೇಯರಹಿತಃ ಸ ಆತ್ಮೇತ್ಯಭಿಧೀಯತೇ ॥ (ಸೂತ್ರಭಾಷ್ಯ)

* * *

12) **ಮುಕ್ತಾನಾಂ ಪರಮಾ ಗತಿಃ**= ಮುಕ್ತಪುರುಷರಿಗೆ ಶ್ರೇಷ್ಠವಾದ ಗತಿಯು.

ಶಂ. ಭಾ. :– ಮುಕ್ತಾತ್ಮರು ಹೊಂದಬೇಕಾದ ಉತ್ಕೃಷ್ಟವಾದ ದೇವತೆಯು. (ಏಕೆಂದರೆ : ಅಲ್ಲಿ ತಲುಪಿದವರಿಗೆ ಪುನರಾವೃತ್ತಿಯಿಲ್ಲ.)

ಮಾಮುಪೇತ್ಯ ತು ಕೌಂತೇಯ ಪುನರ್ಜನ್ಮ ನ ವಿದ್ಯತೇ ।
(ಗೀತಾ.೮-೧೬)

12) **ಪ. ಭ. :–** ಪರಮಪ್ರಾಪ್ಯನು. ಸರ್ವಶೇಷಿಯು. ಪ್ರಕೃತಿ, ಬಂಧನ, ಅವಿದ್ಯೆ, ಕರ್ಮಸಂಸ್ಕಾರ ಮತ್ತು ರುಚಿವಿಪಾಕಗಳೆಂಬ ಆವರಣಗಳಿಂದ ಅತ್ಯಂತವಾಗಿ ಮತ್ತು ಏಕಾನ್ತಿಕವಾಗಿ ಬಿಡುಗಡೆಹೊಂದಿದವರು ಮುಕ್ತರು. **ತತ್ಸುಕೃತದುಷ್ಕೃತೇ ವಿಧೂನುತೇ** (ಕೌಷೀ ಉ.೧-೪) **ಜ್ಞಾತ್ವಾ ದೇವಂ ಮುಚ್ಯತೇ ಸರ್ವಪಾಪೈಃ ।** (ಶ್ವೇ. ಉ. ೪-೧೬)

ಯೇ ಹೀನಾಃ ಸಪ್ತದಶಭಿರ್ಗುಣೈಃ ಕರ್ಮಭಿರೇವ ಚ ।
ಕಲಾಃ ಪಂಚದಶ ತ್ಯಕ್ತ್ವಾ ತೇ ಮುಕ್ತಾ ಇತಿ ನಿಶ್ಚಯಃ ॥

ಹದಿನೇಳು ಗುಣಗಳನ್ನೂ, ಕರ್ಮಗಳನ್ನೂ, ಹದಿನೈದು ಕಲೆಗಳನ್ನೂ ಬಿಟ್ಟುಬಿಟ್ಟವರು ಮುಕ್ತರು.

ಅಂತಹ ಮುಕ್ತರು ಅಪಹತಪಾಪ್ಮತ್ವವೇ ಮುಂತಾದ ಎಂಟು ಗುಣಗಳಿಂದಲೂ–ಭೋಗದಿಂದಲೂ ಪರಮಾತ್ಮನೊಡನೆ ಸಾಮ್ಯಹೊಂದುತ್ತಾರೆ.

ಅಂತಹ ಮುಕ್ತರಿಗೆ ಪರಮಾತ್ಮನು ಪರಮಗತಿಯು–ಇಷ್ಟತಮವಾದ ಉದ್ದೇಶ. ಆದ್ದರಿಂದ ಮುಕ್ತರಿಗೂ–ಅವರಿಗೆ ಪ್ರಾಪ್ಯನಾದ ಪರಮಾತ್ಮನಿಗೂ ಶೇಷ-ಶೇಷಿಭಾವವುಂಟೆಂಬುದು ಸ್ಪಷ್ಟಪಡುತ್ತದೆ.

ಮಹಾಭಾರತದಲ್ಲಿ ಶ್ವೇತದ್ವೀಪವಾಸಿಗಳನ್ನು ವರ್ಣಿಸುವಾಗ :

ಕೃತಾಂಜಲಿಪುಟಾ ಹೃಷ್ಟಾ ನಮ ಇತ್ಯೇವ ವಾದಿನಃ ।
ಅತೀಂದ್ರಿಯಾ ಅನಾಹಾರಾ ಅನಿಸ್ಯಂದಾಃ ಸುಗಂಧಿನಃ ॥

ಎಂದು ವರ್ಣನೆ ಮಾಡಿ ಮುಕ್ತರ ಲಕ್ಷಣವೂ ಅದೇ ಎಂದು ಹೇಳಿದೆ.

ಯೇಽಪಿ ಮುಕ್ತಾ ಭವನ್ತೀಹ ನರಾ ಭರತಸತ್ತಮ ।
ತೇಷಾಂ ಲಕ್ಷಣಮೇತದ್ಧಿ ಯಚ್ಛ್ವೇತದ್ವೀಪವಾಸಿನಾಮ್ ॥

ಆದ್ದರಿಂದಲೂ ಮುಕ್ತಾತ್ಮರಿಗೂ ಭಗವಂತನಿಗೂ ಶೇಷ-ಶೇಷಿಭಾವವುಂಟೆಂದೇ ಸೂಚಿತವಾಗುತ್ತದೆ.

ಮುಕ್ತರಿಗೆ ಪರಮಗತಿಯು ಅವನು–ಎಂದು ಹೇಳಿರುವುದರಿಂದ ಮುಕ್ತ ಪರಮಪದಕ್ಕಿಂತಲೂ ಕೆಳಗಿನ ಒಂದು ಸ್ಥಾನದಲ್ಲಿ ಇರುವವರೂ ಉಂಟು ಎಂಬುದು ಸೂಚಿತವಾಗುತ್ತದೆ. ಇದೇ ಕೈವಲ್ಯ. ಜರಾ-ಮರಣಾದಿಗಳನ್ನು ದಾಟಿದ ಕೇವಲನಾದ ಆತ್ಮನ ಸ್ಥಿತಿ ಇದು. **ಜರಾಮರಣಮೋಕ್ಷಾಯ ಮಾಮಾಶ್ರಿತ್ಯ ಯತನ್ತಿ ಯೇ ।** (ಗೀತಾ ೭-೨೯).

ಸಂಸಾರಕ್ಕೂ ಪರಮಪದಕ್ಕೂ ಮಧ್ಯದ ಸ್ಥಾನವಾದ ಕೆಳಹಂತದ ಮುಕ್ತಿಯು ಇದು. ಇದೂ ಮುಕ್ತರ ಗತಿಯೇ. ಆದರೆ ಮುಕ್ತರ ಪರಮಗತಿಯು ಪರಮಾತ್ಮಪ್ರಾಪ್ತಿ. **ಸಾ ಕಾಷ್ಠಾ ಸಾ ಪರಾ ಗತಿಃ ।** (ಕಠ. ಉ. ೩-೧೧)

ನಿರುಕ್ತಿ :– **ಬ್ರಹ್ಮಸಾಧರ್ಮ್ಯಮಾಪನ್ನಾ ಮುಕ್ತಾಸ್ತೇಷಾಂ ಪರಾ ಗತಿಃ ।**
ಮುಖ್ಯಪ್ರಾಪ್ಯಸ್ತತಃ ಶೇಷೀ ಮುಕ್ತಾನಾಂ ಪರಮಾ ಗತಿಃ ॥

12) **ಸ. ಸಂ. :–** ಮುಕ್ತಾತ್ಮರಿಗೆ ಉತ್ತಮಗಮ್ಯನಾದವನು.

* * *

13) **ಅವ್ಯಯಃ** = ವಿಕಾರವಿಲ್ಲದವನು ; ಅಳಿವಿಲ್ಲದವನು.

ಶಂ. ಭಾ. :– ವಿನಾಶವು ಅಥವಾ ವಿಕಾರವಿಲ್ಲದವನು. **ನ ವ್ಯೇತಿ= ನಾಸ್ತಿ ವ್ಯಯಃ ವಿನಾಶೋ ವಿಕಾರೋ ವಾ ವಿದ್ಯತೇ ಇತ್ಯವ್ಯಯಃ ।**

13) **ಪ. ಭ. :–** ಅವನು ಮೇಲ್ಕಂಡಂತೆ ಮುಕ್ತರಿಗೆ ಪರಮಗತಿ ಯಾಗಿದ್ದಾನೆ–ಎಂಬ ವಿಷಯವನ್ನು ಮುಂದಿನ ಐದು ನಾಮಧೇಯಗಳು ವ್ಯಕ್ತಪಡಿಸುತ್ತವೆ.

ಅವನು ಅವ್ಯಯನು. ಅವ್ಯಯ ಎಂದರೆ ಮುಕ್ತಾತ್ಮರು ಯಾವನನ್ನು ಬಿಟ್ಟುಹೋಗುವುದಿಲ್ಲವೋ–ಅವನು. (**ನ ವೀಯತೇ ನ ವ್ಯಪಗಮ್ಯತೇ ಅಸ್ಮಾದಿತಿ ಅವ್ಯಯಃ**) ಅತಿಕಷ್ಟದಿಂದ ಸಂಸಾರಮಹಾಸಮುದ್ರವನ್ನು ದಾಟಿ ತನ್ನ ಚರಣಾರವಿಂದವನ್ನು ಸೇರಿರುವ ಮುಕ್ತಾತ್ಮನನ್ನು ಭಗವಂತನು ಎಂದಿಗೂ ಹಿಂದಿರುಗಿಸುವುದಿಲ್ಲ.

ಏತೇನ ಪ್ರತಿಪದ್ಯಮಾನಾ ಇಮಂ ಮಾನವಮಾವರ್ತಂ ನಾವರ್ತನ್ತೇ
ನ ಚ ಪುನರಾವರ್ತತೇ ನ ಚ ಪುನರಾವರ್ತತೇ (ಛಾಂ.ಉ.೮-೧೫-೧)

ಸತ್ತ್ವಂ ವಹತಿ ಸೂಕ್ಷ್ಮತ್ವಾತ್ಪರಂ ನಾರಾಯಣಂ ಪ್ರಭುಮ್ ।
ಪರಮಾತ್ಮಾನಮಾಸಾದ್ಯ ಪರಂ ವೈಕುಂಠಮೀಶ್ವರಮ್ ।
ಅಮೃತತ್ವಾಯ ಕಲ್ಪೇತ ನ ನಿವರ್ತೇತ ವೈ ಪುನಃ (ಯಮಸ್ಮೃತಿ)

ನಿರುಕ್ತಿ :– ನ ವೀಯತೇ ಚ ವೈಕುಣ್ಠಾನ್ಮುಕ್ತೋಽಧಸ್ತಾತ್ತತೋಽವ್ಯಯಃ ।

13) **ಸ. ಸಂ. :–** ಸೂರ್ಯನ ಗತಿಯು ಯಾವನಿಂದ ಉಂಟಾಗು ತ್ತದೆಯೋ–ಅವನು ಅವ್ಯಯನು. ಅಥವಾ ಟಗರಿನಂತೆ ಶತ್ರುಗಳ ಮೇಲೆ ಏರಿಹೋಗುವವನು.

* * *

14) **ಪುರುಷಃ** = ಶರೀರವೆಂಬ ಪುರದಲ್ಲಿ ಶಯನಿಸಿರುವವನು ಅಥವಾ ಪೂರ್ಣನಾಗಿರುವವನು.

ಶಂ. ಭಾ. :– ಪುರ (ಶರೀರ)ದಲ್ಲಿ ಶಯನಿಸಿರುವವನು.

ನವದ್ವಾರಂ ಪುರಂ ಪುಣ್ಯಮೇತೈರ್ಭಾವೈಃ ಸಮನ್ವಿತಮ್ ।
ವ್ಯಾಪ್ಯ ಶೇತೇ ಮಹಾನಾತ್ಮಾ ತಸ್ಮಾತ್ಪುರುಷ ಉಚ್ಯತೇ ॥

(ಮ.ಭಾ. ಶಾಂತಿ. ೨೧೦-೩೭)

ಹಿಂದಿನಿಂದಲೇ ಇದ್ದವನು. **(ಆಸೀತ್ಪುರಾ) ಪೂರ್ವಮೇವಾಹಮಿಹಾಸಮಿತಿ । ತತ್ಪುರುಷಸ್ಯ ಪುರುಷತ್ವಂ ।** (ತೈ. ಆ. ೧-೧೩) ಬಹಳ ಉತ್ಕರ್ಷವುಳ್ಳ ಸತ್ತ್ವ (ಜೀವ) ಗಳಲ್ಲಿ ಇರುವವನು ; ಸಂಹಾರಸಮಯದಲ್ಲಿ ಬಹಳ ಲೋಕಗಳನ್ನು ನಾಶಪಡಿಸುವವನು. ಪೂರ್ಣನಾಗಿರುವುದರಿಂದಲೂ ಪೂರಣಮಾಡುವುದರಿಂದಲೂ ಅಥವಾ ಇರುವುದರಿಂದಲೂ ಅವನು ಪುರುಷನು. “**ಪೂರಣಾತ್ಸದನಾಚ್ಚೈವ ತತೋಽಸೌ ಪುರುಷೋತ್ತಮಃ ॥**”(ಮ. ಭಾ. ಉದ್ಯೋಗ ೭೦-೧೧)

14) **ಪ. ಭ.** :– ಹೇರಳವಾಗಿ ಕೊಡುವವನು. ಮುಕ್ತಾತ್ಮರಿಗೂ ಕೂಡ ಭಗವಂತನು, ಮಾತು-ಮನಸ್ಸುಗಳಿಂದ ಅಳೆಯಲಾಗದ ಗುಣವೈಭವವುಳ್ಳ ತನ್ನ ಅನುಭವವನ್ನು ಅನುಗ್ರಹಿಸುತ್ತಾನೆ. **ಪುರು ಸನೋತಿ ಇತಿ ಪುರುಷಃ** ನಿರುಕ್ತಿ :– **ಮುಕ್ತೇಭ್ಯಃ ಸ್ವಾತ್ಮಪರ್ಯನ್ತದಾನಾತ್ಪುರುಷ ಈರಿತಃ ।**

14) **ಸ. ಸಂ.** :– ಸೃಷ್ಟಿಗೆ ಹಿಂದೆಯೂ ಇದ್ದವನು ; ಬಹಳ ಚೇಷ್ಟೆಗಳುಳ್ಳವನು ; ಬಹಳ ದೈತ್ಯರನ್ನು ನಾಶಮಾಡಿದವನು. ಪೂರ್ಣವಾದ ಮೋಕ್ಷಫಲವನ್ನು ಅಥವಾ ತನ್ನನ್ನೇ ಕೊಟ್ಟುಕೊಂಡುಬಿಡುವವನು–ಎಂದು ಭಾಗವತಟೀಕೆ.

* * *

15) **ಸಾಕ್ಷೀ**= ಯಾರ ಅಡೆ-ತಡೆಗಳೂ ಇಲ್ಲದೇ ಎಲ್ಲವನ್ನೂ ಸದಾ ನೋಡುತ್ತಿರುವವನು.

ಶಂ. ಭಾ. :– ಯಾವ ವ್ಯವಧಾನವೂ ಇಲ್ಲದೇ ತನ್ನ ಸ್ವರೂಪಭೂತ ಜ್ಞಾನದಿಂದ ಎಲ್ಲವನ್ನೂ ನೋಡುತ್ತಿರುವವನು.

15) **ಪ. ಭ. :–** ಮುಕ್ತಾತ್ಮರನ್ನು ಆನಂದಪಡಿಸುತ್ತಾ ತಾನೂ ತೃಪ್ತಿಗೊಳ್ಳುತ್ತಾ ಎಲ್ಲವನ್ನೂ ಸಾಕ್ಷಾತ್ಕರಿಸುತ್ತಿರುವವನು.

ನಿರುಕ್ತಿ :– **ಸ್ವಯಮಾನಂದಯನ್ತೃಪ್ಯನ್ಸಾಕ್ಷೀ ಸಾಕ್ಷಾತ್ಕರೋತಿ ಸಃ ॥**

15) **ಸ. ಸಂ. :–** ಸಾಕ್ಷಾತ್ತಾಗಿ ನೋಡುತ್ತಿರುವವನು.

*   *   *

16) **ಕ್ಷೇತ್ರಜ್ಞಃ** = ಶರೀರಗಳನ್ನು ಅರಿತಿರುವ ಯೋಗಾತ್ಮನು.

ಶಂ. ಭಾ. :– ಕ್ಷೇತ್ರವೆಂದರೆ ಶರೀರ. ಅದನ್ನರಿತವನು ಕ್ಷೇತ್ರಜ್ಞನು. **ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ** (ಗೀತಾ ೧೩-೨)

ಕ್ಷೇತ್ರಾಣಿ ಹಿ ಶರೀರಾಣಿ ಬೀಜಂ ಚಾಪಿ ಶುಭಾಶುಭಮ್ ।
ತಾನಿ ವೇತ್ತಿ ಸ ಯೋಗಾತ್ಮಾ ತತಃ ಕ್ಷೇತ್ರಜ್ಞ ಉಚ್ಯತೇ ॥

(ಮ.ಶಾಂ. ೩೫೧-೭)

16) **ಪ. ಭ. :** ಮುಕ್ತರಿಗೆ ಸ್ವಾನುಭವವನ್ನು ಕೊಡಲು ಅವರಿಗೆ ಉಚಿತವಾದ ಕ್ಷೇತ್ರವನ್ನು ಅಂದರೆ ತನ್ನ ಭೋಗಸಮೃದ್ಧಿಯ ಉದ್ಭವಸ್ಥಾನ ವನ್ನು (ಪರಮವ್ಯೋಮವನ್ನು ಅಥವಾ ಆಕಾಶಶರೀರದಿಂದ ತನ್ನನ್ನು) ಅರಿತವನು. ಆಕಾಶಶರೀರಂ ಬ್ರಹ್ಮ । **ಮುಕ್ತಾನಾಂ ತು ಗತಿರ್ಬ್ರಹ್ಮನ್ ಕ್ಷೇತ್ರಜ್ಞ ಇತಿ ಕಲ್ಪ್ಯತೇ ।**

ನಿರುಕ್ತಿ :– **ಕ್ಷೇತ್ರಂ ತು ಪರಮವ್ಯೋಮ ಮುಕ್ತೇಭ್ಯೋ ವೇತ್ತಿ ನಿತ್ಯಶಃ।**
ದಾತುಂ ಸ್ವಾನುಭವಂ ಯಶ್ಚ ಕ್ಷೇತ್ರಜ್ಞಃ ಸ ತು ಕಥ್ಯತೇ ॥

16) **ಸ. ಸಂ. :–** ಭಗವಂತನು ಯಾವುದರಲ್ಲಿ ವಾಸಮಾಡುತ್ತಿದ್ದಾ ನೆಯೋ ಅದು ಕ್ಷೇತ್ರ. (**ಕ್ಷೀಯತೇ ಸ್ಥಿಯತೇ ಭಗವತಾ ಅತ್ರ**) ಅದನ್ನರಿ ತವನು ; ಪ್ರಮಾಣಪ್ರಸಿದ್ಧವಾದ ಅವ್ಯಕ್ತಾದಿ ಶರೀರವನ್ನು ಅರಿತವನು ಕ್ಷೇತ್ರಜ್ಞನು.

*   *   *

17) **ಅಕ್ಷರಃ**= ಅಳಿವಿಲ್ಲದವನು.

ಶಂ. ಭಾ. :– ಕ್ಷೀಣಿಸದವನು. ಏವ ಚ ಎಂಬಲ್ಲಿರುವ 'ಏವ' ಎಂಬ ಪದವು ಕ್ಷೇತ್ರಜ್ಞನಿಗೂ ಅಕ್ಷರನಿಗೂ ಪಾರಮಾರ್ಥಿಕವಾಗಿ ಭೇದವಿಲ್ಲವೆಂಬುದನ್ನೂ ಸೂಚಿಸುತ್ತದೆ. 'ತತ್ತ್ವಮಸಿ' (ಛಾಂ.ಉ.೬-೮). 'ಚ' ಎಂಬ ಪದವು ಪ್ರಸಿದ್ಧವಾದ ವ್ಯಾವಹಾರಿಕಭೇದವನ್ನು ಸೂಚಿಸುತ್ತದೆ. (ಪ್ರಸಿದ್ಧಿಯು ಪ್ರಾಮಾಣಿಕವಲ್ಲ.)

17) **ಪ. ಭ.** :– ಮುಕ್ತರಿಂದ ಸದಾ ಅನುಭವಿಸಲ್ಪಡುತ್ತಿದ್ದರೂ ಜೇನಿನ ಚೆಲುಮೆಯಂತೆ ನಿರವಧಿಕಗುಣಾವಗಾಹನವನ್ನು ಮಾಡಿಸುತ್ತಾ ಮೇಲೆ ಮೇಲೆ ಭೋಗ್ಯತೆಯಿಂದ ವೃದ್ಧಿಹೊಂದುತ್ತಿರುವವನೇ ಹೊರತು ಎಂದೂ ಕ್ಷಯಿಸುವವನಲ್ಲ.

ನಿರುಕ್ತಿ :– **ಸದಾನುಭೂಯಮಾನೋಽಪಿ ನಿಸ್ಸೀಮಗುಣಗೌರವಾತ್ ।**
ಮುಕ್ತೈಃ ಕ್ವಚಿನ್ನ ಕ್ಷರತೀತ್ಯಕ್ಷರಃ ಪರಿಕೀರ್ತಿತಃ ॥

17) **ಸ. ಸಂ.** :–ಅವಿನಾಶಿಯು ; ಕಣ್ಣು–ಮುಂತಾದ ಇಂದ್ರಿಯಗಳಲ್ಲಿ ರಮಿಸುತ್ತಿರುವವನು ; ಕ್ಷಯರಹಿತವಾದ ವೈಕುಂಠ–ಮುಂತಾದುವನ್ನು ಕೊಡುವವನು ; ಅಲ್ಲಿ ರಮಿಸುತ್ತಿರುವವನು.

* * *

ಯೋಗೋ ಯೋಗವಿದಾಂ ನೇತಾ ಪ್ರಧಾನಪುರುಷೇಶ್ವರಃ ।
ನಾರಸಿಂಹವಪುಃ ಶ್ರೀಮಾನ್ಕೇಶವಃ ಪುರುಷೋತ್ತಮಃ ॥೧೬॥

18) **ಯೋಗಃ** = ಜೀವಾತ್ಮ-ಪರಮಾತ್ಮರ ಸಂಯೋಗವು. ಅಂತಹ ಸಂಯೋಗದಲ್ಲಿ ಅನುಭವಕ್ಕೆ ಬರುವವನು.

ಶಂ. ಭಾ. :– ಯೋಗದಿಂದ ಹೊಂದಲ್ಪಡುವವನು. ಯೋಗವೆಂದರೆ ಮನಸ್ಸಿನಿಂದೊಡಗೂಡಿದ ಎಲ್ಲ ಜ್ಞಾನೇಂದ್ರಿಯಗಳನ್ನೂ ತಡೆದು ಕ್ಷೇತ್ರಜ್ಞ ಮತ್ತು ಪರಮಾತ್ಮ–ಇವರ ಐಕ್ಯವನ್ನು ಭಾವಿಸುವುದು.

ಜ್ಞಾನೇಂದ್ರಿಯಾಣಿ ಸರ್ವಾಣಿ ನಿರುಧ್ಯ ಮನಸಾ ಸಹ ।
ಏಕತ್ವಭಾವನಾ ಯೋಗಃ ಕ್ಷೇತ್ರಜ್ಞಪರಮಾತ್ಮನೋಃ ॥

18) ಪ. ಭ. :– (ನಿರುಪಾಧಿಕವಾದ ಮುಕ್ತಿಗೆ) ಉಪಾಯವೂ ಆಗಿರುವವನು. ಯುಜ್ಯತೇ ಪ್ರಾಪ್ಯತೇ ಅನೇನ ಇತಿ ಯೋಗಃ

ನಿರುಕ್ತಿ :– ಉಕ್ತಂ ಹಿ ಮುಕ್ತಪ್ರಾಪ್ಯತ್ವಮಥೋಪಾಯತ್ವಮುಚ್ಯತೇ ।
ಸಾಕ್ಷಾನ್ಮೋಕ್ಷೈಕಹೇತುತ್ವಾದ್ಯೋಗ ಇತ್ಯಭಿಧೀಯತೇ ॥

18) ಸ. ಸಂ. :– (ಯೋಗಿಗಳಿಂದ ಹೃದಯದಲ್ಲಿ) ಧ್ಯಾನಿಸಲ್ಪಡುತ್ತಿರುವವನು ; ಗುಣಗಳನ್ನು ತನ್ನಲ್ಲಿ ಹೂಡಿಕೊಂಡಿರುವವನು ; ಭಕ್ತರಿಗೆ ಸಂಸಾರವನ್ನು ದಾಟುವ ಉಪಾಯವು.

* * *

19) ಯೋಗವಿದಾಂ ನೇತಾ=ಯೋಗಜ್ಞರನ್ನು ಅವರ ಲಕ್ಷ್ಯಕ್ಕೆ ಒಯ್ಯುವವನು.

ಶಂ. ಭಾ. :– ಯೋಗವಿದಃ ಎಂದರೆ ಯೋಗವನ್ನು ಅರಿತವರು ; ವಿಚಾರಮಾಡುವವರು ; ತಿಳಿದವರು ಅಥವಾ ಹೊಂದುವವರು ; ಆ ಜ್ಞಾನಿಗಳ ಯೋಗ, ಕ್ಷೇಮ–ಇತ್ಯಾದಿಗಳನ್ನು ನಿರ್ವಹಿಸುವುದರಿಂದ ಅವರ 'ನೇತೃ' ವಾಗಿದ್ದಾನೆ ಭಗವಂತ.

ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಮ್ ॥
(ಗೀತಾ ೯-೨೨)

19) ಪ. ಭ. :– ಉಪಾಯಭಕ್ತಿನಿಷ್ಠೆಯುಳ್ಳವರು ಯೋಗವಿದರು. ಅವರನ್ನು ಫಲಪ್ರಾಪ್ತಿಪರ್ಯಂತವಾಗಿ ಒಯ್ಯುವವನು ಮತ್ತು ನಿರ್ವಹಿಸುವವನು. ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ (ಗೀತಾ ೧೮-೬೬) ತೇಷಾಮೇವಾನುಕಂಪಾರ್ಥಂ (ಗೀತಾ ೧೦-೧೧) ತೇಷಾಮಹಂ ಸಮುದ್ಧರ್ತಾ (ಗೀತಾ. ೧೨-೭)

ನಿರುಕ್ತಿ :– ಉಪಾಯಭಕ್ತಿನಿಷ್ಠಾ ಯೇ ತೇ ಚ ಯೋಗವಿದಃ ಸ್ಮೃತಾಃ ।
ತೇಷಾಂ ಚ ಫಲಪರ್ಯನ್ತೇ ನೇತಾ ನಿರ್ವಾಹಕಶ್ಚ ಯಃ ॥

19) ಸ. ಸಂ. :– ಸಮಾಧಿಯನ್ನು ಬಲ್ಲ ಭಕ್ತರು ಯೋಗವಿದರು. ಅವರನ್ನು ಮೋಕ್ಷಫಲಕ್ಕೆ ಹೊಂದಿಸುವವನು.

* * *

20) **ಪ್ರಧಾನಪುರುಷೇಶ್ವರಃ** = ಪ್ರಕೃತಿ ಮತ್ತು ಪುರುಷರಿಗೆ ಈಶ್ವರನಾದವನು.

ಶಂ. ಭಾ. :– ಪ್ರಧಾನವೆಂದರೆ ಪ್ರಕೃತಿ, ಮಾಯೆ. ಪುರುಷನೆಂದರೆ ಜೀವ. ಇವೆರಡಕ್ಕೂ ಈಶ್ವರನಾದವನು ಪ್ರಧಾನಪುರುಷೇಶ್ವರನು.

20) **ಪ. ಭ. :–** (ಬಂಧಕ್ಕೆ ಕಾರಣವಾದ) ಪ್ರಕೃತಿಗೂ ಮತ್ತು (ಬಂಧಕ್ಕೆ ಒಳಪಡುವ) ಜೀವರುಗಳಿಗೂ ಸದಾ ಸಂಪೂರ್ಣವಾಗಿ ನಿಯಾಮಕನಾದವನು. **ಪ್ರಧಾನಕ್ಷೇತ್ರಜ್ಞಪತಿರ್ಗುಣೇಶಃ (ಶ್ವೇ.ಉ.೬-೧೬)**

ಅಪರಾಧಮಾಡುವ ಜೀವರನ್ನು ತನ್ನ ಮಾಯೆಯಿಂದ ಬಂಧಿಸುತ್ತಾ, ತನ್ನನ್ನು ಆಶ್ರಯಿಸುವವರನ್ನು ಬಿಡುಗಡೆಮಾಡುತ್ತಾ ಕ್ರೀಡಿಸುವ ಸಾಮರ್ಥ್ಯವುಳ್ಳವನು.

ನಿರುಕ್ತಿ :– **ಬಂಧಹೇತೋಃ ಪ್ರಧಾನಸ್ಯ ಬಧ್ಯಮಾನನೃಣಾಂ ಚ ಯಃ ।**
ನಿಯಾಮಕಃ ಸರ್ವದಾ ಸಃ ಪ್ರಧಾನಪುರುಷೇಶ್ವರಃ ॥

20) **ಸ. ಸಂ. :–** ಪ್ರಕೃತಿ ಮತ್ತು ಜೀವಗಳಿಗೆ ಒಡೆಯ. ಪ್ರಕೃಷ್ಟವಾದ ಧಾರಣ-ಪೋಷಣೆಗಳನ್ನು ಮಾಡುವುದರಿಂದ ಅವನು ಪ್ರಧಾನ. ಚತುರ್ಮುಖನಿಗೋಸ್ಕರ ಕುದುರೆಯ ರೂಪವನ್ನು ಧರಿಸಿ ಋಗ್ವೇದಾದಿ ವಿದ್ಯೆಗಳನ್ನು ಕೊಡುವುದರಿಂದ ಪುರುಷೇಶ್ವರ. ಹೀಗೆ ಅವನು ಪ್ರಧಾನನೂ ಮತ್ತು ಪುರುಷೇಶ್ವರನೂ ಆಗಿದ್ದಾನೆ.

* * *

21) **ನಾರಸಿಂಹವಪುಃ** = ನರ ಮತ್ತು ಸಿಂಹ ಎರಡರ ಅವಯವಗಳೂ ಕೂಡಿದ ದಿವ್ಯದೇಹವುಳ್ಳವನು.

ಶಂ. ಭಾ. :– ನರ ಮತ್ತು ಸಿಂಹ ಎರಡರ ಅವಯವಗಳೂ ಕಾಣಿಸುವ ಶರೀರವುಳ್ಳವನು.

21) **ಪ. ಭ. :–** ಭಕ್ತಭಯವನ್ನು ಕಳೆಯಲು ತನ್ನ ಸಂಕಲ್ಪದಿಂದ ದಿವ್ಯಮಹಾನೃಸಿಂಹದೇಹವನ್ನು ಧರಿಸಿದವನು.

ನಿರುಕ್ತಿ :– **ನರವತ್ಸಿಂಹವದ್ರೂಪಂ ಯೋ ಬಿಭರ್ತ್ಯಭಯಪ್ರದಮ್ ।**
ಯಥಾ ಕಾಮಂ ತು ಭಕ್ತಾನಾಂ ನಾರಸಿಂಹವಪುಶ್ಚ ಸಃ ॥

21) ಸ. ಸಂ. :– ನರ ಮತ್ತು ಸಿಂಹಗಳ ದೇಹವುಳ್ಳವನು.

* * *

22) ಶ್ರೀಮಾನ್= ಶ್ರೀಸಂಪನ್ನನು.

ಶಂ. ಭಾ. :– ವಕ್ಷಃಸ್ಥಳದಲ್ಲಿ ಸದಾ ಶ್ರೀದೇವಿಯ ವಾಸವುಳ್ಳವನು.

22) ಪ. ಭ. :– ನರರೂಪ ಮತ್ತು ಸಿಂಹರೂಪಗಳು ಒಟ್ಟಿಗೆ ಸೇರಿ ಒಂದು ದೇಹವಾಗುವುದು ದುಸ್ಸಂಭವ. ಪರಸ್ಪರವಿರುದ್ಧವಾದ ಅಂತಹ ವಿಕೃತರೂಪವನ್ನು ಧರಿಸಿದ್ದರೂ–ಸೌಂದರ್ಯ-ಲಾವಣ್ಯಾದಿಗಳಿಂದ ಅತಿ ಮನೋಹರವಾದ ದಿವ್ಯರೂಪವುಳ್ಳವನು. **ದಂಷ್ಟ್ರಾಕರಾಳಂ ಸುರಭೀತಿ–ನಾಶನಂ ಕೃತ್ವಾ ವಪುರ್ದಿವ್ಯನೃಸಿಂಹರೂಪಿಣಾ । ತ್ರಾತಂ ಜಗದ್ಯೇನ.....**
ನಿರುಕ್ತಿ :– ವಿರುದ್ಧಾಕಾರವತ್ತ್ವೇಽಪಿ ಶ್ರೀಮಾನ್ಸರ್ವಮನೋಹರಃ ॥

22) ಸ. ಸಂ. :– ಶ್ರೀ ಎಂದರೆ ಶಂ (ಸುಖ) ರೂಪನಾಗಿರುವ ವಾಯು. ದೇವರಲ್ಲಿ (ದೇವರ ಸೇವೆಯಲ್ಲಿ) ನಿರತಳಾಗಿರುವ ಭಾರತೀದೇವೀ, ಲಕ್ಷ್ಮೀ ಅಥವಾ ಕಾಂತಿ. ಅಂತಹ 'ಶ್ರೀ'ಗೆ ಸ್ವಾಮಿಯೂ ಆಧಾರವೂ ಆಗಿರುವುದರಿಂದ ಅವನು 'ಶ್ರೀಮಾನ್'.

* * *

23) **ಕೇಶವಃ** = ತ್ರಿಮೂರ್ತಿಪ್ರಭು. ಸುಂದರಕೇಶರಾಶಿಯುಳ್ಳವನು.

ಶಂ. ಭಾ. :– ಸುಂದರವಾದ ಕೇಶರಾಶಿಯುಳ್ಳವನು ಅಥವಾ ತ್ರಿಮೂರ್ತಿಗಳು ಯಾವನ ಅಧೀನದಲ್ಲಿದ್ದಾರೆಯೋ ಅವನು ಅಥವಾ ಕೇಶಿದಾನವನನ್ನು ಸಂಹರಿಸಿದವನು. **ಕಶ್ಚ ಅಶ್ಚ ಈಶಶ್ಚ ತ್ರಿಮೂರ್ತಯಃ ಕೇಶಾಃ । ತೇ ಯದ್ವಶೇ ವರ್ತನ್ತೇ ಸ ಕೇಶವಃ। ಕೇಶಿವಧಾದ್ವಾ ಕೇಶವಃ ।**

ಯಸ್ಮಾತ್ತ್ವಯ್ಯೈಷ ದುಷ್ಟಾತ್ಮಾ ಹತಃ ಕೇಶೀ ಜನಾರ್ದನ ।
ತಸ್ಮಾತ್ಕೇಶವನಾಮ್ನಾ ತ್ವಂ ಲೋಕೇ ಖ್ಯಾತೋ ಭವಿಷ್ಯಸಿ ॥
(ವಿಷ್ಣು ೫-೧೬-೨೩)

23) ಪ. ಭ. :– ಪ್ರಶಸ್ತವೂ, ಸ್ನಿಗ್ಧವೂ, ನೀಲವರ್ಣವೂ ಆದ

ಕುಟಿಲಕುಂತಲದಿಂದ ಕಂಗೊಳಿಸುತ್ತಿರುವವನು. ಕೇಶಾದ್ವೋಽನ್ಯ ತರಸ್ಯಾಂ ಎಂಬ ಪಾಣಿನಿಸೂತ್ರದಿಂದ ಪ್ರಶಂಸಾರ್ಥದಲ್ಲಿ=ಪ್ರತ್ಯಯವು ಬಂದಿದೆ.

ನಿರುಕ್ತಿ :– ಪ್ರಶಸ್ತನೀಲಕೇಶತ್ವಾತ್ಕೇಶವಃ ಪರಿಕೀರ್ತಿತಃ ।

23) ಸ. ಸಂ. :– ರುದ್ರನನ್ನೂ ಮತ್ತು ಬ್ರಹ್ಮನನ್ನೂ ನಡೆಸುವವನು.

ಕೋ ಬ್ರಹ್ಮೇತಿ ಸಮಾಖ್ಯಾತಃ ಈಶೋಽಹಂ ಸರ್ವದೇಹಿನಾಮ್ ।
ಆವಾಂ ತವಾಙ್ಗಸಂಭೂತೌ ತತಃ ಕೇಶವನಾಮವಾನ್ ॥

ಹಿರಣ್ಯಗರ್ಭಃ ಕಃ ಪ್ರೋಕ್ತಃ ಈಶಃ ಶಂಕರ ಏವ ಚ ।
ಸೃಷ್ಟ್ಯಾದಿನಾ ವರ್ತಯತಿ ತೌ ಯತಃ ಕೇಶವೋ ಭವಾನ್ ॥

(ಹರಿವಂಶ)

ಪ್ರಶಸ್ತವಾದ ಕೇಶಗಳುಳ್ಳವನು ; ಕೇಶಿಯನ್ನು ಸಂಹರಿಸಿದವನು; ಸೂರ್ಯ, ಅಗ್ನಿ ಮತ್ತು ಸೋಮ–ಇವರ ಕಿರಣಗಳಿಗೆ ಕೇಶಾಃ ಎಂದು ಹೆಸರು. ಅವು ಪ್ರಕಾಶಿಸುವುದು ಮಹಾವಿಷ್ಣುವಿನಿಂದಲೇ. ಅದರಿಂದಲೂ ಅವನು ಕೇಶವನು.

ಸೂರ್ಯಸ್ಯ ತಪತೋ ಲೋಕಾನಗ್ನೇಃ ಸೋಮಸ್ಯ ವಾಚ್ಯುತ ।
ಅಂಶವೋ ಯತ್ಪ್ರಕಾಶನ್ತೇ ಮಮ ತೇ ಕೇಶಸಂಜ್ಞಿತಾಃ ।
ಸರ್ವಜ್ಞಾಃ ಕೇಶವಂ ತಸ್ಮಾನ್ಮಾಮಾಹುರ್ದ್ವಿಜಸತ್ತಮಾಃ ॥

(ಮ.ಭಾ. ಮೋಕ್ಷಧರ್ಮ)

* * *

24) ಪುರುಷೋತ್ತಮಃ = ಕ್ಷರಪುರುಷ ಮತ್ತು ಅಕ್ಷರಪುರುಷರಿಗಿಂತಲೂ ಉತ್ತಮನಾದವನು, ಪರಮಪುರುಷನು, ಪರಮಾತ್ಮನು.

ಶಂ. ಭಾ. :– ಪುರುಷರಲ್ಲಿ ಉತ್ತಮನಾದವನು ಅಥವಾ ಕ್ಷರ ಮತ್ತು ಅಕ್ಷರಪುರುಷರಿಗಿಂತಲೂ ಉತ್ತಮನಾದವನು.

ಯಸ್ಮಾತ್ಕ್ಷರಮತೀತೋಽಹಮಕ್ಷರಾದಪಿ ಚೋತ್ತಮಃ ।
ಅತೋಽಸ್ಮಿ ಲೋಕೇ ವೇದೇ ಚ ಪ್ರಥಿತಃ ಪುರುಷೋತ್ತಮಃ ॥

(ಗೀತಾ ೧೫-೧೮)

24) ಪ. ಭ. :– ಪುರುಷರಲ್ಲಿ ಅಥವಾ ಪುರುಷರಿಗಿಂತಲೂ ಉತ್ಕೃಷ್ಟತಮವಾದವನು. ಪುರುಷ ಎಂದು ಹೇಳಿರುವುದರಿಂದ ಅಚೇತನವಾದ ವ್ಯಕ್ತಾವ್ಯಕ್ತಪ್ರಕೃತಿಗಿಂತಲೂ ಭಿನ್ನನಾದವನು. ಪುರುಷರಲ್ಲಿ ಸಂಸಾರಕ್ಕೆ ಸಿಕ್ಕಿರುವವರು ಬದ್ಧರು. ಸಂಸಾರಬಂಧನವನ್ನು ದಾಟಿದವರು ಮುಕ್ತರು. ಸಂಸಾರಬಂಧನಕ್ಕೆ ಸಿಲುಕದೇ ಇರುವವರು ನಿತ್ಯಮುಕ್ತರು. (ಅನನ್ತ, ವೈನತೇಯ ಮುಂತಾದವರು.) ಈ ಎಲ್ಲ ಪುರುಷರಿಗಿಂತಲೂ ವಿಲಕ್ಷಣನೂ ಉತ್ಕೃಷ್ಟನೂ ಆಗಿದ್ದಾನೆ ಭಗವಂತ. ಬದ್ಧಪುರುಷರು ಅವದ್ಯಕ್ಕೆ (ದೋಷಕ್ಕೆ) ಸಿಕ್ಕಿದವರು, ಮುಕ್ತರು ಅವದ್ಯದಲ್ಲಿದ್ದು ಅನಂತರ ನಿರವದ್ಯವಾದ ಪದವಿಯನ್ನು ಪಡೆದವರು. ಎಂದಿಗೂ ಅವದ್ಯಕ್ಕೆ ಸಿಲುಕದೆ ಇರುವುದರಿಂದ ಭಗವಂತನು ಇವರಿಗಿಂತಲೂ ಉತ್ತಮನು. ನಿತ್ಯಸೂರಿಗಳು ನಿರವದ್ಯರಾಗಿದ್ದರೂ–ಜಗತ್ತನ್ನು ವ್ಯಾಪಿಸುವುದು, ಸೃಷ್ಟಿ-ಸ್ಥಿತಿ-ಲಯಗಳನ್ನು ಮಾಡುವಿಕೆ ಮತ್ತು ಜಗದೀಶ್ವರತ್ವ–ಎಂಬ ಮಹಿಮೆ ಅವರಿಗಿಲ್ಲ. ಆದುದರಿಂದ ಭಗವಂತನು ಇವರಿಗಿಂತಲೂ ಶ್ರೇಷ್ಠ. ಉತ್=ಶ್ರೇಷ್ಠ ; ಉತ್ತರ=ಅದಕ್ಕಿಂತಲೂ ಶ್ರೇಷ್ಠ ; ಉತ್ತಮ=ಶ್ರೇಷ್ಠತಮ. ಕ್ಷರಃ = ಪ್ರಕೃತಿ ; ಅಕ್ಷರಃ=ಶುದ್ಧನಾದ ಕೂಟಸ್ಥನಾದ ಜೀವ. ಇವೆರಡಕ್ಕಿಂತಲೂ ಶ್ರೇಷ್ಠನು ಪುರುಷೋತ್ತಮನು.

ದ್ವಾವಿಮೌ ಪುರುಷೌ ಲೋಕೇ (ಗೀತಾ. ೧೫-೧೬)

ನಿರುಕ್ತಿ :– ಬದ್ಧಾದಿಪುರುಷೇಭ್ಯೋ ಯೋ ಹ್ಯುತ್ಕೃಷ್ಟಃ
ಪುರುಷೋತ್ತಮಃ ॥

24) ಸ. ಸಂ. :– ಪುರುಷರಲ್ಲಿ ಉತ್ತಮನು ಅಥವಾ ಪುರುಷರುಗಳಿಗಿಂತಲೂ ಉತ್ತಮನು. ಕ್ಷರ ಮತ್ತು ಅಕ್ಷರಪುರುಷರಿಗಿಂತಲೂ ಉತ್ತಮನು.

* * *

ಸರ್ವಃ ಶರ್ವಃ ಶಿವಃ ಸ್ಥಾಣುರ್ಭೂತಾದಿರ್ನಿಧಿರವ್ಯಯಃ ।
ಸಮ್ಭವೋ ಭಾವನೋ ಭರ್ತಾ ಪ್ರಭವಃ ಪ್ರಭುರೀಶ್ವರಃ ॥೧೭॥

25) ಸರ್ವಃ = ಸರ್ವಕಾರಣ, ಸರ್ವನಿಯಾಮಕ, ಸರ್ವಜ್ಞ, ಸರ್ವಶಕ್ತ, ಸರ್ವಾತ್ಮಕ, ಸರ್ವಾಧಾರ, ಸರ್ವವ್ಯಾಪಕ, ಸರ್ವಮಯ, ಸರ್ವರೂಪೀ.

ಯಸ್ಮಿನ್ಸರ್ವಂ ಯತಃ ಸರ್ವಂ ಯಃ ಸರ್ವಂ ಸರ್ವತಶ್ಚ ಯಃ ।
ಯಶ್ಚ ಸರ್ವಮಯೋ ದೇವಃ ತಸ್ಮೈ ಸರ್ವಾತ್ಮನೇ ನಮಃ ॥

(ಭೀಷ್ಮಸ್ತವರಾಜ ೮೩)

ಶಂ. ಭಾ. :– ಅಸತ್ ಮತ್ತು ಸತ್ ಆಗಿರುವ ಎಲ್ಲದರ ಉತ್ಪತ್ತಿ, ಸ್ಥಿತಿ ಮತ್ತು ಪ್ರಲಯಗಳ ಸ್ಥಾನವಾಗಿ ಸದಾ ಸರ್ವವನ್ನೂ ತಿಳಿದಿರುವುದರಿಂದ ಅವನು ಸರ್ವ ಎಂಬುದು ಭಗವಾನ್ ವ್ಯಾಸರ ಅಭಿಪ್ರಾಯ.

ಅಸತಶ್ಚ ಸತಶ್ಚೈವ ಸರ್ವಸ್ಯ ಪ್ರಭವಾಪ್ಯಯಾತ್ ।
ಸರ್ವಸ್ಯ ಸರ್ವದಾ ಜ್ಞಾನಾತ್ ಸರ್ವಮೇನಂ ಪ್ರಚಕ್ಷತೇ ॥

(ಮ. ಭಾ. ಉದ್ಯೋಗ ೭೦-೧೧)

25) **ಪ. ಭ. :–** (ಯಾವ ಅಪೇಕ್ಷೆಯೂ ಇಲ್ಲದಿದ್ದರೂ ಉದಾಸೀನ ಮಾಡದೇ) ಸರ್ವದಾ ಸ್ವರೂಪ, ಸ್ಥಿತಿ, ಪ್ರವೃತ್ತಿ–ಮುಂತಾದುವುಗಳನ್ನು ನಿರ್ವಹಿಸುತ್ತಾ ಸರ್ವಶರೀರಿಯಾಗಿರುವ ಸರ್ವಾತ್ಮನು.

ಸರ್ವಂ ಸಮಾಪ್ನೋಷಿ ತತೋಽಸಿ ಸರ್ವಃ (ಗೀತಾ ೧೧-೪೦)

ನಿರುಕ್ತಿ :– **ಚರಾಚರಶರೀರೇಷು ವ್ಯಾಪ್ತಿಮಾನ್ಸರ್ವ ಈರಿತಃ**

25) **ಸ. ಸಂ. :–** ತನಗೆ ವಾಚಕವಾಗಿರುವ ವೇದವೆಂಬ "ರವ" ದೊಡನೆ ಸಹಿತನಾಗಿರುವುದರಿಂದ ಸರವ=ಸರ್ವ. ಸರ್ವವ್ಯಾಪಿಯು.

ಸ್ರಷ್ಟಾ ಪಾತಾ ಚ ಸಂಹರ್ತಾ ನಿಯನ್ತಾ ಚ ಪ್ರಕಾಶಿತಾ ।
ಯತಃ ಸರ್ವಸ್ಯ ತೇನಾಹಂ ಸರ್ವೋಽಸ್ಮೀತ್ಯೃಷಿಭಿಃ ಸ್ತುತಃ ॥"

ಎಂದು ಗೀತಾಭಾಷ್ಯದಲ್ಲಿ ಹೇಳಿರುವಂತೆ ಸರ್ವದ ಸೃಷ್ಟಿ-ಸ್ಥಿತಿ-ಲಯ-ನಿಯಮನ-ಪ್ರಕಾಶನಗಳಿಗೆ ಕಾರಣನಾದವನು.

* * *

26) **ಶರ್ವಃ** = ಸರ್ವಸಂಹಾರಕನು.

ಶಂ. ಭಾ. :– ಎಲ್ಲ ಪ್ರಜೆಗಳನ್ನೂ ಪ್ರಳಯಕಾಲದಲ್ಲಿ ಸಂಹರಿಸುವವನು.

26) **ಪ. ಭ. :–** (ತನ್ನ ಶರೀರಭೂತರಾಗಿರುವ ಜೀವಗಳ) ಅಶುಭ

ವನ್ನು ನಾಶಮಾಡುವವನು. (**ಸ್ವಶರೀರಭೂತಾನಾಮಶುಭಂ ಶೃಣಾತಿ ಹಿನಸ್ತೀತಿ ವಾ.**)

ನಿರುಕ್ತಿ :– **ಸ್ವಶರೀರಜಗದ್ದುಃಖಂ ಶರ್ವಃ ಸಃ ಸ್ಯಾಚ್ಛೃಣಾತಿ ಯಃ ।**

26) **ಸ. ಸಂ. :–** ಸಂಹಾರಕಾರಿಗಳ ಅಥವಾ ಅಯೋಗ್ಯರ ಸುಖವನ್ನು ತಡೆಗಟ್ಟುವನು. **ಶರ್ವಸಂರೋಧನಾದ್ಧರಿಃ।** ”

* * *

27) **ಶಿವಃ** = ಮಂಗಲಸ್ವರೂಪಿಯು.

ಶಂ. ಭಾ. :– (ತ್ರಿಗುಣರಹಿತನಾಗಿರುವುದರಿಂದ) ಶುದ್ಧನು. (ಶಿವನು.) “**ಸ ಬ್ರಹ್ಮ ಸ ಶಿವಃ**” ಇತ್ಯಾದಿ ಶ್ರುತಿವಚನದಂತೆ ಶಿವನಿಂದ ವಿಷ್ಣುಪರಮಾತ್ಮನು ಭಿನ್ನನಲ್ಲವಾದ್ದರಿಂದ “ಶಿವ” ಮುಂತಾದ ನಾಮಗಳಿಂದ ಶ್ರೀಹರಿಯೇ ಸ್ತುತಿಸಲ್ಪಡುತ್ತಾನೆ.

27) **ಪ. ಭ. :–** ಮಂಗಲಸ್ವರೂಪಿಯು. ಭಕ್ತರಿಗೆ ಶುಭವನ್ನುಂಟುಮಾಡುವವನು. ಶುಭವನ್ನುಂಟುಮಾಡುವ ಯಾವನಲ್ಲಿ ಭಕ್ತರು ಶಯನಿಸುತ್ತಾರೋ ಅವನು ಶಿವನು. **ಶೀಜ್–ಸ್ವಪ್ನೇ** ಧಾತುವಿನಿಂದ ಆಗಿರುವ ಶಬ್ದ. ಅದಕ್ಕೆ ಶುಭ ಮತ್ತು ಶುಭಕಾರಣ ಎಂಬ ಅರ್ಥಗಳೂ ಉಂಟು. **ಶಾಶ್ವತಂ ಶಿವಮಚ್ಯುತಂ** (ತೈ. ನಾ. ೬-೧೧)
ನಿರುಕ್ತಿ :– **ಶುಭಾವಹತ್ವಾದ್ಭಕ್ತಾನಾಂ ಶಿವ ಇತ್ಯಭಿಧೀಯತೇ ।**

27) **ಸ. ಸಂ. :–** ಮಂಗಲವುಳ್ಳವನು ; ಮಂಗಲವನ್ನುಂಟುಮಾಡುವವನು ; ಮುಕ್ತಾತ್ಮರನ್ನು ನಡೆಸುವವನು. (**ಶಿವಂ ಮಂಗಲಮಸ್ಯಾಸ್ತೀತಿ, ಶಿವಯತೀತಿ ವಾ । ಶಂ ಸುಖಮೇಷಾಮಸ್ತೀತಿ ಶಿವಾಃ = ಮುಕ್ತಾಃ ತಾನ್ವರ್ತಯತೀತಿ ವಾ**) ಅಥವಾ ಶಿವನಲ್ಲಿ ಅಂತರ್ಯಾಮಿಯಾಗಿರುವವನು.

* * *

28) **ಸ್ಥಾಣುಃ** = ಸ್ಥಿರನು.

ಶಂ. ಭಾ. :– ಸ್ಥಿರನಾಗಿರುವುದರಿಂದ ಅವನು ಸ್ಥಾಣುವು.

28) ಪ. ಭ. :– ದೃಢವಾದ ಅನುಗ್ರಹವುಳ್ಳವನು. ಎಲ್ಲ ಅಮಂಗಲಗಳನ್ನೂ ಶಮನಗೊಳಿಸಿ, ಎಲ್ಲ ಇಷ್ಟಾರ್ಥಗಳನ್ನೂ ಬಹುಮುಖವಾಗಿ ಅನುಗ್ರಹಿಸಿದನಂತರವೂ ವಿಶ್ರಮಿಸಿಕೊಳ್ಳದೇ ಸ್ಥಿರವಾಗಿ ಅನುಗ್ರಹಮಾಡುವವನು. ಏಕೋ ಬಹೂನಾಂ ಯೋ ವಿದಧಾತಿ ಕಾಮಾನ್ (ಶ್ವೇ ೬.೧೩)

ರತ್ನಪರ್ವತಮಾರುಹ್ಯ ಯಥಾ ರತ್ನಂ ನರೋ ಮುನೇ ।
ಸತ್ತ್ವಾನುರೂಪಮಾದತ್ತೇ ತಥಾ ಕೃಷ್ಣಾನ್ಮನೋರಥಾನ್ ॥
(ವಿ. ಧ. ೭-೩)

ಯದ್ದುರ್ಲಭಂ ಯದಪ್ರಾಪ್ಯಂ ಮನಸೋ ಯದಗೋಚರಮ್ ।
ತದಸ್ಯ ಪ್ರಾರ್ಥಿತಂ ಧ್ಯಾತೋ ದದಾತಿ ಮಧುಸೂದನಃ ॥

ನಿರುಕ್ತಿ :– ಸಂಶಮಯ್ಯಾಶಿವಂ ಸರ್ವಂ ವಿಶ್ರಾಣ್ಯಾಪಿ ಶಿವಂ ಬಹು ।
ಸ್ವಯಂ ನ ವಿಶ್ರಾಮ್ಯತಿ ಯಃ ಸ ಸ್ಥಾಣುಃ ಪರಿಕೀರ್ತಿತಃ ॥

28) ಸ. ಸಂ. :– ಎಲ್ಲೆಲ್ಲಿಯೂ ಇರುವವನು ಮತ್ತು ಸೂಕ್ಷ್ಮನಾಗಿರುವವನು. ತಿಷ್ಠತಿ ಸರ್ವತ್ರೇತಿ ಸ್ಥಃ । ಸ್ಥಶ್ಚಾಸಾವಣುಶ್ಚ ಸ್ಥಾಣುಃ । ಅಥವಾ ಸ್ಥಿರನಾದವನು ; ಶಿವನಲ್ಲಿ ಅಂತರ್ಯಾಮಿಯಾಗಿರುವುದರಿಂದ ಅವನು ಶಿವಸ್ಥಾಣು. (ಶಿವಸ್ಥಾಣು ಎಂಬುದನ್ನು ಏಕಪದವನ್ನಾಗಿ ತೆಗೆದುಕೊಂಡು ಹೀಗೆ ವ್ಯಾಖ್ಯಾನಿಸಬಹುದು.)

* * *

29) ಭೂತಾದಿಃ = ಭೂತಗಳಿಗೆ ಆದಿಕಾರಣ. ಎಲ್ಲ ಭೂತಗಳಿಗೂ ಮೊದಲು ಇದ್ದವನು.

ಶಂ. ಭಾ. :– ಭೂತಗಳಿಗೆ ಆದಿಕಾರಣನಾದ್ದರಿಂದ ಇವನು ಭೂತಾದಿಯು.

29) ಪ. ಭ. :– ಅತ್ಯಂತವರಣೀಯನು ; ಕಮನೀಯತಮನು ; ಸ್ಪೃಹಣೀಯತಮನು–ಎಂದು ಭೂತಗಳಿಂದ ಸ್ವೀಕರಿಸಲ್ಪಟ್ಟವನು. (ಭೂತೈಃ ಆದೀಯತೇ)

ನಿರುಕ್ತಿ :– ಭೂತೈರ್ಯಃ ಪ್ರಾಣಿಭಿರ್ನಿತ್ಯಂ ಸ್ಪೃಹಣೀಯತಮತ್ವತಃ ।
ಉಪಾದಾನಾದ್ಧ ಭೂತಾದಿರುಚ್ಯತೇ ಸುಂದರಾಕೃತಿಃ ॥

29) **ಸ. ಸಂ. :–** ಭೂತಗಳಿಗೆ ಆದಿಕಾರಣ ; ಭೂತಗಳಿಂದ ಸ್ವೀಕರಿಸಲ್ಪಟ್ಟವನು ; ಭೂತಗಳನ್ನು ಭಕ್ಷಿಸಿಬಿಡುವವನು. **ಭೂತಾನಾಮಾದಿ ಕಾರಣಂ । ಭೂತೈರಾದೀಯತೇ ಉಪಾದೀಯತ ಇತಿ ವಾ । ಭೂತಾನಾಮಾದಿಭಕ್ಷಕ ಇತಿ ವಾ ।**

* * *

30) **ನಿಧಿರವ್ಯಯಃ** = ಅಕ್ಷಯವಾದ ನಿಧಿಯು.

ಶಂ. ಭಾ. :– ಪ್ರಳಯಕಾಲದಲ್ಲಿ ಎಲ್ಲ ಪ್ರಾಣಿಗಳೂ ಯಾವನಲ್ಲಿ ಇರಿಸಲ್ಪಡುತ್ತವೆಯೋ **(ನಿಧೀಯತೇ)** ಅವನು ನಿಧಿ. ಎಂತಹ ನಿಧಿ ಅವನು? ಎಂದರೆ–ಅವಿನಾಶಿಯಾದ ನಿಧಿಯು. **(ಅವ್ಯಯಃ ಅವಿನಶ್ವರಃ ನಿಧಿಃ)**

30) **ಪ. ಭ. :–** ಆಪದ್ಧನದಂತೆ ಮಹಾಲೋಭದಿಂದ ಇರಿಸಿಕೊಳ್ಳಲ್ಪಡಬೇಕಾದ್ದರಿಂದ ಅವನು ನಿಧಿ. ಇತರ ನಿಧಿಗಳಂತಲ್ಲದೇ ಅವನು ಅಕ್ಷಯವಾದ ನಿಧಿ. ಸದಾ ಅನುಭವಿಸಲ್ಪಡುತ್ತಿದ್ದರೂ ಕಲಾಮಾತ್ರವೂ ಕ್ಷೀಣವಾಗದಿರುವ ನಿಧಿ. **ತದ್ಯಥಾ ಹಿರಣ್ಯನಿಧಿಂ ನಿಹಿತಂ** (ಛಾಂ. ಉ. ೮-೩-೨)

ಅವ್ಯಯಃ ಎಂಬುದು ಹಿಂದೆಯೇ ಬಂದಿದೆ. ಆದ್ದರಿಂದ ಇಲ್ಲಿ ಅದನ್ನು ಸ್ವತಂತ್ರನಾಮಧೇಯವನ್ನಾಗಿ ತೆಗೆದುಕೊಳ್ಳದೇ ನಿಧಿಶಬ್ದಕ್ಕೆ ವಿಶೇಷಣವನ್ನಾಗಿ ತೆಗೆದುಕೊಳ್ಳಬೇಕು.

ನಿರುಕ್ತಿ :– **ಯಃ ಸದಾಪದ್ಧನಮಿವ ನಿಧೇಯತ್ವಾನ್ನಿಧಿಃ ಸ್ಮೃತಃ ।**
ಸದೋಪಭುಜ್ಯಮಾನೋಽಪಿ ಕಲಯಾಪ್ಯನುಪಕ್ಷಯಾತ್ ॥

ಅವ್ಯಯಃ ಸ್ಯಾನ್ನಿಧೇರೇತದ್ವಿಶೇಷಣಮುದಾಹೃತಮ್ ।
ಅತೋಽವ್ಯಯೋ ನಿಧಿರಿತಿ ಹ್ಯೇಕನಾಮ ಪ್ರಕೀರ್ತಿತಮ್ ॥

30) **ಸ. ಸಂ. :–** ನಿಧಿಃ = ಸಜ್ಜನರಿಂದ ತಮ್ಮ ಹೃದಯದಲ್ಲಿ ಇರಿಸಿಕೊಳ್ಳಲ್ಪಡುವುದರಿಂದ ಇವನು ನಿಧಿಯು. **(ನಿಧೀಯತೇ ಹೃದಿ ಸಜ್ಜನೈಃ)**

31) **ಸ. ಸಂ. :– ಅವ್ಯಯಃ = ಧ್ಯೇಯಃ ಸದಾ ಸವಿತೃಮಂಡಲ ಮಧ್ಯವರ್ತೀ**–ಎಂಬಂತೆ ಅವಿಯಲ್ಲಿ (ಸೂರ್ಯನಲ್ಲಿ) ಹೋಗುವುದರಿಂದ ಅಥವಾ ಅವಿಯಿಂದ (ಪ್ರೀತಿಯಿಂದ) ಜ್ಞಾನಿಗಳನ್ನು ಕುರಿತು

ಹೋಗುವುದರಿಂದ ಇವನು ಅವ್ಯಯನೂ ಆಗಿದ್ದಾನೆ. ನಿಧಿಃ-ಅವ್ಯಯಃ ಎಂಬಿವೆರಡೂ ಸ್ವತಂತ್ರನಾಮಗಳು.

* * *

31) **ಸಮ್ಭವಃ** = ಉತ್ಪತ್ತಿಕಾರಣವು ಅಥವಾ (ಸ್ವಸಂಕಲ್ಪದಿಂದ) ಹುಟ್ಟುವವನು.

ಶಂ. ಭಾ. :– ತನ್ನ ಇಚ್ಛಾನುಸಾರವಾಗಿ ಸಮೀಚೀನವಾದ ಹುಟ್ಟನ್ನು ಪಡೆಯುವವನು.

ಅಥ ದುಷ್ಟವಿನಾಶಾಯ ಸಾಧೂನಾಂ ರಕ್ಷಣಾಯ ಚ ।
ಸ್ವೇಚ್ಛಯಾ ಸಂಭವಾಮ್ಯೇವಂ ಗರ್ಭದುಃಖವಿವರ್ಜಿತಃ ॥

31) **ಪ. ಭ. :– (ಸಮನ್ತಾತ್ ಭವಃ ಯಸ್ಯ=ಸಮ್ಭವಃ)** ಹೀಗೆ ನಿಧಿಯಂತೆ ಗೂಢವಾಗಿದ್ದರೂ ಎಲ್ಲ ದೇಶ-ಕಾಲಗಳಲ್ಲಿಯೂ ಅಲ್ಲಲ್ಲಿ ಮತ್ಸ್ಯ, ಕೂರ್ಮ, ವರಾಹ, ನೃಸಿಂಹ, ವಾಮನ, ರಾಮ-ಕೃಷ್ಣಾದಿ ಅನಂತರೂಪಗಳಿಂದ ಮತ್ತೆ ಮತ್ತೆ ಅವತಾರಮಾಡುವವನು ; ಹುಟ್ಟು ವವನು; ಆವಿರ್ಭವಿಸುವವನು. ಬಹೂನಿ ಮೇ ವ್ಯತೀತಾನಿ (ಗೀ ೪-೫) **ಯದಾ ಯದಾ ಹಿ ಧರ್ಮಸ್ಯ** (ಗೀ ೪-೭)

ನಿರುಕ್ತಿ :– ನಿಧಿವಚ್ಛಾತಿಗೂಢೋಽಪಿ ರಾಮಕೃಷ್ಣಾದಿಭೇದತಃ ।
ಸಮನ್ತಾದ್ಬಹುಧಾ ಜಾತಃ ಸಂಭವಃ ಪರಿಕೀರ್ತಿತಃ ॥

32) **ಸ. ಸಂ. :–** ಚೆನ್ನಾಗಿ ನಕ್ಷತ್ರಗಳನ್ನು ಭರಿಸುವವನು **(ಸಮ್ಯಕ್ ಭಾನಿ=ನಕ್ಷತ್ರಾಣಿ ಪ್ರವರ್ತಯತಿ)**

* * *

32) **ಭಾವನಃ** = ಸತ್ಯಕಾಮಸಂಕಲ್ಪಗಳನ್ನು ಭಾವಿಸುವವನು.

ಶಂ. ಭಾ. :– ಎಲ್ಲ ಭೋಕ್ತೃಗಳ ಫಲಗಳನ್ನೂ ಭಾವಿಸುವವನು ಅಂದರೆ ಸರ್ವಫಲದಾತಾರ. ಫಲಮತ ಉಪಪತ್ತೇಃ–ಎಂಬ ಬ್ರಹ್ಮಸೂತ್ರವು (೩-೨-೩೮) ಇದೇ ಅಭಿಪ್ರಾಯವನ್ನು ಹೇಳುತ್ತದೆ.

32) **ಪ. ಭ. :–** ಅವತಾರಮಾಡಿ ಸಾಧುಚೇತನರನ್ನು ಅನಿಷ್ಟಗಳ

ನಿವಾರಣೆಯಿಂದ ಉಜ್ಜೀವನಗೊಳಿಸುವವನು ; ಉದ್ಧರಿಸುವವನು. **ಪರಿತ್ರಾಣಾಯ ಸಾಧೂನಾಂ** (ಗೀತಾ ೪-೮)

ನಿರುಕ್ತಿ :– ಜನಿತ್ವೋಜ್ಜೀವಯತಿ ಯೋ ಜನಾನ್ಯಾದ್ಭಾವನಸ್ತು ಸಃ ।

33) **ಸ. ಸಂ. :–** ಭಾವವನ್ನು (ಅಭಿಪ್ರಾಯವನ್ನು) ನಡೆಸುವವನು ; ಸೂರ್ಯಾದಿಗಳಲ್ಲಿರುವ ತನ್ನ ಪ್ರಕಾಶದಿಂದ (ಭಯಾ) ಪದಾರ್ಥಗಳ ಅರಿವನ್ನುಂಟುಮಾಡುವವನು ; ಕಾಂತಿಗಳ ಪ್ರಾಪ್ತಿಯುಳ್ಳವನು ; ಭವನ (ಉತ್ಪತ್ತಿ) ಇಲ್ಲದವನು.

*　　　　*　　　　*

33) **ಭರ್ತಾ**= ಭರಿಸುವವನು ; ಪೋಷಿಸುವವನು ; ಒಡೆಯ.

ಶಂ. ಭಾ. :– ಪ್ರಪಂಚಕ್ಕೆ ಅಧಿಷ್ಠಾನನಾಗಿದ್ದು ಅದನ್ನು ಭರಿಸುವವನು.

33) **ಪ. ಭ. :–** ಆತ್ಮದಾನದಿಂದ ಭಕ್ತರನ್ನು ಭರಿಸುವ (ಪೋಷಿಸುವ) ಸ್ವಭಾವವುಳ್ಳವನು.

ನಿರುಕ್ತಿ :– ಯಸ್ಮಾನ್ಪುಷ್ಣಾತ್ಯಾತ್ಮದಾನಾತ್ಸ ಭರ್ತಾ ಪರಿಕೀರ್ತಿತಃ ।

34) **ಸ. ಸಂ. :–** ಪೋಷಿಸುವವನು. **ಪೋಷಕತ್ವಾದ್ಭರ್ತಾ**

*　　　　*　　　　*

34) **ಪ್ರಭವಃ** = ಶ್ರೇಷ್ಠವಾದ ಜನ್ಮವುಳ್ಳವನು ; ಪ್ರಾಣಿಗಳ ಜನ್ಮಕ್ಕೆ ಕಾರಣನಾದವನು.

ಶಂ. ಭಾ. :– ಸಮಸ್ತಭೂತಕೋಟಿಗಳೂ ಯಾರಿಂದ ಚೆನ್ನಾಗಿ ಉತ್ಪನ್ನವಾಗುತ್ತವೆಯೋ–ಅವನು ; ಶ್ರೇಷ್ಠ (ದಿವ್ಯ) ವಾದ ಜನ್ಮವುಳ್ಳವನು.

34) **ಪ. ಭ. :–** ದೇವತೆಗಳೇ ಮುಂತಾದವರಿಗಿಂತಲೂ ವಿಜಾತೀಯನಾದವನು. ಶ್ರೇಷ್ಠವಾದ ಜನ್ಮವುಳ್ಳವನು. ಅವಿದ್ಯಾದೋಷಲೇಶವೂ ಇಲ್ಲದ ದಿವ್ಯಜನ್ಮವುಳ್ಳವನು.

ಜನ್ಮಕರ್ಮ ಚ ಮೇ ದಿವ್ಯಮೇವಂ ಯೋ ವೇತ್ತಿ ತತ್ತ್ವತಃ ।
ತ್ಯಕ್ತ್ವಾ ದೇಹಂ ಪುನರ್ಜನ್ಮ ನೈತಿ ಮಾಮೇತಿ ಸೋಽರ್ಜುನ ॥
(ಗೀತಾ ೪-೯)

ನಿರುಕ್ತಿ :– **ದೇವಾದಿಜನವೈಜಾತ್ಯಾತ್ಪ್ರಕೃಷ್ಟೋತ್ಪತ್ತಿಮತ್ತ್ವತಃ ।**
ಅವಿದ್ಯಾದೋಷವೈಧುರ್ಯಾತ್ಪ್ರಭವಃ ಪರಿಕೀರ್ತಿತಃ ॥

35) **ಸ. ಸಂ. :–** ಪ್ರಭೆಗಳನ್ನು (ಪ್ರಕೃಷ್ಟವಾದ ದೀಪ್ತಿಯುಳ್ಳ ಸೂರ್ಯ-ಚಂದ್ರರನ್ನು) ನಡೆಸುವವನು, ಪ್ರಕೃಷ್ಟವಾದ ಜನ್ಮವು ಯಾವನಿಂದ ಉಂಟಾಗುತ್ತದೆಯೋ ಅವನು.

* * *

35) **ಪ್ರಭುಃ :–** ಸರ್ವಸಮರ್ಥನು.

ಶಂ. ಭಾ. :–ಎಲ್ಲ ಕ್ರಿಯೆಗಳಲ್ಲಿಯೂ ಅತಿಶಯಸಾಮರ್ಥ್ಯವುಳ್ಳವನು.

35) **ಪ. ಭ. :–** (ಮನುಷ್ಯಾದಿಧರ್ಮಗಳಿಂದ ಅವತರಿಸಿದರೂ ಕೂಡ) ಭೋಗ-ಮೋಕ್ಷಫಲಗಳನ್ನು ಸರ್ವರಿಗೂ ಕೊಡುವ ಸಾಮರ್ಥ್ಯ ವನ್ನು ಹೊಂದಿರುವುದರಿಂದ ಅವನು ಪ್ರಭುವು.

ನಿರುಕ್ತಿ :– **ಬ್ರಹ್ಮಾದೀನಾಂ ಚ ಸರ್ವೇಷಾಂ ಭೋಗಮೋಕ್ಷ ಸಮರ್ಪಣೆ ।**
ಸಮರ್ಥಃ ಪ್ರಭುರಿತ್ಯುಕ್ತಃ ಸರ್ವೇಷ್ಟಫಲದೋ ಮನುಃ ॥

36) **ಸ. ಸಂ. :–** ಪ್ರಕೃಷ್ಟನಾಗಿ ಇರುವವನು. **(ಪ್ರಕರ್ಷೇಣ ಭವತೀತಿ ಪ್ರಭುಃ)**

* * *

36) **ಈಶ್ವರಃ :–** ನಿರವಧಿಕವಾದ, ನಿರುಪಾಧಿಕವಾದ ಮತ್ತು ಅನ್ವರ್ಥ ವಾದ ಐಶ್ವರ್ಯವುಳ್ಳವನು ; ಸರ್ವೇಶ್ವರನು.

ಶಂ. ಭಾ. :– ನಿರವಧಿಕವಾದ ಐಶ್ವರ್ಯವುಳ್ಳವನು. **"ಏಷ ಸರ್ವೇಶ್ವರಃ" (ಮಾಂ .ಉ .೬)**

36) **ಪ. ಭ. :–** (ತನ್ನ ಅವತಾರಗಳಲ್ಲಿ ಪರಮೇಷ್ಠಿಭಾವಕ್ಕಿಂತಲೂ)

ಅಧಿಕವಾದ ಪ್ರಯೋಜನವುಳ್ಳ ಐಶ್ವರ್ಯದಿಂದ ಕೂಡಿದವನು. ಬ್ರಹ್ಮಾದಿಗಳಿಗೂ ಈಶ್ವರ. ಮುಖ್ಯಫಲಪ್ರದನಾದ ಈಶ್ವರ.

ನಿರುಕ್ತಿ :– **ಮನುಷ್ಯಾದ್ಯವತಾರೇಽಪಿ ಬ್ರಹ್ಮಾದೀಂಶ್ಚ ಪ್ರಯೋಜನೇ ।**
ನಿಯನ್ತಾತ್ವೀಶ್ವರಃ ಪ್ರೋಕ್ತಃ ಪ್ರಾಧಾನ್ಯಫಲದೋ ಮನುಃ ॥

37) **ಸ. ಸಂ. :–** ಆಳುವ ಸ್ವಭಾವವುಳ್ಳವನು ; ಈಶರಿಗಿಂತಲೂ ಶ್ರೇಷ್ಠನಾದವನು. **ಈಶನಶೀಲತ್ವಾದೀಶ್ವರಃ । ಈಶೇಭ್ಯೋ ವರ ಇತಿ ವಾ।**

* * *

ಸ್ವಯಮ್ಭೂಃ ಶಮ್ಭುರಾದಿತ್ಯಃ ಪುಷ್ಕರಾಕ್ಷೋ ಮಹಾಸ್ವನಃ ।
ಅನಾದಿನಿಧನೋ ಧಾತಾ ವಿಧಾತಾ ಧಾತುರುತ್ತಮಃ ॥೧೮॥

37) **ಸ್ವಯಮ್ಭೂಃ :–** ಸ್ವಯಂ ಸತ್ತೆಯುಳ್ಳವನು.

ಶಂ. ಭಾ. :– ತಾನಾಗಿಯೇ ಇರುವವನು. **ಸ ಏಷ ಸ್ವಯಮುದ್ಬಭೌ**–ಅವನು ತಾನಾಗಿಯೇ ಪ್ರಕಟವಾದನು. (ಮನು.೧-೭) ಎಲ್ಲರಿಗೂ ಮೇಲೆ ಇರುವವನು ಅಥವಾ ಸ್ವಯಂ ಇರುವವನು. ಯಾರ ಮೇಲೆ ಇದ್ದಾನೆಯೋ ಅಥವಾ ಯಾವನು ಮೇಲೆ ಇದ್ದಾನೆಯೋ–ಆ ಎರಡು ರೂಪಗಳಲ್ಲಿ ತಾನೇ ಇರುವವನು. **ಪರಿಭೂಃ ಸ್ವಯಮ್ಭೂಃ** (ಈಶ-೮) ಪರಮೇಶ್ವರನು ; ಯಾರಿಗೂ ಪರತಂತ್ರನಾಗದೇ ತಾನೇ ಸ್ವತಂತ್ರನಾಗಿರುವವನು. **ಪರಾಞ್ಚಿ ಖಾನಿ ವ್ಯತೃಣತ್ ಸ್ವಯಮ್ಭೂಃ** (ಕಠ.೨-೪-೧)

37) **ಪ. ಭ. :–** (ಚತುರ್ಮುಖನೇ ಮುಂತಾದವರಂತೆ ಬೇರೆ ಈಶ್ವರನಿಗೆ ಅಥವಾ ಕರ್ಮಗಳಿಗೆ ಅಧೀನನಾಗಿ ಹುಟ್ಟುವವನಲ್ಲ. ತನ್ನ ಲೀಲೆಯೇ ಮುಂತಾದ ಪ್ರಯೋಜನಕ್ಕೋಸ್ಕರ ತನ್ನ ಇಚ್ಛೆಯಿಂದ, ತನ್ನ ಅಸಾಧಾರಣವಾದ ಪರಮಸತ್ತ್ವಮಯಪ್ರಕೃತಿಯನ್ನೇ ದೇವ-ಮನುಷ್ಯ ಇತ್ಯಾದಿ ರೂಪಗಳಲ್ಲಿರಿಸಿ ಅದನ್ನೇ ಆಶ್ರಯಿಸಿ) ತಾನಾಗಿಯೇ ಜನ್ಮತಾಳುವವನು.

ಸ್ವಯಂಭು ಬ್ರಹ್ಮ ಪರಮಂ ಕವೀನಾಂ ।
ಪ್ರಕೃತಿಂ ಸ್ವಾಮಧಿಷ್ಠಾಯ ಸಂಭವಾಮ್ಯಾತ್ಮಮಾಯಯಾ ॥

(ಗೀತಾ ೪-೬)

ನಿರುಕ್ತಿ :– **ಭವತಿ ಸ್ವೇಚ್ಛಯಾ ಯೋऽಸೌ ಸ್ವಯಮ್ಭೂಃ ಪರಿಕೀರ್ತಿತಃ**

38) **ಸ. ಸಂ. :–** ತಾನಾಗಿಯೇ ಇರುವವನು ಅಥವಾ ಪ್ರಕಟ ವಾಗುವವನು (**ಸ್ವಯಮೇವ ಭವತೀತಿ ಸ್ವಯಂಭೂಃ**)

* * *

38) **ಶಮ್ಭುಃ**= ಸುಖವನ್ನು ಭಾವಿಸುವವನು.

ಶಂ. ಭಾ. :– ಭಕ್ತರಿಗೆ ಸುಖವನ್ನು ಭಾವಿಸು (ಉಂಟುಮಾಡು) ವವನು.

38) **ಪ. ಭ. :–** (ತನ್ನ ಸೌಂದರ್ಯ-ಸೌಶೀಲ್ಯಾದಿ ಗುಣಗಳನ್ನು ಆವಿಷ್ಕರಿಸಿ) ಸುಖವನ್ನು ಭಾವಿಸುವವನು. **ವಿಶ್ವಾಕ್ಷಂ ವಿಶ್ವಶಮ್ಭುವಮ್ ।** (ತೈ. ನಾ. ೬-೧೧)

ನಿರುಕ್ತಿ :– **ಸೌಂದರ್ಯಾದಿಗುಣಾನಾಂ ಯೋ ಹ್ಯಾವಿಷ್ಕಾರೇಣ ಶಂ ಸುಖಮ್ ।**
ಪುಂಸಾಂ ಸಮ್ಯಗ್ಭಾವಯತಿ ಸ ಶಂಭುಃ ಪರಿಕೀರ್ತ್ಯತೇ ॥

39) **ಸ. ಸಂ. :–** ಸುಖವನ್ನು ಭಾವಿಸುವವನು. (**ಶಂ ಸುಖಂ ಭಾವಯತೀತಿ ಶಮ್ಭುಃ**)

* * *

39) **ಆದಿತ್ಯಃ** = ಆದಿತ್ಯರೂಪಿಯು ಮತ್ತು ಆದಿತ್ಯಮಂಡಲದಲ್ಲಿರುವ ಪುರುಷನು.

ಶಂ. ಭಾ. :– ಆದಿತ್ಯಮಂಡಲದಲ್ಲಿರುವ ಹಿರಣ್ಮಯಪುರುಷನು ಅಥವಾ ದ್ವಾದಶಾದಿತ್ಯರಲ್ಲಿ ಒಬ್ಬನಾದ ವಿಷ್ಣುವು. **ಆದಿತ್ಯಾನಾಮಹಂ ವಿಷ್ಣುಃ** (ಗೀತಾ ೧೦-೨೧) ಅಥವಾ ಅದಿತಿಗೆ (ಅಖಂಡಿತವಾದ ಭೂಮಿಗೆ) ಪತಿಯಾದವನು ; ಆದಿತ್ಯನಿಗೆ ಸಮಾನವಾದ ಧರ್ಮವುಳ್ಳವನು. (ಒಬ್ಬನೇ ಆದಿತ್ಯನು ಅನೇಕಜಲಪಾತ್ರಗಳಲ್ಲಿ ಪ್ರತಿಬಿಂಬಿಸಿದಾಗ ಅನೇಕವಾಗಿ ಕಾಣು

ತ್ತಾನೆ. ಹಾಗೆಯೇ ಒಬ್ಬನೇ ಆತ್ಮನು ಅನೇಕಶರೀರಗಳಲ್ಲಿ ಇರುವುದರಿಂದ ಅನೇಕವಾಗಿ ಕಾಣುತ್ತಾನೆ.)

39) **ಪ. ಭ. :–** ಆದಿತ್ಯನಲ್ಲಿ ಇರುವ (ಆದಿತ್ಯನನ್ನು ನಿವಾಸವನ್ನಾಗಿ ಹೊಂದಿರುವ) ಪುರುಷನು.

ಅಂತಸ್ತದ್ಧರ್ಮೋಪದೇಶಾತ್ (ಬ್ರ. ಸೂ. ೧-೧-೨೧) **ಏಷೋಽನ್ತ ರಾದಿತ್ಯೇ ಹಿರಣ್ಮಯಃ ಪುರುಷಃ** (ಛಾಂ. ೧-೬-೬) **ಧ್ಯೇಯಃ ಸದಾ ಸವಿತೃಮಂಡಲಮಧ್ಯವರ್ತೀ ನಾರಾಯಣಃ** (ಬೃಹತ್ಪರಾಶರ)
ನಿರುಕ್ತಿ :– ನಿವಾಸಃ ಸವಿತಾ ಯಸ್ಯ ಸ ಆದಿತ್ಯಃ ಪ್ರಕೀರ್ತಿತಃ ॥

40) **ಸ. ಸಂ. :–** ಆದಿತ್ಯನಲ್ಲಿ ಇರುವುದರಿಂದ ಆದಿತ್ಯನು ; ಸೂರ್ಯನಲ್ಲಿ ಅಂತರ್ಗತವಾದ ರೂಪದಿಂದ ಪೃಥಿವೀರಸವನ್ನು ತೆಗೆದುಕೊಳ್ಳುವವನು; ಹೋಗುವವನು ; ಉಪೇಂದ್ರರೂಪದಿಂದ ಅದಿತಿಗೆ ಪುತ್ರನಾಗಿರುವವನು.

[ಋಗ್ಭಾಷ್ಯದಲ್ಲಿ **ಆದಿತ್ಯಸ್ಥತ್ವಾತ್ ಸ ಆದಿತ್ಯಃ ಆದದಾನಃ ಪ್ರಯಾತಿ ವಾ** ಎಂದು ಹೇಳಿದೆ.]

* * *

40) **ಪುಷ್ಕರಾಕ್ಷಃ** = ಕಮಲದಂತಿರುವ ಕಣ್ಣುಗಳುಳ್ಳವನು ಅಥವಾ (ಹೃದಯ) ಪುಷ್ಕರವನ್ನು ಅಕ್ಷವನ್ನಾಗಿ (ಅಚ್ಚನ್ನಾಗಿ) ಹೊಂದಿ ಶರೀರ ಯಂತ್ರವನ್ನು ನಡೆಸುವವನು.

ತಸ್ಯ ಯಥಾ ಕಪ್ಯಾಸಂ ಪುಣ್ಡರೀಕಮೇವಮಕ್ಷಿಣೀ ।
ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ ॥
ಭ್ರಾಮಯನ್ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ ॥

(ಗೀತಾ ೧೮-೬೧)

ಶಂ. ಭಾ. :– ಕಮಲವನ್ನು ಹೋಲಿಕೆಯಾಗಿ ಉಳ್ಳ ಕಣ್ಣುಗಳುಳ್ಳವನು.

40) **ಪ. ಭ. :–** ಎಲ್ಲ ಐಶ್ವರ್ಯಗಳಿಗೂ ಅಸಾಧಾರಣಲಕ್ಷಣವಾಗಿ ಬೆಳ್ದಾವರೆಗಳಂತೆ ಇರುವ ಕಣ್ಣುಗಳುಳ್ಳವನು. ಭಕ್ತರಿಗೆ ಅನುಗ್ರಹಮಾಡುವ ತಾವರೆಗಳಂತೆ ಇರುವ ಕಣ್ಣುಗಳುಳ್ಳವನು.
ನಿರುಕ್ತಿ :–

ಅಕ್ಷಿಣೀ ಪುಂಡರೀಕೇವ ಭಕ್ತಾನುಗ್ರಹಕಾರಿಣೀ ।
ಯಸ್ಯಾಸೌ ಪುಷ್ಕರಾಕ್ಷಃ ಸ್ಯಾದಷ್ಟವರ್ಣಸ್ತು ಪಾವಕಃ ॥

41) ಸ. ಸಂ. :– ಕಮಲದಂತೆ ಕಣ್ಣುಗಳುಳ್ಳವನು ; ಪುಷ್ಕಳವಾದ (ಹೇರಳವಾಗಿರುವ) ಕಣ್ಣುಗಳುಳ್ಳವನು ; ಪುಷ್ಕರನೂ (ಪುಷ್ಟಿಯನ್ನುಂಟು ಮಾಡುವವನೂ ಮತ್ತು ನಾಶರಹಿತನೂ) ಆಗಿರುವವನು. **ಪುಷ್ಟಿಂ ಕರೋತೀತಿ ಪುಷ್ಕರಃ । ನ ವಿದ್ಯತೇ ಕ್ಷಂ ನಾಶಃ ಯಸ್ಯ ಸಃ ಇತ್ಯಕ್ಷಃ । ಪುಷ್ಕರಶ್ಚಾಸಾವಕ್ಷಶ್ಚ ಪುಷ್ಕರಾಕ್ಷಃ ।**

* * *

41) **ಮಹಾಸ್ವನಃ** = ಮಹಾನಾದವುಳ್ಳವನು ; ಮಹತ್ತಾದ (ಪ್ರಣವ ವೇದರೂಪವಾದ) ನಾದವುಳ್ಳವನು.

ಶಂ. ಭಾ. :– ಮಹತ್ತಾದ ವೇದರೂಪವಾದ ಧ್ವನಿಯುಳ್ಳವನು. **ಅಸ್ಯ ಮಹತೋ ಭೂತಸ್ಯ ನಿಃಶ್ವಸಿತಮೇತತ್ ಋಗ್ವೇದೋ ಯಜುರ್ವೇದಃ** (ಬೃ. ಉ. ೨-೪-೧೦)

41) ಪ. ಭ. :– ಪೂಜ್ಯವಾದ ಶಬ್ದವುಳ್ಳವನು ; ಪೂಜ್ಯವಾದ ವೇದ ರೂಪಧ್ವನಿಯುಳ್ಳವನು ; ವೇದಸಾರವಾದ ಸಾವಿತ್ರಿಯಿಂದ ಪ್ರತಿಪಾದಿಸಲ್ಪಡುವವನು.

ನಿರುಕ್ತಿ :– **ಮಹಾನ್ಪೂಜ್ಯಸ್ತ್ರಯೀರೂಪಃ ಸ್ವನೋ ಯಸ್ಯ ಮಹಾಸ್ವನಃ ॥**

42) ಸ. ಸಂ. :– ಸ್ವತ್ತು (ಧನಸಂಪತ್ತು) ಇಲ್ಲದವರನ್ನು ಕರೆದು ಕೊಂಡು ಹೋಗುವ ದೊಡ್ಡವನು. **ನ ವಿದ್ಯತೇ ಸ್ವಂ ಧನಂ ಯೇಷ್ಾಂ ತೇ ಅಸ್ವಾಃ, ತಾನ್ನಯತೀತಿ ಅಸ್ವನಃ, ಮಹಾಂಶ್ಚಾಸೌ ಅಸ್ವನಶ್ಚ ಮಹಾಸ್ವನಃ ।** ವಾಯುದೇವರಿಗೆ ಪ್ರಾಣವಾಗಿರುವವನು. **ಮಹಾಂಶ್ಚಾಸೌ ಅಸುಶ್ಚ ಮಹಾಸುಃ = ವಾಯುಃ, ತಂ ಆನಯತಿ ಇತಿ ಮಹಾಸ್ವನಃ ।** ಅಥವಾ ಗಂಭೀರಧ್ವನಿಯುಳ್ಳವನು.

* * *

42) **ಅನಾದಿನಿಧನಃ** = ಆದಿ-ಅಂತ್ಯಗಳಿಲ್ಲದವನು ; ಹುಟ್ಟು-ಸಾವುಗಳಿಲ್ಲದವನು.

ಶಂ. ಭಾ. :– ಜನ್ಮ-ನಾಶಗಳಿಲ್ಲದವನು.

42) **ಪ. ಭ. :–** ಆದಿ-ಅಂತ್ಯಗಳಿಲ್ಲದವನು. 'ನಿತ್ಯಯೌವನದಿಂದ ಕೂಡಿ, ಹುಟ್ಟು-ಮುಪ್ಪು ಮುಂತಾದ ಪಾಪಗಳಿಗೆ ದೂರವಾದ ನಿತ್ಯವಿಗ್ರಹ ವಿಶಿಷ್ಟನಾದವನು. ಆದ್ಯಂತರಹಿತಸ್ವರೂಪವುಳ್ಳವನು'–ಎಂದಷ್ಟೇ ಅರ್ಥ ಮಾಡಬಾರದು. ಏಕೆಂದರೆ : ಚತುರ್ಮುಖಾದಿಗಳಿಗೂ ಆದ್ಯಂತರಹಿತವಾದ ಸ್ವರೂಪವುಂಟು. ಆದ್ಯನ್ತರಹಿತದಿವ್ಯಮಂಗಲವಿಗ್ರಹವುಳ್ಳವನು–ಎಂದು ಅರ್ಥೈಸಬೇಕು. ಅನಾದಿನಿಧನರಾದ ಚತುರ್ಮುಖಾದಿಗಳಿಂದಲೂ ಉಪಾಸನೆಮಾಡಲ್ಪಡುತ್ತಿರುವವನು.

ನಿರುಕ್ತಿ :– ಯಸ್ಯಾದಿನಿಧನಂ ನಾಸ್ತಿ ಅನಾದಿನಿಧನಶ್ಚ ಸಃ ।
ಅನಾದಿನಿಧನೋಽಪಾಸ್ಯೋ ನಿತ್ಯಯೌವನವಿಗ್ರಹಃ ॥

43) **ಸ. ಸಂ. :–** ಆದಿ-ಅಂತ್ಯಗಳಿಲ್ಲದವನು ; ಅನನ (ಮುಖ್ಯ ಪ್ರಾಣನ) ಆದಿ-ಅಂತ್ಯಗಳಿಗೆ ಕಾರಣನಾದವನು ; ಮಹಾಪ್ರಾಣನನ್ನು ಉಜ್ಜೀವನಗೊಳಿಸುವವನು ; ರುದ್ರಾನ್ತರ್ಯಾಮಿಯಾದ ನೃಸಿಂಹರೂಪದಿಂದ ಮನ್ಮಥನನ್ನು ಸಂಹರಿಸಿದವನು ; ಗಾನಪ್ರಿಯನಾದವನು ; ಭಗವದ್ವಿಷಯಕವಾದ ಗಾನಾದಿಗಳನ್ನು ಯಾರು ಮಾಡುತ್ತಾರೆಯೋ–ಅವರನ್ನು ನಾಶಮಾಡದೇ ಇರುವವನು.

* * *

43) **ಧಾತಾ**=ವಿಶ್ವವನ್ನು ಧರಿಸಿ ಪೋಷಿಸುತ್ತಿರುವವನು.

ಶಂ. ಭಾ. :– ಅನಂತ (ಶೇಷನಾಗ) ಮುಂತಾದ ರೂಪದಿಂದ ವಿಶ್ವವನ್ನು ಧರಿಸಿರುವವನು.

43) **ಪ. ಭ. :–** ಅಚಿತ್‌ಸಮಷ್ಟಿಯಾದ ಪ್ರಕೃತಿಯಲ್ಲಿ ಚಿತ್ಸಮಷ್ಟಿಯಾದ ಬ್ರಹ್ಮನೆಂಬ ಗರ್ಭವನ್ನು ಧರಿಸಿರುವವನು ; ಅನಿರುದ್ಧಸ್ವರೂಪಿಯು.

ಮಮ ಯೋನಿರ್ಮಹದ್ಬ್ರಹ್ಮ ತಸ್ಮಿನ್ಗರ್ಭಂ ದಧಾಮ್ಯಹಮ್ ॥
(ಗೀತಾ ೧೪-೩)

ನಿರುಕ್ತಿ :– **ಅಚಿತ್ಸಮಷ್ಟಿಭೂತಾಯಾಂ ಪ್ರಕೃತೌ ಚಿತ್ಸಮಷ್ಟಿಕಮ್ ।**
ಗರ್ಭಂ ವೇಧ್ಯಾತ್ಮಕಂ ಧತ್ತೇ ಯಸ್ತು ಧಾತೇತಿ ಚಕ್ಷತೇ ॥

44) ಸ. ಸಂ. :– ಧರಿಸಿ ಪೋಷಿಸುವುದರಿಂದ ಇವನು ಧಾತೃವು. **ಧಾತಾವಿಧಾತಾ ಪರಮೋತಸಂದೃಕ್** ಎಂದು ಶ್ರುತಿ.

*　　　*　　　*

44) **ವಿಧಾತಾ**=ವಿಶೇಷವಾಗಿ ಮತ್ತು ವಿವಿಧವಾಗಿ ಧರಿಸಿ ಪೋಷಿಸುವವನು.

ಶಂ. ಭಾ. :– ಕರ್ಮಗಳನ್ನೂ ಮತ್ತು ಅವುಗಳ ಫಲಗಳನ್ನೂ ಉಂಟು ಮಾಡುವವನು.

44) ಪ. ಭ. :– (ಪ್ರಕೃತಿಯಲ್ಲಿ ತಾನು ಧರಿಸಿದ ಬ್ರಹ್ಮನೆಂಬ) ಗರ್ಭವು ಪರಿಣಾಮಗೊಳ್ಳುವಂತೆ ಮಾಡಿ ಆವಿರ್ಭಾವಗೊಳಿಸುವವನು. ಲೀಲಾ ಮಾತ್ರವಾಗಿ ಧರಿಸುವವನು. **ಯೋ ಬ್ರಹ್ಮಾಣಂ ವಿದಧಾತಿಪೂರ್ವಂ** (ಶ್ವೇ. ಉ. ೬-೧೮).

ನಿರುಕ್ತಿ :– **ತದ್ಗರ್ಭಪರಿಣಾಮೇ ಸ್ಯಾದಾವಿರ್ಭಾವಯಿತಾ ಸ್ವಯಮ್ ।**
ಧಾರಣಾಲ್ಲೀಲಯಾ ಯಸ್ಮಾದ್ವಿಧಾತಾಯಂ ಪ್ರಕೀರ್ತಿತಃ ॥

45) ಸ. ಸಂ. :– ಗರುಡನನ್ನು ಧಾರಕನನ್ನಾಗಿ ಹೊಂದಿರುವವನು–**ವಿಃ ಗರುಡೋ ಧಾರಕೋ ಯಸ್ಯ।** ಧಾರಕ-ಪೋಷಕರಿಲ್ಲದವನು, **ವಿಗತೌ ಧಾತಾರೌ = ಧಾರಕಪೋಷಕೌ ಯಸ್ಯ।** ವಿಶಿಷ್ಟರನ್ನು (ಮುಕ್ತರನ್ನು) ಧರಿಸುವವನು. **ವೀನಾಂ ಮುಕ್ತಾನಾಂ ಧಾರಕಃ ।**

*　　　*　　　*

45) **ಧಾತುರುತ್ತಮಃ** = ಬ್ರಹ್ಮನಿಗಿಂತಲೂ ಶ್ರೇಷ್ಠನಾದವನು ; ಉತ್ತಮವಾದ ಧಾತುವು (ಪ್ರಸನ್ನವಾದ ಧಾತುವು.) ಸರ್ವಶ್ರೇಷ್ಠವಾದ ಚಿದ್ಧಾತುವು (ಜ್ಞಾನಧಾತುವು).

ಶಂ. ಭಾ. :– ಅನಂತನೇ ಮುಂತಾದವರನ್ನೂ ಧರಿಸಿರುವವನು ; ವಿಶೇಷವಾಗಿ ಎಲ್ಲವನ್ನೂ ಧರಿಸಿರುವವನು ; ಪೃಥಿವಿಯೇ ಮುಂತಾದ ಎಲ್ಲ ಧಾತುಗಳಿಗಿಂತಲೂ ಶ್ರೇಷ್ಠವಾದ ಚಿದ್ಧಾತುವು ; ಧಾತೃವಿಗಿಂತಲೂ

(ಬ್ರಹ್ಮನಿಗಿಂತಲೂ) ಶ್ರೇಷ್ಠನಾದವನು ; **ಧಾತುಃ–ಉತ್ತಮಃ** ಎಂದು ಎರಡು ನಾಮಧೇಯಗಳಾಗಿ ತೆಗೆದುಕೊಂಡಾಗ : **ಧಾತುಃ** = ಕಾರ್ಯ-ಕಾರಣರೂಪವಾದ ಪ್ರಪಂಚವನ್ನೂ ಧರಿಸಿರುವ "**ಚಿತ್**" ಎಂಬ ಧಾತು ಸ್ವರೂಪನು. **ಉತ್ತಮಃ** = ಎಲ್ಲ ಉತ್ಕೃಷ್ಟಪದಾರ್ಥಗಳಲ್ಲಿಯೂ ಅತ್ಯಂತ ಶ್ರೇಷ್ಠವಾದವನು.

45) **ಪ. ಭ. :–** ಸೃಷ್ಟಿಕರ್ತನಿಗಿಂತಲೂ ಅತ್ಯಂತಉತ್ಕೃಷ್ಟನಾದವನು. (ಹೀಗಿರುವಾಗ ಸೃಷ್ಟಿಕರ್ತನಿಂದ ಸೃಷ್ಟಿಸಲ್ಪಟ್ಟ ಪ್ರಜಾಪತಿಯೇ ಮುಂತಾದವರಿಗಿಂತಲೂ ಶ್ರೇಷ್ಠತಮನೆಂಬುದನ್ನು ಹೇಳಬೇಕಾಗಿಯೇ ಇಲ್ಲ.)

ಏತೇಷಾಂ ಕತಮೋ ದೇವಃ ಪರಃ ಕೋ ವಾಥವಾಪರಃ ।
ಪರೋ ನಾರಾಯಣೋ ದೇವಃ ತಸ್ಮಾಜ್ಜಾತಶ್ಚತುರ್ಮುಖಃ ॥

(ವಾರಾಹ)

ನಿರುಕ್ತಿ **:– ಯೋ ವೈ ಸ್ಯಾದ್ಧಾತುರುತ್ಕೃಷ್ಟಃ ಸ ಚ ಸ್ಯಾದ್ಧಾತುರುತ್ತಮಃ ॥**

46) **ಸ. ಸಂ. :–** ಅತಿಶಯವಾಗಿ ಶಬ್ದಗಳಿಂದ ಹೇಳಲ್ಪಡುವವನು ; **ಧಾತುರುತ್**= ಹನುಮಂತನಿಂದ ಬಯಸಲ್ಪಡುವವನು ; **ಚತುರ್ಮುಖನಿ** ಗಿಂತಲೂ ಉತ್ತಮನಾದವನು.

*   *   *

ಅಪ್ರಮೇಯೋ ಹೃಷೀಕೇಶಃ ಪದ್ಮನಾಭೋಽಮರಪ್ರಭುಃ ।
ವಿಶ್ವಕರ್ಮಾ ಮನುಸ್ತ್ವಷ್ಟಾ ಸ್ಥವಿಷ್ಠಃ ಸ್ಥವಿರೋ ಧ್ರುವಃ ॥೧೯॥

46) **ಅಪ್ರಮೇಯಃ**= ಅಳೆಯಲು ಅಸಾಧ್ಯನಾದವನು.

ಶಂ. ಭಾ. :– ಪ್ರತ್ಯಕ್ಷ, ಅನುಮಾನ, ಉಪಮಾನ, ಅರ್ಥಾಪತ್ತಿ, ಅಭಾವ ಮತ್ತು ಶಾಸ್ತ್ರಗಳೆಂಬ ಯಾವ ಪ್ರಮಾಣಗಳಿಂದಲೂ ತಿಳಿಯಲಾಗದವನು. ಅಥವಾ (ಸಾಕ್ಷಿಯಾಗಿರುವುದರಿಂದ) ಅಳೆಯಲಾಗದವನು.

46) **ಪ. ಭ. :–** (ಬ್ರಹ್ಮನೇ ಮುಂತಾದವರಿಗೂ) ಕರಣಗಳಿಂದ ಅಳೆಯಲು ಅಸಾಧ್ಯನಾದವನು. **ಸರ್ವೇಷಾಂ ಸಾಕ್ಷಿಭೂತೋಽಸೌ ನ ಗ್ರಾಹ್ಯಃ ಕೇನಚಿತ್ ಕ್ವಚಿತ್ ॥** (ಮ. ಭಾ. ಶಾಂತಿ ೩೫೧-೪)

ನ ಸ ಶಕ್ಯಸ್ತ್ವಯಾ ದ್ರಷ್ಟುಂ ಮಯಾನ್ಯೈರ್ವಾಪಿ ಸತ್ತಮ ।
ಸಗುಣೋ ನಿರ್ಗುಣೋ ವಿಶ್ವಃ ಜ್ಞಾನದೃಶ್ಯೋ ಹ್ಯಸೌ ಸ್ಮೃತಃ ॥

(ಮ. ಭಾ. ಶಾಂತಿ ೩೫೧-೨)

ಅತೀಂದ್ರಿಯನಾಗಿರುವುದರಿಂದಲೂ, ಪೂರ್ಣವಾಗಿ ಗ್ರಹಿಸಲು ಅಸಾಧ್ಯನಾಗಿರುವುದರಿಂದಲೂ ಇವನು ಅಪ್ರಮೇಯನು. ವಾಣಿಗೂ ಅಗೋಚರನಾದವನು.

ನಿರುಕ್ತಿ :– **ಬ್ರಹ್ಮಾದೀನಾಂ ಚ ಕರಣೈರ್ನೋಮಾತುಮಪಿ ಶಕ್ಯತೇ ।**
ದ್ರಷ್ಟುಂ ಹ್ಯಸಾವಪ್ರಮೇಯಃ ವಚಸಾಮಪ್ಯಗೋಚರಃ ॥

47) ಸ. ಸಂ. :– ಅಳೆಯಲು ಯೋಗ್ಯವಾದ ಗುಣಗಳಿಲ್ಲದವನು ; ಸರ್ವಜ್ಞನಾಗಿ ಎಲ್ಲವನ್ನೂ ಅಳೆದಿರುವುದರಿಂದ ಯಾವ ಪ್ರಮೇಯವೂ (ಜ್ಞಾತವ್ಯವಿಷಯವೂ) ಇಲ್ಲದವನು ; ಶ್ರೇಷ್ಠವಾದ, ಭಕ್ತರಿಂದ ತಿಳಿಯಲು ಯೋಗ್ಯವಾದ ಗುಣಗಳುಳ್ಳ ವಿಷ್ಣುವು ; ಶ್ರೇಷ್ಠಳಾದ ಲಕ್ಷ್ಮೀದೇವಿಗೂ ವಿಸ್ಮಯವನ್ನುಂಟುಮಾಡುವ ವಿಷ್ಣುವು.

* * *

47) **ಹೃಷೀಕೇಶಃ**= ಇಂದ್ರಿಯಗಳಿಗೆ ಅಧಿಪತಿಯು ಅಥವಾ ಹರ್ಷವನ್ನುಂಟುಮಾಡುವ ಕೇಶರಾಶಿಯುಳ್ಳವನು.

ಶಂ. ಭಾ. :– ಕ್ಷೇತ್ರಜ್ಞರೂಪದಿಂದ ಹೃಷೀಕಗಳಿಗೆ ಅಂದರೆ ಇಂದ್ರಿಯಗಳಿಗೆ ಸ್ವಾಮಿಯಾಗಿರುವ ಪರಮಾತ್ಮನು ; ಇಂದ್ರಿಯಗಳನ್ನು ವಶದಲ್ಲಿ ಹೊಂದಿರುವ ಪರಮಾತ್ಮನು ; ಸೂರ್ಯ-ಚಂದ್ರರೂಪಿಯಾಗಿ ಜಗತ್ತಿಗೆ ಹರ್ಷವನ್ನುಂಟುಮಾಡುವ ಕೇಶ (ಕಿರಣ)ಗಳುಳ್ಳವನು. **ಸೂರ್ಯರಶ್ಮಿರ್ ಹರಿಕೇಶಃ ಪುರಸ್ತಾತ್** (ತೈ. ಸಂ. ೪.೭.೩)

ಸೂರ್ಯಾಚಂದ್ರಮಸೋಃ ಶಶ್ವದಂಶುಭಿಃ ಕೇಶಸಂಜ್ಞಿತೈಃ ।
ಬೋಧಯನ್ತಾಪಯಂಶ್ಚೈವ ಜಗದುತ್ತಿಷ್ಠತೇ ಪೃಥಕ್ ॥

ಬೋಧನಾತ್ತಾಪನಾಚ್ಚೈವ ಜಗತೋ ಹರ್ಷಣಂ ಭವೇತ್ ।
ಅಗ್ನೀಷೋಮಕೃತೈರೇಭಿಃ ಕರ್ಮಭಿಃ ಪಾಂಡುನಂದನ ।
ಹೃಷೀಕೇಶೋ ಮಹೇಶಾನೋ ವರದೋ ಲೋಕಭಾವನಃ ॥

(ಭಾರತ. ಶಾಂತಿ ೩೪೨-೬೬,೬೭)

(ಪಾಂಡುನಂದನನೇ! ಸೂರ್ಯ ಮತ್ತು ಚಂದ್ರರು ತಮ್ಮ ಕೇಶ ನಾಮಕವಾದ ಕಿರಣಗಳಿಂದ ಜಗತ್ತನ್ನು ಎಚ್ಚರಗೊಳಿಸುತ್ತಾ ಮತ್ತು ನಿದ್ರೆಗೊಳಿಸುತ್ತಾ ಬೇರೆಯಾಗಿ ಉದಯಹೊಂದುತ್ತಾರೆ. ಅವರು ಹಾಗೆ ಎಚ್ಚರಗೊಳಿಸುವುದರಿಂದ ಮತ್ತು ನಿದ್ರೆಗೊಳಿಸುವುದರಿಂದ ಜಗತ್ತಿಗೆ ಹರ್ಷ ವುಂಟಾಗುತ್ತದೆ. ಹೀಗೆ ಅಗ್ನಿ ಮತ್ತು ಚಂದ್ರರು ಮಾಡುವ ಕರ್ಮಗಳನ್ನು ಮಾಡುವುದರಿಂದ ಲೋಕಭಾವನನೂ ವರಪ್ರದಾಯಕನೂ ಆದ ಮಹೇಶ್ವರನು ಹೃಷೀಕೇಶನೆನಿಸುತ್ತಾನೆ.)

47) **ಪ. ಭ. :–** (ಆ ಬ್ರಹ್ಮಾದಿಗಳ) ಇಂದ್ರಿಯಗಳಿಗೂ ನಿಯಾಮಕ ನಾದವನು ; ಹರ್ಷ (ಸೌಖ್ಯ) ದಿಂದಲೂ ಸುಖೈಶ್ವರ್ಯದಿಂದಲೂ ಅವನು ಹೃಷೀಕೇಶನು.

ಹೃಷೀಕಾಣೀಂದ್ರಿಯಾಣ್ಯಾಹುಸ್ತೇಷಾಮೀಶೋ ಯತೋ ಭವಾನ್ ।
ಹೃಷೀಕೇಶಸ್ತತೋ ವಿಷ್ಣುಃ ಖ್ಯಾತೋ ದೇವೇಷು ಕೇಶವಃ ॥
ಹರ್ಷಾತ್ಸೌಖ್ಯಾತ್ಸುಖೈಶ್ವರ್ಯಾದ್ಧೃಷೀಕೇಶತ್ವಮಶ್ನುತೇ ।

(ಹರಿವಂಶ)

ನಿರುಕ್ತಿ :– **ಇಂದ್ರಿಯಾಣಾಂ ನಿಯನ್ತೃತ್ವಾದ್ಧೃಷೀಕೇಶಃ ಪ್ರಕೀರ್ತಿತಃ ॥**

48) **ಸ. ಸಂ. :–** ಹರ್ಷವುಳ್ಳವನು ಮತ್ತು ರಮಾದೇವಿಗೂ ಮತ್ತು ಬ್ರಹ್ಮದೇವರಿಗೂ ಸ್ವಾಮಿಯಾದವನು ; ಇಂದ್ರಿಯಗಳಿಗೆ ಸ್ವಾಮಿಯಾದವನು.

* * *

48) **ಪದ್ಮನಾಭಃ** = ಸೃಷ್ಟಿಸೂಚಕವಾದ ಪದ್ಮವನ್ನು ನಾಭಿಯಲ್ಲಿ ಹೊಂದಿರುವವನು.

ಶಂ. ಭಾ. :– ಸರ್ವಜಗತ್ತಿಗೂ ಕಾರಣವಾದ ಪದ್ಮವನ್ನು ನಾಭಿಯಲ್ಲಿ ಉಳ್ಳವನು–**ಅಜಸ್ಯ ನಾಭಾವಧ್ಯೇಕಮರ್ಪಿತಂ** (ತೈ. ಸಂ. ೪-೬-೨)

48) **ಪ. ಭ. :–** (ಬ್ರಹ್ಮದೇವರಿಗೆ ಉತ್ಪತ್ತಿಕಾರಣವಾಗಿ) ಪದ್ಮವನ್ನು ನಾಭಿಯಲ್ಲಿ ಹೊಂದಿರುವವನು. ಕಾಲಾತ್ಮಕವಾದ ಪದ್ಮವನ್ನು ನಾಭಿಯಲ್ಲಿ ಉಳ್ಳವನು.

ನಿರುಕ್ತಿ :– **ಕಾಲಾತ್ಮಕಂ ತು ಯತ್ಪದ್ಮಂ ನಾಭೌ ಯಸ್ಯ ಸ ಉಚ್ಯತೇ ।**
ಪದ್ಮನಾಭಶ್ಚಾಷ್ಟವರ್ಣೋ ಮಹಾಸಂತಾನದೋ ಮನುಃ ॥

49) ಸ. ಸಂ. :– ಪದ್ಮವನ್ನು ನಾಭಿಯಲ್ಲಿ ಉಳ್ಳವನು ; (ಋಷಭಾವತಾರದಲ್ಲಿ) ನಾಭಿರಾಜನ ಪುತ್ರನಾದವನು ; ಪಾದಗಳಲ್ಲಿ ಲಕ್ಷ್ಮಿಯನ್ನು ಹೊಂದಿರುವವನು ಮತ್ತು ಅಪ್ರಕಾಶವಿಲ್ಲದವನು (ಅಭಾ) ; ಪದ್ಮನ ಅಂದರೆ ಸೂರ್ಯನಂತೆ ಪ್ರಕಾಶವುಳ್ಳವನು.

* * *

49) **ಅಮರಪ್ರಭುಃ** = ದೇವತೆಗಳಿಗೆ ಪ್ರಭುವಾದವನು ; ಅಮರನಾದ ಪ್ರಭುವು.

ಶಂ. ಭಾ. :– ಅಮರರಿಗೆ (ದೇವತೆಗಳಿಗೆ) ಪ್ರಭುವಾದವನು.

49) ಪ. ಭ. :– ದೇವತೆಗಳಿಗೆ ಸೃಷ್ಟಿಯೇ ಮುಂತಾದ ಅಧಿಕಾರಗಳನ್ನು ವಹಿಸಿಕೊಟ್ಟು ಆ ಮೂಲಕ ವ್ಯಾಪಾರವನ್ನು ನಿರ್ವಹಿಸುವವನು.

ಏತೌ ದ್ವೌ ವಿಬುಧಶ್ರೇಷ್ಠೌ ಪ್ರಸಾದಕ್ರೋಧಜೌ ಸ್ಮೃತೌ ।
ತದಾದರ್ಶಿತಪಂಥಾನೌ ಸೃಷ್ಟಿಸಂಹಾರಕಾರಕೌ ॥

ಮ. ಭಾ. ಶಾಂತಿ ೩೪೧-೧೯

ನಿರುಕ್ತಿ :– **ಸೃಷ್ಟ್ಯಾದಿಷ್ವಪಿ ದೇವಾನಾಮಧಿಕಾರಪ್ರದಾನತಃ ।**
ಅಮರಪ್ರಭುರಿತ್ಯುಕ್ತೋ ನವಾರ್ಣಃ ಸರ್ವದೋ ಮನುಃ ॥

50) ಸ. ಸಂ. :– ಅಮ (ಜ್ಞಾನ)ವನ್ನು ಕೊಡುವ ಪ್ರಭು ; ಮಿತಿ (ಅಳತೆ) ಯಿಲ್ಲದ ಪ್ರಭು ; ಅಳತೆಯಿಲ್ಲದ ಸೌಂದರ್ಯವುಳ್ಳ ಪ್ರಭು ; ಅಮರರನ್ನು (ವಿಷ್ಣುಜ್ಞಾನವುಳ್ಳವರನ್ನು) ಬೆಳಗಿಸುವ ಪ್ರಭು.

* * *

50) **ವಿಶ್ವಕರ್ಮಾ** = ವಿಶ್ವರೂಪವಾದ ಕರ್ಮವುಳ್ಳವನು. ವಿಶ್ವದ ರಚನೆ–ವಿನಾಶಾದಿ ಕರ್ಮಗಳುಳ್ಳವನು ಅಥವಾ ಸರ್ವಕರ್ಮರೂಪಿಯು.

ಶಂ. ಭಾ. :– ವಿಶ್ವವು ಯಾವನ ಕ್ರಿಯೆಯಾಗಿದೆಯೋ ಅವನು ; ವಿಶ್ವ ಜಗತ್ತು ಉಳ್ಳವನು ; ವಿಚಿತ್ರನಿರ್ಮಾಣಶಕ್ತಿಯುಳ್ಳವನು ಅಥವಾ (ವಿಶ್ವ ಕರ್ಮನೆಂದು ಪ್ರಸಿದ್ಧನಾದ) ತ್ವಷ್ಟೃದೇವತಾಸ್ವರೂಪನು.

50) **ಪ. ಭ. :–** (ಬ್ರಹ್ಮಸೃಷ್ಟಿಗೆ ಮೊದಲು ಮತ್ತು ಅನಂತರ) ಜಗತ್ತುಗಳ ವ್ಯಾಪಾರವುಳ್ಳವನು. ಜಗತ್ತಿನ ವ್ಯಾಪಾರವನ್ನು ಹೊಂದಿರುವುದೇ ಇವನ ಲಕ್ಷಣ. **ವಿಶ್ವಕರ್ಮಣಸ್ಸಮವರ್ತತಾಧಿ** (ಪು. ಸೂ. ೧೯) **ಪುರುಷಂ ವಿಶ್ವಕರ್ಮಾಣಮಾದಿದೇವಮಜಂ ವಿಭುಮ್ । ಯ ಇಮಾ ವಿಶ್ವಾ ಭುವನಾನಿ ಜುಹ್ವತ್** (ತೈ. ಸಂ. ೪-೬-೨)

ನಿರುಕ್ತಿ :– **ವಿಶ್ವಸ್ಯ ಜಗತಃ ಕರ್ಮ ವ್ಯಾಪಾರೋ ಯಸ್ಯ ಲಕ್ಷಣಮ್ ।**
ಪ್ರಾಗ್ಬ್ರಹ್ಮಸೃಷ್ಟೇರೂರ್ಧ್ವಂ ಚ ವಿಶ್ವಕರ್ಮೇತಿ ಕಥ್ಯತೇ ॥

ಸ. ಸಂ. :– **ವಿಶುಃ** = ಗರುಡಗಮನನು (**ವಿನಾ ಗರುಡೇನ ಶುವತಿ ಗಚ್ಛತೀತಿ ವಿಶುಃ**) ಮತ್ತು **ಅಕರ್ಮಾ**= ಬಂಧಕಗಳಾದ ಕರ್ಮಗಳಿಲ್ಲದವನು ಅಥವಾ ಕ್ಲೇಶವಿಲ್ಲದವನು. (ಗರುಡಗಮನನು ಮತ್ತು ಬಂಧಕಕರ್ಮ ಅಥವಾ ಕ್ಲೇಶಗಳಿಲ್ಲದವನು). **ನ ಋತೇ ತ್ವತ್ಕ್ರಿಯತೇ** ಎಂದು ಶ್ರುತಿಯು ಹೇಳುವಂತೆ ವಿಶ್ವಕರ್ಮಗಳೂ ಯಾವನಿಂದ ಆಗುತ್ತವೆಯೋ ಅವನು ವಿಶ್ವಕರ್ಮಾ.

* * *

51) **ಮನುಃ** = ಜ್ಞಾನಸ್ವರೂಪಿಯು ; ಮಂತ್ರಸ್ವರೂಪಿಯು ; ಮನನ ಮಾಡಲ್ಪಡಬೇಕಾದವನು ; ಮನನಮಾಡುವವನು ಅಥವಾ ಮನುಪ್ರಜಾ ಪತಿರೂಪಿಯು.

ಶಂ. ಭಾ. :– ಮನನಮಾಡುವವನು. **ನಾನ್ಯೋಽತೋಽಸ್ತಿಮನ್ತಾ** (ಬೃ. ಉ. ३-೭-೨३) ಮಂತ್ರವು ಅಥವಾ ಪ್ರಜಾಪತಿಯು.

51) **ಪ. ಭ. :–** ಮೇಲೆ ಹೇಳಿದ ವಿಶ್ವವ್ಯಾಪಾರಗಳನ್ನು ತನ್ನ ಪ್ರಸಿದ್ಧವಾದ ಸಂಕಲ್ಪಲೇಶಮಾತ್ರದಿಂದಲೇ ಮನನದಿಂದ ಮಾಡುವವನು.

ನಿರುಕ್ತಿ :– **ಸಂಕಲ್ಪಲವಮಾತ್ರಾಚ್ಚ ಮನನಾನ್ಮನುರುಚ್ಯತೇ ॥**

52) **ಸ. ಸಂ. :–** ಜ್ಞಾನರೂಪನಾಗಿರುವುದರಿಂದ ಮನುವು (**ಅವ ಬೋಧರೂಪತ್ವಾನ್ಮನುಃ**)

* * *

52) **ತ್ವಷ್ಟಾ**=ವಿಶ್ವವನ್ನು ಸೃಷ್ಟಿರೂಪದಲ್ಲಿ ಕೆತ್ತುವ ಮತ್ತು ಸಂಹಾರದಲ್ಲಿ ಕೊಚ್ಚಿಹಾಕುವ ಶಿಲ್ಪಿ.

ಶಂ. ಭಾ. :– ಸಂಹಾರಸಮಯದಲ್ಲಿ ಎಲ್ಲ ಭೂತಗಳನ್ನೂ ಕ್ಷೀಣ ಗೊಳಿಸುವವನು.

52) **ಪ. ಭ. :–** (ಮೇಲೆ ಹೇಳಿದಂತೆ ತಾನು ರಚಿಸಿದ ವಿಶ್ವವನ್ನು) ನಾಮ-ರೂಪ-ವ್ಯಾಕರಣಗಳಿಂದ ಸುರರು, ನರರು ಮುಂತಾದ ವೈಚಿತ್ರ್ಯ ಗಳೊಡನೆ ವಿಭಜಿಸಿ ಪ್ರಕಾಶಕ್ಕೆ ತರುವವನು. **ತ್ವಷ್ಟಾರಗ್ಂ ರೂಪಾಣಿ ವಿಕುರ್ವನ್ತಂ ವಿಪಶ್ಚಿಮ್** (ತೈ. ಆ. ೩-೧೧) **ಸರ್ವಾಣಿ ರೂಪಾಣಿ ವಿಚಿತ್ಯ ಧೀರಃ** (ಪು .ಸೂ .೧೬)

ನಿರುಕ್ತಿ :– ನಾಮರೂಪವ್ಯಾಕರಣಾತ್ ತ್ವಷ್ಟಾ ಸೃಷ್ಟಸ್ಯ ಗದ್ಯತೇ

53) **ಸ. ಸಂ. :–** ದೀಪ್ತನು (ಬೆಳಗುತ್ತಿರುವವನು.)

* * *

53) **ಸ್ಥವಿಷ್ಠಃ** = ಅತ್ಯಂತಸ್ಥೂಲನಾದವನು ; ಸೂಕ್ಷ್ಮತ್ರಮದಿಂದ ಸ್ಥೂಲತಮವಾಗಿ ವಿಸ್ತಾರಗೊಳಿಸುವವನು.

ಶಂ. ಭಾ. :– ಅತ್ಯಂತಸ್ಥೂಲನಾದವನು.

53) **ಪ. ಭ. :–** ಸ್ಥೂಲತಮನು. ತನ್ನ ಸಂಕಲ್ಪದಿಂದ ಬಹುವಾಗುತ್ತಾ, ಸೂಕ್ಷ್ಮವೂ ಅವ್ಯಕ್ತವೂ ಆದ ಸಮಷ್ಟಿಯೆಂಬ ಕಾರಣಸ್ಥಾನದಿಂದ ಸ್ಥೂಲ-ವ್ಯಕ್ತ-ವ್ಯಷ್ಟಿರೂಪವಾಗಿ ವಿಸ್ತಾರಗೊಳ್ಳುವವನು.
ನಾಸ್ತ್ಯನ್ತೋ ವಿಸ್ತರಸ್ಯ ಮೇ (ಗೀತೆ ೧೦-೧೯)

ನಿರುಕ್ತಿ :– ಬಹೂಭವಂಶ್ಚ ಸೂಕ್ಷ್ಮಾಣಾಂ ಸ್ಥೂಲಾವಸ್ಥತಯಾ ಚ ಸಃ ।
ವಿಸ್ತಾರವತ್ವಾದ್ಯಃ ಸ್ಥೂಲಃ ಸ್ಥವಿಷ್ಠಃ ಪರಿಕೀರ್ತಿತಃ ॥

54) **ಸ. ಸಂ. :–** ಅತ್ಯಂತಸ್ಥೂಲನಾದವನು.

* * *

54) **ಸ್ಥವಿರೋ ಧ್ರುವಃ** = ವೃದ್ಧನು. ಸರ್ವಲೋಕಪಿತಾಮಹನಿಗಿಂತಲೂ ವೃದ್ಧನಾದವನು ; ಸ್ಥಿರನಾದವನು ; ಶಾಶ್ವತನು.

ಶಂ. ಭಾ. :– ಪುರಾಣನು (ಅತ್ಯಂತ ಹಳಬನು.) ತ್ವೇಷಂ ಹ್ಯಸ್ಯ ಸ್ಥವಿರಸ್ಯ ನಾಮ । ಎನ್ನುತ್ತದೆ ಋಗ್ವೇದ. ವೃದ್ಧಾವಸ್ಥೆಯಲ್ಲಿರುವವನು. ಸ್ಥಿರನಾದವನು. ಧ್ರುವಃ ಎಂಬ ಶಬ್ದವು ಸ್ಥವಿರಃಎಂಬ ವಿಶೇಷಣದಿಂದ ಕೂಡಿ ಒಂದೇ ನಾಮಧೇಯವೆಂದು ತಿಳಿಯಬೇಕು. ಸ್ಥಿರಪುರುಷ.

54) **ಪ. ಭ. :– ಸ್ಥವಿರಃ** = ಸದಾ (ಒಂದೇ ರೂಪದಲ್ಲಿ) ಇರುವವನು. (ಸ್ಥವಿರಃ ತಿಷ್ಠತೇಃ) ಎಲ್ಲಕ್ಕೂ ಮೂಲಕಾರಣವಾಗಿದ್ದರೂ ಲೌಕಿಕವಾದ ಜೇಡಿಮಣ್ಣು ಮುಂತಾದ ಉಪಾದಾನಕಾರಣಗಳಂತೆ ಎಂದಿಗೂ ವಿಕಾರಹೊಂದದೇ ಇರುವವನು. ಸಕಲಕಾಲಗಳಲ್ಲಿಯೂ ಇರುವವನು. ಲೀಲೆಯಿಂದ ಕಾಲವನ್ನು ತನ್ನ ಕಾರ್ಯಕ್ಕೆ ಅಪೇಕ್ಷಿಸಿದರೂ–ಅದಕ್ಕೆ ಅಧೀನವಾಗದೇ ಇರುವವನು. (ಇದರಿಂದ ಕಾಲವಿಶೇಷಕ್ಕೆ ಒಳಗಾಗಿ ಪರಿಣಾಮ ಹೊಂದುವ ಹಾಲು, ಮೊಸರು–ಮುಂತಾದುವುಗಳಿಗಿಂತಲೂ ವಿಲಕ್ಷಣ ಎಂಬುದು ಸೂಚಿತವಾಗುತ್ತದೆ. ಏಕೆಂದರೆ : ಕಾಲವೂ ಅವನಿಗೆ ಪೂರ್ಣವಾಗಿ ಅಧೀನವಾಗಿದೆ.)

ಕಾಲಸ್ಯ ಚ ಹಿ ಮೃತ್ಯೋಶ್ಚ ಜಂಗಮಸ್ಥಾವರಸ್ಯ ಚ ।
ಈಶತೇ ಭಗವಾನೇಕಃ ಸತ್ಯಮೇತದ್ಬ್ರವೀಮಿ ತೇ ॥

ಕಾಲಚಕ್ರಂ ಜಗಚ್ಚಕ್ರಂ ಯುಗಚಕ್ರಂ ಚ ಕೇಶವಃ ।
ಆತ್ಮಯೋಗೇನ ಭಗವಾನ್ಪರಿವರ್ತಯತೇಽನಿಶಮ್ ॥
(ಭಾ. ಉ. ೬೮-೧೨-೧೩)

ನಿರುಕ್ತಿ :– **ಕಾಲಾತನ್ತ್ರತಯಾ ದುಗ್ಧದಧ್ಯಾದಿಭ್ಯೋ ವಿಲಕ್ಷಣಃ ।**
ವಿದ್ಯತೇ ಯಃ ಸರ್ವಕಾಲಂ ಸ್ಥವಿರಃ ಪರಿಕೀರ್ತಿತಃ ॥

55) **ಸ. ಸಂ. :–** ವೃದ್ಧನು. **"ಪ್ರವಯಾಃ ಸ್ಥವಿರೋ ವೃದ್ಧಃ"** (ಅಮರಃ)

* * *

55) **ಪ. ಭಾ. :– ಧ್ರುವಃ** = ಸ್ಥಿರ. ಎಂದಿಗೂ ಜಾರಿಸಲಾಗದವನು. (ಅನಂತಪರಿಣಾಮದಿಂದಲೂ ವಿಕಾರಹೊಂದದೇ ಇರುವುದರಿಂದ) ಎಂದಿಗೂ ಸ್ವರೂಪಭ್ರಂಶವಾಗದೇ ಇರುವವನು ; ಸ್ವರೂಪದಿಂದ

ಬದಲಾಯಿಸಲೂ ಜಾರಿಸಲೂ ಆಗದವನು. **ಅಜಯ್ಯಃ ಶಾಶ್ವತೋ ಧ್ರುವಃ ।** (ರಾ. ಯು. ೧೧೪-೧೫)

ನಿರುಕ್ತಿ :– **ಅಪ್ರಚ್ಯಾವ್ಯಃಸ್ವಸ್ವರೂಪಾತ್ಸದಾ ಯೋಽಸೌ ಧ್ರುವಃ ಸ್ಮೃತಃ ।**

56) ಸ. ಸಂ. :– ಸ್ಥಿರನಾದವನು (**ಧ್ರುವಃ ಸ್ಥೈರ್ಯೇ**)

* * *

ಅಗ್ರಾಹ್ಯಃ ಶಾಶ್ವತಃ ಕೃಷ್ಣೋ ಲೋಹಿತಾಕ್ಷಃ ಪ್ರತರ್ದನಃ ।
ಪ್ರಭೂತಸ್ತ್ರಿಕಕುದ್ಧಾಮ ಪವಿತ್ರಂ ಮಂಗಲಂ ಪರಮ್ ॥೨೦॥

55) **ಅಗ್ರಾಹ್ಯಃ** = ಇಂದ್ರಿಯಗಳಿಂದ ಗ್ರಹಿಸಲು ಆಗದವನು. ಮನಸ್ಸು ಮಾತುಗಳಿಂದ ಗ್ರಹಿಸಲು ಆಗದವನು.

ಶಂ. ಭಾ. :– ಕರ್ಮೇಂದ್ರಿಯಗಳಿಂದ ಗ್ರಹಿಸಲಾಗದವನು.

56) ಪ. ಭ. :– (ಜೇಡಿಮಣ್ಣಿಗೆ ಕುಂಬಾರ, ವಸ್ತ್ರಕ್ಕೆ ನೇಯ್ಗೆಯವನು– ಇತ್ಯಾದಿ ಉದಾಹರಣೆಗಳಂತೆ) ಅಧಿಷ್ಠಾತೃವು ಇಲ್ಲದವನು ; ಎಲ್ಲಕ್ಕೂ ಇವನೊಬ್ಬನೇ ಅಧಿಷ್ಠಾತೃವು.

ನಿರುಕ್ತಿ :– **ಅಗ್ರಾಹ್ಯೋ ಯೋಽನಧಿಷ್ಠೇಯೋ ಮೃತ್ತಿಕೇವ ಕುಲಾಲಕೈಃ ॥**

57) ಸ. ಸಂ. :– ಸಂಪೂರ್ಣವಾಗಿ ಗ್ರಹಿಸಲು ಆಗದವನು. (**ಸಾಕಲ್ಯೇನ ಗ್ರಾಹ್ಯೋ ನ ಭವತಿ**) ಎಲ್ಲವನ್ನೂ ತಾನೇ ಗ್ರಹಣಮಾಡುವವನಾದ್ದರಿಂದ ಇವನನ್ನು ಗ್ರಹಿಸುವವರು ಬೇರೆ ಯಾರೂ ಇಲ್ಲ. "ಆಹ್ಯಃ" ಎಂದರೆ ಗುಣಗಳಿಂದ ವ್ಯಾಪಿಸಲು ಯೋಗ್ಯನಾದವನು. ಅಗ್ರನೂ (ಶ್ರೇಷ್ಠನೂ) ಆಗಿ ಆಹ್ಯನೂ (ಗುಣಗಳಿಂದ ವ್ಯಾಪನೀಯನೂ ಆಗಿರುವವನು) ಅಗ್ರಾಹ್ಯ.

* * *

56) **ಶಾಶ್ವತಃ** = ಎಂದೆಂದಿಗೂ ಇರುವವನು.

ಶಂ. ಭಾ. :– ಎಲ್ಲ ಕಾಲಗಳಲ್ಲಿಯೂ ಇರುವವನು. **ಶಾಶ್ವತಂ ಶಿವಮಚ್ಯುತಂ** (ಮ. ನಾ. ೧೦-೧೩)

57) ಪ. ಭ. :– (ಅನವರತವಾಗಿ ಜಗದ್ವ್ಯಾಪಾರಪ್ರವಾಹವನ್ನು

ಹೊಂದಿರುವುದರಿಂದ) ನಿತ್ಯನಾಗಿರುವವನು. **ಅವ್ಯುಚ್ಛಿನ್ನಾಸ್ತತಸ್ತ್ವೇತೇ ಸರ್ಗಸ್ಥಿತ್ಯನ್ತಸಂಯಮಾಃ ll** (ವಿ. ಪು. ೧-೨-೨೬)

ನಿರುಕ್ತಿ :– **ಅವ್ಯುಚ್ಛಿನ್ನಾಸ್ತತಸ್ತ್ವೇತೇ ಸರ್ಗಸ್ಥಿತ್ಯನ್ತಸಂಯಮಾಃ l**
ಅತಃ ಸದಾ ಪ್ರವಾಹತ್ವಾನ್ನಿತ್ಯಃ ಶಾಶ್ವತ ಉಚ್ಯತೇ ll

58) **ಸ. ಸಂ. :–** ಸದಾ ಏಕರೂಪನಾಗಿರುವವನು.

* * *

57) **ಕೃಷ್ಣಃ** = ಸದಾನಂದಸ್ವರೂಪಿಯು ; ಎಲ್ಲವನ್ನೂ ಕರ್ಷಣೆಮಾಡು ವವನು ; ನೀಲವರ್ಣದವನು.

ಶಂ. ಭಾ. :– ಸಚ್ಚಿದಾನಂದಸ್ವರೂಪಿಯು. **ಕೃಷಿರ್ಭೂವಾಚಕಃ ಶಬ್ದೋ ಣಶ್ಚ ನಿರ್ವೃತಿವಾಚಕಃ l ವಿಷ್ಣುಸ್ತದ್ಭಾವಯೋಗಾಚ್ಚ ಕೃಷ್ಣೋ ಭವತಿ ಶಾಶ್ವತಃ ll** (ಮ. ಉ. ೭೦-೫) ಅಥವಾ ಕಪ್ಪುಬಣ್ಣದವನು.

ಕೃಷಾಮಿ ಪೃಥಿವೀಂ ಪಾರ್ಥ ಭೂತ್ವಾ ಕಾರ್ಷ್ಣಾಯಸೋ ಹಲಃ l
ಕೃಷ್ಣೋ ವರ್ಣಶ್ಚ ಮೇ ಯಸ್ಮಾತ್ತಸ್ಮಾತ್ಕೃಷ್ಣೋಽಹಮರ್ಜುನ ll

(ಮ. ಭಾ. ಶಾಂ.೩೪೨-೭೯)

58) **ಪ. ಭ. :–** (ಇಂತಹ ಲೀಲಾರಸದಿಂದ) ನಿತ್ಯತೃಪ್ತನಾಗಿರುವವನು.
ನಿರುಕ್ತಿ :– **ಏಕಾನ್ತಲೀಲಾರಸತಃ ನಿವೃತಃ ಕೃಷ್ಣ ಉಚ್ಯತೇ ll**

59) **ಸ. ಸಂ. :–** ನಿಯಮನ–ಮುಂತಾದುವುಗಳಿಂದ ಸಕಲಲೋಕ ಗಳನ್ನೂ ಕರ್ಷಣಮಾಡುವವನು. **ಯತಃ ಕರ್ಷಸಿ ದೇವೇಶ ನಿಯಮ್ಯ ಸಕಲಂ ಜಗತ್ l ಅತೋ ವದನ್ತಿ ಮುನಯಃ ಕೃಷ್ಣಂ ತ್ವಾಂ ಬ್ರಹ್ಮ ವಾದಿನಃ ll** (ಮಹಾಕೌರ್ಮ)

* * *

58) **ಲೋಹಿತಾಕ್ಷಃ** = ಕ್ಷತ್ರಿಯಾವತಾರಗಳಲ್ಲಿ ಸಹಜವಾದ ರಕ್ತಾಂತ ಲೋಚನನು. **ರಾಮೋ ರಕ್ತಾನ್ತಲೋಚನಃ l** (ರಾಮಾಯಣ)

ಶಂ. ಭಾ. :– ಕೆಂಪಾದ ಕಣ್ಣುಗಳುಳ್ಳವನು. **ಸ ಮಾ ವೃಷಭೋ ಲೋಹಿತಾಕ್ಷಃ (ತೈ. ಆ. ೪-೪೨)**

59) **ಪ. ಭ. :–** ಕೆಂಪಾದ ಕಣ್ಣುಗಳುಳ್ಳವನು.
ನಿರುಕ್ತಿ : **ರಕ್ತರಾಜೀವನಯನೋ ಲೋಹಿತಾಕ್ಷಃ ಪ್ರಕೀರ್ತಿತಃ ॥**

60) **ಸ. ಸಂ. :–** ಸ್ವಾಭಾವಿಕವಾಗಿಯೇ ಕೆಂಪುಬಣ್ಣದ ಸೌಂದರ್ಯ ಲಕ್ಷಣವುಳ್ಳ ಕಣ್ಣುಗಳುಳ್ಳವನು ಅಥವಾ ಹಿರಣ್ಯಕಶಿಪುವೇ ಮುಂತಾದ ಶತ್ರುಗಳಲ್ಲಿ ಕೋಪದಿಂದ ಕೆಂಪಾದ ಕಣ್ಣುಗಳುಳ್ಳವನು.

* * *

59) **ಪ್ರತರ್ದನಃ** = ಧರ್ಮವಿರೋಧಿಗಳನ್ನು ಚೆನ್ನಾಗಿ ಹಿಂಸಿಸುವವನು ; ಪ್ರಳಯದಲ್ಲಿ ಎಲ್ಲ ಭೂತಗಳನ್ನು ಹಿಂಸಿಸು (ಸಂಹರಿಸು) ವವನು.

ಶಂ. ಭಾ. :– ಪ್ರಳಯಕಾಲದಲ್ಲಿ ಪ್ರಾಣಿಗಳನ್ನು ಹಿಂಸಿಸುವವನು.

60) **ಪ. ಭಾ. :–** ಸರ್ವಸಂಹಾರಕನು.

ಯಸ್ಯ ಬ್ರಹ್ಮ ಚ ಕ್ಷತ್ರಂ ಚ ಉಭೇ ಭವತ ಓದನಮ್ । (ಕಠ. ೨-೨೪) **ಅತ್ತಾ ಚರಾಚರಗ್ರಹಣಾತ್** (ಬ್ರ. ಸೂ. ೧-೨-೯)
ನಿರುಕ್ತಿ :– **ಯಸ್ಯ ಬ್ರಹ್ಮ ಚ ಕ್ಷತ್ರಂ ಚ ಹ್ಯೋದನಂ ಭವತಃ ಸದಾ ।**
ಪ್ರತರ್ದನಃ ಸ ವಿಜ್ಞೇಯಃ ಸಂಹರ್ತೃತ್ವಪ್ರದೋ ಮನುಃ ॥

61) **ಸ. ಸಂ. :–** ಶತ್ರುಹಿಂಸಕನು.

* * *

60) **ಪ್ರಭೂತಃ** = ಪುಷ್ಕಳವಾಗಿರುವವನು ; ಪುಷ್ಕಳವಾದ ಗುಣೈಶ್ವರ್ಯಾದಿಸಂಪನ್ನನು.

ಶಂ. ಭಾ. :– ಜ್ಞಾನ, ಐಶ್ವರ್ಯ–ಮುಂತಾದ ಗುಣಗಳಿಂದ ಪುಷ್ಕಳವಾಗಿರುವವನು.

61) **ಪ. ಭ. :–** ನಿತ್ಯವೂ, ನಿಃಸೀಮವೂ ಆದ ಭೋಗೋಪಕರಣಗಳುಳ್ಳ ಪರಮಪದದ ಸ್ವಾಮಿಯಾದುದರಿಂದ ಸಮೃದ್ಧನಾಗಿರುವವನು.

ನಿರುಕ್ತಿ :– **ಭೋಗೋಪಕರಣಂ ನಿತ್ಯಂ ನಿರ್ಮರ್ಯಾದಂ ಪರಂ ಪದಮ್ ।**
ಯಸ್ಯ ತೇನ ಸಮೃದ್ಧತ್ವಾತ್ಪ್ರಭೂತ ಇತಿ ಕಥ್ಯತೇ ॥

62) ಸ. ಸಂ. :– ದ್ರೌಪದಿಗೋಸ್ಕರ ಅಕ್ಷಯವಸ್ತ್ರಪರಂಪರೆಯ ರೂಪದಲ್ಲಿ ಹೇರಳವಾದವನು ; ಉತ್ಕೃಷ್ಟನಾದವನು ಮತ್ತು ಗುಣಗಳಿಂದ ವ್ಯಾಪ್ತನಾದವನು ; ಆಕಾಶವೇ ಮುಂತಾದ ಶ್ರೇಷ್ಠವಾದ ಭೂತಗಳು ಯಾವನಿಂದ ಹುಟ್ಟುತ್ತವೆಯೋ–ಅವನು. **ಆತ್ಮನ ಆಕಾಶಃ ಸಂಭೂತಃ ।**(ತೈ. ಉ.)

61) **ತ್ರಿಕಕುಬ್ಧಾಮ; ತ್ರಿಕಕುದ್ಧಾಮ**=ಸರ್ವದೇಶಗಳಲ್ಲಿಯೂ ಪ್ರಕಾಶ ವುಳ್ಳವನು ; ನಿವಾಸವುಳ್ಳವನು ಅಥವಾ ಪ್ರಭಾವವುಳ್ಳವನು. **ಗೃಹ ದೇಹತ್ವಿಟ್‌ಪ್ರಭಾವಾ ಧಾಮಾನಿ ।** ಮೂರು ಮಾತ್ರೆಗಳುಳ್ಳ ಪ್ರಣವ ಸ್ವರೂಪಿಯು ; ಸರ್ವಲೋಕಗಳನ್ನೂ ಶರೀರವನ್ನಾಗಿ ಹೊಂದಿರುವವನು ; ಮೂರು ಹಿಳಿಲು ಅಥವಾ ಶೃಂಗಗಳುಳ್ಳ ಪ್ರಕಾಶಸ್ವರೂಪನಾದ ಯಜ್ಞ ವರಾಹರೂಪಿಯು.

ಶಂ. ಭಾ. :– ಮೇಲೆ, ಕೆಳಗೆ ಮತ್ತು ಮಧ್ಯ–ಎಂಬ ಮೂರು ದಿಕ್ಕುಗಳಿಗೂ ಆಶ್ರಯನಾದವನು.

62) ಪ. ಭ. :– ತ್ರಿಪಾದ್ವಿಭೂತಿಯೆಂಬ ಪರಮಧಾಮವುಳ್ಳವನು. **ಪಾದೋಽಸ್ಯ ವಿಶ್ವಾಭೂತಾನಿ ತ್ರಿಪಾದಸ್ಯಾಮೃತಂ ದಿವಿ ।** (ಪು. ಸೂ. ೩-೧೦) **ಯಸ್ಯಾಯುತಾಯುತಾಂಶಾಂಶೇ ವಿಶ್ವಶಕ್ತಿರಿಯಂ ಸ್ಥಿತಾ ॥** (ವಿ. ಪು. ೧-೯-೫೩) ಅಥವಾ ಮೂರು ಗುಣಗಳ ಜೋಡಿಗಳುಳ್ಳವನು. ಜ್ಞಾನ, ಬಲ, ಐಶ್ವರ್ಯ, ವೀರ್ಯ, ಶಕ್ತಿ, ತೇಜಸ್ಸು–ಇವು ಆರು ಗುಣಗಳು. **ತ್ರಿಕಕುಬ್ಧಾಮ** ಎಂಬ ಪಾಠದಂತೆ ಮೂರು ಹಿಳಲುಗಳುಳ್ಳ ಯಜ್ಞವರಾಹ ರೂಪಿಯು ಮತ್ತು ಜ್ಯೋತಿಃಸ್ವರೂಪಿಯು. **ತಥೈವಾಸಂ ತ್ರಿಕಕುದೋ ವಾರಾಹಂ ರೂಪಮಾಸ್ಥಿತಃ ॥** (ಮ. ಭಾ. ಮೋಕ್ಷಧರ್ಮ ೩೪೩-೬೩)

ನಿರುಕ್ತಿ :– **ತ್ರಿಪಾದ್ವಿಭೂತಿಸ್ತ್ರಿಕಕುತ್ತೈವಸ್ಥಾನಂ ವಿಶೇಷತಃ ।**
ಯಸ್ಯ ಸ ತ್ರಿಕಕುದ್ಧಾಮ ಯದ್ವಾ ತ್ರಿಯುಗಧರ್ಮವಾನ್ ॥

ಆರ್ಷಂ ನಿರುಕ್ತಮಾಶ್ರಿತ್ಯ ತ್ರಿಕಕುತ್ತ್ಯಾತ್ರಿಲಕ್ಷಣಃ ।
ಅಸ್ಮಿನ್ಪಕ್ಷೇ ಭಿನ್ನನಾಮ ಧಾಮ ಜ್ಯೋತಿಃಸ್ವರೂಪವಾನ್ ॥
ತಥೈವಾಸಂ ತ್ರಿಕಕುದೋ ವಾರಾಹಂ ರೂಪಮಾಸ್ಥಿತಃ ।
ತ್ರಿಕಕುತ್ತೇನ ವಿಖ್ಯಾತಃ ಶರೀರಸ್ಯ ಪ್ರಮಾಪಣಾತ್ ॥

63) **ಸ. ಸಂ. :–** ಮೂರು ದಿಕ್ಕುಗಳನ್ನೂ ಗೃಹವನ್ನಾಗಿ ಹೊಂದಿರುವವನು. ವರಾಹಾವತಾರದಲ್ಲಿ ಎರಡು ಭುಜಗಳು ಮತ್ತು ಕಂದ-ಮೂಲಗಳೆಂಬ ಮೂರು ಅವಯವಗಳುಳ್ಳವನು.

* * *

62) **ಪವಿತ್ರಂ** = ಪಾವನಮಾಡುವವನು. ಯೋಗಶಾಸ್ತ್ರದಲ್ಲಿ ಪ್ರಸಿದ್ಧವಾದ ವಜ್ರದಂಡದ ಮೂಲಕ ರಕ್ಷಿಸುವವನು.

ಶಂ. ಭಾ. :– ಪಾವನಮಾಡುವ ಸಾಧನವಾದ ಅಥವಾ ಪವಿತ್ರಗೊಳಿಸುವ ಋಷಿ ಅಥವಾ ದೇವತಾಸ್ವರೂಪಿಯು.

63) **ಪ. ಭ. :–** ಸಕಲವಾದ ಅಶುಭಗಳಿಗೂ ವಿರೋಧವಾದ ರೂಪ-ಗುಣ-ವೈಭವಾದಿಗಳುಳ್ಳವನು.

ನಿರುಕ್ತಿ :– **ಗುಣಸ್ಯ ವಿಭವಾನಾಂ ಚ ರೂಪಸ್ಯ ಚ ನಿರನ್ತರಮ್ ।**
ನಿರೂಪಕಸ್ಯ ಸರ್ವೈಶ್ಚ ತನ್ನಿರೂಪ್ಯಂ ಸ್ವರೂಪಕಮ್ ।
ಅನುಪ್ರವಿಶ್ಯ ವಸತಿ ತತ್ಪವಿತ್ರಮಿತಿ ಸ್ಮೃತಮ್ ॥

64) **ಸ. ಸಂ. :–** ಪಾವನಗೊಳಿಸುವವನು. ವಜ್ರಾಯುಧದಂತೆ ಕಾಪಾಡುವವನು ಅಥವಾ ಪವಿತ್ರ (ಸುದರ್ಶನಚಕ್ರ) ವುಳ್ಳವನು.

ಪವಿತ್ರಂ ಚರಣಂ ಚಕ್ರಂ ಲೋಕದ್ವಾರಂ ಸುದರ್ಶನಮ್ ।
ಪರ್ಯಾಯವಾಚಕಾ ಹ್ಯೇತೇ ಚಕ್ರಸ್ಯ ಪರಮಾತ್ಮನಃ ॥

(ಶ್ರೀಪಂಚರಾತ್ರ)

* * *

63) **ಮಙ್ಗಲಂ ಪರಮ್**= ಪರಮಮಂಗಳಸ್ವರೂಪಿಯು ಮತ್ತು ಪರಮಸುಖವನ್ನು ಉಂಟುಮಾಡುವವನು.

ಶಂ. ಭಾ. :– ಸ್ಮರಣಮಾತ್ರದಿಂದಲೂ ಅಶುಭಗಳನ್ನು ಹೋಗಲಾಡಿಸಿ ಶುಭಪರಂಪರೆಯನ್ನು ಉಂಟುಮಾಡುವ ಪರಮಕಲ್ಯಾಣರೂಪವಾದ ಸರ್ವಭೂತಗಳಿಗೂ ಉತ್ಕೃಷ್ಟವಾದ ಪರಬ್ರಹ್ಮನು.

ಅಶುಭಾನಿ ನಿರಾಚಷ್ಟೇ ತನೋತಿ ಶುಭಸನ್ತತಿಮ್ ।
ಸ್ಮೃತಿಮಾತ್ರೇಣ ಯತ್ಪುಂಸಾಂ ಬ್ರಹ್ಮ ತನ್ಮಙ್ಗಲಂ ವಿದುಃ ॥

(ವಿ.ಪು.)

64) **ಪ. ಭ. :–** ಎಲ್ಲ ಅಶುಭಗಳಿಗೂ ವಿರೋಧಿಯಾಗಿ ನಿತ್ಯನಿರ್ಮಲನಾಗಿರುವ ಅನಂತನಾದ ಆನಂದಮಹಾಸಾಗರನು ; ಕಲ್ಯಾಣೈಕಸ್ವರೂಪಿಯು. **ಆನನ್ದಮಯೋಽಭ್ಯಾಸಾತ್** (ಬ್ರ. ಸೂ. ೧-೧-೧೩) **ಶಾನ್ತಿಸಮೃದ್ಧಮಮೃತಮ್** (ತೈ. ಉ. ೬-೨) **ಯತ್ರ ಲಕ್ಷಯೇಚ್ಛಾನ್ತಮನುದ್ವಾತಮತರಙ್ಗಂ ತೃಪ್ತಮಮೃತಂ ಪರಂ ಬ್ರಹ್ಮ ತತ್ರ ಧಾರಯೇದಿತ್ಯೇಷಾ ನೈಷ್ಠಿಕೀ ಧಾರಣಾ** (ಯೋಗಸೂತ್ರ)

ನಿರುಕ್ತಿ :– **ಸರ್ವಹೇಯಪ್ರತ್ಯನೀಕಮನನ್ತಾನನ್ದಲಕ್ಷಣಮ್ ।**
ವೇದಾನ್ತಪಾರಗಂ ನಿತ್ಯಮುಚ್ಯತೇ ಮಙ್ಗಲಂ ಪರಮ್ ॥

65) **ಸ. ಸಂ. :–** ಕಲ್ಯಾಣವನ್ನು ಉಂಟುಮಾಡುವುದರಿಂದ ಅಥವಾ ಮಂಗಳವನ್ನು ಹೊಂದಿರುವುದರಿಂದ ಕಲ್ಯಾಣರೂಪನು ; ಮಂಗಳನು ; ಸರ್ವೋತ್ತಮನೂ ಅಥವಾ ಸರ್ವಲಕ್ಷಣನೂ ಆಗಿರುವವನು.

* * *

ಈಶಾನಃ ಪ್ರಾಣದಃ ಪ್ರಾಣೋ ಜ್ಯೇಷ್ಠಃ ಶ್ರೇಷ್ಠಃ ಪ್ರಜಾಪತಿಃ ।
ಹಿರಣ್ಯಗರ್ಭೋ ಭೂಗರ್ಭೋ ಮಾಧವೋ ಮಧುಸೂದನಃ ॥೨೧॥

64) **ಈಶಾನಃ** =ಎಲ್ಲಕ್ಕೂ ಅಧಿಪತಿಯಾದವನು ; ಸರ್ವಸಮರ್ಥನು; ಐಶ್ವರ್ಯಶಾಲಿಯು. **ಈಶಾನಃ ಸರ್ವವಿದ್ಯಾನಾಮೀಶ್ವರಃ ಸರ್ವಭೂತಾನಾಂ ಬ್ರಹ್ಮಾಧಿಪತಿರ್ಬ್ರಹ್ಮಣೋಽಧಿಪತಿರ್ಬ್ರಹ್ಮಾ ಶಿವೋ ಮೇ ಅಸ್ತು ಸದಾಶಿವೋಮ್** (ತೈ. ಉ.)

ಶಂ. ಭಾ. :– ಸರ್ವಪ್ರಾಣಿಗಳನ್ನೂ ನಿಯಂತ್ರಿಸುವವನು.

65) **ಪ. ಭ. :–** ಎಲ್ಲ ಅವಸ್ಥೆಗಳಲ್ಲಿಯೂ ಸಮಸ್ತವಸ್ತುಗಳನ್ನೂ

ವ್ಯವಸ್ಥೆಗೊಳಿಸುವ ಸ್ವಭಾವದವನು. **ತಮೀಶ್ವರಾಣಾಂ ಪರಮಂ ಮಹೇಶ್ವರಮ್** (ಶ್ವೇ. ೬-೭) **ಸರ್ವಸ್ಯ ವಶೀ ಸರ್ವಸ್ಯೇಶಾನಃ** (ಬೃ. ಆ. ೬-೪-೨೨)

ನಿರುಕ್ತಿ :– ಸರ್ವಾವಸ್ಥಾಸು ಸರ್ವೇಷಾಂ ವ್ಯವಸ್ಥಾಪನಶೀಲತಃ ।
ವಸೂನಾಂ ಭಗವಾನ್ಸಾಕ್ಷಾದೀಶಾನಃ ಪರಿಕೀರ್ತಿತಃ ॥

66) **ಸ. ಸಂ. :–** ರುದ್ರನನ್ನು ಕರ್ಮಶೀಲನನ್ನಾಗಿ ಮಾಡುವವನು ; ಲಕ್ಷ್ಮಿಗೆ ಸುಖವನ್ನುಂಟುಮಾಡುವವನು ; ಪ್ರಾಣಕ್ಕೆ ಸ್ವಾಮಿಯಾದವನು ; ಮುಕ್ತಾತ್ಮರಿಂದ ಕೆಲಸಮಾಡಿಸುವವನು. **ಈಶಾನಾಮಪಿ ಮುಕ್ತಾನಾಂ ಈಶಾನಃ ಸೋನತಾಚ್ಛ್ರುತಃ ॥** (ಮಾಂಡೂಕ್ಯಭಾಷ್ಯ)

*   *   *

65) **ಪ್ರಾಣದಃ** =ಪ್ರಾಣಗಳನ್ನು ಕೊಡುವವನು ; ಬಲಪ್ರದನು ; ಸಂಜೀವಕನು.

ಶಂ. ಭಾ. :– ಪ್ರಾಣಗಳನ್ನು ಕೊಡುವವನು. ಪ್ರಾಣಗಳ ವ್ಯಾಪಾರ ವನ್ನು ಮಾಡಿಸುವವನು. **ಕೋ ಹ್ಯೇವಾನ್ಯಾತ್ಕಃ ಪ್ರಾಣ್ಯಾತ್** (ತೈ. ಉ. ೨-೭) ಪ್ರಾಣಗಳನ್ನು ಕಾಲರೂಪದಿಂದ ಖಂಡಿಸುವವನು ; ಪ್ರಾಣಗಳನ್ನು ಉದ್ದೀಪನಗೊಳಿಸುವವನು ; ಶುದ್ಧಿಪಡಿಸುವವನು ; ಪ್ರಾಣಗಳನ್ನು ನಾಶ ಮಾಡುವವನು.

66) **ಪ. ಭ. :–** ಪ್ರಾಣ (ಬಲ) ವನ್ನು ಕೊಡುವವನು. (ಸೂರಿಗಳೇ ಮುಂತಾದವರಿಗೆ ತನ್ನ ದರ್ಶನಾನುಭವ-ಸೇವೆಗಳಿಗೆ ಅನುಗುಣವಾದ ಬಲವನ್ನು ಕೊಡುವವನು.) **ಯ ಆತ್ಮದಾ ಬಲದಾಃ** (ತೈ. ಸಂ. ೪-೧-೮) **ಸದ್ಯೈವಃ ಪ್ರಾಣ ಆವಿಶತಿ** (ಬೃ. ೩-೫-೨೦)

ನಿರುಕ್ತಿ : ಸೂರಿಭ್ಯಃ ಪರಿಚರ್ಯಾದೌ ಬಲದಃ ಪ್ರಾಣದಃ ಸ್ಮೃತಃ ॥

67) **ಸ. ಸಂ. :–** ಪ್ರಾಣಗಳನ್ನು ಕೊಡುವವನು. ದುಃಖವನ್ನು ಹೆಚ್ಚಾಗಿ ಖಂಡಿಸುವವನು.

*   *   *

66) **ಪ್ರಾಣಃ** = ಉಜ್ಜೀವನಕ್ಕೆ ಕಾರಣನಾದವನು. ಪ್ರಾಣಕ್ಕೂ ಪ್ರಾಣ

ಸ್ವರೂಪನಾದವನು. **ಪ್ರಾಣಶರೀರೋ ಭಾರೂಪಃ** (ಛಾಂದೋಗ್ಯ ೩-೧೪-೨)

ಶಂ. ಭಾ. :– ಪ್ರಾಣನ (ಉಚ್ಛ್ವಾಸ-ನಿಃಶ್ವಾಸ) ಕ್ರಿಯೆಯುಳ್ಳವನು ಎಂದರೆ ಕ್ಷೇತ್ರಜ್ಞನು ಅಥವಾ ಪರಮಾತ್ಮನು. ಮುಖ್ಯಪ್ರಾಣನು. **ಯತ್ಪ್ರಾಣಸ್ಯ ಪ್ರಾಣಂ** (ಬ್ರ. ಸೂ. ೪-೪-೧೮)

67) **ಪ. ಭ. :–** ಅವರಿಗೆ (ಸೂರಿಗಳಿಗೆ) ಉಜ್ಜೀವನಕ್ಕೆ ಕಾರಣನಾದ ವನು. **ಪ್ರಾಣೋ ರಕ್ಷತಿ ವಿಶ್ವಮೇಜತ್** (ತೈ. ಬ್ರಾ. ೧೨-೫-೧) **ಪ್ರಾಣಸ್ತಥಾನುಗಮಾತ್** (ಬ್ರ. ಸೂ. ೧-೧-೨೯)
ನಿರುಕ್ತಿ :– **ಉಜ್ಜೀವನಸ್ಯ ಹೇತುತ್ವಾನ್ನರಾಣಾಂ ಪ್ರಾಣ ಈರಿತಃ ॥**

68) **ಸ. ಸಂ. :–** ಪ್ರಕೃಷ್ಟವಾದ ವ್ಯಾಪಾರವನ್ನು ಮಾಡಿಸುವವನು.

* * *

67) **ಜ್ಯೇಷ್ಠಃ** = ಅತ್ಯಂತ ಹಿರಿಯನು ಮತ್ತು ಪ್ರಶಸ್ತತಮನಾದವನು.

ಶಂ. ಭಾ. :– ವೃದ್ಧತಮನಾದವನು.

68) **ಪ. ಭ. :–** ಪ್ರಶಸ್ತತಮನಾದವನು ಅಥವಾ ವೃದ್ಧತಮನಾದ ವನು. ಸರ್ವದಾ ದಿವ್ಯಸೂರಿಗಳಿಂದ ಅನುಭವಿಸಲ್ಪಡುತ್ತಿದ್ದರೂ ಪಾರವು ಕಾಣದಿರುವ ವಿಭೂತಿಯನ್ನು ಹೊಂದಿರುವುದರಿಂದ ಪ್ರಶಸ್ಯತಮನಾದವನು. **ಬ್ರಹ್ಮೈವ ಭೂತಾನಾಂ ಜ್ಯೇಷ್ಠಂ** (ತೈ. ಬ್ರಾ. ೨-೮) **ಏಷಾ ಪ್ರಕೃತಿರವ್ಯಕ್ತಾ ಕರ್ತಾ ಚೈವ ಸನಾತನಃ । ಪರಶ್ಚ ಸರ್ವಭೂತೇಭ್ಯಸ್ತ ಸ್ಮಾತ್ಪೂಜ್ಯತಮೋಽಚ್ಯುತಃ ॥** (ಸಭಾ ೩೮-೨೪)
ನಿರುಕ್ತಿ :– **ಸರ್ವದಾನುಭವೇಪ್ಯೈತೈರದೃಷ್ಟಾಪಾರಭೂತಿತಃ ।**
ಜ್ಯೇಷ್ಠಃ................ ॥

69) **ಸ. ಸಂ. :–** ಗುಣಗಳಿಂದ ಅಥವಾ ಅನಾದಿಕಾಲದಿಂದ ಶ್ರೇಷ್ಠ ನಾದವನು, ವೃದ್ಧತಮನಾದವನು.

* * *

68) **ಶ್ರೇಷ್ಠಃ :** ಪ್ರಶಸ್ತತಮನಾದವನು.

ಶಂ. ಭಾ. :– ಅತ್ಯಂತಪ್ರಶಂಸನೀಯನು ; ಮುಖ್ಯಪ್ರಾಣನು ; ಸರ್ವ ಕಾರಣನು ; ಸರ್ವರಿಗಿಂತಲೂ ಅತಿಶಯನಾದವನು.

ಪ್ರಾಣೋ ವಾವ ಜ್ಯೇಷ್ಠಶ್ಚ ಶ್ರೇಷ್ಠಶ್ಚ (ಛಾಂದೋಗ್ಯ ೫-೧-೧)

69) ಪ. ಭ. :– ದಿವ್ಯಸೂರಿಗಳಿಂದ ಸದಾ ಅನುಭವಿಸಲ್ಪಡುತ್ತಾ ಪ್ರೀತಿಯಿಂದ ಸ್ತೋತ್ರಗಳ ಮೂಲಕ ಸೇವಿಸಲ್ಪಡುವವನು ; ಪ್ರಶಸ್ಯತಮನು.

ವಿಷ್ಣೋರ್ಯತ್ಪರಮಂ ಪದಮ್ (ಶ್ರುತಿಃ)

ನಿರುಕ್ತಿ :– ಶ್ರೇಷ್ಠಶ್ಚ ತೈರ್ನಿತ್ಯಂ ಸ್ತುತತ್ವಾದಭಿದೀಯತೇ ॥

70) ಸ. ಸಂ. :– ಪ್ರಶಸ್ಯತಮನಾದವನು.

* * *

69) **ಪ್ರಜಾಪತಿಃ** = ಸೃಷ್ಟಿಕರ್ತನು ; ಪ್ರಜಾಪಾಲಕನು.

ಶಂ. ಭಾ. :– ಈಶ್ವರನಾಗಿರುವುದರಿಂದ ಎಲ್ಲ ಪ್ರಜೆಗಳಿಗೂ ಪತಿ ಯಾದವನು.

70) ಪ. ಭ. :– ಸೂರಿಗಳಿಗೆ ಅಧಿಪತಿಯು. ಪ್ರಜಾಃ ಎಂದರೆ ಬದ್ಧರಿ ಗಿಂತಲೂ ಮತ್ತು ಮುಕ್ತರಿಗಿಂತಲೂ ಶ್ರೇಷ್ಠರಾಗಿರುವ ನಿತ್ಯಸೂರಿಗಳು.

ಯತ್ರ ಋಷಯಃ ಪ್ರಥಮಜಾ ಯೇ ಪುರಾಣಾಃ । (ಅಚ್ಛಿದ್ರಪ್ರಶ್ನ)

ಮಧ್ಯೇ ವಾಮನಮಾಸೀನಂವಿಶ್ವೇದೇವಾ ಉಪಾಸತೇ (ಕಠ೨-೫-೩)

ನಿರುಕ್ತಿ :– ಬದ್ಧಾಧುತ್ಕೃಷ್ಟತೋ ಯೇ ಚ ಜಾಯನ್ತೇ ಸೂರಯಃ ಪ್ರಜಾಃ ॥

ತೇಷಾಂ ಯೋ ನಿತ್ಯಸೂರಿಣಾಂ ಪತಿಃ ಸಃ ಸ್ಯಾತ್ಪ್ರಜಾಪತಿಃ ॥

71) ಸ. ಸಂ. :– ಪ್ರಜಾಪಾಲಕನು. **ಪ್ರಜಾನಾಂ ಪಾಲನಾದ್ವಿಷ್ಣುಃ ಪ್ರಜಾಪತಿರಿತೀರ್ಯತೇ । (ಷಟ್ಪ್ರಶ್ನಭಾಷ್ಯ)** ಅಥವಾ ಪ್ರಕೃಷ್ಟವಾಗಿ ಸೃಷ್ಟಿಮಾಡುವವನು ಮತ್ತು ತನಗೆ ಪತಿಯಿಲ್ಲದವನು.

* * *

70) **ಹಿರಣ್ಯಗರ್ಭಃ** = ಸೃಷ್ಟಿಗೆ ಬೀಜವಾದ ಮತ್ತು ಹಿರಣ್ಮಯವಾದ ಅಂಡದೊಳಗೆ ಇರುವವನು ; ಸೃಷ್ಟಿಕರ್ತನು.

ಶಂ. ಭಾ. :– ಬ್ರಹ್ಮಾತ್ಮಕನಾದವನು. **ಹಿರಣ್ಯಗರ್ಭಃ ಸಮವರ್ತತಾಗ್ರೇ** (ಋಕ್ ಸಂ. ೧೦-೧೨೧-೧) ಬ್ರಹ್ಮಾಂಡರೂಪವಾದ ಹಿರಣ್ಮಯ ಅಂಡದಲ್ಲಿ ವ್ಯಾಪಿಸಿರುವುದರಿಂದ ಸೃಷ್ಟಿಕರ್ತನಾದ ಬ್ರಹ್ಮನಿಗೆ ಹಿರಣ್ಯಗರ್ಭ ಎಂದು ಹೆಸರು.

71) **ಪ. ಭ. :–** (ನಿರ್ದೋಷವಾಗಿ ಪರಮಸತ್ತ್ವಾತ್ಮಕವಾದ ದ್ರವ್ಯ ವಿಶೇಷವನ್ನು ಹೊಂದಿರುವುದರಿಂದ) ಹಿರಣ್ಯಕ್ಕೆ ಸಮನಾದ ಪರಮಧಾಮವುಳ್ಳವನು. ಅಥವಾ ಹಿತರಮಣೀಯವಾದ ಧಾಮ (ನಿತ್ಯವಾಸಸ್ಥಾನ) ವುಳ್ಳವನು. **ಹಿರಣ್ಮಯೇ ಪರೇ ಲೋಕೇ ವಿರಜಂ ಬ್ರಹ್ಮ ನಿಷ್ಕಲಮ್** (ಮುಂ. ೨-೨-೧೦) **ದೇವಾನಾಂ ಪೂರಯೋಧ್ಯಾ । ತಸ್ಯಾಗ್ಂ ಹಿರಣ್ಮಯಃ ಕೋಶಃ ।** (ತೈ. ಆ. ೧-೨೭)

ನಿರುಕ್ತಿ **:– ಹಿರಣ್ಯಂ ಪರಮಂ ಧಾಮ ಹಿರಣ್ಯಸ್ಯ ಸಮಾನತಃ ।**
ಹಿರಣ್ಯಗರ್ಭಃ ಸ ಪ್ರೋಕ್ತಸ್ತಸ್ಮಿನ್ವಸತಿ ಯಃ ಸದಾ ॥

72) **ಸ. ಸಂ. :–** ಸುವರ್ಣಾತ್ಮಕವಾದ ಬ್ರಹ್ಮಾಂಡವು ಯಾವನ ಗರ್ಭದಲ್ಲಿದೆಯೋ–ಅವನು.

* * *

71) **ಭೂಗರ್ಭಃ** = ಭೂಮಿಯನ್ನು ಗರ್ಭದಲ್ಲಿ ಹೊಂದಿರುವವನು ; ಭೂಮಿಯಲ್ಲಿ (ಪ್ರಕೃತಿಯಲ್ಲಿ) ಗರ್ಭವನ್ನು ಇರಿಸುವವನು.

ಮಮ ಯೋನಿರ್ಮಹದ್ಬ್ರಹ್ಮ ತಸ್ಮಿನ್ಗರ್ಭಂ ದಧಾಮ್ಯಹಮ್ ।
(ಗೀ. ೧೪-೩)

ಶಂ. ಭಾ. :– ಭೂಮಿಯು ಯಾವನ ಗರ್ಭದಲ್ಲಿದೆಯೋ ಅವನು.

72) **ಪ. ಭ. :–** ತನ್ನ ದಿವ್ಯಮಹಿಷಿಯಾದ ಭೂದೇವಿಯನ್ನು ಭರಿಸುವವನು. ಸದಾನುಭವದಿಂದ ಹ್ರೀ, ಕ್ಷಮಾ–ಮುಂತಾದ ದಿವ್ಯನಾಮ ಗಳುಳ್ಳ ಭೂದೇವಿಯು ಆತನಿಂದ ಗರ್ಭದಂತೆ ಧರಿಸಲ್ಪಡುತ್ತಾಳೆ. **ಮಹೀಂ ದೇವೀಂ ವಿಷ್ಣುಪತ್ನೀಮಜೂರ್ಯಾಮ್** (ತೈ. ಬ್ರಾ. ೩-೧-೨) **ಉದ್ಧೃತಾಸಿ ವರಾಹೇಣ** (ಮಹಾನಾರಾಯಣ.)

ನಿರುಕ್ತಿ :– ಯಸ್ಯ ಭೂರ್ಭರಣೀಯಾಭೂದ್ಭೂಗರ್ಭೋಽನು-
ಭವೇನ ಸಃ ॥

73) **ಸ. ಸಂ. :–** ಭೂವಾಸಿಗಳೂ ಮತ್ತು ಸ್ವರ್ಗವಾಸಿಗಳೂ ಯಾವನಿಂದ ಉಂಟಾಗುತ್ತಾರೆಯೋ–ಅವನು ಅಥವಾ ಭೂಮಿಯು ಯಾವನ ಗರ್ಭದಲ್ಲಿದೆಯೋ–ಅವನು.

*　　　*　　　*

72) **ಮಾಧವಃ** = ಲಕ್ಷ್ಮೀಪತಿಯು ; ಆನಂದಕ್ಕೆ ಕಾರಣನಾದವನು ; ವೈಶಾಖಮಾಸಕ್ಕೆ ಅಧಿಪತಿಯು.

ಶಂ. ಭಾ. :– ಲಕ್ಷ್ಮೀಪತಿಯು. ಮಧುವಿದ್ಯೆಯಿಂದ ಅರಿಯಲ್ಪಡುವವನು. ಮೌನಧ್ಯಾನ ಮತ್ತು ಯೋಗಗಳಿಂದ ತಿಳಿಯಲ್ಪಡುವವನು.

ಮೌನಾದ್ಧ್ಯಾನಾಚ್ಚ ಯೋಗಾಚ್ಚ ವಿದ್ಧಿ ಭಾರತ ಮಾಧವಮ್ ॥
(ಮ. ಭಾ. ಉ. ೭೦-೪)

73) **ಪ. ಭ. :–** ಶ್ರದ್ಧಾ ಮುಂತಾದ ಹೆಸರುಗಳುಳ್ಳ ಶ್ರೀದೇವಿಗೆ ಪತಿಯಾದವನು.

ಅಸ್ಯೇಶಾನಾ ಜಗತೋ ವಿಷ್ಣುಪತ್ನೀ । (ನೀಲಾಸೂಕ್ತ) **ಹ್ರೀಶ್ಚ ತೇ ಲಕ್ಷ್ಮೀಶ್ಚ ಪತ್ನ್ಯೌ ।** (ಉತ್ತರನಾರಾಯಣ)

ನಿರುಕ್ತಿ :– ಶ್ರಿಯಃ ಶ್ರದ್ಧಾದಿನಾಮ್ನ್ಯಾಶ್ಚ ಪತಿರ್ಮಾಧವ ಇಷ್ಯತೇ ।

74) **ಸ. ಸಂ. :–** ಲಕ್ಷ್ಮೀಪತಿಯು ; ಮಧುವಿಗೆ ಸಂಬಂಧಿಸಿದವನು ; ಮಧುವಿನ ವಂಶದಲ್ಲಿ ಹುಟ್ಟಿದವನು ; ತನಗೆ ಬೇರೆ ಪತಿಯಿಲ್ಲದವನು.

*　　　*　　　*

73) **ಮಧುಸೂದನಃ** = ತಮೋಗುಣರೂಪವಾದ ಅಥವಾ ಇಂದ್ರಿಯ ಸುಖರೂಪಿಯಾದ ಮಧುದೈತ್ಯನನ್ನು ಸಂಹರಿಸಿದವನು.

ಶಂ. ಭಾ. :– ಮಧು ಎಂಬ ಅಸುರನನ್ನು ಸಂಹರಿಸಿದವನು.

ಕರ್ಣಸ್ರೋತೋದ್ಭವಂ ಚಾಪಿ ಮಧುಂ ನಾಮ ಮಹಾಸುರಮ್ ।
ಬ್ರಹ್ಮಣೋಽಪಚಿತಿಂ ಕುರ್ವಞ್ಜಘಾನ ಪುರುಷೋತ್ತಮಃ ॥

ತಸ್ಯ ತಾತ ವಧಾದೇವ ದೇವದಾನವಮಾನವಾಃ ।
ಮಧುಸೂದನ ಇತ್ಯಾಹುಃ ಋಷಯಶ್ಚ ಜನಾರ್ದನಮ್ ॥

(ಭೀಷ್ಮ ೬೭-೧೫-೧೬)

74) **ಪ. ಭ.** :– ಮಧುವೆಂಬ ಅಸುರನನ್ನು ಸಂಹರಿಸಿದವನು. ಇಂದ್ರಿಯಗಳನ್ನು (ದಿವ್ಯಸೂರಿಗಳ ಕರಣಗಳನ್ನು) ತನ್ನಲ್ಲಿ ಉಪಸಂಹಾರ ಮಾಡಿಕೊಳ್ಳುವವನು.

ಸರ್ವತತ್ತ್ವಮಯತ್ವಾಚ್ಚ ಮಧುಹಾ ಮಧುಸೂದನಃ ।
ಮಧುರಿನ್ದ್ರಿಯನಾಮಾ ಸ ತತೋ ಮಧುನಿಷೂದನಃ ॥

(ಭಾ.ಉ. ೭೦-೪)

ನಿರುಕ್ತಿ :– **ಮಧ್ವಾಖ್ಯಮಸುರಂ ಹನ್ತಿ ಸೂರೀಣಾಂ ಕರಣಂ ಚ ವಾ ।**
ಉಪಸಂಹರತಿ ಸ್ವಸ್ಮಿನ್ಮಧುಸೂದನ ಇಷ್ಯತೇ ॥

75) **ಸ. ಸಂ.** :– ಸಜ್ಜೀವಗಳನ್ನು ಆನಂದಕ್ಕೆ ಒಯ್ಯುವವನು ; ಮಧುದೈತ್ಯನನ್ನು ಸಂಹರಿಸಿದವನು. **ಮಧ್ವಿತ್ಯಾನನ್ದ ಉದ್ದಿಷ್ಟಃ । ಉದಾಃ** ಎಂದರೆ ಜೀವಗಳು. **ತ ಉದಾ ಜೀವಸಂಘಾಃಸ್ಯುಃ** [ತೈ.ಭಾಷ್ಯ] **ಸೂದಾಃ** ಎಂದರೆ ಸಜ್ಜೀವಗಳು.

*　　*　　*

ಈಶ್ವರೋ ವಿಕ್ರಮೀ ಧನ್ವೀ ಮೇಧಾವೀ ವಿಕ್ರಮಃ ಕ್ರಮಃ ।
ಅನುತ್ತಮೋ ದುರಾಧರ್ಷಃ ಕೃತಜ್ಞಃ ಕೃತಿರಾತ್ಮವಾನ್ ॥೨೨॥

74) **ಈಶ್ವರಃ** = ನಿರತಿಶಯವಾದ ಐಶ್ವರ್ಯವುಳ್ಳವನು ; ಸ್ವಾಮಿಯು.

ಶಂ. ಭಾ. :– ಸರ್ವಶಕ್ತನು.

75) **ಪ. ಭ.** :– ಅಪಾರವಾದ ಪರಮಭೋಗಸ್ಥಾನದಲ್ಲಿಯೂ ಕೂಡ ಅಪ್ರತಿಹತವಾದ ಇಚ್ಛೆಯುಳ್ಳವನು ಮತ್ತು ರಮಿಸುವವನು. **ಸತ್ಯಕಾಮಃ ಸತ್ಯಸಂಕಲ್ಪಃ** (ಛಾಂ. ೮-೧೫)

ನಿರುಕ್ತಿ :– **ಈಶನಾದ್ರಮಣಾಚ್ಚಾಪಿ ಈಶ್ವರಃ ಪರಿಕೀರ್ತಿತಃ ॥**

76) **ಸ. ಸಂ.** :– ಈಶರಾದ ಬ್ರಹ್ಮಾದಿಗಳಿಗಿಂತಲೂ ವರ (ಶ್ರೇಷ್ಠ)

ನಾದವನು. ಲಕ್ಷ್ಮೀದೇವಿ ಮತ್ತು ವಾಯುದೇವರು ಇವರಿಗಿಂತಲೂ ಬೆಳಗುವವನು.

* * *

75) ವಿಕ್ರಮೀ=ಶೌರ್ಯಪರಾಕ್ರಮವುಳ್ಳವನು. ವಿಶೇಷವಾಗಿ ಪಾದ ವಿನ್ಯಾಸಮಾಡಿದವನು.

ಶಂ. ಭಾ. :– ಶೌರ್ಯದಿಂದ ಕೂಡಿದವನು.

76) **ಪ. ಭ. :–** ಪೌರುಷವುಳ್ಳವನು. **ಮನಸೈವ ಜಗತ್ಸೃಷ್ಟಿಂ ಸಂಹಾರಂ ಚ ಕರೋತಿ ಯಃ । ತಸ್ಯಾರಿಪಕ್ಷಕ್ಷಪಣೇ ಕಿಯಾನುದ್ಯಮ-ವಿಸ್ತರಃ ॥** (ವಿ. ಪು. ೫-೨೨-೧೫)

ನಿರುಕ್ತಿ :– ವಿಕ್ರಮಃ ಪೌರುಷಂ ಪ್ರೋಕ್ತಃ ತದ್ವತ್ತ್ವಾದ್ವಿಕ್ರಮೀ ಬುಧೈಃ ॥

77) **ಸ. ಸಂ. :–** ವಿಕ್ರಮವುಳ್ಳವನು ; ತನ್ನ ಅವತಾರಗಳಲ್ಲಿ ತಾರತಮ್ಯವಿಲ್ಲದವನು.

* * *

76) **ಧನ್ವೀ** = ಧನುರ್ಧಾರಿಯು ; ಅಹಂಕಾರತತ್ತ್ವರೂಪವಾದ ಶಾರ್ಙ್ಗ ಧನುಸ್ಸನ್ನು ಧರಿಸಿರುವವನು.

ಭೂತಾದಿಮಿನ್ದ್ರಿಯಾದಿಂ ಚ ದ್ವಿಧಾಹಂಕಾರಮೀಶ್ವರಃ ।
ಬಿಭರ್ತಿ ಶಂಖರೂಪೇಣ ಶಾರ್ಙ್ಗರೂಪೇಣ ಚ ಸ್ಥಿತಮ್ ॥

(ವಿ.ಪು. ೧-೨೨-೭೦)

ಶಂ. ಭಾ. :– ಧನುರ್ಧಾರಿಯು ; **ರಾಮಃ ಶಸ್ತ್ರಭೃತಾಮಹಮ್**

(ಗೀತಾ ೧೦-೩೧)

77) **ಪ. ಭ. :–** ಪೌರುಷಕ್ಕೆ ಅನುಗುಣವಾದ ಶಾರ್ಙ್ಗಧನುಸ್ಸುಳ್ಳವನು.

ಶಾರ್ಙ್ಗಧನ್ವಾ ಹೃಷೀಕೇಶಃ ಪುರುಷಃ ಪುರುಷೋತ್ತಮಃ ।
ಅಜಿತಃ ಖಡ್ಗಧೃಗ್ವಿಷ್ಣುಃ ಕೃಷ್ಣಶ್ಚೈವ ಬೃಹದ್ಬಲಃ ॥

(ರಾ.ಯು. ೧೨೦-೧೫)

ನಿರುಕ್ತಿ :– **ಪೌರುಷಾನುಗುಣಂ ಶಾರ್ಙ್ಗಂ ಯಸ್ಯ ಧನ್ವೀ ಸ ಕಥ್ಯತೇ ॥**

78) **ಸ. ಸಂ. :–** ಧನುಸ್ಸುಳ್ಳವನು.

* * *

77) **ಮೇಧಾವೀ** = ಅಪಸ್ಮಾರಕ್ಕೆ ವಿರುದ್ಧವಾಗಿರುವ ಶಕ್ತಿಯು ಮೇಧೆ. ಪ್ರಣವಕ್ಕೆ ಆವರಣವಾಗಿರುವ ಮತ್ತು ಜ್ಞಾನವನ್ನು ಧರಿಸುವ ಸಾಮರ್ಥ್ಯ ರೂಪವಾದ ಶಕ್ತಿಯೂ ಅದಾಗಿದೆ. ಅಂತಹ ಮೇಧಾಶಕ್ತಿಯಿಂದ ಸಂಪನ್ನ ನಾದವನು. ಬ್ರಹ್ಮಣಃ **ಕೋಶೋऽಸಿ ಮೇಧಯಾ** ವಿಹಿತಃ (ತೈ. ಉ. **ಧೀರ್ಧಾರಣಾವತೀ ಮೇಧಾ** (ಅಮರಃ)

ಶಂ. ಭಾ. :– ಮೇಧಾ ಎಂದರೆ ಬಹಳ ಗ್ರಂಥಗಳನ್ನು ಬುದ್ಧಿಯಲ್ಲಿ ಧರಿಸುವ ಸಾಮರ್ಥ್ಯ. ಅದರಿಂದ ಸಂಪನ್ನನಾದವನು ಮೇಧಾವೀ.

78) **ಪ. ಭ. :–** ನಿಸ್ಸೀಮನಿತ್ಯಮಹಿಮೆಗೆ ಅನುಗುಣವಾದ ಸಹಜ ಸರ್ವಜ್ಞತೆಯೆಂಬ ಮೇಧೆಯನ್ನು ನಿತ್ಯವಾಗಿ ಹೊಂದಿರುವವನು.

ನಿರುಕ್ತಿ :– ನಿಃಸೀಮಭೂಮಾನುಗುಣನಿತ್ಯಸರ್ವಜ್ಞಲಕ್ಷಣಾ ।
ಮೇಧಾ ಯಸ್ಯಾಸ್ತಿ ಸ ಪ್ರೋಕ್ತಃ ಮೇಧಾವೀತಿ ವಿಚಕ್ಷಣೈಃ ॥

79) **ಸ. ಸಂ. :–** ಮೇಧೆಯುಳ್ಳವನು.

* * *

78) **ವಿಕ್ರಮಃ** = ವಿಶೇಷವಾದ ಮತ್ತು ದೀರ್ಘವಾದ ಹೆಜ್ಜೆಗಳನ್ನಿಟ್ಟ ವನು. **ಶನ್ನೋ ವಿಷ್ಣುರುರುಕ್ರಮಃ । ತ್ರೇಧಾ ವಿಷ್ಣುರುರುಗಾಯೋ ವಿಚಕ್ರಮೇ ।** (ಶ್ರುತಿಃ)

ಶಂ. ಭಾ. :– ವಿಶ್ವವನ್ನು ಲಂಘನಮಾಡಿದವನು ಅಥವಾ ಗರುಡ ವಾಹನನು. ವಿನಾ = **ಗರುಡೇನ ಪಕ್ಷಿಣಾ ಕ್ರಮಾತ್**

79) **ಪ. ಭ. :–** ವೇದಮಯವಾದ ಪಕ್ಷಿಯ ಮೂಲಕ ಯಥೇಷ್ಟ ವಾಗಿ ಸಂಚರಿಸುವವನು.

ನಿರುಕ್ತಿ :– **ಗಮನಂ ಪಕ್ಷಿರಾಜೇನ ಯಸ್ಯ ವಿಕ್ರಮ ಉಚ್ಯತೇ ॥**

80) **ಸ. ಸಂ. :–** ವಿಕ್ರಮಃ ಕ್ರಮಃ = ವಿಶೇಷವಾದ ಪಾದವಿಕ್ಷೇಪ

ವುಳ್ಳವನು. ವೇದದ ಕ್ರಮಪಾಠಕ್ಕೆ ಅಧಿದೇವತೆಯಾದವನು. ಪೃಥಿವೀಸ್ಥೋ ವರಾಹಸ್ತು ಸಂಹಿತಾದೇವತೋದಿತಾ । ದಿವಿಷ್ಠೋವಾಮನಶ್ಚೈವ ಸರ್ವೋಕ್ತಃ ಪದದೇವತಾ । ನೃಸಿಂಹಸ್ತ್ವನ್ತರಿಕ್ಷಸ್ಥೋ ಭಗವಾನ್ಕ್ರಮ ದೇವತಾ ॥ (ಐತರೇಯ ಭಾಷ್ಯ).

*   *   *

79) **ಕ್ರಮಃ** = ಪಾದವಿನ್ಯಾಸಕ್ಕೆ ಅಧಿದೇವತೆಯಾದವನು.

ಶಂ. ಭಾ. :– ಪಾದವಿನ್ಯಾಸಮಾಡಿದವನು ಅಥವಾ ಪಾದವಿನ್ಯಾಸಕ್ಕೆ ಕಾರಣನಾದವನು. **ಕ್ರಾನ್ತೇ ವಿಷ್ಣುಂ** (ಮನು. ೧-೧೨೧)

80) **ಪ. ಭ. :–** (ನಿತ್ಯವಿಭೂತಿಯಿಂದ) ಪುಷ್ಟನಾದವನು ಅಥವಾ ಪಾದವಿನ್ಯಾಸಮಾಡಿದವನು : ಪಾದವಿನ್ಯಾಸಕ್ಕೆ ಕಾರಣನಾದವನು.
ನಿರುಕ್ತಿ :– **ಕ್ರಮಣಾತ್ಕ್ರಮಹೇತಿತ್ವಾತ್ಕ್ರಮ ಏಷ ಉದಾಹೃತಃ ॥**

*   *   *

80) **ಅನುತ್ತಮಃ** = ತನಗಿಂತಲೂ ಉತ್ತಮರಿಲ್ಲದವನು. **ತೇನ ಕೋಽರ್ಹತಿ ಸ್ಪರ್ಧಿತುಂ** (ತೈ. ಬ್ರಾ. ೨-೮)

ಶಂ. ಭಾ. :– ತನಗಿಂತಲೂ ಉತ್ತಮರಿಲ್ಲದವನು. **ಯಸ್ಮಾತ್ಪರಂ ನಾಪರಮಸ್ತಿ ಕಿಂಚಿತ್ ।** (ಮಹಾನಾರಾಯಣ ೧೨-೩) **ನ ತ್ವತ್ಸಮೋಽಸ್ತ್ಯಭ್ಯಧಿಕಃ ಕುತೋಽನ್ಯಃ** (ಗೀತಾ ೧೧-೪೩)

81) **ಪ. ಭ. :–** ತನಗಿಂತಲೂ ಉತ್ತಮರಿಲ್ಲದವನು. **ಮತ್ತಃ ಪರತರಂ ನಾನ್ಯತ್ಕಿಂಚಿದಸ್ತಿ ಧನಂಜಯ** (ಗೀತಾ ೭-೭) **ತೇನಾರ್ಹತಿ ಬ್ರಹ್ಮಣಾ ಸ್ಪರ್ಧಿತುಂ ಕಃ** (ತೈ. ಬ್ರಾ. ೨-೪)
ನಿರುಕ್ತಿ :– **ಉತ್ತಮೋ ನಾಸ್ತಿ ಯಸ್ಮಾತ್ಸ ಅನುತ್ತಮ ಉದಾಹೃತಃ ॥**

81) **ಸ. ಸಂ. :–** ತನಗಿಂತಲೂ ಉತ್ತಮನಿಲ್ಲದವನು ; ಪ್ರೇರಕರೇ ಇಲ್ಲದವನು ; ತಿರಸ್ಕರಿಸಲ್ಪಡದ ಲಕ್ಷ್ಮಿ ಅಥವಾ ಸಂಪ್ರಜ್ಞಾನವುಳ್ಳವನು.

82) **ದುರಾಧರ್ಷಃ**= ಎದುರಿಸಲು ಅಸಾಧ್ಯನಾದವನು. **ತದ್ದುರ್ಧರ್ಷಂ ತದ್ದುರಾಧರ್ಷಂ ।** (ಶ್ರುತಿಃ)

ಶಂ. ಭಾ. :– ದೈತ್ಯರೇ ಮುಂತಾದವರಿಂದ ಎದುರಿಸಲು ಅಸಾಧ್ಯನಾದವನು.

82) ಪ. ಭ. :– ಅತಿಶಯವಾದ ಗಾಂಭೀರ್ಯವನ್ನು ಹೊಂದಿರುವುದರಿಂದ ಅಕ್ಷೋಭ್ಯನಾದವನು ; ತಿಳಿಯಲು ಅಸಾಧ್ಯವಾದ ಗತಿಯುಳ್ಳವನು. ಮಹೋದಧಿರಿವಾಕ್ಷೋಭ್ಯಃ (ರಾಮಾಯಣ), ದಿವ್ಯಸ್ಥಾನಮಜರಂ ಚಾಪ್ರಮೇಯಂ (ಮ. ಭಾ. ಮೌಸಲ)

ನಿರುಕ್ತಿ :– ಅಪಾಂ ನಿಧಿವದಕ್ಷೋಭ್ಯೋ ದುರಾಧರ್ಷ ಇತೀರಿತಃ ।
ದುರ್ವಿಜ್ಞೇಯಗತಿರ್ಯಸ್ಮಾದ್ದುರಾಧರ್ಷಃ ಪ್ರಕೀರ್ತಿತಃ ॥

82) ಸ. ಸಂ. :– ಎದುರಿಸಲು ಅಸಾಧ್ಯನಾದವನು.

* * *

82) ಕೃತಜ್ಞಃ = ಪ್ರಾಣಿಗಳ ಕರ್ಮಗಳನ್ನೂ–ಕರ್ಮಫಲಗಳನ್ನೂ ತಿಳಿದವನು ; ಭಕ್ತರ ಆರಾಧನೆಯನ್ನು ತಿಳಿಯುವವನು ; ಅತ್ಯಲ್ಪಸೇವೆಯನ್ನೂ ಮಹತ್ತಾಗಿ ತಿಳಿಯುವವನು. ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ । ತದಹಂ ಭಕ್ತ್ಯುಪಹೃತಂ ಅಶ್ನಾಮಿ ಪ್ರಯತಾತ್ಮನಃ ॥ (ಗೀತಾ ೯-೨೬)

ಶಂ. ಭಾ. :– ಪ್ರಾಣಿಗಳ ಪುಣ್ಯ-ಪಾಪರೂಪವಾದ ಕರ್ಮಗಳನ್ನು ತಿಳಿದವನು ಅಥವಾ ಪತ್ರ-ಪುಷ್ಪಾದಿರೂಪವಾದ ಅಲ್ಪವಸ್ತುಗಳನ್ನು ಸಮರ್ಪಿಸುವವರಿಗೂ ಅವರ ಭಕ್ತಿಯನ್ನರಿತು ಮೋಕ್ಷವನ್ನು ಕೊಡುವವನು.

83) ಪ. ಭ. :– ಪ್ರಾಣಿಗಳು ಮಾಡುವ ಕರ್ಮವನ್ನರಿತು ಫಲವನ್ನು ಕೊಡುವವನು ; ಅವರು ಲೇಶಮಾತ್ರ ತನಗೆ ಅನುಕೂಲವಾಗಿ ನಡೆದುಕೊಂಡರೂ ಅದರಿಂದ ಸಂತೋಷಪಡುವವನು. ಗೋವಿನ್ದೇತಿ ಯದಾ ಕ್ರನ್ದತ್ಕೃಷ್ಣಾ ಮಾಂ ದೂರವಾಸಿನಮ್ । ಋಣಂ ಪ್ರವೃದ್ಧಮಿವ ಮೇ ಹೃದಯಾನ್ನಾಪಸರ್ಪತಿ ॥ (ಮಹಾಭಾರತ)

ನಿರುಕ್ತಿ :– ಪ್ರಾಣಿಭಿರ್ಯತ್ಕೃತಂ ಕರ್ಮ ತದ್ಜ್ಞಾತ್ವಾ ಫಲದೋ ಯತಃ ।
ಪತ್ರಪುಷ್ಪಾದಿನಾ ತುಷ್ಟಃ ಕೃತಜ್ಞೋ ಮೋಕ್ಷದಾನತಃ ॥

83) ಸ. ಸಂ. :– ಕರ್ಮವನ್ನು ಜ್ಞಾಪಿಸುವವನು. ಶ್ರುತಿಸ್ಮೃತೀ ಹರೇರಾಜ್ಞಾ [ಗೀತಾ] ಭಕ್ತರು ಮಾಡಿದ ತನ್ನ ಆರಾಧನಾರೂಪವಾದ ಉಪಕಾರವನ್ನು ತಿಳಿಯುವವನು ; ಕೃತ (ನಿತ್ಯ) ವಾದ ಎಲ್ಲ ಪದಾರ್ಥಗಳನ್ನೂ ತಿಳಿಯುವವನು ; ಜೀವರುಗಳನ್ನು ಉತ್ಪಾದಿಸುವವನು ; ಯತೋ ವಾ ಇಮಾನಿ ಭೂತಾನಿ ಜಾಯನ್ತೇ (ತೈ. ಉ.)

* * *

83) ಕೃತಿಃ = ಕ್ರಿಯಾಶಕ್ತಿರೂಪನಾದವನು.

ಶಂ. ಭಾ. :– ಕೃತಿಃ =ಕೃತಿಯೆಂದರೆ ಪುರುಷಪ್ರಯತ್ನ ಅಥವಾ ಕ್ರಿಯೆ. ಸರ್ವಾತ್ಮಕನಾಗಿರುವುದರಿಂದ ಅಥವಾ ಅವುಗಳಿಗೆ ಆಧಾರನಾಗಿರುವುದರಿಂದ ಭಗವಂತನು ಕೃತಿಯೆನಿಸುತ್ತಾನೆ.

84) ಪ. ಭ. :– ಪ್ರಸನ್ನನಾಗಿ ಸುಕೃತಕ್ಕೆ ಕಾರಣನಾದವನು.

ಏಷ ಏವ ಸಾಧು ಕರ್ಮ ಕಾರಯತಿ ತಂ ಯಮೇಭ್ಯೋ ಲೋಕೇಭ್ಯ ಉನ್ನಿನೀಷತಿ ॥ [ಕೌಶೀ. ಬ್ರಾ. ೩-೯]

ನಿರುಕ್ತಿ :– ಯಸ್ಮಾತ್ಪ್ರಸನ್ನಾತ್ಸುಕೃತಂ ತೇಷಾಂ ಸ ಕೃತಿರಿಷ್ಯತೇ ।
ಪ್ರಯತ್ನೋ ವಾ ಕ್ರಿಯಾ ವಾಥ ಕೃತಿರುಕ್ತಾ ಕ್ರಿಯಾವತಾಮ್ ॥

84) ಸ. ಸಂ. :– ಪ್ರಯತ್ನರೂಪನಾದವನು.

* * *

84) ಆತ್ಮವಾನ್= ಆತ್ಮದಲ್ಲಿ ನೆಲೆಗೊಂಡು ನಿರ್ಲಿಪ್ತನಾಗಿರುವವನು. ಆತ್ಮಗುಣ-ವೈಭವ-ಜ್ಞಾನ-ಕ್ರಿಯೇಚ್ಛಾಸಂಪನ್ನನು.

ಶಂ. ಭಾ. :– ತನ್ನ ಮಹಿಮೆಯಲ್ಲಿಯೇ ನೆಲೆಗೊಂಡವನು.
ಸ ಭಗವಃ ಕಸ್ಮಿನ್ಪ್ರತಿಷ್ಠಿತ ಇತಿ ಸ್ವೇ ಮಹಿಮ್ನಿ (ಛಾಂ.೭-೨೪-೧)

85) ಪ. ಭ. :– ಸುಕೃತವನ್ನು ಮಾಡುವ ಭಕ್ತರನ್ನು ತನ್ನವರನ್ನಾಗಿ (ಆತ್ಮಭೂತರನ್ನಾಗಿ) ಹೊಂದಿರುವವನು ; ತನ್ನ ಮಹಿಮೆಯಲ್ಲಿ ನೆಲೆಗೊಂಡವನು.

ನಿರುಕ್ತಿ :– ಏಷಾಮಾತ್ಮಶರೀರಾದಿನಿವಾಸಾದಥವಾತ್ಮವಾನ್ ।
ಸ್ವೇ ಮಹಿಮ್ನಿ ಪ್ರತಿಷ್ಠಾನಾದಾತ್ಮವಾನಭಿಧೀಯತೇ ॥

85) ಸ. ಸಂ. :– ಚತುರ್ಮುಖನನ್ನು ನಾಭಿಯಲ್ಲಿ ಹೊಂದಿರುವವನು. (ಆತ್ಮಾ ವಿರಿಂಚಃ ಸುಮನಾಃ ಸುಧೌತಃ ।–ಎಂದು ಹೇಳಲ್ಪಟ್ಟಿರುವಂತೆ ಆತ್ಮಾ ಎಂದರೆ ಚತುರ್ಮುಖನು) ಅಥವಾ ನಿತ್ಯವಾದ ದೇಹವುಳ್ಳವನು.

* * *

ಸುರೇಶಃ ಶರಣಂ ಶರ್ಮ ವಿಶ್ವರೇತಾಃ ಪ್ರಜಾಭವಃ ।
ಅಹಃ ಸಂವತ್ಸರೋ ವ್ಯಾಲಃ ಪ್ರತ್ಯಯಃ ಸರ್ವದರ್ಶನಃ ॥೨೩॥

85) ಸುರೇಶಃ = ದೇವತೆಗಳಿಗೆ ಒಡೆಯನು.

ಶಂ. ಭಾ. :– ದೇವತೆಗಳಿಗೆ ಒಡೆಯನು ಅಥವಾ ಶುಭವನ್ನು ಕೊಡುವವರಿಗೆ ಒಡೆಯ.

86) ಪ. ಭ. :– ಬ್ರಹ್ಮಾದಿ ದೇವತೆಗಳನ್ನೂ ಧರಿಸಿ ಪೋಷಿಸುವ ಸ್ವಾಮಿಯು.

ಯಸ್ಯ ಪ್ರಸಾದಾದಹಮಚ್ಯುತಸ್ಯ ಭೂತಃ ಪ್ರಜಾಸರ್ಗಕರೋಽನ್ತಕಾರೀ ।
ಕ್ರೋಧಾಚ್ಚ ರುದ್ರಃ ಸ್ಥಿತಿಹೇತುಭೂತಃ । (ವಿ. ಪು. ೪-೧-೮೫)
ನಿರುಕ್ತಿ :– ಬ್ರಹ್ಮಾದೀನಾಂ ಫಲುಗ್ಗಪದಲಿಪ್ಸೂನಾಂ ತ್ರಿದಿವೌಕಸಾಮ್ ।
ಸಂವಿಧಾತಾ ಸುರೇಶಶ್ಚ ಪ್ರೋಚ್ಯತೇ ವಿಬುಧೋತ್ತಮೈಃ ॥

86) ಸ. ಸಂ. :– ಸುರಾಃ ಎಂದರೆ ಸಮುದ್ರದಿಂದ ಉಂಟಾದ ಮದ್ಯವುಳ್ಳವರು ಅಥವಾ ಚೆನ್ನಾಗಿ ಬೆಳಗುವವರು. ಅವರಿಗೆ ಸ್ವಾಮಿಯಾದವನು.

* * *

86) ಶರಣಂ= ಆಶ್ರಯನು, ಮನೆಯಾದವನು ; ರಕ್ಷಕನು.

ಆರ್ತಾನಾಮಾರ್ತಿಹನ್ತಾರಂ ಭೀತಾನಾಂ ಭಯನಾಶನಮ್ ।
ನಿವಾಸಃ ಶರಣಂ ಸುಹೃತ್ ॥

ಶಂ. ಭಾ. :– ಪೀಡಿತರ ಪೀಡೆಯನ್ನು ಪರಿಹಾರಮಾಡುವವನು.

87) ಪ. ಭ. :– ಯಾವ ವ್ಯತ್ಯಾಸವೂ ಇಲ್ಲದೇ ಎಲ್ಲರ ಪೀಡೆಗಳನ್ನೂ ಸಂಹಾರಮಾಡುವವನು.

ತಂ ಹ ದೇವಮಾತ್ಮಬುದ್ಧಿಪ್ರಸಾದಂ ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೇ [ಶ್ವೇ ೬-೧೮] ಶರಣ್ಯಂ ಶರಣಂ ಚ ತ್ವಾಮಾಹುರ್ದಿವ್ಯಾ ಮಹರ್ಷಯಃ। (ರಾ. ಯು. ೧೨೦-೧೮)

ನಿರುಕ್ತಿ :– **ಆರ್ತಾನಾಮಾರ್ತಿಹನ್ತೃತ್ವಾಚ್ಛರಣಂ ಪರಿಕೀರ್ತಿತಃ ॥**

ಯದುಪಾಸಾದ್ಭಯಂ ದುಃಖಂ ಪಾಪಂ ಬನ್ಧೋ ನ ಬಾಧತೇ ।
ಪ್ರತಿಷ್ಠಾ ಚ ಸುಖಂ ಜ್ಞಾನಂ ಭವೇಚ್ಛರಣಮಿತ್ಯತಃ ॥

87) **ಸ. ಸಂ.** :– ಆಶ್ರಯನು ಅಥವಾ ರಕ್ಷಕನು. **ಶರಣಂ ಗೃಹರಕ್ಷಿತ್ರೋಃ (ಅಮರಃ)**

* * *

88) **ಶರ್ಮ**= ಪರಮಸುಖಸ್ವರೂಪನು.

ಶಂ. ಭಾ. :– ಪರಮಾನಂದಸ್ವರೂಪನು.

89) **ಪ. ಭ.** :– ಹಿಂಸಾದಿಗಳನ್ನು ಧ್ವಂಸಮಾಡುವವನು ; ಪರಮಾನಂದರೂಪನು ಮತ್ತು ಪರಮಪ್ರಾಪ್ಯನು.

ನಿರುಕ್ತಿ :– **ಪರಮಾನನ್ದರೂಪತ್ವಾಚ್ಛರ್ಮ ಹಿಂಸಾದಿಮನ್ಥನಾತ್ ॥**

88) **ಸ. ಸಂ.** :– ಅಶುಭವನ್ನು (ಹಿಂಸೆಯನ್ನು) ಹೋಗಲಾಡಿಸುವವನು.

* * *

88) **ವಿಶ್ವರೇತಾಃ** = ವಿಶ್ವಕ್ಕೆ ಕಾರಣನಾದ, ಅನಂತವಾದ, ಅಮೋಘವಾದ ವೀರ್ಯವುಳ್ಳವನು.

ಶಂ. ಭಾ. :– ವಿಶ್ವಕ್ಕೆ ಕಾರಣನಾದವನು.

89) **ಪ. ಭ.** :– ವಿಶ್ವವನ್ನು ಕಾರ್ಯವನ್ನಾಗಿ ಹೊಂದಿರುವವನು. ತನ್ನ ಸೇವೆಗೋಸ್ಕರವಾಗಿ ಪ್ರಜೆಗಳಿಗೆ ಜ್ಞಾನ-ಕರ್ಮೇಂದ್ರಿಯಗಳೇ ಮುಂತಾದ

ವಿಶ್ವವನ್ನು ಉಂಟುಮಾಡುವವನು. ಏತಸ್ಮಾಜ್ಜಾಯತೇ ಪ್ರಾಣೋ ಮನಃ ಸರ್ವೇಂದ್ರಿಯಾಣಿ ಚ । (ಮುಂ. ೨-೧-೩)

ನಿರುಕ್ತಿ :– ವಿಶ್ವಂ ರೇತೋ ಭಗವತೋ ವಿಶ್ವರೇತಾ ಹರಿಃ ಸ್ಮೃತಃ ।

ಜ್ಞಾನೇನ್ದ್ರಿಯಾದಿಕಂ ವಿಶ್ವಂ ಪರಿಚರ್ಯಾರ್ಥಮೇವ ಹಿ ।
ಯಃ ಪ್ರಜಾನಾಂ ಕರೋತೀತಿ ವಿಶ್ವರೇತಾಶ್ಚ ಸ ಸ್ಮೃತಃ ॥

89) ಸ. ಸಂ. :– ಜಗತ್ತಿಗೆ ಕಾರಣನಾದವನು. ವಿಷ್ಣೋರ್ಭುವನಸ್ಯ ರೇತಃ (ಶ್ರುತಿಃ) ವಿಶ್ವಕ್ಕೆ (ವಾಯುವಿಗೆ) ಕಾರಣನಾದವನು. ವಿಶ್ವೋ ವಾಯುಃ ಸಮುದ್ದಿಷ್ಟಃ

*   *   *

89) ಪ್ರಜಾಭವಃ = ಪ್ರಜೆಗಳ ಉತ್ಪತ್ತಿಗೆ ಕಾರಣನಾದವನು.

ಶಂ. ಭಾ. :– ಎಲ್ಲ ಪ್ರಜೆಗಳೂ ಯಾವನಿಂದ ಹುಟ್ಟುತ್ತಾರೆಯೋ ಅವನು.

90) ಪ. ಭ. :– ಎಲ್ಲ ಪ್ರಜೆಗಳೂ ಅವನೇ ಕೊಟ್ಟಿರುವ ಕರಣಗಳಿಂದ, ಅವನಿಗೆ ಅಭಿಮುಖರಾಗಲು ಯೋಗ್ಯರಾಗಿ, ಅವನಲ್ಲಿರುವುದರಿಂದ ಅವನು ಪ್ರಜಾಭವನು.

ನಿರುಕ್ತಿ :– ತದ್ದತ್ತೈರೇವ ಕರಣೈಸ್ತಸ್ಮಿನ್ನಭಿಮುಖಾಃ ಪ್ರಜಾಃ ।
ಸರ್ವಾಶ್ಚೈವ ಭವನ್ತೀತಿ ಪ್ರಜಾಭವ ಉದಾಹೃತಃ ॥

90) ಸ. ಸಂ. :– ಪ್ರಜಾಃ ಭಗವಂತನನ್ನು ಜ್ಞಾಪಿಸುವವರು. ಅಭವವು (ವೈಕುಂಠಾದಿಗಳು) ಯಾವನಿಂದ ಕೊಡಲ್ಪಡುತ್ತವೆಯೋ ಅವನು ; ಪ್ರಜೆಗಳಿಗೆ ಉತ್ಪಾದಕನಾದವನು ; ಪ್ರಜೆಗಳನ್ನು ಮತ್ತು ನಕ್ಷತ್ರಗಳನ್ನು ನಡೆಸುವವನು. ಇನ್ದ್ರ ಏಕಂ ಸೂರ್ಯ ಏಕಂ ಜಜಾನ । ಯಸ್ತಾ ವಿಜಾನಾತ್ಸವಿತುಃ ಪಿತಾಸತ್ । [ಶ್ರುತಿಃ]

*   *   *

90) ಅಹಃ = ಜ್ಞಾನಿಗಳಿಗೆ ಹಗಲಾಗಿರುವವನು ; ದೇವಯಾನಮಾರ್ಗದಲ್ಲಿ ಬರುವ ಹಗಲಿಗೆ ಅಧಿದೇವತೆಯು. ಅಗ್ನಿರ್ಜ್ಯೋತಿರಹಃ ಶುಕ್ಲಃ

ಷಣ್ಮಾಸಾ ಉತ್ತರಾಯಣಮ್ (ಗೀತಾ ೮-೨೪) ಮಿತ್ರದೇವತಾ ಸ್ವರೂಪಿಯು.

ಶಂ. ಭಾ. :– ಪ್ರಕಾಶಸ್ವರೂಪನು.

91) ಪ. ಭ. :– ಹೀನವಾದುವುಗಳು (ಹೀನವಾದ ಗುಣ ಮುಂತಾದುವು) ಇಲ್ಲದವನು ; ಅನಾದಿಯಾದ ಅವಿದ್ಯಾನಿದ್ರೆಯ ಅವಧಿಯಲ್ಲಿ ದಿವಸದಂತೆ ಆತ್ಮಜ್ಞಾನಪ್ರಕಾಶವನ್ನು ಉಂಟುಮಾಡುವವನು.

ನಿರುಕ್ತಿ :– ನ ಸನ್ತಿ ಹೀನಾ ಯಸ್ಯೇತಿ ಅಹಃ ಸ ಪರಿಕೀರ್ತಿತಃ ।
ಅನಾದ್ಯವಿದ್ಯಾನಿದ್ರಾಯಾಂ ಸ್ವಧೀಹೇತುತಯಾ ಹ್ಯಹಃ ॥

91) ಸ. ಸಂ. :– ಜೀವಗಳಲ್ಲದವನು ; ಜೀವಗಳಿಂದ ಭಿನ್ನನಾದವನು ; ಹೇಯನಲ್ಲದವನು.

* * *

91) ಸಂವತ್ಸರಃ = ಕಾಲ ಮತ್ತು ಕಾಲಾವಯವಸ್ವರೂಪಿಯು.

ಶಂ. ಭಾ. :– ಕಾಲಾತ್ಮನಾಗಿರುವ ವಿಷ್ಣುವು.

92) ಪ. ಭ. :– (ಜ್ಞಾನಿಗಳ ಉದ್ಧಾರಕ್ಕಾಗಿ) ಚೆನ್ನಾಗಿ ವಾಸಮಾಡುವವನು.

ನಿರುಕ್ತಿ :– ಇತ್ಥಂ ತೇಷು ಪ್ರಬುದ್ಧೇಷು ವಸತ್ಯುದ್ಧರಣಾಯ ಯಃ
ಸ ಸಂವತ್ಸರಃ.......... ॥

92) ಸ. ಸಂ. :– ಯಾವನಲ್ಲಿ ಎಲ್ಲವೂ ಚೆನ್ನಾಗಿ ವಾಸಮಾಡುತ್ತವೆಯೋ ಅವನು.

* * *

92) ವ್ಯಾಲಃ= ಶೇಷನಾಗನು ಅಥವಾ ಕುಂಡಲಿನೀಸ್ವರೂಪನು.

ಶಂ. ಭಾ. :– ಸರ್ಪದಂತೆ ಅಥವಾ ಮದಿಸಿದ ಆನೆಯಂತೆ ಹಿಡಿದುಕೊಳ್ಳಲು ಅಶಕ್ಯನಾದವನು.

93) ಪ. ಭ. :– ಜ್ಞಾನಿಗಳನ್ನು ಅಭಯಪ್ರದಾನಾದಿಗಳಿಂದ ಸ್ವೀಕರಿಸಿ ತನ್ನವರನ್ನಾಗಿ ಮಾಡಿಕೊಳ್ಳುವವನು.

ನಿರುಕ್ತಿ :– ತಾನಾತ್ಮಸಾದ್ವ್ಯಾಲ ಉಕ್ತಃ ಕರೋತಿ ಯಃ ॥

93) **ಸ. ಸಂ :–** ಭಕ್ತಾಭೀಷ್ಟಪ್ರದಾನಮಾಡುವ ಉದ್ಯೋಗವುಳ್ಳವನು. ಕೌಸ್ತುಭಾದಿ ಭೂಷಣಗಳಿಂದ ವಿಶೇಷವಾದ ಅಲಂಕಾರವುಳ್ಳವನು ; ವಿಶೇಷವಾಗಿ ಶತ್ರುಗಳನ್ನು ತಡೆಯುವವನು ; ವಿಶೇಷವಾಗಿ ಜಗತ್ತಿನ ಕ್ಷಯವನ್ನು ಮಾಡುವವನು ; ವಿಶೇಷವಾಗಿ ಸಂಶ್ಲೇಷವುಳ್ಳವನು ; ವಿಶೇಷವಾಗಿ ಪ್ರಕಾಶವುಳ್ಳವನು.

* * *

93) **ಪ್ರತ್ಯಯಃ** = ಜ್ಞಾನಸ್ವರೂಪಿಯು ; ಪ್ರಕೃತಿಗೆ ಸೇರುವ ಪ್ರತ್ಯಯರೂಪಿಯಾದವನು. ಸಹಾಯಕನು ; ಮಧುರವಾಗಿರುವವನು.

ಶಂ. ಭಾ. :– ಪ್ರಜ್ಞಾನಸ್ವರೂಪನು. **ಪ್ರಜ್ಞಾನಂ ಬ್ರಹ್ಮ** (ಐ. ಉ. ೩-೫-೩)

94) **ಪ್ರ. ಭಾ. :–** ತನ್ನಲ್ಲಿ ನಂಬಿಕೆಯನ್ನು ಹುಟ್ಟಿಸುವವನು.

ಭೂಯೋ ಭೂಯೋऽಪಿ ತೇ ಬ್ರಹ್ಮನ್ವಿಶ್ವಾಸ್ಯಃ ಪುರುಷೋತ್ತಮಃ ।

(ಶ್ರೀಪಾಂಚರಾತ್ರ)

ನಿರುಕ್ತಿ **:– ಯೋऽಸೌ ಪ್ರತ್ಯಾಯಯತಿ ತಾನ್ಪ್ರತ್ಯಯಃ ಸಮುದಾಹೃತಃ ।**

94) **ಸ. ಸಂ. :–** ಜ್ಞಾನರೂಪನು.

* * *

94) **ಸರ್ವದರ್ಶನಃ** = ಸರ್ವಸಾಕ್ಷಿಯು ; ವಿಶ್ವಾಕ್ಷನು ; ಸರ್ವದೇಶ-ಸರ್ವಾವಸ್ಥೆಗಳಲ್ಲಿಯೂ ಸರ್ವವನ್ನೂ ನೋಡುತ್ತಿರುವವನು ; ಎಲ್ಲರಿಗೂ ಕಣ್ಣಾಗಿರುವವನು ; ವೀಕ್ಷಣಶಕ್ತಿಯನ್ನು ಕೊಡುವವನು ; ತನ್ನ ಮಹಿಮೆಯನ್ನು ತೋರಿಸುವವನು.

ಶಂ. ಭಾ. :– ಸರ್ವಾತ್ಮಕನಾಗಿರುವುದರಿಂದ ಎಲ್ಲವನ್ನೂ ಕಣ್ಣಾಗಿ ಹೊಂದಿರುವವನು. **ವಿಶ್ವತಶ್ಚಕ್ಷುಃ** (ಶ್ವೇ.೩-೩) **ವಿಶ್ವಾಕ್ಷಂ ವಿಶ್ವಶಮ್ಭುವಮ್ ।** (ಮಹಾನಾರಾಯಣ ೧೩-೧)

95) **ಪ. ಭ. :–** ತನ್ನ ಸರ್ವಮಹಿಮೆಯನ್ನು ಜ್ಞಾನಿಗಳಿಗೆ ತೋರಿಸುವವನು.

ತಸ್ಯೈಷ ಆತ್ಮಾ ವಿವೃಣುತೇ ತನುಂ ಸ್ವಾಮ್ । (ಮುಂಡಕ ೩-೨-೩)

ನಿರುಕ್ತಿ :– ಮಹಿಮಾನಂ ಸರ್ವಸಹಂ ತೇಷಾಂ ದರ್ಶಯತೀತಿ ಸಃ ।
ಸರ್ವದರ್ಶನ ಆಖ್ಯಾತಃ ನವಾರ್ಣೋ ಲೋಚನಪ್ರದಃ ॥

95) ಸ. ಸಂ. :– ಸರ್ವವಿಷಯಕನಾದ ದರ್ಶನವುಳ್ಳವನು. ಶರ್ವನಿಗೆ (ರುದ್ರನಿಗೆ) ಜ್ಞಾನವನ್ನು ಕೊಡುವವನು. ಎಲ್ಲ ಅಮಾವಾಸ್ಯೆಗಳಲ್ಲಿಯೂ ಹವಿಸ್ಸು ಮುಂತಾದುವುಗಳನ್ನು ಒಯ್ಯುವವನು.

* * *

ಅಜಃ ಸರ್ವೇಶ್ವರಃ ಸಿದ್ಧಃ ಸಿದ್ಧಿಃ ಸರ್ವಾದಿರಚ್ಯುತಃ ।
ವೃಷಾಕಪಿರಮೇಯಾತ್ಮಾ ಸರ್ವಯೋಗವಿನಿಃಸೃತಃ ॥೨೪॥

95) ಅಜಃ= ಹುಟ್ಟು ಇಲ್ಲದವನು.

ಶಂ. ಭಾ. :– ಜನ್ಮವಿಲ್ಲದವನು.

ನ ಹಿ ಜಾತೋ ನ ಜಾಯೇಯ ನ ಜನಿಷ್ಯೇ ಕದಾಚನ ।
ಕ್ಷೇತ್ರಜ್ಞಃ ಸರ್ವಭೂತಾನಾಂ ತಸ್ಮಾದಹಮಜಃ ಸ್ಮೃತಃ ॥
(ಮ. ಶಾಂ. ೩೪೨-೭೪)

96) ಪ. ಭ. :– ತನ್ನ ಪ್ರಾಪ್ತಿಗೆ ವಿರೋಧವಾದುದೆಲ್ಲವನ್ನೂ ತಾನೇ ನಾಶಮಾಡುವವನು. ತೇಷಾಮೇವಾನುಕಮ್ಪಾರ್ಥಂ ಅಹಮಜ್ಞಾನಜಂ ತಮಃ । ನಾಶಯಾಮ್ಯಾತ್ಮಭಾವಸ್ಥಃ ಜ್ಞಾನದೀಪೇನ ಭಾಸ್ವತಾ । (ಗೀ ೧೦-೧೧)
ನಿರುಕ್ತಿ :– ಪ್ರತ್ಯರ್ಥಿನಃ ಸ್ವಸಮ್ಪ್ರಾಪ್ತೌ ಪ್ರಜಾನಾಂ ಕ್ಷಿಪತೀತ್ಯಜಃ ।

96) ಸ. ಸಂ. : ಹುಟ್ಟಿಲ್ಲದವನು ; ಗಮಿಸುವವನು.

* * *

96) ಸರ್ವೇಶ್ವರಃ= ಎಲ್ಲರಿಗೂ ಈಶ್ವರನಾದವನು. ತಮೀಶ್ವರಾಣಾಂ ಪರಮಂ ಮಹೇಶ್ವರಂ ತಂ ದೇವತಾನಾಂ ಪರಮಂ ಚ ದೈವತಮ್ ।

ಶಂ. ಭ. :– ಎಲ್ಲ ಈಶ್ವರರಿಗೂ ಈಶ್ವರನಾದವನು.
ಏಷ ಸರ್ವೇಶ್ವರಃ (ಮಾಂಡೂಕ್ಯ.೬)

97) **ಪ. ಭ. :–** (ಸಮರ್ಥರೂ ಮತ್ತು ಅಸಮರ್ಥರೂ ಆದ ಎಲ್ಲ ಶರಣಾಗತರ ವಿಲಂಬ-ವಿಷಣ್ಣತೆ-ವೈರೂಪ್ಯಗಳನ್ನು ಪರಿಹರಿಸಲು) ಶೀಘ್ರದಲ್ಲಿಯೇ ಅವರೆಲ್ಲರನ್ನೂ ವ್ಯಾಪಿಸುವವನು. **ವಿಭೀಷಣೇನಾಶು ಜಗಾಮ ಸಙ್ಗಮಮ್ ।** (ರಾ. ಯು. ೧೮-೩೯)

ನಿರುಕ್ತಿ :– ಅಶಕ್ತಾನಾಂ ಚ ಶಕ್ತಾನಾಂ ವೈರೂಪ್ಯಂ ಶರಣೈಷಿಣಾಮ್ ।
ಅಶ್ನುತೇ ಪರಿಹರ್ತುಂ ಯಃ ಸ ಸರ್ವೇಶ್ವರ ಈರಿತಃ ॥

97) **ಸ. ಸಂ. :–** ಎಲ್ಲರಿಗೂ ಈಶ್ವರನಾದವನು.

* * *

97) **ಸಿದ್ಧಃ** = ಸ್ವಯಂಸಿದ್ಧನು ; ಸರ್ವಸಿದ್ಧಿಗಳನ್ನೂ ಸಹಜವಾಗಿ ಹೊಂದಿರುವವನು.

ಶಂ. ಭಾ. :– ನಿತ್ಯಸಿದ್ಧಸ್ವರೂಪನು.

98) **ಪ. ಭ. :–** ಭಕ್ತರಿಗೆ ಸ್ವರೂಪದಿಂದಲೇ ಸಿದ್ಧನಾಗಿರುವವನು. ಉಪಾಯಗಳಿಂದ ಸಾಧ್ಯನಾಗದೇ ಇರುವವನು.

ನಿರುಕ್ತಿ :– ಸ್ವರೂಪೇಣೈವ ಭಕ್ತಾನಾಂ ಸಿದ್ಧತ್ವಾತ್ಸಿದ್ಧ ಉಚ್ಯತೇ ॥

98) **ಸ. ಸಂ. :–** ಗಮ್ಯನಾದವನು ; ನಿಶ್ಚಯಜ್ಞಾನರೂಪನಾದವನು ; ಭಕ್ತರ ರಕ್ಷಣೆಗೆ ಸಿದ್ಧನಾಗಿರುವವನು.

* * *

98) **ಸಿದ್ಧಿಃ** = ಸರ್ವಪುರುಷಾರ್ಥರೂಪನು ; ಫಲಸ್ವರೂಪನು ; ಅಣಿಮಾದಿ ಸಿದ್ಧಿಸ್ವರೂಪನು.

ಶಂ. ಭಾ. :– ಎಲ್ಲ ವಸ್ತುಗಳಲ್ಲಿಯೂ ಜ್ಞಾನರೂಪದಿಂದ ಇರುವುದರಿಂದಲೂ, ಎಲ್ಲರಿಗಿಂತಲೂ ಶ್ರೇಷ್ಠನಾಗಿರುವುದರಿಂದಲೂ ಇವನೇ ಸಿದ್ಧಿಯು. (ಸ್ವರ್ಗಾದಿಗಳು ನಾಶಹೊಂದುವುದರಿಂದ ಅವು ವಾಸ್ತವಿಕವಾಗಿ ಫಲಗಳೇ ಅಲ್ಲ.)

99) **ಪ. ಭ. :–**ಉಪಾಯದಿಂದ ಸಾಧಿಸಲ್ಪಡುವವನು. **ಯದಿಚ್ಛನ್ತೋ ಬ್ರಹ್ಮಚರ್ಯಂ ಚರನ್ತಿ।** (ಕಠ. ೨-೧೫) **ಪೃಥಗ್ಧರ್ಮಫಲೈಷಿಣಃ।**

ನಿರುಕ್ತಿ :– ಅಯಮೇವ ಹ್ಯುಪಾಯೈಶ್ಚ ಸಿದ್ಧಿಃ ಸ್ಯಾತ್ಸಾಧ್ಯತೇ ಯತಃ ।

99) **ಸ. ಸಂ. :– ನಿರತಿಶಯರೂಪನಾದವನು.**

*　　　　*　　　　*

99) **ಸರ್ವಾದಿಃ** = ಎಲ್ಲಕ್ಕೂ ಆದಿಯಾದವನು. **ಪುರುಷಾಯಾದಿ ಬೀಜಾಯ (ಭಾಗವತ)**

ಶಂ. ಭಾ. :– ಸರ್ವಭೂತಗಳಿಗೂ ಆದಿಯಾದವನು.

100) **ಪ. ಭ. :–** ಸರ್ವಪುರುಷಾರ್ಥಗಳಿಗೂ ಮೂಲನಾದವನು.

ಯೇ ತ್ವಾಂ ದೇವಂ ಧ್ರುವಂ ಭಕ್ತಾಃ ಪುರಾಣಂ ಪುರುಷೋತ್ತಮಮ್।
ಪ್ರಾಪ್ನುವನ್ತಿ ಸದಾ ಕಾಮಾನಿಹ ಲೋಕೇ ಪರತ್ರ ಚ ॥
(ರಾ. ಯು. ೧೨೦-೩೧)

ನಿರುಕ್ತಿ :– ಸರ್ವೇಷಾಂ ಪುರುಷಾರ್ಥಾನಾಂ ಮೂಲಂ
ಸರ್ವಾದಿರೀರಿತಃ ॥

100) **ಸ. ಸಂ. :–** ಸರ್ವಕಾರಣನು ; ಸರ್ವರಿಂದಲೂ ಸ್ವೀಕರಿಸಲ್ಪಡುವವನು ; ಸರ್ವವನ್ನೂ ಭಕ್ಷಿಸುವವನು.

*　　　　*　　　　*

100) **ಅಚ್ಯುತಃ** = ಸ್ವರೂಪದಿಂದ, ಸ್ಥಾನದಿಂದ ಮತ್ತು ಸಂಕಲ್ಪದಿಂದ ಜಾರದೆ ಸದಾ ಸ್ಥಿರನಾಗಿರುವವನು.

ಶಂ. ಭಾ. :– ಸ್ವರೂಪಶಕ್ತಿಯಿಂದ ಎಂದಿಗೂ ಜಾರದವನು. ಹಿಂದೆ ಇಂದು ಮತ್ತು ಎಂದಿಗೂ ಜಾರದವನು. ಶಾಶ್ವತಂ ಶಿವಮಚ್ಯುತಂ ।(ಮ. ನಾ. ೧೩-೧) **ತಸ್ಮಾನ್ನ ಚ್ಯುತಪೂರ್ವೋಽಹಂ ಅಚ್ಯುತಸ್ತೇನ ಕರ್ಮಣಾ (ಮ. ಶಾಂ. ೩೪೨-೮೧)**

101) **ಪ. ಭ. :–** ಭಕ್ತರಿಂದ ಎಂದಿಗೂ ಚ್ಯುತನಾಗದವನು ; ಯಾವನನ್ನು ಆಶ್ರಯಿಸಿದರೆ ಚ್ಯುತಿಯುಂಟಾಗುವುದಿಲ್ಲವೋ–ಅವನು. **ತಸ್ಯಾಹಂ ನ ಪ್ರಣಶ್ಯಾಮಿ । (ಗೀತಾ ೬-೩೦) ನ ತ್ಯಜೇಯಂ ಕಥಂಚನ। (ರಾ. ಯು. ೧೧-೩).**

ನಿರುಕ್ತಿ :– **ಭಕ್ತೇಭ್ಯೋಽಚ್ಯುತಪೂರ್ವತ್ವಾದಚ್ಯುತಃ ಪರಿಕೀರ್ತಿತಃ ।**
ಆಶ್ರಿತಾನಾಂ ಚ್ಯುತಿರ್ಯಸ್ಮಾನ್ನಾಸ್ತಿಸೋಽಚ್ಯುತ ಈರಿತಃ ॥

101) **ಸ. ಸಂ. :–** ದೇಶ, ಕಾಲ ಮತ್ತು ಗುಣಗಳಿಂದ ಚ್ಯುತಿಯಿಲ್ಲದವನು.

* * *

101) **ವೃಷಾಕಪಿಃ** = ಧರ್ಮಸ್ವರೂಪಿಯು ; ಯಜ್ಞವರಾಹಸ್ವರೂಪಿಯು ಅಥವಾ ಆದಿತ್ಯಸ್ವರೂಪಿಯು. **ವೃಷಸ್ತು ಭಗವಾನ್ಧರ್ಮಃ ।** ವೃಷಾಕಪಿಶಬ್ದವು ಶಿವ ಮತ್ತು ವಿಷ್ಣು ಇಬ್ಬರಿಗೂ ವಾಚಕವಾಗಿದೆ. **ಹರವಿಷ್ಣೂವೃಷಾಕಪೀ.**

ಶಂ. ಭಾ. :– ಸಮಸ್ತಕಾಮನೆಗಳನ್ನೂ ವರ್ಷಿಸುವ ಧರ್ಮಸ್ವರೂಪಿಯು. ವರಾಹಸ್ವರೂಪಿಯು. **ಕಪಿರ್ವರಾಹಃ ಶ್ರೇಷ್ಠಶ್ಚ ಧರ್ಮಶ್ಚ ವೃಷ ಉಚ್ಯತೇ । ತಸ್ಮಾದ್ವೃಷಾಕಪಿಂ ಪ್ರಾಹ ಕಾಶ್ಯಪೋ ಮಾಂ ಪ್ರಜಾಪತಿಃ॥ (ಮ. ಶಾ. ೩೪೨-೮೯)**

102) **ಪ. ಭ. :–** ಧರ್ಮವರಾಹನು.

ನಿರುಕ್ತಿ :– **ಕಪಿರ್ವರಾಹಃ ಶ್ರೇಷ್ಠಶ್ಚ ಧರ್ಮಶ್ಚ ವೃಷ ಉಚ್ಯತೇ ।**
ತಸ್ಮಾದ್ವೃಷಾಕಪಿಃ ಪ್ರೋಕ್ತಃ ವಸ್ವರ್ಣೋಽಭೀಷ್ಟದೋ ಮನುಃ ॥

102) **ಸ. ಸಂ. :–** ವರ್ಷಿಸುವವನು ಮತ್ತು ಸುಖವನ್ನು ಪಾನ ಮಾಡುವವನು ; ಧರ್ಮದಿಂದ ದುಃಖವನ್ನು ಕುಟ್ಟಿ ಪುಡಿಮಾಡುವವನು.

* * *

102) **ಅಮೇಯಾತ್ಮಾ** = ಅಳೆಯಲಾಗದ ಸ್ವರೂಪವುಳ್ಳವನು.

ಶಂ. ಭಾ. :– ಯಾವನ ಆತ್ಮವನ್ನು (ಸ್ವರೂಪವನ್ನು) ಇಷ್ಟು ಎಂಬುದಾಗಿ ಅಳೆಯಲು ಸಾಧ್ಯವಿಲ್ಲವೋ–ಅವನು.

103) **ಪ. ಭ. :–** (ಆಶ್ರಿತಾನುಗ್ರಹಪ್ರವಾಹದಲ್ಲಿ) 'ಇಷ್ಟು ಪ್ರಮಾಣದವನು' ಎಂದು ಅಳೆಯಲಾಗದ ಸ್ವರೂಪವುಳ್ಳವನು ; ಎಲ್ಲರಿಗಿಂತಲೂ ಅಧಿಕನಾದವನು.

ನಿರುಕ್ತಿ :– ಇಯಾನಿತ್ಯಪರಿಚ್ಛೇದ್ಯಸ್ವಭಾವಾತ್ಸರ್ವತೋಽಧಿಕಃ ।
ಅಮೇಯಾತ್ಮಾ ಸಮುದ್ದಿಷ್ಟೋ ಹ್ಯೌನ್ನತ್ಯಫಲದೋ ಮನುಃ ॥

103) ಸ. ಸಂ. :– ಸಂಪೂರ್ಣವಾಗಿ ತಿಳಿಯಲು ಅಸಾಧ್ಯವಾದ ಸ್ವರೂಪವುಳ್ಳವನು.

* * *

103) **ಸರ್ವಯೋಗವಿನಿಃಸೃತಃ**= ಸಮಸ್ತಯೋಗಗಳಿಂದಲೂ ನಿರ್ಣಯಿಸಲ್ಪಟ್ಟವನು.

ಶಂ. ಭಾ. :– ಸಮಸ್ತಯೋಗ (ಸಂಬಂಧ) ಗಳಿಂದಲೂ ರಹಿತನಾದವನು ; ಅಸಙ್ಗೋ ಹ್ಯಯಂ ಪುರುಷಃ (ಬೃ. ೪-೩-೧೬) ಶಾಸ್ತ್ರೋಕ್ತವಾದ ನಾನಾಯೋಗಗಳಿಂದ ತಿಳಿಯಲ್ಪಡುವವನು.

104) ಪ. ಭ. :– ಶಾಸ್ತ್ರೋಕ್ತವಾದ ಮತ್ತು ಬುದ್ಧಿಕಲ್ಪಿತವಾದ ಯೋಗ (ಉಪಾಯ) ಗಳಿಂದ ವಿಶೇಷವಾಗಿ ಹೊಂದಲು ಯೋಗ್ಯನಾದವನು.
ನಿರುಕ್ತಿ :– ಸರ್ವೈರುಪಾಯೈಃ ಪ್ರಾಪ್ಯಶ್ಚ ಸರ್ವಯೋಗವಿನಿಃಸೃತಃ ॥

104) ಸ. ಸಂ. :– ಎಲ್ಲ ಯೋಗಗಳೂ (ಉಪಾಯಗಳೂ) ಯಾವನಿಂದ ಹೊರಬಂದಿವೆಯೋ–ಅವನು.

* * *

ವಸುರ್ವಸುಮನಾಃ ಸತ್ಯಃ ಸಮಾತ್ಮಾ ಸಂಮಿತಃ ಸಮಃ ।
ಅಮೋಘಃ ಪುಣ್ಡರೀಕಾಕ್ಷೋ ವೃಷಕರ್ಮಾ ವೃಷಾಕೃತಿಃ ॥೨೫॥

104) **ವಸುಃ**= ವಸುದೇವತಾಸ್ವರೂಪಿಯು ; ಸಂಪತ್ಸ್ವರೂಪಿಯು.

ಶಂ. ಭಾ. :– ಯಾವನಲ್ಲಿ ಎಲ್ಲ ಭೂತಗಳೂ ವಾಸಮಾಡುತ್ತವೆಯೋ–ಅವನು ; ಯಾವನು ಎಲ್ಲ ಭೂತಗಳಲ್ಲಿಯೂ ವಾಸಮಾಡುತ್ತಾನೆಯೋ–ಅವನು ; ಪಾವಕನೆಂಬ ವಸುದೇವತಾಸ್ವರೂಪನು. ವಸೂನಾಂ ಪಾವಕಶ್ಚಾಸ್ಮಿ (ಗೀತಾ. ೧೦-೨೩)

105) ಪ. ಭ. :–ಭಕ್ತರಲ್ಲಿ ಪರಮಪ್ರೀತಿಯಿಂದ ವಾಸಮಾಡುವವನು.
ನಿರುಕ್ತಿ :– ವಸತೀತಿ ವಸುಸ್ತೇಷು ಪ್ರೀತ್ಯಾ ಪರಮಯಾ ಸ್ವಯಮ್ ॥

105) **ಸ. ಸಂ. :–** ಎಲ್ಲೆಲ್ಲಿಯೂ ವಾಸಮಾಡುವವನು ; ಜ್ಞಾನವನ್ನು ಉಂಟುಮಾಡುವವನು.

* * *

105) **ವಸುಮನಾಃ** = ಪ್ರಶಸ್ತಧನರೂಪವಾದ ಮನಸ್ಸುಳ್ಳವನು ; ವೇದ, ಜ್ಞಾನ, ಪರಮಾತ್ಮ–ಮುಂತಾದುವು ಪ್ರಶಸ್ತವಾದ ಧನಗಳು. **ವೇದಾ ಯೇ ನಃ ಪರಂ ಧನಮ್ । ಋಚಃ ಸಾಮಾನಿ ಯಜೂಗ್ಂಷಿ । ಸಾ ಹಿ ಶ್ರೀರಮೃತಾ ಸತಾಮ್ ।** (ಶ್ರುತಿಃ)

ಶಂ. ಭಾ. :– ಪ್ರಶಸ್ತವಾದ ಮನಸ್ಸುಳ್ಳವನು. (ಧನವಾಚಕವಾದ ವಸುಶಬ್ದವು ಪ್ರಾಶಸ್ತ್ಯವನ್ನು ಹೇಳುತ್ತದೆ.)

106) **ಪ. ಭ. :–** ನಿಧಿಯಲ್ಲಿ ಹೇಗೋ ಹಾಗೆ ಭಕ್ತರಲ್ಲಿ ಮನಸ್ಸುಳ್ಳವನು. **ಸ ಮಹಾತ್ಮಾ ಸದುರ್ಲಭಃ** (ಗೀತಾ. ೭-೧೯)

ನಿರುಕ್ತಿ :– ವಸುನೀವ ನಿಧೌ ತೇಷು ಮನೋ ಯಸ್ಯಾಸ್ತಿ ಸರ್ವದಾ ।
ಸರ್ವೈರ್ವಸುಮನಾಃ ಪ್ರೋಕ್ತಃ ಮಾತೃವತ್ತೋಷಕೋ ಮನುಃ॥

106) **ಸ. ಸಂ. :–** ಭಕ್ತರು ಸಮರ್ಪಿಸಿದ ನೀರಿನಲ್ಲಿ ದ್ರವ್ಯದಲ್ಲಿ ಅಥವಾ ಸ್ಯಮಂತಕಮಣಿಯಲ್ಲಿ ಮನಸ್ಸುಳ್ಳವನು.

* * *

106) **ಸತ್ಯಃ** = ಅವಿಕಾರಿಯು ; ಮರ್ತ್ಯ-ಅಮರ್ತ್ಯಗಳಿಗೆ ಸೇತುವೆಯಾಗಿರುವವನು.

ಶಂ. ಭಾ. :– ಸತ್ಯಸ್ವರೂಪನಾದ ಪರಮಾತ್ಮನು ; **ಸತ್ಯಂ ಜ್ಞಾನಮನನ್ತಂ ಬ್ರಹ್ಮ** (ತೈ. ೨-೧) ಪ್ರಾಣ ಅನ್ನ ಮತ್ತು ಆದಿತ್ಯರೂಪನಾದವನು ; **ಸದಿತಿ ಪ್ರಾಣಾಸ್ತೀತ್ಯನ್ನಂ ಯಮಿತ್ಯಸಾವಾದಿತ್ಯಃ** (ಐ. ಆ. ೨-೧-೫-೬)

107) **ಪ. ಭ. :–** ಸತ್ಪುರುಷರಲ್ಲಿ ಸಾಧುವಾದವನು.

ನಿರುಕ್ತಿ : ಸತ್ಸು ಸಾಧುಃ ಸತ್ಯ ಇತಿ ।

107) **ಸ. ಸಂ. :–** ಸದ್ಭಾವವನ್ನು ಹೊಂದಿಸುವವನು. **ಸದ್ಭಾವಂ ಯಾಪಯೇದ್ಯಸ್ಮಾತ್ಸತ್ಯಂ ತತ್ತೇನ ಕಥ್ಯತೇ ॥**

* * *

107) **ಸಮಾತ್ಮಾ** = ವಿಷಯವಾದ ವಸ್ತುಗಳಲ್ಲಿ ಸಮನಾಗಿರುವ ಏಕ ವಸ್ತುವು. ಸರ್ವಭೂತಗಳಲ್ಲಿಯೂ ಸಮನಾದ ಸ್ವರೂಪ, ಸ್ವಭಾವ ಮತ್ತು ಮನಸ್ಸುಗಳುಳ್ಳವನು. **ಸಮೋಽಹಂ ಸರ್ವಭೂತೇಷು** (ಗೀತಾ ೯-೨೯)

ಶಂ. ಭಾ. :– ರಾಗ-ದ್ವೇಷಾದಿಗಳಿಂದ ದೂಷಿತವಲ್ಲದ ಸಮನಾದ ಮನಸ್ಸುಳ್ಳವನು ; ಸರ್ವಭೂತಗಳಲ್ಲಿಯೂ ಸಮ (ಏಕ)ವಾಗಿರುವ ಆತ್ಮವು. **ಸಮ ಆತ್ಮೇತಿ ವಿದ್ಯಾತ್ ।** (ಕೌಷೀ. ೩-೫)

108) **ಪ. ಭ. :–** ಭಕ್ತರ ಗುಣಗಳ ವ್ಯತ್ಯಾಸವನ್ನು ಗಮನಿಸದೇ ಅವರಲ್ಲಿ ಸಮನಾದ ಮನಸ್ಸುಳ್ಳವನು.
ನಿರುಕ್ತಿ :– **ಸಮಾತ್ಮಾ ಸಮಚಿತ್ತತಃ ॥**

108) **ಸ. ಸಂ. :–** ಲಕ್ಷ್ಮೀ ಮತ್ತು ಚತುರ್ಮುಖರಿಂದ ಕೂಡಿದವನು ; ಸಾರಭೂತನಾದವನು ; ರಮಾದೇವಿಗೆ ಆತ್ಮನಾದವನು ; ರಮಾದೇವಿಯ ಮನಸ್ಸು ಯಾವನಲ್ಲಿದೆಯೋ–ಅವನು ; ಜ್ಞಾನಿಗಳಿಗೆ ಆತ್ಮನಾದವನು.

* * *

108) **ಸಂಮಿತಃ ಅಥವಾ ಅಸಂಮಿತಃ** =ಎಲ್ಲವನ್ನೂ ಚೆನ್ನಾಗಿ ಅಳೆದವನು ; ಪರಿಮಿತನಾಗಿರುವಂತೆ ಕಾಣುವವನು.

ಶಂ. ಭಾ. :– ಸಂಮಿತಃ = (ಪಾರಮಾರ್ಥಿಕವಾಗಿ) ಪರಿಮಿತಿಯಿಲ್ಲದವನು ; ಪರಿಚ್ಛೇದರಹಿತನು. ಪ್ರಮಾಣಗಳಿಗೆ ನಿಲುಕದವನು ; ಎಲ್ಲ ಪದಾರ್ಥಗಳಿಂದಲೂ ಬೇರೆಯಾಗಿರುವವನು ; **ಅಸಂಮಿತಃ** = ಎಲ್ಲ ಪದಾರ್ಥಗಳಿಂದಲೂ ಅವಿಚ್ಛಿನ್ನನಾದವನು ; ಪರಿಚ್ಛೇದವಿಲ್ಲದವನು.

109) **ಪ. ಭ. :– ಸಂಮಿತಃ** = ಭಕ್ತರಿಂದ 'ನಮ್ಮ ಕೈಯ್ಯಲ್ಲೇ ಇದ್ದಾನೆ'–ಎಂಬುದಾಗಿ ಚೆನ್ನಾಗಿ ಅಳೆಯಲ್ಪಟ್ಟವನು.
ನಿರುಕ್ತಿ :– **ಮಿತತ್ವಾಚ್ಚ ತಥಾ ಭಕ್ತೈಃ ಸಂಮಿತಃ ಪರಿಕೀರ್ತಿತಃ ॥**

109) **ಸ. ಸಂ. :– ಸಂಮಿತಃ** = ಪ್ರಮಾಣಗಳಿಂದ ಚೆನ್ನಾಗಿ ಅಳೆಯಲ್ಪಟ್ಟವನು ಅಥವಾ ಮೂರು ಲೋಕಗಳನ್ನೂ ಚೆನ್ನಾಗಿ ಅಳೆದವನು.

ಮಿತಜಗತ್ತ್ರಿತಯಾಯ ಜಿತಾರಯೇ । ಅಸಂಮಿತಃ = ಚೆನ್ನಾಗಿ ಅಳೆಯಲಾಗದವನು.

* * *

109) ಸಮಃ = ವಿಷಮಗಳಲ್ಲಿ ಸಮವಾಗಿರುವವನು ; ಪಕ್ಷಪಾತವಿಲ್ಲದವನು.

ಶಂ. ಭಾ. :– ಎಲ್ಲ ಕಾಲಗಳಲ್ಲಿಯೂ ವಿಕಾರರಹಿತನಾದವನು ; ಲಕ್ಷ್ಮೀಸಮೇತನಾದವನು.

110) ಪ. ಭ. :– ಪರಿಚಿತ, ಅಪರಿಚಿತ, ತೀವ್ರ, ಮಂದ–ಮುಂತಾದ ಭೇದಗಳನ್ನು ಗಮನಿಸದೇ ಭಕ್ತರಲ್ಲಿ ಸಮವಾದ ಗೌರವವುಳ್ಳವನು.
ನಿರುಕ್ತಿ :– ಜ್ಞಾತೇಽಪರಿಚಿತೇ ಚಾಪಿ ಸಮತ್ವಾತ್ಸಮ ಉಚ್ಯತೇ ।

110) ಸ. ಸಂ. :– ಎಲ್ಲೆಡೆಗಳಲ್ಲಿಯೂ ಎಲ್ಲ ರೂಪಗಳಲ್ಲಿಯೂ ಸಮವಾಗಿರುವವನು ; ಅವರವರಿಗೆ ಯೋಗ್ಯವಾದ ಫಲಗಳನ್ನು ಕೊಡುವುದರಿಂದ ಸಮನು.

* * *

110) ಅಮೋಘಃ = ವ್ಯರ್ಥವಾಗದವನು. ಸಾರ್ಥಕವೇ ಆದವನು ; ಸಾರ್ಥಕವೇ ಆದ ಸಂಕಲ್ಪ-ಕಾಮ-ಗುಣಾದಿಗಳುಳ್ಳವನು. ಸತ್ಯಕಾಮಃ ಸತ್ಯಸಂಕಲ್ಪಃ (ಛಾಂ. ೮-೭-೧)

ಶಂ. ಭಾ. :– ಪೂಜೆ ಸ್ತುತಿ ಮತ್ತು ಸ್ಮರಣೆಗಳನ್ನು ಮಾಡಿದರೆ ವ್ಯರ್ಥಪಡಿಸದೇ ಸಂಪೂರ್ಣಫಲವನ್ನು ಕೊಡುವವನು ; ಸತ್ಯಸಂಕಲ್ಪನಾದವನು.

111) ಪ. ಭ. :– ವ್ಯರ್ಥವಲ್ಲದ ಸ್ಪರ್ಶವುಳ್ಳವನು. ಅಮೋಘಂ ದರ್ಶನಂ ರಾಮ ನ ಚ ಮೋಘಸ್ತವ ಸ್ತವಃ । ಅಮೋಘಾಸ್ತೇ ಭವಿಷ್ಯನ್ತಿ ಭಕ್ತಿಮನ್ತಶ್ಚ ಯೇ ನರಾಃ ॥ (ರಾ. ಯು. ೧೨೦-೩೧)
ನಿರುಕ್ತಿ :– ವಿತಥಸ್ಪರ್ಶರಹಿತಃ ಸ ಹ್ಯಮೋಘಃ ಪ್ರಕೀರ್ತಿತಃ ॥

111) ಸ. ಸಂ. :– ವ್ಯರ್ಥವಾಗದ ಜಗತ್ಸೃಷ್ಟಿ ಮುಂತಾದುವುಗಳುಳ್ಳವನು. ಯಚ್ಚಿಕೇತ ಸತ್ಯಮಿತ್ತಂ ನ ಮೋಘಮ್ । (ಶ್ರುತಿಃ)

* * *

111) **ಪುಣ್ಡರೀಕಾಕ್ಷಃ** = ಕಮಲದಂತೆ ಕಣ್ಣುಗಳುಳ್ಳವನು ; ಹೃದಯ ಕಮಲವನ್ನೇ ಕೇಂದ್ರವನ್ನಾಗಿ ಉಳ್ಳವನು ; ಹೃದಯಗುಹೆಯಲ್ಲಿ ವಾಸ ಮಾಡುವವನು ; ಪುರುಷರ ಹೃದಯದ ದರಿಯಲ್ಲಿ (ಗುಹೆಯಲ್ಲಿ) ಇರುವವನು. **ಯತ್ಪುಣ್ಡರೀಕಂ ಪುರಮಧ್ಯಸಗ್ಂ ಸ್ಥಂ ।**

(ತೈ. ನಾ.೧೨-೨೮)

ಶಂ. ಭಾ. :– ಹೃದಯಪುಂಡರೀಕವನ್ನು ವ್ಯಾಪಿಸಿರುವವನು ; ಕಮಲಾಕಾರದ ಎರಡು ಕಣ್ಣುಗಳುಳ್ಳವನು.

112) **ಪ. ಭ. :–** ನಿತ್ಯವೈಕುಂಠವಾಸಿಗಳಿಗೆ ದೃಷ್ಟಿಭೂತನಾಗಿರುವವನು. **ದಿವೀವಚಕ್ಷುರಾತತಂ (ಶ್ರುತಿಃ)**

ನಿರುಕ್ತಿ :– ಪುಣ್ಡರೀಕಂ ಪರಂ ಧಾಮ ನಿತ್ಯಮಕ್ಷರಮವ್ಯಯಮ್ ।
ತದ್ಗತಾನಾಮಕ್ಷಿಭೂತಃ ಪುಣ್ಡರೀಕಾಕ್ಷ ಈರಿತಃ ॥

112) **ಸ. ಸಂ. :–** ಕಮಲದಂತೆ ಕಣ್ಣುಗಳುಳ್ಳವನು ; ಪುಂಡರೀಕವನ್ನೇ (ಅಗ್ನಿಯನ್ನೇ) ಮೂರನೆಯ ಕಣ್ಣನ್ನಾಗಿ ಹೊಂದಿರುವ ನರಸಿಂಹನು ; ಪುಂಡರೀಕನೆಂಬ ಮುನಿಯಲ್ಲಿ ಕೃಪಾದೃಷ್ಟಿಯುಳ್ಳವನು.

* * *

112) **ವೃಷಕರ್ಮಾ** = ಧರ್ಮರೂಪವಾದ ಕರ್ಮಗಳುಳ್ಳವನು.

ಶಂ. ಭಾ. :– ಧರ್ಮಲಕ್ಷಣವುಳ್ಳ ಕರ್ಮಗಳುಳ್ಳವನು.

113) **ಪ. ಭ. :–** ಶ್ರೇಯಸ್ಕರವಾದ ಧರ್ಮರೂಪವಾದ ಕರ್ಮಗಳುಳ್ಳವನು.

ನಿರುಕ್ತಿ :– ಶ್ರೇಯಸ್ಕರಂ ಧರ್ಮರೂಪಂ ಕರ್ಮ ಯಸ್ಯ ಪ್ರಚಕ್ಷತೇ ।
ವೃಷಕರ್ಮೇತಿ ವಿಖ್ಯಾತಃ ಶುಭಕರ್ಮಪ್ರದೋ ಮನುಃ ॥

113) **ಸ. ಸಂ. :–** ಪುಣ್ಯಕರ್ಮವುಳ್ಳವನು. **ಪುಣ್ಯಶ್ರೇಯಸೀ ಸುಕೃತಂ ವೃಷಃ ॥** ಅಥವಾ (ಮದಿಸಿದ) ಗೂಳಿಗಳಿಗೆ ಮೂಗುದಾರವನ್ನು ಹಾಕಿದವನು. **ಬದ್ಧ್ವಾ ತಾನ್ದಾಮಭಿಃ ಶೌರಿಃ ಭಗ್ನವೀರ್ಯಾನ್ಸ್ವತೌಜಸಃ । ಅಕರ್ಷಲ್ಲೀಲಯಾ ಬದ್ಧಾಧ್ನಾಲೋ ದಾರುಮಯಾನ್ಯಥಾ ॥** (ಭಾಗವತ)

* * *

113) **ವೃಷಾಕೃತಿಃ** = ಧರ್ಮಮೂರ್ತಿಯು. **ರಾಮೋ ವಿಗ್ರಹವಾನ್ಧರ್ಮಃ**(ರಾಮಾಯಣ.)

ಶಂ. ಭಾ. :– ಧರ್ಮಕ್ಕೋಸ್ಕರವಾಗಿ ಶರೀರವನ್ನು ಧರಿಸುವವನು.
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥
(ಗೀತಾ ೪-೮)

114) **ಪ. ಭ. :–** (ತಾಪತ್ರಯಗಳನ್ನು ಹೋಗಲಾಡಿಸುವ ಅಮೃತ ವರ್ಷಣದಂತೆ ಶೀತಲವಾದ ವ್ಯಾಪಾರವುಳ್ಳ ಸುಂದರರೂಪವನ್ನು ಹೊಂದಿರುವುದರಿಂದ) ಧರ್ಮರೂಪವಾದ ಆಕಾರವುಳ್ಳವನು.

ನಿರುಕ್ತಿ :– **ಧರ್ಮರೂಪಾಕೃತಿರ್ಯಸ್ಯ ಸ ವೃಷಾಕೃತಿರುಚ್ಯತೇ ।**
ತಾಪತ್ರಯಾಗ್ನಿದಗ್ಧಾನಾಂ ಸುಧೇವಾತ್ಯನ್ತ ಶೀತಲಮ್ ।
ರೂಪಂ ಕರ್ಮ ಚ ಯಸ್ಯಾಸ್ತಿ ವೃಷಕರ್ಮಾ ವೃಷಾಕೃತಿಃ ॥

114) **ಸ. ಸಂ. :–** ವೃಷದಂತೆ (ಗೂಳಿಯಂತೆ) ಪುಷ್ಟವಾದ ಆಕೃತಿಯುಳ್ಳವನು.

* * *

ರುದ್ರೋ ಬಹುಶಿರಾ ಬಭ್ರುರ್ವಿಶ್ವಯೋನಿಃ ಶುಚಿಶ್ರವಾಃ ।
ಅಮೃತಃ ಶಾಶ್ವತಃ ಸ್ಥಾಣುರ್ವರಾರೋಹೋ ಮಹಾತಪಾಃ ॥೨೬॥

114) **ರುದ್ರಃ** = ಪ್ರಳಯಸಂಹಾರಕಾಲದಲ್ಲಿ ಎಲ್ಲ ಪ್ರಾಣಿಗಳೂ ಅಳುವಂತೆ ಮಾಡುವವನು. ದುಷ್ಟಭೀಕರನು. ದುಷ್ಟರನ್ನು ಅಳಿಸುವವನು.

ತಂದೆಯಾದ ಪ್ರಜಾಪತಿಯ ಮೇಲೆ ಬಾಣವನ್ನು ಪ್ರಯೋಗಿಸಿ ರೋದನಮಾಡಿದ ರುದ್ರಸ್ವರೂಪನು. **ಸೋರೋದೀದ್ಯದರೋದೀತ್ತದ್ರುದ್ರಸ್ಯ ರುದ್ರತ್ವಂ** (ತೈ. ಸಂ.)

ಶಂ. ಭಾ. :– ಪ್ರಳಯಕಾಲದಲ್ಲಿ ಪ್ರಜೆಗಳನ್ನು ಸಂಹರಿಸಿ ಅಳುವಂತೆ ಮಾಡುವವನು ; ವಾಣಿಯನ್ನು ಅನುಗ್ರಹಿಸುವವನು ; ಅಳಿಸುವವನು ಅಥವಾ ಓಡಿಸುವವನು.

ರುರ್ದುಃಖಂ ದುಃಖಹೇತುಂ ವಾ ವಿದ್ರಾವಯತಿ ಸ ಪ್ರಭುಃ I
ರುದ್ರ ಇತ್ಯುಚ್ಯತೇ ತಸ್ಮಾಚ್ಛಿವಃ ಪರಮಕಾರಣಮ್ II

(ಸಂಹಿತಾ ೬-೯-೧೪)

115) **ಪ. ಭ. :–** (ತನ್ನ ದಿವ್ಯಚೇಷ್ಟಿತಗಳಿಂದ ಕರಗಿದ ಹೃದಯವುಳ್ಳ ಭಕ್ತರು) ಆನಂದಬಾಷ್ಪಗಳನ್ನು ಸುರಿಸುತ್ತಾ ಅಳುವಂತೆ ಮಾಡುವವನು.

ಆಹ್ಲಾದಶೀತನೇತ್ರಾಮ್ಬುಃ ಪುಲಕೀಕೃತಗಾತ್ರವಾನ್ I
ಸದಾ ಪರಗುಣಾವಿಷ್ಟೋ ದ್ರಷ್ಟವ್ಯಃ ಸರ್ವದೇಹಿಭಿಃII (ವಿ.ತ.)

ನಿರುಕ್ತಿ :– **ಈದೃಗ್ರೂಪೈಶ್ಚೇಷ್ಟಿತೈಶ್ಚ ಭಕ್ತಾನಾನನ್ದಬಾಷ್ಪಯನ್ I**
ರೋದಯನ್ರುದ್ರ ಉದ್ದಿಷ್ಟಃ ಸರ್ವಸನ್ತೋಷದೋ ಮನುಃ II

115) **ಸ. ಸಂ. :–**ರೋಗವನ್ನು ಓಡಿಸುವವನು ; **ರುಜಂ ದ್ರಾವಯತೇ ಯಸ್ಮಾದ್ರುದ್ರಸ್ತಸ್ಮಾಜ್ಜನಾರ್ದನಃ I** ಅಥವಾ ಅಳಿಸುವವನು ; (ಭೇರೀ ಮುಂತಾದುವುಗಳ) ಶಬ್ದವನ್ನು ಮಾಡುವವನು ; ಭಕ್ತರು ಮಾಡಿದ ಸ್ತುತಿಶಬ್ದದಿಂದ ರಮಿಸುವವನು.

* * *

115) **ಬಹುಶಿರಾಃ** = ಸಾವಿರಾರು ತಲೆಗಳುಳ್ಳವನು.

ಶಂ. ಭಾ. :– ಬಹುಶಿರಸ್ಸುಗಳುಳ್ಳವನು.

116) **ಪ. ಭ. :–** ಅನಂತರೂಪಿಯಾಗಿ ಸಾವಿರಾರು ಶಿರಸ್ಸು (ಹೆಡೆ) ಗಳುಳ್ಳವನು.

ನಿರುಕ್ತಿ :– **ಫಣಾಶ್ಚ ಬಹವೋ ಯಸ್ಯ ಸ ವೈ ಬಹುಶಿರಾ ಮತಃ II**

116) **ಸ. ಸಂ. :–** ಬಹಳ ಶಿರಸ್ಸುಗಳುಳ್ಳವನು. ಬಹಳ ಸಿರೆಗಳಲ್ಲಿ (ನಾಡಿಗಳಲ್ಲಿ) ವಾಸಮಾಡುವವನು.

* * *

116) **ಬಭ್ರುಃ** = ಬಾಲಸೂರ್ಯನ ಬಣ್ಣವುಳ್ಳವನು ; ಅಗ್ನಿಸ್ವರೂಪಿಯು ; ಈಶ್ವರರೂಪಿಯು.

ಶಂ. ಭಾ. :– ಲೋಕಗಳನ್ನು ಭರಿಸುವವನು.

117) **ಪ. ಭ. :–** ಅನಂತರೂಪನಾಗಿ ಪೃಥ್ವಿಯನ್ನು ಭರಿಸುವವನು.

ಯಸ್ಯ ಸಾ ಸಕಲಾ ಪೃಥ್ವೀ ಫಣಾಮಣಿಶಿಲಾರುಣಾ ।
ಬಿಭರ್ತಿ ಮಾಲಾಂ ಲೋಕಾನಾಂ....

ನಿರುಕ್ತಿ :– ಅನನ್ತರೂಪೋ ಯೋ ಧತ್ತೇ ಪೃಥ್ವೀಂ ಬಭ್ರುಃ ಸ ಈರಿತಃ ॥

117) **ಸ. ಸಂ. :–** ಜಗತ್ತನ್ನು ಭರಿಸುವವನು.

* * *

117) **ವಿಶ್ವಯೋನಿಃ** = ವಿಶ್ವಕ್ಕೆ ಕಾರಣನಾದವನು ; ಬ್ರಹ್ಮಸ್ವರೂಪನು.

ಶಂ. ಭಾ. :– ವಿಶ್ವಕ್ಕೆ ಕಾರಣನಾದವನು.

118) **ಪ. ಭ. :–** ವಿಶ್ವ (ಎಲ್ಲ) ಭಕ್ತರನ್ನೂ ತನ್ನೊಡನೆ ಬೆರೆಸಿಕೊಳ್ಳುವವನು.

ನಿರುಕ್ತಿ :– ವಿಶ್ವೇಷಾಂ ಭೇಜುಷಾಂ ಸ್ವೇನ ವಿಶ್ವಯೋನಿಸ್ತು ಮಿಶ್ರಣಾತ್॥

118) **ಸ. ಸಂ. :–** ವಿಶ್ವವನ್ನು ಸ್ಥಾನವನ್ನಾಗಿ ಹೊಂದಿರುವವನು ; ವಿಶ್ವಕ್ಕೆ (ವಾಯುವಿಗೆ) ಕಾರಣನಾದವನು. **ಯೋನಿರ್ಭಾರ್ಯಾ ತಯಾ ಸ್ಥಾನಂ ಯೋನಿಃ ಕಾರಣಮೇವ ಚ ॥** (ಗೀತಾತಾತ್ಪರ್ಯ)

* * *

118) **ಶುಚಿಶ್ರವಾಃ** = ಶುದ್ಧವಾದ ಕೀರ್ತಿಯುಳ್ಳವನು ; ಶುದ್ಧವೂ ಶ್ರವಣಮಂಗಳವೂ ಆದ ನಾಮಾದಿಗಳುಳ್ಳವನು.

ಶಂ. ಭಾ. :– ಪವಿತ್ರವಾದ ಮತ್ತು ಶ್ರವಣಮಾಡಲು ಯೋಗ್ಯವಾದ ನಾಮಗಳುಳ್ಳವನು.

119) **ಪ. ಭ. :–** ಭಕ್ತರು ಹೇಳಿದ ಶುದ್ಧವಾದ ಮಾತುಗಳನ್ನು ಅವಶ್ಯವಾಗಿ ಕೇಳುವವನು.

ಶುಚೀನಿ ಶ್ರವಣೀಯಾನಿ ಶೃಣೋಮೀಹ ಧನಂಜಯ ।
ನ ಚ ಪಾಪಾನಿ ಗೃಹ್ಣಾಮಿ ತತೋಽಹಂ ವೈ ಶುಚಿಶ್ರವಾಃ ॥

(ಮ. ಭಾ. ಮೋಕ್ಷ ೩೪೨-೯೧)

ನಿರುಕ್ತಿ :– ಭಕ್ತೈರುಕ್ತಾನ್ಯವಶ್ಯಂ ಯಃ ಶೃಣೋತಿ ಸ ಶುಚಿಶ್ರವಾಃ ॥

119) **ಸ. ಸಂ. :–** ಶುದ್ಧವಾದ ಕೀರ್ತಿಯುಳ್ಳವನು ; ಪವಿತ್ರತೆಯನ್ನು ಉಂಟುಮಾಡುವ ವಿದ್ಯೆಯುಳ್ಳವನು ; ಕೇಳಲು ಯೋಗ್ಯವಾದುದನ್ನು ಕೇಳುವವನು.

* * *

119) **ಅಮೃತಃ** = ಅಳಿವಿಲ್ಲದವನು ; ನಿತ್ಯನು ; ಆನಂದಸ್ವರೂಪನು. **ಶಾನ್ತಿಸಮೃದ್ಧಮಮೃತಂ (ತೈ. ಉ.)**

ಶಂ. ಭಾ. :– ಮರಣವಿಲ್ಲದವನು. **ಅಜರೋಽಮರಃ**

(ಬೃ. ೪-೪-೧೫)

120) **ಪ. ಭ. :–** ಜರಾ-ಮೃತ್ಯುಗಳನ್ನು ನಿವಾರಿಸುವವನು ; (ಸದಾ ನಿರತಿಶಯಮಾಧುರ್ಯವುಳ್ಳವನು.) ಯಾವನನ್ನು ಎಷ್ಟು ಸೇವಿಸಿದರೂ ತೃಪ್ತಿಯುಂಟಾಗುವುದಿಲ್ಲವೋ–ಅವನು. **ಅಮೃತಸ್ಯೇವ ನಾತೃಪ್ಯನ್ಪ್ರೇಕ್ಷ ಮಾಣಾ ಜನಾರ್ದನಮ್ ॥**

ನಿರುಕ್ತಿ :– ಜರಾಮೃತ್ಯೋರ್ವಾರಣೇನ ಹ್ಯತೃಪ್ತೇರ್ವಾಪಿ ಸೇವನಾತ್ ।
ಅಮೃತಃ ಸ್ಯಾನ್ನಿರತಿಶಯಮಾಧುರ್ಯೇಣ ಚ ಸರ್ವದಾ ॥

120) **ಸ. ಸಂ. :–**ಅಮೃತವನ್ನು (ಅನಂತಾಸನವನ್ನು) ಆಧಾರವನ್ನಾಗಿ ಹೊಂದಿರುವವನು ; ನಿತ್ಯಧಾರಕನು. **ಬ್ರಹ್ಮಪೂರ್ಣಗುಣತ್ವಾಚ್ಚ ನಿತ್ಯತ್ವಾದಮೃತಂ ತಥಾ (ಐತರೇಯಭಾಷ್ಯ).** ಅಪರಿಮಿತವಾದ ಶಾಸ್ತ್ರ ಗಳಿಗೆ ಆಧಾರನಾದವನು.

* * *

120) **ಶಾಶ್ವತಸ್ಥಾಣುಃ :** ನಿತ್ಯನೂ, ಸ್ಥಿರನೂ ಆಗಿರುವವನು. **ಪುರುಷಂ ಶಾಶ್ವತಂ ದಿವ್ಯಂ । ವೃಕ್ಷ ಇವ ಸ್ತಬ್ಧೋ ದಿವಿ ತಿಷ್ಠತಿ ।**

(ಮಹಾನಾರಾಯಣ)

ಶಂ. ಭಾ. :– ನಿತ್ಯನೂ, ಸ್ಥಿರನೂ ಆಗಿರುವವನು.

121) ಪ. ಭ. :– ನಿತ್ಯನಾಗಿ (ಪುನರಾವೃತ್ತಿಯಿಲ್ಲದ ಮುಕ್ತಾತ್ಮರಿಗೆ ನಿತ್ಯಭೋಗ್ಯನಾಗಿ) ಸ್ಥಿರನಾಗಿರುವವನು.

ನಿರುಕ್ತಿ :– **ಭೋಗ್ಯೋ ಹ್ಯಪುನರಾವೃತ್ತ್ಯಾ ಭೋಕ್ತೃಭ್ಯೋ ರೋಚತೇ ಯತಃ ।**
ಸ್ವಯಂ ನಿತ್ಯಃ ಸದಾ ಯೋಽಸೌ ಶಾಶ್ವತಸ್ಥಾಣುರುಚ್ಯತೇ ॥

121) ಸ. ಸಂ. :– ನಿತ್ಯನೂ, ಮುಕ್ತರಿಗೆ ಸ್ವಾಮಿಯೂ ಮತ್ತು ಸ್ಥಾಣುವೂ ಆಗಿರುವವನು.

* * *

121) **ವರಾರೋಹಃ** = ಶ್ರೇಷ್ಠವಾದ ಆರೋಹಣವುಳ್ಳವನು ; ಶ್ರೇಷ್ಠವಾದ ವಾಹನವುಳ್ಳವನು ; ಶ್ರೇಷ್ಠವಾದ ತೊಡೆಗಳುಳ್ಳವನು.

ಶಂ. ಭಾ. :– ಶ್ರೇಷ್ಠವಾದ ತೊಡೆಗಳುಳ್ಳವನು ; ಶ್ರೇಷ್ಠವಾದ ಆರೋಹಣವುಳ್ಳವನು. (ಅವನ ಸ್ಥಾನಕ್ಕೆ ಹತ್ತಿದವರಿಗೆ ಪುನರಾವೃತ್ತಿಯಿಲ್ಲ.) **ನ ಚ ಪುನರಾವರ್ತತೇ** (ಛಾಂ. ೮-೧೫-೧) **ಯದ್ಗತ್ವಾ ನ ನಿವರ್ತನ್ತೇ ತದ್ಧಾಮ ಪರಮಂ ಮಮ ।** (ಗೀತಾ ೧೫-೬)

122) ಪ. ಭ. :– ತನ್ನ ಪ್ರಾಪ್ತಿಯೆಂಬ ಶ್ರೇಷ್ಠವಾದ ಆರೋಹಣವುಳ್ಳವನು.

ನಿರುಕ್ತಿ :– **ವರಮುತ್ಕೃಷ್ಟಮಾರೋಹೋ ಯಸ್ಯ ಸ್ವಪ್ರಾಪ್ತಿಲಕ್ಷಣಃ ।**
ವರ್ತತೇ ಸ ವರಾರೋಹಃ ಪ್ರಕೃಷ್ಟಸ್ಥಾನದೋ ಮನುಃ ॥

122) ಸ. ಸಂ. :– ಶ್ರೇಷ್ಠವಾದ ವಾಹನ ಅಥವಾ ತೊಡೆಗಳುಳ್ಳವನು.

* * *

122) **ಮಹಾತಪಾಃ** = ಶ್ರೇಷ್ಠವಾದ ತಪಸ್ಸುಳ್ಳವನು ; ತೀವ್ರವಾದ ತಪಸ್ಸನ್ನು ಆಚರಿಸಿದ ನಾರಾಯಣಮಹರ್ಷಿಯು.

ಶಂ. ಭಾ. :– ಸೃಷ್ಟಿವಿಷಯಕವಾದ ಮಹತ್ತಾದ ಜ್ಞಾನವುಳ್ಳವನು ; ಮಹತ್ತಾದ ಐಶ್ವರ್ಯವುಳ್ಳವನು ; ಪ್ರತಾಪರೂಪವಾದ ತಪಸ್ಸುಳ್ಳವನು.

ಯಸ್ಯ ಜ್ಞಾನಮಯಂ ತಪಃ (ಮು. ೧-೧-೯) ತಪ–ಆಲೋಚನೇ ಎಂಬ ಧಾತುವಿನಿಂದ ನಿಷ್ಪನ್ನವಾದ ತಪಃಶಬ್ದಕ್ಕೆ ಆಲೋಚನೆ ಎಂಬ ಅರ್ಥ.

123) **ಪ. ಭ. :–** ಪೂಜ್ಯನಾದ ಜ್ಞಾನವುಳ್ಳವನು ; ಸಂಕರ್ಷಣ ಸ್ವರೂಪಿಯು ; ಜ್ಞಾನ ಮತ್ತು ಬಲಗಳು ಸಂಕರ್ಷಣನ ಗುಣಗಳು.
ನಿರುಕ್ತಿ : **ಮಹತ್ಪೂಜ್ಯಂ ತಪೋಜ್ಞಾನಂ ಯಸ್ಯೇತಿ ಸ ಮಹಾತಪಾಃ**

123) **ಸ. ಸಂ. :–** ಮಹತ್ತಾದ ಜ್ಞಾನವುಳ್ಳವನು ; ಕಪಿಲಾದಿಗಳ ರೂಪದಲ್ಲಿ ಮಹಾತಪಸ್ಸನ್ನು ಆಚರಿಸುವವನು.

* * *

ಸರ್ವಗಃ ಸರ್ವವಿದ್ಭಾನುರ್ವಿಷ್ವಕ್ಸೇನೋ ಜನಾರ್ದನಃ ।
ವೇದೋ ವೇದವಿದವ್ಯಙ್ಗೋ ವೇದಾಙ್ಗೋ ವೇದವಿತ್ಕವಿಃ ॥೨೭॥

123) **ಸರ್ವಗಃ** = ಸರ್ವವ್ಯಾಪಿಯು ; ಸರ್ವಜ್ಞನು.

ಶಂ. ಭಾ. :– ಕಾರಣರೂಪದಿಂದ ಎಲ್ಲವನ್ನೂ ವ್ಯಾಪಿಸಿರುವವನು.

124) **ಪ. ಭ. :–** ಧಾರಣಸಾಮರ್ಥ್ಯರೂಪವಾದ ಬಲದಿಂದ ಸಂಹಾರ ಮಾಡಲ್ಪಟ್ಟ ಸರ್ವಜೀವಿಗಳನ್ನೂ ಆತ್ಮದಂತೆ ಧರಿಸಿಕೊಂಡು ಹೋಗುವವನು; ಎಲ್ಲವನ್ನೂ ಎಳೆದುಕೊಂಡು ಹೋಗುವ ಸಂಕರ್ಷಣಸ್ವರೂಪನು.
ನಿರುಕ್ತಿ :– **ಧಾರಯನ್ಸಂಹೃತಾನ್ಸರ್ವಾನ್ಗಚ್ಛತೀತಿ ಸ ಸರ್ವಗಃ ॥**

124) **ಸ. ಸಂ. :–** ಎಲ್ಲೆಲ್ಲಿಯೂ ಹೋಗುವವನು ; ಎಲ್ಲವನ್ನೂ ಅರಿತವನು.

* * *

124) **ಸರ್ವವಿದ್ಭಾನುಃ** = ಎಲ್ಲವನ್ನೂ ಅರಿತವನು ; ಎಲ್ಲವನ್ನೂ ಪಡೆದವನು.

ಶಂ. ಭಾ. :– ಸೂರ್ಯರೂಪಿಯು ; ಸ್ವಯಂಪ್ರಕಾಶನು. ಎಲ್ಲವನ್ನೂ ತಿಳಿದವನು ; ಎಲ್ಲವನ್ನೂ ಪಡೆದವನು ಮತ್ತು ಪ್ರಕಾಶಿಸುವವನು. **ತಮೇವ ಭಾನ್ತಮನುಭಾತಿ ಸರ್ವಂ (ಕಠ-೨-೨-೧೫) ಯದಾದಿತ್ಯಗತಂ ತೇಜೋ ಜಗದ್ಭಾಸಯತೇಽಖಿಲಮ್** (ಗೀತಾ ೧೫-೧೨)

125) **ಪ. ಭ. :– ಸರ್ವವಿತ್** = (ಸಂಹರಿಸಲ್ಪಟ್ಟ ಜೀವಗಳನ್ನು

ಸೃಷ್ಟಿಸುವ ಇಚ್ಛೆಯುಳ್ಳವನಾಗಿ) ಎಲ್ಲ ಕಾರ್ಯಗಳನ್ನೂ ಸೃಷ್ಟಿಯಿಂದ ಪಡೆದವನು ; ಪ್ರದ್ಯುಮ್ನಸ್ವರೂಪಿಯು. (ವಾಸುದೇವನು ಜ್ಞಾನ, ಬಲ, ಐಶ್ವರ್ಯ, ವೀರ್ಯ, ಶಕ್ತಿ, ತೇಜಸ್ಸು–ಎಂಬ ಆರು ಗುಣಗಳಿಂದಲೂ ಸಂಪನ್ನನಾದವನು. ಸಂಕರ್ಷಣ, ಪ್ರದ್ಯುಮ್ನ ಮತ್ತು ಅನಿರುದ್ಧರು ಈ ಆರು ಗುಣಗಳಲ್ಲಿ ಕ್ರಮವಾಗಿ ಎರಡೆರಡು ಗುಣಗಳಿಂದ ಮಾತ್ರ ಸಂಪನ್ನ ರಾಗಿದ್ದಾರೆ.)

ನಿರುಕ್ತಿ :– **ಪ್ರದ್ಯುಮ್ನತ್ವೇ ತು ಕಾರ್ಯಾಣಿ ಲಭತೇ ಯಃ ಸ ಸರ್ವವಿತ್ ॥**

125) **ಸ. ಸಂ. :– ಸರ್ವವಿದ್ಭಾನುಃ** = ಎಲ್ಲವನ್ನೂ ಅರಿತವನು ; ಎಲ್ಲವನ್ನೂ ಪಡೆದವನು ; ಎಲ್ಲೆಲ್ಲಿಯೂ ಇರುವವನು ; ಎಲ್ಲವನ್ನೂ ತಿಳಿಸುವವನು. ಸರ್ವಜ್ಞನು ; ಸರ್ವಲಾಭವುಳ್ಳವನು ; ಸರ್ವಗತನು ; ಸರ್ವೋತ್ಪಾದಕನು ; ಪ್ರಕಾಶಿಸುವವನು.)

*   *   *

126) **ಪ. ಭ. :– ಭಾನುಃ** = ಎಲ್ಲವನ್ನೂ ನಿರ್ಮಾಣಮಾಡಿದರೂ ಅವಿಕಾರಿಯಾಗಿ ಬೆಳಗುತ್ತಿರುವವನು.

ನಿರುಕ್ತಿ :– **ಭಾನುಃ ಸರ್ವಸ್ಯ ಭಾತೀತಿ ನಿರ್ಮಾಣೇಽಪ್ಯವಿಕಾರತಃ॥**

*   *   *

125) **ವಿಷ್ವಕ್ಸೇನಃ** = ಎಲ್ಲೆಲ್ಲಿಯೂ ವಿಘ್ನಗಳನ್ನು ಪರಿಹರಿಸುವ ನಾನಾಸೇನೆಗಳುಳ್ಳವನು ; ಮಹಾಗಣಪತಿಸ್ವರೂಪನು ; ಮಹಾಸೇನಾನಿಯು. **ಯಸ್ಯ ದ್ವಿರದವಕ್ತ್ರಾದ್ಯಾಃ ಪಾರಿಷದ್ಯಾಃ ಪರಃ ಶತಮ್ । ವಿಘ್ನಂ ನಿಘ್ನನ್ತಿ ಸತತಂ ವಿಷ್ವಕ್ಸೇನಂ ತಮಾಶ್ರಯೇ ॥**

ಶಂ. ಭಾ. :– ವಿಷ್ವಕ್ ಎಂದರೆ ಸರ್ವ–ಎಂದರ್ಥ. ಯಾವನ ರಣೋದ್ಯೋಗಮಾತ್ರದಿಂದ ದೈತ್ಯಸೇನೆಯು ಎಲ್ಲ ಕಡೆಗಳಲ್ಲಿಯೂ ಚೆಲ್ಲಾಪಿಲ್ಲಿ ಯಾಗಿ ಓಡಿಹೋಗುತ್ತದೆಯೋ–ಅವನು.

127) **ಪ. ಭ. :–** ತನ್ನ ಸಾಮರ್ಥ್ಯಶಕ್ತಿಯಿಂದ ರಕ್ಷ್ಯಜನರನ್ನು ಎಲ್ಲೆಲ್ಲಿಯೂ ಸ್ಥಾಪಿಸಿರುವವನು ; ಅನಿರುದ್ಧಸ್ವರೂಪಿಯು. ಶಕ್ತಿ ಮತ್ತು ತೇಜಸ್ಸುಗಳು ಇವನ ಗುಣಗಳು.

ನಿರುಕ್ತಿ :– ಇನೇನ ಸ್ವಾಮಿನಾ ಸಾಕಂ ವರ್ತತೇ ಸೇನ ಇತ್ಯಯಮ್ ।
ವಿಷ್ವಗ್ರಕ್ಷ್ಯೋ ಜನೋ ಯಸ್ಯ ವಿಷ್ವಕ್ಸೇನ ಇತೀರಿತಃ ॥

126) **ಸ. ಸಂ. :–** ನಾನಾರೀತಿಯಲ್ಲಿ ಹೋಗುವ ಅಥವಾ ಪೂಜಿತ ವಾದ ಸೇನೆಯುಳ್ಳವನು.

* * *

126) **ಜನಾರ್ದನಃ** = (ಮಹಾಪ್ರಳಯಕಾಲದಲ್ಲಿ) ಎಲ್ಲ ಪ್ರಾಣಿ ಗಳನ್ನೂ ಸಂಹರಿಸುವವನು ; ದುಷ್ಟಶತ್ರುಗಳನ್ನು ಸಂಹರಿಸುವವನು.

ಶಂ. ಭಾ. :– ದುರ್ಜನರನ್ನು ಸಂಹರಿಸುವವನು ; ನರಕಾದಿಗಳಿಗೆ ಒಯ್ಯುವವನು ; ಅಭ್ಯುದಯ-ನಿಃಶ್ರೇಯಸರೂಪವಾದ ಪುರುಷಾರ್ಥಗಳನ್ನು ಜನರಿಂದ ಯಾಚಿಸಲ್ಪಡುವವನು.

128) **ಪ. ಭ. :–** ತನ್ನ ತೇಜಸ್ಸಿನಿಂದ ಭಕ್ತವಿದ್ವೇಷಿಗಳನ್ನು ಮರ್ದನ ಮಾಡುವವನು. **ದಸ್ಯುತ್ರಾಸಾಜ್ಜನಾರ್ದನಃ (ಭಾ .ಉ. ೭೦-೬)**

ನಿರುಕ್ತಿ :– ಭಕ್ತವಿದ್ವೇಷಿಣಾಂ ತೂರ್ಣಂ ಮರ್ದನಾದ್ಧಿ ಜನಾರ್ದನಃ ।

127) **ಸ. ಸಂ. :–** ಜನನವನ್ನು (ಹುಟ್ಟನ್ನು) ಧ್ವಂಸಮಾಡುವವನು ; ಸಮುದ್ರದಲ್ಲಿರುವ ದೈತ್ಯರನ್ನು ಸಂಹರಿಸುವವನು ; ಜನನವಿಲ್ಲದವನು ಮತ್ತು ಸಂಸಾರವಿಘಾತಕನು. ಜನರಿಂದ ಯಾಚಿಸಲ್ಪಡುವವನು ; ಹೊಂದಲ್ಪಡುವವನು.

* * *

127) **ವೇದಃ**= ಜ್ಞಾನಸ್ವರೂಪಿಯು ; ವೇದವಾಙ್ಮಯಸ್ವರೂಪನು.

ಶಂ. ಭಾ. :– ವೇದರೂಪಿಯು, ಜ್ಞಾನವನ್ನು ಕೊಡುವವನು.

129) **ಪ. ಭ. :–** ಸಂಕರ್ಷಣರೂಪಿಯಾಗಿ ಶಾಸ್ತ್ರಪ್ರದಾನಮಾಡು ವವನು. ಸೃಷ್ಟಿಯಲ್ಲಿ ಕರಣಗಳನ್ನು ಪಡೆದ ಎಲ್ಲರೂ ಯಾವನಿಂದ ಶಾಸ್ತ್ರ ಗಳನ್ನು ಪಡೆಯುವರೋ–ಅವನು.

ನಿರುಕ್ತಿ :– ಸಂಕರ್ಷಣತ್ವೇ ಶಾಸ್ತ್ರಾರ್ಥಪ್ರದತ್ವಾದ್ವೇದ ಈರಿತಃ ॥

128) **ಸ. ಸಂ. :–** ಅರಿವನ್ನುಂಟುಮಾಡುವವನು.

* * *

128) **ವೇದವಿತ್**= **ವೇದಗಳನ್ನೂ ವೇದಾರ್ಥವನ್ನೂ ಯಥಾವತ್ತಾಗಿ ಬಲ್ಲವನು.**

ಶಂ. ಭಾ. :– ವೇದಗಳನ್ನೂ ಮತ್ತು ವೇದಾರ್ಥವನ್ನೂ ಯಥಾವತ್ತಾಗಿ ಅನುಭವಿಸುವನು. **ವೇದಾನ್ತಕೃದ್ವೇದವಿದೇವ ಚಾಹಮ್ ।**

(ಗೀತಾ ೧೫-೧೫)

ಸರ್ವೇ ವೇದಾಃ ಸರ್ವವಿದ್ಯಾಃ ಸಶಾಸ್ತ್ರಾಃ
ಸರ್ವೇ ಯಜ್ಞಾಃ ಸರ್ವ ಇಜ್ಯಾಶ್ಚ ಕೃಷ್ಣಃ ।
ವಿದುಃ ಕೃಷ್ಣಂ ಬ್ರಾಹ್ಮಣಾಸ್ತತ್ತ್ವತೋ ಯೇ
ತೇಷಾಂ ರಾಜನ್ಸರ್ವಯಜ್ಞಾಃ ಸಮಾಪ್ತಾಃ ॥

[ಮಹಾಭಾರತ]

130) **ಪ. ಭ. :–** ಸಂಶಯ-ವಿಪರ್ಯಾಸಗಳಿಲ್ಲದೇ ವೇದಾರ್ಥವನ್ನು ಬಲ್ಲವನು.

ನಿರುಕ್ತಿ :– ಅಸಂಶಯವಿಪರ್ಯಾಸಂ ವೇದಾರ್ಥಂ ವೇತ್ತಿ ವೇದವಿತ್॥

129) **ಸ. ಸಂ. :–** ವೇದವನ್ನು ಅರಿತವನು.

* * *

129) **ಅವ್ಯಙ್ಗಃ** = **ಯಾವ ನ್ಯೂನತೆಯೂ ಇಲ್ಲದ ಅಂಗಗಳುಳ್ಳವನು ; ಪರಿಪೂರ್ಣನು.**

ಶಂ. ಭಾ. :– ಜ್ಞಾನಾದಿಗಳಿಂದ ಪರಿಪೂರ್ಣನಾದವನು ; ನ್ಯೂನತೆಯಿಲ್ಲದವನು ; ಅವ್ಯಕ್ತನಾದವನು.

131) **ಪ. ಭ. :–** ಶಿಕ್ಷಾ, ವ್ಯಾಕರಣ–ಮುಂತಾದ ಅಂಗಗಳ ನ್ಯೂನತೆಯಿಲ್ಲದ ವೇದರೂಪಿಯಾದವನು.

ನಿರುಕ್ತಿ :– ಶಿಕ್ಷಾವ್ಯಾಕರಣಾದ್ಯಙ್ಗೈಃ ನ ಹೀನೋಽವ್ಯಙ್ಗ ಉಚ್ಯತೇ ॥

130) **ಸ. ಸಂ. :–** ಸೂರ್ಯನನ್ನು ತನ್ನ ಅಂಗದಲ್ಲಿ (ಕಣ್ಣಿನಲ್ಲಿ) ಉಳ್ಳವನು ; ವಿಕಲಾಂಗನಲ್ಲದವನು ; ಯಜ್ಞಾಂಗವು ಯಾವನಿಂದ ಉಂಟಾಗುತ್ತದೆಯೋ–ಅವನು ; ಶೇಷನಾಗನಲ್ಲಿ ಅಂಗವನ್ನು ಉಳ್ಳವನು.

* * *

130) **ವೇದಾಙ್ಗಃ** = ವೇದವನ್ನು ಕಣ್ಣಾಗಿ ಉಳ್ಳವನು ; ವೇದಗಳನ್ನು ಅವಯವಗಳನ್ನಾಗಿ ಉಳ್ಳವನು ; **ತ್ರಿವೇದೀ ದಿವ್ಯಚಕ್ಷುಷೇ ।** ಶಿಕ್ಷಾ-ವ್ಯಾಕರಣಾದಿ ವೇದಾಂಗರೂಪಿಯಾದವನು **ವೇದಾ ಮೇ ಪರಮಂ ಚಕ್ಷುಃ ವೇದಾ ಮೇ ಪರಮಂ ಧನಮ್ ॥** (ಮ. ಭಾ.)

ಶಂ. ಭಾ. :– ವೇದಗಳನ್ನೇ ಅವಯವಗಳನ್ನಾಗಿ ಉಳ್ಳವನು.

132) **ಪ. ಭ. :–** ಅನಂತಶಾಖೆಗಳುಳ್ಳ ವೇದಗಳನ್ನೇ ಶರೀರವನ್ನಾಗಿ ಉಳ್ಳವನು. ಅವನ ಅಂತರಂಗವನ್ನು ಅಭಿವ್ಯಕ್ತಪಡಿಸುವುದರಿಂದ ವೇದಗಳು ಅವನಿಗೆ ಅಂಗಗಳು. **ವಿಧೂನುತೇ ವೇದಮಯಂ ಶರೀರಮ್ । ನಾವೇದವಿನ್ಮನುತೇ ತಂ ಬೃಹನ್ತಮ್** (ಕಾ. ೩-೫೫)

ನಿರುಕ್ತಿ :– ಯಸ್ಯ ವೇದೋಽನನ್ತಶಾಖೋ ವೇದಾಙ್ಗೋಽಙ್ಗತಯಾ ಸ್ಮೃತಃ ।

131) **ಸ. ಸಂ. :–** ವೇದಾಭಿಮಾನಿಗಳಾದ ದೇವತೆಗಳೂ, ವೇದಾ ಎಂದು ಕರೆಯಲ್ಪಡುವ ರಮಾದೇವಿಯೂ ಯಾವನ ಅಂಗದಲ್ಲಿ ದ್ದಾರೆಯೋ–ಅವನು ; ವೇದದ ಅಂಗವಾದ ಭಾರತ ಮುಂತಾದುವುಗಳು ಯಾವನಿಂದ ರಕ್ಷಿಸಲ್ಪಟ್ಟಿವೆಯೋ–ಅವನು. **ಇತಿಹಾಸಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್**

*　　　*　　　*

131) **ವೇದವಿತ್**= ವೇದಗಳನ್ನು ಬಲ್ಲವನು ; ಪಡೆದವನು ; ವಿಚಾರ ಮಾಡುವವನು.

ಶಂ. ಭಾ. :– ವೇದಗಳನ್ನು ವಿಚಾರಮಾಡುವವನು.

133) **ಪ. ಭ. :–** ವೇದ–ಎಂದರೆ ವೇದಾರ್ಥವಾದ ಧರ್ಮ. ಅದನ್ನು ಅನುಷ್ಠಾನಮಾಡಿಸಿ ಪಡೆಯುವವನು ವೇದವಿತ್ ; ಪ್ರದ್ಯುಮ್ನಸ್ವರೂಪಿಯು.

ನಿರುಕ್ತಿ :– ವೇದ್ಯೈರ್ವೇದ್ಯತಯಾ ವೇದಸ್ತದರ್ಥೋ ಧರ್ಮ ಉಚ್ಯತೇ।
ತದನುಷ್ಠಾಪನಾನ್ನಿತ್ಯಂ ಪ್ರದ್ಯುಮ್ನೋ ವೇದವಿತ್ ಸ್ಮೃತಃ ॥

132) **ಸ. ಸಂ. :–** (ಮತ್ಸ್ಯಾದಿರೂಪಗಳಿಂದ ಬ್ರಹ್ಮಾದಿಗಳಿಗೆ) ವೇದಗಳನ್ನು ಹೊಂದಿಸುವವನು.

* * *

132) **ಕವಿಃ**= ಜ್ಞಾನಿಯು. ಕ್ರಾಂತದೃಷ್ಟಿಯುಳ್ಳವನು ; ಸೃಷ್ಟಿಯನ್ನು ಹೆಣೆದವನು. **ಕವಿಂ ಪುರಾಣಮನುಶಾಸಿತಾರಮ್ ।**

ಶಂ. ಭಾ. :– ಜ್ಞಾನಿಯು ; ಕ್ರಾಂತದೃಷ್ಟಿಯುಳ್ಳವನು ; ಸರ್ವದರ್ಶಿಯು ; **ನಾನ್ಯೋಽತೋಽಸ್ತಿ ದ್ರಷ್ಟಾ** (ಬೃ.೩-೭-೨೩) **ಕವಿರ್ಮನೀಷೀ** (ಈ. ೮)

134) **ಪ. ಭ. :–** ಕ್ರಾಂತದರ್ಶಿಯು.
ನಿರುಕ್ತಿ :– ಸ ಏವ ಕ್ರಾನ್ತದರ್ಶಿತ್ವಾತ್ಕವಿರಿತ್ಯುಚ್ಯತೇ ಬುಧೈಃ ॥

133) **ಸ. ಸಂ. :–** ಸ್ತುತಿಗೆ ಯೋಗ್ಯನಾದವನು.

* * *

ಲೋಕಾಧ್ಯಕ್ಷಃ ಸುರಾಧ್ಯಕ್ಷೋ ಧರ್ಮಾಧ್ಯಕ್ಷಃ ಕೃತಾಕೃತಃ ।
ಚತುರಾತ್ಮಾ ಚತುರ್ವ್ಯೂಹಃ ಚತುರ್ದಂಷ್ಟ್ರಶ್ಚತುರ್ಭುಜಃ ॥೨೮॥

133) **ಲೋಕಾಧ್ಯಕ್ಷಃ** = ಸರ್ವಲೋಕಗಳಿಗೂ ಅಧ್ಯಕ್ಷನಾದವನು ; ಪ್ರಕೃತಿಯ ಸೃಷ್ಟಿಕಾರ್ಯಕ್ಕೆ ಅಧ್ಯಕ್ಷನಾದವನು. ಸರ್ವಸಾಕ್ಷಿಯು. **ಮಯಾಧ್ಯಕ್ಷೇಣ ಪ್ರಕೃತಿಃ ಸೂಯತೇ ಸಚರಾಚರಮ್ ॥**

ಶಂ. ಭಾ. :– ಎಲ್ಲ ಲೋಕಗಳನ್ನೂ ಪ್ರಧಾನರೂಪದಿಂದ ನೋಡುವವನು.

135) **ಪ. ಭ. :–** ಧರ್ಮಾಧಿಕಾರಿಗಳಾದ ಜನರಿಗೆ ಸತ್ಯವಾಗಿಯೂ ನಿಯತವಾಗಿಯೂ ಫಲವನ್ನು ಕೊಡಲು ಅನುಸಂಧಾನವನ್ನು ಮಾಡುವವನು; ಅವರ ಸ್ವಾಮಿಯು. ಅನಿರುದ್ಧಸ್ವರೂಪಿಯು.

134) **ಸ. ಸಂ. :–** ಪ್ರಕಾಶರೂಪನು ಮತ್ತು ಅಧಿಪತಿಯಾದವನು. ಲೋಕಾಧಿಪತಿಯು ಮತ್ತು ಕ್ಷಯವಿಲ್ಲದವನು ; ಲೋಕಗಳಿಗೆ ಅಧ್ಯಕ್ಷನಾದವನು.

* * *

134) **ಸುರಾಧ್ಯಕ್ಷಃ** = ದೇವತೆಗಳಿಗೆ ಸ್ವಾಮಿಯು ; ಅವರ ವ್ಯಾಪಾರಗಳಿಗೆ ಅಧ್ಯಕ್ಷನಾಗಿರುವವನು.

ಶಂ. ಭಾ. :– ಲೋಕಪಾಲರೇ ಮುಂತಾದ ದೇವತೆಗಳಿಗೆ ಅಧ್ಯಕ್ಷನಾದವನು.

136) **ಪ. ಭ. :–** ಧರ್ಮಿಷ್ಠರಿಗೆ ಆರಾಧ್ಯರಾದ ದೇವತೆಗಳಿಗೆ ಸ್ವಾಮಿಯಾದವನು. ಅವರಿಗೆ ಸತ್ಯವೂ ನಿಯತವೂ ಆದ ಫಲವನ್ನು ಅನುಗ್ರಹಿಸಲು ಅನುಸಂಧಾನಮಾಡುವವನು.

135) **ಸ. ಸಂ. :–** ಚೆನ್ನಾಗಿ ಆರಾಧಿಸಲ್ಪಡುವವನು ; ಸಾಧಿಸಲ್ಪಡುವವನು ; ನಿವಾಸ ಮತ್ತು ಗತಿಯಾದವನು ; ಸುರಾಧಿಪನಾದ ದೇವೇಂದ್ರನ ಕಣ್ಣುಗಳು ಯಾವನ ವಿಷಯದಲ್ಲಿವೆಯೋ–ಅವನು.

* * *

135) **ಧರ್ಮಾಧ್ಯಕ್ಷಃ** = ಎಲ್ಲ ಧರ್ಮಗಳಿಗೂ ಸ್ವಾಮಿಯಾದವನು. ಸರ್ವಧರ್ಮಗಳನ್ನೂ ಮತ್ತು ಅವುಗಳ ಫಲಗಳನ್ನೂ ನೋಡುವವನು.

ಶಂ. ಭಾ. :– ಅನುರೂಪವಾದ ಫಲಗಳನ್ನು ಕೊಡುವುದಕ್ಕಾಗಿ ಧರ್ಮ ಮತ್ತು ಅಧರ್ಮಗಳನ್ನು ಸಾಕ್ಷಾತ್ತಾಗಿ ನೋಡುತ್ತಿರುವವನು.

137) **ಪ. ಭ. :–** ಧರ್ಮಿಷ್ಠರಿಗೆ ಸಾಧನವಾಗಿರುವ ಧರ್ಮಕ್ಕೆ ಸ್ವಾಮಿಯು ಮತ್ತು ನಿಯತಫಲಪ್ರದನು. ಈ ಮೂರು ನಾಮಗಳೂ ಅನಿರುದ್ಧರೂಪಿಯಾದ ಪರಮಾತ್ಮನ ಹೆಸರುಗಳು.

ನಿರುಕ್ತಿ :– **ಧರ್ಮಾಧಿಕಾರಿಣೋ ಲೋಕಾಃ ತದಾರಾಧ್ಯಾಃ ಸುರಾಸ್ತಥಾ ।**
ಧರ್ಮಸ್ತತ್ಸಾಧನಂ ತೇಷಾಂ ಅಧ್ಯಕ್ಷಃ ಸ್ಯಾತ್ತ್ರಿನಾಮವಾನ್ ॥
ಲೋಕಾಧ್ಯಕ್ಷಃ ಸುರಾಧ್ಯಕ್ಷೋ ಧರ್ಮಾಧ್ಯಕ್ಷ ಇತಿ ಕ್ರಮಾತ್ ।
ಅನಿರುದ್ಧಃ ಸ ವಿಜ್ಞೇಯಃ ಲೋಕಾಧ್ಯಕ್ಷಾದಿನಾಮವಾನ್ ॥

136) **ಸ. ಸಂ. :–** ಎಲ್ಲವನ್ನೂ ಧರಿಸಿರುವವನು ; ಅಧಿಕವಾದ ಇಂದ್ರಿಯಗಳುಳ್ಳವನು ; ಧರ್ಮಕ್ಕೆ ಅಧ್ಯಕ್ಷನಾದವನು.

* * *

136) **ಕೃತಾಕೃತಃ** = ಕಾರ್ಯ-ಕಾರಣಸ್ವರೂಪನು ; ಕರ್ಮ ಮತ್ತು ಮೋಕ್ಷಸ್ವರೂಪನು.

ಶಂ. ಭಾ. :– ಕಾರ್ಯರೂಪದಿಂದ ಕೃತನೂ ಮತ್ತು ಕಾರಣರೂಪ ದಿಂದ ಅಕೃತನೂ ಆಗಿರುವವನು.

138) ಪ. ಭ. :– ಪ್ರವೃತ್ತಿ-ನಿವೃತ್ತಿಧರ್ಮಸ್ವರೂಪನು. ಅನಿತ್ಯವಾದ ಪ್ರವೃತ್ತಿಫಲವನ್ನೂ–ನಿತ್ಯವಾದ ನಿವೃತ್ತಿಫಲವನ್ನೂ ಕೊಡುವವನು.

ನಿರುಕ್ತಿ :– **ಅನಿತ್ಯನಿತ್ಯಫಲದೌ ಪ್ರವರ್ತಕನಿವರ್ತಕೌ ।**
ದದೌ ಯಸ್ಯ ಸ್ವರೂಪಂ ಸಃ ಕೃತಾಕೃತ ಇತೀರಿತಃ ॥

137) ಸ. ಸಂ. :– ಕರ್ಮದಿಂದ ವಿಕಾರಗೊಳ್ಳದವನು ; ಮೋಕ್ಷವನ್ನು ಕೊಡುವವನು.

* * *

137) **ಚತುರಾತ್ಮಾ** = ವಾಸುದೇವ-ಸಂಕರ್ಷಣ-ಪ್ರದ್ಯುಮ್ನ-ಅನಿರುದ್ಧ ರೆಂಬ ನಾಲ್ಕು ಮೂರ್ತಿಗಳುಳ್ಳವನು.

ಶಂ. ಭಾ. :– ನಾಲ್ಕು ಮೂರ್ತಿಗಳುಳ್ಳವನು. ಸೃಷ್ಟಿ-ಉತ್ಪತ್ತಿ ಮುಂತಾದುವುಗಳಿಗೋಸ್ಕರ ಬೇರೆ-ಬೇರೆಯಾದ ನಾಲ್ಕು ವಿಭೂತಿಗಳುಳ್ಳ ವನು ಅಥವಾ ಮೂರ್ತಿಗಳುಳ್ಳವನು. ಬ್ರಹ್ಮಾ, ದಕ್ಷಾದಿಪ್ರಜಾಪತಿಗಳು, ಕಾಲ, ಅಖಿಲಜೀವರುಗಳು–ಇವು ನಾಲ್ಕೂ ಭಗವಂತನಿಗೆ ಸೃಷ್ಟಿಗೆ ಸಹಾಯಕವಾದ ಮೂರ್ತಿಗಳು.

ವಿಷ್ಣು, ಮನು–ಮುಂತಾದವರು, ಕಾಲ, ಸಂಪೂರ್ಣಭೂತಗಳು– ಇವು ನಾಲ್ಕೂ ಸ್ಥಿತಿಗೆ ಕಾರಣವಾದ ವಿಭೂತಿಗಳು.

ರುದ್ರ, ಕಾಲ, ಅಂತಕ ಮತ್ತು ಸಮಸ್ತಜಂತುಗಳು–ಇವು ನಾಲ್ಕೂ ಪ್ರಳಯವನ್ನುಂಟುಮಾಡುವ ವಿಭೂತಿಗಳು.

ಬ್ರಹ್ಮಾ ದಕ್ಷಾದಯಃ ಕಾಲಃ ತಥೈವಾಖಿಲಜನ್ತವಃ ।
ವಿಭೂತಯೋ ಹರೇರೇತಾಃ ಜಗತಃ ಸೃಷ್ಟಿಹೇತವಃ ॥

ವಿಷ್ಣುರ್ಮನ್ವಾದಯಃ ಕಾಲಃ ಸರ್ವಭೂತಾನಿ ಚ ದ್ವಿಜ ।
ಸ್ಥಿತೇರ್ನಿಮಿತ್ತಭೂತಸ್ಯ ವಿಷ್ಣೋರೇತಾ ವಿಭೂತಯಃ ॥

ರುದ್ರಃ ಕಾಲೋऽನ್ತಕಾದ್ಯಾಶ್ಚ ಸಮಸ್ತಾಶ್ಚೈವ ಜನ್ತವಃ ।
ಚತುರ್ಧಾ ಪ್ರಲಯಾಯೈತಾ ಜನಾರ್ದನವಿಭೂತಯಃ ॥
(ವಿಷ್ಣುಪುರಾಣ ೧-೨೨-೩೧-೩೨-೩೩)

139) **ಪ. ಭ. :–** ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ–ಎಂಬ ನಾಲ್ಕು ಸ್ವರೂಪಗಳುಳ್ಳವನು.

ನಿರುಕ್ತಿ :– **ವಾಸುದೇವಾದಿ ರೂಪತ್ವಾಚ್ಚತುರಾತ್ಮೇತಿ ಕಥ್ಯತೇ ॥**

138) **ಸ. ಸಂ. :–** ಚತುರನಾದ ಆತ್ಮನು ; ಕುಶಲನಾದ ಆತ್ಮನು. ಚತುರ್ಮುಖನು ಯಾವನಿಂದ ಉಂಟಾಗಿರುವನೋ–ಅವನು.

* * *

138) **ಚತುರ್ವ್ಯೂಹಃ** =ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧರೆಂಬ ನಾಲ್ಕು ವ್ಯೂಹ (ವಿಭಾಗ)ಗಳುಳ್ಳವನು. ಸೃಷ್ಟ್ಯಾದಿ ವ್ಯಾಪಾರಾದಿಗಳಿಗೋಸ್ಕರ ಮತ್ತು ನಾಲ್ಕು ಅವಸ್ಥೆಗಳ ನಿರ್ವಾಹಕ್ಕೋಸ್ಕರ ನಾಲ್ಕು ವ್ಯೂಹಗಳನ್ನು ಹೊಂದಿರುವವನು.

ಶಂ. ಭಾ. :– ವಾಸುದೇವಾದಿ ನಾಲ್ಕು ವ್ಯೂಹಗಳಿಂದ ಪ್ರಸಿದ್ಧನಾದವನು.

ವ್ಯೂಹ್ಯಾತ್ಮಾನಂ ಚತುರ್ಧಾ ವೈ ವಾಸುದೇವಾದಿಭೂತಿಭಿಃ ।
ಸೃಷ್ಟ್ಯಾದೀನ್ಪ್ರಕರೋತ್ಯೇಷ ವಿಶ್ರುತಾತ್ಮಾ ಜನಾರ್ದನಃ ॥
(ವ್ಯಾಸವಚನ)

140) **ಪ. ಭ. :–** ಸಮಾಧಿ, ಸುಷುಪ್ತಿ, ಸ್ವಪ್ನ, ಜಾಗ್ರತ್–ಎಂಬ ನಾಲ್ಕು ಅವಸ್ಥೆಗಳಲ್ಲಿ ವಾಸುದೇವಾದಿ ನಾಲ್ಕು ವ್ಯೂಹಗಳುಳ್ಳವನಾಗಿ ಅದಕ್ಕೆ ಅನುಗುಣವಾದ ರೂಪ-ವರ್ಣ-ಆಯುಧ-ಭೂಷಣ-ವಾಹನ-ಧ್ವಜಾದಿಗಳುಳ್ಳವನು.

ನಿರುಕ್ತಿ :– **ಜಾಗ್ರತ್ಸ್ವಪ್ನಸುಷುಪ್ತ್ಯಾದೌ ವ್ಯೂಹಾವಸ್ಥಾಚತುಷ್ಟಯೇ ।**
ಏತೈರ್ವಿಶಿಷ್ಟಮೂರ್ತಿತ್ವಾಚ್ಚತುರ್ವ್ಯೂಹ ಇತೀರಿತಃ ॥

139) **ಸ. ಸಂ. :–** ವಾಸುದೇವನೇ ಮುಂತಾದ ಅಥವಾ ಆತ್ಮವೇ ಮುಂತಾದ ನಾಲ್ಕು ವ್ಯೂಹಗಳುಳ್ಳವನು.

*   *   *

139) **ಚತುರ್ದಂಷ್ಟ್ರಃ** = ನಾಲ್ಕು ಕೋರೆದಾಡೆಗಳುಳ್ಳ ನರಸಿಂಹ ಮೂರ್ತಿಯು ಅಥವಾ ವರಾಹಮೂರ್ತಿಯು ; ಮಹಾಪುರುಷಲಕ್ಷಣ ವಾದ ನಾಲ್ಕು ದಂತವಿಶೇಷಗಳುಳ್ಳವನು. **ಸ್ನಿಗ್ಧಾ ಘನಾಶ್ಚ ದಶನಾಃ ಸುತೀಕ್ಷ್ಣದಂಷ್ಟ್ರಾಃ ಸಮಾಶ್ಚ ಶುಭಾಃ** (ಮಿಹಿರಾಚಾರ್ಯವಚನ) ಅಥವಾ ನಾಲ್ಕು ಶೃಂಗಗಳುಳ್ಳ ಅಗ್ನಿಯು ಅಥವಾ ಪ್ರಣವಪುರುಷನು.

ಶಂ. ಭಾ. :– ನಾಲ್ಕು ಕೋರೆದಾಡೆಗಳುಳ್ಳ ನೃಸಿಂಹಸ್ವರೂಪಿಯು ಅಥವಾ ನಾಲ್ಕು ಶೃಂಗಗಳುಳ್ಳವನು. **ಚತ್ವಾರಿ ಶೃಙ್ಗಾ ತ್ರಯೋ ಅಸ್ಯ ಪಾದಾಃ ॥**

141) **ಪ. ಭ. :–** ವ್ಯೂಹಗಳಿಗೆ ಮೂಲವಾದ ಪರಸ್ವರೂಪದಲ್ಲಿ ಮಹಾಪುರುಷಲಕ್ಷಣವಾದ ನಾಲ್ಕು ದಂತವಿಶೇಷವುಳ್ಳವನು. **ಚತುರ್ದಶ ಸಮದ್ವಂದ್ವಃ ಚತುರ್ದಂಷ್ಟ್ರಶ್ಚತುರ್ಗತಿಃ ॥** (ರಾ.ಸುಂದರ. ೩೫-೧೯)
ನಿರುಕ್ತಿ :– ದಂಷ್ಟ್ರಾಚತುಷ್ಕಯುಕ್ತತ್ವಾಚ್ಚತುರ್ದಂಷ್ಟ್ರ ಇತಿ ಸ್ಮೃತಃ ॥

140) **ಸ. ಸಂ. :–** ನಾಲ್ಕು ಕೋರೆದಾಡೆಗಳುಳ್ಳವನು.

*   *   *

140) **ಚತುರ್ಭುಜಃ**= ನಾಲ್ಕು ಭುಜಗಳುಳ್ಳವನು.

ಶಂ. ಭಾ. :– ಚತುರ್ಭುಜನು.

142) **ಪ. ಭ. :–** ಮಹಾಪುರುಷರೂಪದಲ್ಲಿ ನಾಲ್ಕು ಭುಜಗಳು ಳ್ಳವನು.
ಚತುರ್ಭುಜಮುದಾರಾಙ್ಗಂ ಚಕ್ರಾದ್ಯಾಯುಧಭೂಷಣಮ್ ॥
(ವಿ. ಪು.)
ನಿರುಕ್ತಿ :– ಮಹಾಪುರುಷರೂಪತ್ವಾದುಚ್ಯತೇ ಹಿ ಚತುರ್ಭುಜಃ ॥

141) **ಸ. ಸಂ. :–** ನಾಲ್ಕು ಭುಜಗಳುಳ್ಳವನು ; ನಾಲ್ಕು ಪುರು

ಷಾರ್ಥಗಳನ್ನು ಅನುಭವಿಸುವವನು ಅಥವಾ ರಕ್ಷಿಸುವವನು ; ಜ್ಞಾನದಿಂದ ತಿಳಿಯಲ್ಪಡತಕ್ಕವನು.

o o o

ಭ್ರಾಜಿಷ್ಣುರ್ಭೋಜನಂ ಭೋಕ್ತಾ ಸಹಿಷ್ಣುರ್ಜಗದಾದಿಜಃ ।
ಅನಘೋ ವಿಜಯೋ ಜೇತಾ ವಿಶ್ವಯೋನಿಃ ಪುನರ್ವಸುಃ ॥೨೯॥

141) **ಭ್ರಾಜಿಷ್ಣುಃ** = ಪ್ರಕಾಶಿಸುವ ಸ್ವಭಾವವಿರುವವನು.

ಶಂ. ಭಾ. :– ಪ್ರಕಾಶೈಕರಸನಾದವನು.

143) **ಪ. ಭ. :–** ಉಪಾಸನೆಮಾಡುವವರಿಗೆ ಸ್ವಪ್ರಕಾಶಶೀಲನಾಗಿರುವವನು.

ನಿರುಕ್ತಿ :– **ಉಪಾಸಿತೃಭ್ಯೋ ಭ್ರಾಜಿಷ್ಣುಃ ಸ್ವಪ್ರಕಾಶನಶೀಲತಃ ॥**

142) **ಸ. ಸಂ. :–** ಕಾಂತಿಯುಳ್ಳವನು.

* * *

142) **ಭೋಜನಂ** = ಪಾಲಿಸುವವನು. ಭಕ್ತರಿಗೆ ಭೋಗ್ಯನಾಗಿರುವವನು. **ತ್ರೈಗುಣ್ಯಂ ಷಡ್ಗುಣಾಢ್ಯಂ ಚ ದ್ವಿಧಾನ್ನಂ ಪರಿಕೀರ್ತಿತಮ್ ।**

ಶಂ. ಭಾ. :– ಮಾಯಾರೂಪಿಯು (ಭೋಜ್ಯರೂಪನಾಗಿರುವುದರಿಂದ ಪ್ರಕೃತಿ ಅಥವಾ ಮಾಯೆಗೆ ಭೋಜನ ಎಂದು ಹೆಸರು.)

144) **ಪ. ಭ. :–** ಭಕ್ತರಿಂದ ಸುಖವಾಗಿ ಅನುಭವಿಸಲ್ಪಡುತ್ತಿರುವವನು.

ನಿರುಕ್ತಿ :– **ಸುಖೇನ ಭೋಜನಂ ಪ್ರಾಹುರ್ಯೋ ಭಕ್ತೈರನುಭೂಯತೇ॥**

143) **ಸ. ಸಂ. :–** ಎಲ್ಲರಿಗೂ ಉಪಜೀವ್ಯನಾದವನು.

* * *

143) **ಭೋಕ್ತಾ** = ಆನಂದಾನುಭವದಲ್ಲಿರುವವನು ; ಮಹಾಪ್ರಳಯ ಕಾಲದಲ್ಲಿ ಎಲ್ಲವನ್ನೂ ಭಕ್ಷಿಸುವವನು ; ಭಕ್ತರು ಸಮರ್ಪಿಸಿದ ನೈವೇದ್ಯವನ್ನು ಭುಂಜಿಸುವವನು ; ಅತಿಥಿಸ್ವರೂಪಿಯು. ಅತಿಥಿರ್ದುರೋಣಸತ್ **।(ಶ್ರುತಿಃ)**

ಶಂ. ಭಾ. :– ಪುರುಷರೂಪದಿಂದ ಪ್ರಕೃತಿಯನ್ನು ಭೋಗಿಸುವವನು.

145) ಪ. ಭ. :– ಭಕ್ತರು ಅರ್ಪಿಸಿದ ನೈವೇದ್ಯವನ್ನು ಅಮೃತದಂತೆ ಭುಂಜಿಸುವವನು ; ಅಮೃತವನ್ನು ಭುಂಜಿಸುವವನು.

ನಿರುಕ್ತಿ :– ಭೋಕ್ತಾರ್ಪಿತಸ್ಯ ಭೋಕ್ತೃತ್ವಾದ್ಭೋಕ್ತಾ ಸ್ಯಾದಮೃತಸ್ಯ ವಾ ॥

144) ಸ. ಸಂ. :– ಎಲ್ಲದರ ಸಾರವನ್ನೂ ಭೋಜನಮಾಡುವವನು.

* * *

144) ಸಹಿಷ್ಣುಃ = ಸಹನಶೀಲನು.

ಶಂ. ಭಾ. :– ಹಿರಣ್ಯಾಕ್ಷನೇ ಮುಂತಾದವರನ್ನು ಸೋಲಿಸಿದವನು,

146) ಪ. ಭ. :– ಭಕ್ತರ ಅಪಾರವಾದ ಅಪರಾಧಗಳನ್ನು ಸಹಿಸಿ ಕೊಳ್ಳುವವನು.

ನಿರುಕ್ತಿ :– ಸ್ವಭಕ್ತವಿಷಯಾಣಾಂ ಚ ನಿರ್ಮರ್ಯಾದಕೃತೈನಸಾಮ್ ।
ಸಹನೈಕಸ್ವಶೀಲತ್ವಾತ್ಸಹಿಷ್ಣುರಿತಿ ವಿಶ್ರುತಃ ॥

145) ಸ. ಸಂ. :– ಭಕ್ತಾಪರಾಧಗಳನ್ನು ಸಹಿಸುವ ಸ್ವಭಾವವುಳ್ಳವನು.

* * *

145) ಜಗದಾದಿಜಃ = ಜಗತ್ತಿಗೆ ಆದಿಯಲ್ಲಿ ಸೃಷ್ಟಿಕರ್ತನಾಗಿ ತಾನಾಗಿಯೇ ಪ್ರಕಟಗೊಂಡವನು.

ಶಂ. ಭಾ. :– ಹಿರಣ್ಯಗರ್ಭರೂಪದಲ್ಲಿ ತಾನಾಗಿಯೇ ಉತ್ಪನ್ನನಾದವನು.

147) ಪ. ಭ. :– ಜಗತ್ತಿಗೆ ಆದಿದೇವತೆಗಳಾದ ತ್ರಿಮೂರ್ತಿಗಳಲ್ಲಿ ಒಬ್ಬನಾಗಿ (ವಿಷ್ಣುವಾಗಿ) ಅವತರಿಸಿದವನು. ಇದು ವಿಭವಾವತಾರಗಳಲ್ಲಿ ಒಂದು.

ಗತಿಶ್ಚ ನಸ್ತ್ವಂ ದೇವೇಷು ಪೂರ್ವಜೋ ಜಗತಃ ಪ್ರಭುಃ ।
ರಕ್ಷಾರ್ಥಂ ಸರ್ವಭೂತಾನಾಂ ವಿಷ್ಣುತ್ವಮುಪಜಗ್ಮಿವಾನ್ ॥

(ಮ. ಭಾ. ಉ. ೧೩-೧೧)

ನಿರುಕ್ತಿ :– ಜಗತಾಮಾದಿಭೂತಾಸು ಮೂರ್ತಿಷ್ವನ್ಯತಮತ್ವತಃ ।
ಜಾತತ್ವಾದ್ವಿಷ್ಣುರೂಪೇಣ ಪ್ರೋಚ್ಯತೇ ಜಗದಾದಿಜಃ ॥

146) **ಸ. ಸಂ. :–** ಜಗತ್ತಿಗೆ ಆದಿಯಾದ (ಕಾರಣನಾದ) ಚತುರ್ಮುಖನು ಯಾವನಿಂದ ಹುಟ್ಟುತ್ತಾನೆಯೋ–ಅವನು ; ಗದನಿಗೆ ಅಣ್ಣನಾಗಿ ಹುಟ್ಟಿದವನು.

*　　　*　　　*

146) **ಅನಘಃ** = ದೋಷರಹಿತನು.

ಶಂ. ಭಾ. :– ಪಾಪರಹಿತನು. ಏಷ ಆತ್ಮಾ ಅಪಹತಪಾಪ್ಮಾ ॥

(ಛಾಂ. ೭-೧)

148) **ಪ. ಭ. :–** ಸಂಸಾರದ ಮಧ್ಯದಲ್ಲಿ ಹುಟ್ಟಿದರೂ ಪಾಪಕ್ಕೆ ವಿರೋಧಿಯಾದವನು.

ನಿರುಕ್ತಿ : ಪಾಪಪ್ರತಿಸ್ಪರ್ಧ್ಯನಘಃ

147) **ಸ. ಸಂ. :–** ಯಾವ ದೋಷವೂ ಇಲ್ಲದವನು.

*　　　*　　　*

147) **ವಿಜಯಃ** = ಎಲ್ಲವನ್ನೂ ವಿಶೇಷವಾಗಿ ಜಯಿಸಿದವನು ; ಸರ್ವೋತ್ತಮನು.

ಶಂ. ಭಾ. :– ಜ್ಞಾನ-ವೈರಾಗ್ಯ-ಐಶ್ವರ್ಯಾದಿ ಗುಣಗಳಿಂದ ವಿಶ್ವವನ್ನು ಜಯಿಸಿದವನು.

149) **ಪ. ಭ. :–** ಜಗತ್ತನ್ನು ಜಯಿಸಿದವನು ; ಇತರ ದೇವತೆಗಳಿಗೂ, ತ್ರಿಮೂರ್ತಿಗಳಲ್ಲಿ ಸೇರಿದ ಬ್ರಹ್ಮ-ರುದ್ರರಿಗೂ ಜಗದ್ವಿಜಯಕ್ಕೆ ಕಾರಣನಾದವನು. **ತದಾಽಽದರ್ಶಿತಪನ್ಥಾನೌ ಸೃಷ್ಟಿಸಂಹಾರಕಾರಕೌ ।**

(ಮ. ಶಾಂ. ೩೪೧-೧೯)

ನಿರುಕ್ತಿ :– ವಿಜಯೋ ಜಗತಾಂ ಜಯೀ

148) **ಸ. ಸಂ. :–** ವಿಶೇಷವಾಗಿ ಜಯಿಸುವವನು ; ಗರುಡನಿಗೆ ಜಯಕ್ಕೆ ಕಾರಣನಾದವನು.

*　　　*　　　*

148) **ಜೇತಾ**= ಎಲ್ಲ ಪ್ರಾಣಿಗಳನ್ನೂ ಜಯಿಸುವವನು.

ಶಂ. ಭಾ. :– ಸರ್ವಭೂತಗಳನ್ನೂ ಸ್ವಾಭಾವಿಕವಾಗಿಯೇ ಜಯಿಸಿದವನು ; ಅವುಗಳಿಗಿಂತಲೂ ಅತಿಶಯನಾದವನು.

150) **ಪ. ಭ. :–** ಬ್ರಹ್ಮ-ರುದ್ರರನ್ನು ತನ್ನ ಅಭಿಪ್ರಾಯದಲ್ಲಿ ನೆಲೆಗೊಳಿಸಿಕೊಂಡಿರುವವನು.

ನಿರುಕ್ತಿ :– ಸ್ವಾಭಿಪ್ರಾಯೇ ಸ್ಥಾಪಯಿತಾ ಜೇತಾ ಸ್ಯಾದ್ವಿಧಿಶಙ್ಕರೌ ॥

149) **ಸ. ಸಂ. :–** ಜಯಶೀಲನಾದವನು.

* * *

149) **ವಿಶ್ವಯೋನಿಃ** = ವಿಶ್ವಕ್ಕೆ ಕಾರಣನಾದವನು.

ಶಂ. ಭಾ. :– ವಿಶ್ವವು ಯಾವನಿಗೆ ಯೋನಿಯಾಗಿದೆಯೋ–ಅವನು ; ವಿಶ್ವ ಮತ್ತು ಯೋನಿ ಎರಡೂ ಆಗಿರುವವನು.

151) **ಪ. ಭ. :–** ಬ್ರಹ್ಮಾದಿಗಳ ಮೂಲಕ ಎಲ್ಲ ವಿಶ್ವಕ್ಕೂ ಕಾರ್ಯಪ್ರಪಂಚಕ್ಕೂ ಕಾರಣನಾಗಿರುವವನು.

ನಿರುಕ್ತಿ :– ವಿಶ್ವಂ ತತ್ಕಾರ್ಯವರ್ಗಃ ಸ್ಯಾದ್ಯೋನಿಸ್ತಸ್ಯ ತು ಕಾರಣಮ್ ।
ತಸ್ಯ ಬ್ರಹ್ಮಾದಿಮುಖತಃ ವಿಶ್ವಯೋನಿರಿತೀರಿತಃ ॥

150) **ಸ. ಸಂ. :–** ಗರುಡವಾಹನನು ಮತ್ತು ಕಾರಣರಹಿತನು.

* * *

150) **ಪುನರ್ವಸುಃ** = ಮತ್ತೆ ಮತ್ತೆ ಧನವನ್ನು ಅನುಗ್ರಹಿಸುವವನು. ಪುನರ್ವಸುನಕ್ಷತ್ರದೇವತಾಸ್ವರೂಪನು ; ನಿತ್ಯನಾಗಿ ಎಲ್ಲರಿಗೂ ನಿವಾಸಭೂಮಿಯಾಗಿರುವವನು ; ಎಲ್ಲರಲ್ಲೂ ಅಂತರ್ಯಾಮಿಯಾಗಿರುವವನು.

ಶಂ. ಭಾ. :– ಪುನಃ ಪುನಃ ಶರೀರಗಳಲ್ಲಿ ಕ್ಷೇತ್ರಜ್ಞರೂಪದಿಂದ ವಾಸಮಾಡುವವನು.

152) **ಪ. ಭ. :–** ಬ್ರಹ್ಮಾದಿದೇವತೆಗಳಲ್ಲಿಯೂ ಅಂತರಾತ್ಮನಾಗಿ ವಾಸಮಾಡುವವನು. **ದೇವಾನಾಂ ಬನ್ಧುನಿಹಿತಂ ಗುಹಾಸು** (ಶ್ರುತಿಃ)

ನಿರುಕ್ತಿ :– ಬ್ರಹ್ಮಾದಿಷ್ವಪಿ ದೇವೇಷು ಹ್ಯನ್ತರಾತ್ಮತಯಾ ಚ ಯಃ ।
ಪುನರ್ನಿವಸವಾನ್ನಿತ್ಯಂ ಪುನರ್ವಸುರುದಾಹೃತಃ ॥

151) **ಸ. ಸಂ. :–** ಪುನಃ ಪುನಃ ದ್ರವ್ಯಗಳನ್ನು ಸೃಷ್ಟಿಸುವವನು ಅಥವಾ ದಯಪಾಲಿಸುವವನು.

* * *

ಉಪೇನ್ದ್ರೋ ವಾಮನಃ ಪ್ರಾಂಶುರಮೋಘಃ ಶುಚಿರೂರ್ಜಿತಃ ।
ಅತೀನ್ದ್ರಃ ಸಙ್ಗ್ರಹಃ ಸರ್ಗೋ ಧೃತಾತ್ಮಾ ನಿಯಮೋ ಯಮಃ ॥

151) **ಉಪೇಂದ್ರಃ**= ಇಂದ್ರನಿಗೆ ತಮ್ಮನಾಗಿ ಅವತಾರಮಾಡಿದವನು.

ಶಂ. ಭಾ. :– ಇಂದ್ರನ ತಮ್ಮನಾಗಿ ಅವನನ್ನು ಸಮೀಪಿಸಿದವನು ; ಇಂದ್ರನಿಗೆ (ಮೇಲೆ) ಇಂದ್ರನಾಗಿರುವವನು.

ಮಮೋಪರಿ ಯಥೇನ್ದ್ರಸ್ತ್ವಂ ಸ್ಥಾಪಿತೋ ಗೋಭಿರೀಶ್ವರಃ ।
ಉಪೇನ್ದ್ರ ಇತಿ ಕೃಷ್ಣ ತ್ವಾಂ ಗಾಸ್ಯನ್ತಿ ಭುವಿ ದೇವತಾಃ ॥

(ಹರಿ ೨-೧೯-೪೯)

153) **ಪ. ಭ. :–** ಆದಿತ್ಯರಲ್ಲಿ ಕೊನೆಯವನು ; ಇಂದ್ರನಿಗೆ ತಮ್ಮನಾಗಿ ಅವತರಿಸಿದವನು.

ಜಘನ್ಯಜಃ ಸ ಸರ್ವೇಷಾಂ ಆದಿತ್ಯಾನಾಂ ಗುಣಾಧಿಕಃ ।
ದ್ವಾದಶೈವಾದಿತೇಃ ಪುತ್ರಾಃ ಶಕ್ರಮುಖ್ಯಾ ನರಾಧಿಪ ॥
ತೇಷಾಮವರಜೋ ವಿಷ್ಣುಃ ಯತ್ರ ಲೋಕಾಃ ಪ್ರತಿಷ್ಠಿತಾಃ ॥
ನಿರುಕ್ತಿ :– ಇನ್ದ್ರಸ್ಯಾಪ್ಯನುಜತ್ವೇನ ಜಾತಶ್ಚೋಪೇನ್ದ್ರ ಉಚ್ಯತೇ ॥

152) **ಸ. ಸಂ. :–** ಇಂದ್ರನ ಅನುಜತ್ವವನ್ನು ಹೊಂದಿದವನು.

* * *

152) **ವಾಮನಃ** = ವಾಮನಾವತಾರವನ್ನು ಮಾಡಿದವನು ; ಪ್ರಾಣಾಪಾನಗಳ ಮಧ್ಯದಲ್ಲಿ ಹೃದಯದಲ್ಲಿ ಅಂಗುಷ್ಠಮಾತ್ರನಾಗಿ ಗೋಚರಿಸುವ ಪರಂಜ್ಯೋತಿಯು. **ಊರ್ಧ್ವಂ ಪ್ರಾಣಮುನ್ನಯತ್ಯಪಾನಂ ಪ್ರತ್ಯಗಸ್ಯತಿ ।**
ಮಧ್ಯೇ ವಾಮನಮಾಸೀನಂ ವಿಶ್ವೇದೇವಾ ಉಪಾಸತೇ ॥

(ಕಠ ೨-೫-೩)

ಶಂ. ಭಾ. :– ಬಲಿಯನ್ನು ವಾಮನರೂಪದಲ್ಲಿ ಯಾಚಿಸಿದವನು ; ಚೆನ್ನಾಗಿ ಭಜಿಸಲು ಯೋಗ್ಯನಾದವನು.

154) **ಪ. ಭ. :–** ಇಂದ್ರನ ರಕ್ಷಣೆಗೋಸ್ಕರ ಬಲಿಯ ಯಜ್ಞದಲ್ಲಿ ವಾಮನನಾದವನು ; ನೋಡುವವರನ್ನು ತನ್ನ ಕಾಂತಿಯಿಂದ ವಾಮಗಳಿಗೆ (ಸುಖಗಳಿಗೆ) ಒಯ್ಯುವವನು. **ದೃಷ್ಟ್ವಾನ್ಸ್ವಕಾನ್ತ್ಯಾ ವಾಮಾನಿ ಸುಖಾನಿ ನಯತಿ (ಶ್ರುತಿಃ)**

ನಿರುಕ್ತಿ :– **ದೃಷ್ಟ್ವಾ ಸ್ವಕಾನ್ತ್ಯಾ ವಾಮಾನಿ ಸುಖಾನಿ ನಯತೀತಿ ಯಃ ।**
ಸ ವಾಮನಃ......॥

153) **ಸ. ಸಂ. :–** ವಾಮಗಳನ್ನು (ಸುಂದರವಸ್ತುಗಳನ್ನು) ಹೊಂದಿಸುವವನು ; ವಾಮನನ್ನು (ಶತ್ರುವನ್ನು) ತಮಸ್ಸಿಗೆ ಒಯ್ಯುವವನು.

* * *

153) **ಪ್ರಾಂಶುಃ** = ಹೆಚ್ಚು ಉನ್ನತನಾದವನು (ತ್ರಿವಿಕ್ರಮನು).

ಶಂ. ಭಾ. :– ಮೊದಲು ವಾಮನನಾಗಿದ್ದು ಅನಂತರ ಮೂರು ಲೋಕಗಳಿಗೂ ಹೆಜ್ಜೆಯಿಡುವಾಗ ಹೆಚ್ಚು ಎತ್ತರವಾಗಿ ಬೆಳೆದವನು.

ತೋಯೇ ತು ಪತಿತೇ ಹಸ್ತೇ ವಾಮನೋಽಭೂದವಾಮನಃ ।
ಸರ್ವದೇವಮಯಂ ರೂಪಂ ದರ್ಶಯಾಮಾಸ ವೈ ಪ್ರಭುಃ ॥
ಭೂಃ ಪಾದೌ ದ್ಯೌಃ ಶಿರಶ್ಚಾಸ್ಯ ಚನ್ದ್ರಾದಿತ್ಯೌ ಚ ಚಕ್ಷುಷೀ ॥
(ಹರಿ ೩-೭೧-೪೪)

155) **ಪ. ಭ. :–** ಅತ್ಯಂತವ್ಯಾಪಕನಾದವನು. **ಇದಂ ವಿಷ್ಣುರ್ವಿಚಕ್ರಮೇ । ತ್ರೀಣಿ ಪದಾ ವಿಚಕ್ರಮೇ । ತ್ರಿರ್ದೇವಃ ಪೃಥಿವೀಂ । (ವಿಷ್ಣುಸೂಕ್ತ) ತ್ರಿವಿಕ್ರಮಕ್ರಮಾಕ್ರಾನ್ತತ್ರೈಲೋಕ್ಯಸ್ಫುರದಾಯುಧಃ (ವಿ. ಪು. ೫-೫-೧೭)**

ನಿರುಕ್ತಿ :– **ವ್ಯಾಪ್ತಿಮತ್ವಾತ್ಪ್ರಾಂಶುಶ್ಚ ಪರಿಕೀರ್ತಿತಃ ॥**

154) **ಸ. ಸಂ. :–** ತ್ರಿವಿಕ್ರಮರೂಪದಿಂದ ಉನ್ನತನಾದವನು.

* * *

154) **ಅಮೋಘಃ** = ವ್ಯರ್ಥವಾಗದೇ ಇರುವ (ಸಾರ್ಥಕವೇ ಆದ) ಕಾಮ-ಸಂಕಲ್ಪ-ಕೃತಿಗಳುಳ್ಳವನು.

ಶಂ. ಭಾ. :– ಯಾವನ ವ್ಯಾಪಾರಗಳು ವ್ಯರ್ಥವಾಗುವುದಿಲ್ಲವೋ ಅವನು.

156) ಪ. ಭ. :– (ಬಲಿ ಮತ್ತು ಇಂದ್ರ ಇಬ್ಬರನ್ನೂ ಪಕ್ಷಪಾತ ವಿಲ್ಲದೇ) ಕೃತಾರ್ಥಗೊಳಿಸಿದವನು ; ಅಳತೆಮೀರಿದ ಪ್ರಭಾವವುಳ್ಳವನು ; ವ್ಯರ್ಥವಲ್ಲದ ವ್ಯಾಪಾರಗಳುಳ್ಳವನು.

ಅನುಗ್ರಹಂ ಚಾಪಿ ಬಲೇರನುತ್ತಮಂ
ಚಕಾರ ಯಶ್ಚೇನ್ದ್ರಪದೋಪಮಂ ಕ್ಷಣಾತ್ ।
ಸುರಾಂಶ್ಚ ಯಜ್ಞಾಂಶಭುಜಃ..... (ವಿ.ಧ.೪೩-೩೫)

ನಿರುಕ್ತಿ :– ಬಲೇಶ್ಚ ವಾಸವಸ್ಯಾಪಿ ಕೃತಾರ್ಥೀಕರಣಾತ್ಸಮಮ್ ।
ಮಾನಾತೀತಪ್ರಭಾವತ್ವಾದಮೋಘಃ ಪರಿಕೀರ್ತಿತಃ ।
ನ ಮೋಘಂ ಚೇಷ್ಟಿತಂ ಯಸ್ಯ ಸೋಽಮೋಘಃ
ಪರಿಕೀರ್ತಿತಃ ॥

155) ಸ. ಸಂ. :– ಯಾವನ ಸಂಕಲ್ಪವು ಅಥವಾ ವಾಕ್ಯವು ಎಂದೆಂದಿಗೂ ವ್ಯರ್ಥವಾಗುವುದಿಲ್ಲವೋ–ಅವನು.

* * *

155) **ಶುಚಿಃ** = ಸರ್ವಾತ್ಮನಾ ಪವಿತ್ರನು.

ಶಂ. ಭಾ. :– ಸ್ಮರಿಸುವವರು, ಸ್ತುತಿಸುವವರು, ಪೂಜಿಸುವವರು– ಇವರೆಲ್ಲರನ್ನೂ ಪವಿತ್ರಗೊಳಿಸುವವನು. ಅಸ್ಯ ಸ್ಪರ್ಶಶ್ಚ ಮಹಾನ್ ಶುಚಿಃ॥

157) ಪ. ಭ. :– (ಉಪಕಾರಗಳಿಗೆ ಸ್ವಲ್ಪವೂ ಪ್ರತ್ಯುಪಕಾರವನ್ನು ಅಪೇಕ್ಷಿಸದೇ ಇರುವುದರಿಂದ) ಶುದ್ಧನಾದವನು.

ನಿರುಕ್ತಿ :– ಸ್ವಯಂಕೃತೋಪಕಾರೇಷು ಯತ್ಕಿಂಚಿತ್ಪ್ರತ್ಯುಪಕ್ರಿಯಾಮ್ ।
ಅನಪೇಕ್ಷ್ಯ ಸ್ಥಿತೋ ಯೋಽಸೌ ಶುಚಿಃ ಸ್ಯಾದ್ಧರ್ಮದೋ
ಮನುಃ ॥

156) **ಸ. ಸಂ. :–** ಶುದ್ಧನು.

* * *

156) **ಊರ್ಜಿತಃ** = ಅತ್ಯಧಿಕವಾದ ಬಲ ಪ್ರಾಣಗಳುಳ್ಳವನು.

ಶಂ. ಭಾ. :– ಅತ್ಯಂತಬಲಶಾಲಿಯಾದವನು.

158) **ಪ. ಭ. :–** ಶತ್ರುಸಂಹಾರ-ಬಂಧನಾದಿಗಳಲ್ಲಿ ಅತ್ಯಂತಬಲಿಷ್ಠನಾದವನು.

ನಿರುಕ್ತಿ :– ಊರ್ಜಾ ಬಲಂ ಯಸ್ಯ ನಿತ್ಯಂ ಸಂಜಾತೇತ್ಯೂರ್ಜಿತಃ ಸ್ಮೃತಃ ॥

157) **ಸ. ಸಂ. :–** ಅನ್ನದಾನಿಗಳನ್ನು ಅಭಿವೃದ್ಧಿಗೊಳಿಸುವವನು.

* * *

157) **ಅತೀನ್ದ್ರಃ** = ಇಂದ್ರನನ್ನು ಜ್ಞಾನೈಶ್ವರ್ಯಾದಿಗಳಿಂದ ಮತ್ತು ಸ್ಥಾನ-ಮಾನಾದಿಗಳಿಂದ ಮೀರಿಸಿದವನು.

ಶಂ. ಭಾ. :– ಸ್ವಭಾವಸಿದ್ಧವಾದ ಜ್ಞಾನೈಶ್ವರ್ಯಾದಿಗಳಿಂದ ಇಂದ್ರನಿಗಿಂತಲೂ ಅಧಿಕನಾದವನು.

159) **ಪ. ಭ. :–** ಇಂದ್ರನಿಗೆ ತಮ್ಮನಾಗಿದ್ದರೂ ಕೂಡ ಐಶ್ವರ್ಯ, ಕೀರ್ತಿ–ಇತ್ಯಾದಿಗಳಿಂದ ಅವನಿಗಿಂತಲೂ ಅತಿಶಯನಾದವನು.

ನಿರುಕ್ತಿ :– ಇನ್ದ್ರಾನುಜತ್ವೇಽಪ್ಯೈಶ್ವರ್ಯಾದತೀತೋಽತೀನ್ದ್ರ ಉಚ್ಯತೇ ॥

158) **ಸ. ಸಂ. :–** ಇಂದ್ರನನ್ನು ಮೀರಿಸಿದವನು.

* * *

158) **ಸಂಗ್ರಹಃ** = ಎಲ್ಲವನ್ನೂ ಉಪಸಂಹಾರಮಾಡಿಕೊಳ್ಳುವವನು. ಸೂಕ್ಷ್ಮರೂಪದಲ್ಲಿರುವವನು.

ಶಂ. ಭಾ. :– ಪ್ರಳಯಕಾಲದಲ್ಲಿ ಎಲ್ಲವನ್ನೂ ಸಂಗ್ರಹಮಾಡಿಕೊಳ್ಳುವವನು.

160) **ಪ. ಭ. :–** (ಮೂರು ಲೋಕಗಳಲ್ಲಿಯೂ ತನ್ನ ಪಾದಪದ್ಮ

ಗಳನ್ನು ಬೆಳೆಸಿದ್ದರಿಂದ ಭಕ್ತರಿಗೆ) ಅತ್ಯಂತಸುಲಭವಾಗಿ ದೊರೆಯುವವನು ; ಚೆನ್ನಾಗಿ ಹಿಡಿದುಕೊಳ್ಳಲು ಸಾಧ್ಯನಾದವನು.

ನಿರುಕ್ತಿ :– **ಭಕ್ತೈರಪ್ಯಪ್ರಯತ್ನೇನ ಸಂಗ್ರಾಹ್ಯಃ ಸಂಗ್ರಹಃ ಸ್ಮೃತಃ ll**

159) **ಸ. ಸಂ.** :– ಭಕ್ತರನ್ನು ಚೆನ್ನಾಗಿ ಗ್ರಹಿಸುವವನು ; ಸಮೀಚೀನವಾದ ಪಾತ್ರವಿಶೇಷಗಳು ಯಾವನಿಗೋಸ್ಕರ ಇವೆಯೋ–ಅವನು ; ಸಮೀಚೀನವಾದ ಸೂರ್ಯನೇ ಮುಂತಾದ ಗ್ರಹಗಳು ಶಿಂಶುಮಾರನ ರೂಪವಾದ ಯಾವನಲ್ಲಿವೆಯೋ–ಅವನು.

* * *

159) **ಸರ್ಗಃ**= ಸೃಷ್ಟಿಗೆ ಕಾರಣನಾದವನು ; ಸೃಷ್ಟಿರೂಪನಾದವನು.

ಶಂ. ಭಾ. :– ಸೃಷ್ಟಿಸಲ್ಪಡುವ ಜಗತ್ತಿನ ರೂಪನು ; ಸೃಷ್ಟಿಗೆ ಕಾರಣನಾದವನು.

161) **ಪ. ಭ.** :– (ಬ್ರಹ್ಮಾದಿಗಳಿಗೆ ಸ್ನೇಹಭಾವದಿಂದ ತನ್ನನ್ನು ಕೊಟ್ಟುಕೊಂಡು ಅವರಿಂದಲೇ) ಸೃಷ್ಟಿಸಲ್ಪಡುವವನು. ನಿಸೃಷ್ಟಾತ್ಮಾಸುಹೃತ್ಸು ಚ ll
(ರಾ. ಯು. ೧೭-೩೬)

ನಿರುಕ್ತಿ :– **ಬ್ರಹ್ಮಾದಿಭ್ಯಃ ಸೃಜ್ಯತೇ ಯಃ ಸರ್ಗಂ ತಂ ಪರಿಚಕ್ಷತೇ ll**

160) **ಸ. ಸಂ.** :– ಸೃಷ್ಟಿಸುವವನು.

* * *

160) **ಧೃತಾತ್ಮಾ** = ಧೀರನು ; ಆತ್ಮಸಂಯಮವುಳ್ಳವನು ; ಅವಿಕಾರ ಸ್ವರೂಪವನ್ನು ಧರಿಸಿರುವವನು ; ಚೇತನಗಳನ್ನು ಧರಿಸಿ ಪೋಷಿಸುತ್ತಿರುವವನು ; ಧಾರಣಾಯೋಗದಿಂದ ಧರಿಸಲ್ಪಟ್ಟವನು.

ಶಂ. ಭಾ. :– ಜನ್ಮಾದಿರಹಿತನಾಗಿರುವುದರಿಂದ ತನ್ನ ಸ್ವರೂಪವನ್ನು ಏಕರೂಪದಿಂದ ಧರಿಸಿರುವವನು.

162) **ಪ. ಭ.** :– ಆತ್ಮಗಳನ್ನು ಧರಿಸಿರುವವನು.

ನಿರುಕ್ತಿ : **ಯೇನಾತ್ಮಾನೋ ಧೃತಾ ನಿತ್ಯಂ ಸ ಧೃತಾತ್ಮೇತಿ ಕೀರ್ತ್ಯತೇ**

161) **ಸ. ಸಂ.** :– ಧೀರಮನಸ್ಸುಳ್ಳವನು ; ಜೀವಗಳನ್ನು ಧರಿಸಿರು

ವವನು ; ಋಷಿಗಳಿಂದ ಧರಿಸಲ್ಪಟ್ಟ ಮನಸ್ಸುಳ್ಳವನು ; ಯಾವನಲ್ಲಿ ಋಷಿಗಳ ಮನಸ್ಸು ಧರಿಸಲ್ಪಟ್ಟಿದೆಯೋ–ಅವನು.

* * *

161) **ನಿಯಮಃ** = ಜೀವಜಗತ್ತುಗಳನ್ನು ನಿಯಮಿಸುವವನು. ನಿಯಮಯೋಗವುಳ್ಳವನು.

ಶಂ. ಭಾ. :– ಪ್ರಜೆಗಳನ್ನು ಅವರವರ ಅಧಿಕಾರಗಳಲ್ಲಿ ನಿಯಮಿಸುವವನು.

163) **ಪ. ಭ. :–** ಜಗತ್ತನ್ನು ನಿಯಮಿಸುವವನು.

ನಿರುಕ್ತಿ :– ನಿಯಮ್ಯತೇ ಜಗದ್ಯೇನ ನಿಯಮಃ ಸ ಉದೀರಿತಃ ||

162) **ಸ. ಸಂ. :–** ನಿಯಮಿಸುವವನು.

* * *

162) **ಯಮಃ** = ಯಮಧರ್ಮಸ್ವರೂಪಿಯು ; ಯಮಯೋಗವುಳ್ಳವನು ; ಯಮನನ್ನು ನಿಯಮಿಸುವವನು ; ಅಂತರ್ಯಾಮಿಯಾಗಿ ಎಲ್ಲವನ್ನೂ ನಡೆಸುವವನು. **ಯಮೋ ವೈಶ್ರವಣೋ ರಾಜಾ ಯಸ್ತವೈಷ ಹೃದಿ ಸ್ಥಿತಃ |** (ಮನು. ೮-೯೨)

ಶಂ. ಭಾ. :– ಅಂತಃಕರಣದಲ್ಲಿದ್ದು ನಿಯಮನಮಾಡುವವನು.

164) **ಪ. ಭ. :–** ನಿಷ್ಕಂಟಕವಾಗಿಯೂ ಮತ್ತು ಅನುಕೂಲವಾಗಿಯೂ ಎಲ್ಲವನ್ನೂ ನಿಯಮಿಸುವವನು. **ಯಃ ಪೃಥಿವೀಮನ್ತರೋ ಯಮಯತಿ |** (ಬೃ.೫-೭-೩) **ಯ ಆತ್ಮಾನಮನ್ತರೋ ಯಮಯತಿ |** (ಮಾಧ್ಯಂದಿನಶಾಖಾ)

ನಿರುಕ್ತಿ :– ಅಕಣ್ಟಕಂ ಚಾನುಕೂಲಂ ಯಚ್ಛತೀತ್ಯಖಿಲಂ ಯಮಃ ||

163) **ಸ. ಸಂ. :–** ನಿಯಮಿಸುವವನು ; **ಯಮೋ ನಿಯಮನಾದ್ಧರಿಃ || ಅಯಮಃ** = ತನಗೆ ನಿಯಾಮಕನಾದವನು ಅಥವಾ ಸಮನಾದವನು ಬೇರೆ ಯಾರೂ ಇಲ್ಲದವನು ; ಅಯವನ್ನು (ಶುಭವನ್ನುಂಟುಮಾಡುವ ವಿಧಿಯನ್ನು) ತಿಳಿದವನು.

* * *

ವೇದ್ಯೋ ವೈದ್ಯಃ ಸದಾಯೋಗೀ ವೀರಹಾ ಮಾಧವೋ ಮಧುಃ ।
ಅತೀನ್ದ್ರಿಯೋ ಮಹಾಮಾಯೋ ಮಹೋತ್ಸಾಹೋ ಮಹಾಬಲಃ ॥

163) **ವೇದ್ಯಃ** = ತಿಳಿಯಲು ಯೋಗ್ಯನಾದವನು.

ಶಂ. ಭಾ. :– ಮೋಕ್ಷವನ್ನು ಬಯಸುವವರಿಂದ ತಿಳಿಯಲು ಯೋಗ್ಯನಾದವನು.

165) **ಪ. ಭ. :–** ತನ್ನ ಅತೀಂದ್ರಿಯಮಹಿಮೆಯನ್ನು ಪ್ರಕಟಿಸಿರುವುದರಿಂದ ಮತ್ತು ತನ್ನ ಸೌಲಭ್ಯದ ಕಾರಣ ಎಲ್ಲರಿಂದಲೂ ತಿಳಿಯಲು ಸಾಧ್ಯನಾದವನು.

ನಿರುಕ್ತಿ :– ಸರ್ವೈಶ್ಚ ವೇದಿತುಂ ಶಕ್ಯಃ ಸೌಲಭ್ಯಾದ್ವೇದ್ಯ ಈರಿತಃ ॥

164) **ಸ. ಸಂ. :–** ತಿಳಿಯಲು ಯೋಗ್ಯನಾದವನು (ಜ್ಞೇಯನು.)

* * *

164) **ವೈದ್ಯಃ** = ವಿದ್ವಾಂಸನು ; ಆಧಿ-ವ್ಯಾಧಿಚಿಕಿತ್ಸಕನು ; ಭವರೋಗ ವೈದ್ಯನು.

ಶಂ. ಭಾ. :– ಎಲ್ಲ ವಿದ್ಯೆಗಳನ್ನೂ ಅರಿತವನು.

166) **ಪ. ಭ. :–** ಜ್ಞಾನಿಗಳ ಭವರೋಗವನ್ನು ಹೋಗಲಾಡಿಸುವ ವಿದ್ಯೆಯನ್ನು ಅಧ್ಯಯನಮಾಡಿರುವವನು ಅಥವಾ ತಿಳಿದಿರುವವನು.

ನಿರುಕ್ತಿ :– ವೇದಿತ್ರೂಣಾಂ ಭವಾಖ್ಯಸ್ಯ ಗದಸ್ಯ ವಿನಿವರ್ತನೀಮ್ ।
ವಿದ್ಯಾಮಧೀತೇ ವೇದೇತಿ ಯೋ ವೈದ್ಯಃ ಸಮುದಾಹೃತಃ ॥

165) **ಸ. ಸಂ. :–** ಭವರೋಗಪರಿಹಾರಕ್ಕೆ ಎಲ್ಲ ವಿದ್ಯೆಗಳಿಂದಲೂ ಪ್ರತಿಪಾದಿಸಲ್ಪಡುವವನು.

* * *

165) **ಸದಾಯೋಗೀ** = ಸದಾ ಜಾಗರೂಕನಾಗಿರುವವನು ; **ಯ ಏಷ ಸುಪ್ತೇಷು ಜಾಗರ್ತಿ ॥** ಯಾವಾಗಲೂ ಯೋಗದಲ್ಲಿರುವವನು ; ಯೋಗದಿಂದ ಎಂದಿಗೂ ಚ್ಯುತನಾಗದವನು.

ಶಂ. ಭಾ. :– ಆವಿರ್ಭೂತನಾಗಿರುವವನು. (ನಿತ್ಯಪ್ರತ್ಯಕ್ಷಸ್ವರೂಪವುಳ್ಳವನು.)

167) **ಪ. ಭ. :–** (ಭಕ್ತರ ರೋಗಚಿಕಿತ್ಸೆಯಲ್ಲಿ) ಸದಾ ಜಾಗರೂಕನಾಗಿರುವವನು.

ನಿರುಕ್ತಿ :– **ಚಿಕಿತ್ಸಾಯಾಂ ಜಾಗರೂಕಃ ಸದಾಯೋಗೀತಿ ಕಥ್ಯತೇ ॥**

166) **ಸ. ಸಂ. :–** ಕಪಿಲಾದಿ ಮಹರ್ಷಿಗಳ ರೂಪದಿಂದ ಸದಾ ಯೋಗಿಯಾಗಿರುವವನು.

* * *

166) **ವೀರಹಾ**= ವೀರರಾದ ಅಸುರರನ್ನು ಕೊಲ್ಲುವವನು.

ಶಂ. ಭಾ. :– ಧರ್ಮರಕ್ಷಣೆಗಾಗಿ ವೀರರಾದ ಅಸುರರನ್ನು ಸಂಹರಿಸುವವನು.

168) **ಪ. ಭ. :–** ತನ್ನ ಧ್ಯಾನಕ್ಕೆ ಭಂಗವನ್ನುಂಟುಮಾಡುವ (ಹೇತುವಾದಿಗಳಾದ) ವೀರರನ್ನು ಸಂಹರಿಸುವವನು.

ನಿರುಕ್ತಿ :– **ಸ್ವಧ್ಯಾನಭಞ್ಜಕಾನ್ವೀರಾನ್ಹನ್ತಿ ಯಃ ಸ ತು ವೀರಹಾ ॥**

167) **ಸ. ಸಂ. :–** ವಾಯುದ್ವೇಷಿಗಳನ್ನು ಸಂಹರಿಸುವವನು ; ಗರುಡ ಮತ್ತು ವಾಯುಗಳ ಮೂಲಕ ಸಂಚರಿಸುವವನು.

* * *

167) **ಮಾಧವಃ** = ರಮಾಪತಿಯು ; ಬ್ರಹ್ಮವಿದ್ಯೆಗೆ ಸ್ವಾಮಿಯಾದವನು.

ಶಂ. ಭಾ. :– ವಿದ್ಯೆಗೆ ಸ್ವಾಮಿಯಾದವನು.

ಮಾ ವಿದ್ಯಾ ಚ ಹರೇಃ ಪ್ರೋಕ್ತಾ ತಸ್ಯಾ ಈಶೋ ಯತೋ ಭವಾನ್ ।
ತಸ್ಮಾನ್ಮಾಧವನಾಮಾಸಿ ಧವಃ ಸ್ವಾಮೀತಿ ಶಬ್ದಿತಃ ॥

(ಹರಿ ೩-೮೮-೪೯)

169) **ಪ. ಭ. :–** ಬ್ರಹ್ಮವಿದ್ಯೆಗೆ ಸ್ವಾಮಿಯಾದವನು ; ಮೌನ, ಧ್ಯಾನ ಮತ್ತು ಯೋಗಗಳುಳ್ಳವನು. **ಮೌನಾದ್ಧ್ಯಾನಾಚ್ಚ ಯೋಗಾಚ್ಚ ವಿದ್ಧಿ ಭಾರತ ಮಾಧವಮ್ ।** (ಮ. ಉ. ೬೯-೪)

ನಿರುಕ್ತಿ :– **ಮಾ ವಿದ್ಯಾ ಚ ಹರೇಃ ಪ್ರೋಕ್ತಾ ತಸ್ಯಾಃ ಸ್ವಾಮೀ ಧವಃ ಸ್ಮೃತಃ ।**
ತಸ್ಮಾನ್ಮಾಧವನಾಮಾಸೌ ಬ್ರಹ್ಮವಿದ್ಯಾಪ್ರದೋ ಮನುಃ ॥

168) **ಸ. ಸಂ. :–** ಕಂಪಿಸದೇ ಇರುವವನು.

* * *

168) **ಮಧುಃ** = ಮಧುರಸ್ವರೂಪನು ಮತ್ತು ಮನನೀಯಸ್ವರೂಪನು.

ಶಂ. ಭಾ. :– ಜೇನಿನಂತೆ ಪರಮಪ್ರೀತಿಯನ್ನು ಉಂಟುಮಾಡುವವನು.

170) **ಪ. ಭ. :–** ಜ್ಞಾನವನ್ನು ಪಡೆದ ಭಕ್ತರಿಗೆ ಅತ್ಯಂತವಾಗಿ ರುಚಿಸುವವನು. **ವಿಷ್ಣೋಃ ಪದೇ ಪರಮೇ ಮಧ್ವ ಉತ್ಸಃ** (ವಿ. ಸೂ.)
ನಿರುಕ್ತಿ : **ಭಕ್ತೇಭ್ಯೋ ಲಬ್ಧ ವಿದ್ಯೇಭ್ಯೋ ಸ್ವದಮಾನತಯಾ ಮಧುಃ ॥**

169) **ಸ. ಸಂ. :–** ಸುಖರೂಪಿಯಾದವನು.

* * *

169) **ಅತೀನ್ದ್ರಿಯಃ** =ಇಂದ್ರಿಯಗಳಿಗೆ ವಿಷಯನಾಗದೇ ಇರುವವನು.

ಶಂ. ಭಾ. :–ಶಬ್ದವೇ ಮುಂತಾದ ವಿಷಯಗಳಿಂದ ರಹಿತನಾಗಿರುವುದರಿಂದ ಇಂದ್ರಿಯಗಳಿಗೆ ವಿಷಯನಾಗದೇ ಇರುವವನು. **ಅಶಬ್ದಮಸ್ಪರ್ಶಂ** (ಕಠ ೧-೩-೧೫)

171) **ಪ. ಭ. :–** ಇಂದ್ರಿಯಗಳು ಎಂದರೆ ಜ್ಞಾನೋಪಕರಣಗಳು. ಅವುಗಳಿಗೆ ವಿಷಯವಾಗದೇ ಇರುವವನು ; ಅತೀಂದ್ರಿಯನು.
ನಿರುಕ್ತಿ :– **ಜ್ಞಾನೋಪಕರಣವ್ರಾತಮತಿಕ್ರಾನ್ತೋ ಹ್ಯತೀನ್ದ್ರಿಯಃ ॥**

170) **ಸ. ಸಂ. :–** ಇಂದ್ರಿಯಗಳನ್ನು ಮೀರಿದವನು ಅಥವಾ ಅತ್ಯಧಿಕವಾದ ಇಂದ್ರಿಯಗಳುಳ್ಳವನು.

* * *

170) **ಮಹಾಮಾಯಃ** = ಮಹಾಮಾಯಾವಿಯು. ಮಾಯಾವಿಗಳನ್ನೂ ಮಾಯೆಯಲ್ಲಿ ಸಿಲುಕಿಸುವ ದೊಡ್ಡ ಮಾಯಾವಿಯು.

ಶಂ. ಭಾ. :– ಮಾಯಾವಿಗಳ ಮೇಲೂ ಮಾಯೆಯನ್ನು ಬೀಸುವವನು. **ಮಮ ಮಾಯಾ ದುರತ್ಯಯಾ** (ಗೀತಾ ೭-೧೪)

172) **ಪ. ಭ. :–** ಶರಣಾಗತರಾಗದೇ ಇರುವ ಖಲಜನರನ್ನು ಮೋಹಗೊಳಿಸುವ ತೆರೆಯಂತಿರುವ ಮಾಯೆಯುಳ್ಳವನು. **ಗುಣಮಾಯಾ ಸಮಾವೃತಃ** (ಜಿತಂ ತೇ ಸ್ತೋತ್ರ-೩ ಶ್ರೀಪಾಂಚರಾತ್ರ)

ನಿರುಕ್ತಿ **:– ಮಾಯಾ ಯಸ್ಯಾಪ್ರಪನ್ನಾನಾಂ ಸರ್ವೇಷಾಮಸ್ತಿ ಮೋಹನೀ ।**
ಮಹಾಮಾಯಃ ಸ ವಿಜ್ಞೇಯೋ ವಸ್ವರ್ಣೋ ಮನು-
ರುಜ್ಜ್ವಲಃ ॥

171) **ಸ. ಸಂ. :–** ದೊಡ್ಡವಳಾದ ರಮಾದೇವಿಗೆ ಶುಭಕರನಾದವನು ; ಮಹಾತ್ಮರಾದ ಜ್ಞಾನಿಗಳಿಗೆ ಲಾಭವನ್ನುಂಟುಮಾಡುವವನು ; ಕಪಟವಿಲ್ಲದ ಮಹಾತ್ಮನು ; ಮಹತ್ತಾದ ಮಾಯೆ (ಇಚ್ಛೆ)ಯುಳ್ಳವನು.

* * *

171) **ಮಹೋತ್ಸಾಹಃ** = ಮಹತ್ತಾದ ಉತ್ಸಾಹವುಳ್ಳವನು ; ಜಗತ್ತಿನ ವ್ಯಾಪಾರಗಳಲ್ಲಿ ಮತ್ತು ಭಕ್ತರಕ್ಷಣೆಯಲ್ಲಿ ಅಮಿತವಾದ ಉತ್ಸಾಹವುಳ್ಳವನು.

ಶಂ. ಭಾ. :– ಜಗತ್ತಿನ ಉತ್ಪತ್ತಿ, ಸ್ಥಿತಿ ಮತ್ತು ಪ್ರಳಯಗಳಲ್ಲಿ ತತ್ಪರನಾಗಿರುವುದರಿಂದ ಮಹೋತ್ಸಾಹನು.

173) **ಪ. ಭ. :–** ಅತ್ಯಧಿಕವಾದ ಉತ್ಸಾಹವುಳ್ಳವನು ; ಕರ್ತೃತ್ವರೂಪವಾದ ಈಶ್ವರಭಾವವನ್ನು ಹೊಂದಿರುವುದರಿಂದ ಇಂತಹ ಅತ್ಯಧಿಕವಾದ ಉತ್ಸಾಹವನ್ನು ಹೊಂದಿರುವವನು. (ಸಾಂಖ್ಯರ ಈಶ್ವರನಂತೆ ಉದಾಸೀನ ನಲ್ಲ).

ನಿರುಕ್ತಿ **:– ಮಹದುತ್ಸಹನಂ ಯಸ್ಯ ಹ್ಯೈಶ್ವರ್ಯಂ ಕರ್ತೃಲಕ್ಷಣಮ್ ।**
ಮಹೋತ್ಸಾಹಃ ಸ ವಿಜ್ಞೇಯಃ ಮನುರೈಶ್ವರ್ಯದಾಯಕಃ ॥

172) **ಸ. ಸಂ. :–** ಜಗತ್ತಿನ ಸೃಷ್ಟಿಯೇ ಮುಂತಾದ ವ್ಯಾಪಾರಗಳಲ್ಲಿ

ಅಧಿಕವಾದ ಉದ್ಯೋಗವುಳ್ಳವನು ; ಯಜ್ಞವೇ ಮುಂತಾದ ಉತ್ಸವಗಳಲ್ಲಿ ಉತ್ಸಾಹವುಳ್ಳವನು.

* * *

172) **ಮಹಾಬಲಃ** = ಅತ್ಯಂತಬಲಿಷ್ಠನಾದವನು.

ಶಂ. ಭಾ. :– ಬಲಶಾಲಿಗಳಲ್ಲಿಯೂ ಅತ್ಯಂತಬಲಿಷ್ಠನು.

174) **ಪ. ಭ. :–** (ಇತರರ ಸಹಾಯವಿಲ್ಲದೇ, ಇತರ ಕರ್ತೃಗಳ ಅಪೇಕ್ಷೆಯಿಲ್ಲದೇ ಅನಾಯಾಸವಾಗಿಯೇ ಸೃಷ್ಟಿಯೇ ಮುಂತಾದುವನ್ನು ಮಾಡುವ) ಅಪರಿಮಿತಬಲಶಾಲಿಯು.

ನಿರುಕ್ತಿ :– ಕರ್ತ್ರನ್ತರಾನಪೇಕ್ಷೋ ಯಃ ಸೃಷ್ಟೇಃ ಸ ಸ್ಯಾನ್ಮಹಾಬಲಃ ।

173) **ಸ. ಸಂ. :–** ಮಹಾಬಲವುಳ್ಳವನು ; ಉತ್ತಮಸ್ತ್ರೀಯಾದ ಲಕ್ಷ್ಮಿಯುಳ್ಳವನು ; ಇಂದ್ರನಿಗೆ (ಅಬಲನಿಗೆ) ಮಹತ್ತ್ವವನ್ನುಂಟುಮಾಡಿದವನು.

* * *

ಮಹಾಬುದ್ಧಿರ್ಮಹಾವೀರ್ಯೋ ಮಹಾಶಕ್ತಿರ್ಮಹಾದ್ಯುತಿಃ ।
ಅನಿರ್ದೇಶ್ಯವಪುಃ ಶ್ರೀಮಾನಮೇಯಾತ್ಮಾ ಮಹಾದ್ರಿಧೃತ್ (ಕ್) ॥

173) **ಮಹಾಬುದ್ಧಿಃ**= ಮಹಾಬುದ್ಧಿಶಾಲಿಯಾದವನು.

ಶಂ. ಭಾ. :– ಬುದ್ಧಿವಂತರಲ್ಲಿ ಅತ್ಯಂತಬುದ್ಧಿವಂತನು.

175) **ಪ. ಭ. :–** ಸರ್ವಜ್ಞತ್ವರೂಪವಾದ ಜ್ಞಾನವುಳ್ಳವನು ; ಮಹಾಜ್ಞಾನಸ್ವರೂಪನು.

ನಿರುಕ್ತಿ :– ಮಹಾಬುದ್ಧಿರ್ಮಹದ್‌ಜ್ಞಾನಂ ಸ್ವರೂಪಂ ಯಸ್ಯ ಸೋಽಚ್ಯತೇ ।

174) **ಸ. ಸಂ. :–** ಮಹಾಬುದ್ಧಿಯುಳ್ಳವನು.

* * *

174) **ಮಹಾವೀರ್ಯಃ** = ಅಮೋಘವಾದ, ಅತ್ಯಧಿಕವಾದ ಮತ್ತು ಸದಾ ಅವಿಕಾರಿಯಾದ ವೀರ್ಯವುಳ್ಳವನು.

ಶಂ. ಭಾ. :– ಉತ್ಪತ್ತಿಗೆ ಕಾರಣವಾದ ಮಹತ್ತಾದ ಅವಿದ್ಯೆಯೆಂಬ ವೀರ್ಯವುಳ್ಳವನು.

176) **ಪ. ಭ. :–** ವಿಕಾರವನ್ನುಂಟುಮಾಡುವ ಕಾರಣಗಳಿದ್ದರೂ ವಿಕಾರವನ್ನು ಹೊಂದದೇ ಇರುವ ಅಕ್ಷೋಭ್ಯವಾದ ವೀರ್ಯವುಳ್ಳವನು.

ನಿರುಕ್ತಿ :– **ಹೇತೌ ಸತಿ ವಿಕಾರಿತ್ವೇಽಪ್ಯವಿಕಾರಿತ್ವಲಕ್ಷಣಮ್ ।**
ಮಹದ್ಧಿ ವೀರ್ಯಂ ಯಸ್ಯೇತಿ ಮಹಾವೀರ್ಯಃ ಸ ಚ ಸ್ಮೃತಃ ॥

175) **ಸ. ಸಂ. :–** ಮಹಾವೀರ್ಯವುಳ್ಳವನು.

* * *

175) **ಮಹಾಶಕ್ತಿಃ**= ಮಹಾಶಕ್ತಿಶಾಲಿಯು.

ಶಂ. ಭಾ. :– ಮಹಾಸಾಮರ್ಥ್ಯವುಳ್ಳವನು.

177) **ಪ. ಭ. :–** ಮಹಾಶಕ್ತಿಸಂಪನ್ನನು.

ನಿರುಕ್ತಿ :– **ಶಕ್ತಿಶ್ಚ ಮಹತೀ ಯಸ್ಯ ಮಹಾಶಕ್ತಿಃ ಸ ಕೀರ್ತಿತಃ ॥**

176) ಸ. ಸಂ. :– ದೊಡ್ಡ ಶಕ್ತಿಯುಳ್ಳವನು ; ನಿಗ್ರಹಾನುಗ್ರಹಗಳಿಂದ ಮಹತ್ತಾದ ಶಕ್ತಿಗಳು ಯಾವನಿಂದ ಉಂಟಾಗುತ್ತವೆಯೋ–ಅವನು.

* * *

176) **ಮಹಾದ್ಯುತಿಃ**= ಪರಂಜ್ಯೋತಿಃಸ್ವರೂಪನು.

ಶಂ. ಭಾ. :– ಮಹತ್ತಾದ ಒಳ-ಹೊರಕಾಂತಿಗಳುಳ್ಳವನು. **ಸ್ವಯಂ ಜ್ಯೋತಿಃ(ಬೃ.೪-೩-೯) ಜ್ಯೋತಿಷಾಂ ಜ್ಯೋತಿಃ(ಬೃ.೪-೪-೧೬)**

178) **ಪ. ಭ. :–** ಇತರ ಸಹಕಾರಿಗಳನ್ನು ಅಪೇಕ್ಷಿಸದ ಮಹಾ ತೇಜಸ್ಸುಳ್ಳವನು.

ನಿರುಕ್ತಿ :– **ತೇಜೋಽನಪೇಕ್ಷರೂಪಂ ಸ್ವಂ ಮಹದ್ಯಸ್ಯ ಮಹಾದ್ಯುತಿಃ ॥**

177) **ಸ. ಸಂ. :–** ಮಹತ್ತಾದ ಸೂರ್ಯಪ್ರಕಾಶವು ಯಾವನಿಂದ ಉಂಟಾಗುತ್ತದೆಯೋ ಮತ್ತು ಅದು ಯಾವನದೇ ಆಗಿದೆಯೋ–ಅವನು. **ತಮೇವ ಭಾನ್ತಮನುಭಾತಿ ಸರ್ವಂ (ಕಠ) ರೂಪನೀಪಾಚಿಕಾ ಚೈವ**

ಶೋಷಣೀ ಚ ಪ್ರಕಾಶನೀ । ನೈವ ರಾಜನ್ರವೇಃ ಶಕ್ತಿಃ ಶಕ್ತಿರ್ನಾರಾಯಣಸ್ಯ ಚ ॥ (ನೃಸಿಂಹ-ಪು.)

* * *

177) **ಅನಿರ್ದೇಶ್ಯವಪುಃ** = ನಿರ್ದೇಶಮಾಡಲು ಅಸಾಧ್ಯವಾದ ಸ್ವರೂಪವುಳ್ಳವನು ; (ಸ್ವಾನುಭವದಿಂದಲೇ ತಿಳಿಯಲ್ಪಡಬೇಕಾದವನು ; ಆದರೆ ಇತರರಿಗೆ ನಿರ್ದೇಶಿಸಲು ಸಾಧ್ಯವಾಗದ ರೂಪವುಳ್ಳವನು.)

ಶಂ. ಭಾ. :– ಸ್ವಾನುಭವೈಕವೇದ್ಯನಾಗಿರುವುದರಿಂದ ಇತರರಿಗೆ ನಿರ್ದೇಶಮಾಡಲು ಸಾಧ್ಯನಾಗದವನು.

179) **ಪ. ಭ.** :– ಅನುಪಮವಾದ ದೇಹವುಳ್ಳವನು. ಜ್ಞಾನಾದಿ ಷಾಡ್ಗುಣ್ಯಮಯನಾಗಿ ಅನುಪಮನಾಗಿರುವುದರಿಂದ 'ಇದು ಇದೇ ರೀತಿ ಯದು'–ಎಂದು ನಿರ್ದೇಶಿಸಿ ಹೇಳಲು ಅಸಾಧ್ಯವಾದ ಮಹತ್ತಮತೇಜಸ್ಸುಳ್ಳ ದಿವ್ಯವಿಗ್ರಹವುಳ್ಳವನು.

ನಿರುಕ್ತಿ :– **ಜ್ಞಾನಾದಿಷಾಡ್ಗುಣ್ಯಮಯಂ ಉಪಮಾನವಿವರ್ಜಿತಮ್ ।**
ವಪುರಸ್ಯಾಸ್ತಿ ತೇಜಿಷ್ಠಂ ಅನಿರ್ದೇಶ್ಯವಪುರ್ಹಿ ಸಃ ॥

178) **ಸ. ಸಂ.** :– ನಿರ್ದೇಶಿಸಲು ಅಸಾಧ್ಯವಾದ ದೇಹವುಳ್ಳವನು ; **ಅನಾತ್ಮಾಸೋಽಪ್ರಸಿದ್ಧತ್ವಾತ್ ।** ಅನುಪಮವಾದ್ದರಿಂದ ನಿರ್ದೇಶಶೂನ್ಯವಾದ ದೇಹವುಳ್ಳವನು ; ಕಾಮನಿಗಿಂತಲೂ ಅತ್ಯಂತಸುಂದರನಾದವನು. **ಸಾಕ್ಷಾನ್ಮನ್ಮಥಮನ್ಮಥಃ ।**

* * *

178) **ಶ್ರೀಮಾನ್** = ಶ್ರೀಸಂಪನ್ನನು.

ಶಂ. ಭಾ. :– ಐಶ್ವರ್ಯರೂಪವಾದ ಸಮಗ್ರಶ್ರೀಸಂಪನ್ನನು.

180) **ಪ. ಭ.** :– ದಿವ್ಯಭೂಷಣಸಂಪತ್ತಿನಿಂದ ಸದಾ ಯುಕ್ತನಾಗಿರುವವನು.

ನಿರುಕ್ತಿ :– **ದಿವ್ಯಭೂಷಣಸಂಪದ್ಭಿರ್ಯುಕ್ತಃ ಶ್ರೀಮಾನ್ಸದಾ ಸ್ಮೃತಃ ॥**

179) **ಸ. ಸಂ.** :– **ಶ್ರೀಮಾನಮೇಯಾತ್ಮಾ** = ಸಂಪೂರ್ಣವಾಗಿ

ತಿಳಿಯಲು ಅಸಾಧ್ಯವಾದ ಸ್ವರೂಪವುಳ್ಳವನು. ಶ್ರೀದೇವಿಗೆ ಮಾತ್ರವೇ ಮಾನಗಳಿಂದ ಅಳೆಯಲು ಸಾಧ್ಯವಾಗುವ ಸ್ವರೂಪವುಳ್ಳವನು.

* * *

179) **ಅಮೇಯಾತ್ಮಾ** = ಅಳೆಯಲಾಗದ ಸ್ವರೂಪವುಳ್ಳವನು.

ಶಂ. ಭಾ. :– ಎಲ್ಲ ಪ್ರಾಣಿಗಳಿಗೂ ಅಳೆಯಲು ಅಸಾಧ್ಯವಾದ ಬುದ್ಧಿಯುಳ್ಳವನು.

181) **ಪ. ಭ. :–** ಸಮುದ್ರಗಾಂಭೀರ್ಯವನ್ನು ಹೊಂದಿರುವುದರಿಂದ ಅಳೆಯಲು ಅಸಾಧ್ಯವಾದ ಸ್ವಭಾವವುಳ್ಳವನು.
ನಿರುಕ್ತಿ :– **ಸಿನ್ಧುಗಮ್ಭೀರಭಾವೋ ಯೋ ಹ್ಯಮೇಯಾತ್ಮಾ ಸ ಕೀರ್ತಿತಃ॥**

* * *

180) **ಮಹಾದ್ರಿಧೃಕ್**= ಮಹಾಪರ್ವತವನ್ನು ಧರಿಸಿದವನು.

ಶಂ. ಭಾ. :– ಅಮೃತಮಥನ ಮತ್ತು ಗೋಸಂರಕ್ಷಣಸಂದರ್ಭಗಳಲ್ಲಿ ಮಂದರಪರ್ವತವನ್ನೂ–ಗೋವರ್ಧನಪರ್ವತವನ್ನೂ ಧರಿಸಿದವನು.

182) **ಪ. ಭ. :–** ಮಹತ್ತಾದ ಮಂದರಪರ್ವತವನ್ನು ಧರಿಸಿದವನು.
ನಿರುಕ್ತಿ :– **ಮಹಾನ್ತಂ ಮನ್ದರಂ ಯೋ ಹಿ ಧೃತವಾನ್ಸಮಹಾದ್ರಿಧೃತ್ ।**

180) **ಸ. ಸಂ. :–** ಮಹತ್ತಾದ ಮಂದರಪರ್ವತ ಮತ್ತು ಗೋವರ್ಧನಪರ್ವತಗಳನ್ನು ಧರಿಸಿದವನು ; ಅದ್ರಿ ಎಂದರೆ ಪ್ರಾಣ. ಆದರಣೀಯವಾದುದು. ಅಂತಹ ಮಹಾಪ್ರಾಣವನ್ನು ಧರಿಸಿದವನು.

* * *

ಮಹೇಷ್ವಾಸೋ ಮಹೀಭರ್ತಾ ಶ್ರೀನಿವಾಸಃ ಸತಾಂ ಗತಿಃ ।
ಅನಿರುದ್ಧಃ ಸುರಾನನ್ದೋ ಗೋವಿನ್ದೋ ಗೋವಿದಾಂ ಪತಿಃ ॥೩೩॥

181) **ಮಹೇಷ್ವಾಸಃ** = ಮಹತ್ತಾದ ಧನುಸ್ಸುಳ್ಳವನು, ಅಥವಾ ಬಾಣಗಳ ಎಸೆಯುವಿಕೆಯುಳ್ಳವನು ; ದೊಡ್ಡ ಬಿಲ್ಲುಗಾರನು.

ಶಂ. ಭಾ. :– ಮಹತ್ತಾದ ಇಷ್ವಾಸವು (ಬಾಣಬಿಡುವಿಕೆಯು) ಯಾವನಿಗಿದೆಯೋ–ಅವನು.

183) **ಪ. ಭ. :–** ಮನೋಹರವಾದ ಚಂಡಕೋದಂಡವುಳ್ಳವನು.
ನಿರುಕ್ತಿ :– **ಮಹೇಷ್ವಾಸಃ ಸ ವಿಜ್ಞೇಯಃ ಚಣ್ಡಕೋದಣ್ಡಮಣ್ಡಿತಃ ॥**

181) **ಸ. ಸಂ. :–** ಮಹತ್ತಾದ ಬತ್ತಳಿಕೆಯುಳ್ಳವನು ; ಮಹತ್ತಾದ ಇಚ್ಛೆ ಅಥವಾ ಬಾಣವುಳ್ಳವನು ; ಮಹತ್ತಾದ ಬತ್ತಳಿಕೆಯುಳ್ಳವನು ಮತ್ತು **ಮಹೇಷುಃ ಆಸಃ** –ಸರ್ವಗತನಾದವನು.

* * *

182) **ಮಹೀಭರ್ತಾ** = ಭೂಮಿಗೆ ಪತಿಯಾದವನು ; (ಇವನ ಅಂಶ ವಿರುವುದರಿಂದಲೇ ರಾಜರುಗಳಿಗೂ ಭೂಪತಿತ್ವವು.) ಭೂಮಿಯನ್ನು ಧರಿಸಿದ ಯಜ್ಞವರಾಹನು.

ಶಂ. ಭಾ. :– ಪ್ರಳಯಕಾಲದಲ್ಲಿ ಸಮುದ್ರದ ನೀರಿನಲ್ಲಿ ಮುಳುಗಿದ್ದ ಭೂಮಿಯನ್ನು ಧರಿಸಿದವನು.

184) **ಪ. ಭ. :–** ಭೂಮಿಯನ್ನು ಲೀಲೆಯಿಂದ ಧರಿಸಿದವನು ; ಧರಿಸಿರುವವನು.
ನಿರುಕ್ತಿ :– **ಧರಣೀಧೃತಿಲೀಲಃ ಸಃ ಮಹೀಭರ್ತೇತಿ ಶಬ್ದ್ಯತೇ ॥**

182) **ಸ. ಸಂ. :–** ಉತ್ಸವವುಳ್ಳವನು ಮತ್ತು ಲಕ್ಷ್ಮೀದೇವಿಗೆ ಅಥವಾ ಕಾಮನಿಗೆ ಒಡೆಯನಾದವನು ; ಭೂದೇವಿಗೆ ಒಡೆಯನಾದವನು.

* * *

183) **ಶ್ರೀನಿವಾಸಃ** = ಲಕ್ಷ್ಮಿಗೆ ವಾಸಸ್ಥಾನನಾದವನು.

ಶಂ. ಭಾ. :– ವಕ್ಷಃಸ್ಥಳದಲ್ಲಿ ಲಕ್ಷ್ಮಿಯ ನಿತ್ಯವಾಸವುಳ್ಳವನು.

185) **ಪ. ಭ. :–** ಸಮುದ್ರಮಥನಸಮಯದಲ್ಲಿ ಬಂದ ಲಕ್ಷ್ಮೀದೇವಿ ಯನ್ನು ವಕ್ಷಃಸ್ಥಳದಲ್ಲಿ ಹತ್ತಿಸಿಕೊಂಡವನು ; ಅವಳಿಗೆ ವಾಸಸ್ಥಾನ ವಾಗಿರುವವನು.
ನಿರುಕ್ತಿ :– **ಮಥನಾನೀತಲಕ್ಷ್ಮೀವಾಕ್ಷ್ಮೀನಿವಾಸ ಇತೀರಿತಃ ॥**

183) **ಸ. ಸಂ. :–** ಶ್ರೀದೇವಿಯು ಯಾವನಲ್ಲಿ ವಾಸಮಾಡುತ್ತಾಳೆಯೋ–ಅವನು ; ಶ್ರೀಯನ್ನು ಒಯ್ಯುವವನು ಮತ್ತು ಎಲ್ಲವನ್ನೂ ಆಚ್ಛಾದಿಸಿರುವವನು ; ಎಲ್ಲವೂ ವಾಸಮಾಡುವಂತೆ ಮಾಡುವವನು ; ಎಲ್ಲೆಲ್ಲಿಯೂ ವಾಸಮಾಡುವವನು.

* * *

184) **ಸತಾಂ ಗತಿಃ** = ಸಂತರಿಗೆ (ಬ್ರಹ್ಮದ ಆಸ್ತಿತ್ವವನ್ನು ಅರಿತವರಿಗೆ) ಗತಿಯಾದವನು. **ಅಸ್ತಿ ಬ್ರಹ್ಮೇತಿ ಚೇದ್ವೇದ। ಸನ್ತಮೇನಂ ತತೋ ವಿದುರಿತಿ** (ತೈ. ಉ.)

ಶಂ. ಭಾ. :– ವೈದಿಕರಾದ ಸಾಧುಗಳಿಗೆ ಪುರುಷಾರ್ಥಗಳ ಸಾಧನೆಗೆ ಕಾರಣನಾದವನು.

186) **ಪ. ಭ. :–** ಭಕ್ತರಿಗೆ ಪ್ರಿಯಕರನಾದವನು.

ನಿರುಕ್ತಿ :– ಪ್ರಣತಾನಾಂ ಪ್ರಿಯಕರಃ ಸತಾಂ ಗತಿರಿಹೋಚ್ಯತೇ ।

184) **ಸ. ಸಂ. :–** ಮುಕ್ತರಿಗೆ ಗತಿಯಾದವನು ; ಆರ್ತರಿಗೆ ಅಥವಾ ಜ್ಞಾನಿಗಳಿಗೆ ಗತಿಯಾದವನು.

* * *

185) **ಅನಿರುದ್ಧಃ** = ತನ್ನ ವ್ಯಾಪಾರಗಳಲ್ಲಿ ಯಾರಿಂದಲೂ ತಡೆಯಲಾಗದವನು. ಅವ್ಯಕ್ತದಿಂದ ವ್ಯಕ್ತನಾದವನು ; ಮಹಾತ್ಮನು. **ಅನಿರುದ್ಧೋ ಹಿ ಲೋಕೇಷು ಮಹಾನಾತ್ಮೇತಿ ಕಥ್ಯತೇ ॥** (ಮ. ಭಾ. ಶಾಂ. ೩೪೦-೩೦)

ಶಂ. ಭಾ. :– ತನ್ನ ಪ್ರಾದುರ್ಭಾವದ ಸಮಯದಲ್ಲಿ ಯಾರಿಂದಲೂ ತಡೆಯಲ್ಪಡದವನು.

187) **ಪ. ಭ. :–**(ಜೀವಲೋಕಕ್ಕೆ ಜೀವನೌಷಧವಾಗಿ) ಪ್ರತಿಬಂಧಕವೇ ಇಲ್ಲದ ಅನಂತಚೇಷ್ಟೆಗಳಿಂದ ಕೂಡಿದವನು.

ನಿರುಕ್ತಿ :– ಅನನ್ತಚೇಷ್ಟಾಯುಕ್ತತ್ವಾದನಿರುದ್ಧ ಉದಾಹೃತಃ ॥

185) **ಸ. ಸಂ. :–** ಯಾರಿಂದಲೂ ತಡೆಯಲ್ಪಡದವನು ; ಜ್ಞಾನಿಗಳ ವಿಷಯದಲ್ಲಿ ಅಡೆ-ತಡೆಗಳಿಲ್ಲದವನು ; ಮುಖ್ಯಪ್ರಾಣನನ್ನು ಹೊಂದಿದವ

ರಿಂದ ಹೃದಯದಲ್ಲಿ ಬಂಧಿಸಲ್ಪಡುವವನು ; ವೇದವಿರುದ್ಧವಾದ ಆಚಾರವುಳ್ಳವರನ್ನು ಕೊಂದುಹಾಕುವವನು.

* * *

186) **ಸುರಾನನ್ದಃ** = ದೇವತೆಗಳಿಗೆ ಆನಂದವನ್ನುಂಟುಮಾಡುವವನು.

ಶಂ. ಭಾ. :– ದೇವತೆಗಳಿಗೆ ಆನಂದದಾಯಕನು.

188) **ಪ. ಭ. :–** (ಆಪತ್ಸಖನಾಗಿ) ಸುರರಿಗೆ ಸದಾ ಆನಂದವನ್ನು ಉಂಟುಮಾಡುವವನು.

ನಿರುಕ್ತಿ :– **ಸುರಾನನ್ದಃ ಸುರಾನ್ಸರ್ವಾನಾನನ್ದಯತಿ ಯಃ ಸದಾ ॥**

186) **ಸ. ಸಂ. :–** ಶೋಭನವಾದ ಜ್ಞಾನವನ್ನು ಕೊಟ್ಟು ಆನಂದವನ್ನುಂಟುಮಾಡುವವನು.

* * *

187) **ಗೋವಿನ್ದಃ** = ಗೋವುಗಳನ್ನು (ಪಶುಗಳನ್ನು) ಅಥವಾ ದೇವವಾಣಿಗಳನ್ನು ಅಥವಾ ಭೂಮಿಯನ್ನು ಪಡೆದವನು.

ಶಂ. ಭಾ. :– ಗೋವನ್ನು (ಪೃಥ್ವಿಯನ್ನು) ಪಡೆದವನು ; ಧೇನುಗಳಿಗೆ ಇಂದ್ರನಾದವನು ; ವಾಣಿಯನ್ನು ಹೊಂದಿಸುವವನು. **ನಷ್ಟಾಂ ವೈ ಧರಣೀಂ ಪೂರ್ವಮವಿನ್ದಂ ಯದ್ಗುಹಾಗತಾಮ್ ।** (ಮ.ಶಾ. ೩೪೨-೭೦) **ಅಹಂ ಕಿಲೇನ್ದ್ರೋ ದೇವಾನಾಂ ತ್ವಂ ಗವಾಮಿನ್ದ್ರತಾಂ ಗತಃ ।** (ಹರಿವಂಶ ೨-೧೯-೪೫) **ಗೌರೇಷಾ ತು ಯತೋ ವಾಣೀ ತಾಂ ಚ ವಿನ್ದಯತೇ ಭವಾನ್ ।** (ಹರಿ. ೩-೮೮-೫೦)

189) **ಪ. ಭ. :–** ಸ್ತೋತ್ರವಚನಗಳನ್ನು ಪಡೆದವನು.

ನಿರುಕ್ತಿ :– **ಗವಾಂ ಸ್ತುತಿಗಿರಾಂ ವಿನ್ದೋ ಗೋವಿನ್ದಃ ಸ ಉದಾಹೃತಃ**

187) **ಸ. ಸಂ. :–** ಭೂಮಿಯನ್ನು, ಬಾಣವನ್ನು, ಧೇನುವನ್ನು, ಸ್ವರ್ಗವನ್ನು ಅಥವಾ ವೇದವನ್ನು ಪಡೆದವನು.

* * *

188) **ಗೋವಿದಾಂ ಪತಿಃ** =ವೇದವಾಣಿಯನ್ನು ಪಡೆದವರಿಗೆ (ವೇದಜ್ಞ ರಿಗೆ) ಒಡೆಯನಾದವನು ; ಗೋಪಾಲರಿಗೆ ಒಡೆಯನು.

ಶಂ. ಭಾ. :– ವಾಣಿಯನ್ನು ಪಡೆದವರನ್ನು ವಿಶೇಷವಾಗಿ ಕಾಪಾಡುವವನು.

190) **ಪ. ಭ. :–** ವೇದವಾಣಿಗಳನ್ನು ಚೆನ್ನಾಗಿ ಪಾಲಿಸುವವನು.

ನಿರುಕ್ತಿ :– **ಗಾವೋ ವೇದಗಿರಃ ಪ್ರೋಕ್ತಾಃ ಗೋವಿನ್ದಸ್ತತ್ಸುಪಾಲನಾತ್ ।**
ಗೋವಿದಾಂ ಪತಿರುದ್ದಿಷ್ಟಃ ವೇದವಿದ್ವತ್ಪ್ರದೋ ಮನುಃ ॥

188) **ಸ. ಸಂ. :–** ವೇದವನ್ನು ಬಲ್ಲವರಿಗೆ ಒಡೆಯನು ; ಜಲಚರಗಳಿಗೆ ಅಧಿಪತಿಯಾದವನು.

* * *

ಮರೀಚಿರ್ದಮನೋ ಹಂಸಃ ಸುಪರ್ಣೋ ಭುಜಗೋತ್ತಮಃ ।
ಹಿರಣ್ಯನಾಭಃ ಸುತಪಾಃ ಪದ್ಮನಾಭಃ ಪ್ರಜಾಪತಿಃ ॥೩೪॥

189) **ಮರೀಚಿಃ** = ಕಿರಣಗಳುಳ್ಳವನು ; ತೇಜಸ್ವಿಯು.

ಶಂ. ಭಾ. :– ತೇಜಸ್ವಿಗಳಿಗೂ ಪರಮತೇಜಸ್ಸಾಗಿರುವವನು. **ತೇಜಸ್ತೇಜಸ್ವಿನಾಮಹಮ್ ॥** (ಗೀತಾ ೭-೧೦)

191) **ಪ. ಭ. :–** ಹಂಸಾವತಾರನಾಗಿ ಕುರುಡಾಗಿರುವ ಪ್ರಾಣಿಗಳಿಗೂ ಕೂಡ ತನ್ನ ನಿರ್ಮಲರೂಪವನ್ನು ಪ್ರಕಾಶಪಡಿಸಿದವನು ; ಕಿರಣ ಸ್ವರೂಪನು; ಕಿರಣದಂತೆ ಪ್ರಕಾಶವುಳ್ಳವನು.

ನಿರುಕ್ತಿ :– **ಅನ್ಧೇಭ್ಯೋಽಪಿ ಚ ಜನ್ತುಭ್ಯಃ ಹಂಸಗ್ರೀವಾವತಾರತಃ ।**
ಪ್ರಕಾಶಿತಸ್ವರೂಪತ್ವಾನ್ಮರೀಚಿರಿತಿ ಕಥ್ಯತೇ ॥

189) **ಸ. ಸಂ. :–** ತಮಸ್ಸನ್ನು ನಾಶಮಾಡುವವನು ; ಜಲಚರಗಳಿಗೆ ಅಧಿಪತಿಯಾದವನು.

* * *

190) **ದಮನಃ** = ದುಷ್ಟರನ್ನು ದಮನಮಾಡುವವನು.

ಶಂ. ಭಾ. :– ತಮ್ಮ ಅಧಿಕಾರದಲ್ಲಿ ಪ್ರಮಾದವನ್ನೆಸಗುವ ಪ್ರಜೆಗಳನ್ನು ಯಮನೇ ಮುಂತಾದ ರೂಪಗಳಿಂದ ದಂಡಿಸುವ ಸ್ವಭಾವವಿರುವವನು.

192) **ಪ. ಭ. :–** ತನ್ನ (ಕಾಂತಿ-ಪ್ರವಾಹಗಳಿಂದ) ಭವತಾಪವನ್ನು ದಮನಮಾಡುವವನು.

ನಿರುಕ್ತಿ :– ಭವತಾಪಸ್ಯ ದಮನಾತ್ಕಾನ್ತ್ಯಾ ದಮನ ಈರಿತಃ ॥

190) **ಸ. ಸಂ. :–** ದಮನಾಸುರನನ್ನು ಸಂಹಾರಮಾಡಿದವನು ; ದಮನಮಾಡುವುದರಲ್ಲಿ ಪ್ರೀತಿಯುಳ್ಳವನು ; ದಮವುಳ್ಳವರನ್ನು (ಇಂದ್ರಿಯ ನಿಗ್ರಹವುಳ್ಳವರನ್ನು) ಒಯ್ಯುವವನು ; ಅಭೀಷ್ಟಪ್ರದವಾದ ಮನಸ್ಸುಳ್ಳವನು.

* * *

191) **ಹಂಸಃ** = ಪ್ರಾಣಸ್ವರೂಪಿಯು ; ಸೂರ್ಯಸ್ವರೂಪಿಯು ; ಶುದ್ಧಾತ್ಮಸ್ವರೂಪಿಯು ; ಜ್ಞಾನಪ್ರದವಾದ ಹಂಸಾವತಾರವನ್ನು ಮಾಡಿದವನು ; ಹಂಸಮಹಾಮಂತ್ರರೂಪಿಯು ; ಪ್ರಣವಸ್ವರೂಪಿಯು.

ಶಂ. ಭಾ. :– "ನಾನು ಅವನೇ ಆಗಿದ್ದೇನೆ"–ಎಂದು ತಾದಾತ್ಮ್ಯವನ್ನು ಭಾವಿಸುವ ಜ್ಞಾನಿಗಳ ಸಂಸಾರಭಯವನ್ನು ನಾಶಮಾಡುವವನು ; ಎಲ್ಲ ಶರೀರಗಳಲ್ಲಿಯೂ ಸಂಚರಿಸುವವನು. **ಹಗ್ಂಸಃ ಶುಚಿಷತ್** (ಕಠ ೨೫)

193) **ಪ. ಭ. :–** ಸಂಗಗಳನ್ನು ಸಂಹರಿಸುವವನು ; ಮನೋಹರವಾದ ನಡೆಯುಳ್ಳವನು. **ಹನ್ತಾ ಸಜ್ಞಾನಾಂ** (ಮೌಲಸಂಹಿತಾ) **ಸತ್ಸತ್ತ್ವಶುಭಾಶ್ರಯಪರಮಹಂಸಾಯ.**

ನಿರುಕ್ತಿ :– ಹನ್ತಾ ಸಂಗಮ್ಯ ವಸತಿ ಗಚ್ಛತೀತಿ ಮನೋಹರಮ್ ।
ಹಂಸಃ...... ॥

191) **ಸ. ಸಂ. :–**ದೋಷಹೀನನಾದವನು ಮತ್ತು ಸಾರವಾದವನು ; **ನಿತ್ಯಂ ಹೀನೋಽಖಿಲೈರ್ದೋಷೈಃ ಸಾರರೂಪೋ ಯತೋ ಹರಿಃ । ಹಂಸ ಇತ್ಯುಚ್ಯತೇ ತಸ್ಮಾತ್** (ಕಾಠಕ. ಭಾಷ್ಯ)

* * *

192) **ಸುಪರ್ಣಃ** = ಸುಂದರವಾದ ರೆಕ್ಕೆಗಳುಳ್ಳ ಗರುಡಸ್ವರೂಪನು. ವೇದಪುರುಷಸ್ವರೂಪಿಯು.

ಶಂ. ಭಾ. :– ಶೋಭನವಾದ ಧರ್ಮ ಮತ್ತು ಅಧರ್ಮರೂಪಗಳಾದ ರೆಕ್ಕೆಗಳುಳ್ಳವನು ; **ದ್ವಾಸುಪರ್ಣಾ** (ಮುಂ. ೩-೧-೧) ಸುಂದರವಾದ ರೆಕ್ಕೆಗಳುಳ್ಳ ಪಕ್ಷಿರಾಜನಾದ ಗರುಡನು. **ಸುಪರ್ಣಃ ಪತತಾಮಸ್ಮಿ** (ಈಶ್ವರವಚನ)

194) **ಪ. ಭ.** :– ಸುಂದರವಾದ ರೆಕ್ಕೆಗಳುಳ್ಳವನು ; ಸಂಸಾರದ ಪಾರಕ್ಕೆ ಒಯ್ಯುವವನು.

ನಿರುಕ್ತಿ :– **ಶೋಭನಪರ್ಣತ್ವಾತ್ಸುಪರ್ಣ ಇತಿ ಕಥ್ಯತೇ ।**
ಸಂಸಾರಪಾರನಯನಾತ್ಸುಪರ್ಣ ಇತಿ ವಾ ಮತಃ ॥

192) **ಸ. ಸಂ.** :– ಪರಮಾನಂದರೂಪನಾದವನು.

* * *

193) **ಭುಜಗೋತ್ತಮಃ** = ಸರ್ವಶ್ರೇಷ್ಠನಾದ ಶೇಷನಾಗಸ್ವರೂಪಿಯು ; ಶುದ್ಧಕುಂಡಲಿನೀಸ್ವರೂಪಿಯು.

ಶಂ. ಭಾ. :– ಶ್ರೇಷ್ಠಸರ್ಪಸ್ವರೂಪನು. ಶೇಷ, ವಾಸುಕೀ–ಮುಂತಾದುವುಗಳು ಭಗವಂತನ ವಿಭೂತಿಗಳು.

195) **ಪ. ಭ.** :– ಸರ್ಪರಾಜನಿಗೆ ಶೇಷಿಯಾದವನು. ಅನಂತ-ಭೋಗಪರ್ಯಂಕದಲ್ಲಿ ಪವಡಿಸಿರುವ ಪದ್ಮನಾಭನು.

ನಿರುಕ್ತಿ :– **ಭುಜಗಸ್ಯೋತ್ತಮಃ ಶೇಷೀ ಭುಜಗೋತ್ತಮ ಉಚ್ಯತೇ ।**

193) **ಸ. ಸಂ.** :– ಶೇಷಶಯನನು ; ತಮೋಯೋಗ್ಯರಾದ ಜೀವಗಳಿಗೆ (ಕುಟಿಲರಿಗೆ) ಅಂಧತಮಸ್ಸನ್ನು ಕೊಡುವವನು.

* * *

194) **ಹಿರಣ್ಯನಾಭಃ** = ಹಿರಣ್ಯದಂತೆ ಕಂಗೊಳಿಸುವ ಹಿತರಮಣೀಯವಾದ ನಾಭಿಯುಳ್ಳವನು ; ಹಿರಣ್ಯಗರ್ಭವನ್ನು (ಬ್ರಹ್ಮನನ್ನು) ನಾಭಿಯಲ್ಲಿ ಹೊಂದಿರುವವನು.

ಶಂ. ಭಾ. :– ಹಿರಣ್ಯದಂತೆ ಮಂಗಳಕರವಾದ ನಾಭಿಯುಳ್ಳವನು ; ಹಿತರಮಣೀಯವಾದ ನಾಭಿಯುಳ್ಳವನು.

196) **ಪ. ಭ. :–** ಸೌಂದರ್ಯಪೂರ್ಣವಾದ ನಾಭಿಯುಳ್ಳವನು ; ಮಹಾಮೇರುಕರ್ಣಿಕಾರೂಪವಾದ ಸುವರ್ಣವನ್ನು ನಾಭಿಯಲ್ಲಿ ಹೊಂದಿರುವವನು.

ನಿರುಕ್ತಿ :– ಹಿರಣ್ಯನಾಭಃ ಸೌನ್ದರ್ಯನಾಭಿರ್ಯಸ್ಯೇತಿ ಸ ಸ್ಮೃತಃ ॥

194) **ಸ. ಸಂ. :–** ಹಿರಣ್ಯರಾಕ್ಷಸನನ್ನು ಸಂಹರಿಸಿದವನು.

* * *

195) **ಸುತಪಾಃ** = ಶ್ರೇಷ್ಠತಪಸ್ವಿಯು.

ಶಂ. ಭಾ. :– ಬದರಿಕಾಶ್ರಮದಲ್ಲಿ ನರ-ನಾರಾಯಣರೂಪದಿಂದ ಶ್ರೇಷ್ಠತಪಸ್ಸನ್ನು ಆಚರಿಸಿದವನು. ತಪಸ್ಸು ಎಂದರೆ ಮನಸ್ಸು ಮತ್ತು ಇಂದ್ರಿಯಗಳ ಏಕಾಗ್ರತೆ. **ಮನಸಶ್ಚೇನ್ದ್ರಿಯಾಣಾಂ ಚಾಪ್ಯೈಕಾಗ್ರ್ಯಂ ಪರಮಂ ತಪಃ ॥** (ಮೋ. ಧ. ೨೫೦-೪)

197) **ಪ. ಭ. :–** ಶ್ರೇಷ್ಠವಾದ ಜ್ಞಾನವುಳ್ಳವನು ; ಜ್ಞಾನಶರೀರಿಯು ; **ದಿವ್ಯಬೋಧತನುರ್ವಿಭುಃ ।** (ವಿ. ಪು.)

ನಿರುಕ್ತಿ :– ತಪೋ ಬುದ್ಧಿಃ ಸೈವ ತನುಃ ಸುತಪಾ ಯಸ್ಯ ಸಃ ಸ್ಮೃತಃ ॥

195) **ಸ. ಸಂ. :–** ಶೋಭನವಾದ ಜ್ಞಾನವುಳ್ಳವನು ; ಸುತನಾದ ಚತುರ್ಮುಖನನ್ನು ರಕ್ಷಿಸುವವನು ; ಸೋಮರಸವನ್ನು ಪಾನಮಾಡು ವವನು.

* * *

196) **ಪದ್ಮನಾಭಃ** = ಸೃಷ್ಟಿಮೂಲವಾದ ಕಮಲವನ್ನೇ ನಾಭಿಯಲ್ಲಿ ಹೊಂದಿರುವವನು ; ಪದ್ಮಸದೃಶವಾದ ನಾಭಿಯುಳ್ಳವನು.

ಶಂ. ಭಾ. :– ಪದ್ಮದಂತೆ ಒಳ್ಳೆಯ ವರ್ತುಳಾಕಾರವಾದ ಸುಳಿನಾಭಿಯುಳ್ಳವನು. ಹೃದಯಕಮಲದ ಮಧ್ಯದಲ್ಲಿ ಪ್ರಕಾಶಿಸುವವನು.

198) **ಪ. ಭಾ. :–** ಅವತಾರಗಳಿಗೆ ಪ್ರಥಮವಾದ ಪದ್ಮನಾಭರೂಪಿಯು. ಬ್ರಹ್ಮಪುರಾಣವು ಹೇಳಿರುವಂತೆ ಅಷ್ಟದಳವೂ, ಸ್ವರ್ಣಮಯವೂ, ದಿವ್ಯವೂ, ಮೇರುಕರ್ಣಿಕೆಯುಳ್ಳದ್ದೂ ಆದ ಪದ್ಮದ ಉತ್ಪತ್ತಿಯುಳ್ಳವನು.

ನಿರುಕ್ತಿ :–

ಪಾರ್ಥಿವಂ ಭೂರಿಪದ್ಮಂ ತು ನಾಭಾವಷ್ಟದಳಂ ಮಹತ್ ।
ಯಸ್ಯ ಹೇಮಮಯೀ ದಿವ್ಯಾ ಕರ್ಣಿಕಾ ಮೇರುರುಚ್ಯತೇ ।
ಯಸ್ಯ ನಾಭೌ ತದುತ್ಪತ್ತಿಃ ಪದ್ಮನಾಭಃ ಸ ಉಚ್ಯತೇ ॥

196) **ಸ. ಸಂ. :–** ಚತುರ್ಮುಖನನ್ನು ನಾಭಿಯಲ್ಲಿ ಹೊಂದಿರುವವನು. ಭಗವದ್ಭಕ್ತರಿಗೆ ಚೆನ್ನಾಗಿ ಪ್ರಕಾಶಿಸುವವನು.

* * *

197) **ಪ್ರಜಾಪತಿಃ** = ಸೃಷ್ಟಿಕರ್ತನು ; ಪ್ರಜೆಗಳಿಗೆ ಪತಿಯಾದವನು.

ಶಂ. ಭಾ. :– ಪ್ರಜೆಗಳಿಗೆ ಪತಿಯು ; ಒಡೆಯನಾದವನು.

199) **ಪ. ಭ. :–** ನೈಮಿತ್ತಿಕಸೃಷ್ಟಿಯಲ್ಲಿ ಜನಿಸಿದ ಬ್ರಹ್ಮನೇ ಮುಂತಾದ ಪ್ರಜೆಗಳಿಗೆ ನಾಯಕನಾದವನು.

ನಿರುಕ್ತಿ :– **ನೈಮಿತ್ತಿಕೇ ತು ಯೇ ಸೃಷ್ಟಾಃ ಪ್ರಜಾ ಬ್ರಹ್ಮಮುಖಾಸ್ತಥಾ ।**
ತೇಷಾಂ ಚೈವ ಪತಿಃ ಸ್ವಾಮೀ ಪ್ರಜಾಪತಿರಿಹೋಚ್ಯತೇ ॥

197) **ಸ. ಸಂ. :–** ಪ್ರಜೆಗಳಿಗೆ ಪತಿಯಾದವನು. ಶ್ರೇಷ್ಠವಾದ ಜಪ-ಸ್ತುತಿ-ಧ್ಯಾನಗಳನ್ನು ಮಾಡುವವರಿಗೆ ಆನಂದವನ್ನು ಕೊಡುವವನು. **ಆನನ್ದನ್ತೀತಿ ವದೇತ್ ।**

* * *

ಅಮೃತ್ಯುಃ ಸರ್ವದೃಕ್ಸಿಂಹಃ ಸಂಧಾತಾ ಸಂಧಿಮಾನ್ಸ್ಥಿರಃ ।
ಅಜೋ ದುರ್ಮರ್ಷಣಃ ಶಾಸ್ತಾ ವಿಶ್ರುತಾತ್ಮಾ ಸುರಾರಿಹಾ ॥೩೫॥

198) **ಅಮೃತ್ಯುಃ** = ಮೃತ್ಯುವಿಲ್ಲದವನು ; ಮೃತ್ಯುವಿನಿಂದ ರಹಿತನಾದವನು ; ಮರಣವಿಲ್ಲದವನು ; ಶಾಶ್ವತನು.

ಶಂ. ಭಾ. :– ಮೃತ್ಯು ಎಂದರೆ ವಿನಾಶ. ಅದಕ್ಕೆ ಕಾರಣನಾಗದೇ ಇರುವುದರಿಂದ ಅಮೃತ್ಯುವು.

200) **ಪ. ಭ. :–** (ಇಲ್ಲಿಂದ ನೃಸಿಂಹಾವತಾರ ನಾಮಗಳು ಪ್ರಾರಂಭವಾಗುತ್ತವೆ.) ಮೃತ್ಯುವಿಗೆ ಮೃತ್ಯುವಾದುದರಿಂದ ಮೃತ್ಯುವಿಗೆ ವಿರೋಧಿಯಾದವನು.

ನಿರುಕ್ತಿ :– ನರಸಿಂಹಮಥ ಸ್ತೌತಿ ಸರ್ವಮೃತ್ಯುನಿವಾರಣಮ್ ॥

ಮೃತ್ಯೋರ್ವಿರೋಧಿರೂಪೋ ಯೋ ಮೃತ್ಯುಮೃತ್ಯುತ್ವರೂಪತಃ ।
ಅಮೃತ್ಯುರಿತಿ ತಂ ಪ್ರಾಹುಃ ಸಪ್ತಾರ್ಣೋ ಮೃತ್ಯುನಾಶಕಃ ॥

198) **ಸ. ಸಂ. :–** ಯಾವನಿಗೆ ಮರಣವಿಲ್ಲವೋ–ಅವನು ; ಯಾವನ ದೆಸೆಯಿಂದ ಮರಣವು ಸಂಭವಿಸುವುದಿಲ್ಲವೋ–ಅವನು ಅಮೃತ್ಯುವು.

* * *

199) **ಸರ್ವದೃಕ್** = ಎಲ್ಲವನ್ನೂ ನೋಡುವವನು ; ಪ್ರಾಣಿಗಳು ಮಾಡಿದ ಪಾಪ-ಪುಣ್ಯಕರ್ಮಗಳನ್ನು ನೋಡುವವನು ; ಎಲ್ಲ ಕಡೆಗಳ ಲ್ಲಿಯೂ ದೃಷ್ಟಿಯಿರುವವನು.

ಶಂ. ಭಾ. :– ಪ್ರಾಣಿಗಳು ಮಾಡಿದ ಮತ್ತು ಮಾಡದಿರುವ ಎಲ್ಲ ವನ್ನೂ ಸ್ವರೂಪಜ್ಞಾನದಿಂದ ನೋಡುವವನು.

201) **ಪ. ಭ. :–** ತನಗೆ ಅನುಕೂಲರಾದವರನ್ನೂ, ಪ್ರತಿಕೂಲ ರಾದವರನ್ನೂ, ತನ್ನ ವಿಷಯದಲ್ಲಿ ತಟಸ್ಥರಾಗಿರುವವರನ್ನೂ–ಅವರವರ ಮನೋಭಾವನೆಗಳಿಗೆ ಅನುಗುಣವಾಗಿ ಫಲವೀಯಲು ನೋಡುತ್ತಿರು ವವನು; ಎಲ್ಲ ಕಡೆಗಳಲ್ಲಿಯೂ ನೋಡುವವನು.

ನಿರುಕ್ತಿ :– ಅನುಕೂಲಾಂಸ್ತಟಸ್ಥಾಂಶ್ಚ ಪ್ರತಿಕೂಲಾನಪಿ ಸ್ವಯಮ್ ।
ನಿಯನ್ತುಂ ಚ ಯಥಾಯೋಗ್ಯಂ ಯಃ ಪಶ್ಯತಿ ಸ ಸರ್ವದೃಕ್ ॥

199) **ಸ. ಸಂ. :–** ಎಲ್ಲವನ್ನೂ ನೋಡುವವನು.

* * *

200) **ಸಿಂಹಃ** = ನೃಸಿಂಹಸ್ವರೂಪನು ; ಶ್ರೇಷ್ಠನು.

ಶಂ. ಭಾ. :– ಕೊಲ್ಲುವವನಾದುದರಿಂದ ಸಿಂಹನು. ಹಿನಸ್ತಿ ಇತಿ ಸಿಂಹಃ ।

202) **ಪ. ಭ. :–** ಸಿಂಹನು ; ಮಹಾನೃಸಿಂಹನು (ನರನ ಮತ್ತು ಸಿಂಹದ) ಶರೀರವನ್ನು ಹೊಂದಿರುವವನು ; ಶತ್ರುಗಳನ್ನು ಧ್ವಂಸಮಾಡುವ ಭೀಕರಸಿಂಹಸ್ವರೂಪಿಯು.

ನಿರುಕ್ತಿ :– ರಿಪುದ್ವಿಪಾನಾಂ ನಿಷ್ಪೇಷಭೀಷಣಃ ಸಿಂಹ ಉಚ್ಯತೇ ॥

200) **ಸ. ಸಂ. :–** ಸಿಂಪಡಿಸುವವನು ; ಕೊಲ್ಲುವವನು ; ಹಿಂಸಿಸುವವನು. ಸಿಂಹೋ ವರ್ಣವಿಪರ್ಯಯಾತ್ ಎಂಬ ವಚನದಂತೆ ಹಿನಸ್ತಿ ಇತಿ ಸಿಂಹಃ ಎಂದಾಗುತ್ತದೆ.

* * *

201) **ಸಂಧಾತಾ :** (ಭಕ್ತರನ್ನು) ಚೆನ್ನಾಗಿ ಧಾರಣೆಮಾಡುವವನು ; ಚೆನ್ನಾಗಿ ಪೋಷಿಸುವವನು. ಸೇರಿಸುವವನು.

ಶಂ. ಭಾ. :– ಪುರುಷರನ್ನು ಕರ್ಮಫಲಗಳೊಡನೆ ಸೇರಿಸುವವನು.

203) **ಪ. ಭ. :–** ಆನೆಯಂತಿರುವ ಶತ್ರುಗಳನ್ನು ಅರೆಯುವ ಭಯಂಕರಾಕಾರವನ್ನು ಹೊಂದಿದ್ದರೂ–ತನಗೆ ಅಧೀನರಾದ ಪ್ರಹ್ಲಾದಾದಿ ಭಕ್ತರನ್ನು ತನ್ನೊಡನೆ ಸೇರುವಂತೆ ಮಾಡುವವನು.

ನಿರುಕ್ತಿ :– ಪ್ರಹ್ಲಾದಾದ್ಯೈಶ್ಚ ಸಂಧಾತಾ ಸಂಶ್ಲೇಷಕರಣಾಚ್ಚ ಸಃ ॥

201) **ಸ. ಸಂ. :–** ಚೆನ್ನಾಗಿ (ಭಕ್ತರ) ಧಾರಣ-ಪೋಷಣೆಗಳನ್ನು ಮಾಡುವವನು ; ರಾಮಾದ್ಯವತಾರಗಳಲ್ಲಿ ಅಹಲ್ಯೆಯೇ ಮೊದಲಾದವರೊಡನೆ ಗೌತಮನೇ ಮೊದಲಾದವರನ್ನು ಸೇರಿಸಲು ಸಂಧಾನನಡೆಸಿದವನು.

* * *

202) **ಸಂಧಿಮಾನ್** = ಪರಸ್ಪರವಾಗಿ ಸಂಧಿಮಾಡುವ ಕೌಶಲ್ಯವನ್ನು ಹೊಂದಿರುವವನು. ಕುಶಲನಾದ ರಾಯಭಾರಿಯು.

ಶಂ. ಭಾ. :– (ಕರ್ಮಗಳ) ಫಲವನ್ನು ಉಪಭೋಗಿಸುವವನು.

204) **ಪ. ಭ. :–** ಪ್ರಹ್ಲಾದನೇ ಮೊದಲಾದ ಭಕ್ತರೊಡನೆ ನಿತ್ಯವಾದ ಸೇರುವೆಯುಳ್ಳವನು.

ನಿರುಕ್ತಿ :– ಪ್ರಹ್ಲಾದಾದ್ಯೈರ್ನಿತ್ಯಸನ್ಧಿಃ ಯಸ್ಯ ಸ್ಯಾತ್ಸಂಧಿಮಾನ್ ಸ್ಮೃತಃ ॥

202) **ಸ. ಸಂ. :–** ಸುಗ್ರೀವ-ವಿಭೀಷಣಾದಿಗಳೊಡನೆ ಸಂಧಿಯುಳ್ಳವನಾದುದರಿಂದ ಸಂಧಿಮಾನ್.

* * *

203) ಸ್ಥಿರಃ = ಸುಸ್ಥಿರನಾಗಿರುವವನು.

ಶಂ. ಭಾ. :– ಯಾವಾಗಲೂ ಒಂದೇ ರೂಪವಿರುವವನು.

205) ಪ. ಭ. :– ಭಕ್ತರೊಡನೆ ಸೇರುವಿಕೆಯಲ್ಲಿ ಅವರು ಮಾಡುವ ಅಪಚಾರದಿಂದ ವಿಚಲಿತನಾಗದೇ ಸ್ಥಿರನಾಗಿರತಕ್ಕವನು.
ನಿರುಕ್ತಿ :– **ಅಪಚಾರೇಽಪ್ಯಚಾಲ್ಯತ್ವಾತ್ಸಂಧಾನೇ ಸ್ಥಿರ ಉಚ್ಯತೇ ॥**

203) ಸ. ಸಂ. :– ಅನಾದಿಯಾದುದರಿಂದಲೂ, ನಿತ್ಯನಾದುದರಿಂದಲೂ ಸ್ಥಿರನು.

* * *

204) ಅಜಃ = ಹುಟ್ಟಿಲ್ಲದವನು.

ಶಂ. ಭಾ. :– (ಭಕ್ತರ ಹೃದಯವನ್ನು) ಸೇರುವವನು. ಅಥವಾ (ಅಸುರರ ಕಡೆಗೆ ಬಾಣವನ್ನು) ಎಸೆಯುವವನು.

206) ಪ. ಭ. :– (ಕಂಬದಲ್ಲಿ ಹುಟ್ಟಿದವನಾದುದರಿಂದ ಇತರರಂತೆ ತಾಯಿಯಲ್ಲಿ) ಹುಟ್ಟದವನು. **ನ ಜಾಯತೇ ಜನಿತ್ರ್ಯಾಂ ಯದಜಸ್ತಸ್ಮಾದನೇಕಜಿತ್ ॥** (ಶ್ರುತಿಃ)
ನಿರುಕ್ತಿ :– **ಸ್ತಮ್ಭಜತ್ವಾದಿತರವದಜಾತತ್ವಾದಜಃ ಸ್ಮೃತಃ ॥**

204) ಸ. ಸಂ. :– ಹುಟ್ಟದೇ ಇರತಕ್ಕವನು.

* * *

205) **ದುರ್ಮರ್ಷಣಃ** = ಸಹಿಸಿಕೊಳ್ಳಲು ಅಶಕ್ಯನಾದವನು.

ಶಂ. ಭಾ. :– ದಾನವರೇ ಮುಂತಾದವರಿಂದ ಸಹಿಸಿಕೊಳ್ಳಲು ಅಸಾಧ್ಯನಾದವನು.

207) ಪ. ಭ. :– ಶತ್ರುಗಳಿಂದ ಆಕ್ರಮಣಮಾಡಲು ಅಸಾಧ್ಯನಾದವನು. **ರಥಾಙ್ಗಶಙ್ಖಧಾತಾರಂ ಬ್ರಹ್ಮಮೂರ್ತಿಂ ಸುಭೀಷಣಮ್ ।** ಎಂಬುದು **ದುರ್ಮರ್ಷಣಃ** –ಎಂಬ ನಾಮಮಂತ್ರಕ್ಕೆ ಧ್ಯಾನಶ್ಲೋಕವಾಗಿದೆ.
ನಿರುಕ್ತಿ :– **ದುಷ್ಕರಂ ಮರ್ಷಣಂ ಯಸ್ಯ ಪರೈರ್ದುರ್ಮರ್ಷಣಃ ಸ್ಮೃತಃ।**

205) **ಸ. ಸಂ. :–** ಆಕ್ರಮಿಸಲು ಅಸಾಧ್ಯನಾದುದರಿಂದ ದುರ್ಮ ರ್ಷಣನು.

* * *

206) **ಶಾಸ್ತಾ** = ಶಾಸನಮಾಡುವವನು ; ಶಾಸ್ತಾದೇವತಾಸ್ವರೂಪನು.

ಶಂ. ಭಾ. :– ಶ್ರುತಿ-ಸ್ಮೃತಿ–ಮುಂತಾದುವುಗಳ ಮೂಲಕವಾಗಿ ಎಲ್ಲ ರನ್ನೂ ಅನುಶಾಸನಮಾಡುವವನು.

208) **ಪ. ಭ. :–** ಸತ್ಪುರುಷರಿಗೆ ಕಂಟಕಪ್ರಾಯರಾಗಿರುವವರನ್ನು ಚೆನ್ನಾಗಿ ಶಿಕ್ಷಿಸುವವನು. ನಿನಾದವಿತ್ರಾಸಿತದಾನವಃ(ವಿ. ಪು. ೪೩-೨೩)
ನಿರುಕ್ತಿ :– **ಸಮಸ್ತಾನ್ಕಂಟಕಾನ್ ಶಾಸ್ತೀತ್ಯತಃ ಶಾಸ್ತೇತಿ ಕೀರ್ತ್ಯತೇ ॥**

206) **ಸ. ಸಂ. :–** ಜಗತ್ತನ್ನು ಶಾಸನಮಾಡುವುದರಿಂದ ಶಾಸ್ತನು.

* * *

207) **ವಿಶ್ರುತಾತ್ಮಾ** = ವಿಖ್ಯಾತವಾದ ಸ್ವರೂಪವುಳ್ಳವನು.

ಶಂ. ಭಾ. :– ಸತ್ಯ-ಜ್ಞಾನಾದಿ ಲಕ್ಷಣಗಳಿಂದ ಕೂಡಿದ ಆತ್ಮವುಳ್ಳವ ನಾಗಿ ವಿಶೇಷವಾದ ರೀತಿಯಲ್ಲಿ ಪ್ರಸಿದ್ಧಿಯನ್ನು ಹೊಂದಿದವನು.

209) **ಪ. ಭ. :–** ಎಲ್ಲ ಕಾಲಗಳಲ್ಲಿಯೂ ಎಲ್ಲರಿಂದಲೂ ವಿಸ್ಮಯ ಪೂರ್ವಕವಾಗಿ ಕೇಳಲ್ಪಟ್ಟ ಶುದ್ಧವಾದ ಕೀರ್ತಿ-ಶೀಲಗಳುಳ್ಳ ನೃಸಿಂಹ ಸ್ವಾಮಿಯು. ಅಶೇಷದೇವೇಶನರೇಶ್ವರೇಶ್ವರೈಃ(ವಿ. ಧ. ೪೩-೨೩)
ನಿರುಕ್ತಿ :– **ವಿಸ್ಮಯೇನ ಶ್ರುತಂ ದೇವೈಃ ಸ್ಪೈಂಹಂ
ಯಸ್ಯಾಪದಾನಕಮ್ ।
ಶೀಲಂ ತೈರ್ವಿಶ್ರುತಾತ್ಮಾ ಸಃ ಮಹಾಕೀರ್ತಿಪ್ರದೋ ಮನುಃ॥**

207) **ಸ. ಸಂ. :–** ಪ್ರಸಿದ್ಧಸ್ವರೂಪನು.

* * *

208) **ಸುರಾರಿಹಾ** = ದೇವತೆಗಳ ಶತ್ರುಗಳನ್ನು ಸಂಹರಿಸುವವನು.

ಶಂ. ಭಾ. :– ಸುರರ ಶತ್ರುಗಳನ್ನು ಸಂಹರಿಸುವವನು.

210) **ಪ. ಭ. :–** ದೇವತೆಗಳ ಶತ್ರುವಾದ ಹಿರಣ್ಯಕಶಿಪುವಿನ ಎದೆಯನ್ನು ಸೀಳಿ ಕೊಂದವನು.

ಸತ್ಸತ್ವಕರಜಶ್ರೇಣೀದೀಪ್ತೇನೋಭಯಪಾಣಿನಾ ।
ಸಂಯಚ್ಛತೇ ಯಥಾ ಸಮ್ಯಗ್ಭಯಾನಾಂ ಸೋಽಭಯಂ ಪರಮ್ ॥

ಇದು ಸುರಾರಿಹಾ ಎಂಬ ಮಂತ್ರಕ್ಕೆ ಧ್ಯಾನಶ್ಲೋಕವಾಗಿದೆ.

ನಿರುಕ್ತಿ : **ಹಿರಣ್ಯಕಶಿಪೋರ್ಹನ್ತಾ ಕೀರ್ತ್ಯತೇ ಸ ಸುರಾರಿಹಾ ॥**

208) **ಸ. ಸಂ. :–** ದೇವತೆಗಳ ಶತ್ರುಗಳಾದ ದೈತ್ಯರನ್ನು ಕೊಂದವನು ಅಥವಾ ಕೊಲ್ಲುವವನು.

* * *

ಗುರುರ್ಗುರುತಮೋ ಧಾಮ ಸತ್ಯಃ ಸತ್ಯಪರಾಕ್ರಮಃ ।
ನಿಮಿಷೋಽನಿಮಿಷಃ ಸ್ರಗ್ವೀ ವಾಚಸ್ಪತಿರುದಾರಧೀಃ ॥೩೬॥

209) **ಗುರುಃ** = ದೇವತೆಗಳ ಪುರೋಹಿತನಾದ ಬೃಹಸ್ಪತಿಸ್ವರೂಪನು ; ಪಿತೃಸ್ವರೂಪನು ; ಅಜ್ಞಾನವನ್ನು ಹೋಗಲಾಡಿಸುವ ಉಪದೇಶಕನು; ಬ್ರಹ್ಮ-ವಿಷ್ಣು-ಮಹೇಶ್ವರಸ್ವರೂಪನು.

ಶಂ. ಭಾ. :– ಸಕಲವಿದ್ಯೆಗಳನ್ನೂ ಉಪದೇಶಿಸುವವನು ; ಎಲ್ಲರಿಗೂ ಜನಕನು. (ತಂದೆಯು).

211) **ಪ. ಭ. :– ಗುರುರ್ಗುರುತಮಃ** = (ಮತ್ಸ್ಯಾವತಾರದ ನಾಮಗಳು) ಶ್ರೇಷ್ಠತಮನಾದ ಸರ್ವವಿದ್ಯಾಪರಮಾಚಾರ್ಯನು. '**ಗುರುತಮಃ**' ಎಂಬುದು '**ಗುರುಃ**' ಎಂಬುದಕ್ಕೆ ವಿಶೇಷಣವೇ ಹೊರತು ಪ್ರತ್ಯೇಕ ನಾಮವಲ್ಲ. **ಪೂಜ್ಯಶ್ಚ ಗುರುರ್ಗರೀಯಾನ್** (ಗೀತಾ ೧೧-೪೩)

ನಿರುಕ್ತಿ :– **ಅಥ ಮತ್ಸ್ಯಾವತಾರಸ್ಯ ಪ್ರಸ್ತಾವಸ್ತು ಪ್ರತನ್ಯತೇ ।**
ಅಶೇಷವಿದ್ಯಾಚಾರ್ಯತ್ವಾತ್ಸ್ಮೃತೋ ಗುರುತಮೋ ಗುರುಃ॥

209) **ಸ. ಸಂ. :–** ಉಪದೇಶಿಸುವವನು.

* * *

210) **ಗುರುತಮಃ** = ಎಲ್ಲ ಗುರುಗಳಿಗಿಂತಲೂ ಶ್ರೇಷ್ಠನಾದ ಗುರುವು ; ಮಹಾಗುರುವು.

ಶಂ. ಭಾ. :– ಜಗತ್ತಿನ ಗುರುಗಳಾದ ಬ್ರಹ್ಮಾದಿಗಳಿಗೂ ಬ್ರಹ್ಮವಿದ್ಯಾ ಸಂಪ್ರದಾಯವನ್ನು ತಿಳಿಸಿಕೊಟ್ಟವನು. **ಯೋ ಬ್ರಹ್ಮಾಣಂ ವಿದಧಾತಿ ಪೂರ್ವಮ್** (ಶ್ವೇ. ೬-೧೮)

210) **ಸ. ಸಂ. :–** ಅತಿಶಯದಿಂದ ಗುರುವಾಗಿರುವವನು.

ಗುರುಃ ಶ್ರೀಬ್ರಹ್ಮಣೋರ್ವಿಷ್ಣುಃ ಸುರಾಣಾಂ ಚ ಗುರೋರ್ಗುರುಃ ।
ಮೂಲಭೂತಗುರುಃ ಸರ್ವಜನಾನಾಂ ಪುರುಷೋತ್ತಮಃ ॥
(ದಶಮತಾತ್ಪರ್ಯೋಕ್ತಿವಚನ)

ಬ್ರಹ್ಮಾದಿಗಳಿಂದ ಅಪೇಕ್ಷಿಸಲ್ಪಡತಕ್ಕವನು ; ಗುರುವಾದ ಬೃಹಸ್ಪತಿಗೆ ಯಾವನಿಂದ ಜ್ಞಾನವು ಪ್ರಾಪ್ತವಾಗಿದೆಯೋ–ಅವನು ; ಉಪದೇಶಕನೂ, ಅತ್ಯಂತವ್ಯಾಪ್ತನೂ ಆಗಿರುವವನು.

* * *

211) **ಧಾಮ** = ಸಕಲಚರಾಚರಗಳಿಗೂ ಆಶ್ರಯನಾದವನು ; ಪ್ರಭೆಯಿಂದ ಯುಕ್ತನಾದವನು ; ಮಹಾಮಹಿಮನು ; ಪ್ರತಾಪಶಾಲಿಯು.

ಶಂ. ಭಾ. :– ಜ್ಯೋತಿಃಸ್ವರೂಪನು. **ನಾರಾಯಣಪರೋಜ್ಯೋತಿಃ** (ಮ. ನಾ. ೧೩-೧) ಸರ್ವಕಾಮನೆಗಳಿಗೂ ಆಶ್ರಯನಾಗಿರುವವನು. **ಪರಮಂ ಬ್ರಹ್ಮ ಪರಂ ಧಾಮ** (ಮುಂ. ೩-೨-೧)

212) **ಪ. ಭ. :–** (ಚರಾಚರಬೀಜಗಳಿಗೆ ಆಧಾರವಾದ ನಾವೆಯನ್ನು ನಡೆಸಿದ ನಾವಿಕನಾದುದರಿಂದ) ಚರಾಚರಗಳಿಗೆ ಆಧಾರಸ್ಥಾನನಾಗಿರುವವನು.

ನಿರುಕ್ತಿ :– ಚರಾಚರಾಧಾರತಯಾ ಧಾಮೇತಿ ಪರಿಚಕ್ಷತೇ ॥

211) **ಸ. ಸಂ. :– ಧಾಮಃ** = ತೇಜಃಸ್ವರೂಪನು.

* * *

212) **ಸತ್ಯಃ** = ಸತ್ಯಸ್ವರೂಪನು. ಸತ್ವಗುಣಸಂಪನ್ನನಾದವನು.

ಶಂ. ಭಾ. :– ಸತ್ಯವನ್ನು ನುಡಿಯುವ ಧರ್ಮದ ರೂಪದಲ್ಲಿರುವವನು. **ತಸ್ಮಾತ್ಸತ್ಯಂ ಪರಮಂ ವದನ್ತಿ** (ಮ. ನಾ. ೭೯)

213) **ಪ. ಭ. :–** ಆಯಾ ಕಾಲಗಳಲ್ಲಿ ಆಶ್ರಯಿಸಿರುವ ಮನ್ವಾದಿ ಸತ್ಪುರುಷರ ವಿಷಯದಲ್ಲಿ ಸಾಧುವಾಗಿರತಕ್ಕವನು.
ನಿರುಕ್ತಿ :– ಮನ್ವಾದಿಷ್ವಪಿ ಸಾಧುತ್ವಾತ್ಸತ್ಯ ಇತ್ಯಭಿಧೀಯತೇ ॥

212) **ಸ. ಸಂ. :–** ಜಗತ್ತನ್ನು ಸೃಷ್ಟಿಸುವವನು. ಸದ್ಭಾವವನ್ನು ಹೊಂದಿಸುವವನು. **ಸದ್ಭಾವಂ ಯಾಪಯೇದ್ಯಸ್ಮಾತ್ಸತ್ಯಂ ತತ್ತೇನ ಕಥ್ಯತೇ॥** ಪ್ರಾಣಿಗಳಿಗೆ ಜೀವನವನ್ನು ಮತ್ತು ನಾಶವನ್ನು ಹೊಂದಿಸುವವನು; ಮುಕ್ತರನ್ನು ಮತ್ತು ಶ್ರೀದೇವಿಯನ್ನು ನಿಯಮಿಸುವವನು. ಸದ್ಗತಿ ಪ್ರದಾಯಕನು. ದುಃಖವಿಲ್ಲದ ನಿತ್ಯನಿರತಿಶಯಾನಂದಾನುಭವರೂಪನು. (ಭಾಗವತತಾತ್ಪರ್ಯ) **ಸ ಏಷ ಭಗವಾನ್ವಿಷ್ಣುಃ ಸತ್ಯ ಇತ್ಯಭಿಧೀಯತೇ ।** ಸತ್ಯವೆಂಬ ಪದವು **ಸರ್ವೋತ್ತಮತ್ವ, ಪೂರ್ಣತ್ವ** ಮತ್ತು **ಸರ್ವಜ್ಞತ್ವ**– ಇವೆಲ್ಲವನ್ನೂ ಸಮಷ್ಟಿಯಾಗಿ ಹೇಳುವ ಒಂದೇ ಪದವಾಗಿದೆ.

* * *

213) **ಸತ್ಯಪರಾಕ್ರಮಃ** = ಸತ್ಯಯುಕ್ತವಾದ ಪರಾಕ್ರಮವುಳ್ಳವನು. ಸತ್ಯವೇ ಪರಾಕ್ರಮವಾಗಿರುವವನು.

ಶಂ. ಭಾ. :– ಸತ್ಯವಾದ (ಹುಸಿಯಲ್ಲದ) ಪರಾಕ್ರಮವಿರುವವನು.

214) **ಪ. ಭ. :–** ಮನುವೇ ಮುಂತಾದ ಭಕ್ತರಲ್ಲಿ ಕೌಟಿಲ್ಯವಿಲ್ಲದ (ಸರಳವಾದ) ವ್ಯವಹಾರವಿರತಕ್ಕವನು.
ನಿರುಕ್ತಿ :– ವೃತ್ತಿರ್ಹ್ಯಕೈತವಾ ಯಸ್ಯ ಸ ಸ್ಯಾತ್ಸತ್ಯಪರಾಕ್ರಮಃ ॥

213) **ಸ. ಸಂ. :–** ಸತ್ಯವು ಯಾವನಿಗೆ ಪರಾಕ್ರಮವಾಗಿರುವುದೋ ಅವನು ; ಸತ್ಯವಚನಪರನಾದ ಬಲಿಚಕ್ರವರ್ತಿಯಲ್ಲಿ ಚೆನ್ನಾಗಿ ಪದವಿನ್ಯಾಸ ಮಾಡಿದವನು ; ಸತ್ಯವೆಂದರೆ ವಾಯು-ಬ್ರಹ್ಮ-ಸೂರ್ಯಸಮುದಾಯವು. ಈ ಸಮುದಾಯಕ್ಕೆ ಪರಾಕ್ರಮವು ಯಾರಿಂದ ಉಂಟಾಗುವುದೋ–ಅವನು ಸತ್ಯಪರಾಕ್ರಮನು.

ವಾಯುಃ ಸದಿತಿ ಸಮ್ಪ್ರೋಕ್ತೋ ಜೀವೇಷು ತು ಸುಪೂರ್ಣತಃ ।
ತೀತಿ ಬ್ರಹ್ಮಾ ಸಮುದ್ದಿಷ್ಟಃ ಸ ಏವಾನ್ನಾಭಿಮಾನವಾನ್ ॥
ಅನ್ನಂ ಪ್ರಜಾಪತಿರಿತಿ ಶ್ರುತಿರನ್ಯಾಪ್ಯಭಾಷತ ।
ಯಮಿತ್ಯಾದಿತ್ಯ ಉದ್ದಿಷ್ಟೋ ಯಮಯೇದ್ಯತ್ಪ್ರಕಾಶಯನ್ ॥
ದೇವತಾತ್ರಯಮೇತತ್ತು ಸಹಿತಂ ಸತ್ಯಮುಚ್ಯತೇ ॥

* * *

214) ನಿಮಿಷಃ = (ಧ್ಯಾನಯೋಗದಲ್ಲಿ) ಕಣ್ಣುಗಳನ್ನು ಮುಚ್ಚಿಕೊಂಡಿರುವವನು. ಕಾಲಸ್ವರೂಪನು.

ಶಂ. ಭಾ. :– ಯೋಗನಿದ್ರಾರತನಾಗಿ ಕಣ್ಣುಗಳನ್ನು ಮುಚ್ಚಿಕೊಂಡಿರುವವನು.

215) **ಪ. ಭ. :–** ಸತ್ಪುರುಷರ ವಿರೋಧಿಗಳ ವಿಷಯದಲ್ಲಿ ಕಣ್ಣುಗಳನ್ನು ಮುಚ್ಚಿಕೊಂಡಿರುವವನು ; ಕಟಾಕ್ಷವೀಕ್ಷಣದಿಂದ ಅವರನ್ನು ಅನುಗ್ರಹಿಸದೇ ಇರುವವನು.

ನಿರುಕ್ತಿ :– **ವಿರೋಧಿನಃ ಸತಾಂ ಯೋಽಸೌ ನೇಕ್ಷತೇ ನಿಮಿಷಶ್ಚ ಸಃ ॥**

214) **ಸ. ಸಂ. :–** ನಿಮಿಯೆಂಬ ರಾಜನಿಗೆ 'ಷಂ' ಎಂದರೆ ಬಲವು ಯಾವನಿಂದ ಪಾಪ್ತವಾಯಿತೋ–ಅವನು ; ಕಾಲನಿಯಾಮಕನು ; (ಮಿಷ-ಸ್ಪರ್ಧಾಯಾಂ ಎಂಬ ಧಾತ್ವರ್ಥವನ್ನು ಅನುಸರಿಸಿ) ದೈತ್ಯರೊಡನೆ ವಿಶೇಷವಾಗಿ ಸ್ಪರ್ಧಿಸುವವನು.

* * *

215) ಅನಿಮಿಷಃ = ರೆಪ್ಪೆಗಳನ್ನು ಮುಚ್ಚದೇ ಇರುವವನು ; ಮತ್ಸ್ಯಮೂರ್ತಿಯು.

ಶಂ. ಭಾ. :– ಯಾವಾಗಲೂ ಎಚ್ಚೆತ್ತಿರುವ ಸ್ವರೂಪವುಳ್ಳವನು ; ಮತ್ಸ್ಯರೂಪದಿಂದ ಅಥವಾ ಆತ್ಮರೂಪದಿಂದ ಯಾವಾಗಲೂ ಎವೆಯಿಕ್ಕದೇ ಇರುವವನು.

216) **ಪ. ಭ. :–** ಸತ್ಪುರುಷರ ವಿಷಯದಲ್ಲಿ ಯಾವಾಗಲೂ ಕಣ್ಣುಗಳನ್ನು ತೆರೆದುಕೊಂಡೇ ಇರುವವನು ; ದಿವ್ಯವಾದ ಮೀನಿನ ಶರೀರವುಳ್ಳವನು ; ಮತ್ಸ್ಯನಾಗಿ ಅವತರಿಸಿದವನು.

ನಿರುಕ್ತಿ :– ಸದ್ರಕ್ಷಣೇ ಜಾಗರೂಕಃ ಸ್ಮೃತೋ ಹ್ಯನಿಮಿಷಶ್ಚ ಸಃ ॥

215) **ಸ. ಸಂ. :–** ವಾಯುಭಕ್ತರೊಡನೆ ಸೇರಿರುವವನು ; ದಯಾಪರನಾಗಿ ಯಾವಾಗಲೂ ಮುಕ್ತರನ್ನು ನೋಡುತ್ತಲೇ ಇರುವವನು.

* * *

216) **ಸ್ರಗ್ವೀ** = ಮಾಲೆಯನ್ನು ಧರಿಸಿರುವವನು.

ಶಂ. ಭಾ. :– ಪಂಚಭೂತತನ್ಮಾತ್ರೆಗಳ ರೂಪದಲ್ಲಿರುವ ವೈಜಯಂತೀ ಮಾಲೆಯನ್ನು ಸರ್ವದಾ ಧರಿಸಿರುವವನು.

217) **ಪ. ಭ. :–** ತಿರ್ಯಗ್ಜಂತುವಿನ ರೂಪದಲ್ಲಿ (ಮೀನಿನ ರೂಪದಲ್ಲಿ) ಅವತರಿಸಿದ್ದರೂ ಯಾವಾಗಲೂ ಪರತ್ವಸೂಚಕವಾದ ವೈಜಯಂತೀ ಮಾಲೆಯ ಯೋಗವುಳ್ಳವನು.

ನಿರುಕ್ತಿ :– ಪರತ್ವಸೂಚಿನೀ ಯಾ ಚ ವೈಜಯನ್ತೀತಿ ಕೀರ್ತಿತಾ ।
ತಯಾ ಸ್ರಜಾ ನಿತ್ಯಯೋಗಾತ್ಸ್ರಗ್ವೀತಿ ಪರಿಕೀರ್ತ್ಯತೇ ॥

216) **ಸ. ಸಂ. :–** ಮಾಲೆಗಳುಳ್ಳವನು.

* * *

217) **ವಾಚಸ್ಪತಿರುದಾರಧೀಃ** = (ಭಕ್ತರ ವಿಷಯದಲ್ಲಿ) ಔದಾರ್ಯ ಬುದ್ಧಿಯುಳ್ಳವನು. ವಿಶಾಲವಾದ ಬುದ್ಧಿಯುಳ್ಳವನು. ವಾಣಿಗೆ ಅಥವಾ ವೇದಗಳಿಗೆ ಒಡೆಯನು.

ಶಂ. ಭಾ. :– ವಾಚಸ್ಪತಿರುದಾರಧೀಃ = ವಿದ್ಯಾಪತಿಯು ; ಶಬ್ದಶಕ್ತಿಯಿಂದ ತಿಳಿಯಲ್ಪಡುವ ಎಲ್ಲ ವಿಷಯಗಳಲ್ಲಿಯೂ ಬುದ್ಧಿಯಿರುವವನು. **ವಾಚಸ್ಪತಿರುದಾರಧೀಃ**–ಒಂದೇ ನಾಮವು.

218) **ಪ. ಭ. :– ವಾಚಸ್ಪತಿಃ** = ಮತ್ಸ್ಯಪುರಾಣದ ಮೂಲಕವಾಗಿ ವೇದಾರ್ಥವನ್ನು ವಿಸ್ತರಿಸಿದವನು.

ನಿರುಕ್ತಿ :– ವೇದೋಪಬೃಂಹಣಾದ್ವಾಚಸ್ಪತಿರ್ಮಾತ್ಸ್ಯಪುರಾಣತಃ ॥

217) **ಸ. ಸಂ. :– ವಾಚಸ್ಪತಿರುದಾರಧೀಃ** = ವೇದವಾಕ್ಯಗಳಿಗೆ

ಒಡೆಯನು. ಶ್ರೇಷ್ಠಪತ್ನಿಯಾದ ರಮಾದೇವಿಗೆ ಯಾರಿಂದ ಬುದ್ಧಿಯು ಉಂಟಾಗುತ್ತದೆಯೋ–ಅವನು ; ದೋಷರಹಿತವಾದ ಬುದ್ಧಿಯುಳ್ಳವನು.

* * *

219) **ಪ. ಭ. :– ಉದಾರಧೀಃ** = ಎಲ್ಲರ ಜೀವನಕ್ಕೂ ಆಶ್ರಯನಾಗಿರುವುದರಿಂದ ಉದಾರವಾದ ಸರ್ವಜ್ಞತೆಯುಳ್ಳವನು.

ನಿರುಕ್ತಿ :– **ಸರ್ವೋಪಜೀವ್ಯಸಾರ್ವಜ್ಞ್ಯಾದುಚ್ಯತೇ ಸ ಉದಾರಧೀಃ ॥**

* * *

ಅಗ್ರಣೀರ್ಗ್ರಾಮಣೀಃ ಶ್ರೀಮಾನ್ನ್ಯಾಯೋ ನೇತಾ ಸಮೀರಣಃ ।
ಸಹಸ್ರಮೂರ್ಧಾ ವಿಶ್ವಾತ್ಮಾ ಸಹಸ್ರಾಕ್ಷಃ ಸಹಸ್ರಪಾತ್ ॥೩೭॥

218) **ಅಗ್ರಣೀಃ** = ಮುಂದಕ್ಕೆ ಒಯ್ಯುವವನು ; ಅಗ್ನಿಸ್ವರೂಪನು ; ಪ್ರಭುವು ; ಶ್ರೇಷ್ಠನಾದವನು.

ಶಂ. ಭಾ. :– ಮುಮುಕ್ಷುಗಳನ್ನು ಶ್ರೇಷ್ಠವಾದ ಸ್ಥಾನಕ್ಕೆ (ಪರಮಪದಕ್ಕೆ) ಒಯ್ಯುವವನು.

220) **ಪ. ಭ.** :–ಮಹೋದಾರನಾಗಿರುವುದರಿಂದ ಭಕ್ತರನ್ನು ಉನ್ನತ ಸ್ಥಾನಕ್ಕೆ (ಪರಮಪದಕ್ಕೆ) ಒಯ್ಯುವವನು.

ನಿರುಕ್ತಿ :– **ಮಹೋದಾರತಯಾ ಭಕ್ತಾನಗ್ರಿಮಂ ಪಶ್ಚಿಮಂ ಪದಮ್ ।**
ನಯತೀತ್ಯಗ್ರಣೀಃ ಪ್ರೋಕ್ತಃ ಭಕ್ತಮೋಕ್ಷಪ್ರದೋ ಮನುಃ ॥

218) **ಸ. ಸಂ. :–** ಮೊದಲು ಒಯ್ಯುವವನು ; ಅಗ್ರಸ್ಥಾನಕ್ಕೆ ಒಯ್ಯುವವನು.

* * *

219) **ಗ್ರಾಮಣೀಃ** = ಜನಸಮೂಹದ ಪ್ರೇರಕನು ; ಪಂಚಭೂತಗಳನ್ನು ಅವುಗಳ ಕಾರ್ಯಗಳಲ್ಲಿ ನಡೆಸುವವನು.

ಶಂ. ಭಾ. :– ಭೂತಗ್ರಾಮವನ್ನು ಮುಂದಿದ್ದು ನಡೆಸುವವನು.

221) **ಪ. ಭ.** :– ನಿತ್ಯಸಿದ್ಧರ ಸಮಾಜವನ್ನು ನಡೆಸುವವನು.

ನಿರುಕ್ತಿ :– **ಗ್ರಾಮಂ ಸಮಾಜಂ ಸೂರೀಣಾಂ ನಯತಿ ಗ್ರಾಮಣೀಶ್ಚ ಯಃ ||**

219) **ಸ. ಸಂ. :–** ಭೂತಗ್ರಾಮವನ್ನು ನಡೆಸುವವನು.

* * *

220) **ಶ್ರೀಮಾನ್** = ಶ್ರೀಮಂತನು ; ಲಕ್ಷ್ಮೀಯುಕ್ತನಾದವನು.

ಶಂ. ಭಾ. :– ಸರ್ವಾತಿಶಯವಾದ ಕಾಂತಿಯುಳ್ಳವನು.

222) **ಪ. ಭ. :–** ಐಶ್ವರ್ಯಸಂಪನ್ನನು. ಮತ್ಸ್ಯಾವತಾರದಲ್ಲಿಯೂ ಇವನು ಕಮಲನೇತ್ರಗಳನ್ನು ಹೊಂದಿ ಕಾಂತಿಯುಕ್ತನಾಗಿದ್ದನು. **ಮತ್ಸ್ಯಃ ಕಮಲಲೋಚನಃ।**

ನಿರುಕ್ತಿ :– **ಮತ್ಸ್ಯರೂಪಾವತಾರೇಽಪಿ ಶ್ರೀಮಾನ್ಕಮಲನೇತ್ರತಃ ||**

220) **ಸ. ಸಂ. :–** ನಿತ್ಯಲಕ್ಷ್ಮೀಯುಕ್ತನಾದವನು.

* * *

221) **ನ್ಯಾಯಃ**= ನ್ಯಾಯಸ್ವರೂಪನು ; ಧರ್ಮಮೂರ್ತಿಯು ; ಯುಕ್ತವಾದುದನ್ನು ಮಾಡುವವನು.

ಶಂ. ಭಾ. :– ಪ್ರಮಾಣಗಳಿಗೆ ಆಶ್ರಯವಾದ ಮತ್ತು ಅಭೇದವನ್ನು ಬೋಧಿಸುವ ತರ್ಕವೇ ನ್ಯಾಯವೆಂದು ಹೇಳಲ್ಪಡುತ್ತದೆ. ಅಂತಹ ನ್ಯಾಯ ಸ್ವರೂಪನು.

223) **ಪ. ಭ. :–**ಭಕ್ತರಿಗೆ ಅವಿಶೇಷವಾಗಿ ಯುಕ್ತವಾದುದನ್ನು ಮಾಡುವವನು.

ನಿರುಕ್ತಿ :– **ನ್ಯಾಯೋ ಹಿ ಯುಕ್ತಕಾರಿತ್ವಾದ್ಭಕ್ತೇಷ್ವೇಷ ವಿಶೇಷತಃ ||**

221) **ಸ. ಸಂ. :–** ಯಾವನಿಂದ ಹೆಚ್ಚಾದ ಲಾಭವುಂಟಾಗುವುದೋ ಅವನು.

* * *

222) **ನೇತಾ**= ನಾಯಕನು.

ಶಂ. ಭಾ. :– ಜಗತ್ತೆಂಬ ಯಂತ್ರವನ್ನು ನಡೆಸುವವನು.

224) **ಪ. ಭ. :–** ಭಕ್ತರು ನಿರ್ದೇಶಿಸಿದ ಕಾರ್ಯವನ್ನು ನಡೆಸಿ

ಕೊಡುವವನು. ಭಕ್ತರ ಅಭೀಷ್ಟಗಳನ್ನು ನಿರ್ವಹಿಸಿಕೊಡುವ ಸ್ವಭಾವದವನು. ಆಳದವರೆಗೂ ಮುಳುಗಿ ಭಕ್ತರನ್ನು ಉದ್ಧರಿಸುವುದು ಮಹಾತ್ಮರಿಗೆ ಯುಕ್ತವಾಗಿಯೇ ಇದೆ.

ನಿರುಕ್ತಿ :– **ಭಕ್ತೈರ್ನಿಯುಕ್ತಂ ಯತ್ಕರ್ಮ ನೇತಾ ತತ್ಕಾರಣಾದಪಿ ॥**

222) **ಸ. ಸಂ. :–** ಅವರವರ ಪಾಪ-ಪುಣ್ಯಕರ್ಮಗಳಿಗೆ ಅನುಸಾರ ವಾಗಿ ಯೋಗ-ಫಲಗಳನ್ನು ನಿಯಮನಮಾಡುವವನು. **ಪುಣ್ಯೇನ ಪುಣ್ಯ ಲೋಕಂ ನಯತಿ ಪಾಪೇನ ಪಾಪಮ್** (ಶ್ರುತಿಃ)

* * *

223) **ಸಮೀರಣಃ**= ವಾಯುದೇವತಾಸ್ವರೂಪನು.

ಶಂ. ಭಾ. :– ಪ್ರಾಣವಾಯುವಿನ ರೂಪದಲ್ಲಿದ್ದು ಪ್ರಾಣಿಗಳು ಚೇಷ್ಟೆ ಮಾಡುವಂತೆ (ಕರ್ಮಗಳನ್ನು ಮಾಡುವಂತೆ) ಪ್ರೇರಿಸುವವನು.

225) **ಪ. ಭ. :–** ಭಕ್ತರಿಗೆ ಇಷ್ಟವಾದ ಚೇಷ್ಟೆಯುಳ್ಳವನು.

ನಿರುಕ್ತಿ :– **ಭಕ್ತೇಷ್ಟಚೇಷ್ಟಾಶೀಲತ್ವಾತ್ಸಮೀರಣ ಉದಾಹೃತಃ ॥**

223) **ಸ. ಸಂ. :–** ವಾಯುವಿಗೆ ಯಾರಿಂದ ಸುಖವು ಪ್ರಾಪ್ತವಾಗು ವುದೋ–ಅವನು ; ಲಕ್ಷ್ಮೀದೇವಿಯಿಂದ ಹೇಳಲ್ಪಟ್ಟ 'ಜಯ ಜಯ ಜಹ್ಯಜಾಂ' ಎಂಬ ಸ್ತುತಿರೂಪವಾದ ಶಬ್ದವುಳ್ಳವನು. ಚೆನ್ನಾಗಿ ಪ್ರೇರಿಸು ವವನು.

* * *

224) **ಸಹಸ್ರಮೂರ್ಧಾ** = ಸಾವಿರ ತಲೆಗಳಿರುವವನು ; ಅನಂತ ಶಿರಸನು ; **ಸಹಸ್ರಶೀರ್ಷಾ ಪುರುಷಃ ।** (ಪು. ಸೂ.)

ಶಂ. ಭಾ. :– ಸಾವಿರಾರು ತಲೆಗಳು ಇವನಿಗೆ ಇವೆಯಾದುದರಿಂದ ಸಹಸ್ರಮೂರ್ಧನು.

226) **ಪ. ಭ. :–** ಸಾವಿರಾರು ತಲೆಗಳಿರುವವನು. ಸಹಸ್ರ–ಎಂದರೆ ಅನಂತ ; ಲೆಕ್ಕಿಸಲಾಗದ್ದು. ಈ ಸಂದರ್ಭದಲ್ಲಿ ಹೇಳಿರುವ ತಲೆ-ಕಣ್ಣು-ಪಾದ

ಗಳು ಈ ಮೂರು ಅಂಗಗಳಿಗೇ ಸೀಮಿತವಾದುವುಗಳಲ್ಲ. ಎಲ್ಲ ಅಂಗಗಳನ್ನೂ ಜ್ಞಾನೇಂದ್ರಿಯ-ಕರ್ಮೇಂದ್ರಿಯಾದಿ ಕರಣವಾಗಿ ಸೂಚಿಸುತ್ತವೆ. **ವಿಶ್ವತಶ್ಚಕ್ಷುರುತ ವಿಶ್ವತೋಮುಖಃ। (ತೈ.ನಾ. ೧೩-೧೩) ಸರ್ವತಃ ಪಾಣಿಪಾದಂ ತತ್** (ಗೀತಾ ೧೩-೧೩) ಈ ವಚನಗಳು ಅನಂತತ್ವವನ್ನು ಸೂಚಿಸುತ್ತವೆ.

ನಿರುಕ್ತಿ :– **ಸಹಸ್ರಶಬ್ದೋ ಹ್ಯಾನನ್ತ್ಯಲಕ್ಷಕಃ ಸಮುದಾಹೃತಃ ।**
ಸಹಸ್ರಮೂರ್ಧಾ ಸೋಽನನ್ತಶಿರಸ್ಕಃ ಕೀರ್ತ್ಯತೇ ತತಃ ।
ಸಹಸ್ರಮೂರ್ಧಾ ಸ ಸ್ಯಾದ್ವಾ ಪುಂಸೂಕ್ತಾದ್ಯುಕ್ತನಾಮವಾನ್॥

224) **ಸ. ಸಂ. :– ಸಹಸ್ರಮೂರ್ಧಾ** ವಿಶ್ವಾತ್ಮಾ–ಸಾವಿರ ತಲೆಗಳು ಯಾವನಿಗೆ ಇರುವುವೋ–ಅವನು ವಿಶ್ವನಿಯಾಮಕನು. ಸಾವಿರಾರು ಪಾಪಫಲಗಳನ್ನು ನಾಶಗೊಳಿಸುವವನು. (ಮೂರ ಶಬ್ದಕ್ಕೆ ಪಾಪ–ಎಂದು ಅರ್ಥ. ಬೃಹದ್ಭಾಷ್ಯದಲ್ಲಿ **'ಮೂರಂ ಪಾಪಂ ಹಿ ತೇನೋತ್ಥಂ ಮೂರಮಿತ್ಯಭಿಧೀಯತೇ ।** ಎಂದು ಹೇಳಿರುವಂತೆ.)

* * *

225) **ವಿಶ್ವಾತ್ಮಾ** = ವಿಶ್ವದೇಹಿಯು ; ವಿಶ್ವಕ್ಕೆಲ್ಲಾ ಆತ್ಮನಾಗಿರುವವನು ; ಸರ್ವರಿಗೂ ಆತ್ಮನಾಗಿರುವವನು.

ಶಂ. ಭಾ. :– ಜಗತ್ತಿಗೆ ಆತ್ಮನಾಗಿರುವವನು.

227) **ಪ. ಭ. :–** ಜ್ಞಾನ ಮತ್ತು ಬಲಗಳಿಂದ ವಿಶ್ವವನ್ನು ವ್ಯಾಪಿಸಿರುವವನು. **ಸ ಭೂಮಿಂ ವಿಶ್ವತೋ ವೃತ್ವಾ।** (ಪು. ಸೂ.) **ಯೇನೈಷ ಭೂತಸ್ತಿಷ್ಠತ್ಯನ್ತರಾತ್ಮಾ।** (ತೈ. ನಾ.)

ನಿರುಕ್ತಿ :– **ಆಭ್ಯಾಂ ಚ ಜ್ಞಾನಕರ್ಮಭ್ಯಾಂ ವಿಶ್ವಾತ್ಮಾ ವ್ಯಾಪನಾತ್ಸ್ಮೃತಃ ॥**

* * *

226) **ಸಹಸ್ರಾಕ್ಷಃ** = ಸಾವಿರ ಕಣ್ಣುಗಳುಳ್ಳವನು.

ಶಂ. ಭಾ. :– ಸಾವಿರಾರು ಕಣ್ಣುಗಳು ಯಾವನಿಗಿರುವುವೋ–ಅವನು.

228) **ಪ. ಭ. :–** ಅನಂತವಾದ ಕಣ್ಣುಗಳುಳ್ಳವನು.

225) ಸ. ಸಂ. :– ಸಾವಿರ ಕಣ್ಣುಗಳುಳ್ಳವನು.

* * *

227) ಸಹಸ್ರಪಾತ್ = ಸಾವಿರ ಕಾಲುಗಳುಳ್ಳವನು.

ಶಂ. ಭಾ. :– ಸಾವಿರಾರು ಪಾದಗಳುಳ್ಳವನು. ಸಹಸ್ರಶೀರ್ಷಾ ಪುರುಷಃ। ಸಹಸ್ರಾಕ್ಷಃ ಸಹಸ್ರಪಾತ್ । (ಪು. ಸೂ.)

229) ಪ. ಭ. :– ಅನಂತವಾದ ಪಾದಗಳುಳ್ಳವನು.

ನಿರುಕ್ತಿ :– ಅಕ್ಷಿಪಾದಪದೇ ಜ್ಞಾನಕರ್ಮೇನ್ದ್ರಿಯನಿದರ್ಶಕೇ ।
ತೇನಾನನ್ತಜ್ಞಾನಕರ್ಮಾ ಸಹಸ್ರಾಕ್ಷಃ ಸಹಸ್ರಪಾತ್ ॥

226) ಸ. ಸಂ. :– ಸಾವಿರ ಪಾದಗಳು ಯಾವನಿಗಿವೆಯೋ–ಅವನು.

* * *

ಆವರ್ತನೋ ನಿವೃತ್ತಾತ್ಮಾ ಸಂವೃತಃ ಸಂಪ್ರಮರ್ದನಃ ।
ಅಹಃ ಸಂವರ್ತಕೋ ವಹ್ನಿರನಿಲೋ ಧರಣೀಧರಃ ॥೩೮॥

228) ಆವರ್ತನಃ = ತಿರುಗಿಸುವವನು ; ಕಾಲಚಕ್ರವನ್ನು ತಿರುಗಿಸುವವನು.

ಶಂ. ಭಾ. :– ಸಂಸಾರಚಕ್ರವನ್ನು ತಿರುಗಿಸುವ ಸ್ವಭಾವವುಳ್ಳವನು.

230) ಪ. ಭ. :– ಸಂಸಾರವೆಂಬ ಘಟೀಯಂತ್ರವನ್ನು (ಕಾಲವನ್ನು ಅಳೆಯಲು ನೀರಿನಿಂದ ತುಂಬಿದ ಒಂದು ಯಂತ್ರ) ತಿರುಗಿಸುವವನು.

ತೇನೇದಂ ಭ್ರಾಮ್ಯತೇ ಬ್ರಹ್ಮಚಕ್ರಂ ।

ಕಾಲಚಕ್ರಂ ಜಗಚ್ಚಕ್ರಂ ಯುಗಚಕ್ರಂ ಚ ಕೇಶವಃ ।
ಆತ್ಮಯೋಗೇನ ಭಗವಾನ್ಪರಿವರ್ತಯತೇಽನಿಶಮ್ ॥
(ಮ. ಭಾ. ಉ. ೬೮-೧೨)

ನಿರುಕ್ತಿ :– ಸಂಸಾರಾಖ್ಯಘಟೀಯನ್ತ್ರೇ ಪರಿವರ್ತನಶೀಲತಃ ।
ಚಕ್ರವಚ್ಚ ವಿಶೇಷೇಣ ಹ್ಯಾವರ್ತನ ಇತೀರಿತಃ ॥

227) ಸ. ಸಂ. :– ಒಳ್ಳೆಯ ವರ್ತನೆಯಿರುವವನು ; ನದಿಯೇ ಮುಂತಾದುವುಗಳಲ್ಲಿರುವ ನೀರಿನ ಸುಳಿಗಳನ್ನು ಒಯ್ಯುವವನು.

* * *

229) **ನಿವೃತ್ತಾತ್ಮಾ = ಅದೃಶ್ಯವಾದ ಆತ್ಮವುಳ್ಳವನು.**

ಶಂ. ಭಾ. :– ಸಂಸಾರಬಂಧನದಿಂದ ಬಿಡುಗಡೆಹೊಂದಿದ ಸ್ವರೂಪ ವುಳ್ಳವನು.

231) **ಪ. ಭ. :–** ಅನಂತವಾದ ತ್ರಿಪಾದ್ವಿಭೂತಿಯನ್ನು ಹೊಂದಿರು ವುದರಿಂದ ಅದರ ಕಾಲುಭಾಗವಾಗಿರುವ ಸಂಸಾರವಿಭೂತಿಗಿಂತಲೂ ಮೇಲೆ ದ್ದಿರುವವನು. ತ್ರಿಪಾದೂರ್ಧ್ವ ಉದೈತ್ಪುರುಷಃ (ಪು.ಸೂ.)

ನಿರುಕ್ತಿ :– **ತ್ರಿಪಾದ್ವಿಭೂತಿಕತ್ವೇನ ಭವಪಾದವಿಭೂತಿತಃ ।**
ಉದ್ಗತಾತ್ಮಸ್ವರೂಪತ್ವಾನ್ನಿವೃತ್ತಾತ್ಮೇತಿ ಕಥ್ಯತೇ ॥

228) **ಸ. ಸಂ. :–** ಪ್ರಳಯದಲ್ಲಿ ಆತ್ಮಗಳೆಲ್ಲವೂ ಯಾವನಿಗೆ ಹಿಂದಿರುಗುವುವೋ–ಅವನು. ಅನಿವೃತ್ತಾತ್ಮಾ = ಯಾವನ ದೇಹವು ನಿವೃತ್ತಿ ಹೊಂದುವುದೇ ಇಲ್ಲವೋ–ಅವನು.

* * *

230) **ಸಂವೃತಃ** = ಆವೃತನಾಗಿರುವವನು.

ಶಂ. ಭಾ. :– ಮರೆಮಾಡುವ ಅವಿದ್ಯೆಯಿಂದ ಮರೆಯಾಗಿರುವವನು.

232) **ಪ. ಭ. :–**ತಾಮಸಿಗಳಾದ ಮೂಢರಿಗೆ ಮರೆಯಾಗಿರುವವನು.

ನಿರುಕ್ತಿ :– **ತಾಮಸಾನಾಂ ತು ಮೂಢಾನಾಂ ಗೂಢತ್ವಾತ್ಸಂವೃತಃ ಸ್ಮೃತಃ॥**

229) **ಸ. ಸಂ. :–** ಗುಣಗಳಿಂದ ಚೆನ್ನಾಗಿ ಆವೃತನಾಗಿರುವವನು.

* * *

231) **ಸಂಪ್ರಮರ್ದನಃ**= (ಶತ್ರುಗಳನ್ನು) ಚೆನ್ನಾಗಿ ಥಳಿಸುವವನು.

ಶಂ. ಭಾ. :– ರುದ್ರ, ಕಾಲ–ಇತ್ಯಾದಿ ತನ್ನ ವಿಭೂತಿಗಳ ಮೂಲಕ ವಾಗಿ ಚೆನ್ನಾಗಿ ಮರ್ದನಮಾಡಿಸುವವನು.

233) **ಪ. ಭ. :–** ಆವರಣರೂಪದಲ್ಲಿರುವ ಕತ್ತಲೆಯನ್ನು ತನ್ನ ಜ್ಞಾನಪ್ರಕಾಶದಿಂದ ಚೆನ್ನಾಗಿ ತುಳಿದುಹಾಕಿಬಿಡುವವನು. ಯ ಏನಂ

ವಿದುರಮೃತಾಸ್ತೇ ಭವನ್ತಿ। ಅಥೇತರೇ ದುಃಖಮೇವಾಪಿ ಯನ್ತಿ॥ (ಬೃ ೬-೪-೧೪)

ನಿರುಕ್ತಿ :– **ತಮಸೋ ವಿದ್ಯಯಾ ಸಮ್ಯಙ್ಮರ್ದನಾತ್ಸಂಪ್ರಮರ್ದನಃ ॥**

230) **ಸ. ಸಂ. :–** ದೈತ್ಯರನ್ನು ಚೆನ್ನಾಗಿ ಮರ್ದಿಸುವವನು.

*   *   *

232) **ಅಹಃಸಂವರ್ತಕಃ** = ಹಗಲು-ರಾತ್ರಿಗಳನ್ನು ಪರಿವರ್ತಿಸುವವನು.

ಶಂ. ಭಾ. :– ದಿವಸಗಳನ್ನು ಚೆನ್ನಾಗಿ ಮುನ್ನಡೆಸುವುದರಿಂದ ಸೂರ್ಯನು ; (ಸೂರ್ಯಸ್ವರೂಪನು.)

234) **ಪ. ಭ. :–** ಕಾಲಪರಿವರ್ತನೆಗೆ ಕಾರಣನಾದವನು. **ಸರ್ವೇ ನಿಮೇಷಾ ಜಜ್ಞಿರೇ ವಿದ್ಯುತಃ ಪುರುಷಾದಧಿ** (ತೈ. ನಾ. ೬-೧-೮)

ನಿರುಕ್ತಿ :– **ಅಹರ್ಲಕ್ಷಿತಕಾಲಸ್ಯ ಪರಿವೃತ್ತೇಶ್ಚ ಸಾಧನಮ್ ।**
ಅಹಃಸಂವರ್ತಕ ಇತಿ ಪ್ರಾಹುರ್ವೇದಾನ್ತಪಾರಗಾಃ ॥

231) **ಸ. ಸಂ. :–** ದಿನಗಳನ್ನು ಚೆನ್ನಾಗಿ ನಡೆಸುವುದರಿಂದ ಅಥವಾ ಭಕ್ತರನ್ನು ಎಂದಿಗೂ ಪರಿತ್ಯಜಿಸದೇ ಇರುವುದರಿಂದ **ಅಹನೂ** ಜಗತ್ತುಗಳ ಇರುವಿಕೆಗೆ ಆಧಾರನಾಗಿರುವುದರಿಂದ **ಸಂವರ್ತಕನೂ** ಆಗಿದ್ದಾನೆ.

*   *   *

233) **ವಹ್ನಿಃ** = ಅಗ್ನಿಸ್ವರೂಪನು.

ಶಂ. ಭಾ. :– ಹವಿಸ್ಸನ್ನು ಹೊರುವವನು.

235) **ಪ. ಭ. :–** ಬದ್ಧ, ಮುಕ್ತ, ನಿತ್ಯಾದಿರೂಪವಾದ ವಿಶ್ವವನ್ನು ಪರಮಾಕಾಶ–ಅದರ ಕೋಣವಾದ ಇತರ ಆಕಾಶ, ದಿಕ್ಕು, ದೇಶ–ಇತ್ಯಾದಿ ರೂಪದಲ್ಲಿ ಧರಿಸಿರುವವನು. **ಅಸ್ಯಾಮೃತಂ ದಿವಿ** (ಪು. ಸೂ.)

ನಿರುಕ್ತಿ :– **ವಿಶ್ವಸ್ಯ ದೇಶರೂಪೇಣ ವಹನಾದ್ವಹ್ನಿರುಚ್ಯತೇ ॥**

232) **ಸ. ಸಂ. :–** ಜಗತ್ತುಗಳನ್ನು ವಹಿಸುವವನು.

*   *   *

234) **ಅನಿಲಃ** = ವಾಯುಸ್ವರೂಪನು.

ಶಂ. ಭಾ. :– ನಿವಾಸಸ್ಥಾನವಿಲ್ಲದವನು ; ಆದಿಯಿಲ್ಲದವನು ; ಪ್ರಾಣ ವ್ಯಾಪಾರವಿರುವವನು.

236) ಪ. ಭ. :– ಬದ್ಧಜೀವರೇ ಮುಂತಾದವರನ್ನು ಉಜ್ಜೀವನ ಗೊಳಿಸುವುದರಿಂದ ಅನಿಲನು. ಪ್ರಸಿದ್ಧನಾದ ಅನಿಲನು ಇವನ ಒಂದು ಕಲಾ ಮಾತ್ರನು.

ನಿರುಕ್ತಿ :– ಬದ್ಧಾಧೇರನನಾದ್ಯೋऽಸಾವನಿಲಃ ಪರಿಕೀರ್ತಿತಃ ॥

233) ಸ. ಸಂ. :– ಪ್ರಾಣವ್ಯಾಪಾರಕ್ಕೆ ಕಾರಣನಾದವನು. ಲಯವಿಲ್ಲ ದವನು. ಆಧಾರವಾದ ಭೂಮಿಯಿಲ್ಲದವನು. (ಇವನಿಗೆ ಭೂಮಿಯು ಆಧಾರವಾಗಿಲ್ಲ.)

* * *

235) **ಧರಣೀಧರಃ** = ಭೂಮಿಯನ್ನು ಧರಿಸಿರುವವನು (ಶೇಷ ನಾಗನು.)

ಶಂ. ಭಾ. :– ಶೇಷ-ದಿಗ್ಗಜಾದಿ ರೂಪಗಳಿಂದಲೂ–ವರಾಹರೂಪ ದಿಂದಲೂ ಭೂಮಿಯನ್ನು ಧರಿಸಿರುವವನು.

237) ಪ. ಭ. :– ಸಮಸ್ತಭೂತಗಣಗಳನ್ನೂ ಧರಿಸಿರುವ ಭೂಮಿ ಯನ್ನು ಧರಿಸಿರುವವನು. ಸದಾಧಾರಪೃಥಿವೀಂ ದ್ಯಾಮುತೇಮಾಂ (ತೈ. ಸ. ೪-೧-೮)

ನಿರುಕ್ತಿ :– ಭೂತಧಾತ್ರ್ಯಾಶ್ಚ ಧರಣೇರ್ಧಾರಣಾದ್ಧರಣೀಧರಃ ॥

234) ಸ. ಸಂ. :– ಭೂಮಿಯನ್ನು ಧರಿಸಿರುವವನು ; ಪರ್ವತಶ್ರೇಷ್ಠ ವಾದ ಗೋವರ್ಧನವನ್ನು ಧರಿಸಿದವನು.

* * *

ಸುಪ್ರಸಾದಃ ಪ್ರಸನ್ನಾತ್ಮಾ ವಿಶ್ವಧೃಗ್ವಿಶ್ವಭುಗ್ವಿಭುಃ ।
ಸತ್ಕರ್ತಾ ಸತ್ಕೃತಃ ಸಾಧುರ್ಜಹ್ನುರ್ನಾರಾಯಣೋ ನರಃ ॥೩೯॥

236) **ಸುಪ್ರಸಾದಃ** = ಚೆನ್ನಾಗಿ ಅನುಗ್ರಹಿಸುವವನು.

ಶಂ. ಭಾ. :– ಒಳ್ಳೆಯ ಪ್ರಸನ್ನತೆಯಿಂದ ಕೂಡಿರುವವನು. ಅಪಕಾರಿಗಳಾದ ಶಿಶುಪಾಲಾದಿಗಳಿಗೂ ಮೋಕ್ಷವನ್ನು ಕೊಟ್ಟವನು.

238) **ಪ. ಭ. :–** ಭಕ್ತರಲ್ಲಿ ಪರಮಪ್ರಸನ್ನತೆಯುಳ್ಳವನು. **ತಮಕ್ರತುಂ ಪಶ್ಯತಿ ವೀತಶೋಕೋ ಧಾತುಃ ಪ್ರಸಾದಾತ್** (ಶ್ವೇ. ಉ. ೩-೨೦)
ನಿರುಕ್ತಿ :– **ಪ್ರಸಾದಪರಮತ್ವಾಚ್ಚ ಸುಪ್ರಸಾದಃ ಪ್ರಕೀರ್ತಿತಃ ॥**

235) **ಸ. ಸಂ. :–** ಒಳ್ಳೆಯ ಮೋಕ್ಷಕರವಾದ ಪ್ರಸನ್ನತೆಯುಳ್ಳವನು. ಸುಖಕರವಾದ ಪ್ರಸನ್ನತೆಯುಳ್ಳವನು.

* * *

237) **ಪ್ರಸನ್ನಾತ್ಮಾ** = ಪ್ರಸನ್ನವಾದ ಮನಸ್ಸಿನಿಂದ ಕೂಡಿರುವವನು.

ಶಂ. ಭಾ. :– ರಜಸ್ಸು-ತಮಸ್ಸುಗಳಿಂದ ಕಲುಷಿತವಾಗದಿರುವ ಅಂತಃಕರಣವುಳ್ಳವನು ; ಕರುಣಾರಸದಿಂದ ತೋಯ್ದಿರುವ ಸ್ವಭಾವವುಳ್ಳವನು ; ಕಾರಣಿಕನು ; ಎಲ್ಲ ಕಾಮನೆಗಳನ್ನೂ ಪಡೆದುಕೊಂಡಿರುವುದರಿಂದ ಪ್ರಸನ್ನವಾದ ಮನಸ್ಸಿನಿಂದ ಕೂಡಿರುವವನು.

239) **ಪ. ಭ. :–**ಎಲ್ಲ ಕಾಮನೆಗಳನ್ನೂ ಪಡೆದುಕೊಂಡಿರುವುದರಿಂದ ರಾಗಾದಿಗಳಿಂದ ಕಲುಷಿತವಾಗದ ಮನಸ್ಸುಳ್ಳವನು. **ವಿಜಿಘತ್ಸೋಽಪಿಪಾಸಃ ಸತ್ಯಕಾಮಃ ಸತ್ಯಸಂಕಲ್ಪಃ** (ಛಾಂ. ೮-೧-೫)
ನಿರುಕ್ತಿ :– **ಅವಾಪ್ತಸರ್ವಕಾಮತ್ವಾದ್ರಾಗಾದಿರಹಿತಂ ಮನಃ ।**
ಯಸ್ಯಾಸ್ತಿ ಸ ಪ್ರಸನ್ನಾತ್ಮಾ ಚಿತ್ತತುಷ್ಟಿಪ್ರದೋ ಮನುಃ ॥

236) **ಸ. ಸಂ. :–** ಪ್ರಸನ್ನವಾದ ಮನಸ್ಸುಳ್ಳವನು.

* * *

238) **ವಿಶ್ವಧೃಕ್** = ಪ್ರಪಂಚವನ್ನು ಸೃಷ್ಟಿಸಿದವನು. ಜಗತ್ತನ್ನು ಧರಿಸಿರುವವನು.

ಶಂ. ಭಾ. :– ವಿಶ್ವಧೃಕ್ = ವಿಶ್ವವನ್ನು ಧಾರಣೆಮಾಡಿರುವವನು.

240) **ಪ. ಭ. :– ವಿಶ್ವಸೃಟ್** = (ಗುಣ-ದೋಷಗಳನ್ನು ವಿವೇಚಿಸದೇ) ಕೇವಲ ಔದಾರ್ಯದಿಂದ ವಿಶ್ವವನ್ನು ಸೃಷ್ಟಿಸುವವನು.

ನಿರುಕ್ತಿ :– ವಿಶ್ವಂ ಜಗತ್ಸೃಜತಿ ಯೋ ವಿಶ್ವಸೃಟ್ ಸ ಪ್ರಕೀರ್ತಿತಃ ॥

237) **ಸ. ಸಂ. :– ವಿಶ್ವಧೃಕ್**= ವಿಶ್ವವನ್ನು ತಿರಸ್ಕರಿಸುವವನು ; ವಿಶ್ವದ ಬಗೆಗೆ ಧೈರ್ಯವಾಗಿರುವವನು.

* * *

239) **ವಿಶ್ವಭುಕ್** = ವಿಶ್ವವನ್ನು ಉಪಭುಂಜಿಸುವವನು. ಪ್ರಳಯ ಕಾಲದಲ್ಲಿ ವಿಶ್ವವನ್ನೇ ನುಂಗಿಹಾಕುವವನು.

ಶಂ. ಭಾ. :– ವಿಶ್ವವನ್ನು ಭುಂಜಿಸುವವನು ; ಜನರನ್ನು ಕಾಪಾಡು ವವನು.

241) **ಪ. ಭ. :– ವಿಶ್ವಭುಗ್ವಿಭುಃ** = ಎಲ್ಲ ಕಡೆಗಳಲ್ಲಿಯೂ ವ್ಯಾಪಿಸಿ ಕಾಪಾಡುವವನು. **ಸರ್ವಾಣಿ ರೂಪಾಣಿ ವಿಚಿತ್ಯ ಧೀರಃ । ನಾಮಾನಿ ಕೃತ್ವಾಭಿವದನ್ ಯದಾಸ್ತೇ** (ಪು. ಸೂ.)

ನಿರುಕ್ತಿ :– ಸತ್ಸೃಷ್ಟಂ ವ್ಯಾಪ್ಯ ವೈ ಭುಙ್ಕ್ತೇ ಪಾಲಯನ್ವಿಶ್ವಭುಗ್ವಿಭುಃ ॥

238) **ಸ. ಸಂ. :– ವಿಶ್ವಭುಕ್**= ವಿಶ್ವವನ್ನು ಪಾಲಿಸುವವನು ಅಥವಾ ಭುಂಜಿಸುವವನು.

* * *

240) **ವಿಭುಃ** = ವ್ಯಾಪ್ತನಾದವನು.

ಶಂ. ಭಾ. :– ಹಿರಣ್ಯಗರ್ಭಾದಿರೂಪಗಳಿಂದ ವಿಧ-ವಿಧವಾಗಿ ಆಗು ವವನು (ತೋರುವವನು). ನಿತ್ಯಂ ವಿಭುಂ (ಮುಂ. ೧-೧-೬)

239) **ಸ. ಸಂ. :–** ವಿಧ-ವಿಧವಾಗಿ ಇರು (ಆಗು) ವವನು ; ವ್ಯಾಪ್ತ ನಾದವನು.

* * *

241) **ಸತ್ಕರ್ತಾ**= ಒಳ್ಳೆಯದನ್ನು ಮಾಡುವವನು ; ವಿಶ್ವವನ್ನು ನಿರ್ಮಿಸಿದವನು.

ಶಂ. ಭಾ. :– (ಭಕ್ತರನ್ನು) ಪೂಜಿಸುವವನು.

242) **ಪ. ಭ. :–** ಸಜ್ಜನರನ್ನು ಗೌರವಿಸುವವನು. *ದಂಡಾಪೂಪಿಕಾ

---

* ದಣ್ಡಾಪೂಪಿಕಾನ್ಯಾಯ : ಅಪೂಪಗಳನ್ನು ಕಟ್ಟಿರುವ ದಂಡಕ್ಕೆ ಇಲಿಯು ಹತ್ತಿ ದಂಡವನ್ನೇ ಭಕ್ಷಿಸಿತು–ಎಂಬ ಅರ್ಥದಿಂದ ಅಪೂಪಗಳನ್ನೂ ಭಕ್ಷಿಸಿತು ಎಂಬ ಅರ್ಥವು

ನ್ಯಾಯದಂತೆ ತನ್ನ ಕಡೆಗೆ ಲಕ್ಷ್ಯವನ್ನೇ ಕೊಡದಿರುವ ಸಾಧಾರಣ ಜನರನ್ನು ಗೌರವಿಸುವವನು–ಎಂಬ ಅರ್ಥದಿಂದ ಸಜ್ಜನರನ್ನು ಗೌರವಿಸುವವನು ಎಂಬ ಅರ್ಥವು ಸ್ಪಷ್ಟವಾಗಿಯೇ ಇದೆ. ಸಜ್ಜನಪ್ರತಿಪೂಜಕಃ(ರಾಮಾಯಣ)

ನಿರುಕ್ತಿ :– ಸತ್ಕರ್ತಾ ಯಃ ಸ ವಿಜ್ಞೇಯಃ ಸಜ್ಜನಪ್ರತಿಪೂಜಕಃ ॥

240) **ಸ. ಸಂ. :–** ಕ್ಲೇಶಾದಿಗಳಿಂದ ರಹಿತನಾದ ಕರ್ತೃವು ; ಸತ್ಯವಾದ ಜಗತ್ತಿನ ಕರ್ತೃವು ; ದೈತ್ಯರ ಹಿಂಸಕನು.

* * *

242) **ಸತ್ಕೃತಃ** = ಎಲ್ಲರಿಂದಲೂ ಪೂಜಿತನಾದವನು.

ಶಂ. ಭಾ. :– ಪೂಜ್ಯರಿಂದಲೂ ಪೂಜಿತನಾದವನು.

243) **ಪ. ಭ. :–** ಸಜ್ಜನರಿಂದ ಅರ್ಚನೆ–ಮುಂತಾದುವುಗಳ ಮೂಲಕ ಚೆನ್ನಾಗಿ ಪೂಜಿಸಲ್ಪಟ್ಟವನು. ಶ್ರದ್ಧೆಯಿಂದ ಅರ್ಪಿಸಲ್ಪಟ್ಟ ಸ್ವಲ್ಪ ದಿಂದಲೂ ಸಂತೋಷಪಡುವವನು. **ವಿಧಿಪ್ರಯುಕ್ತಾಂ ಪೂಜಾಂ ಚ ಗೃಹ್ಣಾತಿ ಶಿರಸಾ ಸ್ವಯಮ್ । ಶಬರ್ಯಾ ಪೂಜಿತಃ ಸಮ್ಯಕ್** (ರಾ.೧-೬೩) **ಮಾಲಾಕಾರೇಣ ಪೂಜಿತಃ** (ವಿ. ೫-೧೯-೨೯)

ನಿರುಕ್ತಿ :– ಅರ್ಚಾದಿಭಿಃ ಸಜ್ಜನೈರ್ಯಃ ಪೂಜಿತಃ ಸತ್ಕೃತಃ ಸ್ಮೃತಃ ।

241) **ಸ. ಸಂ. :– ಸತ್ಕೃತಿಃ** = ಸತ್ಯಕರ್ಮವ್ಯಾಪಾರವುಳ್ಳವನು ; ಸತೀ ಎಂಬ ಭಾರ್ಯೆಯನ್ನು ಉಳ್ಳವನು.

* * *

243) **ಸಾಧುಃ** = ಸತ್ಪುರುಷನು ; ಇಷ್ಟಾರ್ಥವನ್ನು ಸಾಧಿಸುವವನು.

ಶಂ. ಭಾ. :– ನ್ಯಾಯಕ್ಕೆ ಅನುಕೂಲವಾಗಿ ನಡೆಯುವವನು ; ಎಲ್ಲ ಸಾಧ್ಯಭೇದಗಳನ್ನೂ ಸಾಧಿಸುವವನು ; ಉಪಾದಾನಕಾರಣನಾಗಿರುವುದ ರಿಂದ ಸಾಧ್ಯಮಾತ್ರವನ್ನೂ ಸಾಧಿಸುವವನು.

ತಾನಾಗಿಯೇ ತೋರುವಂತೆ–ಸತ್ಕರ್ತಾ = ಎಲ್ಲರನ್ನೂ ಗೌರವಿಸುವವನು ಎಂಬ ಅರ್ಥದಿಂದ ಸತ್ಪುರುಷರನ್ನು ಗೌರವಿಸುವವನು–ಎಂಬ ಅರ್ಥವು ತಾನಾಗಿಯೇ ತೋರುತ್ತದೆ.

244) **ಪ. ಭ. :–** ಭಕ್ತರಿಗೆ ಅಪೇಕ್ಷಿತವಾದ (ದೌತ್ಯ-ಸಾರಥ್ಯ ಮುಂತಾದುವುಗಳನ್ನು) ಸಾಧಿಸುವವನು.

ನಿರುಕ್ತಿ :– ಸೇವಾಂ ಸಾರಥ್ಯದೂತ್ಯಾದ್ಯಾಂ ಸಾಧುಃ ಸಾಧಯತೀತಿ ಸಃ ॥

242) **ಸ. ಸಂ. :–** ಪರಕಾರ್ಯವನ್ನು ಸಾಧಿಸುವವನು.

* * *

244) **ಜಹ್ನುಃ** = ಜಹ್ನುಮಹರ್ಷಿರೂಪಿಯಾದವನು. ದುಷ್ಟರನ್ನು ತೊರೆಯುವವನು ; ಅಜ್ಞಾನಿಗಳ ದೆಸೆಯಿಂದ ತನ್ನನ್ನು ಮುಚ್ಚಿಕೊಳ್ಳುವವನು.

ಶಂ. ಭಾ. :– ಸಂಹಾರಸಮಯದಲ್ಲಿ ಜನರನ್ನು ಲಯಗೊಳಿಸುವವನು ; ಅಜ್ಞಾನಿಗಳನ್ನು ತೊರೆಯುವವನು ; ಭಕ್ತರನ್ನು ಪರಮಪದಕ್ಕೆ ಒಯ್ಯುವವನು.

245) **ಪ. ಭ. :–** ಭಕ್ತರಲ್ಲದವರ ದೆಸೆಯಿಂದ ತನ್ನ ಮಹಿಮೆಯನ್ನು ಮುಚ್ಚಿಕೊಳ್ಳುವವನು.

ನಿರುಕ್ತಿ :– ಅಭಕ್ತೇಷ್ವಾತ್ಮಮಾಹಾತ್ಮ್ಯನಿಹ್ನುತೇರ್ಜಹ್ನುರುಚ್ಯತೇ ॥

243) **ಸ. ಸಂ. :–** ಅಯೋಗ್ಯರನ್ನು ತೊರೆಯುವವನು.

* * *

245) **ನಾರಾಯಣಃ** = ನರರಿಗೆಲ್ಲರಿಗೂ ಏಕಮಾತ್ರಗತಿಯೂ ಮತ್ತು ಮಾರ್ಗವೂ ಆಗಿರುವವನು. ನಾನ್ಯಃ ಪನ್ಥಾ ಅಯನಾಯ ವಿದ್ಯತೇ । (ಪು. ಸೂ.) ಸೃಷ್ಟಿಮೂಲವಾದ ಜಲವನ್ನು ಆಶ್ರಯವನ್ನಾಗಿ ಹೊಂದಿರುವವನು.

ಆಪೋ ನಾರಾ ಇತಿ ಪ್ರೋಕ್ತಾ ಆಪೋ ವೈ ನರಸೂನವಃ ।
ತಾ ಯದಸ್ಯಾಯನಂ ಪೂರ್ವಂ ತೇನ ನಾರಾಯಣಃ ಸ್ಮೃತಃ ॥

(ಮನು)

ಶಂ. ಭಾ. :– ಎಲ್ಲ ಕಾರ್ಯಗಳನ್ನೂ ಕಾರಣರೂಪದಿಂದ ವ್ಯಾಪಿಸಿರುವವನು. ನಾರಾಃ = ನರನಿಂದ ಉಂಟಾದ ಆಕಾಶವೇ ಮುಂತಾದ ಕಾರ್ಯಗಳು.

ಯಚ್ಚ ಕಿಞ್ಚಿಜ್ಜಗತ್ಸರ್ವಂ ದೃಶ್ಯತೇ ಶ್ರೂಯತೇಽಪಿ ವಾ ।
ಅನ್ತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಃ ಸ್ಥಿತಃ ॥
(ಮ. ನಾ. ೧೩-೧-೨)

ನರರಿಗೆ = ಜೀವಗಳಿಗೆ ಪ್ರಳಯಕಾಲದಲ್ಲಿ ಆಶ್ರಯನಾಗಿರುವವನು. **ಯತ್ಪ್ರಯನ್ತ್ಯಭಿಸಂವಿಶನ್ತಿ।** (ತೈ. ಉ. ೩-೧) **ನರಾಣಾಮಯನಂ ಯಸ್ಮಾತ್ತಸ್ಮಾನ್ನಾರಾಯಣಃ ಸ್ಮೃತಃ।** (ಬ್ರಹ್ಮವೈವರ್ತ) ಜಲವನ್ನೇ ಆಶ್ರಯವನ್ನಾಗಿ ಹೊಂದಿರುವವನು.

246) **ಪ. ಭ. :–** ಒಳಗೆ ಮತ್ತು ಹೊರಗೆ ಎಲ್ಲವನ್ನೂ ವ್ಯಾಪಿಸಿಕೊಂಡಿರುವವನು. ಇದು ಭಗವಂತನ ಅಸಾಧಾರಣವಾದ ನಾಮ. ನರರ ಸಮೂಹಕ್ಕೆ ಆಶ್ರಯನಾದವನು.

ನಿರುಕ್ತಿ :– ಅನ್ತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಃ ಸ್ಮೃತಃ ॥

244) **ಸ. ಸಂ. :–** ಗುಣಗಳಿಗೆ ಆಶ್ರಯನಾದವನು ; ದೋಷಗಳಿಗೆ ಆಶ್ರಯನಾಗದವನು ; (ನರಸಂಬಂಧಿಯಾಗಿರುವುದರಿಂದ) ಯಾವನಿಂದ ನಾಶವುಂಟಾಗುವುದಿಲ್ಲವೋ–ಅವನು ; ಯಾವನಿಂದ ಅರತಿಯು ಉಂಟಾಗುವುದಿಲ್ಲವೋ ಅವನು. ಯಾವನಿಂದ ದೋಷಗಳು ಉಂಟಾಗುವುದಿಲ್ಲವೋ– ಅವನು ; ನಿರ್ದೋಷವಾದ ವೇದಗಳಿಂದ ಉಂಟಾದ ಜ್ಞಾನಕ್ಕೆ ನಾರಾ–ಎಂದು ಹೆಸರು. ಅದಕ್ಕೆ ವಿಷಯನಾದವನು ನಾರಾಯಣ ; ಮುಕ್ತರಿಗೆ ಆಶ್ರಯನಾದವನು ; ವೇದಾದಿಗಳಿಂದ ಪ್ರತಿಪಾದಿಸಲ್ಪಡುವವನು ; ನರರಿಗೆ ಸಂಬಂಧಿಸಿದುದನ್ನು ಕೊಡುವವನು ; ನರರ ಸಮೂಹಕ್ಕೆ ವಂದ್ಯನಾಗಿ ಆಶ್ರಯನಾಗಿರುವವನು ; ಮುಖ್ಯವಾಯುವಿಗೆ ಪರಮಪ್ರೇಮಕ್ಕೆ ವಿಷಯನಾಗಿ ಅವನಿಗೆ ಆಶ್ರಯನಾಗಿರುವವನು ; ನೀರನ್ನು ಆಶ್ರಯವನ್ನಾಗಿ ಹೊಂದಿರುವವನು.

* * *

246) **ನರಃ** = ನರನೆಂಬ ಮಹರ್ಷಿಯ ರೂಪದಲ್ಲಿ ಅವತಾರಮಾಡಿದವನು ; ಎಲ್ಲರಿಗೂ ಜೀವಭೂತನಾದವನು.

ಶಂ. ಭಾ. :– ನಯನಮಾಡುವವನು ; (ಒಯ್ಯುವವನು.) **ನಯತೀತಿ ನರಃ ಪ್ರೋಕ್ತಃ ಪರಮಾತ್ಮಾ ಸನಾತನಃ ॥**

247) **ಪ. ಭ. :–** ನಶ್ವರವಲ್ಲದೇ ಇರುವ ಚಿತ್, ಅಚಿತ್–ಎಂಬ ವಿಭೂತಿಗಳುಳ್ಳವನು ; ಅಳಿವಿಲ್ಲದವನು.

ನಿರುಕ್ತಿ :– ರಃ ಕ್ಷಯೋ ಯಸ್ಯ ನ ಹ್ಯಸ್ತಿ ಸ ನರಃ ಸಮುದಾಹೃತಃ ॥

245) **ಸ. ಸಂ. :–** ವಿಕಾರವಿಲ್ಲದವನು ; ಅವಿನಾಶಿಯು.

* * *

ಅಸಂಖ್ಯೇಯೋಽಪ್ರಮೇಯಾತ್ಮಾ ವಿಶಿಷ್ಟಃ ಶಿಷ್ಟಕೃಚ್ಛುಚಿಃ ।
ಸಿದ್ಧಾರ್ಥಃ ಸಿದ್ಧಸಂಕಲ್ಪಃ ಸಿದ್ಧಿದಃ ಸಿದ್ಧಿಸಾಧನಃ ॥೪೦॥

247) **ಅಸಂಖ್ಯೇಯಃ** = ಎಣಿಸಲಾಗದ ಗುಣ-ವಿಭೂತಿಗಳುಳ್ಳವನು.

ಶಂ. ಭಾ. :– ಸಂಖ್ಯೆ (ನಾಮ-ರೂಪಾದಿ ಭೇದಗಳು) ಇಲ್ಲದವನು.

248) **ಪ. ಭ. :–** ಎಣಿಸಲು ಅಸಾಧ್ಯವಾದ ನರಸಂಘಗಳುಳ್ಳವನು.

ನಿರುಕ್ತಿ :– ಅಗಣ್ಯನರಸಂಘೋ ಯಃ ಸೋಽಸಂಖ್ಯೇಯಃ ಪ್ರಕೀರ್ತಿತಃ

246) **ಸ. ಸಂ. :–** ಲೆಕ್ಕಿಸಲಾಗದ ಗುಣಗಳುಳ್ಳವನು.

* * *

248) **ಅಪ್ರಮೇಯಾತ್ಮಾ** = ಅಳೆಯಲು ಅಸಾಧ್ಯವಾದ ಸ್ವರೂಪವುಳ್ಳವನು.

ಶಂ. ಭಾ. :– ಅಳೆಯಲಾಗದ ಸ್ವರೂಪವುಳ್ಳವನು.

249) **ಪ. ಭ. :–** ಒಂದೊಂದಾಗಿಯೂ ಯಾವುದನ್ನು ಅಳೆಯುವುದಕ್ಕಾಗುವುದಿಲ್ಲವೋ–ಅಂತಹ ಅಸಂಖ್ಯಾತರಾದ ವಿಭೂತಿಗಳನ್ನು ಒಳಗೂ-ಹೊರಗೂ ವ್ಯಾಪಿಸಿ ಅವುಗಳಿಗೆ ಆತ್ಮವಾಗಿರುವವನು.

ನಿರುಕ್ತಿ :– ಏಕೈಕಶೋಽಪ್ರಮೇಯಾ ಯಾ ಹ್ಯಸಂಖ್ಯಾತಾ ವಿಭೂತಯಃ।
ತಾಸಾಂ ಚೈವಾಪ್ರಮೇಯಾತ್ಮಾ ವ್ಯಾಪನಾದ್ಬಹಿರನ್ತತಃ ॥

247) **ಸ. ಸಂ. :–** ಅಳೆಯಲು ಅಸಾಧ್ಯವಾದ ಸ್ವರೂಪ-ದೇಹಗಳು ಅಥವಾ ಸ್ವಭಾವಗಳುಳ್ಳವನು.

* * *

249) **ವಿಶಿಷ್ಟಃ** = ಎಲ್ಲಕ್ಕಿಂತಲೂ ಅತಿಶಯವಾಗಿರುವವನು ; ಎಲ್ಲದರೊಡನೆ ಕೂಡಿಕೊಂಡಿರುವವನು.

ಶಂ. ಭಾ. :– ಎಲ್ಲಕ್ಕಿಂತಲೂ ಅತಿಶಯವಾಗಿರುವವನು.

250) **ಪ. ಭ. :–** ತನ್ನ ಎಲ್ಲ ವಿಭೂತಿಗಳಿಗಿಂತಲೂ ವಿಲಕ್ಷಣನಾಗಿ ಅಧಿಕನಾಗಿರುವವನು.

ನಿರುಕ್ತಿ :– **ವಿಲಕ್ಷಣೋ ವಿಶಿಷ್ಟೋ ಯಃ ಸರ್ವಾಂಸ್ತಾನನಪೇಕ್ಷ್ಯ ಸಃ ॥**

248) **ಸ. ಸಂ. :–** ವಿಶಿಷ್ಟರಾದ ಬ್ರಹ್ಮಾದಿಗಳೂ ಕೂಡ ಯಾವನಿಂದ ಉಂಟಾಗುತ್ತಾರೆಯೋ–ಅವನು.

* * *

250) **ಶಿಷ್ಟಕೃತ್** = ಶಿಷ್ಟಜನರನ್ನು ಉಂಟುಮಾಡುವವನು ಅಥವಾ ಒಳ್ಳೆಯ ಕಾರ್ಯಗಳನ್ನು ಮಾಡುವವನು.

ಶಂ. ಭಾ. :– ಶಾಸನವನ್ನು ಮಾಡುವವನು ; ಸಾಧುಗಳನ್ನು ಪಾಲಿಸುವವನು.

251) **ಪ. ಭ. :–** ತನ್ನ ಸಂಬಂಧದಿಂದ ಶಿಷ್ಟಜನರನ್ನು ತನಗೆ ಅನುಗುಣವಾದ ಶುಭವುಳ್ಳವರನ್ನಾಗಿ ಮಾಡುವವನು.

ಸ. ಸಂ. :– (ಸಮರ್ಥರಾದವರು ಕೂಡ ಮಾಡಲು ಸಾಧ್ಯವಾಗದೇ) ಉಳಿದಿರುವುದನ್ನು ತಾನೇ ಪೂರ್ಣಗೊಳಿಸುವವನು.

* * *

251) **ಶುಚಿಃ** = ಶುದ್ಧನು.

ಶಂ. ಭಾ. :– ನಿರಂಜನನು ; ನಿರ್ಮಲನು.

252) **ಪ. ಭ. :–** ಧರಿಸಲು ಅಸಾಧ್ಯವಾದ ಮಹಾಪ್ರಕಾಶವುಳ್ಳವನು.

ನಿರುಕ್ತಿ :– **ಸ್ವಾನುಕೂಲಶುಭಾನ್ಕುರ್ವನ್ಸ್ವಸಂಬನ್ಧೇನ ತಾನ್ಸ್ವಯಮ್ ।**
ಅನಾಧೇಯಮಹಾದೀಪ್ತಿಃ ಶಿಷ್ಟಕೃಚ್ಛುಚಿರುಚ್ಯತೇ ॥

250) **ಸ. ಸಂ. :–** ಶುದ್ಧನು.

* * *

252) **ಸಿದ್ಧಾರ್ಥಃ** = ಸಿದ್ಧವಾದ ಪ್ರಯೋಜನವುಳ್ಳವನು.

ಶಂ. ಭಾ. :– ಯಾವನ ಎಲ್ಲ ಇಷ್ಟಾರ್ಥಗಳೂ ಸಿದ್ಧವಾಗಿವೆಯೋ– ಅವನು. ಸತ್ಯಕಾಮಃ (ಛಾಂ .೮-೭-೧)

253) **ಪ. ಭ. :–** ಎಲ್ಲ ಇಷ್ಟಾರ್ಥಗಳ ಸಿದ್ಧಿಯನ್ನೂ ಪಡೆದವನು. ಅವಾಪ್ತಕಾಮನಾದವನು.

ನಿರುಕ್ತಿ :– ಸಿದ್ಧಾಃ ಪ್ರಾಪ್ತಾ ಯಸ್ಯ ಸರ್ವೇ ಹ್ಯರ್ಥಾಃ ಸಿದ್ಧಾರ್ಥ ಈರಿತಃ ।
ಅವಾಪ್ತಸರ್ವಕಾಮೋ ವಾ ಸಿದ್ಧಾರ್ಥ ಇತಿ ಕಥ್ಯತೇ ॥

251) **ಸ. ಸಂ. :–** ಇಷ್ಟಾರ್ಥಗಳನ್ನು ಪಡೆಯಲು ಭಕ್ತರಿಂದ ಹೊಂದಲ್ಪಡುವವನು. ಸಿದ್ಧನಾಗಿ ಭಕ್ತರಿಂದ ಹೊಂದಲ್ಪಡುವವನು ; ಸಿದ್ಧರಿಗೆ ಧನ ರೂಪವಾಗಿರುವವನು ; ಸಿದ್ಧವಾದ ಸೃಷ್ಟಿಯೇ ಮುಂತಾದ ಪ್ರಯೋಜನವುಳ್ಳವನು ; ಅಯೋಗ್ಯರ ನಿವೃತ್ತಿಗೆ ಕಾರಣನಾದವನು.

* * *

253) **ಸಿದ್ಧಸಂಕಲ್ಪಃ** = ನಿರರ್ಥಕವಾಗದೇ ಸಿದ್ಧವಾಗುವ ಸಂಕಲ್ಪವುಳ್ಳವನು.

ಶಂ. ಭಾ. :– ಪೂರ್ಣವಾದ ಸಂಕಲ್ಪವುಳ್ಳವನು.

254) **ಪ. ಭ. :–**ಸತ್ಯಸಂಕಲ್ಪವುಳ್ಳವನು ; ಸ್ವತಂತ್ರನಾಗಿ ಸ್ವೇಚ್ಛೆಯಿಂದ ಸರ್ವಾರ್ಥಗಳನ್ನೂ ಸಾಧಿಸುವುದರಿಂದ ಸತ್ಯಸಂಕಲ್ಪನಾದವನು.

ನಿರುಕ್ತಿ :– ಸತ್ಯಸಂಕಲ್ಪವತ್ತ್ವಾಚ್ಚ ಸಿದ್ಧಸಂಕಲ್ಪ ಈರಿತಃ ॥

252) **ಸ. ಸಂ. :–** ಭಕ್ತರ ಇಷ್ಟಾರ್ಥಗಳನ್ನು ವಿತರಣೆಮಾಡುವ ವಿಷಯದಲ್ಲಿ ಸಿದ್ಧವಾದ ಸಂಕಲ್ಪವುಳ್ಳವನು.

* * *

254) **ಸಿದ್ಧಿದಃ** = ಭಕ್ತರಿಗೆ ಎಲ್ಲ ಪುರುಷಾರ್ಥಗಳನ್ನೂ ಈಡೇರಿಸುವವನು. ಅಣಿಮಾದಿ ಸಿದ್ಧಿಗಳನ್ನು ಅನುಗ್ರಹಿಸುವವನು.

ಶಂ. ಭಾ. :– ಕರ್ಮವನ್ನು ಮಾಡುವವರಿಗೆ ಅವರ ಅಧಿಕಾರಕ್ಕೆ ಅನುಗುಣವಾದ ಫಲಸಿದ್ಧಿಯನ್ನು ಕೊಡುವವನು.

255) **ಪ. ಭ. :–** ಅಣಿಮಾದಿಅಷ್ಟಸಿದ್ಧಿಗಳನ್ನೂ ಸಾಧಕರಿಗೆ ಕೊಡುವವನು.

ನಿರುಕ್ತಿ :– ಸಿದ್ಧಿದಃ ಸಾಧಕೇಭ್ಯೋ ಯೋ ಹ್ಯಣಿಮಾದ್ಯಷ್ಟಸಿದ್ಧಿದಃ ॥

253) **ಸ. ಸಂ. :–** ಯೋಗ್ಯರಿಗೆ ಸಿದ್ಧಿಯನ್ನು ಕೊಡುವವನು ; ಅಯೋಗ್ಯರಿಗೆ ಸಿದ್ಧಿಯನ್ನು ಧ್ವಂಸಮಾಡುವವನು.

* * *

255) **ಸಿದ್ಧಿಸಾಧನಃ** = ಸಿದ್ಧಿಗಳನ್ನು ಸಾಧಿಸುವವನು.

ಶಂ. ಭಾ. :– ಸಿದ್ಧಿರೂಪವಾದ ಕ್ರಿಯೆಯನ್ನು ಸಾಧಿಸುವವನು.

256) **ಪ. ಭ. :–** ಸಿದ್ಧಿಗೆ ಕಾರಣನಾದವನು. 'ಸಿದ್ಧಿ' ಎನ್ನುವುದು ಅನುಷ್ಠಾನಸಮಯದಲ್ಲಿಯೂ ಪ್ರಿಯವನ್ನುಂಟುಮಾಡುವುದರಿಂದ ಸಿದ್ಧಿರೂಪವಾದ ಸಾಧನವುಳ್ಳವನು.

ನಿರುಕ್ತಿ :– ತತ್ಸಿದ್ಧೇಶ್ಚಾಪಿ ಹೇತುತ್ವಾತ್ಸಿದ್ಧಿಸಾಧನ ಈರಿತಃ ॥

254) **ಸ. ಸಂ. :–** ಮೋಕ್ಷರೂಪವಾದ ಫಲವನ್ನು ಸಾಧಿಸುವವನು.

* * *

ವೃಷಾಹೀ ವೃಷಭೋ ವಿಷ್ಣುರ್ವೃಷಪರ್ವಾ ವೃಷೋದರಃ ।
ವರ್ಧನೋ ವರ್ಧಮಾನಶ್ಚ ವಿವಿಕ್ತಃ ಶ್ರುತಿಸಾಗರಃ ॥೪೧॥

೨೫೬) **ವೃಷಾಹೀ** = ಧರ್ಮಪ್ರಕಾಶವುಳ್ಳವನು ; ಧರ್ಮದಿನವುಳ್ಳವನು.

ಶಂ. ಭಾ. :– ಧರ್ಮವನ್ನೇ ಹಗಲನ್ನಾಗಿ ಹೊಂದಿರುವವನು ; ದ್ವಾದಶಾಹವೇ ಮುಂತಾದ ಯಜ್ಞಗಳು ಯಾವನಲ್ಲಿ ನೆಲೆಗೊಂಡಿವೆಯೋ– ಅವನು.

257) **ಪ. ಭ. :–** ಧರ್ಮರೂಪವಾದ ಹಗಲು ; (ಸುಪ್ರಭಾತದ) ಅಭಿಗಮನವುಳ್ಳವನು. ಅದ್ಯ ಮೇ ಸಫಲಂ ಜನ್ಮ ಸುಪ್ರಭಾತಾ ಚ ಮೇ ನಿಶಾ । (ವಿ. ಪು. ೫-೧೭-೩)

ನಿರುಕ್ತಿ :– ವೃಷೋ ಹಿ ಧರ್ಮಸ್ತದ್ರೂಪಮಹರ್ಯಸ್ಯ ದಿನಂ ಸ್ಮೃತಮ್ ।
ಪ್ರಥಮಾಭಿಗಮನಾಖ್ಯಂ ವೃಷಾಹೀ ಸ ಪ್ರಕೀರ್ತಿತಃ ॥

255) ಸ. ಸಂ. :– ಧರ್ಮದಿಂದ ವ್ಯಾಪಿಸಲ್ಪಡುವವನು.

* * *

257) ವೃಷಭಃ = ಧರ್ಮವೃಷಭರೂಪಿಯಾದವನು ; ಇಷ್ಟಾರ್ಥಗಳನ್ನು ವರ್ಷಿಸುವವನು ; ವೃಷಭರೂಪಿಯಾಗಿ ತ್ರಿಪುರಾಸುರಸಂಹಾರದಲ್ಲಿ ನೆರವು ನೀಡಿದವನು.

ಶಂ. ಭಾ. :– ಭಕ್ತರ ಇಷ್ಟಾರ್ಥಗಳನ್ನು ಸುರಿಸುವವನು.

258) ಪ. ಭ. :– ತನ್ನ ಬಳಿಗೆ ಬಂದ ಸಂಸಾರಸಂತಪ್ತರಾದ ಭಕ್ತಜನರ ಮೇಲೆ ಅಮೃತದ ಮಳೆಯನ್ನು ಕರೆಯುವವನು.

ನಿರುಕ್ತಿ :– ಅಭಿಗಚ್ಛದ್ಭಕ್ತಜನಾನ್ಸುಧಾವರ್ಷಣತೋಽನ್ವಹಮ್ ।
ವೃಷಭಶ್ಚ ಸಮಾಖ್ಯಾತಃ ಸಿಞ್ಚನ್ಭಯಹರೋ ಮನುಃ ॥

256) ಸ. ಸಂ. :– ಮಳೆಗರೆಯುವವನು ; ತಾನು ಮಾಡಿದ ಧರ್ಮದಿಂದ ಕಂಗೊಳಿಸುವವನು.

* * *

258) ವಿಷ್ಣುಃ = ಬೃಹತ್ತಾಗಿರುವವನು ; ವ್ಯಾಪಕನು ; ಎಲ್ಲವನ್ನೂ ಪ್ರವೇಶಿಸಿರುವವನು. ಬೃಹತ್ತ್ವಾದ್ವಿಷ್ಣುರುಚ್ಯತೇ । (ಮ. ಭಾ. ಉ.೭೦-೩)

ಶಂ. ಭಾ. :– ಎಲ್ಲ ಕಡೆಗಳಲ್ಲಿಯೂ ವ್ಯಾಪಿಸಿರುವವನು. ವಿಷ್ಣುರ್ವಿಕ್ರಮಣಾತ್ (ಮ. ಭಾ. ಉ.೭೦-೧೩)

259) ಪ. ಭ. :– ತನ್ನನ್ನು ಬಿಟ್ಟು ಬೇರೆ ಯಾವುದೂ ಇಲ್ಲದಿರುವಂತೆ ವ್ಯಾಪ್ತಿಯುಳ್ಳವನು ; ನ ತದಸ್ತಿ ವಿನಾ ಯತ್ಸ್ಯಾನ್ಮಯಾ ಭೂತಂ ಚರಾಚರಮ್ ॥ (ಗೀತಾ ೧೦-೩೯)

ನಿರುಕ್ತಿ :– ವಿಷ್ಣುಃ ಸ್ಯಾದವಿನಾಭಾವಾದ್ವ್ಯಾಪ್ಯವ್ಯಾಪಕಭಾವತಃ ॥

257) **ಸ. ಸಂ. :–** ಪ್ರವಾಹರಹಿತನಾದವನು ; ನದಿಯೇ ಮುಂತಾದ ವಿಶೇಷಪ್ರವಾಹಗಳು ಯಾವನಿಂದ ಉಂಟಾಗುತ್ತವೆಯೋ–ಅವನು.

* * *

259) **ವೃಷಪರ್ವಾ** = ತನ್ನ ಬಳಿಗೆ ಆರೋಹಣಮಾಡಿಸುವ ಧರ್ಮ ರೂಪವಾದ ಸೋಪಾನಗಳುಳ್ಳವನು.

ಶಂ. ಭಾ. :– ಪರಮಧಾಮವನ್ನು ಹತ್ತಲು ಬಯಸುವವರಿಗೆ ಧರ್ಮವು (ಪರ್ವ) ಮೆಟ್ಟಿಲುಗಳಾಗಿರುವುದರಿಂದ ಭಗವಂತನು ವೃಷ ಪರ್ವನು.

260) **ಪ. ಭ. :–** ಯಾವನ ಸ್ಥಾನಕ್ಕೆ ಹತ್ತಲು ವರ್ಣಾಶ್ರಮಗಳೂ ಧರ್ಮಗಳೂ ಸೋಪಾನಪರ್ವಗಳಾಗಿವೆಯೋ–ಅವನು.

ನಿರುಕ್ತಿ :– **ವೃಷಾ ವರ್ಣಾಶ್ರಮಾ ಧರ್ಮಾಃ ಪರ್ವಾಣ್ಯಾರೋಹಣೇ ತು ತೇ ॥**
ಯಸ್ಯ ಸನ್ತಿ ಸದಾ ಸೋऽಯಂ ವೃಷಪರ್ವಾ ಪ್ರಕೀರ್ತಿತಃ ॥

258) **ಸ. ಸಂ. :–** ಪುಣ್ಯಕ್ಕೆ ಸಾಧನವಾದ ಅಮಾವಾಸ್ಯೆಯೇ ಮುಂತಾದ ಪರ್ವದಿನಗಳುಳ್ಳವನು.

* * *

260) **ವೃಷೋದರಃ** = ಧರ್ಮರೂಪವಾದ ಉದರವುಳ್ಳವನು.

ಶಂ. ಭಾ. :– ಪ್ರಜೆಗಳನ್ನು ಸುರಿಸುತ್ತಿದೆಯೋ ಎಂಬಂತಿರುವ ಹೊಟ್ಟೆಯುಳ್ಳವನು.

261) **ಪ. ಭ. :–** (ಆರಾಧಕರು ಸಮರ್ಪಿಸುವ ಹವಿಸ್ಸೇ ಮುಂತಾದುವುಗಳಿಂದ ಪೂರ್ಣವಾಗಿರುವ ಅಥವಾ ಎಲ್ಲ ಆರ್ತರಿಗೂ ಆಶ್ರಯವಾಗಿರುವ) ಧಾರ್ಮಿಕವಾದ ಉದರವುಳ್ಳವನು.

ನಿರುಕ್ತಿ :– **ಭಕ್ತೈರುಪಾಹೃತಾಂ ಪೂಜಾಂ ಉಪಹಾರಾಂಶ್ಚ ಧರ್ಮತಃ ।**
ಕೃತ್ಸ್ನೋದರೇ ಯೋಜಯತಿ ಸ ವೃಷೋದರ ಉಚ್ಯತೇ ॥

259) **ಸ. ಸಂ. :–** ಪುಣ್ಯತೀರ್ಥದಿಂದ ರಮಿಸುವವನು ; ಗಂಗೋ

ದಕವನ್ನು ತ್ರಿವಿಕ್ರಮರೂಪದಿಂದ ಕೊಟ್ಟವನು ; ವರ್ಷಿಸುವವನು ಮತ್ತು ದೋಷರಹಿತನಾದವನು.

*　　*　　*

261) **ವರ್ಧನಃ** = ವೃದ್ಧಿಪಡಿಸುವವನು ; ಪೋಷಕನು ; ವಿಸ್ತರಿಸುವವನು.

ಶಂ. ಭಾ. :– ವೃದ್ಧಿಪಡಿಸುವವನು.

262) **ಪ. ಭ. :–** ತಾಯಿಯಂತೆ ಹೊಟ್ಟೆಯಲ್ಲಿ ಇರಿಸಿಕೊಂಡು ಭಕ್ತರನ್ನು ಪೋಷಿಸುವವನು.

ನಿರುಕ್ತಿ :– **ಮಾತೃವಜ್ಜಠರೇ ಕೃತ್ವಾ ಭಕ್ತಾನ್ವರ್ಧಯತಿ ಸ್ವಯಮ್ ।**
ವರ್ಧನಃ ಪ್ರೋಚ್ಯತೇ ನಿತ್ಯಂ ಸಪ್ತಾರ್ಣೋ ವೃದ್ಧಿದೋ ಮನುಃ॥

260) **ಸ. ಸಂ. :–** ತನ್ನವರನ್ನು ಬೆಳೆಸುವವನು ; ವರಿಸಲ್ಪಟ್ಟ ಧನವುಳ್ಳವನು.

*　　*　　*

262) **ವರ್ಧಮಾನಃ** = ವೃದ್ಧಿಹೊಂದುತ್ತಿರುವವನು.

ಶಂ. ಭಾ. :– ಪ್ರಪಂಚರೂಪದಿಂದ ವೃದ್ಧಿಹೊಂದುವವನು.

263) **ಪ. ಭ. :–**ಭಕ್ತರನ್ನು ವೃದ್ಧಿಗೊಳಿಸುತ್ತಾ ತಾನೂ ವೃದ್ಧಿಹೊಂದುವವನು ; ಪರ್ಯವಸಾನವಿಲ್ಲದ ಸಮೃದ್ಧಿಯುಳ್ಳವನು.

ನಿರುಕ್ತಿ :– **ವರ್ಧಯಂಸ್ತಾನ್ಸ್ವಯಮಪಿ ವರ್ಧಮಾನಶ್ಚ ವರ್ಧನಾತ್ ॥**

261) **ಸ. ಸಂ. :–** ನಿತ್ಯವೃದ್ಧಿಯುಳ್ಳವನು.

*　　*　　*

263) **ವಿವಿಕ್ತಃ** = ಸರ್ವೋತ್ತಮನಾಗಿ ನಿರ್ಲಿಪ್ತನಾಗಿ ಎಲ್ಲಕ್ಕಿಂತಲೂ ಪ್ರತ್ಯೇಕವಾಗಿರುವವನು.

ಶಂ. ಭಾ. :– ಪ್ರಪಂಚರೂಪದಿಂದ ವೃದ್ಧಿಹೊಂದುತ್ತಿದ್ದರೂ ಪ್ರತ್ಯೇಕವಾಗಿಯೇ ಇರುವವನು.

264) **ಪ. ಭ. :–** ಸರ್ವಲೋಕೋತ್ತರವಾಗಿ ತನ್ನಲ್ಲಿ ಮಾತ್ರವೇ ನೆಲೆಸುವ ವೃತ್ತಾಂತಗಳುಳ್ಳವನು.

ನಿರುಕ್ತಿ :– ಲೋಕೋತ್ತರಾದಿವೃತ್ತಾನ್ತಾತ್ಸ್ವೈಕಾನ್ತಾದ್ಗುಣಬೃಂಹಿತಾತ್ ।
ವಿವಿಕ್ತ ಇತಿ ವಿಖ್ಯಾತಃ ಪಾವನತ್ವಪ್ರದೋ ಮನುಃ ॥

262) ಸ. ಸಂ. :– ಜಗತ್ತಿನಿಂದ ಭಿನ್ನನಾದವನು.

* * *

264) **ಶ್ರುತಿಸಾಗರಃ** = ವೇದಗಳಿಗೆ ಸಮುದ್ರದಂತಿರುವವನು.

ಶಂ. ಭಾ. :– ನೀರಿಗೆ ಸಮುದ್ರವು ಹೇಗೋ–ಹಾಗೆ ಶ್ರುತಿಗಳಿಗೆ ನಿಧಿಯಾದವನು.

265) ಪ. ಭ. :– ನದಿಯ ಪ್ರವಾಹಗಳಿಗೆ ಸಮುದ್ರವು ಹೇಗೋ–ಹಾಗೆ ತನ್ನ ಪ್ರಶಂಸೆಯಲ್ಲಿಯೇ ತಾತ್ಪರ್ಯವನ್ನು ಹೊಂದಿರುವ ವೇದಗಳಿಗೆ ಪರ್ಯವಸಾನ (ಹೋಗಿ ಸೇರುವ ಜಾಗ) ವಾಗಿರುವವನು.
ನಿರುಕ್ತಿ :– ನದೀನಾಂ ಸಾಗರ ಇವ ಸ್ವಗುಣೋಕ್ತಿವಿಧಾಜುಷಾಮ್ ।
ಶ್ರುತೀನಾಮವಸಾನತ್ವಾತ್ಕಥ್ಯತೇ ಶ್ರುತಿಸಾಗರಃ ॥

263) ಸ. ಸಂ. :– ಶ್ರುತಿಲಕ್ಷಣವಾದ ಸಾಗರವುಳ್ಳವನು ; ವೇದವನ್ನು ಕರೆಯುವವನು ಮತ್ತು ಹೇಳುವವನು ; ವೇದಗಳಿಂದ ಹೇಳಲ್ಪಡುವವನು ಮತ್ತು ಗೋವರ್ಧನಾದಿ ಪರ್ವತಗಳಿಂದ ರಮಿಸುವವನು.

* * *

ಸುಭುಜೋ ದುರ್ಧರೋ ವಾಗ್ಮೀ ಮಹೇನ್ದ್ರೋ ವಸುದೋ ವಸುಃ ।
ನೈಕರೂಪೋ ಬೃಹದ್ರೂಪಃ ಶಿಪಿವಿಷ್ಟಃ ಪ್ರಕಾಶನಃ ॥೪೨॥

265) **ಸುಭುಜಃ** = ಶೋಭನವಾದ ಭುಜಗಳುಳ್ಳವನು.

ಶಂ. ಭಾ. :– ಜಗತ್ತನ್ನು ರಕ್ಷಿಸುವ ಶೋಭನವಾದ ಭುಜಗಳುಳ್ಳವನು.

266) ಪ. ಭ. :– ಪ್ರಪನ್ನರ ಭಾರವನ್ನು ವಹಿಸುವ ಹೊಣೆಯನ್ನು ಹೊತ್ತಿರುವ ಶೋಭನವಾದ ಭುಜಗಳುಳ್ಳವನು.
ನಿರುಕ್ತಿ :– ಪ್ರಪನ್ನಭರಣೇ ಧುರ್ಯಭುಜೋ ಯಃ ಸುಭುಜಸ್ತು ಸಃ ॥

264) **ಸ. ಸಂ. :–** ಶೋಭನವಾದ ಭುಜಗಳುಳ್ಳವನು.

* * *

266) **ದುರ್ಧರಃ** = ಧರಿಸಲು ಅಶಕ್ಯನಾದವನು ; ಧರಿಸಲು ಅಸಾಧ್ಯವಾದ ವೀರ್ಯ, ತೇಜಸ್ಸು, ಶೌರ್ಯ–ಇತ್ಯಾದಿಗಳುಳ್ಳವನು.

ಶಂ. ಭಾ.:– ಇತರರಿಂದ ಧರಿಸಲು ಅಸಾಧ್ಯವಾದ ಪೃಥ್ವಿಯೇ ಮುಂತಾದ ಲೋಕಧಾರಕಪದಾರ್ಥಗಳನ್ನು ತಾನು ಧರಿಸಿ ಬೇರೆ ಯಾರಿಂದಲೂ ಧರಿಸಲು ಅಶಕ್ಯನಾದವನು. ಧ್ಯಾನಸಮಯದಲ್ಲಿ ಮುಮುಕ್ಷುಗಳು ಅತಿಕಷ್ಟದಿಂದ ಯಾವನನ್ನು ಧರಿಸುತ್ತಾರೆಯೋ–ಅವನು.

267) **ಪ. ಭ. :–** ಇತರರಿಂದ ತಡೆಯಲು ಅಸಾಧ್ಯವಾದ ವೇಗವುಳ್ಳವನು. (ಮಹಾಪ್ರಳಯಕಾಲದ ಸಮುದ್ರವೇಗವನ್ನು–ಮಕ್ಕಳಾಟದ ಮರಳು ಸೇತುವೆಗಳು ಹೇಗೆ ಸೈರಿಸಲಾರವೋ–ಹಾಗೆ ಇವನ ಅದ್ಭುತವಾದ ಭುಜಬಲವನ್ನು ಇತರರು ಯಾರೂ ಸಹಿಸಲಾರರು.)

ನಿರುಕ್ತಿ :– ಪರೈರ್ದುರ್ವಾರವೇಗೋ ಯೋ ದುರ್ಧರಃ ಸ ಚ ಕಥ್ಯತೇ॥

265) **ಸ. ಸಂ. :–** ಧರಿಸಲು ಅಶಕ್ಯನಾದವನು.

* * *

267) **ವಾಗ್ಮೀ** = ಪ್ರಶಸ್ತವಾದ ವಾಣಿಯುಳ್ಳವನು ; ವೇದಮಯವಾದ ವಾಣಿಯುಳ್ಳವನು ; ಪ್ರಿಯವೂ, ಹಿತವೂ ಆದ ವಾಣಿಯುಳ್ಳವನು.

ಶಂ. ಭಾ. :– ವೇದಮಯವಾದ ವಾಣಿಯು ಯಾವನಿಂದ ಹೊರ ಹೊಮ್ಮಿದೆಯೋ–ಅವನು.

268) **ಪ. ಭ. :–** ವೇದಾತ್ಮಕವಾದ ಪ್ರಶಸ್ತವಾದ ವಾಣಿಯುಳ್ಳವನು ; ಎಲ್ಲರನ್ನೂ ಗೆಲ್ಲುವ, ಮಧುರವೂ, ಗಂಭೀರವೂ, ಪ್ರಿಯವೂ, ಹಿತವೂ ಆದ ವಾಣಿಯುಳ್ಳವನು. ವಾಗ್ವಿವೃತಾಶ್ಚ ವೇದಾಃ ॥

ಉತ್ತರೋತ್ತರಯುಕ್ತೌ ಚ ವಕ್ತಾ ವಾಚಸ್ಪತಿರ್ಯಥಾ ।
ಬುದ್ಧಿಮಾನ್ಮಧುರಾಭಾಷೀ ಪೂರ್ವಭಾಷೀ ಪ್ರಿಯಂವದಃ ॥

ನಿರುಕ್ತಿ :– ವೇದಲಕ್ಷಣವಕ್ತೃತ್ವಾದ್ವಾಗ್ಮೀ ಪ್ರಿಯಹಿತೋಕ್ತಿತಃ ॥

266) **ಸ. ಸಂ. :–** ವೇದರೂಪವಾದ ವಿಶಿಷ್ಟವಾದ ವಾಣಿಯುಳ್ಳವನು.

* * *

268) **ಮಹೇಂದ್ರಃ** = ಪರಮೈಶ್ವರ್ಯಸಂಪನ್ನನಾಗಿ ಈಶ್ವರರಿಗೂ ಈಶ್ವರನಾದವನು.

ಶಂ. ಭಾ. :– ಈಶ್ವರರಿಗೂ ಈಶ್ವರನಾದವನು.

269) **ಪ. ಭ. :–** ಪೂಜ್ಯವಾದ ಪರಮೈಶ್ವರ್ಯವುಳ್ಳವನು.
ನಿರುಕ್ತಿ :– ಪರಮೈಶ್ವರ್ಯವತ್ತ್ವೇನ ಮಹೇನ್ದ್ರ ಇತಿ ಶಬ್ದ್ಯತೇ ॥

267) **ಸ. ಸಂ. :–**ಪರಮೈಶ್ವರ್ಯವುಳ್ಳವನು ; ವಿಷಯಸಮೂಹವನ್ನು ಕುರಿತು ದ್ರವಿಸುವವನು ; ಎಲ್ಲ ವಿಷಯಗಳನ್ನೂ ಭೋಗಿಸುವವನು ; ಅಭೀಷ್ಟಗಳನ್ನು ಕೊಡುವವನು.

* * *

269) **ವಸುದಃ** = ಸಂಪತ್ತುಗಳನ್ನು ಅನುಗ್ರಹಿಸುವವನು ; ವಸು ದೇವತಾಪದವಿಯನ್ನು ಕೊಡುವವನು.

ಶಂ. ಭಾ. :– ಧನವನ್ನು ಕೊಡುವವನು. **ಅನ್ನಾದೋ ವಸುದಾನಃ (ಬೃ.೪-೪-೨೪)**

270) **ಪ. ಭ. :–**ಧನವನ್ನು ಅಪೇಕ್ಷಿಸುವವರಿಗೆ ವಿಶೇಷವಾಗಿ ಧನವನ್ನು ಕೊಡುವವನು. **ದೇವೇನ್ದ್ರಸ್ತ್ರಿಭುವನಮರ್ಥಮೇಕಪಿಙ್ಗಃ (ವಿ.ಧ. ೪೩-೪೭)**
ನಿರುಕ್ತಿ :– ವಸುದೋ ಧನದಾನಾಚ್ಚ ಧನಾಯದ್ಭ್ಯೋ ವಿಶೇಷತಃ ॥

268) **ಸ. ಸಂ. :–** ಧನವನ್ನು ಅಥವಾ ರತ್ನಗಳನ್ನು ಕೊಡುವವನು. **ವಸು ತೋಯೇ ಧನೇ ಮಣೌ ॥**

* * *

270) **ವಸುಃ** = ಅಸಾಧಾರಣವಾದ ಸಂಪತ್ತು ಆಗಿರುವವನು. **ಧಾತಾ ದದಾತು ನೋ ರಯಿಂ ಪ್ರಾಚೀಂ ಜೀವಾತುಮಕ್ಷಿತಾಮ್ ॥** ವಸು ದೇವತಾರೂಪಿಯು.

ಶಂ. ಭಾ. :– (ಭಕ್ತರಿಗೆ) ಕೊಡಲ್ಪಡುವ ಸಂಪತ್ತೂ ಅವನೇ ಆಗಿದ್ದಾನೆ. ತನ್ನ ಸ್ವರೂಪವನ್ನು ಮಾಯೆಯಿಂದ ಮುಚ್ಚಿಕೊಂಡಿರುವವನು ; ಅಂತರಿಕ್ಷದಲ್ಲಿಯೇ ಇರುವ ಅಸಾಧಾರಣವಾದ ವಾಸವುಳ್ಳ ವಾಯು ರೂಪಿಯು. **ವಸುರನ್ತರಿಕ್ಷಸತ್ ।** (ಕಠ. ೫-೨)

271) **ಪ. ಭ. :–** ಶ್ರೇಷ್ಠರಾದವರಿಗೆ (**'ವಾಸುದೇವಃ ಸರ್ವಂ'–** ಎಂಬಂತೆ) ತಾನೇ ಧನವಾಗಿರುವವನು.

ನಿರುಕ್ತಿ :– **ಸರ್ವಸ್ಯ ಹರಿರೂಪತ್ವಾದ್ಧನಂ ಯಸ್ಮಾದ್ವಸುಸ್ತತಃ ॥**

269) **ಸ. ಸಂ. :–** ಜನರನ್ನು ಆಯಾ ಸ್ಥಾನಗಳಲ್ಲಿ ವಾಸಮಾಡಿಸು ವವನು ; ತನ್ನ ಸ್ವರೂಪವನ್ನು ಮುಚ್ಚಿಕೊಂಡಿರುವವನು ; ಎಲ್ಲ ಕಡೆಗಳ ಲ್ಲಿಯೂ ವಾಸಮಾಡುತ್ತಿರುವವನು.

* * *

271) **ನೈಕರೂಪಃ**= ಅನೇಕರೂಪಗಳುಳ್ಳವನು ; ವಿಶ್ವರೂಪಿಯು.

ಶಂ. ಭಾ. :– ಅನೇಕ ರೂಪಗಳುಳ್ಳವನು. **ಇನ್ದ್ರೋ ಮಾಯಾಭಿಃ ಪುರುರೂಪ ಈಯತೇ** (ಬೃ. ೨-೫-೧೯) **ಜ್ಯೋತೀಂಷಿ ವಿಷ್ಣುಃ** (ವಿ.ಪು. ೧-೧೨-೩೮)

272) **ಪ. ಭ. :–** ಬಹುರೂಪಗಳುಳ್ಳವನು ; ಆಯಾ ಜನರಿಗೆ ಯೋಗ್ಯವಾದ ವಿಶೇಷವಾದ ರೂಪಗಳುಳ್ಳವನು.

ನಿರುಕ್ತಿ :– **ಯಃ ಸದಾ ಬಹುರೂಪಶ್ಚ ನೈಕರೂಪಃ ಸ ಕೀರ್ತಿತಃ ।**

ತತ್ತಜ್ಜನಜ್ಞಾನಯೋಗ್ಯಂ ರೂಪಂ ಯಸ್ಯ ವಿಶೇಷತಃ ॥
ನೈಕರೂಪಂ ಸಮುದ್ದಿಷ್ಟಃ ಸರ್ವಪ್ರತ್ಯಯಗೋಚರಃ ॥

270) **ಸ. ಸಂ. :–** ಅನೇಕರೂಪಗಳುಳ್ಳವನು.

* * *

272) **ಬೃಹದ್ರೂಪಃ** = ವೃದ್ಧಿಹೊಂದಿದ ದೊಡ್ಡ ರೂಪವುಳ್ಳವನು ; ಬ್ರಹ್ಮನು.

ಶಂ. ಭಾ. :– ಮಹತ್ತಾದ ವರಾಹಾದಿರೂಪವುಳ್ಳವನು.

273) **ಪ. ಭ. :–** ವ್ಯಾಪಿಸಿರುವ ದೊಡ್ಡ ರೂಪವುಳ್ಳವನು. **ಪಶ್ಯಾಮಿ**

ತ್ವಾಂ ಸರ್ವತೋಽನನ್ತರೂಪಮ್ (ಗೀತಾ ೧೧-೧೬) ಎಂಬಂತೆ ದಿಕ್ಕು-ವ್ಯೋಮ-ಆಕಾಶಗಳನ್ನು ವ್ಯಾಪಿಸಿಕೊಂಡಿರುವ ದೊಡ್ಡ ರೂಪವುಳ್ಳವನು.

ನಿರುಕ್ತಿ :– ವ್ಯಾಪ್ನುವದ್ಯಸ್ಯ ರೂಪಂ ತು ಬೃಹದ್ರೂಪಃ ಸ ಕೀರ್ತಿತಃ ॥

271) ಸ. ಸಂ. :– ದೊಡ್ಡ ರೂಪವುಳ್ಳವನು.

* * *

273) ಶಿಪಿವಿಷ್ಟಃ = ಪಶುಗಳಲ್ಲಿ ಪ್ರವೇಶಮಾಡಿ ನೆಲೆಸುವವನು ; ಕಿರಣಗಳಲ್ಲಿ ಇರುವವನು ; ನಿರಾಕಾರರೂಪದಿಂದ ಸಮಸ್ತಜಗತ್ತನ್ನೂ ವ್ಯಾಪಿಸಿರುವವನು.

ಶಿಪಿವಿಷ್ಟೇತಿ ಚಾಖ್ಯಾಯಾಂ ಹೀನರೋಮಾ ಚ ಯೋ ಭವೇತ್ ।
ತೇನಾವಿಷ್ಟಂ ತು ಯತ್ಕಿಂಚಿಚ್ಛಿಪಿವಿಷ್ಟೇತಿ ಚ ಸ್ಮೃತಃ ॥

(ಮ. ಭಾ. ಶಾಂ. ೩೪೨-೭೧)

ಶಂ. ಭಾ. :– ಶಿಪಿಗಳೆಂದರೆ ಪಶುಗಳು. ಅವುಗಳಲ್ಲಿ ಯಜ್ಞರೂಪದಿಂದ ಇರುವ ಯಜ್ಞಮೂರ್ತಿಯು. ಯಜ್ಞೋ ವೈ ವಿಷ್ಣುಃ । ಪಶವಃ ಶಿಪಿಃ ಯಜ್ಞ ಏವ ಪಶುಷು ಪ್ರತಿತಿಷ್ಠತಿ । (ತೈ. ೨-೫-೫) ಕಿರಣಗಳಲ್ಲಿರುವವನು.

ಶೈತ್ಯಾಚ್ಛಯನಯೋಗಾಚ್ಚ ಶೀತಿ ವಾರಿ ಪ್ರಚಕ್ಷತೇ ।
ತತ್ಪಾನಾದ್ರಕ್ಷಣಾಚ್ಚೈವ ಶಿಪಯೋ ರಶ್ಮಯೋ ಮತಾಃ ॥
ತೇಷು ಪ್ರವೇಶಾದ್ವಿಶ್ವೇಶಃ ಶಿಪಿವಿಷ್ಟ ಇಹೋಚ್ಯತೇ ॥

274) ಪ. ಭ. :– ಕಿರಣಗಳಲ್ಲಿ ವ್ಯಾಪಿಸಿಕೊಂಡಿರುವವನು ; ಕಿರಣಗಳಿಂದ ಎಲ್ಲವನ್ನೂ ವ್ಯಾಪಿಸಿರುವವನು. ಶಿಪಯೋ ರಶ್ಮಯ ಉಚ್ಯನ್ತೇ ತೈರಾವಿಷ್ಟಃ ಶಿಪಿವಿಷ್ಟಃ (ಯಾಸ್ಕ) ಅಥವಾ ತನ್ನ ಹಳದಿಯ ರೋಮಗಳಿಂದ ಎಲ್ಲವನ್ನೂ ಪ್ರಕಾಶಿಸಿರುವವನು.

ಶಿಪಿವಿಷ್ಟೇತಿ ಯಚ್ಚಾಸ್ಯ ಪೀತಂ ರೋಮ ಚ ಯದ್ಭವೇತ್ ।
ತೇನಾಪಿ ವಿಷ್ಟಂ ಯತ್ಕಿಂಚಿಚ್ಛಿಪಿವಿಷ್ಟಂ ಹಿ ತತ್ಸ್ಮೃತಮ್ ॥

ನಿರುಕ್ತಿ :– ಶಿಪಯೋ ರಶ್ಮಯಃ ಪ್ರೋಕ್ತಾ ವ್ಯಾಪ್ಯ ತೇಷ್ವಪಿ
ವರ್ತನಾತ್ ।
ಶಿಪಿವಿಷ್ಟಃ ಸಮಾಖ್ಯಾತಃ ಸೂರ್ಯೇನ್ದ್ವಗ್ನ್ಯಾದಿರೂಪವತ್ ॥

272) ಸ. ಸಂ. :– ಕಾಷ್ಠಗಳಲ್ಲಿ ಅಗ್ನಿಗೆ ಅಂತರ್ಯಾಮಿಯ ರೂಪದಲ್ಲಿರುವವನು ; ಪಶುಗಳಲ್ಲಿ ಅಂತರಾತ್ಮನಾಗಿರುವವನು. ಶಿಪಿವಿಷ್ಟಸ್ತತಃ ಪ್ರೋಕ್ತಃ ಸರ್ವಾನ್ತರ್ಯಾಮಿಸಂಜ್ಞಯಾ ॥ ಕಿರಣಗಳಲ್ಲಿರುವವನು.

*　　　　*　　　　*

274) ಪ್ರಕಾಶನಃ = ಎಲ್ಲವನ್ನೂ ಪ್ರಕಾಶಪಡಿಸುವವನು.

ಶಂ. ಭಾ. :– ಎಲ್ಲವನ್ನೂ ಪ್ರಕಾಶಪಡಿಸುವವನು.

275) ಪ. ಭ. :– ದಿವ್ಯರೂಪವನ್ನು ನೋಡಲು ಇಷ್ಟವುಳ್ಳ ಅರ್ಜುನನೇ ಮುಂತಾದವರಿಗೆ ಅದನ್ನು ಪ್ರಕಾಶಪಡಿಸುವವನು.

ನಿರುಕ್ತಿ :– ದಿವ್ಯರೂಪಂ ದಿದೃಕ್ಷುಭ್ಯಃ ಪಾರ್ಥಾದಿಭ್ಯೋ ವಿಶೇಷತಃ ।
ರೂಪಂ ಪ್ರಕಾಶಯತಿ ಯಃ ಸ ಪ್ರಕಾಶನ ಈರಿತಃ ॥

273) ಸ. ಸಂ. :– ಪ್ರಕಾಶಪಡಿಸುವವನು ; ಪುಷ್ಕಳವಾಗಿ ಸುಖವನ್ನು ಅನುಭವಿಸುವವನು ; ಸೂರ್ಯಾದಿಪ್ರಕಾಶವನ್ನು ಒಯ್ಯುವವನು.

*　　　　*　　　　*

ಓಜಸ್ತೇಜೋದ್ಯುತಿಧರಃ ಪ್ರಕಾಶಾತ್ಮಾ ಪ್ರತಾಪನಃ ।
ಋದ್ಧಃ ಸ್ಪಷ್ಟಾಕ್ಷರೋ ಮನ್ತ್ರಶ್ಚನ್ದ್ರಾಂಶುರ್ಭಾಸ್ಕರದ್ಯುತಿಃ ॥೪೩॥

275) ಓಜಸ್ತೇಜೋದ್ಯುತಿಧರಃ = ಬಲ-ತೇಜಸ್ಸು (ಶೌರ್ಯಾದಿಗುಣಗಳು, ಕೀರ್ತಿ) ಮತ್ತು ದೀಪ್ತಿಗಳುಳ್ಳವನು.

ಶಂ. ಭಾ. :– ಪ್ರಾಣಬಲ, ಶೌರ್ಯಾದಿಗುಣಗಳು ಮತ್ತು ದೀಪ್ತಿಗಳುಳ್ಳವನು ; ಅಥವಾ ಓಜಃ ತೇಜಃ –ಎಂದು ಎರಡು ನಾಮಧೇಯಗಳು. ಓಜಃ = ಪ್ರಾಣಬಲನು, ತೇಜಃ = ತೇಜೋರೂಪಿಯಾದವನು. ಪ್ರಾಣಬಲ ಮತ್ತು ತೇಜೋರೂಪಿಯಾದವನು. ಬಲಂ ಬಲವತಾಂ ಚಾಹಂ । ತೇಜಸ್ತೇಜಸ್ವಿನಾಮಹಮ್ । (ಗೀತಾ ೭-೧೧-೧೦) ದ್ಯುತಿಧರಃ = ಜ್ಞಾನಸ್ವರೂಪವಾದ ದೀಪ್ತಿಯುಳ್ಳವನು.

276) ಪ. ಭ. :– ಓಜಸ್ತೇಜೋದ್ಯುತಿಧರಃ । ಓಜಃ = ಬಲ, ತೇಜಃ = ಇತರರನ್ನು ಪರಾಭವಗೊಳಿಸುವ ಸಾಮರ್ಥ್ಯ ಅಥವಾ ಕೀರ್ತಿ, ದ್ಯುತಿಃ=ಔಜ್ವಲ್ಯ–ಇವುಗಳನ್ನು ಸದಾ ಧರಿಸಿರುವವನು ; ಯಥಾ ಪ್ರದೀಪ್ತಂ ಜ್ವಲನಂ ಪತಙ್ಗಾಃ (ಗೀತಾ ೧೧-೨೯)

ನಿರುಕ್ತಿ :– ಅಸಾಧಾರಣಸಾಮರ್ಥ್ಯಂ ಬಲಮೋಜಃ ಪ್ರಚಕ್ಷತೇ ।
ಪರಾಭಿಭವಸಾಮರ್ಥ್ಯಂ ತೇಜಶ್ಚ ಪರಿಪಠ್ಯತೇ ॥
ಕೀರ್ತಿರ್ವಾ ದ್ಯುತಿರೌಜ್ಜ್ವಲ್ಯಂ ತಾನಿ ಧತ್ತೇ ಚ ಯಃ ಸದಾ ।
ಓಜಸ್ತೇಜೋದ್ಯುತಿಧರೋ ಹ್ಯೇಕನಾಮಾ ಪ್ರಕೀರ್ತಿತಃ ॥

274) ಸ. ಸಂ. :– ಓಜಸ್ಸು = ಇತರರನ್ನು ಆಕ್ರಮಿಸುವ ಶಕ್ತಿ, ತೇಜಸ್ಸು ಪ್ರತಾಪ, ದ್ಯುತಿ (ಪ್ರಕಾಶ) ಗಳನ್ನು ಧರಿಸಿರುವವನು.

* * *

276) ಪ್ರಕಾಶಾತ್ಮಾ =ಪ್ರಕಾಶಸ್ವರೂಪನು.

ಶಂ. ಭಾ. :– ಪ್ರಕಾಶಸ್ವರೂಪವಾದ ಆತ್ಮವುಳ್ಳವನು.

277) ಪ. ಭ. :– ಮೂರ್ಖರೂ ಕೂಡ ಅರಿಯಬಹುದಾದ ಪ್ರಕಾಶವಾದ ಸ್ವಭಾವವುಳ್ಳವನು.

ನಿರುಕ್ತಿ :– ಮೂರ್ಖೈರಪಿ ಸದಾ ಸಮ್ಯಕ್ಪ್ರತಿಪನ್ನಸ್ವಭಾವವಾನ್ ।
ಯಃ ಸ ಸ್ಯಾತ್ತು ಪ್ರಕಾಶಾತ್ಮಾ...........॥

275) ಸ. ಸಂ. :– ಪ್ರಕಾಶಸ್ವರೂಪನಾದವನು ; ಪುಷ್ಕಳವಾಗಿ ಸುಖವನ್ನು ಅನುಭವಿಸುವ ಆತ್ಮನು.

* * *

277) ಪ್ರತಾಪನಃ = ಬೆಳಗಿಸುವವನು ; ದುಷ್ಟರನ್ನು ಸಂತಾಪಗೊಳಿಸುವವನು.

ಶಂ. ಭಾ. :– ಸೂರ್ಯನೇ ಮುಂತಾದ ತನ್ನ ವಿಭೂತಿಗಳಿಂದ ವಿಶ್ವವನ್ನು ಸಂತಾಪಗೊಳಿಸುವವನು.

278) ಪ. ಭ. :– ತೀಕ್ಷ್ಣಭಾವವುಳ್ಳವನು ; ಭಾಸಸ್ತವೋಗ್ರಾಃ ಪ್ರತಪನ್ತಿ ವಿಷ್ಣೋ (ಗೀತಾ ೧೧-೩೦)

ನಿರುಕ್ತಿ : .... ತೀಕ್ಷ್ಣಭಾವಃಪ್ರತಾಪನಃ ॥

276) ಸ. ಸಂ. :– ಸೂರ್ಯನೇ ಮುಂತಾದವರಲ್ಲಿ ಚೆನ್ನಾಗಿ ಇದ್ದು ತಾಪವನ್ನುಂಟುಮಾಡುವವನು ; ಜಲಸಮೂಹವನ್ನು ಒಯ್ಯುವವನು ; ಪುಷ್ಕಳವಾಗಿ ವಿಸ್ತಾರಗೊಂಡಿರುವವನು ಮತ್ತು ಜಲಸಮೂಹವನ್ನು ಒಯ್ಯುವವನು.

* * *

278) **ಋದ್ಧಃ** = ಅಭಿವೃದ್ಧಿಹೊಂದಿದವನು.

ಶಂ. ಭಾ. :– ಧರ್ಮ-ಜ್ಞಾನ-ವೈರಾಗ್ಯಾದಿಗಳಿಂದ ಸಂಪನ್ನನಾದವನು.

279) **ಪ. ಭ. :–** ಹುಣ್ಣಿಮೆಯ ಸಮುದ್ರದಂತೆ ವೃದ್ಧಿಹೊಂದಿದವನು.
ನಿರುಕ್ತಿ :– **ಪಾರ್ವಣೋ ಜಲಧಿರ್ಯದ್ವದ್ವೃದ್ಧಿಮಾನೃದ್ಧ ಉಚ್ಯತೇ ।**

277) **ಸ. ಸಂ. :–** ಅಭಿವೃದ್ಧಿಹೊಂದಿದ್ದಾಗಿ ತನ್ನನ್ನು ಪ್ರತಿಪಾದಿಸುವ ವೇದ-ಶಾಸ್ತ್ರಗಳುಳ್ಳವನು.

* * *

279) **ಸ್ಪಷ್ಟಾಕ್ಷರಃ** = ಅಕ್ಷರವನ್ನು (ಪ್ರಣವವನ್ನು) ಸ್ಪಷ್ಟಪಡಿಸಿದವನು.

ಶಂ. ಭಾ. :– ಉದಾತ್ತವಾದ ಓಂಕಾರರೂಪವಾದ ಅಕ್ಷರವುಳ್ಳವನು.

280) **ಪ. ಭ. :–** ವೇದಾಕ್ಷರಗಳನ್ನು ಸ್ಪಷ್ಟಪಡಿಸಿದವನು.
ನಿರುಕ್ತಿ :– **ಸ್ಪಷ್ಟೀಕೃತಾಶ್ಚ ವೇದಾರ್ಣಾ ಯಸ್ಮಾತ್ಸ್ಪಷ್ಟಾಕ್ಷರೋ ಮತಃ ॥**

278) **ಸ. ಸಂ. :–** ಅಭಿವೃದ್ಧಿಹೊಂದಿದ ಓಂ ನಮೋ ನಾರಾಯಣಾಯ–ಎಂಬ ಎಂಟು ಅಕ್ಷರಗಳುಳ್ಳವನು.

* * *

280) **ಮನ್ತ್ರಃ** = ಗುಪ್ತವಾಗಿರುವವನು ; ಮನನಮಾಡಿದವರನ್ನು ರಕ್ಷಿಸುವವನು ; ಮಹಾಮಂತ್ರವರ್ಣರೂಪಿಯಾದವನು ; ಮಂತ್ರಪ್ರತಿಪಾದ್ಯನು.

ಶಂ. ಭಾ. :– ಋಗ್ಯಜುಸ್ಸಾಮಗಳೆಂಬ ಮಂತ್ರಗಳಿಂದ ತಿಳಿಯಲು ಯೋಗ್ಯನಾದವನು.

281) **ಪ. ಭ. :–** ಮನನಮಾಡುವವರನ್ನು ರಕ್ಷಿಸುವವನು.
ನಿರುಕ್ತಿ :– **ಮನ್ತಾರಂ ತ್ರಾಯತ ಇತಿ ಮನ್ತ್ರಶ್ಚಾಪ್ಯಭಿಧೀಯತೇ ।**

279) **ಸ. ಸಂ. :–** ಮಾನದಿಂದ ಕಾಪಾಡುವವನು ; **ಮಾನಾತ್ತ್ರಾತೀತಿ ಮನ್ತ್ರೋಽಯಂ** (ಗೀತಾತಾತ್ಪರ್ಯ) ಅಥವಾ ಮನನಮಾಡುವವನು.

* * *

281) **ಚನ್ದ್ರಾಂಶುಃ** = ಚಂದ್ರನಂತೆ ಆಹ್ಲಾದವನ್ನು ಉಂಟುಮಾಡುವ ಅಮೃತಮಯವಾದ ಕಿರಣಗಳುಳ್ಳವನು ; ಚಂದ್ರಕಿರಣರೂಪಿಯಾದವನು.

ಶಂ. ಭಾ. :– ಸಂಸಾರತಾಪವೆಂಬ ಸೂರ್ಯನಿಂದ ಸಂತಾಪಗೊಂಡ ಮನಸ್ಸುಳ್ಳವರಿಗೆ ಚಂದ್ರನಂತೆ ಆಹ್ಲಾದವನ್ನು ಉಂಟುಮಾಡುವವನು.

282) **ಪ. ಭ. :–** ಮನನಮಾಡುವವರ ಶ್ರಮವನ್ನು ಪರಿಹಾರ ಮಾಡುವ ಪರಮಾಹ್ಲಾದಕರವಾದ ತೇಜಸ್ಸುಳ್ಳವನು. **ತೇ ತಂ ಸೋಮಮಿವೋದ್ಯನ್ತಂ** (ರಾ. ಅರಣ್ಯ)
ನಿರುಕ್ತಿ :– **ಕ್ಲಮಹಾರಿ ಮಹಾಹ್ಲಾದತೇಜಸ್ಕರತಯಾಪಿ ಚ ।**
ಮನ್ತೄಣಾಮೇವ ಚನ್ದ್ರಾಂಶುರಾಹ್ಲಾದಫಲದೋ ಮನುಃ ॥

280) **ಸ. ಸಂ. :–** ಚಂದ್ರನ ಕಿರಣಗಳು ಯಾವನಿಂದ ಉಂಟಾಗುತ್ತವೆಯೋ–ಅವನು ; ತಾಪದಿಂದ ಪೀಡಿತರಾದವರಿಗೆ ಚಂದ್ರನ ಕಿರಣಗಳಂತೆ ಆಹ್ಲಾದವನ್ನುಂಟುಮಾಡುವವನು.

* * *

282) **ಭಾಸ್ಕರದ್ಯುತಿಃ** = ಸೂರ್ಯಪ್ರಕಾಶನು ; ಸೂರ್ಯನಂತೆ ಸ್ವಯಂಪ್ರಕಾಶನಾಗಿ ಎಲ್ಲರಿಗೂ ಪ್ರಕಾಶವನ್ನು ನೀಡುವ ಮತ್ತು ಸಂತಾಪಕರವಾದ ತೇಜಸ್ಸುಳ್ಳವನು.

ಶಂ. ಭಾ. :–ಸೂರ್ಯನ ತೇಜಸ್ಸಿಗೆ ಸಮಾನವಾದ ಧರ್ಮವುಳ್ಳವನು.

283) **ಪ. ಭ. :–** ಶತ್ರುಗಳ ಪ್ರಭಾವವನ್ನು ತಿರಸ್ಕರಿಸುವ ತೇಜಸ್ಸುಳ್ಳವನು. **ಶರಜಾಲಾಂಶುಮಾನ್ ಶೂರಃ ಕಪೇ ರಾಮದಿವಾಕರಃ ॥**
(ರಾ. ಸು. ೩೭-೧೮)

ನಿರುಕ್ತಿ :– **ಪರಪ್ರಭಾವಾಭಿಭವಲಕ್ಷಣದ್ಯುತಿಮಾಂಶ್ಚ ಯಃ ।**
ಸ ಭಾಸ್ಕರದ್ಯುತಿಃ ಪ್ರೋಕ್ತಃ ನೇತ್ರವೈಮಲ್ಯದೋ ಮನುಃ ॥

281) **ಸ. ಸಂ. :–** ಸೂರ್ಯನಿಗೆ ಪ್ರಕಾಶವು ಯಾವನಿಂದ ಉಂಟಾಗುವುದೋ–ಅವನು.

* * *

ಅಮೃತಾಂಶೂದ್ಭವೋ ಭಾನುಃ ಶಶಬಿನ್ದುಃ ಸುರೇಶ್ವರಃ ।
ಔಷಧಂ ಜಗತಃ ಸೇತುಃ ಸತ್ಯಧರ್ಮಪರಾಕ್ರಮಃ ॥೪೪॥

283) **ಅಮೃತಾಂಶೂದ್ಭವಃ** = ಅಮೃತಕಿರಣನ (ಚಂದ್ರನ) ಉತ್ಪತ್ತಿಗೆ ಕಾರಣನಾದವನು ; **ಚನ್ದ್ರಮಾ ಮನಸೋ ಜಾತಃ (ಪು. ಸೂ.)** ಅಮೃತ ಕಿರಣಗಳಿಂದ ಧನ್ವಂತರಿಯ ರೂಪದಲ್ಲಿ ಆವಿರ್ಭವಿಸಿದವನು.

ಶಂ. ಭಾ. :– ಸಮುದ್ರವನ್ನು ಕಡೆಯುತ್ತಿರುವಾಗ ಚಂದ್ರನ ಉತ್ಪತ್ತಿಗೆ ಕಾರಣನಾದವನು.

284) **ಪ. ಭ. :–** ಅಮೃತಕಾರಣನಾದ ಚಂದ್ರನಿಗೆ ಉತ್ಪತ್ತಿಸ್ಥಾನನಾದವನು ; ಸರ್ವತಾಪಗಳನ್ನೂ ಪರಿಹಾರಮಾಡುವ, ಆಪ್ಯಾಯಮಾನನಾಗಿರುವ, ಮೃತಸಂಜೀವನನಾಗಿರುವ, ಅಮೃತಮಯವಾದ ಕಿರಣಗಳುಳ್ಳ ಚಂದ್ರನೂ ಕೂಡ ಯಾವನ ಮನಸ್ಸಿನ ಶೈತ್ಯಾದಿ ಗುಣಗಳಿಂದ ಕೂಡಿ ಉದ್ಭವಿಸಿದನೋ–ಅವನು.

ನಿರುಕ್ತಿ :– **ಸರ್ವತಾಪಹರಸ್ಯೈವ ಮೃತಸಂಜೀವನಸ್ಯ ಚ ।**
ಅಮೃತಾಂಶೋರ್ಹಿ ತಜ್ಜತ್ವಾದಮೃತಾಂಶೂದ್ಭವಃ ಸ್ಮೃತಃ ॥

282) **ಸ. ಸಂ. :–** ಅಮೃತದ ಕಿರಣಗಳುಳ್ಳ ಧನ್ವಂತರಿಯೇ ಮುಂತಾದ ರೂಪಗಳುಳ್ಳವನು ಮತ್ತು ಉತ್ಕೃಷ್ಟನಾದ ರುದ್ರನು ಯಾವನಿಂದ ಉದ್ಭವಿಸಿದನೋ–ಅವನು ; ಚಂದ್ರನ ಉತ್ಪತ್ತಿಗೆ ಕಾರಣನಾದವನು.

* * *

284) **ಭಾನುಃ**= ಪ್ರಕಾಶಮಾನನಾದ ಸೂರ್ಯರೂಪಿಯು.

ಶಂ. ಭಾ. :– ಪ್ರಕಾಶಿಸುತ್ತಿರುವವನು ; **ತಮೇವ ಭಾನ್ತಮನುಭಾತಿ ಸರ್ವಂ ।** (ಮುಂ. ೨-೨-೧೦) ಇವನ ಪ್ರಕಾಶದಿಂದಲೇ ಎಲ್ಲಕ್ಕೂ ಪ್ರಕಾಶ.

285) **ಪ. ಭ. :–** ಸೂರ್ಯನಿಗೂ ಉಪಜೀವ್ಯವಾದ ತೇಜಸ್ಸಿನಿಂದ ಪ್ರಕಾಶಿಸುವವನು. **ಯಸ್ಮಾದಿತ್ಯೋ ಭಾಮುಪಯುಜ್ಯ ಭಾತಿ ॥**
ನಿರುಕ್ತಿ :– **ರವೇಸ್ತೇಜಸ್ಕರತ್ವಾಚ್ಚ ಭಾನುರಿತ್ಯಭಿಧೀಯತೇ ॥**

283) **ಸ. ಸಂ. :–** ಪ್ರಕಾಶಮಾನನಾದವನು.

* * *

285) **ಶಶಬಿನ್ದುಃ**= ಸೋಮರೂಪಿಯಾದವನು.

ಶಂ. ಭಾ. :– ಶಶ (ಮೊಲ) ದಂತೆ ಬಿಂದುವಿರುವುದರಿಂದ ಚಂದ್ರನು ಶಶಬಿಂದುವು. ಅವನಂತೆ ಪ್ರಜೆಗಳನ್ನು ಪೋಷಿಸುವವನು.

ಪುಷ್ಣಾಮಿ ಚೌಷಧೀಃ ಸರ್ವಾಃ ಸೋಮೋ ಭೂತ್ವಾ ರಸಾತ್ಮಕಃ ॥

(ಗೀತಾ. ೧೫-೧೩)

286) **ಪ. ಭ. :–** ಕುಟಿಲಗತಿಯುಳ್ಳವರನ್ನು ಧ್ವಂಸಮಾಡುವವನು.
ನಿರುಕ್ತಿ :– **ಕೌಟಿಲ್ಯಗತಿವಿಧ್ವಂಸೀ ಶಶಬಿನ್ದುರುದಾಹೃತಃ ॥**

284) **ಸ. ಸಂ. :–** ಅತ್ಯಂತಸುಖಾತ್ಮಕನಾದವನು ಮತ್ತು ಜ್ಞಾನಿಯು. **ಜ್ಞಾನಜ್ಞಾನಃ ಸುಖಸುಖಃ**–ಎಂಬ ಶ್ರುತಿಯಂತೆ. (ಶಶಃ ಎಂದರೆ ಅತ್ಯಂತ ಸುಖಾತ್ಮಕನಾದವನು. ಬಿಂದುಃ ಎಂದರೆ ವಿಂದು=ಜ್ಞಾನೀ) ಅಥವಾ ಬೇಟೆಯಲ್ಲಿ ಮೊಲದ ಬಿಂದುವುಳ್ಳವನು.

* * *

286) **ಸುರೇಶ್ವರಃ** = ದೇವತೆಗಳಿಗೆ ಈಶ್ವರನಾದವನು.

ಶಂ. ಭಾ. :– ದೇವತೆಗಳಿಗೂ ಮತ್ತು ಶುಭವಾದ ದಾನಮಾಡುವವರಿಗೂ ಒಡೆಯನಾದವನು.

287) **ಪ. ಭ. :–** ಋಜುಗತಿಯುಳ್ಳವರನ್ನು ಧರಿಸಿ ಪೋಷಿಸು

ವವನು. ಸರ್ವಂ ಜಿಹ್ಮಂ ಮೃತ್ಯುಪದಮಾರ್ಜವಂ ಬ್ರಹ್ಮಣಃ ಪದಮ್ ॥ (ಮ. ಭಾ. ಶಾಂ. ೭೯-೨೧)

ನಿರುಕ್ತಿ :– ಧರ್ತಾ ಋಜುಗತೀನಾಂ ಯಃ ಸ ಸುರೇಶ್ವರ ಈರಿತಃ ॥

285) **ಸ. ಸಂ. :–** ಸುರನು (ಚೆನ್ನಾಗಿ ಬೆಳಗುವವನು) ಮತ್ತು ಈಶ್ವರನು ; ಜಗತ್ತನ್ನು ವ್ಯಾಪಿಸಿಕೊಂಡಿರುವವನು ; ಸುರರಿಗೆ ಈಶ್ವರನಾದವನು.

* * *

287) **ಔಷಧಂ** = ಆಧಿ-ವ್ಯಾಧಿಗಳನ್ನು ನಿವಾರಿಸುವ ಔಷಧರೂಪಿಯಾದವನು.

ಶಂ. ಭಾ. :– ಸಂಸಾರರೋಗಕ್ಕೆ ಔಷಧವಾದವನು.

288) **ಪ. ಭ. :–** ಸಂಸಾರವೆಂಬ ವಿಷವನ್ನು ಪರಿಹರಿಸುವ ಔಷಧನು.

ಏಕಾಗ್ರತಾಮೂಲ್ಯಬಲೇನ ಲಭ್ಯಂ ಭವೌಷಧಂ ತ್ವಂ ಭಗವನ್ ಕಿಲೈಕಃ ।
ದೇವಾ ದೇವರ್ಷಯಶ್ಚೈವ ಯಂ ವಿದುರ್ದುಃಖಭೇಷಜಮ್ ॥

ನಿರುಕ್ತಿ :– ಭವತೀವ್ರವಿಷಂ ಹರ್ತಾ ಹ್ಯೌಷಧಂ ಯಃ ಸ ಉಚ್ಯತೇ ॥

286) **ಸ. ಸಂ. :–** ತಾಪತ್ರಯದಿಂದ ದಗ್ಧರಾದವರಿಗೆ ಆಶ್ರಯನಾದವನು. **ಉಷ್ಣಾನಾಂ ನಿಧಿರೌಷಧಮ್ ।** (ಗೀತಾತಾತ್ಪರ್ಯ)

* * *

288) **ಜಗತಃ ಸೇತುಃ** = ಜಗತ್ತಿಗೆ ಸೇತುವೆಯಂತೆ ಇರುವವನು.

ಶಂ. ಭಾ. :– ಜಗತ್ತುಗಳನ್ನು ದಾಟುವುದಕ್ಕೆ ಕಾರಣನಾಗಿರುವುದರಿಂದ ಅಥವಾ ವರ್ಣಾಶ್ರಮಾದಿಗಳು ಸಾಂಕರ್ಯಹೊಂದದಂತೆ ಕಾಪಾಡುವುದರಿಂದ ಜಗತ್ತುಗಳಿಗೆ ಸೇತುವೆಯಂತೆ ಇರುವವನು. ಏಷ ಸೇತುರ್ವಿಧರಣ ಏಷಾಂ ಲೋಕಾನಾಮಸಂಭೇದಾಯ (ಬೃ. ೪-೪-೨೨)

289) **ಪ. ಭ. :–** ಸದ್ವರ್ಗಗಳಲ್ಲಿ ಸಾಂಕರ್ಯವುಂಟಾಗದಂತೆ ತಡೆಯುವುದರಿಂದ ಜಗತ್ತಿಗೆ ಸೇತುವೆಯಾಗಿರುವವನು.

ನಿರುಕ್ತಿ :– ನಿರೋಧಾಜ್ಜಗತಃ ಸೇತುಃ ಸದಸದ್ವರ್ಗಸಂಗತೇಃ ॥

287) **ಸ. ಸಂ. :–** ಜಗತ್ತಿಗೆ ಸೇತುವೆಯಂತೆ ಇರುವವನು.

* * *

289) **ಸತ್ಯಧರ್ಮಪರಾಕ್ರಮಃ**= ಸತ್ಯವಾದ ಧರ್ಮ ಮತ್ತು ಪರಾಕ್ರಮಗಳುಳ್ಳವನು ; ಸತ್ಯಕ್ಕೆ ಅನುಗುಣವಾದ ಧರ್ಮ ಮತ್ತು ಪರಾಕ್ರಮವುಳ್ಳವನು.

ಶಂ. ಭಾ. :– ಸತ್ಯವಾದ ಜ್ಞಾನಾದಿ ಗುಣಗಳೂ ಮತ್ತು ಪರಾಕ್ರಮವೂ ಇರುವವನು.

290) **ಪ. ಭ. :–** ಸತ್ಯವಾದ ಕಲ್ಯಾಣಗುಣಗಳೂ ಮತ್ತು ವ್ಯಾಪಾರಗಳೂ ಉಳ್ಳವನು.

ವಿಷ್ಣುಃ ಸತ್ಯಪರಾಕ್ರಮಃ । (ರಾ. ಯು. ೧೧೪-೧೬)

ಯಂ ವಾಕೇಷ್ವನುವಾಕೇಷು ನಿಷತ್ಸೂಪನಿಷತ್ಸು ಚ ।
ಗೃಣನ್ತಿ ಸತ್ಯಕರ್ಮಾಣಂ ಸತ್ಯಂ ಸತ್ಯೇಷು ಸಾಮಸು ॥

(ಮ. ಭಾ. ಭೀಷ್ಮಸ್ತವರಾಜ-೨೬)

ನಿರುಕ್ತಿ :– ಸತ್ಯಾ ಹ್ಯವಿತಥಾ ಧರ್ಮಾ ಗುಣಾ ಯಸ್ಯ ಪರಾಕ್ರಮಃ ।
ಚೇಷ್ಟಿತಾನಿ ಚ ಸನ್ತೀತಿ ಸತ್ಯಧರ್ಮಪರಾಕ್ರಮಃ ॥

288) **ಸ. ಸಂ. :–** ಸತ್ಯವೂ, ಧರ್ಮವೂ ಮತ್ತು ಪರಾಕ್ರಮವೂ ಆಗಿರುವವನು. (**ಸತ್ಯಃ** = ಸತ್ಯವಚನವುಳ್ಳವನು ಅಥವಾ ಮೂರ್ತ ಮತ್ತು ಅಮೂರ್ತಗಳಾದ ಜಗತ್ತಿಗೆ ಆಶ್ರಯನಾದವನು. **ಧರ್ಮಃ** = ಧರಿಸಿರುವವನು. **ಪರಾಕ್ರಮಃ**= ಎಲ್ಲವನ್ನೂ ಮೀರಿದ ಆನಂದವುಳ್ಳವನು.)

ನೋಕ್ತಪೂರ್ವಂ ಮಯಾ ಕ್ಷುದ್ರಮಲೀಕಂ ವಾ ಕದಾಚನ ।
ಋತಾ ಬ್ರಹ್ಮಸುತಾ ಸಾ ಮೇ ಸತ್ಯಾ ದೇವೀ ಸರಸ್ವತೀ ॥೭೫॥
ಸಚ್ಚಾಸಚ್ಚೈವ ಕೌನ್ತೇಯ ಮಯಾವೇಶಿತಮಾತ್ಮನಿ ।
ಪೌಷ್ಕರೇ ಬ್ರಹ್ಮಸದನೇ ಸತ್ಯಂ ಮಾಮೃಷಯೋ ವಿದುಃ ॥೭೬॥

(ಮ. ಭಾ. ಶಾಂ. ೩೪೨)

ಅಥವಾ ಸತ್ಯವಾದ ಧರ್ಮಪರಾಕ್ರಮವುಳ್ಳವನು.

* * *

ಭೂತಭವ್ಯಭವನ್ನಾಥಃ ಪವನಃ ಪಾವನೋऽನಲಃ ।
ಕಾಮಹಾ ಕಾಮಕೃತ್ಕಾನ್ತಃ ಕಾಮಃ ಕಾಮಪ್ರದಃ ಪ್ರಭುಃ ॥೪೫॥

290) **ಭೂತಭವ್ಯಭವನ್ನಾಥಃ** = ಭೂತಭವಿಷ್ಯದ್ವರ್ತಮಾನಗಳಿಗೆ ಒಡೆಯನಾದವನು.

ಶಂ. ಭಾ. :– ಭೂತ, ಭವಿಷ್ಯತ್ತು ಮತ್ತು ವರ್ತಮಾನಕಾಲಗಳ ಪ್ರಾಣಿಗಳಿಗೆ ನಾಥನಾದವನು. (ನಾಥನೆಂದರೆ ಯಾಚಿಸಲ್ಪಡುವವನು, ಸಂತಾಪವನ್ನುಂಟುಮಾಡುವವನು, ಅಧಿಪತಿಯು, ಶಾಸನಮಾಡುವವನು.)

291) **ಪ. ಭ. :–** ತ್ರಿಕಾಲಗಳಲ್ಲಿಯೂ ಐಶ್ವರ್ಯ ಅಥವಾ ಒಡೆತನವುಳ್ಳವನು. **ಭೂತಭವ್ಯಭವನ್ನಾಥಃ ಕೇಶವಃ ಕೇಶಿಸೂದನಃ ॥**

(ಭಾ. ಸ. ೩೧-೧೧)

ನಿರುಕ್ತಿ :– ಐಶ್ವರ್ಯಂ ಸ್ವಾಮ್ಯಮಥವಾ ತ್ರಿಷು ಕಾಲೇಷು ಯಸ್ಯ ಸಃ ।
ಭೂತಭವ್ಯಭವನ್ನಾಥ ಇತ್ಯುಕ್ತಃ ಸದ್ಭಿರಾದರಾತ್ ॥

289) **ಸ. ಸಂ. :–** ಭೂಮಿಯಲ್ಲಿ ಪೋಣಿಸಲ್ಪಟ್ಟಿರುವ ಸಂಸಾರಿಗಳು, ಜ್ಞಾನಶೂನ್ಯರು ಮತ್ತು ಭಕ್ತರು–ಇವರಿಂದ ಯಾಚಿಸಲ್ಪಡುವವನು.

* * *

291) **ಪವನಃ** = ಬೀಸುವ ಧರ್ಮವುಳ್ಳ ವಾಯುಸ್ವರೂಪಿಯು.

ಶಂ. ಭಾ. :– ಪವಿತ್ರಗೊಳಿಸುವವನು. **ಪವನಃ ಪವತಾಮಸ್ಮಿ ॥**

(ಗೀತಾ. ೧೦-೩೧)

292) **ಪ. ಭ. :–** ಯಾವಾಗಲೂ ಎಲ್ಲೆಡೆಗಳಲ್ಲಿಯೂ ಸ್ವಾಭಾವಿಕವಾಗಿಯೇ ಚಲಿಸುವವನು. ಇವನ ಈ ಧರ್ಮದ ಅಂಶದಿಂದಲೇ ವಾಯುವಿಗೆ ಸತತಗತಿಯು ಇರುವುದು.

ನಿರುಕ್ತಿ :– ಯತಃ ಸ್ವಯಂ ತು ಸರ್ವತ್ರ ಪ್ರವಹತ್ಯೇಷ ನಿತ್ಯಶಃ ।
ಪ್ರವಹಃ ಪವನಸ್ತಸ್ಮಾತ್ಕಥ್ಯತೇ ವೇಗದೋ ಮನುಃ ॥

'ಓಂ ಪವನಾಯ ನಮಃ'–ಈ ನಾಮಮಂತ್ರಜಪವು ವೇಗವಾಗಿ ಕಾರ್ಯಸಿದ್ಧಿಯನ್ನು ಮಾಡಿಕೊಡುತ್ತದೆ.

290) **ಸ. ಸಂ. :–** ರಾಜರನ್ನು ಭಾಗ್ಯದಾನದಿಂದ ಭಾಗ್ಯವಂತರನ್ನಾಗಿ ಮಾಡುವವನು.

* * *

292) **ಪಾವನಃ** = ಪವಿತ್ರಗೊಳಿಸುವವನು.

ಶಂ. ಭಾ. :– ಚಲನೆಮಾಡಿಸುವವನು. **ಭೀಷಾಸ್ಮಾದ್ವಾತಃ ಪವತೇ** (ತೈ. ಉ. ೨-೮)

293) **ಪ. ಭ. :–** ತನಗೆ ಸಂಬಂಧಿಸಿದ ಗಂಗೆಯೇ ಮುಂತಾದುವುಗಳ ಮೂಲಕ ಜಗತ್ತನ್ನು ಪಾವನಗೊಳಿಸುವವನು. **ಪಾವನಃ ಸರ್ವಲೋಕಾನಾಂ ತ್ವಮೇವ ರಘುನನ್ದನ ॥** (ರಾ. ಉ. ೩೨-೯)

ನಿರುಕ್ತಿ :– ಯಃ ಸ್ವಸಮ್ಬನ್ಧಿಗಜ್ಗಾದೀನ್ಪಾವಯೇಲ್ಲೋಕಪಾವನಾನ್ ।
ಸ ಪಾವನ ಇತಿ ಖ್ಯಾತಃ ಪಾವನತ್ವಪ್ರದೋ ಮನುಃ ॥

'ಓಂ ಪಾವನಾಯ ನಮಃ'–ಎಂಬ ನಾಮಮಂತ್ರಜಪವು ಪಾವನತ್ವವನ್ನುಂಟುಮಾಡುತ್ತದೆ.

291) **ಸ. ಸಂ. :–** ಶುದ್ಧಿಪಡಿಸುವವನು ; ರಾಜರ ದೆಸೆಯಿಂದ ರಕ್ಷಿಸುವವನು.

* * *

293) **ಅನಲಃ** = ಅಗ್ನಿಸ್ವರೂಪಿಯು.

ಶಂ. ಭಾ. :– (ಪ್ರಾಣಗಳನ್ನು ಆತ್ಮಭಾವದಿಂದ ಗ್ರಹಿಸುವ) ಜೀವಸ್ವರೂಪಿಯು ; ಗಂಧ-ರಸಹೀನನಾದವನು ; **ಅಗನ್ಧಮರಸಂ** (ಬೃ.೩-೮-೮) **ಪರ್ಯಾಪ್ತಭಾವ** (ಅಂತತ್ವ) ವಿಲ್ಲದವನು.

294) **ಪ. ಭ. :–** ತೂಕಡಿಕೆಯಿಲ್ಲದವನು ; ಭಕ್ತರಿಗೆ ಬಹುಮುಖವಾಗಿ ಸದಾ ಉಪಕಾರಮಾಡುತ್ತಿದ್ದರೂ ಕೊನೆಯಿಲ್ಲದ ಅನುಗ್ರಹಮಹಿಮೆಯುಳ್ಳವನು.

ನಿರುಕ್ತಿ :– ಅಪರ್ಯಾಪ್ತೋ ಹಿ ಭಕ್ತೇಭ್ಯೋಽಪ್ಯುಪಕೃತ್ಯ ಪುನಃ ಪುನಃ ।
ಅನುಗ್ರಹಂ ಯಃ ಕರೋತಿ ಸೋಽನಲಃ ಪರಿಕೀರ್ತಿತಃ ॥

293) **ಸ. ಸಂ. :–** ನಿವಾರಣೆಯಿಲ್ಲದವನು. ಅನನನ್ನು (ಮುಖ್ಯ ಪ್ರಾಣನನ್ನು) ಭಕ್ತನನ್ನಾಗಿ ಹೊಂದಿರುವವನು ; ಜಗತ್ತಿನ ಸೃಷ್ಟಿಯೇ ಮುಂತಾದುವುಗಳಲ್ಲಿ ಅಂತ್ಯವಿಲ್ಲದ ಬುದ್ಧಿಯಿರುವವನು.

*　　　*　　　*

294) **ಕಾಮಹಾ=** ದುಷ್ಟವಾದ ಕಾಮವನ್ನು ಧ್ವಂಸಮಾಡುವವನು. ಮನ್ಮಥನನ್ನು ಧ್ವಂಸಮಾಡಿದ ರುದ್ರಸ್ವರೂಪಿಯು.

ಶಂ. ಭಾ. :– ಮೋಕ್ಷವನ್ನು ಬಯಸುವ ಭಕ್ತರ ಇತರ ಕಾಮಗಳನ್ನು ಮತ್ತು ಹಿಂಸಕಜನರ ಕಾಮಗಳನ್ನು ಧ್ವಂಸಮಾಡುವವನು.

295) **ಪ. ಭ. :–** ತನ್ನನ್ನೂ ತನ್ನ ಗುಣಗಳನ್ನೂ ಅನುಭವಿಸಿದ ಭಕ್ತರಿಗೆ ಇತರವಿಷಯಗಳಲ್ಲಿ ಕಾಮವಿಲ್ಲದಂತೆ ಮಾಡುವವನು.

ನಿರುಕ್ತಿ :– ಪುಂಸಾಂ ಸ್ವದರ್ಶಿನಾಂ ಯೋऽಸೌ ಸ್ಪೃಹಾಂ ಚ ವಿಷಯಾನ್ತರೇ ।
ಹತವಾನ್ಕಾಮಹಾ ಪ್ರೋಕ್ತಃ ಸರ್ವಾಶಾಪೂರಕೋ ಮನುಃ ॥

'**ಓಂ ಕಾಮಘ್ನೇ ನಮಃ**'–ಎಂಬ ನಾಮಮಂತ್ರಜಪವು ಸಕಲ ಆಶೆಗಳನ್ನೂ ಪೂರೈಸಿಕೊಡುತ್ತದೆ.

293) **ಸ. ಸಂ. :–** ಕಾಮವನ್ನು ಧ್ವಂಸಮಾಡುವವನು ; ರೋಗವನ್ನು ಧ್ವಂಸಮಾಡುವವನು.

*　　　*　　　*

295) **ಕಾಮಕೃತ್ =** ಭಕ್ತರ ಒಳ್ಳೆಯ ಇಷ್ಟಾರ್ಥಗಳನ್ನು ನೆರವೇರಿಸುವವನು.

ಶಂ. ಭಾ. :– ಸಾತ್ವಿಕರ ಕಾಮನೆಗಳನ್ನು ಈಡೇರಿಸುವವನು ; ಕಾಮನ (ಪ್ರದ್ಯುಮ್ನನ) ತಂದೆಯಾದವನು.

296) **ಪ. ಭ. :–** ತನ್ನ ಪಾದಪದ್ಮಗಳಲ್ಲಿ ಅನುರಾಗವುಂಟಾಗುವಂತೆ ಮಾಡುವವನು ; ಭಕ್ತರ ಭೋಗ-ಮೋಕ್ಷಾದಿಗಳನ್ನು ಅನುಗ್ರಹಿಸುವವನು.

ನಿರುಕ್ತಿ :– ಸ್ವಪಾದಪದ್ಮೇ ರಾಗಾದಿಕರಣಾತ್ಕಾಮಕೃತ್ ಸ್ಮೃತಃ ॥

294) **ಸ. ಸಂ. :–** ಭಕ್ತರ ಅಭಿಲಾಷೆಗಳನ್ನು ಈಡೇರಿಸುವವನು.

* * *

296) **ಕಾನ್ತಃ** = ಹೆಚ್ಚು ಆಕರ್ಷಕನಾದವನು.

ಶಂ. ಭಾ. :– ಅತ್ಯಂತಸುಂದರನಾದವನು.

297) **ಪ. ಭ. :–** ಸೌಂದರ್ಯಾದಿಗುಣಗಳಿಂದ ಅತ್ಯಂತಮನೋಹರನಾದವನು.

ನಿರುಕ್ತಿ :– ಸೌನ್ದರ್ಯಾದಿಗುಣೈಃ ಕಾನ್ತಃ ಮನೋಹರತಯಾ ಭೃಶಮ್ ।

295) **ಸ. ಸಂ. :–** ಬ್ರಹ್ಮಾದಿಗಳಿಗೆ ಸುಖಸ್ವರೂಪದ ನಿರ್ಣಯವು ಯಾವನಿಂದ ಉಂಟಾಗುತ್ತದೆಯೋ–ಅವನು ; ದೈತ್ಯರ ಸುಖವನ್ನು ನಾಶಪಡಿಸುವವನು ; ಸಮುದ್ರಜಲದಲ್ಲಿ ಸೇತುವೆಯನ್ನು ಕಟ್ಟಿದವನು.

* * *

297) **ಕಾಮಃ** = ಮನ್ಮಥಸ್ವರೂಪಿಯು ; ಅತ್ಯಂತಕಮನೀಯನಾದವನು.

ಶಂ. ಭಾ. :– ಪುರುಷಾರ್ಥವನ್ನು ಬಯಸುವವರಿಂದ ಕಾಮಿಸಲ್ಪಡುವವನು.

298) **ಪ. ಭ. :–** ಶೀಲ, ಔದಾರ್ಯ, ದಯೆ ಮತ್ತು ಆತ್ಮಗುಣಗಳಿಂದ ಅತ್ಯಂತಕಮನೀಯನಾದವನು.

ನಿರುಕ್ತಿ :– ನಿಕಾಮಕಮನೀಯತ್ವಾತ್‌ಶೀಲಾದ್ಯೈಃ ಕಾಮ ಈರಿತಃ ॥

296) **ಸ. ಸಂ. :–** ಜನರಿಂದ ಕಾಮಿಸಲ್ಪಟ್ಟವನು ; ಚತುರ್ಮುಖನಿಂದ ಹೊಂದಲ್ಪಡುವವನು ; ವಾಯುವಿನಿಂದ ಹೊಂದಲ್ಪಡುವವನು. **ಸ ಏನಾನ್ಗಮಯತಿ ॥**

ವಿದ್ಯುತ್ಪತಿರ್ವಾಯುರೇವ ನಯೇದ್ಬ್ರಹ್ಮ ನ ಚಾಪರಃ ।
ಕುತೋಽನ್ಯಸ್ಯ ಭವೇಚ್ಛಕ್ತಿಸ್ತಮೃತೇ ಪ್ರಾಣನಾಯಕಮ್ ॥

(ಸ್ಮೃತಿ)

* * *

298) **ಕಾಮಪ್ರದಃ**= ಯೋಗ್ಯವಾದ ಇಷ್ಟಾರ್ಥಗಳನ್ನು ಕೊಡುವವನು.

ಶಂ. ಭಾ. :– ಭಕ್ತರಿಗೆ ಹೇರಳವಾಗಿ ಇಷ್ಟವಸ್ತುಗಳನ್ನು ದಯಪಾಲಿಸುವವನು.

299) ಪ. ಭ. :– ತನ್ನನ್ನು ಬಯಸುವವರಿಗೂ ಮತ್ತು ಕ್ಷುದ್ರಕಾಮನೆಗಳುಳ್ಳವರಿಗೂ ಅವರವರ ಯೋಗ್ಯತೆಗೆ ಅನುಗುಣವಾಗಿ ಇಷ್ಟಾರ್ಥಗಳನ್ನು ದಯಪಾಲಿಸುವವನು. ಏಕೋ ಬಹೂನಾಂ ಯೋ ವಿದಧಾತಿ ಕಾಮಾನ್ II (ಕಠ. ೨-೫)

ನಿರುಕ್ತಿ :– ಸ್ವಕಾಮ್ಯಕ್ಷುದ್ರಕಾಮ್ಯೇಭ್ಯೋ ಯಥಾರ್ಹಂ ಕಾಮ್ಯದಾನತಃ I
ಕಾಮಪ್ರದಃ ಸಮಾಖ್ಯಾತೋ ಹ್ಯಷ್ಟಾರ್ಣೋ ಮನುರುತ್ತಮಃII

'ಓಂ ಕಾಮಪ್ರದಾಯ ನಮಃ'–ಎಂಬ ನಾಮಮಂತ್ರಜಪವು ಜಪಿಸಲು ಶ್ರೇಷ್ಠವಾದುದು.

297) ಸ. ಸಂ. :– ಕಾಮಿತಗಳನ್ನು ಕೊಡುವವನು.

* * *

299) **ಪ್ರಭುಃ**= ಅತ್ಯಂತಸಮರ್ಥನು ; ಪ್ರಭಾವಶಾಲಿಯು.

ಶಂ. ಭಾ. :– ಹೆಚ್ಚು ಅತಿಶಯವುಳ್ಳವನು.

300) ಪ. ಭ. :– ಎಲ್ಲರ ಹೃದಯಗಳನ್ನೂ ಅಪಹರಿಸುವುದರಲ್ಲಿ ಸಮರ್ಥನಾದವನು.

ನಿರುಕ್ತಿ :– ಸರ್ವೇಷಾಂ ಚಿತ್ತಹರಣೇ ಪ್ರಭುಃ ಪ್ರಭವತೀತಿ ಯಃ II

298) ಸ. ಸಂ. :– ಅತಿಶಯವಾಗಿರುವವನು.

* * *

ಯುಗಾದಿಕೃದ್ಯುಗಾವರ್ತೋ ನೈಕಮಾಯೋ ಮಹಾಶನಃ I
ಅದೃಶ್ಯೋ ವ್ಯಕ್ತರೂಪಶ್ಚ ಸಹಸ್ರಜಿದನನ್ತಜಿತ್ II೪೬II

300) **ಯುಗಾದಿಕೃತ್**=ಯುಗಗಳನ್ನು ಪ್ರಾರಂಭಿಸಿದವನು ; ಯುಗವೇ ಮುಂತಾದ ಕಾಲಭೇದವನ್ನು ಉಂಟುಮಾಡುವವನು.

ಶಂ. ಭಾ. :– ಕಾಲಭೇದವನ್ನು ಉಂಟುಮಾಡುವವನು ; ಯುಗಗಳನ್ನು ಪ್ರಾರಂಭಿಸುವವನು.

301) **ಪ. ಭ. :–** ಯುಗದ ಕೊನೆಯಲ್ಲಿ ಬೇರೊಂದು ಯುಗವನ್ನು ಆರಂಭಿಸುವವನು. ವಟಪತ್ರಶಾಯಿಯಾದ ಭಗವಂತನು.

ನಿರುಕ್ತಿ :– **ನ್ಯಗ್ರೋಧಶಾಯೀ ಭಗವಾನ್ಪುರಾಣಪುರುಷೋತ್ತಮಃ ।**
ಕರೋತ್ಯಾದಿಂ ಯುಗಸ್ಯಾನ್ತೇ ಯುಗಾದಿಕೃದುದೀರಿತಃ ॥

299) **ಸ. ಸಂ. :–** ಯುಗವೇ ಮುಂತಾದ ಕಾಲಭೇದವನ್ನು ಉಂಟುಮಾಡುವವನು.

* * *

301) **ಯುಗಾವರ್ತಃ** = ಯುಗಗಳು ಮತ್ತೆ ಮತ್ತೆ ಉರುಳಿಬರುವಂತೆ ಮಾಡುವವನು.

ಶಂ. ಭಾ. :– ಕಾಲಾತ್ಮನಾಗಿ ಕೃತಯುಗವೇ ಮುಂತಾದ ಯುಗಗಳು ಮತ್ತೆ ಮತ್ತೆ ಉರುಳಿಬರುವಂತೆ ಮಾಡುವವನು.

302) **ಪ. ಭ. :–** ತನ್ನ ಧರ್ಮವ್ಯವಸ್ಥೆಯಿಂದ ಕೃತಯುಗವೇ ಮುಂತಾದ ಯುಗಗಳು ಮತ್ತೆ ಮತ್ತೆ ಉರುಳಿಬರುವಂತೆ ಮಾಡುವ ಕಾಲರೂಪಧರನು.

ನಿರುಕ್ತಿ :– **ಧರ್ಮವ್ಯವಸ್ಥಯಾ ಸ್ವಸ್ಯ ಯುಗಾದ್ಯಾವರ್ತನಾನ್ಮುಹುಃ ।**
ಯುಗಾವರ್ತಃ ಸಮಾಖ್ಯಾತಃ ಕಾಲರೂಪಧರೋ ಹರಿಃ ॥

300) **ಸ. ಸಂ. :–** ಕೃತಯುಗವೇ ಮುಂತಾದ ಯುಗಗಳು ಮತ್ತೆ ಮತ್ತೆ ಬರುವಂತೆ ಮಾಡುವವನು.

* * *

302) **ನೈಕಮಾಯಃ** = ಅನಂತಮಾಯೆಗಳುಳ್ಳವನು.

ಶಂ. ಭಾ. :– ಬಹಳ ಮಾಯೆಗಳುಳ್ಳವನು.

303) **ಪ. ಭ. :–** ಅನಂತವಾದ ಆಶ್ಚರ್ಯಗಳಿಂದ ಕೂಡಿದವನು.

ಮುಗ್ಧಶಿಶುರೂಪವನ್ನು ತಾಳುವುದು, ಅಪರಿಮಿತವಾದ ಜಗತ್ತನ್ನು ನುಂಗುವುದು, ಆಲಂಬನವಿಲ್ಲದ ಏಕೋದಕದಲ್ಲಿ ಆಲದೆಲೆಯ ಮೇಲೆ ತೇಲುವುದು–ಇತ್ಯಾದಿ ತರ್ಕಿಸಲೂ ಅಸಾಧ್ಯವಾದ ಆಶ್ಚರ್ಯಗಳಿಂದ ಕೂಡಿರುವವನು.

ಮಾಯಾಂ ತು ಪ್ರಕೃತಿಂ ವಿದ್ಯಾತ್ (ಶ್ವೇ. ೪-೯)
ಮಾಯಾ ವಯುನಂ ಜ್ಞಾನಂ । (ನಿರುಕ್ತ)

ನಿರುಕ್ತಿ :– ಮುಗ್ಧಾರ್ಭಕತ್ವರೂಪೇಣ ಜಗನ್ನಿರ್ಭರಣಾದಪಿ ।
ವಟೈಕಪತ್ರಶಯನಾನ್ನಿರಾಲಮ್ಬಜಲೇ ಮುಹುಃ ।
ಅನನ್ತಾಶ್ಚರ್ಯಸಂಯುಕ್ತೋ ನೈಕಮಾಯಸ್ತು ಸಃ ಸ್ಮೃತಃ ॥

301) **ಸ. ಸಂ. :–** ಅನೇಕವಾದ ಇಚ್ಛೆಗಳುಳ್ಳವನು.

* * *

303) **ಮಹಾಶನಃ** = ಮಹಾಭಕ್ಷಕನು. ಮಹಾಪ್ರಳಯದಲ್ಲಿ ಇಡೀ ವಿಶ್ವವನ್ನೇ ಭಕ್ಷಿಸುವವನು.

ಯಸ್ಯ ಬ್ರಹ್ಮ ಚ ಕ್ಷತ್ರಂ ಚ ಉಭೇ ಭವತ ಓದನಃ ।
ಮೃತ್ಯುರ್ಯಸ್ಯೋಪಸೇಚನಂ ಕ ಇತ್ಥಾ ವೇದ ಯತ್ರ ಸಃ ॥
(ಕಠ. ೧-೨-೨೫)

ಶಂ. ಭಾ. :– ಮಹತ್ತಾದ ಭೋಜನವುಳ್ಳವನು. ಪ್ರಳಯದ ಕೊನೆಯಲ್ಲಿ ಎಲ್ಲವನ್ನೂ ನುಂಗುವವನು.

304) **ಪ. ಭ. :–** ಅಖಿಲಜಗತ್ತನ್ನೂ ನುಂಗುವವನು.

ಯಚ್ಚ ಕಿಂಚಿನ್ಮಯಾ ಲೋಕೇ ದೃಷ್ಟಂ ಸ್ಥಾವರಜಙ್ಗಮಮ್ ।
ತದಪಶ್ಯಮಹಂ ಸರ್ವಂ ತಸ್ಯ ಕುಕ್ಷೌ ಮಹಾತ್ಮನಃ ॥
(ಮ. ಭಾ. ವ. ೧೮೮-೧೨೨)

ನಿರುಕ್ತಿ :– ಭುವನಾನಾಂ ನಿಗರಣಾನ್ಮಹಾಶನ ಇತೀರಿತಃ ।

302) **ಸ. ಸಂ. :–** ದೊಡ್ಡ ಭೋಜನವುಳ್ಳವನು. ದೊಡ್ಡ ಭೋಜನದ ಆಸೆಯುಳ್ಳ ದುರ್ವಾಸನಿಗೆ ಅನ್ನವನ್ನು ಒಯ್ದವನು ; (ನನ್ನನ್ನು ಉದ್ದೇಶಿಸಿ

ಯಜ್ಞವು ನಡೆಯಲಿ ಎಂದು) ಮಹದ (ಯಜ್ಞದ) ವಿಷಯದಲ್ಲಿ ಆಶೆಯುಳ್ಳವನು ; ಆ ಆಶೆಗೆ ಒಯ್ಯುವವನು.

*　　*　　*

304) **ಅದೃಶ್ಯಃ** = ಚರ್ಮಚಕ್ಷುಸ್ಸಿಗೆ ಗೋಚರನಾಗದವನು ; ಬುದ್ಧಿ-ಇಂದ್ರಿಯಗಳಿಗೆ ಗೋಚರನಾಗದವನು.

ಶಂ. ಭಾ. :– ಸಮಸ್ತಬುದ್ಧೀಂದ್ರಿಯಗಳಿಗೂ ವಿಷಯನಾಗದವನು.

305) **ಪ. ಭ. :–** ತರ್ಕಿಸಲು ಅಸಾಧ್ಯವಾದ ವೃತ್ತಾಂತವುಳ್ಳವನು. ಮಾರ್ಕಂಡೇಯನಿಗೆ ಪ್ರಳಯಕಾಲದಲ್ಲಿಯೂ ಕೂಡ 'ಈತನು ಯಾರು ?–' ಎಂಬುದಾಗಿ ಚಿಂತಿಸಲು ಅಸಾಧ್ಯವಾಗಿ ಕಂಡುಬಂದವನು.

ನಿರುಕ್ತಿ :– ಅತರ್ಕ್ಯವೃತ್ತಾನ್ತತಯಾ ಜಗತಃ ಪ್ರಲಯೇಽಪಿ ಯಃ ।
ನ ಲಭ್ಯಶ್ಚಿನ್ತ್ಯಮಾನೋಽಪಿ ಸೋಽದೃಶ್ಯ ಇತಿ ಕಥ್ಯತೇ ॥

303) **ಸ. ಸಂ. :–** ದೃಶ್ಯನಾಗದವನು.

*　　*　　*

305) **ವ್ಯಕ್ತರೂಪಃ** = ಸ್ಥೂಲಜಗದ್ರೂಪದಿಂದ ಮತ್ತು ಅವತಾರರೂಪಗಳಿಂದ ವ್ಯಕ್ತನಾಗುವವನು ; ಯೋಗಿಗಳಿಗೆ ವ್ಯಕ್ತವಾಗಿರುವ ಸ್ವರೂಪವುಳ್ಳವನು.

ಶಂ. ಭಾ. :– ಸ್ಥೂಲರೂಪದಿಂದ ವ್ಯಕ್ತವಾದ ಸ್ವರೂಪವುಳ್ಳವನು ; ಸ್ವಯಂಪ್ರಕಾಶನಾಗಿರುವುದರಿಂದ ಯೋಗಿಗಳಿಗೆ ವ್ಯಕ್ತವಾದ ರೂಪವುಳ್ಳ ವನು.

306) **ಪ. ಭ. :–** (ಮಾರ್ಕಂಡೇಯನೇ ಮೊದಲಾದ ಭಕ್ತರಿಗೆ) ಚೆನ್ನಾಗಿ ಗ್ರಹಿಸಲು ಸಾಧ್ಯವಾದ ದಿವ್ಯಮಂಗಳವಿಗ್ರಹವುಳ್ಳವನು.

ಅತಸೀಪುಷ್ಪಸಂಕಾಶಃ ಶ್ರೀವತ್ಸಕೃತಲಕ್ಷಣಃ ।
ಸಾಕ್ಷಾಲ್ಲಕ್ಷ್ಮ್ಯಾ ಇವಾವಾಸಃ ಸ ಸದಾ ಪ್ರತಿಭಾತಿ ಮೇ ॥

ತಸ್ಯ ತಾಮ್ರತಲೌ ತಾತ ಚರಣೌ ಸುಪ್ರತಿಷ್ಠಿತೌ ।
ಪ್ರಣತೇನ ಮಯಾ ಮೂರ್ಧ್ನಾ ಗೃಹೀತ್ವಾ ಹ್ಯಭಿವನ್ದಿತೌ ॥

(ಮ.ಭಾ.ವನ. ೧೮೮-೧೩೩)

ನಿರುಕ್ತಿ :– ಮಹಾಜಲೇ ಸಂಚರತೋ ಮಾರ್ಕಣ್ಡೇಯಸ್ಯ ಧೀಮತಃ ।
ದೃಶ್ಯೋ ಯೋ ವ್ಯಕ್ತರೂಪಃ ಸ್ಯಾದ್ದಿವ್ಯವಿಗ್ರಹಧಾರಣಾತ್ ॥

304) ಸ. ಸಂ. :– ಅವ್ಯಕ್ತರೂಪಃ = ಅವ್ಯಕ್ತವಾದ ರೂಪವುಳ್ಳವನು. ತದವ್ಯಕ್ತಮಾಹ ಹಿ ॥

* * *

306) ಸಹಸ್ರಜಿತ್ = ಸಾವಿರಾರು ಜಯಗಳನ್ನು ಗಳಿಸಿದವನು.

ಶಂ. ಭಾ. :– ಯುದ್ಧದಲ್ಲಿ ಸಾವಿರಾರು ಮಂದಿ ದೇವಶತ್ರುಗಳನ್ನು ಗೆಲ್ಲುವವನು.

307) ಪ. ಭ. :– ಸಹಸ್ರಯುಗಸಂಖ್ಯೆಯುಳ್ಳ ಕಲ್ಪಾಂತಗಳನ್ನೂ ಮಲಗಿಕೊಂಡೇ ಜಯಿಸುವವನು. ಯಾವದ್ಯುಗಾನಾಂ ವಿಪ್ರರ್ಷೇ ಸಹಸ್ರಂ ಪರಿವರ್ತತೇ। ತಾವತ್ಸ್ವಪಿಮಿ...(ಮ. ಭಾ. ವನ. ೧೮೯-೪೧)
ನಿರುಕ್ತಿ :– ಸಹಸ್ರಯುಗಸಂಖ್ಯಾಕಂ ಸರ್ವಕಲ್ಪಾನ್ತಮೇವ ಹಿ ।
ಶಯಾನ ಏವ ಜಯತಿ ಸಹಸ್ರಜಿದಿತಿ ಸ್ಮೃತಃ ॥

305) ಸ. ಸಂ. :– ಸಾವಿರಾರು ಅಸುರರನ್ನು ಜಯಿಸುವವನು.

* * *

307) ಅನಂತಜಿತ್= ಅನಂತವಾದ ರೀತಿಗಳಲ್ಲಿ, ಅನಂತವಾದ ವಸ್ತುಗಳ ಮೇಲೆ ಅನಂತಕಾಲಗಳಲ್ಲಿ ಜಯವನ್ನು ಗಳಿಸುವವನು.

ಶಂ. ಭಾ. :– ಅಚಿಂತ್ಯವಾದ ಶಕ್ತಿಯುಳ್ಳವನಾಗಿರುವುದರಿಂದ ಯುದ್ಧ, ಕ್ರೀಡೆ–ಮುಂತಾದುವುಗಳಲ್ಲಿ ಎಲ್ಲ ಕಡೆಗಳಲ್ಲಿಯೂ ಸಮಸ್ತಭೂತಗಳನ್ನೂ ಜಯಿಸುವವನು.

308) ಪ. ಭ. :– ಪರಿಮಿತವಾದ ಶಿಶುರೂಪದಲ್ಲಿದ್ದರೂ ಎಂದಿಗೂ ಎಲ್ಲಿಯೂ ಯಾವ ಅವಧಿಯೂ ಇಲ್ಲದ ಮಹಿಮೆಯುಳ್ಳವನು.
ನಿರುಕ್ತಿ :– ಮತಸ್ಯ ಶಿಶುರೂಪಸ್ಯ ಕದಾಚಿತ್ಕಶ್ಚಿದೇವ ಹಿ ।
ಕಥಂಚಿದವಧಿರ್ನಾಸ್ತಿ ಮಹಿಮ್ನಃ ಪರಮಾತ್ಮನಃ ।
ತಸ್ಮಾದನನ್ತಜಿದಿತಿ ವಸ್ತ್ವರ್ಣೋ ಜಯದೋ ಮನುಃ ॥

'ಓಂ ಅನನ್ತಜಿತೇ ನಮಃ'–ಎಂಬ ನಾಮಮಂತ್ರಜಪವು ವಿಜಯ ದಾಯಕವು.

306) ಸ. ಸಂ. :– ಅನಂತವಾದ ವಸ್ತುಗಳನ್ನು ಪಡೆಯುವವನು.

* * *

ಇಷ್ಟೋಽವಿಶಿಷ್ಟಃ ಶಿಷ್ಟೇಷ್ಟಃ ಶಿಖಣ್ಡೀ ನಹುಷೋ ವೃಷಃ ।
ಕ್ರೋಧಹಾ ಕ್ರೋಧಕೃತ್ಕರ್ತಾ ವಿಶ್ವಬಾಹುರ್ಮಹೀಧರಃ ॥೩೭॥

308) ಇಷ್ಟಃ = ಪರಮಾನಂದಸ್ವರೂಪನಾದ ಆತ್ಮನಾಗಿರುವುದರಿಂದ ಎಲ್ಲರಿಗೂ ಪ್ರಿಯನಾದವನು ; ಯಜ್ಞದಲ್ಲಿ ಪೂಜಿತನಾದವನು.

ಶಂ. ಭಾ. :– ಪರಮಾನಂದಸ್ವರೂಪನಾಗಿರುವುದರಿಂದ ಪ್ರಿಯ ನಾಗಿರುವವನು. ಯಜ್ಞದ ಮೂಲಕ ಪೂಜಿಸಲ್ಪಡುವವನು.

309) ಪ. ಭ. :– ಎಲ್ಲರ ರಕ್ಷಣೆಯಲ್ಲಿಯೂ ತತ್ಪರನಾಗಿರುವುದರಿಂದ ಇಷ್ಟನು.

307) ಸ. ಸಂ. :– ಪ್ರಿಯನಾದವನು.

* * *

309) ಅವಿಶಿಷ್ಟಃ = ಎಲ್ಲರಿಗೂ ಅಂತರ್ಯಾಮಿಯಾಗಿರುವುದರಿಂದ ಯಾವ ವಿಶೇಷವೂ ಇಲ್ಲದವನು.

ಶಂ. ಭಾ. :– ಸರ್ವಸಮನಾಗಿರುವುದರಿಂದ ಯಾವ ವಿಶೇಷವೂ ಇಲ್ಲದವನು.

310) ಪ. ಭ. :– ಯಾವ ವಿಶೇಷವೂ ಇಲ್ಲದೇ ತಾಯಿಯಂತೆ ವಾಂಛಿತನಾದವನು.

ನಿರುಕ್ತಿ :– **ಇಷ್ಟೋಽವಿಶಿಷ್ಟಃ ಕಥಿತಃ ಸರ್ವರಕ್ಷಣತತ್ಪರಃ ॥**

308) ಸ. ಸಂ. :– ವಿಶಿಷ್ಟಃ : ವಿಶೇಷರಾಗಿ ಶಿಷ್ಟರು ಯಾವನಿಂದ ಉಂಟಾಗುವರೋ–ಅವನು ; ವಿಶೇಷವಾಗಿ ಪ್ರಳಯದಲ್ಲಿ ಉಳಿಯುವವನು.

* * *

310) **ಶಿಷ್ಟೇಷ್ಟಃ** = ಸಜ್ಜನರಿಗೆ ಪ್ರಿಯತಮನಾದವನು ; ಸಜ್ಜನರಿಂದ ಪೂಜಿಸಲ್ಪಟ್ಟವನು ; ಸಜ್ಜನರಲ್ಲಿ ಇಷ್ಟವುಳ್ಳವನು. ಪ್ರಿಯೋ ಹಿ ಜ್ಞಾನಿನೋಽತ್ಯರ್ಥಂ ಅಹಂ ಸ ಚ ಮಮ ಪ್ರಿಯಃ (ಗೀತೆ ೭-೧೭)

ಶಂ. ಭಾ. :– ವಿದ್ವಾಂಸರಿಗೆ ಇಷ್ಟನಾದವನು ; ವಿದ್ವಾಂಸರಲ್ಲಿ ಇಷ್ಟವುಳ್ಳವನು ; ಶಿಷ್ಟರಿಂದ ಪೂಜಿಸಲ್ಪಟ್ಟವನು.

311) ಪ. ಭ. :– (ಮಾರ್ಕಂಡೇಯರೇ ಮುಂತಾದ) ಪಂಡಿತಶ್ರೇಷ್ಠರಿಗೆ ಪರಮಪುರುಷಾರ್ಥವಾಗಿ ಅಭಿಮತನಾಗಿರುವವನು.

ನಿರುಕ್ತಿ :– ಮಾರ್ಕಣ್ಡೇಯದ್ವಿಜಾದೀನಾಂ ಪಣ್ಡಿತೇಷ್ವಗ್ರಯಾಯಿನಾಮ್ ।
ಉತ್ಕೃಷ್ಟಪುರುಷಾರ್ಥತ್ವೇನೇಷ್ಟಃ ಶಿಷ್ಟೇಷ್ಟ ಉಚ್ಯತೇ ॥

309) ಸ. ಸಂ. :– ಶಿಷ್ಟರಿಂದ ಪೂಜಿತನಾದವನು ; ಪ್ರಳಯಕಾಲದಲ್ಲಿಯೂ ಉಳಿದಿರುವ ರಮಾದೇವಿಯುಳ್ಳವನು.

* * *

311) **ಶಿಖಣ್ಡೀ** = ನವಿಲುಗರಿಯ ಭೂಷಣವುಳ್ಳವನು ; ಜ್ಞಾನಶಿಖೆಯುಳ್ಳವನು.

ಶಂ. ಭಾ. :–ನವಿಲುಗರಿಯ ಅಲಂಕಾರವುಳ್ಳ ಗೋಪವೇಷಧಾರಿಯು.

312) ಪ. ಭ. :– ಅತ್ಯಂತ ಅಪರಿಮಿತವೂ ಎದುರಿಸಲು ಅಸಾಧ್ಯವೂ ಆದ ಐಶ್ವರ್ಯ-ಪರಮತೇಜಸ್ಸುಗಳ ಕಲಾಪವೆಂಬ ಅತಿಶಯವುಳ್ಳವನು.

ನಿರುಕ್ತಿ :– ಅತ್ಯಪ್ರಧೃಷ್ಯಮೈಶ್ವರ್ಯಂ ಪರಂ ಯತ್ತೇಜ ಆಸ್ಥಿತಮ್ ।
ತಚ್ಛಿಖಣ್ಡಸ್ತು ಯಸ್ಯಾಸ್ತಿ ತಂ ಶಿಖಣ್ಡೀತಿ ಚಕ್ಷತೇ ॥

310) ಸ. ಸಂ. :– ಬಾಲ್ಯದಲ್ಲಿ ಶ್ರೀಕೃಷ್ಣನ ರೂಪದಿಂದ ಜುಟ್ಟನ್ನು ಅಥವಾ ನವಿಲುಗರಿಯನ್ನು ಧರಿಸಿದ್ದವನು ; ಸುಖಿಗಳನ್ನು ಖಂಡಿಸುವವನು.

* * *

312) **ನಹುಷಃ** = ಎಲ್ಲರನ್ನೂ ಕಟ್ಟಿಹಾಕಿರುವವನು ; ಎಲ್ಲರಿಗೂ ಏಕಸೂತ್ರನಾಗಿರುವವನು ; ಸಂಸಾರಪಾಶದಿಂದ ಎಲ್ಲರನ್ನೂ ಕಟ್ಟಿಹಾಕುವವನು.

ಶಂ. ಭಾ. :– ಮಾಯೆಯಿಂದ ಭೂತಗಳನ್ನು ಕಟ್ಟಿಹಾಕಿರುವವನು.

313) ಪ. ಭ. :– ಜೀವಗಳನ್ನು ಮಾಯೆಯಿಂದ ಕಟ್ಟಿಹಾಕಿರುವವನು. ತಸ್ಮಿಂಶ್ಚಾನ್ಯೋ ಮಾಯಯಾ ಸಂನಿರುದ್ಧಃ (ಶ್ವೇ. ೪-೯)

ನಿರುಕ್ತಿ :– ಜೀವಾನ್ಸ್ವಮಾಯಯಾ ನಿತ್ಯಂ ನಹುಷೋ ನಯತೀತಿ ಯಃ ॥

311) ಸ. ಸಂ. :– ದೈತ್ಯರನ್ನು ಬಂಧಿಸುವವನು.

* * *

313) ವೃಷಃ = ಧರ್ಮರೂಪಿಯಾದವನು ; ಇಷ್ಟಾರ್ಥಗಳನ್ನು ಕರೆಯುವವನು ; ಅಮೃತಸೇಚನೆಮಾಡುವವನು.

ಶಂ. ಭಾ. :– ಕಾಮಗಳನ್ನು ವರ್ಷಿಸುವ ಧರ್ಮಸ್ವರೂಪಿಯು. ವೃಷೋ ಹಿ ಭಗವಾನ್ಧರ್ಮಃ (ಮ. ಶಾಂ. ೩೪೨-೮೮)

314) ಪ. ಭ. :– ಸಮುದ್ರದ ಮಧ್ಯದಲ್ಲಿ ಸರ್ವದಾ ವಾಸಿಸುತ್ತಾ ಅಮೃತರೂಪವಾದ ದೇಹಕಾಂತಿಯಿಂದಲೂ ಮತ್ತು ಮಾತಿನಿಂದಲೂ ಮಾರ್ಕಂಡೇಯನನ್ನು ಸಮಾಧಾನಪಡಿಸುತ್ತಾ ಅವನ ಮೇಲೆ ಪುಷ್ಕಳವಾಗಿ ಅಮೃತದ ಮಳೆಯನ್ನು ಕರೆಯುವವನು.

ನಿರುಕ್ತಿ :– ಸಾಗರಸ್ಯೋದರೇ ನಿತ್ಯಂ ವಸನ್ನಮೃತರೂಪಯಾ ।
ಸ್ವದೇಹಕಾನ್ತ್ಯಾ ವಾಚಾಪಿ ಸಮ್ಯಗಾಶ್ವಾಸಯನ್ಮುಹುಃ ।
ಬಹುಶಃ ಸಿಂಚತಿ ತು ಯಃ ವೃಷಃ ಸ ಪರಿಪಠ್ಯತೇ ॥

312) ಸ. ಸಂ. :– ಭಕ್ತರ ಇಷ್ಟಗಳನ್ನು ವರ್ಷಿಸುವವನು.

* * *

314) ಕ್ರೋಧಹಾ = ಕ್ರೋಧರೂಪವಾದ ಶತ್ರುಗಳನ್ನು ಧ್ವಂಸಮಾಡುವವನು.

ಶಂ. ಭಾ. :– ಸಾಧುಗಳ ಕ್ರೋಧವನ್ನು ನಾಶಮಾಡುವವನು.

315) ಪ. ಭ. :– ಇಪ್ಪತ್ತೊಂದು ಬಾರಿ ಭೂಮಿಯನ್ನು ಸುತ್ತಿ

ದುಷ್ಟಕ್ಷತ್ರಿಯರನ್ನು ಸಂಹಾರಮಾಡಿದ ಮಹಾಕೋಪವನ್ನು ಕಾಶ್ಯಪರ ಪ್ರಾರ್ಥನಾಮಾತ್ರದಿಂದ ನಿಗ್ರಹಿಸಿದ ಭಾರ್ಗವರಾಮಸ್ವರೂಪನು.

ನಿರುಕ್ತಿ :– ಕಾಶ್ಯಪಸ್ಯ ಪ್ರಾರ್ಥನಯಾ ಯಃ ಕ್ರೋಧಂ ಕ್ಷತ್ರಹಾನಿದಮ್ ।
ಹತವಾನ್ಕ್ರೋಧಹಾ ಪ್ರೋಕ್ತಃ ಷಡರ್ಣಃ ಕ್ರೋಧನಾಶಕಃ ॥

'**ಓಂ ಕ್ರೋಧಘ್ನೇ ನಮಃ**'–ಎಂಬ ನಾಮಮಂತ್ರಜಪವು ಕೋಪವನ್ನು ಹೋಗಲಾಡಿಸುತ್ತದೆ.

313) **ಸ. ಸಂ. :–** ಕ್ರೋಧಸ್ವರೂಪರಾದ ದೈತ್ಯರನ್ನು ಸಂಹರಿಸಿದವನು ; ಕ್ಷಮಾನಿಧಿಯಾದುದರಿಂದ ಕ್ರೋಧವನ್ನು ಸಂಹರಿಸಿದವನು.

* * *

315) **ಕ್ರೋಧಕೃತ್ಕರ್ತಾ : ಕ್ರೋಧಕೃತ್**=ರಜೋಗುಣದ ಮೂಲಕ ಕ್ರೋಧವನ್ನು ಉಂಟುಮಾಡುವವನು ; ದುಷ್ಟರಲ್ಲಿ ಕೋಪಗೊಳ್ಳುವವನು. **ಕರ್ತಾ**=ಜಗತ್ತನ್ನು ರಚಿಸಿದವನು ; ಜಗತ್ತು ಎಂಬ ಕರ್ಮಕ್ಕೆ ಕರ್ತೃವಾದವನು. **ಯೋ ವೈ ಬಾಲಾಕ ಏತೇಷಾಂ ಪುರುಷಾಣಾಂ ಕರ್ತಾ ಯಸ್ಯ ವೈ ತತ್ ಕರ್ಮ ಸ ವೇದಿತವ್ಯಃ (ಕೌಷೀ ೪-೧೮) ಕ್ರೋಧಕೃತ್ಕರ್ತಾ**=ಕ್ರೋಧವನ್ನುಂಟುಮಾಡುವವರನ್ನು ಸಂಹರಿಸುವವನು.

ಶಂ. ಭಾ. :– ಅಸಾಧುಗಳ ವಿಷಯದಲ್ಲಿ ಕ್ರೋಧವುಳ್ಳವನು ; ಕೋಪಿಷ್ಠರಾದ ದೈತ್ಯರೇ ಮುಂತಾದವರನ್ನು ಕತ್ತರಿಸಿಹಾಕುವವನು.

316) **ಪ. ಭ. :– ಕ್ರೋಧಕೃತ್ :** ದುಷ್ಟಕ್ಷತ್ರಿಯರ ವಿಷಯದಲ್ಲಿ ಹಿಂದೆ ಕ್ರೋಧವನ್ನು ತೋರಿಸಿದವನು.

ನಿರುಕ್ತಿ :– ಕ್ರೋಧಕೃತ್ಕ್ಷತ್ರಿಯೇಭ್ಯೋ ಯಃ ಪೂರ್ವಂ ಕ್ರೋಧಂ ಕರೋತಿ ಸಃ ॥

314) **ಸ. ಸಂ. :–** ಅಸಾಧುಗಳ ವಿಷಯದಲ್ಲಿ ಕೋಪಿಸಿಕೊಳ್ಳುವವನು ; ಕ್ರೋಧವನ್ನು ಹಿಂಸಿಸುವವನು.

317) **ಪ. ಭ. :– ಕರ್ತಾಃ** = ಕೋಪದಿಂದ ಕಾರ್ತವೀರ್ಯನನ್ನು ಕತ್ತರಿಸಿಹಾಕಿದವನು.

ನಿರುಕ್ತಿ :– ಕ್ರುದ್ಧೇತೋಃ ಕಾರ್ತವೀರ್ಯಸ್ಯ ಚ್ಛೇತ್ತಾ ಕರ್ತೇತಿ ಶಬ್ದ್ಯತೇ ||

315) **ಸ. ಸಂ. :–** ಸ್ವತಂತ್ರನಾದವನು.

* * *

316) **ವಿಶ್ವಬಾಹುಃ** = ಸರ್ವಬಾಹುವು ; ಎಲ್ಲೆಲ್ಲಿಯೂ ಬಾಹುಗಳುಳ್ಳವನು ; ವಿಶ್ವಕ್ಕೆ ಬಾಹುಗಳಂತೆ ಆಲಂಬನಾಗಿರುವವನು.

ಶಂ. ಭಾ. :– ಎಲ್ಲರಿಗೂ ಆಲಂಬನನಾಗಿರುವವನು ; ಎಲ್ಲ ಕಡೆಗಳಲ್ಲಿಯೂ ಬಾಹುಗಳುಳ್ಳವನು ; **ವಿಶ್ವತೋ ಬಾಹುಃ** (ಶ್ವೇ. ೩-೩)

318) **ಪ. ಭ. :–** ಧರ್ಮಕಂಟಕರನ್ನು ಧ್ವಂಸಮಾಡುವುದರಿಂದ ಎಲ್ಲರಿಗೂ ಪ್ರಯೋಜನಕರವಾದ ಬಾಹುಗಳುಳ್ಳವನು.

ನಿರುಕ್ತಿ :– ವಿಶ್ವಸ್ಮೈ ಬಾಹೂ ಯಸ್ಯೇತಿ ವಿಶ್ವಬಾಹುಃ ಪ್ರಕೀರ್ತಿತಃ ||

316) **ಸ. ಸಂ. :–** ವಿಶ್ವನಿಗೆ (ವಾಯುವಿಗೆ) ಕಾರಣವಾದ ಬಾಹುಗಳುಳ್ಳವನು. **ಸೋಽಹಂ ವಾಯುಂ ದಿಶಾಂ ವತ್ಸಂ** (ಶ್ರುತಿಃ)

* * *

317) **ಮಹೀಧರಃ** = ಋತ-ಸತ್ಯಗಳಿಂದ ಭೂಮಿಯನ್ನು ಧರಿಸಿರುವವನು ; ಯಜ್ಞವರಾಹರೂಪಿಯಾಗಿ ಭೂಮಿಯನ್ನು ಧರಿಸಿದವನು ; ಶೇಷನಾಗರೂಪಿಯಾಗಿ ಭೂಮಿಯನ್ನು ಧರಿಸಿರುವವನು.

ಶಂ. ಭಾ. :– ಪೂಜೆಯನ್ನು ಅಥವಾ ಪೃಥ್ವಿಯನ್ನು ಧರಿಸಿರುವವನು.

319) **ಪ. ಭ. :–** (ಭೂಮಿಯ ಭಾರವನ್ನು ಇಳುಹಿ) ಭೂಮಿ ಯನ್ನು ಧರಿಸಿ ಪೋಷಿಸುತ್ತಿರುವವನು.

ನಿರುಕ್ತಿ :– ಭಾರಾವತರಣಂ ಕೃತ್ವಾ ಗಾಂ ಧತ್ತೇ ಸ ಮಹೀಧರಃ ||

317) **ಸ. ಸಂ. :–** ಭೂಮಿಯನ್ನು ಧರಿಸಿರುವವನು.

* * *

ಅಚ್ಯುತಃ ಪ್ರಥಿತಃ ಪ್ರಾಣಃ ಪ್ರಾಣದೋ ವಾಸವಾನುಜಃ ।
ಅಪಾಂ ನಿಧಿರಧಿಷ್ಠಾನಮಪ್ರಮತ್ತಃ ಪ್ರತಿಷ್ಠಿತಃ ॥೪೮॥

318) **ಅಚ್ಯುತಃ** = ಸ್ಥಾನ, ಸಂಕಲ್ಪ–ಮುಂತಾದುವುಗಳಿಂದ ಜಾರದವನು.

ಶಂ. ಭಾ. :– ಆರು ಭಾವವಿಕಾರಗಳಿಲ್ಲದವನು. **ಶಾಶ್ವತಂ ಶಿವಮಚ್ಯುತಮ್** (ಮ. ನಾ. ೧೩-೧) ಉತ್ಪತ್ತಿ, ಸ್ಥಿತಿ, ವಿಪರಿಣಾಮ, ಬೆಳವಣಿಗೆ, ಕ್ಷಯ ಮತ್ತು ನಾಶ–ಇವು ಆರು ಭಾವವಿಕಾರಗಳು. ಇವುಗಳಿಲ್ಲದವನು.

320) **ಪ. ಭ. :–** ಇತರ ದೇವತೆಗಳಂತೆ ಸ್ಥಾನ, ಐಶ್ವರ್ಯ ಮುಂತಾದುವುಗಳಿಂದ ಜಾರದವನು ; ಅವತಾರದಶೆಯಲ್ಲಿಯೂ ಅವುಗಳಿಂದ ಜಾರದವನು.

ನಿರುಕ್ತಿ :– **ಚ್ಯವನೋತ್ಪತ್ತಿಯುಕ್ತೇಷು ಬ್ರಹ್ಮೇನ್ದ್ರವರುಣಾದಿಷು ।**
ಯಸ್ಮಾನ್ನ ಚ್ಯವತೇ ಸ್ಥಾನಾತ್ತಸ್ಮಾತ್ಸಙ್ಕೀರ್ತ್ಯತೇಽಚ್ಯುತಃ ॥
ಸಾಧರ್ಮ್ಯೇಣಾವತಾರೇಽಪಿ ಬ್ರಹ್ಮೇನ್ದ್ರವರುಣಾದಿಭಿಃ ।
ನ ಸ್ವೈಶ್ವರ್ಯಾತ್ಪ್ರಚ್ಯುತೋ ಯಃ ಸೋಽಚ್ಯುತಃ ಪರಿಕೀರ್ತಿತಃ॥

318) **ಸ. ಸಂ. :–** ಚ್ಯುತಿಯಿಲ್ಲದವನು.

* * *

319) **ಪ್ರಥಿತಃ** = ಪ್ರಸಿದ್ಧನಾದವನು.

ಶಂ. ಭಾ. :– ಜಗತ್ತಿನ ಸೃಷ್ಟಿಯೇ ಮುಂತಾದ ತನ್ನ ಕರ್ಮಗಳಿಂದ ಪ್ರಸಿದ್ಧನಾದವನು.

321) **ಪ. ಭ. :–** 'ಅಚ್ಯುತ' ಎಂಬುದಾಗಿ ಪ್ರಸಿದ್ಧನಾದವನು.
ನಿರುಕ್ತಿ :– **ಅಚ್ಯುತತ್ವೇನ ಲೋಕೇಽಸಿನ್ಪ್ರಖ್ಯಾತಃ ಪ್ರಥಿತಃ ಸ್ಮೃತಃ ॥**

319) **ಸ. ಸಂ. :–** ಪ್ರಸಿದ್ಧನಾದವನು.

* * *

320) **ಪ್ರಾಣಃ** = ಪ್ರಾಣರೂಪಿಯಾದವನು.

ಶಂ. ಭಾ. :– ಸೂತ್ರಾತ್ಮನಾಗಿ (ಹಿರಣ್ಯಗರ್ಭರೂಪನಾಗಿ) ಪ್ರಜೆಗಳಿಗೆ ಜೀವನವನ್ನು ಕೊಡುವವನು. **ಪ್ರಾಣೋ ವಾ ಅಹಮಸ್ಮಿ** (ಋಗ್ವೇದ)

322) **ಪ. ಭ. :–** ಆಶ್ರಯಿಸಿ ಜೀವಿಸಿರುವ ಎಲ್ಲ ಪುರುಷರಿಗೂ ಜೀವಿತರೂಪನಾಗಿರುವವನು. **ಅಮೃತಂ ದೇವಾನಾಮಾಯುಃ ಪ್ರಜಾನಾಂ** (ತೈ. ಆ.) **ಪ್ರಾಣಸ್ತಥಾನುಗಮಾತ್** (ಬ್ರ. ಸೂ. ೧-೧-೨೮)
ನಿರುಕ್ತಿ :– **ಪುಂಸಾಂ ಜೀವಿತರೂಪತ್ವಾತ್ಪ್ರಾಣ ಇತ್ಯಭಿಧೀಯತೇ ॥**

320) **ಸ. ಸಂ. :–** ಶ್ರೇಷ್ಠರಾದವರನ್ನು ತನ್ನ ಲೋಕಕ್ಕೆ ಒಯ್ಯುವವನು ; ಸರಸ್ವತಿಗಿಂತಲೂ ಶ್ರೇಷ್ಠನಾದವನು.

* * *

321) **ಪ್ರಾಣದಃ** = ಬಲವನ್ನು ಕೊಡುವವನು.

ಶಂ. ಭಾ. :– ದೇವತೆಗಳಿಗೆ ಪ್ರಾಣವನ್ನು ಕೊಡುವವನು ; ಅಸುರರ ಪ್ರಾಣವನ್ನು ನಾಶಮಾಡುವವನು.

323) **ಪ. ಭ. :–** (ಸಮುದ್ರಮಥನದ ಸಮಯದಲ್ಲಿ ಕೂರ್ಮರೂಪಿಯಾಗಿ) ದೇವತೆಗಳಿಗೆ ಬಲವನ್ನು ಕೊಟ್ಟವನು.
ನಿರುಕ್ತಿ :– **ಮರುತಾಂ ಬಲದಾನಾದ್ಧಿ ಸಮುದ್ರಮಥನೇ ಭೃಶಮ್ ।**
ಪ್ರಾಣದಶ್ಚ ಸಮುದ್ದಿಷ್ಟಃ ಕೂರ್ಮರೂಪತಯಾ ಹಿ ಸಃ ॥

321) **ಸ. ಸಂ. :–** ಪ್ರಾಣಗಳನ್ನು ಕೊಡುವವನು.

* * *

322) **ವಾಸವಾನುಜಃ** = ಇಂದ್ರನಿಗೆ ತಮ್ಮನಾದ ಉಪೇಂದ್ರನು.

ಶಂ. ಭಾ. :– ಕಶ್ಯಪನಿಂದ ಅದಿತಿಯಲ್ಲಿ ಇಂದ್ರನಿಗೆ ತಮ್ಮನಾಗಿ ಅವತರಿಸಿದವನು.

324) **ಪ. ಭ. :–** ಅಮೃತವನ್ನು ಬಯಸಿದ ಅಥವಾ ಬಲಿಯ ಆಕ್ರ

ಮಣದಿಂದ ಪೀಡಿತನಾಗಿದ್ದ ಇಂದ್ರನಿಗೋಸ್ಕರ ಅವನಿಗೆ ತಮ್ಮನಾಗಿ ಅವತರಿಸಿದವನು.

ನಿರುಕ್ತಿ :– ವಾಸವಸ್ಯಾನುಜತ್ವೇನ ಜಾತತ್ವಾದ್ವಾಸವಾನುಜಃ ॥

322) **ಸ. ಸಂ. :–** ಇಂದ್ರನಿಗೆ ತಮ್ಮನಾದವನು.

* * *

323) **ಅಪಾಂನಿಧಿಃ =** ಸಮುದ್ರರೂಪಿಯಾದವನು ; ಕರ್ಮಗಳಿಗೆ ಆಶ್ರಯನಾದವನು.

ಶಂ. ಭಾ. :– ಸಮುದ್ರರೂಪಿಯಾದವನು ; **ಸರಸಾಮಸ್ಮಿ ಸಾಗರಃ ।** (ಗೀತಾ ೧೦-೨೪)

325) **ಪ. ಭ. :–** ಕಡೆಯಲ್ಪಡುತ್ತಿದ್ದ ಮಹಾಸಮುದ್ರವನ್ನು ಧರಿಸಿದವನು.

ನಿರುಕ್ತಿ :– ಅಪಾಂನಿಧಿರ್ಮಥ್ಯಮಾನಮಹಾರ್ಣವವಿಧಾರಣಾತ್ ॥

323) **ಸ. ಸಂ. :–** ದೇವತೆಗಳಿಗೆ ಆಶ್ರಯನಾದವನು ; **ಆಪೋ ವೈ ಸರ್ವಾ ದೇವತಾಃ (ಶ್ರುತಿಃ)**

* * *

324) **ಅಧಿಷ್ಠಾನಂ =** ಎಲ್ಲಕ್ಕೂ ಆಶ್ರಯನಾದವನು.

ಶಂ. ಭಾ. :– ಎಲ್ಲ ಭೂತಗಳಲ್ಲಿಯೂ ಉಪಾದಾನಕಾರಣನಾಗಿ ಇರುವವನು ; **ಮತ್ಸ್ಥಾನಿ ಸರ್ವಭೂತಾನಿ** (ಗೀತಾ. ೯-೪)

326) **ಪ. ಭ. :–** (ಸಮುದ್ರಮಥನಕಾಲದಲ್ಲಿ ತಿರುಗುತ್ತಿದ್ದ ಮಂದರ ಪರ್ವತಕ್ಕೆ) ಆಶ್ರಯನಾದವನು. **ಮನ್ದರಾದ್ರೇರಧಿಷ್ಠಾನಂ ಭ್ರಮತೋಽಭೂನ್ಮಹಾಮುನೇ ।** (ವಿ. ಪು. ೧-೯-೮೮)

ನಿರುಕ್ತಿ :– ಭ್ರಮಮಾಣಂ ಮನ್ದರಾದ್ರಿಂ ಧೃತವಾನ್ಯೋ ಮಹಾಜಲೇ ।
ಅಧಿಷ್ಠಾನಂ ತಮೇವಾಹುಃ ಅಧಿಷ್ಠಾನಪ್ರದೋ ಮನುಃ ॥

'ಓಂ ಅಧಿಷ್ಠಾನಾಯ ನಮಃ'–ಎಂಬ ನಾಮಮಂತ್ರಜಪವು ಆಶ್ರಯಪ್ರದವಾದುದು.

324) ಸ. ಸಂ. :– ಆಶ್ರಯನಾದವನು.

* * *

325) ಅಪ್ರಮತ್ತಃ = ಸಾವಧಾನ (ಜಾಗರೂಕ) ನಾಗಿರುವವನು.

ಶಂ. ಭಾ. :– ಕರ್ಮಗಳಿಗೆ ಅನುರೂಪವಾದ ಫಲವನ್ನು ಕೊಡುವ ವಿಷಯದಲ್ಲಿ ಅಜಾಗರೂಕನಾಗದೇ ಇರುವವನು.

327) ಪ. ಭ. :– (ಭಕ್ತರ ರಕ್ಷಣೆಯ ವಿಷಯದಲ್ಲಿ) ಅತ್ಯಂತ ಸಾವಧಾನನಾಗಿರುವವನು.

ನಿರುಕ್ತಿ :– ಅತ್ಯನ್ತಾವಹಿತಪ್ರಾಣೋ ಹ್ಯಪ್ರಮತ್ತಃ ಪ್ರಕೀರ್ತಿತಃ ॥

325) ಸ. ಸಂ. :– ಸ್ವಲ್ಪವೂ ಮತ್ತನಾಗದೇ ಇರುವವನು.

* * *

326) ಪ್ರತಿಷ್ಠಿತಃ = ತನ್ನ ಮಹಿಮೆಯಲ್ಲಿ ನೆಲೆಗೊಂಡವನು.

ಶಂ. ಭಾ. :– ತನ್ನ ಮಹಿಮೆಯಲ್ಲಿ ನೆಲೆಗೊಂಡವನು ; ಸ ಭಗವಃ ಕಸ್ಮಿನ್ಪ್ರತಿಷ್ಠಿತ ಇತಿ ಸ್ವೇ ಮಹಿಮ್ನಿ (ಛಾಂ. ೭-೨೪-೧)

328) ಪ. ಭ. :– ಇತರರ ಅಪೇಕ್ಷೆಯಿಲ್ಲದೇ ತನ್ನ ಮಹಿಮೆಯಲ್ಲಿ ನೆಲೆಗೊಂಡವನು. ಸ್ವೇ ಮಹಿಮ್ನಿ ಸ್ಥಿತಂ ದೇವಂ । (ವಿ. ಧ. ೭೨-೨)

ನಿರುಕ್ತಿ :– ಸ್ವೇ ಮಹಿಮ್ನಿ ಸ್ಥಿತೋ ಯಸ್ತು ಸ ಪ್ರತಿಷ್ಠಿತ ಉಚ್ಯತೇ ॥

326) ಸ. ಸಂ. :– ಪ್ರತಿಷ್ಠೆಯುಳ್ಳವನು.

* * *

ಸ್ಕನ್ದಃ ಸ್ಕನ್ದಧರೋ ಧುರ್ಯೋ ವರದೋ ವಾಯುವಾಹನಃ ।
ವಾಸುದೇವೋ ಬೃಹದ್ಭಾನುರಾದಿದೇವಃ ಪುರನ್ದರಃ ॥೪೯॥

327) ಸ್ಕನ್ದಃ = ಷಣ್ಮುಖರೂಪಿಯಾದವನು.

ಶಂ. ಭಾ. :– ಅಮೃತರೂಪದಿಂದ ಸ್ರವಿಸುವವನು ; ವಾಯುರೂಪ ದಿಂದ ಶೋಷಿಸುವವನು.

329) ಪ. ಭ. :– ಅಸುರರೇ ಮುಂತಾದವರನ್ನು ಶೋಷಿಸುವವನು.

ನಿರುಕ್ತಿ :– ಅಸುರಾದೀನ್ ಶೋಷಯತಿ ಸ್ಕನ್ದಃ ಸ್ಕನ್ದಯತೀತಿ ಯಃ ॥

327) **ಸ. ಸಂ. :–** ಪ್ರವಿಸುವವನು.

*　　　　*　　　　*

328) **ಸ್ಕನ್ದಧರಃ=** ಷಣ್ಮುಖನನ್ನು ಧರಿಸಿ ಪೋಷಿಸುವವನು.

ಶಂ. ಭಾ. :– ಸ್ಕಂದವನ್ನು (ಧರ್ಮಮಾರ್ಗವನ್ನು) ಧರಿಸಿ ಪೋಷಿಸುವವನು.

330) **ಪ. ಭ. :–** ಅಸುರರನ್ನು ಶೋಷಣೆಮಾಡುವ ದೇವಸೇನಾಪತಿಯಾದ ಷಣ್ಮುಖನನ್ನು ತನ್ನ ವಿಭೂತಿಯನ್ನಾಗಿ ಧರಿಸಿರುವವನು.

ನಿರುಕ್ತಿ :– ಸ ಸ್ಕನ್ದಧರ ಆಖ್ಯಾತಃ ಷಡಾನನವಿಧಾರಣಾತ್ ॥

328) **ಸ. ಸಂ. :–** ಷಣ್ಮುಖನನ್ನು ಧರಿಸಿದವನು.

*　　　　*　　　　*

329) **ಧುರ್ಯಃ =** ಭಾರವನ್ನು ಹೊತ್ತಿರುವವನು.

ಶಂ. ಭಾ. :– ಸಮಸ್ತಭೂತಗಳ ಜನ್ಮವೇ ಮುಂತಾದ ಭಾರವನ್ನು ಹೊತ್ತಿರುವವನು.

331) **ಪ. ಭ. :–** ಭುವನದ (ಪ್ರಪಂಚದ) ಭಾರವನ್ನು ಹೊತ್ತಿರುವವನು.

ನಿರುಕ್ತಿ :– ಭುವನಂ ಧೃತವಾನ್ಧುರ್ಯಃ.......... ॥

329) **ಸ. ಸಂ. :–** ಹೊರೆಯನ್ನು ಹೊತ್ತಿರುವವನು.

*　　　　*　　　　*

330) **ವರದಃ =** ವರಗಳನ್ನು ದಯಪಾಲಿಸುವವನು.

ಶಂ. ಭಾ. :– ಅಭೀಷ್ಟವಾದ ವರಗಳನ್ನು ದಯಪಾಲಿಸುವವನು ; ಯಜಮಾನರೂಪದಿಂದ ದಕ್ಷಿಣೆಯಾಗಿ **ಗೌರ್ವೈ** ವರಃ (ಎಂಬ ಶ್ರುತಿಯಂತೆ) ವರವನ್ನು (ಗೋವನ್ನು) ಕೊಡುವವನು.

332) **ಪ. ಭ. :–** ಅಭೀಷ್ಟವನ್ನು ದಯಪಾಲಿಸುವವನು.

ನಿರುಕ್ತಿ :– .... ವರದೋಽಭೀಷ್ಟದಃ ಸ್ಮೃತಃ ॥

330) **ಸ. ಸಂ. :–** ಮೋಕ್ಷವನ್ನು ಕೊಡುವವನು ; ರುದ್ರಾದಿಗಳು ಕೊಟ್ಟ ವರಗಳನ್ನು ಖಂಡಿಸುವವನು ; **ಅವರದಃ =** ಶೂರ್ಪಣಖಿಯೇ

ಮುಂತಾದ ರಾಕ್ಷಸಸ್ತ್ರೀಯರನ್ನು ಮೂಗು ಕತ್ತರಿಸುವುದೇ ಮುಂತಾದ ರೂಪದಲ್ಲಿ ಖಂಡಿಸುವವನು ; ದೈತ್ಯಹಿಂಸಕವಾದ ಹಲ್ಲುಗಳುಳ್ಳವನು.

*   *   *

331) **ವಾಯುವಾಹನಃ** = ಪ್ರಾಣವಾಯುಗಳನ್ನೂ, ಸಪ್ತಮರುತ್ತುಗಳನ್ನೂ ನಡೆಸುವವನು ; ವಾಯುಪುತ್ರನನ್ನು (ಹನುಮಂತನನ್ನು) ವಾಹನವನ್ನಾಗಿ ಹೊಂದಿದವನು.

ಶಂ. ಭಾ. :– ಆವಹ-ಪ್ರವಹ-ಅನುವಹ-ಸಂವಹ-ವಿವಹ-ಪರಾವಹ- ಪರಿವಹಗಳೆಂಬ ಸಪ್ತವಾಯುಗಳನ್ನು ನಡೆಸುವವನು.

333) **ಪ. ಭ. :–** ಜಗತ್ಪ್ರಾಣನಾದ ವಾಯುವನ್ನು ವಹಿಸುವವನು.
ನಿರುಕ್ತಿ **:– ಜಗತ್ಪ್ರಾಣಂ ವಹತಿ ಯೋ ವಾಯುವಾಹನ ಉಚ್ಯತೇ ॥**

331) **ಸ. ಸಂ. :–** ಜೀವಗಳನ್ನು ಒಯ್ಯುವವನು ; ವಾಯುವನ್ನು ವಾಹನವನ್ನಾಗಿ ಹೊಂದಿರುವವನು.

*   *   *

332) **ವಾಸುದೇವಃ** = ಸರ್ವಭೂತನಿವಾಸಿಯಾದ ದೇವನು ; ಜೀವಗಳಿಗೆ ಸ್ವಾಮಿಯಾದವನು ; ವಸುದೇವನ ಮಗನಾಗಿ ಅವತರಿಸಿದವನು.

ಶಂ. ಭಾ. :– ವಾಸುವಾಗಿರುವ ದೇವನು. 'ವಾಸು' ಎಂದರೆ ವಾಸಮಾಡುವವನು. ಎಲ್ಲವನ್ನೂ ಆಚ್ಛಾದನೆಮಾಡುವವನು. 'ದೇವ'–ಎಂದರೆ ಕ್ರೀಡಿಸುವವನು ; ಜಯಿಸಲು ಬಯಸುವವನು ; ವ್ಯವಹರಿಸುವವನು ; ಪ್ರಕಾಶಿಸುವವನು ; ಸ್ತುತಿಸಲ್ಪಡುವವನು ; ಹೋಗುವವನು. ವಾಸುವಾದ ದೇವನು ವಾಸುದೇವನು.

ವಾಸನಾದ್ವಾಸುದೇವಸ್ಯ ವಾಸಿತಂ ತೇ ಜಗತ್ತ್ರಯಮ್ ॥
ಛಾದಯಾಮಿ ಜಗತ್ಸರ್ವಂ ಭೂತ್ವಾ ಸೂರ್ಯ ಇವಾಂಶುಭಿಃ ।
ಸರ್ವಭೂತಾಧಿವಾಸಶ್ಚ ವಾಸುದೇವಸ್ತತಃ ಸ್ಮೃತಃ ॥

(ಮ. ಭಾ. ಶಾಂ. ೩೪೧-೪೧)

334) **ಪ. ಭ. :–** ತಾಯಿಯಂತೆ ತನ್ನಲ್ಲಿ ವಿಶ್ವವನ್ನು ವಾಸಮಾಡಿಸಿಕೊಂಡಿರುವವನು ; ರೆಕ್ಕೆಗಳಿಂದಲೋಪಾದಿಯಲ್ಲಿ ವಿಶ್ವವನ್ನು ಆಚ್ಛಾದಿಸಿರುವವನು ; 'ವಾಸು' ಎಂದರೆ ವಿಶ್ವದಲ್ಲಿ ವಾಸಮಾಡುವವನು. **ದೇವಃ**–ಎಂದರೆ

ಆಟವಾಡುವವನು ; ಗೆಲ್ಲಲು ಬಯಸುವವನು ; ಪ್ರಕಾಶಿಸುತ್ತಿರುವವನು ; ಸ್ತುತಿಸಲ್ಪಡುವವನು ಮತ್ತು ಹೋಗುವವನು.

ನಿರುಕ್ತಿ :– ಸರ್ವಭೂತಾನ್ವಾಸಯತಿ ವಾಸುಃ ಸ ಪರಿಕೀರ್ತಿತಃ ।
ದಿವುಧಾತೋರಪಿ ಕ್ರೀಡಾದ್ಯರ್ಥಕತ್ವಾದ್ವಿಶೇಷತಃ ।
ವಾಸುಶ್ಚ ದೇವಶ್ಚೇತ್ಯೇಷ ವಾಸುದೇವಃ ಪ್ರಕೀರ್ತಿತಃ ॥
ಸರ್ವಭೂತೇಷ್ವಪಿ ವಸನ್ಸ್ವಸ್ಮಿನ್ಭೂತಾನಿ ವಾಸಯನ್ ॥
ಯಃ ಕ್ರೀಡತಿ ಮುದಾ ಯದ್ವಾ ವಾಸುದೇವಃ ಸ ಉಚ್ಯತೇ ।
ಸರ್ವತ್ರಾಸೌ ಸಮಸ್ತಂ ಚ ವಸತ್ಯತ್ರೇತಿ ವೈ ಯತಃ ॥
ತತಃ ಸ ವಾಸುದೇವೇತಿ ವಿದ್ವದ್ಭಿಃ ಪರಿಪಠ್ಯತೇ ॥

332) ಸ. ಸಂ. :– ವಸುದೇವನ ಮಗನು. ವಾ = ಜ್ಞಾನವುಳ್ಳವನು. ಸು = ಸೃಷ್ಟಿಮಾಡುವವನು ಮತ್ತು ದೇವ = ಕ್ರೀಡೆ ಇತ್ಯಾದಿಗಳುಳ್ಳವನು. ಎಲ್ಲ ಕಡೆಗಳಲ್ಲಿಯೂ ವಾಸಮಾಡುವವನು ; ಎಲ್ಲರ ವಾಸಕ್ಕೂ ಅಧಿಕರಣ ವಾಗಿರುವವನು ವಾಸುವು. ಎಲ್ಲ ಕಡೆಗಳಲ್ಲಿಯೂ ಪ್ರಕಾಶಿಸುವವನು ದೇವನು. ಎಲ್ಲವನ್ನೂ ವ್ಯಾಪಿಸುವವನು ಅಥವಾ ಅವಿದ್ಯೆಯೇ ಮುಂತಾದು ವುಗಳಿಂದ ಮುಚ್ಚುವವನು ವಾಸು. ಅಂತಹ ದೇವನು–ವಾಸುದೇವನು. ಬಲವುಳ್ಳವನು ; ಪ್ರಾಣರೂಪನಾದವನು ಮತ್ತು ದಾನಮಾಡುವವನು.

* * *

333) ಬೃಹದ್ಭಾನುಃ = ದೊಡ್ಡ ಕಿರಣಗಳುಳ್ಳವನು ; ಮಹಾಸೂರ್ಯ ರೂಪಿಯು.

ಶಂ. ಭಾ. :– ಸೂರ್ಯ-ಚಂದ್ರರನ್ನು ಹೊಂದುವ ದೊಡ್ಡ ಕಿರಣ ಗಳುಳ್ಳವನಾಗಿ ಆ ಕಿರಣಗಳಿಂದ ಜಗತ್ತನ್ನು ಬೆಳಗಿಸುವವನು.

ನಿರುಕ್ತಿ :– ಬೃಹನ್ತೋ ಭಾನವೋ ಯಸ್ಯ ಚನ್ದ್ರಸೂರ್ಯಾದಿಗಾಮಿನಃ ।
ತೈರ್ವಿಶ್ವಂ ಭಾಸಯತಿ ಯಃ ಸ ಬೃಹದ್ಭಾನುರುಚ್ಯತೇ ॥

335) ಪ. ಭ. :– ವಿಶ್ವವನ್ನು ಬೆಳಗಿಸುವ ನಿತ್ಯಪ್ರಕಾಶವುಳ್ಳ ದೊಡ್ಡ ಕಿರಣಗಳುಳ್ಳವನು.

ನಿರುಕ್ತಿ :– ಬೃಹನ್ತೋ ಭಾನವೋ ಯಸ್ಯ ಸ ಬೃಹದ್ಭಾನುರುಚ್ಯತೇ ॥

33) ಸ. ಸಂ. :– ದೊಡ್ಡ ಕಿರಣಗಳುಳ್ಳವನು.

* * *

334) ಆದಿದೇವಃ = ಮೊದಲನೆಯ ದೇವತೆಯು ; ಎಲ್ಲಕ್ಕೂ ಆದಿ ಕಾರಣನಾದ ದೇವನು.

ಶಂ. ಭಾ. :– ಎಲ್ಲಕ್ಕೂ ಕಾರಣನಾಗಿರುವ ದೇವನು. ದೇವ–ಎಂದರೆ ಪ್ರಕಾಶನವೇ ಮುಂತಾದ ಗುಣಗಳುಳ್ಳವನು.

336) ಪ. ಭ. :– ಎಲ್ಲಕ್ಕೂ ಪ್ರಥಮಬೀಜವಾಗಿರುವ ದೇವನು. ದೇವ–ಎಂದರೆ ತನ್ನ ಅಂಶವಾಗಿರುವ ವಿಭೂತಿಗಳೊಡನೆ ಕ್ರೀಡಿಸುವವನು.

ಸಂಪ್ರಯೋಜ್ಯ ವಿಯೋಜ್ಯಾಯಂ ಕಾಮಕಾರಕರಃ ಪ್ರಭುಃ । ಕ್ರೀಡತೇ ಭಗವಾನ್

ನಿರುಕ್ತಿ :– ಯಃ ಕ್ರೀಡತೀತ್ಯಾದಿದೇವಃ ಪಾದಾತ್ಮಕವಿಭೂತಿಭಿಃ ॥

334) ಸ. ಸಂ. :– ಕಾರಣಭೂತನಾಗಿರುವ ದೇವನು.

* * *

335) ಪುರನ್ದರಃ = ತ್ರಿಪುರಾಸುರವಿಧ್ವಂಸಕನು ; ಇಂದ್ರರೂಪಿಯಾದ ವನು.

ಶಂ. ಭಾ. :– ದೇವಶತ್ರುಗಳ ನಗರವನ್ನು ಧ್ವಂಸಮಾಡುವವನು.

337) ಪ. ಭ. :– ತ್ರಿಪುರಾಸುರನಗರಗಳನ್ನೂ ಮತ್ತು ಆಧಿದೈವಿಕ ವಾದ ಭಯಗಳನ್ನೂ ಭೇದಿಸುವವನು.

ನಿರುಕ್ತಿ :– ಪುರಂದರ ಇತಿ ಖ್ಯಾತಸ್ತ್ರಿಪುರಾಣಾಂ ವಿದಾರಣಾತ್ ॥

335) ಸ. ಸಂ. :– ಪುರವನ್ನು ಧ್ವಂಸಮಾಡಿದವನು.

* * *

ಅಶೋಕಸ್ತಾರಣಸ್ತಾರಃ ಶೂರಃ ಶೌರಿರ್ಜನೇಶ್ವರಃ ।
ಅನುಕೂಲಃ ಶತಾವರ್ತಃ ಪದ್ಮೀ ಪದ್ಮನಿಭೇಕ್ಷಣಃ ॥೩೦॥

336) ಅಶೋಕಃ = ಶೋಕರಹಿತನಾದವನು.

ಶಂ. ಭಾ. :– ಮುಪ್ಪು-ಮೃತ್ಯು, ಶೋಕ-ಮೋಹ, ಹಸಿವು-ಬಾಯಾರಿಕೆ–ಎಂಬ ಆರು ಅಲೆಗಳಿಲ್ಲದವನು.

338) **ಪ. ಭ. :–** ಆಧ್ಯಾತ್ಮಿಕವಾದ ಶೋಕ-ಮೋಹಾದಿಗಳನ್ನು ನಾಶ ಮಾಡುವವನು.

ನಿರುಕ್ತಿ :– ಅಶೋಕಃ ಶೋಕಮೋಹಾದಿನಾಶಕಃ ಪರಿಕೀರ್ತಿತಃ ॥

336) **ಸ. ಸಂ. :–** ಶೋಕವಿಲ್ಲದವನು.

* * *

337) **ತಾರಣಃ** = ದಾಟಿಸುವವನು (ಸಂಸಾರಸಮುದ್ರವನ್ನು) ದಾಟಿಸುವವನು ; ಎಲ್ಲ ದುರ್ಗಗಳನ್ನೂ ದಾಟಿಸುವವನು.

ಶಂ. ಭಾ. :– ಸಂಸಾರಸಾಗರವನ್ನು ದಾಟಿಸುವವನು.

339) **ಪ. ಭ. :–** ಶತ್ರುಗಳು, ಕಳ್ಳರು, ವ್ಯಾಧಿಗಳು–ಇವೇ ಮುಂತಾದ ಆಧಿಭೌತಿಕಭಯಗಳನ್ನು ದಾಟಿಸುವವನು.

ನಿರುಕ್ತಿ :– ಯಸ್ತಾರಣಸ್ತಾರಯತಿ ವೈರಿವ್ಯಾಧ್ಯಾದಿಭೀತಿತಃ ॥

337) **ಸ. ಸಂ. :–** ದಾಟಿಸುವವನು ; ಸೂರ್ಯಮಂಡಲದಲ್ಲಿರುವವನು ; ಸೂರ್ಯವಂಶದಲ್ಲಿ ಹುಟ್ಟಿದವನು.

* * *

338) **ತಾರಃ** = ಉಚ್ಚನಾದವನು ; ಪ್ರಣವಸ್ವರೂಪಿಯು. **ಓಂಕಾರಃ ಪ್ರಣವಸ್ತಾರಃ** (ತಂತ್ರಶಾಸ್ತ್ರ)

ಶಂ. ಭಾ. :– ಗರ್ಭ-ಜನ್ಮ-ಜರಾ-ಮೃತ್ಯುರೂಪವಾದ ಭಯಗಳಿಂದ ದಾಟಿಸುವವನು.

340) **ಪ. ಭ. :–** ಗರ್ಭ-ಜನ್ಮ-ಜರಾ-ಮರಣರೂಪವಾದ ಸಂಸಾರ ಸಾಗರಮಹಾಭಯದಿಂದ ಕಾಪಾಡುವವನು.

ನಿರುಕ್ತಿ :– ತಾರಃ ಸಂಸಾರಭಯತೋ ನಿತ್ಯಂ ತಾರಯತೀತಿ ಸಃ ॥

338) **ಸ. ಸಂ. :–** ದಾಟಿಸುವವನು.

* * *

339) **ಶೂರಃ** = ಶೂರನು.

ಶಂ. ಭಾ. :– ವಿಕ್ರಮವುಳ್ಳವನು.

341) **ಪ. ಭ. :–** ಶತ್ರುಗಳನ್ನು ಜಯಿಸಲು ಇಚ್ಛೆಯುಳ್ಳ ಸಮರ್ಥನಾದ ಜಯಶಾಲಿಯು.

ನಿರುಕ್ತಿ :– **ವಿಜಿಗೀಷುತಯಾ ಜೈತ್ರಃ ಸಮರ್ಥಃ ಶೂರ ಉಚ್ಯತೇ ॥**

339) **ಸ. ಸಂ. :–** ಯುದ್ಧಕ್ಕೆ ಹೋಗುವವನು ; ಭಯಪೀಡಿತರಿಂದ ಹೊಂದಲ್ಪಡುವವನು ; ಸುಖವನ್ನು ಅಂಗೀಕರಿಸುವವನು.

*   *   *

340) **ಶೌರಿಃ** = ಶೂರನಾದ ವಸುದೇವನ ಮಗನು ; ಶೂರವಂಶದಲ್ಲಿ ಹುಟ್ಟಿದವನು.

ಶಂ. ಭಾ. :– ವಸುದೇವಪುತ್ರನು.

342) **ಪ. ಭ. :–** ವಸುದೇವನ ಮಗನು.

ನಿರುಕ್ತಿ :– **ಶೂರಸ್ಯ ವಸುದೇವಸ್ಯ ಯೋಽಪತ್ಯಂ ಶೌರಿರುಚ್ಯತೇ ॥**

340) **ಸ. ಸಂ. :–** ಶೂರನ ಗೋತ್ರದಲ್ಲಿ ಹುಟ್ಟಿದವನು.

*   *   *

341) **ಜನೇಶ್ವರಃ** = ಎಲ್ಲ ಜಂತುಗಳಿಗೂ ಈಶ್ವರನಾದವನು.

ಶಂ. ಭಾ. :–ಹುಟ್ಟುವ ಸ್ವಭಾವದ ಎಲ್ಲ ಜೀವರುಗಳಿಗೂ ಒಡೆಯನು.

343) **ಪ. ಭ. :–** ಎಲ್ಲವನ್ನೂ ತೋಯಿಸುವ ಉಜ್ಜ್ವಲವಾದ ಐಶ್ವರ್ಯಮಹಾಸಮೂಹವುಳ್ಳವನಾದುದರಿಂದ ಜನರಿಗೆ ಈಶ್ವರನಾದವನು.

ನಿರುಕ್ತಿ :– **ಪ್ಲವನೋಜ್ಜ್ವಲನೈಶ್ವರ್ಯಮಹೌಘಃ ಸ್ಯಾಜ್ಜನೇಶ್ವರಃ ॥**

340) **ಸ. ಸಂ. :–** ಜನರಿಗೆ ಈಶ್ವರನು ; ಹುಟ್ಟಿಲ್ಲದವನು ಮತ್ತು ಲಕ್ಷ್ಮಿಗ್ರೆ ಪತಿಯಾದವನು.

*   *   *

342) **ಅನುಕೂಲಃ** = (ಭಕ್ತರಿಗೆ) ಅನುಕೂಲನಾಗಿರತಕ್ಕವನು ; ಸರ್ವಸುಹೃತ್ತಾಗಿರುವುದರಿಂದ ಎಲ್ಲರಿಗೂ ಅನುಕೂಲನಾಗಿರತಕ್ಕವನು.

ಶಂ. ಭಾ. :– ಎಲ್ಲರಿಗೂ ಆತ್ಮನಾಗಿರುವುದರಿಂದ ಎಲ್ಲರಿಗೂ ಅನುಕೂಲನಾಗಿರುವವನು. (ತಮಗೆ ತಾವೇ ಯಾರೂ ಪ್ರತಿಕೂಲವನ್ನು ಮಾಡಿಕೊಳ್ಳುವುದಿಲ್ಲವಷ್ಟೆ!)

344) **ಪ. ಭ. :–** ಸ್ವಾಭಾವಿಕವಾಗಿ ಮಹತ್ತ್ವವನ್ನು ಹೊಂದಿರುವುದರಿಂದ ವಿಸ್ಮಯ-ಮದ-ಮಾನಗಳಿಲ್ಲದವನಾಗಿ ಭಕ್ತರಿಗೆ ಅನುಕೂಲನಾಗಿರುವವನು ; ತೀರಕ್ಕೆ ಅನುಸರಿಸಿರುವವನು ; ತನ್ನ ಭಕ್ತರಿಗೆ ಭವ್ಯನಾದವನು.

ವೀರ್ಯವಾನ್ನ ಚ ವೀರ್ಯೇಣ ಮಹತಾ ಸ್ವೇನ ವಿಸ್ಮಿತಃ ||

(ರಾಮಾಯಣ)

ಹಸ್ತಾವಲಮ್ಬಕೋ ಹ್ಯೇಕೋ ಭಕ್ತಿಕ್ರೀತೋ ಜನಾರ್ದನಃ

(ವಿ.ಧ.೩-೨೩)

ನಿರುಕ್ತಿ :– **ಸ್ವಭಾವತೋ ಮಹತ್ತ್ವೇಽಪಿ ಮದವಿಸ್ಮಯವರ್ಜನಾತ್ |**
ಭಕ್ತೈಕಪ್ರವಣೋ ನಿತ್ಯಮನುಕೂಲ ಇತಿ ಸ್ಮೃತಃ ||

342) **ಸ. ಸಂ. :–** ಭಕ್ತರಿಗೆ ಹಿತವನ್ನುಂಟುಮಾಡುವವನು ; ಗಂಗೆಯೇ ಮುಂತಾದ ತೀರ್ಥಗಳ ತೀರವನ್ನು ಅನುಸರಿಸಿ ಇರುವವನು.

ಜಲಾಶಯಂ ಸಮಾರಭ್ಯ ಯಾವದ್ಧಸ್ತಚತುಷ್ಟಯಮ್ |
ತಾವನ್ನಾರಾಯಣಕ್ಷೇತ್ರಂ ತತ್ರ ಸನ್ನಿಹಿತೋ ಹರಿಃ || (ಸ್ಮೃತಿಃ)

* * *

343) **ಶತಾವರ್ತಃ** = ಶಿಷ್ಟರಕ್ಷಣೆಗಾಗಿ ನೂರಾರು ಬಾರಿ ಅವತಾರ ಮಾಡುವವನು ; ನೂರಾರು ಮಾಯಾವಿಲಾಸಗಳುಳ್ಳವನು ; ಐಶ್ವರ್ಯ ವಿಲಾಸವುಳ್ಳವನು ; ಅನುಗ್ರಹವಿಲಾಸವುಳ್ಳವನು ; ನೂರಾರು ಸುಳಿಗಳುಳ್ಳ ಮಾಯೆಯುಳ್ಳವನು.

ಶಂ. ಭಾ. :– ಧರ್ಮರಕ್ಷಣೆಗೋಸ್ಕರವಾಗಿ ನೂರಾರು ಬಾರಿ ಅವತರಿಸುವವನು ; ಹೃದಯದಿಂದ ಹೊರಡುವ ನೂರು ನಾಡಿಗಳಲ್ಲಿ ಪ್ರಾಣರೂಪದಿಂದ ಇರುವವನು.

345) **ಪ. ಭ. :–** ಐಶ್ವರ್ಯಗಳ ವಿಲಾಸಗಳುಳ್ಳವನು.

ನಿರುಕ್ತಿ :– **ಐಶ್ವರ್ಯಜೃಮ್ಭಿತಾಭಿಖ್ಯಾ ಆವರ್ತಾ ಯಸ್ಯ ನಿತ್ಯಶಃ |**
ಶತಂ ಸನ್ತಿ ಶತಾವರ್ತೋ ವಸ್ವರ್ಣೋ ಭುಕ್ತಿಮುಕ್ತಿದಃ ||

'**ಓಂ ಶತಾವರ್ತಾಯ ನಮಃ**'–ಎಂಬ ಈ ಮಂತ್ರಜಪವು ಭುಕ್ತಿ-ಮುಕ್ತಿಗಳನ್ನು ಕೊಡುತ್ತದೆ.

343) **ಸ. ಸಂ. :–** (ತತ್ತ್ವದೇವತಾದಿ ರೂಪಗಳಿಂದ) ನೂರಾರು ಅಮೃತಪಾನಯೋಗ್ಯವಾದ ದೇವತಾಗಣಗಳನ್ನು ನಡೆಸುವವನು ; ನೂರಾರು ಜಲವ್ಯಾಪಾರವನ್ನು ಉಂಟುಮಾಡುವವನು.

*   *   *

344) **ಪದ್ಮೀ** = ಕೈಯಲ್ಲಿ ಲೀಲಾಪದ್ಮವುಳ್ಳವನು. (ಶರೀರದಲ್ಲಿರುವ) ಮೂಲಾಧಾರಾದಿ ಪದ್ಮಗಳಲ್ಲಿ ವಾಸಮಾಡುವವನು.

ಶಂ. ಭಾ. :– ಕೈಯಲ್ಲಿ ಪದ್ಮವುಳ್ಳವನು.

346) **ಪ. ಭ. :–** ಲೀಲಾಪದ್ಮವನ್ನು ಸದಾ ಧರಿಸಿರುವವನು. (ಇದು ವಾಸುದೇವನ ರೂಪಾದಿಗಳ ವರ್ಣನೆ. ಈ ಹಿಂದೆ ಗುಣಗಳ ವರ್ಣನೆಯನ್ನು ಮಾಡಿಯಾಗಿದೆ.)

ನಿರುಕ್ತಿ :– **ಗುಣತೋ ವಾಸುದೇವತ್ವಮುಕ್ತಂ ರೂಪಾದಿರುಚ್ಯತೇ ।**
ಲೀಲಾಪದ್ಮಧರೋ ನಿತ್ಯಂ ಪದ್ಮೀತಿ ಪರಿಕೀರ್ತ್ಯತೇ ॥

344) **ಸ. ಸಂ. :–** ಪದ್ಮವುಳ್ಳವನು ; ಪದ್ಮನನ್ನು (ಬ್ರಹ್ಮನನ್ನು) ಪುತ್ರನನ್ನಾಗಿ ಹೊಂದಿರುವವನು.

*   *   *

345) **ಪದ್ಮನಿಭೇಕ್ಷಣಃ** = ಕಮಲನೇತ್ರನು.

ಶಂ. ಭಾ. :– ಪದ್ಮಸದೃಶವಾದ ಕಣ್ಣುಗಳುಳ್ಳವನು.

347) **ಪ. ಭ. :–** ಸ್ವಚ್ಛವಾದ ಪದ್ಮದಂತೆ ಶೀತಳವಾಗಿ ಶ್ರಮವನ್ನು ಪರಿಹಾರಮಾಡುವ ದೃಷ್ಟಿಗಳುಳ್ಳವನು.

ನಿರುಕ್ತಿ :– **ಸ್ವಚ್ಛಾಮ್ಬುಜಾತಸದೃಶಮೀಕ್ಷಣಂ ಶ್ರಮಹಾರಿ ಚ ।**
ಯಸ್ಯಾಸ್ತಿ ಭಕ್ತರಕ್ಷಾಯಾಂ ಸಃ ಸ್ಯಾತ್ಪದ್ಮನಿಭೇಕ್ಷಣಃ ॥

345) **ಸ. ಸಂ. :–** ಕಮಲಸದೃಶವಾದ ಕಣ್ಣುಗಳುಳ್ಳವನು ; ಸೂರ್ಯ-ಚಂದ್ರರೂಪವಾದ ಕಣ್ಣುಗಳುಳ್ಳವನು. **ಭಾಸ್ವಚ್ಚನ್ದ್ರಮಸೌ ಮದೀಯ-ನಯನೇ ॥**

*   *   *

ಪದ್ಮನಾಭೋಽರವಿನ್ದಾಕ್ಷಃ ಪದ್ಮಗರ್ಭಃ ಶರೀರಭೃತ್ ।
ಮಹರ್ದ್ಧಿರ್‌ಋದ್ಧೋ ವೃದ್ಧಾತ್ಮಾ ಮಹಾಕ್ಷೋ ಗರುಡಧ್ವಜಃ ॥

346) **ಪದ್ಮನಾಭಃ** = ಸೃಷ್ಟಿಪದ್ಮವನ್ನು ನಾಭಿಯಂತೆ ಹೊಂದಿರುವವನು ; ಪದ್ಮಸದೃಶವಾದ ಸುಳಿನಾಭಿಯುಳ್ಳವನು.

ಶಂ. ಭಾ. :– ಪದ್ಮದ (ಹೃದಯಪದ್ಮದ) ನಾಭಿಯಲ್ಲಿ (ಕರ್ಣಿಕಾ ಸ್ಥಾನದಲ್ಲಿ) ಇರುವವನು.

348) **ಪ. ಭ. :–** ಪದ್ಮಸದೃಶವಾದ ನಾಭಿಯುಳ್ಳವನು.
ನಿರುಕ್ತಿ :– ನಾಭಿಶ್ಚ ಪದ್ಮವದ್ಯಸ್ಯ ಪದ್ಮನಾಭಃ ಸ ಉಚ್ಯತೇ ॥

346) **ಸ. ಸಂ. :–** ಸೂರ್ಯನಂತೆ ಕಾಂತಿಯುಳ್ಳವನು.

* * *

347) **ಅರವಿನ್ದಾಕ್ಷಃ**= ಕಮಲಸದೃಶವಾದ ಕಣ್ಣುಗಳುಳ್ಳವನು.

ಶಂ. ಭಾ. :– ಕಮಲಸದೃಶವಾದ ಕಣ್ಣುಗಳುಳ್ಳವನು.

349) **ಪ. ಭ. :–**ಕೆಂದಾವರೆಯಂತೆ ಸುಂದರವಾದ ಕಣ್ಣುಗಳುಳ್ಳವನು.
ನಿರುಕ್ತಿ :– ರಕ್ತಾರವಿನ್ದನಯನಸ್ತ್ವರವಿನ್ದಾಕ್ಷ ಈರಿತಃ ॥

347) **ಸ. ಸಂ. :–** ಕಮಲದಂತೆ ಕಣ್ಣುಗಳುಳ್ಳವನು. (**ರವಿನ್ದಃ** = ಅಂಧಕಾರ. **ಅನ್ಧಕಾರೋ ರವಿನ್ದಶ್ಚ ತಿಮಿರಂ ತಮ ಉಚ್ಯತೇ ॥** (**ಉತ್ಪಲಮಾಲಾಕೋಶಃ**) ರವಿಂದವಲ್ಲದ್ದು (ಕತ್ತಲೆಯಲ್ಲದ್ದು) **ಅರವಿನ್ದಂ**= ಜ್ಞಾನ. **ಅರವಿನ್ದಾಕ್ಷಃ** = ಜ್ಞಾನಾತ್ಮಕವಾದ ಕಣ್ಣುಳ್ಳವನು.

* * *

348) **ಪದ್ಮಗರ್ಭಃ** = ಹೃದಯಪದ್ಮದ ಮಧ್ಯದಲ್ಲಿರುವವನು ; ಮೂಲಾಧಾರಾದಿ ಪದ್ಮಗಳಲ್ಲಿ ಉಪಾಸನೆಮಾಡಲ್ಪಡುವವನು.

ಶಂ. ಭಾ. :– ಹೃದಯವೆಂಬ ಪದ್ಮದ ಮಧ್ಯದಲ್ಲಿ ಉಪಾಸ್ಯನಾಗಿರುವವನು.

350) **ಪ. ಭ. :–** ಯೋಗಿಗಳ ಹೃದಯಪುಂಡರೀಕಗಳಲ್ಲಿರುವವನು.

ದಹರಂ ಪುಣ್ಡರೀಕಂ ವೇಶ್ಮ (ಛಾಂ ೮-೧-೧) ದಹ್ರಂ ವಿಪಾಪಂ ಪರಮೇಽಶ್ವಭೂತಂ ಯತ್ಪುಣ್ಡರೀಕಂ I (ಮ. ನಾ)

ನಿರುಕ್ತಿ :– **ಯೋಗಿಹೃತ್ಪುಣ್ಡರೀಕಸ್ಥಃ ಪದ್ಮಗರ್ಭಃ ಸ ಉಚ್ಯತೇ II**

348) **ಸ. ಸಂ. :–** ಪದ್ಮವನ್ನು (ಚತುರ್ಮುಖನನ್ನು) ಗರ್ಭದಲ್ಲಿ ಹೊಂದಿರುವವನು ; ಅನ್ನವನ್ನಾಗಿ ಹೊಂದಿರುವವನು.

* * *

349) **ಶರೀರಭೃತ್** = ಶರೀರಿಯಾಗಿ ಅವತಾರಮಾಡುವವನು. ಶರೀರಗಳನ್ನು ಪೋಷಿಸುವವನು.

ಶಂ. ಭಾ. :– ಅನ್ನರೂಪದಿಂದ ಅಥವಾ ಪ್ರಾಣರೂಪದಿಂದ ದೇಹಿಗಳ ಶರೀರಗಳನ್ನು ಪೋಷಿಸುವವನು ; ತನ್ನ ಮಾಯೆಯಿಂದ ಶರೀರಗಳನ್ನು ಧರಿಸುವವನು.

351) **ಪ. ಭ. :–** ಭಕ್ತರ ಹೃದಯಪದ್ಮಗಳಲ್ಲಿದ್ದು ತನಗೆ ಶರೀರಸದೃಶರಾಗಿರುವ ಉಪಾಸಕರನ್ನು ಪೋಷಿಸುವವನು.

ನಿರುಕ್ತಿ :– **ರಕ್ಷತೇ ಭಗವಾನ್ವಿಷ್ಣುಃ ಭಕ್ತಾನಾತ್ಮಶರೀರವತ್ II**
ಯೋಗಿಹೃತ್ಕಞ್ಜಮಧ್ಯಸ್ಥಃ ಸ್ವದೇಹಂ ತಂ ಬಿಭರ್ತಿ ಯಃ I
ಶರೀರಭೃತ್ಸ ಕಥಿತೋ ವಸ್ವರ್ಣೋ ಭುಕ್ತಿಮುಕ್ತಿದಃ II

'ಓಂ ಶರೀರಭೃತೇ ನಮಃ'–ಎಂಬ ನಾಮಮಂತ್ರಜಪವು ಭುಕ್ತಿ-ಮುಕ್ತಿಗಳನ್ನು ನೀಡುತ್ತದೆ.

349) **ಸ. ಸಂ. :–** ಜಗತ್ತನ್ನು ಧರಿಸಿರುವವನು ; ಅಮೋಘವಾದ ಶರೀರವುಳ್ಳವನೂ, ಪ್ರೇರಕನೂ ಮತ್ತು ಧಾರಕನೂ ಆಗಿರುವವನು.

* * *

350) **ಮಹರ್ದ್ಧಿಃ** = ವಿಭೂತಿಯುಳ್ಳವನು ; ದೊಡ್ಡ ಅಭಿವೃದ್ಧಿಯುಳ್ಳವನು.

ಶಂ. ಭಾ. :– ಹೆಚ್ಚಾದ ವಿಭೂತಿಯುಳ್ಳವನು.

352) **ಪ. ಭ. :–** ಭಕ್ತರ ಯೋಗ-ಕ್ಷೇಮಗಳನ್ನು ವಹಿಸುವ ನಿರಧಿಕವಾದ ವಿಭೂತಿಯುಳ್ಳವನು.

ನಿರುಕ್ತಿ :– **ತದ್ಯೋಗಕ್ಷೇಮವಹನನಿರ್ಮರ್ಯಾದವಿಭೂತಿತಃ ।**
ಮಹರ್ದ್ಧಿಃ................................ ॥

350) **ಸ. ಸಂ. :–** ದೊಡ್ಡ ಸಂಪತ್ತುಳ್ಳವನು ; ಯಜ್ಞವೇ ಮುಂತಾದ ಉತ್ಸವಗಳಿಂದ ಸಂಪತ್ತುಳ್ಳವನು ; ಬಲಿಯು ಮಾಡಿದ ಯಜ್ಞೋತ್ಸವದಲ್ಲಿ ತ್ರಿವಿಕ್ರಮರೂಪದಿಂದ ವೃದ್ಧಿಹೊಂದಿರುವವನು.

*   *   *

351) **ಋದ್ಧಃ** = ಪ್ರಪಂಚರೂಪದಿಂದ ಬೆಳವಣಿಗೆಯನ್ನು ಹೊಂದಿರುವವನು ; ಜ್ಞಾನಾದಿ-ಗುಣಗಳಿಂದ ಸಮೃದ್ಧನಾದವನು ; ತ್ರಿವಿಕ್ರಮರೂಪದಿಂದ ವೃದ್ಧಿಹೊಂದಿದವನು.

ಶಂ. ಭಾ. :– ಪ್ರಪಂಚರೂಪವಾಗಿ ವಿಸ್ತಾರಗೊಂಡಿರುವವನು.

353) **ಪ. ಭ. :–** ಭಕ್ತರ ಸಮೃದ್ಧಿಯಿಂದ ತಾನೂ ಸಮೃದ್ಧನಾಗುವವನು.

ನಿರುಕ್ತಿ :– **....ತತ್ಸಮೃದ್ಧ್ಯಾ ಯಃ ಸಮೃದ್ಧಸ್ಸ್ಯಾದ್ಧ ಉಚ್ಯತೇ ॥**

351) **ಸ. ಸಂ. :–** ಜ್ಞಾನಾನಂದಾದಿ-ಗುಣಗಳಿಂದ ಅಭಿವೃದ್ಧಿಯುಳ್ಳವನು.

*   *   *

352) **ವೃದ್ಧಾತ್ಮಾ** = ವಿಸ್ತಾರಗೊಂಡ ರೂಪವುಳ್ಳವನು ; ಪುರಾತನವಾದ ಆತ್ಮವುಳ್ಳವನು ; ಜ್ಞಾನವೃದ್ಧರಿಗೆ ಆತ್ಮರೂಪನಾಗಿರುವವನು ; ಜ್ಞಾನದಿಂದ ಪಕ್ವವಾದ ಆತ್ಮವುಳ್ಳವನು.

ಶಂ. ಭಾ. :– ಪುರಾತನವಾದ ಆತ್ಮವುಳ್ಳವನು.

354) **ಪ. ಭ. :–** ಬೇರೆಯವರ ಮಹಿಮೆಯನ್ನು ಬೊಗಸೆಯಲ್ಲಿ ಕುಡಿದುಬಿಡುವಂತೆ ಸರ್ವಾಧಿಕವಾಗಿ ಬೆಳೆದ ಸ್ವರೂಪವುಳ್ಳವನು.

ನಿರುಕ್ತಿ :– **ಮಹಿಮಾನಂ ಚುಲಕಯನ್ಪ್ರವೃದ್ಧಃ ಸರ್ವತೋಽಧಿಕಮ್ ।**
ಆತ್ಮಾ ಸ್ವರೂಪಂ ಯಸ್ಯೇತಿ ಸ ವೃದ್ಧಾತ್ಮೇತಿ ಕಥ್ಯತೇ ।

352) **ಸ. ಸಂ. :–** ಗುಣವೃದ್ಧರಾದ ಬ್ರಹ್ಮಾದಿಗಳಿಗೆ ಅಂತರ್ಯಾಮಿಯಾಗಿರುವವನು. ವೃದ್ಧಿಗೊಂಡ ದೇಹವುಳ್ಳವನು.

*   *   *

353) **ಮಹಾಕ್ಷಃ** = ದೊಡ್ಡ ಕಣ್ಣುಗಳುಳ್ಳವನು ; ದೊಡ್ಡ ಇಂದ್ರಿಯಗಳುಳ್ಳವನು ; ಶರೀರ (ವಿಶ್ವ) ರಥದ ದೊಡ್ಡ ಅಚ್ಚಿನ ರೂಪದಲ್ಲಿರುವವನು.

ಶಂ. ಭಾ. :– ದೊಡ್ಡದಾಗಿರುವ ಎರಡು ಅಥವಾ ಅಸಂಖ್ಯಾತವಾದ ಕಣ್ಣುಗಳುಳ್ಳವನು.

355) ಪ. ಭ. :– ಪೂಜ್ಯನಾದ ಗರುಡನನ್ನು ವಾಹನವನ್ನಾಗಿ ಹೊಂದಿರುವವನು ; (ಅಕ್ಷಃ = ರಥದ ಅವಯವಕ್ಕೆ ಸಾಮ್ಯಹೊಂದಿರುವ ಗರುಡನು.)

ನಿರುಕ್ತಿ :– **ಅಕ್ಷಸ್ತು ತಾರ್ಕ್ಷ್ಯೋ ವಹನಾದ್ರಥಾವಯವಸಾಮ್ಯತಃ ।**
ಮಹಾನ್ಪೂಜ್ಯಃ ಸ ಯಸ್ಯಾಸ್ತಿ ಸ ಮಹಾಕ್ಷ ಇತಿ ಸ್ಮೃತಃ ॥

353) ಸ. ಸಂ. :– ಎರಡು ಅಥವಾ ಬಹಳ ಕಣ್ಣುಗಳುಳ್ಳವನು.

*   *   *

354) **ಗರುಡಧ್ವಜಃ** = ಗರುಡನನ್ನು ಧ್ವಜದ ಚಿಹ್ನೆಯನ್ನಾಗಿ ಹೊಂದಿರುವವನು.

ಶಂ. ಭಾ. :– ಗರುಡನ ಚಿಹ್ನೆಯುಳ್ಳ ಧ್ವಜವುಳ್ಳವನು.

356) ಪ. ಭ. :– ಗರುತ್ಮಂತನನ್ನು ಧ್ವಜವನ್ನಾಗಿ (ತನ್ನ ಅಸಾಧಾರಣವಾದ ಚಿಹ್ನೆಯನ್ನಾಗಿ) ಹೊಂದಿರುವವನು.

ನಿರುಕ್ತಿ :– **ಸ ಏವ ತು ಧ್ವಜೋ ಯಸ್ಯ ಸ ಉಕ್ತೋ ಗರುಡಧ್ವಜಃ ॥**

354) ಸ. ಸಂ. :– ವೈನತೇಯನನ್ನು ಧ್ವಜವನ್ನಾಗಿ ಹೊಂದಿರುವವನು.

*   *   *

ಅತುಲಃ ಶರಭೋ ಭೀಮಃ ಸಮಯಜ್ಞೋ ಹವಿರ್ಹರಿಃ ।
ಸರ್ವಲಕ್ಷಣಲಕ್ಷಣ್ಯೋ ಲಕ್ಷ್ಮೀವಾನ್ಸಮಿತಿಂಜಯಃ ॥೫೨॥

355) **ಅತುಲಃ** = ಅನುಪಮನಾದವನು.

ಶಂ. ಭಾ. :– ಅನುಪಮನು. ನ ತಸ್ಯ ಪ್ರತಿಮಾ ಅಸ್ತಿ ಯಸ್ಯ

ನಾಮ ಮಹದ್ಯಶಃ । (ಶ್ವೇ. ೪-೧೯). **ನ ತ್ವತ್ಸಮೋಽಸ್ತ್ಯಭ್ಯಧಿಕಃ ಕುತೋಽನ್ಯಃ ॥** (ಗೀತಾ. ೧೧-೪೩)

357) **ಪ. ಭ. :–** (ಗರುಡಧ್ವಜದ ಅಸಾಧಾರಣಚಿಹ್ನೆಯಿಂದ ಕೂಡಿ) ಅನುಪಮನಾದವನು.

ನಿರುಕ್ತಿ **:– ಗರುಡಧ್ವಜವತ್ತ್ವಾದ್ಧಿ ಸೋಽತುಲೋಽನುಪಮಃ ಸ್ಮೃತಃ ॥**

355) **ಸ. ಸಂ. :–** ಅಸಮನಾದವನು.

* * *

356) **ಶರಭಃ =** ಭೀಕರಶರಭರೂಪಿಯಾದವನು.

ಶಂ. ಭಾ. :–ಶರ (ಶರೀರ)ಗಳಲ್ಲಿ ಪ್ರತ್ಯಗಾತ್ಮನಾಗಿ ಬೆಳಗುತ್ತಿರುವವನು.

358) **ಪ. ಭ. :–** ತನ್ನ ಆಜ್ಞೆಯನ್ನು ಮೀರಿದವರನ್ನು ಹಿಂಸಿಸುವವನು; ಶಿಕ್ಷಿಸುವವನು.

ನಿರುಕ್ತಿ **:– ಸ್ವಾಜ್ಞಾತಿಲಙ್ಘಿನಃ ಪುಂಸಃ ಶಿಕ್ಷಣಾಚ್ಛರಭಃ ಸ್ಮೃತಃ ॥**

356) **ಸ. ಸಂ. :–** ಪ್ರಳಯಕಾಲದಲ್ಲಿ ಪ್ರಕಾಶಿಸುವವನು ; ತ್ರಿಪುರ ಸಂಹಾರಮಾಡಿದ ಶರದಲ್ಲಿ ಬೆಳಗುತ್ತಿರುವವನು.

* * *

357) **ಭೀಮಃ =** ಸರ್ವಭಯಂಕರನು.

ಶಂ. ಭಾ. :– ಯಾವನಿಗೆ ಎಲ್ಲರೂ ಭಯಪಡುತ್ತಾರೆಯೋ–ಅವನು; **ಅಭೀಮಃ**–ಎಂದು ಪದವಿಭಾಗ ಮಾಡಿದರೆ : ಒಳ್ಳೆಯ ದಾರಿಯಲ್ಲಿ ನಡೆಯುವವರಿಗೆ ಭಯಂಕರನಲ್ಲದೇ ಇರುವವನು.

359) **ಪ. ಭ. :–** ಯಾವನಿಗೆ ಹೆದರಿ ವಾಯುವೇ ಮುಂತಾದ ದೇವತೆಗಳು ತಮ್ಮ ಮರ್ಯಾದೆಯನ್ನು ಮೀರುವುದಿಲ್ಲವೋ–ಅವನು.

ಭಯಾದಸ್ಯಾಗ್ನಿಸ್ತಪತಿ ಭಯಾತ್ತಪತಿ ಸೂರ್ಯಃ । ಭಯಾದಿನ್ದ್ರಶ್ಚ ವಾಯುಶ್ಚ ಮೃತ್ಯುರ್ಧಾವತಿ ಪಞ್ಚಮಃ ॥ (ಕಠ.೨-೬-೩)

ನಿರುಕ್ತಿ **:– ಭೀಮೋ ಯಸ್ಮಾದ್ಬಿಭ್ಯತಿ ತು ಶರಭಾತ್ಪವನಾದಯಃ ॥**

357) **ಸ. ಸಂ. :–** ವ್ಯಾಸಾದಿರೂಪದಿಂದ ಪ್ರಮಾಣಗಳನ್ನು ರಕ್ಷಿಸಿದವನು ; ಜನರು ಯಾವನಿಗೆ ಹೆದರುವರೋ–ಅವನು ; ಭಕ್ತರ ಭಯವನ್ನು ಹೋಗಲಾಡಿಸುವವನು.

358) **ಸಮಯಜ್ಞಃ** = ಕಾಲಜ್ಞನು ; ಸಿದ್ಧಾಂತವನ್ನು ಬಲ್ಲವನು ; ಆಚಾರವನ್ನು ಬಲ್ಲವನು ; ಶಾಸ್ತ್ರಗಳನ್ನು ಬಲ್ಲವನು.

ಶಂ. ಭಾ. :– ಸೃಷ್ಟಿ-ಸ್ಥಿತಿ-ಸಂಹಾರಗಳ ಕಾಲವನ್ನು ಬಲ್ಲವನು ; ಸಮಭಾವವನ್ನೇ ಯಜ್ಞವನ್ನಾಗಿ ಹೊಂದಿರುವವನು. **ಸಮತ್ವಮಾರಾಧನಮಚ್ಯುತಸ್ಯ ।** (ವಿ. ಪು. ೧-೧೭-೯೦)

360) **ಪ. ಭ. :–** ಅಗ್ನಿಯೇ ಮುಂತಾದವರ ಸಮಯವನ್ನು (ಅಧಿಕಾರವನ್ನು) ಬಲ್ಲವನು. **ಸೂರ್ಯಾಚನ್ದ್ರಮಸೌ ಧಾತಾ ಯಥಾಪೂರ್ವಮಕಲ್ಪಯತ್** (ತೈ. ನಾ.) ಭಕ್ತರಿಗೆ ತನ್ನ ಆತ್ಮದಾನದ ಸಮಯವನ್ನು ಬಲ್ಲವನು ; ಅಭಯಪ್ರದಾನವ್ರತವನ್ನು ಬಲ್ಲವನು.

ನಿರುಕ್ತಿ :– **ಅಗ್ನ್ಯಾದೀನಾಂ ಚ ಸಮಯಮೂರ್ಧ್ವಾಗ್ರಜ್ವಲನಾದಿಕಮ್ ।**
ಯೋ ಜಾನಾತ್ಯಧಿಕಾರಂ ಚ ಸಮಯಜ್ಞಃ ಪ್ರಕೀರ್ತಿತಃ ॥

358) **ಸ. ಸಂ. :–** ಲಕ್ಷ್ಮಿಯಿಂದ ಒಡಗೂಡಿದವನು ಮತ್ತು ಇರುವುದನ್ನೆಲ್ಲಾ ಬಲ್ಲವನು ; ಭಕ್ತರಿಗೆ ಶುಭವನ್ನುಂಟುಮಾಡುವ ರೀತಿಯನ್ನು ಚೆನ್ನಾಗಿ ಬಲ್ಲವನು ; ಭಕ್ತರಿಗೆ ಅಭೀಷ್ಟವನ್ನು ಕೊಡುವ ಸಮಯವನ್ನು ಬಲ್ಲವನು ; ಶಾಸ್ತ್ರಗಳನ್ನು ಬಲ್ಲವನು.

* * *

359) **ಹವಿರ್ಹರಿಃ** = ಯಜ್ಞದ ಹವಿಸ್ಸುಗಳನ್ನು ಸ್ವೀಕರಿಸುವವನು ; ಯಜ್ಞದ ಹವಿಸ್ಸಿನ ರೂಪದಲ್ಲಿರುವವನು ; ಎಲ್ಲವನ್ನೂ ಸಂಹರಿಸು ವವನು; ಎಲ್ಲರ ಮನಸ್ಸುಗಳನ್ನೂ–ಪಾಪಗಳನ್ನೂ ಅಪಹರಿಸುವವನು ; ಹರಿದ್ವರ್ಣವುಳ್ಳವನು.

ಶಂ. ಭಾ. :– ಯಜ್ಞಗಳಲ್ಲಿ ಹವಿರ್ಭಾಗಗಳನ್ನು ಪರಿಗ್ರಹಿಸುವವನು.

ಅಹಂ ಹಿ ಸರ್ವಯಜ್ಞಾನಾಂ ಭೋಕ್ತಾ ಚ ಪ್ರಭುರೇವ ಚ ॥

(ಗೀತಾ ೯-೨೪)

ಹರಾಮ್ಯಘಂ ಚ ಸ್ಮರ್ತೄಣಾಂ ಹವಿರ್ಭಾಗಂ ಕ್ರತುಷ್ವಹಮ್ ।
ವರ್ಣಶ್ಚ ಮೇ ಹರಿಃ ಶ್ರೇಷ್ಠಃ ತಸ್ಮಾದ್ಧರಿರಹಂ ಸ್ಮೃತಃ ॥

(ಮ.ಭಾ.ಶಾ. ೩೪೨-೬೮)

ಹವಿಸ್ಸು–ಅಬಧ್ನನ್ ಪುರುಷಂ ಪಶುಂ (ಪು. ಸೂ.೧೫) ಎಂಬಂತೆ ಹೋಮಮಾಡಲ್ಪಡುವವನು ; ಮತ್ತು ಹರಿಯು–(ಸ್ಮರಣಮಾತ್ರದಿಂದ) ಜೀವಗಳ ಪಾಪಗಳನ್ನು ಅಥವಾ ಸಂಸಾರವನ್ನು ಹೋಗಲಾಡಿಸುವವನು ; ಹರಿದ್ವರ್ಣವುಳ್ಳವನು.

361) ಪ. ಭ. :– ಹವಿಸ್ಸೂ ಮತ್ತು ಹರಿಯೂ ಆಗಿರುವವನು. ಹವಿಃ–ಎಂದರೆ ವೇದಗಳಲ್ಲಿ ಸಿದ್ಧವಾದ ಸಮಯವನ್ನರಿತು ಭಕ್ತರಿಗೆ ಸಂಪತ್ತನ್ನು ಕೊಡುವವನು ಮತ್ತು ಅವರು ಸಮರ್ಪಿಸಿದುದನ್ನು ತೆಗೆದುಕೊಳ್ಳುವವನು. ಹರಿಃ –ಎಂದರೆ ಆ ಕ್ರಿಯೆಗೆ ಒದಗುವ ವಿಘ್ನಗಳನ್ನು ಪರಿಹರಿಸುವವನು.

ಹರಿರ್ಹರತಿ ಪಾಪಾನಿ ದುಷ್ಟಚಿತ್ತೈರಪಿ ಸ್ಮೃತಃ ।
ಅನಿಚ್ಛಯಾಪಿ ಸಂಸ್ಪೃಷ್ಟೋ ದಹತ್ಯೇವ ಹಿ ಪಾವಕಃ ॥

(ಹರ್ಯಷ್ಟಕ)

ನಿರುಕ್ತಿ :– **ಸಮಯಂ ಶ್ರುತಿಸಿದ್ಧಂ ಯೋ ಜ್ಞಾತ್ವಾ ತೇಭ್ಯಃ ಶ್ರಿಯಂ ಮುದಾ ।**
ದತ್ತೇ ಹುತಂ ಹವಿಸ್ತೈಶ್ಚ ದೀಯತೇ ಸ ಹವಿಃ ಸ್ಮೃತಃ ॥

ಹರತೀತಿ ಹರಿರ್ವಿಘ್ನಾನನ್ನದಾನೇಷು ನಿತ್ಯಶಃ ।
ಹವಿರ್ಹರಿರಿತಿ ಪ್ರೋಕ್ತೋ ಹ್ಯಷ್ಟಾರ್ಣಶ್ಚೈಕನಾಮತಃ ॥

ಎಂಟಕ್ಷರದ ಈ ಮಂತ್ರವು ಭಗವದಾರಾಧನೆಗೆ ಒದಗುವ ವಿಘ್ನ ಗಳನ್ನು ಪರಿಹರಿಸುತ್ತದೆ.

359) ಸ. ಸಂ. :– ಹವಿಸ್ಸುಗಳನ್ನು ತೆಗೆದುಕೊಳ್ಳುವವನು.

* * *

360) **ಸರ್ವಲಕ್ಷಣಲಕ್ಷಣ್ಯಃ** = ಸಮಸ್ತಶುಭಲಕ್ಷಣಗಳಿಂದಲೂ ಕೂಡಿರುವ ಲಕ್ಷಣವಂತನು ; ಜಗತ್ಕರ್ತೃತ್ವವೇ ಮುಂತಾದ ಲಕ್ಷಣಗಳಿಂದ ಲಕ್ಷಿಸಲ್ಪಡುವವನು ; ಲಕ್ಷಿಸಲು ಯೋಗ್ಯನಾದವನು.

ಶಂ. ಭಾ. :– ಸರ್ವಲಕ್ಷಣವೆಂದರೆ ಎಲ್ಲ ಪ್ರಮಾಣಗಳಿಂದಲೂ ಉಂಟಾಗುವ ಜ್ಞಾನದಲ್ಲಿ ಪರಮೋತ್ತಮನಾಗಿರುವವನು–ಏಕೆಂದರೆ : ಅವನೇ ಪರಮಾರ್ಥಸ್ವರೂಪನು.

362) **ಪ. ಭ. :–** ಸಾಕ್ಷಾತ್ ಲಕ್ಷ್ಮಿಯ ನಿತ್ಯಯೋಗಸೌಭಾಗ್ಯವನ್ನು ಸೂಚಿಸುವ ಎಲ್ಲ ಲಕ್ಷಣಗಳಿಂದಲೂ ಉತ್ತಮನಾಗಿ ಅರಿಯಲ್ಪಡುವವನು.

ನಿರುಕ್ತಿ :– ಸರ್ವಲಕ್ಷಣಲಕ್ಷಣ್ಯೋ ಲಕ್ಷ್ಮೀಚರಣಚಿಹ್ನಿತಃ ॥

360) **ಸ. ಸಂ. :–** ಜಗತ್ತಿನ ಸೃಷ್ಟಿ-ಸ್ಥಿತಿ-ಲಯಗಳಿಗೆ ಕಾರಣನಾಗಿರುವಿಕೆಯೇ ಮುಂತಾದ ಎಲ್ಲ ಲಕ್ಷಣಗಳಿಂದಲೂ ಲಕ್ಷಿಸಲು ಯೋಗ್ಯನಾದವನು ; ಎಲ್ಲರ ಲಕ್ಷಣಗಳನ್ನೂ ಹೊಂದಿರುವವನು. **ಸರ್ವಕರ್ಮಾ ಸರ್ವಲಿಙ್ಗಃ ।** ಎಲ್ಲ ಲಕ್ಷಣಗಳಿಂದಲೂ ಕೂಡಿದವನು ಮತ್ತು ಲಕ್ಷಿಸಲು ಅತ್ಯಂತಯೋಗ್ಯನಾದವನು.

* * *

361) **ಲಕ್ಷ್ಮೀವಾನ್** = ಲಕ್ಷ್ಮಿಯಂ ನಿತ್ಯಯೋಗವುಳ್ಳವನು ; (ಲಕ್ಷ್ಮೀ ಶಬ್ದವು ಸಮಸ್ತಸನ್ಮಂಗಳಗಳಿಗೂ ಮತ್ತು ಅವುಗಳಿಗೆ ದೇವತೆಯಾದ ಜಗನ್ಮಾತೆಗೂ ವಾಚಕವಾದುದು.)

ಶಂ. ಭಾ. :– ವಕ್ಷಃಸ್ಥಳದಲ್ಲಿ ಲಕ್ಷ್ಮಿಯ ನಿತ್ಯನಿವಾಸವುಳ್ಳವನು.

363) **ಪ. ಭ. :–** ಲಕ್ಷ್ಮಿಯ ನಿತ್ಯಯೋಗವುಳ್ಳವನು.

ನಿರುಕ್ತಿ :– ಲಕ್ಷ್ಮ್ಯಾ ಚ ನಿತ್ಯಯುಕ್ತತ್ವಾಲ್ಲಕ್ಷ್ಮೀವಾನಿತಿ ಕಥ್ಯತೇ ॥

361) **ಸ. ಸಂ. :–** ಲಕ್ಷ್ಮೀದೇವಿಯಿಂದ ಕೂಡಿದವನು ; ಸಂಪತ್ತು ಅಥವಾ ಶೋಭೆಯುಳ್ಳವನು.

* * *

362) **ಸಮಿತಿಂಜಯಃ** = ಎಲ್ಲ ಯುದ್ಧಗಳಲ್ಲಿಯೂ ಜಯಗಳಿಸುವವನು; ಸಭೆಗಳಲ್ಲಿ ಜಯಗಳಿಸುವವನು.

ಶಂ. ಭಾ. :– ಯುದ್ಧಗಳಲ್ಲಿ ಗೆಲ್ಲುವವನು.

364) ಪ. ಭ. :– (ಜೀವಿಗಳ ದಾಸ್ಯಕ್ಕೆ ಸಂಬಂಧಿಸಿದ ವಿವಾದದ) ಕ್ಲೇಶವನ್ನು ಜಯಿಸುವವನು. ಅಖಿಲದುಃಖಜಯಃ –ಎಂಬ ಮಂತ್ರದ ವರ್ಣನೆ.

ನಿರುಕ್ತಿ :– ಚೇತನಾನಾಂ ಸ್ವದಾಸತ್ವವಿವಾದಂ ಜಯತೀತಿ ಯಃ ।
ಸಮಿತಿಂಜಯ ಆಖ್ಯಾತಃ ಸರ್ವದುಃಖಶಮಾಶ್ರಯಃ ॥

362) ಸ. ಸಂ. :– ಯುದ್ಧವನ್ನು ಜಯಿಸುವವನು.

* * *

ವಿಕ್ಷರೋ ರೋಹಿತೋ ಮಾರ್ಗೋ ಹೇತುರ್ದಾಮೋದರಃ ಸಹಃ ।
ಮಹೀಧರೋ ಮಹಾಭಾಗೋ ವೇಗವಾನಮಿತಾಶನಃ ॥೫೩॥

363) ವಿಕ್ಷರಃ = ಅಳಿವಿಲ್ಲದವನು ; ಸೋರದೇ ನಿರ್ವಿಕಾರನಾಗಿರುವವನು.

ಶಂ. ಭಾ. :– ನಾಶವಿಲ್ಲದವನು.

365) ಪ. ಭ. :– ಭಕ್ತರ ವಿಷಯದಲ್ಲಿ ಸ್ನೇಹದ ನಾಶವಿಲ್ಲದವನು.

ನಿರುಕ್ತಿ :– ಉಕ್ತಸ್ನೇಹಸ್ಯಾಕ್ಷರಣಾದ್ವಿಕ್ಷರಃ ಪರಿಕೀರ್ತಿತಃ ॥

363) ಸ. ಸಂ. :– ನಾಶವಿಲ್ಲದವನು ; ವಿಶೇಷವಾಗಿ ಭಕ್ತಾಭೀಷ್ಟಗಳನ್ನು ಸುರಿಸುವವನು.

* * *

364) ರೋಹಿತಃ = ಕೆಂಬಣ್ಣದವನು ; ರುದ್ರಮೂರ್ತಿ-ಸುದರ್ಶನಮೂರ್ತಿಗಳೇ ಮುಂತಾದ ರಕ್ತವರ್ಣದ ರೂಪಗಳಿಂದ ದರ್ಶನವನ್ನೀಯುವವನು.

ಶಂ. ಭಾ. :– ತನ್ನ ಇಚ್ಛಾನುಸಾರವಾಗಿ ಕೆಂಪುಬಣ್ಣದ ಶರೀರವನ್ನು ಧರಿಸುವವನು ; ರೋಹಿತವೆಂಬ ಮತ್ಸ್ಯವಿಶೇಷದ ಮೂರ್ತಿಯನ್ನು ಧರಿಸಿದವನು.

366) ಪ. ಭ. :– ಪದ್ಮದ ಗರ್ಭದಂತೆ ಪ್ರಕಾಶಿಸುವುದರಿಂದ ರೋಹಿತನು. (ಕೆಂಬಣ್ಣದವನು)

ನಿರುಕ್ತಿ :– ಪದ್ಮಸ್ಯ ಗರ್ಭಾಭತಯಾ ರೋಹಿತಃ ಪರಿಕೀರ್ತಿತಃ ॥

364) **ಸ. ಸಂ. :–** ಕೆಂಪುಬಣ್ಣದವನು.

* * *

365) **ಮಾರ್ಗಃ** = (ಪುರುಷಾರ್ಥಪ್ರಾಪ್ತಿಗೆ) ದಾರಿಯಾಗಿರತಕ್ಕವನು ; ಉಪಾಯನು ; ನಾನ್ಯಃ ಪನ್ಥಾ ಅಯನಾಯ ವಿದ್ಯತೇ (ಪು. ಸೂ.)

ಶಂ. ಭಾ. :– ಮೋಕ್ಷವನ್ನು ಬಯಸುವವರಿಂದ ಹುಡುಕಲ್ಪಡುವ ದೇವನು ; ಪರಮಾನಂದವನ್ನು ಹೊಂದುವ ಮಾರ್ಗ (ಸಾಧನ) ನಾಗಿರ ತಕ್ಕವನು.

367) **ಪ. ಭ. :–** ವಾಂಛಿತಸಿದ್ಧಿಪ್ರದಃ –ಎಂಬ ಮಂತ್ರವರ್ಣದಂತೆ ಉಪಾಸಕರಿಂದ ಇಷ್ಟಸಿದ್ಧಿಗೋಸ್ಕರ ಹುಡುಕಲ್ಪಡುವವನು.
ನಿರುಕ್ತಿ :– ಉಪಾಸಕೈರ್ಮಾರ್ಗ್ಯಮಾಣೋ ಮಾರ್ಗೋ ವಾಂಛಿತ ಸಿದ್ಧಯೇ ॥

365) **ಸ. ಸಂ. :–** ಶಾಸ್ತ್ರಾದಿಗಳಿಂದ ವಿಚಾರಮಾಡುವ ಮೃಗರಿಗೆ (ಜ್ಞಾನಿಗಳಿಗೆ) ಸೇರಿದವನು ; ಲಿಂಗಶರೀರವನ್ನು ಧ್ವಂಸಮಾಡಿ ಮೋಕ್ಷವನ್ನು ಹೊಂದಿಸುವವನು.

* * *

366) **ಹೇತುಃ** = ಸರ್ವಜಗತ್ಕಾರಣನು ; ಜಗತ್ತಿನ ಉಪಾದಾನ-ನಿಮಿತ್ತಗಳೇ ಮುಂತಾದ ಸರ್ವಕಾರಣವೂ ಆಗಿರುವವನು ; ಎಲ್ಲ ವ್ಯಾಪಾರ ಗಳಿಗೂ ಮೂಲಕಾರಣನಾದವನು.

ಶಂ. ಭಾ. :– ಪ್ರಪಂಚಕ್ಕೆ ನಿಮಿತ್ತ ಮತ್ತು ಉಪಾದಾನಕಾರಣ ನಾಗಿರುವವನು.

368) **ಪ. ಭ. :–** ಭಕ್ತರ ಇಷ್ಟಾರ್ಥಗಳಿಗೆ ಕಾರಣನಾದವನು.
ನಿರುಕ್ತಿ :– ವಾಞ್ಛಿತಾರ್ಥನಿದಾನತ್ವಾದ್ಧೇತುರಿತ್ಯಭಿಧೀಯತೇ ॥

366) **ಸ. ಸಂ. :–** ಜಗತ್ಕಾರಣನು.

* * *

367) **ದಾಮೋದರಃ** = ಲೋಕಗಳನ್ನು ಉದರದಲ್ಲಿ ಹೊಂದಿರುವವನು; ಇಂದ್ರಿಯನಿಗ್ರಹದಿಂದ ಕೂಡಿದ ಅಂತರಂಗವುಳ್ಳವನು ; ಕೃಷ್ಣಾವತಾರದಲ್ಲಿ ಯಶೋದೆಯಿಂದ ಉದರಕ್ಕೆ ಕಟ್ಟಲ್ಪಟ್ಟ ಹಗ್ಗವುಳ್ಳವನು.

ಶಂ. ಭಾ. :– ದಮವೇ ಮುಂತಾದ ಸಾಧನಗಳಿಂದ ಉಂಟಾಗುವ ಉದಾರವಾದ ಬುದ್ಧಿಯಿಂದ ಹೊಂದಲ್ಪಡುವವನು. **ದಮಾದ್ದಾಮೋದರೋ ವಿಭುಃ** (ಮ. ಭಾ. ಉ.೭೦-೮) ಯಶೋದೆಯಿಂದ ಹೊಟ್ಟೆಯಲ್ಲಿ ಹಗ್ಗದಿಂದ ಕಟ್ಟಲ್ಪಟ್ಟವನು ; ಲೋಕಗಳನ್ನು ಹೊಟ್ಟೆಯಲ್ಲಿ ಧರಿಸಿರುವವನು.

ತತಶ್ಚ ದಾಮೋದರತಾಂ ಸ ಯಯೌ ದಾಮಬನ್ಧನಾತ್ ॥

(ಬ್ರ. ಪು. ೭೬-೧೩-೧೪)

ದಾಮಾನಿ ಲೋಕನಾಮಾನಿ ತಾನಿ ಯಸ್ಯೋದರಾನ್ತರೇ ।
ತೇನ ದಾಮೋದರೋ ದೇವಃ ಶ್ರೀಧರಸ್ತು ರಮಾಶ್ರಿತಃ ॥

(ವ್ಯಾಸವಚನ)

369) **ಪ. ಭ.** :– ಲೋಕಗಳನ್ನು ಉದರದಲ್ಲಿ ಹೊಂದಿರುವವನು ; ಯಶೋದೆಯಿಂದ ಹೊಟ್ಟೆಯಲ್ಲಿ ಹಗ್ಗದಿಂದ ಕಟ್ಟಲ್ಪಟ್ಟವನು. ದೇವತೆಗಳ ಸುಖವನ್ನು ಬಯಸುವವನು. **ದೇವಾನಾಂ ಸ್ವಪ್ರಕಾಶತ್ವಾದ್ದಮಾದ್ದಾಮೋದರೋ ವಿಭುಃ** (ಮ. ಭಾ. ಉ. ೭೦-೮)

ನಿರುಕ್ತಿ :– **ದಾಮಾನಿ ಲೋಕನಾಮಾನಿ ಹ್ಯುದರೇ ಯಸ್ಯ ಸನ್ತಿ ಸಃ ।**
ದಾಮೋದರ ಇತಿ ಖ್ಯಾತೋ ಯಶೋದಾದಾಮಬನ್ಧನಾತ್ ।
ದೇವಾನಾಂ ಸುಖಶಂಸಿತ್ವಾದ್ದಾಮಾದ್ದಾಮೋದರೋಽಪಿ ವಾ ॥

367) **ಸ. ಸಂ.** :– ಪ್ರಳಯವೇ ಮುಂತಾದುವುಗಳಲ್ಲಿ ರಮಿಸುವವನು; ಇಂದ್ರಿಯನಿಗ್ರಹವುಳ್ಳ ಮುನಿಗಳಲ್ಲಿ ರಮಿಸುವವನು ; ದಾನಶೀಲರಿಗೆ ಆಮೋದವನ್ನುಂಟುಮಾಡುವವನು ; ದೈತ್ಯರಿಗೆ ದುಃಖವನ್ನುಂಟುಮಾಡುವವನು ; ಹೊಟ್ಟೆಯಲ್ಲಿ ಹಗ್ಗವನ್ನು ಹೊಂದಿರುವವನು ; ಉತ್ಕೃಷ್ಟ ಜೀವಿಗಳಲ್ಲಿ ರಮಿಸುವವನು.

*　　*　　*

368) **ಸಹಃ** = ಎಲ್ಲವನ್ನೂ, ಭಕ್ತರ ಅಪರಾಧಗಳನ್ನೂ ಸಹಿಸು ವವನು; ಶತ್ರುಗಳ ಆಕ್ರಮಣವನ್ನು ಸಹಿಸುವವನು.

ಶಂ. ಭಾ. :– ಎಲ್ಲವನ್ನೂ ತಿರಸ್ಕರಿಸುವವನು ; ಕ್ಷಮಿಸುವವನು.

370) **ಪ. ಭ. :–** ಯಶೋದೆಯು ಹಾಕಿದ ಬಂಧನವೇ ಮುಂತಾದುವುಗಳನ್ನು ಸಹಿಸಿದವನು.

ನಿರುಕ್ತಿ :– ಯಶೋದಾಕೃತಬನ್ಧಾದಿ ಸಹನಾತ್ಸಹ ಈರಿತಃ ॥

368) **ಸ. ಸಂ. :–** ಎಲ್ಲವನ್ನೂ ಸಹಿಸುವವನು.

* * *

369) **ಮಹೀಧರಃ** = ಮಹಾಕೂರ್ಮನು ; ಆದಿವರಾಹನು ; ಶೇಷನಾಗನ ರೂಪದಲ್ಲಿ ಭೂಮಿಯನ್ನು ಹೊತ್ತಿರುವವನು ; ಪರ್ವತರೂಪಿಯಾದವನು.

ಶಂ. ಭಾ. :– ಪರ್ವತರೂಪಿಯಾಗಿ ಭೂಮಿಯನ್ನು ಧರಿಸಿರು ವವನು. **ವನಾನಿ ವಿಷ್ಣುರ್ಗಿರಯೋ ದಿಶಶ್ಚ** (ವಿ. ಪು. ೨-೧೨-೩೮)

371) **ಪ. ಭ. :–** ಭೂಮಿಯ ಭಾರವನ್ನು ನಾಶಮಾಡುವುದರ ಮೂಲಕ ಭೂಮಿಯನ್ನು ಧರಿಸಿರುವವನು.

ನಿರುಕ್ತಿ :– ಭೂಭಾರನಾಶನೇನ ಜ್ಯಾಧಾರಣಾದ್ಧರಣೀಧರಃ ॥

369) **ಸ. ಸಂ. :–** ಭೂಮಿಯನ್ನು ಹೊತ್ತಿರುವವನು.

* * *

370) **ಮಹಾಭಾಗಃ** = ಮಹಾಭಾಗ್ಯಶಾಲಿಯು.

ಶಂ. ಭಾ. :– ತನಗೆ ಇಷ್ಟಬಂದ ದೇಹವನ್ನು ಧರಿಸಿ ಭಾಗ್ಯದಿಂದ ಉಂಟಾದ ಉತ್ಕೃಷ್ಟವಾದ ಐಶ್ವರ್ಯಗಳನ್ನು ಅನುಭವಿಸುವವನು ; ಅವತಾರಗಳಲ್ಲಿ ಮಹತ್ತಾದ ಭಾಗ (ಭಾಗ್ಯ) ವುಳ್ಳವನು.

372) **ಪ. ಭ. :–** ರುಕ್ಮಿಣೀ, ಸತ್ಯಭಾಮಾ–ಇವರೇ ಮುಂತಾದವರ ಸ್ವಯಂವರಸೌಭಾಗ್ಯವುಳ್ಳವನು.

ನಿರುಕ್ತಿ :– ರುಕ್ಮಿಣ್ಯಾದಿಬಹುಸ್ತ್ರೀಭಿಃ ಮಹಾಭಾಗಃ ಸ್ವಯಂ ವೃತಃ ॥

370) **ಸ. ಸಂ. :**–ಐಶ್ವರ್ಯವೇ–ಮುಂತಾದ ಆರು ಗುಣಗಳಿಗೆ ಆಧಾರ ನಾಗಿರುವ ಮಹಾತ್ಮನು ; ಯಜ್ಞಗಳಲ್ಲಿ ಚೆನ್ನಾಗಿ ಭಾಗವುಳ್ಳವನು ; ಮಹಾ ಕಾಂತಿಯುಕ್ತವಾದ ಗೋವರ್ಧನ ಅಥವಾ ಮಂದರಪರ್ವತವುಳ್ಳವನು.

* * *

371) **ವೇಗವಾನ್** = ತೀವ್ರಗತಿಯುಳ್ಳವನು ; ಮನಸ್ಸಿಗಿಂತಲೂ ಮಹಾವೇಗಶಾಲಿಯಾದವನು.

ಶಂ. ಭಾ. :– ಮಹಾವೇಗಶಾಲಿಯು. **ಅನೇಜದೇಕಂ ಮನಸೋ ಜವೀಯಃ (ಈ.೪)**

373) **ಪ. ಭ. :**– ಮನುಷ್ಯಧರ್ಮದ ಲೀಲೆಯನ್ನು ಆಡಿದಾಗ ಬಾಲ್ಯ ದಲ್ಲಿಯೂ ಕೂಡ ನಿವಾರಿಸಲು ಅಸಾಧ್ಯವಾದ ಪರಮೈಶ್ವರ್ಯದ ಪ್ರಸಾರ ವುಳ್ಳವನು.

ನಿರುಕ್ತಿ :– **ದುರ್ವಾರಪರಮೈಶ್ವರ್ಯಪ್ರಸರತ್ವಾದ್ವಿಶೇಷತಃ ।**
ಮನುಷ್ಯಧರ್ಮೇ ಬಾಲ್ಯೇಽಪಿ ವೇಗವಾನಿತಿ ಶಬ್ದ್ಯತೇ ॥

371) **ಸ. ಸಂ. :**– ಗಜೇಂದ್ರನೇ ಮುಂತಾದ ಭಕ್ತರ ರಕ್ಷಣೆಯ ವಿಷಯದಲ್ಲಿ ವೇಗವುಳ್ಳವನು.

* * *

372) **ಅಮಿತಾಶನಃ** = ಮಹಾಭಕ್ಷನು ; ಪ್ರಳಯಕಾಲದಲ್ಲಿ ವಿಶ್ವವನ್ನೇ ಭಕ್ಷಿಸುವವನು ; ಬ್ರಹ್ಮ, ಕ್ಷತ್ರ ಮತ್ತು ಮೃತ್ಯುಗಳನ್ನು ತಿಂದುಹಾಕುವವನು. ಅಪರಿಮಿತವಾದ ಆನಂದವೆಂಬ ಅನ್ನವನ್ನು ಭುಂಜಿಸುವವನು.

ಶಂ. ಭಾ. :– ಸಂಹಾರಸಮಯದಲ್ಲಿ ವಿಶ್ವವನ್ನು ತಿಂದುಹಾಕುವವನು.

374) **ಪ. ಭ. :**– ಇಂದ್ರನಿಗೋಸ್ಕರ ಗೋಪಾಲಕರು ಕಲ್ಪಿಸಿದ್ದ ಅಪರಿ ಮಿತವಾದ ಅನ್ನವನ್ನು ಸ್ವಲ್ಪವೂ ಉಳಿಯದಂತೆ ತಾನೊಬ್ಬನೇ ತಿಂದು ಹಾಕಿದವನು.

ನಿರುಕ್ತಿ :– **ಇನ್ದ್ರಾಯ ಕಲ್ಪಿತಂ ಗೋಪೈರಮಿತಂ ಚಾಶನಂ ಸ್ವಯಮ್ ।**
ಭುಕ್ತವಾನ್ಯಶ್ಚ ನಿಃಶೇಷಂ ಪ್ರೋಚ್ಯತೇ ಸೋಽಮಿತಾಶನಃ ॥

372) ಸ. ಸಂ. :– ಮಿತವಾಗಿ ಊಟಮಾಡದೇ ಇರುವವನು ; ಅಪರಿಮಿತವಾಗಿ ಊಟಮಾಡುವವನು.

* * *

ಉದ್ಭವಃ ಕ್ಷೋಭಣೋ ದೇವಃ ಶ್ರೀಗರ್ಭಃ ಪರಮೇಶ್ವರಃ ।
ಕರಣಂ ಕಾರಣಂ ಕರ್ತಾ ವಿಕರ್ತಾ ಗಹನೋ ಗುಹಃ ॥೫೪॥

373) **ಉದ್ಭವಃ** = ಜಗತ್ತಿನ ಉತ್ಪತ್ತಿಗೆ ಕಾರಣನಾದವನು ; ಅವತಾರ ರೂಪದಲ್ಲಿ ಕಾಣಿಸಿಕೊಳ್ಳುವವನು.

ಶಂ. ಭಾ. :– ಪ್ರಪಂಚದ ಉತ್ಪತ್ತಿಗೆ ಉಪಾದಾನಕಾರಣನು ; ಭವಕ್ಕೆ (ಸಂಸಾರಕ್ಕೆ) ಮೇಲೆ ಇರುವವನು.

375) ಪ. ಭ. :– ಭವಬಂಧನವನ್ನು ಉಚ್ಚಾಟಿಸುವವನು.
ನಿರುಕ್ತಿ :– **ಸಮುದ್ಗತೋ ಭವೋ ಯಸ್ಮಾದುದ್ಭವಃ ಪರಿಕೀರ್ತಿತಃ ॥**

373) ಸ. ಸಂ. :– ಭವವು (ಸಂಸಾರವು) ಯಾವನಿಂದ ಉಚ್ಚಾಟನೆ ಮಾಡಲ್ಪಡುವುದೋ–ಅವನು. ಯಾವನಿಂದ ಭವನು (ಶಿವನು) ಪಾರ್ವತಿಯೇ ಮುಂತಾದವರಿಗಿಂತಲೂ ಉತ್ಕೃಷ್ಟನಾಗಿರುವನೋ–ಅವನು ; ಸಂಸಾರಕ್ಕೆ ಮೇಲೆ ಇರುವವನು.

* * *

374) **ಕ್ಷೋಭಣಃ** = (ಪ್ರಳಯಕಾಲದಲ್ಲಿ ಮತ್ತು ಸೃಷ್ಟಿಕಾಲದಲ್ಲಿ) ಕ್ಷೋಭೆಯನ್ನುಂಟುಮಾಡುವವನು.

ಶಂ. ಭಾ. :– ಸೃಷ್ಟಿಕಾಲದಲ್ಲಿ ಪ್ರಕೃತಿಯಲ್ಲಿಯೂ ಮತ್ತು ಪುರುಷನಲ್ಲಿಯೂ ಪ್ರವೇಶಿಸಿ ಅವರಲ್ಲಿ ಕ್ಷೋಭೆಯನ್ನುಂಟುಮಾಡಿದವನು.

ಪ್ರಕೃತಿಂ ಪುರುಷಂ ಚೈವ ಪ್ರವಿಶ್ಯಾತ್ಮೇಚ್ಛಯಾ ಹರಿಃ ।
ಪ್ರವಿಶ್ಯ ಕ್ಷೋಭಯಾಮಾಸ ಸರ್ಗಕಾಲೇ ವ್ಯಯಾವ್ಯಯೌ ॥
(ವಿ. ಪು.೧-೨-೨೯)

376) ಪ. ಭ. :– ಬಂಧನಕ್ಕೆ ಯೋಗ್ಯರಾದವರನ್ನೂ ಮತ್ತು ಬಂಧಕವಾದ ಪ್ರಕೃತಿಯನ್ನೂ ಸಂಚಾಲನೆಮಾಡುವವನು.

ಪ್ರಕೃತಿಂ ಬನ್ಧನಾರ್ಹಾಂಶ್ಚ ಕ್ಷೋಭಣಾತ್ಕ್ಷೋಭಣಃ ಸ್ಮೃತಃ ॥

374) **ಸ. ಸಂ. :–** ಪ್ರಕೃತಿ-ಪುರುಷರಲ್ಲಿ ಕ್ಷೋಭೆಯನ್ನುಂಟುಮಾಡುವವನು.

* * *

375) **ದೇವಃ**= ಸ್ವಾಮಿಯು ; ಪ್ರಕಾಶಸ್ವರೂಪನು ; ವಿಶ್ವಕ್ರೀಡೆಯುಳ್ಳವನು.

ಶಂ. ಭಾ. :– ಸೃಷ್ಟಿಯೇ ಮುಂತಾದುವುಗಳಿಂದ ಕ್ರೀಡಿಸುವವನು ; ದೈತ್ಯರೇ ಮುಂತಾದವರನ್ನು ಜಯಿಸಲು ಇಚ್ಛಿಸುವವನು ; ಸರ್ವಭೂತಗಳಲ್ಲಿಯೂ ವ್ಯವಹರಿಸುವವನು ; ಆತ್ಮರೂಪದಲ್ಲಿ ಬೆಳಗುವವನು ; ಸ್ತುತಿಗೆ ಯೋಗ್ಯರಾದ ಮಹಾತ್ಮರಿಂದ ಸ್ತುತಿಸಲ್ಪಡುವವನು ; ಎಲ್ಲ ಕಡೆಗಳಿಗೂ ಹೋಗುವವನು. ಏಕೋ ದೇವಃ (ಶ್ವೇ. ೬-೧೧)

377) **ಪ. ಭ. :–** ಜೀವಗಳನ್ನು ಹುಲಿ-ಹಂದಿಗಳೋಪಾದಿಯಲ್ಲಿ ಮಾಯಾಪಾಶದಿಂದ ಕಟ್ಟಿ ಕ್ರೀಡಿಸುವವನು.

ನಿರುಕ್ತಿ :– **ವ್ಯಾಘ್ರಾದಿವಜ್ಜೀವತತೇರ್ಮಾಯಾಪಾಶೇನ ಬನ್ಧನಮ್ ।**
ಕೃತ್ವಾ ನಿತ್ಯಂ ಕ್ರೀಡತಿ ಯಃ ಸ ದೇವಃ ಪರಿಕೀರ್ತಿತಃ ॥

375) **ಸ. ಸಂ. :–** ಬೆಳಗುವಿಕೆ, ವಿಜಯ, ಕಾಂತಿ, ಸ್ತುತಿ, ವ್ಯವಹಾರ, ಗತಿ, ರತಿಗಳುಳ್ಳವನು.

ದ್ಯೋತನಾದ್ವಿಜಯಾತ್ಕಾನ್ತ್ಯಾ ಸ್ತುತ್ಯಾ ವ್ಯವಹೃತೇರಪಿ ।
ಗತ್ಯಾ ರತ್ಯಾ ಚ ದೇವಾಖ್ಯಂ......... (ಋಗ್ಭಾಷ್ಯ)

* * *

376) **ಶ್ರೀಗರ್ಭಃ** = ಶ್ರೀದೇವಿಗೆ ಗರ್ಭವಾಗಿರುವವನು : ವಿಭೂತಿಗಳಿಗೆ ಗರ್ಭವಾಗಿರುವವನು.

ಶಂ. ಭಾ. :– ಉದರಗರ್ಭದಲ್ಲಿ ಜಗದ್ರೂಪವಾದ ಸಂಸಾರವಿಭೂತಿಯುಳ್ಳವನು.

378) **ಪ. ಭ. :–** ತನ್ನ ಭೋಗಕ್ರೀಡಾಸಾಹಿತ್ಯದಿಂದ ಶ್ರೀಯನ್ನು ಗರ್ಭದಂತೆ ಬೆಳೆಸುವವನು.

ನಿರುಕ್ತಿ :– ಶ್ರೀಃ ಕ್ರೀಡಾಭೋಗಸಾಹಿತ್ಯಾದ್ವರ್ಧನೀಯಾ ಹರೇರಿತಿ ।
ಶ್ರೀಗರ್ಭಃ .... ॥

376) **ಸ. ಸಂ. :–** ಶ್ರೀಗೆ ಗರ್ಭವು ಯಾವನಿಂದ ಉಂಟಾಗುವುದೋ ಅವನು.

* * *

377) **ಪರಮೇಶ್ವರಃ** = ಈಶ್ವರರಿಗೂ ಮಹೇಶ್ವರನಾದವನು. **ತಮೀಶ್ವರಾಣಾಂ ಪರಮಂ ಮಹೇಶ್ವರಂ ತಂ ದೇವತಾನಾಂ ಪರಮಂ ಚ ದೈವತಮ್ ॥** (ಶ್ವೇ. ಉ. ೬-೭)

ಶಂ. ಭಾ. :– ಪರಮನಾದ ಈಶ್ವರನು. **ಸಮಂ ಸರ್ವೇಷು ಭೂತೇಷು ತಿಷ್ಠನ್ತಂ ಪರಮೇಶ್ವರಮ್** (ಗೀತಾ ೧೩-೨೭)

379) **ಪ. ಭ. :–** (ಲಕ್ಷ್ಮೀದೇವಿಯು ತಾನಾಗಿಯೇ ವರಿಸುವ ಪ್ರಯೋಜನವುಳ್ಳ) ಪರಮೈಶ್ವರ್ಯಸಂಪನ್ನನಾದವನು.
ನಿರುಕ್ತಿ :– .... ಪಾರಮೈಶ್ವರ್ಯಯುಕ್ತತ್ವಾತ್ಪರಮೇಶ್ವರಃ ॥

377) **ಸ. ಸಂ. :–** ಪರಮನಾದ ಈಶ್ವರನು ; ರಕ್ಷಿಸುವ ರಮಾಪತಿಯು.

* * *

378) **ಕರಣಂ** = ಪುರುಷಾರ್ಥಗಳ ಪ್ರಾಪ್ತಿಗೆ ಅಥವಾ ಜಗತ್ತಿನ ಉತ್ಪತ್ತಿಯೇ ಮುಂತಾದುವುಗಳಿಗೆ ಶ್ರೇಷ್ಠತಮವಾದ ಸಾಧನನಾದವನು ; ಸಾಧನತಮನು.

ಶಂ. ಭಾ. :– ಜಗತ್ತಿನ ಉತ್ಪತ್ತಿಗೆ ಎಲ್ಲಕ್ಕಿಂತಲೂ ದೊಡ್ಡಸಾಧನವಾಗಿರುವವನು.

380) **ಪ. ಭ. :–** ಜೀವಗಳಿಗೆ ತನ್ನನ್ನು ಹೊಂದುವುದಕ್ಕೆ ಸಾಧಕತಮನಾಗಿರುವವನು.
ನಿರುಕ್ತಿ :–ಸ್ವಪ್ರಾಪ್ತೌ ಸಾಧಕತಮಂ ಜೀವಾನಾಂ ಕರಣಂ ವಿದುಃ ॥

378) **ಸ. ಸಂ. :–** ಸುಖವನ್ನು ಅಥವಾ ಬಲವನ್ನು ದಯಪಾಲಿಸುವ ಕೈಗಳುಳ್ಳವನು. **ಣೋ ಬಲಂ । ಣಶ್ಚ ನಿರ್ವೃತಿವಾಚಕಃ ॥**

*   *   *

379) **ಕಾರಣಂ** = ಜಗತ್ತಿಗೆ ಕಾರಣನಾಗಿರುವವನು.

ಶಂ. ಭಾ. :– ಜಗತ್ತಿಗೆ ಉಪಾದಾನ ಮತ್ತು ನಿಮಿತ್ತಕಾರಣಗಳಾಗಿರುವವನು.

381) **ಪ. ಭ. :–** ಜೀವಗಳ ಕಣ್ಣುಗಳೇ ಮುಂತಾದ ಇಂದ್ರಿಯಗಳಿಂದ ಆಯಾ ಇಂದ್ರಿಯಗಳ ಕಾರ್ಯಗಳನ್ನು ಮಾಡಿಸುವವನು.

ನಿರುಕ್ತಿ :– **ಜೀವಾನಾಂ ಚಕ್ಷುರಾದೀನ್ಯೋ ಹೇತೂನ್ಕಾರಯತೀತಿ ಸಃ ।**
ಪ್ರೋಚ್ಯತೇ ಕಾರಣಂ.................... ॥

379) **ಸ. ಸಂ. :–** ಜಗತ್ತು ಯಾವನಿಂದ ಮಾಡಲ್ಪಡುತ್ತದೆಯೋ– ಅವನು ; ಜಲವನ್ನು ಆಶ್ರಯವನ್ನಾಗಿ ಹೊಂದಿರುವವನು ; ವಾಯು ಮತ್ತು ಬ್ರಹ್ಮರಿಗೆ ಕಾರಣನಾಗಿರುವವನು.

*   *   *

380) **ಕರ್ತಾ** = ಸ್ವತಂತ್ರನಾದ ಕರ್ತೃವು.

ಶಂ. ಭಾ. :– ಸ್ವತಂತ್ರನು.

382) **ಪ. ಭ. :–** ಸ್ವತಂತ್ರನು.

ನಿರುಕ್ತಿ :– .... **ಕರ್ತಾ ಸ್ವತನ್ತ್ರಃ ಪರಿಕೀರ್ತಿತಃ ॥**

380) **ಸ. ಸಂ. :–** ಎಲ್ಲವನ್ನೂ ಮಾಡುವವನು ; ಬಂಧನವನ್ನು ಕತ್ತರಿಸಿಹಾಕುವವನು.

*   *   *

381) **ವಿಕರ್ತಾ**= ವಿವಿಧವಾಗಿ ಮಾಡುವವನು ; ವಿಶೇಷವಾಗಿ ಮಾಡುವವನು ; ವಿಕಾರವಾಗಿ ಮಾಡುವವನು ; (ತಾನೇ ಮಾಡಿದುದನ್ನು ತಾನೇ) ಧ್ವಂಸಮಾಡುವವನು.

ಶಂ. ಭಾ. :– ವಿಚಿತ್ರವಾದ ಭುವನಗಳನ್ನು ರಚಿಸುವವನು.

383) **ಪ. ಭ. :–** ಹರ್ಷ-ಶೋಕಾದಿಗಳಿಂದ ವಿಕಾರವನ್ನು ಉಂಟು ಮಾಡುವವನು.

ನಿರುಕ್ತಿ :– ವಿಕುರ್ವಾಣೋ ವಿಕರ್ತಾ ಯೋ ಹರ್ಷಶೋಕಾದಿಭಿಃ ಸ್ಮೃತಃ॥

381) **ಸ. ಸಂ. :–** ವಿವಿಧವಾಗಿ ಮಾಡುವವನು ; ತನಗೆ ಬೇರೆ ಕರ್ತೃ ವಿಲ್ಲದವನು.

* * *

382) **ಗಹನಃ** = ತಿಳಿಯಲು ಅಸಾಧ್ಯನಾಗಿರುವವನು.

ಶಂ. ಭಾ. :– ಅರಿಯಲು ಅಸಾಧ್ಯವಾದ ಸ್ವರೂಪ, ಸಾಮರ್ಥ್ಯ ಅಥವಾ ಕೃತ್ಯಗಳುಳ್ಳವನು.

384) **ಪ. ಭ. :–** ಅತಿಭೂಮಿಯಾದವನು. (ತಿಳಿಯಲು ಅಸಾಧ್ಯ ನಾದವನು). ಆಯತನ, ಭೋಗೋಪಕರಣ, ಸ್ವರೂಪ–ಇವುಗಳಲ್ಲಿ ಮಹಾಗುಣ ಗಣಗಳಲ್ಲಿ ಅರಿಯಲು ಅಸಾಧ್ಯನಾದವನು. **ಸಹ್ಯೈವ ಸನ್ತಂ ನ ವಿಜಾನನ್ತಿ ದೇವಾಃ ।** (ತೈ. ಆ.)

ನಿರುಕ್ತಿ :– ಬುದ್ಧ್ಯಾಯತನಭೋಗೋಪಕರಣಾದಿಷು ದೇಹಿನಾಮ್ ।
ತದಭಿನ್ನಾಭಿಮಾನಾತ್ಮಾ ಮಹಾಗುಣಗಣೇಷು ಚ ।
ಗಹನೋ ಹ್ಯತಿಭೂಮಿತ್ವಾತ್........... ॥

382) **ಸ. ಸಂ. :–** ತಿಳಿಯಲು ಅಶಕ್ಯನಾದವನು.

* * *

383) **ಗುಹಃ** = ಗೂಢವಾಗಿರುವವನು ; ಮುಚ್ಚಿಕೊಂಡಿರುವವನು ; ಮುಚ್ಚುವವನು.

ಶಂ. ಭಾ. :– ತನ್ನ ಮಾಯೆಯ ಸ್ವರೂಪವೇ ಮುಂತಾದುವುಗಳನ್ನು ಮುಚ್ಚಿಕೊಂಡಿರುವವನು. **ನಾಹಂ ಪ್ರಕಾಶಃ ಸರ್ವಸ್ಯ ಯೋಗಮಾಯಾ ಸಮಾವೃತಃ॥** (ಗೀತಾ. ೭-೨೫)

385) **ಪ. ಭ. :–** ರಕ್ಷಿಸುವವನು.

ನಿರುಕ್ತಿ :– **............ರಕ್ಷತೀತಿ ಗುಹಃ ಸ್ಮೃತಃ ॥**

383) **ಸ. ಸಂ. :–** ಸ್ವರೂಪವನ್ನು ಮುಚ್ಚಿಕೊಂಡಿರುವವನು.

* * *

ವ್ಯವಸಾಯೋ ವ್ಯವಸ್ಥಾನಃ ಸಂಸ್ಥಾನಃ ಸ್ಥಾನದೋ ಧ್ರುವಃ ।
ಪರರ್ದ್ಧಿಃ ಪರಮಸ್ಪಷ್ಟಸ್ತುಷ್ಟಃ ಪುಷ್ಟಃ ಶುಭೇಕ್ಷಣಃ ॥೫೫॥

384) **ವ್ಯವಸಾಯಃ** = ನಿಶ್ಚಯರೂಪಿಯು ; ಪ್ರಯತ್ನಶೀಲನು.

ಶಂ. ಭಾ. :– ಜ್ಞಾನಮಾತ್ರಸ್ವರೂಪನು.

386) **ಪ. ಭ. :–** ಜ್ಯೋತಿಶ್ಚಕ್ರವು ಯಾವನಲ್ಲಿ ವಿಶೇಷವಾಗಿ ನಿಬದ್ಧವಾಗಿದೆಯೋ–ಅಂತಹ ಧ್ರುವಮೂರ್ತಿಯು. **'ಗಗನಮೂರ್ತಯೇ'**–ಎಂದು ಇದರ ಮಂತ್ರವರ್ಣ. **'ಭವಚಕ್ರಭೃತಂ ದೈವಂ'**–ಎಂಬುದು ಧ್ಯಾನ.
ನಿರುಕ್ತಿ :– **ಜ್ಯೋತಿಶ್ಚಕ್ರಂ ಧ್ರುವೇ ನಿತ್ಯಂ ಸೀಯತೇ ಬಧ್ಯತೇ ಯತಃ ॥**
ವ್ಯವಸಾಯಸ್ತತೋ ಜ್ಞೇಯಃ ಭಗಣಾಧಾರಮೂರ್ತಿಮಾನ್॥

384) **ಸ. ಸಂ. :–** ನಿಶ್ಚಯವುಳ್ಳವನು ಅಥವಾ ನಿಶ್ಚಯರೂಪಿಯು.

* * *

385) **ವ್ಯವಸ್ಥಾನಃ**= ಯಾವನಲ್ಲಿ ಎಲ್ಲವೂ ವ್ಯವಸ್ಥಿತವಾಗಿರುವುದೋ–ಅವನು.

ಶಂ. ಭಾ. :– ಎಲ್ಲದರ ವ್ಯವಸ್ಥೆಯೂ ಯಾವನಲ್ಲಿರುವುದೋ–ಅವನು ; ಲೋಕಪಾಲರೇ ಮುಂತಾದ ಅಧಿಕಾರಗಳನ್ನೂ, ಜರಾಯುಜ-ಅಂಡಜ-ಉದ್ಭಿಜ್ಜ–ಮುಂತಾದ ಜೀವಗಳನ್ನೂ, ಬ್ರಾಹ್ಮಣ-ಕ್ಷತ್ರಿಯ ವೈಶ್ಯ-ಶೂದ್ರ ಮತ್ತು ಅವಾಂತರವರ್ಣಗಳನ್ನೂ, ಬ್ರಹ್ಮಚಾರೀ-ಗೃಹಸ್ಥ-ವಾನಪ್ರಸ್ಥ-ಸಂನ್ಯಾಸ–ಎಂಬ ಆಶ್ರಮಗಳನ್ನೂ ಮತ್ತು ಅವುಗಳ ಧರ್ಮಗಳೇ ಮುಂತಾದುವುಗಳನ್ನೂ ವಿಭಾಗಮಾಡಿ ರಚಿಸುವವನು.

387) **ಪ. ಭ. :–** ಕಲಾ, ಮುಹೂರ್ತಗಳೇ ಮುಂತಾದ ಕಾಲವೂ ಕೂಡ ಯಾವನಲ್ಲಿ ನೆಲೆಸಿರುವುದೋ–ಅಂತಹ ಧ್ರುವಮೂರ್ತಿಯು.

ನಿರುಕ್ತಿ :– **ಕಲಾಮುಹೂರ್ತಾದಿಮಯೋ ಧ್ರುವೇ ಕಾಲೋऽವತಿಷ್ಠತೇ।**
ಯಸ್ಮಾತ್ತಸ್ಮಾದ್ವ್ಯವಸ್ಥಾನೋ ಹ್ಯಷ್ಟಾರ್ಣಃ ಸ್ಥಾನದೋ ಮನುಃ ॥

'ಓಂ ವ್ಯವಸ್ಥಾನಾಯ ನಮಃ' ಈ ನಾಮಮಂತ್ರಜಪದಿಂದ ಒಳ್ಳೆಯ ಸ್ಥಾನವು ಸಿಕ್ಕುತ್ತದೆ.

385) **ಸ. ಸಂ. :–** ಜಾಗ್ರತ್-ಸ್ವಪ್ನ-ಸುಷುಪ್ತಿಗಳೇ ಮುಂತಾದ ಬಗೆ ಬಗೆಯ ಅವಸ್ಥೆಗಳಿಗೆ ಒಯ್ಯುವವನು ; ದೈತ್ಯರಿಗೆ ವಿರುದ್ಧವಾಗಿರುವವನು ; ದೇವತೆಗಳಿಗೆ ಅನುಕೂಲನಾಗಿರುವವನು.

* * *

386) **ಸಂಸ್ಥಾನಃ** = ಶ್ರೇಷ್ಠವಾದ ನೆಲೆಯಾಗಿರುವವನು ; ಎಲ್ಲಕ್ಕೂ ಲಯಸ್ಥಾನನಾಗಿರುವವನು.

ಶಂ. ಭಾ. :– ಸಮಸ್ತಭೂತಗಳ ಪ್ರಳಯರೂಪವಾದ ಸ್ಥಿತಿಯು ಯಾವನಲ್ಲಿರುವುದೋ–ಅವನು ; ಪ್ರಳಯಕ್ಕೆ ಒಳ್ಳೆಯ ಸ್ಥಾನವಾಗಿರುವವನು.

388) **ಪ. ಭ. :–** ಯಾವನಲ್ಲಿ ಕಲಾದಿಗಳೆಲ್ಲವೂ ಸಮಾಪ್ತಿಹೊಂದುತ್ತವೆಯೋ–ಆ ಧ್ರುವಮೂರ್ತಿಯು.

ನಿರುಕ್ತಿ :– **ಧ್ರುವೇ ಸಮಾಪ್ಯತ ಇತಿ ಸಂಸ್ಥಾನಃ ಸರ್ವಮುಚ್ಯತೇ ॥**

386) **ಸ. ಸಂ. :–** ಯಾವನಲ್ಲಿ ಎಲ್ಲವೂ ಚೆನ್ನಾಗಿ ನೆಲೆಗೊಂಡಿವೆಯೋ–ಅಂತಹ ಪ್ರಾಣಿಗಳ ಉತ್ಪತ್ತಿಗೆ ಕಾರಣನಾದವನು.

* * *

387) **ಸ್ಥಾನದಃ** = ಪ್ರಾಣಿಗಳಿಗೆ ಕರ್ಮಾನುಗುಣವಾದ ಸ್ಥಾನಗಳನ್ನು ಕೊಡುವವನು.

ಶಂ. ಭಾ. :– ಧ್ರುವನೇ ಮುಂತಾದವರಿಗೆ ಅವರವರ ಕರ್ಮಗಳಿಗೆ ಅನುಗುಣವಾದ ಸ್ಥಾನಗಳನ್ನು ಕೊಡುವವನು.

389) **ಪ. ಭ. :–** ಪರಮಪದವನ್ನು ಹೊಂದುವುದಕ್ಕೆ ಕಾರಣನಾಗಿರುವವನು. **'ಪರಮಪದಪ್ರಾಪ್ತಿಹೇತವೇ'** ಎಂಬುದು ಮಂತ್ರವರ್ಣ.

ನಿರುಕ್ತಿ :– ಸ ಏವ ಪರಮಾಕಾಶಪ್ರಾಪ್ತೌ ಹೇತುತ್ವತಃ ಸದಾ ।
ಪ್ರೋಚ್ಯತೇ ಸ್ಥಾನದ ಇತಿ ಸಪ್ತಾರ್ಣೋ ಮನುನಾಯಕಃ ॥

'ಓಂ ಸ್ಥಾನದಾಯ ನಮಃ' ಈ ನಾಮಮಂತ್ರವು ಜಪಿಸಲು ಶ್ರೇಷ್ಠ ವಾದುದು.

387) ಸ. ಸಂ. :– ಭಕ್ತರಿಗೆ ವೈಕುಂಠವೇ ಮುಂತಾದ ಸ್ಥಾನಗಳನ್ನು ಕೊಡುವವನು ; ಅಯೋಗ್ಯರ ಸ್ಥಾನವನ್ನು ಖಂಡಿಸುವವನು.

* * *

388) **ಧ್ರುವಃ** = ಸ್ಥಿರನಾದವನು ; ಅಳಿವಿಲ್ಲದವನು ; ಧ್ರುವನಕ್ಷತ್ರ ರೂಪಿಯು.

ಶಂ. ಭಾ. :– ಅಳಿವಿಲ್ಲದವನು.

390) ಪ. ಭ. :– ಕೆಳಮಟ್ಟದಲ್ಲಿದ್ದ ಧ್ರುವಕುಮಾರನಿಗೂ ಉತ್ತಮ ವಾದ ಸ್ಥಾನವನ್ನು ಕೊಟ್ಟು ಅವನನ್ನು ಧ್ರುವನನ್ನಾಗಿ ಮಾಡಿದವನು ; ಎಲ್ಲಕ್ಕೂ ವ್ಯವಸ್ಥಾಪಕನಾಗಿ ಸ್ಥಿರಪಡಿಸಿದವನು.

ನಿರುಕ್ತಿ :– ಅರ್ವಾಚೀನಂ ಧ್ರುವಮಪಿ ತುಙ್ಗಸ್ಥಾನಪ್ರದಾನತಃ ।
ಧ್ರುವೀಚಕಾರ ಯಸ್ಮಾದ್ಧಿ ಧ್ರುವಸ್ತಸ್ಮಾತ್ಪ್ರಕೀರ್ತಿತಃ ॥

388) ಸ. ಸಂ. :– ಶಾಶ್ವತನು.

* * *

389) **ಪರರ್ದ್ಧಿಃ** = ಶ್ರೇಷ್ಠವಾದ ಸಂಪತ್ತುಳ್ಳವನು.

ಶಂ. ಭಾ. :– ಶ್ರೇಷ್ಠವಾದ ವಿಭೂತಿಯುಳ್ಳವನು.

391) ಪ. ಭ. :– ಇಲ್ಲಿಂದ ಮೃತಸಂಜೀವನವಾದ ರಾಮವೃತ್ತಾಂತವು ಪ್ರಾರಂಭವಾಗುತ್ತದೆ. ಸರ್ವೈಶ್ವರ್ಯಕ್ಕಿಂತಲೂ ಅತಿಶಯವಾದ ಕಲ್ಯಾಣ ಗುಣಸಮೃದ್ಧಿಯುಳ್ಳವನು ; ಕಲ್ಯಾಣವೂ ಶ್ರೇಷ್ಠವೂ ಆದ ಗುಣಗಳ ಸಮೃದ್ಧಿ ಯಿಂದಲೂ ಪರಾವಸ್ಥೆಯಿಂದಲೂ ಕೂಡಿದವನು.

ನಿರುಕ್ತಿ :– ಕಲ್ಯಾಣಾನಾಂ ಪರಾಣಾಂ ಚ ಗುಣಾನಾಮೃದ್ಧಿತಃ ಸದಾ ।
ಪರಾವಸ್ಥತಯಾ ಚೈವ ಪರರ್ಧಿರಿತಿ ಕಥ್ಯತೇ ॥

389) **ಸ. ಸಂ. :–** ಇತರರ ವೃದ್ಧಿಗೆ ಕಾರಣನಾದವನು.

* * *

390) **ಪರಮಸ್ಪಷ್ಟಃ** = ಜ್ಞಾನಿಗಳಿಗೆ ಅತ್ಯಂತಸ್ಪಷ್ಟವಾಗಿರುವವನು ; ಶ್ರೇಷ್ಠನೂ ಸ್ಪಷ್ಟನೂ ಆಗಿರುವವನು.

ಶಂ. ಭಾ. :– ಶ್ರೇಷ್ಠವಾದ ಕಾಂತಿಯುಳ್ಳವನು ; ಪರಾಶ್ರಯವಿಲ್ಲದೇ ಸಿದ್ಧನಾಗಿರುವುದರಿಂದ ಸರ್ವೋತ್ಕೃಷ್ಟನಾದವನು ಮತ್ತು ಜ್ಞಾನಸ್ವರೂಪನಾಗಿ ರುವುದರಿಂದ ಸ್ಪಷ್ಟನಾಗಿರುವವನು.

392) **ಪ. ಭ. :–** ಸ್ಪಷ್ಟವಾಗಿ ಪ್ರತ್ಯಕ್ಷವಾಗಿ ಕಾಣಲ್ಪಟ್ಟ ತನ್ನ ಪಾರಮ್ಯ ವುಳ್ಳವನು. **ವ್ಯಕ್ತಮೇಷ ಮಹಾಯೋಗೀ ಪರಮಾತ್ಮಾ ಸನಾತನಃ ।** (ರಾ. ಯು. ೧೧೪-೧೪) **ಸೂರ್ಯಸ್ಯಾಪಿ ಭವೇತ್ಸೂರ್ಯಃ** (ರಾ. ಅ. ೪೪-೧೫)
ನಿರುಕ್ತಿ :– ಸಾಕ್ಷಾದ್ದೃಷ್ಟಸ್ವಪಾರಮ್ಯಃ ಪರಮಸ್ಪಷ್ಟ ಉಚ್ಯತೇ ॥

390) **ಸ. ಸಂ. :–** ಅತ್ಯಂತವಾಗಿ ಅಸ್ಪಷ್ಟನಾಗಿರುವವನು ; ಪರಮ ನಾದ ತನ್ನಿಂದಲೇ ಸ್ಪಷ್ಟಗೊಂಡವನು.

* * *

391) **ತುಷ್ಟಃ** = ಪರಮಸಂತೋಷವುಳ್ಳವನು.

ಶಂ. ಭಾ. :– ಪರಮಾನಂದೈಕರೂಪಿಯು.

393) **ಪ. ಭ. :–** (ದಶರಥಪುತ್ರತ್ವವನ್ನು ಪಡೆದು ಜಗತ್ತನ್ನು ಪಾಲನೆ ಮಾಡಿದುದರಿಂದ ಮನುಷ್ಯಭಾವದಲ್ಲಿಯೂ ಕೂಡ) ಪರತ್ವಕ್ಕಿಂತಲೂ ಹೆಚ್ಚಾಗಿ ಸಂತೋಷಗೊಂಡವನು.

ನಿರುಕ್ತಿ :– ಲಾಭಾದ್ದಾಶರಥಿತ್ವಸ್ಯ ಜಗತಃ ಪಾಲನಸ್ಯ ಚ ।
ಮನುಷ್ಯತ್ವೇಽಪಿ ಯಃ ಪ್ರೀತಃ ಸ ತುಷ್ಟಃ ಇತಿ ಕಥ್ಯತೇ ॥

391) **ಸ. ಸಂ. :–** ಭಕ್ತರು ಮಾಡುವ ಸೇವೆಯಿಂದ ಸಂತೋಷ ಗೊಳ್ಳುವವನು.

* * *

392) **ಪುಷ್ಟಃ**= ನಿತ್ಯಪುಷ್ಟಿಯುಳ್ಳವನು ; ಪೂರ್ಣನಾದವನು.

ಶಂ. ಭಾ. :– ಎಲ್ಲ ಕಡೆಗಳಲ್ಲಿಯೂ ಸಂಪೂರ್ಣನಾಗಿರುವವನು.

394) **ಪ. ಭ. :–** ಮಹಾಗುಣಗಳಿಂದ ಪೂರ್ಣನಾದವನು.

ನಿರುಕ್ತಿ :– **ಗುಣೈರ್ಯೋ ಹ್ಯಾನೃಶಂಸಾದ್ಯೈಃ ಪೂರ್ಣಃ ಪುಷ್ಟ ಇತೀರಿತಃ॥**

392) **ಸ. ಸಂ. :–** ಪೋಷಿಸುವವನು.

* * *

393) **ಶುಭೇಕ್ಷಣಃ**= ಶುಭಕರವಾದ ದರ್ಶನವುಳ್ಳವನು ; ಶುಭಕರವಾದ ಕಣ್ಣುಗಳುಳ್ಳವನು.

ಶಂ. ಭಾ. :– (ಮೋಕ್ಷವನ್ನು ಬಯಸುವವರಿಗೆ ಮೋಕ್ಷಪ್ರದವೂ, ಭೋಗವನ್ನು ಬಯಸುವವರಿಗೆ ಭೋಗಪ್ರದವೂ, ಸಮಸ್ತಸಂದೇಹಗಳ ವಿನಾಶಕಾರಿಯೂ, ಪಾಪಿಗಳನ್ನು ಪಾವನಗೊಳಿಸುವುದೂ, ಹೃದಯಗ್ರಂಥಿಯನ್ನು ಕತ್ತರಿಸಿಹಾಕುವುದೂ, ಸಮಸ್ತಕರ್ಮಗಳನ್ನೂ ನಾಶಗೊಳಿಸುವುದೂ ಮತ್ತು ಅವಿದ್ಯೆಯನ್ನು ಹೋಗಲಾಡಿಸುವುದೂ ಆಗಿರುವುದರಿಂದ) ಶುಭಕರವಾದ ದರ್ಶನವುಳ್ಳವನು.

395) **ಪ. ಭ. :–** ಸೌಶೀಲ್ಯದ ಐಶ್ವರ್ಯವನ್ನು ಸೂಚಿಸುವುದೂ, ಶೀತಲವೂ, ದೀರ್ಘವೂ, ವಿಶಾಲವೂ, ರಕ್ತವರ್ಣವೂ ಆದ ಶುಭವಾದ ನೇತ್ರವುಳ್ಳವನು. ಅವನು ಮಾಡುವ ದರ್ಶನ ಮತ್ತು ಅವನನ್ನು ಕುರಿತು ಇತರರು ಮಾಡುವ ದರ್ಶನ–ಎರಡೂ ಶುಭಕರವಾದುವುಗಳು.

ನಿರುಕ್ತಿ :– **ಸೌಶೀಲ್ಯೈಶ್ವರ್ಯಪಿಶುನಂ ಶೀತಲಂ ದೀರ್ಘಮಾಯತಮ್।**
ತಾಮ್ರಂ ಚ ಲೋಚನಂ ಯಸ್ಯ ಸ ಶುಭೇಕ್ಷಣ ಈರಿತಃ ॥

393) **ಸ. ಸಂ. :–** ಯಾವನು ಮಾಡುವ ದರ್ಶನವು ಅಥವಾ ಯಾವನ ವಿಷಯವಾದ ದರ್ಶನವು ಶುಭಕರವಾಗಿದೆಯೋ–ಅವನು.

* * *

ರಾಮೋ ವಿರಾಮೋ ವಿರತೋ ಮಾರ್ಗೋ ನೇಯೋ ನಯೋಽನಯಃ ।
ವೀರಃ ಶಕ್ತಿಮತಾಂ ಶ್ರೇಷ್ಠೋ ಧರ್ಮೋ ಧರ್ಮವಿದುತ್ತಮಃ ॥೫೬॥

394) **ರಾಮಃ** = ಅಭಿರಾಮನಾದವನು ; ಯೋಗಿಗಳಲ್ಲಿ ರಮಿಸುವವನು ; ಯೋಗಿಗಳು ಯಾವನಲ್ಲಿ ರಮಿಸುತ್ತಾರೆಯೋ–ಅವನು ; ಶ್ರೀರಾಮಸ್ವರೂಪಿಯು ; ವಿಶ್ವೇಶ್ವರನು.

ರಾಶಬ್ದೋ ವಿಶ್ವವಚನೋ ಮಶ್ಚಾಪೀಶ್ವರವಾಚಕಃ ।
ವಿಶ್ವಾನಾಮೀಶ್ವರೋ ಯೋ ಹಿ ತೇನ ರಾಮಃ ಪ್ರಕೀರ್ತಿತಃ ॥
(ಬ್ರಹ್ಮವೈವರ್ತ)

ಶಂ. ಭಾ. :– ನಿತ್ಯಾನಂದಲಕ್ಷಣನಾದ ಯಾವನಲ್ಲಿ ಯೋಗಿಗಳು ರಮಿಸುವರೋ–ಅಂತಹ ಪರಬ್ರಹ್ಮವು.

ರಮನ್ತೇ ಯೋಗಿನೋ ಯಸ್ಮಿನ್ನಿತ್ಯಾನನ್ದೇ ಚಿದಾತ್ಮನಿ ।
ಇತಿ ರಾಮಪದೇನೈತತ್ಪರಂ ಬ್ರಹ್ಮಾಭಿಧೀಯತೇ ॥ (ಪದ್ಮಪುರಾಣ)

ತನ್ನ ಇಷ್ಟದಿಂದ ರಮಣೀಯವಾದ ದೇಹವನ್ನು ಧರಿಸಿದ ದಾಶರಥಿ ಶ್ರೀರಾಮನು.

396) **ಪ. ಭ.** :– ಯಾವನಲ್ಲಿ ಎಲ್ಲರೂ ಯಾವಾಗಲೂ ರಮಿಸುವರೋ–ಅಂತಹ ಪರಮಾತ್ಮನು ; ತನ್ನ ಗುಣ-ರೂಪಾದಿಗಳಿಂದ ಎಲ್ಲರಿಗೂ ಯಾವಾಗಲೂ ಆನಂದವನ್ನುಂಟುಮಾಡುವವನು. **ರಾಮೋ ರಮಯತಾಂ ಶ್ರೇಷ್ಠಃ ।** (ರಾ. ಅ.೫೩-೧) **ಗುಣಾಭಿರಾಮಂ ರಾಮಂ ಚ**
ನಿರುಕ್ತಿ :– **ಶುಭೇಕ್ಷಣೇಽಸ್ಮಿನ್ಸ್ವಗುಣೈಃ ರಮ್ಯತೇ ರಾಮ ಈರಿತಃ ॥**

394) **ಸ. ಸಂ.** :– ರಮಾದೇವಿಗೆ ಪತಿಯಾದವನು ; ಯೋಗಿಗಳು ಯಾವನಲ್ಲಿ ರಮಿಸುವರೋ–ಅವನು ; ರಮಿಸುವವನು ಮತ್ತು ಅಜ್ಞಾನವಿಲ್ಲದವನು ; ರತಿಯನ್ನು ಉಂಟುಮಾಡುವವನು ; ಆನಂದರೂಪಿಯೂ, ಪೂರ್ಣನೂ, ಲೋಕರಮಣನೂ ಆಗಿರುವುದರಿಂದ ರಾಮನು. **ಆನನ್ದರೂಪೋ ನಿಷ್ಪರಿಮಾಣ ಏಷಃ । ಲೋಕಶ್ಚೈತಸ್ಮಾದ್ರಮತೇ ತೇನ ರಾಮಃ ॥** (ಗೀತಾಭಾಷ್ಯ ಶಾಂಡಿಲ್ಯವಚನ)

* * *

395) ವಿರಾಮಃ = ಎಲ್ಲ ಕರ್ಮಗಳನ್ನೂ ನಾಶಹೊಂದಿಸುವವನು ; ವಿಶ್ರಾಂತಿಧಾಮವು.

ಶಂ. ಭಾ. :– ಪ್ರಾಣಿಗಳಿಗೆ ಯಾವನಲ್ಲಿ ಅವಸಾನವುಂಟಾಗುವುದೋ–ಅವನು.

397) ಪ. ಭ. :– ವರಪ್ರದರಾದ ಬ್ರಹ್ಮಾದಿಗಳ ವರಗಳಿಂದ ಅವಧ್ಯರಾಗಿದ್ದ ರಾವಣಾದಿಗಳೂ ಯಾವನಲ್ಲಿ ಅವಸಾನಹೊಂದಿದರೋ–ಅವನು.

ನಿರುಕ್ತಿ :– ವರಪ್ರದೈರ್ಬ್ರಹ್ಮಮುಖ್ಯೈರವಧ್ಯತ್ವಾದಿಭಿರ್ವರೈಃ ।
ಯಸ್ಮಿನ್ವಿರಮ್ಯತ ಇತಿ ಸ ವಿರಾಮಃ ಪ್ರಕೀರ್ತಿತಃ ॥

395) ಸ. ಸಂ. :– ವಿಶಿಷ್ಟಳಾದ ರಮಾಸುಂದರಿಯುಳ್ಳವನು ; ವಿವಿಧವಾದ ಗೋಪಿಕಾದಿ ಸ್ತ್ರೀಯರುಳ್ಳವನು ; ಜನರನ್ನು ಪ್ರಳಯಕಾಲದಲ್ಲಿ ಅಂತ್ಯಗೊಳಿಸುವವನು.

* * *

396) ವಿರತಃ= (ವಿಷಯಗಳಲ್ಲಿ) ಆಸಕ್ತಿಯಿಲ್ಲದವನು ; ನಿರ್ಲಿಪ್ತನು.

ಶಂ. ಭಾ. :– ವಿಷಯಸೇವನೆಯಲ್ಲಿ ರಾಗವಿಲ್ಲದವನು.

398) ಪ. ಭ. :– ವಿರಜೋಮಾರ್ಗಃ = ನಿರ್ದುಷ್ಟವಾದ ಮಾರ್ಗವನ್ನು ತೋರಿಸುವವನು. (ವಿರತಃ = ನೈಸರ್ಗಿಕವಾದ ನಿರಪೇಕ್ಷತೆಯಿಂದ ರಾಜ್ಯವೇ ಮುಂತಾದ ಅಲ್ಪವಿಷಯಗಳಿಂದ) ವಿರತನಾದವನು. **ನ ಚಾಸ್ಯ ಮಹತೀಂ ಲಕ್ಷ್ಮೀಂ ರಾಜ್ಯನಾಶೋಽಪಕರ್ಷತಿ** (ರಾ. ಅ. ೧೬-೩೨) **ಮಾರ್ಗಃ** = ಭರದ್ವಾಜರೇ ಮುಂತಾದ ಮುನಿಗಳಿಂದ ಹುಡುಕಲ್ಪಡುವವನು.

ನಿರುಕ್ತಿ :– ನಿಸರ್ಗನೈರಪೇಕ್ಷ್ಯೇಣ ರಾಜ್ಯಾದೇಃ ಕೃಪಣಾದ್ಧಿಯಃ ।
ವಿರಾಗೀ ವಿರತಃ ಸ ಸ್ಯಾತ್ಸಪ್ತಾರ್ಣಃ ಪರಮಾದ್ಭುತಃ ॥

ನಿರುಕ್ತಿ :– ಮೃಗ್ಯಮಾನತಯಾ ಮಾರ್ಗೋ ಭರದ್ವಾಜಾದಿಭಿಃ ಸದಾ ।
ಪಾಠೇ ತು ವಿರಜೋಮಾರ್ಗ ಇತಿ ಪನ್ಥಾಃ ಪ್ರದರ್ಶಿತಃ ।
ನಿರ್ದೋಷೋ ಯೇನ ವಿರಜೋಮಾರ್ಗಃ ಸನ್ಮಾರ್ಗದರ್ಶ್ಯಸೌ ॥

396) ಸ. ಸಂ. :– ವಿರಜಃ= ತ್ರಿಗುಣರಹಿತನು.

* * *

397) **ಮಾರ್ಗಃ** = ಪರಮಶ್ರೇಯಸ್ಸಿಗೆ ಏಕಮಾತ್ರವಾದ ದಾರಿಯಾಗಿರುವವನು. **ನಾನ್ಯಃ ಪನ್ಥಾ ಅಯನಾಯ ವಿದ್ಯತೇ ॥** (ಪು. ಸೂ.)

ಶಂ. ಭಾ. :– ಯಾವನನ್ನರಿತು ಯೋಗಿಗಳು ಅಮೃತತ್ವವನ್ನು ಹೊಂದುವರೋ–ಅವನೇ ಮಾರ್ಗವು. **ನಾನ್ಯಃ ಪನ್ಥಾ ವಿದ್ಯತೇಽಯನಾಯ** (ಶ್ವೇ. ೩-೮)

397) **ಸ. ಸಂ. :–** ಮೃಗದ (ಸಿಂಹದ) ಮುಖವುಳ್ಳವನು.

* * *

398) **ನೇಯಃ** = ಯೋಗಮಾರ್ಗದಲ್ಲಿ ಸದಾ ತನ್ನೊಡನೆ ಒಯ್ಯಲು ಯೋಗ್ಯನಾದವನು.

ಶಂ. ಭಾ. :–ಒಳ್ಳೆಯ ಜ್ಞಾನದಿಂದ ಪರಮಾತ್ಮಭಾವಕ್ಕೆ ಒಯ್ಯಲ್ಪಡುವ ಜೀವರೂಪಿಯು.

399) **ಪ. ಭ. :–** ಸ್ನೇಹಿತರಿಂದ ನಿಯೋಜಿಸಲ್ಪಡಲು ಯೋಗ್ಯನಾದವನು. **ಆಜ್ಞಾಪ್ಯೋಽಹಂ ತಪಸ್ವಿನಾಮ್** (ರಾ. ಅ. ೬-೨೨)
ನಿರುಕ್ತಿ :– ನಿಯೋಗಯೋಗ್ಯಃ ಸುಹೃದಾಂ ಯೋಽಸೌ ನೇಯಃ ಸ ಉಚ್ಯತೇ ॥

398) **ಸ. ಸಂ. :–** ಶಿಷ್ಯರಲ್ಲಿ ಉಪದೇಶದಿಂದ ಒಯ್ಯಲ್ಪಡಲು ಯೋಗ್ಯನಾದವನು.

* * *

399) **ನಯಃ** = ನೀತಿರೂಪನಾದವನು ; ನಾಯಕನು.

ಶಂ. ಭಾ. :– ನೇತಾರನು. ಈ ರೀತಿಯಲ್ಲಿ ಭಗವಂತನು ಮಾರ್ಗ, ನೇಯ, ನಯ–ಎಂಬ ಮೂರು ರೂಪಗಳಿಂದ ಕಲ್ಪಿಸಲ್ಪಡುತ್ತಾನೆ.

400) **ಪ. ಭ. :–** ತಪೋಧನರು ಯಾವಾಗಲೂ ಯಾವನಲ್ಲಿಗೆ ಒಯ್ಯಲ್ಪಡುತ್ತಾರೆಯೋ–ಅವನು.
ಪಾಣ್ಡವಾನಾಂ ಭವಾನ್ನಾಥಃ ಭವನ್ತಂ ಚಾಶ್ರಿತಾ ವಯಮ್ ॥
(ಮ. ಭಾ. ಸ. ೨೦-೯)
ರಕ್ಷಿತವ್ಯಾಸ್ತ್ವಯಾ ಶಶ್ವದ್ಗರ್ಭಭೂತಾಸ್ತಪಸ್ವಿನಃ ॥ (ರಾಮಾಯಣ)

ನಿರುಕ್ತಿ :– ಯಸ್ಮಿಂಸ್ತಪೋಧನಾ ನಿತ್ಯಂ ನೀಯನ್ತ ಇತಿ ವೈ ನಯಃ ॥

399) **ಸ. ಸಂ. :–** ಉತ್ತಮನಾಗಿರುವುದರಿಂದ ತನ್ನಲ್ಲಿಗೆ ಒಯ್ಯು ವವನು.

*　　　*　　　*

400) **ಅನಯಃ** = ನೀತಿ-ನಿಯಮಗಳಿಲ್ಲದವನು ; ನಾಯಕನಿಲ್ಲದ ವನು.

ಶಂ. ಭಾ. :– ಬೇರೆ ನೇತಾರನಿಲ್ಲದವನು.

401) **ಪ. ಭ. :–** ವೈರಿಗಳಿಗೆ ಒಯ್ಯಲು ಆಗದವನು ; ಜಗತ್ತುಗಳಿಗೆ ತನ್ನನ್ನು ಬಿಟ್ಟು ಬೇರೆ ಶುಭವಿಧಿಯಿಲ್ಲದವನು.

ನಿರುಕ್ತಿ :– ಅಸುಹೃದ್ಭಿರ್ನಯೋ ಯಸ್ಯ ನಾಸ್ತೀತ್ಯನಯ ಉಚ್ಯತೇ ।
ಅಥವಾ ಜಗತಾಂ ಯಸ್ಮಾನ್ನಾನ್ಯೋಽಸ್ತೀತ್ಯನಯೋಽಥವಾ ॥

400) **ಸ. ಸಂ. :–** ವಾಯುವನ್ನು ಭೂಮಿಗೆ ಹೊಂದಿಸುವವನು ; ತಾನೇ ಉತ್ತಮನಾಗಿರುವುದರಿಂದ ಬೇರೆ ಯಾರಿಗೂ ಒಯ್ಯುವಿಕೆ ಇಲ್ಲ ದವನು.

*　　　*　　　*

401) **ವೀರಃ** = ಪರಾಕ್ರಮಶಾಲಿಯು ; ಸತ್ಯಪರಾಕ್ರಮನು.

ಶಂ. ಭಾ. :– ವಿಕ್ರಮಶಾಲಿಯು.

402) **ಪ. ಭ. :–** ರಾಕ್ಷಸರಿಗೆ ಭಯಂಕರನಾಗಿ ನಡುಕಕ್ಕೆ ಕಾರಣನಾದ ವನು.

ನಿರುಕ್ತಿ :– ವೀರಃಕಮ್ಪನಹೇತುತ್ವಾದ್ರಕ್ಷಸಾಮತಿಭೀಮತಃ ॥

401) **ಸ. ಸಂ. :–** ಜ್ಞಾನದೊಡನೆ ರಮಿಸುವವನು ; ಪರಾಕ್ರಮಿಯಾಗಿ ರಮಿಸುವವನು.

*　　　*　　　*

402) **ಶಕ್ತಿಮತಾಂ ಶ್ರೇಷ್ಠಃ** = ಶಕ್ತಿನಿಧಿಯಾದುದರಿಂದ ದೇವತೆಗಳೇ ಮುಂತಾದವರಿಗಿಂತಲೂ ಅತಿಶಯವಾದ ಶಕ್ತಿಯುಳ್ಳವನು.

ಪರಾಸ್ಯ ಶಕ್ತಿರ್ವಿವಿಧೈವ ಶ್ರೂಯತೇ (ಶ್ವೇ-ಉ.) ಅಖಿಲಶಕ್ತಿಧರಃ ಸ್ವಧಾಮ್ನಾ ।

ಶಂ. ಭಾ. :– ಬ್ರಹ್ಮಾದಿ ಮುಂತಾದ ಶಕ್ತಿಮಂತರಿಗಿಂತಲೂ ಅತ್ಯಂತ ಶಕ್ತಿಶಾಲಿಯಾದವನು.

403) ಪ. ಭ. :– ಶಕ್ತಿವಂತರಾದ ದೇವತೆಗಳೇ ಮುಂತಾದವರಿಗಿಂತಲೂ ಪ್ರಶಸ್ತತಮನಾದವನು.

ನಿರುಕ್ತಿ :– **ಸುರಾದೀನಾಂ ಶಕ್ತಿಮತಾಂ ಯಃ ಪ್ರಶಸ್ಯತಮಃ ಸ್ಮೃತಃ ।**
ತಸ್ಮಾಚ್ಛಕ್ತಿಮತಾಂ ಶ್ರೇಷ್ಠಃ ದಶಾರ್ಣಃ ಶ್ರೇಷ್ಠದೋ ಮನುಃ ॥

"ಓಂ ಶಕ್ತಿಮತಾಂ ಶ್ರೇಷ್ಠಾಯ ನಮಃ'–ಎಂಬ ಈ ನಾಮಮಂತ್ರ ಜಪವು ಶ್ರೇಷ್ಠತ್ವವನ್ನು ಹೊಂದಿಸುತ್ತದೆ.

402) ಸ. ಸಂ. :– ಶಕ್ತಿವಂತರಲ್ಲಿ ಶ್ರೇಷ್ಠನಾದವನು.

* * *

403) **ಧರ್ಮಃ** = ಧರ್ಮರೂಪಿಯಾದವನು. ಸಿದ್ಧಧರ್ಮಸ್ವರೂಪಿಯು. ಎಲ್ಲವನ್ನೂ ಧರಿಸಿರುವವನು. **ಧಾರಣಾದ್ಧರ್ಮ ಉಚ್ಯತೇ ।**

ಶಂ. ಭಾ. :– ಎಲ್ಲ ಭೂತಗಳನ್ನೂ ಧರಿಸಿರುವವನು. ಅಣುರೇಷ ಧರ್ಮಃ(ಕಠ ೧-೧-೨೧) ಧರ್ಮಗಳಿಂದ ಆರಾಧಿಸಲ್ಪಡುವವನು.

404) ಪ. ಭ. :– ಅಭ್ಯುದಯ ಮತ್ತು ನಿಃಶ್ರೇಯಸಗಳಿಂದ ಎಲ್ಲವನ್ನೂ ಸಾಕ್ಷಾತ್ತಾಗಿ ಧರಿಸಿರುವವನು.

ನಿರುಕ್ತಿ :– **ನಿಃಶ್ರೇಯಸಾಭ್ಯುದಯಾಭ್ಯಾಂ ಧರ್ಮಃ ಸರ್ವಸ್ಯ ಧಾರಣಾತ್ ॥**

403) ಸ. ಸಂ. :– ಧರಿಸಿರುವವನು ; ಧರ್ಮದಿಂದ ಹೊಂದಲ್ಪಡುವವನು.

* * *

404) **ಧರ್ಮವಿದುತ್ತಮಃ** = ಧರ್ಮವನ್ನು ಬಲ್ಲವರಲ್ಲಿ ಶ್ರೇಷ್ಠನಾದವನು.

ಶಂ. ಭಾ. :– ಶ್ರುತಿಗಳೂ ಮತ್ತು ಸ್ಮೃತಿಗಳೂ ಯಾವನ ಆಜ್ಞೆಗಳಾಗಿವೆಯೋ–ಅವನೇ. ಧರ್ಮವನ್ನು ಬಲ್ಲವರಲ್ಲಿ ಶ್ರೇಷ್ಠತಮನಾದವನು.

405) **ಪ. ಭ. :–** ಧರ್ಮಜ್ಞಾನದಲ್ಲಿ ವಸಿಷ್ಠಾದಿಗಳಿಗೆ ಶಿಷ್ಯನಾಗಿದ್ದರೂ ಅವರಿಗೆ ಉಪಜೀವ್ಯ (ಜೀವನಾಧಾರ) ನಾಗಿರತಕ್ಕವನು. **ಸರ್ವದಾಭಿಗತಃ ಸದ್ಭಿಃ ಸಮುದ್ರ ಇವ ಸಿನ್ಧುಭಿಃ ॥** (ರಾ. ಬಾ. ೧-೫೬)

ನಿರುಕ್ತಿ :– **ವಸಿಷ್ಠಾದ್ಯುಪಜೀವ್ಯೋ ಯಃ ಧರ್ಮೇ ಧರ್ಮವಿದುತ್ತಮಃ**

404) **ಸ. ಸಂ. :–** ಧರ್ಮವನ್ನು ಬಲ್ಲವರಲ್ಲಿ ಉತ್ತಮನಾದವನು. ಯಾವನಿಂದ ಧರ್ಮಿಷ್ಠರು ಉತ್ತಮರಾಗುತ್ತಾರೆಯೋ–ಅವನು.

* * *

ವೈಕುಣ್ಠಃ ಪುರುಷಃ ಪ್ರಾಣಃ ಪ್ರಾಣದಃ ಪ್ರಣವಃ ಪೃಥುಃ ।
ಹಿರಣ್ಯಗರ್ಭಃ ಶತ್ರುಘ್ನೋ ವ್ಯಾಪ್ತೋ ವಾಯುರಧೋಕ್ಷಜಃ ॥೫೭॥

405) **ವೈಕುಣ್ಠಃ** = ಕುಂಠಿತನಾಗದೇ ಇರುವವನು ; ತಡೆಯಿಲ್ಲದ ಗತಿಯುಳ್ಳವನು. ವೈಕುಂಠವೆಂಬ ಹೆಸರಿನ ದಿವ್ಯಧಾಮವುಳ್ಳವನು.

ಶಂ. ಭಾ. :– ಗತಿಗೆ ಬಗೆ-ಬಗೆಯ ಅಡ್ಡಿಗಳನ್ನು ಉಂಟುಮಾಡುವವನು ; ಜಗತ್ತಿನ ಪ್ರಾರಂಭದಲ್ಲಿ ಬಿಡಿ-ಬಿಡಿಯಾಗಿದ್ದ ಪಂಚಭೂತಗಳನ್ನೂ ಒಂದಕ್ಕೊಂದು ಸೇರುವಂತೆ ಮಾಡಿ ಅವುಗಳ ಸ್ವೇಚ್ಛಾಗತಿಯನ್ನು ತಡೆಗಟ್ಟಿದವನು.

ಮಯಾ ಸಂಶ್ಲೇಷಿತಾ ಭೂಮಿರದ್ಭಿರ್ವ್ಯೋಮ ಚ ವಾಯುನಾ ।
ವಾಯುಶ್ಚ ತೇಜಸಾ ಸಾರ್ಧಂ ವೈಕುಣ್ಠತ್ವಂ ತತೋ ಮಮ ॥
(ಮ. ಭಾ. ಶಾಂ.೩೪೨-೮೦)

406) **ಪ. ಭ. :–** ಎಲ್ಲರನ್ನೂ ಒಟ್ಟಿಗೆ ಸೇರಿಸುವವನು.

ನಿರುಕ್ತಿ :– **ಸಂಶ್ಲೇಷಪ್ರತಿಘಾತಶ್ಚ ಕುಣ್ಠಿಧಾತ್ವರ್ಥ ಉಚ್ಯತೇ ।**
ವಿಗತಃ ಸ ಚ ಯೇಷಾಂ ತೇ ವಿಕುಣ್ಠಾಃ ಸ್ಯುರುದೀರಿತಾಃ ।
ತೇಷಾಮೇವೈಷ ಇತಿ ಹಿ ವೈಕುಣ್ಠಃ ಪರಿಕೀರ್ತಿತಃ ॥

405) **ಸ. ಸಂ. :–** ವೈಕುಂಠಲೋಕದಲ್ಲಿರುವವನು ; ವಿಕುಂಠಾ ಎಂಬುವಳ ಪುತ್ರನಾದವನು.

* * *

406) **ಪುರುಷಃ** = ಪುರದಲ್ಲಿ ಶಯನಿಸುತ್ತಿರುವ ಆತ್ಮಚೈತನ್ಯಸ್ವರೂಪನು. ಪೂರ್ಣನಾಗಿರುವವನು.

ಶಂ. ಭಾ. :– ಎಲ್ಲರಿಗಿಂತಲೂ ಮೊದಲಿಗನಾಗಿರುವುದರಿಂದ ಅಥವಾ ಎಲ್ಲ ಪಾಪಗಳನ್ನೂ ನಾಶಮಾಡುವುದರಿಂದ ಇವನು ಪುರುಷನು. **ಸ ಯತ್ಪೂರ್ವೋಽಸ್ಮಾತ್ಸರ್ವಸ್ಮಾತ್ಸರ್ವಾನ್ಪಾಪ್ಮನ ಔಷತ್ತಸ್ಮಾತ್ಪುರುಷಃ ॥** (ಬೃ. ೧-೪-೧) ಪುರದಲ್ಲಿ ಶಯನಿಸಿರುವವನು.

407) **ಪ. ಭ. :–** ಪರಮಪಾವನನು ; ಸರ್ವಪಾಲಕನು.

ನಿರುಕ್ತಿ :– **ಸ ಯತ್ಪೂರ್ವ ಇತಿ ಶ್ರುತ್ಯಾ ಪುರುಷಃ ಪಾವನತ್ವತಃ ।**
ಪೃಧಾತೋಃ ಪಾಲನಾರ್ಥಾದ್ಧಿ ಕುಷನ್ಪ್ರತ್ಯಯಯೋಗತಃ ।
ಸರ್ವಪಾಲಕತಾಲಬ್ಧ್ಯಾ ಪುರುಷಃ ಪ್ರೋಚ್ಯತೇ ಬುಧೈಃ ॥

406) **ಸ. ಸಂ. :–** ಎಲ್ಲರಿಗಿಂತಲೂ ಹಿಂದೆ ಇದ್ದವನು ; ಎಲ್ಲ ದೋಷಗಳನ್ನೂ ನಾಶಮಾಡುವವನು ; ಪುರದಲ್ಲಿ ಶಯನಿಸಿರುವವನು. **ಸರ್ವಾಸು ಪೂರ್ಷು ಪುರಿಶಯಃ** ಎಂಬ ಶ್ರುತಿಯಂತೆ ಪುರು ಎಂದೆನಿಸುವ ಈ ಶರೀರದಲ್ಲಿ ಶಯನಿಸಿರುವ ಶ್ರೀಹರಿಯು. ಪೂರ್ಣನು ; ಪಾಲಕನು.

ಭಗವಾನಿತಿ ಶಬ್ದೋಽಯಂ ತಥಾ ಪುರುಷ ಇತ್ಯಪಿ ।
ನಿರುಪಾಧೀ ಚ ವರ್ತೇತೇ ವಾಸುದೇವೇ ಸನಾತನೇ ॥

* * *

407) **ಪ್ರಾಣಃ** = ಸಂಜೀವಕನು. ಪ್ರಾಣರೂಪಿಯಾಗಿ ವ್ಯಾಪಾರ ಮಾಡಿಸುವವನು.

ಶಂ. ಭಾ. :– ಕ್ಷೇತ್ರಜ್ಞರೂಪದಿಂದ ಜೀವಿಸಿರುವವನು ; ಪ್ರಾಣ ವಾಯುರೂಪದಿಂದ ಕೆಲಸಮಾಡುವವನು. **ಚೇಷ್ಟಾಂ ಕರೋತಿ ಶ್ವಸನ ಸ್ವರೂಪೀ** (ವಿ. ಪು.)

408) **ಪ. ಭ. :–** ಎಲ್ಲರಿಗೂ ಸಂಜೀವಕನಾಗಿರುವವನು.

ನಿರುಕ್ತಿ :– **ಪ್ರಾಣಃ ಸರ್ವಪ್ರಾಣನಾದ್ಧಿ.............. ॥**

407) **ಸ. ಸಂ. :– ಮುಕ್ತಾತ್ಮರಿಗಿಂತಲೂ ಶ್ರೇಷ್ಠನಾದವನು ; ಉತ್ಕೃಷ್ಟವಾದ ಧಾಮದಲ್ಲಿ ಕೆಲಸಮಾಡುವವನು.**

* * *

408) **ಪ್ರಾಣದಃ = ಪ್ರಾಣಗಳನ್ನು ಅನುಗ್ರಹಿಸುವವನು.**

ಶಂ. ಭಾ. :– ಪ್ರಾಣಿಗಳ ಪ್ರಾಣಗಳನ್ನು ಪ್ರಳಯವೇ ಮುಂತಾದ ಸಮಯಗಳಲ್ಲಿ ಖಂಡಿಸುವವನು.

409) **ಪ. ಭ. :– ಪ್ರಾಣಗಳನ್ನು ದಾನಮಾಡುವವನು.**

ನಿರುಕ್ತಿ :– .... ತದ್ದಾನಾತ್ಪ್ರಾಣದಃ ಸ್ಮೃತಃ ||

408) **ಸ. ಸಂ. :– ಶೋಕವನ್ನು ಖಂಡಿಸುವವನು. ಗುರುವಾಗಿ ಭಕ್ತರಿಗೆ ಪ್ರಾಣಗಳನ್ನು ಕೊಡುವವನು.**

* * *

409) **ಪ್ರಣವಃ= ಓಂಕಾರಸ್ವರೂಪಿಯು. ಪ್ರಣವಃ ಪರಮಾತ್ಮೈಷಃ ಓಂ ತತ್ಸದಿತಿ ವಿಶ್ರುತಃ ||ಪ್ರಣಮಃ = ಪ್ರಾಣಗಳನ್ನು ನಮಸ್ಕಾರ ಮಾಡಿಸುವವನು.**

ಶಂ. ಭಾ. :– ಪ್ರಣವಃ= ಸ್ತೋತ್ರಮಾಡುವವನು. ತಸ್ಮಾದೋಮಿತಿ ಪ್ರಣೌತಿ (ಶ್ರುತಿಃ) ನಮಸ್ಕರಿಸಲ್ಪಡುವವನು. ಪ್ರಣಮನ್ತೀಹ ವೈ ವೇದಾಃ ತಸ್ಮಾತ್ಪ್ರಣವ ಉಚ್ಯತೇ || (ನಿರುಕ್ತ)

410) **ಪ. ಭ. :– ಪ್ರಣಮಃ= ತನ್ನ ಗುಣಗಳಿಂದ ಚರಾಚರಗಳೂ ತನಗೆ ನಮಸ್ಕಾರಮಾಡುವಂತೆ ಮಾಡುವವನು. ನಮ್ರಗೊಳಿಸುವವನು.**

ನಿರುಕ್ತಿ :– ಗುಣೈಶ್ಚರಾಚರಾಣಾಂ ಹಿ ನಮನಾತ್ಪ್ರಣಮಃ ಸ್ಮೃತಃ ||

409) **ಸ. ಸಂ. :– ಪ್ರಣವಃ = ಅತಿಶಯವಾಗಿ ಒಯ್ಯುವವನು ; ಸ್ತೋತ್ರಮಾಡುವವನು. ವೇದಸ್ಥಃ ಪ್ರಣವಾಖ್ಯೋಽಸಾವಾತ್ಮಾನಂ ಪ್ರಣವೋ ಹ್ಯತಃ|| (ಗೀತಾತಾತ್ಪರ್ಯ) ಅತಿಶಯವಾಗಿ ನೂತನನಾಗಿರುವವನು ; ಅತಿಶಯವಾಗಿ ನಮಸ್ಕರಿಸಲು ಯೋಗ್ಯನಾದವನು.**

* * *

410) **ಪೃಥುಃ** = ವಿಸ್ತಾರವಾಗಿರುವವನು.

ಶಂ. ಭಾ. :– ಪ್ರಪಂಚರೂಪದಿಂದ ವಿಸ್ತಾರಗೊಂಡಿರುವವನು.

411) ಪ. ಭ. :– ಕೀರ್ತಿಯ ವಿಸ್ತಾರವುಳ್ಳವನು.

ನಿರುಕ್ತಿ :– **ಯಶೋವಿಸ್ತಾರವತ್ತ್ವಾಚ್ಚ ಪೃಥುರಿತ್ಯುಚ್ಯತೇ ಬುಧೈಃ ॥**

410) ಸ. ಸಂ. :– ಪ್ರಖ್ಯಾತನಾದವನು.

*   *   *

411) **ಹಿರಣ್ಯಗರ್ಭಃ** = ಹಿರಣ್ಮಯವಾದ ಅಂಡದ ಉತ್ಪತ್ತಿಗೆ ಕಾರಣನಾದವನು ; ಸೃಷ್ಟಿಕರ್ತನು ; ವೇದಗಳಿಂದ ಸ್ತುತಿಸಲ್ಪಡುವವನು ; ಯೋಗಿಗಳಿಂದ ನಿತ್ಯವೂ ಪೂಜಿಸಲ್ಪಡುವವನು.

ಹಿರಣ್ಯಗರ್ಭೋ ದ್ಯುತಿಮಾನ್ಯ ಏಷ ಚ್ಛನ್ದಸಿ ಸ್ತುತಃ ।
ಯೋಗೈಃ ಸಮ್ಪೂಜ್ಯತೇ ನಿತ್ಯಂ ಸ ಏವಾಹಂ ಭುವಿ ಸ್ಮೃತಃ ॥
(ಮ. ಭಾ. ಶಾಂ. ೩೪೨-೯೬)

ಶಂ. ಭಾ. :– ಹಿರಣ್ಯಗರ್ಭನ ಉತ್ಪತ್ತಿಗೆ ಕಾರಣವಾದ ಹಿರಣ್ಮಯವಾದ ಅಂಡವು ಯಾವನ ವೀರ್ಯದಿಂದ ಉಂಟಾಯಿತೋ–ಅವನು.

412) ಪ. ಭ. :– ಹಿತರಮಣೀಯವಾದ ಧ್ಯಾತೃಗಳ ಹೃದಯಗಳಿಗೆ ಶುಭಾಶಯನಾಗಿರುವವನು ; ಹಿರಣ್ಯನಿಧಿಗೆ ಸದೃಶನಾದವನು.

ನಿರುಕ್ತಿ :– **ಹಿ ಸತ್ಯ ರಮಣೀಯಸ್ಯ ಧ್ಯಾತೄಣಾಂ ಹೃದಯಸ್ಯ ಹಿ ।**
ಹಿರಣ್ಯಗರ್ಭಸ್ತನ್ತಸ್ಥಃ ಸ ಶುಭಾಶ್ರಯಣಃ ಸ್ಮೃತಃ ॥
ಯದ್ವಾ ಹಿರಣ್ಯಗರ್ಭೋಽಸೌ ಹಿರಣ್ಯನಿಧಿಸಾಮ್ಯತಃ ॥

411) ಸ. ಸಂ. :– ಹಿರಣ್ಯಾತ್ಮಕವಾದ ಬ್ರಹ್ಮಾಂಡವು ಯಾವನ ಗರ್ಭದಲ್ಲಿದೆಯೋ–ಅವನು.

*   *   *

412) **ಶತ್ರುಘ್ನಃ** = (ಧರ್ಮಕ್ಕೆ ವಿರೋಧಿಗಳಾದ) ಶತ್ರುಗಳನ್ನು ಸಂಹರಿಸುವವನು.

*   *   *

ಶಂ. ಭಾ. :– ದೇವತೆಗಳ ಶತ್ರುಗಳನ್ನು ಸಂಹರಿಸುವವನು.

413) ಪ. ಭ. :– ಹತ್ತು ಇಂದ್ರಿಯಗಳೆಂಬ ಹತ್ತು ಮುಖಗಳುಳ್ಳ ಮನಸ್ಸೆಂಬ ರಾಕ್ಷಸನನ್ನು ವಿವೇಕವೆಂಬ ಶರಗಳಿಂದ ಧ್ವಂಸಮಾಡುವವನು.

ದಶೇನ್ದ್ರಿಯಾನನಂ ಘೋರಂ ಯೋ ಮನೋರಜನೀಚರಮ್ ।
ವಿವೇಕಶರಜಾಲೇನ ಶಮಂ ನಯತಿ ಯೋಗಿನಾಮ್ ॥

(ಸಾತ್ವತಸಂ. ೧೨-೧೫೪)

ನಿರುಕ್ತಿ :– ಶತ್ರೂನಿನ್ದ್ರಿಯವರ್ಗಾನ್ಯೋ ಹನ್ತಿ ಶತ್ರುಘ್ನ ಉಚ್ಯತೇ ॥

412) ಸ. ಸಂ. :– ಶತ್ರುಗಳನ್ನು ಸಂಹರಿಸುವವನು.

* * *

413) **ವ್ಯಾಪ್ತಃ**= ಎಲ್ಲವನ್ನೂ ವ್ಯಾಪಿಸಿರುವವನು.

ಶಂ. ಭಾ. :– ಕಾರಣರೂಪದಿಂದ ಎಲ್ಲ ಕಾರ್ಯಗಳನ್ನೂ ವ್ಯಾಪಿಸಿರುವವನು.

414) ಪ. ಭ. :– ಎಲ್ಲರಿಗೂ ಪೂಜ್ಯನಾಗಿ ವಿಶೇಷವಾಗಿ ವ್ಯಾಪಿಸಿರುವವನು.

ನಿರುಕ್ತಿ :– ಸರ್ವಪೂಜ್ಯೋ ವಿಶೇಷೇಣ ವ್ಯಾಪನಾದ್ವ್ಯಾಪ್ತ ಉಚ್ಯತೇ ॥

413) ಸ. ಸಂ. :– ವಿಶಿಷ್ಟರಿಗೆ (ಬ್ರಹ್ಮಾದಿ ದೇವತೆಗಳಿಗೆ) ಆಪ್ತನಾದವನು ; ಗರುಡನನ್ನು ಹೊಂದಿರುವವನು.

* * *

414) **ವಾಯುಃ** = ವಾಯುದೇವತಾರೂಪಿಯು.

ಶಂ. ಭಾ. :– ಗಂಧವನ್ನು ಉಂಟುಮಾಡುವವನು. **ಪುಣ್ಯೋ ಗನ್ಧಃ ಪೃಥಿವ್ಯಾಂ ಚ** (ಗೀತಾ ೭-೯)

415) ಪ. ಭ. :– ಭರದ್ವಾಜ, ಗುಹ, ಶಬರೀ–ಮುಂತಾದವರ ಬಳಿಗೆ ತಾನೇ ಹೋಗುವವನು.

ನಿರುಕ್ತಿ :– ತತ್ರ ತತ್ರ ಸ್ಥಿತಾನ್ಸರ್ವಾನ್ಭರದ್ವಾಜಗುಹಾದಿಕಾನ್ ।
ಗಚ್ಛತಿ ಸ್ವಯಮೇವೈತಾನ್ಸ ವಾಯುರಿತಿ ಶಬ್ದ್ಯತೇ ॥

414) **ಸ. ಸಂ. :–** ಬಲರೂಪಿಯು ಮತ್ತು ಗಮನಕ್ರಿಯೆಯುಳ್ಳವನು; ಪ್ರಾಣಧಾರಣಕ್ಕೆ ಕಾರಣನಾದವನು ; ಜ್ಞಾನಿಯು ; ವರಿಸಲ್ಪಡುವವನು ; ಎಲ್ಲವೂ ಯಾವನಲ್ಲಿ ಇರುತ್ತವೆಯೋ ಅವನು ; ಶ್ರೇಷ್ಠನು. **ವಯಃ ಶ್ರೇಷ್ಠತ್ವ ಇತ್ಯತಃ ।** ಬಂಧಕನು ; ಯಾವನ ಅನುಗ್ರಹದಿಂದ ಸಂಸಾರದ ನಾಶವುಂಟಾಗುತ್ತದೆಯೋ–ಅವನು.

ಬಲತ್ವಾದಯನಾಚ್ಚೈವ ವಾಯುರಿತ್ಯಭಿಧೀಯತೇ ।
ವಾತ್ಯಾಯುರಿತಿ ವಾ ಜ್ಞಾನಾದ್ವರಣಾದಾಶ್ರಯತ್ವತಃ ॥
ವಯಬನ್ಧನ ಇತ್ಯಸ್ಮಾತ್ಸಂಸಾರಾದೇರ್ವ್ಯಯಾದಪಿ ।
ವೇತ್ಯಸ್ಮಿನ್ನಿತಿ ವಾ ವಾಯುರ್ವಯಃ ಶ್ರೇಷ್ಠತ್ವ ಇತ್ಯಪಿ ॥ (ಋಗ್ಭಾಷ್ಯ)

* * *

415) **ಅಧೋಕ್ಷಜಃ** = ಇಂದ್ರಿಯಗಳನ್ನು ಕೆಳಕ್ಕೆ ತಳ್ಳಿ ಯೋಗದಲ್ಲಿರುವವನು ; ಪೃಥಿವೀ ಮತ್ತು ಅಂತರಿಕ್ಷಗಳನ್ನು ಧರಿಸಿರುವವನು.

ಪೃಥಿವೀನಭಸೀ ಚೋಭೇ ವಿಶ್ರುತೇ ವಿಶ್ವತೋಮುಖೇ ।
ತಯೋಃ ಸಂಧಾರಣಾರ್ಥಂ ಹಿ ಮಾಮಧೋಕ್ಷಜಮಞ್ಜಸಾ ॥
(ಮ. ಭಾ. ಶಾಂ. ೩೪೨-೮೨)

ಶಂ. ಭಾ. :– ಎಂದಿಗೂ ತನ್ನ ಸ್ವರೂಪದಿಂದ ಕ್ಷೀಣನಾಗದವನು. **ಅಧೋ ನ ಕ್ಷೀಯತೇ ಜಾತು ಯಸ್ಮಾತ್ತಸ್ಮಾದಧೋಕ್ಷಜಃ ॥** (ಮ. ಭಾ. ಉ. ೭೦-೧೦) (ಅಕ್ಷವು) ಆಕಾಶವು ಕೆಳಗಿದೆ. ಪೃಥ್ವಿಯೂ ಕೆಳಗಿದೆ. ಅವೆರಡರ ಮಧ್ಯೆ ವಿರಾಡ್ರೂಪದಿಂದ ಪ್ರಕಟವಾಗುವವನು. ಇಂದ್ರಿಯ ಗುಣವು ಅಂತರ್ಮುಖವಾದಾಗ ಪ್ರಕಟಗೊಳ್ಳುವವನು.

ಅಧೋಭೂತೇ ಹ್ಯಕ್ಷಗಣೇ ಪ್ರತ್ಯಗ್ರೂಪಪ್ರವಾಹಿತೇ ।
ಜಾಯತೇ ತಸ್ಯ ವೈ ಜ್ಞಾನಂ ತೇನಾಧೋಕ್ಷಜ ಉಚ್ಯತೇ ॥

416) **ಪ. ಭ. :–** ಅಮೃತಸಮುದ್ರದಂತೆ ಸದಾ ಎಲ್ಲರಿಂದಲೂ ಅನುಭವಿಸಲ್ಪಡುತ್ತಿದ್ದರೂ ತನ್ನ ಸ್ವರೂಪದಿಂದ ಕ್ಷೀಣಿಸದವನು.

ನಿರುಕ್ತಿ :– **ಸದೋಪಭುಜ್ಯಮಾನೋಽಪಿ ಸರ್ವೈರಮೃತಸಿನ್ಧುವತ್ ।**
ಅಧೋ ನ ಕ್ಷೀಯತೇ ಜಾತು ಯಸ್ಮಾತ್ತಸ್ಮಾದಧೋಕ್ಷಜಃ ॥

415) **ಸ. ಸಂ. :–** ಅಕ್ಷಕುಮಾರನನ್ನು ಕೆಳಕ್ಕೆ ತಳ್ಳಿದ ಹನುಮಂತನಿಂದ ವ್ಯಕ್ತನಾಗುವವನು ; ಅಂತಹ ಹನುಮಂತನು ಯಾರಿಂದ ಹುಟ್ಟುವನೋ ಅವನು ; ಇಂದ್ರಿಯನಿಗ್ರಹವುಳ್ಳ ವಸುದೇವಾದಿಗಳು ಅಧೋಕ್ಷರು–ಅವರಿಂದ ಹುಟ್ಟಿದವನು ಅಧೋಕ್ಷಜ ; ಪ್ರತ್ಯಕ್ಷವನ್ನು ಕೆಳಕ್ಕೆ ತಳ್ಳಿದವನು.

* * *

ಋತುಃ ಸುದರ್ಶನಃ ಕಾಲಃ ಪರಮೇಷ್ಠೀ ಪರಿಗ್ರಹಃ ।
ಉಗ್ರಃ ಸಂವತ್ಸರೋ ದಕ್ಷೋ ವಿಶ್ರಾಮೋ ವಿಶ್ವದಕ್ಷಿಣಃ ॥೫೮॥

416) **ಋತುಃ** = ಕಾಲವಿಭಾಗವಾದ ಋತುರೂಪಿಯಾದವನು ; ಕಾಲರೂಪಿಯು.

ಶಂ. ಭಾ. :– ಕಾಲರೂಪಿಯು. (ಋತುಶಬ್ದವು ಕಾಲವನ್ನು ಲಕ್ಷಿಸುತ್ತದೆ.)

417) **ಪ. ಭ. :–** ಯಾವಾಗಲೂ ಅಪೂರ್ವವಾದ ಮತ್ತು ಎಲ್ಲರಿಗೂ ಉಲ್ಲಾಸವನ್ನು ಉಂಟುಮಾಡುವ ಕಲ್ಯಾಣಗುಣಗಳಿಂದ (ಭಕ್ತರನ್ನು) ಹೊಂದುವವನು.

ನಿರುಕ್ತಿ :– ಋಚ್ಛತೀತಿ ಋತುಃ ಪ್ರೋಕ್ತಃ ಸರ್ವೋಲ್ಲಾಸಕರೈರ್ಗುಣೈಃ ॥

416) **ಸ. ಸಂ. :–** ಮೋಕ್ಷಸಾಧನವಾದವನು ; ಸ್ವಸ್ವರೂಪವನ್ನು ಜ್ಞಾಪಿಸುವವನು.

* * *

417) **ಸುದರ್ಶನಃ** = ಶೋಭನವಾದ ದರ್ಶನವುಳ್ಳವನು ; ಸುದರ್ಶನ ಚಕ್ರರೂಪಿಯು.

ಶಂ. ಭಾ. :– ಶೋಭನವಾದ ನಿರ್ವಾಣಫಲವನ್ನು ಕೊಡುವ ದರ್ಶನ (ಜ್ಞಾನ) ವುಳ್ಳವನು ; ಶುಭವಾದ ಪದ್ಮಪತ್ರದಂತೆ ವಿಶಾಲವಾದ ಕಣ್ಣುಗಳುಳ್ಳವನು.

418) **ಪ. ಭ. :–** ಶುಭವಾದ ದರ್ಶನವುಳ್ಳವನು ; ಗುಣ-ಪ್ರಭಾವಗಳನ್ನು ಅರಿಯದವರಿಗೂ ಕೂಡ ಯಾವನ ದರ್ಶನಮಾತ್ರವೇ ಮಂಗಳಕರವಾದುದೋ–ಅವನು.

ನಿರುಕ್ತಿ :– **ಶುಭಂ ಚ ದರ್ಶನಂ ಯಸ್ಯ ಮನ್ವಾದಾಂ ಸ ಸುದರ್ಶನಃ ॥**

417) **ಸ. ಸಂ.** :– ಮಂಗಳವಾದ ದರ್ಶನವುಳ್ಳವನು ; ಚೆನ್ನಾಗಿ ಕಾಣಲ್ಪಡುವವನು.

* * *

418) **ಕಾಲಃ** = ಎಲ್ಲರನ್ನೂ ಗಣಿಸುವ ಅಥವಾ ಒಂದುಗೂಡಿಸುವ ಕಾಲರೂಪಿಯು ; ಮೃತ್ಯುಸ್ವರೂಪನು.

ಶಂ. ಭಾ. :– ಎಲ್ಲವನ್ನೂ ಗಣಿಸುವವನು. **ಕಾಲಃ ಕಲಯತಾ ಮಹಮ್ ।** (ಗೀತಾ. ೧೦-೩೦)

419) **ಪ. ಭ.** :– ಚರಾಚರಗಳು ಯಾವನಲ್ಲಿ ಸಂಕಲಿತವಾಗುವುವೋ–ಅವನು.

ನಿರುಕ್ತ :– **ಚರಾಚರಾಣಾಂ ಕಲನಾತ್ಕಾಲಃ ಸ್ವಸ್ಮಿನ್ಗುಣ್ಯೈರಸೌ ॥**

418) **ಸ. ಸಂ.** :– ಜಗತ್ತನ್ನು ಬಂಧಿಸುವವನು ; ಭೇದಿಸುವವನು ; ಜ್ಞಾನರೂಪಿಯು ; ಸುಖವನ್ನು ತರುವವನು ; ಅವರವರ ಯೋಗ್ಯತೆಗೆ ಅನುಗುಣವಾಗಿ ಪರ್ಯಾಪ್ತರನ್ನಾಗಿ ಮಾಡುವವನು.

* * *

419) **ಪರಮೇಷ್ಠೀ**= ಶ್ರೇಷ್ಠತಮವಾದ ತನ್ನ ಸ್ಥಾನದಲ್ಲಿ ನೆಲೆಗೊಂಡಿರುವವನು ; ಬ್ರಹ್ಮಸ್ವರೂಪಿಯು.

ಮನ್ವನ್ತರಾಣ್ಯಸಂಖ್ಯಾನಿ ಸರ್ಗಃ ಸಂಹಾರ ಏವ ಚ ।
ಕ್ರೀಡನ್ನಿವೈತತ್ಕುರುತೇ ಪರಮೇಷ್ಠೀ ಪುನಃ ಪುನಃ ॥

(ಮನು. ೧-೮)

ಶಂ. ಭಾ. :– ಶ್ರೇಷ್ಠವಾದ ತನ್ನ ಮಹಿಮೆಯಲ್ಲಿ ಹೃದಯಾಕಾಶದಲ್ಲಿ ನೆಲೆಸಿರುವವನು. (**ಪರಮೇಷ್ಠೀ ವಿಭ್ರಾಜತೇ** ಎಂಬ ಮಂತ್ರವರ್ಣದಂತೆ)

420) **ಪ. ಭ.** :– ತನ್ನ– ಅವತಾರಗಳನ್ನು ಮುಗಿಸಿಕೊಂಡು ಮತ್ತೆ ತನ್ನ ಶ್ರೇಷ್ಠವಾದ ಸ್ಥಾನದಲ್ಲಿ ನೆಲೆಸುವವನು ; ಪರಮಪದದಲ್ಲಿ ಸದಾ ಇರುವವನು.

ನಿರುಕ್ತಿ :– **ಪದೇ ಪದೇ ಸ್ಥಿತತ್ವಾಚ್ಚ ಪರಮೇಷ್ಠೀ ಪ್ರಕೀರ್ತಿತಃ ॥**

419) **ಸ. ಸಂ. :–** ಶ್ರೇಷ್ಠವಾದ ಹೃದಯಾಕಾಶದಲ್ಲಿ ಇರುವವನು.

* * *

420) **ಪರಿಗ್ರಹಃ** = ಜ್ಞಾನಿಗಳಿಂದ ಸ್ವೀಕರಿಸಲ್ಪಡುವವನು ; ಎಲ್ಲ ಕಡೆಗಳಲ್ಲಿಯೂ ಗ್ರಹಿಸಲ್ಪಡುವವನು.

ಶಂ. ಭಾ. :– ಸರ್ವಗತನಾಗಿರುವುದರಿಂದ ಶರಣಾಗತರಿಂದ ಎಲ್ಲ ಕಡೆಗಳಲ್ಲಿಯೂ ಗ್ರಹಿಸಲ್ಪಡುವವನು ; ಎಲ್ಲ ಕಡೆಗಳಲ್ಲಿಯೂ ತಿಳಿಯಲ್ಪಡುವವನು ; ಭಕ್ತರು ಸಮರ್ಪಿಸಿದ ಪತ್ರ, ಪುಷ್ಪ–ಮುಂತಾದುವನ್ನು ಸ್ವೀಕರಿಸುವವನು.

421) **ಪ. ಭ. :–** ತನ್ನ ಸೌಶೀಲ್ಯದಿಂದ ಎಲ್ಲರನ್ನೂ ಸಮವಾಗಿ (ಇಹ-ಪರಗಳಲ್ಲಿ) ಗ್ರಹಿಸುವವನು (ಪರಮಪದಕ್ಕೆ ಒಯ್ಯುವವನು.)
ನಿರುಕ್ತಿ :– **ಇಹಾಮುತ್ರ ಸಮಂ ಸರ್ವಗ್ರಹಣಾತ್ಸ್ಯಾತ್ಪರಿಗ್ರಹಃ ॥**

420) **ಸ. ಸಂ. :–** ಹರಿಭಕ್ತರನ್ನು ಅನುಗ್ರಹಿಸುವವನು.

* * *

421) **ಉಗ್ರಃ** = ಪ್ರಚಂಡನಾದವನು ; ದುಷ್ಟರಿಗೆ ಭೀಕರನಾದವನು.

ಶಂ. ಭಾ. :– ಸೂರ್ಯಾದಿಗಳಿಗೂ ಕೂಡ ಭಯಕ್ಕೆ ಕಾರಣನಾದವನು. **ಭೀಷೋದೇತಿ ಸೂರ್ಯಃ (ತೈ. ಉ. ೨-೮).**

422) **ಪ. ಭ. :–** ಧರ್ಮವು ನಷ್ಟವಾಗಿದ್ದಾಗ ಕಲ್ಕಿಯ ರೂಪದಲ್ಲಿ ಅವತರಿಸಿ ಮ್ಲೇಚ್ಛಾದಿಗಳನ್ನು ಸಂಹರಿಸುವ ಪ್ರಚಂಡರೂಪಿಯು ; ಸಂಹಾರಮೂರ್ತಿಯು.
ನಿರುಕ್ತಿ :– **ನಷ್ಟೇ ಧರ್ಮೇ ಕಲ್ಕಿರೂಪೋ ಹ್ಯವತೀರ್ಯ ಮಹೀಭೃತಃ ।**
ಮ್ಲೇಚ್ಛಾದೀನ್ಹತವಾನ್ಯೋಽಸೌ ಉಗ್ರ ಇತ್ಯುಚ್ಯತೇ ಬುಧೈಃ ॥

421) **ಸ. ಸಂ. :–** ರುದ್ರನನ್ನು ನುಂಗುವವನು ; ಉಚ್ಚರಾದ ಬ್ರಹ್ಮಾದಿಗಳೂ ರಮಿಸುವಂತೆ ಮಾಡುವವನು.

* * *

422) **ಸಂವತ್ಸರಃ** = ಕಾಲರೂಪಿಯು ; ಕಾಲಾವಯವರೂಪಿಯು ; ಕಾಲಪ್ರವರ್ತಕನು.

ಶಂ. ಭಾ. :– ಸಮಸ್ತಭೂತಗಳೂ ಯಾವನಲ್ಲಿ ವಾಸಮಾಡುವುವೋ–ಅವನು.

423) **ಪ. ಭ.** :– ಕಾಲವನ್ನು ಪ್ರತೀಕ್ಷಿಸುತ್ತಾ ಪಾತಾಳದಲ್ಲಿ ಅನಂತನ ಮೇಲೆ ಸಂಹಾರದ ಉಪಕರಣಗಳೊಡನೆ ವಾಸಮಾಡುತ್ತಿರುವವನು.

ನಿರುಕ್ತಿ :– **ಸಂಹಾರಸ್ಯೋಪಕರಣೈಃ ಸಾಕಂ ಕಾಲಂ ಪ್ರತೀಕ್ಷಯನ್ ।**
ಸಂವತ್ಸರಃ ಸ್ಯಾತ್ಪಾತಾಲೇ ಹ್ಯನನ್ತೇ ವಸತೀತಿ ಯಃ ॥

422) **ಸ. ಸಂ.** :– ವತ್ಸರಂತೆ ಇರುವ ಬ್ರಹ್ಮಾದಿಗಳು ರಮಿಸುವಂತೆ ಮಾಡುವವನು ; ಕೃಷ್ಣರೂಪಿಯಾಗಿ ಕರುಗಳೊಡನೆ ಚೆನ್ನಾಗಿ ರಮಿಸು ವವನು. ಶ್ರೇಷ್ಠವಾದ ಸ್ವಾಮಿಪುಷ್ಕರಿಣಿಯೇ ಮುಂತಾದ ಸರೋವರವುಳ್ಳ ವನು ; ಸಂವತ್ಸರಕ್ಕೆ ನಿಯಾಮಕನು.

* * *

423) **ದಕ್ಷಃ** = ಸಮರ್ಥನಾದವನು ; ದಕ್ಷಪ್ರಜಾಪತಿಸ್ವರೂಪಿಯು.

ಶಂ. ಭಾ. :– ಜಗತ್ತಿನ ರೂಪದಲ್ಲಿ ವೃದ್ಧಿಹೊಂದುವವನು ; ಎಲ್ಲ ಕೆಲಸಗಳನ್ನೂ ಶೀಘ್ರವಾಗಿ ಮಾಡುವವನು.

424) **ಪ. ಭ.** :– ನಿಮಿಷಮಾತ್ರದಲ್ಲಿ ದಸ್ಯುಗಳನ್ನು ಸಂಹಾರಮಾಡಿದವನು ; **ಕ್ಷಿಪ್ರಕಾರೀ ಜನಾರ್ದನಃ**

ನಿರುಕ್ತಿ :– **ಶೀಘ್ರಾರ್ಥತ್ವಾದ್ದಕ್ಷಧಾತೋರ್ನಿಮೇಷಾದ್ದಸ್ಯವೋ ಹತಾಃ ।**
ಯೇನ ಸ ಸ್ಯಾಚ್ಛೀಘ್ರಕಾರೀ ದಕ್ಷ ಇತ್ಯುಚ್ಯತೇ ಬುಧೈಃ ॥

423) **ಸ. ಸಂ.** :– ಪಟುವಾದವನು. ಲೋಕಹಿಂಸಕರನ್ನು ಹಿಂಸಿಸು ವವನು.

* * *

424) **ವಿಶ್ರಾಮಃ** = ಶ್ರಮರಹಿತನು ; ಸಂಸಾರಸಂತಪ್ತರಾದವರಿಗೆ ವಿಶ್ರಾಂತಿಧಾಮನಾಗಿರುವವನು.

ಶಂ. ಭಾ. :–ಹಸಿವು, ಬಾಯಾರಿಕೆ–ಮುಂತಾದ ಅಲೆಗಳಿಂದ ಕೂಡಿದ ಸಂಸಾರಸಾಗರದಲ್ಲಿ ಅವಿದ್ಯೆಯೇ ಮುಂತಾದ ಮಹಾಕ್ಲೇಶಗಳಿಂದಲೂ ಮದವೇ ಮುಂತಾದ ಉಪಕ್ಲೇಶಗಳಿಂದಲೂ ಬಳಲಿ ವಿಶ್ರಾಂತಿಯನ್ನು ಬಯಸುವ ಮುಮುಕ್ಷುಗಳಿಗೆ ವಿಶ್ರಾಂತಿಯನ್ನು (ಮೋಕ್ಷವನ್ನು) ಕೊಡುವವನು.

425) **ಪ. ಭ. :**– ಪಾಪಗಳನ್ನಾಚರಿಸಿ ಅದರ ಫಲಗಳ ಅನುಭವದಿಂದ ಪರಿಶ್ರಾಂತರಾದ ಮನುಷ್ಯರಿಗೆ ವಿಶ್ರಾಂತಿಭೂಮಿ ಯಾಗಿರುವವನು.

ನಿರುಕ್ತಿ :– **ಪಾಪಾನಿ ತತ್ಫಲಾನ್ಯೇವ ಶ್ರಾನ್ತಾ ಭೋಕ್ತುಂ ಚ ಯೇ ಜನಾಃ।**
ತೇಷಾಂ ವಿಶ್ರಾಮಭೂಮಿತ್ವಾದ್ವಿಶ್ರಾಮಃ ಪರಿಕೀರ್ತಿತಃ ॥

424) **ಸ. ಸಂ. :**– ಶ್ರಮರಹಿತನಾದವನು ; ಭಕ್ತರ ಶ್ರಮವನ್ನು ಹೋಗಲಾಡಿಸುವವನು.

* * *

425) **ವಿಶ್ವದಕ್ಷಿಣಃ** = ಎಲ್ಲರಿಗೂ ಅನುಕೂಲನಾಗಿರುವವನು. (ಉದಾರಿಯಾಗಿರುವವನು). ಎಲ್ಲರಿಗಿಂತಲೂ ಉದಾರನೂ ಸರಳನೂ ಆಗಿರುವವನು. ಇಡೀ ವಿಶ್ವವನ್ನೇ ದಕ್ಷಿಣೆಯ ರೂಪದಲ್ಲಿ ಪಡೆದವನು.

ಶಂ. ಭಾ. :– ಎಲ್ಲರಿಗಿಂತಲೂ ಶಕ್ತನಾದವನು ; ಎಲ್ಲ ಕರ್ಮಗಳಲ್ಲಿಯೂ ಕುಶಲನಾದವನು.

426) **ಪ. ಭ. :**– ಅಪಕಾರಿಗಳಲ್ಲಿಯೂ ಕೂಡ ಕ್ಷಮೆ-ದಯೆ-ದಾಕ್ಷಿಣ್ಯಗಳುಳ್ಳವನು. ಅಶ್ವಮೇಧಯಜ್ಞದಲ್ಲಿ ಬ್ರಾಹ್ಮಣರಿಗೆ ಇಡೀ ಭೂಮಿಯನ್ನು ದಕ್ಷಿಣೆಯಾಗಿ ಕೊಟ್ಟವನು.

ನಿರುಕ್ತಿ :– **ಅಪಕಾರಿಷ್ವಪಿ ಕ್ಷಾನ್ತಃ ವಿಶ್ವದಕ್ಷಿಣ ಉಚ್ಯತೇ ।**
ಯದ್ವಾಶ್ವಮೇಧೇ ಪೃಥಿವೀಂ ದಕ್ಷಿಣಾತ್ವೇನ ದತ್ತವಾನ್ ।
ಮಹೀಸುರೇಭ್ಯಃ ಕೃತ್ಸ್ನಾಂ ಯಃ ಸ ಸ್ಮೃತೋ ವಿಶ್ವದಕ್ಷಿಣಃ ॥

425) **ಸ. ಸಂ. :**– ಜಗತ್ತಿನ ಸೃಷ್ಟಿಯೇ ಮುಂತಾದ ವಿಶ್ವಕಾರ್ಯಗಳಲ್ಲಿಯೂ ಕುಶಲನಾದವನು ; ವಿಶ್ವನೂ (ವಾಯುವೂ) ಯಾವನಿಂದ ಕುಶಲನಾಗಿರುವನೋ–ಅವನು.

* * *

ವಿಸ್ತಾರಃ ಸ್ಥಾವರಸ್ಥಾಣುಃ ಪ್ರಮಾಣಂ ಬೀಜಮವ್ಯಯಮ್ ।
ಅರ್ಥೋಽನರ್ಥೋ ಮಹಾಕೋಶೋ ಮಹಾಭೋಗೋ ಮಹಾ-
ಧನಃ ॥೫೯॥

426) ವಿಸ್ತಾರಃ= ಜಗತ್ತಿನ ರೂಪದಲ್ಲಿ ವಿಸ್ತಾರಗೊಂಡವನು ; ಜಗ ತ್ತನ್ನು ವಿಸ್ತಾರಪಡಿಸುವವನು.

ಶಂ. ಭಾ. :– ಸಮಸ್ತಜಗತ್ತುಗಳೂ ಯಾವನಲ್ಲಿ ವಿಸ್ತಾರಹೊಂದು ತ್ತವೆಯೋ–ಅವನು.

427) ಪ. ಭ. :– ಪ್ರಬಲವಾದ ಕಲಿಯನ್ನು ಸಂಹರಿಸಿ ಕೃತಯುಗವನ್ನು ತೊಡಗಿಸಿ ವೇದಮರ್ಯಾದೆಯನ್ನು ವಿಸ್ತಾರ (ಪ್ರಸಿದ್ಧ) ಪಡಿಸುವವನು.

ನಿರುಕ್ತಿ :– **ಸ್ಥಾಪಯಿತ್ವಾ ಸಮರ್ಯಾದಾಂ ಸ್ವಯಮ್ಭುವಿಹಿತಾಂ ಶುಭಾಮ್ ।**
ಪ್ರಬಲಂ ಯಃ ಕಲಿಂ ಹತ್ವಾ ಪ್ರವರ್ತ್ಯ ಚ ಕೃತಂ ಯುಗಮ್।
ವಿಸ್ತಾರ್ಯ ವೇದಮರ್ಯಾದಾಂ ಸ್ಥಿತೋ ವಿಸ್ತಾರ ಉಚ್ಯತೇ॥

426) ಸ. ಸಂ. :– ಲೋಕಗಳು ಯಾವನಿಂದ ವಿಸ್ತಾರವನ್ನು ಪಡೆಯು ತ್ತವೆಯೋ–ಅವನು.

* * *

427) ಸ್ಥಾವರಸ್ಥಾಣುಃ = ಸ್ಥಿತಿಶೀಲನಾದವನು ; ನಿಶ್ಚಲವಾದ ಕಂಬ ದಂತೆ ಇರುವವನು ; ರುದ್ರರೂಪಿಯು.

ಶಂ. ಭಾ. :– ಸ್ಥಿತಿಶೀಲನಾದವನು ; ಸ್ಥಿತಿಶೀಲವಾಗಿರುವ ಪದಾರ್ಥವು ಯಾವನಲ್ಲಿ ಸ್ಥಿರವಾಗಿದೆಯೋ–ಅವನು.

428) ಪ. ಭ. :– ಯಾವನು ಧರ್ಮಗಳನ್ನು ಸ್ಥಿರಗೊಳಿಸಿ ಸದಾ ಶಮ ದಲ್ಲಿ ನೆಲೆಸುತ್ತಾನೆಯೋ ಮತ್ತು ಯಾರಿಂದಲೂ ಚಲಿಸಲು ಅಸಾಧ್ಯನಾಗಿರು ವನೋ–ಅವನು.

ನಿರುಕ್ತಿ :– **ಸ್ಥಾವರೀಕೃತ್ಯ ಧರ್ಮಾನ್ಯಃ ಶಮೇ ಸ್ಥಾಸ್ಯತಿ ನಿತ್ಯಶಃ ।**
ಯೇನ ಕೇನಾಪ್ಯಚಾಲ್ಯಃ ಸಃ ಸ್ಥಾವರಸ್ಥಾಣುರುಚ್ಯತೇ ॥

427) **ಸ. ಸಂ. :–** ಸ್ಥಿತಿಶೀಲನಾದವನು. ಸತ್ಯಲೋಕಾದಿಗಳಲ್ಲಿರುವ ದೇವತೆಗಳು ಯಾವನಿಗಿಂತಲೂ ನಿಕೃಷ್ಟರಾಗಿರುವರೋ–ಅವನು. ರುದ್ರಾಂತರ್ಯಾಮಿಯು.

* * *

428) **ಪ್ರಮಾಣಂ**= ಶ್ರೇಷ್ಠವಾದ ಅಳತೆಯು ; ವ್ಯವಸ್ಥಾಪಕನು.

ಶಂ. ಭಾ. :– ಶ್ರೇಷ್ಠವಾದ ಜ್ಞಾನರೂಪನಾಗಿ (ಅನುಭವರೂಪದಲ್ಲಿ) ಇರುವುದರಿಂದ ಪ್ರಮಾಣನು.

429) **ಪ. ಭ. :–** ಕೃತವೇ ಮುಂತಾದ ಯುಗಗಳಲ್ಲಿ ಹಿತಾಹಿತಗಳನ್ನು ವ್ಯವಸ್ಥೆಮಾಡುವವನು. ಇವನ ಶಕ್ತಿಯಿಂದ ಪ್ರೇರಿತವಾಗಿಯೇ ಪ್ರತ್ಯಕ್ಷ ಮುಂತಾದವುಗಳು ಕೂಡ ಪ್ರಮಾಣವಾಗುವುವು.

ನಿರುಕ್ತಿ :– **ಹಿತಾಹಿತಸ್ಥಾಪಕತ್ವಾತ್ಪ್ರಮಾಣಂ ಸ್ಯಾತ್ಕೃತಾದಿಷು ॥**

428) **ಸ. ಸಂ. :–** ಯಾವನ ವಿಷಯದಲ್ಲಿ ಶ್ರೇಷ್ಠವಾದ ವೇದವೇ ಮುಂತಾದ ಪ್ರಮಾಣಗಳಿವೆಯೋ–ಅವನು ; ತ್ರಿವಿಕ್ರಮಾದಿ ರೂಪಗಳಲ್ಲಿ ಯಾವನಿಗೆ ಶ್ರೇಷ್ಠವಾದ ಶರೀರಾದಿಪರಿಮಾಣವು ಇದೆಯೋ–ಅವನು ; ಶ್ರೇಷ್ಠವಾದ ಸುಖಗಳುಳ್ಳವನು.

* * *

429) **ಬೀಜಮವ್ಯಯಮ್** = ಜಗತ್ತಿಗೆ ಅವಿನಾಶಿಯಾದ ಕಾರಣ ಸ್ವರೂಪಿಯು.

ಶಂ. ಭಾ. :– ಅನ್ಯಥಾಭಾವವನ್ನು ಹೊಂದದೆಯೇ ಜಗತ್ತಿಗೆ ಕಾರಣವಾಗಿರುವವನು.

430) **ಪ. ಭ. :–** (ಕಲಿಯುಗದ ಕೊನೆಯಲ್ಲಿ ಧರ್ಮವನ್ನು ಮತ್ತೆ ಮತ್ತೆ ಬೆಳೆಸುವುದರಿಂದ) ಅವಿನಾಶಿಯಾದ ಧರ್ಮಕಾರಣನು.

ನಿರುಕ್ತಿ :– **ಯೋ ವೈ ಕಲಿಯುಗಸ್ಯಾನ್ತೇ ಮುಹುರ್ಧರ್ಮ–**
ಪ್ರರೋಹಣಮ್ ।
ಕರೋತಿ ಭಕ್ತರಕ್ಷಾರ್ಥಂ ಸೋಽಚ್ಯತೇ ಬೀಜಮವ್ಯಯಮ್ ॥

429) **ಸ. ಸಂ. :–** (ವ್ಯಾಸಾದಿರೂಪನಾದ ಯಾವನಿಂದ) ಜ್ಞಾನವು

ಉಂಟಾಗುತ್ತದೆಯೋ–ಅವನು ; ವ್ಯಂಜಕನಾದವನು. ಜ್ಞಾನಿಗಳಿಂದ ಹೊಂದಲ್ಪಡುವವನು ; ಶುಭವಿಧಿಗಳಿಂದ ಯುಕ್ತನಾದವನು.

* * *

430) **ಅರ್ಥಃ**= ಪದಾರ್ಥ, ಪ್ರಯೋಜನ, ಧನ, ನಿವೃತ್ತಿ ಮತ್ತು ಎಲ್ಲ ಶಬ್ದಗಳಿಗೂ ಅಭಿಧೇಯನಾದವನು.

ಶಂ. ಭಾ. :– ಸುಖರೂಪನಾಗಿರುವುದರಿಂದ ಎಲ್ಲರಿಂದಲೂ ಪ್ರಾರ್ಥಿಸಲ್ಪಡುವವನು.

431) **ಪ. ಭ.** :– ನಿಷ್ಕಾಮರಾದ ಪರಮೈಕಾಂತಿಗಳಿಂದ–ಜ್ಞಾನಿಗಳಿಂದ, ಸ್ವಯಂಪ್ರಯೋಜನವಾಗಿ ಹೊಂದಲ್ಪಡುವವನು.

ನಿರುಕ್ತಿ :– **ಪರಮೈಕಾನ್ತಿಭಿರ್ನಿತ್ಯಂ ಈಷಣತ್ರಯವರ್ಜಿತೈಃ ।**
ಸ್ವಯಂ ಪ್ರಯೋಜನತಯಾ ಪ್ರಾಪ್ಯಮಾಣೋऽರ್ಥ ಉಚ್ಯತೇ ॥

431) **ಸ. ಸಂ.** :– ಭಕ್ತರಿಂದ ತಿಳಿಯಲ್ಪಡುವವನು ; ಯಾಚಿಸಲ್ಪಡುವವನು.

* * *

431) **ಅನರ್ಥಃ**=ಅವಾಪ್ತಸಮಸ್ತಕಾಮನು ; ಎಲ್ಲ ಪ್ರಯೋಜನಗಳೂ ಸ್ವತಃಸಿದ್ಧವಾಗಿರುವುದರಿಂದ ಬೇರೆ ಯಾವ ಪ್ರಯೋಜನವೂ ಇಲ್ಲದವನು ; ಯಾವ ಪ್ರಯೋಜನದ ಅಪೇಕ್ಷೆಯೂ ಇಲ್ಲದವನು.

ಶಂ. ಭಾ. :– ಪೂರ್ಣಕಾಮನಾಗಿರುವುದರಿಂದ ಯಾವ ಪ್ರಯೋಜನದ ಅಪೇಕ್ಷೆಯೂ ಇಲ್ಲದವನು.

432) **ಪ. ಭ.** :– 'ಅರ್ಥಾರ್ಥಿಗಳೆಂಬ ಕೆಳಮಟ್ಟದ ಭಕ್ತರಿಂದ ಪ್ರಯೋಜನಾಪೇಕ್ಷೆಯಿಲ್ಲದೇ ಪ್ರಾರ್ಥಿಸಲ್ಪಡದವನು.

ನಿರುಕ್ತಿ :– **ಅರ್ಥಾರ್ಥಿನಾಲ್ಪಭಾಗ್ಯೇನ ನಿರ್ವ್ಯಾಜಂ ನಾರ್ಥ್ಯತೇ ಯತಃ ।**
ತಸ್ಮಾದನರ್ಥನಾಮಾಸೌ ವೇದವಿದ್ಭಿಃ ಪ್ರಕೀರ್ತಿತಃ ॥

431) **ಸ. ಸಂ.** :– ಮುಖ್ಯಪ್ರಾಣವುಳ್ಳವನು ; ಮುಖ್ಯಪ್ರಾಣನಿಂದ

ಯಾಚಿಸಲ್ಪಡುವವನು ; ಅಯೋಗ್ಯರಿಗೆ ಅನರ್ಥವನ್ನುಂಟುಮಾಡುವವನು.

* * *

432) **ಮಹಾಕೋಶಃ** = ಜ್ಞಾನಾನಂದಾದಿಗಳಿಗೆ ದೊಡ್ಡ ಭಂಡಾರವಾಗಿರುವವನು ; ಅನ್ನಮಯವೇ ಮುಂತಾದ ದೊಡ್ಡ ಕೋಶಗಳುಳ್ಳವನು.

ಶಂ. ಭಾ. :–ಅನ್ನಮಯವೇ ಮುಂತಾದ ದೊಡ್ಡ ಕೋಶಗಳುಳ್ಳವನು.

433) **ಪ. ಭ. :–** ಶಂಖ-ಪದ್ಮಾದಿ ದೊಡ್ಡ ನಿಧಿಗಳೂ ಮತ್ತು ರೋಹಣಗಿರಿಯೇ ಮುಂತಾದುವುಗಳೂ ಯಾವನಿಗೆ ಭಾಂಡಾಗಾರಗಳಾಗಿವೆಯೋ–ಅವನು.

ಶಂಖಪದ್ಮಾದಿನಿಧಯಃ ಮಹಾನ್ತೋ ರೋಹಣೋ ಗಿರಿಃ ।
ಕೋಶಾ ಭಾಣ್ಡಗೃಹಾ ಯಸ್ಯ ಮಹಾಕೋಶಃ ಸ ಉಚ್ಯತೇ ॥

432) **ಸ. ಸಂ. :–** ರಮಾದೇವಿಯಿಂದ ಕಾಮಿಸಲ್ಪಡುವವನು ; ಬ್ರಹ್ಮನಿಗೆ ಉತ್ಕೃಷ್ಟವಾದ ಸುಖವನ್ನು ಉಂಟುಮಾಡುವವನು ; ದೊಡ್ಡ ಕೋಶವಾಗಿರುವವನು.

* * *

433) **ಮಹಾಭೋಗಃ**= ಪರಮಸುಖಭೋಗವುಳ್ಳವನು.

ಶಂ. ಭಾ. :– ಸುಖರೂಪವಾದ ಮಹಾಭೋಗವುಳ್ಳವನು.

434) **ಪ. ಭ. :–** ಬಹಳ ದೊಡ್ಡ ಕಾಮಭೋಗವೂ ಕೂಡ ಯಾವನಿಂದ ಸಾಧ್ಯವಾಗುವುದೋ–ಅವನು.

ನಿರುಕ್ತಿ **:– ಅರ್ಥಸಾಧ್ಯಃ ಕಾಮಭೋಗೋ ಯಸ್ಮಾದೇಷಾಂ ಮಹಾನಿತಿ।**
ಮಹಾಭೋಗಃ ಸ ವಿಜ್ಞೇಯೋ ಹ್ಯಷ್ಟಾರ್ಣಶ್ಚಿನ್ತಿತಾರ್ಥದಃ ॥

'ಓಂ ಮಹಾಭೋಗಾಯ ನಮಃ'–ಎಂಬ ಈ ನಾಮಮಂತ್ರಜಪವು ಸಂಕಲ್ಪಿಸಿದ ಇಷ್ಟಕಾಮನೆಗಳನ್ನು ಕೊಡುತ್ತದೆ.

433) **ಸ. ಸಂ. :–** ಪೂರ್ಣಾನಂದನು.

* * *

434) **ಮಹಾಧನಃ** = ಯೋಗಿಗಳಿಗೆ ಪರಮಧನವಾದವನು ;

ಅನಂತವೂ, ಅವಿನಾಶಿಯೂ, ಶುದ್ಧವೂ, ಪರಿಪೂರ್ಣವೂ ಆಗಿರುವ ಜ್ಞಾನಾನಂದ-ಘನಸ್ವರೂಪಿಯು.

ಶಂ. ಭಾ. :– ಭೋಗಸಾಧ್ಯರೂಪವಾದ ಮಹಾಧನವುಳ್ಳವನು.

435) ಪ. ಭ. :– ಅನಂತವೂ ಅಕ್ಷಯವೂ ಆದ ಧನವನ್ನು ಸದಾ ಹೊಂದಿರುವವನು.

ನಿರುಕ್ತಿ :– **ಅನಿರೂಪ್ಯಾತಿಕೃಪಣಪ್ರದೇಯಂ ಧನಮಕ್ಷಯಮ್ ।**
ಯಸ್ಯೈವಾಸ್ತೀತಿ ಸತತಂ ಸ ಮಹಾಧನ ಈರಿತಃ ॥

434) ಸ. ಸಂ. :– ದೊಡ್ಡ ಧನವುಳ್ಳವನು ; ಪೂಜಾದಿಲಕ್ಷಣವಾದ ಉತ್ಸವಾದಿಗಳಲ್ಲಿ ಯಾವನಿಂದ ಧನವು ಉಂಟಾಗುವುದೋ–ಅವನು.

* * *

ಅನಿರ್ವಿಣ್ಣಃ ಸ್ಥವಿಷ್ಠೋಽಭೂರ್ಧರ್ಮಯೂಪೋ ಮಹಾಮಖಃ ।
ನಕ್ಷತ್ರನೇಮಿರ್ನಕ್ಷತ್ರೀ ಕ್ಷಮಃ ಕ್ಷಾಮಃ ಸಮೀಹನಃ ॥೬೦॥

435) **ಅನಿರ್ವಿಣ್ಣಃ** = ಪೂರ್ಣಕಾಮನೂ–ಆನಂದಮಯನೂ ಆಗಿರುವುದರಿಂದ ನಿರ್ವೇದ (ಖೇದ) ವಿಲ್ಲದವನು.

ಶಂ. ಭಾ. :– ಆಪ್ತಕಾಮನಾಗಿರುವುದರಿಂದ ನಿರ್ವೇದವಿಲ್ಲದವನು.

436) ಪ. ಭ. :– ಆಲಸ್ಯವಿಲ್ಲದವನು ; ಆದಿ-ಅಂತಗಳಿಲ್ಲದ ಜಗದ್ವ್ಯಾಪಾರವುಳ್ಳವನು ; ಜಗತ್ತಿನ ವ್ಯಾಪಾರಪರಂಪರೆಯಲ್ಲಿ ಸದಾ ಜಾಗರೂಕನಾಗಿರುವವನು.

ನಿರುಕ್ತಿ :– **ಅನಿರ್ವಿಣ್ಣೋ ಜಾಗರೂಕೋ ಜಗದ್ವ್ಯಾಪಾರಸನ್ತತೌ ।**

435) ಸ. ಸಂ. :– ಗ್ಲಾನಿ-ಶಂಕೆಗಳಿಲ್ಲದವನು ; ಜ್ಞಾನ-ಸುಖರಹಿತನಲ್ಲದವನು.

* * *

436) **ಸ್ಥವಿಷ್ಠಃ** = ಸ್ಥೂಲತಮನಾದವನು.

ಶಂ. ಭಾ. :– ವಿರಾಡ್ರೂಪನಾಗಿರುವುದರಿಂದ ಸ್ಥೂಲತಮನು. **ಅಗ್ನಿರ್ಮೂರ್ಧಾ ಚಕ್ಷುಷೀ ಚನ್ದ್ರಸೂರ್ಯೌ** (ಮುಂ.೨-೧-೪)

437) ಪ. ಭ. :– ಶಿಂಶುಮಾರಾಕಾರನಾಗಿ ನಕ್ಷತ್ರರೂಪದಲ್ಲಿ ಸದಾ ಇರುವುದರಿಂದ ಸ್ಥೂಲತಮನು.

ನಿರುಕ್ತಿ :– ಸ್ಥೌಲ್ಯಾತ್ಸ್ಥವಿಷ್ಠಃ ಸಮ್ಪ್ರೋಕ್ತಃ ಸಪ್ತಾರ್ಣಃ ಪಾಪನಾಶನಃ ॥

'ಓಂ ಸ್ಥವಿಷ್ಠಾಯ ನಮಃ' ಈ ನಾಮಮಂತ್ರಜಪವು ಪಾಪನಾಶಕವು.

436) ಸ. ಸಂ. :– ಸ್ಥೂಲತಮನಾದವನು.

*   *   *

437) ಅಭೂಃ = ಜನ್ಮರಹಿತನು. ಭೂಃ = ಅಸ್ತಿತ್ವರೂಪನಾದವನು.

ಶಂ. ಭಾ. :– ಜನ್ಮರಹಿತನು. ಭೂಃ = ಭೂಸ್ವರೂಪನು.

438) ಪ. ಭ. :– ಭೂಃ = ಧ್ರುವನ ಸಂಬಂಧದಿಂದ ಸರ್ವಾಧಾರನಾಗಿರುವವನು. ತಸ್ಯ ಪುಚ್ಛೇ ಧ್ರುವಃ ಸ್ಥಿತಃ । (ವಿ. ಪು. ೪-೯-೪)

ನಿರುಕ್ತಿ :– ಔತ್ತಾನಪಾದಿಸಂಬನ್ಧಾತ್ಸರ್ವಾಧಾರತಯಾ ತಥಾ ।
ಭವತೀತಿ ಚ ಭೂಃ ಪ್ರೋಕ್ತೋ ಭಕ್ತಾನಾಂ ಭೂತಿದೋ ಮನುಃ ॥

'ಓಂ ಅಭುವೇ ನಮಃ' ಎಂಬ ಈ ನಾಮಮಂತ್ರಜಪವು ಭಕ್ತರಿಗೆ ಸಂಪತ್ತನ್ನು ಕೊಡುತ್ತದೆ.

437) ಸ. ಸಂ. :– ಅಭೂಃ = ಆಧಾರವಿಲ್ಲದವನು ; ಉತ್ಪತ್ತಿಯಿಲ್ಲದವನು. ಭೂಃ = ಪೂರ್ಣನು ; ಭಾವಿಸುವವನು ; ಸರ್ವಕ್ಕೂ ಉತ್ಪಾದಕನು; ಸರ್ವಕ್ಕೂ ಆಶ್ರಯನಾದವನು.

*   *   *

438) ಧರ್ಮಯೂಪಃ = ಧರ್ಮಕ್ಕೆ ಯಜ್ಞಸ್ತಂಭನಾದವನು.

ಶಂ. ಭಾ. :– ಯೂಪದಲ್ಲಿ ಪಶುವು ಕಟ್ಟಲ್ಪಡುವಂತೆ ಆರಾಧನಾರೂಪವಾದ ಧರ್ಮಗಳು ಯಾವನಲ್ಲಿ ಕಟ್ಟಲ್ಪಡುತ್ತವೆಯೋ–ಅವನು.

439) ಪ. ಭ. :– ಧರ್ಮತತ್ತ್ವವನ್ನು ಶಿರಸ್ಸಿನ ಅವಯವವನ್ನಾಗಿ ಮಿಶ್ರಮಾಡುವವನು.

ನಿರುಕ್ತಿ :– ಉತ್ತಮಾಙ್ಗತಯಾ ಧರ್ಮತತ್ತ್ವಂ ಯೌತೀತಿ ಸರ್ವದಾ ।
ಧರ್ಮಯೂಪಃ ಸಮಾಖ್ಯಾತೋ ಹ್ಯಷ್ಟಾರ್ಣೋ ಧರ್ಮದಾಯಕಃ ॥

'ಓಂ ಧರ್ಮಯೂಪಾಯ ನಮಃ'–ಎಂಬ ಈ ನಾಮಮಂತ್ರ ಜಪವು ಪುಣ್ಯಪ್ರಾಪಕವು.

438) **ಸ. ಸಂ. :–** ಧಾರಕನಾದವನು ಮತ್ತು ಭಕ್ತರು ಯಾವನಲ್ಲಿ ಮನಸ್ಸನ್ನು ಕಟ್ಟಿಹಾಕುವರೋ–ಅವನು ; ಧರ್ಮವೂ ಮತ್ತು ಯೂಪವೂ ಆಗಿರುವವನು ; ಧರ್ಮಸಾಧನವಾದ ಯೂಪವೆಂಬ ಸ್ತಂಭವೂ ಯಾವ ನಿಂದ ಉಂಟಾಗುತ್ತದೆಯೋ–ಅವನು.

* * *

439) **ಮಹಾಮಖಃ** = ಶ್ರೇಷ್ಠಯಜ್ಞಸ್ವರೂಪಿಯು.

ಶಂ. ಭಾ. :– ಯಾವನಿಗೆ ಅರ್ಪಿಸಲ್ಪಟ್ಟ ಯಜ್ಞಗಳು ನಿರ್ವಾಣರೂಪ ವಾದ ಫಲವನ್ನು ಕೊಡುತ್ತಾ ದೊಡ್ಡದಾಗುತ್ತವೆಯೋ–ಅವನು.

440) **ಪ. ಭ. :–** ಧರ್ಮಶರೀರವಾಗಿರುವುದರಿಂದ ಪೂಜ್ಯವಾದ ಯಜ್ಞವು ಯಾವನ ಅವಯವವಾಗಿದೆಯೋ–ಅವನು.

ನಿರುಕ್ತಿ :– ಧರ್ಮದೇಹತಯಾ ಪೂಜ್ಯೋ ಯಜ್ಞೋಽಸ್ಯಾವಯವೋ ಯತಃ ।

ತತೋ ಮಹಾಮಖಃ ಪ್ರೋಕ್ತೋ ಹ್ಯಷ್ಟಾರ್ಣಃ ಕರ್ಮಕಾರಕಃ ॥

'ಓಂ ಮಹಾಮಖಾಯ ನಮಃ'–ಈ ನಾಮಮಂತ್ರದ ಜಪದಿಂದ ಕಾರ್ಯಸಾಧನೆಯಾಗುತ್ತದೆ.

439) **ಸ. ಸಂ. :–** ಯಾವನ ವಿಷಯದಲ್ಲಿ ದೊಡ್ಡ ಯಜ್ಞಗಳು ಆಚರಿಸಲ್ಪಡುವುವೋ–ಅವನು.

* * *

440) **ನಕ್ಷತ್ರನೇಮಿಃ** = ನಕ್ಷತ್ರಗಳನ್ನೇ ರಥದ ಪಟ್ಟಿಯನ್ನಾಗಿ ಹೊಂದಿರುವವನು.

ಶಂ. ಭಾ. :– ಜ್ಯೋತಿಗಳ ಚಕ್ರವನ್ನು ತಿರುಗಿಸುತ್ತಾ ನಕ್ಷತ್ರಮಯ ವಾದ ಶಿಂಶುಮಾರದ ಪುಚ್ಛಪ್ರದೇಶದಲ್ಲಿ ನೆಲೆಸಿರುವ ಧ್ರುವನು. ಆ ಶಿಂಶು

ಮಾರದ ಹೃದಯದಲ್ಲಿ ರಥದ ಪಟ್ಟಿಯಂತೆ ಜ್ಯೋತಿಗಳ ಚಕ್ರವನ್ನು ನಡೆಸುವವನು.

ನಕ್ಷತ್ರತಾರಕೈಃ ಸಾರ್ಧಂ ಚನ್ದ್ರಸೂರ್ಯಾದಯೋ ಗ್ರಹಾಃ ।
ವಾಯುಪಾಶಮಯೈರ್ಬನ್ಧೈರ್ನಿಬದ್ಧಾ ಧ್ರುವಸಂಜ್ಞಿತೇ ॥

441) **ಪ. ಭ. :– ಜ್ಯೋತಿಶ್ಚಕ್ರವನ್ನು ನಡೆಸುವವನು. ಜ್ಯೋತೀರೂಪವೂ–ಅನಾಮಯವೂ ಆದ ನಕ್ಷತ್ರಾತ್ಮಕಚಕ್ರವನ್ನು ತನ್ನಲ್ಲಿ ಸುತ್ತಿಸುವವನು ಅಥವಾ ನಡೆಸುವವನು.**

ನಿರುಕ್ತಿ :– **ಯನ್ನಕ್ಷತ್ರಾತ್ಮಕಂ ಚಕ್ರಂ ಜ್ಯೋತೀರೂಪಮನಾಮಯಮ್ ।**
ಯಸ್ಮಿನ್ನಿತ್ಯಂ ಭ್ರಾಮಯತಿ ಭ್ರಮನ್ತಮನುಯಾತಿ ಚ ।
ನಕ್ಷತ್ರನೇಮಿರ್ವಿಜ್ಞೇಯೋ ನವಾರ್ಣೋ ಭ್ರಮನಾಶಕಃ ॥

'ಓಂ ನಕ್ಷತ್ರನೇಮಯೇ ನಮಃ' ಎಂಬ ಈ ನಾಮಮಂತ್ರಜಪವು ಭ್ರಮೆಯನ್ನು ನಿರಸನಗೊಳಿಸುತ್ತದೆ.

440) **ಸ. ಸಂ. :– ಶಿಂಶುಮಾರರೂಪದಿಂದ ಜ್ಯೋತಿಶ್ಚಕ್ರಕ್ಕೆ ಆಧಾರವಾಗಿರುವವನು. ಬ್ರಾಹ್ಮಣರಿಗೆ ಚಕ್ರದ ಪಟ್ಟಿಯಂತೆ ಆಧಾರವಾಗಿರುವವನು.**

* * *

441) **ನಕ್ಷತ್ರೀ = ನಕ್ಷತ್ರವುಳ್ಳವನು ; ನಕ್ಷತ್ರಗಳ ಅಧಿಪತಿಯು.**

ಶಂ. ಭಾ. :– ಚಂದ್ರರೂಪನು. ನಕ್ಷತ್ರಾಣಾಮಹಂ ಶಶೀ ॥
(ಗೀತಾ. ೧೦-೨೧)

442) **ಪ. ಭ. :– ಶಿಂಶುಮಾರಾಕೃತಿಯಾಗಿ ಜ್ಯೋತೀರೂಪವಾಗಿರುವ ನಕ್ಷತ್ರವು ತನಗೆ ಆಧಾರವಾದ ಯಾವನಲ್ಲಿದೆಯೋ–ಅವನು.**

ನಿರುಕ್ತಿ :– **ಶಿಂಶುಮಾರಾಕೃತಿ ಪ್ರೋಕ್ತಂ ಯದ್ರೂಪಂ ಜ್ಯೋತಿಷಾಂದಿವಿ ।**
ತದಸ್ಯಾಸ್ತಿ ಸ ನಕ್ಷತ್ರೀ ಸಪ್ತಾರ್ಣೋ ಲೋಕಪಾವನಃ ॥

'ಓಂ ನಕ್ಷತ್ರಿಣೇ ನಮಃ' ಈ ಮಂತ್ರವು ಲೋಕವನ್ನೇ ಪಾವನಗೊಳಿಸುತ್ತದೆ.

441) **ಸ. ಸಂ. :– ಪರಶುರಾಮರೂಪದಿಂದ ಕ್ಷತ್ರಿಯರನ್ನು ಸಂಹಾರ**

ಮಾಡಿದುದರಿಂದ ಕ್ಷತ್ರ (ಕ್ಷತ್ರಿಯ) ವಿಲ್ಲದವನು ; ನಕ್ಷತ್ರಗಳಿಗೆ ನಿಯಾಮಕ ನಾಗಿರುವವನು.

* * *

442) **ಕ್ಷಮಃ** = ಸಮರ್ಥನಾದವನು ; ಕ್ಷಮಾಗುಣವುಳ್ಳವನು.

ಶಂ. ಭಾ. :– ಎಲ್ಲ ಕಾರ್ಯಗಳಲ್ಲಿಯೂ ಸಮರ್ಥನಾದವನು ; ಸಹನೆಯುಳ್ಳವನು. **ಕ್ಷಮಯಾ ಪೃಥಿವೀಸಮಃ** (ರಾ. ೧-೧-೧೮)

443) **ಪ. ಭ. :–** ಅನಾಯಾಸವಾಗಿ ಪ್ರಪಂಚದ ಎಲ್ಲ ಭಾರವನ್ನೂ ಸಹಿಸುವವನು.

ನಿರುಕ್ತಿ :– ಅನಾಯಾಸೇನ ನಿಖಿಲಂ ಭಾರಂ ಚ ಭುವನಸ್ಯ ಯಃ ।
ಸಹತೇ ಸ ಕ್ಷಮಃ ಪ್ರೋಕ್ತಃ ಷಡರ್ಣಃ ಕ್ಷಾನ್ತಿದಾಯಕಃ ॥

'ಓಂ ಕ್ಷಮಾಯ ನಮಃ'–ಎಂಬ ಈ ನಾಮಮಂತ್ರಜಪವು ತಾಳ್ಮೆ ಯನ್ನು ಕೊಡುತ್ತದೆ.

442) **ಸ. ಸಂ. :–** ನಾಶವನ್ನು ನಾಶಪಡಿಸುವವನು ; ನರಕಗಳನ್ನು ಕಟ್ಟಿಹಾಕುವವನು ; ಎಲ್ಲ ಕಾರ್ಯಗಳಲ್ಲಿಯೂ ದಕ್ಷನಾದವನು.

* * *

443) **ಕ್ಷಾಮಃ** = ಸ್ಥೂಲ-ಸೂಕ್ಷ್ಮಗಳನ್ನು ಬಿಟ್ಟು ತೆಳ್ಳಗಿರುವವನು.

ಶಂ. ಭಾ. :– ಎಲ್ಲ ವಿಕಾರಗಳೂ ಕ್ಷೀಣಹೊಂದಿದ ಬಳಿಕ ಆತ್ಮಭಾವ ದಿಂದ ಇರುವವನು.

444) **ಪ. ಭ. :–** ಅವಾಂತರಪ್ರಳಯದಲ್ಲಿ ಕೆಲವು ತಾರಾಗಣಗಳಿಂದ ಕ್ಷೀಣನಾಗಿ ಧ್ರುವನ ಸಮೀಪದಲ್ಲಿ ಇದ್ದು ನಾಲ್ಕು ನಕ್ಷತ್ರಗಳಿಂದ ಕೂಡಿರು ವವನು. **ತಾರಕಾಃ ಶಿಂಶುಮಾರಸ್ಯ ನಾಸ್ತಮೇತಿ ಚತುಷ್ಟಯಮ್ ॥**

ನಿರುಕ್ತಿ :– ಅವಾನ್ತರಲಯೇ ಕೈಶ್ಚಿತ್ ಕ್ಷೀಣಸ್ತಾರಾಗಣೈಃ ಸ್ಮೃತಃ ।
ಕ್ಷಾಮೋ ಧ್ರುವಸಮೀಪಸ್ಥಃ ಚತುರ್ನಕ್ಷತ್ರಸಂಯುತಃ ॥

443) **ಸ. ಸಂ. :–** ಭೂಮಿಯನ್ನು ವರಾಹಾದಿ ರೂಪದಿಂದ ಧರಿಸಿದ ವನು ; ವಾಮನರೂಪದಿಂದ ಭೂಮಿಯನ್ನು ಸ್ವೀಕರಿಸಿದವನು.

* * *

444) **ಸಮೀಹನಃ** = ಒಳ್ಳೆಯ ಚೇಷ್ಟೆಯುಳ್ಳವನು.

ಶಂ. ಭಾ. :– ಸೃಷ್ಟಿಯೇ ಮುಂತಾದುವುಗಳಿಗೋಸ್ಕರವಾಗಿ ಚೆನ್ನಾಗಿ ಪ್ರಯತ್ನಮಾಡುವವನು.

445) ಪ. ಭ. :– ಸೃಷ್ಟಿಯಲ್ಲಿ ಎಲ್ಲವನ್ನೂ ಯಾವಾಗಲೂ ಅವುಗಳ ಅಧಿಕಾರಿಗಳಿಗೆ ಕಳುಹಿಸುವವನು.

ನಿರುಕ್ತಿ :– ಸ್ವಸ್ವಾಧಿಕಾರೇ ಸರ್ವಾನ್ಹಿ ಯಃ ಸಮೀಹೇತ ಸೃಷ್ಟಿಷು ।
ಸಮೀಹನಃ ಸ ವಿಜ್ಞೇಯಸ್ಸ್ರಷ್ಟಾರ್ಣಃ ಕಾರ್ಯದಾಯಕಃ ॥

ಎಂಟಕ್ಷರಗಳ ಈ ಮಂತ್ರವು ಉದ್ಯೋಗವನ್ನು ಕೊಡಿಸುತ್ತದೆ.

444) ಸ. ಸಂ. :– ಎಲ್ಲ ಕಡೆಗಳಲ್ಲಿಯೂ ಸಮಾನವಾದ ರೂಪಗಳುಳ್ಳವನು ಮತ್ತು ಚೇಷ್ಟೆಮಾಡುವವನು ; ಭಗವತ್ಪೂಜಾದಿರೂಪವಾದ ಒಳ್ಳೆಯ ಪ್ರಯತ್ನವುಳ್ಳವರನ್ನು ವೈಕುಂಠಾದಿ ಲೋಕಗಳಿಗೆ ಒಯ್ಯುವವನು.

* * *

ಯಜ್ಞ ಇಜ್ಯೋ ಮಹೇಜ್ಯಶ್ಚ ಕ್ರತುಃ ಸತ್ರಂ ಸತಾಂ ಗತಿಃ ।
ಸರ್ವದರ್ಶೀ ವಿಮುಕ್ತಾತ್ಮಾ ಸರ್ವಜ್ಞೋ ಜ್ಞಾನಮುತ್ತಮಮ್ ॥

445) **ಯಜ್ಞಃ** = ಯಜ್ಞರೂಪಿಯು ; ಯಜ್ಞವೆಂಬ ಹೆಸರಿನಿಂದ ಅವತಾರಮಾಡಿದವನು.

ಶಂ. ಭಾ. :– ಸರ್ವಯಜ್ಞಸ್ವರೂಪನಾದವನು ; ಯಜ್ಞರೂಪದಿಂದ ಎಲ್ಲ ದೇವತೆಗಳಿಗೂ ಸಂತೋಷವನ್ನುಂಟುಮಾಡುವವನು. ಯಜ್ಞೋ ವೈ ವಿಷ್ಣುಃ । (ತೈ. ಸಂ. ೧-೭-೪)

446) ಪ. ಭ. :– ಯಜ್ಞದಿಂದ ಆರಾಧಿಸಲ್ಪಡಬೇಕಾದವನು.

ನಿರುಕ್ತಿ :– ಯಜ್ಞಾರಾಧ್ಯತಯಾ ಯಜ್ಞಃ............ ॥

445) ಸ. ಸಂ. :– ಯಜ್ಞವನ್ನು ಭುಂಜಿಸುವವನು ; ಕೃಷ್ಣರೂಪದಿಂದ ತನ್ನನ್ನು ಕುರಿತು ತಾನೇ ಯಜ್ಞಮಾಡಿಕೊಂಡವನು.

ಬ್ರಾಹ್ಮೇ ಮುಹೂರ್ತೇ ಚೋತ್ಥಾಯ ವಾರ್ಯುಪಸ್ಪೃಶ್ಯ ಮಾಧವಃ ।
ದಧ್ಯೌಪ್ರಸನ್ನಕರಣ ಆತ್ಮಾನಂ ತಮಸಃ ಪರಮ್ ॥

ಶ್ರೀರಾಮನ ರೂಪದಿಂದ ಅಹಲ್ಯೆಯನ್ನು ಗೌತಮರೊಡನೆ ಸೇರಿಸಿದವನು.

* * *

446) ಇಜ್ಯಃ = ಪೂಜಿಸಲ್ಪಡಬೇಕಾದ ದೇವನು.

ಶಂ. ಭಾ. :– ಪೂಜಿಸಲ್ಪಡಬೇಕಾದ ದೇವನೂ ಇವನೇ.

ಯೇ ಯಜನ್ತಿ ಮಖೈಃ ಪುಣ್ಯೈರ್ದೇವತಾದೀನ್ಪಿತೄನಪಿ ।
ಆತ್ಮಾನಮಾತ್ಮನಾ ನಿತ್ಯಂ ವಿಷ್ಣುಮೇವ ಯಜನ್ತಿ ತೇ ॥

(ಹರಿವಂಶ. ३-४०-೨೭)

447) **ಪ. ಭ. :–** ಕರ್ಮಗಳಿಂದ ಪೂಜಿತನಾದವನು ; ಇಂದ್ರನೇ ಮುಂತಾದವರಿಂದ ಕಾಮ್ಯಕರ್ಮಗಳ ಮೂಲಕವಾಗಿ ಪೂಜಿಸಲು ಯೋಗ್ಯ ನಾದವನು.

ನಿರುಕ್ತಿ :– .... **ಇಜ್ಯಃ ಕರ್ಮಭಿರರ್ಚಿತಃ ॥**

446) **ಸ. ಸಂ. :–** ಪೂಜಿಸಲ್ಪಡಬೇಕಾದವನು ; ಪೂಜೆಯುಳ್ಳವನು.

* * *

447) **ಮಹೇಜ್ಯಃ** = ಪೂಜಿಸಲ್ಪಡಬೇಕಾದವರಲ್ಲಿ ಶ್ರೇಷ್ಠತಮನಾದ ವನು.

ಶಂ. ಭಾ. :– ಮೋಕ್ಷರೂಪವಾದ ಫಲವನ್ನು ದಯಪಾಲಿಸುವುದ ರಿಂದ ಪೂಜಿಸಲು ಯೋಗ್ಯರಾದ ಸರ್ವದೇವತೆಗಳಲ್ಲಿಯೂ ಅತ್ಯಂತಶ್ರೇಷ್ಠ ನಾದವನು.

448) **ಪ. ಭ. :–** ನಿಷ್ಕಾಮವಾದ ಮಹಾಯಜ್ಞವು ಯಾವ ವ್ಯವಧಾನವೂ ಇಲ್ಲದೇ (ಸಾಕ್ಷಾತ್ತಾಗಿ) ಯಾವನದಾಗಿರುವುದೋ–ಅವನು.

ನಿರುಕ್ತಿ : **ಇಜ್ಯಾ ಹಿ ಮಹತೀ ಯಸ್ಯ ಸ ಮಹೇಜ್ಯ ಉದಾಹೃತಃ ।**

447) **ಸ. ಸಂ. :–** ಉತ್ಸವಗಳಲ್ಲಿ, ಯಜ್ಞಾದಿಗಳಲ್ಲಿ ಪೂಜೆಯುಳ್ಳ ವನು ; ಸೀತಾವಿವಾಹೋತ್ಸವದಲ್ಲಿ ಸೀತೆಯ ಪ್ರಾಪ್ತಿಗೋಸ್ಕರ ಬಿಲ್ಲಿನ ನಾಣನ್ನು ಏರಿಸಿದವನು ; ಮಹಿಮೆಯಿಂದ ಕೂಡಿದ ಶ್ರೀದೇವಿ-ಭೂದೇವಿಯರುಳ್ಳವನು.

* * *

448) **ಕ್ರತುಃ** = ಕ್ರತುವೆಂಬ ಯಜ್ಞರೂಪಿಯಾದವನು.

ಶಂ. ಭಾ. :– ಯೂಪಸಹಿತವಾದ ಯಜ್ಞಕ್ಕೆ ಕ್ರತು–ಎಂದು ಹೆಸರು. ಅಂತಹ ಕ್ರತುರೂಪನಾದವನು.

449) **ಪ. ಭ. :–** ಅಗ್ನಿಷ್ಟೋಮವೇ ಮುಂತಾದ ಸೋಮಸಂಸ್ಥೆಗಳಿಗೆ ಕ್ರತು–ಎಂದು ಹೆಸರು. ಅವುಗಳಿಂದ ಆರಾಧಿಸಲ್ಪಡಬೇಕಾದವನು.

ನಿರುಕ್ತಿ :– ಅಗ್ನಿಷ್ಟೋಮಾದಯಃ ಸಪ್ತಸಂಸ್ಥಾಃ ಕ್ರತವ ಈರಿತಾಃ ।
ಆರಾಧ್ಯಃ ಕ್ರಿಯತೇ ತೈಸ್ತೈರಿತಿ ಕ್ರತುರುದೀರಿತಃ ॥

448) **ಸ. ಸಂ. :–**ಸೃಷ್ಟಿಯೇ–ಮುಂತಾದುವನ್ನು ಮಾಡುವವನು ; ಕೃತಿ ರೂಪನಾದವನು ; ಜ್ಞಾನರೂಪನಾದವನು. **ಸ ಕ್ರತುರ್ಜ್ಞಾನರೂಪತ್ವಾತ್ ॥**

* * *

449) **ಸತ್ರಂ** = ಸತ್ರಯಜ್ಞರೂಪಿಯಾದವನು.

ಶಂ. ಭಾ. :– ಸತ್ರವೆಂದರೆ ಅನೇಕ ಯಜಮಾನರಿಂದ ಬಹಳ ಕಾಲದ ವರೆಗೂ ಆಚರಿಸಲ್ಪಡುವ ವಿಧಿಬೋಧಿತವಾದ ಯಜ್ಞವಿಶೇಷವು. ಬಗೆ-ಬಗೆಯ ಯಜ್ಞಕರ್ಮಗಳೂ ಅವನೇ. ಅವುಗಳಿಂದ ವಿಧಿರೂಪವಾದ ಧರ್ಮ ವನ್ನು ಹೊಂದುವವನು ; ಸತ್ಪುರುಷರನ್ನು ಕಾಪಾಡುವವನು.

450) **ಪ. ಭ. :–** ಸತ್ರದಲ್ಲಿ ಸಂತರಿಗೆ ಆರಾಧ್ಯನಾಗಿ ಆ ಸತ್ರವನ್ನು ಹೊಂದುವವನು. ಸತ್ರವೆಂದರೆ ಅನೇಕಯಜಮಾನರುಳ್ಳದ್ದಾಗಿ ಬಹಳ ಕಾಲದವರೆಗೆ ಆಚರಿಸಲ್ಪಡುವ ವಿಧಿಚೋದಿತವಾದ ಯಜ್ಞವು.

ನಿರುಕ್ತಿ :– ಬಹುಕಾಲಾನೇಕಯಜಮಾನಕೇ ವಿಧಿಚೋದಿತೇ ।
ಸತ್ರೇ ಸದಾರಾಧ್ಯತಯಾ ಸತ್ರಂ ಸ್ಯಾತ್ಸೀದತೀತಿ ಚ ॥

449) **ಸ. ಸಂ. :–** ಸಂತರನ್ನು ಕಾಪಾಡುವವನು ; ಸಂತರನ್ನು ರಮಿಸು ವಂತೆ ಮಾಡುವವನು.

* * *

450) **ಸತಾಂಗತಿಃ** = ಸಂತರಿಗೆ (ಬ್ರಹ್ಮಜ್ಞಾನಿಗಳಿಗೆ) ಏಕಮಾತ್ರಗತಿ ಯಾದವನು.

ಅಸ್ತಿ ಬ್ರಹ್ಮೇತಿ ಚೇದ್ವೇದ । ಸನ್ತಮೇನಂ ತತೋ ವಿದುರಿತಿ ॥

ಶಂ. ಭಾ. :– ಮುಮುಕ್ಷುಗಳಾದ ಸತ್ಪುರುಷರಿಗೆ ಯಾವನನ್ನು ಬಿಟ್ಟು ಬೇರೆ ಗತಿಯಿಲ್ಲವೋ–ಅವನು.

451) **ಪ. ಭ. :–** ಪ್ರವೃತ್ತಿ ಮತ್ತು ನಿವೃತ್ತಿಧರ್ಮನಿಷ್ಠರಾದವರಿಗೆ ಗತಿ ಯಾದವನು.

ನಿರ್ಧೂತದೋಷಪಙ್ಕಾನಾಂ ಯತೀನಾಂ ಸಂಯತಾತ್ಮನಾಮ್ ।
ಸ್ಥಾನಂ ತತ್ಪರಮಂ ವಿಪ್ರ ಪುಣ್ಯಾಪಾಪಪರಿಕ್ಷಯೇ ॥

(ವಿ. ಪು. ೨-೮-೯೯)

ನಿರುಕ್ತಿ :– **ಪ್ರವೃತ್ತಿಧರ್ಮನಿಷ್ಠಾನಾಂ ಗತಿರ್ಯಃ ಸ ಸತಾಂಗತಿಃ ।**
ನಿವೃತ್ತಿಧರ್ಮನಿಷ್ಠಾನಾಂ ಗತಿರ್ಯಃ ಸ ಸತಾಂಗತಿಃ ॥

450) **ಸ. ಸಂ.** :– ಮೃತ್ಯುವು ಸನ್ನಿಹಿತರಾದವರಿಗೆ ಗತಿಯಾದವನು ; ನಕ್ಷತ್ರಗಳಿಗೆ ಗತಿಯು (ಗಮನವು) ಯಾವನಿಂದ ಉಂಟಾಗುವುದೋ– ಅವನು.

* * *

451) **ಸರ್ವದರ್ಶೀ** = ಸರ್ವಸಾಕ್ಷಿಯಾದವನು ; ಎಲ್ಲರನ್ನೂ ಯಾವಾಗಲೂ ಎಲ್ಲೆಡೆಗಳಲ್ಲಿಯೂ ನೋಡುತ್ತಿರುವವನು ; ಎಲ್ಲರ ಪುಣ್ಯ-ಪಾಪ ಕರ್ಮಗಳೆಲ್ಲವನ್ನೂ ನೋಡುತ್ತಿರುವವನು.

ಶಂ. ಭಾ. :– ತನ್ನ ಸ್ವಾಭಾವಿಕವಾದ ಜ್ಞಾನದಿಂದ ಎಲ್ಲ ಪ್ರಾಣಿಗಳ ಕರ್ಮಾಕರ್ಮಗಳನ್ನೂ ನೋಡುತ್ತಿರುವವನು.

452) **ಪ. ಭ.** :– ಧರ್ಮಾಧರ್ಮಗಳನ್ನೂ ಪ್ರವೃತ್ತಿ-ನಿವೃತ್ತಿರೂಪವಾದ ಧರ್ಮಗಳನ್ನೂ ಸದಾ ನೋಡುವ ಸ್ವಭಾವವುಳ್ಳವನು.

ನಿರುಕ್ತಿ :– **ಧರ್ಮಾಧರ್ಮೌ ಚ ತೌ ಸರ್ವಾವಧ್ಯಕ್ಷಯಿತುಮಾದರಾತ್।**
ಸರ್ವದಾ ಶೀಲಮಸ್ಯೇತಿ ಸರ್ವದರ್ಶೀ ತತಃ ಸ್ಮೃತಃ ॥

451) **ಸ. ಸಂ.** :– ದರ್ಶವೇ ಮುಂತಾದ ಎಲ್ಲ ಯಜ್ಞವಿಶೇಷಗಳುಳ್ಳವನು ; ಎಲ್ಲವನ್ನೂ ನೋಡುತ್ತಿರುವವನು.

* * *

452) **ವಿಮುಕ್ತಾತ್ಮಾ ; ನಿವೃತಾತ್ಮಾ** = ಸ್ವಾಭಾವಿಕವಾಗಿಯೇ ಪರಿಪೂರ್ಣನಾಗಿರುವ ಪರಮಾತ್ಮನು ; ವಿಷಯಗಳಿಂದ ಪೂರ್ಣನಿವೃತ್ತಿಯನ್ನು ಹೊಂದಿರುವ ವೈರಾಗ್ಯಯುಕ್ತವಾದ ಆತ್ಮವುಳ್ಳವನು.

ಶಂ. ಭಾ. :– **ವಿಮುಕ್ತಾತ್ಮಾ** = ಸ್ವಾಭಾವಿಕವಾಗಿಯೇ ವಿಮುಕ್ತವಾದ ಆತ್ಮವುಳ್ಳವನು ; ವಿಮುಕ್ತನೂ ಮತ್ತು ಆತ್ಮನೂ ಆಗಿರುವವನು. **ವಿಮುಕ್ತಶ್ಚ ವಿಮುಚ್ಯತೇ ।** (ಕಠ. ೨-೫-೧)

453) **ಪ. ಭ. :–** **ನಿವೃತ್ತಾತ್ಮಾ** = ನಿವೃತ್ತಿಧರ್ಮಕ್ಕೆ ಆಚಾರ್ಯನಾಗಿರುವುದರಿಂದ ವಿಷಯಗಳಿಂದ ನಿವೃತ್ತವಾದ ಪರಮವೈರಾಗ್ಯಪ್ರಸಿದ್ಧಿಯನ್ನು ತೋರಿಸಿದ ಮನಸ್ಸುಳ್ಳ ನರ-ನಾರಾಯಣಸ್ವರೂಪಿಯು.

ನಿರುಕ್ತಿ :– **ನಿವೃತ್ತಿಧರ್ಮಾಚಾರ್ಯತ್ವಾದ್ವಿಷಯೇಭ್ಯೋ ನಿವೃತ್ತಿಮತ್ ।**
ಮನೋ ಯಸ್ಯ ನಿವೃತ್ತಾತ್ಮಾ ನರನಾರಾಯಣಾತ್ಮಕಃ ॥

452) **ಸ. ಸಂ. :–** **ವಿಮುಕ್ತಾತ್ಮಾ** = ಜೀವಗಳು ಯಾವನಿಂದ ಮೋಕ್ಷ ಹೊಂದುತ್ತವೆಯೋ–ಅವನು ; ವಿಶೇಷವಾಗಿ ಮುಕ್ತರಿಗೆ ಸ್ವಾಮಿಯಾದವನು.

* * *

453) **ಸರ್ವಜ್ಞಃ** = ಸ್ವಾಭಾವಿಕವಾಗಿಯೇ ಯಾವಾಗಲೂ ಎಲ್ಲವನ್ನೂ ತಿಳಿದವನು.

ಶಂ. ಭಾ. :– ಸರ್ವವೂ ಮತ್ತು ಜ್ಞಾನಿಯೂ ಆಗಿರುವ ಪರಮಾತ್ಮನು. **ಇದಗ್ಂ ಸರ್ವಂ । ಯದಯಮಾತ್ಮಾ** (ಬೃ ೨-೪-೬)

454) **ಪ. ಭ. :–** ಸಂಪೂರ್ಣವಾದ ಶುದ್ಧವಾದ ಸ್ವಾತ್ಮವನ್ನು ತಿಳಿದವನು.

ಯುಞ್ಜಾನಂ ಚ ಸ್ವಮಾತ್ಮಾನಂ ಪರಿಸ್ಮಿನ್ನವ್ಯಯೇ ಪದೇ ॥

ನಿರುಕ್ತಿ :– **ಸರ್ವಾತ್ಮನಾ ಸ್ವಮಾತ್ಮಾನಂ ಯಶ್ಚ ಜಾನಾತಿ ಕೇವಲಮ್ ।**
ಸರ್ವಜ್ಞಃ ಸ ತು ವಿಜ್ಞೇಯಃ ಸಪ್ತಾರ್ಣೋ ಜ್ಞಾನದೋ ಮನುಃ ॥

'ಓಂ ಸರ್ವಜ್ಞಾಯ ನಮಃ'–ಎಂಬ ಈ ನಾಮಮಂತ್ರಜಪವು ಜ್ಞಾನದಾಯಕವಾದುದು.

453) **ಸ. ಸಂ. :–** ಎಲ್ಲವನ್ನೂ ಅರಿತವನು ; ಯಾವನಿಂದ ಜೀವರು ಸರ್ವಜ್ಞರಾಗುತ್ತಾರೆಯೋ–ಅವನು.

* * *

454) **ಜ್ಞಾನಮುತ್ತಮಮ್** = ಸರ್ವೋತ್ತಮಜ್ಞಾನರೂಪಿಯಾದವನು.

ಶಂ. ಭಾ. :– ಸರ್ವೋತ್ತಮವೂ, ನಿತ್ಯಸಿದ್ಧವೂ, ದೇಶ-ಕಾಲಗಳ ಎಲ್ಲೆಯನ್ನೂ ಮೀರಿದುದೂ, ಎಲ್ಲರಿಗೂ ಸಾಧಕತಮವೂ ಆದ ಜ್ಞಾನ ಸ್ವರೂಪವಾದ ಬ್ರಹ್ಮವು. **ಸತ್ಯಂ ಜ್ಞಾನಮನನ್ತಂ ಬ್ರಹ್ಮ** (ತೈ.೨-೧)

455) **ಪ. ಭ. :–** (ಸರ್ವಶ್ರೇಯಸ್ಸಿಗೂ ಮೂಲವಾದ) ಶ್ರೇಷ್ಠವಾದ ಜ್ಞಾನವು (ವೈಷ್ಣವಧರ್ಮವು) ಯಾವನಲ್ಲಿ ಮತ್ತು ಯಾವನಿಂದ ಎಲ್ಲರಿಗೂ ತಿಳಿದುಬರುತ್ತದೆಯೋ–ಅವನು.

ನಿರುಕ್ತಿ :– **ಪರಶ್ಚ ವೈಷ್ಣವೋ ಧರ್ಮಃ**
ಸರ್ವೋಽಸ್ಮಿನ್ ಜ್ಞಾಯತೇ ಯತಃ ।
ಸರ್ವೇಷಾಂ ಶ್ರೇಯಸಾಂ ಮೂಲಂ
ತಜ್ಜ್ಞೇಯಂ ಜ್ಞಾನಮುತ್ತಮಮ್ ॥

454) **ಸ. ಸಂ. :–** ತನ್ನ ವಿಷಯಕವಾದ ಜ್ಞಾನದಿಂದ ಅತ್ಯಂತ ಅತಿಶಯವಾದ ಸಂತೋಷವುಳ್ಳವನು ; ಜ್ಞಾನದಿಂದ ಆನಂದಪಡುವ ದೇವತೆಗಳಿಂದ ಇಚ್ಛಿಸಲ್ಪಡುವವನು ; ಜ್ಞಾನಾನಂದಕ್ಕೋಸ್ಕರ ಯಾವನಿಂದ ಇಷ್ಟವುಂಟಾಗುವುದೋ–ಅವನು.

* * *

ಸುವ್ರತಃ ಸುಮುಖಃ ಸೂಕ್ಷ್ಮಃ ಸುಘೋಷಃ ಸುಖದಃ ಸುಹೃತ್ ।
ಮನೋಹರೋ ಜಿತಕ್ರೋಧೋ ವೀರಬಾಹುರ್ವಿದಾರಣಃ ॥೬೨॥

455) **ಸುವ್ರತಃ** = ಶುಭವಾದ ವ್ರತವುಳ್ಳವನು.

ಶಂ. ಭಾ. :– ಶುಭವಾದ ವ್ರತವುಳ್ಳವನು.

ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ ।
ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ವ್ರತಂ ಮಮ ॥
(ರಾ. ಯು. ೧೮-೩೩)

456) **ಪ. ಭ. :–** ಭಕ್ತರಿಗೋಸ್ಕರ (ಕೇವಲ ಪರಾರ್ಥಕ್ಕೋಸ್ಕರವಾಗಿ) ಶೋಭನವಾದ ವ್ರತವುಳ್ಳವನು. **ನ ಮೇ ಪಾರ್ಥಾಸ್ತಿ ಕರ್ತವ್ಯಂ**
(ಗೀತಾ. ೩-೨೨)

ನಿರುಕ್ತಿ :– **ಭಕ್ತಾರ್ಥಂ ವ್ರತವಾನ್ಯೋಽಸೌ ಸುವ್ರತಃ ಸ ಪ್ರಕೀರ್ತಿತಃ ॥**

455) **ಸ. ಸಂ. :–** ಶೋಭನವಾದ ವ್ರತಕ್ಕೆ ವಿಷಯನಾದವನು. ಶೋಭನವಾದ ಜಗತ್ತಿನ ರಕ್ಷಣೆಯೇ ಮುಂತಾದ ವ್ರತವುಳ್ಳವನು.

* * *

456) **ಸುಮುಖಃ** = ಪ್ರಸನ್ನವೂ, ಪ್ರಶಾಂತವೂ, ಸುಂದರವೂ ಆದ ಯೋಗಿಧ್ಯೇಯವಾದ ಮುಖವುಳ್ಳವನು.

ಶಂ. ಭಾ. :– ಶೋಭನವಾದ ಮುಖವುಳ್ಳವನು. **ಪ್ರಸನ್ನವದನಂ ಚಾರು ಪದ್ಮಪತ್ರಾಯತೇಕ್ಷಣಮ್** (ವಿ. ಪು. ೬-೭-೮೦) ವನವಾಸ ದಲ್ಲಿಯೂ ಸುಮುಖನಾಗಿದ್ದವನು ; ಎಲ್ಲ ವಿದ್ಯೆಗಳನ್ನೂ ಉಪದೇಶ ಮಾಡಿದ್ದರಿಂದ ಸುಮುಖನಾದವನು. **ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ ಯೋ ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ ॥** (ಶ್ವೇ. ೬-೧೮)

457) **ಪ. ಭ. :–** ಜಪಾದಿಗಳಲ್ಲಿ ಧ್ಯಾನಮಾಡುವವರ ವಿಷಯದಲ್ಲಿ ವಿಕಾರರಹಿತವೂ, ಪ್ರಸನ್ನವೂ, ಮನೋಹರವೂ ಆದ ಮುಖವುಳ್ಳವನು. **ಓಂಕಾರಲಕ್ಷಣಂ ಮನ್ತ್ರಂ ಜಪನ್ನಾನ್ತರಲಕ್ಷಿತಮ್ । ಕೃಷ್ಣಾಯ ಕಮಲ ದಲಾಮಲನೇತ್ರಾಯ**–ಎಂಬ ಮಂತ್ರವರ್ಣದಂತೆ.

ನಿರುಕ್ತಿ :– **ಧ್ಯಾತೃಣಾಂ ಸುಪ್ರಸನ್ನಂ ಯನ್ಮುಖಂ ಸ ಸುಮುಖಃ ಸ್ಮೃತಃ ।**

456) **ಸ. ಸಂ. :–** ಶೋಭನವಾದ ಮುಖವುಳ್ಳವನು.

* * *

457) **ಸೂಕ್ಷ್ಮಃ** = ಸೂಕ್ಷ್ಮನಾದವನು.

ಶಂ. ಭಾ. :– ಶಬ್ದವೇ ಮುಂತಾದ ಸ್ಥೂಲಕಾರಣಗಳಿಂದ ರಹಿತ ನಾಗಿರುವುದರಿಂದ ಅತ್ಯಂತಸೂಕ್ಷ್ಮನಾದವನು. **ಸರ್ವಗತಂ ಸುಸೂಕ್ಷ್ಮಂ** (ಮುಂ.೧-೧-೬)

458) **ಪ. ಭ. :–** ಸಮಾಧಿಯಲ್ಲಿ ಸಾಕ್ಷಾತ್ಕರಿಸಲ್ಪಡುವ ಅತ್ಯಂತ ಸೂಕ್ಷ್ಮವಾದ ಸ್ವರೂಪವುಳ್ಳವನು ; ಅಸುರರಿಗೆ ನಿಗೂಢವಾದ (ತಿಳಿಯದೇ ಇರುವ) ಅಭಿಪ್ರಾಯವುಳ್ಳವನು.

ನಿರುಕ್ತಿ :– **ಸೂಕ್ಷ್ಮೋದುಃಸಾಧ್ಯಯೋಗೈಕಲಕ್ಷ್ಯಸೂಕ್ಷ್ಮಸ್ವರೂಪತಃ ।**
ಅಸುರೇಷು ನಿಗೂಢಾಭಿಪ್ರಾಯಾತ್ಸೂಕ್ಷ್ಮಃ ಸ ಉಚ್ಯತೇ ॥

457) **ಸ. ಸಂ. :–** ಸೂಕ್ಷ್ಮರೂಪಿಯು. **ಸೂಕ್ಷ್ಮಂ ತು ತದರ್ಹತ್ವಾತ್ ।** ಶೋಭನೆಯಾದ ಭೂದೇವಿಯುಳ್ಳವನು.

*   *   *

458) **ಸುಘೋಷಃ** = ಶ್ರೇಷ್ಠವಾದ ಪ್ರಣವಘೋಷವುಳ್ಳವನು ; ವೇದಘೋಷವುಳ್ಳವನು ; ಯೋಗಿಗಳ ಅಂತಃಶ್ರವಣಕ್ಕೆ ಗೋಚರವಾಗುವ ದಶವಿಧನಾದಗಳುಳ್ಳವನು. ಶ್ರೇಷ್ಠವಾದ ಪಾಂಚಜನ್ಯಘೋಷವುಳ್ಳವನು.

ಶಂ. ಭಾ. :– ವೇದರೂಪವಾದ ಘೋಷಗಳುಳ್ಳವನು. ಮೇಘದಂತೆ ಗಂಭೀರವಾದ ಘೋಷವುಳ್ಳವನು.

459) **ಪ. ಭ. :–** ಉಪನಿಷದ್ರೂಪವಾದ ಸ್ವಾಧ್ಯಾಯಘೋಷವುಳ್ಳವನು.

ನಿರುಕ್ತಿ :– ಸ್ವಾಧ್ಯಾಯಘೋಷೋ ಯಸ್ಯಾಸ್ತಿ ಸುಘೋಷಃ ಸ ತು ಕೀರ್ತಿತಃ ॥

458) **ಸ. ಸಂ. :–** ಶ್ರೇಷ್ಠವಾದ ವೇದಾದಿರೂಪವಾದ ಘೋಷವುಳ್ಳವನು ; ಪಾಂಚಜನ್ಯಘೋಷವುಳ್ಳವನು.

*   *   *

459) **ಸುಖದಃ** = ಸುಖವನ್ನು ದಯಪಾಲಿಸುವವನು.

ಶಂ. ಭಾ. :– ಸದಾಚಾರವುಳ್ಳವರಿಗೆ ಸುಖವನ್ನು ಕೊಡುವವನು ; ದುರಾಚಾರವುಳ್ಳವರ ಸುಖವನ್ನು ಖಂಡನೆಮಾಡುವವನು.

460) **ಪ. ಭ. :–** ಸದಾಚಾರ-ಸಮಾಧಿಗಳನ್ನು ಅನುಷ್ಠಾನಮಾಡಿಸಿ ಅವುಗಳಲ್ಲಿ ನಿಷ್ಠೆಯುಳ್ಳವರಿಗೆ ಪರಮಫಲವಾದ ಸುಖವನ್ನು ಅನುಗ್ರಹಿಸುವವನು ; ದೇವತೆಗಳಿಗೆ ಅಮೃತಪ್ರದಾನಾದಿಗಳಿಂದ ಸುಖವನ್ನು ಉಂಟುಮಾಡುವವನು.

ನಿರುಕ್ತಿ :– ಸಮಾಧ್ಯನುಷ್ಠಾಪನೇನ ತದನುಷ್ಠಾನಶೀಲಿನಾಮ್ ।
ಸುಖಂ ಬಹು ದದಾತೀತಿ ಸುಖದಃ ಪರಿಕೀರ್ತಿತಃ ॥

459) **ಸ. ಸಂ.** :– ಮುಕ್ತಿಸುಖವನ್ನು ಕೊಡುವವನು ; ಅಯೋಗ್ಯರ ಸುಖವನ್ನು ಖಂಡಿಸುವವನು.

* * *

460) **ಸುಹೃತ್** = ಎಲ್ಲ ಜೀವಿಗಳಿಗೂ ಸ್ವಾಭಾವಿಕವಾಗಿ ಮಿತ್ರನಾಗಿ ರುವವನು. **ಸುಹೃದಂ ಸರ್ವಭೂತಾನಾಂ ಜ್ಞಾತ್ವಾ ಮಾಂ ಶಾನ್ತಿ ಮೃಚ್ಛತಿ।** (ಗೀತಾ ೫-೨೯)

ಶಂ. ಭಾ. :– ಪ್ರತ್ಯುಪಕಾರದ ಅಪೇಕ್ಷೆಯಿಲ್ಲದೇ ಉಪಕಾರಮಾಡು ವವನು.

461) **ಪ. ಭ.** :– ಉಪಕಾರಮಾಡದವನಿಗೂ ಮತ್ತು ಅಪಕಾರಿಗೂ ಕೂಡ–'ಇವನಿಗೆ ಏನು ಒಳ್ಳೆಯದನ್ನು ಮಾಡೋಣ! ಇವನಿಗೆ ಯಾವ ಉಪಕಾರವನ್ನು ಮಾಡೋಣ!'–ಎಂದು ಶುಭವನ್ನು ಆಶಂಸೆಮಾಡುವ ಶೋಭನವಾದ ಮನಸ್ಸುಳ್ಳವನು.

ನಿರುಕ್ತಿ :– **ಕಿಮಸ್ಮಿನ್ಕರವಾಣೀತಿ ಹ್ಯಪಕಾರಿಣಿ ಶೋಭನಮ್ ।**
ಯಸ್ಯಾಸ್ತಿ ಹೃದಯಂ ಸೋऽಯಂ ಸುಹೃದಿತ್ಯಭಿಧೀಯತೇ ॥

460) **ಸ. ಸಂ.** :– ಶೋಭನವಾದ ಮನಸ್ಸುಳ್ಳವನು ; ಭಕ್ತರು ಮಾಡಿದ ಶೋಭನವಾದ ಕರ್ಮಫಲವನ್ನು ಸ್ವೀಕರಿಸುವವನು ; ಅಕಾರಣವಾಗಿ ಉಪಕಾರಮಾಡುವವನು.

* * *

461) **ಮನೋಹರಃ** = ಮನಸ್ಸನ್ನು ಅಪಹರಿಸುವವನು ; ತನ್ನ ಸೌಂದರ್ಯ-ಕಲ್ಯಾಣಾದಿಗುಣಗಳಿಂದ ಎಲ್ಲರ ಮನಸ್ಸನ್ನೂ ಅಪಹರಿಸು ವವನು.

ಶಂ. ಭಾ. :– ನಿರತಿಶಯಾನಂದರೂಪಿಯಾಗಿರುವುದರಿಂದ ಮನ ಸ್ಸನ್ನು ಅಪಹರಿಸುವವನು. **ಯೋ ವೈ ಭೂಮಾ ತತ್ಸುಖಂ ನಾಲ್ಪೇ ಸುಖ ಮಸ್ತಿ ।** (ಛಾಂ. ೭-೨೩-೧)

462) **ಪ. ಭ.** :– (ತನ್ನ ಸ್ವಾಭಾವಿಕವಾದ ಸೌಂದರ್ಯದಿಂದ)

ಎಲ್ಲರ ಮನಸ್ಸನ್ನೂ ಅಪಹರಿಸುವವನು ; ಅಸುರರಿಗೆ ವ್ಯಾಮೋಹವನ್ನು ಉಂಟುಮಾಡುವ ರೂಪದಿಂದ ಅವರ ಮನಸ್ಸನ್ನು ಅಪಹರಿಸಿದವನು.

ನಿರುಕ್ತಿ :– ಏವಂ ನಿಸರ್ಗಸೌಹಾರ್ದಾತ್ತೇಷಾಂ ಹೃದಯಹಾರಕಃ ।
ಮನೋಹರಃ ಸಮಾಖ್ಯಾತೋ ಹ್ಯಷ್ಟಾರ್ಣಃ ಶಾನ್ತಿದಾಯಕಃ ॥

'ಓಂ ಮನೋಹರಾಯ ನಮಃ'–ಎಂಬ ಈ ನಾಮಮಂತ್ರಜಪದಿಂದ ಮನಸ್ಸಿಗೆ ಶಾಂತಿಯು ಲಭಿಸುತ್ತದೆ.

461) ಸ. ಸಂ. :– ಗೋಪಿಗಳ ಮನಸ್ಸನ್ನು ಸೆಳೆದವನು ; ಜ್ಞಾನಿಯಾಗಿ ಹವಿಸ್ಸೇ ಮುಂತಾದುವುಗಳನ್ನು ಹರಣಮಾಡುವವನು ; ಭಕ್ತರ ಮನಸ್ಸಿನಿಂದ ಅಪಹರಣಮಾಡಲ್ಪಡುವವನು.

*　　　*　　　*

462) **ಜಿತಕ್ರೋಧಃ** = ಸ್ವಾಭಾವಿಕವಾಗಿಯೇ ಕ್ರೋಧವನ್ನು ಜಯಿಸಿದವನು.

ಶಂ. ಭಾ. :– ಕೋಪವನ್ನು ಗೆದ್ದಿರುವವನು. ಹಾಗಾದರೆ ಅವನು ದೈತ್ಯರನ್ನು ಏಕೆ ಕೊಲ್ಲುವನು?–ಎಂದರೆ : ವೇದಮರ್ಯಾದೆಯನ್ನು ಸ್ಥಾಪಿಸುವುದಕ್ಕೋಸ್ಕರ. ಕೋಪವಶದಿಂದಲ್ಲ.

463) ಪ. ಭ. :– ಅಮೃತಾಪಹರಣದ ಸಮಯದಲ್ಲಿ ದೇವತೆಗಳ ಬಗೆಗೆ ಆಶ್ಚರ್ಯಚಕಿತರಾದ ರಾಕ್ಷಸರ ಕೋಪವು ತೊಲಗುವಂತೆ ಮಾಡಿದವನು.

ನಿರುಕ್ತಿ :– ರಕ್ಷಸಾಂ ದೇವವಿಷಯೇ ಯೇನ ಕ್ರೋಧೋ ವಿನಿರ್ಜಿತಃ ।
ಸ ಜಿತಕ್ರೋಧ ಆಖ್ಯಾತೋ ಹ್ಯಷ್ಟಾರ್ಣಃ ಕ್ರೋಧನಾಶಕಃ ।

'ಓಂ ಜಿತಕ್ರೋಧಾಯ ನಮಃ'–ಎಂಬ ಈ ನಾಮಮಂತ್ರಜಪದಿಂದ ಕೋಪವು ನಾಶವಾಗುತ್ತದೆ.

462) ಸ. ಸಂ. :– ಕ್ರೋಧವನ್ನು ಗೆದ್ದವನು ; ಕ್ರೋಧರೂಪರಾದ ದೈತ್ಯರನ್ನು ಗೆದ್ದವನು.

*　　　*　　　*

463) ವೀರಬಾಹುಃ = ಪರಾಕ್ರಮಯುಕ್ತವಾದ ಬಾಹುಗಳುಳ್ಳವನು.

ಶಂ. ಭಾ. :– ದೇವಶತ್ರುಗಳನ್ನು ಸಂಹರಿಸಿ ವೇದದ ಮರ್ಯಾದೆಯನ್ನು ಸ್ಥಾಪಿಸುವ ಪರಾಕ್ರಮಯುಕ್ತವಾದ ಬಾಹುಗಳುಳ್ಳವನು.

464) ಪ. ಭ. :– ಸಮುದ್ರಮಥನದಲ್ಲಿಯೂ, ದುಷ್ಟಸಂಹಾರಾದಿಗಳಲ್ಲಿಯೂ ಅತ್ಯಂತಪರಾಕ್ರಮವುಳ್ಳ ಸಾವಿರಾರು ಬಾಹುಗಳುಳ್ಳವನು.
ನಿರುಕ್ತಿ :– ವಿಕ್ರಾನ್ತಾ ಬಾಹವೋ ಯಸ್ಯ ವೀರಬಾಹುಸ್ತು ಸ ಸ್ಮೃತಃ ।

463) ಸ. ಸಂ. :– ವೀರರು (ಕ್ಷತ್ರಿಯರು) ಯಾವ ಬಾಹುಗಳಿಂದ ಉಂಟಾದರೋ–ಅವನು. ಬಾಹೂ ರಾಜನ್ಯಃ ಕೃತಃ । (ಪು. ಸೂ.)

* * *

464) ವಿದಾರಣಃ = ಅಜ್ಞಾನವನ್ನೂ ಮತ್ತು ಧರ್ಮದ್ವೇಷಿಗಳನ್ನೂ ವಿಶೇಷವಾಗಿ ಸೀಳಿಹಾಕಿದವನು ; ವೀರಬಾಹುವಾದ ನೃಸಿಂಹರೂಪಿಯಾಗಿ ಹಿರಣ್ಯಕಶಿಪುವಿನ ಎದೆಯನ್ನು ಸೀಳಿಹಾಕಿದವನು.

ಶಂ. ಭಾ. :– ಅಧಾರ್ಮಿಕರನ್ನು ಸೀಳಿಹಾಕಿದವನು.

465) ಪ. ಭ. :– ದಿವ್ಯಾಯುಧಗಳಿಂದ ರಾಹುವೇ ಮುಂತಾದವರನ್ನು ಸೀಳಿದವನು.
ನಿರುಕ್ತಿ :– ಆಯುಧೈರ್ದಾರುಣೈರ್ದಿವ್ಯೈರ್ದಾರಣಾಚ್ಚ ವಿದಾರಣಃ ॥

464) ಸ. ಸಂ. :– ಗೋಪಿಯರಿಗೆ ವಿಶೇಷವಾಗಿ ಸುಖವನ್ನುಂಟು ಮಾಡಿದವನು ; ನೃಸಿಂಹರೂಪದಿಂದ ಹಿರಣ್ಯಕಶಿಪುವನ್ನು ಸೀಳಿದವನು ; ಜ್ಞಾನಿಗಳಿಂದ ಚೆನ್ನಾಗಿ ಹೊಂದಲ್ಪಡುವವನು ; ಜರಾಸಂಧಾದಿಗಳೊಡನೆ ಎಲ್ಲ ಕಡೆಗಳಿಂದ ಯುದ್ಧಮಾಡಿದ ಜ್ಞಾನಿಯು ; ಕುಶಲನು ; ಜ್ಞಾನಿಯಲ್ಲಿ ಮತ್ತು ಅಗ್ನಿಯಲ್ಲಿ ಅಂತರ್ಯಾಮಿಯಾಗಿರುವವನು ; ಜ್ಞಾನದಿಂದ ಚೆನ್ನಾಗಿ ಸಂತೋಷವನ್ನು ಉಂಟುಮಾಡುವವನು ; ಸಂನ್ಯಾಸಿಗಳಿಗೆ ಸಂತೋಷವನ್ನು ಉಂಟುಮಾಡುವವನು.

* * *

ಸ್ವಾಪನಃ ಸ್ವವಶೋ ವ್ಯಾಪೀ ನೈಕಾತ್ಮಾ ನೈಕಕರ್ಮಕೃತ್ ।
ವತ್ಸರೋ ವತ್ಸಲೋ ವತ್ಸೀ ರತ್ನಗರ್ಭೋ ಧನೇಶ್ವರಃ ॥೬೩॥

465) **ಸ್ವಾಪನಃ** = ಜೀವಿಗಳಿಗೆ ನಿದ್ರೆಯನ್ನು ಉಂಟುಮಾಡುವವನು ; ಪ್ರಳಯಾನಂತರ ಸೃಷ್ಟಿಯವರೆಗೂ ಜೀವಿಗಳನ್ನು ನಿದ್ರಿಸುವಂತೆ ಮಾಡುವವನು ; ಜೀವಿಗಳು ಅಜ್ಞಾನದಲ್ಲಿ ನಿದ್ರಿಸುವಂತೆ ಮಾಡುವವನು.

ಶಂ. ಭಾ. :– ಜೀವಿಗಳನ್ನು ಮಾಯೆಯಿಂದ ಆತ್ಮಜ್ಞಾನರೂಪವಾದ ಎಚ್ಚರತಪ್ಪುವಂತೆ ನಿದ್ರೆಗೊಳಿಸುವವನು.

466) **ಪ. ಭ. :–** ಮೋಹಿನೀರೂಪಧಾರಿಯಾಗಿ ಅಳಿದುಳಿದ ದೈತ್ಯರನ್ನು ಕೂಡ ತನ್ನ ಕಟಾಕ್ಷಾದಿಗಳಿಂದ ಚೆನ್ನಾಗಿ ಮೋಹಗೊಳಿಸಿದವನು.
ನಿರುಕ್ತಿ :– **ಕಟಾಕ್ಷಭ್ರೂವಿಲಾಸಾದ್ಯೈರ್ನಷ್ಟಶಿಷ್ಟಾಞ್ದಾನಪಿ ।**
ಯೋಽಸೌ ಸಮ್ಯಙ್ಮೋಹಯತಿ ಸ್ವಾಪನಃ ಪರಿಕೀರ್ತಿತಃ ॥

465) **ಸ. ಸಂ. :–** ನಿದ್ರೆಗೊಳಿಸುವವನು ; ನಿದ್ರೆಗೆ ಒಯ್ಯುವವನು ; ನೀರಿನ ಸಮೂಹಕ್ಕೆ ಚೆನ್ನಾಗಿ ಒಯ್ಯುವವನು.

* * *

466) **ಸ್ವವಶಃ** = ಸ್ವತಂತ್ರನಾದವನು ; ಯಾವ ವಿಷಯದಲ್ಲಿಯೂ ಪರಾಧೀನತೆಯಿಲ್ಲದವನು.

ಶಂ. ಭಾ. :– ಜಗತ್ತಿನ ಉತ್ಪತ್ತಿ-ಸ್ಥಿತಿ-ಲಯಗಳಿಗೆ ಕಾರಣನಾದುದರಿಂದ ಸ್ವತಂತ್ರನಾದವನು.

467) **ಪ. ಭ. :–** ಅಸುರಾದಿಗಳು ನಿದ್ರಿಸಿದಾಗ (ಮೋಹವಶರಾದಾಗ) ತನ್ನವರೊಡನೆ ಸ್ವೇಚ್ಛಾವಿಹಾರವನ್ನು ಮಾಡಿದವನು ; ತನಗೆ ಮಾತ್ರವೇ ಅಧೀನನಾದವನು ; ಬೇರಾರಿಗೂ ಅಧೀನನಾಗದವನು.
ನಿರುಕ್ತಿ :– **ಸ್ವಕೀಯೈಃ ಸಹ ಸುಪ್ತೇಷು ತೇಷು ಸ್ವೈರವಿಹಾರವಾನ್ ।**
ಭವತಿ ಸ್ವವಶಃ ಸೋಽಪಿ ನಾನ್ಯಾಧೀನತ್ವದೋ ಮನುಃ ॥

'ಓಂ ಸ್ವವಶಾಯ ನಮಃ'–ಎಂಬ ಈ ನಾಮಮಂತ್ರಜಪಮಾಡಿದವನು ಪರಾಧೀನನಾಗುವುದಿಲ್ಲ.

466) **ಸ. ಸಂ. :–** ಧನವು ಯಾವನ ವಶದಲ್ಲಿದೆಯೋ–ಅವನು ;

ತನಗೆ ವಶನಾಗಿರುವವನು ; ಸುಷುಪ್ತಿಯಲ್ಲಿ ಪ್ರಾಜ್ಞರೂಪವನ್ನು ಪ್ರವೇಶಿಸುವ ಜೀವಿಗಳಿಗೆ ಸುಖವನ್ನು ಉಂಟುಮಾಡುವವನು.

* * *

467) **ವ್ಯಾಪೀ** = ಸರ್ವವ್ಯಾಪಕನು.

ಶಂ. ಭಾ. :– ಆಕಾಶದಂತೆ ಸರ್ವಗತನಾಗಿರುವುದರಿಂದ ವ್ಯಾಪಕನು. **ಆಕಾಶವತ್ಸರ್ವಗತಶ್ಚ ನಿತ್ಯಃ ।** ಅಥವಾ ಕಾರಣರೂಪದಿಂದ ಸಮಸ್ತ ಕಾರ್ಯಗಳನ್ನೂ ವ್ಯಾಪಿಸಿರುವವನು.

468) **ಪ. ಭ. :–** ಸುರಾಸುರರು, ಮಂದರಪರ್ವತ, ವಾಸುಕಿ–ಮುಂತಾದವರನ್ನು ಆಪ್ಯಾಯನಗೊಳಿಸುವುದಕ್ಕೋಸ್ಕರ ತನ್ನ ಶಕ್ತಿಯಿಂದ ವ್ಯಾಪಿಸಿರುವವನು.

ನಿರುಕ್ತಿ :– **ದೇವರಕ್ಷೋಮನ್ದರೇಷು ವಾಸುಕಿಪ್ರಭೃತಿಷ್ವಪಿ ।**
ಆಪ್ಯಾಯನಾಯ ಶಕ್ತ್ಯಾ ಚ ವ್ಯಾಪೀ ಸ್ಯಾದ್ವ್ಯಾಪನಾದಸೌ ॥

467) **ಸ. ಸಂ. :–** ವ್ಯಾಪಿಸಿಕೊಂಡಿರುವವನು.

* * *

468) **ನೈಕಾತ್ಮಾ** = ಅನಂತರೂಪವುಳ್ಳವನು.

ಶಂ. ಭಾ. :– ಜಗತ್ತಿನ ಉತ್ಪತ್ತಿಯೇ ಮುಂತಾದುವುಗಳಲ್ಲಿ ನಿಮಿತ್ತ ಶಕ್ತಿಗಳನ್ನು ಪ್ರಕಟಪಡಿಸುವ ವಿಭೂತಿಗಳ ಮೂಲಕ ನಾನಾಪ್ರಕಾರವಾಗಿ ಇರುವವನು.

469) **ಪ. ಭ. :–** ಅಮೃತಮಂಥನದ ಸಮಯದಲ್ಲಿ ಪ್ರಕಟಿಸಲ್ಪಟ್ಟ ಬ್ರಹ್ಮ, ಕೂರ್ಮ, ಮೋಹಿನೀ–ಮುಂತಾದ ಅವತಾರಗಳಿಂದ ನಾನಾರೂಪಗಳುಳ್ಳವನು.

ನಿರುಕ್ತಿ : **ತದಾತನೈರ್ಬ್ರಹ್ಮಕೌರ್ಮಮೋಹಿನ್ಯಾದ್ಯವತಾರಕೈಃ ।**
ನೈಕಾತ್ಮೇತಿ ಶ್ರುತಃ ಸಮ್ಯಙ್ಮನ್ಯರ್ಣೋ ಬಹುರೂಪದಃ ॥

'ಓಂ ನೈಕಾತ್ಮನೇ ನಮಃ' ಎಂಬ ನಾಮಮಂತ್ರವು ಬಹುರೂಪಗಳನ್ನು (ಉತ್ತಮರೂಪವನ್ನು) ಕೊಡುತ್ತದೆ.

468) **ಸ. ಸಂ. :–** ಅನೇಕಶರೀರಗಳುಳ್ಳವನು ; ಅನೇಕರಿಗೆ ಸ್ವಾಮಿಯಾದವನು.

* * *

469) **ನೈಕಕರ್ಮಕೃತ್** = ಅನಂತಕರ್ಮಗಳುಳ್ಳವನು.

ಶಂ. ಭಾ. :– ಜಗತ್ತಿನ ಉತ್ಪತ್ತಿ, ಉನ್ನತಿ ಮತ್ತು ವಿಪತ್ತಿಗಳೇ ಮುಂತಾದ ಅನೇಕಕರ್ಮಗಳನ್ನು ಮಾಡುವವನು.

470) **ಪ. ಭ. :–** ಸಮುದ್ರಮಥನದ ಸಂದರ್ಭದಲ್ಲಿ ಕಡೆಯುವುದು, ಧರಿಸುವುದು, ಶತ್ರುಗಳನ್ನು ಸೀಳಿಹಾಕುವುದು, ಅಮೃತದಾನಮಾಡುವುದು ಮುಂತಾದ ಅನೇಕಕರ್ಮಗಳನ್ನು ಮಾಡಿದವನು.

ನಿರುಕ್ತಿ :– **ಸಮುದ್ರಮಥನೇ ನೈಕಕರ್ಮಕೃನ್ನೈಕಕರ್ಮಕೃತ್ ॥**

469) **ಸ. ಸಂ. :–** ಸೃಷ್ಟಿ-ಸ್ಥಿತಿಗಳೇ ಮುಂತಾದ ಅನೇಕವ್ಯಾಪಾರಗಳನ್ನು ಮಾಡುವವನು.

* * *

470) **ವತ್ಸರಃ** = ಸಂವತ್ಸರರೂಪಿಯಾದವನು ; ವತ್ಸ (ಕರು)ಗಳನ್ನು ರಕ್ಷಿಸುವವನು.

ಶಂ. ಭಾ. :–ಯಾವನಲ್ಲಿ ಎಲ್ಲವೂ ವಾಸಮಾಡುತ್ತವೆಯೋ–ಅವನು.

471) **ಪ. ಭ. :–** ಧರ್ಮಾತ್ಮನಾಗಿ ಪುರುಷಾರ್ಥಸ್ಥಾಪನೆಗೋಸ್ಕರ ಎಲ್ಲದರ ಒಳಗೂ ವಾಸಮಾಡುವವನು.

ನಿರುಕ್ತಿ :– **ಪುರುಷಾರ್ಥಸ್ಥಾಪನಾಯ ಸರ್ವಾನ್ತರ್ವಸನಾಚ್ಚ ಯಃ ।**
ಧರ್ಮಾತ್ಮಾ ವತ್ಸರಃ ಸಃ ಸ್ಯಾನ್ಮನ್ತ್ರರ್ಣೋಽಭೀಷ್ಟದೋ ಮನುಃ॥

'ಓಂ ವತ್ಸರಾಯ ನಮಃ'–ಎಂಬ ಈ ನಾಮಮಂತ್ರಜಪದಿಂದ ಅಭೀಷ್ಟದ ಪ್ರಾಪ್ತಿಯಾಗುತ್ತದೆ.

470) **ಸ. ಸಂ. :–**ಕೃಷ್ಣಾವತಾರದಲ್ಲಿ ಕರುಗಳೊಡನೆ ಕ್ರೀಡಿಸಿದವನು ; ವತ್ಸಾಸುರನನ್ನು ಸಂಹರಿಸಿದವನು.

* * *

471) **ವತ್ಸಲಃ** = ಸ್ನೇಹವುಳ್ಳವನು ; ಆಗ ತಾನೇ ಈಯ್ದ ಹಸುವು ತನ್ನ ಕರುವಿನಲ್ಲಿ ಹೇಗೋ–ಹಾಗೆ ಶರಣಾಗತರಲ್ಲಿ ಸ್ನೇಹವುಳ್ಳವನು.

ಶಂ. ಭಾ. :– ಭಕ್ತರಲ್ಲಿ ಸ್ನೇಹವುಳ್ಳವನು.

472) **ಪ. ಭ. :–** ಕರುವಿನಲ್ಲಿ ತಾಯಿಯಾದ ಹಸುವು ಹೇಗೋ–ಹಾಗೆ ಶರಣಾಗತರಲ್ಲಿ ಪ್ರೀತಿಯನ್ನು ಹೊಂದಿರುವವನು. ವಿದಿತಃ ಸ ಹಿ **ಧರ್ಮಜ್ಞಃ ಶರಣಾಗತವತ್ಸಲಃ ।** (ರಾಮಾಯಣ)

ನಿರುಕ್ತಿ :– **ಸರ್ವಸ್ಯಾನ್ತರ್ನಿವಸನೇ ಹೇತುಃ ಸ್ಯಾದವತ್ಸಲಃ ಸ್ಮೃತಃ ।**
ವತ್ಸೇ ಯತೋ ಧೇನುರಿವ ವತ್ಸಲಃ ಶರಣಾಗತೇ ॥

471) **ಸ. ಸಂ. :–** ಭಕ್ತರಲ್ಲಿ ದಯೆಯುಳ್ಳವನು.

* * *

472) **ವತ್ಸೀ** = ಜೀವಗಳನ್ನು ಕರುಗಳ ರೂಪದಲ್ಲಿ ಹೊಂದಿರುವವನು; ಶ್ರೀವತ್ಸಲಾಂಛನವುಳ್ಳವನು.

ಶಂ. ಭಾ. :– ವತ್ಸಗಳನ್ನು (ಕರುಗಳನ್ನು) ಪಾಲಿಸುವವನು ; ಜಗತ್ತಿಗೆ ತಂದೆಯಾಗಿ ಎಲ್ಲ ಪ್ರಜೆಗಳನ್ನೂ ಮಕ್ಕಳ ರೂಪದಲ್ಲಿ ಹೊಂದಿರುವವನು.

473) **ಪ. ಭ. :–** (ತನ್ನ ವಾತ್ಸಲ್ಯದ ಕಾರಣ) ತನಗೆ ನಿತ್ಯಪೋಷ್ಯರಾಗಿ ಆತ್ಮವರ್ಗಗಳಾಗಿ ಇರುವ ವತ್ಸಗಳನ್ನು (ಮಕ್ಕಳನ್ನು ; ಕರುಗಳನ್ನು) ಪುಷ್ಕಳವಾಗಿ ಹೊಂದಿರುವವನು.

ನಿರುಕ್ತಿ :– **ನಿತ್ಯಪೋಷ್ಯಾತ್ಮವರ್ಗಾಖ್ಯವತ್ಸಭೂಯಸ್ತ್ವತಃ ಸದಾ ।**
ವತ್ಸೀ ಸ್ಯಾದ್ಧಿ ವಿಶೇಷೇಣ ಷಡರ್ಣೋ ಗೋಪ್ರದೋ ಮನುಃ॥

'**ಓಂ ವತ್ಸಿನೇ ನಮಃ**'–ಎಂಬ ಈ ನಾಮಮಂತ್ರಜಪವು ಗೋಪ್ರದವಾದುದು.

472) **ಸ. ಸಂ. :–** ಶ್ರೀವತ್ಸವುಳ್ಳವನು.

* * *

473) **ರತ್ನಗರ್ಭಃ** = ರತ್ನಗರ್ಭನು ; ಸಾಲಿಗ್ರಾಮಮೂರ್ತಿಯು ; ಸಮುದ್ರರೂಪಿಯಾದವನು ; ಅನಂತವಾದ ಧನಸಂಪತ್ತುಳ್ಳವನು.

ಶಂ. ಭಾ. :– ಸಮುದ್ರರೂಪಿಯಾದವನು.

474) **ಪ. ಭ. :–** ಧನವನ್ನು ಅಪೇಕ್ಷಿಸುವವರಿಗೆ ಯಥೇಷ್ಟವಾಗಿ ಅನುಗ್ರಹಮಾಡುವವನು ; ಹೇರಳವಾಗಿ ಧನವನ್ನು ಹೊಂದಿರುವವನು.

ನಿರುಕ್ತಿ :– ಧನಾಯದ್ಭ್ಯ ಯಥಾಕಾಮಂ ಪ್ರದೇಯಧನವತ್ತ್ವತಃ ।
ರತ್ನಗರ್ಭಃ ಸಮಾಖ್ಯಾತೋ ಹ್ಯಪ್ಸ್ವಾರ್ಣೋ ಧನದೋ ಮನುಃ ॥

'ಓಂ ರತ್ನಗರ್ಭಾಯ ನಮಃ'–ಎಂಬ ಈ ನಾಮಮಂತ್ರಜಪವು ಧನ ಪ್ರಾಪಕವು.

473) ಸ. ಸಂ. :– ರತ್ನಗಳನ್ನು ಗರ್ಭದಲ್ಲಿ ಹೊಂದಿರುವವನು.

* * *

474) **ಧನೇಶ್ವರಃ** = ಧನಗಳಿಗೆ ಸ್ವಾಮಿಯಾದವನು ; ಕುಬೇರ ರೂಪಿಯು.

ಶಂ. ಭಾ. :– ಧನಗಳಿಗೆ ಸ್ವಾಮಿಯಾದವನು.

475) ಪ. ಭ. :– ಭಕ್ತರಿಗೆ ಇಷ್ಟವಾದ ದ್ರವ್ಯವನ್ನು (ಧನಗಳನ್ನು ಕೊಡುವ ವಿಷಯದಲ್ಲಿ) ಶೀಘ್ರವಾಗಿ ಕೆಲಸಮಾಡುವವನು.

ನಿರುಕ್ತಿ :– ತತ್ತದಿಷ್ಟದ್ರವ್ಯದಾನೇ ಶೀಘ್ರಕಾರೀ ಧನೇಶ್ವರಃ ॥

474) ಸ. ಸಂ. :– ಧನಕ್ಕೆ ಸ್ವಾಮಿಯಾದವನು.

* * *

ಧರ್ಮಗುಬ್ಧರ್ಮಕೃದ್ಧರ್ಮೀ ಸದಸತ್ಕ್ಷರಮಕ್ಷರಮ್ ।
ಅವಿಜ್ಞಾತಾ ಸಹಸ್ರಾಂಶುರ್ವಿಧಾತಾ ಕೃತಲಕ್ಷಣಃ ॥೬೪॥

475) **ಧರ್ಮಗುಪ್** = ಧರ್ಮವನ್ನು ರಕ್ಷಿಸುವವನು. ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥ (ಗೀತಾ ೪-೮)

476) ಪ. ಭ. :– ಅರ್ಥ-ಕಾಮಗಳು ಅಧಾರ್ಮಿಕವಾಗದಂತೆ ದುಷ್ಟ ವಿಷಯಗಳಿಂದ ದೂರಮಾಡಿ ಧರ್ಮವನ್ನು ಕಾಪಾಡುವವನು.

ನಿರುಕ್ತಿ :– ಕಾಮಂ ದತ್ವಾಪ್ಯರ್ಥಕಾಮೌ ನಿವರ್ತ್ಯ ವಿಷಯಾನ್ತರಾತ್ ।
ತಾಭ್ಯಾಂ ಹಿ ತಸ್ಯ ಧರ್ಮಸ್ಯ ರಕ್ಷಣಾದ್ಧರ್ಮಗುಪ್ ಸ್ಮೃತಃ ॥

475) ಸ. ಸಂ. :– **ಧರ್ಮಕೃತ್** = ಧರ್ಮವನ್ನು ಮಾಡುವವನು ; ಭಕ್ತರಲ್ಲದವರು ಮಾಡುವ ಧರ್ಮವನ್ನು ಕತ್ತರಿಸಿಹಾಕುವವನು.

* * *

476) **ಧರ್ಮಕೃತ್** = ಧರ್ಮವನ್ನು ಆಚರಿಸುವವನು ; ಧರ್ಮ ನಿಯಮಗಳನ್ನು ಮಾಡಿದವನು.

ಶಂ. ಭಾ. :– ಧರ್ಮಾಧರ್ಮಗಳಿಂದ ರಹಿತನಾಗಿದ್ದರೂ ಕೂಡ ಧರ್ಮದ ಮರ್ಯಾದೆಯನ್ನು ಸ್ಥಾಪಿಸುವುದಕ್ಕೋಸ್ಕರ ಧರ್ಮವನ್ನೇ ಆಚರಿಸುವವನು.

477) **ಪ. ಭ.** :– ಎಲ್ಲರನ್ನೂ ಧಾರ್ಮಿಕರನ್ನಾಗಿ ಮಾಡುತ್ತಾ ನಿರ್ವ್ಯಾಜವಾದ ಅನುಗ್ರಹಕ್ಕೆ ಕಾರಣವಾದ ಧರ್ಮವನ್ನು ಆಚರಿಸುವವನು.

ನಿರುಕ್ತಿ :– **ಸರ್ವಂ ಜನಂ ಧಾರ್ಮಿಕಯನ್ ಲೀಲಾನುಗ್ರಹಲಕ್ಷಣಮ್।**
ಧರ್ಮಂ ಕರೋತಿ ಯಸ್ಮಾದ್ಧಿ ತಸ್ಮಾದ್ಧರ್ಮಕೃದುಚ್ಯತೇ ॥

476) **ಸ. ಸಂ.** :– **ಧರ್ಮಗುಪ್**=ಧರ್ಮರಾಜನನ್ನು ಅಥವಾ ಪುಣ್ಯ ವನ್ನು ಸಂರಕ್ಷಿಸಿದವನು. ಧರ್ಮಕ್ಕೆ ಸಾಧನವಾದ ವೇದವೇ ಮುಂತಾದ ರೂಪವುಳ್ಳ ಗೋವುಗಳನ್ನು ರಕ್ಷಿಸುವವನು.

* * *

477) **ಧರ್ಮೀ**= ಧರ್ಮಗಳನ್ನು ಧರಿಸಿರುವವನು.

ಶಂ. ಭಾ. :– ಧರ್ಮಗಳನ್ನು ಧರಿಸಿರುವವನು.

478) **ಪ. ಭ.** :– ಧರ್ಮವನ್ನು ಕೇವಲ ಸಾಧಾರಣವಾದ ಉಪಕರಣ ವನ್ನಾಗಿ ಹೊಂದಿರುವವನು.

ನಿರುಕ್ತಿ :– **ಸಾಧಾರಣೋಪಕರಣಂ ಧರ್ಮೋ ಯಸ್ಯಾಸ್ತಿ ಕೇವಲಮ್**
ಸ ವೈ ಧರ್ಮೀತಿ ವಿಜ್ಞೇಯಃ ಷಡರ್ಣೋ ಧರ್ಮದೋ ಮನುಃ ॥

'ಓಂ ಧರ್ಮಿಣೇ ನಮಃ'–ಎಂಬ ಈ ನಾಮಮಂತ್ರಜಪವು ಪುಣ್ಯ ಪ್ರಾಪಕವು.

477) **ಸ. ಸಂ.** :– ಯಮಧರ್ಮನಿಗೆ ನಿಯಾಮಕನಾಗಿರುವವನು.

* * *

478) **ಸತ್**= ಸತ್ಯಸ್ವರೂಪನು ; ಸತ್ತಾಮಾತ್ರನು ; ವಿಕಾರರಹಿತನು ; ವ್ಯಕ್ತರೂಪಿಯು.

ಶಂ. ಭಾ. :– ಸತ್ಯಸ್ವರೂಪನಾದ ಪರಬ್ರಹ್ಮನು. ಸದೇವ ಸೋಮ್ಯೇದಮಗ್ರ ಆಸೀತ್ ॥ (ಛಾಂ. ೬-೨-೧)

479 : 480) ಪ. ಭ. :– ಸತ್ ಅಕ್ಷರಂ= ಪ್ರಶಸ್ತಧರ್ಮರೂಪಿಯಾದವನು ; ಉಪಾಧಿಯಿಲ್ಲದ ಸತ್ಸ್ವರೂಪನು ಮತ್ತು ನಿತ್ಯಷಾಡ್ಗುಣ್ಯವುಳ್ಳವನು. ಅಪಕ್ಷಯ, ವಿನಾಶ, ಪರಿಣಾಮ, ವೃದ್ಧಿ, ಜನ್ಮ–ಮುಂತಾದುವುಗಳು ಇಲ್ಲದ ನಿರುಪಾಧಿಕವಾದ ಸದ್ಭಾವ ಮತ್ತು ಸಾದ್ಗುಣ್ಯಗಳುಳ್ಳವನು.

ನಿರುಕ್ತಿ :– ನಿರುಪಾಧಿಕಸದ್ಭಾವಾನ್ನಿತ್ಯಸಾದ್ಗುಣ್ಯಯೋಗತಃ ।
ಸಚ್ಛಬ್ದೇನೋಚ್ಯತೇ ವಿಷ್ಣುಃ ವೇದವೇದಾನ್ತಪಾರಗೈಃ ॥
ಅಪಕ್ಷಯವಿನಾಶಾದಿವರ್ಜಿತೋಽಕ್ಷರ ಉಚ್ಯತೇ ।
ತಸ್ಮಾದಕ್ಷರಸದಿತೀ ಹ್ಯೇಕನಾಮ ಚ ಶಸ್ಯತೇ ॥

478) ಸ. ಸಂ. :– ಸತ್ = ಹೊಂದುವವನು.

* * *

479) ಅಸತ್ = ವಿಕಾರಹೊಂದುವ ಕಾರ್ಯಜಗತ್ತನ್ನು ಶರೀರವನ್ನಾಗಿ ಹೊಂದಿರುವವನು. ಅವ್ಯಕ್ತರೂಪಿಯು.

ಶಂ. ಭಾ. :–(ಪ್ರಪಂಚರೂಪನಾಗಿರುವುದರಿಂದ) ಅಪರ (ಸವಿಶೇಷ) ಬ್ರಹ್ಮವಾಗಿರುವವನು. ವಾಚಾರಮ್ಭಣಂ ವಿಕಾರೋ ನಾಮಧೇಯಮ್ (ಛಾಂ. ೬-೧-೪)

481 : 482) ಪ. ಭ. :– ಅಸತ್ಕ್ಷರಂ= ಅಸಾಧುಗಳಿಗೆ ಕ್ಷರಭಾವವನ್ನು ಕೊಡುವವನು ; ಅಪ್ರಶಸ್ತವಾದ ಪಾಪದಲ್ಲಿ ತೊಡಗಿರುವ ಅಸಾಧುಗಳಿಗೆ ಸಂಸಾರರೂಪವಾದ ಪಾಪವನ್ನು ಉಂಟುಮಾಡುವವನು. ಅವರ ದೃಷ್ಟಿಯಲ್ಲಿ ಅಸತ್ತೂ–ಕ್ಷರನೂ ಆಗಿರುವವನು.

ನಿರುಕ್ತಿ :– ಅಸತಾಂ ಯಃ ಸದಾನನ್ತಭವಾಖ್ಯಾಘಪ್ರದಾನತಃ ।
ಅಸದಿತ್ಯುಚ್ಯತೇ ಸದ್ಭಿಃ ತಾದೃಕ್ಷರಮಸತ್ಕ್ಷರಮ್ ॥

479) ಸ. ಸಂ. :– ಅಸತ್ = ನಾಶಹೊಂದದವನು.

* * *

480) **ಕ್ಷರಂ**= ನಾಶಹೊಂದುವ (ವಿಕಾರಹೊಂದುವ) ಸರ್ವಭೂತ ರೂಪಿಯಾದವನು.

ಶಂ. ಭಾ. :– ಸರ್ವಭೂತರೂಪಿಯು. **ಕ್ಷರಃ ಸರ್ವಾಣಿ ಭೂತಾನಿ ಕೂಟಸ್ಥೋಽಕ್ಷರ ಉಚ್ಯತೇ ||** (ಗೀತಾ. ೧೫-೧೬)

480) **ಸ. ಸಂ. :–** ಜಗತ್ತಿಗೆ ಸತತವಾಗಿ ದಾನಮಾಡುವವನು.

* * *

481) **ಅಕ್ಷರಂ**= ವಿಕಾರರಹಿತನಾದ ಪರಬ್ರಹ್ಮನು ; ಕೂಟಸ್ಥನಾದ ಜೀವ ಅಥವಾ ಮೂಲಪ್ರಕೃತಿಸ್ವರೂಪನು.

ಶಂ. ಭಾ. :– ಕೂಟಸ್ಥನು.

481) **ಸ. ಸಂ. :–** ಅಕ್ಷರಗಳಲ್ಲಿ ರಮಿಸುವವನು ; ನಾಶರಹಿತನು ; ವ್ಯಾಪಿಸಿರುವವನು.

* * *

482) **ಅವಿಜ್ಞಾತಾ** = ವಿಜ್ಞಾನ (ವಿವಿಧಜ್ಞಾನ-ಸವಿಕಾರಜ್ಞಾನ) ವಿಲ್ಲದ ವನು.

ಶಂ. ಭಾ. :– ಕರ್ತೃತ್ವವೇ ಮುಂತಾದ ವಿಕಲ್ಪವಿಜ್ಞಾನವುಳ್ಳ ಜೀವನಿಗಿಂತಲೂ ವಿಲಕ್ಷಣನಾದವನು.

483) **ಪ. ಭ. :–** ಶರಣಾಗತರು ಮಾಡಿದ ಪಾಪಗಳನ್ನು ಸ್ವಲ್ಪವೂ ಅರಿಯದವನು. (ಗಮನಿಸದವನು.)

ಉಚ್ಯಮಾನೋಽಪಿ ಪರುಷಂ ನೋತ್ತರಂ ಪ್ರತಿಪದ್ಯತೇ |
(ರಾ. ಅ. ೧-೧೦)

ನಿರುಕ್ತಿ :– ಪ್ರಪನ್ನಕೃತಪಾಪಾನಾಂ ಕಿಂಚಿದಪ್ಯವಿಚಾರಣಾತ್ |
ಅವಿಜ್ಞಾತೇತಿ ಕಥಿತಃ ಬುಧೈಸ್ತದ್ಗುಣಪಾರಗೈಃ ||

482) **ಸ. ಸಂ. :–** ಯಾವನನ್ನು ಚೆನ್ನಾಗಿ ಅರಿಯಲು ಸಾಧ್ಯ ವಿಲ್ಲವೋ–ಅವನು.

* * *

483) **ಸಹಸ್ರಾಂಶುಃ** = ಸಹಸ್ರಕಿರಣನಾದ ಆದಿತ್ಯರೂಪಿಯು.

ಶಂ. ಭಾ. :– ಆದಿತ್ಯನೇ ಮುಂತಾದವರಲ್ಲಿರುವ ಕಿರಣಗಳೂ ಕೂಡ ವಾಸ್ತವವಾಗಿ ಭಗವಂತನದೇ ಆಗಿರುವುದರಿಂದ ಅವನೇ ಮುಖ್ಯನಾದ ಸಹಸ್ರಕಿರಣನು. **ಯೇನ ಸೂರ್ಯಸ್ತಪತಿ ತೇಜಸೇದ್ಧಃ** (ತೈ. ಬ್ರಾ.೩-೧೨-೮) **ಯದಾದಿತ್ಯಗತಂ ತೇಜಃ** (ಗೀತಾ ೧೫-೧೨)

484) **ಪ. ಭ. :–** ಅಪರಿಮಿತವಾದ ಜ್ಞಾನ (ಬುದ್ಧಿ) ವುಳ್ಳವನು.
ನಿರುಕ್ತಿ :– **ಅಂಶವೋ ಬುದ್ಧಯಃ ಪ್ರೋಕ್ತಾಃ ಸಹಸ್ರಂ ಸನ್ತಿ ಯಸ್ಯ ತೇ ।**
ಸಹಸ್ರಾಂಶುರಿತಿ ಖ್ಯಾತೋ ಹ್ಯಷ್ಟಾರ್ಣೋ ಧೀಪ್ರದೋ ಮನುಃ ॥

'ಓಂ ಸಹಸ್ರಾಂಶವೇ ನಮಃ'–ಈ ನಾಮದ ಜಪದಿಂದ ಬುದ್ಧಿ ಶಕ್ತಿಯು ಹೆಚ್ಚುತ್ತದೆ.

483) **ಸ. ಸಂ. :–** ಸಾವಿರಕಿರಣಗಳುಳ್ಳ ಸೂರ್ಯನಿಗೆ ಅಂತರ್ಯಾಮಿಯಾದವನು.

* * *

484) **ವಿಧಾತಾ** = ಸೃಷ್ಟಿಕರ್ತನು ; ವಿವಿಧವಾಗಿ ಮತ್ತು ವಿಶೇಷವಾಗಿ ಧಾರಣ-ಪೋಷಣಗಳನ್ನು ಮಾಡುವವನು. **ಧಾತಾ ವಿಧಾತಾ ಪರಮೋತ ಸಂದೃಕ್** (ವಿ. ಸೂ.)

ಶಂ. ಭಾ. :– ಸಮಸ್ತಭೂತಗಳನ್ನೂ ಧರಿಸಿರುವ ಅನಂತನಾಗನೇ ಮುಂತಾದವರನ್ನು ವಿಶೇಷವಾಗಿ ಧರಿಸಿರುವವನು.

485) **ಪ. ಭ. :–** ಯಮನೇ ಮುಂತಾದವರನ್ನು ಅಧೀನರನ್ನಾಗಿ ಹೊಂದಿ ಅವರ ಅಧಿಕಾರವಿಧಾನವನ್ನು ಮಾಡಿರುವವನು.
ನಿರುಕ್ತಿ :– **ತಾದಧೀನ್ಯಾದ್ಯಮಾದೀನಾಂ ವಿಧಾತೇತ್ಯುಚ್ಯತೇ ಬುಧೈಃ ॥**

484) **ಸ. ಸಂ. :–** ವಿಶೇಷವಾಗಿ ಧರಿಸಿರುವವನು ; ಗರುಡನಿಂದ ಧರಿಸಲ್ಪಟ್ಟಿರುವವನು.

* * *

485) **ಕೃತಲಕ್ಷಣಃ** = ಲೋಕ ಮತ್ತು ಶಾಸ್ತ್ರಗಳಿಗೆ ಸಂಬಂಧಪಟ್ಟ ಲಕ್ಷಣಗಳನ್ನು ಮಾಡಿರುವವನು.

ಶಂ. ಭಾ. :– ನಿತ್ಯಸಿದ್ಧಚೈತನ್ಯಸ್ವರೂಪಿಯು ; ಶಾಸ್ತ್ರಲಕ್ಷಣವನ್ನು ಮಾಡಿದವನು. **ವೇದಾಃ ಶಾಸ್ತ್ರಾಣಿ ವಿಜ್ಞಾನಮೇತತ್ಸರ್ವಂ ಜನಾರ್ದನಾತ್ ॥** (ಮ. ಭಾ. ಅನು. ೧೪೨-೧೩೯) ಎಲ್ಲ ಭಾವಗಳಿಗೂ ಲಕ್ಷಣವನ್ನು ಮಾಡಿದವನು ; ತನ್ನ ವಕ್ಷಸ್ಥಳದಲ್ಲಿ ಶ್ರೀವತ್ಸಚಿಹ್ನೆಯನ್ನು ಧರಿಸಿರುವವನು.

486) **ಪ. ಭ. :–** ಉಪಾದೇಯಜಂತುಗಳಿಗೆ ಗುರುತನ್ನು ಮಾಡಿದವನು.

ನಿರುಕ್ತಿ :– ಕೃತಂ ಹಿ ಲಾಞ್ಛನಂ ಯೇನ ಚೋಪಾದೇಯೇಷು ಜನ್ತುಷು।
ಪರಮಾತ್ಮಾ ಹೃಷೀಕೇಶಃ ಸ ತು ಸ್ಯಾತ್ಕೃತಲಕ್ಷಣಃ ॥

485) **ಸ. ಸಂ. :–** ಪೂರ್ಣವಾದ ಲಕ್ಷಣವುಳ್ಳವನು ; ಭಕ್ತರು ಮಾಡಿದ ಕರ್ಮಗಳನ್ನು ತೆಗೆದುಕೊಳ್ಳುವ ವಿಷಯದಲ್ಲಿ ಉತ್ಸವವುಳ್ಳವನು ; ಪೂರ್ಣವಾದ ಸುಖಗಳುಳ್ಳವನು ; **ಅಕೃತಲಕ್ಷಣಃ** = ಸ್ವಾಭಾವಿಕವಾದ ಲಕ್ಷಣವುಳ್ಳವನು.

* * *

ಗಭಸ್ತಿನೇಮಿಃ ಸತ್ತ್ವಸ್ಥಃ ಸಿಂಹೋ ಭೂತಮಹೇಶ್ವರಃ ।
ಆದಿದೇವೋ ಮಹಾದೇವೋ ದೇವೇಶೋ ದೇವಭೃದ್ಗುರುಃ ॥೬೫॥

486) **ಗಭಸ್ತಿನೇಮಿಃ** = ಕಿರಣಗಳ ಪಟ್ಟಿಯುಳ್ಳವನು ; ಸೂರ್ಯರೂಪಿಯು ; ಸಹಸ್ರಾರಸುದರ್ಶನಚಕ್ರರೂಪಿಯು.

ಶಂ. ಭಾ. :– ಕಿರಣಗಳ ಚಕ್ರದ ಮಧ್ಯದಲ್ಲಿ ಸೂರ್ಯರೂಪದಿಂದ ಇರುವವನು.

487) **ಪ. ಭ. :–** ಪ್ರಕಾಶಮಾನವಾದ ಸುದರ್ಶನ (ಸಹಸ್ರಾರ) ಚಕ್ರವುಳ್ಳವನು.

ನಿರುಕ್ತಿ :– ಜ್ಯೋತಿರ್ವಿಶಿಷ್ಟನೇಮ್ಯಾ ಯಲ್ಲಕ್ಷಿತಂ ಚಕ್ರಮುತ್ತಮಮ್ ।
ಗಭಸ್ತಿನೇಮಿರ್ಯಸ್ಯಾಸ್ತಿ ನವಾರ್ಣಃ ಪಾಪನಾಶಕಃ ॥

‘**ಓಂ ಗಭಸ್ತಿನೇಮಯೇ ನಮಃ**’–ಈ ನಾಮದ ಜಪದಿಂದ ಸಕಲ ಪಾಪಗಳೂ ಪರಿಹಾರವಾಗುತ್ತವೆ.

486) ಸ. ಸಂ. :–ಕಿರಣಗಳನ್ನು ಗಾಲಿಪಟ್ಟಿಯಂತೆ ಹೊಂದಿರುವವನು.

* * *

487) **ಸತ್ತ್ವಸ್ಥಃ** = ಸತ್ತ್ವಗುಣದಲ್ಲಿ ಇರುವವನು.

ಶಂ. ಭಾ. :– ಪ್ರಕಾಶಕವಾದ ಸತ್ತ್ವಗುಣದಲ್ಲಿ ಪ್ರಧಾನವಾಗಿ ಇರುವವನು ; ಸಮಸ್ತಪ್ರಾಣಿಗಳಲ್ಲಿಯೂ ಇರುವವನು.

488) ಪ. ಭ. :– ಸತ್ತ್ವದಲ್ಲಿ (ಹೃದಯದಲ್ಲಿ) ಇರುವವನು.
ನಿರುಕ್ತಿ :– **ಸತ್ತ್ವೇ ಹೃದಿ ಸ್ಥಿತತ್ವಾದ್ಧಿ ಸತ್ತ್ವಸ್ಥಃ ಸಮುದೀರಿತಃ ॥**

487) ಸ. ಸಂ. :– ಜೀವದಲ್ಲಿ ಅಂತರ್ಯಾಮಿಯಾಗಿರುವವನು ; ಜೀವವು ಯಾವನಲ್ಲಿದೆಯೋ–ಅವನು. (**ಸತ್ತ್ವಂ** ಎಂದರೆ ಜೀವ. **ಸತ್ತ್ವಂ ಜೀವಃ ಕ್ವಚಿತ್ಪ್ರೋಕ್ತಃ**) ಬಲದಿಂದ ಕೂಡಿರುವವನು.

* * *

488) **ಸಿಂಹಃ** = ನರಸಿಂಹರೂಪಿಯು ; ಶ್ರೇಷ್ಠನು ; ಪರಾಕ್ರಮಿಯು.

ಶಂ. ಭಾ. :–ಸಿಂಹದಂತೆ ಪರಾಕ್ರಮಿಯಾಗಿರುವವನು ; ನರಸಿಂಹನು.

489) ಪ. ಭ. :– ಯಮಾದಿಗಳು ತನ್ನ ಭಕ್ತರನ್ನು ಅರಿಯದೇ ದಂಡಿಸಲು ಮನಸ್ಸು ಮಾಡಿದಾಗ ಅವರನ್ನು ನಿಗ್ರಹಿಸುವವನು. (ಹಿಂಸಿಸುವವನು.)
ಪ್ರಭವತಿ ಸಂಯಮನೇ ಮಮಾಪಿ ವಿಷ್ಣುಃ (ವಿ. ಪು. ೩-೭-೧೫)
ವೈಷ್ಣವೇಭ್ಯೋಽಪಿ ಬಿಭ್ಯನ್ತಿ ದೇವಾ ನರಕರಕ್ಷಕಾಃ ।
ಅವಮಾನಕ್ರಿಯಾ ತೇಷಾಂ ಸಂಹರತ್ಯಖಿಲಂ ಜಗತ್ ॥ (ವಿಷ್ಣುತತ್ತ್ವ)
ನಿರುಕ್ತಿ :– **ಹಿನಸ್ತಿ ಚ ಯಮಾದೀನ್ಯಃ ಸ ಸಿಂಹಃ ಪರಿಕೀರ್ತಿತಃ ॥**

488) ಸ. ಸಂ. :– ಶ್ರೇಷ್ಠನು.

* * *

489) **ಭೂತಮಹೇಶ್ವರಃ** = ಎಲ್ಲ ಪ್ರಾಣಿಗಳಿಗೂ ಸತ್ಯವಾಗಿ ಪರಮೇಶ್ವರನಾಗಿರುವವನು.

ಶಂ. ಭಾ. :– ಪ್ರಾಣಿಗಳಿಗೆ ದೊಡ್ಡ ಈಶ್ವರನಾದವನು ; ಸತ್ಯರೂಪದಿಂದ ದೊಡ್ಡ ಈಶ್ವರನಾದವನು.

490) **ಪ. ಭ. :–** ಬ್ರಹ್ಮ-ಯಮಾದಿಸಹಿತರಾದ ಭೂತೇಶ್ವರರನ್ನೂ ನಿಯಂತ್ರಣಮಾಡುವವನು ಮತ್ತು ಜಗತ್ತುಗಳಿಗೆ ಕಾರಣನಾದವನು.

ನಿರುಕ್ತಿ :– ಭೂತೇಶ್ವರಾಣಾಂ ಸಬ್ರಹ್ಮಯಮಾದೀನಾಂ ನಿಯನ್ತ್ರಣಾತ್ ।
ಕಾರಣಂ ಜಗತಾಂ ಯಶ್ಚ ಸ ಸ್ಯಾದ್ಭೂತಮಹೇಶ್ವರಃ ॥

489) **ಸ. ಸಂ. :–** ಅಧಿಕವಾದ ಉತ್ಸವವುಳ್ಳವನು ಮತ್ತು ರಮಾದೇವೀ-ವಾಯುದೇವರೊಡನೆ ರಮಿಸುವವನು ; ಪ್ರಾಣಿಗಳಿಗೆ ಮಹೇಶ್ವರನಾದವನು.

* * *

490) **ಆದಿದೇವಃ** = ಎಲ್ಲ ಪ್ರಾಣಿಗಳಿಗೂ ಆದಿಯಾಗಿರುವ ಸ್ವಾಮಿಯು.

ಶಂ. ಭಾ. :– ಎಲ್ಲ ಪ್ರಾಣಿಗಳನ್ನೂ ಗ್ರಹಣಮಾಡುವುದರಿಂದ ಆದಿಯು. ಆದಿಯಾದ ದೇವನು.

491) **ಪ. ಭ. :–** ಎಲ್ಲರಿಗೂ ಆದಿಯು (ಕಾರಣನು) ಮತ್ತು ಪ್ರತಾಪದಿಂದ ಬೆಳಗುತ್ತಿರುವವನು.

ನಿರುಕ್ತಿ :– ಆದಿದೇವೋ ಹಿ ಭವತಿ ಬ್ರಹ್ಮಾದಿಭ್ಯೋ ವಿಶೇಷತಃ ॥

490) **ಸ. ಸಂ. :–** ಭಕ್ತರಿಂದ ಗ್ರಹಿಸಲ್ಪಡುವವನು ಮತ್ತು ಕ್ರೀಡೆಯೇ ಮುಂತಾದ ಗುಣಗಳಿಂದ ವಿಶಿಷ್ಟನಾದವನು.

* * *

491) **ಮಹಾದೇವಃ** = ದೊಡ್ಡ ದೇವನು ; ಪೂಜ್ಯನಾದ ದೇವನು.

ಶಂ. ಭಾ. :– ಎಲ್ಲ ಭಾವಗಳನ್ನೂ ತೊರೆದು ತನ್ನ ದೊಡ್ಡ ಜ್ಞಾನ-ಯೋಗ-ಐಶ್ವರ್ಯಗಳಿಂದ ಮಹಿಮಾನ್ವಿತನಾಗಿರುವವನು.

492) **ಪ. ಭ. :–** ಶ್ರೇಷ್ಠನೂ, ಪೂಜ್ಯನೂ ಆಗಿ ಬ್ರಹ್ಮಾದಿಗಳೊಡನೆ ಆಟದ ಗೊಂಬೆಗಳೊಡನೆ ಹೇಗೋ–ಹಾಗೆ ಕ್ರೀಡಿಸುವವನು.

ನಿರುಕ್ತಿ :– ಬ್ರಹ್ಮಾದಿಭಿಃ ಕ್ರೀಡತಿ ಯೋ ಮಹಾದೇವಃ ಸ ಉಚ್ಯತೇ ॥

491) **ಸ. ಸಂ. :–** ಮಹಾಭಕ್ಷಕನು ಮತ್ತು ಲಕ್ಷ್ಮಿಯನ್ನು ನಡೆಸುವವನು.

* * *

492) **ದೇವೇಶಃ** = ದೇವತೆಗಳಿಗೆ ಅಧಿಪತಿಯಾದವನು.

ಶಂ. ಭಾ. :– ಪ್ರಧಾನನಾಗಿರುವುದರಿಂದ ದೇವತೆಗಳಿಗೆ ಈಶ್ವರನಾಗಿರುವವನು.

493) **ಪ. ಭ. :–** ಬ್ರಹ್ಮಾದಿಗಳನ್ನೂ ಯೋಗ್ಯತಾನುಸಾರವಾಗಿ ನಿಯೋಜಿಸುವವನು.
ನಿರುಕ್ತಿ :– ಬ್ರಹ್ಮಾದೀನಾಂ ಚ ದೇವೇಶೋ ಯಥಾರ್ಹವಿನಿಯೋಜಕಃ॥

492) **ಸ. ಸಂ. :–** ದೇವತೆಗಳಿಗೆ ಈಶನು ಅಥವಾ ದೇವತೆಗಳಿಗೂ ಮತ್ತು ರಮಾದೇವಿಗೂ ಸುಖವನ್ನುಂಟುಮಾಡುವವನು.

* * *

493) **ದೇವಭೃದ್ಗುರುಃ** = ದೇವತೆಗಳನ್ನು ಭರಿಸುವವನು ಮತ್ತು ಎಲ್ಲ ವಿದ್ಯೆಗಳಿಗೂ ಆದಿಗುರುವಾಗಿರುವವನು. **ಪೂರ್ವೇಷಾಮಪಿ ಗುರುಃ ಕಾಲೇನಾನವಚ್ಛೇದಾತ್ ॥ (ಯೋಗಸೂತ್ರ) ಈಶಾನಃ ಸರ್ವವಿದ್ಯಾನಾಮೀಶ್ವರಃ ಸರ್ವಭೂತಾನಾಂ ॥ (ಮಹಾನಾರಾಯಣ)**

ಶಂ. ಭಾ. :– ದೇವಪಾಲಕನಾದ ಇಂದ್ರನನ್ನೂ ಆಳುವವನು ; ದೇವತೆಗಳನ್ನು ಭರಿಸುವವನು ಮತ್ತು ಸಮಸ್ತವಿದ್ಯೆಗಳನ್ನೂ ನುಂಗಿರುವವನು.

494) **ಪ. ಭ. :– ದೇವಭೃತ್** = ಬ್ರಹ್ಮ, ಇಂದ್ರ, ಯಮ–ಇವರೇ ಮುಂತಾದವರನ್ನು ಭರಿಸುವವನು.
ನಿರುಕ್ತಿ :– ಬ್ರಹ್ಮಶಕ್ರಯಮಾದೀನಾಂ ಭರಣಾದ್ದೇವಭೃತ್ ಸ್ಮೃತಃ ॥

495) **ಪ. ಭ. :– ಗುರುಃ** = ಬ್ರಹ್ಮಾದಿದೇವತೆಗಳಿಗೆ ವೇದಗಳಿಂದ ಅವರವರ ಅಧಿಕಾರಗಳನ್ನು ಬೋಧಿಸಿದ ಆಚಾರ್ಯನು ; ಕಾಲಪರಿಚ್ಛೇದರಹಿತನಾಗಿರುವುದರಿಂದ ಎಲ್ಲರಿಗೂ ಗುರುವು ಮತ್ತು ಅಧಿಕನು.
ನಿರುಕ್ತಿ :– ಬ್ರಹ್ಮೇನ್ದ್ರವರುಣಾದೀನಾಂ ಗುರುರ್ವೇದೋಽಪದೇಶನಾತ್ ॥

493) **ಸ. ಸಂ. :– ದೇವಭೃದ್ಗುರುಃ** = ದೇವತೆಗಳನ್ನು ಭರಿಸುವವನಾದ ಚತುರ್ಮುಖನಿಗೂ ಉಪದೇಶಮಾಡಿದವನು.

* * *

ಉತ್ತರೋ ಗೋಪತಿರ್ಗೋಪ್ತಾ ಜ್ಞಾನಗಮ್ಯಃ ಪುರಾತನಃ ।
ಶರೀರಭೂತಭೃದ್ಭೋಕ್ತಾ ಕಪೀನ್ದ್ರೋ ಭೂರಿದಕ್ಷಿಣಃ ॥೬೬॥

494) **ಉತ್ತರಃ** = ಎಲ್ಲರಿಗಿಂತಲೂ ಶ್ರೇಷ್ಠನಾದವನು ; ಎಲ್ಲವನ್ನೂ ದಾಟಿದವನು ಮತ್ತು ದಾಟಿಸುವವನು.

ಶಂ. ಭಾ. :– ಜನ್ಮಸಂಸಾರಬಂಧನವನ್ನು ದಾಟಿದವನು ; ಎಲ್ಲರಿಗಿಂತಲೂ ಉತ್ಕೃಷ್ಟನಾದವನು. ವಿಶ್ವಸ್ಮಾದಿನ್ದ್ರ ಉತ್ತರಃ । (ಋ. ೧೦-೭-೮೬-೧೧)

496) **ಪ. ಭ. :–** ಬ್ರಹ್ಮಾದಿಗಳನ್ನೂ ಆಪತ್ತಿನಿಂದ ದಾಟಿಸುವವನು.
ನಿರುಕ್ತಿ :– **ಆಪದುತ್ತರಣಾದ್ಯೋಽಸೌ ಬ್ರಹ್ಮಾದೇರುತ್ತರಃ ಸ್ಮೃತಃ ॥**

494) **ಸ. ಸಂ. :–** ಅತಿಶಯವಾಗಿ ಉತ್ಕೃಷ್ಟನಾದವನು ; ಯೋಗ್ಯರಾದವರನ್ನು ಸಂಸಾರದಿಂದ ದಾಟಿಸುವವನು.

* * *

495) **ಗೋಪತಿಃ** = ಧೇನುಗಳಿಗೆ, ಭೂಮಿಗೆ ಅಥವಾ ವಾಣಿಗೆ ಸ್ವಾಮಿಯು. ಸೂರ್ಯರೂಪಿಯು.

ಶಂ. ಭಾ. :– ಗೋವುಗಳನ್ನು ಪಾಲಿಸುವ ಗೋಪವೇಷಧಾರಿಯಾದ ಶ್ರೀಕೃಷ್ಣನು ; ಭೂಮಿಗೆ ಸ್ವಾಮಿಯಾದವನು.

497) **ಪ. ಭ. :–** ಛಂದಸ್ಸು, ಭಾಷೆ ಮತ್ತು ವೇದಗಳ ವಾಣಿಗಳನ್ನು ನಿರ್ವಹಿಸುವ ಸ್ವಾಮಿಯು.
ನಿರುಕ್ತಿ :– **ಛನ್ದೋಭಾಷಾವೇದವಾಚಾಂ ನಿರ್ವಾಹಾದ್ಗೋಪತಿಃ ಸ್ಮೃತಃ ॥**

495) **ಸ. ಸಂ. :–** ಭೂಮಿಗೆ, ಹಸುಗಳಿಗೆ ಅಥವಾ ವಾಕ್ಯಗಳಿಗೆ ಪಾಲಕನಾದವನು.

* * *

496) **ಗೋಪ್ತಾ**= ಸಂರಕ್ಷಕನು.

ಶಂ. ಭಾ. :– ಸಮಸ್ತಭೂತಗಳನ್ನೂ ಪಾಲಿಸುತ್ತಾ ಜಗತ್ತಿಗೆ ರಕ್ಷಕನಾದವನು.

498) **ಪ. ಭ. :–** ಸಮಸ್ತವಿದ್ಯೆಗಳನ್ನೂ ಪಾಲಿಸುವವನು.
ನಿರುಕ್ತಿ :– ಪಾಲನಾತ್ಸರ್ವವಿದ್ಯಾನಾಂ ಗೋಪ್ತೇತಿ ಪರಿಕೀರ್ತಿತಃ ।

496) **ಸ. ಸಂ. :–** ರಕ್ಷಕನು.

* * *

497) **ಜ್ಞಾನಗಮ್ಯಃ** = ಜ್ಞಾನದಿಂದ ಹೊಂದಲ್ಪಡತಕ್ಕವನು.

ಶಂ. ಭಾ. :– ಕರ್ಮದಿಂದಾಗಲೀ, ಜ್ಞಾನಕರ್ಮಸಮುಚ್ಚಯದಿಂದಾಗಲೀ ಹೊಂದಲ್ಪಡದೇ ಜ್ಞಾನದಿಂದಲೇ ಹೊಂದಲ್ಪಡುವವನು.

499) **ಪ. ಭ. :–** ಪರವಿದ್ಯೆಯಿಂದ ವೇದ್ಯವಾದ ಸಮಾಧಿಯಿಂದ ಹೊಂದಲ್ಪಡುವವನು. (ಹಯಗ್ರೀವನು.)
ವರವಾಜಿಮುಖಂ ಧ್ಯಾಯೇದಥ ವಾಗೀಶ್ವರಂ ಪ್ರಭುಮ್ ॥
ನಿರುಕ್ತಿ :– ಪರಯಾ ವಿದ್ಯಯಾ ವೇದ್ಯೋ ಜ್ಞಾನಗಮ್ಯ ಇತಿ ಸ್ಮೃತಃ ॥

497) **ಸ. ಸಂ. :–** ಜ್ಞಾನದಿಂದ ಅಥವಾ ಜ್ಞಾನಿಗಳಿಂದ ಹೊಂದಲ್ಪಡುವವನು.

* * *

498) **ಪುರಾತನಃ** = ಅತ್ಯಂತಪ್ರಾಚೀನನಾದವನು.

ಶಂ. ಭಾ. :– ಕಾಲಪರಿಚ್ಛೇದರಹಿತನಾದುದರಿಂದ ಎಲ್ಲರಿಗಿಂತಲೂ ಹಿಂದೆಯೂ ಇದ್ದವನು.

500) **ಪ. ಭ. :–** ಪ್ರತಿಕಲ್ಪದಲ್ಲಿಯೂ ವಿದ್ಯೆಯನ್ನು ಬೆಳಗಿಸುವವನು.
ನಿರುಕ್ತಿ :– ವಿದ್ಯಾಪ್ರದ್ಯೋತನಾದ್ಯೋಽಸೌ ಪ್ರತಿಕಲ್ಪಂ ಪುರಾತನಃ ॥

498) **ಸ. ಸಂ. :–** ಪುರಗಳಲ್ಲಿ (ದೇಹಗಳಲ್ಲಿ ಅಥವಾ ವೈಕುಂಠಾದಿ ಲೋಕಗಳಲ್ಲಿ) ಗತಿಯುಳ್ಳವನು ; ಪ್ರಾಚೀನನು.

* * *

499) **ಶರೀರಭೂತಭೃತ್** = ಶರೀರರೂಪನಾಗಿ ಎಲ್ಲ ಭೂತಗಳನ್ನೂ ಧರಿಸಿರುವವನು. ಶರೀರಕ್ಕೆ ಕಾರಣವಾದ ಪಂಚಮಹಾಭೂತಗಳನ್ನು ಧರಿಸಿರುವವನು.

ಶಂ. ಭಾ. :– ಶರೀರವನ್ನು ರಚಿಸುವ ಭೂತಗಳನ್ನು ಪ್ರಾಣರೂಪ ದಿಂದ ಪಾಲಿಸುವವನು.

501) ಪ. ಭ. :– ತನಗೆ ಶರೀರಭೂತವಾಗಿರುವ ಮೂಲಪ್ರಕೃತಿ ಯಿಂದ ಆರಂಭಿಸಿ ಭೂಮಿಯವರೆಗಿನ ಜಗತ್ತತ್ತ್ವವನ್ನು ಧರಿಸಿರುವ ಹಯ ವದನನು.

ತಸ್ಯ ಮೂರ್ಧಾ ಸಮಭವದ್ದ್ಯೌಃ ಸನಕ್ಷತ್ರತಾರಕಾ ।
ಏತದ್ಧಯಶಿರಃ ಕೃತ್ವಾ ನಾನಾಮೂರ್ತಿಭಿರಾವೃತಮ್ ॥

(ಮ. ಭಾ. ಶಾಂ. ೩೪೭-೪೯-೫೩)

ನಿರುಕ್ತಿ :– ದೇಹಭೂತಂ ಜಗತ್ತತ್ತ್ವಂ ಪ್ರಕೃತ್ಯಾದಿಧರಾನ್ತಕಮ್ ।
ಶರೀರಭೂತಭೃತ್ಪ್ರೋಕ್ತೋ ಬಿಭರ್ತೀತಿ ದಶಾಕ್ಷರಃ ॥

499) ಸ. ಸಂ. :– ಶರೀರಗಳನ್ನೂ ಮತ್ತು ಭೂತಗಳನ್ನೂ ಧರಿಸಿರು ವವನು ; ಪ್ರಳಯಕಾಲದಲ್ಲಿ ಎಲ್ಲ ಭೂತಗಳನ್ನೂ ತನ್ನ ಶರೀರದಲ್ಲಿ ಧರಿಸಿರುವವನು.

* * *

500) **ಭೋಕ್ತಾ** = ಭಕ್ತರು ಸಮರ್ಪಿಸಿದ ಹವ್ಯ-ಕವ್ಯಾದಿಗಳನ್ನು ಭೋಗಿಸುವವನು ; ಪರಮಾನಂದವನ್ನು ಅನುಭವಿಸುವವನು ; ಸರ್ವಭಕ್ಷ ಕನು.

ಶಂ. ಭಾ. :– ಪಾಲಕನು, ಪರಮಾನಂದಸಂದೋಹವನ್ನು ಅನುಭವಿ ಸುವವನು.

502) ಪ. ಭ. :– ಹವ್ಯ-ಕವ್ಯಗಳನ್ನು ಭುಜಿಸುವವನು.

ನಿರುಕ್ತಿ :– ಹವ್ಯಂ ಕವ್ಯಂ ಚ ಯೋ ಭುಂಕ್ತೇ ಸ ಭೋಕ್ತಾ ಪರಿ–ಕೀರ್ತಿತಃ ।

500) ಸ. ಸಂ. :– ಎಲ್ಲವನ್ನೂ ತಿನ್ನುವವನು.

* * *

501) **ಕಪೀಂದ್ರಃ** = ಕಪಿರೂಪವನ್ನು ತಾಳಿದ್ದ ದೇವತೆಗಳಿಗೆ ಸ್ವಾಮಿಯಾದವನು.

ಶಂ. ಭಾ. :– ವರಾಹಸ್ವಾಮಿಯು. (ಕಪಿ ಎಂದರೆ ವರಾಹ ಎಂಬ ಅರ್ಥವೂ ಆಗುತ್ತದೆ.) ವಾನರರಿಗೆ ಸ್ವಾಮಿಯಾದ ಶ್ರೀರಾಘವನು.

503) **ಪ. ಭ. :–** ಕಪಿರೂಪವನ್ನು ಹೊಂದಿದ್ದ ದೇವತೆಗಳಿಗೆ ಈಶ್ವರನಾದವನು.

ಸರ್ವಲೋಕೇಶ್ವರಃ ಸಾಕ್ಷಾಲ್ಲೋಕಾನಾಂ ಹಿತಕಾಮ್ಯಯಾ ।
ಸರ್ವೈಃ ಪರಿವೃತೋ ದೇವೈರ್ವಾನರತ್ವಮುಪಾಗತೈಃ ॥
(ರಾ. ಯು. ೧೪೪-೧೬)

ನಿರುಕ್ತಿ :– **ಕಪಿರೂಪಂ ಪ್ರಪನ್ನಾನಾಂ ದೇವಾನಾಮೀಶ್ವರತ್ವತಃ ॥**
ಕಪೀನ್ದ್ರ ಇತಿ ವಿಖ್ಯಾತಃ ಸಪ್ತಾರ್ಣೋ ಮನುನಾಯಕಃ ॥

'ಓಂ ಕಪೀನ್ದ್ರಾಯ ನಮಃ' ಈ ನಾಮಮಂತ್ರವು ಎಲ್ಲ ನಾಮಮಂತ್ರಗಳಿಗೂ ಶ್ರೇಷ್ಠವಾದುದು.

501) **ಸ. ಸಂ. :–** ವಾಲಿಯ ಸಂಪತ್ತನ್ನು ಕರಗಿಸಿದವನು. ಮುಕ್ತಾತ್ಮರಿಗೆ ಸ್ವಾಮಿಯಾದವನು. ಹನುಮಂತನನ್ನು ಅಥವಾ ಇಂದ್ರನನ್ನು ಸಮರ್ಥನನ್ನಾಗಿ ಮಾಡಿದವನು.

* * *

502) **ಭೂರಿದಕ್ಷಿಣಃ** = ನಾನಾಯಜ್ಞಗಳಲ್ಲಿ ಪುಷ್ಕಳವಾದ ದಕ್ಷಿಣೆಗಳನ್ನು ಪಡೆಯುವವನು. ಯಜ್ಞಗಳನ್ನು ಆಚರಿಸಿದಾಗ ಪುಷ್ಕಳವಾದ ದಕ್ಷಿಣೆಗಳನ್ನು ಕೊಡುವವನು.

ಶಂ. ಭಾ. :– ಧರ್ಮಮರ್ಯಾದೆಯನ್ನು ತೋರಿಸುತ್ತಾ ಯಜ್ಞಗಳನ್ನು ಅನುಷ್ಠಾನಮಾಡುವಾಗ ಹೇರಳವಾದ ದಕ್ಷಿಣೆಗಳುಳ್ಳವನು.

504) **ಪ. ಭ. :–** ಜಗತ್ತಿಗೆ ಆಚಾರ್ಯನಾಗಿ (ಮಾರ್ಗದರ್ಶನ ಮಾಡಲು) ಅಶ್ವಮೇಧವೇ ಮುಂತಾದ ಯಜ್ಞಗಳನ್ನು ಮಾಡಿದಾಗ ಹೇರಳವಾದ ದಕ್ಷಿಣೆಗಳುಳ್ಳವನು. '**ಅಶ್ವಮೇಧಶತೈರಿಷ್ಟ್ವಾ**' (ರಾ. ಬಾಲ. ೧-೯೪)

ನಿರುಕ್ತಿ :– ಹಯಮೇಧಾದಿಭಿರ್ಯಜ್ಞೈರ್ಜಗದಾಚಾರ್ಯಕಾಯ ವೈ ।
ಯಜಮಾನಃ ಸ ವಿಜ್ಞೇಯಃ ಸರ್ವದಾ ಭೂರಿದಕ್ಷಿಣಃ ॥

502) ಸ. ಸಂ. :– ಸುವರ್ಣದಕ್ಷಿಣೆಗಳುಳ್ಳವನು ; ಹೇರಳವಾದ ದಕ್ಷಿಣೆಗಳುಳ್ಳವನು ; ಕೊಡುಗೈ ದಾನಿಯು ; ಬಹುಕುಶಲನು ; ಬಲಭಾಗದಲ್ಲಿ ರಮಾದೇವಿಯುಳ್ಳವನು ; ಬಹುಮಂದಿ ಯಜಮಾನರುಳ್ಳ ಸತ್ರಯಾಗದಿಂದ ಸುಖಹೊಂದುವವನು.

* * *

ಸೋಮಪೋಽಮೃತಪಃ ಸೋಮಃ ಪುರುಜಿತ್ಪುರುಸತ್ತಮಃ ।
ವಿನಯೋ ಜಯಃ ಸತ್ಯಸನ್ಧೋ ದಾಶಾರ್ಹಃ ಸಾತ್ವತಾಂ ಪತಿಃ ॥೬೭॥

503) **ಸೋಮಪಃ** = ಸೋಮಯಜ್ಞದಲ್ಲಿ ಅರ್ಪಿಸಲ್ಪಡುವ ಸೋಮವನ್ನು ದೇವತೆಯಾಗಿ ಸ್ವೀಕರಿಸುವವನು ; ಸೋಮಪಾನಮಾಡುವ ಯಜಮಾನರೂಪಿಯಾದವನು.

ಶಂ. ಭಾ. :–ಎಲ್ಲ ಯಜ್ಞಗಳಲ್ಲಿಯೂ ಯಜಿಸಲ್ಪಡಬೇಕಾದ ದೇವತಾರೂಪದಿಂದ ಸೋಮಪಾನವನ್ನು ಮಾಡುವವನು ; ಧರ್ಮಮರ್ಯಾದೆಯನ್ನು ತೋರಿಸುತ್ತಾ ತಾನೇ ಸೋಮಯಾಗಮಾಡುವ ಯಜಮಾನನಾಗಿ ಸೋಮರಸವನ್ನು ಪಾನಮಾಡುವವನು.

505) ಪ. ಭ. :– ಅಶ್ವಮೇಧಯಜ್ಞದಲ್ಲಿ ಅರ್ಪಿಸಲ್ಪಡುವ ಸೋಮರಸವನ್ನು ಪಾನಮಾಡುವವನು.

ಯತ್ಕಿಂಚಿದ್ಧೂಯತೇ ವಹ್ನೌ ಹವಿರ್ಮನ್ತ್ರೈರ್ವಿಧಾನತಃ ।
ತತ್ಸರ್ವಮಮೃತಂ ಕೃತ್ವಾ ವಿಷ್ಣವೇ ಸಮ್ಪ್ರಯಚ್ಛತಿ ॥
ಅಹಂ ಹಿ ಸರ್ವಯಜ್ಞಾನಾಂ ಭೋಕ್ತಾ ಚ ಪ್ರಭುರೇವ ಚ ॥

(ಗೀತಾ. ೯-೨೪)

ನಿರುಕ್ತಿ :– ಹಯಮೇಧೇ ಸೋಮಪಾಯೀ ಸೋಮಪಃ ಪರಿಕೀರ್ತಿತಃ॥

503) ಸ. ಸಂ. :– ಸೋಮರಸವನ್ನು ಕುಡಿಯುವವನು ; ಉಮಾಸಹಿತನಾದ ಶಿವನನ್ನು ಕಾಪಾಡುವವನು ; ಚಂದ್ರನನ್ನು ಕುಡಿಯುವವನು.

* * *

504) **ಅಮೃತಪಃ** = ಪರಮಾನಂದಾಮೃತವನ್ನು ಪಾನಮಾಡುತ್ತಿರುವವನು.

ಶಂ. ಭಾ. :– ಸ್ವಾತ್ಮಾಮೃತರಸವನ್ನು ಕುಡಿಯುವವನು ; ಅಸುರರು ಅಪಹರಿಸುತ್ತಿದ್ದ ಅಮೃತವನ್ನು ರಕ್ಷಿಸಿ ದೇವತೆಗಳಿಗೆ ಕುಡಿಸಿ ತಾನೂ ಕುಡಿದವನು.

506) ಪ. ಭ. :– ಹವಿಸ್ಸಿನ ಪರಿಣಾಮರೂಪವಾದ ಅಮೃತವನ್ನು ತಾನೇ ಕುಡಿಯುವವನು. ತನ್ನ ಸೇವೆಮಾಡುವವರಿಗಾಗಿ ಪರಮವ್ಯೋಮ ದಲ್ಲಿ ಸ್ವಾನುಭವರೂಪವಾದ ಅಮೃತವನ್ನು ರಕ್ಷಿಸುವವನು.

ಯತ್ರ ದೇವಾ ಅಮೃತಮಾನಶಾನಾಸ್ತೃತೀಯೇ ಧಾಮಾನ್ಯಭ್ಯೈರಯನ್ತ ॥ (ಮ. ನಾ. ೬-೧೫) ಅಮೃತಸ್ಯೈಷ ಸೇತುಃ (ಮುಂ. ೨-೨-೫) ಯಸ್ಯ ಚ್ಛಾಯಾಮೃತಮ್ । (ತೈ. ಸಂ. ೪-೧೨) ತೃತೀಯಸ್ಯಾಮಿತೋ ದಿವಿ ಸೋಮ ಆಸೀತ್ ॥ (ತೈ. ಬ್ರಾ. ೩-೧)

ನಿರುಕ್ತಿ :– **ಪರಿಣಾಮೋಽಸ್ಯ ಹವಿಷಾಂ ಪೀಯೂಷಮಿತಿ ಚೋಚ್ಯತೇ।**
ತತ್ಪಾನಾತ್ಸ್ಯಾದಮೃತಪಃ ಪರಮೇ ವ್ಯೋಮ್ನಿ ವಾ ಸ್ಥಿತಃ ॥
ಮುಕ್ತೇಭ್ಯೋ ಯಃ ಸ್ವಾನುಭವಂ ಪಾತೀತ್ಯಮೃತಪಃ ಸ್ಮೃತಃ॥

504) ಸ. ಸಂ. :– ಅಮೃತವನ್ನು ಕುಡಿಯುವವನು ; ದೈತ್ಯರ ದೆಸೆಯಿಂದ ಅಮೃತವನ್ನು ರಕ್ಷಿಸುವವನು.

* * *

505) **ಸೋಮಃ** = ಓಷಧಿಗಳನ್ನು ಪೋಷಿಸುವ ಸೋಮದೇವತಾರೂಪನು ; ಉಮಾಸಹಿತನಾದ ಶಿವಸ್ವರೂಪಿಯು ; ಸೋಮಸ್ವರೂಪಿಯು; ಅಮೃತಸ್ವರೂಪಿಯು ; ಓಂಕಾರಸಹಿತನಾದವನು.

ಶಂ. ಭಾ. :– ಸೋಮರೂಪದಿಂದ ಓಷಧಿಗಳನ್ನು ಪೋಷಿಸುವವನು; ಉಮಾಸಹಿತನಾಗಿರುವ ಶಿವರೂಪಿಯಾದವನು.

507) ಪ. ಭ. :– ಮುಕ್ತರಿಗೆ ಎಷ್ಟು ಅನುಭವಿಸಿದರೂ ತೃಪ್ತಿಯಾಗದ ಅಮೃತದಂತೆ ಇರುವವನು.

ನಿರುಕ್ತಿ :– **ಸೋಮಃ ಸುಧಾಯಮಾನತ್ವಾನ್ಮುಕ್ತಾನಾಂ ಪರಿಕೀರ್ತಿತಃ ।**

505) **ಸ. ಸಂ.** :– ರುದ್ರ ಮತ್ತು ರಮಾದೇವಿಯರಿಂದ ಕೂಡಿದವನು ; ಭೂತಗಳೊಡನೆ ಕೂಡಿರುವವನು ; ಸೌಮ್ಯನಾದವನು ; ಸಾರಭೂತನಾದವನು ಮತ್ತು ಎಲ್ಲೆಯಿಲ್ಲದವನು. **ಸೋಮಃ ಸೌಮ್ಯತ್ವತೋ ಹರಿಃ। ಉನಾಮಯಾ ಚ ಯುಕ್ತತ್ವಾದುಮೈರ್ಯುಕ್ತತ್ವತೋಽಥ ವಾ ॥** (ಋಗ್ಭಾಷ್ಯ.) ಸುಖಸಹಿತನಾದವನು. ಆನಂದಾನುಭವಯುಕ್ತನಾದವನು. **ಆನನ್ದಾನುಭವಸ್ತೂಮ ಉತ್ಕೃಷ್ಟಾನುಭವಾತ್ ಸ್ಮೃತಃ॥** (ಏಕಾದಶ ತಾತ್ಪರ್ಯ).

* * *

506) **ಪುರುಜಿತ್** = ಬಹಳ ಪ್ರಮಾಣದಲ್ಲಿ (ಬಹುಮಂದಿಯನ್ನು) ಗೆಲ್ಲುವವನು.

ಶಂ. ಭಾ. :– ಬಹುಮಂದಿಯನ್ನು ಗೆಲ್ಲುವವನು.

508) ಪ. ಭ. :– ಜನರನ್ನೂ, ದೀನರನ್ನೂ, ಗುರುಗಳನ್ನೂ, ಶತ್ರುಗಳನ್ನೂ ಅನುಕ್ರಮವಾಗಿ ಸತ್ಯ-ದಾನ-ಶುಶ್ರೂಷೆ ಮತ್ತು ಧನುಸ್ಸುಗಳಿಂದ ಗೆದ್ದವನು.

ಸತ್ಯೇನ ಲೋಕಾಞ್ಜಯತಿ ದೀನಾನ್ದಾನೇನ ರಾಘವಃ ।
ಗುರೂಞ್ಛುಶ್ರೂಷಯಾ ವೀರೋ ಧನುಷಾ ಯುಧಿ ಶಾತ್ರವಾನ್ ॥

(ರಾ. ಅ. ೧೨-೨೯)

ನಿರುಕ್ತಿ :– **ಲೋಕಾನ್ದೀನಾನ್ಗುರೂಞ್ಛತ್ರೂನ್ಸತ್ಯದಾನಾನುವರ್ತನೈಃ ।**
ಧನುಷಾ ಜಿತವಾನ್ಯಶ್ಚ ಪುರುಜಿತ್ಸ ಸ್ಮೃತೋ ಬುಧೈಃ ॥

506) **ಸ. ಸಂ.** :– ಬಹಳ ಮಂದಿ ಶತ್ರುಗಳನ್ನು ಜಯಿಸುವವನು ; ಬಹಳ ಪದಾರ್ಥಗಳನ್ನೂ ಮತ್ತು ಗುಣಗಳನ್ನೂ ಜಯಿಸುವವನು ಅಥವಾ ಹೊಂದುವವನು.

* * *

507) **ಪುರುಸತ್ತಮಃ** = ಬಹುರೂಪಿಯೂ–ಶ್ರೇಷ್ಠನೂ ಆಗಿರುವವನು.

ಶಂ. ಭಾ. :– ವಿಶ್ವರೂಪನಾದುದರಿಂದ ಪುರುವು. ಉತ್ಕೃಷ್ಟನಾಗಿರುವುದರಿಂದ ಸತ್ತಮನು. ಪುರುವಾದ ಸತ್ತಮನು.

509) ಪ. ಭ. :– ಆಂಜನೇಯನೇ ಮುಂತಾದ ಬಹಳ ಮಂದಿ ಮಹಾತ್ಮರಲ್ಲಿ ಅತ್ಯಂತಶ್ರೇಷ್ಠನಾಗಿರುವವನು. (ಸತ್ತಮನು.)

ನಿರುಕ್ತಿ :– ಮಹತ್ಸ್ವಸ್ತಿತಮತ್ತ್ವಾದ್ಯೋ ಹ್ಯಾಞ್ಜನೇಯಾದಿಷು ಸ್ವಯಮ್ ।
ಪುರುಸತ್ತಮ ಆಖ್ಯಾತೋ ನವಾರ್ಣಃ ಸ್ವಸ್ತಿದೋ ಮನುಃ ॥

'ಓಂ ಪುರುಸತ್ತಮಾಯ ನಮಃ'–ಈ ನಾಮದ ಜಪದಿಂದ ಕಲ್ಯಾಣ ವುಂಟಾಗುತ್ತದೆ.

507) ಸ. ಸಂ. :– ಪೂರ್ಣನು ಮತ್ತು ಬ್ರಹ್ಮಾದಿಗಳಿಂದ ಬಯಸಲ್ಪಡುವವನು : ನಾಶವನ್ನು ಹೋಗಲಾಡಿಸುವವನು ; ಬ್ರಹ್ಮಾದಿಗಳೇ ಮುಂತಾದ ಬಹಳ ಮಂದಿಯಲ್ಲಿ ಅತಿಶಯನಾಗಿರುವವನು ; ಬ್ರಹ್ಮಾದಿಗಳಿಗಿಂತಲೂ ಅಧಿಕವಾದ ಸತ್ತ್ವವುಳ್ಳ ರಮಾದೇವಿಯನ್ನು ಹೊಂದಿರುವವನು.

* * *

508) ವಿನಯಃ = ಗುರು-ಹಿರಿಯರಲ್ಲಿ ವಿನಯಶಾಲಿಯಾದವನು ; ಅನುಶಾಸನರೂಪನಾದವನು ; ದಂಡರೂಪಿಯು ; ದುಷ್ಟರನ್ನು ದಂಡಿಸುವವನು.

ಶಂ. ಭಾ. :– ದುಷ್ಟರನ್ನು ದಂಡಿಸುವವನು.

510) ಪ. ಭ. :– (ರಾವಣಾದಿಗಳನ್ನು) ತನ್ನ ಪರಾಕ್ರಮದಿಂದ ದಮನ ಮಾಡಿದವನು.

ನಿರುಕ್ತಿ :– ದಮ್ಯನ್ತೇ ವಿಕ್ರಮೈರ್ಯೇನ ವಿನಯಃ ನ ಉದಾಹೃತಃ ॥

508) ಸ. ಸಂ. :– ವಿನಿಯೋಜ್ಯಃ = ನಿಯೋಜಿಸಲ್ಪಡಲಾಗದವನು ; ವಿಧ-ವಿಧವಾಗಿ ಜಗತ್ತನ್ನು ನಿಯೋಜಿಸುವವನು ; ವಿನಯೋ ಜಯಃ ಎಂಬ ಪಾಠವನ್ನು ಕೆಲವರು ಆಶ್ರಯಿಸಿರುತ್ತಾರೆ. ಆಗ ಈ ಪಾದದಲ್ಲಿ ಒಂಬತ್ತು ಅಕ್ಷರಗಳಾಗುತ್ತವೆ. **ನವಾಕ್ಷರತ್ವೇಽಪಿ ನ ವಾ ಏಕೇನಾಕ್ಷರೇಣ ಛನ್ದಾಂಸಿ ವಿಯನ್ತಿ ನ ದ್ವಾಭ್ಯಾಂ**–ಎಂಬ ಬಹ್ವೃಚಬ್ರಾಹ್ಮಣದ ಉಕ್ತಿಯಂತೆ ಛಂದೋದೋಷವಿಲ್ಲ. ಆಗ ವಿನಯೋ ಜಯಃ ಎಂಬುದಕ್ಕೆ ದಂಡಿಸುವವನು ಮತ್ತು ಜಯಿಸುವವನು–ಎಂದು ಅರ್ಥ.

* * *

509) **ಜಯಃ** = ಜಯರೂಪಿಯಾದವನು ; ಎಲ್ಲರನ್ನೂ ಜಯಿಸುವವನು.

ಶಂ. ಭಾ. :– ಎಲ್ಲ ಭೂತಗಳನ್ನೂ ಜಯಿಸುವವನು.

511) **ಪ. ಭ. :–** ಆಶ್ರಿತಭಕ್ತರಿಂದ ಗೆಲ್ಲಲ್ಪಡುವವನು.
ನಿರುಕ್ತಿ :– ಆಶ್ರಿತೈರ್ಜೀಯತೇ ಯಸ್ಮಾದ್ವಿಧೇಯೀಕ್ರಿಯತೇ ಜಯಃ ॥

* * *

510) **ಸತ್ಯಸನ್ಧಃ** = ಸತ್ಯವಾದ ಸಂಕಲ್ಪ ಮತ್ತು ಪ್ರತಿಜ್ಞೆಗಳುಳ್ಳವನು.

ಶಂ. ಭಾ. :– ಸತ್ಯವಾದ ಸಂಕಲ್ಪವುಳ್ಳವನು. **ಸತ್ಯಸಙ್ಕಲ್ಪಃ**
(ಛಾಂ. ೮-೧-೫)

512) **ಪ. ಭ. :–** ಭಕ್ತರಲ್ಲಿ ಸತ್ಯವಾದ ಪ್ರತಿಜ್ಞೆಯುಳ್ಳವನು.
ನಿರುಕ್ತಿ :– ಸತ್ಯಾ ಪ್ರತಿಜ್ಞಾ ಯಸ್ಯೇತಿ ಸತ್ಯಸನ್ಧಃ ಸ ಉಚ್ಯತೇ ॥

509) **ಸ. ಸಂ. :–** ಸತ್ಯವಾದ ಪ್ರತಿಜ್ಞೆಯುಳ್ಳವನು ; ಸತ್ಯವನ್ನು ಸಂಧಾನಮಾಡುವವನು.

* * *

511) **ದಾಶಾರ್ಹಃ** = ದಶಾರ್ಹಕುಲದಲ್ಲಿ ಹುಟ್ಟಿದವನು. ಶ್ರೀಕೃಷ್ಣರೂಪಿಯು.

ಶಂ. ಭಾ. :– ದಾನಕ್ಕೆ ಯೋಗ್ಯನಾದವನು. ದಶಾರ್ಹಕುಲದಲ್ಲಿ ಜನಿಸಿದವನು.

513) **ಪ. ಭ. :–** 'ಭಕ್ತರ ಆತ್ಮಾರ್ಪಣೆ ಅಥವಾ ಭಕ್ತರಿಗೆ ತನ್ನನ್ನು ಅರ್ಪಿಸಿಕೊಳ್ಳುವಿಕೆ'–ಎಂಬ ದಾಶಕ್ಕೆ (ದಾನಕ್ಕೆ) ಯೋಗ್ಯನಾದವನು. ದಶಾರ್ಹನ ವಂಶದಲ್ಲಿ ಹುಟ್ಟಿದವನು ; ದಶಾರ್ಹರಿಗೆ ಸಂಬಂಧಿಸಿದವನು.
ನಿರುಕ್ತಿ :– ಆತ್ಮನೋ ವಾರ್ಪಣಂ ಭಕ್ತೈಸ್ತೇಭ್ಯೋ ವಾಸ್ವಾತ್ಮನೋಽರ್ಪಣಂ ।
ದಾಶಸ್ತಮರ್ಹತಿ ಚ ಯೋ ದಾಶಾರ್ಹಃ ಸ ತು ಕೀರ್ತಿತಃ॥

510) **ಸ. ಸಂ. :–** ಸುಖಾದಿಗಳ ದಾನಕ್ಕೆ ಯೋಗ್ಯನಾದವನು ; ದಾಶಾರ್ಹಕುಲದಲ್ಲಿ ಹುಟ್ಟಿದವನು ; ದಶಾರ್ಹರಿಗೆ (ಯಾದವರಿಗೆ) ಸಂಬಂಧಿಸಿದವನು ; ಸತ್ಯವತೀಪುತ್ರನು.

* * *

512) **ಸಾತ್ವತಾಂ ಪತಿಃ** = ಸಾತ್ವತವಂಶದವರಾದ ಯಾದವರಿಗೆ ಅಥವಾ ಸಾತ್ವತಪಂಥದವರಿಗೆ ಸ್ವಾಮಿಯಾದವನು.

ಶಂ. ಭಾ. :– ಸಾತ್ವತವೆಂಬ (ಪಾಂಚರಾತ್ರದ) ತಂತ್ರಗಳಿಗೆ ಅಧಿಪತಿ ಯಾದವನು ; ಸಾತ್ವತರ ಯೋಗ-ಕ್ಷೇಮಗಳನ್ನು ನಿರ್ವಹಿಸುವವನು.

514) **ಪ. ಭ. :–** ಭಾಗವತರಿಗೆ ಈಶ್ವರನಾದವನು.

ನಿರುಕ್ತಿ :– **ಯೇ ಸಾತ್ವತಾ ಭಾಗವತಾಃ ತೇಷಾಂ ಯಃ ಪತಿರೀಶ್ವರಃ ।**
ಸಾತ್ವತಾಂ ಪತಿರಿತ್ಯುಕ್ತೋ ನವಾರ್ಣಃ ಸಾಧುರಕ್ಷಕಃ ॥

'ಓಂ ಸಾತ್ವತಾಂ ಪತಯೇ ನಮಃ'–ಈ ನಾಮಮಂತ್ರಜಪವು ಸತ್ಪುರುಷರನ್ನು ರಕ್ಷಿಸುತ್ತದೆ.

511) **ಸ. ಸಂ. :–** ಭಕ್ತರನ್ನು ಪಾಲಿಸುವವನು ; ಪಾಂಚರಾತ್ರದಲ್ಲಿ ಬರುವ ಶ್ರೀಯೇ ಮುಂತಾದ ಒಂಬತ್ತು ಮೂರ್ತಿಗಳಿಗೆ ಪತಿ (ಆದಿಮೂರ್ತಿ) ಯಾದವನು. **ಸಾತ್ವತಾಂ ನವಮೂರ್ತಿನಾಮಾದಿಮೂರ್ತಿರಹಂ ಪುರಾ।** (ಭಾಗವತ). ವಿಷ್ಣು, ಶ್ರೀ, ಬ್ರಹ್ಮ, ವಾಯು, ಸಂಕರ್ಷಣ ಮತ್ತು ಸುಪರ್ಣ–ಇವರಲ್ಲಿ ಒಬ್ಬೊಬ್ಬರಿಗೂ ಒಂಬತ್ತು ಮೂರ್ತಿಗಳು. ನಾರಾಯಣ, ಪರಬ್ರಹ್ಮ, ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ, ನರಸಿಂಹ, ವರಾಹ ಮತ್ತು ಪರಂಜ್ಯೋತಿ–ಇವು ನಾರಾಯಣನ ನವ ಮೂರ್ತಿಗಳು.

* * *

ಜೀವೋ ವಿನಯಿತಾ ಸಾಕ್ಷೀ ಮುಕುನ್ದೋಽಮಿತವಿಕ್ರಮಃ ।
ಅಮ್ಭೋನಿಧಿರನನ್ತಾತ್ಮಾ ಮಹೋದಧಿಶಯೋಽನ್ತಕಃ ॥೬೮॥

513) **ಜೀವಃ** = ಚೈತನ್ಯರೂಪಿಯಾದವನು, ಪ್ರಾಣಧಾರಕನು.

ಶಂ. ಭಾ. :– ಕ್ಷೇತ್ರಜ್ಞರೂಪದಿಂದ ಪ್ರಾಣಗಳನ್ನು ಧರಿಸಿರುವವನು.

515) **ಪ. ಭ. :–** ಭಕ್ತರನ್ನು ಆತ್ಮನಾಶದಿಂದ ತಪ್ಪಿಸಿ ತನ್ನ ಸೇವೆಯಿಂದ ಉಜ್ಜೀವನಗೊಳಿಸುವವನು.

ನಿರುಕ್ತಿ :– ತಾನಾತ್ಮನಾಶಾದ್ವ್ಯಾವರ್ತ್ಯ ಸತ್ವಾನ್ಯಶ್ಚ ಸ್ವಸೇವಯಾ ।
ಉಜ್ಜೀವಯತಿ ಜೀವಃ ಸಃ ಭಕ್ತಕ್ಲೇಶಾಸಹೋ ಮನುಃ ॥

'ಓಂ ಜೀವಾಯ ನಮಃ'– ಈ ನಾಮಮಂತ್ರಜಪವು ಭಕ್ತರ ಕ್ಲೇಶವನ್ನು ಹೋಗಲಾಡಿಸುತ್ತದೆ.

512) **ಸ. ಸಂ. :–** ಜನರನ್ನು ಉಜ್ಜೀವನಗೊಳಿಸುವವನು.

* * *

514) **ವಿನಯಿತಾಸಾಕ್ಷೀ = ವಿನಯಿತಾ** = ವಿನಯವನ್ನುಂಟುಮಾಡುವವನು ; **ಸಾಕ್ಷೀ**= ಎಲ್ಲವನ್ನೂ ಸಾಕ್ಷಾತ್ತಾಗಿ ನೋಡುವವನು.

ಶಂ. ಭಾ. :– ಪ್ರಜೆಗಳ ವಿನಯತ್ವವನ್ನು ಸಾಕ್ಷಾತ್ತಾಗಿ ನೋಡುವವನು; **ವಿನಯಿತಾ** = ವಿನಯವನ್ನುಂಟುಮಾಡುವವನು ಮತ್ತು **ಅಸಾಕ್ಷೀ** = ಸಾಕ್ಷಿಯಾಗದೇ ಇರುವವನು. (ಆತ್ಮಭಿನ್ನವಾದ ಯಾವ ವಸ್ತುವನ್ನೂ ನೋಡದೇ ಇರುವವನು.)

516) **ಪ. ಭ. :– ವಿನಯಿತಾ** = ರಾಜಪುತ್ರರನ್ನು ಲಾಲಿಸುವಂತೆ ಭಕ್ತರನ್ನು ಸುಖವಾಗಿ ರಕ್ಷಿಸುವವನು.

ನಿರುಕ್ತಿ :– ಭಕ್ತಾನ್ನಿತ್ಯಂ ರಾಜಪುತ್ರಲಾಲನನ್ಯಾಯತಃ ಸುಖಮ್ ।
ರಕ್ಷತ್ಯತೋ ವಿನಯಿತಾ ನಯತೇ ರಕ್ಷಣಾರ್ಥತಃ ॥

517) **ಪ. ಭ. :– ಸಾಕ್ಷೀ**= ಭಕ್ತರ ರಕ್ಷಣೆಗೋಸ್ಕರ ಅವರ ವರ್ತನೆಯನ್ನು ಸಾಕ್ಷಾತ್ತಾಗಿ ನೋಡುತ್ತಿರುವವನು.

ನಿರುಕ್ತಿ :– ಸಾಕ್ಷಾತ್ಕರೋತಿ ಯಃ ಸಾಕ್ಷೀ ತದ್ವೃತ್ತಂ ರಕ್ಷಣಾಯ ಸಃ

513) **ಸ. ಸಂ. :– ವಿನಯಿತಾ ಸಾಕ್ಷೀ**= ವಿನಯತ್ವವನ್ನು ಸಾಕ್ಷಾತ್ತಾಗಿ ನೋಡುತ್ತಿರುವವನು.

* * *

515) **ಮುಕುಂದಃ** = ಮುಕ್ತಿಯನ್ನು ಕೊಡುವವನು.

ಶಂ. ಭಾ. :– ಮುಕ್ತಿಯನ್ನು ಕೊಡುವವನು.

518) **ಪ. ಭ. :–** ಏಕಾಂತಭಕ್ತರಿಂದ ಪ್ರಾರ್ಥಿಸಲ್ಪಟ್ಟು (ಪ್ರಾರ್ಥಿಸಲ್ಪಡದಿದ್ದರೂ) ತಾನಾಗಿಯೇ ಮುಕ್ತಿಯನ್ನು ಕೊಡುವವನು.

ನಿರುಕ್ತಿ :– **ಅಪ್ರಾರ್ಥಿತಃ ಸ್ವಯಂ ಮುಕ್ತಿಂ ಮುಕುನ್ದಃ ಸ್ಯಾದ್ದದಾತಿ ಸಃ**
ತೈಃ ಪ್ರಾರ್ಥಿತಃ ಸ್ವಯಂ ಮುಕ್ತಿಂ ಮುಕುನ್ದಃ ಸ್ಯಾದ್ದದಾತಿ ಸಃ ||

514) **ಸ. ಸಂ. :–** ಮುಕ್ತಿಯನ್ನು ಕೊಡುವವನು.

* * *

516) **ಅಮಿತವಿಕ್ರಮಃ** = ಅಳೆಯಲಾಗದ ಶೌರ್ಯವುಳ್ಳವನು ; ಮೂರು ದೊಡ್ಡ ಪಾದವಿನ್ಯಾಸಗಳುಳ್ಳವನು.

ಶಂ. ಭಾ. :– ಅಪರಿಮಿತವಾದ ಮೂರು ಪಾದವಿನ್ಯಾಸಗಳುಳ್ಳವನು ; ಅಮಿತವಾದ ಶೌರ್ಯವುಳ್ಳವನು.

519) **ಪ. ಭ. :–** (ಭಕ್ತರ ಧ್ಯಾನ-ಆರಾಧನೆಗಳಲ್ಲಿ ಅನುಸಂಧಾನ ಮಾಡಲ್ಪಡಬೇಕಾದ ತತ್ತ್ವಸಮೂಹವನ್ನೆಲ್ಲಾ ಧರಿಸಿರುವ ಆಧಾರಶಕ್ತಿಯನ್ನೂ ಧರಿಸಿರುವ) ಅಪರಿಮಿತವಾದ ಬಲ-ಪರಾಕ್ರಮಗಳುಳ್ಳವನು.

ನಿರುಕ್ತಿ :– **ತೇಷಾಂ ಜ್ಞಾನಾನುಸಂಧೇಯತತ್ತ್ವಸನ್ದೋಹಧಾರಿಣೀಂ ।**
ತಾಂ ಶಕ್ತಿಂ ಧೃತವಾನ್ಯೋऽಸೌ ಸ್ಮೃತೋ ಹ್ಯಮಿತವಿಕ್ರಮಃ ||

515) **ಸ. ಸಂ. :–** ಅಮಿತಪರಾಕ್ರಮವುಳ್ಳವನು ; ಗರುಡನಿಂದ ಸಂಪೂರ್ಣವಾಗಿ ಅರಿಯಲ್ಪಡದವನು ಮತ್ತು ಗರುಡನ ಮೂಲಕ ಸಂಚರಿಸುವವನು.

517) **ಅಮ್ಭೋನಿಧಿಃ** = ಸಾಗರಸ್ವರೂಪಿಯಾದವನು ; ಸಾಗರದಂತೆ ಇರುವವನು.

ಶಂ. ಭಾ. :– ದೇವತೆಗಳೇ ಮುಂತಾದವರು ಯಾವನಲ್ಲಿ ಇರಿಸಲ್ಪಟ್ಟಿರುವರೋ–ಅವನು. **ತಾನಿ ವಾ ಏತಾನಿ ಚತ್ವಾರ್ಯಮ್ಭಾಗ್ಂಸಿ । ದೇವಾ ಮನುಷ್ಯಾಃ ಪಿತರೋऽಸುರಾಃ** (ತೈ .ಬ್ರಾ.) ಸಮುದ್ರನು.

520) **ಪ. ಭ. :–** ಪಾತಾಲಜಲದಲ್ಲಿ ಅಖಿಲಜಗತ್ತಿಗೆ ಆಧಾರಪೀಠವಾದ ಕೂರ್ಮರೂಪದಿಂದ ತನ್ನನ್ನು ಇರಿಸಿಕೊಂಡಿರುವವನು.

ನಿರುಕ್ತಿ :– **ಆಧಾರಶಕ್ತಿಕಮಠಸ್ವರೂಪೇಣಾರ್ಣವಾಮ್ಭಸಿ ।**
ನಿಧೀಯತೇ ಸ್ವಯಂ ಯೇನ ಸ ಹ್ಯಮ್ಭೋನಿಧಿರುಚ್ಯತೇ ॥

516) **ಸ. ಸಂ. :–** ಗಾಂಭೀರ್ಯದಿಂದ ಸಮುದ್ರಸದೃಶನು ; ದೇವತೆಗಳು, ಕರ್ಮಗಳು, ವಿಷ್ಣುಲೋಕವೇ ಮುಂತಾದುವುಗಳು ಯಾವನಲ್ಲಿ ಇರಿಸಲ್ಪಟ್ಟಿವೆಯೋ–ಅವನು.

* * *

518) **ಅನನ್ತಾತ್ಮಾ** = ಪರಿಚ್ಛೇದರಹಿತವಾದ ಸ್ವರೂಪವುಳ್ಳವನು.

ಶಂ. ಭಾ. :– ದೇಶ, ಕಾಲ ಮತ್ತು ವಸ್ತುಗಳ ಪರಿಚ್ಛೇದವಿಲ್ಲದವನು.

521) **ಪ. ಭ. :–** ಜಗತ್ತಿಗೆ ಆಧಾರಸ್ತಂಭವಾದ ಅನಂತನಾಗನಿಗೆ ಆತ್ಮನಾಗಿರುವವನು.

ನಿರುಕ್ತಿ :– **ಕಮಠಸ್ಯೋಪರಿ ಜಗದಾಧಾರಸ್ತಮ್ಭಭೋಗಿನಃ ।**
ಸ್ವರೂಪೇಣ ಸ್ಥಿತೋ ಯೋಽಸೌ ಅನನ್ತಾತ್ಮಾ ಪ್ರಕೀರ್ತಿತಃ ॥

517) **ಸ. ಸಂ. :–** ಅಪರಿಮಿತವಾದ ದೇಹಗಳುಳ್ಳವನು ; ಬಂಧವಿಲ್ಲದ ಆತ್ಮನು ; ಅನಂತಸಂಖ್ಯೆಯ ಮುಕ್ತಾತ್ಮರಿಗೆ ಸ್ವಾಮಿಯಾದವನು ; ಆದಿಶೇಷನಲ್ಲಿ ದೇಹವುಳ್ಳವನು.

* * *

519) **ಮಹೋದಧಿಶಯಃ** = ಪ್ರಳಯಸಮುದ್ರದಲ್ಲಿ ಪವಡಿಸಿರುವವನು ; ಪಾಲ್ಗಡಲಿನಲ್ಲಿ ಪವಡಿಸಿರುವವನು.

ಶಂ. ಭಾ. :–ಸಮಸ್ತಭೂತಗಳನ್ನೂ ಸಂಹಾರಮಾಡಿ ಜಗತ್ತೆಲ್ಲವನ್ನೂ ಜಲಮಯವನ್ನಾಗಿ ಮಾಡಿ ಆ ಮಹಾಸಮುದ್ರದಲ್ಲಿ ಶಯನಿಸಿರುವವನು.

522) **ಪ. ಭ. :–** ಮಹಾಪ್ರಳಯಕಾಲದಲ್ಲಿ ಅನಂತಪರ್ಯಂಕದ ಮೇಲೆ ಸಮುದ್ರದಲ್ಲಿ ಪವಡಿಸಿರುವವನು.

ನಿರುಕ್ತಿ :– **ತಸ್ಮಿನ್ನನನ್ತಪರ್ಯಙ್ಕೇ ಸಮುದ್ರೇ ಶಯನಾಚ್ಚ ಯಃ ।**
ಮಹೋದಧಿಶಯಃ ಖ್ಯಾತೋ ದಶಾರ್ಣೋ ಮನುರುತ್ತಮಃ॥

'ಓಂ ಮಹೋದಧಿಶಯಾಯ ನಮಃ'–ಈ ನಾಮಮಂತ್ರವು ಜಪ ಮಾಡಲು ಶ್ರೇಷ್ಠವಾದುದು.

518) **ಸ. ಸಂ. :–** ಉತ್ಕೃಷ್ಟನಾದ ದಧಿಶಯನು. ವಾಮನ, ಕೃಷ್ಣಾದಿ ರೂಪಗಳಲ್ಲಿ ಮೊಸರಿನಲ್ಲಿ ಇರಿಸಿರುವ ಕೈಗಳುಳ್ಳವನು ; ಮಹಾಸಮುದ್ರದಲ್ಲಿ ಪವಡಿಸಿರುವವನು ; ಉತ್ಕೃಷ್ಟರಾದ ಚತುರ್ಮುಖಾದಿಗಳನ್ನು ಕೈಯಲ್ಲಿ (ಅಧೀನವಾಗಿ) ಹೊಂದಿರುವವನು ; ದೊಡ್ಡವನಾದ ಸಮುದ್ರಶಾಯಿಯು.

* * *

520) **ಅನ್ತಕಃ** = ಮಹಾಪ್ರಳಯಕಾಲದಲ್ಲಿ ಸರ್ವಭೂತಗಳನ್ನೂ ಸಂಹರಿಸುವವನು ; ಶತ್ರುಸಂಹಾರಕನು.

ಶಂ. ಭಾ. :– ಭೂತಗಳನ್ನು ಸಂಹರಿಸುವವನು.

523) **ಪ. ಭ. :–** ಎಲ್ಲ ಜಗತ್ತುಗಳನ್ನೂ ನಾಶಪಡಿಸುವವನು.
ನಿರುಕ್ತಿ :– **ಅನ್ತಂ ಕರೋತಿ ಜಗತೋ ಯೋऽಸಾವನ್ತಕ ಈರಿತಃ ।**

519) **ಸ. ಸಂ. :–** ಎಲ್ಲವನ್ನೂ ನಾಶಪಡಿಸುವವನು ; ಜರಾಸಂಧನೇ ಮುಂತಾದವರಿಂದ ಬದ್ಧರಾಗಿದ್ದ ರಾಜರಿಗೆ ಸುಖವನ್ನುಂಟುಮಾಡಿದವನು ; ಸಮುದ್ರಜಲವನ್ನು ರಾಮನ ರೂಪದಿಂದ ಬಂಧಿಸಿದವನು.

* * *

ಅಜೋ ಮಹಾರ್ಹಃ ಸ್ವಾಭಾವ್ಯೋ ಜಿತಾಮಿತ್ರಃ ಪ್ರಮೋದನಃ ।
ಆನನ್ದೋ ನನ್ದನೋ ನನ್ದಃ ಸತ್ಯಧರ್ಮಾ ತ್ರಿವಿಕ್ರಮಃ ॥೬೧॥

521) **ಅಜಃ** = ಹುಟ್ಟಿಲ್ಲದವನು ; ಬ್ರಹ್ಮರೂಪಿಯು.

ಶಂ. ಭಾ. :– ಕಾಮದೇವನು. ಅಕಾರರೂಪನಾದ ವಿಷ್ಣುವಿನಿಂದ ಹುಟ್ಟಿದವನಾದ್ದರಿಂದ ಅಜನು. (ಆತ್ ವಿಷ್ಣೋರಜಾಯತ)

524) **ಪ. ಭ. :–** (ತತ್ತ್ವದ ಅವಸಾನಸಮಯದಲ್ಲಿ ಪ್ರಣವಕ್ಕೆ ಪ್ರಕೃತಿಭೂತವಾದ ಅಕಾರಕ್ಕೆ ವಾಚ್ಯವಾಗಿ ಸ್ಮರಿಸಲ್ಪಡಬೇಕಾಗಿರುವುದರಿಂದ) ಅಕಾರವಾಚ್ಯನಾಗಿ ಪ್ರಾದುರ್ಭವಿಸಿದವನು. **ತಸ್ಯ ಪ್ರಕೃತಿಲೀನಸ್ಯ ಯಃ ಪರಃ ಸ ಮಹೇಶ್ವರಃ (ಮ. ನಾ.)**

ನಿರುಕ್ತಿ :– ತತ್ತ್ವಾವಸಾನಕಾಲೇ ಚ ಪ್ರಣವಪ್ರಕೃತಿತ್ವತಃ ।
ಸ್ಮರ್ತವ್ಯತ್ವಾದಜಃ ಪ್ರೋಕ್ತಃ ಷಡರ್ಣೋ ಹ್ಯೂರ್ಮಿನಾಶಕಃ ॥

'ಓಂ ಅಜಾಯ ನಮಃ'–ಎಂಬ ಈ ನಾಮಮಂತ್ರಜಪದಿಂದ ಪೀಡಾ ಪರಿಹಾರವಾಗುತ್ತದೆ.

520) ಸ. ಸಂ. :– ಚತುರ್ಮುಖನಿಗೆ ಜನಕನಾದವನು. (ಕಾರ್ಯ-ಕಾರಣಗಳೆರಡನ್ನೂ ಒಂದೇ ಶಬ್ದದಿಂದ ವ್ಯವಹಾರಮಾಡುವುದುಂಟು. ಅಜನಿಗೆ (ಚತುರ್ಮುಖನಿಗೆ) ಕಾರಣನಾದ ವಿಷ್ಣುವನ್ನು ಅಜಶಬ್ದದಿಂದ ಹೇಳಿದೆ.)

* * *

522) ಮಹಾರ್ಹಃ = ಅತ್ಯಂತಯೋಗ್ಯನಾದವನು ; ಪೂಜೆಗೆ ಯೋಗ್ಯನಾದವನು.

ಶಂ. ಭಾ. :– ಪೂಜೆಗೆ ಯೋಗ್ಯನಾದವನು.

525) ಪ. ಭ. :– ಪ್ರಣವದಿಂದ ಆತ್ಮನಿವೇದನಪೂರ್ವಕವಾದ ಪೂಜೆಗೆ ಯೋಗ್ಯನಾದವನು.

ಬ್ರಹ್ಮಣೇ ತ್ವಾ ಮಹಸ ಓಮಿತ್ಯಾತ್ಮಾನಂ ಯುಞ್ಜೀತ । (ಮ. ನಾ.)

ನಿರುಕ್ತಿ :– ಸ್ವರೂಪಾದಿಕೃತಾರ್ಥೇನ ತಾರೇಣಾತ್ಮನಿವೇದನಮ್ ।
ಮಹಂ ಪೂಜಾಮರ್ಹತೀತಿ ಮಹಾರ್ಹ ಇತಿ ಕಥ್ಯತೇ ॥

521) ಸ. ಸಂ. :– ಪೂಜಾದಿರೂಪವಾದ ಉತ್ಸವಕ್ಕೆ ಯೋಗ್ಯನಾದವನು.

* * *

523) ಸ್ವಾಭಾವ್ಯಃ = ಸ್ವಾಭಾವಿಕನಾದವನು ; ನಿತ್ಯಸಿದ್ಧನು.

ಶಂ. ಭಾ. :– (ನಿತ್ಯಸಿದ್ಧನಾಗಿರುವುದರಿಂದ) ಸ್ವಭಾವವಾಗಿಯೇ ಉತ್ಪತ್ತಿಯಿಲ್ಲದವನು.

526) ಪ. ಭ. :– (ಪ್ರಣವಮಂತ್ರದಿಂದ) ಸ್ವಕೀಯರಾಗಿರುವವರಿಂದ ಸ್ವಾಮಿಭಾವದಿಂದ ಅಭಿಮುಖವಾಗಿ ಅವಶ್ಯವಾಗಿ ಭಾವಿಸಲ್ಪಡಬೇಕಾ

ದವನು. ಆತ್ಮದಾಸ್ಯಂ ಹರೇಃ ಸ್ವಾಮ್ಯಂ ಸ್ವಭಾವಂ ಚ ಸದಾ ಸ್ಮರ ॥ (ವಿ. ತ.) ನಾನ್ಯೋ ಹೇತುರ್ವಿದ್ಯತೇ ಈಶನಾಯ । (ಶ್ವೇ. ೬-೧೭)

ನಿರುಕ್ತಿ :– ಮನ್ತ್ರೇಣಾನೇನಾತ್ಮಭಿಸ್ತು ಸ್ವಭೂತ್ಯೈರಾಭಿಮುಖ್ಯತಃ ।
ಅವಶ್ಯಂ ಭಾವನೀಯತ್ವಾತ್ಸ್ವಭಾವ್ಯಃ ಪರಿಕೀರ್ತಿತಃ ॥

522) ಸ. ಸಂ. :– ಸ್ವತಂತ್ರನು ಮತ್ತು ಯಾವ ಫಲವೂ ದೊರೆಯ ಬೇಕಾಗಿಲ್ಲದವನು ; ತನ್ನ ಪ್ರಕಾಶದಂತೆ ಪ್ರಕಾಶವುಳ್ಳ (ಜ್ಞಾನಾನಂದಾದಿ ಗುಣ ಗಳನ್ನು ಹೊಂದಿರುವುದರಿಂದ ತನಗೆ ಸಮಾನರಾದ) ಯೋಗ್ಯಜೀವಿಗಳನ್ನು ರಕ್ಷಿಸುವವನು ; ಸ್ವತಂತ್ರನು ಮತ್ತು ಎಲ್ಲೆಲ್ಲಿಯೂ ಮಂಗಳಸಮೂಹ ವುಳ್ಳವನು.

* * *

524) ಜಿತಾಮಿತ್ರಃ = ಶತ್ರುಗಳನ್ನು ಜಯಿಸಿದವನು.

ಶಂ. ಭಾ. :– ರಾಗ-ದ್ವೇಷಗಳೇ ಮುಂತಾದ ಒಳಶತ್ರುಗಳನ್ನೂ ಮತ್ತು ರಾವಣ, ಕುಂಭಕರ್ಣ, ಶಿಶುಪಾಲರೇ–ಮುಂತಾದ ಹೊರಶತ್ರುಗಳನ್ನೂ ಜಯಿಸಿದವನು.

527) ಪ. ಭ. :– ತನ್ನ ಭಕ್ತರ ಜ್ಞಾನಕ್ಕೆ ವಿರೋಧಿಗಳಾದ ಕಾಮ-ಕ್ರೋಧಾದಿ ದ್ವೇಷಿಗಳನ್ನು ಗೆದ್ದವನು.

ನಿರುಕ್ತಿ :– ಏತದ್ರಹಸ್ಯವಿಜ್ಞಾನವಿರೋಧಿಮಮತಾದಯಃ ।
ಜಿತಾಸ್ತೇಷಾಮನೇನೇತಿ ಜಿತಾಮಿತ್ರೋಽಷ್ಟವರ್ಣಕಃ ॥

523) ಸ. ಸಂ. :– ಶತ್ರುಗಳನ್ನು ಜಯಿಸಿದವನು.

* * *

525) ಪ್ರಮೋದನಃ =ಪರಮಾನಂದವನ್ನು ಉಂಟುಮಾಡುವವನು ; ಸದಾನಂದನಾಗಿರುವವನು.

ಶಂ. ಭಾ. :– ತನ್ನ ಆತ್ಮಾಮೃತರಸವನ್ನು ಸವಿಯುತ್ತಿರುವುದರಿಂದ ಸದಾ ಆನಂದಿಯಾಗಿರುವವನು ; ಧ್ಯಾನಿಸುವವರಿಗೆ ಧ್ಯಾನಮಾತ್ರದಿಂದಲೇ ಪರಮಾನಂದವನ್ನು ಉಂಟುಮಾಡುವವನು.

528) **ಪ. ಭ. :–** ಧ್ಯಾನಾಸಕ್ತರಾದ ಭಕ್ತರಲ್ಲಿ ಆನಂದಿಸುತ್ತಿರುವವನು; ತನಗೆ ಸಂಬಂಧಪಟ್ಟವರನ್ನು ಮೊದಲನೆಯ ಅನುಸಂಧಾನದಲ್ಲಿಯೇ ಪರಮಾನಂದಗೊಳಿಸುವವನು.
ನಿರುಕ್ತಿ :– **ಧ್ಯಾನಾಸಕ್ತೇಷು ಭಕ್ತೇಷು ಮೋದಮಾನಃ ಪ್ರಮೋದನಃ ॥**

524) **ಸ. ಸಂ. :–** ತನಗೆ ತಾನೇ ಆನಂದಿಸುವವನು ; ಜನರನ್ನು ಆನಂದಗೊಳಿಸುವವನು ; ಪ್ರಮೋದನಕ್ಕೆ (ಪೂರ್ಣಾನಂದಕ್ಕೆ) ಒಯ್ಯುವವನು ; ಶ್ರೇಷ್ಠಳಾದ ರಮಾದೇವಿಯಿಂದ ಅಥವಾ ಜ್ಞಾನದಿಂದ ಕೂಡಿದವನು ; ಶ್ರೇಷ್ಠನಾದ ವಾಯುದೇವನಿಂದ ಕೂಡಿದವನು.

* * *

526) **ಆನನ್ದಃ** = ಆನಂದಸ್ವರೂಪಿಯು.

ಶಂ. ಭಾ. :– ಆನಂದಸ್ವರೂಪಿಯು. **ಏತಸ್ಯೈವಾನನ್ದಸ್ಯ ಅನ್ಯಾನಿ ಭೂತಾನಿ ಮಾತ್ರಾಮುಪಜೀವನ್ತಿ** (ಬೃ.೪-೩-೩೨)

529) **ಪ. ಭ. :–** ಕಪಿಲಮೂರ್ತಿಗೆ ಸಂಬಂಧಿಸಿದ ನಾಮಗಳು. (ತೈತ್ತಿರೀಯೋಪನಿಷತ್ತಿನ ಆನಂದವಲ್ಲಿಯಲ್ಲಿ ವಿಚಾರಮಾಡಲ್ಪಡುವ) ಮಾತು ಮತ್ತು ಮನಸ್ಸುಗಳಿಗೆ ಗ್ರಹಿಸಲು ಅಸಾಧ್ಯವಾದ ಮಹಾನಂದ ವುಳ್ಳವನು.
ನಿರುಕ್ತಿ :– **ವಲ್ಲ್ಯಾಮಾನನ್ದಸಂಜ್ಞಾಯಾಮವಾಙ್ಮನಸಗೋಚರಃ ।**
ಆನನ್ದೋ ಯಸ್ಯ ನಿತ್ಯೋಽಸ್ತೀತ್ಯಾನನ್ದಃ ಪರಿಕೀರ್ತಿತಃ ॥

525) **ಸ. ಸಂ. :–** ಆನಂದಸ್ವರೂಪನು ; ಆನಂದವುಳ್ಳವನು.

* * *

527) **ನನ್ದನಃ** = ಆನಂದಗೊಳಿಸುವವನು.

ಶಂ. ಭಾ. :– ಆನಂದಗೊಳಿಸುವವನು.

530) **ಪ. ಭ. :–** (ಮುಕ್ತಿಯಲ್ಲಿ ಮುಕ್ತರನ್ನೂ ಮತ್ತು ನಿತ್ಯರನ್ನೂ) ಪರಮಾನಂದಕ್ಕೆ ಒಯ್ದು ಸದಾ ಆನಂದಗೊಳಿಸುವವನು.

ನಿರುಕ್ತಿ :– ತಮಾನನ್ದಮಥೋಕ್ತಾಯಾಂ ಮುಕ್ತೌ ಪ್ರಾಪಯ್ಯ ಯಃ ಸದಾ ।
ಮುಕ್ತಾನ್ನಿತ್ಯಾನ್ನನ್ದಯತೇ ನನ್ದನಃ ಸ ತು ಕೀರ್ತಿತಃ ॥

526) **ಸ. ಸಂ. :–** ಆನಂದಗೊಳಿಸುವವನು.

* * *

528) **ನನ್ದಃ** = ಸಮೃದ್ಧನಾದವನು.

ಶಂ. ಭಾ. :– ಎಲ್ಲ ಉಪಕರಣಗಳಿಂದಲೂ ಸಮೃದ್ಧನಾದವನು ; **ಅನನ್ದಃ** = ವಿಷಯಸುಖರಹಿತನಾದವನು.

531) **ಪ. ಭ. :–** ಅನಂತವಾದ ಭೋಗ್ಯಗಳಿಂದಲೂ, ಭೋಗೋಪ ಕರಣಗಳಿಂದಲೂ, ಭೋಗಗಳಿಂದಲೂ ಮತ್ತು ಭೋಕ್ತೃಗಳಿಂದಲೂ ಪರಮಪದದಲ್ಲಿ ಸಮೃದ್ಧನಾಗಿರುವವನು.

ನಿರುಕ್ತಿ :– ಭೋಗ್ಯೈರ್ಭೋಗೋಪಕರಣೈರ್ಭೋಗೈರ್ಭೋಕ್ತೃಭಿರೇವ ಚ ।
ತಸ್ಮಿನ್ಸಮೃಧ್ಯತೇ ನಿತ್ಯಮಿತಿ ನನ್ದಃ ಪ್ರಕೀರ್ತಿತಃ ॥

527) **ಸ. ಸಂ. :–** ಸಮೃದ್ಧನಾದವನು.

* * *

529) **ಸತ್ಯಧರ್ಮಾ** = ಸತ್ಯವಾದ ಧರ್ಮ (ನಿಯಮ) ಗಳುಳ್ಳವನು.

ಶಂ. ಭಾ. :– ಸತ್ಯವಾದ ಧರ್ಮ-ಜ್ಞಾನಗಳೇ ಮುಂತಾದ ಧರ್ಮ ಗಳುಳ್ಳವನು.

532) **ಪ. ಭ. :–** ಪ್ರಾರಂಭದಿಂದ ಹಿಡಿದು ತನ್ನನ್ನು ಹೊಂದುವ ವರೆಗೂ ಆರ್ಜವದಿಂದ ಕೂಡಿದ ಅಕುಟಿಲವಾದ ವೃತ್ತವುಳ್ಳವನು.

ನಿರುಕ್ತಿ :– ಆಪ್ರಕ್ರಮಾದಾಸ್ವಪ್ರಾಪ್ತೇಃ ಆರ್ಜವಾತ್ಸತ್ಯವರ್ತನಃ ।
ಯಃ ಸ್ಯಾತ್ಸ ಸತ್ಯಧರ್ಮಾ ಚ ವಸ್ಸ್ವರ್ಣಃ ಸತ್ಯಧರ್ಮದಃ ॥

'ಓಂ ಸತ್ಯಧರ್ಮಣೇ ನಮಃ'–ಈ ನಾಮಮಂತ್ರವನ್ನು ಜಪಿಸಿದರೆ ಸತ್ಯ-ಧರ್ಮಗಳು ಪ್ರಾಪ್ತವಾಗುತ್ತವೆ.

528) **ಸ. ಸಂ. :–** ಸತ್ಯವಾದ ಜ್ಞಾನಾದಿ ಧರ್ಮಗಳುಳ್ಳವನು ; ಸತ್ಯ ವಾದ ಜಗತ್ತನ್ನು ಧರಿಸಿರುವವನು.

* * *

530) **ತ್ರಿವಿಕ್ರಮಃ** = ಮೂರು ಲೋಕಗಳನ್ನೂ ಅಳೆದು ಮೂರು ಮಹತ್ತಾದ ಪಾದವಿನ್ಯಾಸಗಳುಳ್ಳವನು.

ಶಂ. ಭಾ. :– ಮೂರು ಲೋಕಗಳಲ್ಲಿಯೂ ವ್ಯಾಪ್ತವಾದ ಮೂರು ಪಾದವಿನ್ಯಾಸಗಳುಳ್ಳವನು. **ತ್ರೀಣಿ ಪದಾ ವಿಚಕ್ರಮೇ** (ತೈ. ಬ್ರಾ. ೨-೪-೬)

533) **ಪ. ಭ. :–** ತನ್ನ ಮಹಿಮೆಯಿಂದ ಮೂರು ವೇದಗಳನ್ನೂ ಆಕ್ರಮಿಸಿದವನು. **ಸರ್ವೇ ವೇದಾ ಯತ್ರೈಕಂ ಭವನ್ತಿ** (ತೈ. ಆ. ೩)

ತ್ರಿರಿತ್ಯೇವಂ ತ್ರಯೋ ವೇದಾಃ ಕೀರ್ತಿತಾ ಮುನಿಸತ್ತಮೈಃ ।
ಕ್ರಮಸೇ ತಾಂಸ್ತ್ರಿಧಾ ಸರ್ವಾಂಸ್ತ್ರಿವಿಕ್ರಮ ಇತಿ ಶ್ರುತಃ ॥

(ಹರಿವಂಶ ೩-೮೮-೫೧)

ನಿರುಕ್ತಿ :– ತ್ರೀನ್ವೇದಾನ್ಕ್ರಮತೇ ಯೋ ಹಿ ಮಹಿಮ್ನಾ ಸ ತ್ರಿವಿಕ್ರಮಃ ।

529) **ಸ. ಸಂ. :–** ಮೂರು ಪಾದವಿನ್ಯಾಸಗಳುಳ್ಳವನು ; ಮೂರು ಲೋಕಗಳಲ್ಲಿಯೂ ಗರುಡನ ಮೂಲಕ ಪಾದವಿನ್ಯಾಸಮಾಡುವವನು ; ಮೂರು ವೇದಗಳನ್ನೂ, ಕಾಲಗಳನ್ನೂ, ಗುಣಗಳನ್ನೂ, ಲೋಕಗಳನ್ನೂ, ದೇವ-ಮಾನುಷ-ದಾನವರನ್ನೂ, ಚೇತನಾಚೇತನ ಮತ್ತು ದೇಹಾತ್ಮ ಮಿಶ್ರರಾದವರನ್ನೂ ಆಕ್ರಮಿಸಿದವನು. (**ಸತ್ಯಧರ್ಮಾ-ಅತಿವಿಕ್ರಮಃ**) ದತ್ತಾತ್ರೇಯನೇ ಮುಂತಾದ ರೂಪದಿಂದ ಅತ್ರಿಮಹರ್ಷಿಯ ಪರಾಕ್ರಮ ವುಳ್ಳವನು.

* * *

ಮಹರ್ಷಿಃ ಕಪಿಲಾಚಾರ್ಯಃ ಕೃತಜ್ಞೋ ಮೇದಿನೀಪತಿಃ ।
ತ್ರಿಪದಸ್ತ್ರಿದಶಾಧ್ಯಕ್ಷೋ ಮಹಾಶೃಙ್ಗಃ ಕೃತಾನ್ತಕೃತ್ ॥೭೦॥

531) **ಮಹರ್ಷಿಃ ಕಪಿಲಾಚಾರ್ಯಃ : ಮಹರ್ಷಿಃ** = ನಾರಾಯಣ ಮಹರ್ಷಿಯು. **ಮಹರ್ಷಿಃ ಕಪಿಲಾಚಾರ್ಯಃ** = ಸಾಂಖ್ಯಾಚಾರ್ಯನಾದ ಕಪಿಲಮಹರ್ಷಿಯು.

ಶಂ. ಭಾ. :– ಮಹರ್ಷಿಗಳಾದ ಕಪಿಲಾಚಾರ್ಯರು. ಸಂಪೂರ್ಣ ವೇದಗಳನ್ನೂ ಅರಿತ, ಮಹರ್ಷಿಗಳಾದ, ಸಾಂಖ್ಯದ (ಶುದ್ಧಾತ್ಮತತ್ತ್ವವಿಜ್ಞಾ

ನದ) ಆಚಾರ್ಯರಾದ ಕಪಿಲರು. ಸಿದ್ಧಾನಾಂ ಕಪಿಲೋ ಮುನಿಃ ॥ (ಗೀತಾ ೧೦-೨೬)

ಶುದ್ಧಾತ್ಮತತ್ತ್ವವಿಜ್ಞಾನಂ ಸಾಂಖ್ಯಮಿತ್ಯಭಿಧೀಯತೇ ॥ (ಸ್ಮೃತಿಃ)

534) **ಪ. ಭ. :– ಮಹರ್ಷಿಃ** = ಮಂತ್ರ-ವೇದಗಳನ್ನು ಸಾಕ್ಷಾತ್ತಾಗಿ ನೋಡಿದ ಮಹರ್ಷಿಯು.

ನಿರುಕ್ತಿ :– ಸಾಕ್ಷಾದ್ದೃಷ್ಟಾ ಮನ್ತ್ರವೇದಾನ್ಯೋ ಮಹರ್ಷಿಃ ಸ ಚ ಸ್ಮೃತಃ ॥

535) **ಪ. ಭ. :– ಕಪಿಲಾಚಾರ್ಯಃ** = ತತ್ತ್ವಪ್ರವಚನಮಾಡಿದ ಕಪಿಲಾಚಾರ್ಯನು. **ಋಷಿಂ ಪ್ರಸೂತಂ ಕಪಿಲಂ ಮಹಾನ್ತಂ ॥ ಸಾಂಖ್ಯಸ್ಯ ವಕ್ತಾ ಕಪಿಲಃ ಪರಮರ್ಷಿಃ ಸ ಉಚ್ಯತೇ ॥**

ನಿರುಕ್ತಿ :– ತತ್ತ್ವಪ್ರವಚನಾದೇವ ಕಪಿಲಾಚಾರ್ಯ ಉಚ್ಯತೇ ॥

530) **ಸ. ಸಂ. :– ಮಹರ್ಷಿಃ** = ದೊಡ್ಡ ಋಷಿಯು.

531) **ಸ. ಸಂ. :– ಕಪಿಲಾಚಾರ್ಯಃ** = ಸಂಸಾರದ ಕಂಪನವು ಲಯ ಹೊಂದುವುದಕ್ಕೆ ಕಾರಣನಾದವನು ; ಆನಂದಾನುಭವವುಳ್ಳವನು ಮತ್ತು ಎಲ್ಲವನ್ನೂ ತೆಗೆದುಕೊಳ್ಳುವವನು ; ಬ್ರಹ್ಮನನ್ನೂ ಮತ್ತು ರುದ್ರನನ್ನೂ ಲಾಲಿಸುವವನು. **ಮಹರ್ಷಿಃ ಕಪಿಲಾಚಾರ್ಯಃ** = ಎಂಬುದು ಏಕನಾಮ ವೆಂದು ಸಂಪ್ರದಾಯವನ್ನು ಬಲ್ಲವರು ಹೇಳುತ್ತಾರೆ.

* * *

532) **ಕೃತಜ್ಞಃ** = ಭಕ್ತರು ಮಾಡಿದ ಸೇವೆಯನ್ನು ತಿಳಿಯುವವನು ; ಎಲ್ಲರ ಕರ್ಮಗಳನ್ನು ತಿಳಿದವನು.

ಶಂ. ಭಾ. :– ಕಾರ್ಯರೂಪವಾದ ಜಗತ್ತೂ ಮತ್ತು ಆತ್ಮನೂ ಆಗಿರುವವನು.

536) **ಪ. ಭ. :–** ಸಗರನ ಮೊಮ್ಮಗನಾದ ಅಂಶುಮಂತನು ತೋರಿಸಿದ ಅಲ್ಪವಾದ ವಿನಯವೆಂಬ ಸುಕೃತವನ್ನೇ ತನ್ನ ಕರುಣೆಯಿಂದ ತಿಳಿದವನು. **ಕಪಿಲಮುಪಗಮ್ಯ ಭಕ್ತಿನಮ್ರಸ್ತದಾ ತುಷ್ಟಾವ ಸ ಚೈನಂ ಭಗವಾನಾಹ ।** (ವಿ. ಪು. ೪-೪-೨೪)

ನಿರುಕ್ತಿ :– ಸ್ವಾಭಿನಮೃತ್ವಸುಕೃತಂ ಕಿಂಚಿದಂಶುಮತಾ ಕೃತಮ್ ।
ವಿದಿತಂ ಯೇನ ಕಾರುಣ್ಯಾತ್ಕೃತಜ್ಞಃ ಸೋಽಭಿಧೀಯತೇ ॥

532) ಪ. ಸಂ. :– ಮಾಡಿದ್ದನ್ನು ತಿಳಿಯುವವನು.

*　　*　　*

533) ಮೇದಿನೀಪತಿಃ = ಭೂದೇವಿಗೆ ಪತಿಯಾದವನು.

ಶಂ. ಭಾ. :– ಭೂಮಿಗೆ ಪತಿಯಾದವನು.

537) ಪ. ಭ. :– ಕಪಿಲರೂಪವನ್ನು ತಾಳಿ ಭೂಮಿಯನ್ನು ಧರಿಸಿರುವವನು.

ಕಾಪಿಲಂ ರೂಪಮಾಸ್ಥಾಯ ಧಾರಯತ್ಯನಿಶಂ ಧರಾಮ್ ॥

ನಿರುಕ್ತಿ :– ಕಾಪಿಲಂ ರೂಪಮಾಸ್ಥಾಯ ಯೋ ಧಾರಯತಿ ಮೇದಿನೀಮ್।
ಸ ಮೇದಿನೀಪತಿಃ ಖ್ಯಾತೋ ನವಾರ್ಣೋ ಭೂಪ್ರದೋ ಮನುಃ।

'ಓಂ ಮೇದಿನೀಪತಯೇ ನಮಃ' ಈ ನಾಮಮಂತ್ರಜಪದಿಂದ ಭೂಮಿಯು ಸಿಕ್ಕುತ್ತದೆ.

533) ಪ. ಸಂ. :– ಭೂಪತಿಯು.

*　　*　　*

534) ತ್ರಿಪದಃ = ಮೂರು ಹೆಜ್ಜೆಗಳುಳ್ಳವನು.

ಶಂ. ಭಾ. :– ಮೂರು ಪದಗಳುಳ್ಳವನು. ತ್ರೀಣಿ ಪದಾ ವಿಚಕ್ರಮೇ (ತೈ. ಬ್ರಾ. ೨-೪-೬)

538) ಪ. ಭ. :– ಕಪಿಲರೂಪವನ್ನು ತಾಳಿ ತತ್ತ್ವತ್ರಯಗಳೆಂಬ (ಚಿತ್-ಅಚಿತ್-ಈಶ್ವರ) ಮೂರು ಪದಗಳನ್ನು ವ್ಯಕ್ತಪಡಿಸಿದವನು ; (ಅಕಾರ-ಉಕಾರ-ಮಕಾರಗಳೆಂಬ) ಪ್ರಣವದಲ್ಲಿ ಮೂರು ವಾಚಕಪದಗಳುಳ್ಳವನು ; ಯಜ್ಞವರಾಹರೂಪದಲ್ಲಿ ಮೂರು ಹಿಳಲುಗಳುಳ್ಳವನು.

ನಿರುಕ್ತಿ :– ಭೋಕ್ತೃಭೋಗ್ಯನಿಯನ್ತೄಣಿ ಜ್ಞಾಪ್ಯಾನ್ಯಸ್ಯ ಪದಾನಿ ವಾ ।
ಪ್ರಣವೇ ತ್ರೀಣಿ ವಾಚ್ಯಾನಿ ವಾಚಕಾನಿ ಪದಾನಿ ವಾ ॥

ವಾರಾಹರೂಪಸ್ಯಾಸ್ಥಾನೇ ಪದಾನಿ ಕಕುದಾನಿ ವಾ ।
ಯಸ್ಯ ಸನ್ತಿ ಹ್ಯಸೌ ನಿತ್ಯಂ ತ್ರಿಪದಃ ಪರಿಕೀರ್ತಿತಃ ॥

534) **ಸ. ಸಂ. :–** ವೈಕುಂಠ-ಶ್ವೇತದ್ವೀಪ-ಕ್ಷೀರಸಮುದ್ರಗಳೆಂಬ ಮೂರು ಸ್ಥಾನಗಳುಳ್ಳವನು ; ಮೂರು ಗಾಯತ್ರೀಪಾದಗಳಿಂದ ಪ್ರತಿಪಾದಿಸಲ್ಪಡುವವನು ; ಮೂರು ಪಾದಗಳಿಂದ ಕಾಪಾಡುವವನು ಅಥವಾ ಜ್ಞಾನವನ್ನು ಕೊಡುವವನು.

* * *

535) **ತ್ರಿದಶಾಧ್ಯಕ್ಷಃ** = ದೇವತೆಗಳಿಗೆ ಅಧ್ಯಕ್ಷಸ್ವಾಮಿಯಾದವನು ; ಜಾಗ್ರತ್-ಸ್ವಪ್ನ-ಸುಷುಪ್ತಿಗಳೆಂಬ ಮೂರು ಸ್ಥಿತಿಗಳಿಗೆ ಅಧ್ಯಕ್ಷನಾದವನು.

ಶಂ. ಭಾ. :– ಗುಣಗಳ ಆವೇಶದಿಂದ ಉಂಟಾದ ಜಾಗ್ರತ್ತೇ ಮುಂತಾದ ಮೂರು ಅವಸ್ಥೆಗಳಿಗೆ ಸಾಕ್ಷಿಯಾಗಿರುವವನು.

539) **ಪ. ಭ. :–** ಬ್ರಹ್ಮಾದಿದೇವತೆಗಳಿಗೆ ಪ್ರಳಯದ ವಿಪತ್ತಿನಲ್ಲಿ ಗೆಳೆಯನೂ ಅಧ್ಯಕ್ಷಸ್ವಾಮಿಯೂ ಆದವನು.
ನಿರುಕ್ತಿ :– ಸಖಾ ಸ್ಯಾತ್ತ್ರಿದಶಾಧ್ಯಕ್ಷೋ ಬ್ರಹ್ಮಾದೇಃ ಪ್ರಲಯಾಪದಿ ॥

535) **ಸ. ಸಂ. :–** ದೇವತೆಗಳ ಅಧ್ಯಕ್ಷನಾದವನು ; ಜನ್ಮ-ಸ್ಥಿತಿ-ವಿನಾಶಗಳೆಂಬ ಮೂರು ಸ್ಥಿತಿಗಳಿಗೆ ಅಧ್ಯಕ್ಷನಾಗಿರುವವನು.

* * *

536) **ಮಹಾಶೃಙ್ಗಃ** = ಮತ್ಸ್ಯ-ವರಾಹ-ಪ್ರಣವರೂಪಗಳಲ್ಲಿ ದೊಡ್ಡ ಶೃಂಗವುಳ್ಳವನು.

ಶಂ. ಭಾ. :– ಮತ್ಸ್ಯರೂಪಿಯಾಗಿ ತನ್ನ ದೊಡ್ಡ ಕೊಂಬಿಗೆ ಹಡಗನ್ನು ಕಟ್ಟಿಸಿ ಪ್ರಳಯಸಮುದ್ರದಲ್ಲಿ ಲೀಲೆಯನ್ನು ತೋರಿದವನು.

540) **ಪ. ಭ. :–** ವರಾಹರೂಪಿಯು ; ತನ್ನ ಕೊಂಬಿನ ತುದಿಯಲ್ಲಿ ಭೂಮಿಯನ್ನು ಧರಿಸಿದವನು. ಏಕಶೃಙ್ಗೋ ವರಾಹಸ್ತ್ವಂ (ರಾ. ಯು. ೧೨೦-೧೪)
ನಿರುಕ್ತಿ :– ಮಹೀ ಯಸ್ಯ ಚ ಶೃಙ್ಗಾಗ್ರೇ ಮಹಾಶೃಙ್ಗಃ ಸ ಕಥ್ಯತೇ ।

536) **ಸ. ಸಂ. :–** ದೊಡ್ಡ ಪ್ರಾಧಾನ್ಯವುಳ್ಳವನು ; ದೊಡ್ಡ ಜ್ಞಾನವುಳ್ಳವನು ; ಮತ್ಸ್ಯಾವತಾರದಲ್ಲಿ ದೊಡ್ಡ ಕೊಂಬನ್ನು ಹೊಂದಿದ್ದವನು.

* * *

537) **ಕೃತಾನ್ತಕೃತ್** = ಸೃಷ್ಟಿಸಲ್ಪಟ್ಟ ಜಗತ್ತನ್ನು ಧ್ವಂಸಮಾಡುವವನು; ಮೃತ್ಯುವನ್ನು ಕೊಡುವವನು ; ಮೃತ್ಯುವಿಗೂ ಮೃತ್ಯುವಾದವನು.

ಶಂ. ಭಾ. :– ಕಾರ್ಯರೂಪವಾದ ಜಗತ್ತನ್ನು ಸಂಹರಿಸುವವನು ; ಮೃತ್ಯುವನ್ನು ಕತ್ತರಿಸುವವನು.

541) **ಪ. ಭ. :–** ಮೃತ್ಯುವಿಗೆ ಸಮಾನನಾದ ಹಿರಣ್ಯಾಕ್ಷನನ್ನು ಕತ್ತರಿಸಿಹಾಕಿದವನು : ವರಾಹಪುರಾಣ ಮತ್ತು ಸ್ಮೃತಿಗಳಲ್ಲಿ ತನ್ನ ಸಿದ್ಧಾಂತವನ್ನು ತಿಳಿಸಿದವನು.

ನಿರುಕ್ತಿ :– **ಅನ್ತಕಾಭಂ ಹಿರಣ್ಯಾಕ್ಷಂ ಕೃತ್ತವಾನ್ಯಃ ಕೃತಾನ್ತಕೃತ್ ।**
ಸ್ವಸಿದ್ಧಾನ್ತಕರತ್ವಾದ್ವಾ ಸ್ವಾಖ್ಯಸ್ಮೃತಿಪುರಾಣಯೋಃ ।
ಕೃತಾನ್ತಕೃದಿತಿ ಖ್ಯಾತೋ ವಸ್ವರ್ಣೋಽಭೀಷ್ಟದಾಯಕಃ ॥

'ಓಂ ಕೃತಾನ್ತಕೃತೇ ನಮಃ'–ಎಂಬ ನಾಮಮಂತ್ರಜಪವು ಎಲ್ಲ ಅಭೀಷ್ಟಗಳನ್ನೂ ಕೊಡುತ್ತದೆ.

537) **ಸ. ಸಂ. :–** ದುಷ್ಕರ್ಮಗಳನ್ನು ನಾಶಮಾಡುವವನು ; ಪುರುಷರು ಮಾಡಿದ ಕರ್ಮಗಳ ನಿರ್ಣಯವನ್ನು ಮಾಡುವವನು ; ಕರ್ಮಬಂಧವನ್ನುಂಟುಮಾಡುವವನು ; ಬ್ರಹ್ಮಸೂತ್ರಾದಿಗಳನ್ನು ನಿರ್ಮಿಸಿ ಸಿದ್ಧಾಂತವನ್ನು ಮಾಡುವವನು ; ಮೃತ್ಯುವನ್ನು ಧ್ವಂಸಮಾಡುವವನು.

* * *

ಮಹಾವರಾಹೋ ಗೋವಿನ್ದಃ ಸುಷೇಣಃ ಕನಕಾಙ್ಗದೀ ।
ಗುಹ್ಯೋ ಗಭೀರೋ ಗಹನೋ ಗುಪ್ತಶ್ಚಕ್ರಗದಾಧರಃ ॥೭೧॥

538) **ಮಹಾವರಾಹಃ** = ಮಹಾವರಾಹಸ್ವಾಮಿಯು.

ಶಂ. ಭಾ. :– ಮಹಾವರಾಹಸ್ವಾಮಿಯು.

542) **ಪ. ಭ. :–** ಪಾತಾಳದಿಂದ ಭೂಮಿಯನ್ನು ಕ್ಷಣಮಾತ್ರದಲ್ಲಿ ಉದ್ಧಾರಮಾಡಿದ, ಮತ್ತು ಎಣೆಯಿಲ್ಲದ ಮಿಗಿಲಿಲ್ಲದ ವರಾಹಸ್ವಾಮಿಯು.

ನಿರುಕ್ತಿ :– ರಸಾತಲಗತಾಮುರ್ವೀಂ ಯಶ್ಚೋದ್ಧೃತ್ಯೋತ್ಥಿತಃ ಕ್ಷಣಾತ್ ।
ಮಹಾವರಾಹ ಇತಿ ಸಃ ಸ್ಮೃತೋ ಹ್ಯುರ್ವೀಪ್ರದೋ ಮನುಃ॥

'**ಓಂ ಮಹಾವರಾಹಾಯ ನಮಃ**'–ಎಂಬ ನಾಮಮಂತ್ರಜಪದಿಂದ ಭೂಲಾಭವಾಗುತ್ತದೆ.

538) **ಸ. ಸಂ. :–** ದೈತ್ಯಶ್ರೇಷ್ಠರನ್ನು ಸಂಹರಿಸಿದ ಮಹಾತ್ಮನು ; ರುಕ್ಮಿಣೀಸ್ವಯಂವರದ ಸಮಯದಲ್ಲಿ ವರನಾಗಬೇಕೆಂದು ಬಂದಿದ್ದ ಶಿಶುಪಾಲನನ್ನು ಸಂಹರಿಸಿದ ಮಹಾತ್ಮನು ; ಶ್ರೇಷ್ಠರಾದವರಿಂದ ಬಿಡಲ್ಪಡದ ಮಹಾತ್ಮನು ; ಮಹಾವರಾಹಸ್ವಾಮಿಯು ; ಅತಿನೀಚರಾದ ಕಲಿಯೇ ಮುಂತಾದವರನ್ನು ತಮಸ್ಸಿನಲ್ಲಿ ತಳ್ಳಿ ಸಂಹರಿಸುವವನು.

* * *

539) **ಗೋವಿನ್ದಃ** =ಗೋವುಗಳಿಂದ (ವೇದವಾಣಿಗಳಿಂದ) ಹೊಂದಲ್ಪಡುವವನು ; ವೇದವಾಣಿಗಳನ್ನು ತಿಳಿದವನು ; ಹಸುಗಳನ್ನು ಪಡೆದವನು.

ಶಂ. ಭಾ. :– ವೇದವಾಣಿಗಳಿಂದ ಹೊಂದಲ್ಪಡುವವನು ; ವೇದಾಂತ ವಾಕ್ಯಗಳಿಂದ ತಿಳಿಯಲ್ಪಡುವವನು. **ಗೋಭಿರೇವ ಯತೋ ವೇದ್ಯಃ ಗೋವಿನ್ದಃ ಸಮುದಾಹೃತಃ** (ಶ್ರೀವಿಷ್ಣುತಿಲಕ)

543) **ಪ. ಭ. :–** ಹಿಂದೆ ನಷ್ಟವಾಗಿದ್ದ ಭೂಮಿಯನ್ನು ಪಡೆದವನು.
ನಷ್ಟಾಂ ಚ ಧರಣೀಂ ಪೂರ್ವಮವಿನ್ದಂ ಚ ಗುಹಾಂ ಗತಾಮ್ ।
ಗೋವಿನ್ದ ಇತಿ ತೇನಾಹಂ......... (ಮ. ಭಾ. ಶಾಂ. ೩೪೩-೪೧)

ನಿರುಕ್ತಿ :– ನಷ್ಟಾಂ ಚ ಧರಣೀಂ ಪೂರ್ವಂ ಗೋವಿನ್ದೋ ಯಃ ಸ ಲಬ್ಧವಾನ್ ॥

539) **ಸ. ಸಂ. :–** ಸಮುದ್ರವನ್ನು (ಜಲವನ್ನು) ಪಡೆಯುವವನು ; ಧೃತರಾಷ್ಟ್ರನಿಗೆ ಕಣ್ಣುಗಳು ಬರುವಂತೆ ಮಾಡಿದವನು.

* * *

540) **ಸುಷೇಣಃ** = ಶ್ರೇಷ್ಠವಾದ ಸೇನೆಗಳುಳ್ಳವನು ; ವಿಷ್ವಕ್ಸೇನನು ; ಗಣಪತಿಯು.

ಶಂ. ಭಾ. :– ವಸು, ರುದ್ರ–ಮುಂತಾದ ಗಣಗಳ ರೂಪದ ಸೇನೆ ಯುಳ್ಳವನು.

544) **ಪ. ಭ. :–** ಶುದ್ಧಸತ್ತ್ವಮಯವಾಗಿ (ಬದ್ಧ-ಮುಕ್ತ-ನಿತ್ಯರನ್ನು ಜಯಿಸಲು ಉಪಕರಣವಾಗಿರುವುದರಿಂದ) ಸೇನೆಯಂತಿರುವ ಪಂಚೋಪ ನಿಷನ್ಮಯವಾದ ದೇಹವುಳ್ಳವನು.

ನಿರುಕ್ತಿ :– **ಪಞ್ಚೋಪನಿಷದಙ್ಗತ್ವಾತ್ಸುಷೇಣಃ ಪರಿಕೀರ್ತಿತಃ ॥**

540) **ಸ. ಸಂ. :–** ಶೋಭನವಾದ ಸೇನೆಯುಳ್ಳವನು, ಅತಿಶಯವಾಗಿ ದಾನಮಾಡುವವನು.

* * *

541) **ಕನಕಾಙ್ಗದೀ** = ಸ್ವರ್ಣಮಯವಾದ ತೋಳ್ಬಳೆಗಳುಳ್ಳವನು.

ಶಂ. ಭಾ. :– ಚಿನ್ನದ ಅಂಗದಗಳನ್ನು ಧರಿಸಿರುವವನು.

545) **ಪ. ಭ. :–** ಅಪ್ರಾಕೃತವಾದ ತೋಳ್ಬಳೆಗಳೇ ಮುಂತಾದ ದಿವ್ಯ ಭೂಷಣಗಳನ್ನು ಸದಾ ಧರಿಸಿರುವವನು.

ನಿರುಕ್ತಿ :– **ಅಪ್ರಾಕೃತಾನಿ ದಿವ್ಯಾನಿ ಭೂಷಣಾನಿ ಚ ನಿತ್ಯಶಃ ।**
ರತ್ನಾನಿ ಸನ್ತಿ ಯಸ್ಯಾಸೌ ಸೋಽಚ್ಯತೇ ಕನಕಾಙ್ಗದೀ ॥

541) **ಸ. ಸಂ. :–** ಸ್ವರ್ಣಮಯವಾದ ತೋಳ್ಬಳೆಗಳುಳ್ಳವನು.

* * *

542) **ಗುಹ್ಯಃ** = ಬುದ್ಧಿಗುಹೆಯಲ್ಲಿ ನಿಗೂಢನಾಗಿರುವವನು ; ರಹಸ್ಯ ವಿದ್ಯೆಯಿಂದ ತಿಳಿಯಲ್ಪಡುವವನು.

ಶಂ. ಭಾ. :– ಗೋಪ್ಯವಾದ ಉಪನಿಷದ್ವಿದ್ಯೆಯಿಂದ ತಿಳಿಯಲ್ಪಡು ವವನು ; ಹೃದಯಾಕಾಶದಲ್ಲಿ ನಿಗೂಢನಾಗಿರುವವನು.

546) **ಪ. ಭ. :–** ಪಂಚೋಪನಿಷತ್ತಿಗೆ ಮಾತ್ರ ವಿಷಯವಾದ ದಿವ್ಯ ಶರೀರದಿಂದ ನಿಗೂಢನಾಗಿರುವವನು.

ನಿರುಕ್ತಿ :– ಷಣ್ಣ್ಯೋಪನಿಷದಜ್ಞೇನ ಗೂಢತ್ವಾದ್ಗುಹ್ಯ ಉಚ್ಯತೇ ॥

542) **ಸ. ಸಂ. :–** ಗೋಪ್ಯನಾದವನು. ಗುಹ ಎನ್ನುವವನಿಂದ ಪೂಜಿತನಾದವನು.

* * *

543) **ಗಭೀರಃ=** ಗಂಭೀರನಾದವನು. ಆಕಾಶದಲ್ಲಿ ಅಡಗಿರುವವನು.

ಶಂ. ಭಾ. :– ಜ್ಞಾನ, ಐಶ್ವರ್ಯ, ಬಲ, ವೀರ್ಯ–ಮುಂತಾದುವುಗಳಿಂದ ಗಂಭೀರನಾಗಿರುವವನು.

547) **ಪ. ಭ. :–** (ಉಪನಿಷತ್ತುಗಳಿಂದ ಅಭಿವ್ಯಕ್ತವಾದ) ಐಶ್ವರ್ಯದ ಮಹಾಗಾಂಭೀರ್ಯವುಳ್ಳವನು.

ನಿರುಕ್ತಿ :– ಮಹಾಗಾಮ್ಭೀರ್ಯಯುಕ್ತತ್ವಾದ್ಗಭೀರ ಇತಿ ಕಥ್ಯತೇ ॥

543) **ಸ. ಸಂ. :–** ಗಂಭೀರನಾದವನು ; ಗತಿ-ದೀಪ್ತಿಗಳುಳ್ಳವನು ಮತ್ತು ಲಕ್ಷ್ಮಿಯೊಡನೆ ರಮಿಸುವವನು ; **ಅಗಭೀರಃ =** ಅಜ್ಞಾನಿಗಳಿಗೆ (ದೈತ್ಯರಿಗೆ) ಭಯವನ್ನುಂಟುಮಾಡುವವನು ; ಗೋವರ್ಧನಪರ್ವತದಿಂದ ಮಳೆಯ ಭಯವನ್ನು ನಾಶಪಡಿಸಿದವನು.

* * *

544) **ಗಹನಃ =** ಪ್ರವೇಶಿಸಲು ಕಷ್ಟಸಾಧ್ಯನಾಗಿರುವವನು.

ಶಂ. ಭಾ. :– ಪ್ರವೇಶಿಸಲು ಅತಿಕಷ್ಟಸಾಧ್ಯನಾದವನು ಅಥವಾ ಮೂರು ಅವಸ್ಥೆಗಳ ಭಾವ ಮತ್ತು ಅಭಾವಗಳಿಗೆ ಸಾಕ್ಷಿಯಾಗಿರುವವನು.

548) **ಪ. ಭ. :–** ಅಜ್ಞಾನಿಗಳಿಗೆ ಅವಗಾಹನೆಮಾಡಲು ಕಷ್ಟಸಾಧ್ಯನಾಗಿರುವವನು.

ನಿರುಕ್ತಿ :– ಬಾಲೈರ್ದುರವಗಾಹತ್ವಾದ್ಗಹನಃ ಪರಿಕೀರ್ತಿತಃ ॥

544) **ಸ. ಸಂ. :–** ತಿಳಿಯಲು ಅಶಕ್ಯನಾದವನು ; ಇಂದ್ರನನ್ನು ನಡೆಸುವವನು.

* * *

545) **ಗುಪ್ತಃ =** ಗೂಢವಾಗಿರುವವನು.

ಶಂ. ಭಾ. :– ವಾಕ್ ಮತ್ತು ಮನಸ್ಸುಗಳಿಗೆ ಅಗೋಚರನಾದವನು.

ಏಷ ಸರ್ವೇಷು ಭೂತೇಷು ಗೂಢೋಽತ್ಮಾ ನ ಪ್ರಕಾಶತೇ ॥

(ಕಠ ೩-೧೨)

549) **ಪ. ಭ. :–** ತನ್ನ ಗೌರವವನ್ನು ಬಲ್ಲ ಪೂರ್ವಗುರುಗಳಿಂದ ಸುರಕ್ಷಿತನಾಗಿರುವವನು ; ಇತರರಿಗೆ ತಿಳಿಯಲು ಅಸಾಧ್ಯನಾದವನು.
ನಿರುಕ್ತಿ :– **ಅನ್ಯೈರ್ದುರವಬೋಧೋ ಯಃ ಗುಪ್ತ ಇತ್ಯಭಿಧೀಯತೇ ॥**

545) **ಸ. ಸಂ. :–** ಅಯೋಗ್ಯಜನರ ವಿಷಯದಲ್ಲಿ ಆವರಣವುಳ್ಳವನು.

* * *

546) **ಚಕ್ರಗದಾಧರಃ** = ತತ್ತ್ವರೂಪವಾದ ಸುದರ್ಶನಚಕ್ರವನ್ನೂ ಮತ್ತು ಕೌಮೋದಕಿಯೆಂಬ ಗದೆಯನ್ನೂ ಧರಿಸಿರುವವನು.

ಶಂ. ಭಾ. :– ಮನಸ್ತತ್ತ್ವರೂಪವಾದ ಚಕ್ರವನ್ನೂ ಮತ್ತು ಬುದ್ಧಿ ತತ್ತ್ವರೂಪವಾದ ಗದೆಯನ್ನೂ ಧರಿಸಿರುವವನು.

ಮನಸ್ತತ್ತ್ವಾತ್ಮಕಂ ಚಕ್ರಂ ಬುದ್ಧಿತತ್ತ್ವಾತ್ಮಿಕಾಂ ಗದಾಮ್ ।
ಧಾರಯಲ್ಲೋಕರಕ್ಷಾರ್ಥಮುಕ್ತಃ ಚಕ್ರಗದಾಧರಃ ॥

550) **ಪ. ಭ. :–** ಪಂಚಶಕ್ತಿಮಯವಾದ ಚಕ್ರ-ಗದೆಗಳೇ ಮುಂತಾದ ನಿತ್ಯದಿವ್ಯಾಯುಧಗಳುಳ್ಳವನು.
ನಿರುಕ್ತಿ :– **ಯಃ ಶಕ್ತಿಮದ್ದಿವ್ಯಹೇತಿಃ ಸಃ ಸ್ಯಾಚ್ಚಕ್ರಗದಾಧರಃ ॥**

546) **ಸ. ಸಂ. :–** ಚಕ್ರ-ಗದೆಗಳನ್ನು ಧರಿಸಿರುವವನು ; ನರಕಾಸುರಾದಿಗಳನ್ನು ಖಂಡಿಸುವವನು ಮತ್ತು ಧಾರಕರಿಲ್ಲದವನು ; ಚೆನ್ನಾಗಿ ಧರಿಸುವವನು.

ವೇಧಾಃ ಸ್ವಾಙ್ಗೋಽಜಿತಃ ಕೃಷ್ಣೋ ದೃಢಃ ಸಂಕರ್ಷಣೋಽಚ್ಯುತಃ ।
ವರುಣೋ ವಾರುಣೋ ವೃಕ್ಷಃ ಪುಷ್ಕರಾಕ್ಷೋ ಮಹಾಮನಾಃ ॥೬೨॥

547) **ವೇಧಾಃ** = ಸೃಷ್ಟಿಕರ್ತನು ; ವಿಧಾನಮಾಡುವವನು.

ಶಂ. ಭಾ. :– ವಿಧಾನಮಾಡುವವನು.

551) ಪ. ಭ. :– ವಿವಿಧವಾದ ಅನಂತಮಹಾವೈಭವಕಲ್ಯಾಣವನ್ನು ಭಕ್ತರಿಗೆ ಯಾವಾಗಲೂ ಉಂಟುಮಾಡುವವನು.

ನಿರುಕ್ತಿ :– ಮಹಾವಿಭವಕಲ್ಯಾಣಂ ಸತತಂ ವಿದಧಾತಿ ಯಃ ।
ಭಕ್ತೇಭ್ಯಃ ಪರಮಂ ವೇಧಾಃ ಷಡರ್ಣೋ ಮಙ್ಗಲಪ್ರದಃ ॥

'ಓಂ ವೇಧಸೇ ನಮಃ'–ಎಂಬ ನಾಮಮಂತ್ರಜಪವು ಮಂಗಳಪ್ರದವು.

547) ಸ. ಸಂ. :– ವಿಶೇಷವಾಗಿ ಧಾರಣ-ಪೋಷಣೆಗಳನ್ನು ಮಾಡುವವನು.

* * *

548) ಸ್ವಾಙ್ಗಃ = ಸೃಷ್ಟಿ-ಸ್ಥಿತಿ-ಲಯಾದಿ ವ್ಯಾಪಾರಗಳನ್ನು ಮಾಡುವಾಗ ತನಗೆ ತಾನೇ ಅಂಗವಾಗಿರುವವನು ; ಬೇರೆ ಯಾವ ಸಹಕಾರಿಗಳೂ ಇಲ್ಲದವನು.

ಶಂ. ಭಾ. :– ಕೆಲಸವನ್ನು ಮಾಡುವುದರಲ್ಲಿ ತಾನೇ ಅಂಗವಾಗಿರುವವನು. (ಸಹಕಾರಿಯಾಗಿರುವವನು.)

552) ಪ. ಭ. :– ತನ್ನ ಅಸಾಧಾರಣ ಅಂಗಗಳಾದ, ನಿತ್ಯವಾದ ಛತ್ರ-ಚಾಮರಗಳೇ ಮುಂತಾದ ಸರ್ವಸಾಮ್ರಾಜ್ಯದ ಗುರುತುಗಳುಳ್ಳವನು.

ನಿರುಕ್ತಿ :– ಸ್ವಾಸಾಧಾರಣಮಙ್ಗಂ ಹಿ ಛತ್ರಾದಿಪರಿಬರ್ಹಣಮ್ ।
ಯಸ್ಯಾಸ್ತಿ ನಿತ್ಯಂ ಸಃ ಸ್ವಾಙ್ಗಃ ಷಡರ್ಣಃ ಪರಿವಾರದಃ ॥

'ಓಂ ಸ್ವಾಙ್ಗಾಯ ನಮಃ'–ಎಂಬ ನಾಮಮಂತ್ರಜಪವು ಪರಿವಾರವನ್ನು ಅನುಗ್ರಹಿಸುತ್ತದೆ.

548) ಸ. ಸಂ. :– ಸ್ವರೂಪಭೂತವಾದ ಅಥವಾ ಸ್ವತಂತ್ರವಾದ ಅಂಗಗಳುಳ್ಳವನು ; ಸೃಷ್ಟಿಯೇ ಮುಂತಾದುವುಗಳಲ್ಲಿ ತಾನೇ ಅಂಗವಾಗಿರುವವನು.

* * *

549) ಅಜಿತಃ= ಸರ್ವೋತ್ಕೃಷ್ಟನಾದವನು ; ಯಾರಿಂದಲೂ ಗೆಲ್ಲಲು ಆಗದವನು.

ಶಂ. ಭಾ. :– ತನ್ನ ಅವತಾರಗಳಲ್ಲಿ ಯಾರಿಂದಲೂ ಜಯಿಸಲ್ಪಡದವನು.

553) **ಪ. ಭ. :–** ಪ್ರಾಕೃತರೆಲ್ಲರಿಗೂ ಅಸಾಧ್ಯವಾದ 'ಅಜಿತಾ'–ಎಂಬ ಪರಮವೈಕುಂಠಪುರಿಯುಳ್ಳವನು.

ಪುರಂ ಹಿರಣ್ಮಯೀಂ ಬ್ರಹ್ಮಾ ವಿವೇಶಾಪರಾಜಿತಾ ॥ (ತೈ. ಆ.)

ನಿರುಕ್ತಿ :– ಪ್ರಾಕೃತೈರ್ನ ಜಿತಾ ಯಾ ಸಾ ಯಸ್ಯಾಸ್ತ್ಯಜಿತಾ ಪುರೀ ।
ಅಜಿತಸ್ತೇನ ವಿಜ್ಞೇಯಃ ಸಪ್ತಾರ್ಣೋ ಮುಕ್ತಿದೋ ಮನುಃ ॥

'ಓಂ ಅಜಿತಾಯ ನಮಃ'–ಎಂಬ ನಾಮಮಂತ್ರಜಪವು ಮುಕ್ತಿದಾಯಕವು.

549) **ಸ. ಸಂ. :–** ಯಾರಿಂದಲೂ ಪರಾಜಿತನಾಗದವನು.

* * *

550) **ಕೃಷ್ಣಃ** = ನೀಲವರ್ಣವುಳ್ಳವನು ; ಎಲ್ಲರನ್ನೂ ಆಕರ್ಷಣೆ ಮಾಡುವವನು ; ಎಲ್ಲರನ್ನೂ ಉಪಸಂಹಾರಮಾಡುವವನು ; ಸದಾನಂದ ಸ್ವರೂಪಿಯು ; ಕೃಷ್ಣದ್ವೈಪಾಯನವ್ಯಾಸರೂಪಿಯು.

ಶಂ. ಭಾ. :– ಕೃಷ್ಣದ್ವೈಪಾಯನಸ್ವರೂಪಿಯು.

ಕೃಷ್ಣದ್ವೈಪಾಯನಂ ವ್ಯಾಸಂ ವಿದ್ಧಿ ನಾರಾಯಣಂ ಪ್ರಭುಮ್ ।
ಕೋ ಹ್ಯನ್ಯಃ ಪುಣ್ಡರೀಕಾಕ್ಷಾನ್ಮಹಾಭಾರತಕೃದ್ಭವೇತ್ ॥
(ವಿ. ಪು. ೩-೪-೫)

554) **ಪ. ಭ. :–** ಅಪ್ರಾಕೃತವೂ, ಅತಿಮನೋಹರವೂ ಆದ ಕೃಷ್ಣ ವರ್ಣವುಳ್ಳವನು.

ಕೃಷ್ಣೋ ವರ್ಣಶ್ಚ ಮೇ ಯಸ್ಮಾತ್ತೇನ ಕೃಷ್ಣೋಽಹಮರ್ಜುನ ॥
ನಿರುಕ್ತಿ :– ಅಪ್ರಾಕೃತಾತಿರುಚಿರಮೇಚಕಃ ಕೃಷ್ಣ ಈರಿತಃ ॥

550) **ಸ. ಸಂ. :–** ನೀಲವರ್ಣವುಳ್ಳವನು.

* * *

551) **ದೃಢಃ** = ಚ್ಯುತಿಯಿಲ್ಲದವನು ; ಬಲಶಾಲಿಯು.

ಶಂ. ಭಾ. :– ಚ್ಯುತಿಯಿಲ್ಲದ ಸ್ವರೂಪ-ಸಾಮರ್ಥ್ಯಗಳೇ ಮುಂತಾದುವುಗಳುಳ್ಳವನು.

555) **ಪ. ಭ. :–** ಉಪಾಸಕರ ಅನುಗ್ರಹಕ್ಕೋಸ್ಕರ ವ್ಯೂಹದಲ್ಲಿಯೂ ಕೂಡ ಸ್ಥೂಲವಾಗಿ ಕಾಣುವವನು ; ಸ್ಥೂಲತ್ವ ಮತ್ತು ಬಲವತ್ತ್ವಗಳುಳ್ಳವನು.
ನಿರುಕ್ತಿ :– ಸ್ಥೂಲತ್ವಾದ್ಬಲವತ್ತ್ವಾಚ್ಚ ದೃಢ ಇತ್ಯಭಿಧೀಯತೇ ॥

551) **ಸ. ಸಂ. :–** ದಾರ್ಢ್ಯವುಳ್ಳವನು.

* * *

552) **ಸಙ್ಕರ್ಷಣೋಽಚ್ಯುತಃ** = ಎಲ್ಲ ಪ್ರಾಣಿಗಳನ್ನೂ ಸಂಹಾರ ಕಾಲದಲ್ಲಿ ತನ್ನಲ್ಲಿಗೇ ಎಳೆದುಕೊಳ್ಳುವವನು ಮತ್ತು ಸ್ವರೂಪ-ಸ್ಥಾನ-ಸಂಕಲ್ಪಾದಿಗಳಲ್ಲಿ ಚ್ಯುತಿಯಿಲ್ಲದವನು.

ಶಂ. ಭಾ. :– ಸಂಹಾರಸಮಯದಲ್ಲಿ ಎಲ್ಲ ಪ್ರಜೆಗಳನ್ನೂ ಒಟ್ಟಿಗೆ ಎಳೆದುಕೊಳ್ಳುವವನು ಮತ್ತು ತನ್ನ ಸ್ವರೂಪದಿಂದ ಚ್ಯುತನಾಗದವನು.

556) **ಪ. ಭ. :– ಸಙ್ಕರ್ಷಣಃ** = ಚಿತ್ ಮತ್ತು ಅಚಿತ್ತುಗಳನ್ನು ತನ್ನಲ್ಲಿಗೆ ಸಮನಾಗಿ ಎಳೆದುಕೊಳ್ಳುವವನು.

ಯಃ ಕರ್ಷತೇ ಚಿದಚಿತೌ ಸ ಸಙ್ಕರ್ಷಣ ಉಚ್ಯತೇ ॥

557) **ಪ. ಭ. :– ಅಚ್ಯುತಃ** = ವ್ಯೂಹದಲ್ಲಿಯೂ ಕೂಡ ತನ್ನ ಸ್ಥಾನದಿಂದ ಭ್ರಷ್ಟನಾಗದವನು.
ನಿರುಕ್ತಿ :– ಬ್ರಹ್ಮಾದಿವನ್ನ ಚ್ಯವತೇ ಸ್ಥಾನಾದಿತ್ಯಚ್ಯುತಃ ಸ್ಮೃತಃ ॥

552) **ಸ. ಸಂ. :– ಸಙ್ಕರ್ಷಣಃ** = ಚೆನ್ನಾಗಿ ಎಳೆಯಲ್ಪಟ್ಟವನು.

553) **ಸ. ಸಂ. :– ಅಚ್ಯುತಃ**= ಚ್ಯುತಿಯಿಲ್ಲದವನು.

* * *

553) **ವರುಣಃ** = ಆವರಿಸಿರುವವನು ; ಜಲಕ್ಕೂ, ಅಪಾನಕ್ಕೂ, ರಾತ್ರಿಗೂ ಅಧಿದೇವತೆಯಾದ ವರುಣರೂಪಿಯು.

ಶಂ. ಭಾ. :– ತನ್ನ ಕಿರಣಗಳನ್ನು ಸಾಯಂಕಾಲದಲ್ಲಿ ಉಪಸಂಹಾರ ಮಾಡಿಕೊಳ್ಳುವ ಸೂರ್ಯರೂಪಿಯು. **ಇಮಂ ಮೇ ವರುಣಶ್ರುಧೀ ಹವಂ** (ತೈ. ಸಂ. ೨-೧-೧೧)

558) **ಪ. ಭ. :–** ಎಲ್ಲವನ್ನೂ ಆವರಿಸುವವನು.

ನಿರುಕ್ತಿ :– ಯಃ ಸ್ಥಿತಃ ಸರ್ವಮಾವೃತ್ಯ ವರುಣಃ ಸ ತು ಕಥ್ಯತೇ ॥

554) **ಸ. ಸಂ. :–** ಆವರಿಸುವವನು ; ಉತ್ತಮಜೀವನನ್ನು ಮೇಲಕ್ಕೆ ಒಯ್ಯುವವನು ; ಉತ್ತಮವಾದ ಆನಂದವುಳ್ಳವನು.

ಆವೃಣೋತೀತಿ ವರುಣಸ್ತಮಸಾಽಜ್ಞಾನತೋಽಪಿ ವಾ ।
ವರಮುನ್ನಯತೀತ್ಯಸ್ಮಾದ್ವರಾನನ್ದತ್ವತೋಽಪಿ ವಾ ॥ (ಋಗ್ಭಾಷ್ಯ)

ಭಕ್ತರಿಂದ ವರಿಸಲ್ಪಡುವವನು ; ಭಕ್ತರನ್ನು ವರಿಸುವವನು.

* * *

554) **ವಾರುಣಃ** = ವರುಣನ ಮಗನು ; ಅಗಸ್ತ್ಯರೂಪಿಯು ಅಥವಾ ವಸಿಷ್ಠರೂಪಿಯು.

ಶಂ. ಭಾ. :– ವರುಣಪುತ್ರನಾದ ವಸಿಷ್ಠರೂಪಿಯು ಅಥವಾ ಅಗಸ್ತ್ಯ ಸ್ವರೂಪಿಯು.

559) **ಪ. ಭ. :–** ತನ್ನನ್ನು ಸ್ವಾಮಿಯನ್ನಾಗಿ ಯಾರು ವರಿಸು ತ್ತಾರೆಯೋ–ಅಂತಹ ಉಪಾಸಕನಲ್ಲಿರುವವನು. **ತೇಷು ಚಾಪ್ಯಹಂ (ಗೀತಾ. ೨೯-೯)** ಜಲದಲ್ಲಿರುವವನು.

ನಿರುಕ್ತಿ :– ಸ್ವಾಮಿತ್ವೇನ ವೃಣಾನೇಷು ಸ್ಥಿತೋ ವಾರುಣ ಈರಿತಃ ॥

555) **ಸ. ಸಂ. :–** ಜ್ಞಾನಿಯು ಮತ್ತು ಅರುಣರೂಪಿಯಾದವನು ; ವರುಣನಿಗೆ ಸಂಬಂಧಪಟ್ಟವನು ; **ವಾರಣಃ** = ಭಕ್ತರ ಅನಿಷ್ಟವನ್ನು ನಿವಾರಿಸು ವವನು ; ಸಮುದ್ರಕ್ಕೆ ಸುಖವನ್ನುಂಟುಮಾಡುವವನು ; ಶ್ರೇಷ್ಠನಾದವನು.

* * *

555) **ವೃಕ್ಷಃ** = ವೃಕ್ಷಸದೃಶನು ; ವೃಕ್ಷದಂತೆ ಅಚಲನಾಗಿರುವವನು ; ವೃಕ್ಷದಂತೆ ಆಶ್ರಯನಾಗಿರುವವನು ; ಇಷ್ಟಾರ್ಥಗಳನ್ನು ದಯಪಾಲಿಸು ವವನು ; ಮಹಾವೃಕ್ಷಸ್ವರೂಪನು.

ಶಂ. ಭಾ. :– ವೃಕ್ಷದಂತೆ ಅಚಲನಾಗಿರುವವನು. **ವೃಕ್ಷ ಇವ ಸ್ತಬ್ಧೋ ದಿವಿ ತಿಷ್ಠತ್ಯೇಕಃ (ಶ್ವೇ. ೩-೯)**

560) **ಪ. ಭ. :–** ವೃಕ್ಷದಂತೆ ಸಾಧುಗಳಿಗೆ ಆಶ್ರಯನಾಗಿರುವವನು ; ಎಲ್ಲರಿಗೂ ಎಲ್ಲ ವಿಷಯಗಳಲ್ಲಿಯೂ ಉಪಜೀವ್ಯನಾಗಿರುವವನು ; ಎಲ್ಲ ಪಾಪಗಳನ್ನೂ ಸಹಿಸುವವನು. **ನಿವಾಸವೃಕ್ಷಃ ಸಾಧೂನಾಂ ಆಪನ್ನಾನಾಂ ಪರಾ ಗತಿಃ॥** (ರಾ. ಕಿ. ೧೫-೧೯) **ಸಮಾಶ್ರಿತಾದ್ಬ್ರಹ್ಮತರೋರನನ್ತಾತ್** (ವಿ. ಪು. ೧.೧೭.೯)

ನಿರುಕ್ತಿ :– **ಸಾಧೂನಾಮಾಶ್ರಯತ್ವಾಚ್ಚ ಸರ್ವೈನಃಸಹನಾದಪಿ ।**
ಸರ್ವಸತ್ತ್ವೋಪಜೀವ್ಯತ್ವಾದ್ವೃಕ್ಷ ಇತ್ಯಭಿಧೀಯತೇ ॥

556) **ಸ. ಸಂ. :–** ಭಕ್ತರಿಗೆ ಅಭೀಷ್ಟವನ್ನು ದಯಪಾಲಿಸುವ ವಿಷಯದಲ್ಲಿ ಕಲ್ಪವೃಕ್ಷಕ್ಕೆ ಸದೃಶನಾದವನು ; ಆವರಿಸುವವನು. **ಅವೃಕ್ಷಃ** = ಕತ್ತರಿಸುವವರು ಇಲ್ಲದವನು.

* * *

556) **ಪುಷ್ಕರಾಕ್ಷಃ** = ಕಮಲಸದೃಶವಾದ ಕಣ್ಣುಗಳುಳ್ಳವನು ; ಹೃದಯಕಮಲದಲ್ಲಿ ಪ್ರಕಾಶಿಸುವವನು.

ಶಂ. ಭಾ. :– ಹೃದಯಕಮಲದಲ್ಲಿ ವ್ಯಾಪ್ತಿಯುಳ್ಳವನು ; ಧ್ಯಾನಿಸಿದಾಗ ಸ್ವರೂಪದಿಂದ ಪ್ರಕಟವಾಗುವವನು.

561) **ಪ. ಭ. :–** ಅನುಗ್ರಹವನ್ನು ವರ್ಷಿಸುತ್ತಾ ಸತ್ಪುರುಷರನ್ನು ಪೋಷಿಸುವ ಕಣ್ಣುಗಳುಳ್ಳವನು.

ನಿರುಕ್ತಿ :– **ಸತಾಂ ಪ್ರಸಾದವರ್ಷೇಣ ಪೋಷಕೇ ಯಸ್ಯ ಚಾಕ್ಷಿಣೀ ।**
ಪುಷ್ಕರಾಕ್ಷಃ ಸ ವಿಜ್ಞೇಯೋ ಹ್ಯಷ್ಟಾರ್ಣಃ ಪ್ರೀತಿವರ್ಧಕಃ ॥

'ಓಂ ಪುಷ್ಕರಾಕ್ಷಾಯ ನಮಃ'–ಎಂಬ ನಾಮಮಂತ್ರಜಪವು ಪ್ರೀತಿಯನ್ನು ಹೆಚ್ಚಿಸುತ್ತದೆ.

557) **ಸ. ಸಂ. :–** ಕಮಲನಯನನು.

* * *

557) **ಮಹಾಮನಾಃ** = ದೊಡ್ಡ ಮನಸ್ಸುಳ್ಳವನು ; ಮಹಾತ್ಮನು ; ಎಲ್ಲವನ್ನೂ ವ್ಯಾಪಿಸಿ ರಕ್ಷಿಸುವ ಉದಾರವಾದ ಮನಸ್ಸುಳ್ಳವನು.

ಶಂ. ಭಾ. :– ಸೃಷ್ಟಿ-ಸ್ಥಿತಿ-ಸಂಹಾರಕರ್ಮಗಳನ್ನು ಮನಸ್ಸಿನಿಂದಲೇ ಮಾಡುವವನು. **ಮನಸೈವ ಜಗತ್ಸೃಷ್ಟಿಂ ಸಂಹಾರಂ ಚ ಕರೋತಿ ಯಃ । (ವಿ. ಪು. ೫-೨೩-೧೫)**

562) **ಪ. ಭ. :–** ಅಗಾಧವೂ, ಉದಾರವೂ, ವಿಸ್ತಾರವೂ ಆದ ಮನಸ್ಸುಳ್ಳವನು.
ನಿರುಕ್ತಿ :– **ಅಗಾಧೋದಾರವಿಸ್ತಾರಂ ಮನೋ ಯಸ್ಯ ಮಹಾಮನಾಃ ॥**

558) **ಸ. ಸಂ. :–** ಮಹತ್ತಾದ ಚಿತ್ತ ಅಥವಾ ಜ್ಞಾನವುಳ್ಳವನು.

*　　*　　*

ಭಗವಾನ್ಭಗಹಾನನ್ದೀ ವನಮಾಲೀ ಹಲಾಯುಧಃ ।
ಆದಿತ್ಯೋ ಜ್ಯೋತಿರಾದಿತ್ಯಃ ಸಹಿಷ್ಣುರ್ಗತಿಸತ್ತಮಃ ॥೭೩॥

558) **ಭಗವಾನ್** = ಷಡ್ಗುಣೈಶ್ವರ್ಯಸಂಪನ್ನನಾದವನು. (ಜ್ಞಾನ-ವೈರಾಗ್ಯ-ಬಲ-ಐಶ್ವರ್ಯ-ಶಕ್ತಿ-ತೇಜಸ್ಸು ಇವು ಷಡ್ಗುಣಗಳು. ಅಣಿಮಾ-ಮಹಿಮಾ-ಗರಿಮಾ-ಲಘಿಮಾ-ಪ್ರಾಪ್ತಿ-ಪ್ರಾಕಾಮ್ಯ-ಈಶಿತ್ವ ಮತ್ತು ವಶಿತ್ವ– ಇವು ಅಷ್ಟೈಶ್ವರ್ಯಗಳು).

ಶಂ. ಭಾ. :– ಸಮಗ್ರವಾದ ಐಶ್ವರ್ಯ, ಧರ್ಮ, ಯಶಸ್ಸು, ಸಂಪತ್ತು ಜ್ಞಾನ ಮತ್ತು ವೈರಾಗ್ಯಗಳುಳ್ಳವನು ; ಭೂತಗಳ ಉತ್ಪತ್ತಿ, ಪ್ರಳಯ, ಗತ್ಯಾಗತಿಗಳು, ವಿದ್ಯೆ ಮತ್ತು ಅವಿದ್ಯೆ–ಇವುಗಳನ್ನು ಬಲ್ಲವನು.

ಐಶ್ವರ್ಯಸ್ಯ ಸಮಗ್ರಸ್ಯ ಧರ್ಮಸ್ಯ ಯಶಸಃ ಶ್ರಿಯಃ ।
ಜ್ಞಾನವೈರಾಗ್ಯಯೋಶ್ಚೈವ ಷಣ್ಣಾಂ ಭಗ ಇತೀರಣಾ ॥
(ವಿಷ್ಣು ೬-೫-೭೪)

ಉತ್ಪತ್ತಿಂ ಪ್ರಲಯಂ ಚೈವ ಭೂತಾನಾಮಾಗತಿಂ ಗತಿಮ್ ।
ವೇತ್ತಿ ವಿದ್ಯಾಮವಿದ್ಯಾಂ ಚ ಸ ವಾಚ್ಯೋ ಭಗವಾನಿತಿ ॥

(ವಿ. ಪು.೬-೫-೭೮)

563) **ಪ. ಭ. :–** ಸಮಸ್ತದೋಷಗಳಿಗೂ ವಿರೋಧಿಯಾದ ಕಲ್ಯಾಣ ಗುಣಗಳಿಂದ ಕೂಡಿ ಪೂಜ್ಯತಮನಾದವನು.

ನಿರುಕ್ತಿ :– ಸರ್ವಹೇಯಪ್ರತ್ಯನೀಕಕಲ್ಯಾಣಗುಣವತ್ತಯಾ ।
ಪೂಜ್ಯಾತ್ಪೂಜ್ಯತರೋ ಯೋಽಸೌ ಭಗವಾನಿತಿ ಶಬ್ದ್ಯತೇ ॥

559) **ಸ. ಸಂ. :–**ಐಶ್ವರ್ಯವೇ ಮುಂತಾದ ಆರು ಗುಣಗಳುಳ್ಳವನು; ಭಗವತ್ಪದಕ್ಕೆ ತಾನೊಬ್ಬನೇ ಅರ್ಥವಾಗಿರುವವನು.

* * *

559) **ಭಗಹಾ** = ದೈತ್ಯರ ಐಶ್ವರ್ಯವನ್ನು ನಾಶಮಾಡುವವನು ; ಭೌತಿಕವಾದ ಐಶ್ವರ್ಯವನ್ನು ನಾಶಮಾಡುವವನು ; ಸಂಹಾರಸಮಯದಲ್ಲಿ ಎಲ್ಲರ ಐಶ್ವರ್ಯವನ್ನೂ ನಾಶಮಾಡುವವನು.

ಶಂ. ಭಾ. :– ಸಂಹಾರಸಮಯದಲ್ಲಿ ಐಶ್ವರ್ಯವೇ–ಮುಂತಾದುವುಗಳನ್ನು ಧ್ವಂಸಮಾಡುವವನು.

564) **ಪ. ಭ. :–** ಕಲ್ಯಾಣಗುಣಗಳಿಂದ ಯಾವಾಗಲೂ ಎಲ್ಲರನ್ನೂ ಹೊಂದುವವನು.

ನಿರುಕ್ತಿ :– ಭಗೈಸ್ತು ಕಲ್ಯಾಣಗುಣೈಃ ಸರ್ವಂ ಸರ್ವತ್ರ ಗಚ್ಛತಿ ।
ಯಶ್ಚಾಸೌ ಭಗಹಾ ಪ್ರೋಕ್ತಃ ಷಡರ್ಣಃ ಸುಖದಾಯಕಃ ॥

'ಓಂ ಭಗಘ್ನೇ ನಮಃ'–ಎಂಬ ಈ ನಾಮಮಂತ್ರಜಪವು ಸುಖದಾಯಕವು.

560) **ಸ. ಸಂ. :–** ದೈತ್ಯರ ಐಶ್ವರ್ಯವನ್ನು ನಾಶಮಾಡುವವನು. (ಸೂರ್ಯ-ಚಂದ್ರರನ್ನು ಕುರಿತು ಹೋಗುವ) ರಾಹುವನ್ನು ಸಂಹರಿಸುವವನು.

* * *

560) **ಆನನ್ದೀ ; ನನ್ದೀ** = ಪರಮಾನಂದವುಳ್ಳವನು. ಸರ್ವಸಂಪತ್ತುಗಳಿಂದ ಪೂರ್ಣನಾದವನು.

ಶಂ. ಭಾ. : ಆನನ್ದೀ = ಸುಖಸ್ವರೂಪನು ; ಸಮಸ್ತಸಂಪತ್ತುಗಳಿಂದ ಸಂಪನ್ನನಾದವನು.

565) **ಪ. ಭ. :–** ನನ್ದೀ = ನಂದಗೋಪನನ್ನು ತಂದೆಯನ್ನಾಗಿ ಹೊಂದಿದವನು ; ಗೋಪಸ್ತ್ರೀಯರ ಸೇವೆಯ ಆನಂದವನ್ನು ಪಡೆದವನು.

ನಿರುಕ್ತಿ :– ನನ್ದಗೋಪೇನ ಪಿತೃಮಾನ್ನನ್ದೀತಿ ಪರಿಗೀಯತೇ ॥

561) ಸ. ಸಂ. :– ಆನನ್ದೀ = ಆನಂದವುಳ್ಳವನು.

* * *

561) ವನಮಾಲೀ = ಭೂತಸೂಕ್ಷ್ಮಗಳ ಮಾಲೆಯಾದ ವೈಜಯಂತೀ ವನಮಾಲೆಯನ್ನು ಧರಿಸಿರುವವನು.

ಶಂ. ಭಾ. :– ಭೂತತನ್ಮಾತ್ರರೂಪವಾದ 'ವೈಜಯಂತೀ' ಎಂಬ ವನ ಮಾಲೆಯನ್ನು ಧರಿಸಿದವನು.

566) ಪ. ಭ. :– ತನ್ನಿಂದ ಸೃಷ್ಟಿಸಲ್ಪಡುವ ಭೂತಸೂಕ್ಷ್ಮಗಳ ಸಾರಸೌಲಭ್ಯಗಳಿಗೆ ಅಭಿಮಾನಿಯಾದ ವೈಜಯಂತೀ–ಎಂಬ ವನಮಾಲೆ ಯನ್ನು ಸದಾ ಧರಿಸಿರುವವನು.

ನಿರುಕ್ತಿ :– ಸ್ವಸೃಜ್ಯಭೂತಸೂಕ್ಷ್ಮಾಣಾಂ ಮಾಲಯಾ ನಿತ್ಯಯೋಗತಃ ।
ವನಮಾಲೀ ಸಮಾಖ್ಯಾತೋ ಹ್ಯಷ್ಟಾರ್ಣೋ ಭೂಷಣಪ್ರದಃ॥

'ಓಂ ವನಮಾಲಿನೇ ನಮಃ'–ಎಂಬ ನಾಮಮಂತ್ರಜಪವು ಭೂಷಣ ಪ್ರದವು.

562) ಸ. ಸಂ. :– ಕಾಲಿನವರೆಗೂ ಜೋಲಾಡುತ್ತಿರುವ ಮಾಲೆಯುಳ್ಳ ವನು. ಆಪಾದಪದ್ಮಂ ಯಾ ಮಾಲಾ ವನಮಾಲೇತಿ ಸಾ ಸ್ಮೃತಾ ॥ ಚೆನ್ನಾಗಿ ಭಜಿಸುವ ರಮಾದೇವಿಯನ್ನು ಗೆಳತಿಯನ್ನಾಗಿ ಹೊಂದಿರುವವನು ; ನೀರನ್ನು ಅಥವಾ ಅನ್ನವನ್ನು ಧರಿಸುವ ಸ್ವಭಾವವುಳ್ಳವನು.

* * *

562) ಹಲಾಯುಧಃ = ನೇಗಿಲನ್ನು ಆಯುಧವನ್ನಾಗಿ ಧರಿಸಿರುವ ಬಲ ರಾಮಸ್ವರೂಪನು.

ಶಂ. ಭಾ. :– ನೇಗಿಲನ್ನೇ ಆಯುಧವನ್ನಾಗಿ ಉಳ್ಳ ಬಲಭದ್ರಸ್ವರೂ ಪಿಯು.

567) ಪ. ಭ. :– ಉಳುಮೆಯ ಕೆಲಸದಲ್ಲಿ ಸಮೃದ್ಧಿಗೋಸ್ಕರ ಧ್ಯಾನಿ ಸಲ್ಪಡಬೇಕಾದ, ನೇಗಿಲನ್ನು ಯಾವಾಗಲೂ ಧರಿಸಿರುವ ಬಲಭದ್ರನು.

ಬಲಭದ್ರಂ ಸಮೃದ್ಧ್ಯರ್ಥಂ ಸೀರಕರ್ಮಣಿ ಕೀರ್ತಯೇತ್ ॥

ನಿರುಕ್ತಿ :– ಹಲಂ ಚ ಸತತಂ ಸೀರಂ ಧತ್ತೇ ಯೋಽಸೌ ಹಲಾಯುಧಃ ।
ಸೀರಕಾರ್ಯಸಮೃದ್ಧ್ಯರ್ಥೋ ವಸ್ವರ್ಣೋ ಮನ್ತ್ರನಾಯಕಃ ॥

'ಓಂ ಹಲಾಯುಧಾಯ ನಮಃ'–ಎಂಬ ಈ ನಾಮಮಂತ್ರಜಪವು ವ್ಯವಸಾಯದಲ್ಲಿ ಸಮೃದ್ಧಿಯನ್ನು ಉಂಟುಮಾಡುತ್ತದೆ.

563) ಸ. ಸಂ. :– ನೇಗಿಲನ್ನು ಆಯುಧವನ್ನಾಗಿ ಹೊಂದಿರುವ ಬಲರಾಮದೇವರು ; ತ್ರಿಪುರಸಂಹಾರಸಮಯದಲ್ಲಿ ಹರನಿಗೆ ಆಯುಧನಾದವನು.

*   *   *

563) ಆದಿತ್ಯಃ = ಸೂರ್ಯರೂಪಿಯು ; ಅದಿತಿಗೆ ಪುತ್ರನಾಗಿ ಜನಿಸಿದವನು.

ಶಂ. ಭಾ. :–ಅದಿತಿದೇವಿಗೆ ಕಶ್ಯಪನಿಂದ ಜನಿಸಿದ ವಾಮನರೂಪಿಯು.

568) ಪ. ಭ. :– ತನಗೆ ವಾಚಕವಾದ 'ಆ' ಎಂಬ ವರ್ಣದಿಂದ ಹೊಂದಲ್ಪಡುವವನು. (ಆ ಕಾರವು ಸಂಕರ್ಷಣಬೀಜಮಂತ್ರವು) ಹಿಂದೆ ಅದಿತಿಯಾಗಿದ್ದ ದೇವಕಿಯ ಪುತ್ರನಾಗಿ ಹುಟ್ಟಿದವನು.

ನಿರುಕ್ತಿ :– ಆವರ್ಣಾದೇವ ಪ್ರಾಪಯೋ ಯಃ ಸ ಆದಿತ್ಯಃ ಪ್ರಕೀರ್ತಿತಃ ।
ಅದಿತಿರ್ದೇವಕೀ ತಸ್ಯಾಃ ಆದಿತ್ಯೋ ವಾ ಹ್ಯಪತ್ಯತಃ ।

564) ಸ. ಸಂ. :– ಅನಾದಿಕಾಲದಿಂದಿರುವ ಆನಂದ-ಜ್ಞಾನಗಳುಳ್ಳವನು ; ಪ್ರಜಾಭಕ್ಷಣಶೀಲರಾದ ದೈತ್ಯರನ್ನು ತ್ಯಜಿಸುವವನು.

*   *   *

564) ಜ್ಯೋತಿರಾದಿತ್ಯಃ = ಜ್ಯೋತಿರ್ಮಯನಾದ ಆದಿತ್ಯರೂಪಿಯು; ಆದಿತ್ಯಮಂಡಲದಲ್ಲಿರುವ ಜ್ಯೋತಿರ್ಮಯಪುರುಷನು.

ಶಂ. ಭಾ. :– ಸೂರ್ಯಮಂಡಲದಲ್ಲಿರುವ ಜ್ಯೋತಿಃಸ್ವರೂಪನು.

569) ಪ. ಭ. :– ದಿವ್ಯಾಶ್ಚರ್ಯಜ್ಯೋತಿರ್ಮಯನಾದ ಆದಿತ್ಯನು. ಸೂರ್ಯನ ತೇಜಸ್ಸನ್ನು ಅಪಹರಿಸಿದ ನರ-ನಾರಾಯಣಸ್ವರೂಪಿಯು.

ನಿಷ್ಪ್ರಭಾಣಿ ಚ ತೇಜಾಂಸಿ ಬ್ರಹ್ಮಾ ಚೈವಾಸನಾಚ್ಚ್ಯುತಃ ॥

(ಮ. ಭಾ. ಶಾಂ. ೩೪೨-೧೨೧)

ನಿರುಕ್ತಿ :– ಸಮಸ್ತತೇಜೋಹರಣಜ್ಯೋತಿಷಾ ದೀಪ್ಯತೇ ಚ ಯಃ।
ಸ ವೈ ಸ್ಯಾಜ್ಜ್ಯೋತಿರಾದಿತ್ಯೋ ನವಾರ್ಣೋ ಜ್ಞಾನದಾಯಕಃ॥

'ಜ್ಯೋತಿರಾದಿತ್ಯಾಯ ನಮಃ'–ಎಂಬ ಈ ನಾಮಮಂತ್ರಜಪವು ಜ್ಞಾನವನ್ನು ಕೊಡುತ್ತದೆ.

565) **ಸ. ಸಂ. :–** ಜ್ಯೋತಿಗಳಿಗೆ ಆದಿಯಾಗಿರುವ ಸೂರ್ಯನಲ್ಲಿರುವವನು.

*　　　　*　　　　*

565) **ಸಹಿಷ್ಣುಃ** = ಸಹನಶೀಲನು. ದ್ವಂದ್ವಗಳನ್ನು ಸಹಿಸುವ ನಾರಾಯಣಮುನಿಸ್ವರೂಪನು ; ಭಕ್ತರ ಅಪರಾಧಗಳನ್ನು ಸಹಿಸುವವನು ; ಶತ್ರುಗಳ ಆಕ್ರಮಣವನ್ನು ಸಹಿಸುವವನು.

ಶಂ. ಭಾ. :– ಶೀತೋಷ್ಣವೇ ಮುಂತಾದ ದ್ವಂದ್ವಗಳನ್ನು ಸಹಿಸುವವನು.

570) **ಪ. ಭ. :–** ಬ್ರಹ್ಮನೇ ಮುಂತಾದವರ ಅಪರಾಧಗಳನ್ನು ಸಹಿಸಿಕೊಂಡ ನರ-ನಾರಾಯಣರೂಪಿಯು.

ಪ್ರಸಾದಯಾಮಾಸ ಭವೋ ದೇವಂ ನಾರಾಯಣಂ ಪ್ರಭುಮ್ ।
ಶರಣಂ ಚ ಜಗಾಮಾದ್ಯಂ ವರೇಣ್ಯಂ ವರದಂ ಹರಿಮ್ ॥

ತತೋಽಥ ವರದೋ ದೇವಃ ಜಿತಕ್ರೋಧೋ ಜಿತೇನ್ದ್ರಿಯಃ।
ಪ್ರೀತಿಮಾನಭವತ್ತತ್ರ ರುದ್ರೇಣ ಸಹ ಸಂಗತಃ ॥

(ಮ. ಭಾ. ಶಾಂ. ೩೪೨-೧೩೧)

ನಿರುಕ್ತಿ :– ಬ್ರಹ್ಮಾದಿಮನ್ಯುಸಹನಾತ್ಸಹಿಷ್ಣುರಿತಿ ಕಥ್ಯತೇ ॥

566) **ಸ. ಸಂ. :–** ಸಹಿಸುವವನು.

*　　　　*　　　　*

566) **ಗತಿಸತ್ತಮಃ** = ಶ್ರೇಷ್ಠತಮವಾದ ಗತಿಯು.

ಶಂ. ಭಾ. :– ಗತಿಯೂ–ಸರ್ವಶ್ರೇಷ್ಠನೂ ಆಗಿರುವವನು.

571) **ಪ. ಭ. :–** ಪರಮಧರ್ಮವೆಂಬ ಗತಿಯಲ್ಲಿ ಅತ್ಯಂತವಿಶ್ವಸ್ತನಾದವನು.

ನಿರುಕ್ತಿ :– ಧರ್ಮೇ ಪ್ರತ್ಯಯಿತತಮೋ ಗತಿಸತ್ತಮ ಉಚ್ಯತೇ ॥

567) ಸ. ಸಂ. :– ಜ್ಞಾನಿಗಳಿಂದ ಬಯಸಲ್ಪಡುವವನು. ಅತ್ಯಂತಾತಿಶಯವಾಗಿ ಹೊಂದಲ್ಪಡುವವನು.

* * *

ಸುಧನ್ವಾ ಖಣ್ಡಪರಶುರ್ದಾರುಣೋ ದ್ರವಿಣಪ್ರದಃ ।
ದಿವಃಸ್ಪೃಕ್ಸರ್ವದೃಗ್ವ್ಯಾಸೋ ವಾಚಸ್ಪತಿರಯೋನಿಜಃ ॥೭೪॥

567) **ಸುಧನ್ವಾ** = ಶ್ರೇಷ್ಠವಾದ ಧನುಸ್ಸುಳ್ಳವನು ; ಅಹಂಕಾರತತ್ತ್ವರೂಪವಾದ ಶಾರ್ಙ್ಗಧನುಸ್ಸುಳ್ಳವನು.

ಶಂ. ಭಾ. :– ಇಂದ್ರಿಯಾದಿಮಯವಾದ ಶಾರ್ಙ್ಗವೆಂಬ ಶ್ರೇಷ್ಠವಾದ ಧನುಸ್ಸುಳ್ಳವನು.

572) ಪ. ಭ. :– (ಅಮೃತಕ್ಕೋಸ್ಕರ ದೇವಾಸುರರಿಗೆ ಯುದ್ಧವಾದಾಗ ಅಸುರಸಂಹಾರಕ್ಕಾಗಿ ಉಪಯೋಗಿಸಿದ) ಶ್ರೇಷ್ಠವಾದ ಶಾರ್ಙ್ಗಧನುಸ್ಸುಳ್ಳವನು.

ನಿರುಕ್ತಿ :– ಸುಶೋಭನಂ ಧನುರ್ಯಸ್ಯ ಸುಧನ್ವಾ ಪರಿಕೀರ್ತಿತಃ ॥

568) ಸ. ಸಂ. :– ಶೋಭನವಾದ ಧನುಸ್ಸುಳ್ಳವನು.

* * *

568) ಖಣ್ಡಪರಶುಃ = ರುದ್ರರೂಪಿಯು ; ಪರಶುವಿನಿಂದ ಖಂಡನೆಯನ್ನು ಮಾಡಿದ ನರಮಹರ್ಷಿಸ್ವರೂಪಿಯು ; ಶತ್ರುಗಳನ್ನು ಖಂಡಿಸಿದ ಗಂಡುಗೊಡಲಿಯುಳ್ಳ ಪರಶುರಾಮಸ್ವರೂಪಿಯು.

ಶಂ. ಭಾ. :– ಶತ್ರುಗಳನ್ನು ಖಂಡಿಸಿದ ಗಂಡುಗೊಡಲಿಯುಳ್ಳ ಪರಶುರಾಮಸ್ವರೂಪಿಯು ; ಅಖಂಡಪರಶುಃ = ಅಖಂಡಿತವಾದ ಪರಶುವುಳ್ಳ ಪರಶುರಾಮಸ್ವರೂಪಿಯು.

573) ಪ. ಭ. :– ರುದ್ರಸಂಗ್ರಾಮವನ್ನು ಪರಶುವಿನಿಂದ ಖಂಡಿಸಿದ ನರಮಹರ್ಷಿಯು.

ಮನ್ತ್ರೈಶ್ಚ ಸಂಯುಯೋಜಾಶು ಸೋಽಭವತ್ಪರಶುರ್ಮಹಾನ್ ।

ಕ್ಷಿಪ್ತಶ್ಚ ಸಹಸಾ ತೇನ ಖಂಡನಂ ಪ್ರಾಪ್ತವಾಂಸ್ತದಾ ।
ತತೋಽಹಂ ಖಣ್ಡಪರಶುಃ ಸ್ಮೃತಃ ಪರಶುಖಣ್ಡನಾತ್ ॥

(ಮ. ಭಾ. ಶಾ. ೩೪೨-೧೧೬)

ನಿರುಕ್ತಿ :– **ತೀವ್ರಕೋಪಾತ್ಪರಶುನಾ ರೌದ್ರಸಂಗ್ರಾಮಖಣ್ಡನಾತ್ ।**
ಇತ್ಯುಕ್ತಃ ಖಣ್ಡಪರಶುಃ ನರ್ವಾರ್ಣಃ ಶೋಕನಾಶನಃ ॥

'**ಓಂ ಖಣ್ಡಪರಶವೇ ನಮಃ**'–ಈ ನಾಮಮಂತ್ರಜಪದಿಂದ ಶೋಕವು ನಾಶವಾಗುತ್ತದೆ.

569) **ಸ. ಸಂ. :–** ಖಂಡಿತವಾದ (ಕತ್ತರಿಸಲ್ಪಟ್ಟ) ಪರಶುವುಳ್ಳವನು. **ಅಖಣ್ಡಪರಶುಃ** = ಖಂಡಿಸಲ್ಪಡದ ಪರಶುವುಳ್ಳವನು.

* * *

569) **ದಾರುಣಃ** = ದುಷ್ಟರಿಗೆ ಭಯಂಕರನಾದವನು ; ಶತ್ರುಗಳನ್ನು ಸೀಳಿಹಾಕುವವನು.

ಶಂ. ಭಾ. :– ಸನ್ಮಾರ್ಗವಿರೋಧಿಗಳಿಗೆ ದಾರುಣನಾದವನು.

574) **ಪ. ಭ. :–** ಒಳ-ಹೊರ ಶತ್ರುಗಳನ್ನು ಭೇದಿಸುವವನು.
ನಿರುಕ್ತಿ :– **ಬಾಹ್ಯಾಭ್ಯನ್ತರಶತ್ರೂಣಾಂ ದಾರಣಾದಪಿ ದಾರುಣಃ ॥**

570) **ಸ. ಸಂ. :–** ಲೋಕವನ್ನು ಮರದ ಪ್ರತಿಮೆಯಂತೆ ಮಾಡಿಬಿಡುವವನು ; ಶತ್ರುಗಳನ್ನು ಸೀಳಿಹಾಕುವವನು.

* * *

570) **ದ್ರವಿಣಪ್ರದಃ** = ಐಶ್ವರ್ಯವನ್ನು ಅನುಗ್ರಹಿಸುವವನು.

ಶಂ. ಭಾ. :– ಭಕ್ತರ ಇಷ್ಟಾರ್ಥಗಳನ್ನು ದಯಪಾಲಿಸುವವನು.

575) **ಪ. ಭ. :–** ಸಮಸ್ತಶಾಸ್ತ್ರಗಳ ಮತ್ತು ಅವುಗಳ ಅರ್ಥರೂಪವಾದ ಧನವನ್ನು ಅನುಗ್ರಹಿಸುವ ವ್ಯಾಸಾವತಾರಿಯು.

ವಹನ್ವೈ ವಾಮಹಸ್ತೇನ ಸರ್ವಶಾಸ್ತ್ರಾರ್ಥಸಂಚಯಮ್ ।
ದಕ್ಷಿಣೇನ ಚ ಶಾಸ್ತ್ರಾರ್ಥಾನಾದಿಶಂಶ್ಚ ಯಥಾಸ್ಥಿತಾನ್ ॥

ನಿರುಕ್ತಿ :– **ಶಾಸ್ತ್ರಂ ತದರ್ಥಂ ದ್ರವಿಣಂ ಪ್ರದದಾತಿ ಜನಾಯ ಯಃ ।**
ವ್ಯಾಸೋ ಭೂತ್ವಾ ಹರಿಃ ಸಾಕ್ಷಾದ್ದ್ರವಿಣಪ್ರದ ಉಚ್ಯತೇ ॥

571) **ಸ. ಸಂ. :–** ವಿದ್ಯಾರೂಪವಾದ ಧನವನ್ನು ಕೊಡುವವನು ; ದ್ರವಿಸಿದ ಮನಸ್ಸುಳ್ಳ ಭಕ್ತರಿಗೆ ಸ್ವರೂಪಸುಖವನ್ನು ಕೊಡುವವನು.

* * *

571) **ದಿವಃಸ್ಪೃಕ್ ; ದಿವಿಸ್ಪೃಕ್** = ಪ್ರಕಾಶಮಾನವಾದ ಸ್ಥಾನವನ್ನು ಮುಟ್ಟಿರುವವನು ; ಸ್ವರ್ಗವನ್ನು ಮುಟ್ಟಿದವನು.

ಶಂ. ಭಾ. :– ದಿವಃಸ್ಪೃಕ್ = ಸ್ವರ್ಗವನ್ನು ಮುಟ್ಟಿದವನು.

576) **ಪ. ಭ. :– ದಿವಿಸ್ಪೃಕ್** = ಪರಮಪದದಲ್ಲಿ ತನ್ನ ತತ್ತ್ವವನ್ನು ಮುಟ್ಟಿರುವವನು.

ನಿರುಕ್ತಿ :– **ಪರಯಾ ವಿದ್ಯಯಾ ಯಃ ಸ್ವಂ ಸ್ಪೃಶತೀತಿ ಪರೇ ಪದೇ ।**
ದಿವಿಸ್ಪೃಕ್ ಸೋऽಚ್ಯತೇ ನಿತ್ಯಂ.................. ॥

572) **ಸ. ಸಂ. :– ದಿವಃಸ್ಪೃಕ್** = ಶ್ವೇತದ್ವೀಪ, ಅನಂತಾಸನ, ವೈಕುಂಠ ಗಳನ್ನು ಮುಟ್ಟುವವನು. **ಸ್ವರೂಪಪಾದಾ ವಿಷ್ಣೋಸ್ತು ತ್ರಯೋ ಹಿ ದಿವಿ ಸಂಸ್ಥಿತಾಃ । ನಾರಾಯಣೋ ವಾಸುದೇವೋ ವೈಕುಂಠ ಇತಿ ತೇ ತ್ರಯಃ ॥** (ಛಾಂದೋಗ್ಯಭಾಷ್ಯ)

* * *

572) **ಸರ್ವದೃಗ್ವ್ಯಾಸಃ** = ಸರ್ವಜ್ಞನಾದ ವ್ಯಾಸಸ್ವರೂಪಿಯು.

ಶಂ. ಭಾ. :– ಸರ್ವಜ್ಞಾನಗಳನ್ನೂ ವಿಸ್ತಾರಪಡಿಸಿದ ವ್ಯಾಸನು ; ಸರ್ವಾಕಾರವಾದ ಜ್ಞಾನವನ್ನು ಅಥವಾ ಸರ್ವರಿಗೂ ದೃಷ್ಟಿಯಾಗಿರುವ ಜ್ಞಾನ ವನ್ನು (ವೇದ-ಪುರಾಣಾದಿಗಳನ್ನು) ವಿಭಾಗಮಾಡಿದವನು ; ವೇದಗಳನ್ನು ಋಕ್-ಯಜುಸ್ಸು-ಸಾಮ-ಅಥರ್ವ ಎಂದು ನಾಲ್ಕು ವಿಭಾಗಗಳನ್ನಾಗಿಯೂ, ಋಗ್ವೇದವನ್ನು ಇಪ್ಪತ್ತೊಂದು ಶಾಖೆಗಳನ್ನಾಗಿಯೂ, ಯಜುರ್ವೇದವನ್ನು ನೂರೊಂದು ಶಾಖೆಗಳನ್ನಾಗಿಯೂ, ಸಾಮವೇದವನ್ನು ಸಾವಿರ ಶಾಖೆಗಳ ನ್ನಾಗಿಯೂ ಅಥರ್ವವೇದವನ್ನು ಒಂಬತ್ತು ಶಾಖೆಗಳನ್ನಾಗಿಯೂ–ವಿಭಾಗಿಸಿ ದವನು. ಪುರಾಣಗಳನ್ನೂ ವಿಭಾಗಿಸಿದವನು.

577) **ಪ. ಭ. :– ಸರ್ವದೃಕ್** = ಎಲ್ಲ ವೈಭವಗಳನ್ನೂ ನೋಡುತ್ತಿರು ವವನು.

ನಿರುಕ್ತಿ :– .... ಸರ್ವದೃಕ್ಸರ್ವದರ್ಶನಾತ್ ॥

578) ಪ .ಭ. :– ವ್ಯಾಸಃ= ವೇದಗಳನ್ನು ನಾಲ್ಕಾಗಿ ವಿಭಾಗಿಸಿದವನು.
ನಿರುಕ್ತಿ :– ತ್ರಯ್ಯಾಶ್ಚತುರ್ಧಾ ಕರಣಾದ್ವ್ಯಾಸ ಇತ್ಯುಚ್ಯತೇ ಬುಧೈಃ ॥

573) ಸ. ಸಂ. :– ಸರ್ವದೃಕ್ = ಎಲ್ಲವನ್ನೂ ನೋಡುತ್ತಿರುವವನು.

574) ಸ. ಸಂ. :– ವ್ಯಾಸಃ = ಎಲ್ಲಕ್ಕಿಂತಲೂ ವಿಶಿಷ್ಟನಾಗಿ ಎಲ್ಲೆಲ್ಲಿಯೂ ಇರುವವನು.

* * *

573) ವಾಚಸ್ಪತಿರಯೋನಿಜಃ ;ವಾಚಸ್ಪತಿಃ = ವಾಣಿಗೆ ಅಧಿಪತಿಯಾದ ಹಯಗ್ರೀವಸ್ವರೂಪಿಯು ; ಬೃಹಸ್ಪತಿರೂಪಿಯು ; ಅಯೋನಿಜಃ= ಸರ್ವಕ್ಕೂ ಕಾರಣನಾಗಿ ತಾಯಿಯಿಂದ ಹುಟ್ಟದವನು ; ವಾಣಿಗೆ ಅಧಿಪತಿಯಾಗಿ ಭಗವಂತನ ಮುಖದಿಂದ ಸಂಜನಿಸಿದ ಸಾರಸ್ವತವ್ಯಾಸಸ್ವರೂಪಿಯು.

ಶಂ. ಭಾ. :– ವಿದ್ಯೆಗೆ ಪತಿಯಾದವನು ; ತಾಯಿಯಲ್ಲಿ ಹುಟ್ಟದವನು.

579) ಪ. ಭ. :– ವಾಚಸ್ಪತಿಃ =ಪಂಚಮವೇದಕ್ಕೆ ರೂಪವಾದ ವಾಣಿಗೆ ಸ್ವಾಮಿಯಾದ ವ್ಯಾಸಸ್ವರೂಪಿಯು.
ನಿರುಕ್ತಿ :– ವಾಚಃ ಪಞ್ಚಮವೇದಸ್ಯ ಸ್ವಾಮೀ ವಾಚಸ್ಪತಿಃ ಸ್ಮೃತಃ ।

580) ಪ. ಭ. :– ಅಯೋನಿಜಃ = ಸಾರಸ್ವತಾವತಾರದಲ್ಲಿ ಭಗವಂತನ ಮುಖದಿಂದ ಹುಟ್ಟಿದವನು ; ಯೋನಿಯಲ್ಲಿ ಹುಟ್ಟದವನು.
ನಿರುಕ್ತಿ :– ಸಾರಸ್ವತಾವತಾರೇ ಹಿ ಭಗವನ್ಮುಖಸಮ್ಭವಾತ್ ।
ಸ್ಮೃತೋ ಹ್ಯಯೋನಿಜ ಇತಿ ವಸ್ವರ್ಣಃ ಕರ್ಮನಾಶಕಃ ॥

'ಓಂ ಅಯೋನಿಜಾಯ ನಮಃ'–ಎಂಬ ಈ ನಾಮಮಂತ್ರಜಪವು ಕರ್ಮನಾಶಕವು.

575) ಸ. ಸಂ. :– ವಾಚಸ್ಪತಿಃ = ಸಕಲವಾಙ್ಮನೋದೇವತೆಗಳಿಗೆ ಪತಿಯಾದವನು.

576) ಸ. ಸಂ. :– ಅಯೋನಿಜಃ = ಯೋನಿಯಲ್ಲಿ ಹುಟ್ಟದವನು ; ಕಂಬವೇ ಮುಂತಾದುವುಗಳಲ್ಲಿ ಹುಟ್ಟಿದವನು ; ನಾಭಿಯಲ್ಲಿ ಚತುರ್ಮುಖ

ನನ್ನು ಹುಟ್ಟಿಸಿದವನು ; ಭಕ್ತರಲ್ಲದವರನ್ನು (ತನ್ನವರಲ್ಲದವರನ್ನು) ಕಬ್ಬಿಣದ ಸರಪಣಿಯೇ ಮುಂತಾದ ಬಂಧನಗಳಿಗೆ ಸಿಕ್ಕಿಸುವವನು.

* * *

ತ್ರಿಸಾಮಾ ಸಾಮಗಃ ಸಾಮ ನಿರ್ವಾಣಂ ಭೇಷಜಂ ಭಿಷಕ್ ।
ಸಂನ್ಯಾಸಕೃಚ್ಛಮಃ ಶಾನ್ತೋ ನಿಷ್ಠಾ ಶಾನ್ತಿಃ ಪರಾಯಣಮ್ ॥೭೫॥

574) **ತ್ರಿಸಾಮಾ** = ಮೂರು ಸಾಮಶ್ರುತಿಗಳುಳ್ಳವನು ; ಮೂರು ಸಾಮಗಳಿಂದ ಸ್ತುತಿಸಲ್ಪಟ್ಟವನು.

ಶಂ. ಭಾ. :– ಸಾಮಗರಿಂದ **ದೇವವ್ರತ**ಗಳೆಂಬ ಮೂರು ಸಾಮಗಳಿಂದ ಸ್ತುತಿಸಲ್ಪಟ್ಟವನು.

581) **ಪ. ಭ. :–** ತನ್ನನ್ನು ಸ್ತುತಿಸುವ ಬೃಹತ್-ರಥಂತರ-ವಾಮದೇವಗಳೆಂಬ ಮೂರು ಪ್ರಧಾನ ಸಾಮಗಳುಳ್ಳವನು.
ನಿರುಕ್ತಿ :– **ಪ್ರೋಕ್ತಸ್ತ್ರಿಸಾಮಾ ಯಶ್ಚಾಸೌ ಬೃಹದಾದಿತ್ರಿಸಾಮಕಃ ॥**

577) **ಸ. ಸಂ. :–** ನಿಧನ, ಉದ್ಗೀಥ ಮತ್ತು ಪ್ರತೀಹಾರಗಳೆಂಬ ಮೂರು ಸಾಮಗಳುಳ್ಳವನು.

* * *

575) **ಸಾಮಗಃ** = ಸಾಮವನ್ನು ಗಾನಮಾಡುವವನು.

ಶಂ. ಭಾ. :– ಸಾಮವನ್ನು ಗಾನಮಾಡುವವನು.

582) **ಪ. ಭ. :–** ಸ್ವಾನುಭವದ ಪ್ರೀತಿಯಿಂದ ಆ ಸಾಮಗಳನ್ನು ತಾನೂ ಗಾನಮಾಡುವವನು. **ಏತತ್ಸಾಮ ಗಾಯನ್ನಾಸ್ತೇ** (ತೈ. ಉ. ೧೦-೫)
ನಿರುಕ್ತಿ :– **ಸ್ವಯಂ ಸ್ವಾನುಭವಪ್ರೀತ್ಯಾ ಗಾಯತೀತಿ ಚ ಸಾಮಗಃ ॥**

578) **ಸ. ಸಂ. :–** 'ಸಾಮ' ಎಂಬ ಶಬ್ದದಿಂದ ಹೇಳಲ್ಪಡುವ ಭಾರತೀ ದೇವೀ ಮತ್ತು ವಾಯುದೇವರಲ್ಲಿ ಇರುವವನು. **ಸೇತಿ ಭಾರ್ಯಾ ಹಿ ವಾಗ್ದೇವೀ ಪ್ರಾಣೋ ಮಃ ಪರಿಕೀರ್ತಿತಃ ಏವಂ ತೌ ಸಾಮನಾಮಾನೌ ॥** (ಛಾಂದೋಗ್ಯಭಾಷ್ಯ). ಅಥವಾ ಅಗ್ನಿಯಲ್ಲಿ ಅಂತರ್ಗತ

ನಾಗಿರುವವನು. **ಶುಭಾಶುಭಾನಾಂ ದಾಹಾದೌ ಸಾಮ್ಯಾತ್ಸಾಮಾಗ್ನಿರೀರಿತಃ।** ಸಾಮದಿಂದ ಹೊಂದಲ್ಪಡುವವನು.

* * *

576) **ಸಾಮ** = ವೇದಗಳಲ್ಲಿ ಪರಮಾತ್ಮನ ಮಹಾವಿಭೂತಿಯಾದ ಸಾಮವೇದಸ್ವರೂಪಿಯು. **ಸಹಸ್ರಶಾಖಂ ಯತ್ಸಾಮ ಯೇ ವೈ ವೇದವಿದೋ ಜನಾಃ ॥** (ಮ. ಭಾ. ಶಾಂ. ೩೪೨-೯೭)

ಶಂ. ಭಾ. :– ಸಾಮವೇದಸ್ವರೂಪಿಯು. **ವೇದಾನಾಂ ಸಾಮ ವೇದೋಽಸ್ಮಿ** (ಗೀತಾ. ೧೦-೨೨)

583) **ಪ. ಭ. :–** ತನ್ನನ್ನು ಗಾನಮಾಡುವವರ ಕಾಲುಷ್ಯವನ್ನು ನಾಶ ಮಾಡುವವನು.

ನಿರುಕ್ತಿ :– **ಸ್ವಗಾಯಕಾನಾಂ ಕಾಲುಷ್ಯನಾಶಕಃ ಸಾಮ ಈರಿತಃ ॥**

579) **ಸ. ಸಂ. :–** ಸರ್ವಭೂತಗಳಲ್ಲಿಯೂ ಸಮನಾಗಿರುವವನು.

* * *

577) **ನಿರ್ವಾಣಂ** = ಪರಮಾನಂದಮೋಕ್ಷಸ್ವರೂಪಿಯು ; ಆವರಣ ವಿಲ್ಲದವನು ; ಆನಂದದಾಯಕನು.

ಶಂ. ಭಾ. :– ಎಲ್ಲ ದುಃಖಗಳನ್ನೂ ಶಾಂತಗೊಳಿಸುವ ಪರಮಾನಂದ ರೂಪನು.

584) **ಪ. ಭ. :–** ಪಾಪವನ್ನು ಕಳೆದುಕೊಂಡವರಿಗೆ ಪರಮಗತಿಗೆ ಕಾರಣನಾಗಿರುವ ಮೋಕ್ಷಸ್ವರೂಪನು.

ನಿರುಕ್ತಿ :– **ನಿರ್ವಾಣಂ ಸ್ಯಾತ್ಪರಗತೇಃ ನಿಮಿತ್ತಂ ನಿರ್ಗತೈನಸಾಮ್ ।**

580) **ಸ. ಸಂ. :–** ಪ್ರಾಕೃತಶರೀರವಿಲ್ಲದವನು. **ಕಾಯೋ ವಾಣಂ ಶರೀರಂ ಚ ।** ಪ್ರತಿಯಾಗಿ ಹೊಡೆಯಲು ಅಶಕ್ಯವಾದ ಬಾಣಗಳನ್ನು ಪ್ರಯೋಗಿಸುವವನು.

* * *

578) **ಭೇಷಜಂ**= ಸಂಸಾರರೋಗಕ್ಕೆ ಒಳ್ಳೆಯ ಔಷಧವಾಗಿರುವವನು.

ಶಂ. ಭಾ. :– ಸಂಸಾರರೂಪವಾದ ರೋಗಕ್ಕೆ ಔಷಧನಾಗಿರುವವನು.

585) **ಪ. ಭ. :–** ಅಸಾಧ್ಯವಾದ ಭವರೋಗಕ್ಕೆ ಪರಮೌಷಧನಾಗಿರುವವನು.

ನಿರುಕ್ತಿ :– **ಅಸಾಧ್ಯಭವರೋಗಸ್ಯ ಭೇಷಜಂ ಯತ್ತದೌಷಧಮ್ ।**

581) **ಸ. ಸಂ. :–** ಸಂಸಾರರೋಗಕ್ಕೆ ಔಷಧನಾಗಿರುವವನು.

* * *

579) **ಭಿಷಕ್** = ಭವರೋಗವೈದ್ಯನು ; ವೈದ್ಯನಾಥೇಶ್ವರನು ; ಧನ್ವಂತರಿಯು.

ಶಂ. ಭಾ. :– ಸಂಸಾರರೋಗವನ್ನು ಬಿಡಿಸುವ ಪರಾವಿದ್ಯೆಯನ್ನು ಗೀತೆಯಲ್ಲಿ ಉಪದೇಶಮಾಡಿರುವವನು. **ಭಿಷಕ್ತಮಂ ತ್ವಾ ಭಿಷಜಾಂ ಶೃಣೋಮಿ ॥ (ಋ.೨-೪-೩೩-೪)**

586) **ಪ. ಭ. :–** ಭವರೋಗನಿದಾನ ಮತ್ತು ಚಿಕಿತ್ಸೆಗಳನ್ನು ತಿಳಿದವನು.

ನಿರುಕ್ತಿ :– **ಭವರೋಗನಿದಾನಜ್ಞೋ ಯೋಽಸೌ ಭಿಷಗುದೀರಿತಃ ॥**

582) **ಸ. ಸಂ. :–** ಸಂಸಾರರೋಗಕ್ಕೆ ವೈದ್ಯನು.

* * *

580) **ಸಂನ್ಯಾಸಕೃತ್** = ಸಂನ್ಯಾಸಾಶ್ರಮವನ್ನು ಮತ್ತು ಸಂನ್ಯಾಸಭಾವವನ್ನು ಉಂಟುಮಾಡುವವನು.

ಶಂ. ಭಾ. :– ಮೋಕ್ಷಕ್ಕೋಸ್ಕರ ನಾಲ್ಕನೆಯ ಆಶ್ರಮವನ್ನು ಮಾಡಿದವನು.

587) **ಪ. ಭ. :–** ಸಾತ್ತ್ವಿಕವಾದ ಸಂನ್ಯಾಸದಿಂದ ರಜಸ್ಸು-ತಮಸ್ಸುಗಳನ್ನು ಕತ್ತರಿಸಿಹಾಕುವವನು. ಸಂನ್ಯಾಸವೆಂದರೆ ಭರಿಸುವ ಸಾಮರ್ಥ್ಯವುಳ್ಳವನಲ್ಲಿ ಭಾರವನ್ನು ಸಮರ್ಪಿಸುವುದು.

ನಿರುಕ್ತಿ :– **ತ್ಯಾಗೇನ ಸಾತ್ತ್ವಿಕೇನಾಶು ರಜಸಸ್ತಮಸಃ ಪದಮ್ ।**
ಯಃ ಕೃನ್ತತಿ ಸ ಸಂನ್ಯಾಸಕೃನ್ನವಾರ್ಣೋ ಮನುಃ ಸ್ಮೃತಃ ॥

583) **ಸ. ಸಂ. :–** ಕಾಮ್ಯಕರ್ಮತ್ಯಾಗವನ್ನು ಮಾಡಿಸುವವನು ; ದೋಷತ್ಯಾಗವನ್ನು ಚೆನ್ನಾಗಿ ಮಾಡಿಸುವವನು ; **ಸನ್ನ್ಯಾಸಕೃತ್**= ದೈತ್ಯರನ್ನು ಕತ್ತರಿಸುವವನು.

* * *

581) **ಶಮಃ** = ಇಂದ್ರಿಯನಿಗ್ರಹವುಳ್ಳವನು.

ಶಂ. ಭಾ. :– ಸಂನ್ಯಾಸಿಗಳಿಗೆ ಪ್ರಧಾನವಾಗಿ ಜ್ಞಾನದ ಸಾಧನವಾದ ಶಮವನ್ನು ಉಪದೇಶಮಾಡಿದವನು ; ಸಮಸ್ತಭೂತಗಳನ್ನೂ ಶಮನಗೊಳಿಸುವವನು.

ಯತೀನಾಂ ಪ್ರಶಮೋ ಧರ್ಮೋ ನಿಯಮೋ ವನವಾಸಿನಾಮ್ ।
ದಾನಮೇವ ಗೃಹಸ್ಥಾನಾಂ ಶುಶ್ರೂಷಾ ಬ್ರಹ್ಮಚಾರಿಣಾಮ್ ॥

(ಪರಮರಹಸ್ಯಸ್ಮೃತಿಃ)

588) **ಪ. ಭ. :–** (ಭರನ್ಯಾಸಕ್ಕೋಸ್ಕರ) ಇಚ್ಛಾ-ಭಯ-ಕ್ರೋಧ-ಶಾಂತಿಗಳ ಉಪಾಯವಾದ ಶಮವನ್ನು ಹೇಳುವವನು ; ಉದ್ರೇಕವಿಲ್ಲದವನು.

ನಿರುಕ್ತಿ :– **ಅನುದ್ವೃತ್ತಿಃ ಶಮಃ ಪ್ರೋಕ್ತಃ.......... ॥**

584) **ಸ. ಸಂ. :–** ಆನಂದರೂಪನು ; ಬ್ರಹ್ಮಾದಿಗಳ ಸುಖವನ್ನು ಅಳೆಯುವವನು ಅಥವಾ ತಿಳಿದವನು.

* * *

582) **ಶಾನ್ತಃ** = ಶಮಭಾವವುಳ್ಳವನು.

ಶಂ. ಭಾ. :– ವಿಷಯಸುಖಗಳಲ್ಲಿ ಆಸಕ್ತಿಯಿಲ್ಲದವನು. **ನಿಷ್ಕಲಂ ನಿಷ್ಕ್ರಿಯಂ ಶಾನ್ತಂ** (ಶ್ವೇ ೬-೧೯)

589) **ಪ. ಭ. :–** ಉದ್ರೇಕಕ್ಕೆ ಕಾರಣವಿದ್ದರೂ ಅಲೆಯಿಲ್ಲದ ಸಮುದ್ರದಂತೆ ವಿಕಾರವಿಲ್ಲದವನು. **ತತ್ಸನ್ನಿಧೌ ವೈರತ್ಯಾಗಃ** (ಪಾತಂಜಲಿ ಸೂತ್ರ ೪-೩೫)

ನಿರುಕ್ತಿ :– **............. ಶಾನ್ತೋಽವಿಕೃತಮಾನಸಃ ॥**

585) **ಸ. ಸಂ. :–** ಸುಖವನ್ನು ಪಡೆಯುವುದಕ್ಕೆ ಮೊದಲು ಬಂಧನ

ವನ್ನು ಉಂಟುಮಾಡುವವನು ; ದೈತ್ಯರ ಸುಖವನ್ನು ನಾಶಮಾಡುವವನು ; ಸುಖಕ್ಕೆ ಅವಧಿಯಾದವನು.

* * *

583) **ನಿಷ್ಠಾ** = ಎಲ್ಲಕ್ಕೂ ನೆಲೆಯಾದವನು. ವ್ರತನಿಷ್ಠಾಸ್ವರೂಪಿಯಾದವನು.

ಶಂ. ಭಾ. :– ಪ್ರಳಯದಲ್ಲಿ ಸಮಸ್ತಭೂತಗಳೂ ಯಾವನಲ್ಲಿ ಚೆನ್ನಾಗಿ ನೆಲೆಗೊಳ್ಳುವುವೋ–ಅವನು.

590) **ಪ. ಭ. :–** ಪ್ರಾರ್ಥಿಸುವವರ ಹೃದಯದಲ್ಲಿ ಶುಭಾಶ್ರಯನಾದ ಯಾವನು ಚೆನ್ನಾಗಿ ನೆಲೆಗೊಳ್ಳುವನೋ–ಅವನು.

ನಿರುಕ್ತಿ :– ನಿಷ್ಠೀಯತೇ ಹ್ಯರ್ಥಿನಾಂ ಯೋ ಹೃದಿ ನಿಷ್ಠಾ ಸ ಕಥ್ಯತೇ

586) **ಸ. ಸಂ. :–** ನಿಯತವಾದ ಸ್ಥಿತಿಯುಳ್ಳವನು.

* * *

584) **ಶಾನ್ತಿಃ** = ಎಲ್ಲ ದೋಷಗಳ ನಿವೃತ್ತಿಸ್ವರೂಪನಾದವನು.

ಶಂ. ಭಾ. :– ಸಮಸ್ತವಾದ ಅವಿದ್ಯೆಗಳ ನಿವೃತ್ತಿರೂಪನಾದ ಬ್ರಹ್ಮವು.

591) **ಪ. ಭ. :–** ಅರ್ಥಿಗಳು ಪರಮಸಮಾಧಿಯಲ್ಲಿ ಎಲ್ಲ ಅಧಿಕಾರಗಳನ್ನೂ ಮರೆತು ಯಾವನಲ್ಲಿ ಶಮನಹೊಂದುವರೋ–ಅವನು.

ನಿರುಕ್ತಿ :– ಸರ್ವಾಧಿಕಾರಾಃ ಶಾಮ್ಯನ್ತಿ ಸಮಾಧೌ ಪರಮೇ ಯತಃ ।
ಅತಃ ಶಾನ್ತಿರಿತಿ ಪ್ರೋಕ್ತ ಋತ್ವರ್ಣೋ ಭಕ್ತಿದೋ ಮನುಃ ॥

'ಓಂ ಶಾನ್ತಯೇ ನಮಃ'–ಎಂಬ ಈ ನಾಮಮಂತ್ರಜಪವು ಭಕ್ತಿಯನ್ನು ಕೊಡುತ್ತದೆ.

587) **ಸ. ಸಂ. :–** ಉನ್ನತಸುಖಸ್ವರೂಪನು. **ಶಾನ್ತಿರ್ನಾಮಾ ಸುಖೋನ್ನತೇಃ ॥** ಯಾವನ ಬಳಿಯಲ್ಲಿ ಸುಖವಿರುವುದೋ–ಅವನು.

* * *

585) **ಪರಾಯಣಮ್** = ಪರಮಗತಿಯು.

ಶಂ. ಭಾ. :– ಪುನರಾವೃತ್ತಿಶಂಕಾರಹಿತವಾದ ಉತ್ಕೃಷ್ಟವಾದ ಸ್ಥಾನವಾಗಿರುವವನು. ಪರಾಯಣಃ = ಶ್ರೇಷ್ಠವಾದ ನಿವಾಸಸ್ಥಾನವುಳ್ಳವನು.

592) ಪ. ಭ. :– ಸಮಾಧಿಯುಳ್ಳವರಿಗೆ ನೇರವಾಗಿ ಶ್ರೇಷ್ಠಗತಿಯನ್ನು ಹೊಂದಿಸುವ ಪರಮಭಕ್ತಿಮಾರ್ಗವು ಯಾವನಿಂದ ಉಂಟಾಗುವುದೋ–ಅವನು.

ನಿರುಕ್ತಿ :– ಯಸ್ಮಾತ್ತು ಪರಮಾ ಭಕ್ತಿಃ ಚರಮಪ್ರಾಪಿಕಾ ಮತಾ ।
ತಸ್ಮಾತ್ಪರಾಯಣಮಿತಿ ಸ್ಮೃತೋ ಹ್ಯಷ್ಟಾರ್ಣ ಉತ್ತಮಃ ॥

588) ಸ. ಸಂ. :– ಮುಕ್ತರಿಗೆ ಆಶ್ರಯನಾದವನು ; ಶ್ರೇಷ್ಠವಾದ ಆಶ್ರಯವು ಯಾವನಿಂದ ಉಂಟಾಗುವುದೋ–ಅವನು.

* * *

ಶುಭಾಙ್ಗಃ ಶಾನ್ತಿದಃ ಸ್ರಷ್ಟಾ ಕುಮುದಃ ಕುವಲೇಶಯಃ ।
ಗೋಹಿತೋ ಗೋಪತಿರ್ಗೋಪ್ತಾ ವೃಷಭಾಕ್ಷೋ ವೃಷಪ್ರಿಯಃ ॥

586) **ಶುಭಾಙ್ಗಃ** = ಶುಭವಾದ ಅವಯವಗಳುಳ್ಳವನು.

ಶಂ. ಭಾ. :– ಸುಂದರವಾದ ಶರೀರವನ್ನು ಧರಿಸಿರುವವನು.

593) ಪ. ಭ. :– ತನ್ನ ಭಕ್ತಿಭಾವನೆಯಿಂದ ಶುಭವಾದ ಯಮ-ನಿಯಮ-ಆಸನ-ಪ್ರಾಣಾಯಾಮ-ಪ್ರತ್ಯಾಹಾರ-ಧ್ಯಾನ-ಧಾರಣ-ಸಮಾಧಿಗಳೆಂಬ ಯೋಗಾಂಗಗಳುಳ್ಳವನು.

ನಿರುಕ್ತಿ :– ಸ್ವಶಕ್ತ್ಯುದ್ಭವಕಲ್ಯಾಣಯಮಾದ್ಯಷ್ಟಾಙ್ಗಸಂಭವಃ ।
ಯಸ್ಮಾಚ್ಛುಭಾಙ್ಗಃ ಸಂಪ್ರೋಕ್ತಃ ಸಪ್ತಾರ್ಣೋ ಧ್ಯಾನದಾಯಕಃ ॥

'ಓಂ ಶುಭಾಙ್ಗಾಯ ನಮಃ'–ಎಂಬ ಈ ನಾಮಮಂತ್ರಜಪವು ಧ್ಯಾನವನ್ನು ಕೊಡುತ್ತದೆ. (ಧ್ಯಾನಕ್ಕೆ ಪ್ರೋತ್ಸಾಹಿಸುತ್ತದೆ.)

589) ಸ. ಸಂ. :– ಶುಭವಾದ ಅಂಗಗಳುಳ್ಳವನು ; ಶುಭಕ್ಕೆ ಅಂಗವಾದ ಜ್ಞಾನವು ಯಾವನಿಂದ ಉಂಟಾಗುವುದೋ–ಅವನು.

* * *

587) **ಶಾನ್ತಿದಃ** = ಪರಮಾನಂದರೂಪವಾದ ನಿತ್ಯಶಾಂತಿಯನ್ನು ಕೊಡುವವನು.

ಶಂ. ಭಾ. :– ರಾಗ-ದ್ವೇಷಗಳಿಂದ ಬಿಡುಗಡೆಹೊಂದುವಿಕೆಯೆಂಬ ಶಾಂತಿಯನ್ನು ಕೊಡುವವನು.

594) ಪ. ಭ. :– ಸಿದ್ಧಭಕ್ತಿಯುಳ್ಳವರಿಗೆ ಪರಮಾನಂದರೂಪವಾದ ಸಾಯುಜ್ಯವೆಂಬ ಶಾಂತಿಯನ್ನು ಕೊಡುವವನು.

ನಿರುಕ್ತಿ :– **ಏವಂ ನಿಷ್ಪನ್ನಭಕ್ತೇಭ್ಯಃ ಶಾನ್ತಿಂ ಸಾಯುಜ್ಯಸಂಜ್ಞಿಕಾಮ್ ।**
ಮಹಾನನ್ದಾಂ ದದಾತೀತಿ ಶಾನ್ತಿದಃ ಪರಿಕೀರ್ತಿತಃ ॥

590) ಸ. ಸಂ. :– ಮೋಕ್ಷಪ್ರದನು.

* * *

588) **ಸ್ರಷ್ಟಾ** = ಜಗತ್ತನ್ನು ಸೃಷ್ಟಿಮಾಡಿದವನು.

ಶಂ. ಭಾ. :– ಸೃಷ್ಟಿಯ ಪ್ರಾರಂಭದಲ್ಲಿ ಎಲ್ಲ ಭೂತಗಳನ್ನೂ ರಚಿಸಿದವನು.

595) ಪ. ಭ. :– ಕರ್ಮವೈಚಿತ್ರ್ಯಕ್ಕೆ ಅನುಗುಣವಾದ ಪರಿಕರಗಳೊಡನೆ ಭೂತಗಳನ್ನು ಸೃಷ್ಟಿಸಿದವನು.

ನಿರುಕ್ತಿ :– **ಕರ್ಮವೈಚಿತ್ರ್ಯತಃ ಸೃಷ್ಟಿಂ ಸ್ರಷ್ಟಾ ಸ್ಯಾತ್ಸೃಜತೀತಿ ಯಃ**

591) ಸ. ಸಂ. :– ಜಗತ್ತನ್ನು ಸೃಷ್ಟಿಸಿದವನು.

* * *

589) **ಕುಮುದಃ** = ಭೂಮಿಗೆ ಆನಂದವನ್ನುಂಟುಮಾಡುವವನು ; ಭೂಮಿಯಲ್ಲಿ ಆನಂದಿಸುವವನು ; ಚಂದ್ರರೂಪಿಯು ; ಕುಮುದಪುಷ್ಪದಂತೆ ಸ್ವಚ್ಛವಾಗಿರುವವನು.

ಪ್ರಾಕೃತೇ ಮಣ್ಡಲೇ ಭೂಮೌ ಮೋದನಾಚ್ಚ ಮಹಾತ್ಮಭಿಃ ।
ಮುಕ್ತಿಭೂಮಿಪ್ರದಾನಾದ್ವಾ ಕುಮುದಃ ಪರಿಕೀರ್ತಿತಃ ॥

ಶಂ. ಭಾ. :– ಭೂಮಿಯಲ್ಲಿ ಮುದಿತನಾಗಿರುವವನು.

596) ಪ. ಭ. :– ಪ್ರಕೃತಿಮಂಡಲದಲ್ಲಿ ಭೋಕ್ತೃಜೀವಿಗಳಿಗೆ ಭೋಜನ ಮಾಡಿಸುತ್ತಾ ಸದಾ ಆನಂದಿಯಾಗಿರುವವನು.

ನಿರುಕ್ತಿ :– **ಕೌ ಪ್ರಾಕೃತೇ ಮಣ್ಡಲೇಽಸ್ಮಿನ್ಸ್ವಭೋಕ್ತೄನಪಿ ಭೋಜಯನ್।**
ಮೋದತೇ ಯಃ ಸರ್ವಕಾಲಂ ಕುಮುದಃ ಸ ತು ಗೀಯತೇ॥

592) **ಸ. ಸಂ. :–** ಭೂಭಾರವನ್ನು ಪರಿಹರಿಸುವುದರಿಂದ ಭೂಮಿಗೆ ಆನಂದವನ್ನುಂಟುಮಾಡುವವನು.

* * *

590) **ಕುವಲೇಶಯಃ** = ಜಲದಲ್ಲಿ ಶಯನಿಸಿರುವವನು.

ಶಂ. ಭಾ. :– ಭೂಮಿಯನ್ನು ಸುತ್ತಿರುವ ಜಲದಲ್ಲಿ ಶಯನಿಸಿರುವವನು ; ಬದರೀಫಲದ ಮಧ್ಯದಲ್ಲಿ ಶಯನಿಸಿರುವ ತಕ್ಷಕವಿಭೂತಿ ಸ್ವರೂಪನು ; ಆದಿಶೇಷಸರ್ಪದ ಉದರದ ಮೇಲೆ ಶಯನಿಸಿರುವವನು.

597) **ಪ. ಭ. :–** ಕುತ್ಸಿತವಾದ ಬಲದಿಂದ ಕೂಡಿ ಭೂಮಿಯಲ್ಲಿ ಭ್ರಮಿಸುತ್ತಾ ದೇಹೇಂದ್ರಿಯಾದಿಗಳಲ್ಲಿ ಅಭಿಮಾನಗಳುಳ್ಳ ಜೀವಗಳನ್ನು ನಿಯಮಿಸುತ್ತಾ ಹೋಗುವವನು.

ನಿರುಕ್ತಿ :– **ಕುತ್ಸಿತಂ ಬಲಮೇಷಾಂ ತೇ ಕುವಲಾ ಜೀವಸಂಜ್ಞಿತಾಃ ।**
ದೇಹೇನ್ದ್ರಿಯಾದೇರೀಶಾಸ್ತೇ ಕುವಲೇಶಾ ಇತಿ ಸ್ಮೃತಾಃ ।
ಯಸ್ಮಾನ್ನಿಯಚ್ಛನ್ಯಾತೀತಿ ಕುವಲೇಶಯ ಉಚ್ಯತೇ ॥

593) **ಸ. ಸಂ. :–** ಬದರಿಕಾಶ್ರಮದಲ್ಲಿ ಶಯನಿಸಿರುವವನು ; ಭೂಮಿಯ ಬಲಕ್ಕಾಗಿ ಶ್ವೇತದ್ವೀಪದಲ್ಲಿ ಶಯನಿಸಿರುವವನು ; ಭೂಮಿಯ ಪರಿವರ್ತನದಲ್ಲಿ ಆಶೆಯುಳ್ಳವನು ; ಭೂಮಿಯನ್ನೂ ಮತ್ತು ಬಲವನ್ನೂ ಹಸ್ತದಲ್ಲಿ ಹೊಂದಿರುವವನು ; ಭೂಮಿಯಲ್ಲಿ ಬಲದೇವತಾರೂಪಿಯಾದ ಹನುಮಂತನಿಂದ ಹೊಂದಲ್ಪಡುವವನು.

* * *

591) **ಗೋಹಿತಃ** = ಹಸುಗಳಿಗೂ, ವೇದವಾಣಿಗೂ, ಭೂಮಿಗೂ ಹಿತನಾದವನು.

ಶಂ. ಭಾ. :– ಗೋವುಗಳ ವೃದ್ಧಿಗೋಸ್ಕರ ಗೋವರ್ಧನವನ್ನು ಧರಿಸಿ ಅವುಗಳಿಗೆ ಹಿತವನ್ನುಂಟುಮಾಡಿದವನು ; ಭೂಮಿಯ ಭಾರವನ್ನಿಳುಹಲು ಶರೀರವನ್ನು ಪರಿಗ್ರಹಿಸಿದವನು.

598) **ಪ. ಭ. :–** ಸಂಸಾರಬೀಜಕ್ಷೇತ್ರವಾದ ಪ್ರಕೃತಿಗೆ ಸ್ಥಾಪಕನಾದವನು.

ನಿರುಕ್ತಿ :– ಸಂಸಾರಬೀಜಕ್ಷೇತ್ರಸ್ಯ ಪ್ರಕೃತೇಃ ಸ್ಥಾಪಕಶ್ಚ ಯಃ ।
ಸ ಗೋಹಿತಃ....................... ॥

594) **ಸ. ಸಂ. :–** ಹಸುಗಳಿಗೆ ಮತ್ತು ವೇದಾದಿರೂಪವಾದ ವಾಣಿಗೆ ಶ್ರೀಕೃಷ್ಣವೇದವ್ಯಾಸರೇ ಮುಂತಾದ ರೂಪದಿಂದ ಹಿತವನ್ನುಂಟುಮಾಡುವವನು. ನೇತ್ರಗಳಲ್ಲಿ ಇರಿಸಲ್ಪಟ್ಟಿರುವವನು. ಯ ಏಷೋಽನ್ತರಕ್ಷಿಣಿ **ಪುರುಷೋ ದೃಶ್ಯತೇ (ಶ್ರುತಿಃ) ಅಯನಂ ತಸ್ಯ ತಾಃ ಪೂರ್ವಂ ತೇನ ನಾರಾಯಣಃ ಸ್ಮೃತಃ ॥ (ಸ್ಮೃತಿಃ)**

* * *

592) **ಗೋಪತಿಃ =** ವಾಣಿಗೆ, ಭೂಮಿಗೆ ಮತ್ತು ಹಸುಗಳಿಗೆ ಪತಿಯಾದವನು.

ಶಂ. ಭಾ. :– ಭೂಮಿಗೆ ಪತಿಯಾದವನು.

599) **ಪ. ಭ. :–** ಸ್ವರ್ಗಭೂಮಿಗೆ ಪತಿಯಾದವನು.

ನಿರುಕ್ತಿ :– .... ಸ್ವರ್ಗಭೂಮೇಃ ಪತಿತ್ವಾದ್ಗೋಪತಿಃ ಸ್ಮೃತಃ ॥

595) **ಸ. ಸಂ. :–** ಗೋವುಗಳಿಗೆ (ಸ್ವರ್ಗ-ಪಶು-ವಾಣೀ ವಜ್ರ-ದಿಕ್-ನೇತ್ರ-ಭೂಮಿ-ಜಲಗಳಿಗೆ) ಪಾಲಕನು.

* * *

593) **ಗೋಪ್ತಾ =** ಜಗತ್ತನ್ನು ರಕ್ಷಿಸುವವನು ; ತನ್ನನ್ನು ಮರೆಮಾಚಿಕೊಂಡಿರುವವನು.

ಶಂ. ಭಾ. :– ಜಗತ್ತಿಗೆ ರಕ್ಷಕನಾದವನು ; ತನ್ನ ಮಾಯೆಯಿಂದ ತನ್ನನ್ನು ಮುಚ್ಚಿಕೊಂಡಿರುವವನು.

600) **ಪ. ಭ. :–** ಕರ್ಮಫಲಚಕ್ರವನ್ನು ಪರಿಪಾಲಿಸುವವನು.

ನಿರುಕ್ತಿ :– ಯಃ ಕರ್ಮಫಲಚಕ್ರಸ್ಯ ಗೋಪ್ತಾ ಹಿ ಪರಿಪಾಲನಾತ್ ॥

596) **ಸ. ಸಂ. :–** ಸರ್ವರಕ್ಷಕನು.

* * *

594) **ವೃಷಭಾಕ್ಷಃ =** ಧರ್ಮದೃಷ್ಟಿಯುಳ್ಳವನು ; ಇಷ್ಟಾರ್ಥಗಳನ್ನು ವರ್ಷಿಸುವ ಕಣ್ಣುಗಳುಳ್ಳವನು. ವೇದಗಳೇ ಕಣ್ಣುಗಳಾಗಿರುವವನು. **ಆರ್ಷಭಾದ್ವೃಷಭೇಕ್ಷಣಃ**(ಮ. ಭಾ. ಉ. ೭೦-೭)

ಶಂ. ಭಾ. :– ಎಲ್ಲ ಕಾಮಗಳನ್ನೂ ಕರೆಯುವ ಕಣ್ಣುಗಳುಳ್ಳವನು ; ಧರ್ಮವನ್ನೇ ದೃಷ್ಟಿಯನ್ನಾಗಿ ಹೊಂದಿರುವವನು.

601) ಪ. ಭ. :– ಧರ್ಮವನ್ನೇ ಕಣ್ಣಾಗಿ ಉಳ್ಳವನು.

ನಿರುಕ್ತಿ :– ಯಸ್ಯಾಕ್ಷೋ ವೃಷಭೋ ಧರ್ಮೋ ವೃಷಭಾಕ್ಷಃ ಸ ಉಚ್ಯತೇ ॥

597) ಸ. ಸಂ. :– ಸಜ್ಜನರಲ್ಲಿ ಕೃಪಾದೃಷ್ಟಿಯುಳ್ಳವನು ; ವೃಷಭದ ಕಣ್ಣುಗಳಂತೆ ಕಣ್ಣುಗಳುಳ್ಳವನು ; ಭಕ್ತರ ಅಭಿಲಾಷೆಗಳನ್ನು ವರ್ಷಿಸುವವನು ಮತ್ತು ಅಳಿವಿಲ್ಲದವನು.

* * *

595) ವೃಷಪ್ರಿಯಃ = ಧರ್ಮಪ್ರಿಯನಾದವನು.

ಶಂ. ಭಾ. :– ಧರ್ಮಪ್ರಿಯನಾದವನು ಅಥವಾ ಧರ್ಮರೂಪನೂ–ಪ್ರಿಯನೂ ಆಗಿರುವವನು.

602) ಪ. ಭ. :– ಪ್ರವೃತ್ತಿ ಮತ್ತು ನಿವೃತ್ತಿಧರ್ಮಗಳು ಯಾವನಿಗೆ ಪ್ರಿಯವಾಗಿವೆಯೋ–ಅವನು.

ನಿರುಕ್ತಿ :– ಧರ್ಮೌ ಪ್ರಿಯೌ ತಾವಸ್ಯೇತಿ ಪ್ರವರ್ತಕನಿವರ್ತಕೌ ।
ವೃಷಪ್ರಿಯಃ ಸ ವಿಜ್ಞೇಯೋಹ್ಯಷ್ಟಾರ್ಣಃ ಫಲದೋ ಮನುಃ ॥

'ಓಂ ವೃಷಪ್ರಿಯಾಯ ನಮಃ'–ಎಂಬ ಈ ನಾಮಮಂತ್ರಜಪವು ಫಲಪ್ರದವಾದುದು.

598) ಸ. ಸಂ. :– ಧರ್ಮಪ್ರಿಯನು.

* * *

ಅನಿವರ್ತೀ ನಿವೃತ್ತಾತ್ಮಾ ಸಂಕ್ಷೇಪ್ತಾ ಕ್ಷೇಮಕೃಚ್ಛಿವಃ ।
ಶ್ರೀವತ್ಸವಕ್ಷಾಃ ಶ್ರೀವಾಸಃ ಶ್ರೀಪತಿಃ ಶ್ರೀಮತಾಂ ವರಃ ॥೭೭॥

596) ಅನಿವರ್ತೀ = ಮುಕ್ತಾತ್ಮರನ್ನು ಹಿಂದಿರುಗಿಸದವನು ; ಯುದ್ಧದಲ್ಲಿ ಹಿಮ್ಮೆಟ್ಟದವನು ; ತನ್ನ ಮಾತಿನಿಂದ ಹಿಮ್ಮೆಟ್ಟದವನು ; ಧರ್ಮದಿಂದ ಹಿಮ್ಮೆಟ್ಟದವನು.

ಶಂ. ಭಾ. :– ದೇವಾಸುರರ ಯುದ್ಧದಿಂದ ಹಿಮ್ಮೆಟ್ಟದವನು ; ಧರ್ಮ ಪ್ರಿಯನಾಗಿರುವುದರಿಂದ ಧರ್ಮದಿಂದ ಹಿಂದಿರುಗದವನು.

603) ಪ. ಭ. :– ಪ್ರವೃತ್ತಿಕರ್ಮದಲ್ಲಿ ತತ್ಪರರಾಗಿ ಪಿತೃಯಾಣವನ್ನು ಹೊಂದಿದವರನ್ನು ಸಂಸಾರದಿಂದ ಹಿಂದಿರುಗಿಸದೇ ಇರುವವನು.

ನಿರುಕ್ತಿ :– **ಪಿತೃಯಾಣಪ್ರವೃತ್ತಾನಾಂ ಸಂಸಾರಾನ್ನ ನಿವರ್ತನಾತ್ ।**
ಅನಿವರ್ತೀ ಸಮಾಖ್ಯಾತೋ ಹ್ಯಷ್ಟಾರ್ಣೋಽಭಯದೋ ಮನುಃ ॥

'ಓಂ ಅನಿವರ್ತಿನೇ ನಮಃ'–ಎಂಬ ಈ ನಾಮಮಂತ್ರಜಪವು ಅಭಯದಾಯಕವು.

599) ಸ. ಸಂ. :– ಮುಖ್ಯಪ್ರಾಣದಾಸರಲ್ಲಿ ಇರುವವನು ; ಎಂದಿಗೂ ಹಿಮ್ಮೆಟ್ಟದವನು.

* * *

597) ನಿವೃತ್ತಾತ್ಮಾ = ವಿಷಯಗಳಿಂದ ನಿವೃತ್ತವಾದ ಮನಸ್ಸುಳ್ಳವನು ; ನಿವೃತ್ತಿಧರ್ಮದಲ್ಲಿ ನಿಷ್ಠೆಯುಳ್ಳ ಮನಸ್ಸುಳ್ಳವನು.

ಶಂ. ಭಾ. :– ಸ್ವಾಭಾವಿಕವಾಗಿಯೇ ವಿಷಯಗಳಿಂದ ಹಿಂದಿರುಗಿದ ಮನಸ್ಸುಳ್ಳವನು.

604) ಪ. ಭ. :– ನಿವೃತ್ತಿಧರ್ಮವುಳ್ಳ ಆತ್ಮಗಳುಳ್ಳವನು.

ನಿರುಕ್ತಿ :– **ಸರ್ವೇ ನಿವೃತ್ತಿಧರ್ಮಾಣೋ ಯಸ್ಯಾತ್ಮಾನಃ ಸ ತು ಸ್ಮೃತಃ ।**
ನಿವೃತ್ತಾತ್ಮೇತ್ಯಷ್ಟವರ್ಣೋ ದುಷ್ಕರ್ಮಫಲಮೋಚಕಃ ॥

'ಓಂ ನಿವೃತ್ತಾತ್ಮನೇ ನಮಃ'–ಎಂಬ ಈ ನಾಮಮಂತ್ರಜಪವು ದುಷ್ಕರ್ಮದ ಫಲವನ್ನು ಹೋಗಲಾಡಿಸುತ್ತದೆ.

600) ಸ. ಸಂ. :– ಪ್ರಳಯಕಾಲದಲ್ಲಿ ಜೀವಗಳು ಯಾವನಿಂದ ನಿವೃತ್ತಿ ಹೊಂದುವುದೋ–ಅವನು ; ಮನಸ್ಸುಗಳು ಯಾವನಿಂದ ಹಿಂದಿರುಗುತ್ತವೆಯೋ–ಅವನು. ಯತೋ ವಾಚೋ ನಿವರ್ತನ್ತೇ ಅಪ್ರಾಪ್ಯ ಮನಸಾ ಸಹ । (ತೈ. ಉ.) ಯನ್ಮನಸಾ ನ ಮನುತೇ (ಕೇನ. ಉ.)

* * *

598) **ಸಂಕ್ಷೇಪ್ತಾ** = ಉಪಸಂಹಾರಮಾಡಿಕೊಳ್ಳುವವನು ; ವಿಸ್ತಾರವಾದ ಜಗತ್ತನ್ನು ಸಂಹಾರಸಮಯದಲ್ಲಿ ತನ್ನಲ್ಲಿಯೇ ಸಂಕ್ಷೇಪಿಸಿಕೊಳ್ಳುವವನು.

ಶಂ. ಭಾ. :– ವಿಸ್ತಾರವಾದ ಜಗತ್ತನ್ನು ಸಂಹಾರಸಮಯದಲ್ಲಿ ಸೂಕ್ಷ್ಮವಾಗಿ ಸಂಕ್ಷೇಪಿಸುವವನು.

605) **ಪ. ಭ. :–** ಪ್ರವೃತ್ತಿಧರ್ಮನಿಷ್ಠರಾದವರನ್ನು ಸ್ವಾಭಾವಿಕವಾದ ಜ್ಞಾನ-ಶಕ್ತಿಗಳಿಂದ ಸಂಕೋಚಪಡಿಸುವವನು ; **ಅಸಂಕ್ಷೇಪ್ತಾ** = ನಿವೃತ್ತಿಧರ್ಮವುಳ್ಳವರನ್ನು ಒಳಕ್ಕೆ ಎಳೆದುಕೊಂಡು ಅವರ ಸ್ವಾಭಾವಿಕವಾದ ಮತ್ತು ಅಸಂಕುಚಿತವಾದ ಮೇಧೆಯು ಪ್ರಕಾಶಗೊಳ್ಳುವಂತೆ ಮಾಡುವವನು.

ನಿರುಕ್ತಿ :– **ಸ್ವಾಭಾವಿಕಾಸಂಕುಚಿತಮೇಧಾಯಾ ಅಪ್ರಸಾರಣಮ್ ।**
ಪ್ರವೃತ್ತಿಧರ್ಮಣಾಂ ಕರ್ತುಂ ಶೀಲಂ ಯಸ್ಯಾಸ್ತಿ ಸರ್ವದಾ ।
ಸ ಸಂಕ್ಷೇಪ್ತೇತಿ ಕಥಿತಃ ಷಡರ್ಣೋ ಧೀವಿಕಾಸದಃ ।
ಸ್ವಾಭಾವಿಕಾಸಂಕುಚಿತಮೇಧಾಯಾಶ್ಚ ಪ್ರಕಾಶನಮ್ ।
ನಿವೃತ್ತಿಧರ್ಮಣಾಂ ಕರ್ತುಂ ಶೀಲಂ ಯಸ್ಯಾಸ್ತಿ ಸರ್ವದಾ ।
ಸೋಽಸಂಕ್ಷೇಪ್ತೇತಿ ಕಥಿತಃ ಷಡರ್ಣೋ ಧೀವಿಕಾಸದಃ ॥

'ಓಂ ಸಂಕ್ಷೇಪ್ತ್ರೇ ನಮಃ' ಅಥವಾ 'ಓಂ ಅಸಂಕ್ಷೇಪ್ತ್ರೇ ನಮಃ'– ಎಂಬ ಈ ನಾಮಮಂತ್ರಜಪವು ಬುದ್ಧಿಯನ್ನು ವಿಕಾಸಗೊಳಿಸುತ್ತದೆ.

601) **ಸ. ಸಂ. :–** ಚೆನ್ನಾಗಿ ಎಸೆಯುವವನು ; ದುಂದುಭಿಯ ಶರೀರವನ್ನು ಪಾದಾಂಗುಷ್ಠದಿಂದ ದೂರಕ್ಕೆ ಎಸೆದವನು ; ಸೃಷ್ಟಿಯಲ್ಲಿ ವಿಸ್ತಾರಗೊಂಡ ಜಗತ್ತನ್ನು ಪ್ರಳಯಕಾಲದಲ್ಲಿ ಸಂಕೋಚಗೊಳಿಸುವವನು.

* * *

599) **ಕ್ಷೇಮಕೃತ್** = ಕ್ಷೇಮವನ್ನುಂಟುಮಾಡುವವನು ; ಲಬ್ಧವಾದ ವಸ್ತುಗಳನ್ನು ಸಂರಕ್ಷಿಸುವವನು.

ಶಂ. ಭಾ. :– ದೊರಕಿದ ಪದಾರ್ಥವನ್ನು ರಕ್ಷಿಸುವವನು.

606) **ಪ. ಭ. :–** ಸತ್ಪುರುಷರಿಗೆ ಅಸಂಕೋಚಜ್ಞಾನರೂಪವಾದ ಕ್ಷೇಮವನ್ನುಂಟುಮಾಡುವವನು.
ನಿರುಕ್ತಿ :– ಅಸಂಕೋಚಜ್ಞಾನರೂಪಕ್ಷೇಮಸ್ಯ ಕರುಣಾತ್ಸತಾಮ್ ।
ಕ್ಷೇಮಕೃಚ್ಚಾಪಿ ಸರ್ವೇಷಾಂ.......... ॥

602) **ಸ. ಸಂ. :–** ಕ್ಷೇಮವನ್ನುಂಟುಮಾಡುವವನು. **ಯೋಗಕ್ಷೇಮಂ ವಹಾಮ್ಯಹಮ್ (ಗೀತಾ) ಅಕ್ಷೇಮಕೃತ್** = ಅಕ್ಷೇಮವನ್ನು ಕತ್ತರಿಸಿ ಹಾಕುವವನು.

* * *

600) **ಶಿವಃ** = ಶುದ್ಧಮಂಗಳಸ್ವರೂಪಿಯು ; ಮಂಗಳವನ್ನುಂಟು ಮಾಡುವವನು.

ಶಂ. ಭಾ. :– ತನ್ನ ನಾಮಸ್ಮರಣಮಾತ್ರದಿಂದಲೇ ಪವಿತ್ರಗೊಳಿಸು ವವನು.

607) **ಪ. ಭ. :–** ಭೋಗವನ್ನು ಬಯಸುವವರಿಗೂ ಮತ್ತು ಮೋಕ್ಷ ವನ್ನು ಬಯಸುವವರಿಗೂ ಮಂಗಳವನ್ನುಂಟುಮಾಡುವವನು. **ಶಿವಃ ಶಿವಾನಾಮಶಿವೋಽಶಿವಾನಾಮ್ ।** (ಭಾ. ಉ. ೪೨-೬) **ಪಿತೃಲೋಕೇ ರಾಜ್ಯಮನುಶಾಸ್ತಿ ದೇವಃ ॥ ಸಂಸಾರಮೋಕ್ಷಸ್ಥಿತಿಬನ್ಧಹೇತುಃ ॥**
ನಿರುಕ್ತಿ :– .... ಶಿವಸ್ಯ ಕರಣಾಚ್ಛಿವಃ ॥

603) **ಸ. ಸಂ. :–** ಸುಖಾತ್ಮಕನು ; ಮಂಗಳವುಳ್ಳವನು ; ಮುಕ್ತಾತ್ಮ ರನ್ನು ನಡೆಸುವವನು ; ಮಂಗಳವನ್ನುಂಟುಮಾಡುವವನು.

* * *

601) **ಶ್ರೀವತ್ಸವಕ್ಷಾಃ** = ಪ್ರಕೃತಿತತ್ತ್ವರೂಪವಾದ ಶ್ರೀವತ್ಸವೆಂಬ ಮಚ್ಚೆ ಯಿಂದ ಎದೆಯಲ್ಲಿ ಅಲಂಕೃತನಾದವನು.

ಶಂ. ಭಾ. :– ಶ್ರೀವತ್ಸವೆಂಬ ಚಿಹ್ನೆಯನ್ನು ವಕ್ಷಃಸ್ಥಳದಲ್ಲಿ ಹೊಂದಿರು ವವನು.

608) **ಪ. ಭ. :–** ಲಕ್ಷ್ಮೀದೇವಿಯ ವಾಲ್ಲಭ್ಯದ ಸೌಭಾಗ್ಯಚಿಹ್ನೆಯಾದ

ಮತ್ತು ಪರಮಪುರುಷಲಕ್ಷಣವಾದ ಬಿಳಿಯ ಬಣ್ಣದ ರೋಮಗಳ ಸುಳಿಯ ರೂಪವಾದ ಮಚ್ಚೆಯನ್ನು ಎದೆಯಲ್ಲಿ ಹೊಂದಿರುವವನು.

ನಿರುಕ್ತಿ :– **ಲಕ್ಷ್ಮೀವಾಲ್ಲಭ್ಯಸೌಭಾಗ್ಯಚಿಹ್ನಂ ಶ್ರೀವತ್ಸನಾಮಕಮ್ ।**
ಶ್ರೀವತ್ಸವಕ್ಷಾ ಯಸ್ಯಾಸ್ತಿ ವಕ್ಷಸೀತಿ ಸ ತು ಸ್ಮೃತಃ ॥

604) **ಸ. ಸಂ. :–** ಕಾಂತಿಯಿಂದ ಕೂಡಿದ ಮಹತ್ತ್ವಲಕ್ಷಣವಾದ ಬಿಳಿಯ ಬಣ್ಣದ ರೋಮಗಳ ಸುಳಿಯ ರೂಪವಾದ ಚಿಹ್ನೆಯು ಯಾವನ ವಕ್ಷಃಸ್ಥಳದಲ್ಲಿದೆಯೋ–ಅವನು.

* * *

602) **ಶ್ರೀವಾಸಃ** = ಲಕ್ಷ್ಮೀದೇವಿಗೆ ನಿತ್ಯನಿವಾಸಸ್ಥಾನನಾಗಿರುವವನು.

ಶಂ. ಭಾ. :– ಯಾವನ ವಕ್ಷಃಸ್ಥಳದಲ್ಲಿ ಎಂದಿಗೂ ಅಳಿವಿಲ್ಲದ ಲಕ್ಷ್ಮಿಯು ವಾಸಮಾಡುವಳೋ–ಅವನು.

609) **ಪ. ಭ. :–** ಶ್ರೀದೇವಿಗೆ ನಿತ್ಯವಿಹಾರಸ್ಥಾನನಾದವನು.
ನಿರುಕ್ತಿ :– **ಶ್ರಿಯೋ ವಿಹಾರಸ್ಥಾನತ್ವಾಚ್ಛ್ರೀವಾಸ ಇತಿ ಚೋಚ್ಯತೇ ॥**

605) **ಸ. ಸಂ. :–** ಶ್ರೀದೇವಿಯು ಯಾವನಲ್ಲಿ ವಾಸಮಾಡುವಳೋ ಅವನು.

* * *

603) **ಶ್ರೀಪತಿಃ** = ಶ್ರೀದೇವಿಗೆ ಸಹಜಪತಿಯಾಗಿರುವವನು.

ಶಂ. ಭಾ. :– ಅಮೃತಮಥನಸಮಯದಲ್ಲಿ ಸಮಸ್ತದೇವಾಸುರರನ್ನೂ ಬಿಟ್ಟು ಶ್ರೀದೇವಿಯು ಯಾವನನ್ನು ಪತಿಯನ್ನಾಗಿ ವರಿಸಿದಳೋ–ಅವನು ; ಪರಾಶಕ್ತಿಗೆ ಪತಿಯಾದವನು. **ಪರಾಸ್ಯ ಶಕ್ತಿರ್ವಿವಿಧೈವ ಶ್ರೂಯತೇ ॥** (ಶ್ವೇ. ೬-೮)

610) **ಪ. ಭ. :–** ಶ್ರೀದೇವಿಯಿಂದ ತಾನಾಗಿಯೇ ಪತಿಯಾಗಿ ವರಿಸಲ್ಪಟ್ಟವನು. **ಹ್ರೀಶ್ಚ ತೇ ಲಕ್ಷ್ಮೀಶ್ಚ ಪತ್ನ್ಯೌ** (ಪು. ಸೂ.) **ಅಸ್ಯೇಶಾನಾ ಜಗತೋ ವಿಷ್ಣುಪತ್ನೀ ॥** (ನೀ. ಸೂ.) ಶ್ರೀದೇವಿಗೆ ನಿತ್ಯಸ್ವಯಂವರ ವಲ್ಲಭನು.

ನಿರುಕ್ತಿ :– **ಸ್ವಯಂ ಶ್ರಿಯಃ ಪತಿತ್ವೇನ ವೃತತ್ವಾಚ್ಛ್ರೀಪತಿಃ ಸ್ಮೃತಃ ॥**

606) **ಸ. ಸಂ.** :– ಶ್ರೀದೇವಿಗೆ ಪತಿಯಾದವನು.

* * *

604) **ಶ್ರೀಮತಾಂ ವರಃ** = ಶ್ರೀಸಂಪನ್ನರಾದ ಎಲ್ಲರಿಗಿಂತಲೂ ಶ್ರೇಷ್ಠತಮನಾದವನು.

ಶಂ. ಭಾ. :– ಋಕ್ಕು-ಯಜುಸ್ಸು-ಸಾಮಗಳೆಂಬ ಸಂಪತ್ತುಳ್ಳ ಬ್ರಹ್ಮನೇ ಮುಂತಾದ ಶ್ರೀಮಂತರಲ್ಲಿ ಮುಖ್ಯತಮನಾದವನು.

ಋಚಃ ಸಾಮಾನಿ ಯಜೂಗ್ಂಷಿ ಸಾ ಹಿ ಶ್ರೀರಮೃತಾ ಸತಾಮ್ ।
(ತೈ. ಬ್ರಾ. ೧೨-೧)

611) **ಪ. ಭ.** :– ಶ್ರೀಮಂತರಾದ ಬ್ರಹ್ಮಾದಿದೇವತೆಗಳಲ್ಲಿ ಶ್ರೇಷ್ಠತಮನಾದವನು.

ನಿರುಕ್ತಿ :– **ದೇವಾನಾಂ ಶ್ರೀಮತಾಂ ಶ್ರೇಷ್ಠಃ ಶ್ರೀಮತಾಂ ವರ ಉಚ್ಯತೇ ॥**

607) **ಸ. ಸಂ.** :– ಸರಸ್ವತೀದೇವಿಯೇ ಮುಂತಾದವರನ್ನು ಹೊಂದಿರುವ ಬ್ರಹ್ಮನೇ ಮುಂತಾದವರಿಗಿಂತಲೂ ಶ್ರೇಷ್ಠನಾದವನು ; ಶ್ರೀಯಮತವನ್ನು ತನಗಿಂತಲೂ ಕೆಳಗೆ ಹೊಂದಿರುವವನು ; ಶ್ರೀಗೆ ಅಭಿಮತವಾದ ಆಕಾಶವನ್ನು ಹೊಂದಿರುವವನು. **ಯೋ ವೇದ ನಿಹಿತಂ ಗುಹಾಯಾಂ ಪರಮೇ ವ್ಯೋಮನ್ ॥** (ತೈ. ಆ.)

* * *

ಶ್ರೀದಃ ಶ್ರೀಶಃ ಶ್ರೀನಿವಾಸಃ ಶ್ರೀನಿಧಿಃ ಶ್ರೀವಿಭಾವನಃ
ಶ್ರೀಧರಃ ಶ್ರೀಕರಃ ಶ್ರೇಯಃ ಶ್ರೀಮಾಲ್ಲೋಕತ್ರಯಾಶ್ರಯಃ ॥೭೮॥

605) **ಶ್ರೀದಃ** = ಭಕ್ತರಿಗೆ ಸಂಪತ್ತುಗಳನ್ನು ಕೊಡುವವನು.

ಶಂ. ಭಾ. :– ಭಕ್ತರಿಗೆ ಸಂಪತ್ತನ್ನು ಕೊಡುವವನು.

612) **ಪ. ಭ.** :– ಶ್ರೀದೇವಿಗೆ ತನ್ನ ಪ್ರಣಯರಸವನ್ನು ಕೊಡುವವನು.

ನಿರುಕ್ತಿ :– **ಯೋಽಸೌ ಶ್ರಿಯೈ ಸ್ವಪ್ರಣಯರಸದಃ ಶ್ರೀದ ಈರಿತಃ ॥**

608) **ಸ. ಸಂ. :–** ಸಂಪತ್ತನ್ನು ಕೊಡುವವನು ; ಶ್ರೀರೂಪಿಣಿಯಾದ ರುಕ್ಮಿಣೀದೇವಿಗೆ ಪ್ರದ್ಯುಮ್ನನನ್ನು ಕೊಟ್ಟವನು.

* * *

606) **ಶ್ರೀಶಃ** = ಶ್ರೀಗೆ ಈಶ್ವರನಾದವನು.

ಶಂ. ಭಾ. :– ಶ್ರೀಗೆ ಈಶ್ವರನಾದವನು.

613) **ಪ. ಭ. :–** ಶ್ರೀದೇವಿಗೆ ಈಶನಾದವನು ; ಶ್ರೀದೇವಿಯನ್ನು ಈಶೆಯನ್ನಾಗಿ ಹೊಂದಿರುವವನು ; ಶ್ರೀದೇವಿಗೂ ಶ್ರೀತ್ವವುಂಟಾಗಲು ಕಾರಣನಾದವನು. ಶ್ರೀದೇವಿಯನ್ನು ನಿರ್ವಹಿಸುವವನು.

ನಿರುಕ್ತಿ :– ಶ್ರೀಶಃ ಸ್ಯಾಚ್ಛ್ರಿಯ ಈಶತ್ವಾದೀಶಾ ಶ್ರೀರಸ್ಯ ವಾ ಮತಃ ॥

609) **ಸ. ಸಂ. :–** ಶ್ರೀದೇವಿಗೆ ಯಾವನಿಂದ ಸುಖವುಂಟಾಗುವುದೋ ಅವನು.

* * *

607) **ಶ್ರೀನಿವಾಸಃ** = ಸಂಪತ್ತುಗಳಿಗೆ ವಾಸಸ್ಥಾನನಾದವನು.

ಶಂ. ಭಾ. :– ಶ್ರೀಮಂತರಲ್ಲಿ ನಿತ್ಯವೂ ನಿವಾಸಮಾಡುವವನು.

614) **ಪ. ಭ. :–** (ದಿವ್ಯವಾದ ಬಳ್ಳಿಗೆ ಕಲ್ಪವೃಕ್ಷದಂತೆ) ಶ್ರೀದೇವಿಗೆ ಯಾವಾಗಲೂ ಆಶ್ರಯನಾಗಿರುವವನು.

ನಿರುಕ್ತಿ :– ನಿತ್ಯೋಪಘ್ನನಿವಾಸತ್ವಾಚ್ಛ್ರೀನಿವಾಸಃ ಶ್ರಿಯಃ ಸ್ಮೃತಃ ॥

610) **ಸ. ಸಂ. :–** ಅಂತರ್ಯಾಮಿಯಾಗಿ ಸಂಪತ್ತಿನಲ್ಲಿ ವಾಸಮಾಡುವವನು ; ಶ್ರೀಯನ್ನು ಒಯ್ಯುವವನು ; ಜನರು ಯಾವನಲ್ಲಿ ವಾಸಮಾಡುವರೋ–ಅವನು.

* * *

608) **ಶ್ರೀನಿಧಿಃ** = ಸಮಸ್ತಸಂಪತ್ತುಗಳೂ ಯಾವನಲ್ಲಿ ಒಂದಾಗಿ ಸೇರಿವೆಯೋ–ಅವನು.

ಶಂ. ಭಾ. :– ಸರ್ವಶಕ್ತಿಮಯನಾದ ಯಾವನಲ್ಲಿ ಎಲ್ಲ ಸಂಪತ್ತು ಗಳೂ ಇರಿಸಲ್ಪಟ್ಟಿವೆಯೋ–ಅವನು.

615) **ಪ. ಭ. :–** ಶ್ರೀದೇವಿಯು (ಪೆಟ್ಟಿಗೆಯಲ್ಲಿ ರತ್ನಮಂಜರಿಯು ಹೇಗೋ ಹಾಗೆ) ಯಾವನಲ್ಲಿ ಇರಿಸಲ್ಪಟ್ಟಿರುವಳೋ–ಅವನು.
ನಿರುಕ್ತಿ :– ಶ್ರೀರಸ್ಮಿನ್ನಿಹಿತಾ ನಿತ್ಯಂ ಶ್ರೀನಿಧಿಃ ಪರಿಕೀರ್ತಿತಃ ॥

611) **ಸ. ಸಂ. :–** ಕಾಂತಿಗಳು ಯಾವನಲ್ಲಿ ಇರಿಸಲ್ಪಟ್ಟಿವೆಯೋ–ಅವನು.

* * *

609) **ಶ್ರೀವಿಭಾವನಃ** = ಶ್ರೀದೇವಿಯನ್ನು ಚೆನ್ನಾಗಿ ಭಾವಿಸಿ ಗೌರವಿಸುವವನು ; ಸಂಪತ್ತುಗಳನ್ನು ಬಗೆ-ಬಗೆಯಾಗಿ ವಿತರಣೆಮಾಡುವವನು.

ಶಂ. ಭಾ. :– ಸಮಸ್ತಭೂತಗಳಿಗೂ ಅವರವರ ಕರ್ಮಾನುಸಾರವಾಗಿ ಬಗೆ-ಬಗೆಯ ಸಂಪತ್ತನ್ನು ಕೊಡುವವನು.

616) **ಪ. ಭ. :–** ಶ್ರೀಯು ಯಾವನ ಪ್ರಸಿದ್ಧವಾದ ಹೆಸರಿಗೆ ಕಾರಣಳಾಗಿದ್ದಾಳೆಯೋ–ಅವನು. **ಅಪ್ರಮೇಯಂ ಹಿ ತತ್ತೇಜೋ ಯಸ್ಯ ಸಾ ಜನಕಾತ್ಮಜಾ ॥** (ರಾ. ಅ. ೩೭-೧೮)
ನಿರುಕ್ತಿ :– ಯಸ್ಯ ಪ್ರಖ್ಯೋಪಾಖ್ಯಹೇತುಃ ಶ್ರೀಃ ಸ್ಯಾತ್ಸ ಶ್ರೀವಿಭಾವನಃ ॥

612) **ಸ. ಸಂ. :–** ರಮಾದೇವಿಗೆ ಭಾವಗಳನ್ನು ವಿಶೇಷವಾಗಿ ಹೊಂದಿಸುವವನು ; ರಮಾದೇವಿಯ ವಿಶೇಷವಾದ ಕಾಂತಿಗಳಿಂದ ತೃಪ್ತಿಗೊಳ್ಳುವವನು. ಸೀತಾದೇವಿಯೊಡನೆ ಸಂಶ್ಲಿಷ್ಟನಾದವನು ; ಸಂಪತ್ತಿನ ವಿಭೂತಿಗಳನ್ನು ಬಗೆ-ಬಗೆಯಾಗಿ ಭಾವಿಸುವವನು. **ವ್ಯಸ್ತಸಮಸ್ತವಿಶ್ವ ವಿಭೂತಯೇ ವಿಷ್ಣವೇ ಲೋಕಕರ್ತ್ರೇ** (ಸ್ಕಾಂದ)

* * *

610) **ಶ್ರೀಧರಃ** = ಶ್ರೀದೇವಿಯನ್ನು ಧರಿಸಿರುವವನು.

ಶಂ. ಭಾ. :– ಸಮಸ್ತಭೂತಗಳಿಗೂ ತಾಯಿಯಾದ ಶ್ರೀದೇವಿಯನ್ನು ಎದೆಯಲ್ಲಿ ಧರಿಸಿರುವವನು.

617) **ಪ. ಭ. :–** ಸುಧೆಯು (ಅಮೃತವು) ರುಚಿಯನ್ನೂ, ರತ್ನವು

ಪ್ರಕಾಶವನ್ನೂ, ಚಂದ್ರನು ಬೆಳದಿಂಗಳನ್ನೂ, ಹೂವು ಸುವಾಸನೆಯನ್ನೂ ಧರಿಸಿರುವಂತೆ ಸದಾ ಶ್ರೀದೇವಿಯನ್ನು ಧರಿಸಿರುವವನು.

ನಿರುಕ್ತಿ :– ರುಚ್ಯರ್ಚಿಃಕೌಮುದೀಗನ್ಧಾನ್ಸಧಾರತ್ನೇನ್ದುಪುಷ್ಪವತ್ ।
ಶ್ರಿಯಂ ಧರತಿ ನಿತ್ಯಂ ಯಃ ಶ್ರೀಧರಃ ಸ ತು ಕೀರ್ತಿತಃ ॥

613) **ಸ. ಸಂ. :–** ಶ್ರೀದೇವಿಯನ್ನು ಧರಿಸಿರುವವನು.

* * *

611) **ಶ್ರೀಕರಃ** = ಭಕ್ತರಿಗೆ ಸಂಪತ್ತು-ಕಾಂತಿಗಳನ್ನು ಉಂಟುಮಾಡುವವನು.

ಶಂ. ಭಾ. :– ಸ್ಮರಿಸುವ, ಸ್ತುತಿಸುವ ಮತ್ತು ಪೂಜಿಸುವ ಭಕ್ತರಿಗೆ ಸಂಪತ್ತನ್ನು ಉಂಟುಮಾಡುವವನು.

618) **ಪ. ಭ. :–** ಪರಸ್ವರೂಪದಲ್ಲಿ ಹೇಗೋ ಹಾಗೆಯೇ ವ್ಯೂಹ ಮತ್ತು ಅವತಾರಗಳಲ್ಲಿಯೂ ಕೂಡ ಶ್ರೀದೇವಿಯನ್ನು ತನಗೆ ಅನುರೂಪ ಳನ್ನಾಗಿ ಮಾಡಿಕೊಳ್ಳುವವನು.

ನಿರುಕ್ತಿ :– ಪರವ್ಯೂಹಾವತಾರೇಷು ಸ್ವಾನುರೂಪಾಂ ಕರೋತಿ ತಾಮ್।
ಶ್ರಿಯಂ ಯೋಽಸೌ ಶ್ರೀಕರಃ ಸ್ಯಾನ್ಮನ್ತ್ರರ್ಣಃ ಶ್ರೀಕರೋ ಮನುಃ ॥

'**ಓಂ ಶ್ರೀಕರಾಯ ನಮಃ**'–ಎಂಬ ನಾಮಮಂತ್ರಜಪವು ಸಂಪತ್ಕರವಾದುದು.

614) **ಸ. ಸಂ. :–** ರಮಾದೇವಿಯು ಯಾವನ ಕೈಯ್ಯಲ್ಲಿದ್ದಾಳೆಯೋ–ಅವನು. ಸಂಪತ್ತುಗಳನ್ನು ಉಂಟುಮಾಡುವವನು.

* * *

612) **ಶ್ರೇಯಃ** = ಅತ್ಯಂತಪ್ರಶಸ್ಯನಾದವನು. ಯಾವ ದೋಷವೂ ಇಲ್ಲದ ಪರಿಪೂರ್ಣನಾದ ಸುಖಸ್ವರೂಪಿಯು.

ಶಂ. ಭಾ. :– ಎಂದಿಗೂ ನಾಶಹೊಂದದೇ ಇರುವ ಸುಖಪ್ರಾಪ್ತಿರೂಪವಾದ ಶ್ರೇಯೋರೂಪನು.

619) **ಪ. ಭ. :–** **ಶ್ರೇಯಃಶ್ರೀಮಾನ್** = ಪುರುಷಾರ್ಥಗಳ ಪ್ರಾಪ್ತಿ

ಗೋಸ್ಕರವಾಗಿ ಯಾಚಕರಿಂದ ಆಶ್ರಯಿಸಲ್ಪಡುವ ಲೋಕಮಾತೆಯಾದ ಶ್ರೀದೇವಿಯು ಯಾವನೊಡನೆ ನಿತ್ಯಯೋಗವನ್ನು ಹೊಂದಿರುವಳೋ– ಅವನು.

ನಿರುಕ್ತಿ :– ಶ್ರೇಯಸೇ ಶ್ರಯಣೀಯಾ ಶ್ರೀಃ ಶ್ರೇಯಃಶ್ರೀರ್ನಿತ್ಯ
ಯೋಗಿನೀ।
ಶ್ರೇಯಃಶ್ರೀಮಾನಸಾವಸ್ಯ ವಸ್ವರ್ಣಃ ಪುರುಷಾರ್ಥದಃ ॥

'ಓಂ ಶ್ರೇಯಃಶ್ರೀಮತೇ ನಮಃ'–ಎಂಬ ಈ ನಾಮಮಂತ್ರಜಪವು ಪುರುಷಾರ್ಥಗಳನ್ನು ಕೊಡತಕ್ಕುದು.

615) ಸ. ಸಂ. :– ಶ್ರೇಯಃ = ಅತಿಶಯಪ್ರಶಸ್ಯನಾದವನು.

* * *

613) ಶ್ರೀಮಾನ್ = ಶ್ರೀಗಳಿಂದ ಸಂಪನ್ನನಾದವನು.

ಶಂ. ಭಾ. :– ಶ್ರೀಗಳು ಯಾವನಲ್ಲಿವೆಯೋ ಅವನು.

616) ಸ. ಸಂ. :– ಸಂಪತ್ತನ್ನು ಆಳಿಯುವವನು.

* * *

614) ಲೋಕತ್ರಯಾಶ್ರಯಃ = ಮೂರು ಲೋಕಗಳಿಗೂ ಆಶ್ರಯನಾದ ವನು.

ಶಂ. ಭಾ. :– ಮೂರು ಲೋಕಗಳಿಗೂ ಆಶ್ರಯನಾದವನು.

620) ಪ. ಭ. :– ಜಗನ್ಮಾತೆಯಾದ ಶ್ರೀದೇವಿಯೊಡನೆ ಸರ್ವರಿಗೂ ತಂದೆಯಂತೆ ಆಶ್ರಯನಾಗಿರುವವನು.

ನಿರುಕ್ತಿ :– ಶ್ರಿಯಾ ಸಹ ಜಗನ್ಮಾತ್ರಾ ಪಿತೃವತ್ಸಕಲಾಶ್ರಯಃ ।
ಲೋಕತ್ರಯಾಶ್ರಯಃ ಸ ಸ್ಯಾದ್ದಶಾರ್ಣೋ ರಕ್ಷಕತ್ವದಃ ॥

'ಓಂ ಲೋಕತ್ರಯಾಶ್ರಯಾಯ ನಮಃ'–ಎಂಬ ಈ ನಾಮಮಂತ್ರ ಜಪವು ರಕ್ಷಣೆಯನ್ನು ಕೊಡುವಂತಹುದು.

617) ಸ. ಸಂ. :–ಲೋಕವನ್ನು ರಕ್ಷಿಸುವವನಾಗಿ ಲಕ್ಷ್ಮೀದೇವಿಗೆ ಆಶ್ರಯ ನಾಗಿರುವವನು ; ಮೂರು ಲೋಕಗಳಿಗೂ ಆಶ್ರಯನಾಗಿರುವವನು ;

ಯಾವನಿಂದ ಜೀವಗಳು ಲಿಂಗದೇಹ, ಅನಿರುದ್ಧದೇಹ ಮತ್ತು ಸ್ಥೂಲದೇಹಗಳಿಗೆ ಅಭಿಮಾನಿಗಳಾಗಿ ಆಶ್ರಯವಾಗಿವೆಯೋ–ಅವನು.

* * *

ಸ್ವಕ್ಷಃ ಸ್ವಙ್ಗಃ ಶತಾನನ್ದೋ ನನ್ದಿರ್ಜ್ಯೋತಿರ್ಗಣೇಶ್ವರಃ ।
ವಿಜಿತಾತ್ಮಾ ವಿಧೇಯಾತ್ಮಾ ಸತ್ಕೀರ್ತಿಶ್ಛಿನ್ನಸಂಶಯಃ ॥೭೯॥

615) **ಸ್ವಕ್ಷಃ** =ಶ್ರೇಷ್ಠವಾದ ಇಂದ್ರಿಯಗಳು ಅಥವಾ ಕಣ್ಣುಗಳುಳ್ಳವನು.

ಶಂ. ಭಾ. :– ಕಮಲಕ್ಕೆ ಸಮಾನವಾದ ಸುಂದರವಾದ ಕಣ್ಣುಗಳುಳ್ಳವನು.

621) ಪ. ಭ. :– ಶ್ರೀದೇವಿಯ ಸೌಂದರ್ಯಸುಧಾಸಮುದ್ರವನ್ನು ಪೂರ್ಣವಾಗಿ ಅನುಭವಿಸುವ ದಿವ್ಯವಾದ ಕಣ್ಣುಗಳುಳ್ಳವನು.

ನಿರುಕ್ತಿ :– ಶ್ರೀಸೌನ್ದರ್ಯಸುಧಾಸಿನ್ಧುಪಾರೀಣಕರಣೋ ಹಿ ಯಃ ।
ಸ್ವಕ್ಷಃ................ ॥

618) ಸ. ಸಂ. :– ಶೋಭನವಾದ ಇಂದ್ರಿಯಗಳುಳ್ಳವನು ; ಅರ್ಜುನನಿಗೆ ಯಾವನಿಂದ ಶೋಭನವಾದ ಕಣ್ಣುಗಳುಂಟಾದುವೋ–ಅವನು. **ದಿವ್ಯಂ ದದಾಮಿ ತೇ ಚಕ್ಷುಃ (ಗೀತಾ)**

* * *

616) **ಸ್ವಙ್ಗಃ**= ಸುಂದರವಾದ ಅಂಗಗಳುಳ್ಳವನು.

ಶಂ. ಭಾ. :– ಸುಂದರವಾದ ಅವಯವಗಳುಳ್ಳವನು.

622) ಪ. ಭ. :– ಶ್ರೀದೇವಿಯು ಕೂಡ ಆಸೆಪಡಲು ಯೋಗ್ಯವಾದ ದಿವ್ಯದೇಹವನ್ನು ಹೊಂದಿರುವುದರಿಂದ ಅತಿಸುಂದರವಾದ ಮಂಗಳಾಂಗಗಳುಳ್ಳವನು.

ನಿರುಕ್ತಿ :– .... ಶ್ರಿಯಃ ಸ್ಪೃಹಣೀಯದಿವ್ಯಾಙ್ಗಃ ಸ್ವಙ್ಗ ಉಚ್ಯತೇ ॥

619) ಸ. ಸಂ. :– ಶೋಭನವಾದ ಅಂಗಗಳುಳ್ಳವನು ; ಭಕ್ತರಿಗೆ ತನ್ನನ್ನು ಹೊಂದಿಸುವವನು.

* * *

617) **ಶತಾನನ್ದಃ** = ಅನಂತವಾದ ಮತ್ತು ಅಪರಿಮಿತವಾದ ಆನಂದವುಳ್ಳವನು ; ಬ್ರಹ್ಮದೇವಸ್ವರೂಪಿಯು. **ತೇ ಯೇ ಶತಂ ಪ್ರಜಾಪತೇರಾನನ್ದಾಃ ಸ ಏಕೋ ಬ್ರಹ್ಮಣ ಆನನ್ದಃ** (ತೈ. ಉ. ೩-೮)

ಶಂ. ಭಾ. :– ಒಬ್ಬನೇ ಪರಮಾನಂದಸ್ವರೂಪನಾಗಿದ್ದರೂ ಉಪಾಧಿ ಭೇದದಿಂದ ನೂರಾರು ಪ್ರಕಾರಗಳಾಗಿ ಆಗುವವನು. **ಏತಸ್ಯೈವಾನನ್ದಸ್ಯ ಅನ್ಯಾನಿ ಭೂತಾನಿ ಮಾತ್ರಾಮುಪಜೀವನ್ತಿ ॥** (ಬೃ.೪-೨-೩೨)

623) **ಪ. ಭ. :–** ಶ್ರೀದೇವಿಯೊಡನೆ ಪರಸ್ಪರವಾಗಿ ಪ್ರಣಯ ಪ್ರವಾಹದ ಆನಂದಸಮುದ್ರನು ; ಅಪರಿಮಿತವಾದ ಆನಂದವುಳ್ಳವನು.

ನಿರುಕ್ತಿ :– **ಅನ್ಯೋನ್ಯಪ್ರಣಯಾನನ್ದಸಿನ್ಧೋಃ ಸಮುದಿತೋ ಹಿ ಯಃ ।**
ಶತಾನನ್ದಃ ಸ ವಿಜ್ಞೇಯೋ ದಮ್ಪತ್ಯಾನನ್ದದೋ ಮನುಃ ॥

'**ಓಂ ಶತಾನನ್ದಾಯ ನಮಃ**'–ಎಂಬ ಈ ನಾಮಮಂತ್ರಜಪವು ದಂಪತಿಗಳಿಗೆ ಆನಂದವನ್ನುಂಟುಮಾಡುತ್ತದೆ.

620) **ಸ. ಸಂ. :–** ಅಮಿತಾನಂದವುಳ್ಳವನು ; ಯಾವನಿಂದ ಚತುರ್ಮುಖನಿಗೆ ಶತಾನಂದಗಳು ಉಂಟಾಗುತ್ತವೆಯೋ–ಅವನು.

* * *

618) **ನನ್ದಿಃ** = ಆನಂದವುಳ್ಳವನು ; ಆನಂದವನ್ನು ಉಂಟುಮಾಡುವವನು.

ಶಂ. ಭಾ. :– ಪರಮಾನಂದವಿಗ್ರಹನು.

624) **ಪ. ಭ. :–** ಯಾವಾಗಲೂ ಎಲ್ಲೆಡೆಗಳಲ್ಲಿಯೂ ಪರಿಪೂರ್ಣನಾಗಿ ಶ್ರೀದೇವಿಯೊಡನೆ ಸಮೃದ್ಧಿಯಲ್ಲಿರುವವನು.

ನಿರುಕ್ತಿ :– **ನನ್ದಿಃ ಸರ್ವತ್ರ ನಿತ್ಯಂ ಸ ಶ್ರಿಯಾ ಋಧ್ಯತಿ ಸರ್ವದಾ ॥**

621) ಸ. ಸಂ. :– ಆನಂದವುಳ್ಳವನು ; ಆನಂದಗೊಳಿಸುವವನು.

* * *

619) **ಜ್ಯೋತಿರ್ಗಣೇಶ್ವರಃ** = ಜ್ಯೋತಿಗಳ ಸಮೂಹಕ್ಕೆ ಅಧಿಪತಿಯಾದವನು.

ಶಂ. ಭಾ. :– ನಕ್ಷತ್ರಗಣಗಳಿಗೆ ಈಶ್ವರನಾದವನು. **ತಮೇವ ಭಾನ್ತ ಮನುಭಾತಿ ಸರ್ವಂ (ಮು. ೨-೨-೧೧) ಯದಾದಿತ್ಯಗತಂ ತೇಜಃ (ಗೀತಾ ೧೫-೧೨)**

625) **ಪ. ಭ. :–** ನಿತ್ಯಸೂರಿಗಳಿಗೆ ಈಶ್ವರನಾದವನು.

ನಿರುಕ್ತಿ :– ನಿತ್ಯಸೂರಿಗಣಾನಾಂ ಯ ಈಶೋ ಜ್ಯೋತಿರ್ಗಣೇಶ್ವರಃ ॥

622) **ಸ. ಸಂ. :–** ಸೂರ್ಯಾದಿಗಳ ಸಮುದಾಯಕ್ಕೆ ಈಶ್ವರನಾದವನು ; ಯಾವನಲ್ಲಿ ಭೂತಗಳೆಲ್ಲವೂ ಹುಟ್ಟಿ ಹಾಸು-ಹೊಕ್ಕಾಗಿವೆಯೋ ಅವನು ; ಜ್ಯೋತಿಯಾಗಿ ಬೆಳಗುವವನು ; ದೇವತಾಸಮುದಾಯಕ್ಕೆ ಈಶ್ವರನಾದವನು.

* * *

620) **ವಿಜಿತಾತ್ಮಾ** = ಮನಸ್ಸನ್ನು ಗೆದ್ದಿರುವವನು.

ಶಂ. ಭಾ. :– ಮನಸ್ಸನ್ನು ಗೆದ್ದಿರುವವನು.

626) **ಪ. ಭ. :–** ಯಾವನ ಮನಸ್ಸು ಭಕ್ತರಿಂದ ಗೆಲ್ಲಲ್ಪಟ್ಟಿರುವುದೋ–ಅಂತಹ ಸೌಶೀಲ್ಯಗುಣಕ್ಕೆ ಪರಮಾವಧಿಯಾದವನು.

ನಿರುಕ್ತಿ :– ಸೌಶೀಲ್ಯಸ್ಯ ಗುಣಸ್ಯಾಥ ಪರಮಾವಧಿರ್ವರ್ಣನಮ್ ।
ಮಾನಸಂ ಪ್ರಣತೈರ್ಯಸ್ಯ ವಿಜಿತಾತ್ಮಾ ಜಿತಂ ಹಿ ಸಃ ॥

623) **ಸ. ಸಂ. :–** ಜೀವಗಳನ್ನು ಅಥವಾ ಮನಸ್ಸುಗಳನ್ನು ಗೆದ್ದವನು; ಗರುಡನಿಂದ ಹೊಂದಲ್ಪಟ್ಟ ದೇಹವುಳ್ಳವನು.

* * *

621) **ವಿಧೇಯಾತ್ಮಾ ; ಅವಿಧೇಯಾತ್ಮಾ** = ಜಿತೇಂದ್ರಿಯನು ; ವಿಧಾನ ಮಾಡಲ್ಪಡುವ ವಿಷಯಗಳಲ್ಲಿ ಮನಸ್ಸುಳ್ಳವನು ; ಯಾರಿಗೂ ವಿಧೇಯವಲ್ಲದ ಸ್ವರೂಪವುಳ್ಳವನು.

ಶಂ. ಭಾ. :– ಅವಿಧೇಯಾತ್ಮಾ = ಯಾರಿಗೂ ವಿಧೇಯವಾಗದ ಸ್ವರೂಪವುಳ್ಳವನು.

627) **ಪ. ಭ. :– ವಿಧೇಯಾತ್ಮಾ** = 'ಇಲ್ಲಿಗೆ ಬಾ' ; 'ಇಲ್ಲಿ ನಿಲ್ಲು'

'ಇದನ್ನು ಭುಂಜಿಸು' ; 'ಇಲ್ಲಿರು'–ಇತ್ಯಾದಿಯಾಗಿ ಭಕ್ತರಿಂದ ವಿಧಾನ ಮಾಡಲು ಯೋಗ್ಯವಾದ ರೂಪವುಳ್ಳವನು.

ನಿರುಕ್ತಿ :– ಇಹಾಗಚ್ಛೇಹ ತಿಷ್ಠೇದಂ ಭುಂಕ್ಷ್ವೇತಿ ಪ್ರಣತೈಃ ಸದಾ ।
ಯೋಗ್ಯಂ ವಿಧಾತುಂ ಯದ್ರೂಪಂ ವಿಧೇಯಾತ್ಮಾ ಸ ಕೀರ್ತಿತಃ ॥

624) **ಸ. ಸಂ. :– ವಿಧೇಯಾತ್ಮಾ** = ಸ್ನಾನ-ದಾನಗಳೇ ಮುಂತಾದ ವಿಧಿವಿಷಯಗಳಲ್ಲಿ ಮನಸ್ಸುಳ್ಳವನು.

* * *

622) **ಸತ್ಕೀರ್ತಿಃ** = ಸತ್ಯವಾದ ಕೀರ್ತಿಯುಳ್ಳವನು ; ಒಳ್ಳೆಯ ಕೀರ್ತಿಯುಳ್ಳವನು.

ಶಂ. ಭಾ. :– ಸತ್ಯವಾದ ಕೀರ್ತಿಯುಳ್ಳವನು.

628) **ಪ. ಭ. :–** ಇಂತಹ ಸೌಶೀಲ್ಯವುಳ್ಳವನು.

ನಿರುಕ್ತಿ :– ಈದೃಕ್ಸೌಶೀಲ್ಯಸತ್ತ್ವಾದ್ಧಿಸತ್ಕೀರ್ತಿರಿತಿ ಕಥ್ಯತೇ ॥

625) **ಸ. ಸಂ. :–** ಕೀರ್ತಿಶಾಲಿಯಾದವನು ; ವಾಮನನಾಗಿ ಅವತಾರಮಾಡಿದಾಗ ಕೀರ್ತಿ–ಎಂಬ ಭಾರ್ಯೆಯನ್ನು ಹೊಂದಿದ್ದವನು.

ಉರುಕ್ರಮಸ್ಯ ದೇವಸ್ಯ ಮಾಯಾ ವಾಮನರೂಪಿಣಃ ।
ಕೀರ್ತೌ ಪತ್ನ್ಯಾಂ ಬೃಹಚ್ಛ್ಲೋಕಾಸ್ತಸ್ಯಾಸನ್ಸೌಭಗಾದಯಃ ॥

(ಭಾಗವತ)

* * *

623) **ಛಿನ್ನಸಂಶಯಃ** = ಯಾವ ಸಂಶಯವೂ ಇಲ್ಲದವನು ; ಜ್ಞಾನಿಗಳ ಸಂಶಯವನ್ನು ಧ್ವಂಸಮಾಡುವವನು.

ಭಿದ್ಯತೇ ಹೃದಯಗ್ರನ್ಥಿಃ ಛಿದ್ಯನ್ತೇ ಸರ್ವಸಂಶಯಾಃ ।
ಕ್ಷೀಯನ್ತೇ ಚಾಸ್ಯ ಕರ್ಮಾಣಿ ತಸ್ಮಿನ್ದೃಷ್ಟೇ ಪರಾವರೇ ॥

(ಮುಂಡಕ)

ಶಂ. ಭಾ. :– ಅಂಗೈನೆಲ್ಲಿಕಾಯಿಯಂತೆ ಎಲ್ಲವನ್ನೂ ನೋಡುತ್ತಿರುವ ಯಾವನಿಗೆ ಎಲ್ಲಿಯೂ ಸಂಶಯವಿಲ್ಲವೋ–ಅವನು.

629) **ಪ. ಭ. :–** ಹೀಗೆ ಸೌಶೀಲ್ಯಕೀರ್ತಿಯನ್ನು ಹೊಂದಿರುವುದರಿಂದ

ಸುಜ್ಞಾನ-ದುರ್ಜ್ಞಾನ-ಸುಲಭತ್ವ-ದುರ್ಲಭತ್ವಗಳೇ ಮುಂತಾದ ಎಲ್ಲ ಸಂಶಯಗಳನ್ನೂ ಕತ್ತರಿಸಿಹಾಕಿದವನು.

ನಿರುಕ್ತಿ :– ಸೌಶೀಲ್ಯಪ್ರಥಯಾ ಚೈವಂ ದುಷ್ಕರತ್ವಾದಿಸಂಶಯಃ ।
ಛಿನ್ನೋ ಯೇನ ವಿಶೇಷೇಣ ಸ ಪ್ರೋಕ್ತಶ್ಛಿನ್ನಸಂಶಯಃ ॥

626) ಸ. ಸಂ. :– ಸಂಶಯಗಳನ್ನು ಕತ್ತರಿಸಿಹಾಕುವವನು.

* * *

ಉದೀರ್ಣಃ ಸರ್ವತಶ್ಚಕ್ಷುರನೀಶಃ ಶಾಶ್ವತಸ್ಥಿರಃ ।
ಭೂಶಯೋ ಭೂಷಣೋ ಭೂತಿರ್ವಿಶೋಕಃ ಶೋಕನಾಶನಃ ॥೮೦॥

624) ಉದೀರ್ಣಃ = ಎಲ್ಲ ಪ್ರಾಣಿಗಳಿಗಿಂತಲೂ ಉತ್ಕೃಷ್ಟನಾದವನು.

ಶಂ. ಭಾ. :– ಎಲ್ಲ ಭೂತಗಳಿಗಿಂತಲೂ ಉತ್ಕೃಷ್ಟನಾದವನು.

630) ಪ. ಭ. :– ಚರ್ಮಚಕ್ಷುಸ್ಸುಳ್ಳವರಿಗೂ ಕಣ್ಣಿಗೆ ಕಾಣಲು ಯೋಗ್ಯನಾಗಿ ಉಲ್ಲಾಸಗೊಂಡವನು.

ನಿರುಕ್ತಿ :– ಪ್ರತ್ಯಕ್ಷವಿಷಯತ್ವೇನ ಹ್ಯುತ್ಪನ್ನಶ್ಚರ್ಮಚಕ್ಷುಷಾಮ್ ।
ಉದೀರ್ಣ ಇತಿ ಸ ಪ್ರೋಕ್ತಃ ಸಪ್ತಾರ್ಣೋ ನಯನಪ್ರದಃ ॥

'ಓಂ ಉದೀರ್ಣಾಯ ನಮಃ'–ಎಂಬ ಈ ನಾಮಮಂತ್ರಜಪವು ಕಣ್ಣುಗಳನ್ನು ಕೊಡತಕ್ಕುದು.

627) ಸ. ಸಂ. :– ಪ್ರಳಯಕಾಲದಲ್ಲಿ ರುದ್ರನನ್ನು ಸೀಳುವವನು ; ಉತ್ಕೃಷ್ಟನಾದವನು.

* * *

625) ಸರ್ವತಶ್ಚಕ್ಷುಃ = ಎಲ್ಲೆಲ್ಲಿಯೂ ಕಣ್ಣುಗಳುಳ್ಳವನು.

ಶಂ. ಭಾ. :– ಎಲ್ಲವನ್ನೂ ಎಲ್ಲ ಕಡೆಗಳಲ್ಲಿಯೂ ತನ್ನ ಚೈತನ್ಯ ಸ್ವರೂಪದಿಂದ ನೋಡುವವನು. ವಿಶ್ವತಶ್ಚಕ್ಷುಃ(ಶ್ವೇ. ೩-೩)

631) ಪ. ಭ. :– ಎಲ್ಲರ ಕಣ್ಣುಗಳೂ ಯಾವನನ್ನು ಸಾಕ್ಷಾತ್ಕರಿಸಲು ಉದ್ಯುಕ್ತವಾಗಿವೆಯೋ–ಅವನು.

ನಿರುಕ್ತಿ :– ತತ್ಸಾಕ್ಷಾತ್ಕಾರಕರ್ಮಾಣಿ ಸರ್ವಚಕ್ಷೂಂಷ್ಯಪಿ ಸ್ವತಃ ।
ಅತಃ ಸ್ಯಾತ್ಸರ್ವತಶ್ಚಕ್ಷುಃ ನವಾರ್ಣೋ ನೇತ್ರಶಕ್ತಿದಃ ॥

'ಓಂ ಸರ್ವತಶ್ಚಕ್ಷುಷೇ ನಮಃ'–ಎಂಬ ಈ ನಾಮಮಂತ್ರಜಪವು ಕಣ್ಣುಗಳಿಗೆ ಶಕ್ತಿಯನ್ನು ಕೊಡುತ್ತದೆ.

628) ಸ. ಸಂ. :– ಪೂರ್ಣವಾದ ಕಣ್ಣುಗಳುಳ್ಳವನು ; ಎಲ್ಲೆಲ್ಲಿಯೂ ಕಣ್ಣುಗಳುಳ್ಳವನು.

* * *

626) ಅನೀಶಃ = (ತಾನೇ ಸರ್ವೇಶ್ವರನಾಗಿರುವುದರಿಂದ) ಬೇರೆ ಪ್ರಭುವು ಇಲ್ಲದವನು.

ಶಂ. ಭಾ. :– ಯಾವನಿಗೆ ಬೇರೆ ಈಶ್ವರನಿಲ್ಲವೋ–ಅವನು.

632) ಪ. ಭ. :– (ಭಕ್ತರಿಗೆ ಅಧೀನನಾಗಿರುವುದರಿಂದ) ಪರಾಧೀನ ನಾದವನು.

ನಿರುಕ್ತಿ :– ಪ್ರೋಕ್ತೋ ಹ್ಯನೀಶೋ ಯಶ್ಚಾಸೌ ತದಾಯತ್ತಾಖಿಲಕ್ರಿಯಃ ।

629) ಸ. ಸಂ. :– ಬೇರೆ ಒಡೆಯನು ಇಲ್ಲದವನು ; ಪ್ರಾಣಿಗಳಿಗೆ ಈಶ್ವರನಾದವನು.

* * *

627) ಶಾಶ್ವತಸ್ಥಿರಃ = ನಿತ್ಯನೂ ಸ್ಥಿರನೂ ಆಗಿರುವವನು.

ಶಂ. ಭಾ. :– ನಿತ್ಯನಾಗಿದ್ದರೂ ಎಂದಿಗೂ ವಿಕಾರಹೊಂದದವನು.

633) ಪ. ಭ. :– ಅರ್ಚಾಮೂರ್ತಿಗಳಲ್ಲಿ ತಾನೇ ನಿತ್ಯಸಾನ್ನಿಧ್ಯದಿಂದ ಕೂಡಿ ಸ್ಥಿರವಾಗಿರುವವನು. ಬಿಮ್ಬಾಕೃತ್ಯಾತ್ಮನಾ ಬಿಮ್ಬೇ ಸಮಾ ಗಮ್ಯಾವತಿಷ್ಠತೇ ।

ನಿರುಕ್ತಿ :– ಬಿಮ್ಬಾಕೃತ್ಯಾತ್ಮನಾ ಬಿಮ್ಬೇ ಸ್ಥಿತಃ ಸ್ಯಾಚ್ಛಾಶ್ವತಸ್ಥಿರಃ ॥

630) ಸ. ಸಂ. :– ಶಾಶ್ವತನೂ ಸ್ಥಿರನೂ ಆಗಿರುವವನು.

* * *

628) **ಭೂಶಯಃ** = ಭಕ್ತರ ದರ್ಶನಕ್ಕಾಗಿ ಅರ್ಚಾಮೂರ್ತಿಯಾಗಿ ಭೂಮಿಯಲ್ಲಿ ಅನಂತಪದ್ಮನಾಭ, ಗೋವಿಂದರಾಜ ಮತ್ತು ಶ್ರೀರಂಗನಾಥ–ಮುಂತಾದ ರೂಪಗಳಲ್ಲಿ ಪವಡಿಸಿರುವವನು ; ಭೂಮಿಯಲ್ಲಿ ದರ್ಭಶಯನ ಮಾಡಿದ ಶ್ರೀರಾಮರೂಪಿಯು.

ಶಂ. ಭಾ. :– ಲಂಕೆಗೆ ಹೋಗುವುದಕ್ಕೋಸ್ಕರ ದಾರಿಯನ್ನು ಹುಡುಕುವಾಗ ಸಮುದ್ರತೀರದಲ್ಲಿ ಭೂಮಿಯ ಮೇಲೆ ಪವಡಿಸಿದ ಶ್ರೀರಾಮನು.

634) ಪ. ಭ. :– ಸ್ವಯಂವ್ಯಕ್ತ, ಸಿದ್ಧ, ಮಾನುಷ–ಮುಂತಾದ ರೂಪಗಳಲ್ಲಿ, ದಿವ್ಯಕ್ಷೇತ್ರಗಳಲ್ಲಿ ಸಾನ್ನಿಧ್ಯವನ್ನು ಪ್ರಾರ್ಥಿಸಿದ ಭಕ್ತರ ಅನುಗ್ರಹಕ್ಕಾಗಿ ಸುಖವಾಗಿ ಪವಡಿಸಿರುವವನು.

ನಿರುಕ್ತಿ :– ಸ್ವಯಂ ವ್ಯಕ್ತಾದಿರೂಪೇಣ ಕೌ ಶೇತೇ ಭೂಶಯಶ್ಚ ಸಃ ॥

631) ಸ. ಸಂ. :– ಭೂಮಿಯನ್ನು ಕೈಯಲ್ಲಿ ಹೊಂದಿರುವವನು ; ಭೂರೂಪಿಣಿಯಾದ ರಮಾದೇವಿಯೊಡನೆ ನಿದ್ರಿಸುವವನು ; ಭೂಮಿಯಲ್ಲಿ ಶಯನಿಸಿರುವವನು.

* * *

629) **ಭೂಷಣಃ** = ಅಲಂಕಾರವಾಗಿರುವವನು ; ಅಲಂಕೃತನಾಗಿರುವವನು ; ತನ್ನ ಅವತಾರಗಳಿಂದ ಸ್ವರ್ಗ-ಭೂಮಿ-ಪಾತಾಳಗಳೇ ಮುಂತಾದ ಸ್ಥಾನಗಳನ್ನು ಅಲಂಕರಿಸುವವನು. ತತ್ತ್ವಮಯವಾದ ದಿವ್ಯಭೂಷಣಗಳುಳ್ಳವನು.

ಶಂ. ಭಾ. :– ತನ್ನ ಇಚ್ಛೆಯಿಂದ ಅನೇಕಾವತಾರಗಳನ್ನು ಮಾಡಿ ಭೂಮಿಯನ್ನು ಅಲಂಕರಿಸಿದವನು.

635) ಪ. ಭ. :– ಎಲ್ಲ ಜನರಿಗೂ ಹಿತವಾದ ಶೀಲದಿಂದ ಲಕ್ಷ್ಮೀಪತಿಯಾದ ತನ್ನನ್ನು ಅಲಂಕರಿಸಿಕೊಂಡಿರುವವನು.

ನಿರುಕ್ತಿ :– ಏವಂ ವಿಶ್ವಜನೀನೇನ ಶೀಲೇನ ಚ ಶ್ರಿಯಃ ಪತಿಃ ।
ಯ ಆತ್ಮಾನಂ ಭೂಷಯತಿ ಭೂಷಣಃ ಪರಿಕೀರ್ತಿತಃ ॥

632) ಸ. ಸಂ. :– ಅಲಂಕರಿಸುವವನು ; ಪೂರ್ಣವಾದ ಚೇಷ್ಟೆ ಮತ್ತು ಆನಂದಗಳುಳ್ಳವನು ; ಭೂಷಣಗಳುಳ್ಳವನು.

* * *

630) **ಭೂತಿಃ** = ಸತ್ಸ್ವರೂಪನು ; ವಿಭೂತಿರೂಪನು.

ಶಂ. ಭಾ. :– ಸತ್ಸ್ವರೂಪನು ; ವಿಭೂತಿರೂಪನು ; ಎಲ್ಲ ವಿಭೂತಿಗಳಿಗೂ ಕಾರಣನಾದವನು.

636) **ಪ. ಭ. :–** ಅಕಿಂಚನರಾಗಿರುವ ಭಕ್ತರಿಗೆ ತಾನೇ ಸರ್ವಸಮೃದ್ಧಿಯಾಗಿರುವವನು.

ನಿರುಕ್ತಿ :– ಯೋಽಸೌ ಸಮೃದ್ಧಿರೈಶ್ವರ್ಯಂ ಭಕ್ತಾನಾಂ ಭೂತಿರೀರಿತಃ ॥

633) **ಸ. ಸಂ. :–** ಐಶ್ವರ್ಯರೂಪನು.

* * *

631) **ವಿಶೋಕಃ** = ಶೋಕರಹಿತನು ; ಪರಮಾನಂದರೂಪಿಯು.

ಶಂ. ಭಾ. :– ಪರಮಾನಂದಸ್ವರೂಪನಾಗಿರುವುದರಿಂದ ಶೋಕರಹಿತನಾದವನು.

637) **ಪ. ಭ. :– ಅಶೋಕಃ** =(ಯಾವ ಭಕ್ತರನ್ನೂ ಬಿಡದೇ ಅವರೆಲ್ಲರಿಗೂ ನಾಥನಾಗಿರುವುದರಿಂದ ಅವರ ವಿಷಯದಲ್ಲಿ) ಶೋಕರಹಿತನಾದವನು.

ನಿರುಕ್ತಿ :– ನಾಥತ್ವಾಚ್ಚಾಪಿ ಸರ್ವೇಷಾಂ ಅಶೋಕಸ್ತೇನ ಈರಿತಃ ॥

634) **ಸ. ಸಂ. :– ವಿಶೋಕಃ** =ಶೋಕರಹಿತನು. ವಿಶೇಷವಾಗಿ ಸುಖವನ್ನು ಕೊಡುವ ವೈಕುಂಠಾದಿ ಗೃಹಗಳುಳ್ಳವನು.

* * *

632) **ಶೋಕನಾಶನಃ** = ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕಗಳೆಂಬ ಮೂರು ಬಗೆಯ ಶೋಕಗಳನ್ನೂ ನಾಶಪಡಿಸುವವನು.

ಶಂ. ಭಾ. :– ಸ್ಮರಣಮಾತ್ರದಿಂದಲೇ ಭಕ್ತರ ದುಃಖವನ್ನು ನಾಶಪಡಿಸುವವನು.

638) **ಪ. ಭ. :–** ಭಕ್ತರಿಗೆ ತನ್ನ ಸಂಬಂಧವಿಲ್ಲದೆ ಒಂಟಿಯಾಗಿರುವಿಕೆ–ಎಂಬ ದುಃಖವನ್ನು ನಾಶಪಡಿಸುವವನು.

ನಿರುಕ್ತಿ :– ಭಕ್ತಾನಾಂ ಸ್ವೇನ ಸಮ್ಬನ್ಧವ್ಯತಿರೇಕಸ್ವರೂಪಕಮ್ ।
ಯತ್ತಚ್ಛೋಕಂ ನಾಶಯತಿ ಶೋಕನಾಶನ ಈರಿತಃ ॥

635) ಸ. ಸಂ. :– ಶೋಕವನ್ನು ನಾಶಪಡಿಸುವವನು ; ಮುಕ್ತಾತ್ಮರನ್ನು ಪರಮಪದಕ್ಕೆ ಒಯ್ಯುವವನು.

*　　　*　　　*

ಅರ್ಚಿಷ್ಮಾನರ್ಚಿತಃ ಕುಮ್ಭೋ ವಿಶುದ್ಧಾತ್ಮಾ ವಿಶೋಧನಃ ।
ಅನಿರುದ್ಧೋಽಪ್ರತಿರಥಃ ಪ್ರದ್ಯುಮ್ನೋಽಮಿತವಿಕ್ರಮಃ ॥೮೧॥

633) **ಅರ್ಚಿಷ್ಮಾನ್** = ಎಲ್ಲ ತೇಜಸ್ಸುಗಳಿಗೂ ತೇಜಸ್ಸನ್ನು ಕೊಡುವ ಮುಖ್ಯನಾದ ತೇಜಸ್ವಿಯು.

ಶಂ. ಭಾ. :– ಯಾವನ ಕಿರಣಗಳಿಂದ ಚಂದ್ರ-ಸೂರ್ಯರೇ ಮುಂತಾದವರು ತೇಜಸ್ವಿಗಳಾಗುವರೋ–ಅವನು.

639) ಪ. ಭ. :– ಭಕ್ತರ ಒಳ-ಹೊರಕಣ್ಣುಗಳನ್ನು ಬೆಳಗಿಸುವ ಸಾಮರ್ಥ್ಯವುಳ್ಳ ದಿವ್ಯತೇಜಸ್ಸನ್ನು ಸದಾ ಹೊಂದಿರುವವನು.

ನಿರುಕ್ತಿ :– **ಭಕ್ತಾಭ್ಯನ್ತರಬಾಹೀಕಚಕ್ಷುರುನ್ನಯನಕ್ಷಮಮ್ ।**
ದಿವ್ಯಂ ತೇಜಃ ಸದಾ ಯಸ್ಯ ಸೋಽರ್ಚಿಷ್ಮಾನಿತಿ ಕಥ್ಯತೇ ॥

636) ಸ. ಸಂ. :– ಕಿರಣಗಳುಳ್ಳವನು.

*　　　*　　　*

634) **ಅರ್ಚಿತಃ** = ಪೂಜ್ಯರಿಂದಲೂ ಪೂಜಿತನಾದವನು.

ಶಂ. ಭಾ. :– ಎಲ್ಲ ಲೋಕಗಳಿಂದಲೂ ಪೂಜಿಸಲ್ಪಡುವ ಬ್ರಹ್ಮನೇ ಮುಂತಾದವರಿಂದಲೂ ಪೂಜಿತನಾದವನು.

640) ಪ. ಭ. :– ತೀರ್ಥಕ್ಷೇತ್ರ-ದೇವಾಲಯಗಳಲ್ಲಿ ಅರ್ಚಾವತಾರ ಮಾಡಿದಾಗ ಭಕ್ತರಿಂದ ಅರ್ಚಿಸಲ್ಪಡುವವನು.

ನಿರುಕ್ತಿ :– **ಅರ್ಚಾ ಹ್ಯರ್ಚಾವತಾರೇಽಸ್ಯ ಕ್ಷೇತ್ರಾಯತನಸದ್ಮಸು ।**
ಸಞ್ಜಾತೇತ್ಯರ್ಚಿತಃ ಪ್ರೋಕ್ತಃ ಸಪ್ತಾರ್ಣೋ ವಾಂಛಿತಪ್ರದಃ ॥

'ಓಂ ಅರ್ಚಿತಾಯ ನಮಃ'–ಎಂಬ ಈ ನಾಮಮಂತ್ರಜಪವು ಜಾಪಕನಿಗೆ ಅಪೇಕ್ಷಿಸಿದುದನ್ನು ಕೊಡುತ್ತದೆ.

637) ಸ. ಸಂ. :– ಬ್ರಹ್ಮಾದಿಗಳಿಂದಲೂ ಪೂಜಿಸಲ್ಪಡುವವನು.

* * *

635) **ಕುಮ್ಭಃ** = ಪ್ರಾಣಾಪಾನನಿರೋಧರೂಪವಾದ ಕುಂಭಕಯೋಗ ಸ್ವರೂಪಿಯು. **ಕುಮ್ಭಕೋ ವಿಷ್ಣುರುಚ್ಯತೇ ॥** ಸಂಪೂರ್ಣಕುಂಭದಂತೆ ಎಲ್ಲವನ್ನೂ ತನ್ನಲ್ಲಿ ತುಂಬಿಕೊಂಡು ನಿಶ್ಚಲನಾಗಿರುವವನು.

ಶಂ. ಭಾ. :– ಕುಂಭದಲ್ಲಿ ಹೇಗೋ–ಹಾಗೆ ಯಾವನಲ್ಲಿ ಸಮಸ್ತವೂ ಪ್ರತಿಷ್ಠಿತವಾಗಿರುವುದೋ–ಅವನು.

641) ಪ. ಭ. :– ಅರ್ಚಾಮೂರ್ತಿಯಾಗಿ ಭಕ್ತರಿಗೆ ಪರಿಚಿತವಾದ ಸಜಾತೀಯವಾದ ಸೌಂದರ್ಯಾದಿ ಗುಣಗಳಿಂದ ಕಾಮಿಸಲ್ಪಡುವವನು. ಪುಣ್ಯಕ್ಷೇತ್ರಗಳ ಭೂಮಿಯಲ್ಲಿ ಧ್ಯಾನ, ಆರಾಧನೆ–ಮುಂತಾದುವುಗಳಿಗೆ ಗೋಚರನಾಗಿ ಯಾವಾಗಲೂ ಭಕ್ತರ ಭಯವನ್ನು ಪರಿಹರಿಸುತ್ತಾ ಬೆಳಗು ವವನು.

ನಿರುಕ್ತಿ :– **ಕಾಮ್ಯತೇ ಯಃ ಸಜಾತೀಯೈಃ ಗುಣೈಃ ಕುಮ್ಭಃ ಪ್ರಕೀರ್ತಿತಃ ।**
ಭಾತೀತಿ ಕುಮ್ಭೋ ನಿತ್ಯಂ ಹಿ ಷಡರ್ಣೋ ಭಯನಾಶಕಃ ॥

'**ಓಂ ಕುಮ್ಭಾಯ ನಮಃ**'–ಎಂಬ ಈ ನಾಮಮಂತ್ರಜಪವು ಭಯ ವನ್ನು ಹೋಗಲಾಡಿಸುತ್ತದೆ.

638) ಸ. ಸಂ. :– ಭೂಮಿಯನ್ನು ಬೆಳಗುವವನು.

* * *

636) **ವಿಶುದ್ಧಾತ್ಮಾ** = ಅತ್ಯಂತಪರಿಶುದ್ಧವಾದ ಆತ್ಮಸ್ವರೂಪವುಳ್ಳ ವನು.

ಶಂ. ಭಾ. :– ತ್ರಿಗುಣಾತೀತನಾಗಿರುವುದರಿಂದ ವಿಶುದ್ಧವಾದ ಆತ್ಮ ವುಳ್ಳವನು.

642) ಪ. ಭ. :– ಸಂಪೂರ್ಣವಾಗಿ ಶರಣಾದವರಿಗೆ ತನ್ನ ಸರ್ವಸ್ವ ವನ್ನೂ ಕೊಟ್ಟುಬಿಡುವುದರಿಂದ ವಿಶುದ್ಧಾತ್ಮನಾದವನು.

ನಿರುಕ್ತಿ :– **ಸರ್ವಾಶ್ರಿತೇಷ್ವಶೇಷೇಣ ಸರ್ವಸ್ವತ್ಯಾಗತಃ ಸದಾ ।**
ವಿಶುದ್ಧಾತ್ಮಾ................ ॥

639) **ಸ. ಸಂ. :–** ಪರಿಶುದ್ಧವಾದ ಆತ್ಮವುಳ್ಳವನು.

*　　*　　*

637) **ವಿಶೋಧನಃ** = ಭಕ್ತರನ್ನು ಚೆನ್ನಾಗಿ ಶುದ್ಧಿಮಾಡುವವನು.

ಶಂ. ಭಾ. :– ತನ್ನ ಸ್ಮರಣಮಾತ್ರದಿಂದಲೇ ಪಾಪಗಳನ್ನು ನಾಶಮಾಡುವವನು.

643) **ಪ. ಭ. :–** ತನ್ನ ಕ್ಷೇತ್ರಗಳಲ್ಲಿ ದೇಹವನ್ನು ತ್ಯಾಗಮಾಡಿ ತನ್ನನ್ನು ಹೊಂದಲು ಯೋಗ್ಯರಾಗಿರುವ ಸುಕೃತಿಗಳನ್ನು ಚೆನ್ನಾಗಿ ಪರಿಶುದ್ಧಿಗೊಳಿಸುವವನು.

ನಿರುಕ್ತಿ :– **........ ಚ ಪೂರ್ವೋಕ್ತವಿಭವಃ ಸ್ಯಾದ್ವಿಶೋಧನಃ ॥**

640) **ಸ. ಸಂ. :–** ವೇದಗಳನ್ನು ವಿಶೇಷವಾಗಿ ಶೋಧಿಸುವವನು.

*　　*　　*

638) **ಅನಿರುದ್ಧಃ** = ತಡೆಯಿಲ್ಲದವನು ; ವಾಸುದೇವಾದಿ ವ್ಯೂಹಗಳಲ್ಲಿ ನಾಲ್ಕನೆಯವನು ; ಅಹಂಕಾರತತ್ತ್ವಕ್ಕೆ ಅಭಿಮಾನಿಯಾದ ದೇವತೆಯು. ತನ್ನ ಸೃಷ್ಟಿವ್ಯಾಪಾರದಲ್ಲಿ ಯಾವ ತಡೆಯೂ ಇಲ್ಲದವನು ; ಯಾರಿಂದಲೂ ತಡೆಯಲು ಅಸಾಧ್ಯನಾದವನು.

ಶಂ. ಭಾ. :– ವಾಸುದೇವಾದಿ ವ್ಯೂಹಗಳಲ್ಲಿ ನಾಲ್ಕನೆಯವನು ; ಶತ್ರುಗಳಿಂದ ಎಂದಿಗೂ ತಡೆಯಲ್ಪಡದವನು. (ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ–ಇವು ನಾಲ್ಕು ನಾರಾಯಣನ ವ್ಯೂಹಗಳು.)

644) **ಪ. ಭ. :–** 'ವಾಸುಭಾಂಡ' ಎಂಬ ಭೂಭಾಗದಲ್ಲಿ ಯಾವಾಗಲೂ ಸಾನ್ನಿಧ್ಯವನ್ನು ಹೊಂದಿರುವ ಜನಾರ್ದನನೆಂಬ ಹೆಸರುಳ್ಳ ಭಗವಂತನು; ನಿತ್ಯಸಾನ್ನಿಧ್ಯವನ್ನು ಹೊಂದಿರುವುದರಿಂದ ಯಾರಿಂದಲೂ ತಡೆಯಲ್ಪಡದವನು.

ಜನಾರ್ದನಾಖ್ಯಯಾ ದೇವಸ್ತ್ವನಿರುದ್ಧೋ ಜಗತ್ಪ್ರಭುಃ ।
ಭೂಭಾಗೇ ವಾಸುಭಾಣ್ಡಾಖ್ಯೇ ನಿತ್ಯಸನ್ನಿಹಿತಃ ಸ್ಥಿತಃ ॥

ನಿರುಕ್ತಿ :– **ವಾಸುಭಾಣ್ಡಾಖ್ಯಭೂಭಾಗೇ ನಿತ್ಯಸನ್ನಿಹಿತಸ್ಥಿತಃ ।**
ಅನಿರುದ್ಧ ಇತಿ ಖ್ಯಾತೋ ವಸ್ವರ್ಣೋ ಮನುರುತ್ತಮಃ ॥

641) **ಸ. ಸಂ. :–** ತಡೆಯಲ್ಪಡದವನು ; ಮುಕ್ತಾತ್ಮರನ್ನು ಧರಿಸಿ ಪೋಷಿಸುವವನು. ನಿರಸ್ತವಲ್ಲದ 'ಉತ್'–ಎಂಬ ವೇದಪ್ರೋಕ್ತವಾದ ಹೆಸರನ್ನು ಹೊಂದಿರುವವನು. **ಏತಸ್ಯೋದೇತಿ ವಾಮ । (ಶ್ರುತಿಃ)**

* * *

639) **ಅಪ್ರತಿರಥಃ** = ತಡೆಯುವ ಎದುರಾಳಿಯಿಲ್ಲದವನು. ತಡೆಯಿಲ್ಲದ ಧಾರಾಳವಾದ ವೇದಮಯನಾದ ಗರುತ್ಮಂತನೆಂಬ ರಥವುಳ್ಳವನು.

ಶಂ. ಭಾ. :– ಪ್ರತಿಪಕ್ಷವಿಲ್ಲದವನು.

645) **ಪ. ಭ. :–** ಜನಾರ್ದನಸ್ವಾಮಿಯು. ಅನಿಷ್ಟರಾದ ಜನರನ್ನು ಧ್ವಂಸಮಾಡುವುದರಿಂದ ಯಾವ ಎದುರಾಳಿಯೂ ಇಲ್ಲದವನು.

ನಿರುಕ್ತಿ :– ಪ್ರತಿಪಕ್ಷಸ್ಯ ರಾಹಿತ್ಯಾದ್ವಹ್ವನಿಷ್ಟಜನಾರ್ದನಃ ।
ವಿಖ್ಯಾತೋ ಹ್ಯಪ್ರತಿರಥಃ ನವಾರ್ಣಃ ಶತ್ರುನಾಶಕಃ ॥

'ಓಂ ಅಪ್ರತಿರಥಾಯ ನಮಃ'–ಎಂಬ ಈ ನಾಮಮಂತ್ರಜಪದಿಂದ ಶತ್ರುಗಳ ನಿರಸನವಾಗುತ್ತದೆ.

642) **ಸ. ಸಂ. :–** ಎದುರಾಳಿಯಿಲ್ಲದವನು.

* * *

640) ಪ್ರದ್ಯುಮ್ನಃ = ಕಾಮದೇವಸ್ವರೂಪನು ; ಶ್ರೇಷ್ಠವಾದ ರೂಪಾದಿಗಳೇ ಧನವುಳ್ಳವನು ; ವಾಸುದೇವವ್ಯೂಹದಲ್ಲಿ ಮೂರನೆಯವನು. ಮನಸ್ತತ್ತ್ವಕ್ಕೆ ಅಭಿಮಾನಿಯಾದ ಭಗವದ್ರೂಪನು.

ಶಂ. ಭಾ. :– ಶ್ರೇಷ್ಠವಾದ ಧನವುಳ್ಳವನು. ವಾಸುದೇವಾದಿ ವ್ಯೂಹದಲ್ಲಿ ಸೇರಿದವನು.

646) **ಪ. ಭ. :–** ಆತ್ಮನನ್ನು ಚೆನ್ನಾಗಿ ಬೆಳಗಿಸುವವನು ; ಪುರುಷೋತ್ತಮಮೂರ್ತಿಯು ; ಆತ್ಮನನ್ನು ಬೆಳಗಿಸುವಿಕೆ–ಎಂಬ ಶ್ರೇಷ್ಠವಾದ ಐಶ್ವರ್ಯವುಳ್ಳವನು.

ನಿರುಕ್ತಿ :– ಆತ್ಮಪ್ರದ್ಯೋತನತ್ವಾಚ್ಚ ಪ್ರದ್ಯುಮ್ನ ಇತಿ ಕಥ್ಯತೇ ॥

643) **ಸ. ಸಂ. :–** ಶ್ರೇಷ್ಠವಾದ ಕೀರ್ತಿಯುಳ್ಳವನು. **ಪ್ರದ್ಯುಮ್ನೋ ದಿವಿ ಸ್ನಾಯತೇ ॥**

* * *

641) **ಅಮಿತವಿಕ್ರಮಃ** = ಅಳೆಯಲಾಗದ ಪರಾಕ್ರಮವುಳ್ಳವನು ಅಥವಾ ದೀರ್ಘವಾದ ಪಾದವಿನ್ಯಾಸವುಳ್ಳವನು ; ತ್ರಿವಿಕ್ರಮಸ್ವರೂಪಿಯು.

ಶಂ. ಭಾ. :– ಅಪರಿಮಿತವಾದ ಅಥವಾ ಅಪ್ರತಿಹತವಾದ ಪೌರುಷ ವುಳ್ಳವನು ಅಥವಾ ಪಾದವಿನ್ಯಾಸವುಳ್ಳವನು.

647) **ಪ. ಭ. :–** ಯಮುನಾತೀರ್ಥದಲ್ಲಿರುವ ತ್ರಿವಿಕ್ರಮ ಮೂರ್ತಿಯು ; ಮೂರು ಲೋಕಗಳಲ್ಲಿಯೂ ತುಂಬಲಾಗದ ಪಾದವಿನ್ಯಾಸ ವುಳ್ಳವನು.

ನಿರುಕ್ತಿ :– **ಲೋಕತ್ರಯೇಽಪ್ಯಪರ್ಯಾಪ್ತವಿಕ್ರಮೋಽಮಿತವಿಕ್ರಮಃ ॥**

644) **ಸ. ಸಂ. :–** ಅಪರಿಮಿತವಾದ ಪರಾಕ್ರಮವುಳ್ಳವನು ; **ಮಿತವಿಕ್ರಮಃ** = ವೇದವೇ ಮುಂತಾದ ಪ್ರಮಾಣಗಳಿಂದ ಅಳೆಯಲ್ಪಟ್ಟ ಪರಾಕ್ರಮವುಳ್ಳವನು.

* * *

ಕಾಲನೇಮಿನಿಹಾ ವೀರಃ ಶೌರಿಃ ಶೂರಜನೇಶ್ವರಃ ।
ತ್ರಿಲೋಕಾತ್ಮಾ ತ್ರಿಲೋಕೇಶಃ ಕೇಶವಃ ಕೇಶಿಹಾ ಹರಿಃ ॥೬೨॥

642) **ಕಾಲನೇಮಿನಿಹಾ** = (ಅವಿದ್ಯಾಸ್ವರೂಪಿಯಾದ) ಅಸುರನನ್ನು ಸಂಹರಿಸಿದವನು.

ಶಂ. ಭಾ. :– ಕಾಲನೇಮಿಯೆಂಬ ಅಸುರನನ್ನು ಸಂಹರಿಸಿದವನು.

648) **ಪ. ಭ. :–** ಅವಿದ್ಯೆಯೆಂಬ ಕಾಲಚಕ್ರದ ಪಟ್ಟಿಯ ಪ್ರಸರಣ ವನ್ನು ಧ್ವಂಸಮಾಡುವ ಕಾಲನೇಮಿನಿಹನೆಂಬ ಭಗವನ್ಮೂರ್ತಿಯು.

ನಿರುಕ್ತಿ :– **ಕಾಲಚಕ್ರಸ್ಯ ಯಾ ನೇಮಿರವಿದ್ಯಾಖ್ಯಾ ಚ ದುರ್ಧರಾ ।**
ತಾಂ ನಾಶಯತಿ ಯಶ್ಚಾಸೌ ಕಾಲನೇಮಿನಿಹಾ ಸ್ಮೃತಃ ॥
ನವಾಕ್ಷರೋ ಮನುರಯಮವಿದ್ಯಾಮೂಲಮೋಚಕಃ ॥

'ಓಂ ಕಾಲನೇಮಿನಿಘ್ನೇ ನಮಃ'–ಎಂಬ ನಾಮದ ಜಪದಿಂದ ವಿದ್ಯಾ ಮೂಲದಿಂದ ಬಿಡುಗಡೆಯು ದೊರೆಯುತ್ತದೆ.

645) ಸ. ಸಂ. :– ಕಾಲನೇಮಿಯನ್ನು ಸಂಹರಿಸಿದವನು.

* * *

643) ವೀರಃ = ಶೂರನು.

ಶಂ. ಭಾ. :– ಶೂರನು.

649) ಪ. ಭ. :– ಶೌರಿಃ = ಉತ್ಪಲಾವರ್ತಕವೆಂಬ ಶುಭವಾದ ಕ್ಷೇತ್ರ ದಲ್ಲಿ ಬಿಜಯಮಾಡಿಸಿರುವ ಶೌರಿ ಎಂಬ ಭಗವನ್ಮೂರ್ತಿಯು.
ನಿರುಕ್ತಿ :– ಶೌರಿನಾಮ್ನಾ ಸ್ಥಿತಃ ಶೌರಿಃ ಉತ್ಪಲಾವರ್ತಕೇ ಶುಭೇ ॥

646) ಸ. ಸಂ. :– ವೀರಃ = ವಿಶೇಷವಾಗಿ ಅಥವಾ ವಿಶಿಷ್ಟರಾದವರನ್ನು ಕುರಿತು ಹೋಗುವವನು.

* * *

644) ಶೌರಿಃ = ಶೂರನೆಂಬ ಯದುವಂಶೀಯನಾದ ರಾಜನ ಕುಲದಲ್ಲಿ ಹುಟ್ಟಿದವನು.

ಶಂ. ಭಾ. :– ಶೂರನ ಕುಲದಲ್ಲಿ ಹುಟ್ಟಿದವನು.

650) ಪ. ಭ. : ಶೂರಃ = ಚಿತ್ರಕೂಟಪರ್ವತದಲ್ಲಿ ಬಿಜಯಮಾಡಿಸಿ ರುವ ರಾಕ್ಷಸನಾಶಕನಾದ ಶೂರನಾದ ಶ್ರೀರಾಮಮೂರ್ತಿಯು.
ನಿರುಕ್ತಿ :– ಸರ್ವರಕ್ಷಃಕ್ಷಯಕರಃ ಶೂರ ಇತ್ಯಭಿಧೀಯತೇ ॥

647) ಸ. ಸಂ. :– ಶೌರಿಃ = ಶೂರನ ಕುಲದಲ್ಲಿ ಹುಟ್ಟಿದವನು.

* * *

645) ಶೂರಜನೇಶ್ವರಃ = ಶೂರರೆಂಬ ಯಾದವಗಣಗಳಿಗೆ ಅಧಿಪತಿ ಯಾದವನು ; ಅತಿಶೂರರಾದ ಜನರಿಗೂ (ದೇವಾದಿಗಳಿಗೂ) ಅಧಿಪತಿ ಯಾದವನು.

ಶಂ. ಭಾ. :– ಶೂರವೀರರಾದ ಇಂದ್ರಾದಿಗಳನ್ನು ಶೌರ್ಯಾತಿಶಯ ದಿಂದ ಆಳುವವನು.

651) **ಪ. ಭ. :– ಸುಗ್ರೀವ, ಆಂಜನೇಯರೇ ಮುಂತಾದ ಶೂರವೀರರಿಗೆ ನಿಯಾಮಕನಾದ ಶ್ರೀರಾಮಮೂರ್ತಿಯು.**
ನಿರುಕ್ತಿ :– ಪರಾಕ್ರಮಿಜನೇಶತ್ವಾತ್ ಸ್ಮೃತಃ ಶೂರಜನೇಶ್ವರಃ ॥

648) **ಸ. ಸಂ. :– ಶೂರವಂಶದಲ್ಲಿ ಹುಟ್ಟಿದವನು ಮತ್ತು ಬೇರೆ ಪ್ರಭುವಿಲ್ಲದವನು.**

* * *

646) **ತ್ರಿಲೋಕಾತ್ಮಾ = ಮೂರು ಲೋಕಗಳಿಗೂ ಅಂತರ್ಯಾಮಿ ಚೈತನ್ಯವಾಗಿರುವವನು.**

ಶಂ. ಭಾ. :– ಮೂರು ಲೋಕಗಳಿಗೂ ಅಂತರ್ಯಾಮಿಯಾಗಿರುವವನು ; ಮೂರು ಲೋಕಗಳಿಂದ ಅಭಿನ್ನನಾಗಿರುವವನು.

652) **ಪ. ಭ. :– ಭಕ್ತರನ್ನು ಅನುಗ್ರಹಿಸುವುದಕ್ಕಾಗಿ ಸತತವಾಗಿ ಮೂರು ಲೋಕಗಳಿಗೂ ಹೋಗುವವನು ; ಮಗಧಮಂಡಲದಲ್ಲಿರುವ ಲೋಕನಾಥಮೂರ್ತಿಯು.**
ನಿರುಕ್ತಿ :– ಯಃ ಸಾತತ್ಯೇನ ಲೋಕಾಂಸ್ತ್ರೀನ್ಭಕ್ತಾನುಗ್ರಹಕಾಮ್ಯಯಾ ।
ಗಚ್ಛತೀತಿ ತ್ರಿಲೋಕಾತ್ಮಾ ವಸ್ವರ್ಣೋ ಭೂತಿದಾಯಕಃ ॥

'ಓಂ ತ್ರಿಲೋಕಾತ್ಮನೇ ನಮಃ'–ಎಂಬ ನಾಮದ ಅನುಸಂಧಾನದಿಂದ ಐಶ್ವರ್ಯಲಾಭವುಂಟಾಗುತ್ತದೆ.

649) **ಸ. ಸಂ. :– ಮೂರು ಲೋಕಗಳಿಗೂ ಆತ್ಮವಾಗಿರುವವನು.**

* * *

647) **ತ್ರಿಲೋಕೇಶಃ = ಮೂರು ಲೋಕಗಳಿಗೂ ಸ್ವಾಮಿಯಾದವನು.**

ಶಂ. ಭಾ. :– ಯಾವನಿಂದ ಆಜ್ಞಾಪಿಸಲ್ಪಟ್ಟು ಮೂರು ಲೋಕಗಳೂ ತಮ್ಮ ತಮ್ಮ ಕೆಲಸಗಳಲ್ಲಿ ನಡೆಯುತ್ತಿವೆಯೋ–ಅವನು.

653) **ಪ. ಭ. :– ಪ್ರಾಗ್ಜ್ಯೋತಿಷಪುರದಲ್ಲಿ ಬಿಜಯಮಾಡಿಸಿರುವ ವಿಶ್ವೇಶ್ವರಮೂರ್ತಿಯು ; ಮೂಜಗದೊಡೆಯನು.**
ನಿರುಕ್ತಿ :– ತ್ರಿಲೋಕಾನಾಮೀಶತಯಾ ತ್ರಿಲೋಕೇಶಃ ಪ್ರಕೀರ್ತಿತಃ ॥

650) **ಸ. ಸಂ. :– ಮೂರು ಲೋಕಗಳಿಗೂ ಒಡೆಯನಾದವನು.**

* * *

648) **ಕೇಶವಃ** = ತ್ರಿಮೂರ್ತಿಪ್ರಭುವು ; ಸುಂದರವಾದ ಮತ್ತು ನೀಲವಾದ ಕೇಶಪಾಶಗಳುಳ್ಳವನು ; **ಪ್ರಶಸ್ತನೀಲಕೇಶತ್ವಾತ್ಕೇಶವಃ ಪರಿಕೀರ್ತಿತಃ ॥** ಸೂರ್ಯಾದಿ ಕಿರಣಗಳುಳ್ಳವನು.

ಶಂ. ಭಾ. :– ಸೂರ್ಯನೇ ಮುಂತಾದವರಲ್ಲಿ ವ್ಯಾಪಿಸಿರುವ ಕೇಶವೆಂಬ ಕಿರಣಗಳುಳ್ಳವನು.

ಸೂರ್ಯಸ್ಯ ತಪತೋ ಲೋಕಾನಗ್ನೇಃ ಸೋಮಸ್ಯ ಚಾಪ್ಯುತ ।
ಅಂಶವೋ ಯೇ ಪ್ರಕಾಶನ್ತೇ ಮಮೈತೇ ಕೇಶಸಂಜ್ಞಿತಾಃ ।
ಸರ್ವಜ್ಞಾಃ ಕೇಶವಂ ತಸ್ಮಾನ್ಮಾಮಾಹುರ್ದ್ವಿಜಸತ್ತಮಾಃ ॥
(ಮ. ಭಾ. ಶಾನ್ತಿ. ೩೪೧-೪೮)

ಬ್ರಹ್ಮ-ವಿಷ್ಣು-ಶಿವರೆಂಬ ಶಕ್ತಿಗಳುಳ್ಳವನು (ಆ ಶಕ್ತಿಗಳಿಗೆ ತ್ರಯಃ ಕೇಶಿನಃ–ಎಂಬ ಶ್ರುತಿಯಂತೆ ಕೇಶ ಎಂದು ಹೆಸರು. ಕೇಶವೆಂದರೆ ಶಕ್ತಿ ಎಂದು ವಿಷ್ಣುಪುರಾಣವು ಹೇಳುತ್ತದೆ. **ಮತ್ಕೇಶೌ ವಸುಧಾತಲೇ ।** (ವಿ. ಪು. ೫-೧-೬೦) ಬ್ರಹ್ಮ ಮತ್ತು ಶಿವ–ಇವರಿಬ್ಬರೂ ಯಾವನ ಅಂಗದಿಂದ ಹುಟ್ಟುತ್ತಾರೆಯೋ–ಅವನು.

ಕೋ ಬ್ರಹ್ಮೇತಿ ಸಮಾಖ್ಯಾತ ಈಶೋಽಹಂ ಸರ್ವದೇಹಿನಾಮ್ ।
ಆವಾಂ ತವಾಂಶಸಂಭೂತೌ ತಸ್ಮಾತ್ಕೇಶವನಾಮವಾನ್ ॥
(ಹರಿವಂಶ ೩-೮೮-೪೮)

654) **ಪ. ಭ. :–** ಬ್ರಹ್ಮ ಮತ್ತು ಈಶ್ವರರು ಯಾವನ ಅಂಗದಿಂದ ಹುಟ್ಟಿದರೋ–ಅವನು ; ಮಥುರಾ-ವಾರಾಣಸೀಕ್ಷೇತ್ರಗಳಲ್ಲಿ ಬಿಜಯ ಮಾಡಿಸಿರುವ ಕ್ಲೇಶಪರಿಹಾರಕನಾದ ಕೇಶವಮೂರ್ತಿಯು.

ನಿರುಕ್ತಿ :– **ಬ್ರಹ್ಮೇಶಯೋಃ ಸ್ವಾಙ್ಗಜತ್ವಾತ್ಕೇಶವಃ ಪರಿಕೀರ್ತಿತಃ ॥**

651) **ಸ. ಸಂ. :–** ಬಿಳಿಯ ಮತ್ತು ಕಪ್ಪಾದ ಕೇಶಗಳೆರಡನ್ನೂ

ಭೂಮಿಯಲ್ಲಿ (ಬಲರಾಮ ಮತ್ತು ಶ್ರೀಕೃಷ್ಣರ ರೂಪದಲ್ಲಿ) ಇರಿಸಿದವನು ; ತನ್ನ ಕಪ್ಪು ಕೇಶದ ಗಂಧವು (ಪ್ರಭಾವವು) ದೈತ್ಯರಿಗೆ ಮುಟ್ಟುವಂತೆ ಮಾಡುವವನು.

* * *

649) **ಕೇಶಿಹಾ** = ಕೇಶಿಯೆಂಬ ದಾನವನನ್ನು ಸಂಹರಿಸಿದವನು.

ಶಂ. ಭಾ. :– ಕೇಶಿಯೆಂಬ ಅಸುರನನ್ನು ಸಂಹರಿಸಿದವನು.

655) **ಪ. ಭ. :–** ಕೇಶಿಯೆಂಬ ಅಸುರನನ್ನು ಸಂಹರಿಸಿದವನು. **ಕೇಶವಂ ಕೇಶಿಹನ್ತಾರಂ ।**

ನಿರುಕ್ತಿ :– ಅಸುರಂ ಕೇಶಿನಾಮಾನಂ ಹತವಾನ್ಕೇಶಿಹಾ ಸ್ಮೃತಃ ॥

652) **ಸ. ಸಂ. :–** ಕೇಶಿಯೆಂಬುವನನ್ನು ಸಂಹರಿಸಿದವನು ; ದುಃಶಾಸನನನ್ನುಸಂಹರಿಸಿದವನು.

* * *

650) **ಹರಿಃ** = ಮನಸ್ಸನ್ನು ಅಪಹರಿಸುವವನು ; ಪಾಪಗಳನ್ನು ಹೋಗಲಾಡಿಸುವವನು. **ಹರಿರ್ಹರತಿ ಪಾಪಾನಿ ।**

ಶಂ. ಭಾ. :– (ಅವಿದ್ಯೆಯೆಂಬ) ಕಾರಣದಿಂದ ಸಹಿತವಾದ ಸಂಸಾರವನ್ನು ಹೋಗಲಾಡಿಸುವವನು.

656) **ಪ. ಭ. :–** ಭಕ್ತರ ದುಃಖವನ್ನು ಪರಿಹರಿಸುವವನು ; ಯಜ್ಞದಲ್ಲಿ ಇಡೆಯೆಂದು ಕರೆಯಲ್ಪಟ್ಟ ಭಾಗವನ್ನು ತೆಗೆದುಕೊಳ್ಳುವವನು ; ಶ್ರೇಷ್ಠವಾದ ಹರಿದ್ವರ್ಣವುಳ್ಳವನು ; (ಹಸಿರುಬಣ್ಣವುಳ್ಳವನು) ಗೋವರ್ಧನ ಪರ್ವತದಲ್ಲಿ ಬಿಜಯಮಾಡಿಸಿರುವ ಶ್ರೀಹರಿಮೂರ್ತಿಯು.

ನಿರುಕ್ತಿ :– ಭಕ್ತಾನಾಂ ದುಃಖಹರಣಾದ್ವರ್ಣಶ್ರೈಷ್ಠ್ಯಾದ್ಧರಿಃ ಸ್ಮೃತಃ ॥

653) **ಸ. ಸಂ. :–** ಪಾಪವನ್ನು ಪರಿಹರಿಸುವವನು.

* * *

ಕಾಮದೇವಃ ಕಾಮಪಾಲಃ ಕಾಮೀ ಕಾನ್ತಃ ಕೃತಾಗಮಃ ।
ಅನಿರ್ದೇಶ್ಯವಪುರ್ವಿಷ್ಣುರ್ವೀರೋಽನನ್ತೋ ಧನಂಜಯಃ ॥೭೩॥

651) **ಕಾಮದೇವಃ** = ಮನ್ಮಥಸ್ವರೂಪಿಯು ; ಕಾಮಿಸಲ್ಪಡುವ ದೇವನು.

ಶಂ. ಭಾ. :– ಧರ್ಮವೇ ಮುಂತಾದ ನಾಲ್ಕು ಪುರುಷಾರ್ಥಗಳನ್ನೂ ಬಯಸುವವರಿಂದ ಕಾಮಿಸಲ್ಪಡುವ ದೇವನು. (ಕಾಮನೂ-ದೇವನೂ ಆಗಿರುವವನು.)

657) **ಪ. ಭ. :–** ಎಲ್ಲರ ಕಾಮನೆಗಳನ್ನೂ ಈಡೇರಿಸುವವನು. ಶಂಕರಾಲಯದಲ್ಲಿರುವ ದೇವನು ; ಕಾಮಿಸಲ್ಪಡುವ ಅರ್ಥಗಳಿಗೆ ಸ್ವಾಮಿಯು ಮತ್ತು ಫಲದಾಯಕನು. **ಕಾಮದೇವಸ್ತು ಭಗವಾನ್ಸರ್ವೇಷಾಂ ಸರ್ವಕಾಮದಃ। ಶಙ್ಕರಾಲಯಮಾಸಾದ್ಯ ಸಂಸ್ಥಿತೋಽಪ್ಸರಸಾರ್ಚಿತಃ॥**
ನಿರುಕ್ತಿ :– ಸರ್ವೇಷಾಂ ಕಾಮದತ್ವಾಚ್ಚ ಕಾಮದೇವ ಇತೀರಿತಃ ॥

654) **ಸ. ಸಂ. :–** ಕಾಮನಂತೆ ಬೆಳಗುವವನು.

* * *

652) **ಕಾಮಪಾಲಃ** = ಭಕ್ತರ ಕಾಮಗಳನ್ನು ಪಾಲಿಸುವವನು ; ಮನ್ಮಥ ನನ್ನು ಪಾಲಿಸುವವನು. ಬಲರಾಮಸ್ವರೂಪನು.

ಶಂ. ಭಾ. :– ಕಾಮಿಗಳ ಕಾಮನೆಗಳನ್ನು ಪಾಲಿಸುವವನು.

658) **ಪ. ಭ. :–** ಕಾಮಿತಾರ್ಥಗಳನ್ನೂ ಕೊಟ್ಟು ಅವುಗಳನ್ನು ಪಾಲಿಸುವವನು.
ನಿರುಕ್ತಿ :– ದತ್ವಾ ತು ಪಾಲನಪರಃ ಕಾಮಪಾಲಃ ಪ್ರಕೀರ್ತಿತಃ ॥

655) **ಸ. ಸಂ. :–** ಕಾಮಗಳನ್ನು ಪಾಲಿಸುವವನು ; ಚತುರ್ಮುಖ ನಿಂದ ಅಥವಾ ವಾಯುವಿನಿಂದ ಹೊಂದಲ್ಪಡುವವನು ಮತ್ತು ಜನರನ್ನು ಪಾಲಿಸುವವನು.

* * *

653) **ಕಾಮೀ** = ಪೂರ್ಣಕಾಮನಾದವನು ; ಲೋಕಕಲ್ಯಾಣಾರ್ಥ ವಾದ ಕಾಮಗಳುಳ್ಳವನು.

ಶಂ. ಭಾ. :– ಸ್ವಾಭಾವಿಕವಾಗಿಯೇ ಪೂರ್ಣಕಾಮನಾದವನು.

659) **ಪ. ಭ. :–**ಅತಿಶಯವಾಗಿ ಕಾಮಿತಾರ್ಥಗಳನ್ನು ಕೊಡುವವನು.
ನಿರುಕ್ತಿ :– ಪ್ರದೇಯಾತಿಶಯಾತ್ಕಾಮೀ............... ॥

656) **ಸ. ಸಂ. :–** ಜಗತ್ತಿನ ರಕ್ಷಣೆಯೇ ಮುಂತಾದುವುಗಳನ್ನು ಕಾಮಿಸುವವನು.

* * *

654) **ಕಾನ್ತಃ=** ಆಕರ್ಷಕನಾದವನು ; ಕಮನೀಯನು.

ಶಂ. ಭಾ. :– ಸುಂದರತಮವಾದ ದೇಹವನ್ನು ಧರಿಸಿರುವವನು ; ಎರಡು ಪರಾರ್ಧಕಾಲಗಳ ಕೊನೆಯಲ್ಲಿ ಬ್ರಹ್ಮನನ್ನೂ ಲಯಗೊಳಿಸುವವನು.

660) **ಪ. ಭ. :–** ಕಮನೀಯನು. ಅಪ್ಸರೆಯರಿಂದ ಪೂಜಿತನಾದ ದೇವನು.
ನಿರುಕ್ತಿ :– .... ಕಾನ್ತಃ ಸ್ಯಾತ್ಕಮನೀಯಕಃ ॥

657) **ಸ. ಸಂ. :–** ಮನೋಹರನು.

* * *

655) **ಕೃತಾಗಮಃ =** ಆಗಮಗಳನ್ನು (ವೇದ-ಸ್ಮೃತಿ-ವೈಷ್ಣವ ಮತ್ತು ಶೈವಾಗಮಗಳನ್ನು) ರಚಿಸಿದವನು.

ಶಂ. ಭಾ. :– ಶ್ರುತಿ-ಸ್ಮೃತಿಗಳೇ ಮುಂತಾದ ಲಕ್ಷಣವುಳ್ಳ ಆಗಮಗಳನ್ನು ರಚಿಸಿದವನು. **ಶ್ರುತಿಸ್ಮೃತೀ ಮಮೈವಾಜ್ಞೇ** (ಭಗವದ್ವಚನ) **ವೇದಾಃ ಶಾಸ್ತ್ರಾಣಿ ವಿಜ್ಞಾನಮೇತತ್ಸರ್ವಂ ಜನಾರ್ದನಾತ್ ।**

(ಅನು. ೧೪೯-೧೩೯)

661) **ಪ. ಭ. :–** (ಶಕ್ತೀಶಾವತಾರದಲ್ಲಿ) ಶುದ್ಧಾತ್ಮರಾದವರಿಗೆ ಪ್ರಿಯ ವಾದ ಮಂತ್ರವಿದ್ಯೆಯನ್ನು ಪ್ರಕಟಪಡಿಸಿದವನು.
ನಿರುಕ್ತಿ :– ಮನ್ತ್ರವಿದ್ಯಾವ್ಯಞ್ಜಕತ್ವಾತ್ಕೃತಾಗಮ ಇತೀರಿತಃ ॥

658) **ಸ. ಸಂ. :–** ಪುರಾಣವೇ ಮುಂತಾದ ಆಗಮಗಳನ್ನು ರಚಿಸಿ ದವನು ; ವಿಷವೃಕ್ಷವನ್ನು ಅಥವಾ ಅರ್ಜುನವೃಕ್ಷವನ್ನು ಕತ್ತರಿಸಿದವನು ;

ಭೂಮಿಗೆ ಪಾರಿಜಾತವನ್ನು ತಂದ ಸತ್ಯಭಾಮೆಯುಳ್ಳವನು ; ಕರ್ಮದಿಂದ ಹೊಂದಲು ಅಸಾಧ್ಯನಾದವನು.

* * *

656) **ಅನಿರ್ದೇಶ್ಯವಪುಃ** = ತ್ರಿಗುಣಾತೀತನೂ-ಅತೀಂದ್ರಿಯನೂ ಆಗಿರುವುದರಿಂದ ಯಾವನ ಶರೀರವು 'ಹೀಗೆಯೇ ಇದೆ'–ಎಂದು ನಿರ್ದಿಷ್ಟ ವಾಗಿ ಹೇಳಲು ಆಗುವುದಿಲ್ಲವೋ–ಅಂತಹವನು.

ಶಂ. ಭಾ. :– ಗುಣಾದಿಗಳನ್ನು ಮೀರಿರುವುದರಿಂದ ಯಾವನ ರೂಪವು 'ಇದೇ ಆಗಿದೆ'–ಎಂಬುದನ್ನು ನಿರ್ದೇಶಿಸಲು ಸಾಧ್ಯವಾಗುವು ದಿಲ್ಲವೋ– ಅವನು.

662) **ಪ. ಭ. :–** ಯುಗಗಳಿಗೆ ಅನುಸಾರವಾಗಿ ವಿಚಿತ್ರವಾದ ರೂಪ ಗಳನ್ನು ಧರಿಸಿರುವುದರಿಂದ ಯಾವನ ಶರೀರವನ್ನು ಇಂತಹುದೇ ಆಗಿದೆ ಯೆಂದು ನಿರ್ದೇಶಿಸಲು ಸಾಧ್ಯವಾಗುವುದಿಲ್ಲವೋ–ಅವನು.

ನಿರುಕ್ತಿ :– **ಯುಗಾನುಸಾರಿರೂಪತ್ವಾದನಿರ್ದೇಶ್ಯವಪುಃ ಸ್ಮೃತಃ ॥**

659) **ಸ. ಸಂ. :–** ನಿರ್ದೇಶಿಸಲು ಅಸಾಧ್ಯವಾದ ದೇಹವುಳ್ಳವನು.

ತದೇತದಿತಿ ಮನ್ಯನ್ತೇಽನಿರ್ದೇಶ್ಯಂ ಪರಮಂ ಸುಖಮ್ ॥ (ಶ್ರುತಿಃ)

* * *

657) **ವಿಷ್ಣುಃ** = ಸರ್ವವ್ಯಾಪಕನು ; ತನ್ನ ಪಾದವಿನ್ಯಾಸದಿಂದ ಎಲ್ಲ ವನ್ನೂ ಆಕ್ರಮಿಸಿದವನು.

ಶಂ. ಭಾ. :– ದ್ಯಾವಾಪೃಥಿವಿಗಳನ್ನು ತನ್ನ ಕಾಂತಿಯಿಂದ ವ್ಯಾಪಿಸಿರು ವವನು. **ವ್ಯಾಪ್ತಾ ಮೇ ರೋದಸೀ ಪಾರ್ಥ ಕಾನ್ತಿಶ್ಚಾಭ್ಯಧಿಕಾ ಮಮ । ಕ್ರಮಣಾಚ್ಚಾಪ್ಯಹಂ ಪಾರ್ಥ ವಿಷ್ಣುರಿತ್ಯಭಿಸಂಜ್ಞಿತಃ ॥**

(ಮ. ಭಾ. ಶಾನ್ತಿ ೩೪೧-೪೩)

663) **ಪ. ಭ. :–** ವ್ಯಾಪ್ತಿ ಮತ್ತು ನಿಯಮಿಸುವಿಕೆಗಳೆಂಬ ಶಕ್ತಿಯಿಂದ ವಿಶ್ವವನ್ನು ವ್ಯಾಪಿಸಿರುವವನು ; ತನ್ನ ಶಕ್ತಿಯಿಂದ ಜಗತ್ತನ್ನು ಪ್ರವೇಶಿಸಿರು ವವನು ಅಥವಾ ಪಾದವಿನ್ಯಾಸವನ್ನು ಇಡೀ ಜಗತ್ತಿನಲ್ಲಿ ಮಾಡಿರುವವನು. **ಯಸ್ಮಾದ್ವಿಷ್ಟಮಿದಂ ಸರ್ವಂ ತಸ್ಯ ಶಕ್ತ್ಯಾ ಮಹಾತ್ಮನಃ । ತಸ್ಮಾತ್ಸ ಪ್ರೋಚ್ಯತೇ ವಿಷ್ಣುಃ ವಿಶೇರ್ಧಾತೋಃ ಪ್ರವೇಶನಾತ್ ॥**

ನಿರುಕ್ತಿ :– **ಸ್ವಶಕ್ತ್ಯಾ ಜಗತೋ ವ್ಯಾಪ್ತೇರ್ಯದ್ವಾ ವಿಕ್ರಮಣಾತ್ಸ್ವತಃ**
ವಿಷ್ಣುಃ ಸ್ಮೃತೋ ವಿಶೇಷೇಣ............ ॥

660) **ಸ. ಸಂ. :–** ಐತರೇಯಭಾಷ್ಯದ ಪ್ರಕಾರ ವಿಷ್ಣುಶಬ್ದದಲ್ಲಿರುವ 'ಣ'ಕಾರವು ಅವನ ಬಲವನ್ನು ಹೇಳುತ್ತದೆ. 'ಷ' ಕಾರವು ಅವನು ರಮಾ ದೇವೀ, ಬ್ರಹ್ಮ, ಈಶ್ವರ–ಮುಂತಾದವರಿಗೆ ಅಧಿಪತಿ ಎಂಬುದನ್ನು ಹೇಳು ತ್ತದೆ ಮತ್ತು ಅವನು ಪರಮಾತ್ಮನು ಎಂಬುದನ್ನು ತಿಳಿಸುತ್ತದೆ. ಆತ್ಮಶಬ್ದವು ಅವನು ಸಮಸ್ತಗುಣಗಳಿಂದಲೂ, ದೇಶ-ಕಾಲಗಳಿಂದಲೂ ಅತ್ಯಂತವಿಸ್ತಾರ ನಾಗಿರುವನೆಂಬುದನ್ನು ತಿಳಿಸುತ್ತದೆ. 'ಷ' ಶಬ್ದವೂ ಇದೇ ಅಭಿಪ್ರಾಯವನ್ನು ಹೇಳುತ್ತದೆ. ಎಲ್ಲವನ್ನೂ ಆಕ್ರಮಣಮಾಡಿರುವುದರಿಂದ ಅವನೇ ಎಲ್ಲರ ನಾಯಕನು ಮತ್ತು ಪೂರ್ಣನು. 'ವಿ' ಎಂಬುದು ವಿಶಿಷ್ಟತೆಯನ್ನು ಹೇಳು ತ್ತದೆ. ಕೊನೆಯಲ್ಲಿರುವ 'ಉ' ಕಾರವು ಇವೆಲ್ಲವೂ ಹರಿಯ 'ಶೀಲ' ಎಂಬು ದನ್ನೂ ತಿಳಿಸುತ್ತದೆ. ಹೀಗೆ ವಿಷ್ಣುಶಬ್ದಕ್ಕೆ ಅವನು ವಿಶಿಷ್ಟಪ್ರಾಣವುಳ್ಳವನು, ಅನಂತನು, ಎಲ್ಲೆಲ್ಲಿಯೂ ಇರುವವನು, ವಿಶಿಷ್ಟಬಲವುಳ್ಳವನು ಮತ್ತು ಎಲ್ಲಕ್ಕಿಂತಲೂ ಶೀತವಾದವನು (ಎಲ್ಲರಿಗಿಂತಲೂ ಹೆಚ್ಚು ಶೀಲವಂತನಾದ ವನು.)–ಎಂಬ ಅಭಿಪ್ರಾಯ.

*　　*　　*

658) **ವೀರಃ** = ಮಹಾವೀರನು.

ಶಂ. ಭಾ. :– ವಿಶಿಷ್ಟವಾದ ಗತಿಯೇ ಮುಂತಾದುವುಗಳುಳ್ಳವನು.

664) **ಪ. ಭ. :–** ಸಾಧುಗಳ ದುಃಖವನ್ನು ಹೋಗಲಾಡಿಸುವವನು. ತನ್ನ ಆಜ್ಞೆಯನ್ನೇ ಪ್ರತೀಕ್ಷಿಸುತ್ತಿರುವ ಚಕ್ರ, ಗದೆ–ಮುಂತಾದುವುಗಳನ್ನು ಪ್ರೇರಿಸಿ ಸಾಧುಗಳಿಗೆ ಸಂತಾಪವನ್ನುಂಟುಮಾಡುವವರನ್ನು ಸಂಹರಿಸು ವವನು.

ನಿರುಕ್ತಿ :– **........... ವೀರಃ ಸ್ಯಾತ್ಸಾಧುದುಃಖಹಾ ॥**

661) **ಸ. ಸಂ. :–** ಇಚ್ಛಾನುರೂಪವಾದ ಸುಖವುಳ್ಳವನು ; ಸಮ ರ್ಥನು. **ಇಚ್ಛಾನುರೂಪಂ ತು ಸುಖಮೀರೇತ್ಯನೇನ ಪ್ರಕೀರ್ತಿತಂ ।**

*　　*　　*

659) **ಅನನ್ತಃ** = ದೇಶ-ಕಾಲ-ವಸ್ತುಗಳ ಪರಿಮಿತಿಯಿಲ್ಲದವನು ; ನಾಶವಿಲ್ಲದವನು.

ಶಂ. ಭಾ. :– ವ್ಯಾಪಕನೂ, ನಿತ್ಯನೂ, ಸರ್ವಾತ್ಮನೂ, ದೇಶ-ಕಾಲ ಮತ್ತು ವಸ್ತುಗಳ ಪರಿಚ್ಛೇದರಹಿತನೂ ಆಗಿರುವವನು. **ಸತ್ಯಂ ಜ್ಞಾನಮನನ್ತಂ ಬ್ರಹ್ಮ** (ತೈ. ಉ. ೨-೧) ಅಥವಾ ಯಾವನ ಗುಣಗಳ ಕೊನೆ ಯನ್ನು ದೇವತೆಗಳೇ ಮುಂತಾದವರು ಹೊಂದಲಾರರೋ–ಅವನು. **ಗಂಧರ್ವಾಪ್ಸರಸಃ ಸಿದ್ಧಾಃ ಕಿನ್ನರೋರಗಚಾರಣಾಃ । ನಾನ್ತಂ ಗುಣಾನಾಂ ಗಚ್ಛನ್ತಿ ತೇನಾನನ್ತೋಽಯಮವ್ಯಯಃ ॥** (ವಿ. ಪು. ೨-೫-೨೪)

665) ಪ. ಭ. :– ದೇಶ, ಕಾಲ, ಗುಣ, ವಸ್ತುಗಳ ಅವಧಿಯು ಇಲ್ಲದವನು. **ನಾಸ್ತ್ಯನ್ತೋ ವಿಸ್ತರಸ್ಯ ಮೇ** (ಗೀತಾ. ೧೦-೧೯) **ಸತ್ಯಂ ಜ್ಞಾನಮನನ್ತಂ ಬ್ರಹ್ಮ** (ತೈ. ಉ.)

ನಿರುಕ್ತಿ :– **ದೇಶತಃ ಕಾಲತೋ ವಾಪಿ ಗುಣತೋ ವಸ್ತುತೋಽಪಿ ವಾ ॥**
ಅವಧಿರ್ಯಸ್ಯ ನಾಸ್ತೀತಿ ಸೋಽನನ್ತಃ ಸಮುದಾಹೃತಃ ॥

662) ಸ. ಸಂ. :– ನಾಶವಿಲ್ಲದವನು.

* * *

660) **ಧನಂಜಯಃ** = ಎಲ್ಲ ಧನಗಳನ್ನೂ ಗೆದ್ದ ಪರಮಧನಸ್ವರೂಪನು; ಅರ್ಜುನಸ್ವರೂಪನು ; ಅಗ್ನಿಸ್ವರೂಪನು.

ಶಂ. ಭಾ. :– ದಿಗ್ವಿಜಯದಲ್ಲಿ ಹೇರಳವಾದ ಧನವನ್ನು ಗೆದ್ದ ಅರ್ಜುನನು ಯಾವನ ವಿಭೂತಿಯಾಗಿದ್ದಾನೆಯೋ–ಅವನು. **ಪಾಂಡವಾನಾಂ ಧನಂಜಯಃ ।** (ಗೀತಾ. ೧೦-೩೭).

666) ಪ. ಭ. :– ಇಷ್ಟದಿಂದ ಸಂಪಾದನೆಯನ್ನು ಮಾಡುವಿಕೆ, ಲೋಭ, ಬಚ್ಚಿಡುವಿಕೆ, ಜೀವನಕ್ಕೆ ಆಧಾರವಾಗಿರುವಿಕೆ–ಮುಂತಾದುವುಗಳಿಗೆ ಯೋಗ್ಯವಾಗಿರುವ ಚಿನ್ನ, ರನ್ನ, ಮುಂತಾದ ಧನಗಳನ್ನೂ ಕೆಳಕ್ಕೆ ತಳ್ಳಿರುವವನು.

ನಿರುಕ್ತಿ :– **ಪ್ರೇಪ್ಸೋಪಾರ್ಜನಲೋಭಾದಿಯೋಗ್ಯತ್ವಾಧಿಕ್ಯತಸ್ತತಃ ।**

ಮಣಿಮೌಕ್ತಿಕರತ್ನಾನಿ ಹೇಮರೂಪ್ಯಾದಿಕಂ ಧನಮ್ ।
ಯೋಽಧಃ ಕರೋತಿ ಸತತಂ ಧನಂಜಯ ಇತೀರಿತಃ ॥

663) ಸ. ಸಂ. :– ಹಣವನ್ನು ಗೆಲ್ಲುವವನು.

* * *

ಬ್ರಹ್ಮಣ್ಯೋ ಬ್ರಹ್ಮಕೃದ್ಬ್ರಹ್ಮಾ ಬ್ರಹ್ಮ ಬ್ರಹ್ಮವಿವರ್ಧನಃ ।
ಬ್ರಹ್ಮವಿದ್ಬ್ರಾಹ್ಮಣೋ ಬ್ರಹ್ಮೀ ಬ್ರಹ್ಮಜ್ಞೋ ಬ್ರಾಹ್ಮಣಪ್ರಿಯಃ ॥

661) ಬ್ರಹ್ಮಣ್ಯಃ = ತಪಸ್ಸು, ವೇದ, ಬ್ರಾಹ್ಮಣರು ಮತ್ತು ಜ್ಞಾನಗಳಿಗೆ ಹಿತವನ್ನುಂಟುಮಾಡುವವನು.

ಶಂ. ಭಾ. :– ತಪಸ್ಸು, ವೇದ, ಬ್ರಾಹ್ಮಣರು ಮತ್ತು ಜ್ಞಾನಗಳಿಗೆ ಹಿತವನ್ನುಂಟುಮಾಡುವವನು. **ತಪೋ ವೇದಾಶ್ಚ ವಿಪ್ರಾಶ್ಚ ಜ್ಞಾನಂ ಚ ಬ್ರಹ್ಮಸಂಜ್ಞಿತಮ್ ॥**

667) ಪ. ಭ. :– ಜೀವಾತ್ಮ ಮತ್ತು ಪ್ರಕೃತಿಗಳಿಗೆ (ಸ್ಥಿತಿ-ಭೋಗಗಳೇ ಮುಂತಾದ ಎಲ್ಲಾ ಅವಸ್ಥೆಗಳಿಗೂ ಕಾರಣನಾಗಿರುವುದರಿಂದ) ಹಿತಕರನಾದವನು.

ನಿರುಕ್ತಿ :– **ಜೀವಾತ್ಮಾ ಪ್ರಕೃತಿಶ್ಚಾಪಿ ಬ್ರಹ್ಮೇತಿ ವ್ಯಪದಿಶ್ಯತೇ ।**
ತಾಭ್ಯಾಂ ಯಃ ಸ್ಥಿತಿಭೋಗಾದೇಃ ಸರ್ವಾವಸ್ಥಾಸು ಕಾರಣಮ್ ।
ಬ್ರಹ್ಮಣ್ಯಃ ಸ ಚ ವಿಜ್ಞೇಯಃ ಸಪ್ತಾರ್ಣೋ ಭೋಗದಾಯಕಃ॥

'ಓಂ ಬ್ರಹ್ಮಣ್ಯಾಯ ನಮಃ'–ಎಂಬುದರ ಜಪವು ಭೋಗಪ್ರದವು.

664) ಸ. ಸಂ. :– ಬ್ರಾಹ್ಮಣರಿಗೆ ಪ್ರಿಯನಾದವನು, ಮುಕ್ತರಿಗೆ ಆನಂದವನ್ನುಂಟುಮಾಡುವ 'ಬ್ರಹ್ಮಣ್ಯ' ಎಂಬ ಸುಧಾಸಮುದ್ರವು ಯಾವನಿಂದ ಉಂಟಾಗುತ್ತದೆಯೋ–ಅವನು.

* * *

662) ಬ್ರಹ್ಮಕೃತ್ = ವೇದ, ತಪಸ್ಸು ಮತ್ತು ಬ್ರಾಹ್ಮಣರನ್ನು ಉಂಟುಮಾಡುವವನು.

ಶಂ. ಭಾ. :– ವೇದ, ತಪಸ್ಸು ಮತ್ತು ಬ್ರಾಹ್ಮಣರನ್ನು ಉಂಟುಮಾಡುವವನು.

668) **ಪ. ಭ. :– ಬ್ರಹ್ಮಕೃದ್ಬ್ರಹ್ಮಾ** = ಅತಿವಿಸ್ತಾರವಾದ ಮತ್ತು ಅಹಂಕಾರವೇ ಮುಂತಾದ ಕಾರ್ಯಗಳಿಗೆ ಬ್ರಹ್ಮಎಂದು ಹೆಸರು ; ಅವುಗಳಿಗೆ ಕರ್ತೃವಾದ ಬ್ರಹ್ಮನಿಗೂ ನಿಯಾಮಕನಾದವನು. **ತಸ್ಮಾದೇತದ್ಬ್ರಹ್ಮ ನಾಮ ರೂಪಮನ್ನಂ ಚ ಜಾಯತೇ (ಮುಂಡಕ ೧-೧-೯)**

ನಿರುಕ್ತಿ :– **ಮಹದಾದಿತಮಃಕಾರ್ಯಂ ಬ್ರಹ್ಮೇತಿ ವ್ಯಪದಿಶ್ಯತೇ ।**
ತಸ್ಯ ಕರ್ತಾ ಸ್ವಯಂ ಬ್ರಹ್ಮಾ ನಿಯಮ್ಯೋ ಯಸ್ಯಸರ್ವದಾ।
ಸ ತು ಸ್ಯಾದ್ಬ್ರಹ್ಮಕೃದ್ಬ್ರಹ್ಮಾ ನವಾರ್ಣಃ ಸರ್ವಶಕ್ತಿದಃ ॥

‘ಓಂ ಬ್ರಹ್ಮಕೃದ್ಬ್ರಹ್ಮಣೇ ನಮಃ’–ಎಂದು ಅನುಸಂಧಾನಮಾಡಿದರೆ ಸರ್ವಶಕ್ತಿಗಳೂ ಸಿದ್ಧಿಸುತ್ತವೆ.

665) **ಸ. ಸಂ. :– ಬ್ರಹ್ಮಕೃತ್** = ಆಲೋಚನಾತ್ಮಕವಾದ ತಪಸ್ಸನ್ನು ಮಾಡುವವನು ; **ಬ್ರಹ್ಮ ವೇದಸ್ತಪಸ್ತತ್ತ್ವಂ । ಅಬ್ರಹ್ಮಕೃತ್** = ದುಷ್ಟ ಕ್ಷತ್ರಿಯರನ್ನು ಸಂಹರಿಸುವ ಪರಶುರಾಮನು ; ನಿರೀಶ್ವರವಾದಿಗಳನ್ನು ಖಂಡಿಸುವವನು. **ಅವತಾರೇ ಮೇ ಷೋಡಶಮೇ ಯಚ್ಛನ್ಬ್ರಹ್ಮ ದ್ರುಹೋ ನೃಪಾನ್ ।ತ್ರಿಃಸಪ್ತಕೃತ್ವಃ ಕುಪಿತೋ ನಿಃಕ್ಷತ್ರಾಮಕರೋನ್ಮಹೀಮ್ ।**

* * *

663) **ಬ್ರಹ್ಮಾ** = ಸೃಷ್ಟಿಕರ್ತನು.

ಶಂ. ಭಾ. :– ಬ್ರಹ್ಮರೂಪದಿಂದ ಎಲ್ಲವನ್ನೂ ಸೃಷ್ಟಿಸುವವನು.

666) **ಸ. ಸಂ. :–** ಭಕ್ತರನ್ನು ವೃದ್ಧಿಪಡಿಸುವವನು. **ಅಥ ಕಸ್ಮಾದುಚ್ಯತೇ ಪರಂ ಬ್ರಹ್ಮ ಬೃಂಹಯತಿ ಚ ।(ಶ್ರುತಿಃ)**

* * *

664) **ಬ್ರಹ್ಮ** = ಪರಬ್ರಹ್ಮನು ; ವೇದ, ತಪಸ್ಸು ಮತ್ತು ಬ್ರಾಹ್ಮಣ ಸ್ವರೂಪಿಯು.

ಶಂ. ಭಾ. :– ವೃದ್ಧಿಹೊಂದುವ ಮತ್ತು ವೃದ್ಧಿಹೊಂದಿಸುವ ಸತ್ಯ, ಜ್ಞಾನ, ಅನಂತ–ಮುಂತಾದ ಲಕ್ಷಣವಿಶಿಷ್ಟವಾದ ಪರಬ್ರಹ್ಮವು. **ಸತ್ಯಂ ಜ್ಞಾನಮನನ್ತಂ ಬ್ರಹ್ಮ । (ತೈ. ಉ.೩-೧) ಪ್ರತ್ಯಸ್ತಮಿತಭೇದಂ ಯತ್**

ಸತ್ತಾಮಾತ್ರಮಗೋಚರಮ್ । ವಚಸಾಮಾತ್ಮಸಂವೇದ್ಯಂ ತಜ್ಜ್ಞಾನಂ ಬ್ರಹ್ಮಸಂಜ್ಞಿತಮ್ ॥ (ವಿ. ಪು. ೬-೭-೫೩)

669) **ಪ. ಭ. :–** ವೇದಾಂತವೇದ್ಯವಾದ ಪರಬ್ರಹ್ಮ, ವ್ಯಕ್ತ, ಅವ್ಯಕ್ತ, ಸಮಷ್ಟಿ ಮತ್ತು ಪುರುಷರನ್ನು ತನ್ನ ನಿರತಿಶಯವಾದ ಕಲ್ಯಾಣಗುಣ ಗಳಿಂದಲೂ ಸ್ವರೂಪ-ಗುಣ-ವೈಭವಗಳಿಂದಲೂ ವೃದ್ಧಿಪಡಿಸುವವನು ಮತ್ತು ತಾನೂ ವೃದ್ಧಿಹೊಂದುವವನು **ಬೃಹತ್ತ್ವಾದ್ಬೃಂಹಣತ್ವಾಚ್ಚ ಬ್ರಹ್ಮೇತಿ ಪರಿಕೀರ್ತ್ಯತೇ ।**

ನಿರುಕ್ತಿ :– **ವ್ಯಕ್ತಾವ್ಯಕ್ತಸಮಷ್ಟ್ಯಾದಿಪುರುಷಾಂಶ್ಚೈವ ನಿತ್ಯಶಃ ।**
ಗುಣೈಶ್ಚ ಕಲ್ಯಾಣತಮೈರ್ಬ್ರಹ್ಮ ಬೃಂಹಯತೀತಿ ಚ ।
ರೂಪೈಃ ಸ್ವರೂಪೇಣ ಗುಣೈರ್ವಿಭವೈಶ್ಚ ಸ್ವಯಂ ಮುಹುಃ।
ಬ್ರಹ್ಮೇತಿ ಸ ತು ವಾ ಬ್ರಹ್ಮ ಷಡರ್ಣಃ ಸಂತತಿಪ್ರದಃ ॥

‘**ಓಂ ಬ್ರಹ್ಮಣೇ ನಮಃ** ’–ಈ ನಾಮದ ಅನುಸಂಧಾನದಿಂದ ಸಂತಾನ ಪ್ರಾಪ್ತಿಯಾಗುತ್ತದೆ.

667) **ಸ. ಸಂ. :–** ಪರಬ್ರಹ್ಮವು.

* * *

665) **ಬ್ರಹ್ಮವಿವರ್ಧನಃ** = ವೇದ, ತಪಸ್ಸು ಮತ್ತು ಬ್ರಾಹ್ಮಣರನ್ನು ವೃದ್ಧಿಹೊಂದಿಸುವವನು.

ಶಂ. ಭಾ. :– ವೇದ, ತಪಸ್ಸು ಮತ್ತು ಬ್ರಾಹ್ಮಣರನ್ನು ವೃದ್ಧಿಹೊಂದಿಸು ವವನು.

670) **ಪ. ಭ. :–** ತಪಸ್ಸು ಮತ್ತು ವೇದಗಳನ್ನು ವೃದ್ಧಿಹೊಂದಿಸು ವವನು.

ನಿರುಕ್ತಿ :– **ತಪೋವಿವರ್ಧನಾನ್ನಿತ್ಯಂ ಸ್ಮೃತೋ ಬ್ರಹ್ಮವಿವರ್ಧನಃ ।**

668) **ಸ. ಸಂ. :–** ವ್ಯಾಸರೂಪಿಯಾಗಿ ವೇದವನ್ನು ವೃದ್ಧಿಹೊಂದಿಸು ವವನು.

* * *

666) **ಬ್ರಹ್ಮವಿತ್** = ವೇದವನ್ನೂ ತಪಸ್ಸನ್ನೂ ಚೆನ್ನಾಗಿ ಯಥಾವತ್ತಾಗಿ ಅರಿತವನು.

ಶಂ. ಭಾ. :– ವೇದವನ್ನೂ ವೇದಾರ್ಥವನ್ನೂ ಯಥಾವತ್ತಾಗಿ ತಿಳಿದವನು.

671) ಪ. ಭ. :– ಅನಂತವಾದ ವೇದಗಳ ಅವಧಿಯನ್ನೂ ತಿಳಿದವನು. ಅನನ್ತಾ ವೈ ವೇದಾಃ (ಕಠ-೧)
ನಿರುಕ್ತಿ :– ಯೋ ವೇದಾನನನ್ತೋ ವೇತ್ತಿ ಸ ಬ್ರಹ್ಮವಿದುದೀರಿತಃ ॥

669) ಸ. ಸಂ. :– ಬ್ರಹ್ಮವಿದ್ಬ್ರಾಹ್ಮಣಃ = ವೇದಜ್ಞನು ; ರಮಾದೇವಿಯನ್ನು ಪಡೆದವನು. ಮಮ ಯೋನಿರ್ಮಹದ್ಬ್ರಹ್ಮ ತಸ್ಮಿನ್ಗರ್ಭಂ ದಧಾಮ್ಯಹಮ್ ।ಸ್ವಸ್ವರೂಪವನ್ನು ತಿಳಿದವನು. ತದಾತ್ಮಾನಮೇವಾ ವೇದ। ಬ್ರಹ್ಮ(ವೇದ) ದಿಂದ ಹೊಂದಲ್ಪಡುವವನು.

*   *   *

667) ಬ್ರಾಹ್ಮಣಃ = ಬ್ರಹ್ಮಜ್ಞಾನಿಯಾದ ಬ್ರಾಹ್ಮಣಸ್ವರೂಪಿಯು.

ಶಂ. ಭಾ. :– ಬ್ರಾಹ್ಮಣರೂಪದಿಂದ ಸಮಸ್ತಲೋಕಗಳಿಗೂ 'ವೇದದಲ್ಲಿ ಇದು ಇದೆ' ಎಂದು ಉಪದೇಶಮಾಡುವವನು.

672) ಪ. ಭ. :– ದತ್ತಾತ್ರೇಯನೇ ಮುಂತಾದ ರೂಪದಿಂದ ಬ್ರಾಹ್ಮಣನಾಗಿ ಅವತರಿಸಿದವನು ; ವೇದವನ್ನು ಪಠಿಸುವವನು ಅಥವಾ ಹೊಂದಿಸುವವನು.
ನಿರುಕ್ತಿ :– ದತ್ತಾತ್ರೇಯಾದಿರೂಪೇಣ ಹ್ಯುದೀರ್ಣೋ ಬ್ರಾಹ್ಮಣಃ ಸ್ಮೃತಃ।
ಪಠನಾದ್ವಾಥ ವೇದಸ್ಯ ಬ್ರಾಹ್ಮಣಃ ಪರಿಕೀರ್ತಿತಃ ॥

*   *   *

668) ಬ್ರಹ್ಮೀ = ವೇದ, ತಪಸ್ಸು ಮತ್ತು ಬ್ರಹ್ಮರನ್ನುಳ್ಳವನು.

ಶಂ. ಭಾ. :– ತನಗೆ ಶೇಷಭೂತವಾದ ತಪಸ್ಸು, ವೇದ, ಮನಸ್ಸು, ಪ್ರಾಣ–ಇತ್ಯಾದಿಗಳನ್ನುಳ್ಳವನು.

673) ಪ. ಭ. :– ಪ್ರಮಾಣ-ಪ್ರಮೇಯರೂಪವಾದ ಈ ಎಲ್ಲ ಬ್ರಹ್ಮವನ್ನೂ ಹೊಂದಿರುವವನು.
ನಿರುಕ್ತಿ :– ಮಾನಮೇಯಸ್ವರೂಪತ್ವಾತ್ಸ್ವಯಂ ಬ್ರಹ್ಮೇತಿ ಶಬ್ದ್ಯತೇ ।

670) ಸ. ಸಂ. :– ಬ್ರಹ್ಮ (ಜೀವ) ಗಳನ್ನುಳ್ಳವನು.

* * *

669) ಬ್ರಹ್ಮಜ್ಞಃ = ವೇದ, ತಪಸ್ಸು ಮತ್ತು (ಸ್ವರೂಪ) ಪರತತ್ತ್ವವನ್ನು ತಿಳಿದವನು.

ಶಂ. ಭಾ. :– ತನಗೆ ಆತ್ಮಭೂತವಾಗಿರುವ ವೇದಗಳನ್ನು ತಿಳಿದವನು.

674) ಪ. ಭ. :– ವೇದಗಳನ್ನು ಅರ್ಥಸಹಿತವಾಗಿ ಪೂರ್ಣವಾಗಿ ಸಾಕ್ಷಾತ್ಕರಿಸಿದವನು. ವೇದವಿದೇವ ಚಾಹಮ್ (ಗೀತಾ ೧೫-೧೫)
ನಿರುಕ್ತಿ :– ಯೋ ವೇದಾನರ್ಥತೋ ವೇತ್ತಿ ಸೋಽಪಿ ಬ್ರಹ್ಮಜ್ಞವಿಶ್ರುತಃ॥

671) ಸ. ಸಂ. :– ಚತುರ್ಮುಖನು ಯಾವನಿಗೆ ಸೇರಿದ್ದಾನೆಯೋ ಅವನು.

* * *

670) ಬ್ರಾಹ್ಮಣಪ್ರಿಯಃ = ಬ್ರಹ್ಮಜ್ಞಾನಿಗಳಾದ ಬ್ರಾಹ್ಮಣರಿಗೆ ಪ್ರಿಯನಾದವನು ; ಬ್ರಹ್ಮಜ್ಞಾನಿಗಳಾದ ಬ್ರಾಹ್ಮಣರನ್ನು ಪ್ರೀತಿಸುವವನು.

ಶಂ. ಭಾ. :– ಬ್ರಾಹ್ಮಣರಿಗೆ ಪ್ರಿಯನಾದವನು ; ಬ್ರಾಹ್ಮಣರು ಯಾವನಿಗೆ ಪ್ರಿಯರಾಗಿದ್ದಾರೆಯೋ–ಅವನು. ಘ್ನನ್ತಂ ಶಪನ್ತಂ ಪರುಷಂ ವದನ್ತಂ ಯೋ ಬ್ರಾಹ್ಮಣಂ ನ ಪ್ರಣಮೇದ್ಯಥಾಹಮ್ । ಸ ಪಾಪಕೃದ್ಬ್ರಹ್ಮದವಾಗ್ನಿದಗ್ಧೋ ವಧ್ಯಶ್ಚ ದಣ್ಡ್ಯಶ್ಚ ನ ಚಾಸ್ಮದೀಯಃ ॥ ಯಂ ದೇವಂ ದೇವಕೀದೇವೀ ವಸುದೇವಾದಜೀಜನತ್ ।ಭೌಮಸ್ಯ ಬ್ರಹ್ಮಣೋ ಗುಪ್ತ್ಯೈ ದೀಪ್ತಮಗ್ನಿಮಿವಾರಣಿಃ ॥

(ಮ. ಭಾ. ಶಾಂ. ೪೭-೨೮)

675) ಪ. ಭ. :– ವೇದಾಧಿಕಾರಿಗಳಾದ ಬ್ರಾಹ್ಮಣರು ಯಾವನಿಗೆ ಪ್ರಿಯರಾಗಿದ್ದಾರೆಯೋ–ಅವನು. ಭಕ್ತಾಸ್ತೇಽತೀವ ಮೇ ಪ್ರಿಯಾಃ (ಗೀತಾ ೧೨-೨೦) ಕಿಂ ಪುನರ್ಬ್ರಾಹ್ಮಣಾಃ ಪುಣ್ಯಾಃ (ಗೀ. ೯-೩೩) ವಿಪ್ರಪ್ರಸಾದಾದಸುರಾನ್ ಜಯಾಮಿ (ವಿ. ಧ. ೫೨-೨೩)
ನಿರುಕ್ತಿ :– ವೇದಾಧಿಕಾರಿಣೋ ವಿಪ್ರಾಃ ಪ್ರಿಯಾ ಯಸ್ಯೇತಿ ವೈ ಸದಾ ।
ಬ್ರಾಹ್ಮಣಪ್ರಿಯ ಇತ್ಯುಕ್ತೋ ನವಾರ್ಣೋ ಧರ್ಮದೋ
ಮನುಃ ॥

'ಓಂ ಬ್ರಾಹ್ಮಣಪ್ರಿಯಾಯ ನಮಃ'–ಎಂಬ ಈ ನಾಮಮಂತ್ರ ಜಪವು ಪುಣ್ಯಪ್ರಾಪಕವಾದುದು.

672) **ಸ. ಸಂ. :–** ಜ್ಞಾನಿಯು ಯಾವನಿಗೆ ಪ್ರಿಯನಾಗಿದ್ದಾನೆಯೋ ಅವನು. **ಪ್ರಿಯೋ ಹಿ ಜ್ಞಾನಿನೋಽತ್ಯರ್ಥಮಹಂ ಸ ಚ ಮಮ ಪ್ರಿಯಃ** (ಗೀತಾ) ಮುಕ್ತಾತ್ಮರಿಗೆ ಪ್ರಿಯನಾದವನು.

* * *

ಮಹಾಕ್ರಮೋ ಮಹಾಕರ್ಮಾ ಮಹಾತೇಜಾ ಮಹೋರಗಃ ।
ಮಹಾಕ್ರತುರ್ಮಹಾಯಜ್ವಾ ಮಹಾಯಜ್ಞೋ ಮಹಾಹವಿಃ ॥೭೫॥

671) **ಮಹಾಕ್ರಮಃ** = ಅತ್ಯಂತ ದೊಡ್ಡ ಪಾದವಿನ್ಯಾಸಗಳುಳ್ಳವನು ; ಹೆಜ್ಜೆ-ಹೆಜ್ಜೆಯಾಗಿ ಭಕ್ತರನ್ನು ಮೇಲಕ್ಕೆ ಒಯ್ಯುವವನು ; ದೊಡ್ಡ ಪರ್ವಗಳುಳ್ಳವನು.

ಶಂ. ಭಾ. :– ದೊಡ್ಡ ಪಾದವಿನ್ಯಾಸಗಳುಳ್ಳವನು. **ಶಂ ನೋ ವಿಷ್ಣುರುರುಕ್ರಮಃ** (ಶಿಕ್ಷಾವಲ್ಲಿ ೧-೧)

676) **ಪ. ಭ. :–** ತಾಯಿಯು ಮಗುವಿಗೆ ಸ್ತನ್ಯವನ್ನು ಕುಡಿಸುವುದು, ಹಸುವಿನ ಹಾಲನ್ನು ಕೊಡುವುದು, ಆಹಾರವನ್ನು ಕೊಡುವುದು– ಮುಂತಾದ ಕ್ರಮಗಳಿಂದ ಭೋಗಗಳನ್ನು ಕೊಡುವಂತೆ ಸುಕೃತಿಗಳಿಗೆ ಆಸ್ತಿಕ್ಯವೇ ಮುಂತಾದ ಗುಣಗಳನ್ನು ಕೊಡುವುದು, ಜ್ಞಾನ-ಭಕ್ತಿಗಳನ್ನು ಕೊಡುವುದು ಇತ್ಯಾದಿ ಕ್ರಮದಿಂದ ಪರಮೋನ್ನತಿಯನ್ನು ಉಂಟುಮಾಡುವವನು ; ಜ್ಞಾನ-ಭಕ್ತಿಗಳೇ ಮುಂತಾದ ಸೋಪಾನಕ್ರಮದಿಂದ ಜೀವಗಳನ್ನು ಭವಪಾತಕದಿಂದ ಪರಮೋನ್ನತಿಗೆ ಏರಿಸುವವನು.

ನಿರುಕ್ತಿ **:– ಪರಮೋನ್ನತಿಮಾತ್ಮಾನಂ ಸುನಿಮ್ನಾದ್ಭವಪಾತಕಾತ್ ।**
ಜೀವಾನ್ಸಮಾರೋಹಯತೋ ಜ್ಞಾನಭಕ್ತ್ಯಾದಿರೂಪಿಣೀ ।
ಪರ್ವಾನುಪೂರ್ವೀ ಯಸ್ಯಾಸ್ತಿ ಮಹಾಕ್ರಮ ಇತೀರಿತಃ ॥

673) **ಸ. ಸಂ. :–** ಅಗ್ನಿಮೀಳೇ ಇತ್ಯಾದಿ ದೊಡ್ಡ ವೇದಕ್ರಮವು ಯಾವನ ಬುದ್ಧಿಯಲ್ಲಿದೆಯೋ–ಅವನು. **ಆಮ್ನಾಯೋಽನನ್ಯಥಾಪಾಠಾದೀಶಬುದ್ಧಿಸ್ಥಿತಃ ಸದಾ ।**

* * *

672) **ಮಹಾಕರ್ಮಾ** = ಜಗತ್ತಿನ ಸೃಷ್ಟಿಯೇ ಮುಂತಾದ ದೊಡ್ಡ ವ್ಯಾಪಾರಗಳುಳ್ಳವನು ; ದೊಡ್ಡ ಆಶಯವುಳ್ಳ ಕರ್ಮಗಳುಳ್ಳವನು.

ಶಂ. ಭಾ. :– ಜಗತ್ತಿನ ಉತ್ಪತ್ತಿಯೇ ಮುಂತಾದ ದೊಡ್ಡ ಕರ್ಮಗಳುಳ್ಳವನು.

677) **ಪ. ಭ. :–** (ಅತ್ಯಂತಹೀನರಾದ ಜಂತುಗಳನ್ನೂ ಬ್ರಹ್ಮಾನುಭವಕ್ಕೆ ಯೋಗ್ಯರನ್ನಾಗಿ ಮಾಡುವ) ಪರಮಾಶ್ಚರ್ಯಕರವಾದ ಕರ್ಮಗಳುಳ್ಳವನು.

ನಿರುಕ್ತಿ :– **ಅತ್ಯನ್ತಹೀನಾಞ್ಜನ್ತೂಂಶ್ಚ ಯೋಗ್ಯಾನ್ಸ್ವಾನುಭವಸ್ಯ ಚ ।**
ಕರೋತಿ ಮಹದಾಶ್ಚರ್ಯಂ ಕರ್ಮ ಯಸ್ಯಾಸ್ತಿ ಸರ್ವದಾ ।
ಮಹಾಕರ್ಮಾ ಸ ವಿಜ್ಞೇಯೋ ಹ್ಯಷ್ಟಾರ್ಣೋ ಮನುರುತ್ತಮಃ

674) **ಸ. ಸಂ. :–** ಜಗತ್ತಿನ ಸೃಷ್ಟಿಯೇ ಮುಂತಾದ ರೂಪದ ದೊಡ್ಡ ಕರ್ಮಗಳುಳ್ಳವನು. **ಮಹಾಽಕರ್ಮಾ** = ದೊಡ್ಡ ಕರ್ಮಗಳನ್ನು ಸ್ವಲ್ಪವೂ ಕ್ಲೇಶವಿಲ್ಲದೇ ಮಾಡುವವನು. **ಅಕರ್ಮಾಽಕ್ಲಿಷ್ಟಕಾರಿತ್ವಾತ್ ।**

* * *

673) **ಮಹಾತೇಜಾಃ** = ಮಹಾತೇಜಸ್ವಿಯು.

ಶಂ. ಭಾ. :– ಯಾವನ ತೇಜಸ್ಸಿನಿಂದ ಭಾಸ್ಕರಾದಿಗಳೂ ತೇಜಸ್ವಿಗಳಾಗಿದ್ದಾರೆಯೋ–ಅಂತಹ ಅತಿದೊಡ್ಡ ತೇಜಸ್ಸುಳ್ಳವನು. **ಯೇನ ಸೂರ್ಯಸ್ತಪತಿ ತೇಜಸೇದ್ಧಃ (ತೈ. ಬ್ರಾ. ೩-೧೨-೯-೭) ಯದಾದಿತ್ಯಗತಂ ತೇಜೋ ಜಗದ್ಭಾಸಯತೇಽಖಿಲಮ್ । ಯಚ್ಚನ್ದ್ರಮಸಿ ಯಚ್ಚಾಗ್ನೌ ತತ್ತೇಜೋ ವಿದ್ಧಿ ಮಾಮಕಮ್ ।** (ಗೀತಾ ೧೫-೧೨) ಅಥವಾ (ದುಷ್ಟರಲ್ಲಿ) ಕ್ರೌರ್ಯ-ಶೌರ್ಯ–ಮುಂತಾದ ಮಹಾಧರ್ಮಗಳಿಂದ ಅಲಂಕೃತನಾಗಿರುವವನು.

678) **ಪ. ಭ. :–** ತಾಮಸರ ಅನಾದಿಯಾದ ಅವಿದ್ಯೆಯನ್ನೂ ಅಪಹರಿಸುವ ಮಹಾತೇಜಸ್ವಿಯು.

ನಿರುಕ್ತಿ :– **ಅನಾದ್ಯವಿದ್ಯಾಖ್ಯತಮೋಹಾರಿ ತೇಜೋ ಮಹದ್ಯತಃ ।**
ಮಹಾತೇಜಾ ಹ್ಯತಃ ಖ್ಯಾತಸ್ತೇಜೋದೋ ವಸುವರ್ಣಕಃ ॥

‘ಓಂ ಮಹಾತೇಜಸೇ ನಮಃ’–ಎಂಬ ಈ ನಾಮಮಂತ್ರಜಪವು ತೇಜಸ್ಸನ್ನು ಕೊಡತಕ್ಕುದು.

675) **ಸ. ಸಂ. :–** ಸೂರ್ಯನೇ ಮುಂತಾದವರ ತೇಜಸ್ಸಿಗೂ ನಿಯಾಮಕವಾದ ದೊಡ್ಡ ತೇಜಸ್ಸುಳ್ಳವನು.

* * *

674) **ಮಹೋರಗಃ** = ಮಹಾಶೇಷನಾಗ ಅಥವಾ ವಾಸುಕಿಸ್ವರೂಪನು ; ಮಹಾಕುಂಡಲಿನೀಪ್ರಾಣಶಕ್ತಿಸ್ವರೂಪನು.

ಶಂ. ಭಾ. :– ಮಹಾವಾಸುಕಿಸರ್ಪವೆಂಬ ವಿಭೂತಿಯುಳ್ಳವನು. **ಸರ್ಪಾಣಾಮಸ್ಮಿ ವಾಸುಕಿಃ** (ಗೀತಾ ೧೦-೨೮)

679) **ಪ. ಭ. :–** ಹೃದಯದ (ಮನಸ್ಸಿನ) ಮೂಲಕ ಪ್ರವೇಶಮಾಡುವವನು. **ಯೋ ನ ವಿತ್ತೈರ್ನ ವಿಭವೈರ್ನ ವಾಸೋಭಿರ್ನ ಭೂಷಣೈಃ। ತೋಷ್ಯತೇ ಹೃದಯೇನೈವ ಕಸ್ತಮೀಶಂ ನ ಪೂಜಯೇತ್ ॥** (ವಿ. ಧ. ೯೦-೬೯)

ನಿರುಕ್ತಿ :– **ಮಹೋರಗ ಇತಿ ಖ್ಯಾತಶ್ಚಿತ್ತದ್ವಾರಾ ಪ್ರವೇಶನಾತ್ ।**

676) **ಸ. ಸಂ. :–** ಆದಿಶೇಷ ಅಥವಾ ಕಾಲಿಯನಾಗನೆಂಬ ಮಹಾಸರ್ಪವು ಯಾವನಿಗೆ ಸೇವಕನಾಗಿದೆಯೋ–ಅವನು.

* * *

675) **ಮಹಾಕ್ರತುಃ** = ಮಹಾಯಜ್ಞ ಅಥವಾ ಜ್ಞಾನಸ್ವರೂಪಿಯು.

ಶಂ. ಭಾ. :– ಅಶ್ವಮೇಧವೇ ಮುಂತಾದ ಮಹಾಯಜ್ಞರೂಪಿಯು. **ಯಥಾಶ್ವಮೇಧಃ ಕ್ರತುರಾಟ್** (ಮನು ೧೧-೨೬೦)

680) **ಪ. ಭ. :–** ಎಲ್ಲರಿಗೂ ಮಾಡಲು ಸಾಧ್ಯವಾಗಿರುವ (ಆಗಮಶಾಸ್ತ್ರೋಕ್ತವಾದ) ಪೂಜೆಗಳುಳ್ಳವನು.

ನಿರುಕ್ತಿ :– **ಸರ್ವೈಶ್ಚ ಸುಕರಾ ಪೂಜಾ ಯಸ್ಯ ಸ್ಯಾತ್ಸ ಮಹಾಕ್ರತುಃ ।**

677) **ಸ. ಸಂ. :–** ಮಹಾಜ್ಞಾನರೂಪಿಯು. **ಸ ಕ್ರತುರ್ಜ್ಞಾನರೂಪತ್ವಾತ್.**

* * *

676) **ಮಹಾಯಜ್ವಾ** = ಸೃಷ್ಟಿ-ಸ್ಥಿತಿ - ಲಯರೂಪಗಳಾದ ಮಹಾ

ಯಜ್ಞಗ್ಗಳನ್ನು ಮಾಡುವವನು. ಶ್ರೀರಾಮಾದ್ಯವತಾರಗಳಲ್ಲಿ ದೊಡ್ಡಯಜ್ಞ ಗಳನ್ನು ಮಾಡಿದವನು ; ಮಹಾಯಜ್ಞಗಳನ್ನು ಮಾಡುವವರಲ್ಲಿ ಅಂತ ರ್ಯಾಮಿಯಾಗಿರುವವನು.

ಶಂ. ಭಾ. :– ಲೋಕಸಂಗ್ರಹಕ್ಕಾಗಿ ದೊಡ್ಡ ಯಜ್ಞಗಳನ್ನು ಅನುಷ್ಠಾನ ಮಾಡುವವನು.

681) ಪ. ಭ. :– ಇತರ ದೇವತೆಗಳನ್ನು ಕುರಿತು ಯಜ್ಞಮಾಡುವವನಿ ಗಿಂತಲೂ ತನ್ನನ್ನು ಕುರಿತು ಯಜ್ಞಮಾಡುವವನು ಉತ್ಕೃಷ್ಟನಾಗುವಂತೆ ಮಾಡುವವನು.

ನಿರುಕ್ತಿ :– ದೇವತಾನ್ತರಯಾಜಿಭ್ಯಃ ಸ್ವಯಾಜ್ಯುತ್ಕೃಷ್ಟಕಾರಕಃ ।
ಮಹಾಯಜ್ವಾ ಸಮುದ್ದಿಷ್ಟಃ ಸತ್ಕರ್ಮಫಲದೋ ಮನುಃ ॥

'ಓಂ ಮಹಾಯಜ್ವನೇ ನಮಃ'–ಎಂಬ ಈ ನಾಮಮಂತ್ರಜಪವು ಸತ್ಕರ್ಮದ ಫಲವನ್ನು ಕೊಡುತ್ತದೆ.

678) ಸ. ಸಂ. :– ಬ್ರಹ್ಮನೇ ಮುಂತಾದ ಮಹಾತ್ಮರು ಯಾವನನ್ನು ಕುರಿತು ಯಜ್ಞಮಾಡುತ್ತಾರೆಯೋ ಅವನು.

* * *

677) ಮಹಾಯಜ್ಞಃ= ಪಂಚಮಹಾಯಜ್ಞಸ್ವರೂಪನು ; ಪಂಚಮಹಾ ಯಜ್ಞಗ್ಗಳಿಂದ ಆರಾಧಿಸಲ್ಪಡುವವನು ; ಸೃಷ್ಟಿ-ಸ್ಥಿತಿ-ಲಯರೂಪವಾದ ದೊಡ್ಡ ಯಜ್ಞವನ್ನು ಮಾಡುವವನು.

ಶಂ. ಭಾ. :– ದೊಡ್ಡದಾದ ಜಪಯಜ್ಞಸ್ವರೂಪನು. ಯಜ್ಞಾನಾಂ ಜಪಯಜ್ಞೋಽಸ್ಮಿ (ಗೀತಾ ೧೦-೨೫)

682) ಪ. ಭ. :– ಇತರ ದೇವಯಾಗಗಳಿಗಿಂತಲೂ ಅಭಿಗಮನ, ಭೋಗ, ಮಧುಪರ್ಕ–ಇವೇ ಮುಂತಾದ ತನ್ನ ಯಾಗಗಳನ್ನು ಉತ್ಕೃಷ್ಟ ವನ್ನಾಗಿ ಮಾಡುವವನು.

ನಿರುಕ್ತಿ :– ಅನ್ಯೇಭ್ಯೋ ದೇವಯಾಗೇಭ್ಯಃ ಸ್ವಯಾಗೋತ್ಕೃಷ್ಟಕಾರಕಃ
ಮಹಾಯಜ್ಞಃ ಸಮಾಖ್ಯಾತೋ ಹ್ಯಷ್ಟಾರ್ಣೋ
ಹರಿಯಾಗದಃ ॥

'ಓಂ **ಮಹಾಯಜ್ಞಾಯ ನಮಃ**'–ಎಂಬ ನಾಮಮಂತ್ರಜಪವು ಅಶ್ವಮೇಧಯಾಗಮಾಡಿದ ಫಲವನ್ನು ಕೊಡುತ್ತದೆ.

679) **ಸ. ಸಂ. :–** ಅಶ್ವಮೇಧವೇ ಮುಂತಾದ ಮಹಾಯಜ್ಞಗಳು ಯಾವನ ವಿಷಯವಾಗಿವೆಯೋ ಅವನು ; ಶುಭವನ್ನುಂಟುಮಾಡುವ ವಿಧಿಯನ್ನು ಅರಿತ ಮಹಾತ್ಮನು. **ಅಮಹಾಯಜ್ಞಃ**= ರೋಗವನ್ನು ನಾಶಮಾಡುವವನು ಮತ್ತು ಶುಭವನ್ನುಂಟುಮಾಡುವ ವಿಧಿಯನ್ನು ಅರಿತವನು.

* * *

678) **ಮಹಾಹವಿಃ** = ಮಹಾಗ್ನಿಯಾದ ತನ್ನಲ್ಲಿ ಹೋಮಮಾಡಿಕೊಳ್ಳುವ ಮಹಾಹವಿಸ್ಸೂ ತಾನೇ ಆಗಿರುವವನು ; ಮಹಾಹವಿಸ್ಸಾಗಿ ಜಗತ್ತೆಲ್ಲವೂ ಯಾವನಲ್ಲಿ ಹೋಮಮಾಡಲ್ಪಡುತ್ತದೆಯೋ–ಅವನು. **ಮಹಾಹವಿರ್ಹೋತಾ । ಬೃಹಸ್ಪತಿರುಪವಕ್ತಾ ॥ (ತೈ. ಆ.)**

ಶಂ. ಭಾ. :– ದೊಡ್ಡ ಹವಿಸ್ಸು ಆಗಿರುವವನು. (ಬ್ರಹ್ಮಭಾವದಿಂದ ಪೂರ್ಣಜಗತ್ತೂ ಬ್ರಹ್ಮನಲ್ಲೇ ಹೋಮಮಾಡಲ್ಪಡುತ್ತದೆ.) ತನ್ನಲ್ಲಿ ಹೋಮಮಾಡಲ್ಪಡುವ ಸಂಪೂರ್ಣಜಗತ್ತೆಂಬ ಮಹಾಹವಿಸ್ಸುಳ್ಳವನು.

683) **ಪ. ಭ. :–** ಹಿಂಸಾರಹಿತವಾದ, ಸಾತ್ತ್ವಿಕವಾದ ಉಪನಿಷತ್ತಿಗೆ ಸಂಬಂಧಪಟ್ಟ ಹವಿಸ್ಸುಗಳುಳ್ಳವನು ; ಆತ್ಮರೂಪವಾದ ಹವಿಸ್ಸು ಯಾವನಲ್ಲಿ ಹೋಮಮಾಡಲ್ಪಡುವುದೋ–ಅವನು. **ಬ್ರಹ್ಮಾರ್ಪಣಂ ಬ್ರಹ್ಮಹವಿಃ ॥ (ಗೀತಾ. ೪-೨೪) ಇದಮಹಂ ಮಾಮಮೃತಯೋನೌ ಸೂರ್ಯೇ ಜ್ಯೋತಿಷಿ ಜುಹೋಮಿ ಸ್ವಾಹಾ (ಮ. ನಾ.)** ಪ್ರತ್ಯಗಾತ್ಮನೆಂಬ ದೊಡ್ಡ ಹವಿಸ್ಸುಳ್ಳವನು.

ನಿರುಕ್ತಿ :– ಆತ್ಮರೂಪಂ ಹವಿರ್ಯಸ್ಯ ಸ ಮಹಾಹವಿರುಚ್ಯತೇ ॥

680) **ಸ. ಸಂ. :–** ಉತ್ಸವದಿವಸಗಳಲ್ಲಿ ಗರುಡನನ್ನು ವಾಹನವನ್ನಾಗಿ ಹೊಂದಿರುವವನು ; ಆಹ್ವಾನಮಾಡಲ್ಪಡುವವರಲ್ಲಿ ಮಹತ್ತಮನಾದವನು.

* * *

ಸ್ತವ್ಯಃ ಸ್ತವಪ್ರಿಯಃ ಸ್ತೋತ್ರಂ ಸ್ತುತಿಃ ಸ್ತೋತಾ ರಣಪ್ರಿಯಃ ।
ಪೂರ್ಣಃ ಪೂರಯಿತಾ ಪುಣ್ಯಃ ಪುಣ್ಯಕೀರ್ತಿರನಾಮಯಃ ॥೭೬॥

679) **ಸ್ತವ್ಯಃ** = ಎಲ್ಲರಿಂದಲೂ ಸ್ತುತಿಸಲ್ಪಡಲು ಯೋಗ್ಯನಾದವನು.

ಶಂ. ಭಾ.– ತಾನು ಯಾರನ್ನೂ ಸ್ತೋತ್ರಮಾಡದೇ ಎಲ್ಲರಿಂದಲೂ ಸ್ತೋತ್ರಮಾಡಲ್ಪಡುವವನು.

684) **ಪ. ಭ. :–** ಸ್ತೋತ್ರಕ್ಕೆ ಯೋಗ್ಯನಾದವನು ; ಪಾರಮಾರ್ಥಿಕ ವಾದ ಮಹಾಮಂಗಳ - ನಿತ್ಯ - ನಿರವಧಿಕ - ನಿರವದ್ಯಗುಣಸಂಪನ್ನ ನಾದುದರಿಂದಲೂ ಮತ್ತು ವಿಶ್ವಪತಿಯಾಗಿರುವುದರಿಂದಲೂ ತಾನೊಬ್ಬನೇ ಸ್ತೋತ್ರಕ್ಕೆ ಯೋಗ್ಯನಾದವನು. **ಇತೀದಂ ಕೀರ್ತನೀಯಸ್ಯ ಕೇಶವಸ್ಯ ಮಹಾತ್ಮನಃ ||**

ನಿರುಕ್ತಿ **:– ಸ್ತುತಃ ಸ್ತುತ್ಯರ್ಹಣಾತ್ ಸ್ತವ್ಯಃ ಷಡರ್ಣೋ ಬನ್ಧಮೋಚಕಃ ||**

'ಓಂ ಸ್ತವ್ಯಾಯ ನಮಃ'–ಎಂಬ ಈ ನಾಮಮಂತ್ರಜಪದಿಂದ ಭವ ಬಂಧನದ ವಿಮೋಚನೆಯಾಗುತ್ತದೆ.

681) **ಸ. ಸಂ. :–** ಸ್ತೋತ್ರಮಾಡಲು ಯೋಗ್ಯನಾದವನು.

* * *

680) **ಸ್ತವಪ್ರಿಯಃ** = ಸ್ತೋತ್ರಪ್ರಿಯನಾದವನು.

ಶಂ. ಭಾ. :– (ತಾನೊಬ್ಬನೇ ಸ್ತೋತ್ರಕ್ಕೆ ಯೋಗ್ಯನಾಗಿರುವುದರಿಂದ) ಸ್ತೋತ್ರಪ್ರಿಯನಾದವನು.

685) **ಪ. ಭ. :–** ಯಾವನೇ ಮನುಷ್ಯನು ಯಾವುದೇ ಭಾಷೆಯಲ್ಲಿ ಹೊಗಳುವುದಕ್ಕಾಗಲೀ, ತಿರಸ್ಕಾರಮಾಡುವುದಕ್ಕಾಗಲೀ–ತನ್ನ ಗುಣ ಸಂಕೀರ್ತನೆಯನ್ನು ಮಾಡಿದರೂ ಅದು ತನ್ನ ವಿಷಯವೆಂದೇ ಭಾವಿಸಿ ಅದನ್ನು ಪ್ರೀತಿಸುವವನು.

ನಿರುಕ್ತಿ **:– ಯಯಾ ಕಯಾಚಿದ್ಭಾರತ್ಯಾ ಯೇನ ಕೇನಾಪಿ ಜನ್ತುನಾಃ |**
ಯಥಾಕಥಂಚಿತ್ಕಥಿತೋ ಯಸ್ಯ ಪ್ರಿಯತಮಃ ಸ್ತವಃ ||

682) **ಸ. ಸಂ. :–** ಸ್ತುತಿಪ್ರಿಯನಾದವನು.

* * *

681) **ಸ್ತೋತ್ರಂ** = ಸ್ತುತಿರೂಪನಾದವನು.

ಶಂ. ಭಾ. :– ಗುಣಸಂಕೀರ್ತನವೇ ಮುಂತಾದ ಸ್ತೋತ್ರರೂಪ ನಾಗಿರುವವನು.

686) ಪ. ಭ. :– ತನ್ನ ಸ್ತುತಿಯನ್ನು ಮಾಡಿಸಿಕೊಳ್ಳುವುದಕ್ಕೆ ಪ್ರಸನ್ನ ನಾದ ತಾನೇ ಕಾರಣನಾಗಿರುವುದರಿಂದ ಸ್ತೋತ್ರವೂ ತಾನೇ ಆಗಿರುವವನು.
ನಿರುಕ್ತಿ :– ಸ್ವೇನೈವ ನಿಷ್ಪಾದ್ಯತಯಾ ಸ್ವಸ್ತುತೇಃ ಸ್ತೋತ್ರಮುಚ್ಯತೇ ॥

683) ಸ. ಸಂ. :– ಸ್ತೋತ್ರಮಾಡಲ್ಪಡುವವನು.

* * *

682) ಸ್ತುತಿಃ = ಸ್ತೋತ್ರಕ್ರಿಯೆಯೂ ಆಗಿರುವವನು. ಸ್ತುತಃ =ಬ್ರಹ್ಮಾದಿ ಗಳಿಂದಲೂ ಸ್ತೋತ್ರಮಾಡಲ್ಪಡುವವನು.

ಶಂ. ಭಾ. :– ಸ್ತೋತ್ರಕ್ರಿಯಾರೂಪಿಯಾದವನು.

687) ಪ. ಭ. :– ಸ್ತುತಃ = ಅನಂತ-ಗರುಡಾದಿ ದಿವ್ಯಸೂರಿಗಳಿಂದ ಹೇಗೋ–ಹಾಗೆ ನಮ್ಮಿಂದಲೂ ಕೂಡ ಯಾವ ವಿಶೇಷವೂ ಇಲ್ಲದೇ ಸ್ತುತಿಸ ಲ್ಪಡುವವನು.
ನಿರುಕ್ತಿ :– ಶೇಷಶೇಷಾಸನಾದ್ಯೈರ್ಯಃ ಸೂರಿಭಿಶ್ಚಾಸ್ಮದಾದಿಭಿಃ ।
ಸ್ತುತತ್ವಾದವಿಶೇಷೇಣ ಸ್ತುತ ಇತ್ಯಭಿಧೀಯತೇ ॥

684) ಸ. ಸಂ. :– ಸ್ತುತಿಃ = ಜನರು ಮಾಡುವ ಸ್ತುತಿಗೆ ನಿಯಾಮಕ ನಾದವನು.

* * *

683) ಸ್ತೋತಾ = ಸ್ತೋತ್ರಮಾಡುವವನೂ ತಾನೇ ಆಗಿರುವವನು.

ಶಂ. ಭಾ. :– ಸರ್ವರೂಪನಾಗಿರುವುದರಿಂದ ತನ್ನ ಸ್ತೋತ್ರವನ್ನು ತಾನೇ ಮಾಡಿಕೊಳ್ಳುವವನು.

688) ಪ. ಭ. :– ತನ್ನನ್ನು ಸ್ತೋತ್ರಮಾಡುವ ಭಕ್ತರನ್ನು ತಾನೇ ಸ್ತೋತ್ರಮಾಡುವ ಸ್ವಭಾವವುಳ್ಳವನು.

ನಿರುಕ್ತಿ :– ಸ್ವಸ್ತೋತಾರಂ ಪರಂ ಸ್ತೋತುಂ ಶೀಲಂ ಯಸ್ಯಾಸ್ತಿ ಸರ್ವದಾ ।
ಸ್ತೋತಾ ಸ ಸ್ಯಾತ್ಪ್ರಣ್ವರ್ಣಃ ಸರ್ವಸ್ತುತ್ಯತ್ವದೋ ಮನುಃ ॥

'ಓಂ ಸ್ತೋತ್ರೇ ನಮಃ'–ಎಂಬ ಈ ನಾಮಮಂತ್ರಜಪವು ಎಲ್ಲರಿಂದಲೂ ಸ್ತೋತ್ರಮಾಡಿಸಿಕೊಳ್ಳುವಿಕೆಯನ್ನು ಉಂಟುಮಾಡುತ್ತದೆ.

685) **ಸ. ಸಂ. :– ನ ಋತೇ ತ್ವತ್ಕ್ರಿಯತೇ**–ಎಂದು ಶಾಸ್ತ್ರವು ಹೇಳುವಂತೆ ಸ್ತೋತ್ರವನ್ನು ಮಾಡಿಸುವವನು. (ಅವನಿಲ್ಲದೇ ಸ್ತೋತ್ರವನ್ನು ಮಾಡುವುದಕ್ಕೂ ಆಗುವುದಿಲ್ಲ.)

* * *

684) **ರಣಪ್ರಿಯಃ** = ಧರ್ಮರಕ್ಷಣಾರ್ಥವಾದ ಯುದ್ಧದಲ್ಲಿ ಪ್ರೀತಿಯುಳ್ಳವನು.

ಶಂ. ಭಾ. :– (ಲೋಕದ ರಕ್ಷಣೆಗೋಸ್ಕರ ಯಾವಾಗಲೂ ಪಂಚಮಹಾಯುಧಗಳನ್ನು ಧರಿಸಿರುವುದರಿಂದ) ಯುದ್ಧದಲ್ಲಿ ಪ್ರೀತಿಯುಳ್ಳವನು.

689) **ಪ. ಭ. :–** ಸ್ನೇಹಿತರ ಪ್ರೀತಿಗೋಸ್ಕರವಾಗಿ ಯುದ್ಧಕರ್ಮವು ಯಾವನಿಗೆ ಪ್ರಿಯವಾಗಿದೆಯೋ–ಅವನು.

ನಿರುಕ್ತಿ :– ಸುಹೃತ್ಪ್ರಿಯಂ ಯುದ್ಧಕರ್ಮ ಯಸ್ಯಾಸ್ತಿ ಸ ರಣಪ್ರಿಯಃ ॥

686) **ಸ. ಸಂ. :–** ಯುದ್ಧವು ಅಥವಾ ವೇದಾತ್ಮಕವಾದ ಶಬ್ದವು ಯಾವನಿಗೆ ಪ್ರಿಯವಾಗಿದೆಯೋ–ಅವನು.

* * *

685) **ಪೂರ್ಣಃ** = ಜ್ಞಾನಾನಂದಾದಿ ಗುಣಗಳಿಂದ ಪೂರ್ಣನಾದವನು.

ಶಂ. ಭಾ. :– ಎಲ್ಲ ಕಾಮನೆಗಳಿಂದಲೂ ಮತ್ತು ಎಲ್ಲ ಶಕ್ತಿಗಳಿಂದಲೂ ಸಂಪನ್ನನಾಗಿರುವವನು.

690) **ಪ. ಭ. :–** ಅವಾಪ್ತಸಮಸ್ತಕಾಮನಾದವನು.

ನಿರುಕ್ತಿ :– ಅವಾಪ್ತಸರ್ವಕಾಮತ್ವಂ ಯಸ್ಯಾಸೌ ಪೂರ್ಣ ಉಚ್ಯತೇ ।

687) **ಸ. ಸಂ. :–** ಗುಣಗಳಿಂದ ಪೂರ್ಣನಾದವನು.

* * *

686) **ಪೂರಯಿತಾ**=ತುಂಬುವವನು.

ಶಂ. ಭಾ. :– ಎಲ್ಲವನ್ನೂ ಸಂಪತ್ತಿನಿಂದ ತುಂಬುವವನು.

691) **ಪ. ಭ. :–** ಸ್ತೋತ್ರಮಾಡುವವರ ಇಷ್ಟಾರ್ಥಗಳನ್ನು ಯಾವಾಗಲೂ ತುಂಬುವ (ಪೂರ್ಣಗೊಳಿಸುವ) ಶೀಲವುಳ್ಳವನು.

ನಿರುಕ್ತಿ :– ಸದಾ ಪೂರಯಿತುಂ ಶೀಲಂ ಯಸ್ಯ ಸ್ತೋತೃಮನೋರಥಾನ್।
ಸ ಸ್ಯಾತ್ಪೂರಯಿತಾ................. ॥

688) **ಸ. ಸಂ. :–** ಅವರವರ ಯೋಗ್ಯತೆಗೆ ಅನುಗುಣವಾಗಿ ತುಂಬುವವನು.

* * *

687) **ಪುಣ್ಯಃ** =ಪಾವನಗೊಳಿಸುವವನು ; ಸುಖಕ್ಕೆ ಕಾರಣನಾದವನು.

ಶಂ. ಭಾ. :– ಸ್ಮರಣಮಾತ್ರದಿಂದಲೂ ಪಾಪಕಲ್ಮಷಗಳನ್ನು ನಾಶಮಾಡುವವನು.

692) **ಪ. ಭ. :–** ಪಾತಕಿಗಳನ್ನು ಪಾವನಮಾಡುವವನು.

ನಿರುಕ್ತಿ :– .... ಪುಣ್ಯಃ ಯೋಽಸೌ ಪಾತಕಿಪಾವನಃ ॥

689) **ಸ. ಸಂ. :–** ಪಾವನಗೊಳಿಸುವವನು.

* * *

688) **ಪುಣ್ಯಕೀರ್ತಿಃ** = ಪಾವನವಾದ ಕೀರ್ತಿಯುಳ್ಳವನು.

ಶಂ. ಭಾ. :– ಯಾವನ ಕೀರ್ತಿಯು ಪುಣ್ಯಮಯವಾಗಿರುವುದೋ ಮತ್ತು ಮನುಷ್ಯರಿಗೆ ಪುಣ್ಯಪ್ರದಾನಮಾಡುವುದೋ–ಅಂತಹ ಪುಣ್ಯತಮವಾದ ಕೀರ್ತಿಯುಳ್ಳವನು.

693) **ಪ. ಭ. :–** ಯಾವನ ಕೀರ್ತನೆಯು ಪುಣ್ಯವನ್ನುಂಟುಮಾಡುವುದೋ–ಅವನು.

ನಿರುಕ್ತಿ :– ಪುಣ್ಯಃ ಶ್ಲೋಕೋಽಸ್ತಿ ಯಸ್ಯೇತಿ ಪುಣ್ಯಕೀರ್ತಿಃ ಸ ತು ಸ್ಮೃತಃ॥

690) **ಸ. ಸಂ. :–** ಪುಣ್ಯಕರವಾದ ಕೀರ್ತಿಯುಳ್ಳವನು.

* * *

689) **ಅನಾಮಯಃ**= ವ್ಯಾಧಿಗಳಿಂದ ರಹಿತನಾದವನು.

ಶಂ. ಭಾ. :– ಕರ್ಮಜನ್ಯವಾದ ಒಳಗಿನ ಮತ್ತು ಹೊರಗಿನ ವ್ಯಾಧಿಗಳಿಂದ ಎಂದಿಗೂ ಪೀಡಿಸಲ್ಪಡದವನು.

694) ಪ. ಭ. :– ಸಂಸಾರವೆಂಬ ಮಹಾವ್ಯಾಧಿಗೆ ವಿರೋಧಿಯಾಗಿರುವವನು.
ನಿರುಕ್ತಿ :– **ಸಂಸಾರಾಖ್ಯಮಹಾವ್ಯಾಧೇರ್ವಿರೋಧಿತ್ವಾದನಾಮಯಃ ॥**

691) ಸ. ಸಂ. :– ರೋಗಶೂನ್ಯನಾದವನು.

* * *

ಮನೋಜವಸ್ತೀರ್ಥಕರೋ ವಸುರೇತಾ ವಸುಪ್ರದಃ ।
ವಸುಪ್ರದೋ ವಾಸುದೇವೋ ವಸುರ್ವಸುಮನಾ ಹವಿಃ ॥೭೭॥

690) **ಮನೋಜವಃ** = ಮನಸ್ಸಿನ ವೇಗಕ್ಕೆ ಸಮಾನವಾದ ವೇಗವುಳ್ಳವನು ; ಮನಸ್ಸಿಗೆ ವೇಗವನ್ನು ಉಂಟುಮಾಡುವವನು.

ಶಂ. ಭಾ. :– ಮನಸ್ಸಿನ ವೇಗಕ್ಕೆ ಸಮಾನವಾದ ವೇಗವುಳ್ಳವನು ; ಸರ್ವಗತನು.

695) ಪ. ಭ. :– ಭಕ್ತರಿಗೆ ಶೀಘ್ರತಮವಾಗಿ ಸಂಪತ್ತನ್ನು ಕೊಡುವವನು. **ಕ್ಷಿಪ್ರಂ ಭವತಿ ಧರ್ಮಾತ್ಮಾ ।** (ಗೀತಾ. ೯-೩೧)
ನಿರುಕ್ತಿ :– **ಭಕ್ತಾನಾಂ ಸಂಪದಃ ಶೀಘ್ರಂ ಕರೋತೀತಿ ಮನೋಜವಃ ॥**

692) ಸ. ಸಂ. :– ಮನಸ್ಸಿನ ವೇಗದಂತೆ ವೇಗವುಳ್ಳವನು ; ಮನಸ್ಸಿಗೆ ವೇಗವು ಯಾವನಿಂದ ಉಂಟಾಗುವುದೋ–ಅವನು.

* * *

691) **ತೀರ್ಥಕರಃ** = ಶಾಸ್ತ್ರಕರ್ತೃವು ; ತೀರ್ಥಸದೃಶವಾದ ಪವಿತ್ರವಾದ ಹಸ್ತವುಳ್ಳವನು.

ಶಂ. ಭಾ. :– ತೀರ್ಥವೆಂದರೆ ವಿದ್ಯೆ. ಹದಿನಾಲ್ಕು ವಿದ್ಯೆಗಳ ಮತ್ತು ವೇದ ಬಾಹ್ಯವಾದ ವಿದ್ಯೆಗಳ ಸಿದ್ಧಾಂತಗಳನ್ನು ಮಾಡಿದವನು ಮತ್ತು ಉಪದೇಶಮಾಡಿದವನು. (ಹಯಗ್ರೀವರೂಪದಿಂದ ಮಧು-ಕೈಟಭರನ್ನು ಸಂಹರಿಸಿ ಬ್ರಹ್ಮದೇವರಿಗೆ ಸೃಷ್ಟಿಯ ಪ್ರಾರಂಭದಲ್ಲಿ ಎಲ್ಲ ವೇದಗಳನ್ನೂ ಮತ್ತು

ಇತರ ವಿದ್ಯೆಗಳನ್ನೂ ಉಪದೇಶಮಾಡಿ, ದೈತ್ಯರ ವಂಚನೆಗೋಸ್ಕರ ವೇದ ಬಾಹ್ಯವಾದ ವಿದ್ಯೆಗಳನ್ನೂ ಉಪದೇಶಮಾಡಿದನು–ಎಂದು ಪೌರಾಣಿಕರು ಹೇಳುತ್ತಾರೆ.)

696) **ಪ. ಭ. :–** ಗಂಗೆಯೇ ಮುಂತಾದ ತೀರ್ಥಗಳ ಉತ್ಪತ್ತಿಗೆ ಕಾರಣನಾದವನು ; ಶ್ರುತಿ-ಸ್ಮೃತಿಗಳೇ ಮುಂತಾದ ಒಳ್ಳೆಯ ಶಾಸ್ತ್ರಗಳನ್ನು ಪ್ರವರ್ತನೆಮಾಡಿದವನು ; ಆತ್ಮಪ್ರವೇಶಕ್ಕೆ ಸೋಪಾನವನ್ನು ರಚಿಸಿದವನು ; **ಯೋಗೋ ಜ್ಞಾನಂ ತಥಾ ಸಾಂಖ್ಯಂ** (ಮ. ಭಾ. ಅನು. ೧೪೯-೧೩೯)

ನಿರುಕ್ತಿ :– **ಗಜ್ಗಾದಿತೀರ್ಥಹೇತುತ್ವಾಚ್ಛ್ರುತಿಸ್ಮೃತ್ಯೋಃ ಪ್ರವರ್ತನಾತ್ ।**
ಆತ್ಮಪ್ರವೇಶಸೋಪಾನಂ ಕೃತ್ವಾ ತೀರ್ಥಕರಃ ಸ್ಮೃತಃ ॥

693) **ಸ. ಸಂ. :–** ಶಾಸ್ತ್ರವು ಯಾವನ ಕೈಯಲ್ಲಿದೆಯೋ–ಅವನು. **ಶಂಖಾಕ್ಷಪುಸ್ತಕಸುಬೋಧಯುಕ್ತಾಬ್ಜಬಾಹುಮ್ ।** ಶಾಸ್ತ್ರಕರ್ತೃವು.

* * *

692) **ವಸುರೇತಾಃ** = ವಸುದೇವತೆಗಳಿಗೆ ಕಾರಣನಾದವನು ; ಸುವರ್ಣರೇತಸ್ಸುಳ್ಳವನು ; ಸಂಪನ್ಮಯವಾದ ವೀರ್ಯವುಳ್ಳವನು.

ಶಂ. ಭಾ. :– ಸುವರ್ಣವು ಯಾವನ ರೇತಸ್ಸಾಗಿದೆಯೋ–ಅವನು. **ದೇವಃ ಪೂರ್ವಮಪಃ ಸೃಷ್ಟ್ವಾ ತಾಸು ವೀರ್ಯಮವಾಸೃಜತ್ । ತದಣ್ಡಮಭವದ್ಧೈಮಂ ಬ್ರಹ್ಮಣಃ ಕಾರಣಂ ಪರಮ್** (ವ್ಯಾಸವಚನ)

697) **ಪ. ಭ. :–** ದಿವ್ಯಜ್ಯೋತಿಗೆ ಕಾರಣನಾದವನು.

ನಿರುಕ್ತಿ :– **ವಸುಶಬ್ದೋ ಜ್ಯೋತಿರರ್ಥಃ ರೇತಸ್ತತ್ಕಾರಣಂ ಮತಮ್ ।**
ದಿವ್ಯಜ್ಯೋತಿಃಕಾರಣತ್ವಾದ್ವಸುರೇತಾಃ ಪ್ರಕೀರ್ತಿತಃ ॥

694) **ಸ. ಸಂ. :–** ಜಲದಲ್ಲಿ ತೇಜಸ್ಸುಳ್ಳವನು.

* * *

693) **ವಸುಪ್ರದಃ** = ಭಕ್ತರಿಗೆ ಹೇರಳವಾಗಿ ಧನವನ್ನು ಕೊಡುವವನು; ಕುಬೇರಸ್ವರೂಪಿಯು.

ಶಂ. ಭಾ. :– ಪುಷ್ಕಳವಾಗಿ ಹಣವನ್ನು ಕೊಡುವವನು ; ಧನಕ್ಕೆ ನಿಜ

ವಾಗಿಯೂ ಅಧ್ಯಕ್ಷನಾದವನು. (ಕುಬೇರನೇ ಮುಂತಾದ ಇತರರು ಇವನ ಅನುಗ್ರಹದಿಂದ ಧನಕ್ಕೆ ಅಧ್ಯಕ್ಷರಾಗುತ್ತಾರೆ.)

698) **ಪ. ಭ. :–** ದೇವಕೀ-ವಸುದೇವರಿಗೆ ಪರಮನಿಧಿರೂಪನಾಗಿ ತನ್ನನ್ನು ಪುತ್ರರೂಪದಿಂದ ಕೊಟ್ಟುಕೊಂಡವನು.

ನಿರುಕ್ತಿ :– ದೇವಕೀವಸುದೇವಾಭ್ಯಾಮಾತ್ಮರೂಪಂ ಮಹದ್ಧನಮ್ ।
ಪುತ್ರತ್ವೇನ ಪ್ರಕರ್ಷೇಣ ದದಾತೀತಿ ವಸುಪ್ರದಃ ॥

695) **ಸ. ಸಂ. :–** ಭಕ್ತರಿಗೆ ಧನಗಳನ್ನು ಅಥವಾ ರತ್ನಗಳನ್ನು ಚೆನ್ನಾಗಿ ಕೊಡುವವನು.

* * *

694) **ವಸುಪ್ರದಃ** = ಮೋಕ್ಷರೂಪವಾದ ಫಲವನ್ನು ಕೊಡುವವನು; ದೈವೀಸಂಪತ್ತನ್ನು ಕೊಡುವವನು ; ವಸುದೇವತಾಪದವಿಯನ್ನು ಕೊಡುವವನು.

ಶಂ. ಭಾ. :– ಶ್ರೇಷ್ಠವಾದ ಮೋಕ್ಷವೆಂಬ ಫಲವನ್ನು ಭಕ್ತರಿಗೆ ಕೊಡುವವನು. **ವಿಜ್ಞಾನಮಾನನ್ದಂ ಬ್ರಹ್ಮ । ರಾತಿರ್ದಾತುಃ ಪರಾಯಣಮ್ । ತಿಷ್ಠಮಾನಸ್ಯ ತದ್ವಿದಃ** (ಬೃ. ೩-೯-೨೮) ದೇವಶತ್ರುಗಳ ಸಂಪತ್ತುಗಳನ್ನು ಹೆಚ್ಚಾಗಿ ಖಂಡಿಸುವವನು.

699) **ಪ. ಭ. :–** ದೇವಕೀ-ವಸುದೇವರಿಗೆ ತನ್ನ ಪಿತೃತ್ವರೂಪವಾದ ದೊಡ್ಡ ಸಂಪತ್ತನ್ನು (ತೇಜಸ್ಸನ್ನು) ಕೊಟ್ಟವನು.

ನಿರುಕ್ತಿ :– ದೇವಕೀವಸುದೇವಾಭ್ಯಾಂ ಸ್ವಪಿತೃತ್ವಂ ಮಹದ್ವಸು ।
ತೇಜೋ ಯಃ ಪ್ರದದಾತೀತಿ ವಸುಪ್ರದ ಇತೀರಿತಃ ।

696) **ಸ. ಸಂ. :–** ವಸುವಿನ ಅವತಾರನಾದ ಭೀಷ್ಮನನ್ನು ಅರ್ಜುನನಿಗೋಸ್ಕರ ಚೆನ್ನಾಗಿ ಖಂಡಿಸಿದವನು.

* * *

695) **ವಾಸುದೇವಃ** = ವಸುದೇವನ ಮಗನು ; ಎಲ್ಲೆಲ್ಲಿಯೂ ವಾಸ ಮಾಡುವ ದೇವನು ; ಜೀವಗಳಿಗೆ ಸ್ವಾಮಿಯಾದವನು ; ವ್ಯೂಹದಲ್ಲಿ

ಮೊದಲನೆಯವನು ; ಜ್ಞಾನ-ಬಲ-ಐಶ್ವರ್ಯ-ವೀರ್ಯ-ಶಕ್ತಿ-ತೇಜಸ್ಸು ಗಳೆಂಬ ಆರು ಗುಣಗಳಿಂದ ಸಂಪನ್ನನಾದವನು.

ಶಂ. ಭಾ. :– ವಸುದೇವನ ಪುತ್ರನು.

700) **ಪ. ಭ. :–** ವಸುದೇವನ ಮಗನು.
ನಿರುಕ್ತಿ :– ವಸುದೇವಾಪತ್ಯತಶ್ಚ ವಾಸುದೇವಃ ಪ್ರಕೀರ್ತಿತಃ ।

697) **ಸ. ಸಂ. :–** ವಸುಗಳಲ್ಲಿ ಶ್ರೇಷ್ಠನಾದ ಭೀಷ್ಮನಿಗೆ ಸ್ವಾಮಿಯಾದವನು ; ಬ್ರಹ್ಮಶರೀರದಲ್ಲಿ ತಿಳಿಯಲ್ಪಡುವವನು ; ಬ್ರಹ್ಮಶರೀರಕ್ಕೆ ಆಧಾರನಾದವನು. **ಸತ್ತ್ವಂ ಶುದ್ಧಂ ವಸುದೇವಶಬ್ದಿತಂ ಯದೀಯತ ತತ್ರ ಪುಮಾನಪಾವೃತಃ । ಸ ತ್ವಂ ಚ ಯಸ್ಮಿನ್ಭಗವಾನ್ವಾಸುದೇವೋ ಹ್ಯಧೋಕ್ಷಜೋ ಮೇ ಮನಸಾ ವಿಧೀಯತೇ ॥**

* * *

696) **ವಸುಃ** = ವಸುದೇವತಾರೂಪಿಯು ; ಸಂಪತ್ತುಗಳುಳ್ಳವನು ; ಭೂತಗಳಿಗೆ ನಿವಾಸಸ್ಥಾನವಾದವನು.

ಶಂ. ಭಾ. :– ಭೂತಗಳು ಯಾವನಲ್ಲಿ ವಾಸಮಾಡುವುವೋ ಮತ್ತು ಭೂತಗಳಲ್ಲಿ ಯಾವನು ವಾಸಮಾಡುವನೋ–ಅವನು.

701) **ಪ. ಭ. :–** ಲೋಕಹಿತವನ್ನು ಬಯಸುತ್ತಾ ಕ್ಷೀರಸಾಗರದಲ್ಲಿ ವಾಸಮಾಡುವವನು. **ಸ ಲೋಕಾನಾಂ ಹಿತಾರ್ಥಾಯ ಕ್ಷೀರೋದೇ ವಸತಿ ಪ್ರಭುಃ ।**
ನಿರುಕ್ತಿ :– ವಸತೀತಿ ವಸುರ್ಲೋಕಹಿತೇಚ್ಛುಃ ಕ್ಷೀರಸಾಗರೇ ॥

698) **ಸ. ಸಂ. :–** ವಾಸಮಾಡುವವನು.

* * *

697) **ವಸುಮನಾಃ** = ವಸುದೇವತೆಗಳಲ್ಲಿ ಮನಸ್ಸುಳ್ಳವನು ; ಸಂಪತ್ತಿನ ವಿಷಯದಲ್ಲಿ ಮನಸ್ಸುಳ್ಳವನು ; ವಾಸಮಾಡುವ ಮನಸ್ಸುಳ್ಳವನು ; ವಸುದೇವತೆಗಳ ಮನಸ್ಸು ಯಾವನಲ್ಲಿ ನೆಟ್ಟಿದೆಯೋ–ಅವನು.

ಶಂ. ಭಾ. :– ಎಲ್ಲ ಪದಾರ್ಥಗಳಲ್ಲಿಯೂ ಸಾಮಾನ್ಯವಾಗಿ ವಾಸಮಾಡುವ ಮನಸ್ಸುಳ್ಳವನು.

702) ಪ. ಭ. :– ಲಕ್ಷ್ಮಿಯು ಜನ್ಮಭೂಮಿಯಾದ ಕ್ಷೀರಸಮುದ್ರದಲ್ಲಿ ವಾಸಮಾಡುತ್ತಿದ್ದರೂ ಯಾವನ ಮನಸ್ಸು ವಸುದೇವನಲ್ಲಿಯೇ ನೆಟ್ಟಿದೆಯೋ ಅವನು.

ನಿರುಕ್ತಿ :– **ಜನ್ಮಭೂಮ್ಯರ್ಣವೇ ಲಕ್ಷ್ಮ್ಯಾಃ ವಸತೋ ಯಸ್ಯ ವೈ ಮನಃ ।**
ಅಸ್ತೀತಿ ವಸುದೇವೇ ಹಿ ಸ ಸ್ಯಾದ್ವಸುಮನಾಃ ಪರಮ್ ॥

699) ಸ. ಸಂ. :– ವಸು ಎಂಬ ಹೆಸರಿನ ರಾಜನ ಅಥವಾ ಅಷ್ಟವಸುಗಳ ಮನಸ್ಸು ಯಾವನಲ್ಲಿದೆಯೋ–ಅವನು ; ಸ್ಯಮಂತಕಮಣಿಯಲ್ಲಿ ಅಥವಾ ಭಕ್ತರು ಕೊಟ್ಟ ನೀರಿನಲ್ಲಿ ಮನಸ್ಸುಳ್ಳವನು.

* * *

698) ಹವಿಃ = ಅಗ್ನಿಯಲ್ಲಿ ದೇವತೆಗಳಿಗೆ ಹೋಮಮಾಡಲ್ಪಡಬೇಕಾದ ಹವಿಸ್ಸಿನ ರೂಪವಾಗಿರುವವನು.

ಶಂ. ಭಾ. :– ಬ್ರಹ್ಮಾರ್ಪಣಂ ಬ್ರಹ್ಮ ಹವಿಃ = ಎಂಬ ಗೀತಾವಾಕ್ಯದಂತೆ ಹವಿಸ್ಸೂ ಆಗಿರುವವನು.

703) ಪ. ಭ. :– ಕಂಸನ ಉಪದ್ರವದ ಶಾಂತಿಗೋಸ್ಕರ ನಂದ ಗೋಪ-ಯಶೋದೆಯರಿಂದ ಸ್ವೀಕರಿಸಲ್ಪಟ್ಟವನು.

ನಿರುಕ್ತಿ :– **ನನ್ದಗೋಪಯಶೋದಾಭ್ಯಾಂ ಕಂಸೋಪದ್ರವಶಾನ್ತಯೇ ।**
ಆದೀಯತೇ ಸ್ವೀಕ್ರಿಯತೇ ಸ ಹವಿಃ ಪರಿಕೀರ್ತಿತಃ ॥

700) ಸ. ಸಂ. :– ಹೋಮಮಾಡಲ್ಪಡುವವನು.

* * *

ಸದ್ಗತಿಃ ಸತ್ಕೃತಿಃ ಸತ್ತಾ ಸದ್ಭೂತಿಃ ಸತ್ಪರಾಯಣಃ ।
ಶೂರಸೇನೋ ಯದುಶ್ರೇಷ್ಠಃ ಸನ್ನಿವಾಸಃ ಸುಯಾಮುನಃ ॥೮೮॥

699) **ಸದ್ಗತಿಃ** =ಸತ್ಪುರುಷರಿಗೆ ಗತಿಯಾದವನು ; ಒಳ್ಳೆಯ ಗತಿಯಾಗಿರುವವನು.

ಶಂ. ಭಾ. :– ಸತ್ಪುರುಷರಿಂದ ಹೊಂದಲ್ಪಡುವವನು ; (ಸತ್ಪುರುಷರು ಎಂದರೆ ಬ್ರಹ್ಮವಸ್ತುವಿನ ಅಸ್ತಿತ್ವವನ್ನು ತಿಳಿದವರು.) ಸತ್ಪುರುಷರು ಶ್ರೇಷ್ಠ ವಾದ ಬುದ್ಧಿಯುಳ್ಳವನು.

704) **ಪ. ಭ. :–** ಹುಟ್ಟಿದೊಡನೆಯೇ ಕಂಸಾದಿ ಅಸುರರಿಂದ ಉಂಟಾದ ಪೀಡೆಯನ್ನು ಹೋಗಲಾಡಿಸಿದವನು ; ಸತ್ಪುರುಷರಿಗೆ ಪ್ರಾಪ್ಯ ನಾದವನು.

ನಿರುಕ್ತಿ :– ಉತ್ಪನ್ನ ಏವ ಕಂಸಾದಿಕೃತಬಾಧಾಪನೋದನಾತ್ ।
ಸತಾಂ ಪ್ರಾಪ್ಯತಯಾ ಚೈವ ಸದ್ಗತಿಃ ಸಮುದಾಹೃತಃ ॥

701) **ಸ. ಸಂ. :–** ಸತ್ತಾ, ಭಾವ–ಮುಂತಾದುವನ್ನು ಉಂಟುಮಾಡು ವವನು ; ನಕ್ಷತ್ರಗಳ ಗತಿಯು ಯಾವನಿಂದ ಉಂಟಾಗುವುದೋ–ಅವನು ; ಸತ್ಪುರುಷರಿಗೆ ಗತಿಯು ಯಾವನಿಂದ ಉಂಟಾಗುವುದೋ–ಅವನು.

* * *

700) **ಸತ್ಕೃತಿಃ** = ಒಳ್ಳೆಯ ಕೃತಿಗಳುಳ್ಳವನು.

ಶಂ. ಭಾ. :– ಜಗತ್ತಿನ ರಕ್ಷಣೆಯೆಂಬ ಶ್ರೇಷ್ಠವಾದ ಕೃತಿಯುಳ್ಳವನು.

705) **ಪ. ಭ. :–** ರಾಸಕ್ರೀಡೆಯೇ ಮುಂತಾದ ಕೃತಿಗಳುಳ್ಳವನು.

ನಿರುಕ್ತಿ :– ರಾಸಕ್ರೀಡಾದಿಕೃತಯಃ ಸತ್ಯೋ ಯಸ್ಯ ಚ ಸತ್ಕೃತಿಃ ॥

702) **ಸ. ಸಂ. :–** ಶ್ರೇಷ್ಠವಾದ ಯತ್ನವುಳ್ಳವನು ; ಪ್ರದ್ಯುಮ್ನಾದಿ ರೂಪನಾದ ಯಾವನಿಗೆ 'ಸತೀ' ಎಂಬ ಭಾರ್ಯೆಯಿರುವಳೋ–ಅವನು.

* * *

701) **ಸತ್ತಾ** = ಸದ್ಭಾವರೂಪನು.

ಶಂ. ಭಾ. :– ಸಜಾತೀಯ, ವಿಜಾತೀಯ ಮತ್ತು ಸ್ವಗತಭೇದರಹಿತ ವಾದ ಅನುಭೂತಿಸ್ವರೂಪನು. ಏಕಮೇವಾದ್ವಿತೀಯಮ್ (ಛಾಂ ೬-೨-೧)

೭೦೬) **ಪ. ಭ. :–** ಸತ್ಪುರುಷರಿಗೆ ತಾನೇ ಸತ್ತೆಯಾಗಿರುವವನು. (ಅವನನ್ನು ಬಿಟ್ಟು ಬೇರೆ ಯಾವುದೂ ಇಲ್ಲ.) **ನ ತದಸ್ತಿ ವಿನಾ ಯತ್ಸ್ಯಾನ್ಮಯಾ** (ಗೀತಾ ೪-೯)

ನಿರುಕ್ತಿ :– ಸ್ವಯಮೇವ ಸತಾಂ ಸತ್ತಾ ಯಸ್ಮಾತ್ಸತ್ತೇತಿ ಕೀರ್ತ್ಯತೇ ॥

703) **ಸ. ಸಂ. :–** ಇರುವವನು ; ಆನಂದಾಶ್ರಯನು ; ಆನಂದ ಕರನು. **ಅಥ ಕಸ್ಮಾದುಚ್ಯತೇ ಸತ್ತೇತಿ ನನ್ದಯತೀತಿ ॥ (ಪೈಂಗೀಶ್ರುತಿಃ)**

* * *

702) **ಸದ್ಭೂತಿಃ**= ಸತ್ಪುರುಷರಿಗೆ ಐಶ್ವರ್ಯವಾಗಿರುವವನು.

ಶಂ. ಭಾ. :– ಅಬಾಧಿತವಾಗಿ ಬಹುಪ್ರಕಾರವಾಗಿ ಪ್ರಕಾಶಿಸುವ ಚಿದಾತ್ಮಕಸತ್‌ಸ್ವರೂಪನು.

707) **ಪ. ಭ. :–** ಸತ್ಪುರುಷರಿಗೆ ಪುತ್ರ, ಮಿತ್ರ, ಬಂಧು, ರೂಪ, ಸಾರಥಿ–ಮೊದಲಾದ ಎಲ್ಲವನ್ನೂ ಕೊಡುವವನು.

ನಿರುಕ್ತಿ :– ಸತಾಂ ಪುತ್ರಕಲತ್ರಾದಿಭೂತ್ಯಾ ಸದ್ಭೂತಿರುಚ್ಯತೇ ॥

704) **ಸ. ಸಂ. :–** ಸತ್ಪುರುಷರಿಗೆ ಯಾವನಿಂದ ಐಶ್ವರ್ಯವುಂಟಾಗು ವುದೋ ಅವನು ; ಶ್ರೇಷ್ಠವಾದ ಐಶ್ವರ್ಯವುಳ್ಳವನು.

* * *

703) **ಸತ್ಪರಾಯಣಃ ; ಸತ್ಪರಾಯಣಂ** = ಸತ್ಪುರುಷರಿಗೆ ಶ್ರೇಷ್ಠತಮ ವಾದ ಸ್ಥಾನವಾಗಿರುವವನು.

ಶಂ. ಭಾ. :– ತತ್ತ್ವದರ್ಶಿಗಳಾದ ಸತ್ಪುರುಷರಿಗೆ ಪರಮಶ್ರೇಷ್ಠಸ್ಥಾನ ವಾಗಿರುವವನು.

708) **ಪ. ಭ. :–** ಸತ್ಪುರುಷರಿಗೆ ಶ್ರೇಷ್ಠವಾದ ಸ್ಥಾನವು (ಗತಿಯು) ಆಗಿರುವವನು. **ಕೃಷ್ಣಾಶ್ರಯಾಃ ಕೃಷ್ಣಬಲಾಃ ಕೃಷ್ಣನಾಥಾಶ್ಚ ಪಾಣ್ಡವಾಃ । ಕೃಷ್ಣಃ ಪರಾಯಣಂ ತೇಷಾಂ ॥** ಸತ್ಪುರುಷರನ್ನೇ ಶ್ರೇಷ್ಠವಾದ ಸ್ಥಾನವನ್ನಾಗಿ ಹೊಂದಿರುವವನು. **ಮಮ ಪ್ರಾಣಾ ಹಿ ಪಾಣ್ಡವಾಃ ॥ ಜ್ಞಾನೀ ತ್ವಾತ್ಮೈವ ಮೇ ಮತಮ್ ॥** (ಗೀತಾ)

ನಿರುಕ್ತಿ :– ಸತಾಂ ಪರಂ ಸ್ಯಾದಯನಂ ಸನ್ತೋ ಯಸ್ಯೋತ್ತಮಾಯನಮ್ ।
ಸ ಸತ್ಪರಾಯಣಂ ಖ್ಯಾತಃ ಯದ್ವಾ ಸ್ಯಾತ್ಸತ್ಪರಾಯಣಃ ॥

705) **ಸ. ಸಂ. :–** ಯೋಗ್ಯರಿಗೆ ಮುಖ್ಯವಾದ ಆಶ್ರಯನು. ವಾಯು ದೇವರಲ್ಲಿ ನಿರತರಾದವರಿಗೆ ಆಶ್ರಯನು. **ಸದ್ಭಾವಪ್ರಾಣಃ । ಪ್ರಾಣಂ ವಾವ ಮಹಾನ್ಸಹ ಓಜೋ ಬಲಮಿತ್ಯಾಚಕ್ಷತೇ ॥** (ಶ್ರುತಿಃ)

* * *

704) **ಶೂರಸೇನಃ** = ಶೂರಸೇನವಂಶದವನು ; ಶೂರ-ವೀರರಾದ ಸೈನ್ಯಗಳುಳ್ಳವನು, ವಿಷ್ವಕ್ಸೇನರೂಪಿಯು.

ಶಂ. ಭಾ. :– ಹನುಮಂತನೇ ಮುಂತಾದ ಶೂರ-ವೀರಸೈನಿಕರುಳ್ಳ ವನು.

709) **ಪ. ಭ. :–** ಭೂಭಾರವನ್ನು ಪರಿಹರಿಸುವುದಕ್ಕೋಸ್ಕರ ಪರಾಕ್ರಮಿಗಳಾದ ಯಾದವ-ಪಾಂಡವರ ಸಹಾಯವುಳ್ಳವನು.

ನಿರುಕ್ತಿ :– **ಭೂಭಾರಹರಣಾರ್ಥಾಯ ಯಾದವಾಃ ಪಾಣ್ಡವಾಶ್ಚ ಯೇ ।**
ಶೂರಾಃ ಸಹಾಯಾ ಯಸ್ಯೇತಿ ಶೂರಸೇನಃ ಸ ಕಥ್ಯತೇ ॥

706) **ಸ. ಸಂ. :–** ಶೂರರಾದ ಸೈನ್ಯಗಳುಳ್ಳವನು.

* * *

705) **ಯದುಶ್ರೇಷ್ಠಃ** = ಯಾದವರಲ್ಲಿ ಶ್ರೇಷ್ಠನಾದವನು.

ಶಂ. ಭಾ. :– ಯದುವಂಶದವರಲ್ಲಿ ಪ್ರಧಾನನಾದವನು.

710) **ಪ. ಭ. :–** ಮುಳುಗಿಹೋಗಿದ್ದ ಯಾದವವಂಶವನ್ನು ಉದ್ಧಾರ ಮಾಡಿದವನು. **ಗೋಪಾಲೋ ಯಾದವಂ ವಂಶಂ ಮಗ್ನಮಭ್ಯುದ್ಧ ರಿಷ್ಯತಿ (ವಿ. ಪು.)**

ನಿರುಕ್ತಿ :– **ಮಗ್ನಂ ತು ಯಾದವಂ ವಂಶಂ ಉದ್ಧರಿಷ್ಯತಿ ಯಶ್ಚ ಸಃ ।**
ಯದುಶ್ರೇಷ್ಠ ಇತಿ ಖ್ಯಾತಃ ವಸ್ವರ್ಣೋ ವಂಶವರ್ಧನಃ ॥

'ಓಂ ಯದುಶ್ರೇಷ್ಠಾಯ ನಮಃ'–ಈ ನಾಮಮಂತ್ರವನ್ನು ಜಪಿಸುವುದರಿಂದ ಸಂತಾನಪ್ರಾಪ್ತಿಯಾಗುತ್ತದೆ.

707) **ಸ. ಸಂ. :–** ಶ್ರೇಷ್ಠರಾದ ರಮಾದೇವಿಯೇ ಮುಂತಾದವರಲ್ಲಿಯೂ ಶ್ರೇಷ್ಠನಾದವನು ; ಯದುಗಳಲ್ಲಿ ಶ್ರೇಷ್ಠನಾದವನು.

* * *

706) **ಸನ್ನಿವಾಸಃ** = ಸತ್ಪುರುಷರಿಗೆ ನಿವಾಸಭೂಮಿ (ಆಶ್ರಯ) ಯಾಗಿರುವವನು.

ಶಂ. ಭಾ. :– ವಿದ್ವಾಂಸರಿಗೆ ಆಶ್ರಯನಾದವನು.

711) **ಪ. ಭ. :–**ಮನುಷ್ಯಧರ್ಮದಲ್ಲಿಯೂ ಸನಕಾದಿ ಸತ್ಪುರುಷರಿಗೆ ವಿಶ್ರಾಂತಿಭೂಮಿಯಾಗಿರುವವನು. **ಸನನ್ದನಾದ್ಯೈರ್ಮುನಿಭಿಃ ಸಿದ್ಧಯೋಗೈರಕಲ್ಮಷೈಃ । ಸಂಚಿನ್ತ್ಯಮಾನಂ ತತ್ರಸ್ಥೈಃ ನಾಸಾಗ್ರನ್ಯಸ್ತಲೋಚನೈಃ॥ (ವಿ. ಪು. ೫-೮-೪೨)**

ನಿರುಕ್ತಿ :– **ಸನಕಾದಿನಿವಾಸೋ ಹಿ ಮನುಷ್ಯತ್ವೇಽಪಿ ಯಃ ಸದಾ ।**
ಸನ್ನಿವಾಸಃ ಸ ವಿಜ್ಞೇಯೋ ಹ್ಯಷ್ಟಾರ್ಣಃ ಸ್ಥಾನದಾಯಕಃ ॥

'ಓಂ ಸನ್ನಿವಾಸಾಯ ನಮಃ'–ಎಂಬ ಈ ನಾಮಮಂತ್ರಜಪವು ಒಳ್ಳೆಯ ಸ್ಥಾನವನ್ನು ಕೊಡತಕ್ಕುದು.

708) **ಸ. ಸಂ. :–** ಸಜ್ಜನರು ಅಥವಾ ಸದ್ಗುಣಗಳು ಯಾವನಲ್ಲಿ ವಾಸಮಾಡುವರೋ ಅಥವಾ ವಾಸಮಾಡುತ್ತವೆಯೋ–ಅವನು.

* * *

707) **ಸುಯಾಮುನಃ** = ಒಳ್ಳೆಯ ಯಮುನಾನದಿಯ ಸಂಬಂಧವುಳ್ಳವನು. ಯಮುನಾತೀರವಾಸಿಗಳ ಪರಿವಾರವುಳ್ಳವನು.

ಶಂ. ಭಾ. :– ಶ್ರೇಷ್ಠರಾದ ಯಾಮುನರು (ಯಮುನಾಸಂಬಂಧಿಗಳಾದ ದೇವಕೀ-ವಸುದೇವ-ನಂದ-ಯಶೋದೆ-ಬಲರಾಮ ಮತ್ತು ಸುಭದ್ರೆ–ಮುಂತಾದವರು) ಯಾವನನ್ನು ಸುತ್ತುವರಿದಿರುವರೋ–ಅವನು ; ಶ್ರೇಷ್ಠರಾದ ಬ್ರಹ್ಮನೇ ಮುಂತಾದವರು ಗೋಪಾಲಕರ ವೇಷಗಳನ್ನು ಧರಿಸಿ ಯಮುನಾತೀರದಲ್ಲಿ ಯಾವನನ್ನು ಸುತ್ತುವರಿದಿದ್ದರೋ–ಅವನು.

712) **ಪ. ಭ. :–** ಶ್ರೇಷ್ಠವೂ, ಪವಿತ್ರವೂ, ಮನೋಹರವೂ ಆದ ಯಮುನಾನದಿಗೆ ಸಂಬಂಧಪಟ್ಟಂತೆ ಜಲಕ್ರೀಡೆ, ಪುಷ್ಪಾಹರಣ, ರಾಸಕ್ರೀಡೆ ಮುಂತಾದುವುಗಳುಳ್ಳವನು.

ನಿರುಕ್ತಿ :– **ಗೋಪೀಭಿರ್ಯಮುನಾಯಾಂ ತು ಶೋಭನಂ ಪಾವನಂ ಮಹತ್ ।**
ಜಲಕ್ರೀಡಾದಿ ಯಸ್ಯೇತಿ ಸುಯಾಮುನ ಇತೀರಿತಃ ॥

709) **ಸ. ಸಂ. :–** ಕಾಳಿಂಗನಾಗವನ್ನು ಹೊಡೆದೋಡಿಸಿ ಯಮುನೆಯ ಜಲವನ್ನು ಶುದ್ಧಿಗೊಳಿಸಿ ಮಂಗಳಕರವಾಗುವಂತೆ ಮಾಡಿದವನು.

* * *

ಭೂತಾವಾಸೋ ವಾಸುದೇವಃ ಸರ್ವಾಸುನಿಲಯೋಽನಲಃ ।
ದರ್ಪಹಾ ದರ್ಪದೋ ದೃಪ್ತೋ ದುರ್ಧರೋಽಥಾಪರಾಜಿತಃ ॥೮೯॥

708) **ಭೂತಾವಾಸಃ** = ಭೂತಗಳಿಗೆ ನಿವಾಸಸ್ಥಾನನಾಗಿರುವವನು.

ಶಂ. ಭಾ. :– ಸಮಸ್ತಭೂತಗಳೂ ಮುಖ್ಯರೂಪದಿಂದ ಯಾವನಲ್ಲಿ ವಾಸಮಾಡುತ್ತವೆಯೋ–ಅವನು. **ವಸನ್ತಿ ತ್ವಯಿ ಭೂತಾನಿ ಭೂತಾವಾಸ ಸ್ತತೋ ಭವಾನ್ ॥** (ಹರಿ. ೩-೮೮-೫೩)

713) **ಪ. ಭ. :–** ಯಾವನಲ್ಲಿ ಭೂತಗಳು ವಾಸಮಾಡುವುವೋ–ಅವನು.

ನಿರುಕ್ತಿ :– ಯಸ್ಮಿನ್ವಸನ್ತಿ ಭೂತಾನಿ ಭೂತಾವಾಸಃ ಸ ಕಥ್ಯತೇ ॥

710) **ಸ. ಸಂ. :–** ಭೂತಗಳನ್ನು ರಕ್ಷಿಸುವವನು ಮತ್ತು ಎಲ್ಲ ಕಡೆ ಗಳಲ್ಲಿಯೂ ಸಂಚರಿಸುವವನು ; ಭೂತಗಳು ಯಾವನಲ್ಲಿ ವಾಸಮಾಡು ವುವೋ ಅವನು.

*　　　　*　　　　*

709) **ವಾಸುದೇವಃ** = ಸರ್ವಭೂತಗಳಲ್ಲಿಯೂ ನಿವಾಸಮಾಡುವ ಸ್ವಾಮಿಯು.

ಶಂ. ಭಾ. :– ಮಾಯೆಯಿಂದ ಜಗತ್ತನ್ನು ಆಚ್ಛಾದನೆಮಾಡಿರುವ ದೇವನು.

714) **ಪ. ಭ. :–** ವಸುದೇವನ ಮಗನಾಗಿದ್ದಾಗಲೂ ಅಧ್ಯಾತ್ಮಗ್ರಳಿಗೆ ವಿಷಯನಾದವನು.

ನಿರುಕ್ತಿ :– ವಸುದೇವಾಪತ್ಯತಯಾ ದ್ವಾದಶಾಧ್ಯಾತ್ಮಮಞ್ಜಸಾ ।
ನಿಯಚ್ಛತಿ ಸದಾ ಯಸ್ತು ವಾಸುದೇವಃ ಸ ಈರಿತಃ ॥

711) **ಸ. ಸಂ. :–** ವಾಯುವಿಗೆ ದೇವನಾದವನು ; ಜ್ಞಾನಕ್ಕೋಸ್ಕರ ಹುಟ್ಟಿದ ಪ್ರಾಣದೇವನು ಯಾವನಿಂದ ಉಂಟಾಗುವನೋ–ಅವನು ; **ಅವಾಸುದೇವಃ** = ಶೃಗಾಲವಾಸುದೇವನನ್ನು ಇಲ್ಲವಾಗಿಸಿದವನು.

*　　　　*　　　　*

710) **ಸರ್ವಾಸುನಿಲಯಃ**= ಎಲ್ಲ ಪ್ರಾಣಿಗಳಿಗೂ ನೆಲೆಮನೆ ಅಥವಾ ಲಯಸ್ಥಾನನಾಗಿರುವವನು.

ಶಂ. ಭಾ. :– ಸಂಪೂರ್ಣವಾದ ಪ್ರಾಣಗಳೂ ಜೀವರೂಪನಾದ ಯಾವನ ಆಶ್ರಯದಲ್ಲಿ ಲೀನವಾಗುತ್ತವೆಯೋ–ಅವನು.

715) **ಪ. ಭ. :–** ಸಮಸ್ತಪ್ರಾಣಿಗಳಿಗೂ ಅವಲಂಬನೆಯಾದವನು.

ನಿರುಕ್ತಿ :– **ಸರ್ವಾಸುನಿಲಯಃ ಸ ಸ್ಯಾತ್ಸರ್ವಪ್ರಾಣಾವಲಮ್ಬನಮ್ ।**

712) **ಸ. ಸಂ.** :– ಸರ್ವಪ್ರಾಣಿಗಳಿಗೂ ಆಶ್ರಯನು.

* * *

711) **ಅನಲಃ** = ಅಗ್ನಿಸ್ವರೂಪಿಯು ; ಶಕ್ತಿ-ಸಂಪತ್ತುಗಳ ಪರ್ಯಾಪ್ತಿಯಿಲ್ಲದವನು.

ಶಂ. ಭಾ. :– ಶಕ್ತಿ-ಸಂಪತ್ತುಗಳ ಸಮಾಪ್ತಿಯಿಲ್ಲದವನು.

716) **ಪ. ಭ.** :– ಭಕ್ತರಿಗೆ ಸರ್ವೋಪಕಾರಗಳನ್ನು ಮಾಡಿದರೂ 'ನಾನೇನೂ ಮಾಡಲಿಲ್ಲ' ಎಂದು ತೃಪ್ತಿಪಡದವನು. **ಋಣಂ ಪ್ರವೃದ್ಧಮಿವ ಮೇ ಹೃದಯಾನ್ನಾಪಸರ್ಪತಿ ॥** (ಮ. ಭಾ. ಉ. ೨೮-೨೨) ತನ್ನ ಭಕ್ತರ ವಿಷಯವಾದ ಅಪರಾಧವನ್ನು ಸಹಿಸಲು ಅಸಮರ್ಥನಾದವನು.

ದ್ವೌ ತು ಮೇ ವಧಕಾಲೇಽಸ್ಮಿನ್ನ ಕ್ಷನ್ತವ್ಯೌ ಕಥಂಚನ ।
ಯಜ್ಞವಿಘ್ನಕರಂ ಹನ್ಯಾಂ ಪಾಣ್ಡವಾನಾಂ ಚ ದುರ್ಹೃದಮ್ ॥

ನಿರುಕ್ತಿ :– **ಸರ್ವಂ ಕೃತ್ವಾಪಿ ಗೋಪಾನಾಂ ನ ಚ ಕಿಂಚನ್ಮಯಾ ಕೃತಮ್ ।**
ಇತ್ಯೇವಮವಿತೃಪ್ತೋ ಯೋ ಹ್ಯನಲಃ ಪರಿಕೀರ್ತಿತಃ ।
ಸ್ವಭಕ್ತೇಭ್ಯಃ ಕೃತಂ ಮನ್ತುಂ ನಾಲಂ ಸೋಢುಂ ಸ ವಾನಲಃ ॥

713) **ಸ. ಸಂ.** :– ಭಕ್ತರಿಗೆ ಇಷ್ಟಾರ್ಥಗಳನ್ನು ಈಡೇರಿಸುವ ವಿಷಯದಲ್ಲಿ 'ಸಾಕು' ಎಂಬ ಬುದ್ಧಿಯಿಲ್ಲದವನು.

* * *

712) **ದರ್ಪಹಾ** = ದುಷ್ಟರ ದರ್ಪವನ್ನು ಧ್ವಂಸಮಾಡುವವನು.

ಶಂ. ಭಾ. :– ಧರ್ಮವಿರುದ್ಧವಾದ ಮಾರ್ಗದಲ್ಲಿರುವವರ ದರ್ಪವನ್ನು ಅಡಗಿಸುವವನು.

717) **ಪ. ಭ.** :– ದೇವತೆಗಳ ಗರ್ವವನ್ನು ಗೋವರ್ಧನೋದ್ಧರಣವೇ ಮುಂತಾದ ಸಮಯಗಳಲ್ಲಿ ಮಾತ್ರ ಧ್ವಂಸಮಾಡಿದವನು.

ನಿರುಕ್ತಿ :– **ಗೋವರ್ಧನಸ್ಯೋದ್ಧರಣೇ ಪಾರಿಜಾತಪರಿಗ್ರಹೇ ।**
ಬಲದೋರ್ದಣ್ಡಷಣ್ಡಾನಾಂ ಖಣ್ಡನಾದೌ ತದಾ ತದಾ ।
ದೇವಾನಾಂ ವೈ ದರ್ಪಮಾತ್ರಂ ಹೃತವಾನ್ಯಃ ಸ ದರ್ಪಹಾ ॥

714) **ಸ. ಸಂ. :–** ಅಸುರರ ದರ್ಪವನ್ನು ಧ್ವಂಸಮಾಡುವವನು.

* * *

713) **ದರ್ಪದಃ** = ದುಷ್ಟರಿಗೆ ದರ್ಪವನ್ನುಂಟುಮಾಡುವವನು ; ಮಿತ್ರರಿಗೆ ವಿಜಯದರ್ಪವನ್ನು ಉಂಟುಮಾಡುವವನು ; ಮನ್ಮಥನೇ ಮುಂತಾದವರಿಗೆ ರೂಪಾದಿ ದರ್ಪಗಳನ್ನು ಕೊಟ್ಟವನು.

ಶಂ. ಭಾ. :– ಧರ್ಮಮಾರ್ಗದಲ್ಲಿರುವವರಿಗೆ (ದರ್ಪವನ್ನು) ಗೌರವವನ್ನು ಕೊಡುವವನು.

718) **ಪ. ಭ. :–** ಮಥುರೆಯಲ್ಲಿ ಯಾದವರಿಗೆ ಮಧುಪಾನವೇ ಮುಂತಾದುವುಗಳಿಂದ ದರ್ಪವನ್ನುಂಟುಮಾಡಿದವನು.

ನಿರುಕ್ತಿ :– **ಮಥುರಾಯಾಂ ಯಾದವೇಭ್ಯೋ ಮಧುಪಾನಾದಿನಾ ತತಃ।**
ದರ್ಪಂ ಚ ದತ್ತವಾನ್ಯೋऽಸೌ ದರ್ಪದಃ ಪರಿಕೀರ್ತಿತಃ ॥

715) **ಸ. ಸಂ. :–** ಅಯೋಗ್ಯರಿಗೆ ದರ್ಪವನ್ನು ಉಂಟುಮಾಡುವವನು ; ದರ್ಪಿಷ್ಠರನ್ನು ಖಂಡಿಸುವವನು.

* * *

714) **ದೃಪ್ತಃ** = ನಿತ್ಯಾನಂದದಿಂದ ಉಬ್ಬಿದವನು ; **ಅದೃಪ್ತಃ** = ಎಣೆಯಿಲ್ಲದ ಶೌರ್ಯಾದಿಗಳಿದ್ದರೂ ಆ ವಿಷಯದಲ್ಲಿ ದರ್ಪವಿಲ್ಲದವನು.

ಶಂ. ಭಾ. :– ದೃಪ್ತಃ : ಆತ್ಮಾಮೃತರಸವನ್ನು ಆಸ್ವಾದಿಸುತ್ತಾ ಸದಾ ಪ್ರಮದಿತನಾಗಿರುವವನು.

719) **ಪ. ಭ. :– ಅದೃಪ್ತಃ :** ಮಹಾಕರ್ಮಗಳನ್ನು ಮಾಡಿದರೂ ಗರ್ವವಿಲ್ಲದವನು ; ಯಶೋದಾ-ನಂದಗೋಪರ ಲಾಲನೆಯಿಂದ ಬಾಲಲೀಲೆಗಳಲ್ಲಿ ದರ್ಪಿತನಾದವನು.

ನಿರುಕ್ತಿ :– **ಅಥಾಪ್ಯಗರ್ವಿತೋ ಯೋऽಸೌ ಅದೃಪ್ತಃ ಸ ಉದಾಹೃತಃ ।**
ಬಾಲಲೀಲಾಪ್ರಸಙ್ಗೇಷು ಯಶೋದಾನನ್ದಲಾಲನಾತ್ ॥
ದೃಪ್ತೋ ಮತ್ತೋ ಭವೇತ್.............. ॥

716) **ಸ. ಸಂ. :– ದೃಪ್ತಃ** = ಮತ್ತಪ್ರವೃತ್ತಿಯುಳ್ಳವನು.

* * *

715) **ದುರ್ಧರಃ**= ಧರಿಸಲು ಕಷ್ಟಸಾಧ್ಯನಾದವನು ; ಇತರರಿಗೆ ಧರಿಸಲು ಕಷ್ಟಸಾಧ್ಯವಾದ ವೀರ್ಯ-ಪರಾಕ್ರಮಗಳುಳ್ಳವನು.

ಶಂ. ಭಾ. :– ಸರ್ವೋಪಾಧಿರಹಿತನಾಗಿರುವುದರಿಂದ ಯಾವನನ್ನು ಧ್ಯಾನವೇ ಮುಂತಾದುವುಗಳಲ್ಲಿ ಧರಿಸಲು ಅಸಾಧ್ಯವಾಗಿದ್ದು ಅವನ ಅನುಗ್ರಹದಿಂದ ಕೆಲವರಿಗೆ ಮಾತ್ರವೇ ಅತಿಕಷ್ಟದಿಂದ ಅನೇಕಜನ್ಮಗಳಲ್ಲಿ ಮಾಡಿದ ಭಾವನಾಯೋಗದಿಂದ ಧರಿಸಲು ಸಾಧ್ಯವಾಗುತ್ತದೆಯೋ–ಅವನು.
ಕ್ಲೇಶೋಽಧಿಕತರಸ್ತೇಷಾಮವ್ಯಕ್ತಾಸಕ್ತಚೇತಸಾಮ್ । ಅವ್ಯಕ್ತಾ ಹಿ ಗತಿ ರ್ದುಃಖಂ ದೇಹವದ್ಭಿರವಾಪ್ಯತೇ ॥ (ಗೀತಾ ೧೨-೫)

720) **ಪ. ಭ. :–** ಯಶೋದೆ, ನಂದಗೋಪ–ಮುಂತಾದವರಿಗೆ ಬಾಲ್ಯದಲ್ಲಿ ಹಿಡಿದುಕೊಳ್ಳಲು ಕಷ್ಟಸಾಧ್ಯನಾಗಿದ್ದವನು. **ದುರ್ಗ್ರಹಃ ಕೇಶವೋ ಬಲಾತ್ ।** (ಮ. ಭಾ. ಉ. ೧೨೦-೪೦)
ನಿರುಕ್ತಿ :– .... **ತಾಭ್ಯಾಂ ದುರ್ಗ್ರಹೋ ದುರ್ಧರೋ ಮತಃ ॥**

717) **ಸ. ಸಂ. :–** ಧರಿಸಲು ಅಶಕ್ಯನಾದವನು.

* * *

716) **ಅಪರಾಜಿತಃ** = ಸರ್ವವಿಜಯಿಯಾಗಿ ಯಾರಿಗೂ ಸೋಲದವನು.

ಶಂ. ಭಾ. :– ರಾಗ-ದ್ವೇಷಗಳೇ ಮುಂತಾದ ಒಳಗಡೆಯ ಶತ್ರುಗಳಿಂದಲೂ, ದಾನವರೇ ಮುಂತಾದ ಹೊರಗಡೆಯ ಶತ್ರುಗಳಿಂದಲೂ ಪರಾಜಿತನಾಗದೇ ಇರುವವನು.

721) **ಪ. ಭ. :–** ಭಾರತಯುದ್ಧದಲ್ಲಿ ಅತ್ಯಧಿಕಸೇನಾಬಲವುಳ್ಳವರಾಗಿದ್ದ ಕೌರವಾದಿಗಳಿಂದ ಯಾವನಿಗಾಗಲೀ, ಯಾವನ ಆಶ್ರಿತರಾದ ಪಾಂಡವರಿಗಾಗಲೀ–ಪರಾಜಯವು ಉಂಟಾಗಲಿಲ್ಲವೋ–ಅವನು. **ಯಥಾಹಂ ನಾಭಿಜಾನಾಮಿ ವಾಸುದೇವೇ ಪರಾಜಯಮ್ । ಮಾತುಶ್ಚ ಪಾಣಿಗ್ರಹಣಂ ಸಮುದ್ರಸ್ಯ ಚ ಶೋಷಣಮ್ । ಏತೇನ ಸತ್ಯವಾಕ್ಯೇನ ಸಿಧ್ಯತಾಮಗದೋ ಹ್ಯಯಮ್ ॥** (ಚರಕಸಂಹಿತಾ)
ನಿರುಕ್ತಿ :– **ದುರ್ಯೋಧನಾದಿಭಿರ್ನಿತ್ಯಂ ರೂಢಮೂಲೈಃ ಪರಾಜಯಃ ।**
ನ ಯಸ್ಯ ಕುತ್ರಚಿದ್ವಾಪಿ ಸೋಽಪರಾಜಿತ ಈರಿತಃ ॥

718) **ಸ. ಸಂ. :–** ಇತರರಿಂದ ಪರಾಜಿತನಾಗದವನು ; ಯಾವನಲ್ಲಿ ಆಸಕ್ತರಾದವರಿಗೆ ಪರಾಜಯವುಂಟಾಗುವುದಿಲ್ಲವೋ–ಅವನು.

* * *

ವಿಶ್ವಮೂರ್ತಿರ್ಮಹಾಮೂರ್ತಿರ್ದೀಪ್ತಮೂರ್ತಿರಮೂರ್ತಿಮಾನ್ ।
ಅನೇಕಮೂರ್ತಿರವ್ಯಕ್ತಃ ಶತಮೂರ್ತಿಃ ಶತಾನನಃ ॥೯೦॥

717) **ವಿಶ್ವಮೂರ್ತಿಃ** = ವಿಶ್ವರೂಪಿಯಾದವನು ; ವಿಶ್ವವು ಯಾವನ ಆಕಾರವಾಗಿರುವುದೋ–ಅವನು.

ಶಂ. ಭಾ. :– ಸರ್ವಾತ್ಮಕನಾಗಿರುವ ಯಾವನಿಗೆ ವಿಶ್ವವು ಮೂರ್ತಿಯಾಗಿರುವುದೋ–ಅವನು.

722) **ಪ. ಭ. :–** ವಿಶ್ವವು ಯಾವನಿಗೆ ಶರೀರವಾಗಿದೆಯೋ–ಅವನು.
ನಿರುಕ್ತಿ :– ವಿಶ್ವಂ ಮೂರ್ತಿಸ್ತನುರ್ಯಸ್ಯ ವಿಶ್ವಮೂರ್ತಿಸ್ತು ಸ ಸ್ಮೃತಃ ॥

719) **ಸ. ಸಂ. :–** ವಾಯುವು ಯಾವನಿಗೆ ಶರೀರವಾಗಿರುವನೋ–ಅವನು. (ಉದ್ಗೀಥವೆಂಬ ಹೆಸರುಳ್ಳ ವಿಷ್ಣುವಿನ ವಿಶಿಷ್ಟಪ್ರತಿಮೆಯೇ ವಾಯುವು.) ಅನಂತರೂಪನು.

* * *

718) **ಮಹಾಮೂರ್ತಿಃ** = ವಿಶ್ವಾಕಾರವಾದ ಹೆಚ್ಚು ದೊಡ್ಡ ಮೂರ್ತಿಯುಳ್ಳವನು.

ಶಂ. ಭಾ. :– ಶೇಷಶಯನದ ಮೇಲೆ ಪವಡಿಸಿರುವ ಯಾವನ ಮೂರ್ತಿಯು ಮಹತ್ತಾಗಿದೆಯೋ–ಅವನು.

723) **ಪ. ಭ. :–** ವಿಶ್ವರೂಪಪ್ರದರ್ಶನದ ಸಮಯದಲ್ಲಿ ವಿಶ್ವಕ್ಕೆ ಏಕಾಶ್ರಯವಾದ ಅತಿ ದೊಡ್ಡ ಮೂರ್ತಿಯುಳ್ಳವನು.
ನಿರುಕ್ತಿ :– ವಿಶ್ವೈಕಾಶ್ರಯಮೂರ್ತಿತ್ವಾನ್ಮಹಾಮೂರ್ತಿರಿತಿ ಸ್ಮೃತಃ ॥

720) **ಸ. ಸಂ. :–** ವಿರಾಡ್ರೂಪನಾದ ಮಹಾಮೂರ್ತಿಯುಳ್ಳವನು.

* * *

719) **ದೀಪ್ತಮೂರ್ತಿಃ** = ಜ್ಞಾನಪ್ರಕಾಶದಿಂದ ಉಜ್ಜ್ವಲವಾದ ಮೂರ್ತಿಯುಳ್ಳವನು ; ತೇಜೋಮಯಮೂರ್ತಿಯು.

ಶಂ. ಭಾ. :– ಜ್ಞಾನಮಯವಾದ ಮೂರ್ತಿಯುಳ್ಳವನು. ತನ್ನ ಇಚ್ಛೆಯಿಂದ ಸ್ವೀಕರಿಸಿದ ತೈಜಸವಾದ ಹಿರಣ್ಯಗರ್ಭಮೂರ್ತಿಯು.

724) ಪ. ಭ. :– ಮಹಾವಿಭೂತಿಮೂರ್ತಿಗಳೆಲ್ಲವೂ ಯಾವನ ತೇಜಸ್ಸಿನ ಅಂಶಗಳಿಂದ ಹುಟ್ಟಿ ಯಾವನ ವಿಶೇಷಮೂರ್ತಿಗಳಾಗಿವೆಯೋ–ಅವನು.

ನಿರುಕ್ತಿ :– **ಯತ್ಕಿಂಚಿತ್ಕೇನಚಿದ್ದೀಪ್ತಂ ಗುಣೇನಾತ್ರ ವಿಶೇಷತಃ ।**
ತತ್ಸರ್ವಂ ಮೂರ್ತಿರಸ್ಯೇತಿ ದೀಪ್ತಮೂರ್ತಿರಸೌ ಸ್ಮೃತಃ ॥

721) ಸ. ಸಂ. :– ದೀಪ್ತವಾದ ಮೂರ್ತಿಯುಳ್ಳವನು.

* * *

720) **ಅಮೂರ್ತಿಮಾನ್** = ಆಕಾರರಹಿತನು ; ಪ್ರಾಕೃತವಾದ ಆಕಾರವಿಲ್ಲದವನು ; ಕರ್ಮಜನ್ಯವಾದ ದೇಹವಿಲ್ಲದವನು.

ಶಂ. ಭಾ. :– ಕರ್ಮದಿಂದುಂಟಾದ ಮೂರ್ತಿಯಿಲ್ಲದವನು.

725) ಪ. ಭ. :– ಮೂರ್ತಿರಹಿತರಾದ ಅವ್ಯಕ್ತಪುರುಷಾದಿಗಳು ಯಾವನ ಶರೀರಗಳಾಗಿವೆಯೋ–ಅವನು.

ನಿರುಕ್ತಿ :– **ಅಮೂರ್ತಿಶಬ್ದೇನೋಚ್ಯನ್ತೇ ಹ್ಯವ್ಯಕ್ತಪುರುಷಾದಯಃ ।**
ತ ಏವ ಯಸ್ಯ ಸ್ವಮಿತಿ ಸ ಸ್ಮೃತಃ ಸ್ಯಾದಮೂರ್ತಿಮಾನ್ ॥

722) ಸ. ಸಂ. :– ಪ್ರಾಕೃತಮೂರ್ತಿರಹಿತನಾದವನು.

* * *

721) **ಅನೇಕಮೂರ್ತಿಃ** = ಅನಂತರೂಪಗಳುಳ್ಳವನು ; ಸ್ವೇಚ್ಛೆಯಿಂದ ಸ್ವೀಕರಿಸಲ್ಪಟ್ಟ ನಾನಾರೂಪಗಳುಳ್ಳವನು.

ಶಂ. ಭಾ. :– ಅವತಾರಗಳಲ್ಲಿ ತನ್ನ ಇಷ್ಟದಿಂದ ಲೋಕಗಳಿಗೆ ಉಪಕಾರಗಳನ್ನು ಮಾಡುವ ಅನೇಕಮೂರ್ತಿಗಳನ್ನು ಧರಿಸುವವನು.

726) ಪ. ಭ. :– ಅಸಾಧಾರಣವಾದ ಅನೇಕಮೂರ್ತಿಗಳುಳ್ಳವನು ; ಹದಿನಾರು ಸಾವಿರದ ನೂರಕ್ಕಿಂತಲೂ ಹೆಚ್ಚು ಸ್ತ್ರೀಯರನ್ನು ಪರಿಗ್ರಹಿಸಿ ಅವರಷ್ಟೇ ಸಂಖ್ಯೆಯುಳ್ಳ ದೇಹಗಳನ್ನು ಧರಿಸಿದವನು.

ನಿರುಕ್ತಿ :– **ಷೋಡಶಸ್ತ್ರೀಸಹಸ್ರಾಣಿ ಶತಮೇಕಂ ತತೋಽಧಿಕಮ್ ।**
ಅನೇಕಮೂರ್ತಿರಿತ್ಯುಕ್ತಃ ತತ್ಸಂಖ್ಯಾದೇಹಧಾರಣಾತ್ ॥

723) ಸ. ಸಂ. :– ಅನೇಕವಾದ ಅವತಾರಮೂರ್ತಿಗಳುಳ್ಳವನು.

*   *   *

722) **ಅವ್ಯಕ್ತಃ** = ಅಜ್ಞಾನಿಗಳಿಗೆ ಪ್ರಕಾಶಗೊಳ್ಳದವನು ; ಅಕ್ಷರ ರೂಪಿಯು ; ವ್ಯಕ್ತನಂತೆ ಕಂಡರೂ ಅವ್ಯಕ್ತನಾಗಿರುವವನು.

ಶಂ. ಭಾ. :– ಅನೇಕವಾದ ಮೂರ್ತಿಗಳನ್ನು ಹೊಂದಿದ್ದರೂ– 'ಇವನು ಹೀಗೆಯೇ ಇದ್ದಾನೆ'–ಎಂದು ವ್ಯಕ್ತನಾಗದವನು.

727) ಪ. ಭ. :– ಮನುಷ್ಯಾವತಾರದಲ್ಲಿ ತನ್ನ ಪರಭಾವವನ್ನು ಮುಚ್ಚಿಕೊಂಡಿರುವುದರಿಂದ ಅವ್ಯಕ್ತನಾದವನು. **ನಾಹಂ ಪ್ರಕಾಶಃ ಸರ್ವಸ್ಯ** (ಗೀತಾ. ೭-೨೫)

ನಿರುಕ್ತಿ :– **ಮನುಷ್ಯತ್ವೇನ ಸರ್ವತ್ರ ಪರಭಾವಾಪ್ರಕಾಶನಾತ್ ।**
ಬುಧೈರವ್ಯಕ್ತ ಇತಿ ಚ ಕಥಿತಸ್ತತ್ತ್ವಪಾರಗೈಃ ॥

724) ಸ. ಸಂ. :– ವಿಶೇಷವಾಗಿ ವ್ಯಕ್ತನಾಗದವನು ; ದೋಷಗಳಿಂದ ವ್ಯಕ್ತನಾಗದವನು ; ಅನುಗ್ರಹವಿಲ್ಲದೇ ವ್ಯಕ್ತನಾಗದವನು.

*   *   *

723) **ಶತಮೂರ್ತಿಃ** = ನೂರಾರು ಮೂರ್ತಿಗಳುಳ್ಳವನು.

ಶಂ. ಭಾ. :– ಜ್ಞಾನಸ್ವರೂಪನಾಗಿದ್ದರೂ ನಾನಾವಿಕಲ್ಪಗಳಿಂದ ಅನೇಕ ಮೂರ್ತಿಗಳುಳ್ಳವನು.

728) ಪ. ಭ. :– ಅರ್ಜುನನಿಗೆ ವ್ಯಕ್ತವಾಗಿ ವಿಶ್ವರೂಪವನ್ನು ತೋರಿಸಿದಾಗ ನೂರಾರು ಸಾವಿರಾರು ಮೂರ್ತಿಗಳಾಗಿ ಕಾಣಿಸಿದವನು. **ಪಶ್ಯ ಮೇ ಪಾರ್ಥ ರೂಪಾಣಿ ಶತಶೋಽಥ ಸಹಸ್ರಶಃ ॥** (ಗೀತಾ. ೧೧-೫)

ನಿರುಕ್ತಿ :– **ಅರ್ಜುನಾಯ ವ್ಯಕ್ತತಯಾ ವಿಶ್ವರೂಪಪ್ರದರ್ಶನಾತ್ ।**
ಶತಮೂರ್ತಿರಿತಿ ಖ್ಯಾತಃ ಶತಶೋಽಥ ಸಹಸ್ರಶಃ ॥

725) ಸ. ಸಂ. :– ನೂರಾರು ಮೂರ್ತಿಗಳುಳ್ಳವನು.

*   *   *

724) **ಶತಾನನಃ** = ನೂರಾರು ಬಾಯಿಗಳುಳ್ಳವನು.

ಶಂ. ಭಾ. :– ವಿಶ್ವಮೂರ್ತಿತ್ವವೇ ಮುಂತಾದ ಮೂರ್ತಿಗಳುಳ್ಳವನಾದುದರಿಂದ ನೂರಾರು ಮುಖಗಳುಳ್ಳವನು.

729) **ಪ. ಭ. :–** ಅನಂತಮುಖಗಳ ಸಂಪತ್ತುಳ್ಳವನು. **ಅನೇಕ ವಕ್ತ್ರನಯನಂ** (ಗೀತಾ. ೧೧-೧೦)

ನಿರುಕ್ತಿ :– ಅನೇಕಾನನಸಂಪತ್ತ್ಯಾ ಶತಾನನ ಇತೀರಿತಃ ॥

726) **ಸ. ಸಂ. :–** ಅನಂತಜೀವಿಗಳು ಯಾವನಿಂದ ಚೇಷ್ಟಿತವಾಗುತ್ತವೆಯೋ–ಅವನು ; ನೂರಾರು ಮುಖಗಳುಳ್ಳವನು.

* * *

ಏಕೋ ನೈಕಃ ಸವಃ ಕಃ ಕಿಂ ಯತ್ತತ್ಪದಮನುತ್ತಮಮ್ ।
ಲೋಕಬನ್ಧುರ್ಲೋಕನಾಥೋ ಮಾಧವೋ ಭಕ್ತವತ್ಸಲಃ ॥೯೧॥

725) **ಏಕಃ** = ಅದ್ವಿತೀಯನು.

ಶಂ. ಭಾ. :– ಪಾರಮಾರ್ಥಿಕವಾಗಿ ಸಜಾತೀಯ-ವಿಜಾತೀಯ ಮತ್ತು ಸ್ವಗತಭೇದಗಳಿಲ್ಲದವನಾದುದರಿಂದ ಒಬ್ಬನೇ ಆಗಿರುವವನು. **ಏಕಮೇವಾದ್ವಿತೀಯಮ್** (ಛಾಂ. ೬-೨-೧)

730) **ಪ. ಭ. :–** ಮಹಿಮೆಯಲ್ಲಿ ತನಗೆ ಸಮಾನರಿಲ್ಲವಾದುದರಿಂದ, ಸಜಾತೀಯವಾದ ಎರಡನೆಯ ವಸ್ತುವಿಲ್ಲವಾದುದರಿಂದ ಅದ್ವಿತೀಯನಾಗಿರುವವನು.

ನಿರುಕ್ತಿ :– ದ್ವಿತೀಯಸ್ವಸಜಾತೀಯರಾಹಿತ್ಯಾದೇಕ ಉಚ್ಯತೇ ॥

727) **ಸ. ಸಂ. :–** ಏಕಕರ್ತೃವಾಗಿರುವವನು ; ಮುಖ್ಯನಾದವನು ; ಮೊದಲಿಗನು ; ಏಕತ್ವಸಂಖ್ಯೆಯುಳ್ಳವನು.

* * *

726) **ನೈಕಃ** = ಅನೇಕರೂಪಗಳುಳ್ಳವನು.

ಶಂ. ಭಾ. :–ಮಾಯೆಯಿಂದ ಬಹುರೂಪನಾಗಿರುವವನು. **ಇನ್ದ್ರೋ ಮಾಯಾಭಿಃ ಪುರುರೂಪ ಈಯತೇ** (ಬೃ. ಉ. ೨-೫-೧೯)

731) **ಪ. ಭ. :–** ತನ್ನ ವಿಭೂತಿಗಳಾಗಿ ವಿಜಾತೀಯವಾಗಿರುವ ಎಲ್ಲರಿಂದಲೂ ಕೂಡಿರುವುದರಿಂದ ಅದ್ವಿತೀಯನು ; ಅನೇಕರೂಪನು. **ನಾನ್ತೋಽಸ್ತಿ ಮಮ ದಿವ್ಯಾನಾಂ ವಿಭೂತೀನಾಂ ಪರಂತಪ ॥** (ಗೀತಾ)

ನಿರುಕ್ತಿ : ನೈಕಃ ಸ್ವವ್ಯಾಪಾರತಯಾ ವಿಭೂತೀನಾಮಿತೀರಿತಃ ।

728) ಸ. ಸಂ. :– ಅನೇಕರೂಪನು.

* * *

727) ಸವಃ = ಸೋಮಯಜ್ಞಸ್ವರೂಪಿಯು ; ಯಜ್ಞಸ್ವರೂಪಿಯು. ಸಃ-ವಃ = ಅವ್ಯಕ್ತನಾಗಿರುವುದರಿಂದ ಅವನು ಅವತಾರರೂಪದಲ್ಲಿ ವ್ಯಕ್ತನಾದಾಗ 'ನೀನು-ನಿಮ್ಮವನು' ಎಂದು ಕರೆಯಲ್ಪಡುವವನು.

ಶಂ. ಭಾ. : ಸವಃ = ಸೋಮವು ಹಿಂಡಲ್ಪಡುವ ಯಜ್ಞಸ್ವರೂಪಿಯು.

732) ಪ. ಭ. : ಸಃ = ಈ ಶ್ರೀಕೃಷ್ಣನ ಅನಂತವಿಭೂತಿರೂಪಗಳು ಮಕ್ಕಳು ಮೊದಲುಗೊಂಡು ಎಲ್ಲರಿಗೂ ತಿಳಿದಿರುವುದರಿಂದ (ಪ್ರಸಿದ್ಧವಾಗಿರುವುದರಿಂದ) ಯಾವನು ತನ್ನ ಜ್ಞಾನವನ್ನು ಪ್ರಸಿದ್ಧಿಗೊಳಿಸುವನೋ– ಅವನು.

ನಿರುಕ್ತಿ :– ಸರ್ವೇಷು ಕೃಷ್ಣರೂಪೇಷು ಆಕುಮಾರಪ್ರಸಿದ್ಧಿತಃ ।
ಜ್ಞಾನಂ ಹಿ ಯಸ್ಯ ವಿಷಯಂ ಸ್ಯತ್ಯಸೌ ಸ ಇತೀರಿತಃ ॥

733) ಪ. ಭ. : ವಃ = ಪ್ರಸಿದ್ಧವಾಗಿರುವಂತೆ ಎಲ್ಲ ಭೂತಗಳಲ್ಲಿಯೂ ವಾಸವಾಗಿರುವವನು.

ನಿರುಕ್ತಿ :– ಯಥಾ ಪ್ರಸಿದ್ಧಿವಾಸಿತ್ವಾತ್ತಸ್ಯಾಪಿ ವಸತೇಶ್ಚ ಸಃ ।
ಭೂತಾವಾಸತಯಾ ವಃ ಸ್ಯಾತ್........ ॥

729) ಸ. ಸಂ. : ಸವಃ = ಸೋಮಯಜ್ಞವು ಯಾವನಿಗಾಗಿ ಮಾಡಲ್ಪಡುತ್ತದೆಯೋ–ಅವನು ; ಜ್ಞಾನಸಹಿತನು.

* * *

728) ಕಃ = ಇವನು ಯಾರು?–ಎಂಬ ಪ್ರಶ್ನೆಗೆ ವಿಷಯವಾಗಿರುವವನು. ಬ್ರಹ್ಮಸ್ವರೂಪಿಯು ; ಸುಖಸ್ವರೂಪಿಯು.

ಶಂ. ಭಾ. :– ಸುಖರೂಪದಿಂದ ಸ್ತುತಿಸಲ್ಪಡುವವನು.

734) ಪ. ಭ. :– (ಅಶುದ್ಧವಾದ ಭೂತಗಳಲ್ಲಿ ವಾಸವಾಗಿದ್ದರೂ) ಬೆಳಗುತ್ತಿರುವವನು.

ನಿರುಕ್ತಿ :– .... ಸರ್ವೇಷು ಕನತೀತಿ ಕಃ ॥

730) ಸ. ಸಂ. :– ದೀಪ್ತನಾಗಿರುವವನು ; ಉಜ್ಜ್ವಲನು.

* * *

729) **ಕಿಮ್** = 'ಇದು ಯಾವುದು?' ಎಂದು ವಿಚಾರಮಾಡಲ್ಪಡಬೇಕಾದ ಪರಬ್ರಹ್ಮವಸ್ತುವು.

ಶಂ. ಭಾ. :– ಸರ್ವಪುರುಷಾರ್ಥರೂಪವಾದ್ದರಿಂದ ವಿಚಾರಮಾಡಲು ಯೋಗ್ಯವಾದ ಬ್ರಹ್ಮವಸ್ತುವು.

735) **ಪ. ಭ. :–** ಇಷ್ಟಾರ್ಥಕ್ಕೋಸ್ಕರ ಪ್ರಶ್ನಿಸಲ್ಪಡಬೇಕಾದವನು.
ಸೋಽನ್ವೇಷ್ಟವ್ಯಃ ಸ ವಿಜಿಜ್ಞಾಸಿತವ್ಯಃ (ಛಾಂ ೮-೭-೧)
ನಿರುಕ್ತಿ :– **ಯ ಈಪ್ಸಿತಾರ್ಥಪ್ರಾಪ್ತ್ಯರ್ಥಂ ಪೃಷ್ಟವ್ಯಃ ಕಿಮಿತಿ ಸ್ಮೃತಃ ॥**

731) **ಸ. ಸಂ. :–** ಪುರಾಣಾದಿರೂಪವಾದ ಶಬ್ದಗಳನ್ನು ಮಾಡಿದವನು ; ಎಲ್ಲ ವೇದಗಳ ವಿಚಾರಕ್ಕೆ ವಿಷಯನಾಗಿರುವವನು.

* * *

730) **ಯತ್**= ಸ್ವತಃ ಸಿದ್ಧನಾದವನು ; ಅತ್ಯಂತಪ್ರಸಿದ್ಧನಾದವನು.

ಶಂ. ಭಾ. :– ಸ್ವತಃಸಿದ್ಧವಾದ ಪರಬ್ರಹ್ಮವು. **ಯತೋ ವಾ ಇಮಾನಿ ಭೂತಾನಿ ಜಾಯನ್ತೇ ॥** (ತೈ. ಉ. ೩-೧)

736) **ಪ. ಭ. :–** ತನ್ನ ವಿಷಯವಾಗಿ ಯಾರು ಪ್ರಶ್ನಿಸುತ್ತಾರೆಯೋ ಅಂತಹ ಬ್ರಹ್ಮಜಿಜ್ಞಾಸುಗಳನ್ನು ರಕ್ಷಿಸಲು ಯತ್ನಿಸುವವನು ; ಅವರನ್ನು ರಕ್ಷಿಸುವ ಇಚ್ಛೆಯಿಂದ ಅವರೊಡನೆ ತನ್ನ ಸಂಗಮವನ್ನುಂಟುಮಾಡುವವನು.
ನಿರುಕ್ತಿ :– **ರಕ್ಷಾಯೈ ಪೃಚ್ಛಕಾನಾಂ ಸ ಯತತೇ ಯದಿತಿ ಸ್ಮೃತಃ ॥**

732) **ಸ. ಸಂ. :–** (ಎಲ್ಲವನ್ನೂ) ಅರಿಯುವವನು ; ಸ್ವರೂಪಜ್ಞಾನವುಳ್ಳವನು. **ಯಚ್ಚ ಜ್ಞಾನಂ ಸ್ವರೂಪತಃ** (ಐತರೇಯಭಾಷ್ಯ)

* * *

731) **ತತ್** = ಇಂದ್ರಿಯಗಳಿಗೆ ಅತಿದೂರನಾಗಿ ಗ್ರಹಿಸಲು ಕಷ್ಟಸಾಧ್ಯನಾಗಿರುವುದರಿಂದ 'ಅದು' ಎಂದು ಹೇಳಲ್ಪಡುವವನು.

ಶಂ. ಭಾ. :– ವಿಸ್ತಾರವನ್ನುಂಟುಮಾಡುವ ಬ್ರಹ್ಮವು. **ಓಂ ತತ್ಸದಿತಿ ನಿರ್ದೇಶೋ ಬ್ರಹ್ಮಣಸ್ತ್ರಿವಿಧಃ ಸ್ಮೃತಃ ॥** (ಗೀತಾ ೧೭-೨೩)

737) **ಪ. ಭ. :–** ಭಕ್ತರಿಗೆ ತನ್ನ ಜ್ಞಾನ-ಭಕ್ತಿಗಳನ್ನು ವಿಸ್ತರಿಸುವವನು.

ನಿರುಕ್ತಿ :– ಸ್ವಜ್ಞಾನಭಕ್ತಿಂ ಭಕ್ತಾನಾಂ ತನೋತೀತಿ ತದುಚ್ಯತೇ ॥

733) **ಸ. ಸಂ. :–** ಪ್ರತ್ಯಕ್ಷಾದಿಗಳಿಂದ ತಿಳಿಯಲ್ಪಡದವನು ; ವೇದವೊಂದರಿಂದಲೇ ಮುಖ್ಯವಾಗಿ ತಿಳಿಯಲ್ಪಡುವವನು ; ಗುಣಗಳಿಂದ ವಿಸ್ತಾರಗೊಂಡವನು.

* * *

732) **ಪದಮನುತ್ತಮಮ್** = ಯಾವುದಕ್ಕಿಂತಲೂ ಉತ್ತಮವಾದುದು ಬೇರೊಂದಿಲ್ಲವೋ–ಅಂತಹ ಪರಮೋತ್ತಮವಾದ ಸ್ಥಾನವು ಅಥವಾ ಗತಿಯು.

ಶಂ. ಭಾ. :– ಯಾವುದಕ್ಕಿಂತಲೂ ಶ್ರೇಷ್ಠವಾದುದು ಬೇರೊಂದಿಲ್ಲವೋ–ಅಂತಹ ಮುಮುಕ್ಷುಗಳಿಂದ ಹೊಂದಲ್ಪಡುವ ಪರಬ್ರಹ್ಮವು.

738) **ಪ. ಭ. :–** ಪ್ರಪನ್ನರಿಗೆ ಪರಮಪ್ರಾಪ್ಯನಾದವನು.

ನಿರುಕ್ತಿ :– ಪರಮಂ ಯತ್ಪ್ರಪನ್ನಾನಾಂ ಪ್ರಾಪ್ಯಂ ಪದಮನುತ್ತಮಂ ॥

734) **ಸ. ಸಂ. :–** ಯಾವುದಕ್ಕಿಂತಲೂ ಉತ್ತಮವಾದುದು ಬೇರೊಂದಿಲ್ಲವೋ–ಅಂತಹ ಗಮ್ಯಪದಾರ್ಥವು.

* * *

733) **ಲೋಕಬನ್ಧುಃ** = ಸಮಸ್ತಲೋಕಗಳಿಗೂ ನೆಂಟನಾಗಿರುವವನು.

ಶಂ. ಭಾ. :– ಆಧಾರಸ್ವರೂಪನಾದ ಯಾವನಲ್ಲಿ ಸಮಸ್ತಲೋಕ ಗಳೂ ಬಂಧಿಸಲ್ಪಟ್ಟಿವೆಯೋ–ಅವನು ; ಲೋಕಗಳಿಗೆ ತಂದೆಯಾದವನು. ಶ್ರುತಿ-ಸ್ಮೃತಿರೂಪವಾಗಿ ಹಿತಾಹಿತಗಳ ಉಪದೇಶವೆಂಬ ಬಂಧುಕೃತ್ಯವನ್ನು ಮಾಡಿದವನು ;

739) **ಪ. ಭ. :–** ಲೋಕಗಳಿಗೆ ತಂದೆ-ತಾಯಿ ಮುಂತಾದ ಸ್ವಜನನಾಗಿರುವವನು. **ಮಾತಾ ಪಿತಾ ಭ್ರಾತಾ ನಿವಾಸಃ ಶರಣಂ ಸುಹೃತ್ । ಗತಿರ್ನಾರಾಯಣಃ** (ಸುಬಾಲ. ೬)

ನಿರುಕ್ತಿ :– ಲೋಕಾನಾಂ ಸ್ವಜನತ್ವಾದ್ಧಿ ಲೋಕಬನ್ಧುರಿತಿ ಸ್ಮೃತಃ ॥

735) **ಸ. ಸಂ. :–** ಲೋಕಗಳಿಗೆ ಬಂಧುವಾದವನು.

* * *

734) **ಲೋಕನಾಥಃ** = ಸಮಸ್ತಲೋಕಗಳಿಗೂ ಒಡೆಯನಾದವನು.

ಶಂ. ಭಾ. :– ಲೋಕಗಳಿಂದ ಯಾಚಿಸಲ್ಪಡುವವನು ; ಲೋಕಗಳನ್ನು ನಿಯಮಿಸುವವನು ; ಲೋಕಗಳ ವಿಷಯದಲ್ಲಿ ಆಶಂಸನೆಮಾಡುವವನು ; ಲೋಕಗಳ ಮೇಲೆ ಶಾಸನಮಾಡುವವನು.

740) ಪ. ಭ. :– ಲೋಕಗಳಿಗೆ ಸ್ವಾಮಿಯಾದವನು. ಲೋಕ ಬಂಧುತ್ವದ ಕಾರಣದಿಂದಲೂ ಮತ್ತು ಸ್ವಾಭಾವಿಕವಾಗಿಯೂ ಲೋಕಗಳೊಡನೆ ಸ್ವಾಮಿಸಂಬಂಧವುಳ್ಳವನು.

ನಿರುಕ್ತಿ :– **ಲೋಕಬನ್ಧುತ್ವಮೂಲಾದ್ಧಿ ಲೋಕಸ್ವಾಮಿತ್ವಮಿತ್ಯತಃ ।**
ಸ್ವಾಭಾವಿಕಾಚ್ಚ ಸಂಬನ್ಧಾಲ್ಲೋಕನಾಥ ಇತೀರಿತಃ ॥

736) ಸ. ಸಂ. :– ಲೋಕಗಳಿಗೆ ಒಡೆಯನಾದವನು ; ಜ್ಞಾನರೂಪಿಯಾಗಿ ಯಾಚಿಸಲ್ಪಡುವವನು.

* * *

735) **ಮಾಧವಃ** = ಲಕ್ಷ್ಮೀಪತಿಯು ; ಮಧುವಂಶದಲ್ಲಿ ಹುಟ್ಟಿದವನು. ಮಧುವಿಗೆ (ಪರಮಾನಂದಕ್ಕೆ) ಸೇರಿದವನು.

ಶಂ. ಭಾ. :– ಮಧುವಂಶದಲ್ಲಿ ಹುಟ್ಟಿದವನು.

741) ಪ. ಭ. :– ಲಕ್ಷ್ಮೀಪತಿಯೂ ಲೋಕಕ್ಕೆ ಸ್ವಾಮಿಯೂ ಆದವನು; ಮಧುವೆಂಬ ಯಾದವನ ವಂಶದಲ್ಲಿ ಹುಟ್ಟಿದವನು ; ಮೌನ-ಧ್ಯಾನ-ಯೋಗಗಳುಳ್ಳವನು. **ಮೌನಾದ್ಧ್ಯಾನಾಚ್ಚ ಯೋಗಾಚ್ಚ ವಿದ್ಧಿ ಭಾರತ ಮಾಧವಮ್ ॥** (ಮ. ಭಾ. ಉ. ೭೦-೪)

ನಿರುಕ್ತಿ :– **ಲೋಕನಾಥತ್ವಸಂಬನ್ಧಃ ಶ್ರೀಮತಶ್ಚೇತಿ ಮಾಧವಃ ।**
ಮಧೋರ್ವಂಶೋದ್ಭವತ್ವಾಚ್ಚ ಮಾಧವಃ ಪರಿಕೀರ್ತಿತಃ ॥

737) ಸ. ಸಂ. :– ಸುಖವನ್ನು ಕೊಡುವವನು.

* * *

736) **ಭಕ್ತವತ್ಸಲಃ** = ಹಸುವು ಆಗ ತಾನೇ ಆದ ತನ್ನ ಕರುವಿನಲ್ಲಿ ಹೇಗೋ–ಹಾಗೆ ಭಕ್ತರಲ್ಲಿ ಪರಮಪ್ರೇಮವನ್ನು ಹೊಂದಿರುವವನು.

ಭಕ್ತೇ ಧೇನೋರಿವ ಸ್ನೇಹಃ ವಾತ್ಸಲ್ಯಂ । ಸದ್ಯಃ ಪ್ರಸೂತಾ ಗೌಃ ಧೇನುಃ ॥

ಶಂ. ಭಾ. :– ಭಕ್ತರಲ್ಲಿ ಸ್ನೇಹವುಳ್ಳವನು.

742) **ಪ. ಭ. :–** ಭಕ್ತರಲ್ಲಿ ವಿಶೇಷವಾಗಿ ಪ್ರಕಾಶಿಸುವವನು. ಅವರ ಲಾಭವೆಂಬ ಸಂಭ್ರಮದಲ್ಲಿ ಉಳಿದ ಕಾಮನೆಗಳೆಲ್ಲವನ್ನೂ ಮರೆತು ಅವರಲ್ಲಿ ವಿಶೇಷವಾಗಿ ಮಾತನಾಡುವವನು.

ನಿರುಕ್ತಿ :– **ವಿಶೇಷಂ ವಕ್ತಿ ಭಕ್ತೇಷು ಯೋಽಸೌ ಸ್ಯಾದ್ಭಕ್ತವತ್ಸಲಃ ॥**

738) **ಸ. ಸಂ. :–** ಯಜ್ಞಮಾಡುವ ಬ್ರಾಹ್ಮಣರನ್ನು ಕುರಿತು ಹೋಗುವವನು ; ಭಕ್ತರಲ್ಲಿ ವಾತ್ಸಲ್ಯವುಳ್ಳವನು ; ಭಕ್ತರೆಂಬ ಕರುಗಳನ್ನು ಕಾಪಾಡುವವನು.

* * *

ಸುವರ್ಣವರ್ಣೋ ಹೇಮಾಙ್ಗೋ ವರಾಙ್ಗಶ್ಚನ್ದನಾಙ್ಗದೀ ।
ವೀರಹಾ ವಿಷಮಃ ಶೂನ್ಯೋ ಘೃತಾಶೀರಚಲಶ್ಚಲಃ ॥೯೨॥

737) **ಸುವರ್ಣವರ್ಣಃ** = ಸುವರ್ಣದ ಬಣ್ಣಕ್ಕೆ ಸಮಾನವಾದ ಬಣ್ಣವುಳ್ಳವನು.

ಶಂ. ಭಾ. :– ಸುವರ್ಣದ ಬಣ್ಣಕ್ಕೆ ಸಮಾನವಾದ ಬಣ್ಣವುಳ್ಳವನು. **ಯದಾ ಪಶ್ಯಃ ಪಶ್ಯತೇ ರುಕ್ಮವರ್ಣಮ್** (ಮುಂ. ೩-೧-೩)

743) **ಪ. ಭ. :–** ಒರೆಹಚ್ಚಿದ ಚಿನ್ನದಂತೆ ದೋಷರಹಿತವೂ ಉಜ್ಜ್ವಲವೂ ಆದ ದಿವ್ಯವರ್ಣವುಳ್ಳವನು. **ರುಕ್ಮಾಭಂ ಸ್ವಪ್ನಧೀಗಮ್ಯಮ್** (ಮನು. ೧೨-೧೨೨) **ಆದಿತ್ಯವರ್ಣಂ** (ಪು. ಸೂ. ೨೦) **ಹಿರಣ್ಮಯಃ ಪುರುಷಃ ಸರ್ವ ಏವ ಸುವರ್ಣಃ** (ಛಾಂ. ೧-೬-೬)

ನಿರುಕ್ತಿ :– **ಗುಣವತ್ಸ್ವರ್ಣನಿಕಷನಿರ್ದೋಷೋಜ್ಜ್ವಲವರ್ಣತಃ ।**
ಸುವರ್ಣವರ್ಣ ಇತ್ಯುಕ್ತಃ ನವಾರ್ಣೋ ಭಕ್ತಿಕಾಮದಃ ॥

'**ಓಂ ಸುವರ್ಣವರ್ಣಾಯ ನಮಃ**'–ಎಂಬ ಈ ನಾಮಮಂತ್ರ ಜಪವು ಭಕ್ತಿ-ಕಾಮನೆಗಳನ್ನು ಕೊಡುತ್ತದೆ.

739) **ಸ. ಸಂ. :–** ಚಿನ್ನದ ಬಣ್ಣವುಳ್ಳವನು. ಹಿರಣ್ಯಕೇಶ **ಆಪ್ರಣಖಾತ್ಸರ್ವ ಏವ ಸುವರ್ಣಃ ॥**

* * *

738) **ಹೇಮಾಙ್ಗಃ** = ಚಿನ್ನಕ್ಕೆ ಸಮಾನವಾದ ಅವಯುವಗಳುಳ್ಳವನು. ಬಣ್ಣ, ಕಾಂತಿ, ಅಮೂಲ್ಯತೆ, ರಮಣೀಯತೆ–ಮುಂತಾದುವುಗಳಿಂದ ಚಿನ್ನಕ್ಕೆ ಸದೃಶವಾದ ಅಂಗಗಳುಳ್ಳವನು.

ಶಂ. ಭಾ. :– ಚಿನ್ನಕ್ಕೆ ಸದೃಶವಾದ ದೇಹವುಳ್ಳವನು. **ಯ ಏಷೋಽನ್ತರಾದಿತ್ಯೇ ಹಿರಣ್ಮಯಃ ಪುರುಷಃ ।** (ಛಾಂ. ೧-೬-೬)

744) **ಪ. ಭ. :–** ನಿತ್ಯವೂ, ದಿವ್ಯವೂ, ಶುದ್ಧಸತ್ತ್ವಮಯವೂ ಆದ ಅಂಗಗಳುಳ್ಳವನು.

ನಿರುಕ್ತಿ :– **ವರ್ಣಾಶ್ರಯಂ ತು ಯಸ್ಯಾಙ್ಗಂ ದಿವ್ಯಸತ್ತ್ವಮಯಂ ಯತಃ ।**
ಅತೋ ಹೇಮಾಙ್ಗ ಇತ್ಯುಕ್ತಃ ಸಪ್ತಾರ್ಣೋ ಹೇಮವರ್ಣದಃ ॥

'**ಓಂ ಹೇಮಾಙ್ಗಾಯ ನಮಃ**'–ಎಂಬ ಈ ನಾಮಮಂತ್ರಜಪದಿಂದ ಸುವರ್ಣದಂತೆ ಕಾಂತಿಯುಂಟಾಗುತ್ತದೆ.

740) **ಸ. ಸಂ. :–** ಸುವರ್ಣವು ಯಾವನ ಅಂಗವಾಗಿರುವುದೋ–ಅವನು.

* * *

739) **ವರಾಙ್ಗಃ** = ಶ್ರೇಷ್ಠವಾದ ಅಂಗಗಳುಳ್ಳವನು.

ಶಂ. ಭಾ. :– ಶೋಭನವಾದ ಅಂಗಗಳುಳ್ಳವನು.

745) **ಪ. ಭ. :–** ದೇವಕೀದೇವಿಯ ಪ್ರೀತಿಗೋಸ್ಕರ ಉಪನಿಷತ್ಪ್ರತಿಪಾದ್ಯವಾದ ದಿವ್ಯಚಿಹ್ನೆಗಳನ್ನು ಪ್ರಕಟಿಸಿದ ರೂಪವುಳ್ಳವನು.

ನಿರುಕ್ತಿ :– **ದೇವಕೀಪ್ರೀತಯೇ ಗುಪ್ತದಿವ್ಯಲಾಞ್ಛನಮಙ್ಗಲಮ್ ।**
ಆವಿಷ್ಕೃತಂ ಸ್ವತೋ ಯೇನ ವರಾಙ್ಗಃ ಸ ತು ಕಥ್ಯತೇ ॥

741) **ಸ. ಸಂ. :–** ಉತ್ತಮವಾದ ಅಂಗಗಳುಳ್ಳವನು. **ಅವರಾಙ್ಗಃ** = ಸಂರಕ್ಷಣೆಮಾಡುವವನು ಮತ್ತು ಶ್ರೀರಂಗಕ್ಷೇತ್ರಕ್ಕೆ ಸೇರಿದವನು.

* * *

740) **ಚನ್ದನಾಙ್ಗದೀ** = ಭೂಮಿಯಲ್ಲಿ ಅವತರಿಸಿದಾಗ ಶ್ರೀಗಂಧದಿಂದ ರಚಿತವಾದ ಅಥವಾ ಶ್ರೀಗಂಧದಿಂದ ಪೂಸಿದ ತೋಳ್ಬಳೆಗಳುಳ್ಳವನು; ಆಹ್ಲಾದಕರವಾದ ತೋಳ್ಬಳೆಗಳುಳ್ಳವನು ; ಶ್ರೀಗಂಧದಿಂದ ಪೂಜಿಸಲ್ಪಟ್ಟವನು ಮತ್ತು ಕೇಯೂರಗಳಿಂದ ಅಲಂಕೃತನಾದವನು.

ಶಂ. ಭಾ. :– ಚಂದನದಿಂದ ಕೂಡಿದ್ದು ಆಹ್ಲಾದಕರವಾದ ಕೇಯೂರಗಳಿಂದ ಅಲಂಕೃತನಾದವನು.

746) **ಪ. ಭ. :–** ಸದಾ ಆಹ್ಲಾದವನ್ನುಂಟುಮಾಡುವ ಕೇಯೂರಗಳೇ ಮುಂತಾದ ನಿತ್ಯಭೂಷಣಗಳಿಂದ ಸದಾ ಅಲಂಕೃತನಾದವನು.

ನಿರುಕ್ತಿ :– **ಭೂಷಣಾನ್ಯಙ್ಗದಾದೀನಿ ಸದಾಹ್ಲಾದಕರಾಣಿ ಚ ।**
ಸನ್ತಿ ಯಸ್ಯ ಚ ನಿತ್ಯಂ ತು ಸ ಸ್ಮೃತಶ್ಚನ್ದನಾಙ್ಗದೀ ॥

742) **ಸ. ಸಂ. :–** ಶ್ರೀಗಂಧಾದಿಗಳು ಮತ್ತು ಕೇಯೂರಗಳಿಂದ ಅಲಂಕೃತನಾದವನು.

* * *

741) **ವೀರಹಾ** = ವೀರರಾದ ಶತ್ರುಗಳನ್ನು ಸಂಹರಿಸಿದವನು.

ಶಂ. ಭಾ. :– ಧರ್ಮರಕ್ಷಣೆಗೋಸ್ಕರ ಮುಖ್ಯರಾದ ದೈತ್ಯವೀರರನ್ನು ಸಂಹರಿಸಿದವನು.

747) **ಪ. ಭ. :–** ಪೂತನಿ-ಶಕಟಾಸುರ ಇವರೇ ಮುಂತಾದ ವಂಚಕರಾದ ಅಸುರರನ್ನು ನಿರ್ಮೂಲಮಾಡಿದವನು.

ನಿರುಕ್ತಿ :– **ಸಮೂಲಂ ಪೂತನಾದೀನ್ಸ್ವೈ ಯೋ ಜಘಾನ ಸ ವೀರಹಾ ॥**

743) **ಸ. ಸಂ. :–** ವೀರರನ್ನು ಸಂಹರಿಸುವವನು ; ಮುಖ್ಯಪ್ರಾಣನಿಲ್ಲದವರನ್ನು ಸಂಹರಿಸುವವನು.

* * *

742) **ವಿಷಮಃ** = ಎಣೆಯಿಲ್ಲದವನು ; **ಅವಿಷಮಃ** = ವೈಷಮ್ಯವಿಲ್ಲದವನು ; ಸರ್ವಸಮನಾದವನು ; ಋಜುಬುದ್ಧಿಯುಳ್ಳವರಿಗೆ ಕ್ಷೇಮವನ್ನೂ ಕುಟಿಲಬುದ್ಧಿಯುಳ್ಳವರಿಗೆ ಭೀತಿಯನ್ನೂ ಉಂಟುಮಾಡುವವನು.

ಶಂ. ಭಾ. :– ಸರ್ವಲಕ್ಷಣನಾಗಿರುವುದರಿಂದ ಯಾವನಿಗೆ ಸಮಾನರಾದವರಿಲ್ಲವೋ–ಅವನು. **ನ ತ್ವತ್ಸಮೋಽಸ್ತ್ಯಭ್ಯಧಿಕಃ ಕುತೋಽನ್ಯಃ ॥** (ಗೀತಾ. ೧೧-೪೩)

748) **ಪ. ಭ. :–** ಭಯವನ್ನು ಉಂಟುಮಾಡುವ ವಿಷಮಾಚರಣೆಯುಳ್ಳವನು.

ನಿರುಕ್ತಿ :– **ಭೀತಿಕ್ಷೇಮಕರತ್ವಾದ್ಧಿ ಕುಟಿಲಾಕುಟಿಲಾತ್ಮಸು ।**
ವಿಷಮಃ ಸ ತು ವಿಖ್ಯಾತಃ........... ॥

744) **ಸ. ಸಂ. :–** ತನ್ನ ನಾಮಸ್ಮರಣೆಯಿಂದ ರುದ್ರನಿಂದ ಕುಡಿಯಲ್ಪಟ್ಟ ವಿಷವನ್ನು ಹೋಗಲಾಡಿಸಿದವನು ; ಎಣೆಯಿಲ್ಲದವನು ; **ಅವಿಷಮಃ** = ವೈಷಮ್ಯದೋಷವಿಲ್ಲದವನು. **ವೈಷಮ್ಯನೈರ್ಘೃಣ್ಯೇ ನ ಸಾಪೇಕ್ಷತ್ವಾತ್ತಥಾ ಹಿ ದರ್ಶಯತಿ । (ಬ್ರ. ಸೂ.)**

* * *

743) **ಶೂನ್ಯಃ** = ಆಕಾಶಸದೃಶನಾದವನು ; ವಿಶೇಷರಹಿತನಾದವನು; ದೋಷಶೂನ್ಯನಾದವನು ; ಸರ್ವಪದಾರ್ಥಶೂನ್ಯನಾದವನು.

ಶಂ. ಭಾ. :– ಸರ್ವವಿಶೇಷರಹಿತನಾದುದರಿಂದ ಶೂನ್ಯಕ್ಕೆ ಸಮಾನನಾಗಿರುವವನು.

749) **ಪ. ಭ. :–** ದೋಷರಹಿತನಾದವನು.

ನಿರುಕ್ತಿ :– **.......... ಶೂನ್ಯಃ ಸ್ಯಾದ್ದೋಷವರ್ಜಿತಃ ॥**

745) **ಸ. ಸಂ. :–** ಪ್ರಳಯಕಾಲದಲ್ಲಿ ಸರ್ವಪದಾರ್ಥಶೂನ್ಯನಾಗಿರುವವನು ; ದುರ್ಜನರ ಸುಖವನ್ನು ಊನಗೊಳಿಸುವವನು.

* * *

744) **ಘೃತಾಶೀಃ** = ಹವ್ಯ-ಕವ್ಯರೂಪವಾದ ತುಪ್ಪದಲ್ಲಿ ಆಸೆಯುಳ್ಳವನು ; ಗೋಪಾಲಕರ ಮನೆಯ ತುಪ್ಪದಲ್ಲಿ ಆಶೆಯುಳ್ಳವನು ; ಪೂರ್ಣಕಾಮನಾದುದರಿಂದ ಕರಗಿಹೋದ ಆಶೆಗಳುಳ್ಳವನು.

ಶಂ. ಭಾ. :–ಆಪ್ತಕಾಮನಾದುದರಿಂದ ಕರಗಿಹೋದ ಆಶೆಗಳುಳ್ಳವನು.

750) **ಪ. ಭ. :–** ತನ್ನ ಗುಣಗಳಿಂದ ಜಗತ್ತನ್ನು ಆಪ್ಯಾಯನಗೊಳಿಸುವುದರಲ್ಲಿ ಅಥವಾ ಗೋಪಾಲಕರ ಗೃಹದಲ್ಲಿದ್ದ ತುಪ್ಪದಲ್ಲಿ ಆಸೆಯುಳ್ಳವನು.

ನಿರುಕ್ತಿ :– **ಗೋಪಾನಾಂ ಸದ್ಮಗವ್ಯೇ ವಾ ಜಗದಾಪ್ಯಾಯನೇನ ವಾ ।**
ಘೃತೇ ತ್ವಾಶಾ ಹಿ ಯಸ್ಯಾಸ್ತಿ ಘೃತಾಶೀಃ ಪರಿಕೀರ್ತಿತಃ ॥

746) **ಸ. ಸಂ. :–** ಹವಿಸ್ಸಿನ ರೂಪವಾದ ತುಪ್ಪದಲ್ಲಿ ಆಶೆಯುಳ್ಳವನು.

* * *

745) **ಅಚಲಃ** = ತನ್ನ ಸ್ವರೂಪ-ಸ್ಥಾನಾದಿಗಳಿಂದ ಚಲಿಸದವನು ; ಮಹಾಪರ್ವತವಿಭೂತಿರೂಪನು ; ಪರ್ವತಸದೃಶನು.

ಶಂ. ಭಾ. :– ತನ್ನ ಸ್ವರೂಪ, ಸಾಮರ್ಥ್ಯ ಅಥವಾ ಜ್ಞಾನಾದಿ ಗುಣಗಳಿಂದ ಚಲಿಸದವನು.

751) **ಪ. ಭ. :–** ದುರ್ಯೋಧನನೇ ಮುಂತಾದ ದುರಾತ್ಮರಿಂದ ಭೇದಿಸಲು ಆಗದವನು.

ನಿರುಕ್ತಿ :– **ದುರ್ಯೋಧನಾದ್ಯಭೇದ್ಯತ್ವಾದಚಲಃ ಪರಿಕೀರ್ತಿತಃ ॥**

747) **ಸ. ಸಂ. :–** ಚಲಿಸದವನು.

* * *

746) **ಚಲಃ** = ಅಚಲನಾಗಿದ್ದರೂ ಅವತಾರರೂಪದಲ್ಲಿ ಚಲಿಸುವವನು ; ಜಗತ್ತಿನ ಚಲನೆಗೆ ಕಾರಣನಾದವನು ; ಚರವಿಭೂತಿಯುಳ್ಳವನು; ವಾಯುರೂಪದಿಂದ ಚಲಿಸುವವನು.

ಶಂ. ಭಾ. :– ವಾಯುರೂಪದಿಂದ ಚಲಿಸುವವನು.

752) **ಪ. ಭ. :–** ಪಾಂಡವರಿಗೋಸ್ಕರ ಸತ್ಯವಚನದಿಂದ ಚಲಿಸಿದವನು.

ನಿರುಕ್ತಿ :– **ಸತ್ಯಾದ್ಯಃ ಪಾಣ್ಡವಾರ್ಥೇ ಹಿ ಚಲತೀತಿ ಚಲಃ ಸ್ಮೃತಃ ॥**

748) **ಸ. ಸಂ. :–** ಚಲಿಸುವವನು.

* * *

ಅಮಾನೀ ಮಾನದೋ ಮಾನ್ಯೋ ಲೋಕಸ್ವಾಮೀ ತ್ರಿಲೋಕಧೃಕ್ ।
ಸುಮೇಧಾ ಮೇಧಜೋ ಧನ್ಯಃ ಸತ್ಯಮೇಧಾ ಧರಾಧರಃ ॥೯೩॥

747) **ಅಮಾನೀ** = ಅಭಿಮಾನವಿಲ್ಲದವನು ; ಅಳತೆಯಿಲ್ಲದವನು.

ಶಂ. ಭಾ. :– ಶುದ್ಧಜ್ಞಾನಸ್ವರೂಪನಾದುದರಿಂದ ಅನಾತ್ಮವಸ್ತುಗಳಲ್ಲಿ ಆತ್ಮಾಭಿಮಾನವಿಲ್ಲದವನು.

753) **ಪ. ಭ. :–** ಭಕ್ತರ ವಿಷಯದಲ್ಲಿ ಅಹಂಕಾರವಿಲ್ಲದವನು. (ಅವರ ದೌತ್ಯ, ಸಾರಥ್ಯ–ಮುಂತಾದುವನ್ನು ಮಾಡಿದವನು.)
ನಿರುಕ್ತಿ :– **ಅಮಾನೀ ಯೋऽನಹಂಕಾರೀ ಭಕ್ತೇಷ್ವೇವ ಸ ಈರಿತಃ ॥**

749) **ಸ. ಸಂ. :–** ವಿಷಯಗಳಲ್ಲಿ ಅಭಿಮಾನವಿಲ್ಲದವನು.

* * *

748) **ಮಾನದಃ** = ಭಕ್ತರಿಗೆ ಬಹುಮಾನಗಳನ್ನು ಕೊಡುವವನು ; ಸಂಸಾರದಲ್ಲಿ ಅಭಿಮಾನವನ್ನು ಉಂಟುಮಾಡುವವನು ; ಮರ್ಯಾದೆ ಯನ್ನು ರಕ್ಷಿಸುವವನು.

ಶಂ. ಭಾ. :– ತನ್ನ ಮಾಯೆಯಿಂದ ಎಲ್ಲರಿಗೂ ಅನಾತ್ಮಗಳಲ್ಲಿ ಆತ್ಮಾಭಿಮಾನವನ್ನು ಉಂಟುಮಾಡುವವನು ; ಸತ್ಕರಿಸುವವನು ; ತತ್ತ್ವಜ್ಞರಿಗೆ ಅನಾತ್ಮಗಳಲ್ಲಿ ಆತ್ಮಾಭಿಮಾನವನ್ನು ಖಂಡಿಸುವವನು.

754) **ಪ. ಭ. :–** ಅರ್ಜುನಾದಿಗಳಿಗೆ ಮಾನವನ್ನೂ–ರಾಜ್ಯವನ್ನೂ ಕೊಟ್ಟವನು.
ನಿರುಕ್ತಿ :– **ಸ ಮಾನದೋऽರ್ಜುನಾದಿಭ್ಯೋ ಮಾನಂ ರಾಜ್ಯಂ ಚ ದತ್ತವಾನ್ ॥**

750) **ಸ. ಸಂ. :–** ರಮಾದೇವಿಗೆ ವಾಯುವನ್ನು ಪುತ್ರನನ್ನಾಗಿ ಕೊಟ್ಟ ವನು ; ಮರ್ಯಾದೆಯನ್ನು ನಡೆಸುವವನು.

* * *

749) **ಮಾನ್ಯಃ** = ಪೂಜ್ಯರಿಗೂ ಪೂಜ್ಯನಾದವನು.

ಶಂ. ಭಾ. :– ಸರ್ವೇಶ್ವರನಾಗಿರುವುದರಿಂದ ಸರ್ವರಿಗೂ ಮಾನನೀಯನಾದವನು.

755) **ಪ. ಭ. :–** ಭಕ್ತರಿಗೆ ಸಂಬಂಧಿಸಿದವನು ಎಂಬುದಾಗಿ ಸಮ್ಮಾನಕ್ಕೆ ಯೋಗ್ಯನಾದವನು.

ನಿರುಕ್ತಿ :– **ಮಾನ್ಯಸ್ತದೀಯವತ್ತ್ವೇ ಸ್ಯಾತ್ಸಮ್ಮನ್ತವ್ಯಃ ಸದೈವ ಸಃ ॥**

751) **ಸ. ಸಂ. :–** ಚೇಷ್ಟೆಯನ್ನು ಮಾಡಿಸಲು ಯೋಗ್ಯನಲ್ಲದವನು. ಜೀವರಾಶಿಯಿಂದ ಭಿನ್ನನಾದವನು ; ರಮಾದೇವಿಯಿಂದ ಭಿನ್ನನಾದವನು.

* * *

750) **ಲೋಕಸ್ವಾಮೀ** = ಸಮಸ್ತಲೋಕಗಳಿಗೂ ಒಡೆಯನು.

ಶಂ. ಭಾ. :– ಚತುರ್ದಶಲೋಕಗಳಿಗೂ ಸ್ವಾಮಿಯು.

756) **ಪ. ಭ. :–** ಸಮಸ್ತಲೋಕಗಳಿಗೂ ನಿರುಪಾಧಿಕಸ್ವಾಮಿಯಾದವನು.

ನಿರುಕ್ತಿ :– **ಲೋಕಭರ್ತೃತಯಾ ಚೈವ ಲೋಕಸ್ವಾಮೀತಿ ಶಬ್ದ್ಯತೇ ॥**

752) **ಸ. ಸಂ. :–** ವೈಕುಂಠವಾಸಿಗಳೇ ಮುಂತಾದವರಿಗೆ ಸ್ವಾಮಿಯಾದವನು.

* * *

751) **ತ್ರಿಲೋಕಧೃಕ್** = ಮೂರು ಲೋಕಗಳನ್ನೂ ಧರಿಸಿರುವವನು.

ಶಂ. ಭಾ. :– ಮೂರುಲೋಕಗಳನ್ನೂ ಧರಿಸಿರುವವನು.

757) **ಪ. ಭ. :– ತ್ರಿಲೋಕಧೃತ್** = ಮೂರು ಲೋಕಗಳನ್ನೂ ಧರಿಸಿರುವವನು.

ನಿರುಕ್ತಿ :– **ಲೋಕತ್ರಯಸ್ಯ ಧರಣಾತ್ಸ ತ್ರಿಲೋಕಧೃಗೀರಿತಃ ॥**

753) **ಸ. ಸಂ. :– ತ್ರಿಲೋಕಧೃಕ್** = ಮೂರು ಲೋಕಗಳನ್ನೂ ಧರಿಸಿರುವವನು.

* * *

752) **ಸುಮೇಧಾಃ** = ಒಳ್ಳೆಯ ಮೇಧಾಶಕ್ತಿಯುಳ್ಳವನು. ಮೇಧಾಹಯಗ್ರೀವ ಮತ್ತು ಮೇಧಾದಕ್ಷಿಣಾಮೂರ್ತಿರೂಪನಾದವನು.

ಶಂ. ಭಾ. :– ಶೋಭನವಾದ ಪ್ರಜ್ಞೆಯುಳ್ಳವನು.

758) **ಪ. ಭ. :–** ಆರಾಧನೆಮಾಡುವವರಲ್ಲಿ ಸುಶೋಭನವಾದ ಬುದ್ಧಿಯುಳ್ಳವನು.

ನಿರುಕ್ತಿ :– **ಬುದ್ಧಿಃ ಸುಶೋಭನಾ ಯಸ್ಯ ಸುಮೇಧಾಃ ಪರಿಕೀರ್ತಿತಃ ।**

754) **ಸ. ಸಂ. :–** ಶೋಭನವಾದ ಮೇಧೆಯುಳ್ಳವನು.

*   *   *

753) **ಮೇಧಜಃ** = ಯಜ್ಞದಲ್ಲಿ ಹುಟ್ಟುವವನು (ಪ್ರಕಟವಾಗುವವನು); ಮೇಧಾಶಕ್ತಿಯಿಂದ ಆವಿರ್ಭವಿಸುವವನು.

ಶಂ. ಭಾ. :– ಯಜ್ಞದಲ್ಲಿ ಪ್ರಕಟವಾಗುವವನು.

759) **ಪ. ಭ. :–** ದೇವಕಿಯು ಮಾಡಿದ ಪುತ್ರಕಾಮವ್ರತರೂಪವಾದ ಯಜ್ಞದಲ್ಲಿ ಜನಿಸಿದವನು.

ನಿರುಕ್ತಿ :– ದೇವಕೀಕೃತಪುತ್ರೀಯವ್ರತಯಜ್ಞೇ ಚ ಯಸ್ಯ ವೈ ।
ಜನಿಸ್ತು ಮೇಧಜಃ ಸಃ ಸ್ಯಾತ್ಸಪ್ತಾರ್ಣಃ ಪುತ್ರದಾಯಕಃ ॥

'ಓಂ ಮೇಧಜಾಯ ನಮಃ'–ಎಂಬ ನಾಮಮಂತ್ರಜಪವು ಪುತ್ರಸಂತಾನದಾಯಕವಾದುದು.

755) **ಸ. ಸಂ. :–** ಯಜ್ಞದಲ್ಲಿ ಹುಟ್ಟಿದವನು.

*   *   *

754) **ಧನ್ಯಃ** = ಸುಕೃತಿಯು ; ಕೃತಾರ್ಥನಾದವನು.

ಶಂ. ಭಾ. :– ಧನ್ಯನು ; ಕೃತಾರ್ಥನು.

760) **ಪ. ಭ. :–** ದೇವಕಿಯಲ್ಲಿ ಜನನವೆಂಬ ಧನಲಾಭವುಳ್ಳವನು.

ನಿರುಕ್ತಿ :– ಧನ್ಯಸ್ತು ದೇವಕೀಜನ್ಮಧನಲಾಭಾದಿತಿ ಸ್ಮೃತಃ ॥

756) **ಸ. ಸಂ. :–** ಸುಕೃತವುಳ್ಳವನು ; ಧನವನ್ನು ಹೊಂದಿಸುವವನು.

*   *   *

755) **ಸತ್ಯಮೇಧಾಃ** = ಅಮೋಘವಾದ ಮೇಧೆಯುಳ್ಳವನು.

ಶಂ. ಭಾ. :– ಅಮೋಘವಾದ ಮೇಧೆಯುಳ್ಳವನು.

761) **ಪ. ಭ. :–** ಗೋಪಿಯರು, ವಸುದೇವ–ಇವರೇ ಮುಂತಾದವರೊಡನೆ ಸಜಾತೀಯನೆಂಬ ಅಭಿಮಾನವುಳ್ಳ ಮೇಧೆಯು ಯಾವನಿಗೆ ಸತ್ಯವಾಗಿದೆಯೋ ಅವನು. **ಯದಿ ವೋऽಸ್ತಿ ಮಯಿ ಪ್ರೀತಿಃ ಶ್ಲಾಘ್ಯೋऽ**

ಹಂ ಭವತಾಂ ಯದಿ । ತದಾತ್ಮಬುದ್ಧಿಸದೃಶೀ ಬುದ್ಧಿರ್ವಃ ಕ್ರಿಯತಾಂ ಮಯಿ ॥ (ವಿ. ಪು. ೫-೧೩-೧)

ನಿರುಕ್ತಿ :– ವಲ್ಲವೀವಸುದೇವಾದಿಸಾಜಾತ್ಯಸ್ಯಾಭಿಮಾನಿನೀ ।
ಮೇಧಾ ಯಸ್ಯಾಸ್ತಿ ಸತ್ಯಾ ಸಃ ಸತ್ಯಮೇಧಾಃ ಪ್ರಕೀರ್ತಿತಃ ॥

757) **ಸ. ಸಂ.** :– ಸತ್ಯವಾದ ಮೇಧೆಯುಳ್ಳವನು ; ಜಗದ್ವಿಷಯವಾದ ಸತ್ಯದಲ್ಲಿ ಮೇಧೆಯುಳ್ಳವನು. (ಜ್ಞಾನವುಳ್ಳವನು.)

* * *

756) **ಧರಾಧರಃ** = ಭೂಮಿಯನ್ನು ಧರಿಸಿರುವವನು.

ಶಂ. ಭಾ. :– ಶೇಷನಾಗನೇ ಮುಂತಾದ ತನ್ನ ಸಂಪೂರ್ಣಾಂಶಗಳಿಂದ ಸಮಸ್ತಭೂಮಿಯನ್ನೂ ಧರಿಸಿರುವವನು.

762) **ಪ. ಭ.** :– ಗೋವರ್ಧನಪರ್ವತವನ್ನು ಶೀಘ್ರವಾಗಿ ಧರಿಸಿದವನು.

ನಿರುಕ್ತಿ :– ಧರಂ ಗೋವರ್ಧನಂ ಶೀಘ್ರಂ ಧೃತವಾನ್ಸ ಧರಾಧರಃ ।

758) **ಸ. ಸಂ.** :– ಧರೆಯನ್ನು ಧರಿಸಿದವನು ; ಯಾವನ ಶಕ್ತಿಯಿಂದ ಮೇರು-ಮಂದರಾದಿ ಪರ್ವತಗಳು ಚೆನ್ನಾಗಿ ಧರಿಸಿವೆಯೋ–ಅವನು.

* * *

ತೇಜೋವೃಷೋ ದ್ಯುತಿಧರಃ ಸರ್ವಶಸ್ತ್ರಭೃತಾಂ ವರಃ ।
ಪ್ರಗ್ರಹೋ ನಿಗ್ರಹೋ ವ್ಯಗ್ರೋ ನೈಕಶೃಙ್ಗೋ ಗದಾಗ್ರಜಃ ॥೯೪॥

757) **ತೇಜೋವೃಷಃ** = ತೇಜಸ್ಸನ್ನು ಮಳೆಯಂತೆ ಚೆಲ್ಲುವವನು ; ಆದಿತ್ಯರೂಪದಿಂದ ಜಲವನ್ನು ವರ್ಷಿಸುವವನು.

ಶಂ. ಭಾ. :– ಆದಿತ್ಯರೂಪದಿಂದ ಯಾವಾಗಲೂ ಜಲವನ್ನು ವರ್ಷಿಸುವವನು.

763) **ಪ. ಭ.** :– ಸ್ನೇಹಿತರ ರಕ್ಷಣೆಯೆಂಬ ತೇಜಸ್ಸನ್ನು ಯಾವಾಗಲೂ ಚೆಲ್ಲುವವನು.

ನಿರುಕ್ತಿ :– ತೇಜೋಽಭಿವರ್ಷತಿ ಯತಃ ಸುಹೃತ್ಪಾಲನಲಕ್ಷಣಮ್ ।
ತೇಜೋವೃಷಃ ಸಮಾಖ್ಯಾತಃ ವಸ್ವರ್ಣೋ ಮಿತ್ರವೃದ್ಧಿದಃ ॥

'ಓಂ ತೇಜೋವೃಷಾಯ ನಮಃ'–ಎಂಬ ಈ ನಾಮಮಂತ್ರಜಪವು ಮಿತ್ರರನ್ನು ಹೆಚ್ಚಿಸುತ್ತದೆ.

759) ಸ. ಸಂ. :– ತೇಜೋರೂಪರಾದ ಸೂರ್ಯನೇ ಮುಂತಾದವರಲ್ಲಿ ಶ್ರೇಷ್ಠನಾದವನು ; ಆದಿತ್ಯನಲ್ಲಿರುವ ತೇಜಸ್ಸಿನಿಂದ ಮಳೆ ಸುರಿಯುವಿಕೆಗೆ ಕಾರಣನಾದವನು. ಆದಿತ್ಯಾಜ್ಜಾಯತೇ ವೃಷ್ಟಿಃ ॥

* * *

758) ದ್ಯುತಿಧರಃ = ಎಲ್ಲರ ಕಾಂತಿಯನ್ನೂ ಮೀರಿಸಿದ ಕಾಂತಿಯನ್ನು ಧರಿಸಿರುವವನು.

ಶಂ. ಭಾ. :– ದೇಹಕಾಂತಿಯನ್ನು ಧರಿಸಿರುವವನು.

764) ಪ. ಭ. :– ಇಂದ್ರನೇ ಮುಂತಾದವರನ್ನು ತಿರಸ್ಕರಿಸುವ ಅತಿಮಾನುಷವಾದ ಕಾಂತಿಯನ್ನು ಬಾಲ್ಯದಲ್ಲಿಯೂ ಧರಿಸಿದ್ದವನು.

ನಿರುಕ್ತಿ : ಅಮಾನುಷೀಂ ಯೋ ಧೃತವಾನ್ದ್ಯುತಿಮೈನ್ದ್ರಾದಿ ಭಾವುಕಾಮ್।
ಖ್ಯಾತಃ ಸ ಹಿ ದ್ಯುತಿಧರಃ ವಸ್ವರ್ಣಃ ಕಾನ್ತಿದೋ ಮನುಃ ॥

'ಓಂ ದ್ಯುತಿಧರಾಯ ನಮಃ'–ಎಂಬ ಈ ನಾಮಮಂತ್ರಜಪವು ದೇಹದ ಕಾಂತಿಯನ್ನು ಹೆಚ್ಚಿಸುತ್ತದೆ.

760) ಸ. ಸಂ. :– ಕಾಂತಿಯನ್ನು ಧರಿಸಿರುವವನು.

* * *

759) ಸರ್ವಶಸ್ತ್ರಭೃತಾಂ ವರಃ = ಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ ಶ್ರೀರಾಮರೂಪಿಯು.

ಶಂ. ಭಾ. :– ಎಲ್ಲ ಶಸ್ತ್ರಧಾರಿಗಳಲ್ಲಿಯೂ ಶ್ರೇಷ್ಠನಾದವನು.

765) ಪ. ಭ. :– ನರಕಾಸುರ-ಜರಾಸಂಧರೇ ಮುಂತಾದವರೊಡನೆ ಯುದ್ಧಮಾಡಿದಾಗ ಎಲ್ಲ ಶಸ್ತ್ರಧಾರಿಗಳಲ್ಲಿಯೂ ಶ್ರೇಷ್ಠನೆಂದು ಸರ್ವಲೋಕಗಳಲ್ಲಿಯೂ ಪ್ರಸಿದ್ಧನಾದವನು.

ನಿರುಕ್ತಿ :– ಜರಾಸನ್ಧಾದಿಸಮರೇ ಶ್ರೇಷ್ಠಃ ಶಸ್ತ್ರಭೃತಾಂ ಚ ಯಃ ।
ಸ ಖ್ಯಾತಃ ಸರ್ವಲೋಕೇಷು ಸರ್ವಶಸ್ತ್ರಭೃತಾಂ ವರಃ ॥

761) **ಸ. ಸಂ. :–** ಸರ್ವಶಸ್ತ್ರಧಾರಿಗಳಲ್ಲಿಯೂ ಶ್ರೇಷ್ಠನಾದ ಶ್ರೀ ರಾಮನು ; ಎಲ್ಲರ ದೆಸೆಯಿಂದಲೂ ಕಾಪಾಡುವವನು ಮತ್ತು ಆಕಾಶವನ್ನು ಧರಿಸಿರುವವನು.

*　　　*　　　*

760) **ಪ್ರಗ್ರಹಃ** = ಸಂಸಾರಪಾಶಸ್ವರೂಪನು ; ಇಂದ್ರಿಯಗಳೆಂಬ ಕುದುರೆಗಳನ್ನು ಕಟ್ಟಿಹಾಕುವವನು ; ರಜ್ಜುಸ್ವರೂಪನು. ನೆಚ್ಚಿದ ಭಕ್ತರನ್ನು ಚೆನ್ನಾಗಿ ಹಿಡಿದುಕೊಳ್ಳುವವನು ; ಕಡಿವಾಣವನ್ನು ಧರಿಸಿದವನು.

ಶಂ. ಭಾ. :– ಭಕ್ತರು ಸಮರ್ಪಿಸುವ ಪತ್ರ-ಪುಷ್ಪಾದಿಗಳನ್ನು ಚೆನ್ನಾಗಿ ಸ್ವೀಕರಿಸುವವನು. ವಿಷಯಗಳೆಂಬ ಕಾಡಿನಲ್ಲಿ ಓಡುತ್ತಿರುವ ಪಳಗದೇ ಇರುವ ಇಂದ್ರಿಯಗಳೆಂಬ ಕುದುರೆಗಳನ್ನು ತನ್ನ ಪ್ರಸಾದವೆಂಬ ಲಗಾಮಿನಿಂದ ಕಟ್ಟಿಹಾಕುವವನು.

766) **ಪ. ಭ. :–** ಹಗ್ಗಗಳಿಂದ ಹೇಗೋ–ಹಾಗೆ ಸಾರಥಿಯಾದ ಯಾವನಿಂದ ಅರ್ಜುನನು ಕಟ್ಟಿಹಾಕಲ್ಪಟ್ಟನೋ–ಅವನು.

ನಿರುಕ್ತಿ :– **ಪಾರ್ಥಃ ಸಾರಥಿನಾನೇನ ರಶ್ಮಿಭಿರ್ಯಃ ಪ್ರಗೃಹ್ಯತೇ ।**
ಸ ಪ್ರಗ್ರಹಃ ಸಮಾಖ್ಯಾತಃ ಸಪ್ತವರ್ಣ ಉದಾಹೃತಃ ॥

762) **ಸ. ಸಂ. :–** ಶ್ರೇಷ್ಠವಾದ ನವಗ್ರಹಗಳುಳ್ಳವನು. ಶ್ರೇಷ್ಠವಾದ ಗ್ರಹಗಳೆಂಬ ಸೋಮಪಾತ್ರೆಗಳುಳ್ಳವನು ; ಶ್ರೇಷ್ಠರಾದವರನ್ನು ಮಾತ್ರ ಪರಿಗ್ರಹಿಸುವವನು.

*　　　*　　　*

761) **ನಿಗ್ರಹಃ** = ಶತ್ರುಗಳನ್ನು ನಿಗ್ರಹಿಸುವವನು.

ಶಂ. ಭಾ. :– ಎಲ್ಲವನ್ನೂ ತನ್ನ ಅಧೀನದಲ್ಲಿ ಹೊಂದಿ ನಿಗ್ರಹಿಸು ವವನು.

767) **ಪ. ಭ. :–** ಅರ್ಜುನನ ಪೌರುಷವನ್ನು ಅಪೇಕ್ಷಿಸದೇ ತನ್ನ ಸಾರಥ್ಯದ ವೈಚಿತ್ರ್ಯದಿಂದ ಶತ್ರುಗಳನ್ನು ನಿಗ್ರಹಿಸಿದವನು.

ನಿರುಕ್ತಿ :– **ಯೇನ ಸಾರಥ್ಯವೈಚಿತ್ರ್ಯಾನ್ನಿಗೃಹ್ಯನ್ತೇಽತ್ರ ಶತ್ರವಃ ।**
ಸ ನಿಗ್ರಹಃ ಸಮಾಖ್ಯಾತಃ ಸಪ್ತಾರ್ಣಃ ಶತ್ರುನಾಶಕಃ ॥

'**ಓಂ ನಿಗ್ರಹಾಯ ನಮಃ**'–ಎಂಬ ಈ ನಾಮಮಂತ್ರಜಪವು ಶತ್ರುಗಳನ್ನು ನಾಶಗೊಳಿಸುತ್ತದೆ.

763) **ಸ. ಸಂ. :–** ದೈತ್ಯರನ್ನು ನಿಗ್ರಹಿಸುವವನು.

* * *

762) **ವ್ಯಗ್ರಃ** = (ಭಕ್ತರ ರಕ್ಷಣೆಯಲ್ಲಿ) ಅತ್ಯಂತಾಸಕ್ತನಾದವನು. **ಅವ್ಯಗ್ರಃ** = ಸ್ವಾನಂದದಲ್ಲಿ ಸಂತೃಪ್ತನಾದುದರಿಂದ ಅನಾಸಕ್ತನಾದವನು ; ಚಿಂತೆಯಿಲ್ಲದವನು.

ಶಂ. ಭಾ. :– ಅಂತವು ಅಥವಾ ನಾಶವಿಲ್ಲದವನು ; ಭಕ್ತರ ಇಷ್ಟಾರ್ಥಗಳನ್ನು ಅನುಗ್ರಹಿಸುವ ವಿಷಯದಲ್ಲಿ ಸಂಲಗ್ನನಾಗಿರುವವನು.

768) **ಪ. ಭ. :–** ಪಾರ್ಥನು ಶತ್ರುಗಳನ್ನು ನಿಗ್ರಹಿಸುವ ಸಂದರ್ಭದಲ್ಲಿ ಅವನ ಯುದ್ಧಕ್ರಮವನ್ನು ಸಹಿಸದೇ ಯುದ್ಧದಲ್ಲಿ ತಾನೇ ಆಸಕ್ತನಾದವನು.

ನಿರುಕ್ತಿ :– **ಯುದ್ಧಕ್ರಮಾಸಹಿಷ್ಣುತ್ವಾತ್ಪಾರ್ಥವಿದ್ವಿಡ್ವಿನಿಗ್ರಹೇ ।**
ಯೋಽಸೌ ವ್ಯಗ್ರಃ ಸಮಾಖ್ಯಾತಃ ಷಡರ್ಣೋ ವೈರಿನಾಶಕಃ ॥

'**ಓಂ ವ್ಯಗ್ರಾಯ ನಮಃ**'–ಎಂಬ ಈ ನಾಮಮಂತ್ರಜಪವು ಶತ್ರುನಾಶಕವಾದುದು.

764) **ಸ. ಸಂ. :–** **ಅವ್ಯಗ್ರಃ** = ಚಿಂತಾಕುಲನಾಗದವನು. **ವ್ಯಗ್ರಃ** = ಯಾವನ ಅಗ್ರದಲ್ಲಿ ಗರುಡನಿದ್ದಾನೆಯೋ–ಅವನು.

* * *

763) **ನೈಕಶೃಙ್ಗಃ** = ಅನೇಕಶೃಂಗಗಳುಳ್ಳವನು ; ಪ್ರಣವಸ್ವರೂಪಿಯು ; ಅಗ್ನಿರೂಪಿಯು.

ಶಂ. ಭಾ. :– ಅನೇಕಶೃಂಗಗಳುಳ್ಳವನು. **ಚತ್ವಾರಿ ಶೃಙ್ಗಾ ತ್ರಯೋ ಅಸ್ಯ ಪಾದಾಃ ।** (ಮಹಾ. ನಾ. ೧೨-೨೭)

769) **ಪ. ಭ. :–** ಬುದ್ಧಿಯೋಗ (ಸಲಹೆಗಳನ್ನು ನೀಡುವುದು), ಸಾರಥ್ಯ (ನೈಪುಣ್ಯದಿಂದ ರಥವನ್ನು ನಡೆಸುವುದು), 'ಆಯುಧವನ್ನು

ಧರಿಸುವುದಿಲ್ಲ'–ಎಂದು ನೆಪಮಾತ್ರಕ್ಕೆ ಪ್ರತಿಜ್ಞೆಯನ್ನು ಮಾಡಿ ಕಾಲಬಂದಾಗ ಆಯುಧಗಳನ್ನು ಧರಿಸುವುದು–ಇತ್ಯಾದಿಯಾಗಿ ಶತ್ರುಗಳನ್ನು ಬಾಧಿಸುವ ಅನೇಕಶೃಂಗಗಳನ್ನು (ಶತ್ರುಹಿಂಸಕವಿಧಾನಗಳನ್ನು) ಮಾಡಿದವನು.

ನಿರುಕ್ತಿ :– **ಯಸ್ಯ ಸ್ಯಾನ್ನೈಕಶೃಙ್ಗಃ ಸಃ ಬಹುಶೋ ವೈರಿಬಾಧಕಂ ॥**

765) **ಸ. ಸಂ. :–** ಏಕಶೃಂಗವುಳ್ಳ ಪರಮಪುರುಷನು. ವರಾಹ ಸ್ವಾಮಿಯು. **ಏಕಶೃಙ್ಗಃ ಪುರಾ ಭೂತ್ವಾ ವರಾಹೋ ನನ್ದಿವರ್ಧನಃ ॥ಇಮಾಂ ಚೋದ್ಧೃತವಾನ್ಭೂಮಿಮೇಕಶೃಙ್ಗಸ್ತತೋ ಹ್ಯಯಮ್ ॥**

* * *

764) **ಗದಾಗ್ರಜಃ** = ಗದನಿಗೆ ಅಣ್ಣನಾದವನು.

ಶಂ. ಭಾ. :– ನಿಗದದಿಂದ (ಮಂತ್ರದಿಂದ) ಮೊದಲೇ ಪ್ರಕಟನಾಗು ವವನು. ಗದನಿಗೆ ಅಣ್ಣನಾದವನು.

770) **ಪ. ಭ. :–** ಗದ ಎನ್ನುವವನಿಗೆ ಅಣ್ಣನಾದವನು. (ವಸುದೇವನ ಹೆಂಡತಿಯಾದ ಸುನಾಮಾ ಎಂಬುವವಳ ಪುತ್ರನಾದ ಗದನಿಗೆ ಅಣ್ಣನಾದ ವನು.)

ನಿರುಕ್ತಿ :– **ಗದನಾಮ್ನೋ ಹ್ಯಗ್ರಜತ್ವಾದ್ಗದಾಗ್ರಜ ಇತೀರಿತಃ ॥**

766) **ಸ. ಸಂ. :–** ಕೃಷ್ಣಾವತಾರದಲ್ಲಿ ಗದನು ಯಾವನಿಗೆ ಅಣ್ಣನಾಗಿ ದ್ದನೋ–ಅವನು. **ಅಗದಾಗ್ರಜಃ** = ರೋಗಶೂನ್ಯರಾದ ಬ್ರಾಹ್ಮಣರು ಯಾವ ನಿಂದ ಹಾಗೆ ಅಗದರಾದರೋ (ನೀರೋಗಿಗಳಾದರೋ) ಅವನು.

* * *

ಚತುರ್ಮೂರ್ತಿಶ್ಚತುರ್ಬಾಹುಶ್ಚತುರ್ವ್ಯೂಹಶ್ಚತುರ್ಗತಿಃ ।
ಚತುರಾತ್ಮಾ ಚತುರ್ಭಾವಶ್ಚತುರ್ವೇದವಿದೇಕಪಾತ್ ॥೯೫॥

765) **ಚತುರ್ಮೂರ್ತಿಃ** = ಕೃತಯುಗಾದಿಗಳ ಭೇದಕ್ಕೆ ಅನುಗುಣವಾಗಿ ಕ್ರಮವಾಗಿ ಬಿಳುಪು, ಕೆಂಪು, ಹಳದಿ ಮತ್ತು ಕಪ್ಪುಬಣ್ಣಗಳ ಮೂರ್ತಿ ಗಳುಳ್ಳವನು. ವಿಶ್ವ, ತೈಜಸ, ಪ್ರಾಜ್ಞ ಮತ್ತು ತುರೀಯಗಳೆಂಬ ನಾಲ್ಕು ಮೂರ್ತಿಗಳುಳ್ಳವನು.

ಶಂ. ಭಾ. :– ವಿರಾಟ್, ಸೂತ್ರಾತ್ಮಾ, ಅವ್ಯಾಕೃತ ಮತ್ತು ತುರೀಯ ಗಳೆಂಬ ನಾಲ್ಕು ಮೂರ್ತಿಗಳುಳ್ಳವನು ; ಶುಕ್ಲ-ರಕ್ತ-ಪೀತ-ಕೃಷ್ಣವರ್ಣಗಳ ನಾಲ್ಕು ಮೂರ್ತಿಗಳುಳ್ಳವನು.

771) **ಪ. ಭ. :–** ಬಲಭದ್ರ, ವಾಸುದೇವ, ಅನಿರುದ್ಧ ಮತ್ತು ಪ್ರದ್ಯುಮ್ನ–ಎಂಬ ನಾಲ್ಕು ಮೂರ್ತಿಗಳುಳ್ಳವನು. (ವಿಭವಾವತಾರಗಳ ಲ್ಲಿಯೂ ಕೂಡ ಮೂಲವ್ಯೂಹದ ನೆನಪು ತರುವ ನಾಲ್ಕು ರೂಪಗಳುಳ್ಳ ವನು.)

ನಿರುಕ್ತಿ :– **ಬಲಭದ್ರೋ ವಾಸುದೇವಃ ಪ್ರದ್ಯುಮ್ನಶ್ಚಾನಿರುದ್ಧಕಃ ।**
ಚತಸ್ರೋ ಮೂರ್ತಯೋ ಯಸ್ಯ ಚ
ಚತುರ್ಮೂರ್ತಿರುಚ್ಯತೇ ॥

767) **ಸ. ಸಂ. :–** ವಿಶ್ವ-ತೈಜಸ-ಪ್ರಾಜ್ಞ-ತುರೀಯಗಳೆಂಬ ನಾಲ್ಕು ಮೂರ್ತಿಗಳುಳ್ಳವನು.

* * *

766) **ಚತುರ್ಬಾಹುಃ** = ನಾಲ್ಕು ತೋಳುಗಳುಳ್ಳವನು.

ಶಂ. ಭಾ. :– ನಾಲ್ಕು ತೋಳುಗಳುಳ್ಳ ವಾಸುದೇವಮೂರ್ತಿಯು.

772) **ಪ. ಭ. :–** ವ್ಯೂಹಕ್ಕೆ ಮೂಲವಾದ ಪರಾವಸ್ಥೆಯನ್ನು ಹೇಳುವ ನಿರುಪಾಧಿಕವಾದ ರೂಪದಿಂದ ದೇವಕಿಯಲ್ಲಿ ನಾಲ್ಕು ಬಾಹುಗಳೊಡನೆ ಅವತರಿಸಿದವನು.

ನಿರುಕ್ತಿ :– **ವ್ಯೂಹಮೂಲಪರಾವಸ್ಥಾನಿರುಪಾಧಿಕರೂಪತಃ ।**
ಚತ್ವಾರೋ ಬಾಹವೋ ಯಸ್ಯ ಸ ಚತುರ್ಬಾಹುರುಚ್ಯತೇ ॥

768) **ಸ. ಸಂ. :– ಚತುರ್ಬಾಹುಶ್ಚತುರ್ವ್ಯೂಹಃ = ಚತುರ್ಬಾಹುಃ** = ನಾಲ್ಕು ತೋಳುಗಳುಳ್ಳವನು ; ಯಾವನಿಂದ ಮುಕ್ತಾತ್ಮರಿಗೆ ನಾಲ್ಕು ತೋಳು ಗಳು ಪ್ರಾಪ್ತವಾಗುವುವೋ ಅವನು. (ಕೇಶವನೇ ಮುಂತಾದ ಇಪ್ಪತ್ತುನಾಲ್ಕು ರೂಪಗಳಲ್ಲಿ ಕೇಶವಾದಿಯಾದ ಆರು, ತ್ರಿವಿಕ್ರಮಾದಿಯಾದ ಆರು, ಸಂಕರ್ಷಣಾದಿಯಾದ ಆರು, ನಾರಸಿಂಹಾದಿಯಾದ ಆರು–ಹೀಗೆ ನಾಲ್ಕು ವ್ಯೂಹಗಳುಳ್ಳವನು. **ಚತುರ್ಬಾಹುಶ್ಚತುರ್ವ್ಯೂಹಃ** ಎಂಬುದು ಒಂದೇ ನಾಮ.)

* * *

767) **ಚತುರ್ವ್ಯೂಹಃ** = ವಾಸುದೇವ, ಸಂಕರ್ಷಣ, ಅನಿರುದ್ಧ, ಪ್ರದ್ಯುಮ್ನ–ಎಂಬ ನಾಲ್ಕು ವ್ಯೂಹಗಳುಳ್ಳವನು.

ಶಂ. ಭಾ. :– ಶರೀರಪುರುಷ, ಛಂದಃಪುರುಷ, ವೇದಪುರುಷ ಮತ್ತು ಮಹಾಪುರುಷರೆಂಬ ನಾಲ್ಕು ಪುರುಷವ್ಯೂಹಗಳುಳ್ಳವನು. **ಶರೀರಪುರುಷ ಶ್ಛನ್ದಃಪುರುಷೋ ವೇದಪುರುಷೋ ಮಹಾಪುರುಷಃ ॥ (ಐ. ಆ.)**

773) **ಪ. ಭ. :–** ಸಮಸ್ತಷಡ್ಗುಣಗಳಿಂದ ಕೂಡಿದ ವಾಸುದೇವ ಮತ್ತು ವ್ಯಸ್ತವಾದ (ಬಿಡಿ-ಬಿಡಿಯಾದ) ಆರು ಗುಣಗಳಿಂದ ಕೂಡಿದ ಸಂಕ ರ್ಷಣ, ಪ್ರದ್ಯುಮ್ನ, ಅನಿರುದ್ಧ–ಎಂಬ ನಾಲ್ಕು ವ್ಯೂಹಾವಸ್ಥೆಗಳುಳ್ಳವನು.

ನಿರುಕ್ತಿ :– **ಸಮಸ್ತವ್ಯಸ್ತಷಾಡ್ಗುಣ್ಯವ್ಯೂಹಾವಸ್ಥಾಚತುಷ್ಟಯಃ ।**
ಚತುರ್ವ್ಯೂಹ ಇತಿ ಖ್ಯಾತಃ ಚತುರ್ವರ್ಗಪ್ರದೋ ಮನುಃ ॥

'ಓಂ ಚತುರ್ವ್ಯೂಹಾಯ ನಮಃ'–ಎಂಬ ಈ ನಾಮಮಂತ್ರಜಪವು ನಾಲ್ಕು ಪುರುಷಾರ್ಥಗಳನ್ನೂ ಕೊಡುತ್ತದೆ.

* * *

768) **ಚತುರ್ಗತಿಃ** = ನಾಲ್ಕು ಪುರುಷಾರ್ಥಗಳನ್ನೂ ಪಡೆಯಲು ಗತಿಯಾದವನು ; ಆರ್ತ, ಜಿಜ್ಞಾಸು, ಅರ್ಥಾರ್ಥೀ ಮತ್ತು ಜ್ಞಾನೀ–ಎಂಬ ನಾಲ್ಕು ಬಗೆಯ ಭಕ್ತರಿಗೂ ಗತಿಯಾದವನು ; ನಾಲ್ಕು ವರ್ಣಗಳಿಗೂ ಮತ್ತು ನಾಲ್ಕು ಆಶ್ರಮಗಳಿಗೂ ಏಕಮಾತ್ರಲಕ್ಷ್ಯನಾದವನು.

ಶಂ. ಭಾ. :– ವಿಧಿಗೆ ಅನುಸಾರವಾಗಿ ನಡೆಯುವ ನಾಲ್ಕು ಆಶ್ರಮಗಳಿಗೆ ಮತ್ತು ನಾಲ್ಕು ವರ್ಣಗಳಿಗೆ ಗತಿಯಾದವನು.

774) **ಪ. ಭ. :–** ಉಪಾಸಕರ ಮಟ್ಟಕ್ಕೆ ಅನುಗುಣವಾಗಿ ನಾಲ್ಕು ಪುರುಷಾರ್ಥಗಳ ಪ್ರಾಪ್ತಿಗಳುಳ್ಳವನು.

ನಿರುಕ್ತಿ :– **ಚತಸ್ರಃ ಪ್ರಾಪ್ತಯೋ ಯಸ್ಮಿನ್ಭಕ್ತಾನಾಂ ಸ ಚತುರ್ಗತಿಃ ॥**

769) **ಸ. ಸಂ. :–** ಆರ್ತ, ಜಿಜ್ಞಾಸು, ಅರ್ಥಾರ್ಥೀ ಮತ್ತು ಜ್ಞಾನೀ–ಎಂಬ ನಾಲ್ವರಿಗೂ ಗತಿಯಾದವನು.

* * *

769) **ಚತುರಾತ್ಮಾ** = ಪರಮಾತ್ಮಾ, ಜೀವ, ಮನಸ್ಸು ಮತ್ತು ಅಹಂಕಾರ–ಎಂಬ ನಾಲ್ಕು ರೂಪಗಳುಳ್ಳವನು.

ಶಂ. ಭಾ. :– ರಾಗ-ದ್ವೇಷಾದಿರಹಿತನಾಗಿರುವುದರಿಂದ ಚತುರವಾದ ಮನಸ್ಸುಳ್ಳವನು ; ಮನಸ್ಸು, ಬುದ್ಧಿ, ಅಹಂಕಾರ ಮತ್ತು ಚಿತ್ತಗಳೆಂಬ ನಾಲ್ಕು ಅಂತಃಕರಣಗಳಿಂದ ಕೂಡಿದವನು.

775) **ಪ. ಭ. :–** ಸ್ಥೂಲ-ಸೂಕ್ಷ್ಮಗಳಾದ ಜಾಗ್ರತ್, ಸ್ವಪ್ನ, ಸುಷುಪ್ತಿ ಮತ್ತು ಸಮಾಧಿಗಳಿಗೆ ಅನುಗುಣವಾಗಿ ನಾಲ್ಕು ರೂಪಗಳಿಂದ ಪ್ರಕಟವಾಗುವವನು.

ನಿರುಕ್ತಿ :– **ಸ್ಥೂಲಸೂಕ್ಷ್ಮೇ ಜಾಗ್ರದಾದೌ ಚಾತುರಾತ್ಮ್ಯಪ್ರಕಾಶನಾತ್ ।**
ಚತುರಾತ್ಮಾ ಸ ವಿಜ್ಞೇಯಃ ವಸ್ವರ್ಣೋ ಮನುರುತ್ತಮಃ ॥

770) **ಸ. ಸಂ. :–** ಜನರ ಯೋಗ್ಯತೆಯನ್ನು ಅನುಸರಿಸಿ ಧರ್ಮಾರ್ಥ-ಕಾಮ-ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳಲ್ಲಿ ಮನಸ್ಸು ಯಾವನಿಂದ ಉಂಟಾಗುವುದೋ–ಅವನು.

*　　*　　*

770) **ಚತುರ್ಭಾವಃ** = ವ್ಯೂಹ, ವಿಭವ, ಅಂತರ್ಯಾಮೀ ಮತ್ತು ಅರ್ಚಾಮೂರ್ತಿಗಳೆಂಬ ನಾಲ್ಕು ಭಾವಗಳಲ್ಲಿರುವವನು ; ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ ಮತ್ತು ಸಾಯುಜ್ಯಗಳೆಂಬ ನಾಲ್ಕು ಮೋಕ್ಷಭಾವಗಳಲ್ಲಿರುವವನು.

ಶಂ. ಭಾ. :– ಧರ್ಮಾರ್ಥ-ಕಾಮ-ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳು ಯಾವನಿಂದ ಪ್ರಕಟವಾಗುತ್ತವೆಯೋ–ಅವನು.

776) **ಪ. ಭ. :–** ಚತುರ್ವ್ಯೂಹಗಳಿಂದ ಉಂಟಾದ ಜಗತ್ತಿನ ಸೃಷ್ಟಿ-ಸ್ಥಿತಿ-ಲಯವ್ಯಾಪಾರಗಳು ಮತ್ತು ಶಾಸ್ತ್ರಪ್ರದಾನಗಳೆಂಬ (ಸ್ಥೂಲ-ಸೂಕ್ಷ್ಮಗಳ ಪ್ರಯೋಜನವುಳ್ಳ) ನಾಲ್ಕು ಭಾವಗಳ (ಅಭಿವ್ಯಕ್ತಿ) ಗಳುಳ್ಳವನು.

ನಿರುಕ್ತಿ :– **ಶಾಸ್ತ್ರದಾನಾದಿಪುಞ್ಜಾಭಿವ್ಯಞ್ಜನಾತ್ಸ್ಥೂಲಸೂಕ್ಷ್ಮಯೋಃ ।**
ಚತುರ್ಭಾವಃ ಸಮಾಖ್ಯಾತಃ ಮುನ್ಯರ್ಣಶ್ಚ ಗತಿಪ್ರದಃ ॥

'**ಓಂ ಚತುರ್ಭಾವಾಯ ನಮಃ**'–ಎಂಬ ನಾಮಮಂತ್ರಜಪವು ಸದ್ಗತಿಪ್ರದವಾದುದು.

771) **ಸ. ಸಂ. :–** ಬ್ರಾಹ್ಮಣಾದಿ ನಾಲ್ಕು ವರ್ಣಗಳನ್ನು ಭಾವಿಸುವವನು. (ಉತ್ಪಾದನೆ ಮಾಡುವವನು.)

*　　　*　　　*

771) **ಚತುರ್ವೇದವಿತ್**=ನಾಲ್ಕು ವೇದಗಳನ್ನೂ–ವೇದಾರ್ಥಗಳನ್ನೂ ಪ್ರಾಮಾಣಿಕವಾಗಿ ಮತ್ತು ಸಂಪೂರ್ಣವಾಗಿ ತಿಳಿದವನು.

ಶಂ. ಭಾ. :– ನಾಲ್ಕು ವೇದಗಳ ಅರ್ಥಗಳನ್ನೂ ತಿಳಿದವನು.

777) **ಪ. ಭ. :–** ನಾಲ್ಕು ವೇದಗಳಿಂದ ಅಥವಾ ನಾಲ್ಕು ವೇದಗಳನ್ನು ಅಧ್ಯಯನಮಾಡಿದವರಿಂದ ತಿಳಿಯಲ್ಪಡುವವನು.

ನಿರುಕ್ತಿ :– **ಚತುರ್ವೇದಪ್ರಾಜ್ಞನಿಷ್ಠಾ ವಿತ್ತಿರ್ಯದ್ವಿಷಯೇ ಸ ತು ।**
ಚತುರ್ವೇದವಿದಿತ್ಯುಕ್ತಃ ನವಾರ್ಣೋ ನಿಗಮಪ್ರದಃ ॥

‘ಓಂ ಚತುರ್ವೇದವಿದೇ ನಮಃ’–ಎಂಬ ಈ ನಾಮಮಂತ್ರಜಪದಿಂದ ವೇದಾಧ್ಯಯನಮಾಡಿದ ಫಲವು ಪ್ರಾಪ್ತವಾಗುತ್ತದೆ.

772) **ಸ. ಸಂ. :–** ನಾಲ್ಕು ವೇದಗಳನ್ನೂ ತಿಳಿದವನು.

*　　　*　　　*

772) **ಏಕಪಾತ್** = ವಿಶ್ವರೂಪವಾದ ಏಕಪಾದವುಳ್ಳವನು ; ಏಕಾಂಶದಿಂದ ಜಗತ್ತನ್ನು ವ್ಯಾಪಿಸಿರುವವನು.

ಶಂ. ಭಾ. :– ಒಂದು ಪಾದವುಳ್ಳವನು. **ಪಾದೋಽಸ್ಯ ವಿಶ್ವಾ ಭೂತಾನಿ** (ಪು. ಸೂ.)

778) **ಪ. ಭ. :–** ಏಕಾಂಶದಿಂದ ಅವತಾರಮಾಡಿರುವವನು. **ಅಂಶಾಂಶೇನಾವತೀರ್ಯೋರ್ವ್ಯಾಮ್ । ಅಂಶಾವತಾರೋ ಬ್ರಹ್ಮರ್ಷೇ ಯೋಽಯಂ ಯದುಕುಲೋದ್ಭವಃ ।** (ವಿ. ಪು. ೫-೧-೨)

ನಿರುಕ್ತಿ :– **ಏಕಾಂಶೇನಾವತೀರ್ಣತ್ವಾದೇಕಪಾದಿತಿ ಕಥ್ಯತೇ ॥**

773) **ಸ. ಸಂ. :–** ಮುಖ್ಯಪಾಲಕನಾಗಿ ನಿರಂತರಗತಿ (ಜ್ಞಾನ)ಯುಳ್ಳವನು ; ಸಮಸ್ತಭೂತಗಳೂ ಯಾವನ ಏಕಾವತಾರವಾಗಿವೆಯೋ ಅವನು.

*　　　*　　　*

ಸಮಾವರ್ತೋಽನಿವೃತ್ತಾತ್ಮಾ ದುರ್ಜಯೋ ದುರತಿಕ್ರಮಃ ।
ದುರ್ಲಭೋ ದುರ್ಗಮೋ ದುರ್ಗೋ ದುರಾವಾಸೋ ದುರಾರಿಹಾ ॥

773) **ಸಮಾವರ್ತಃ** = ಸೃಷ್ಟಿ-ಸ್ಥಿತಿ-ಲಯವ್ಯಾಪಾರಗಳ ವರ್ತನೆಯನ್ನು ಉಂಟುಮಾಡುವವನು ; ಮತ್ತೆ ಮತ್ತೆ ಅವತಾರರೂಪಗಳಲ್ಲಿ ಕಾಣಿಸಿ ಕೊಳ್ಳುವವನು ; ಏಕರೂಪವಾಗಿ ವರ್ತಿಸುವವನು.

ಶಂ. ಭಾ. :– ಸಂಸಾರಚಕ್ರವನ್ನು ಚೆನ್ನಾಗಿ ತಿರುಗಿಸುವವನು.

779) **ಪ. ಭ. :–** ವ್ಯೂಹ-ವಿಭವರೂಪಗಳು ಸರ್ವಕಾಲಗಳಲ್ಲಿಯೂ ಸರ್ವಪ್ರದೇಶಗಳಲ್ಲಿಯೂ, ಸರ್ವರೀತಿಗಳಲ್ಲಿಯೂ ಮತ್ತೆ ಮತ್ತೆ ಪ್ರಕಟ ವಾಗುವಂತೆ ಮಾಡುವವನು.

ನಿರುಕ್ತಿ :– **ಏತಾದೃಶಂ ಹಿ ಸರ್ವತ್ರ ಸರ್ವದಾ ಸರ್ವಥಾಪಿ ಚ ।**
ವ್ಯೂಹಸ್ಯ ವಿಭವಸ್ಯಾಪಿ ಯಸ್ಯಾಸ್ತ್ಯಾವರ್ತನಂ ತ್ವಿತಿ ।
ಸಮಾವರ್ತಃ ಸಮಾಖ್ಯಾತಃ ವಸ್ವರ್ಣೋ ಜನ್ಮನಾಶಕಃ ॥

'ಓಂ ಸಮಾವರ್ತಾಯ ನಮಃ'–ಎಂಬ ಈ ನಾಮಮಂತ್ರಜಪವು ಪುನರ್ಜನ್ಮವನ್ನು ನಾಶಗೊಳಿಸುತ್ತದೆ.

774) **ಸ. ಸಂ. :–** ಎಲ್ಲ ಕಡೆಗಳಲ್ಲಿಯೂ ಸಮನಾಗಿ ಇರುವವನು.

* * *

774) **ಅನಿವೃತ್ತಾತ್ಮಾ** = ಎಲ್ಲ ಕಡೆಗಳಲ್ಲಿಯೂ ಇರುವುದರಿಂದ ಎಲ್ಲಿಂದಲೂ ನಿವೃತ್ತಿಹೊಂದದ ಆತ್ಮವುಳ್ಳವನು ; ನಿವೃತ್ತಾತ್ಮಾ = ವಿಷಯ ಗಳಿಂದ ಹಿಂದಿರುಗಿದ ಮನಸ್ಸುಳ್ಳವನು.

ಶಂ. ಭಾ. :– **ಅನಿವೃತ್ತಾತ್ಮಾ** = ಎಲ್ಲ ಕಡೆಗಳಲ್ಲಿಯೂ ಇರುವುದ ರಿಂದ ಎಲ್ಲಿಂದಲೂ ನಿವೃತ್ತಿಹೊಂದದ ಆತ್ಮವುಳ್ಳವನು ; ನಿವೃತ್ತಾತ್ಮಾ = ವಿಷಯಗಳಿಂದ ಹಿಂದಿರುಗಿದ ಮನಸ್ಸುಳ್ಳವನು.

780) **ಪ. ಭ. :–** ನಿವೃತ್ತಾತ್ಮಾ = ಕರುಣೆಯಿಂದ ಜಗತ್ತಿನ ವ್ಯಾಪಾರ ವನ್ನು ಮಾಡುತ್ತಿದ್ದರೂ ಜಗತ್ತಿನೊಡನೆ ಮಿಶ್ರವಾಗದೇ ಇರುವ ಮನಸ್ಸುಳ್ಳ ವನು.

ನಿರುಕ್ತಿ :– **ನಿವೃತ್ತಾತ್ಮಾ ಮನೋ ಯಸ್ಯ ಸದಾ ಜಗದಮಿಶ್ರಿತಮ್ ॥**

775) **ಸ. ಸಂ. :– ಅನಿವೃತ್ತಾತ್ಮಾ** = ನಿವೃತ್ತಿಯಿಲ್ಲದ ದೇಹವುಳ್ಳವನು ; ನಿವೃತ್ತಾತ್ಮಾ = ಸಕಲವಿಷಯಗಳಲ್ಲಿಯೂ ಚೆನ್ನಾಗಿ ಪ್ರವೃತ್ತವಾದ ಮನಸ್ಸುಳ್ಳವನು ; ಅಯೋಗ್ಯರು ಮಾಡಿದ ಯಜ್ಞಾದಿಗಳಿಂದ ನಿವೃತ್ತವಾದ ಮನಸ್ಸುಳ್ಳವನು.

* * *

775) **ದುರ್ಜಯಃ**= ಜಯಿಸಲು ಅಸಾಧ್ಯನಾದವನು ; ಬಹಳ ಕಷ್ಟದಿಂದ ಉಪಾಸಕಭಕ್ತರಿಂದ ವಶಪಡಿಸಿಕೊಳ್ಳಲು ಸಾಧ್ಯನಾದವನು.

ಶಂ. ಭಾ. :– ಯಾರಿಂದಲೂ ಜಯಿಸಲಾಗದವನು.

781) **ಪ. ಭ. :–** ದೇವತೆಗಳೂ ಮನುಷ್ಯರೂ ಯಾವನನ್ನು ತಮ್ಮ ಶಕ್ತಿಯಿಂದ ವಶಪಡಿಸಿಕೊಳ್ಳುವುದಕ್ಕಾಗಲೀ, ಹುಡುಕುವುದಕ್ಕಾಗಲೀ ಸಾಧ್ಯವಿಲ್ಲವೋ–ಅವನು.

ನಿರುಕ್ತಿ :– **ಶಕ್ಯಾ ದೇವಮನುಷ್ಯಾದ್ಯೈರ್ವಶೀಕರ್ತುಂ ನ ಶಕ್ಯತೇ ।**
ಅನ್ವೇಷ್ಟುಂ ವಾಪಿ ಯಃ ಸ ಸ್ಯಾದ್ದುರ್ಜಯಃ ಸಪ್ತವರ್ಣಕಃ ॥

776) **ಸ. ಸಂ. :–** ಜಯಿಸಲು ಅಸಾಧ್ಯನಾದವನು ; ದುಃಖದ ಜಯವು ಯಾವನಿಂದ ಉಂಟಾಗುವುದೋ–ಅವನು.

* * *

776) **ದುರತಿಕ್ರಮಃ** = ಅತಿಕ್ರಮಿಸಲು (ಉಲ್ಲಂಘಿಸಲು, ಮೀರಿ ಹೋಗಲು) ಅಸಾಧ್ಯನಾಗಿರುವವನು. ಇವನು ಸರ್ವೋತ್ತಮನಾದುದರಿಂದಲೂ, ಸರ್ವವ್ಯಾಪಕನಾದುದರಿಂದಲೂ ಇವನನ್ನು ಮೀರಿಹೋಗಲು ಯಾರಿಗೂ ಸಾಧ್ಯವಿಲ್ಲ. ಸರ್ವೇಶ್ವರನಾಗಿರುವುದರಿಂದ ಇವನ ಆಜ್ಞೆಯನ್ನು ಯಾರೂ (ಮಹಾಶಕ್ತಿಶಾಲಿಗಳಾದ ದೇವತೆಗಳೂ) ಉಲ್ಲಂಘಿಸಲಾರರು.

ಶಂ. ಭಾ. :– ಭಯಕಾರಣನಾದುದರಿಂದ ಸೂರ್ಯನೇ ಮುಂತಾದವರೂ ಯಾವನ ಆಜ್ಞೆಯನ್ನು ಉಲ್ಲಂಘಿಸಲಾರರೋ–ಅವನು. **ಭಯಾದಸ್ಯಾಗ್ನಿಸ್ತಪತಿ ಭಯಾತ್ತಪತಿ ಸೂರ್ಯಃ । ಭಯಾದಿನ್ದ್ರಶ್ಚ ವಾಯುಶ್ಚ ಮೃತ್ಯುರ್ಧಾವತಿ ಪಞ್ಚಮಃ (ಕಠ. ಉ. ೬-೩)**

782) **ಪ. ಭ. :–** ಇವನ ಪಾದಮೂಲವನ್ನು ಬಿಟ್ಟು ಯಾರಿಗೂ

ಬೇರೆ ಗತಿಯಿಲ್ಲವಾದ್ದರಿಂದ ಅತಿಕ್ರಮಿಸಲು (ಮೀರಿ ನಡೆಯಲು) ಅಸಾಧ್ಯನಾದವನು. **ವಾಸುದೇವಮನಾರಾಧ್ಯ ಕೋ ಮೋಕ್ಷಂ ಸಮವಾಪ್ನುಯಾತ್ । ನ ಹಿ ವಿಷ್ಣುಮೃತೇ ಕಾಚಿದ್ಗತಿರನ್ಯಾ ವಿಧೀಯತೇ ॥**

ನಿರುಕ್ತಿ :– **ಅತಿಕ್ರಮ್ಯ ಸ್ವಪಾದಾಬ್ಜಂ ಸರ್ವೇಷಾಂ ಪ್ರಾಪಕಾನ್ತರಮ್ ।**
ನಾಸ್ತೀತಿ ಸರ್ವಪಾಪಘ್ನ ಸ ಸ್ಮೃತೋ ದುರತಿಕ್ರಮಃ ॥

777) **ಸ. ಸಂ. :–** ಯಾವನಿಂದ (ಯಾವನ ಅನುಗ್ರಹಶಕ್ತಿಯಿಂದ) ದುಃಖವನ್ನು ದಾಟಲು ಸಾಧ್ಯವಾಗುತ್ತದೆಯೋ–ಅವನು.

* * *

777) **ದುರ್ಲಭಃ =** ಪಡೆಯಲು ಅತಿಕಷ್ಟಸಾಧ್ಯನಾದವನು ; ಯೋಗಿಗಳಿಗೆ ಮಾತ್ರವೇ ಪಡೆಯಲು ಸಾಧ್ಯನಾದವನು.

ಶಂ. ಭಾ. :– ದುರ್ಲಭವಾದ ಭಕ್ತಿಯಿಂದ ಮಾತ್ರವೇ ಪಡೆಯಲು ಸಾಧ್ಯನಾಗಿರುವುದರಿಂದ ದುರ್ಲಭನು. **ಜನ್ಮಾನ್ತರಸಹಸ್ರೇಷು ತಪೋಜ್ಞಾನಸಮಾಧಿಭಿಃ । ನರಾಣಾಂ ಕ್ಷೀಣಪಾಪಾನಾಂ ಕೃಷ್ಣೇ ಭಕ್ತಿಃ ಪ್ರಜಾಯತೇ ॥** (ವ್ಯಾಸವಚನ) **ಭಕ್ತ್ಯಾ ಲಭ್ಯಸ್ತ್ವನನ್ಯಯಾ ।** (ಗೀತಾ)

783) **ಪ. ಭ. :–** ಜಿತೇಂದ್ರಿಯರಲ್ಲದವರಿಗೆ ಹೊಂದಲು ಕಷ್ಟಸಾಧ್ಯನಾದವನು. **ಅಪ್ರಾಪ್ಯಃ ಕೇಶವೋ ರಾಜನ್ನಿನ್ದ್ರಿಯೈರಜಿತೈರ್ನೃಣಾಮ್** (ಮ. ಭಾ. ಉ. ೭೮-೨೧) **ತಸ್ಯಾಪ್ಯನ್ಯಮನಸ್ಕಸ್ಯ ಸುಲಭೋ ನ ಜನಾರ್ದನಃ ।** (ವಿ. ಧ. ೭೩-೬)

ನಿರುಕ್ತಿ :– **ಅಜಿತೇಂದ್ರಿಯದುಷ್ಪ್ರಾಪ್ಯೋ ದುರ್ಲಭಃ ಸ ಚ ಕಥ್ಯತೇ ॥**

778) **ಸ. ಸಂ. :–** ದುಃಖದಿಂದ (ಕಷ್ಟದಿಂದ) ಪಡೆಯಲು ಸಾಧ್ಯನಾದವನು.

* * *

778) **ದುರ್ಗಮಃ =** ಅತಿಕಷ್ಟದಿಂದ ಹೊಂದಲ್ಪಡುವವನು.

ಶಂ. ಭಾ. :– ಕಷ್ಟದಿಂದ ಹೊಂದ (ತಿಳಿಯ) ಲ್ಪಡುವವನು.

784) **ಪ. ಭ. :–** ದುರ್ಬಲವಾದ ದೃಷ್ಟಿಯುಳ್ಳವರಿಗೆ ಮಧ್ಯಾಹ್ನಕಾಲದ ಸೂರ್ಯನು ಹೇಗೋ–ಹಾಗೆ ಅಸಾಧ್ಯವಾದ ತೇಜಸ್ಸುಳ್ಳವನಾದ್ದರಿಂದ ನೋಡಲು (ಹೊಂದಲು) ಅಸಾಧ್ಯನಾದವನು.

ನಿರುಕ್ತಿ :– ನೇತ್ರದುರ್ಬಲವೃತ್ತೀನಾಂ ಮಧ್ಯಾಹ್ನದ್ಯುಮಣೇರ್ಯಥಾ ।
ಪ್ರಾಪ್ತಿರ್ದುಷ್ಕರತೇಜಸ್ತ್ವಾದ್ದುರ್ಗಮಃ ಪರಿಕೀರ್ತಿತಃ ॥

779) **ಸ. ಸಂ. :–** ಹೊಂದಲು ಅಸಾಧ್ಯನಾದವನು ; **ಅದುರ್ಗಮಃ**= ತಮೋಗುಣರಹಿತರಾದವರಿಂದ ಅಳೆಯಲ್ಪಡುವವನು.

* * *

779) **ದುರ್ಗಃ** = ಗಹನವಾದ ತತ್ತ್ವವು ; ದುಃಖ (ಅತಿಕಷ್ಟ)ದಿಂದ ಹೊಂದಲ್ಪಡುವವನು ; ದುರ್ಗ (ಗಹನ)ವಾದ ಮಾರ್ಗವುಳ್ಳವನು. **ದುರ್ಗಂ ಪಥಸ್ತತ್ಕವಯೋ ವದನ್ತಿ** (ಕಠ)

ಶಂ. ಭಾ. :– ವಿಘ್ನಗಳಿಂದ ಆಕ್ರಮಿಸಲ್ಪಟ್ಟವರಿಗೆ ಅತಿಕಷ್ಟದಿಂದ ದೊರಕುವವನು.

785) **ಪ. ಭ. :–** ಅಜ್ಞಾನದ ಆವರಣವುಳ್ಳ ಪಾಪಿಗಳಿಂದ ಪ್ರವೇಶಿಸಲು ಅಸಾಧ್ಯನಾದವನು.
ನಿರುಕ್ತಿ :– ದುಷ್ಪ್ರವೇಶತಯಾ ದುರ್ಗಃ ಪಾಪಿಭಿಸ್ತು ಕದಾಚನ ॥

780) **ಸ. ಸಂ. :–** ದೈತ್ಯರಿಗೆ ದುಃಖವನ್ನು ಹೊಂದಿಸುವವನು.

* * *

780) **ದುರಾವಾಸಃ** = (ಯೋಗಿಗಳಿಗೆ) ಅತಿಕಷ್ಟದಿಂದ ಚಿತ್ತದಲ್ಲಿ ನೆಲೆ ಸಲ್ಪಡಲು ಸಾಧ್ಯನಾದವನು ; (ಇತರರಿಂದ) ಅತಿಕಷ್ಟದಿಂದ ಹೊಂದಲ್ಪಡುವ ಪರಮಪದನಿವಾಸವುಳ್ಳವನು.

ಶಂ. ಭಾ. :– ಯೋಗಿಗಳಿಂದ ಸಮಾಧಿಯಲ್ಲಿ ಕಷ್ಟದಿಂದ ಚಿತ್ತದಲ್ಲಿ ನೆಲೆಗೊಳ್ಳುವಂತೆ ಮಾಡಲ್ಪಡುವವನು.

786) **ಪ. ಭ. :–** ಯಾವನ ಆವಾಸಭೂಮಿಯನ್ನು (ದಿವ್ಯಧಾಮ ವನ್ನು) ಹೊಂದುವುದು ಅತಿಕಷ್ಟಸಾಧ್ಯವೋ–ಅವನು.
ನಿರುಕ್ತಿ :– ದುಷ್ಕರಾವಾಸಭೂಮಿತ್ವಾದ್ದುರಾವಾಸ ಇತೀರಿತಃ ।

781) **ಸ. ಸಂ. :–** ದುಷ್ಟವಾದ ಧ್ವನಿಯುಳ್ಳವರನ್ನು ತಮಸ್ಸಿನಲ್ಲಿ ಎಸೆಯುವವನು.

* * *

781) **ದುರಾರಿಹಾ** = ದುರ್ಮಾರ್ಗಗಾಮಿಗಳನ್ನು ಸಂಹರಿಸುವವನು.

ಶಂ. ಭಾ. :– ದುರ್ಮಾರ್ಗಗಾಮಿಗಳಾದ ದಾನವರೇ ಮುಂತಾದವರನ್ನು ಸಂಹರಿಸುವವನು.

787) ಪ. ಭ. :– ದುರ್ಮಾರ್ಗಗಾಮಿಗಳನ್ನು, ವೈದಿಕಮಾರ್ಗವನ್ನು ಬಿಡುವಂತೆ ಮಾಡುವಿಕೆಯೇ ಮುಂತಾದ ರೀತಿಗಳಿಂದ ಸಂಹರಿಸುವವನು.

ನಿರುಕ್ತಿ :– **ದುರಾರಿಣಸ್ತು ದುರ್ಮಾರ್ಗಗಾಮಿನಸ್ತಾನ್ನಿಹನ್ತಿ ಯಃ ।**
ತ್ರಯೀಮಾರ್ಗತ್ಯಾಜನಾದ್ಯೈಃ ಸ ಸ್ಯಾನ್ನಿತ್ಯಂ ದುರಾರಿಹಾ ॥

782) ಸ. ಸಂ. :– ದುಷ್ಟರಾದ ಶತ್ರುಗಳನ್ನು ಎಲ್ಲ ಎಡೆಗಳಿಂದಲೂ ಸಂಹರಿಸುವವನು.

* * *

ಶುಭಾಙ್ಗೋ ಲೋಕಸಾರಙ್ಗಃ ಸುತನ್ತುಸ್ತನ್ತುವರ್ಧನಃ ।
ಇನ್ದ್ರಕರ್ಮಾ ಮಹಾಕರ್ಮಾ ಕೃತಕರ್ಮಾ ಕೃತಾಗಮಃ ॥೯೭॥

782) **ಶುಭಾಙ್ಗಃ** = ಯೋಗಿಗಳಿಗೆ ಶುಭಾಲಂಬನಕ್ಕೆ ಯೋಗ್ಯವಾದ ಶುಭವಾದ ಅವಯವಗಳುಳ್ಳವನು.

ಶಂ. ಭಾ. :– ಶುಭವಾದ ಅಂಗಗಳಿಂದ ಕೂಡಿದವನಾಗಿ ಧ್ಯಾನಿಸಲ್ಪಡುವವನು.

788) ಪ. ಭ. :– ಮಾಯಾಮೋಹನವೇಷದಿಂದ ಅಸುರರನ್ನೂ ಮೋಸಮಾಡಿ ಅವರೊಳಗೆ ಪ್ರವೇಶಮಾಡಿಬಿಟ್ಟಿರುವವನು.

ನಿರುಕ್ತಿ :– **ಮಾಯಾಮೋಹನವೇಷೇಣ ವಿಪ್ರಲಭ್ಯಾಸುರಾನಪಿ ।**
ಅನುಪ್ರವಿಷ್ಟಸ್ತಾನ್ಯೋಽಸೌ ಶುಭಾಙ್ಗ ಇತಿ ಕಥ್ಯತೇ ॥

783) ಸ. ಸಂ. :– ಶುಭವಾದ ಅಂಗಗಳುಳ್ಳವನು.

* * *

783) **ಲೋಕಸಾರಙ್ಗಃ** = ಚಿತ್ರ-ವಿಚಿತ್ರವಾದ, ಆಕರ್ಷಕವಾದ ಮತ್ತು ಆಕಾರದಿಂದಲೂ–ಗತಿವೇಗದಿಂದಲೂ ಸಾರಂಗದಂತಿರುವ ಜಗತ್ತುಳ್ಳವನು. ದುಂಬಿಯು ಪುಷ್ಪಗಳ ಸಾರವನ್ನು ಗ್ರಹಿಸುವಂತೆ–ಲೋಕಗಳ ಸಾರವನ್ನು ಗ್ರಹಿಸುವವನು.

ಶಂ. ಭಾ. :– ಭ್ರಮರದಂತೆ ಲೋಕದ ಸಾರವನ್ನು ತೆಗೆದುಕೊಳ್ಳು ವವನು. ಪ್ರಜಾಪತಿರ್ಲೋಕಾನಭ್ಯಪತತ್ ।(ಛಾಂ.೨.೨೩.೨) ಲೋಕಸಾರ ವಾದ ಪ್ರಣವದಿಂದ ಹೊಂದಲ್ಪಡುವವನು.

789) ಪ. ಭ. :– ಲೋಕದಲ್ಲಿ ನ್ಯಾಯಕ್ಕೆ ಅನುಗುಣವಾದ ಭೋಗ-ಮೋಕ್ಷಮಾರ್ಗಗಳೆಂಬ ಸಾರವನ್ನು ಸದಾ ಹೊಂದುವವನು.

ನಿರುಕ್ತಿ :– ನ್ಯಾಯಾನಪೇತಂ ಯತ್ಸಾರಂ ಭೋಗನಿರ್ವಾಣವರ್ತ್ಮ ಚ ।
ಲೋಕೇ ತದ್ಗಚ್ಛತಿ ಸದಾ ಲೋಕಸಾರಙ್ಗ ಈರಿತಃ ॥

784) ಸ. ಸಂ. :– ವೈಕುಂಠಾದಿ ಲೋಕಗಳನ್ನು ಕೊಡುತ್ತಾ ಜ್ಞಾನಿಗಳಿಗೆ ಕ್ರೀಡಾನಂದಸ್ಥಾನವಾಗಿರುವವನು. ತನ್ನ ಆತ್ಮವನ್ನು ಲೋಕಸಾರಕ್ಕೆ (ವೈಕುಂಠಾದಿ ಲೋಕಗಳಿಗೆ) ಹೊಂದಿಸುವವನು.

* * *

784) **ಸುತನ್ತುಃ** = ಶೋಭನವಾದ (ವಿಜ್ಞಾನರೂಪವಾದ, ಧರ್ಮ ರೂಪವಾದ) ವಿಸ್ತಾರವುಳ್ಳವನು.

ಶಂ. ಭಾ. :– ಸುಂದರವಾದ ಪ್ರಪಂಚವಿಸ್ತಾರವುಳ್ಳವನು.

790) ಪ. ಭ. :– (ಉಲ್ಲಂಘಿಸಲು ಅಸಾಧ್ಯವಾದುದರಿಂದ) ಸುಂದರ ವಾದ ಕೃತ್ರಿಮಶಾನ್ತಿಭಾವನಾರೂಪವಾದ ಬಲೆಯ ದಾರಗಳುಳ್ಳವನು.

ನಿರುಕ್ತಿ :– ತನ್ತುಃ ಕೃತ್ರಿಮಶಾನ್ತ್ಯಾದಿರೂಪಸ್ತದ್ಗ್ರಹಣಾಯ ವೈ ।
ಸುತನ್ತುಃ ಶೋಭನೋಽಸ್ಯೇತಿ ಸಪ್ತಾರ್ಣೋ ದೋಷನಾಶಕಃ॥

'ಓಂ ಸುತನ್ತವೇ ನಮಃ'–ಎಂಬ ಈ ನಾಮಮಂತ್ರಜಪವು ದೋಷ ಗಳನ್ನು ನಾಶಗೊಳಿಸುತ್ತದೆ.

785) ಸ. ಸಂ. :– ಚತುರ್ಮುಖನೇ ಮುಂತಾದ ಶೋಭನಸಂತಾನ ವುಳ್ಳವನು.

* * *

785) **ತನ್ತುವರ್ಧನಃ** = ವಿಸ್ತಾರದಿಂದ (ವಿಜ್ಞಾನಧರ್ಮರೂಪವಾದ) ತಂತುವನ್ನು ವೃದ್ಧಿಪಡಿಸುವವನು.

ಶಂ. ಭಾ. :– ಸುಂದರಪ್ರಪಂಚರೂಪವಾದ ತಂತುವನ್ನು ವೃದ್ಧಿಪಡಿ ಸುವವನು, ಅಥವಾ ಕತ್ತರಿಸಿಹಾಕುವವನು.

791) **ಪ. ಭ. :–** ಸಂಸಾರವೆಂಬ ತಂತುವನ್ನು ಕಿರಣಗಳಂತಿರುವ ಪಾಪರುಚಿಗಳಿಂದ ವಿಸ್ತಾರಪಡಿಸುವವನು.

ನಿರುಕ್ತಿ :– ಅಂಶುಭಿಃ ಪಾಪರುಚಿಭಿಃ ತನ್ತುಂ ಸಂಸಾರನಾಮಕಮ್ ।
ಯಃ ಸನ್ತನೋತೀತಿ ಸದಾ ತನ್ತುವರ್ಧನ ಈರಿತಃ ॥

786) **ಸ. ಸಂ. :–** ದ್ರೌಪದಿಗೋಸ್ಕರ (ದಾರಗಳಿಂದ ಮಾಡಿದ) ವಸ್ತ್ರಗಳನ್ನು ವೃದ್ಧಿಪಡಿಸಿದವನು.

* * *

786) **ಇನ್ದ್ರಕರ್ಮಾ=** ಉಪೇಂದ್ರನಾಗಿ ಇಂದ್ರನಿಗೋಸ್ಕರ ದೈತ್ಯಸಂಹಾರವೇ ಮುಂತಾದ ಕೆಲಸಗಳನ್ನು ಮಾಡಿಕೊಟ್ಟವನು ; ಪರಮೈಶ್ವರ್ಯಕ್ಕೆ ಅನುಗುಣವಾದ ಕರ್ಮಗಳುಳ್ಳವನು.

ಶಂ. ಭಾ. :– ಇಂದ್ರನ ಕರ್ಮಕ್ಕೆ ಸಮನಾದ ಕರ್ಮಗಳುಳ್ಳವನು.

792) **ಪ. ಭ. :–** ಶರಣಾಗತರಾದ ಇಂದ್ರನೇ ಮುಂತಾದವರಿಗೋಸ್ಕರ ದೈತ್ಯಸಂಹಾರರೂಪವಾದ ಕರ್ಮವನ್ನು ಮಾಡುವವನು.

ನಿರುಕ್ತಿ :– ಪ್ರಪನ್ನೇನ್ದ್ರಾದ್ಯರ್ಥತಯಾ ದೈತ್ಯಸಂಹಾರರೂಪಕಮ್ ।
ಕರ್ಮ ಯಸ್ಯಾಸ್ತೀನ್ದ್ರಕರ್ಮಾ ಹ್ಯಷ್ಟಾರ್ಣೋ
ಮನುರುತ್ತಮಃ ॥

787) **ಸ. ಸಂ. :–** ಇಂದ್ರನ ಕರ್ಮವಾದ ವೃತ್ರಸಂಹಾರವೇ–ಮುಂತಾದ ವ್ಯಾಪಾರವು ಯಾವನಿಂದ ಆಗುತ್ತದೆಯೋ ಅವನು.

* * *

787) **ಮಹಾಕರ್ಮಾ =** ಜಗದ್ರೂಪವಾದ ದೊಡ್ಡ ಕರ್ಮವುಳ್ಳವನು.

ಶಂ. ಭಾ. :– ಆಕಾಶವೇ ಮುಂತಾದ ಪಂಚಮಹಾಭೂತಗಳ ರೂಪವಾದ ದೊಡ್ಡ ಕರ್ಮವುಳ್ಳವನು.

793) **ಪ. ಭ. :–** ದೊಡ್ಡ ನ್ಯಾಯಮಾರ್ಗದಲ್ಲಿ ತೊಡಗಿರುವವನು.

ನಿರುಕ್ತಿ :– ಏವಂ ನ್ಯಾಯಪ್ರವೃತ್ತತ್ವಾನ್ಮಹಾಕರ್ಮೇತಿ ಶಬ್ದ್ಯತೇ ॥

788) **ಸ. ಸಂ. :–** ಜಗತ್ತಿನ ಸೃಷ್ಟಿಯೇ ಮುಂತಾದ ದೊಡ್ಡ ಕರ್ಮ

ವುಳ್ಳವನು ; ಅಪ್ರಮೇಯನಾದವನು ; ಜೀವನಾಗದವನೂ–ವಿಧಿಗೆ ವಿಷಯ ನಾಗದವನೂ ಆದ ಮಹಾಪುರುಷನು.

* * *

788) **ಕೃತಕರ್ಮಾ** = ಕೃತಕೃತ್ಯನಾದವನು ; ಆಪ್ತಕಾಮನು.

ಶಂ. ಭಾ. :– ಕೃತಾರ್ಥನು ; ಮಾಡಬೇಕಾದ ಕೆಲಸವು ಯಾವುದೂ ಇಲ್ಲದವನು ; ಧರ್ಮಸ್ವರೂಪವಾದ ಕರ್ಮವನ್ನು ಮಾಡಿದವನು.

794) ಪ. ಭ. :– ಬೌದ್ಧ-ಜೈನಾದಿಗಳ ಆಚಾರಗಳನ್ನು ತಾನೇ ಅನು ಷ್ಠಾನ ಮಾಡಿದವನು.

ನಿರುಕ್ತಿ :– **ಸ್ವಾನುಷ್ಠಿತತದಾಚಾರಃ ಕೃತಕರ್ಮೇತಿ ಕಥ್ಯತೇ ॥**

789) ಸ. ಸಂ. :– ಪೂರ್ಣಕರ್ಮಗಳುಳ್ಳವನು.

* * *

789) **ಕೃತಾಗಮಃ** = ಆಗಮಶಾಸ್ತ್ರಗಳನ್ನು ಮಾಡಿದವನು ; ಶಾಸ್ತ್ರ ಕರ್ತೃವು.

ಶಂ. ಭಾ. :– ವೇದರೂಪವಾದ ಆಗಮವನ್ನು ಮಾಡಿದವನು. **ಅಸ್ಯ ಮಹತೋ ಭೂತಸ್ಯ ನಿಃಶ್ವಸಿತಮೇತದ್ಯದೃಗ್ವೇದಃ ।** (ಬೃ.೨-೪-೧೦)

795) ಪ. ಭ. :– ಬೌದ್ಧಾಗಮ-ಜೈನಾಗಮಗಳೇ ಮುಂತಾದ ಶಾಸ್ತ್ರ ಗಳನ್ನು ದೈತ್ಯರ ವಂಚನೆಗಾಗಿ ರಚಿಸಿದವನು.

ನಿರುಕ್ತಿ :– **ಕೃತಬುದ್ಧಾದ್ಯಾಗಮತ್ವಾತ್ಕೃತಾಗಮ ಉದಾಹೃತಃ ॥**

790) ಸ. ಸಂ. :– ಆಗಮವನ್ನು ಮಾಡಿದವನು.

* * *

ಉದ್ಭವಃ ಸುನ್ದರಃ ಸುನ್ದೋ ರತ್ನನಾಭಃ ಸುಲೋಚನಃ ।
ಅರ್ಕೋ ವಾಜಸನಃ ಶೃಙ್ಗೀ ಜಯನ್ತಃ ಸರ್ವವಿಜ್ಜಯೀ ॥೯೮॥

790) **ಉದ್ಭವಃ** = ಅವತಾರರೂಪದಲ್ಲಿ ಕಾಣಿಸಿಕೊಂಡವನು ; ಸೃಷ್ಟಿಗೆ ಕಾರಣನಾದವನು ; ಸಂಸಾರದಿಂದ ಬಿಡುಗಡೆಹೊಂದಿಸುವವನು ; ಸಂಸಾರ

ವನ್ನು ದಾಟಿಸುವವನು. **ಸಮುದ್ಗತೋ ಭವೋ ಯಸ್ಮಾದುದ್ಭವಃ ಪರಿಕೀರ್ತಿತಃ ||**

ಶಂ. ಭಾ. :– ಶ್ರೇಷ್ಠವಾದ ಜನ್ಮವನ್ನು ತನ್ನ ಇಚ್ಛೆಯಿಂದಲೇ ಸ್ವೀಕರಿಸುವವನು ; ಸರ್ವಕಾರಣನಾದುದರಿಂದ ಜನ್ಮವಿಲ್ಲದವನು.

796) **ಪ. ಭ. :–** ಮೋಕ್ಷೋಪದೇಶದ ಅಭಿನಯವನ್ನು ಮಾಡಿ ಸಂಸಾರದಿಂದ ದಾಟಿಸಿದಂತೆ ಕಾಣಿಸಿದವನು.

ನಿರುಕ್ತಿ :– **ಮೋಕ್ಷೋಪದೇಶನಟನಾದ್ಭವಾದುದ್ಭವತಸ್ಥಿತಃ |**
ಉದ್ಭವಃ ಸ ಚ ವಿಜ್ಞೇಯಃ ಸಪ್ತಾರ್ಣಃ ಪಾಪನಾಶಕಃ ||

'**ಓಂ ಉದ್ಭವಾಯ ನಮಃ**'–ಎಂಬ ಈ ನಾಮಮಂತ್ರಜಪವು ಪಾಪಗಳನ್ನು ನಾಶಗೊಳಿಸುತ್ತದೆ.

791) **ಸ. ಸಂ. :–** ಸಂಸಾರವನ್ನು ಅಥವಾ ಉತ್ಪತ್ತಿಯನ್ನು ಮೀರಿದವನು.

* * *

791) **ಸುನ್ದರಃ** = ಎಣೆಯಿಲ್ಲದ ಸೌಂದರ್ಯವುಳ್ಳವನು.

ಶಂ. ಭಾ. :– ವಿಶ್ವವನ್ನು ಮೀರಿಸಿದ ಸೌಭಾಗ್ಯಶಾಲಿಯಾದವನು.

797) **ಪ. ಭ. :–** ಅಸುರರ ದೃಷ್ಟಿಗೂ ಅತ್ಯಂತರಮಣೀಯನಾದವನು; ವಿಶ್ವಕ್ಕಿಂತಲೂ ಅತಿಶಯನಾದ ಸೌಭಾಗ್ಯಶಾಲಿಯು.

ನಿರುಕ್ತಿ :– **ಸ ಸ್ಯಾತ್ಸುನ್ದರ ಉದ್ದಿಷ್ಟಃ ತೇಷಾಂ ದೃಷ್ಟಿಮನೋಹರಃ |**
ವಿಶ್ವಾತಿಶಾಯಿಸೌಭಾಗ್ಯಶಾಲಿತ್ವಾತ್ ಸುನ್ದರಃ ಸ್ಮೃತಃ ||

792) **ಸ. ಸಂ. :–** ಸೌಂದರ್ಯಶಾಲಿಯು ; ಸುಂದರವಾದ ಶಂಖವುಳ್ಳವನು ; ಸುಂದನನ್ನು ಉಪಸುಂದನ ಮೂಲಕ ನಾಶಪಡಿಸಿದವನು.

* * *

792) **ಸುನ್ದಃ** = ಶುಭವಾದ ಕರುಣೆಯಿಂದ ಆರ್ದ್ರನಾದವನು.

ಶಂ. ಭಾ. :– ಚೆನ್ನಾಗಿ ನೆನೆಸುವವನು ; ಕರುಣಾಕರನು.

798) **ಪ. ಭ. :–** ರಾಕ್ಷಸರ ಮನಸ್ಸುಗಳನ್ನು ಚೆನ್ನಾಗಿ ಆರ್ದ್ರಗೊಳಿಸುವವನು.

ನಿರುಕ್ತಿ :– ಉನತ್ತಿ ಸುಷ್ಠು ಚೇತಾಂಸಿ ರಕ್ಷಸಾಂ ಸುನ್ದ ಈರಿತಃ ॥

793) **ಸ. ಸಂ. :–** ಸುಖವನ್ನು ಕೊಡುವವನು.

* * *

793) **ರತ್ನನಾಭಃ** = ರತ್ನದಂತೆ ಹೊಳೆಯುವ ನಾಭಿಯುಳ್ಳವನು.

ಶಂ. ಭಾ. :– ರತ್ನದಂತೆ ಕಾಂತಿಯುಕ್ತವಾದ ನಾಭಿಯುಳ್ಳವನು.

799) **ಪ. ಭ. :–** ಪಾಂಡಿತ್ಯವಿಡಂಬನೆಗೋಸ್ಕರ ಸವರಿದ ಹೊಟ್ಟೆಯಲ್ಲಿ ಪ್ರಕಟವಾದ ಸುಂದರವಾದ ನಾಭಿಯುಳ್ಳವನು.

ನಿರುಕ್ತಿ :– ಸ ರತ್ನನಾಭ ಇತ್ಯುಕ್ತಃ ಯಃ ಪಾಣ್ಡಿತ್ಯವಿಡಮ್ಬನಾತ್ ।
ಮೃಷ್ಟೋದರವ್ಯಕ್ತರಮ್ಯನಾಭಿಃ ಸತ್ಫಲದೋ ಮನುಃ ॥

'ಓಂ ರತ್ನನಾಭಾಯ ನಮಃ'–ಎಂಬ ಈ ನಾಮಮಂತ್ರಜಪದಿಂದ ಒಳ್ಳೆಯ ಫಲವು ಸಿಕ್ಕುತ್ತದೆ.

794) **ಸ. ಸಂ. :–** ಪುರುಷರತ್ನನಾದ ಚತುರ್ಮುಖನನ್ನು ನಾಭಿಯಲ್ಲಿ ಹೊಂದಿರುವವನು. **ಅರತ್ನನಾಭಃ** = ಶತ್ರುಗಳಾದ ದೈತ್ಯರನ್ನು ಹಿಂಸಿಸುವವನು.

* * *

794) **ಸುಲೋಚನಃ** =ಸುಂದರವಾದ ಕಣ್ಣುಗಳುಳ್ಳವನು ; ಶ್ರೇಷ್ಠವಾದ ಜ್ಞಾನದೃಷ್ಟಿಯುಳ್ಳವನು.

ಶಂ. ಭಾ. :– ಸುಂದರವಾದ ಕಣ್ಣುಗಳುಳ್ಳವನು ; ಜ್ಞಾನವುಳ್ಳವನು.

800) **ಪ. ಭ. :–** ಮಾಯೆಯಿಂದ ದೈತ್ಯರ ಹೃದಯಗಳನ್ನು ಸೆಳೆದ ಕಣ್ಣುಗಳುಳ್ಳವನು. **ತತೋ ದಿಗಮ್ಬರೋ ಮುಣ್ಡಃ (ವಿ. ಪು.೩-೧೭-೨೦) ಪುನಶ್ಚ ರಕ್ತಾಮ್ಬರಧೃಗ್ವ್ಯಜ್ಮಾಯಾಮೋಹಿತೇಕ್ಷಣಃ (ವಿ. ಪು.೩-೧೮-೧೬)**

ನಿರುಕ್ತಿ :– ಸುಲೋಚನ ಇತಿ ಪ್ರೋಕ್ತೋ ದೃಙ್ಮಾಯಾಮೋಹಿತೇಕ್ಷಣಃ॥

795) **ಸ. ಸಂ. :–** ಶೋಭನವಾದ ಕಣ್ಣುಗಳುಳ್ಳವನು.

* * *

795) **ಅರ್ಕಃ**= ಸೂರ್ಯರೂಪಿಯು ; ಪೂಜ್ಯನಾದವನು.

ಶಂ. ಭಾ. :– ಪೂಜ್ಯತಮರಾದ ಬ್ರಹ್ಮಾದಿಗಳಿಗೂ ಪೂಜನೀಯನಾದವನು.

801) **ಪ. ಭ. :–** ಅತ್ಯಂತಧಾರ್ಮಿಕನೆಂದು ದೈತ್ಯರಿಂದ ಸ್ತುತಿಸಲ್ಪಟ್ಟವನು ; ಪೂಜಿಸಲ್ಪಟ್ಟವನು.

ನಿರುಕ್ತಿ :– **ಅತ್ಯನ್ತಧಾರ್ಮಿಕ ಇತಿ ಸ್ತುತಸ್ತೈರರ್ಕ ಈರಿತಃ ॥**

796) **ಸ. ಸಂ. :–** ಪೂಜಿಸಲ್ಪಡುವವನು ; ಸ್ತುತಿಸಲ್ಪಡುವವನು.

*   *   *

೭೯೬) **ವಾಜಸನಃ**= ಅಶ್ವರೂಪನಾದ ಸೂರ್ಯನು ; ವಾಜಸನ ಸಂಹಿತೆಯನ್ನು ಯಾಜ್ಞವಲ್ಕ್ಯರಿಗೆ ಉಪದೇಶಮಾಡಿದವನು ; ಅನ್ನವನ್ನು ಅನುಗ್ರಹಿಸುವವನು.

ಶಂ. ಭಾ. :– ಯಾಚಕರಿಗೆ ಅನ್ನವನ್ನು ಕೊಡುವವನು.

802) **ಪ. ಭ. :–** **ವಾಜಸನಿಃ**= ನಾಸ್ತಿಕರಾದ ದೈತ್ಯರಿಗೆ ಭೂಮಿಯಲ್ಲಿ ಅನ್ನವೇ ಮುಂತಾದ ಐಹಿಕಫಲಗಳನ್ನು ಮಾತ್ರವೇ ಕೊಡುವವನು.

ನಿರುಕ್ತಿ :– **ಅನ್ನಾದೀನೈಹಿಕಾನ್ಯೇವ ಯಸ್ಮಾನ್ಮಹ್ಯಾಂ ಭಜನ್ತಿ ಹಿ ।**
ಸ ವಾಜಸನಿರಿತ್ಯುಕ್ತಃ ವಸ್ವರ್ಣೋಽನ್ನಪ್ರದೋ ಮನುಃ ॥

'**ಓಂ ವಾಜಸನಯೇ ನಮಃ**'–ಎಂಬ ಈ ನಾಮಮಂತ್ರಜಪವು ಅನ್ನದಾಯಕವು.

797) **ಸ. ಸಂ. :–** ಅನ್ನವನ್ನು ಕೊಡುವವನು.

*   *   *

797) ಶೃಙ್ಗೀ = ಏಕಶೃಂಗವುಳ್ಳ ವರಾಹಸ್ವಾಮಿಯು ; ನಾಲ್ಕು ಶೃಂಗಗಳುಳ್ಳ ಪ್ರಣವವು ಅಥವಾ ಅಗ್ನಿಯು ; ಮತ್ಸ್ಯಾವತಾರಿಯು ; ಶಿಖರಸ್ಥಾನದಲ್ಲಿರುವವನು. **ಏಕಶೃಙ್ಗಃ ಪುರಾ ಭೂತ್ವಾ ವರಾಹೋ ನನ್ದಿವರ್ಧನಃ ।**
ಇಮಾಂ ಚೋದ್ಧೃತವಾನ್ಭೂಮಿಮೇಕಶೃಙ್ಗಸ್ತತೋ ಹ್ಯಹಮ್ ॥

(ಮ. ಭಾ. ಶಾಂ. ೩೪೨-೯೨)

ಶಂ. ಭಾ. :– ಪ್ರಳಯಸಮುದ್ರದಲ್ಲಿ ಶ್ರೇಷ್ಠವಾದ ಶೃಂಗವುಳ್ಳ ಮಹಾ ಮತ್ಸ್ಯವಿಶೇಷದ ರೂಪವನ್ನು ತಾಳಿದವನು.

803) **ಪ. ಭ. :–** ಯಾವನ ಕೈಯಲ್ಲಿ ಅಹಿಂಸಾವಿಡಂಬನೆ, ಸರ್ವ ಶೂನ್ಯವಾದ, ಕ್ಷಣಿಕವಿಜ್ಞಾನವಾದ–ಮುಂತಾದುವುಗಳನ್ನು ಸೂಚಿಸುವ ಮೋಹಕವಾದ ನವಿಲುಗರಿಯು ಉಂಟೋ–ಅವನು.

ನಿರುಕ್ತಿ :– **ಕರೇಽಸ್ತಿ ಪಿಞ್ಛಿಕಾ ಯಸ್ಯ ಶೃಙ್ಗ್ಯಹಿಂಸಾವಿಡಮ್ಬನಾತ್ ॥**
ಸರ್ವಪ್ರಪಂಚಮಿಥ್ಯಾತ್ವಸಂವಿದಾತ್ಮತ್ವವಾದನಃ ॥

798) **ಸ. ಸಂ. :–** ಗೋವರ್ಧನಶೃಂಗಗಳುಳ್ಳವನು.

* * *

798) **ಜಯನ್ತಃ** = ಶತ್ರುಗಳನ್ನು ಜಯಿಸುವವನು ; ಇಂದ್ರಪುತ್ರ ರೂಪಿಯು.

ಶಂ. ಭಾ. :–ಶತ್ರುಗಳನ್ನು ಅತಿಶಯವಾಗಿ ಜಯಿಸುವವನು ; ಜಯಕ್ಕೆ ಕಾರಣನು.

804) **ಪ. ಭ. :–** ಮಾಯಾಮೋಹನನಾಗಿ ಆಸ್ತಿಕ್ಯವಾದಿಗಳನ್ನು ಜಯಿಸುವವನು.

ನಿರುಕ್ತಿ :– **ಆಸ್ತಿಕ್ಯವಾದಿನಾಂ ಜೇತಾ ಜಯನ್ತ ಇತಿ ಕಥ್ಯತೇ ॥**

799) **ಸ. ಸಂ. :–** ಜಯಿಸುವವನು.

* * *

799) **ಸರ್ವವಿಜ್ಜಯೀ** = ಸರ್ವಜ್ಞನಾಗಿ ಎಲ್ಲ ಒಳ-ಹೊರ ಶತ್ರು ಗಳನ್ನೂ ಜಯಿಸುವ ಸ್ವಭಾವವುಳ್ಳವನು.

ಶಂ. ಭಾ. :– ಸರ್ವವಿಷಯವಾದ ಜ್ಞಾನವನ್ನು ಹೊಂದಿರುವವನು ಮತ್ತು ದುರ್ಜಯಗಳಾದ ರಾಗವೇ ಮುಂತಾದ ಒಳಶತ್ರುಗಳನ್ನೂ–ಹಿರ ಣ್ಯಾಕ್ಷನೇ ಮುಂತಾದ ಹೊರಶತ್ರುಗಳನ್ನೂ ಜಯಿಸುವ ಸ್ವಭಾವವುಳ್ಳವನು.

805) **ಪ. ಭ. :–** ಸರ್ವಜ್ಞರನ್ನೂ ಜಯಿಸುವ ಸಾಮರ್ಥ್ಯವುಳ್ಳವನು.

ನಿರುಕ್ತಿ :– ಯಸ್ಯ ಜಯ್ಯಾಶ್ಚ ಸರ್ವಜ್ಞಾಃ ಸ ಚೋಕ್ತಃ ಸರ್ವವಿಜ್ಜಯೀ ॥

800) ಸ. ಸಂ. :– ಸರ್ವಜ್ಞನಾಗಿ ಜಯಪ್ರಾಪ್ತಿಯುಳ್ಳವನು.

* * *

ಸುವರ್ಣಬಿನ್ದುರಕ್ಷೋಭ್ಯಃ ಸರ್ವವಾಗೀಶ್ವರೇಶ್ವರಃ ।
ಮಹಾಹ್ರದೋ ಮಹಾಗರ್ತೋ ಮಹಾಭೂತೋ ಮಹಾನಿಧಿಃ ॥೯೧॥

800) **ಸುವರ್ಣಬಿನ್ದುಃ** = ನಾದಕ್ಕೆ ಮೂಲವಾದ ಸುವರ್ಣಬಿಂದು ಸ್ವರೂಪನು.

ಶಂ. ಭಾ. :– ಸುವರ್ಣಸದೃಶವಾದ ಅವಯವಗಳುಳ್ಳವನು. ಆ ಪ್ರಣಖಾತ್ ಸರ್ವ ಏವ ಸುವರ್ಣಃ (ಛಾಂ. ೧-೬-೬.) ಯಾವ ಮಂತ್ರದಲ್ಲಿ ಸುಂದರವಾದ ಅಕ್ಷರಗಳೂ ಮತ್ತು ಬಿಂದುಗಳೂ ಇವೆಯೋ ಅಂತಹ (ಪ್ರಣವ) ಮಂತ್ರರೂಪಿಯು.

806) ಪ. ಭ. :– ಸರ್ವಶಕ್ತನಾದುದರಿಂದ ಒಳ್ಳೆಯ ವರ್ಣಗಳಿಂದ ಅಂದರೆ ಅತ್ಯಂತಪಟುವಾದ ಪದಗಳನ್ನು ಮಾಡುವ ಅಕ್ಷರಗಳಿಂದ ಆಸ್ತಿಕ್ಯ ವನ್ನು ನಿಂದಿಸಿ ಖಂಡಿಸುವವನು.

ನಿರುಕ್ತಿ :– ಆಸ್ತಿಕ್ಯತ್ವಾಪಲಾಪೇನ ಪಟುಭಿಃ ಪದಕಾಕ್ಷರೈಃ ।
ಸುವರ್ಣಬಿಂದುರ್ಗದಿತೋ ನವಾರ್ಣಃ ಪಾಪನಾಶನಃ ॥

'ಓಂ ಸುವರ್ಣಬಿನ್ದವೇ ನಮಃ'–ಎಂಬ ಈ ನಾಮಮಂತ್ರಜಪವು ಪಾಪಗಳನ್ನು ನಾಶಪಡಿಸುತ್ತದೆ.

801) ಸ. ಸಂ. :– ಶೋಭನವಾದ ವರ್ಣಗಳುಳ್ಳ ವೇದವನ್ನು ಅರಿತ ವನು.

* * *

801) **ಅಕ್ಷೋಭ್ಯಃ** = ಯಾರಿಂದಲೂ, ಯಾವುದರಿಂದಲೂ ಕ್ಷೋಭೆಗೆ ಒಳಗಾಗದವನು ; ಅವಿಕಾರಿಯು.

ಶಂ. ಭಾ. :– ರಾಗ-ದ್ವೇಷಾದಿಗಳಿಂದಲೂ, ಶಬ್ದವೇ ಮುಂತಾದ ವಿಷಯಗಳಿಂದಲೂ, ದೇವಶತ್ರುಗಳಿಂದಲೂ ಅಲುಗಾಡಿಸಲು ಆಗದವನು.

807) **ಪ. ಭ. :–** ಗಂಭೀರವಾದ ಆಶಯವನ್ನು ಹೊಂದಿರುವುದ ರಿಂದ ವಿಕಾರಗೊಳಿಸಲು ಅಶಕ್ಯನಾದವನು.

ನಿರುಕ್ತಿ :– ಗಮ್ಭೀರಾಶಯವತ್ತ್ವೇನ ಹ್ಯವಿಕಾರಿತಯಾ ಚ ಸಃ ।
ಅಕ್ಷೋಭ್ಯಃ ಸಪ್ತವರ್ಣಃ ಸ್ಯಾದಕ್ಷೋಭ್ಯತ್ವಪ್ರದಾಯಕಃ ॥

'ಓಂ ಅಕ್ಷೋಭ್ಯಾಯ ನಮಃ'–ಎಂಬ ಈ ನಾಮಮಂತ್ರಜಪವು ಪ್ರಶಾಂತತೆಯನ್ನು ಕೊಡುತ್ತದೆ.

802) **ಸ. ಸಂ. :–** ಕಲಕಲು ಅಸಾಧ್ಯನಾದವನು. **ಸುವರ್ಣಬಿನ್ದು ರಕ್ಷೋಭ್ಯಃ** = ಸುವರ್ಣದ ಬಿಂದುಗಳಿಂದ ಕೂಡಿದ ಮಾಯಾಮೃಗ ರೂಪಿಯಾದ ಮಾರೀಚರಾಕ್ಷಸನನ್ನು ಭಯಪಡಿಸಿದವನು.

* * *

802) **ಸರ್ವವಾಗೀಶ್ವರೇಶ್ವರಃ** = ವಾಣಿಗೆ ಈಶ್ವರರಾದ ಬೃಹಸ್ಪತಿ–ಬ್ರಹ್ಮರೇ ಮೊದಲಾದ ಎಲ್ಲ ದೇವತೆಗಳಿಗೂ ಈಶ್ವರನಾದವನು.

ಶಂ. ಭಾ. :– ಬ್ರಹ್ಮನೇ ಮುಂತಾದ ಸಮಸ್ತವಾಗೀಶ್ವರರಿಗೂ ಈಶ್ವರ ನಾದವನು.

808) **ಪ. ಭ. :–** ವಾದಿತ್ವ ಮತ್ತು ವಾಗ್ಮಿತ್ವ ಈ ಎರಡರ ಪಾರವನ್ನೂ ಕಂಡವನಾದುದರಿಂದ ವಾಗೀಶ್ವರರಾದ ಬ್ರಹ್ಮಾದಿಗಳಿಗೂ ಸ್ವಾಮಿಯಾದ ವನು. **ಉತ್ತರೋತ್ತರಯುಕ್ತೌ ಚ ವಕ್ತಾ ವಾಚಸ್ಪತಿರ್ಯಥಾ ॥** (ರಾ. ಅ. ೧-೧೪.)

ನಿರುಕ್ತಿ :– ವಾದಿವಾಗ್ಮಿತ್ವಯೋಃ ಪಾರಂ ಯೋ ಗಚ್ಛತಿ ಸ ವಿಶ್ರುತಃ ।
ರವ್ಯರ್ಣೋ ವಾಕ್ಪ್ರದ ಇತಿ ಸರ್ವವಾಗೀಶ್ವರೇಶ್ವರಃ ॥

'ಓಂ ಸರ್ವವಾಗೀಶ್ವರೇಶ್ವರಾಯ ನಮಃ'–ಎಂಬ ಈ ನಾಮ ಮಂತ್ರವನ್ನು ಜಪಿಸಿದವನು ವಾಗ್ಮಿಯಾಗುತ್ತಾನೆ.

803) **ಸ. ಸಂ. :–** ಸಮಸ್ತಪ್ರಾಣಿಗಳಿಗೂ ಈಶ್ವರನಾದ ರುದ್ರನಿಗೂ ಈಶ್ವರನಾದವನು.

* * *

803) **ಮಹಾಹ್ರದಃ** = ಜ್ಞಾನಿಗಳು ಅತ್ಯಂತಹಿತವಾಗಿ ಅವಗಾಹನ ಮಾಡುವ ಮಹಾನಂದಸರೋವರದ ಮಡುವಿನಂತಿರುವವನು.

ಶಂ. ಭಾ. :– ಯಾವ ಆನಂದರೂಪವಾದ ಪರಮಾತ್ಮನಲ್ಲಿ ಮುಳುಗಿ ಯೋಗಿಗಳು ವಿಶ್ರಾಂತಿಪಡೆದು ಸುಖವಾಗಿರುವರೋ–ಅಂತಹ ದೊಡ್ಡ ಆನಂದಸರೋವರಕ್ಕೆ ಮಡುವಿನಂತಿರುವವನು.

809) **ಪ. ಭ. :–** ಪುಣ್ಯವಂತರು ಯಾವುದರಲ್ಲಿ ಮುಳುಗಿ-ಮುಳುಗಿ ತೃಪ್ತಿಪಡುವರೋ ಮತ್ತು ಪಾಪಿಷ್ಠರು ಯಾವುದರಲ್ಲಿ ಮುಳುಗಿಹೋಗುವರೋ–ಅಂತಹ ಮಹಾಸರೋವರದಂತೆ ಇರುವವನು. **ಕ್ಷಿಪಾಮ್ಯಜಸ್ರಮಶುಭಾನ್ ಆಸುರೀಷ್ವೇವ ಯೋನಿಷು ll** (ಗೀತಾ. ೧೬-೧೯)

ನಿರುಕ್ತಿ :– ಮಜ್ಜನ್ತಿ ಪಾಪಾಸ್ತೃಪ್ಯನ್ತಿ ಪುಣ್ಯಾ ಇತಿ ಮಹಾಹ್ರದಃ l

804) **ಸ. ಸಂ. :–** ಕಾಳೀಯಮರ್ದನಕಾಲದಲ್ಲಿ ಅಥವಾ ಸಮುದ್ರಶಯನಕಾಲದಲ್ಲಿ ಮಹಾಸರೋವರ (ಮಡುವು) ಉಳ್ಳವನು.

* * *

804) **ಮಹಾಗರ್ತಃ** = ಹೃದಯಗುಹೆಯ ದೊಡ್ಡ ಆಳದಲ್ಲಿ ಇರುವವನು ; ಆಳವಾದ ಸಂಸಾರವೆಂಬ ಅಥವಾ ಮಾಯೆಯೆಂಬ ಹಳ್ಳವುಳ್ಳವನು.

ಶಂ. ಭಾ. :– ಯಾವನ ಮಾಯೆಯು ಆಳವಾದ ಹಳ್ಳದಂತೆ ದಾಟಲು ಅಸಾಧ್ಯವಾಗಿರುವುದೋ–ಅಂತಹವನು. **ಮಮ ಮಾಯಾ ದುರತ್ಯಯಾ l** (ಗೀತಾ. ೭-೧೪) ದೊಡ್ಡ ರಥವುಳ್ಳವನು.

810) **ಪ. ಭ. :–** ಪಾಪದಿಂದ ಆಕ್ರಮಿಸಲ್ಪಟ್ಟ ಪ್ರಜ್ಞೆಯನ್ನು ಕಳೆದುಕೊಂಡ ಜನರಿಗೆ ರೌರವವೇ ಮುಂತಾದ ದೊಡ್ಡ ಹಳ್ಳಗಳು ಯಾವನಿಂದ ಉಂಟಾಗುವುವೋ–ಅವನು.

ನಿರುಕ್ತಿ :– ಪಾಪಾಕ್ರಾನ್ತತಯಾ ನಷ್ಟಪ್ರಜ್ಞಾನಾಂ ರೌರವಾದಯಃ l
ಗರ್ತಾ ಯಸ್ಮಾನ್ಮಹಾಗರ್ತಃ ಸ ಸ್ಮೃತೋ ವಸುವರ್ಣಕಃ ll

805) **ಸ. ಸಂ. :–** ಹೃದಯಗುಹೆಯೆಂಬ ದೊಡ್ಡ ಹಳ್ಳದಲ್ಲಿರುವವನು ; ಶೇಷಾಚಲಾದಿ ದೊಡ್ಡ ಪರ್ವತಗಳಲ್ಲಿ ಇರುವವನು.

* * *

805) **ಮಹಾಭೂತಃ** = ಪರಮಸ್ವರೂಪಿಯು ; ಅಖಂಡಸತ್ತಾಸ್ವರೂಪಿಯು. **ಏಕೋ ವಿಷ್ಣುರ್ಮಹದ್ಭೂತಂ l** ಪಂಚಮಹಾಭೂತಸ್ವರೂಪಿಯು.

ಶಂ. ಭಾ. :– ಮೂರು ಕಾಲಗಳ ಪರಿಚ್ಛೇದವೂ ಇಲ್ಲದ ಸ್ವರೂಪನಾದುದರಿಂದ ಮಹಾಭೂತನು.

811) **ಪ. ಭ. :–** ಮಹಾತ್ಮರು ಯಾವನಿಗೆ ಸ್ವಕೀಯರಾಗಿರುವರೋ ಅವನು.

ನಿರುಕ್ತಿ :– ಮಹಾಭೂತೋ ಮಹಾತ್ಮಾನಃ ಸ್ವಭೂತಾ ಯಸ್ಯ ಚೋಚ್ಯತೇ ||

806) **ಸ. ಸಂ. :–** ಆಕಾಶವೇ ಮುಂತಾದ ಮಹಾಭೂತಗಳು ಯಾವನಿಂದ ಉಂಟಾಗುತ್ತವೆಯೋ–ಅವನು.

*   *   *

806) **ಮಹಾನಿಧಿಃ** = ಅಕ್ಷಯವಾದ ಪರಮಾನಂದಶಾಂತಿನಿಧಿಯಾಗಿರುವವನು ; ಯೋಗಿಗಳಿಗೆ ಅಮೂಲ್ಯವಾದ ನಿಧಿಯಾಗಿರುವವನು.

ಶಂ. ಭಾ. :– ಸಮಸ್ತಭೂತಗಳೂ ಯಾವನಲ್ಲಿ ನೆಲೆಸಲ್ಪಟ್ಟಿವೆಯೋ ಅಂತಹ ಅತಿದೊಡ್ಡ ನಿಧಿಯು.

812) **ಪ. ಭ. :–** ಮಹಾತ್ಮರು ಯಾವನಿಗೆ ನಿಧಿಯಂತೆ ಅತ್ಯಂತ ಪ್ರಿಯರಾಗಿರುವನೋ–ಅವನು.

ನಿರುಕ್ತಿ :– ಮಹಾತ್ಮಾನೋ ನಿಧಿರಿವ ಪ್ರಿಯಾ ಯಸ್ಯ ಮಹಾನಿಧಿಃ ||

807) **ಸ. ಸಂ. :–** ತನ್ನ ಪ್ರಾಪ್ತಿಯಿಂದ ನಿಧಿಯಂತೆ ಸಂತೋಷವನ್ನುಂಟುಮಾಡುವವನು.

*   *   *

ಕುಮುದಃ ಕುನ್ದರಃ ಕುನ್ದಃ ಪರ್ಜನ್ಯಃ ಪಾವನೋಽನಿಲಃ |
ಅಮೃತಾಶೋಽಮೃತವಪುಃ ಸರ್ವಜ್ಞಃ ಸರ್ವತೋಮುಖಃ ||೧೦೦||

807) **ಕುಮುದಃ** = ಭೂಮಿಗೆ ಆನಂದವನ್ನು ಉಂಟುಮಾಡುವವನು.

ಶಂ. ಭಾ. :– ಭಾರವನ್ನಿಳಿಸಿ ಭೂಮಿಗೆ ಆನಂದವನ್ನು ಉಂಟುಮಾಡುವವನು.

813) **ಪ. ಭ. :–** ಪ್ರಾಕೃತವಾದ ಭೂಮಂಡಲದಲ್ಲಿ ಆನಂದಿಸುವವನು ; ಮುಕ್ತಿಭೂಮಿಯನ್ನು ಅನುಗ್ರಹಿಸುವವನು.

ನಿರುಕ್ತಿ :– **ಪ್ರಾಕೃತೇ ಮಣ್ಡಲೇ ಭೂಮೌ ಮೋದನಾಚ್ಚ ಮಹಾತ್ಮಭಿಃ**
ಮುಕ್ತಿಭೂಮಿಪ್ರದಾನಾದ್ವಾ ಕುಮುದಃ ಪರಿಕೀರ್ತಿತಃ ॥

808) **ಸ. ಸಂ. :–** ಭೂಮಿಯಲ್ಲಿ ಆನಂದಿಸುವವನು.

* * *

808) **ಕುನ್ದರಃ** = ಭೂಮಿಯನ್ನು ಸೀಳಿದ ವರಾಹರೂಪಿಯು.

ಶಂ. ಭಾ. :– ಕುಂದಪುಷ್ಪಗಳಿಗೆ ಸಮಾನವಾದ ಶುದ್ಧವಾದ ಫಲಗಳನ್ನು ಕೊಡುವವನು ಅಥವಾ ತೆಗೆದುಕೊಳ್ಳುವವನು ; ಹಿರಣ್ಯಾಕ್ಷನನ್ನು ಸಂಹರಿಸಲು ಭೂಮಿಯನ್ನು ಸೀಳಿದವನು. **ಕುಂ ಧರಾಂ ದಾರಯಾಮಾಸ ಹಿರಣ್ಯಾಕ್ಷಜಿಘಾಂಸಯಾ । ವಾರಾಹರೂಪಮಾಸ್ಥಾಯ....**

814) **ಪ. ಭ. :–** ಭಕ್ತರಿಗೆ ಕುಂದಪುಷ್ಪದಂತೆ ಶುದ್ಧವಾದ ಪರತತ್ತ್ವ ಜ್ಞಾನವನ್ನು ತಾನಾಗಿಯೇ ಕೊಡುವವನು.

ನಿರುಕ್ತಿ :– **ಭಕ್ತೇಭ್ಯಶ್ಚ ಸದಾ ಕುನ್ದಸುಮವದ್ವಿಮಲಾಂ ಮತಿಮ್ ।**
ಸ್ವಯಂ ರಾತಿ ದದಾತೀತಿ ಕುನ್ದರಃ ಪರಿಕೀರ್ತಿತಃ ॥

809) **ಸ. ಸಂ. :–** ಭಕ್ತರು ಸಮರ್ಪಿಸಿದ ಕುಂದಪುಷ್ಪದಿಂದ ರಮಿಸುವವನು ; ಶಬ್ದವನ್ನು ಮಾಡುವವನು ; ಭೂಮಿಯನ್ನು ಇಂದ್ರನಿಗೆ ಅನುಗ್ರಹಿಸಿದವನು.

* * *

809) **ಕುನ್ದಃ** = ಮಾಘಮಾಸದ ಮಲ್ಲೆಹೂವಿನಂತೆ ಶುದ್ಧವಾಗಿರುವವನು ; ಭೂಮಿಯನ್ನು ಅನುಗ್ರಹಿಸಿದವನು.

ಶಂ. ಭಾ. :– ಕುಂದಪುಷ್ಪದಂತೆ ಸುಂದರವಾದ ಅಂಗಗಳುಳ್ಳವನು ; ಸ್ವಚ್ಛಸ್ಫಟಿಕಮಣಿಯಂತೆ ನಿರ್ಮಲನು ; ಭೂಮಿಯನ್ನು ಕಶ್ಯಪರಿಗೆ ದಾನವಾಗಿ ಕೊಟ್ಟವನು. **ಸರ್ವಪಾಪವಿಶುದ್ಧ್ಯರ್ಥಂ ವಾಜಿಮೇಧೇನ ಚೇಷ್ಟವಾನ್ । ತಸ್ಮಿನ್ಯಜ್ಞೇ ಮಹಾದಾನೇ ದಕ್ಷಿಣಾಂ ಭೃಗುನನ್ದನಃ । ಮಾರೀಚಾಯ ದದೌ ಪ್ರೀತಃ ಕಶ್ಯಪಾಯ ವಸುನ್ಧರಾಮ್ ॥** (ಹರಿ. ೧-೪೧-೧೬)

815) ಪ. ಭ. :– ಭಕ್ತರಿಗೆ ಪರಭಕ್ತಿ-ಪರಜ್ಞಾನಾದಿರೂಪವಾದ ಭೂಮಿಯನ್ನು ಕೊಡುವವನು ; ಪಾಪವನ್ನು ಸೀಳಿಹಾಕುವವನು.

ನಿರುಕ್ತಿ :– **ಭಕ್ತೇಭ್ಯಃ ಪರಭಕ್ತ್ಯಾದಿಪ್ರದಾನಾತ್ಕುನ್ದ ಉಚ್ಯತೇ ।**
ವಿದಾರಿತಂ ಪಾಪಜಾತಂ ಕುನ್ದಃ ಶೋಧಯತೀತಿ ವಾ ॥

810) ಸ. ಸಂ. :– ಕುತ್ಸಿತವಾದುದನ್ನು ಖಂಡಿಸುವವನು.

* * *

810) **ಪರ್ಜನ್ಯಃ** = ತಾಪತ್ರಯಗಳನ್ನು ಶಮನಗೊಳಿಸುವವನು ; ಎಲ್ಲ ಇಷ್ಟಾರ್ಥಗಳನ್ನೂ ಮಳೆಗರೆಯುವ ಪರ್ಜನ್ಯದೇವತಾರೂಪಿಯು.

ಶಂ. ಭಾ. :– ಪರ್ಜನ್ಯನಂತೆ ಆಧ್ಯಾತ್ಮಿಕ್ರವೇ ಮುಂತಾದ ತಾಪತ್ರಯಗಳನ್ನು ಶಮನಗೊಳಿಸುವವನು ; ಸರ್ವಕಾಮಗಳನ್ನೂ ಮಳೆಗರೆಯುವವನು.

816) ಪ. ಭ. :– ತತ್ತ್ವಜ್ಞಾನವನ್ನು ಕೊಟ್ಟು ತಾಪಗಳನ್ನು ಸದಾ ಪರಿಹರಿಸುವವನು.

ನಿರುಕ್ತಿ :– **ಸ್ವತತ್ತ್ವಜ್ಞಾನದಾನೇನ ನಿತ್ಯಂ ತಾಪತ್ರಯಾಪಹಾ ।**
ಪರ್ಜನ್ಯಃ ಸ ಸಮಾಖ್ಯಾತಃ.......... ॥

811) ಸ. ಸಂ. :– ಶ್ರೇಷ್ಠವಾದ ಯುದ್ಧವು ಯಾವನಿಂದ ಉಂಟಾಗುವುದೋ ಅವನು.

* * *

811) **ಪಾವನಃ** = ಪವಿತ್ರಗೊಳಿಸುವವನು.

ಶಂ. ಭಾ. :– ಸ್ಮರಣಮಾತ್ರದಿಂದ ಪವಿತ್ರಗೊಳಿಸುವವನು.

817) ಪ. ಭ. :– ಭಕ್ತರ ಬಳಿಗೆ ಹೋಗುವವನು.

ನಿರುಕ್ತಿ :– **............. ಪಾವನಃ ಪವತೇ ಹಿ ಯಃ ॥**

812) ಸ. ಸಂ. :– ಶುದ್ಧಿಗೊಳಿಸುವವನು ; ಪವಿತ್ರಗೊಳಿಸುವವನು ; ರಾಜರನ್ನು ಕಾಪಾಡುವವನು ; ಪವನನಿಗೆ (ವಾಯುದೇವನಿಗೆ) ತಂದೆಯಾದವನು.

* * *

812) **ಅನಿಲಃ** = ವಾಯುದೇವತಾಸ್ವರೂಪಿಯು ; ಪ್ರೇರಕರಿಲ್ಲದವನು.

ಶಂ. ಭಾ. :– ಪ್ರೇರಕನಿಲ್ಲದವನು ; ನಿತ್ಯಪ್ರಬುದ್ಧನಾದುದರಿಂದ ನಿದ್ರಿಸದವನು ; ಭಕ್ತರಿಗೆ ಸುಲಭನಾದವನು.

818) ಪ. ಭ. :– ಶರಣಾಗತರನ್ನು ಸದಾ ಅನುಗ್ರಹಿಸಲು ತನಗೆ ಬೇರೊಬ್ಬ ಪ್ರೇರಕರಿಲ್ಲದವನು.

ನಿರುಕ್ತಿ :– **ಸ್ವಸ್ಯ ಸ್ವಸ್ಮಾತ್ಪ್ರೇರಕೋಽನ್ಯಃ ಪ್ರಪನ್ನಾನುಗ್ರಹೇ ಸದಾ ।**
ನಾಸ್ತೀತಿ ಸೋಽನಿಲಃ ಪ್ರೋಕ್ತೋ ಮುನ್ಯರ್ಣೋ ಮನುರುತ್ತಮಃ ॥

813) ಸ. ಸಂ. :– ವಾಯುಭಕ್ತರನ್ನು ಸ್ವೀಕರಿಸುವವನು.

* * *

813) **ಅಮೃತಾಶಃ** = ಪರಮಾನಂದಾಮೃತವನ್ನು ಭೋಗಿಸುವವನು.

ಶಂ. ಭಾ. :– ಸ್ವಾತ್ಮಾನಂದವೆಂಬ ಅಮೃತವನ್ನು ಕುಡಿಯುವವನು ; ಸಮುದ್ರವನ್ನು ಕಡೆದು ತೆಗೆದ ಅಮೃತವನ್ನು ದೇವತೆಗಳಿಗೆ ಕುಡಿಸಿ ತಾನೂ ಕುಡಿದವನು. ಅಳಿವಿಲ್ಲದ ಇಚ್ಛೆಯುಳ್ಳವನು.

819) ಪ. ಭ. :– ಭಕ್ತರು ತನ್ನ ಗುಣಾಮೃತವನ್ನು ಆದರದಿಂದ ಕುಡಿಯುವಂತೆ ಮಾಡುವವನು.

ನಿರುಕ್ತಿ :– **ಯಶ್ಚಾಶಯತಿ ಭಕ್ತಾನ್ಸ್ವೈ ಸ್ವಗುಣಾಮೃತಮಾದರಾತ್ ।**
ಅಮೃತಾಶಃ ಸ ಇತ್ಯುಕ್ತಃ ಶ್ರುತಪೀಯೂಷದೋ ಮನುಃ ॥

'ಓಂ ಅಮೃತಾಶಾಯ ನಮಃ'–ಎಂಬ ಈ ನಾಮಮಂತ್ರಜಪವು ಶಾಸ್ತ್ರವೆಂಬ ಅಮೃತವನ್ನು ಕೊಡುತ್ತದೆ.

814) ಸ. ಸಂ. :– ಅಮೃತನಿಗೆ (ವಾಯುವಿಗೆ) ಸುಖವನ್ನುಂಟು ಮಾಡುವ ಭಾರತೀದೇವಿಯನ್ನು ಕೊಟ್ಟವನು. ಮುಕ್ತಾತ್ಮರಿಗೆ ಆಶೆಯು ಯಾವನ ವಿಷಯದಲ್ಲಿರುವುದೋ–ಅವನು. ಅಮೃತಾಂಶಃ ಎಂಬ ಪಾಠದ ಪ್ರಕಾರ ಮರಣರಹಿತರಾದ ಮತ್ಸ್ಯಾದಿಗಳ ಅಂಶಗಳುಳ್ಳವನು.

* * *

814) **ಅಮೃತವಪುಃ** = ಅಮೃತಮಯವಾದ ಶರೀರವುಳ್ಳವನು.

ಶಂ. ಭಾ. :– ಮರಣವಿಲ್ಲದ ಶರೀರವುಳ್ಳವನು.

820) **ಪ. ಭ. :–** ಅಮೃತಮಯವಾದ ದೇಹವುಳ್ಳವನು.
ನಿರುಕ್ತಿ :– **ವಪುರ್ಯಸ್ಯಾಮೃತಮಿತಿ ಸ ಚಾಮೃತವಪುಃ ಸ್ಮೃತಃ ||**

815) **ಸ. ಸಂ. :–** ಅಮೃತದ ಪ್ರಯೋಜನಕ್ಕೋಸ್ಕರ ನಾರಾಯಣೀ ರೂಪವಾದ, ಅಜಿತರೂಪವಾದ ಅಥವಾ ಧನ್ವಂತರಿಯ ರೂಪವಾದ ಶರೀರವುಳ್ಳವನು.

* * *

815) **ಸರ್ವಜ್ಞಃ**= ಎಲ್ಲವನ್ನೂ ತಿಳಿದವನು.

ಶಂ. ಭಾ. :– ಎಲ್ಲವನ್ನೂ ತಿಳಿದವನು. **ಯಃ ಸರ್ವಜ್ಞಃ ಸರ್ವವಿತ್** (ಮುಂ. ೧-೧-೯.)

821) **ಪ. ಭ. :–** ಭಕ್ತರಿಗಾಗಿ ಸಾಧ್ಯಾಸಾಧ್ಯವಾದ ಶಕ್ಯಾಶಕ್ಯವಾದ ಎಲ್ಲ ಒಳ್ಳೆಯದನ್ನೂ ಅನುಸಂಧಾನಮಾಡುವವನು.
ನಿರುಕ್ತಿ :– **ಶಕ್ಯಾಶಕ್ಯಾದಿಕಂ ಸರ್ವಂ ಸಾಧ್ಯಾಸಾಧ್ಯಾದಿಕಂ ಚ ಯಃ |**
ಭಕ್ತಾನಾಮನುಸನ್ಧತ್ತೇ ಸ ಸರ್ವಜ್ಞ ಇತೀರಿತಃ ||

816) **ಸ. ಸಂ. :–** ಸರ್ವವಿಷಯಕಜ್ಞಾನವುಳ್ಳವನು.

* * *

816) **ಸರ್ವತೋಮುಖಃ** = ಎಲ್ಲ ಕಡೆಗಳಲ್ಲಿಯೂ ಮುಖಗಳುಳ್ಳವನು.

ಶಂ. ಭಾ. :– ಎಲ್ಲೆಲ್ಲಿಯೂ ಮುಖಗಳುಳ್ಳವನು. **ಸರ್ವತೋಽಕ್ಷಿ ಶಿರೋಮುಖಮ್ ||** (ಗೀತಾ. ೧೩-೧೩)

822) **ಪ. ಭ. :–** ಆಯಾ ನಿಯಮಗಳನ್ನು ಬಿಟ್ಟು ಯಾವುದಾದರೂ ನೆಪದಿಂದ ಸುಲಭವಾಗಿ ಗ್ರಹಿಸಲು ಸಾಧ್ಯನಾದವನು ; ಎಲ್ಲೆಲ್ಲಿಯೂ ಮುಖ (ಪ್ರವೇಶಸಾಧನ) ಗಳುಳ್ಳವನು.
ನಿರುಕ್ತಿ :– **ತತ್ತನ್ನಿಯಮಮುತ್ಸೃಜ್ಯ ಯೋ ಜ್ಞಾತುಂ ಶಕ್ಯತೇ ಬುಧೈಃ |**
ವ್ಯಾಜೇನ ಯೇನ ಕೇನಾಪಿ ಸ ಸ್ಮೃತಃ ಸರ್ವತೋಮುಖಃ ||

817) **ಸ. ಸಂ. :–** ಎಲ್ಲ ದಿಕ್ಕುಗಳಲ್ಲಿಯೂ ಮುಖಗಳುಳ್ಳವನು. **ವಿಶ್ವತಶ್ಚಕ್ಷುಃ (ಶ್ರುತಿಃ)** ಎಲ್ಲೆಲ್ಲಿಯೂ ಮುಖವುಳ್ಳ ನೀರನ್ನು ಆಶ್ರಯಿಸಿರುವವನು.

* * *

ಸುಲಭಃ ಸುವ್ರತಃ ಸಿದ್ಧಃ ಶತ್ರುಜಿಚ್ಛತ್ರುತಾಪನಃ ।
ನ್ಯಗ್ರೋಧೋದುಮ್ಬರೋಽಶ್ವತ್ಥಶ್ಚಾಣೂರಾನ್ಧ್ರನಿಷೂದನಃ ॥೧೦೧॥

817) **ಸುಲಭಃ =** ಭಕ್ತರಿಗೆ ಸುಲಭೋಪಾಯಗಳಿಂದ (ಸುಲಭವಾದ ಉಪಾಸನಾದ್ರವ್ಯಗಳಿಂದ) ಸುಲಭವಾಗಿ ದೊರೆಯುವವನು.

ಶಂ. ಭಾ. :– ಕೇವಲ ಭಕ್ತಿಯಿಂದ ಸಮರ್ಪಿಸಲ್ಪಟ್ಟ ಪತ್ರ-ಪುಷ್ಪ-ಫಲಾದಿಗಳಿಂದಲೂ ಸುಖವಾಗಿ ದೊರೆಯುವವನು. **ಪತ್ರೇಷು ಪುಷ್ಪೇಷು ಫಲೇಷು ತೋಯೇಷ್ವಕ್ರೀತಲಭ್ಯೇಷು ಸದೈವ ಸತ್ಸು । ಭಕ್ತ್ಯೇಕಲಭ್ಯೇ ಪುರುಷೇ ಪುರಾಣೇ ಮುಕ್ತ್ಯೈ ಕಥಂ ನ ಕ್ರಿಯತೇ ಪ್ರಯತ್ನಃ ॥** (ಗರುಡ ಪು. ೧೨-೨೭-೩೩)

823) **ಪ. ಭ. :–** ಅತ್ಯಮೂಲ್ಯನಾಗಿದ್ದರೂ ಅಲ್ಪವಾದ ಉಪಾಯಗಳಿಂದ ಪಡೆಯಲು ಸಾಧ್ಯನಾದವನು ; ಪತ್ರ-ಪುಷ್ಪಾದಿ ಸಾಧನಗಳಿಂದಲೂ ಭಕ್ತರಿಗೆ ದೊರೆಯುವವನು. **ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ ॥**
ನಿರುಕ್ತಿ **:– ಸರ್ವೇಷಾಂ ಸುಪ್ರವೇಶತ್ವಾತ್ಸುಲಭಃ ಪರಿಕೀರ್ತಿತಃ ।**

818) **ಸ. ಸಂ. :–** ದೇವತೆಗಳಲ್ಲಿ ಬೆಳಗುವವನು ; ಸುಖವಾಗಿ ದೊರೆಯುವವನು.

* * *

818) **ಸುವ್ರತಃ =** ರಕ್ಷಣೆಯೆಂಬ ಒಳ್ಳೆಯ ವ್ರತವುಳ್ಳವನು. ಒಳ್ಳೆಯ ವ್ರತಗಳ ಆಚರಣೆಯಿಂದ ದೊರಕುವವನು. ಒಳ್ಳೆಯ ವ್ರತಗಳನ್ನು ಆಚರಿಸುವವನು.

ಶಂ. ಭಾ. :– ಒಳ್ಳೆಯ ಭೋಜನವುಳ್ಳವನು ; ಒಳ್ಳೆಯ ಭೋಜನವನ್ನು (ಭೋಗವನ್ನು) ಬಿಡುವವನು.

824) **ಪ. ಭ. :–** ಯಾವುದಾದರೂ ಬಗೆಯಲ್ಲಿ ತನ್ನನ್ನು ಶರಣು ಹೊಂದಿದವರನ್ನು ಎಲ್ಲ ರೀತಿಗಳಲ್ಲಿಯೂ ಕಾಪಾಡುವ ದೃಢವಾದ ವ್ರತ ವುಳ್ಳವನು.

ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ ।
ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ವ್ರತಂ ಮಮ ॥

ನಿರುಕ್ತಿ :– ಯೇನ ಕೇನ ಪ್ರವಿಷ್ಟಾನಾಂ ಸರ್ವಥಾ ಪರಿಪಾಲನಮ್ ।
ದೃಢಂ ಸುಷ್ಠು ವ್ರತಂ ಯಸ್ಯ ಸ ಸುವ್ರತ ಉದಾಹೃತಃ ॥

819) **ಸ. ಸಂ. :–** ಶ್ರೇಷ್ಠವಾದ ವ್ರತವು ಯಾವನ ವಿಷಯವಾಗಿ ರುವುದೋ–ಅವನು.

* * *

819) **ಸಿದ್ಧಃ** = ಸ್ವತಃ ಸಿದ್ಧನಾದವನು ; ಸ್ವಾಧೀನವಾದ ಸರ್ವಸಿದ್ಧಿ ಗಳುಳ್ಳವನು.

ಶಂ. ಭಾ. :– ಇತರರಿಗೆ ಅಧೀನವಲ್ಲದ ಸಿದ್ಧಿಗಳುಳ್ಳವನು.

825) **ಪ. ಭ. :–** ತನ್ನ ತತ್ತ್ವಸ್ಥಿತಿಗಳನ್ನು ಬಲ್ಲವರಿಗೆ ಪ್ರಯತ್ನವೇ ಇಲ್ಲದೇ ಸಾಧ್ಯನಾದವನು.

ನಿರುಕ್ತಿ :– ಅಯತ್ನಸಾಧ್ಯಃ ಸಿದ್ಧಃ ಸ್ಯಾತ್ಸ್ವತತ್ತ್ವಸ್ಥಿತಿವೇದಿನಾಮ್ ॥

820) **ಸ. ಸಂ. :–**ಮಂಗಳವನ್ನು ಅಥವಾ ಶಾಸ್ತ್ರವನ್ನು ಧರಿಸಿರುವವನು.

* * *

820) **ಶತ್ರುಜಿತ್** = ಒಳ-ಹೊರ ಶತ್ರುಗಳನ್ನು ಜಯಿಸಿದವನು.

ಶಂ. ಭಾ. :– ದೇವಶತ್ರುಗಳನ್ನು ಜಯಿಸಿದವನು.

826) **ಪ. ಭ. :– ಶತ್ರುಜಿಚ್ಛತ್ರುತಾಪನಃ** = ತನ್ನ ದಿವ್ಯತೇಜಸ್ಸಿನಿಂದ ಬಲವನ್ನು ಪಡೆದು ಶತ್ರುಗಳನ್ನು ಜಯಿಸಿದ ಕಕುತ್ಸ್ಥ, ಪುರುಕುತ್ಸ ಮುಂತಾದ ರಾಜರ ಮೂಲಕ ಅಸುರ-ಗಂಧರ್ವಾದಿ ಶತ್ರುಗಳಿಗೆ ಸಂತಾಪವನ್ನು ಉಂಟು ಮಾಡಿದವನು.

ನಿರುಕ್ತಿ :– **ಪುರುಕುತ್ಸಕಕುತ್ಸಾದ್ಯೈಃ ಶತ್ರುಜಿದ್ಭಿಃ ಸ್ವತೇಜಸಾ ।**
ಆಪ್ಯಾಯಿತೈರಪಿ ಗುಣಾನ್ಯಸ್ತಾಪಯತಿ ನಿತ್ಯಶಃ ।
ಶತ್ರುಜಿಚ್ಛತ್ರುತಾಪನ ಇತಿ ವಿದ್ವದ್ಗಣೋದಿತಃ ॥

821) **ಸ. ಸಂ. :– ಶತ್ರುಜಿತ್** = ಶತ್ರುಗಳನ್ನು ಜಯಿಸುವವನು.

* * *

821) **ಶತ್ರುತಾಪನಃ** = ಒಳ-ಹೊರ ಶತ್ರುಗಳಿಗೆ ಸಂತಾಪವನ್ನುಂಟು ಮಾಡುವವನು.

ಶಂ. ಭಾ. :– ದೇವಶತ್ರುಗಳಿಗೆ ಸಂತಾಪವನ್ನುಂಟುಮಾಡುವವನು.

822) **ಸ. ಸಂ. :–** ಶತ್ರುಗಳಿಗೆ ಸಂತಾಪವನ್ನುಂಟುಮಾಡುವವನು ; ದೈತ್ಯಸಂಹಾರಕರಲ್ಲಿ ಮತ್ತು ತಪನನಲ್ಲಿ (ಸೂರ್ಯನಲ್ಲಿ) ಅಂತರ್ಯಾಮಿಯಾಗಿರುವವನು.

* * *

822) **ನ್ಯಗ್ರೋಧಃ** = ವಟವೃಕ್ಷಸ್ವರೂಪಿಯಾದವನು ; ಸಂಸಾರವಟವೃಕ್ಷಸ್ವರೂಪಿಯಾದವನು ; ಕೆಳಮುಖವಾಗಿ ಬೆಳೆಯುವ ವಿಶ್ವ (ದೇಹ) ವೃಕ್ಷರೂಪಿಯಾದವನು.

ಶಂ. ಭಾ. :– ಕೆಳಮುಖವಾಗಿ ಬೆಳೆಯುವವನು ಮತ್ತು ಎಲ್ಲಕ್ಕೂ ಮೇಲೆ ಬೆಳಗುವವನು. ಎಲ್ಲ ಭೂತಗಳನ್ನೂ ತಿರಸ್ಕರಿಸುವಂತೆ ತನ್ನ ಮಾಯೆಯನ್ನು ಆವರಿಸುವವನು ಅಥವಾ ನಿರೋಧಿಸುವವನು.

827) **ಪ. ಭ. :– ನ್ಯಗ್ರೋಧೋದುಮ್ಬರಃ** = ಬಗ್ಗಿ ನಮಸ್ಕರಿಸುವ ಭಕ್ತರಿಂದ–ತಮ್ಮನ್ನು ಅನುಗ್ರಹಿಸಲು ಅಭಿಮುಖನಾಗಿರುವಂತೆ ಮಾಡಿಕೊಂಡು ತಮ್ಮೊಳಗೆ ಯಾವಾಗಲೂ ಪ್ರತಿಷ್ಠಾಪಿಸಲ್ಪಡುವವನು. (ತ್ರಿಗುಣಗಳನ್ನೂ ಮೀರಿರುವ ಪರಂಧಾಮ, ಲಕ್ಷ್ಮೀದೇವೀ ಮತ್ತು ಪರಿಜನರುಳ್ಳವನು.)
ನಿರುಕ್ತಿ :– **ನ್ಯಗ್ಭೂತೈಃ ಪ್ರಣತೈಃ ಸ್ವಾನುಗ್ರಹೌನ್ಮುಖ್ಯೇನ ರುಧ್ಯತೇ ।**
ಯೋ ವ್ಯವಸ್ಥಾಪ್ಯತೇ ನಿತ್ಯಂ ನ್ಯಗ್ರೋಧಃ ಸ ಉದಾಹೃತಃ ॥

ನಿರುಕ್ತಿ :– **ಗುಣತ್ರಯಾದುದ್ಗತಂ ಯತ್ಪರಮಂ ಧಾಮ ಚಾಮ್ಬರಮ್ ।**
ಲಕ್ಷ್ಮೀಪರಿಜನಾದಿಶ್ಚ ಯಸ್ಯಾಸ್ತಿ ಸ ಉದುಮ್ಬರಃ ॥

ಇದು **ನ್ಯಗ್ರೋಧಃ – ಉದುಮ್ಬರಃ** = ಎಂಬ ಪ್ರತ್ಯೇಕಪದಗಳ ಅರ್ಥ ಮತ್ತು ನಿರುಕ್ತವಾಯಿತು. **ನ್ಯಗ್ರೋಧೋದುಮ್ಬರಃ** –ಎಂಬ ಒಟ್ಟು ಪದದ ಅರ್ಥ: ಅತ್ಯಂತ ಉನ್ನತರಾದವರಿಂದ ಸೇವಿಸಲ್ಪಡುವವನು–ಅಂತೆಯೇ ಅತಿನೀಚರಾದವರನ್ನೂ ಅನುವರ್ತನೆಮಾಡುವವನು.

ನ್ಯಗ್ರೋಧೋದುಮ್ಬರ ಇತಿ ಹ್ಯೇಕಂ ನಾಮ ಪ್ರಕೀರ್ತಿತಮ್ ।
ಅತ್ಯುಚ್ಛ್ರಿತಾನಾಂ ಸೇವ್ಯೋ ಯೋಽಪ್ಯತಿನೀಚಾನುವರ್ತನಾತ್ ॥
ನ್ಯಗ್ರೋಧೋದುಮ್ಬರಃ ಸ ಸ್ಯಾದ್ದಶಾರ್ಣಃ ಸರ್ವಸಿದ್ಧಿದಃ ॥

'ಓಂ ನ್ಯಗ್ರೋಧೋದುಂಬರಾಯ ನಮಃ'–ಈ ನಾಮಮಂತ್ರ ಜಪವು ಸರ್ವಸಿದ್ಧಿಯನ್ನೂ ಕೊಡುತ್ತದೆ.

823) **ಸ. ಸಂ. :– ನ್ಯಗ್ರೋಧಃ** = ಎಲ್ಲ ಭೂತಗಳನ್ನೂ ಕೆಳಕ್ಕೆ ತಳ್ಳಿ ವೃದ್ಧಿಹೊಂದುವವನು.

* * *

823) **ಉದುಮ್ಬರಃ**= ಅತ್ತೀಮರವೆಂಬ ಯಜ್ಞವೃಕ್ಷರೂಪಿಯಾದ ವನು.

ಶಂ. ಭಾ. :– ಕಾರಣರೂಪದಿಂದ ಆಕಾಶಕ್ಕಿಂತಲೂ ಮೇಲೆ ಎದ್ದಿರು ವವನು ; ಅನ್ನರೂಪನಾಗಿ ವಿಶ್ವವನ್ನು ಪೋಷಿಸುವವನು. **ಊರ್ಗ್ವ ಅನ್ನಮುದುಮ್ಬರಃ** (ತೈ .ಬ್ರಾ. ೧-೩-೮-೪೯)

824) **ಸ. ಸಂ. :–** ಆಕಾಶದಿಂದ ಮೇಲೆ ಎದ್ದವನು. **ಔದುಮ್ಬರಃ** = ಜೀವವನ್ನು ತನ್ನ ಭಕ್ತನನ್ನಾಗಿ ಸ್ವೀಕರಿಸುವ ಲಕ್ಷ್ಮಿಗೆ ಸ್ವಾಮಿಯಾದವನು. ಸಮಾನವಾಗಿರುವ ಜೀವಗಳಿಗೆ ಪ್ರಾಪ್ಯನಾದವನು.

* * *

824) **ಅಶ್ವತ್ಥಃ** = ಅಶ್ವತ್ಥವೃಕ್ಷಸ್ವರೂಪಿಯು ; ಊರ್ಧ್ವಮೂಲವೂ ಅಧಃಶಾಖವೂ ಆದ ಸಂಸಾರವೆಂಬ (ದೇಹವೆಂಬ) ಅಶ್ವತ್ಥವೃಕ್ಷರೂಪಿಯಾದ ವನು.

ಶಂ. ಭಾ. :– ಯಾವುದು ನಾಳೆಗೂ ಇರುವುದಿಲ್ಲವೋ (ಅತ್ಯಂತ ಕ್ಷಣಿಕವೋ) ಅಂತಹ ವ್ಯಕ್ತಜಗತ್ಸ್ವರೂಪಿಯಾದವರು. **ಊರ್ಧ್ವ ಮೂಲೋಽವಾಕ್ಶಾಖಃ ಏಷೋಽಶ್ವತ್ಥಃ ಸನಾತನಃ ॥** (ಕಠ.೬-೧) **ಅಶ್ವತ್ಥಂ ಪ್ರಾಹುರವ್ಯಯಮ್ ।** (ಗೀತಾ ೧೫-೧)

828) **ಪ. ಭ. :–** ಅನಿತ್ಯವಾದ ಇಂದ್ರಾದಿಪದವಿಗಳು ಯಾರಿಗೆ ಇವೆಯೋ–ಅವರಲ್ಲಿಯೂ ನಿತ್ಯನಿಯಾಮಕನಾಗಿರುವವನು.

ನಿರುಕ್ತಿ :– **ಅನಿತ್ಯಮಿನ್ದ್ರಾದಿಪದಂ ಯೇಷಾಂ ತೇಷ್ವಪಿ ನಿತ್ಯಶಃ ।**
ನಿಯಾಮಕತ್ವೇನಾಶ್ವತ್ಥಸ್ತಿಷ್ಠತೀತಿ ಸ ಕೀರ್ತಿತಃ ॥

825) **ಸ. ಸಂ. :–** ಅಶ್ವದಂತೆ ಇರುವವನು. **ಕಲಾವಾಮ್ರೋಪಮಾಜೀವಾಸ್ತ್ರೇತಾಸ್ವೌದುಮ್ಬರೋಪಮಾಃ । ಕೃತೇಽಶ್ವತ್ಥಸಮಾಶ್ಚೈವ ಯಾನ್ತಿ ಬ್ರಹ್ಮವಶಾಃ ಸದಾ ॥**

* * *

825) **ಚಾಣೂರಾನ್ಧ್ರನಿಷೂದನಃ=** ಆಂಧ್ರಜಾತಿಗೆ ಸೇರಿದ ಚಾಣೂರನೆಂಬ ದ್ವೇಷರೂಪಿಯಾದ ಜಟ್ಟಿಯನ್ನು ಸಂಹರಿಸಿದವನು. **ದ್ವೇಷಶ್ಚಾಣೂರಮಲ್ಲೋಽಯಂ** (ಕೃಷ್ಣೋಪನಿಷತ್)

ಶಂ. ಭಾ. :– ಚಾಣೂರನೆಂಬ ಆಂಧ್ರಜಾತಿಯ ವೀರನನ್ನು ಸಂಹರಿಸಿದವನು.

829) **ಪ. ಭ. :–** ದೇವವಿರೋಧಿಯಾದ ಚಾಣೂರನೆಂಬ ಅಸುರನಾದ ಆಂಧ್ರಮಲ್ಲನನ್ನು ಸಂಹರಿಸಿದವನು.

ನಿರುಕ್ತಿ :– **ಚಾಣೂರಾಖ್ಯಾಸುರಂ ಯೋಽರಿಂ ಮಲ್ಲಂ ಸೂದಿತವಾಂಶ್ಚ ಸಃ ।**
ಪ್ರೋಚ್ಯತೇ ಮುನಿಭಿರ್ನಿತ್ಯಂ ಚಾಣೂರಾನ್ಧ್ರನಿಷೂದನಃ ॥

826) **ಸ. ಸಂ. :– ಚಾಣೂರಾನ್ಧನಿಷೂದನಃ :** ಚಾಣೂರನನ್ನೂ ಅಂಧನಾದ ಧೃತರಾಷ್ಟ್ರನ ಪುತ್ರರಾದ ದುರ್ಯೋಧನಾದಿಗಳನ್ನೂ ಸಂಹರಿಸಿದವನು. **ಮಯಾ ಹತಾಂಸ್ತ್ವಂ ಜಹಿ ಮಾ ವ್ಯಥಿಷ್ಠಾಃ ।**

* * *

ಸಹಸ್ರಾರ್ಚಿಃ ಸಪ್ತಜಿಹ್ವಃ ಸಪ್ತೈಧಾಃ ಸಪ್ತವಾಹನಃ ।
ಅಮೂರ್ತಿರನಘೋಽಚಿನ್ತ್ಯೋ ಭಯಕೃದ್ಭಯನಾಶನಃ ॥೧೦೨॥

826) **ಸಹಸ್ರಾರ್ಚಿಃ** = ಅನಂತವಾದ ಕಿರಣಗಳುಳ್ಳವನು ; ಸೂರ್ಯ ರೂಪಿಯು.

ಶಂ. ಭಾ. :– ಅನಂತವಾದ ಕಿರಣಗಳುಳ್ಳವನು. **ದಿವಿ ಸೂರ್ಯ ಸಹಸ್ರಸ್ಯ ಭವೇದ್ಯುಗಪದುತ್ಥಿತಾ । ಯದಿ ಭಾಃ ಸದೃಶೀ ಸಾ ಸ್ಯಾದ್ಭಾಸಸ್ತಸ್ಯ ಮಹಾತ್ಮನಃ । (ಗೀತಾ. ೧೧-೧೨)**

830) **ಪ. ಭ. :–** ಪಾಚನ, ಶೋಷಣ, ಪ್ರತಾಪನ, ಪ್ರಕಾಶನಗಳೇ ಮುಂತಾದ ಧರ್ಮಗಳುಳ್ಳ ಅನೇಕಕಿರಣಗಳುಳ್ಳ ಸೂರ್ಯನಲ್ಲಿ ಇರಿಸಲ್ಪಟ್ಟ ಅನಂತತೇಜಸ್ಸುಗಳುಳ್ಳವನು.

ನಿರುಕ್ತಿ **:– ಸೂರ್ಯೇ ಸಹಸ್ರಮರ್ಚಿಂಷಿ ಶೋಷಣಾದಿಷು ಹೇತವಃ ।**
ಅಭಿವಿಷ್ಟಾನಿ ಯೇನಾಸೌ ಸಹಸ್ರಾರ್ಚಿರಿತಿ ಸ್ಮೃತಃ ॥

827) **ಸ. ಸಂ. :–** ಸಹಸ್ರಕಿರಣಗಳುಳ್ಳವನು.

* * *

827) **ಸಪ್ತಜಿಹ್ವಃ**= ಕಾಳೀ-ಕರಾಳೀ ಮುಂತಾದ ಏಳು ನಾಲಿಗೆಗಳುಳ್ಳ ಅಗ್ನಿದೇವಸ್ವರೂಪನು.

ಶಂ. ಭಾ. :– ಏಳು ನಾಲಿಗೆಗಳುಳ್ಳ ಅಗ್ನಿಸ್ವರೂಪಿಯು. **ಕಾಲೀ ಕರಾಲೀ ಚ ಮನೋಜವಾ ಚ ಸುಲೋಹಿತಾ ಯಾ ಚ ಸುಧೂಮ್ರವರ್ಣಾ । ಸ್ಫುಲಿಙ್ಗಿನೀ ವಿಶ್ವರೂಪೀ ಚ ದೇವೀ ಲೇಲಾಯಮಾನಾ ಇತಿ ಸಪ್ತಜಿಹ್ವಾಃ ॥ (ಮುಂ. ಉ. ೧-೨-೪)**

831) **ಪ. ಭ. :–** ದೇವತೆಗಳಿಗೆ ತೃಪ್ತಿಯನ್ನುಂಟುಮಾಡುವ ಹವಿಸ್ಸು ಗಳನ್ನು ಗ್ರಹಿಸಿ ಒಯ್ಯುವ ಅಧಿಕಾರವುಳ್ಳ ಕಾಲೀ-ಕರಾಲೀ ಮುಂತಾದ ಏಳು ನಾಲಿಗೆಗಳನ್ನು ಅಗ್ನಿಗೆ ದಯಪಾಲಿಸಿದವನು.

ನಿರುಕ್ತಿ **:– ಯಸ್ಮಾತ್ಕಾಲ್ಯಾದಿಜಿಹ್ವಾಶ್ಚ ಅಗ್ನೇರ್ಭವನ್ತಿ ಸಪ್ತ ಚ ।**
ಸ ಸಪ್ತಜಿಹ್ವ ಆಖ್ಯಾತೋ ಲೋಕಸಂತರ್ಪಣೇ ರತಃ ॥

828) **ಸ. ಸಂ. :–** ಅಗ್ನಿಗೆ ಅಂತರ್ಯಾಮಿರೂಪದಿಂದ ಏಳು ನಾಲಿಗೆ

ಗಳುಳ್ಳವನು ; ಏಳು ಜಟೆಗಳಿಂದ ಕೂಡಿದ ಸಪ್ತರ್ಷಿಗಳನ್ನೇ ತನ್ನ ನಾಲಿಗೆ ಗಳನ್ನಾಗಿ ಹೊಂದಿರುವವನು. **ನಾಹಂ ತಥಾದ್ಮಿ ಯಜಮಾನಹವಿಃ ।** (ಭಾಗವತ)

* * *

828) **ಸಪ್ತೈಧಾಃ** = ಏಳು ಬಗೆಯ ಸಮಿತ್ತುಗಳುಳ್ಳ ಅಗ್ನಿದೇವ ಸ್ವರೂಪಿಯು.

ಶಂ. ಭಾ. :– ಏಳು ದೀಪ್ತಿಗಳುಳ್ಳ ಅಗ್ನಿರೂಪಿಯು. **ಸಪ್ತ ತೇ ಅಗ್ನೇ ಸಮಿಧಃ ಸಪ್ತ ಜಿಹ್ವಾಃ ಸಪ್ತ ಋಷಯಃ ॥** (ತೈ. ಸಂ. ೧-೫-೪)

832) **ಪ. ಭ. :–** ಅಶ್ವತ್ಥ, ಉದುಂಬರ, ಶಮೀ, ವೈಕಂಕತ, ಅಶನಿಹತ, ಪುಷ್ಕರ, ಪರ್ಣ–ಎಂಬ ಏಳು ವನಸ್ಪತಿಗಳ ಸಮಿತ್ತುಗಳುಳ್ಳ ಅಥವಾ ಪಾಕಯಜ್ಞ, ಹವಿರ್ಯಜ್ಞ, ಸೋಮಸಂಸ್ಥಗಳೆಂಬ ಏಳು ಯಜ್ಞ ಗಳುಳ್ಳ ಇಷ್ಟಾಪೂರ್ತರೂಪವಾದ ಕರ್ಮಗಳುಳ್ಳ ಅಗ್ನಿಗೆ ಅಂತರ್ಯಾಮಿ ಯಾಗಿರುವವನು.*

ನಿರುಕ್ತಿ :– **ವಾನಸ್ಪತ್ಯಾಶ್ಚ ಸಮಿಧಃ ಸಪ್ತ ಸಂಸ್ಥಾನಿ ವಾ ತಥಾ ।**
ಇಷ್ಟಾಪೂರ್ತಾದಿಕರ್ಮಾಣಿ ಸಪ್ತೈಧಾಃ ಸನ್ತಿ ಯಸ್ಯ ಸಃ ॥

829) **ಸ. ಸಂ. :–** ಸಪ್ತರ್ಷಿಗಳನ್ನು ವೃದ್ಧಿಪಡಿಸುವವನು ; ಅಗ್ನಿಯ ಅಂತರ್ಯಾಮಿರೂಪವಾಗಿ ಏಳು ಸಮಿತ್ತುಗಳುಳ್ಳವನು.

* * *

829) **ಸಪ್ತವಾಹನಃ** = ಸಪ್ತಪ್ರಾಣರೂಪವಾದ ಏಳು ಕುದುರೆಗಳುಳ್ಳ ಸೂರ್ಯದೇವಸ್ವರೂಪಿಯು ; ಸಪ್ತವೆಂಬ ಹೆಸರುಳ್ಳ ಪ್ರಾಣವೆಂಬ ಅಶ್ವದಿಂದ ಒಯ್ಯಲ್ಪಡುವವನು.

ಶಂ. ಭಾ. :– ಏಳು ಕುದುರೆಗಳುಳ್ಳ ಅಥವಾ ಸಪ್ತವೆಂಬ ಹೆಸರಿನ ಒಂದು ಕುದುರೆಯುಳ್ಳ ಸೂರ್ಯರೂಪಿಯಾದವನು. **ಏಕೋ ಅಶ್ವೋ ವಹತಿ ಸಪ್ತನಾಮಾ ।** (ತೈ.ಆ. ೩-೧೧)

---

* ಔಪಾಸನ, ವೈಶ್ವದೇವ, ಸ್ಥಾಲೀಪಾಕ, ಅಷ್ಟಕಾ, ಮಾಸಿಶ್ರಾದ್ಧ, ಈಶಾನಬಲಿ, ಸರ್ಪಬಲಿ–ಇವು ಏಳು ಪಾಕಯಜ್ಞಗಳು, ಅಗ್ನಿಹೋತ್ರ, ದರ್ಶಪೂರ್ಣಮಾಸ, ಪಿಂಡಪಿತೃಯಜ್ಞ, ಪಶುಬಂಧ, ಆಗ್ರಯಣ, ಚಾತುರ್ಮಾಸ್ಯ ಮತ್ತು ಸೌತ್ರಾ

833) **ಪ. ಭ. :–** ಗಾಯತ್ರಿಯೇ ಮುಂತಾದ ಏಳು ಛಂದಸ್ಸುಗಳುಳ್ಳ ವೈದಿಕಮಂತ್ರಗಳಿಗೆ ಅಭಿಮಾನಿಗಳಾದ ಸೂರ್ಯದೇವನ ರಥಕ್ಕೆ ಕಟ್ಟಲ್ಪಟ್ಟಿರುವ ಏಳು ವಾಹನಗಳುಳ್ಳವನು ; ಏಳು ವಾಯುಸ್ಕಂಧಗಳನ್ನು ಒಯ್ಯುವವನು.

ನಿರುಕ್ತಿ :– **ಯೋ ವಹತ್ಯನಿಲಸ್ಕನ್ಧಾನ್ಸಪ್ತಾಸೌ ಸಪ್ತವಾಹನಃ ।**
ವಾಹನಾನಿ ಚ ಸನ್ತ್ಯಸ್ಯ ಸಪ್ತ ವಾ ಸಪ್ತವಾಹನಃ ॥

830) **ಸ. ಸಂ. :–** ಏಳು ಕುದುರೆಗಳುಳ್ಳ ಸೂರ್ಯನನ್ನು ಒಯ್ಯುವವನು.

* * *

830) **ಅಮೂರ್ತಿಃ**= ನಿರಾಕಾರನು ; ಪ್ರಾಕೃತವಾದ ಅವಯವಗಳಿಲ್ಲದವನು.

ಶಂ. ಭಾ. :– ಮೂರ್ತಿಹೀನನಾದವನು ; ಮೂರ್ತಿ–ಎಂದರೆ ಘನರೂಪವನ್ನು ಧರಿಸಲು ಸಮರ್ಥವಾದ ಚರಾಚರರೂಪಿಯು ಅಥವಾ ದೇಹರೂಪವಾದ ಅವಯವಗಳ ಸಂಘಟನೆಯಿಲ್ಲದವನು.

834) **ಪ. ಭ. :–** ಸ್ಥೂಲಭೌತಿಕಮೂರ್ತಿಗಳಿಲ್ಲದವನು.

ನಿರುಕ್ತಿ :– **ಸ್ಥೂಲಭೌತಿಕಮೂರ್ತಿಭ್ಯೋ ವ್ಯಾವೃತ್ತೋಽಮೂರ್ತಿ-ರುಚ್ಯತೇ ॥**

831) **ಸ. ಸಂ. :–** ಪ್ರಾಕೃತದೇಹರಹಿತನಾದವನು.

* * *

831) **ಅನಘಃ**= ಪಾಪರಹಿತನು.

ಶಂ. ಭಾ. :– ದುಃಖ-ಪಾಪಗಳಿಲ್ಲದವನು.

835) **ಪ. ಭ. :–** ಕರ್ಮವಶರಾದ ಜೀವಗಳನ್ನು ಮೀರಿರುವುದರಿಂದ ಪಾಪಕರ್ಮರಹಿತನು.

ಮಣಿ–ಇವು ಏಳು ಹವಿರ್ಯಜ್ಞಗಳು. ಅಗ್ನಿಷ್ಟೋಮ, ಅತ್ಯಗ್ನೀಷ್ಟೋಮ, ಉಕ್ಥ್ಯ, ಷೋಡಶೀ, ವಾಜಪೇಯ, ಅತಿರಾತ್ರ, ಆಪ್ತೋರ್ಯಾಮ–ಇವು ಏಳು ಸೋಮಯಜ್ಞಗಳು.

ನಿರುಕ್ತಿ :– ಜೀವೇಭ್ಯಃ ಕರ್ಮವಶ್ಯೇಭ್ಯೋ ವ್ಯಾವೃತ್ತಶ್ಚಾನಘಃ ಸ್ಮೃತಃ

832) **ಸ. ಸಂ. :– ಪಾಪಶೂನ್ಯನು.**

* * *

832) **ಅಚಿನ್ತ್ಯಃ** = ಅತೀಂದ್ರಿಯನಾದುದರಿಂದ ಮತ್ತು ಸರ್ವವಿಲಕ್ಷಣನಾದುದರಿಂದ ಚಿಂತಿಸಲು ಅಸಾಧ್ಯನಾದವನು.

ಶಂ. ಭಾ. :– ಪ್ರಮಾತೃವೇ ಮುಂತಾದವರಿಗೆ ಸಾಕ್ಷಿಯಾಗಿರುವುದರಿಂದ, ಯಾವ ಪ್ರಮಾಣಕ್ಕೂ ಗೋಚರನಾಗದೇ ಇರುವುದರಿಂದ ಅಥವಾ ಎಲ್ಲ ಪ್ರಪಂಚಕ್ಕೂ ವಿಲಕ್ಷಣನಾಗಿರುವುದರಿಂದ ಚಿಂತಿಸಲು ಅಸಾಧ್ಯನಾದವನು.

836) **ಪ. ಭ. :–** ಮುಕ್ತಾತ್ಮರೇ ಮುಂತಾದವರ ಉಪಮಾನದಿಂದ ಕೂಡ ನಿರೂಪಿಸಲು ಅಸಾಧ್ಯನಾದವನು.

ನಿರುಕ್ತಿ :– ಅಚಿನ್ತ್ಯೋ ದುರ್ನಿರೂಪಃ ಸ್ಯಾನ್ಮುಕ್ತಾದ್ಯುಪಮಯಾಪಿ ಸಃ

833) **ಸ. ಸಂ. :– ಚಿಂತಿಸಲು ಅಶಕ್ಯನಾದವನು.**

* * *

833) **ಭಯಕೃತ್** = ದುಷ್ಟರಿಗೆ ಭಯವನ್ನುಂಟುಮಾಡುವವನು ; ಶತ್ರುಗಳಿಗೆ ಭಯಂಕರನಾದವನು.

ಶಂ. ಭಾ. :– ದುರ್ಮಾರ್ಗಗಳಲ್ಲಿ ನಡೆಯುವವರಿಗೆ ಭಯವನ್ನುಂಟುಮಾಡುವವನು ; ಭಕ್ತರ ಭಯವನ್ನು ಕತ್ತರಿಸುವವನು.

837) **ಪ. ಭ. :–** ತನ್ನ ಆಜ್ಞೆಯನ್ನು ಮೀರಿ ನಡೆಯುವ ಜನರಿಗೆ ನರಕಾದಿಗಳ ಭಯವನ್ನುಂಟುಮಾಡುವವನು.

ನಿರುಕ್ತಿ :– ಆಜ್ಞಾತಿಲಙ್ಘಿನಾಂ ಪುಂಸಾಂ ನರಕಾದಿಭಯಂಕರಃ ।
ಭಯಕೃತ್ಸ ಸಮಾಖ್ಯಾತಃ ಸಪ್ತಾರ್ಣೋ ಭವವರ್ಧನಃ ॥

'ಓಂ ಭಯಕೃತೇ ನಮಃ'–ಎಂಬ ಈ ನಾಮಮಂತ್ರಜಪವು ಸೌಖ್ಯವನ್ನು ಹೆಚ್ಚಿಸುತ್ತದೆ.

834) **ಸ.ಸಂ. :– ಅಭಯಕೃತ್ = ಭಕ್ತರಿಗೆ ಅಭಯವನ್ನು ಕೊಡುವವನು.**

* * *

834) **ಭಯನಾಶನಃ** = ಸಾಧುಗಳಾದ ಭಕ್ತರ ಭಯವನ್ನು ನಾಶ

ಮಾಡುವವನು. **ಭಯಕೃದ್ಭಯನಾಶನಃ** = ಅಧ್ಯಾತ್ಮಯಾತ್ರಿಗಳಿಗೆ ಮಾರ್ಗದಲ್ಲಿ ಭಯವನ್ನು ಉಂಟುಮಾಡಿ ಆ ಭಯವನ್ನು ಹೋಗಲಾಡಿಸುವವನು.

ಶಂ. ಭಾ. :– ವರ್ಣಾಶ್ರಮಾಚಾರಗಳಿಂದ ತನ್ನನ್ನು ಆರಾಧಿಸುವ ಸತ್ಪುರುಷರ ಭಯವನ್ನು ನಾಶಮಾಡುವವನು. **ವರ್ಣಾಶ್ರಮಾಚಾರವತಾ ಪುರುಷೇಣ ಪರಃ ಪುಮಾನ್ । ವಿಷ್ಣುರಾರಾಧ್ಯತೇ ಪನ್ಥಾ ನಾನ್ಯಸ್ತತ್ತೋಷಕಾರಕಃ ॥** (ವಿ. ಪು. ೩-೮-೯)

838) **ಪ. ಭ. :–** ತನ್ನ ಆಜ್ಞೆಗೆ ಅನುಗುಣವಾಗಿ ನಡೆಯುವ ಜನರ ಭಯವನ್ನು ಹೋಗಲಾಡಿಸುವವನು. **ಭಯಾಭಯಕರಃಕೃಷ್ಣಃ ।**

ನಿರುಕ್ತಿ :– ಆಜ್ಞಾನುವರ್ತಿನಾಂ ಸ್ವಸ್ಯ ಭಯಂ ನಾಶಯತೀತಿ ಯಃ ।
ಭಯನಾಶನ ಇತ್ಯುಕ್ತೋ ನವಾರ್ಣಃ ಕರ್ಮಕಾರಕಃ ॥

‘ಓಂ ಭಯನಾಶನಾಯ ನಮಃ’–ಎಂಬ ಈ ನಾಮಮಂತ್ರಜಪದಿಂದ ಕೆಲಸವು ಕೈಗೂಡುತ್ತದೆ.

835) **ಸ. ಸಂ. :–** ಭಯಪರಿಹಾರಕನು.

* * *

ಅಣುರ್ಬೃಹತ್ಕೃಶಃಸ್ಥೂಲೋ ಗುಣಭೃನ್ನಿರ್ಗುಣೋ ಮಹಾನ್ ।
ಅಧೃತಃ ಸ್ವಧೃತಃ ಸ್ವಾಸ್ಯಃ ಪ್ರಾಗ್ವಂಶೋ ವಂಶವರ್ಧನಃ ॥೧೦೩॥

835) **ಅಣುಃ** = ಅತ್ಯಂತಸೂಕ್ಷ್ಮನಾದವನು. **ಅಣೋರಣೀಯಾನ್ಮಹತೋಮಹೀಯಾನ್**

ಶಂ. ಭಾ. :– ನಿರತಿಶಯವಾದ ಸೂಕ್ಷ್ಮತೆಯುಳ್ಳವನು. **ಏಷೋಽಣುರಾತ್ಮಾ ಚೇತಸಾ ವೇದಿತವ್ಯಃ** (ಮುಂ. ೩-೧-೯)

839) **ಪ. ಭ. :–** ಅತಿಸೂಕ್ಷ್ಮವಾದ ಹೃದಾಕಾಶದಲ್ಲಿರುವ ಅವ್ಯಕ್ತವಾದ ಜೀವದಲ್ಲಿ ಅಣುಪ್ರವೇಶಮಾಡಲು ಸಮರ್ಥನಾದ ಅಣುತಮನಾದವನು ; ಎಲ್ಲವನ್ನೂ ಹೊಂದಿರುವವನು.

ನಿರುಕ್ತಿ :– ಅತಿಸೂಕ್ಷ್ಮಹೃದಾಕಾಶಾವ್ಯಕತಜೀವಪ್ರವೇಶನೇ ।
ಶಕ್ತಿಮಾನಣುರಿತ್ಯುಕ್ತಃ ಷಡರ್ಣಃ ಸರ್ವಶಕ್ತಿದಃ ॥

'ಓಂ ಅಣವೇ ನಮಃ'–ಎಂಬ ಈ ನಾಮಮಂತ್ರಜಪವು ಸಮಸ್ತವಾದ ಶಕ್ತಿಗಳನ್ನೂ ಕೊಡುತ್ತದೆ.

836) **ಸ. ಸಂ. :–** ಅಣುತ್ವಕ್ಕೆ ವಿಶ್ರಾಂತಿಧಾಮವು.

* * *

836) **ಬೃಹತ್** = ಅತ್ಯಂತಮಹತ್ತ್ವವುಳ್ಳವನು.

ಶಂ. ಭಾ. :– ಮಹತ್ತಮತ್ವವನ್ನು ಹೊಂದಿ ಜಗತ್ತಿನ ರೂಪದಲ್ಲಿ ಬೃಂಹಣವನ್ನು (ವೃದ್ಧಿಯನ್ನು) ಹೊಂದುವವನು. **ಮಹತೋ ಮಹೀಯಾನ್** (ಕಠ ೨-೨೦)

840) **ಪ. ಭ. :–** ಅತಿದೊಡ್ಡದಾದ ಪರಮವ್ಯೋಮವನ್ನು ತನ್ನ ಮಹಿಮೆಯಿಂದ ಅತ್ಯಲ್ಪವಾಗಿಸಿ ಮಹತ್ತಮನಾಗಿರುವವನು. **ಸ ಭೂಮಿಂ ವಿಶ್ವತೋ ವೃತ್ವಾ। ಅತ್ಯತಿಷ್ಠದ್ದಶಾಙ್ಗುಲಮ್ ॥** (ಪು. ಸೂ.)

ನಿರುಕ್ತಿ :– **ವಿಪುಲಂ ಪರಮವ್ಯೋಮ ಮಹಿಮ್ನಾ ಚುಲುಕೀಕೃತಮ್ ।**
ಯೇನ ನಾಮ್ನಾ ಬೃಹತ್ಸ ಸ್ಯಾತ್ಷಡರ್ಣಶ್ಚ ಬೃಹತ್ತ್ವದಃ ॥

'ಓಂ ಬೃಹತೇ ನಮಃ'–ಎಂಬ ಈ ನಾಮಮಂತ್ರಜಪವು ಮಹಾಫಲದಾಯಕವು. (ಮಹತ್ತ್ವವನ್ನು ಕೊಡುತ್ತದೆ.)

837) **ಸ. ಸಂ. :–** ದೊಡ್ಡ ಗುಣಗಳಿಂದ ವೃದ್ಧಿಹೊಂದಿದವನು.

* * *

837) **ಕೃಶಃ**=ಲಘುತಮನಾದವನು ; ಸ್ಥೂಲ-ಸೂಕ್ಷ್ಮಪ್ರಕೃತಿ ಸಂಬಂಧವಿಲ್ಲದವನು ; ವೃದ್ಧಿ-ಕ್ಷಯಗಳಿಗೆ ಒಳಪಟ್ಟ ಹದಿನೈದು ಕಲೆಗಳನ್ನು ಬಿಟ್ಟಿರುವ ಕಲಾಮಾತ್ರಸ್ವರೂಪನು.

ಶಂ. ಭಾ. :– ಅಸ್ಥೂಲಂ–ಇತ್ಯಾದಿ ಶ್ರುತಿಯಂತೆ ಈತನಲ್ಲಿ ದ್ರವ್ಯತ್ವವನ್ನು ಪ್ರತಿಷೇಧಿಸಿರುವುದರಿಂದ ಕೃಶನು.

841) **ಪ. ಭ. :–** ತನ್ನ ಲಾಘವದಿಂದ ಎಲ್ಲ ಕಡೆಗಳಲ್ಲಿಯೂ ಅವ್ಯಾಹತವಾದ ಗತಿಯುಳ್ಳವನು.

ನಿರುಕ್ತಿ :– **ಸರ್ವತ್ರಾವ್ಯಾಹತಗತಿಃ ಲಘಿಮ್ನಾ ಕೃಶ ಈರಿತಃ ॥**

838) **ಸ. ಸಂ. :–** ದೈತ್ಯರನ್ನು ಕ್ಷೀಣಗೊಳಿಸುವವನು.

* * *

838) **ಸ್ಥೂಲಃ** = ಪ್ರಕೃತಿಕಲೆಗಳ ಸಂಬಂಧದಿಂದ ಸ್ಥೂಲನಾದವನು ; ಸರ್ವಾತ್ಮಕನು.

ಶಂ. ಭಾ. :– ಸರ್ವಾತ್ಮಕನಾದುದರಿಂದ (ಗೌಣಾರ್ಥದಲ್ಲಿ) ಸ್ಥೂಲನಾದವನು.

842) ಪ. ಭ. :– ಒಂದೇ ಕಡೆಯಲ್ಲಿದ್ದು ಮುಟ್ಟುವ ಶ್ರೇಷ್ಠವಾದ ಮಹಾಶಕ್ತಿಯಿಂದ ವಿಶಿಷ್ಟನಾದವನು.

ನಿರುಕ್ತಿ :– **ಸ್ಥಿತ್ವೈಕತ್ರಾಖಿಲಂ ಸ್ಪ್ರಷ್ಟುಂ ಶಕ್ತಿರ್ಯಾ ಮಹತೀ ಸದಾ ।**
ತಯಾ ಪ್ರಕೃಷ್ಟಯಾ ಶಕ್ತ್ಯಾ ವಿಶಿಷ್ಟಃ ಸ್ಥೂಲ ಉಚ್ಯತೇ ॥

839) ಸ. ಸಂ. :– ಮಹಾಪರಿಮಾಣವುಳ್ಳವನು.

* * *

839) **ಗುಣಭೃತ್** = ಕಲ್ಯಾಣಗುಣಸಂಪನ್ನನು ; ಲೋಕವ್ಯಾಪಾರಕ್ಕೋಸ್ಕರ ತ್ರಿಗುಣರೂಪವಾದ ಕವಚವನ್ನು ಧರಿಸಿರುವವನು.

ಶಂ. ಭಾ. :– ಸೃಷ್ಟಿ-ಸ್ಥಿತಿ ಮತ್ತು ಲಯಕರ್ಮಗಳಲ್ಲಿ ಸತ್ತ್ವಗುಣ, ರಜೋಗುಣ ಮತ್ತು ತಮೋಗುಣಗಳಿಗೆ ಅಧಿಷ್ಠಾತೃವಾದವನು.

843) ಪ. ಭ. :– ತನ್ನ ಸಂಕಲ್ಪದಿಂದ ಎಲ್ಲ ಜಗತ್ತನ್ನೂ ಎಲ್ಲ ಅವಸ್ಥೆಗಳಲ್ಲಿಯೂ ತನಗೆ ಗುಣಭೂತವನ್ನಾಗಿ ಮಾಡಿಕೊಂಡು ಅದನ್ನು ಧರಿಸುವವನು.

ನಿರುಕ್ತಿ :– **ಸಂಕಲ್ಪಾತ್ಸ್ವಗುಣೀಭೂತಸರ್ವಾವಸ್ಥಮಿದಂ ಜಗತ್ ।**
ಕುರ್ವನ್ಬಿಭರ್ತಿ ನಿತ್ಯಂ ಯೋ ಗುಣಭೃತ್ಸ ಸ್ಮೃತೋ ಬುಧೈಃ ॥

840) ಸ. ಸಂ. :– ಆನಂದವೇ ಮುಂತಾದ ಗುಣಗಳನ್ನು ಧರಿಸಿರುವವನು ; ಗುಣವಾಗಿರುವ (ಅಪ್ರಧಾನವಾಗಿರುವ) ಜೀವಗಳನ್ನು ಧರಿಸುವವನು.

* * *

840) **ನಿರ್ಗುಣಃ** = ಪ್ರಾಕೃತಗುಣರಹಿತನು ; ಶುದ್ಧನು.

ಶಂ. ಭಾ. :– ಪಾರಮಾರ್ಥಿಕವಾಗಿ ಗುಣರಹಿತನು. ಕೇವಲೋ ನಿರ್ಗುಣಶ್ಚ । (ಶ್ವೇ. ೬-೧೧)

844) **ಪ. ಭ. :–** ಜಗತ್ತಿನಲ್ಲಿಯೇ ಇದ್ದರೂ ಜಗತ್ತಿನ ಗುಣಗಳ ಸ್ಪರ್ಶವಿಲ್ಲದವನು.

ನಿರುಕ್ತಿ :– ಸ್ಥಿತೋಽಪ್ಯತದ್ವಶ್ಯತಯಾ ಜಗತ್ಯಸ್ಪರ್ಶನಾದ್ಗುಣೈಃ ।
ಉಕ್ತಃ ಸ ನಿರ್ಗುಣ ಇತಿ ಸಪ್ತಾರ್ಣಃ ಪಾವನತ್ವದಃ ॥

'ಓಂ ನಿರ್ಗುಣಾಯ ನಮಃ'–ಎಂಬ ಈ ನಾಮಮಂತ್ರಜಪವು ಜಾಪಕನನ್ನು ಪವಿತ್ರಗೊಳಿಸುತ್ತದೆ.

841) **ಸ. ಸಂ. :–** ಸತ್ತ್ವಾದಿಗುಣರಹಿತನು.

* * *

841) **ಮಹಾನ್** = ಮಹತ್ತಮನು ; ಯಾವ ವಿಷಯದಲ್ಲಿಯೂ ಕೀಳ್ಮೆಯಿಲ್ಲದವನು.

ಶಂ. ಭಾ. :– ಶಬ್ದಾದಿಗುಣರಹಿತನೂ, ಸೂಕ್ಷ್ಮತಮನೂ, ನಿತ್ಯನೂ, ಶುದ್ಧನೂ, ಸರ್ವಗತನೂ ಆಗಿರುವುದರಿಂದ ವಿಘ್ನರೂಪವಾದ ಧರ್ಮ ಸಮೂಹಗಳು ಯಾವನಲ್ಲಿ ಇವೆಯೆಂದು ಯುಕ್ತಿಯಿಂದ ಕೂಡ ಹೇಳುವುದಕ್ಕಾಗುವುದಿಲ್ಲವೋ–ಅಂತಹ ದೊಡ್ಡವನು. **ಅನನ್ತೋಽಶಬ್ದೋಽಶರೀರೋಽಸ್ಪರ್ಶಶ್ಚ ಮಹಾಞ್ಛುಚಿಃ** (ಆಪಸ್ತಮ್ಬಸೂತ್ರ ೮-೭)

845) **ಪ. ಭ. :–** ಸರ್ವಸ್ವತಂತ್ರನು ; ಪರಮವಶಿತ್ವ-ಪ್ರಾಕಾಮ್ಯಗಳುಳ್ಳವನು ; ಪರಮಪ್ರಕೃಷ್ಟಗುಣಗಳಿಂದ ಪೂಜಿಸಲ್ಪಡುವವನು.

ನಿರುಕ್ತಿ :– ಭೂಮ್ನ್ಯಾಂ ಮಹಾನೀರ ಇವ ಹ್ಯುನ್ಮಜ್ಜನನಿಮಜ್ಜನಾತ್ ।
ಮಹಾನ್ಪ್ರಾಕಾಮ್ಯಸಂಪೂರ್ತ್ಯಾ ಷಡರ್ಣಸ್ತು ಮಹತ್ತ್ವದಃ

'ಓಂ ಮಹತೇ ನಮಃ'–ಎಂಬ ಈ ನಾಮಮಂತ್ರಜಪವು ಮಹತ್ತ್ವವನ್ನು ಉಂಟುಮಾಡುತ್ತದೆ.

842) **ಸ. ಸಂ. :–** ಶ್ರೇಷ್ಠನು.

* * *

842) **ಅಧೃತಃ** = ಯಾರಿಂದಲೂ ಧರಿಸಲ್ಪಡದವನು ಮತ್ತು ಪೋಷಿಸಲ್ಪಡದವನು.

ಶಂ. ಭಾ. :– ಲೋಕಧಾರಕಗಳಾದ ಪೃಥ್ವಿಯೇ ಮುಂತಾದುವುಗಳನ್ನೂ ಧರಿಸಿರುವುದರಿಂದ ಯಾರಿಂದಲೂ ಧರಿಸಲ್ಪಡದವನು.

846) **ಪ. ಭ. :–** ಯಾರಿಂದಲೂ ನಿಯಮಿಸಲ್ಪಡದವನು.
ನಿರುಕ್ತಿ :– **ಯಶ್ಚಾನಿಯಮ್ಯಃ ಕೇನಾಪಿ ಹ್ಯಧೃತಃ ಸ ತು ಕೀರ್ತಿತಃ ॥**

843) **ಸ. ಸಂ. :–** ಯಾರಿಂದಲೂ ಧರಿಸಲ್ಪಡದವನು.

* * *

843) **ಸ್ವಧೃತಃ** = ತನ್ನಿಂದಲೇ ಧರಿಸಲ್ಪಟ್ಟವನು.

ಶಂ. ಭಾ. :– ತಾನೇ ತನ್ನಿಂದಲೇ ಧರಿಸಲ್ಪಟ್ಟಿರುವವನು. **ಸ ಭಗವಃ ಕಸ್ಮಿನ್ಪ್ರತಿಷ್ಠಿತ ಇತಿ ಸ್ವೇ ಮಹಿಮ್ನಿ** (ಛಾಂ. ೭-೨೪-೧)

847) **ಪ. ಭ. :–** ಸ್ವಾಭಾವಿಕವಾಗಿಯೇ ತನ್ನ ಐಶ್ವರ್ಯವನ್ನು ತಾನೇ ಧರಿಸಿರುವವನು. (ಬದ್ಧಜೀವದ ಐಶ್ವರ್ಯವು ಮಂತ್ರ, ಔಷಧಿ, ತಪಸ್ಸು, ಸಮಾಧಿ–ಮುಂತಾದ ಉಪಾಧಿಗಳಿಂದ ಉಂಟಾಗುತ್ತದೆ.)
ನಿರುಕ್ತಿ :– **ಸ್ವಭಾವತೋ ಧೃತೈಶ್ವರ್ಯಃ ಸ್ವಧೃತಃ ಪರಿಕೀರ್ತಿತಃ ॥**

844) **ಸ. ಸಂ. :–** ತನ್ನಿಂದಲೇ ಧರಿಸಲ್ಪಟ್ಟವನು ; ಧನವನ್ನು ಧರಿಸಿರುವವನು.

* * *

844) **ಸ್ವಾಸ್ಯಃ** = ಶ್ರೇಷ್ಠವಾದ ಮುಖವುಳ್ಳವನು ; ವೇದ ಮತ್ತು ಬ್ರಾಹ್ಮಣಮುಖವುಳ್ಳವನು. **ಬ್ರಾಹ್ಮಣೋಽಸ್ಯ ಮುಖಮಾಸೀತ್ ।** (ಪು. ಸೂ.)

ಶಂ. ಭಾ. :– ಪದ್ಮಗರ್ಭದಂತೆ ಕೆಂಪಾದ ಅತಿಸುಂದರವಾದ ಮುಖವುಳ್ಳವನು ; ಪುರುಷಾರ್ಥಗಳನ್ನು ಉಪದೇಶಮಾಡುವುದಕ್ಕೋಸ್ಕರ ವೇದಾತ್ಮಕವಾದ ಶಬ್ದರಾಶಿಯು ಯಾವನ ಮುಖದಿಂದ ಹೊರಹೊಮ್ಮಿತೋ–ಅವನು. **ಅಸ್ಯ ಮಹತೋ ಭೂತಸ್ಯ** (ಬೃ.೨-೪-೧೦)

848) **ಪ. ಭ. :–** ಯಾವನ ಆಸನವು ಎಂದಿಗೂ ಅವಿದ್ಯಾವರಣವಿಲ್ಲದೇ ಶೋಭನವಾಗಿರುವುದೋ–ಅವನು.

ನಿರುಕ್ತಿ :– ಆಸನಂ ಶೋಭನಂ ಯಸ್ಯ ಸ ಸ್ವಾಸ್ಯ ಇತಿ ಚೋಚ್ಯತೇ ॥

845) ಸ. ಸಂ. :– ಸ್ವರೂಪಭೂತವಾದ ಮುಖವುಳ್ಳವನು ; ಶೋಭನವಾದ ವೇದಗಳು ಯಾವನ ಮುಖದಲ್ಲಿವೆಯೋ–ಅವನು.

* * *

845) ಪ್ರಾಗ್ವಂಶಃ= ಪೂರ್ವಮುಖವಾದ (ಪ್ರವೃತ್ತಿಮುಖವಾದ) ವಂಶವುಳ್ಳವನು ; ಯಜ್ಞಶಾಲೆಯಲ್ಲಿ ಪೂರ್ವದ ಕಡೇ ಇರುವ ಪೂರ್ವಾಗ್ರವಾದ ಪ್ರಾಗ್ವಂಶವೆಂಬ ಗೃಹರೂಪಿಯಾದವನು ; ಪ್ರಾಗ್ವಂಶವೆಂಬ ಸ್ಥಳದಲ್ಲಿ ಸ್ತುತಿಸಲ್ಪಡುವವನು. ತೇ ಮಾಂ ಗಾಯನ್ತಿ ಪ್ರಾಗ್ವಂಶೇ (ಮ. ಭಾ. ಶಾಂ. ೩೪೨-೮೩) ವಂಶವಿಸ್ತಾರಕ್ಕೆ ಹಿಂದೆ ಇರುವವನು.

ಶಂ. ಭಾ. :– ಯಾವನ ಪ್ರಪಂಚರೂಪವಾದ ವಂಶವು ಎಲ್ಲಕ್ಕಿಂತಲೂ ಹಿಂದಿನದಾಗಿದೆಯೋ–ಅಂತಹ ಪ್ರಪಂಚವುಳ್ಳವನು.

849) ಪ. ಭ. :– ಹಿಂದಿನವರಾದ ಅನಾದಿಮುಕ್ತರಿಗೂ ಉದ್ಭವಸ್ಥಾನವಾದವನು.

ನಿರುಕ್ತಿ :– ಅನಾದಿಮುಕ್ತಾಃ ಪ್ರಾಞ್ಚೋ ಯೇ ತೇಷಾಮುದ್ಭವ ಭೂಮಿದಃ ।
ಪ್ರಾಗ್ವಂಶ ಇತಿ ವಿಖ್ಯಾತಃ ಸಪ್ತಾರ್ಣೋ ಮನುರುತ್ತಮಃ ॥

846) ಸ. ಸಂ. :– ಅನಾದಿಕಾಲದಿಂದಲೂ ವಂಶದಂತೆ ಆಧಾರವಾಗಿರುವವನು.

* * *

846) ವಂಶವರ್ಧನಃ = ಪ್ರಪಂಚರೂಪವಾದ ವಂಶವೃದ್ಧಿಗೆ ಕಾರಣನಾದವನು. ವಂಶವನ್ನು ವೃದ್ಧಿಪಡಿಸುವ ಶಕ್ತಿಯನ್ನು ಕೊಡುವವನು.

ಶಂ. ಭಾ. :– ವಂಶರೂಪವಾದ ಪ್ರಪಂಚವನ್ನು ವೃದ್ಧಿಪಡಿಸುವವನು ಅಥವಾ ನಾಶಪಡಿಸುವವನು.

850) ಪ. ಭ. :– ತನ್ನ ಸಂತಾನದಂತಿರುವ ನಿತ್ಯಸಿದ್ಧರ ವರ್ಗವನ್ನು ವೃದ್ಧಿಪಡಿಸುವವನು.

ನಿರುಕ್ತಿ :– ನಿತ್ಯಸಿದ್ಧಸ್ಯ ವರ್ಗೋ ಯೋ ವಂಶಂ ಸನ್ತಾನಲಕ್ಷಣಮ್ ।
ತಂ ವರ್ಧಯತಿ ಯಶ್ಚಾಸೌ ವಂಶವರ್ಧನ ಉಚ್ಯತೇ ॥

847) **ಸ. ಸಂ. :–** ಪರಿಕ್ಷಿದ್ರಾಜನನ್ನು ಸಂರಕ್ಷಿಸಿ ಪಾಂಡವರ ವಂಶವನ್ನು ವೃದ್ಧಿಪಡಿಸಿದವನು. **ಜುಗೋಪ ಕುಕ್ಷಿಂಗತ ಆತ್ತಚಕ್ರೋ ಮಾತುಶ್ಚ ಮೇ ಯಃ ಶರಣಂ ಗತಾಯಾಃ ॥** (ಭಾಗವತ)

* * *

ಭಾರಭೃತ್ಕಥಿತೋ ಯೋಗೀ ಯೋಗೀಶಃ ಸರ್ವಕಾಮದಃ ।
ಆಶ್ರಮಃ ಶ್ರಮಣಃಕ್ಷಾಮಃ ಸುಪರ್ಣೋ ವಾಯುವಾಹನಃ ॥೧೦೪॥

847) **ಭಾರಭೃತ್** = ಜಗತ್ತಿನ ಭಾರವನ್ನು ಧರಿಸಿರುವವನು ; ಭಕ್ತರ ಯೋಗ-ಕ್ಷೇಮಗಳನ್ನು ವಹಿಸುವವನು.

ಶಂ. ಭಾ. :– ಅನಂತನಾಗನೇ ಮುಂತಾದ ರೂಪದಿಂದ ಭೂಮಿಯ ಭಾರವನ್ನು ಧರಿಸಿರುವವನು.

851) **ಪ. ಭ. :–** ಮುಕ್ತರ ಬಂಧ-ಮೋಕ್ಷಾದಿ ಭಾರವನ್ನು ಧರಿಸಿರುವವನು.

ನಿರುಕ್ತಿ :– **ಮುಕ್ತಾನಾಂ ಬನ್ಧಮೋಕ್ಷಾದಿಭಾರಸ್ಯ ಭರಣಾದ್ಧಿ ಸಃ ।**
ಭಾರಭೃತ್ಸಪ್ತವರ್ಣಃ ಸ್ಯಾತ್ಕಾರ್ಯನಿರ್ವಾಹಶಕ್ತಿದಃ ॥

'ಓಂ ಭಾರಭೃತೇ ನಮಃ'–ಎಂಬ ನಾಮಮಂತ್ರಜಪವು ಕಾರ್ಯವನ್ನು ನಿರ್ವಹಿಸುವ ಶಕ್ತಿಯನ್ನು ಕೊಡುತ್ತದೆ.

848) **ಸ. ಸಂ. :–** ಭಾರವಾಗಿರುವ ಬ್ರಹ್ಮಾಂಡವನ್ನು ಕೂರ್ಮನ ರೂಪದಿಂದ ಧರಿಸಿರುವವನು. **ಬಿಭರ್ತ್ಯಂಡಂ ಹರಿಃ ಕೂರ್ಮಸ್ತಣ್ಡೇ ಚಾಪ್ಯುದಕಂ ಮಹತ್ ॥** (ಬೃಹದ್ಭಾಷ್ಯ)

* * *

848) **ಕಥಿತಃ** = ಆಗಮಗಳಲ್ಲಿ ಕೊಂಡಾಡಲ್ಪಟ್ಟವನು.

ಶಂ. ಭಾ. :– ವೇದಾದಿಗಳಿಂದ ಪರಸ್ವರೂಪಿಯೆಂದು ಹೇಳಲ್ಪಟ್ಟವನು ; ಇಂದ್ರಿಯಾದಿಗಳೆಲ್ಲಕ್ಕೂ ಪರನೆಂದು ಹೇಳಲ್ಪಟ್ಟಿರುವವನು. **ಸರ್ವೇ ವೇದಾ ಯತ್ಪರಮಾಮನನ್ತಿ** (ಕಠ. ೨-೧೫) **ವೇದೈಶ್ಚ ಸರ್ವೈರಹಮೇವ ವೇದ್ಯಃ** (ಗೀತಾ ೧೫-೧೫) **ವೇದೇ ರಾಮಾಯಣೇ ಪುಣ್ಯೇ ಭಾರತೇ ಭರತರ್ಷಭ । ಆದೌ ಮಧ್ಯೇ ತಥಾ ಚಾನ್ತೇ ವಿಷ್ಣುಃ ಸರ್ವತ್ರ ಗೀಯತೇ ॥** (ಮಹಾಶ್ರವಣ, ೬೩) **ಸೋಽಧ್ವನಃ ಪಾರಮಾ**

ಪ್ನೋತಿ ತದ್ವಿಷ್ಣೋಃ ಪರಮಂ ಪದಮ್ (ಕಠ ೧-೩-೯) **ಸಾ ಕಾಷ್ಠಾ ಸಾ ಪರಾ ಗತಿಃ** (ಕಠ ೧-೩-೧೧)

852) **ಪ. ಭ. :–** ವೇದಾದಿ ಸರ್ವಶಾಸ್ತ್ರಗಳಲ್ಲಿ ಸರ್ವಸದ್ಗುಣಸಂಪನ್ನನೆಂದು ಹೇಳಲ್ಪಟ್ಟಿರುವವನು.

ನಿರುಕ್ತಿ :– **ಉಕ್ತಃ ಶಾಸ್ತ್ರೇಷು ಕಥಿತೋ ಯಃ ಸರ್ವಗುಣವತ್ತಯಾ ।**

849) **ಸ. ಸಂ. :–** ಒಳ್ಳೆಯ ಆಗಮಗಳಿಂದ ಪ್ರತಿಪಾದಿಸಲ್ಪಟ್ಟವನು.

* * *

849) **ಯೋಗೀ** = ಸಮಾಧಿಸಂಪನ್ನನು ; ಜೀವಯೋಗವುಳ್ಳವನು.

ಶಂ. ಭಾ. :– ಜ್ಞಾನಗಮ್ಯನು ; ಸಮಾಧಿಯಲ್ಲಿ ತನ್ನ ಆತ್ಮಸ್ವರೂಪದಲ್ಲಿ ತನ್ನನ್ನು ಯಾವಾಗಲೂ ಇಟ್ಟುಕೊಂಡಿರುವವನು.

853) **ಪ. ಭ. :–** ಅಘಟಿತಘಟನಾಯೋಗವನ್ನು ಉಂಟುಮಾಡುವ ಮಹಾಪ್ರಭಾವಶಾಲಿಯು ; ನಿತ್ಯಯುಕ್ತನಾದವನು.

ನಿರುಕ್ತಿ :– **ಯೋಗೀ ಹ್ಯಘಟಿತಾರ್ಥಸ್ಯ ಘಟನಂ ತೇನ ಸರ್ವಥಾ ।**
ಯಸ್ಯಾಸ್ತಿ ನಿತ್ಯಸಂಬನ್ಧಃ ಸ ಯೋಗೀ ಪರಿಕೀರ್ತಿತಃ ॥

850) **ಸ. ಸಂ. :–** ಉಪಾಯವುಳ್ಳವನು.

* * *

850) **ಯೋಗೀಶಃ** = ನರ-ನಾರಾಯಣ-ಕಪಿಲ-ದತ್ತಾತ್ರೇಯಾದಿ ರೂಪಿಯಾದ ಯೋಗೀಂದ್ರನು ; ಯೋಗಿರಾಜನು ; ಯೋಗದಿಂದ ಎಂದಿಗೂ ವಿಚಲಿತನಾಗದವನು ; ಅದ್ಭುತಯೋಗೈಶ್ವರ್ಯಸಂಪನ್ನನು ; ಯೋಗಿಗಳನ್ನು ಆಳುವವನು.

ಶಂ. ಭಾ. :– ಇತರ ಯೋಗಿಗಳಂತೆ ಯೋಗವಿಘ್ನಗಳಿಂದ ಸ್ವರೂಪ ಭ್ರಂಶವಿಲ್ಲದವನು ; ಯಾವ ಯೋಗವಿಘ್ನವೂ ಇಲ್ಲದವನು.

854) **ಪ. ಭ. :–** ಸನಕಾದಿ ಯೋಗಿಗಳಿಗೂ ಕೂಡ ನಾಯಕನಾದವನು. **ಪಶ್ಯ ಮೇ ಯೋಗಮೈಶ್ವರಮ್ ॥ ಯೋಗೇಶ್ವರಃ ಕೃಷ್ಣ ॥ ಯೋಗಂ ಯೋಗೇಶ್ವರಾತ್ಕೃಷ್ಣಾತ್ ॥ ಮಹಾಯೋಗೇಶ್ವರೋ ಹರಿಃ ॥**

ನಿರುಕ್ತಿ :– ಯೋಗೀಶಃ ಸನಕಾದೀನಾಂ ಯೋಗಿನಾಂ ಧುರ್ಯ ಉಚ್ಯತೇ

851) **ಸ. ಸಂ. :–** ಯೋಗಿಗಳಿಗೆ ಈಶ್ವರನು ; ಯೋಗಿಗಳಿಗೂ ಮತ್ತು ರಮಾದೇವಿಗೂ ಸುಖವನ್ನುಂಟುಮಾಡುವವನು.

* * *

851) **ಸರ್ವಕಾಮದಃ** = ಭಕ್ತರ ಎಲ್ಲ ಕಾಮನೆಗಳನ್ನೂ ಈಡೇರಿಸುವವನು ; ಧರ್ಮಕ್ಕೆ ವಿರೋಧವಲ್ಲದ ಎಲ್ಲ ಕಾಮಗಳನ್ನೂ ಉಂಟುಮಾಡುವವನು.

ಶಂ. ಭಾ. :– ಎಲ್ಲ ಕಾಮನೆಗಳನ್ನೂ ಯಾವಾಗಲೂ ಕೊಡುವವನು. **ಫಲಮತ ಉಪಪತ್ತೇಃ (ಬ್ರ. ಸೂ. ೩-೨-೩೮)**

855) **ಪ. ಭ. :–** ಯೋಗಭ್ರಷ್ಟರಿಗೂ ಕೂಡ ಅಣಿಮಾದಿ ಭೂತಿಗಳ ಕಾಮನೆಗಳನ್ನು ಮೋಕ್ಷಕ್ಕೆ ವಿಘ್ನರೂಪವಾಗಿ ಕೊಡುವವನು.

ನಿರುಕ್ತಿ :– ಅಣಿಮಾದೀನ್ಸರ್ವಕಾಮಾನ್ಯೋಗಸ್ಖಲಿತಯೋಗಿನಾಮ್ ।
ಅನ್ತರಾಯತಯಾ ಮುಕ್ತೇರ್ಯೋದದ್ಯಾತ್ಸರ್ವಕಾಮದಃ ॥

852) **ಸ. ಸಂ. :–** ಭಕ್ತರ ಎಲ್ಲ ಕಾಮ್ಯಗಳನ್ನೂ ಈಡೇರಿಸುವವನು ; ಯಾವನಿಂದ ರುದ್ರನು ಮನ್ಮಥನನ್ನು ನಾಶಪಡಿಸಿದನೋ–ಅವನು.

* * *

852) **ಆಶ್ರಮಃ** = ಪ್ರಾಣಗಳಿಗೆ ಆರಾಮವಾಗಿರುವವನು. **ಸತ್ಯಾತ್ಮ ಪ್ರಾಣಾರಾಮಂ ಮನ ಆನನ್ದಂ ।** ಸಂಸಾರದಲ್ಲಿ ಬಳಲಿದ ಜೀವಿಗಳಿಗೆ ವಿಶ್ರಾಂತಿಧಾಮವಾಗಿರುವವನು.

ಶಂ. ಭಾ. :– ಸಂಸಾರಾರಣ್ಯದಲ್ಲಿ ಅಲೆದಾಡುತ್ತಿರುವ ಎಲ್ಲ ಜೀವಿಗಳಿಗೂ ಆಶ್ರಮದಂತೆ ವಿಶ್ರಾಂತಿಸ್ಥಾನವಾಗಿರುವವನು.

856) **ಪ. ಭ. :–** ಯೋಗಭ್ರಷ್ಟರು ಪರವಿದ್ಯೆಯಿಂದ ಪೂರ್ಣರಾಗಿರುವ ಭಕ್ತರ ಮನೆಗಳಲ್ಲಿ ವಿಶ್ರಾಂತಿಪಡೆಯುವಂತೆ ಮಾಡುವವನು. **ಶುಚೀನಾಂ ಶ್ರೀಮತಾಂ ಗೇಹೇ ಯೋಗಭ್ರಷ್ಟೋಽಭಿಜಾಯತೇ ॥ (ಗೀತಾ)**

ನಿರುಕ್ತಿ :– ತೇಷಾಂ ತು ಯೋಗಭ್ರಷ್ಟಾನಾಂ ಹೇತುರ್ವೈಷ್ಣವಸದ್ಮಸು ।
ಸುಭಿಕ್ಷಪರವಿದ್ಯೇಷು ವಿಶ್ರಾನ್ತೇರಾಶ್ರಮಃ ಸ್ಮೃತಃ ॥

853) **ಸ. ಸಂ. :–** ಶ್ರಮರಹಿತರಾದವರಿಗೆ (ಮುಕ್ತರಿಗೆ) ಸ್ವಾಮಿಯಾದವನು.

* * *

853) **ಶ್ರಮಣಃ** = ಮೋಕ್ಷಧರ್ಮನಿಷ್ಠನಾದ ಸಂನ್ಯಾಸಿಸ್ವರೂಪನು ; ತಪಸ್ವಿಯು.

ಶಂ. ಭಾ. :– ಅವಿವೇಕಿಗಳೆಲ್ಲರನ್ನೂ ಸಂತಾಪಗೊಳಿಸುವವನು.

857) **ಪ. ಭ. :–** ಯೋಗಿಗಳ ಮನೆಗಳಲ್ಲಿ ಹುಟ್ಟಿದ ಯೋಗಭ್ರಷ್ಟರು ಪೂರ್ವಸಂಸ್ಕಾರಗಳನ್ನು ಕಳೆದುಕೊಳ್ಳದೇ ಒಳ್ಳೆಯ ಹುಟ್ಟಿನಿಂದಲೂ ಮತ್ತು ಅನುಭವದಿಂದಲೂ ಯಾವನ ವಿಷಯದಲ್ಲಿ ಅಭ್ಯಾಸಮಾಡುತ್ತಾರೆಯೋ–ಅವನು.

ನಿರುಕ್ತಿ :– **ಅಕ್ಷೀಣಪೂರ್ವಸಂಸ್ಕಾರೈಃ ಜನ್ಮನಾನುಭವೇನ ಚ ।**
ಶ್ರಮ್ಯತೇಽಭ್ಯಸ್ಯತೇಽತ್ರೇತಿ ಶ್ರಮಣಃ ಪರಿಕೀರ್ತಿತಃ ॥

854) **ಸ. ಸಂ. :–** ಸಂನ್ಯಾಸಿಗಳು ಯಾವನಿಗೆ ದಾಸರಾಗಿರುವರೋ–ಅವನು ; ಕೃಚ್ಛ್ರ-ಚಾಂದ್ರಾಯಣಗಳೇ ಮುಂತಾದ ಶ್ರಮದಿಂದ ಸುಖವನ್ನು ಉಂಟುಮಾಡುವವನು ; ಶ್ರಮವನ್ನು ಹೋಗಲಾಡಿಸುವವನು.

* * *

854) **ಕ್ಷಾಮಃ** = ತಪೋವ್ರತನಿಷ್ಠೆಯಿಂದ ಕ್ಷೀಣದೇಹನಾದ ತಪಸ್ವಿರೂಪನಾದವನು ; ಕ್ಷಮಾಶೀಲನು.

ಶಂ. ಭಾ. :– ಎಲ್ಲ ಪ್ರಜೆಗಳನ್ನೂ ಕ್ಷೀಣರನ್ನಾಗಿ ಮಾಡುವವನು.

858) **ಪ. ಭ. :–** ಯೋಗಭ್ರಷ್ಟರು ಕೂಡ ಯಾವನ ಯೋಗದ ಅಭಿಮುಖ್ಯಮಾತ್ರದಿಂದಲೇ ವಿಪತ್ತುಗಳನ್ನು (ಸಂಸಾರಸಾಗರವನ್ನು) ದಾಟಲು ಸಮರ್ಥರಾಗುವರೋ–ಅವನು.

ನಿರುಕ್ತಿ :– **ಯೋಗಾಭಿಮುಖ್ಯಮಾತ್ರೇಣ ಯೋಗಭ್ರಷ್ಟಾ ಅಪಿ ಸ್ವಯಂ ।**
ಯಸ್ಮಾತ್ಕ್ಷಮನ್ತೇ ಸ ಕ್ಷಾಮೋ ಭವಾಬ್ಧಿತರಣಾಯ ವೈ ।

855) **ಸ. ಸಂ. :–** ಸಹನಶಕ್ತಿಗೆ ಆಧಾರನಾದವನು. ಪ್ರಳಯಕಾಲದಲ್ಲಿ ಎಲ್ಲವನ್ನೂ ನಾಶಪಡಿಸುವವನು.

* * *

855) **ಸುಪರ್ಣಃ** = ಸುಂದರವಾದ ರೆಕ್ಕೆಗಳುಳ್ಳ ವೇದಮಯನಾದ ಗರುಡಸ್ವರೂಪಿಯು ; ಪ್ರಾಣಾಪಾನಗಳೆಂಬ ಶ್ರೇಷ್ಠವಾದ ರೆಕ್ಕೆಗಳುಳ್ಳ ಮಹಾ ಪ್ರಾಣಸ್ವರೂಪನು. **ಸುಪರ್ಣೋಽಸಿ ಗರುತ್ಮಾನ್ ।** ತ್ರಿವೃತ್ತೇ ಶಿರಃ ॥

ಶಂ. ಭಾ. :– ಸುಂದರವಾದ ಛಂದಸ್ಸುಗಳೆಂಬ ಪರ್ಣಗಳುಳ್ಳ ಸಂಸಾರ ವೃಕ್ಷಸ್ವರೂಪಿಯು. **ಛನ್ದಾಂಸಿ ಯಸ್ಯ ಪರ್ಣಾನಿ** (ಗೀತಾ. ೧೫-೧)

859) **ಪ. ಭ. :–** ಸಾಧಕರ ಸಮಾಧಿಯನ್ನು ಪರಿಪಕ್ವಗೊಳಿಸಿ ತಮಸ್ಸಿನ ಪಾರಕ್ಕೆ ಒಯ್ಯುವವನು. (ತಮಸ್ಸನ್ನು ದಾಟಿಸುವವನು.)

ನಿರುಕ್ತಿ **:– ಪ್ರತ್ಯಾಪನ್ನಸಮಾಧೀನ್ಯಃ ಸಮಾಧೇಃ ಪರಿಪಾಕತಃ ।**
ತಮಸಃ ಪಾರಂ ನಯತಿ ಸುಪರ್ಣಃ ಸ ಚ ಕೀರ್ತಿತಃ ॥

856) **ಸ. ಸಂ. :–** ಶೋಭನವಾದ ಆಲದೆಲೆಯ ಮೇಲೆ ಪವಡಿಸಿರುವವನು. **ದ್ವಾಸುಪರ್ಣಾ**–ಎಂಬ ಶ್ರುತಿಯು ಹೇಳುವ ಪರಮಾತ್ಮಪಕ್ಷಿಯು.

* * *

856) **ವಾಯುವಾಹನಃ** = ಪ್ರಾಣವಾಯುಗಳ ಮೂಲಕ ಸಂಚರಿಸುವವನು ; ಪ್ರಾಣವಾಯುವನ್ನು ಒಯ್ಯುವವನು ; ವಾಯುಗಳಿಗೆ ನಿಯಾಮಕನಾದವನು.

ಶಂ. ಭಾ. :– ಯಾವನ ಭಯದಿಂದ ವಾಯುವು ಸಮಸ್ತಭೂತಗಳನ್ನೂ ಒಯ್ಯುತ್ತದೆಯೋ–ಅವನು. **ಭೀಷಾಸ್ಮಾದ್ವಾತಃ ಪವತೇ** (ತೈ.೨-೮)

860) **ಪ. ಭ. :–** ಪತಿತರಾದವರನ್ನು ಕೂಡ ಅನುಪಮವೇಗವುಳ್ಳ ಗರುತ್ಮಂತನ ಮೇಲೆ ಪರಮಪದಕ್ಕೆ ಒಯ್ಯುವವನು.

ನಿರುಕ್ತಿ **:– ವಾಯುನಾ ಗತ್ವರೇಣೈವ ಕರ್ಮಣಾ ಪತಿತಾನ್ಸತಃ ।**
ಗರುತ್ಮತಾ ವಾಹಯತಿ ಯಃ ಸ ಸ್ಯಾದ್ವಾಯುವಾಹನಃ ॥

857) **ಸ. ಸಂ. :–** ವಾಯುವನ್ನು ನಡೆಸುವವನು ಮತ್ತು ವ್ಯಾಪಕ

ನಾದವನು ; ಶರೀರವನ್ನು ಬಿಟ್ಟು ಹೋಗುವಾಗ ವಾಯುವು ಯಾವನಿಗೆ ವಾಹನವಾಗುವುದೋ–ಅವನು.

* * *

ಧನುರ್ಧರೋ ಧನುರ್ವೇದೋ ದಣ್ಡೋ ದಮಯಿತಾ ದಮಃ ।
ಅಪರಾಜಿತಃ ಸರ್ವಸಹೋ ನಿಯನ್ತಾ ನಿಯಮೋ ಯಮಃ ॥೧೦೫॥

857) **ಧನುರ್ಧರಃ** = ಅಹಂಕಾರತತ್ತ್ವರೂಪವಾದ ಶಾರ್ಙ್ಗಧನುಸ್ಸನ್ನು ಧರಿಸಿರುವವನು. ಪ್ರಣವವೆಂಬ ಧನುಸ್ಸನ್ನು ಬಳಸಬಲ್ಲ ಮಹಾಯೋಗಿಯು. ದಸ್ಯುಗಳನ್ನು ದಂಡಿಸಲು ವೈಷ್ಣವಧನುಸ್ಸನ್ನು ಧರಿಸಿದ ಕೋದಂಡರಾಮನು. ತ್ರಿಪುರಸಂಹಾರಕ್ಕಾಗಿ ಪಿನಾಕಧನುಸ್ಸನ್ನು ಧರಿಸಿದ ಮಹಾದೇವನು. **ಅಹಂಕೃತಿಯುಗಂ ಶಂಖೇನ ಶಾರ್ಙ್ಗೇಯತೇ ॥ ರಾಮಃ ಶಸ್ತ್ರಭೃತಾ ಮಹಮ್** (ಗೀತಾ. ೧೦-೩೧) **ಆಯುಧಾನಾಂ ಧನುರಹಂ ತ್ರಿಪುರಘ್ನೋ ಧನುಷ್ಮತಾಮ್** (ಭಾಗವತ. ೧೧-೧೬-೨೦)

ಶಂ. ಭಾ. :– ಮಹಾಧನುರ್ಧಾರಿಯಾದ ಶ್ರೀರಾಮನು.

861) **ಪ. ಭ. :–** ಅಸುರರಿಂದ ಪೀಡಿತರಾದವರನ್ನು ಕಾಪಾಡಲು ಮತ್ತು ಉಪಾಸಕರ ಭಕ್ತಿವಿಘ್ನಗಳನ್ನು ನಿವಾರಿಸಲು ಧನುಸ್ಸನ್ನು ಧರಿಸಿದವನು.

ಧಾರ್ಯತೇ ಕ್ಷತ್ರಿಯೈಶ್ಚಾಪೋ ಮಾಽರ್ತಶಬ್ದೋ ಭವೇದಿತಿ ।
ಏತದರ್ಥಂ ಹಿ ಲೋಕೇಽಸ್ಮಿನ್ ಕ್ಷತ್ರಿಯೈರ್ಧಾರ್ಯತೇ ಧನುಃ ॥

ನಿರುಕ್ತಿ :– **ಉಪಾಸಕಾನಾಂ ಭಕ್ತೇರ್ಯಃ ಪ್ರತ್ಯೂಹವಿನಿವೃತ್ತಯೇ ।**
ಧನುಷೋ ಧಾರಕೋ ನಿತ್ಯಂ ಸ್ವಯಂ ಸ ಸ್ಯಾದ್ಧನುರ್ಧರಃ ॥

858) **ಸ. ಸಂ. :–** ಧನುಸ್ಸನ್ನು ಧರಿಸಿದವನು.

* * *

858) **ಧನುರ್ವೇದಃ** = ಯಜುರ್ವೇದಕ್ಕೆ ಉಪವೇದವಾದ ಧನುರ್ವೇದ ಸ್ವರೂಪಿಯು.

ಶಂ. ಭಾ. :– ಧನುರ್ವೇದವನ್ನರಿತ ದಾಶರಥಿ ಶ್ರೀರಾಮನು.

862) **ಪ. ಭ. :–** ದೇವೇಂದ್ರ-ರಾಜೇಂದ್ರರೇ ಮುಂತಾದವರು ಆಯಾ

ಶಾಸ್ತ್ರಗಳಿಗೆ ಪ್ರವರ್ತಕನಾದ ಯಾವನಿಂದ ಧನುಃಶಾಸ್ತ್ರವನ್ನು ಪಡೆಯುತ್ತಾರೆಯೋ–ಅವನು.

ನಿರುಕ್ತಿ :– ಸುರೇನ್ದ್ರಾದ್ಯಾ ಧನುಃಶಾಸ್ತ್ರಂ ಯಸ್ಮಾದ್ವಿನ್ದನ್ತಿ ಸ ಶ್ರುತಃ ।
ಧನುರ್ವೇದೋ ಹ್ಯಷ್ಟವರ್ಣೋ ಧನುರ್ವೇದಪ್ರದಾಯಕಃ॥

'ಓಂ ಧನುರ್ವೇದಾಯ ನಮಃ'–ಎಂಬ ಈ ನಾಮಮಂತ್ರಜಪವು ಧನುರ್ವೇದದ ಜ್ಞಾನವನ್ನುಂಟುಮಾಡುತ್ತದೆ.

859) **ಸ. ಸಂ. :–** ಅಗಸ್ತ್ಯರಿಂದ ಐಂದ್ರಧನುಸ್ಸನ್ನು ಪಡೆದವನು.

* * *

859) **ದಣ್ಡಃ** = ಒಳ-ಹೊರಜೀವನಗಳನ್ನು ಹತೋಟಿಯಲ್ಲಿಡುವ ಯೋಗದಂಡ ಮತ್ತು ರಾಜದಂಡಸ್ವರೂಪಿಯಾದವನು. ಮನೋನಿಗ್ರಹ ವನ್ನು ಉಂಟುಮಾಡುವವನು. ಯೋಗಶಾಸ್ತ್ರಗಳು ಹೇಳುವ ವಜ್ರದಂಡ, ಮೇರುದಂಡ–ಎನಿಸುವ ಸರ್ವದೇವತಾಮಯವಾದ ಬೆನ್ನೆಲುಬು ಆಗಿರುವವನು. ದಂಡನೀತಿಸ್ವರೂಪನು.

ಶಂ. ಭಾ. :– ದಮನಮಾಡುವವರಲ್ಲಿರುವ ದಂಡಸ್ವರೂಪನು. **ದಣ್ಡೋ ದಮಯತಾಮಸ್ಮಿ** (ಗೀತಾ. ೧೦-೩೮)

863) **ಪ. ಭ. :–** ವೇದಧರ್ಮವನ್ನು ಸಂರಕ್ಷಿಸುವ ರಾಜನೇ ಮುಂತಾದವರ ಮೂಲಕ ದುಷ್ಟರನ್ನು ದಂಡನೀತಿಯಿಂದ ದಮನಮಾಡುವವನು.

ನಿರುಕ್ತಿ :– ವೇದಧರ್ಮಾರಿಷ್ಟತಾತಿನೃಪಾದಿಮುಖತಃ ಖಲಾನ್ ।
ದಣ್ಡನೀತ್ಯಾ ದಾಮ್ಯತೀತಿ ದಣ್ಡಃ ಸ್ಯಾದೃತುವರ್ಣಕಃ ॥

860) **ಸ. ಸಂ. :–** ದೈತ್ಯರನ್ನು ದಂಡಿಸುವವನು. **ಅದಂಡಃ** = ಇತರರಿಂದ ಶಿಕ್ಷೆಯನ್ನು ಪಡೆಯದವನು.

* * *

860) **ದಮಯಿತಾ**=ಒಳ-ಹೊರಶತ್ರುಗಳನ್ನು ದಮನಮಾಡುವವನು.

ಶಂ. ಭಾ. :– ವೈವಸ್ವತರಾಜನೇ ಮುಂತಾದವರ ಮೂಲಕ ಅಥವಾ

ಯಮಧರ್ಮರಾಜ ಮತ್ತು ರಾಜರೇ ಮುಂತಾದವರ ಮೂಲಕ ಪ್ರಜೆಗಳನ್ನು ದಮನಮಾಡುವವನು.

864) **ಪ. ಭ. :–** ತಾನೂ ರಾವಣಾದಿಗಳನ್ನು ನಿಗ್ರಹಿಸುವ ಸ್ವಭಾವ ವುಳ್ಳವನು.
ನಿರುಕ್ತಿ :– **ತಾಚ್ಛೀಲ್ಯಾದ್ರಾವಣಾದೀನಾಂ ಹರ್ತಾ ದಮಯಿತಾ ಸ್ವಯಮ್॥**

861) **ಸ. ಸಂ. :–** ದೈತ್ಯರನ್ನು ದಮನಮಾಡುವವನು.

* * *

861) **ದಮಃ** = ಇಂದ್ರಿಯನಿಗ್ರಹಸ್ವರೂಪಿಯು.

ಶಂ. ಭಾ. :– ದಂಡನೆಯನ್ನು ಪಡೆಯಲು ಅಧಿಕಾರಿಗಳಾದವರಲ್ಲಿ ದಂಡನೆಯ ಫಲಸ್ವರೂಪನಾಗಿರುವವನು.

865) **ಪ. ಭ. :– ಅದಮಃ** = ಬೇರೆ ಯಾರಿಂದಲೂ ಅಥವಾ ಯಾವುದರಿಂದಲೂ ದಮನವಿಲ್ಲದವನು.
ನಿರುಕ್ತಿ :– **ಕಶ್ಚಿದ್ದಮಯಿತಾ ನಾಸ್ತಿ ಯಸ್ಯಾಸಾವದಮಃ ಸ್ಮೃತಃ ॥**

862) **ಸ. ಸಂ. :– ಆದಮಃ** = ಚೆನ್ನಾಗಿ ದಾನಮಾಡುವವರಿಗೆ ಸಂಪತ್ತನ್ನು ಕೊಡುವವನು. **ಅದಮಃ** = ಶ್ರೀಕೃಷ್ಣಾದಿರೂಪದಲ್ಲಿ ಇಂದ್ರಿಯ ನಿಗ್ರಹವನ್ನು ತೋರದವನು.

* * *

862) **ಅಪರಾಜಿತಃ** = ಸೋಲನ್ನು ಪಡೆಯದವನು. ಸದಾ ವಿಜಯ ಶಾಲಿಯಾದವನು.

ಶಂ. ಭಾ. :– ಶತ್ರುಗಳಿಂದ ಪರಾಜಯವನ್ನು ಪಡೆಯದವನು.

866) **ಪ. ಭ. :–** ತನ್ನ ಸರ್ವತೋಮುಖವಾದ ಆಳ್ವಿಕೆಯಲ್ಲಿ ಯಾರಿಂದಲೂ ಯಾರ ಕಡೆಯಿಂದಲೂ ಏಟು ತಿನ್ನದವನು, ಪರಾಜಯ ವನ್ನು ಪಡೆಯದವನು. ದಾಶಾರ್ಹಮಪರಾಜಿತಮ್ ॥
ನಿರುಕ್ತಿ :– **ಕ್ವಚಿತ್ಕದಾಚಿತ್ಕುತಶ್ಚಿತ್ಸರ್ವತೋಮುಖಶಾಸನೇ ।
ಯಸ್ಯ ಪ್ರತಿಹತಿರ್ನಾಸ್ತಿ ಸ ವೈ ಸ್ಯಾದಪರಾಜಿತಃ ॥**

863) **ಸ. ಸಂ. :–** ತನಗಿಂತಲೂ ಉತ್ತಮರಿಲ್ಲದವನು ಮತ್ತು ಯಾರಿಂದಲೂ ಸೋಲಿಸಲ್ಪಡದವನು ; ಬೇರೆ ಪಾಲಕರಿಲ್ಲದವನು ಮತ್ತು ಬೆಳಗಲ್ಪಟ್ಟವನು.

*   *   *

863) **ಸರ್ವಸಹಃ** = ಭಕ್ತರ ಎಲ್ಲ ಅಪರಾಧಗಳನ್ನೂ ಸಹಿಸುವವನು, ಶತ್ರುಗಳ ಆಕ್ರಮಣವನ್ನು ಸಹಿಸುವವನು ; ಯಾವಾಗಲೂ ಎಲ್ಲರಲ್ಲೂ ತಾಳ್ಮೆಯುಳ್ಳವನು.

ಶಂ. ಭಾ. :– ಎಲ್ಲ ಕರ್ಮಗಳಲ್ಲಿಯೂ ಸಮರ್ಥನಾದವನು ; ಎಲ್ಲ ಶತ್ರುಗಳನ್ನೂ ಸಹಿಸಿಕೊಳ್ಳುವವನು. (ಜಯಿಸುವವನು.)

867) **ಪ. ಭ. :–** ಮಂದಾಧಿಕಾರಿಗಳು ಇತರ ದೇವತೆಗಳನ್ನು ಆರಾಧಿಸುವುದನ್ನೂ ಸಹಿಸುವವನು.

ನಿರುಕ್ತಿ :– **ಮನ್ದಾಧಿಕಾರಿಣಾಂ ಸರ್ವಮಾರಾಧ್ಯತ್ವೇನ ದೈವವತ್ ।**
ಬಿಭರ್ತಿ ಸಹತೇ ಯಸ್ತು ಸ ಸರ್ವಸಹ ಈರಿತಃ ॥

864) **ಸ. ಸಂ. :–** ಎಲ್ಲವನ್ನೂ ಸಹಿಸುವವನು.

*   *   *

864) **ನಿಯನ್ತಾ** = ಎಲ್ಲರಿಗೂ ನಿಯಾಮಕನಾದವನು. ಎಲ್ಲರನ್ನೂ ತಮ್ಮ ತಮ್ಮ ಕಾರ್ಯಗಳಲ್ಲಿ ವ್ಯವಸ್ಥೆಮಾಡುವವನು.

ಶಂ. ಭಾ. :– ಎಲ್ಲರನ್ನೂ ತಮ್ಮ ತಮ್ಮ ಕೆಲಸಗಳಲ್ಲಿ ನಿಯೋಜಿಸುವವನು.

868) **ಪ. ಭ. :–** ಇತರ ಎಲ್ಲ ದೇವತೆಗಳಲ್ಲಿಯೂ ಆಯಾ ರುಚಿಗಳನ್ನುಂಟುಮಾಡಿ ಮಂದಾಧಿಕಾರಿಗಳನ್ನು ಅವರ ಆರಾಧನೆಯಲ್ಲಿ ನಿಯಮಿಸುವವನು.

ನಿರುಕ್ತಿ :– **ದೈವತೇಷು ಚ ಸರ್ವೇಷು ತತ್ತದಿಚ್ಛಾಂ ಪ್ರರೋಚಯನ್ ।**
ಮನ್ದಾಧಿಕಾರಿಣೋ ಯೋಽಸೌ ನಿಯನ್ತಾ ಸ್ಯಾನ್ನಿಯಚ್ಛತಿ ॥

865) **ಸ. ಸಂ. :–** ನಿಯಾಮಕನು.

*   *   *

865) **ಅನಿಯಮಃ** = ಯಾವ ನಿಯಂತ್ರಣವೂ ಇಲ್ಲದವನು ; ಸರ್ವ ಸ್ವತಂತ್ರನು. **ನಿಯಮಃ** = ವ್ಯವಸ್ಥಾರೂಪನಾದವನು.

ಶಂ. ಭಾ. :– ತಾನೇ ಸರ್ವನಿಯಾಮಕನಾದುದರಿಂದ ಬೇರೆ ನಿಯಾ ಮಕರಿಲ್ಲದವನು.

869) **ಪ. ಭ. :– ನಿಯಮಃ** = ದೇವತಾಂತರಗಳ ಉಪಾಸನೆಯ ಫಲವಾದ ಭೋಗಾದಿಗಳನ್ನು ನಿಯಮಿಸಿ ಉಪಾಸಕರಿಗೆ ಅವು ದೊರಕು ವಂತೆ ಮಾಡುವವನು.

ಭೋಗಾದಿಕಂ ನಿಯಮ್ಯಾಸ್ಮಿಲ್ಲಮ್ಭಯನ್ನಿಯಮಃ ಸ್ಮೃತಃ ॥

866) **ಸ. ಸಂ. :– ನಿಯಮಃ** = ಚೆನ್ನಾಗಿ ಶಾಸನಮಾಡುವವನು.

* * *

866) **ಯಮಃ** = ಯೋಗಕ್ಕೆ ಅಂಗವಾದ ಯಮರೂಪಿಯಾದವನು ; ಯಮಧರ್ಮರಾಜರೂಪಿಯು ; ಸಂಹಾರಕನು ; **ಅಯಮಃ** = ಮೃತ್ಯು ರಹಿತನು ; ಎಲ್ಲ ನಿಯಮಗಳನ್ನೂ ಮೀರಿದವನು.

ಶಂ. ಭಾ. :– ಯಮಃ = ಯೋಗಾಂಗವಾದ ಯಮ-ನಿಯಮಾದಿ ಗಳಿಂದ ಹೊಂದಲ್ಪಡುವವನು. **ಅಯಮಃ** = ಮೃತ್ಯುರಹಿತನು.

870) **ಪ. ಭ. :– ಯಮಃ** = ಆಯಾ ಫಲಗಳಿಗೆ ನಿಯಮಾಕರಾದ ಯಮನೇ ಮುಂತಾದವರನ್ನು ನಿಯಮಿಸುವವನು. **ಪ್ರಭವತಿ ಸಂಯಮನೇ ಮಮಾಪಿ ವಿಷ್ಣುಃ (ವಿ. ಪು. ೪-೧-೧೩)**

ನಿರುಕ್ತಿ :– ಯಮಾದೀನ್ಯಚ್ಛತಿ ಯಮಸ್ತತ್ತತ್ಫಲನಿಯಾಮಕಾನ್ ।

867) **ಸ. ಸಂ. :– ಯಮಃ** = ಪ್ರಳಯಕಾಲದಲ್ಲಿ ಎಲ್ಲವೂ ಮರಣ ಹೊಂದಿ ನಿಷ್ಕ್ರಿಯವಾಗುವಂತೆ ಮಾಡುವವನು.

* * *

ಸತ್ತ್ವವಾನ್ಸಾತ್ತ್ವಿಕಃ ಸತ್ಯಃ ಸತ್ಯಧರ್ಮಪರಾಯಣಃ ।
ಅಭಿಪ್ರಾಯಃ ಪ್ರಿಯಾರ್ಹೋಽರ್ಹಃ ಪ್ರಿಯಕೃತ್ಪ್ರೀತಿವರ್ಧನಃ ॥

867) **ಸತ್ತ್ವವಾನ್** = ಶುದ್ಧಸತ್ತ್ವನಾಗಿರುವವನು ; ಬಲಶಾಲಿಯು ; ಸರ್ವಸಾರನಾದವನು ; ಸ್ಥಿರಸ್ವರೂಪನಾದವನು.

ಶಂ. ಭಾ. :– ಶೌರ್ಯ-ವೀರ್ಯಗಳೇ ಮುಂತಾದ ಸತ್ತ್ವವುಳ್ಳವನು.

871) ಪ. ಭ. :– ಪ್ರಕಾಶ, ಲಾಘವ ಮತ್ತು ಸುಖಸಂಪತ್ತುಗಳಿಂದ ಮೋಕ್ಷಸಾಧನವಾಗಿರುವ ಸತ್ತ್ವಗುಣಕ್ಕೆ ಸಾಕ್ಷಾತ್ತಾಗಿ ಅಧಿಷ್ಠಾತೃವಾದವನು. ಮಹಾನ್ಪ್ರಭುರ್ವೈ ಪುರುಷಃ ಸತ್ತ್ವಸ್ಯೈಷ ಪ್ರವರ್ತಕಃ । (ಶ್ವೇ. ೩-೧೨)

ನಿರುಕ್ತಿ :– ಪ್ರಕಾಶಲಾಘವಸುಖಸಂಪದಾ ಮೋಕ್ಷಸಾಧನಮ್ ।
ಸತ್ತ್ವಂ ಸಾಕ್ಷಾದಧಿಷ್ಠೇಯಂ ಯಸ್ಯಾಸೌ ಸತ್ತ್ವವಾನ್ ಶ್ರುತಃ ॥

868) ಸ. ಸಂ. :– ಜೀವಬಲ ಅಥವಾ ಸಾಧುತ್ವಗಳುಳ್ಳವನು.

* * *

868) **ಸಾತ್ತ್ವಿಕಃ** = ಸತ್ತ್ವಗುಣಕ್ಕೆ ಅಧಿಷ್ಠಾನವಾಗಿರುವವನು.

ಶಂ. ಭಾ. :– ಸತ್ತ್ವಗುಣದಲ್ಲಿ ಪ್ರಧಾನವಾಗಿರುವವನು.

872) ಪ. ಭ. :– ಧರ್ಮ, ಜ್ಞಾನ, ವೈರಾಗ್ಯ ಮತ್ತು ಐಶ್ವರ್ಯ ರೂಪಗಳಾದ ಫಲಗಳನ್ನು ತಾನೇ ನಿಯಮಿಸಿರುವುದರಿಂದ ಸತ್ತ್ವಕ್ಕೆ ಯೋಗ್ಯನಾದವನು.

ನಿರುಕ್ತಿ :– ವಿಜ್ಞಾನೈಶ್ವರ್ಯವೈರಾಗ್ಯಧರ್ಮರೂಪಫಲಂ ಸ್ವಯಮ್ ।
ನಿಯಮ್ಯಾರ್ಹತಿ ಸತ್ತ್ವಂ ಯಃ ಸಾತ್ತ್ವಿಕಃ ಪರಿಕೀರ್ತಿತಃ ॥

869) ಸ. ಸಂ. :– ಶುದ್ಧಸತ್ತ್ವಪ್ರಧಾನನಾದ ಚತುರ್ಮುಖನು ಯಾವನಿಗೆ ದಾಸನಾಗಿರುವನೋ–ಅವನು.

* * *

869) **ಸತ್ಯಃ** = ವಿಕಾರ ಹಿತನು ; ಸಾಧುವು ; ಸತ್ಯಸ್ವರೂಪನು.

ಶಂ. ಭಾ. :– ಸತ್ಪುರುಷರಲ್ಲಿ ಸಾಧುವಾಗಿರುವವನು.

873) ಪ. ಭ. :– ಸಾತ್ತ್ವಿಕಶಾಸ್ತ್ರಗಳಿಂದ ಪ್ರತಿಪಾದ್ಯನಾಗಿರುವವನು ; ಯಥಾರ್ಥವಾದ ವೈಭವವುಳ್ಳವನು ; ತಾನು ಸತ್ಯದಲ್ಲಿಯೂ–ಸತ್ಯವು ತನ್ನಲ್ಲಿಯೂ ಪ್ರತಿಷ್ಠಿತವಾಗಿರುವವನು. ಸತ್ಯೇ ಪ್ರತಿಷ್ಠಿತಃ ಕೃಷ್ಣಃ ಸತ್ಯಮತ್ರ ಪ್ರತಿಷ್ಠಿತಮ್ । ಸತ್ಯಾತ್ಸತ್ಯಂ ತು ಗೋವಿನ್ದಃ ತಸ್ಮಾತ್ಸತ್ಯೋಽಪಿ ನಾಮತಃ ॥ (ಮ. ಭಾ. ಉ. ೭೦-೧೨)

ನಿರುಕ್ತಿ :– ಯಥಾರ್ಥವೈಭವಃ ಸತ್ಯಃ ಸರ್ವಶಾಸ್ತ್ರೇಷು ವಿಶ್ರುತಃ ।

870) ಸ. ಸಂ. :– ಸ್ವತಂತ್ರನಾದವನು ; ಸತತವಾಗಿರುವವನು ; ಚೆನ್ನಾಗಿ ವ್ಯಾಪಿಸಿರುವವನು ; ಹೊಂದಿಸುವವನು ; ಹೊಂದಿಸಲು ಕಾರಣನಾದವನು ; ನಿತ್ಯನು ; ಸಾಧುವು ; ಗುಣವ್ಯಾಪ್ತಿಯುಳ್ಳವನು ; ನಿಯಾಮಕನು.

* * *

870) **ಸತ್ಯಧರ್ಮಪರಾಯಣಃ** = ಸತ್ಯ-ಧರ್ಮಗಳಲ್ಲಿ ಪರಮನಿಷ್ಠೆಯುಳ್ಳವನು ; ಸತ್ಯ-ಧರ್ಮಗಳಿಗೆ ಪರಮಗತಿಯಾದವನು.

ಶಂ. ಭಾ. :– ಸತ್ಯದಲ್ಲಿಯೂ, ಯಥಾರ್ಥವಾಣಿಯಲ್ಲಿಯೂ ಮತ್ತು (ವಿಧಿರೂಪವಾದ) ಧರ್ಮದಲ್ಲಿಯೂ ನಿಯತನಾಗಿರುವವನು.

874) ಪ. ಭ. :– ಉಪಾಧಿರಹಿತವೂ ಸಾತ್ತ್ವಿಕವಿಧಿಗೆ ಅಧಿಕಾರಿಯಾದವನಿಗೆ ಕೊಡುವುದೂ ಆಗಿರುವ ಧರ್ಮವು ಯಾವನಿಗೆ ಪರಮಪ್ರೀತಿಯನ್ನುಂಟುಮಾಡುವುದೋ–ಅವನು.

ನಿರುಕ್ತಿ :– ಉಪಾಧಿರಹಿತಃ ಸರ್ವಮುಖ್ಯೋ ಧರ್ಮಃಪರಾಯಣಮ್ ।
ಪರಮಪ್ರೀಣನಂ ಯಸ್ಯ ಸತ್ಯಧರ್ಮಪರಾಯಣಃ ॥

871) ಸ. ಸಂ. :– ಸತ್ಯವಿಷಯದಲ್ಲಿ ಧರ್ಮವುಳ್ಳವರಿಗೆ ಮುಖ್ಯವಾದ ಆಶ್ರಯವಾಗಿರುವವನು.

* * *

871) **ಅಭಿಪ್ರಾಯಃ** = ಸರ್ವಶಾಸ್ತ್ರಗಳಿಗೂ ತಾತ್ಪರ್ಯವಾಗಿರು ವವನು ; ಪರಮಾರ್ಥವಾಗಿರುವವನು ; ಸಾಧುಗಳಿಂದ ಯಾವಾಗಲೂ ಎಲ್ಲ ಸನ್ಮಾರ್ಗಗಳಿಂದಲೂ ಹೊಂದಲ್ಪಡುವವನು.

ಶಂ. ಭಾ. :– ಪುರುಷಾರ್ಥವನ್ನು ಬಯಸುವ ಜನರು ಯಾವನಲ್ಲಿ ಅಭಿಲಾಷೆಯನ್ನು ಹೊಂದಿರುವರೋ–ಅವನು ; ಪ್ರಳಯಸಮಯದಲ್ಲಿ ಪ್ರಪಂಚವು ಯಾವನಿಗೆ ಅಭಿಮುಖವಾಗಿ ಯಾವನಲ್ಲಿ ಲೀನವಾಗುತ್ತದೆಯೋ ಅವನು.

875) **ಪ. ಭ. :–** ಧರ್ಮನಿಷ್ಠರಿಂದಲೂ ಮತ್ತು ಸತ್ಯನಿಷ್ಠರಿಂದಲೂ ನಿರ್ವ್ಯಾಜವಾದ ಉದ್ದೇಶ್ಯವಾಗಿ ಎಲ್ಲ ಕಡೆಗಳಿಂದಲೂ ಹೊಂದಲ್ಪಡುವವನು.

ನಿರುಕ್ತಿ :– **ಸ್ವಚ್ಛೇನ ಧರ್ಮನಿಷ್ಠೇನ ಸತ್ಯೇನ ಚ ವಿಶೇಷತಃ ।**
ನಿರುಪಾಧಿಕೋದ್ದೇಶ್ಯತ್ವಾದಭಿತಃ ಪ್ರೇಯತೇ ಚ ಯಃ ।
ಅಭಿಪ್ರಾಯಃ ಸ ವಿಜ್ಞೇಯೋ ವಸ್ವರ್ಣೋ ಮನುರುತ್ತಮಃ ॥

872) **ಸ. ಸಂ. :–** ರಮಾದೇವಿಯನ್ನು ಸಂತೋಷಪಡಿಸುವವನು.

* * *

872) **ಪ್ರಿಯಾರ್ಹಃ =** ಇಷ್ಟವಾದ ವಸ್ತುಗಳ ಸಮರ್ಪಣೆಗೆ ಯೋಗ್ಯನಾದವನು.

ಶಂ. ಭಾ. :– ಇಷ್ಟವಸ್ತುಗಳ ನಿವೇದನೆಗೆ ಯೋಗ್ಯನಾದವನು. **ಯದ್ಯದಿಷ್ಟತಮಂ ಲೋಕೇ ಯಚ್ಚಾಸ್ಯ ದಯಿತಂ ಗೃಹೇ । ತತ್ತದ್ಗುಣವತೇ ದೇಯಂ ತದೇವಾಕ್ಷಯಮಿಚ್ಛತಾ (ದಕ್ಷಸ್ಮೃತಿ ೩-೩೧)**

876) **ಪ. ಭ. :–** ಏಕಾಂತಭಕ್ತಿಯುಳ್ಳ ಪ್ರಿಯತಮನಾದ ಜ್ಞಾನಿಗೆ ಮಾತ್ರವೇ ಸ್ವಾಭಾವಿಕವಾಗಿ ತಾನೇ ಪಡೆದು ಅನುಭವಿಸಲು ಯೋಗ್ಯನಾದವನು.

ನಿರುಕ್ತಿ :– **ಐದಮರ್ಥ್ಯಜ್ಞಾನಿನಂ ಯಃ ಪ್ರಿಯಾರ್ಹಃ ಪ್ರಿಯಮರ್ಹತಿ ॥**

873) **ಸ. ಸಂ. :–** ಸುಖವಿಶೇಷಕ್ಕೆ ಯೋಗ್ಯನಾದವನು.

* * *

873) **ಅರ್ಹಃ=**ಅಂತರಂಗ-ಬಹಿರಂಗಪೂಜೆಗಳಿಗೆ ಯೋಗ್ಯನಾದವನು.

ಶಂ. ಭಾ. :– ಸ್ವಾಗತ, ಆಸನ, ಪ್ರಶಂಸೆ, ಅರ್ಘ್ಯ, ಪಾದ್ಯ, ಸ್ತುತಿ, ನಮಸ್ಕಾರಗಳೇ ಮುಂತಾದ ಪೂಜಾಸಾಧನಗಳಿಂದ ಪೂಜಿಸಲು ಯೋಗ್ಯನಾದವನು.

877) **ಪ. ಭ. :–** ಅನನ್ಯಪರಾಯಣರಾದ ಪುರುಷರಿಗೆ ಯೋಗ್ಯನಾದವನು.

ನಿರುಕ್ತಿ :– ಅನನ್ಯೇಚ್ಛಾವತಾಂ ಪುಂಸಾಂ ಯೋಗ್ಯಃ ಸೋऽರ್ಹ ಇತಿ ಸ್ಮೃತಃ ॥

874) **ಸ. ಸಂ. :–** ಪೂಜ್ಯನಾದವನು.

*　　　*　　　*

874) **ಪ್ರಿಯಕೃತ್** = ಭಕ್ತರಿಗೆ ಪ್ರಿಯವನ್ನುಂಟುಮಾಡುವವನು.

ಶಂ. ಭಾ. :– ಸ್ತೋತ್ರಗಳೇ ಮುಂತಾದುವುಗಳಿಂದ ಭಜಿಸುವವರಿಗೆ ಪ್ರಿಯವನ್ನುಂಟುಮಾಡುವವನು.

878) **ಪ. ಭ. :–** ಇತರ ದೇವತೆಗಳನ್ನು ಭಜಿಸುವವರನ್ನು ಕೂಡ ಅವರ ಇಷ್ಟಕ್ಕೆ ಅನುಗುಣವಾಗಿ ನಡೆಯುವುದರ ಮೂಲಕ ಯಾವಾಗಲೂ ಪ್ರಿಯರನ್ನಾಗಿ ಮಾಡಿಕೊಳ್ಳುವವನು.

ನಿರುಕ್ತಿ :– ಭಜತೋऽಪ್ಯನ್ಯಭಕ್ತಾನ್ಯಃ ಸ್ವಪ್ರಿಯಾನ್ಕುರುತೇ ಸದಾ ।
ಛನ್ದಾನುವರ್ತನೇನೇತಿ ಪ್ರಿಯಕೃತ್ಸ ಚ ಕಥ್ಯತೇ ॥

875) **ಸ. ಸಂ. :–** ಸುಖವಿಶೇಷವನ್ನುಂಟುಮಾಡುವವನು.
ಪರೇಯಂ ಪ್ರಿಯನಾಮಕಮ್ (ತೈತ್ತಿರೀಯಭಾಷ್ಯ)

*　　　*　　　*

875) **ಪ್ರೀತಿವರ್ಧನಃ** = ಭಕ್ತರ ಪ್ರೀತಿಯನ್ನು ವೃದ್ಧಿಪಡಿಸುವವನು.

ಶಂ. ಭಾ. :– ಭಕ್ತರ ಪ್ರೀತಿಯನ್ನು ವೃದ್ಧಿಪಡಿಸುವವನು.

879) **ಪ. ಭ. :–** ಉತ್ತರೋತ್ತರವಾಗಿ ತನ್ನ ಗುಣಗಳನ್ನು ಹೆಚ್ಚು ಹೆಚ್ಚಾಗಿ ಪ್ರಕಟಿಸುತ್ತಾ ಭಕ್ತರ ಪ್ರೀತಿಯನ್ನು ವೃದ್ಧಿಪಡಿಸುವವನು.

ನಿರುಕ್ತಿ :– ಗುಣಾವಿಷ್ಕರಣಾನ್ನಿತ್ಯಂ ಉತ್ತರೋತ್ತರತೋऽಧಿಕಮ್ ।
ಯಸ್ತು ಪ್ರೀತಿಂ ವರ್ಧಯತಿ ಪ್ರೀತಿವರ್ಧನ ಈರಿತಃ ॥

876) **ಸ. ಸಂ. :–** ಭಕ್ತರಲ್ಲಿ ಪ್ರೀತಿಯನ್ನು ವೃದ್ಧಿಪಡಿಸುವವನು ; ಪ್ರೀತಿಯಿಂದ ಭಕ್ತರನ್ನು ವೃದ್ಧಿಪಡಿಸುವವನು.

*　　　*　　　*

ವಿಹಾಯಸಗತಿರ್ಜ್ಯೋತಿಃ ಸುರುಚಿರ್ಹುತಭುಗ್ವಿಭುಃ ।
ರವಿರ್ವಿರೋಚನಃ ಸೂರ್ಯಃ ಸವಿತಾ ರವಿಲೋಚನಃ ॥೧೦೭॥

876) **ವಿಹಾಯಸಗತಿಃ** = ಜ್ಞಾನಾಕಾಶದಲ್ಲಿ ಸಂಚರಿಸುವವನು ; ಆಕಾಶಸಂಚಾರಿಯಾದ ಆದಿತ್ಯರೂಪಿಯು.

ಶಂ. ಭಾ. :– ಆಕಾಶವನ್ನು ಆಶ್ರಯವಾಗಿ ಉಳ್ಳ ಆದಿತ್ಯರೂಪಿಯು ; ವಿಷ್ಣುಪದವು.

880) **ಪ. ಭ. :–** ಭಕ್ತಿಯ ಪರಾಕಾಷ್ಠೆಗೆ ಹತ್ತಿರವಿರುವ ಭಕ್ತರನ್ನು ಪರಮವ್ಯೋಮಕ್ಕೆ ಹೊಂದಿಸುವವನು.

ನಿರುಕ್ತಿ :– **ನಿಗೂಢಭಕ್ತಿಯುಕ್ತೈರ್ಹಿ ನಿತ್ಯಂ ಯಸ್ಮಾತ್ತು ಗಮ್ಯತೇ ।**
ವಿಹಾಯಸಃ ಪರಂ ವ್ಯೋಮ ವಿಹಾಯಸಗತಿಸ್ತು ಸಃ ॥

877) **ಸ. ಸಂ. :–** ಗರುಡಗಮನನು.

* * *

877) **ಜ್ಯೋತಿಃ** = ಪರಂಜ್ಯೋತಿಯು ; ಸ್ವಯಂ ಜ್ಯೋತಿಸ್ವರೂಪನು.

ಶಂ. ಭಾ. :– ತನಗೆ ತಾನೇ ಬೆಳಗುವವನು. **ನಾರಾಯಣಪರೋ ಜ್ಯೋತಿಃ** (ಮ .ನಾ.)

881) **ಪ. ಭ. :–** ತನ್ನನ್ನು ಹೊಂದಲು ಸಾಧನವಾಗಿರುವ ಅರ್ಚಿರಾದಿ ಮಾರ್ಗಗಳಲ್ಲಿ ಮೊದಲನೇ ಘಟ್ಟವಾಗಿರುವ ಜ್ಯೋತಿಯು ತಾನೇ ಆಗಿರುವವನು.

ನಿರುಕ್ತಿ :– **ಸ್ವಪ್ರಾಪ್ತೇಃ ಸಾಧನತ್ವಾದ್ಯಃ ಸ್ವಯಂ ನಿತ್ಯಂ ವಿಶೇಷತಃ ।**
ಅರ್ಚಿರಾದಿಗತೇರ್ಜ್ಯೋತಿಃ ಪ್ರಥಮಃ ಪರ್ವ ಕಥ್ಯತೇ ॥

878) **ಸ. ಸಂ. :–** ದೀಪ್ತನಾದವನು.

* * *

878) **ಸುರುಚಿಃ** = ಒಳ್ಳೆಯ ಕಾಂತಿಯುಕ್ತನು ಮತ್ತು ಅಭಿರುಚಿಯುಳ್ಳವನು.

ಶಂ. ಭಾ. :– ಶ್ರೇಷ್ಠವಾದ ದೀಪ್ತಿ ಅಥವಾ ಇಚ್ಛೆಯುಳ್ಳವನು.

882) **ಪ. ಭ. :–** ಅರ್ಚಿರಾದಿ ಮಾರ್ಗಗಳಲ್ಲಿ ಪ್ರಕಾಶಮಾನವಾದ ಮತ್ತು ಶುಭವಾದ 'ಅಹಃ ' 'ಹಗಲು' ಎಂಬ ಘಟ್ಟವಾಗಿರುವವನು.

ನಿರುಕ್ತಿ :– **ಅಹಃ ಶುಭಂ ಯಸ್ಯ ಸ ವೈ ಸುರುಚಿಃ ಪರಿಕೀರ್ತಿತಃ ॥**

879) **ಸ. ಸಂ. :–** ಶೋಭನವಾದ ರುಚಿಯುಳ್ಳವನು.

* * *

879) **ಹುತಭುಕ್** = ಅಗ್ನಿರೂಪಿಯು ; ದೇವತೆಗಳಿಗೆ ಅರ್ಪಿಸಿದ ಹವಿಸ್ಸನ್ನು ತಾನೇ ಭುಂಜಿಸುವವನು.

ಶಂ. ಭಾ. :– ಸಮಸ್ತದೇವತೆಗಳನ್ನೂ ಉದ್ದೇಶಿಸಿ ಪ್ರವೃತ್ತವಾದ ಕರ್ಮಗಳಲ್ಲಿ ಅರ್ಪಿಸುವ ಆಹುತಿಗಳನ್ನು ಭುಂಜಿಸುವವನು ಅಥವಾ ರಕ್ಷಿಸುವವನು.

883) ಪ. ಭ. :– **ಹುತಭುಗ್ವಿಭುಃ** = ಅಮೃತಪರಿಣಾಮವಾದ ಹವಿಸ್ಸನ್ನು ಭುಂಜಿಸುವ ಸೋಮನು ಯಾವನಲ್ಲಿ ಶುಕ್ಲಪಕ್ಷದ ಮೂಲಕ ವಿಭುವು (ಪೂರ್ಣನು) ಆಗುವನೋ–ಅವನು.

ನಿರುಕ್ತಿ :– **ಸುಧಾಪರೀಣಾಮಹುತಂ ಭುಞ್ಜಾನಶ್ಚನ್ದ್ರಮಾಸ್ತಥಾ ।**
ವಿಭುಃ ಪೂರ್ಣೋ ಭವೇದ್ಯಸ್ಮಿನ್ಸ ವೈ ಸ್ಯಾದ್ಧುತಭುಗ್ವಿಭುಃ ॥

880) ಸ. ಸಂ. :– ಹೋಮಮಾಡಿದುದನ್ನು ಭುಂಜಿಸುವವನು.

* * *

880) **ವಿಭುಃ** = ಸರ್ವವ್ಯಾಪಕನು ; ಸರ್ವಪ್ರಭುವು.

ಶಂ. ಭಾ. :– ಎಲ್ಲೆಲ್ಲಿಯೂ ಇರುವವನು ; ಮೂರು ಲೋಕಗಳಿಗೂ ಪ್ರಭುವಾದವನು.

881) ಸ. ಸಂ. :– ಯಾವನಿಂದ ಭಕ್ತರು ವಿಶಿಷ್ಟರಾಗುವರೋ ಅವನು.

* * *

881) **ರವಿಃ** : ಸೂರ್ಯರೂಪಿಯು ; ರಸಗಳನ್ನು ಗ್ರಹಿಸುವವನು.

ಶಂ. ಭಾ. :– ರಸಗಳನ್ನು ಗ್ರಹಿಸುವ ಸೂರ್ಯರೂಪಿಯು. **ರಸಾನಾಂ ಚ ತಥಾದಾನಾದ್ರವಿರಿತ್ಯಭಿಧೀಯತೇ ॥** (ವಿ. ಧ. ೧-೩೦-೧೬)

884) ಪ. ಭ. :– ಉತ್ತರಾಯಣದ ಮೂಲಕ ಪ್ರಶಂಸಿಸಲ್ಪಡುವವನು. (ಪ್ರಕಾಶಿಸುವವನು.)

ನಿರುಕ್ತಿ :– **ಯಶ್ಚೋತ್ತರಾಯಣದ್ವಾರಾ ರೂಯತೇಽತ್ರಪ್ರಶಸ್ಯತೇ ॥**
ಸ ವೈ ರವಿಃ ಸಮಾಖ್ಯಾತಃ ಪ್ರಾಶಸ್ತ್ಯಫಲದೋ ಮನುಃ ॥

'ಓಂ ರವಯೇ ನಮಃ'–ಎಂಬ ಈ ನಾಮಮಂತ್ರಜಪವು ಪ್ರಶಸ್ತಿಯನ್ನುಂಟುಮಾಡುತ್ತದೆ.

882) **ಸ. ಸಂ. :–** ಇತರರಿಗೆ ತಿಳಿಯಲ್ಪಡದವನು ; ತನಗೆ ತಾನೇ ಜ್ಞೇಯನಾದವನು.

* * *

882) **ವಿರೋಚನಃ** = ವಿಶೇಷವಾಗಿ ಮತ್ತು ವಿವಿಧವಾಗಿ ಬೆಳಗುವವನು.

ಶಂ. ಭಾ. :– ವಿವಿಧಪ್ರಕಾರಗಳಿಂದ ಬೆಳಗುವವನು.

885) **ಪ. ಭ. :–** ಎರಡು ಅಯನಗತಿಗಳಿಂದ ಆದಿತ್ಯನನ್ನು ವಿಶೇಷವಾಗಿ ಬೆಳಗಿಸುವ ಸಂವತ್ಸರಸ್ವರೂಪಿಯು.

ನಿರುಕ್ತಿ :– **ಅಯನದ್ವಯಗತ್ಯಾರ್ಕಂ ಯೋ ವಿರೋಚಯತಿ ಸ್ವಯಮ್ ।**
ವಿರೋಚನ ಇತಿ ಖ್ಯಾತಃ ಪ್ರಕಾಶಫಲದೋ ಮನುಃ ॥

'**ಓಂ ವಿರೋಚನಾಯ ನಮಃ**'–ಎಂಬ ಈ ನಾಮಮಂತ್ರಜಪವು ಪ್ರಕಾಶಫಲವನ್ನು ಕೊಡುತ್ತದೆ.

883) **ಸ. ಸಂ. :–** ವಿಲೋಚನಃ = ವಿಶಿಷ್ಟವಾದ ಜ್ಞಾನದೃಷ್ಟಿಯನ್ನು ಪಾರ್ಥನಿಗೆ ಅನುಗ್ರಹಿಸಿದವನು. ವಿರೋಚನಃ = ಸೂರ್ಯಾದಿ ಪ್ರಕಾಶಗಳ ಮೂಲಕ ವಿಶಿಷ್ಟವಾದ ಪ್ರಕಾಶಗಳನ್ನು ಕೊಡುವವನು. **ರೋಚನ್ತೇ ರೋಚನಾ ದಿವಿ ॥**

* * *

883) **ಸೂರ್ಯಃ** = ಜ್ಞಾನಮಾರ್ಗ ಮತ್ತು ಧರ್ಮಮಾರ್ಗಗಳಲ್ಲಿ ಚೆನ್ನಾಗಿ ಪ್ರೇರಿಸುವವನು ; ಸೂರಿಗಳಿಗೆ ಯೋಗ್ಯನಾದವನು ; ಆದಿತ್ಯ ರೂಪಿಯು.

ಶಂ. ಭಾ. :– ಎಲ್ಲವನ್ನೂ ಉಂಟುಮಾಡುವವನು ; ಸಂಪತ್ತನ್ನು ಉಂಟುಮಾಡುವವನು.

886) **ಪ. ಭ. :–**ಯಾವನಿಂದ ವಾಯುವು ಚಲಿಸುತ್ತದೆಯೋ ಅವನು.

ನಿರುಕ್ತಿ :– **ವಾಯುಃ ಸರತಿ ಯಸ್ಮಾದ್ಧಿ ತಸ್ಮಾತ್ಸೂರ್ಯಃ ಷಡಕ್ಷರಃ ॥**

884) **ಸ. ಸಂ. :–** ಚಲಿಸುವವನು ; ಲೋಕಗಳನ್ನು ಕರ್ಮಗಳಲ್ಲಿ ಪ್ರೇರಿಸುವವನು ; ಸೂರಿಗಳಿಗೆ ಗಮ್ಯನಾದವನು.

* * *

884) **ಸವಿತಾ** = ಜಗತ್ತನ್ನು ಪ್ರಸವಿಸುವವನು ; ಪ್ರೇರಕನು.

ಶಂ. ಭಾ. :– ಸಮಸ್ತಜಗತ್ತನ್ನೂ ಸೃಷ್ಟಿಸುವವನು. ಪ್ರಜಾನಾಂ ತು ಪ್ರಸವನಾತ್ಸವಿತೇತಿ ನಿಗದ್ಯತೇ (ವಿ. ಧ. ೧-೩೦-೧೫.)

887) ಪ. ಭ. :– ಸೂರ್ಯನ ಮೂಲಕ ಮಳೆ, ಸಸ್ಯ–ಮುಂತಾದುವುಗಳನ್ನು ಉಂಟುಮಾಡುವವನು.
ನಿರುಕ್ತಿ :– ವೃಷ್ಟಿಸಸ್ಯಾದಿಕಂ ಸೂತೇ ಸವಿತೇತಿ ರವೇರ್ಮುಖಾತ್ ॥

885) ಸ. ಸಂ. :– ಸೃಷ್ಟಿಕರ್ತನು. ಸೃಷ್ಟ್ಯತ್ವಾತ್ಸವಿತಾ ವಿಷ್ಣುಃ ।

* * *

885) **ರವಿಲೋಚನಃ** = ಸೂರ್ಯನನ್ನು ಕಣ್ಣಾಗಿ ಹೊಂದಿರುವವನು. ಬುದ್ಧಿಸೂರ್ಯನ ಮೂಲಕ ಪ್ರಕಾಶಿಸುವವನು. ಸೂರ್ಯನಿಗೂ ಬುದ್ಧಿಗೂ ಕಣ್ಣಾಗಿರುವವನು.

ಶಂ. ಭಾ. :– ಸೂರ್ಯನು ಯಾವನಿಗೆ ಕಣ್ಣಾಗಿರುವವನೋ– ಅವನು. ಅಗ್ನಿಮೂರ್ಧಾ ಚಕ್ಷುಷೀ ಚನ್ದ್ರಸೂರ್ಯೌ ॥(ಮುಂ. ೨-೧-೪)

888) ಪ. ಭ. :– ಸೂರ್ಯಕಿರಣಸಂಬಂಧವೇ ಮುಂತಾದುವುಗಳಿಂದ ಚಂದ್ರ-ವಿದ್ಯುತ್-ವರುಣರನ್ನು ನಿರಂತರವಾಗಿ ಕಾಣಿಸುವವನು.
ನಿರುಕ್ತಿ :– ಸೂರ್ಯಸ್ಯ ರಶ್ಮಿಸಮ್ಬನ್ಧಾದ್ವಿದ್ಯುದ್ವರುಣಚನ್ದ್ರಕಾನ್ ।
ನಿರನ್ತರಂ ಲೋಚಯತಿ ರವಿಲೋಚನ ಈರಿತಃ ॥

886) ಸ. ಸಂ. :–ಕಣ್ಣಿನಲ್ಲಿ ಸೂರ್ಯನುಳ್ಳವನು. ಅರವಿಲೋಚನಃ = ನೃಸಿಂಹಾದಿರೂಪದಿಂದ ಅತ್ಯಂತವಾಗಿ ಬಿಲದಲ್ಲಿ ಸಂಬಂಧವುಳ್ಳವನು.

* * *

ಅನನ್ತೋ ಹುತಭುಗ್ಭೋಕ್ತಾ ಸುಖದೋ ನೈಕಜೋಽಗ್ರಜಃ ।
ಅನಿರ್ವಿಣ್ಣಃ ಸದಾಮರ್ಷೀ ಲೋಕಾಧಿಷ್ಠಾನಮದ್ಭುತಃ ॥೧೦೪॥

886) **ಅನನ್ತಃ** = ದೇಶ-ಕಾಲಗಳ ಪರಿಮಿತಿಯಿಲ್ಲದವನು ; ನಾಶವಿಲ್ಲದವನು ; ಶೇಷನಾಗಸ್ವರೂಪನು.

ಶಂ. ಭಾ. :– ನಿತ್ಯನೂ, ಸರ್ವಗತನೂ ಆಗಿರುವುದರಿಂದ ದೇಶ-ಕಾಲ-ವಸ್ತುಗಳ ಪರಿಚ್ಛೇದವಿಲ್ಲದವನು ; ಆದಿಶೇಷರೂಪನು.

889) **ಪ. ಭ. :– ಅನಂತಹುತಭುಗ್ಭೋಕ್ತಾ** = ಅನವಧಿಕ ಮಾಹಾತ್ಮ್ಯವುಳ್ಳ ಇಂದ್ರ ಮತ್ತು ಪ್ರಜಾಪತಿಗಳುಳ್ಳವನು. **ಸ ಇನ್ದ್ರಲೋಕಂ ಸ ಪ್ರಜಾಪತಿಲೋಕಂ (ಕೌಷೀ ೧-೩)**

ನಿರುಕ್ತಿ :– **ಮರುತ್ವಾನ್ಹುತಭುಗ್ಭೋಕ್ತಾ ಭುನಕ್ತೀತಿ ಪ್ರಜಾ ವಿಧಿಃ ।**
ಸೋಽನನ್ತಹುತಭುಗ್ಭೋಕ್ತಾ ಮಹಾನ್ತೌ ಯಸ್ಯ ತೌ ಸದಾ ॥

887) **ಸ. ಸಂ. :– ಅನಂತಃ** = ಬಂಧವಿಲ್ಲದವನು ; ನಾಶವಿಲ್ಲದವನು.

* * *

887) **ಹುತಭುಕ್** = ಹೋಮಮಾಡಿದ್ದನ್ನು (ಹವ್ಯ-ಕವ್ಯಗಳಲ್ಲಿ) ಭುಂಜಿಸುವವನು.

ಶಂ. ಭಾ. :– ಹವನಮಾಡಿದ್ದನ್ನು ಭುಂಜಿಸುವವನು.

888) **ಸ. ಸಂ. :–** ಆಹೂತನಾಗಿ ಭುಂಜಿಸುವವನು.

* * *

888) **ಭೋಕ್ತಾ :** ಪರಮಾನಂದವನ್ನು ಅನುಭವಿಸುವವನು ; ಸಂರಕ್ಷಿಸುವವನು.

ಶಂ. ಭಾ. :– ಅಚೇತನವಾಗಿ ಭೋಗ್ಯವಾಗಿರುವ ಪ್ರಕೃತಿಯನ್ನು ಭೋಗಿಸುವವನು.

889) **ಸ. ಸಂ. :–** ಭುಂಜಿಸುವವನು.

* * *

889) **ಸುಖದಃ**= ಪರಮಾನಂದಸುಖವನ್ನು ಕೊಡುವವನು.

ಶಂ. ಭಾ. :– ಭಕ್ತರಿಗೆ ಮೋಕ್ಷರೂಪವಾದ ಸುಖವನ್ನು ಕೊಡುವವನು ; **ಅಸುಖದಃ** = ಅಸುಖವನ್ನು (ದುಃಖವನ್ನು) ಖಂಡಿಸುವವನು. (ಹೋಗಲಾಡಿಸುವವನು.)

890) **ಪ. ಭ. :–** ಅಮಾನವಕರಸ್ಪರ್ಶದಿಂದ ಶೀಘ್ರದಲ್ಲಿಯೇ ಸಂಸಾರವನ್ನು ತೊಲಗಿಸಿ ತನ್ನ ಪ್ರಾಪ್ತಿಯೆಂಬ ಸುಖವನ್ನು ದಯಪಾಲಿಸುವವನು.

ನಿರುಕ್ತಿ :– **ಅಮಾನವಕರಸ್ಪರ್ಶಾದ್ಭವಮುತ್ಸಾರ್ಯ ಸತ್ವರಮ್ ।**
ಸ್ವಪ್ರಾಪ್ತಿಲಕ್ಷಣಸುಖಂ ದದಾತಿ ಸುಖದಶ್ಚ ಸಃ ॥

890) **ಸ. ಸಂ. :–** ಸುಖವನ್ನು ಅಥವಾ ಶೋಭನವಾದ ಇಂದ್ರಿಯ ಗಳನ್ನು ಕೊಡುವವನು.

* * *

890) **ನೈಕಜಃ** = ಹಲವು ಬಾರಿ ಅವತರಿಸು (ಹುಟ್ಟು) ವವನು.

ಶಂ. ಭಾ. :– ಧರ್ಮರಕ್ಷಣೆಗಾಗಿ ಮತ್ತೆ ಮತ್ತೆ ಹುಟ್ಟುತ್ತಿರುವವನು.

891) **ಪ. ಭ. :– ನೈಕದಃ** = ಅಸಂಖ್ಯಾತವಾದ ಮಾಲೆಗಳು, ಅಂಜನ ಗಳು, ವಸ್ತ್ರಗಳು–ಮುಂತಾದ ಬ್ರಹ್ಮಾಲಂಕಾರಗಳನ್ನು ಕೊಡುವವರಾದ ಮತ್ತು ಮುಕ್ತರಿಗೆ ಪರಮಪದದಲ್ಲಿ ಉಪಚಾರಮಾಡಲು ಬಲ್ಲ ಐನೂರು ಮಂದಿ ಅಪ್ಸರಸ್ತ್ರೀಯರುಳ್ಳವನು.

ನಿರುಕ್ತಿ :– **ಬ್ರಹ್ಮಾಲಂಕಾರದಾಯಿನ್ಯೋ ಮುಕ್ತೇಭ್ಯಶ್ಚ ಪದೇ ಪದೇ ।**
ದಿವ್ಯಾಸ್ಸಪ್ಸರಸೋ ಯಸ್ಯ ನೈಕದಃ ಸ ಚ ಕಥ್ಯತೇ ॥

891) **ಸ. ಸಂ. :– ನೈಕಜಃ** = ರಮಾದೇವಿಗೆ ಸ್ವಾಮಿಯಾದವನು ; ಪದ್ಮವನಗಳು ದಟ್ಟವಾಗಿರುವ ಜಾಗಗಳಲ್ಲಿ ಉದ್ಭವಿಸುವವನು. **ತುಲಸೀ ಕಾನನಂ ಯತ್ರ ಯತ್ರ ಪದ್ಮವನಾನಿ ಚ । ವಸನ್ತಿ ವೈಷ್ಣವಾ ಯತ್ರ ತತ್ರ ಸನ್ನಿಹಿತೋ ಹರಿಃ ॥** ಒಬ್ಬನಿಂದಲೂ ಹುಟ್ಟದವನು.

* * *

891) **ಅಗ್ರಜಃ** = ಎಲ್ಲಕ್ಕೂ ಮೊದಲು ಆವಿರ್ಭವಿಸಿದವನು.

ಶಂ. ಭಾ. :– ಎಲ್ಲಕ್ಕೂ ಮೊದಲು ಉತ್ಪನ್ನನಾದ ಹಿರಣ್ಯಗರ್ಭ ಸ್ವರೂಪಿಯು. **ಹಿರಣ್ಯಗರ್ಭಃ ಸಮವರ್ತತಾಗ್ರೇ ।**

(ಋ. ಸಂ. ೧೦-೧೨೧-೧)

892) **ಪ. ಭ. :–** ತನ್ನನ್ನು ತಲುಪಿದ ಭಕ್ತರ ಮುಂದೆ ಸರ್ವೈಶ್ವರ್ಯ ಸಂಪತ್ತಿನೊಡನೆ ಪರ್ಯಂಕವಿದ್ಯೆಯಲ್ಲಿ ಹೇಳಿರುವಂತೆ ಪರಮಭೋಗ್ಯನಾಗಿ ಆವಿರ್ಭವಿಸುವವನು.

ನಿರುಕ್ತಿ :– **ಸ್ವಸ್ಯಾಗ್ರೇ ಪ್ರಾಪ್ತಮುಕ್ತಾನಾಂ ಸರ್ವೈಶ್ವರ್ಯಶ್ರಿಯಾ ಸಹ ।**
ಯಥಾ ಪರ್ಯಙ್ಕವಿದ್ಯಂ ಚ ಕರುಣಾವಿಷ್ಟಚೇತಸಾ ।
ತದ್ಭೋಗ್ಯೋ ಜಾಯತೇ ಯಶ್ಚ ಸೋಽಗ್ರಜಃ ಪರಿಕೀರ್ತಿತಃ ॥

892) ಸ. ಸಂ. :– ಸೃಷ್ಟಿಗೆ ಮೊದಲು ವ್ಯಕ್ತನಾಗುವವನು.

*   *   *

892) ಅನಿರ್ವಿಣ್ಣಃ = ನಿರ್ವೇದ (ಖೇದ) ವಿಲ್ಲದವನು ; ಅವಾಪ್ತ ಸಮಸ್ತಕಾಮನಾದುದರಿಂದ ಯಾವ ಖೇದವೂ ಇಲ್ಲದವನು.

ಶಂ. ಭಾ. :–ಅವಾಪ್ತಸರ್ವಕಾಮನಾದುದರಿಂದಲೂ, ಕಾಮಗಳು ಸಿಗದಿರುವುದಕ್ಕೆ ಕಾರಣವೇನೂ ಇಲ್ಲವಾದುದರಿಂದಲೂ–ಯಾವ ನಿರ್ವೇದವೂ ಇಲ್ಲದವನು.

893) ಪ. ಭ. :– ಭಕ್ತನನ್ನು ಮಹಾಭವವೆಂಬ ಹಳ್ಳದಿಂದ ದಾಟಿಸಿ, ತನ್ನನ್ನು ದೊರಕಿಸಿ ಕೊಟ್ಟು, ಅವನು ಕೃತಕೃತ್ಯನಾಗಿ ಯಾವ ಸಂತಾಪವೂ ಇಲ್ಲದೇ ಅಶೋಚ್ಯನಾಗಿರುವಂತೆ ನೋಡುವವನು.

ನಿರುಕ್ತಿ :– ಮಹತಾ ಪ್ರಣಿಧಾನೇನ ಹ್ಯುತ್ತಾರ್ಯ ಭವಗರ್ತತಃ ।
ಪ್ರಾಪಯ್ಯ ಚ ತಮಾತ್ಮಾನಂ ಕೃತಕೃತ್ಯಶ್ಚ ವಿಜ್ವರಃ ।
ಪಶ್ಯನ್ನಶೋಚ್ಯಮೇನಂ ಯೋ ಹ್ಯನಿರ್ವಿಣ್ಣಃ ಸ ಈರಿತಃ ॥

893) ಸ. ಸಂ. :– ಆಯಾಸಗೊಳ್ಳದವನು ; ಜಗತ್ತಿನ ಸೃಷ್ಟಿಯೇ ಮುಂತಾದುವುಗಳಲ್ಲಿ ವಿರಕ್ತನಾಗದವನು.

*   *   *

893) ಸದಾಮರ್ಷೀ = ಸದಾ ಸಹನಶೀಲನು ; ಸದಾ ಕ್ಷಮಾಶೀಲನಾಗಿರುವವನು ; ದುಷ್ಟರ ವಿಷಯದಲ್ಲಿ ಸದಾ ಕ್ರೋಧವುಳ್ಳವನು.

ಶಂ. ಭಾ. :– ಸತ್ಪುರುಷರಿಗೆ ಅಭಿಮುಖನಾಗಿ ಅವರನ್ನು ಕ್ಷಮಿಸುವವನು.

894) ಪ. ಭ. :– ಮುಕ್ತಾತ್ಮರೊಡನೆ ಎಲ್ಲವನ್ನೂ ಸದಾ ಸಹಿಸುವವನು.

ನಿರುಕ್ತಿ : ಸರ್ವಕಾಲಂ ತತ್ಪ್ರಭೃತಿ ಕೃತಪ್ರತಿಕೃತಂ ಚ ಸಃ ।
ಮರ್ಷಿತುಂ ಶೀಲಮಸ್ಯೇತಿ ಸದಾಮರ್ಷೀತಿ ಕೀರ್ತಿತಃ ॥

894) ಸ. ಸಂ. : ದೈತ್ಯರಲ್ಲಿ ಸದಾ ಕ್ರೋಧವುಳ್ಳವನು ; ಸತ್ಪುರುಷರ

ವಿಷಯದಲ್ಲಿ ಚೆನ್ನಾಗಿ ಕ್ಷಮೆತೋರುವವನು ; ನಂದಗೋಪನನ್ನು ಸಂರಕ್ಷಿಸಲು ವರುಣನ ಬಳಿಗೆ ಹೋದವನು.

* * *

894) **ಲೋಕಾಧಿಷ್ಠಾನಂ** = ಎಲ್ಲ ಲೋಕಗಳಿಗೂ ಆಧಾರವಾದವನು.

ಶಂ. ಭಾ. :– ತಾನು ನಿರಾಧಾರನಾಗಿದ್ದು ಲೋಕಗಳಿಗೆಲ್ಲಾ ಆಶ್ರಯ ವಾಗಿರುವ ಬ್ರಹ್ಮವು.

895) **ಪ. ಭ. :–** ಮುಕ್ತರಿಗೆ ಭೋಗ್ಯವಾದ ಲೋಕಗಳಿಗೆ ಆಶ್ರಯ ನಾದವನು.

ನಿರುಕ್ತಿ :– **ಲೋಕಾನಾಂ ಮುಕ್ತಭೋಗ್ಯಾನಾಂ ಲೋಕಾಧಿಷ್ಠಾನ - ಮಾಶ್ರಯಃ ।**

895) **ಸ. ಸಂ. :–** ಜಗತ್ತಿಗೆ ಆಶ್ರಯನಾದವನು.

* * *

895) **ಅದ್ಭುತಃ** = ಯಾವನ ದರ್ಶನ-ಜ್ಞಾನ-ಪ್ರವಚನಾದಿಗಳು, ಸ್ವರೂಪ, ರೂಪ, ಗುಣ, ವೈಭವ, ಐಶ್ವರ್ಯ, ಕೃತಿ–ಮುಂತಾದುವು ಗಳೆಲ್ಲವೂ ಪರಮಾಶ್ಚರ್ಯಕರವಾಗಿವೆಯೋ–ಅವನು.

ಶಂ. ಭಾ. :– ಅದ್ಭುತನು ; ಸ್ವರೂಪ, ಶಕ್ತಿ, ವ್ಯಾಪಾರ ಮತ್ತು ಕಾರ್ಯ ಗಳೆಲ್ಲದರಲ್ಲಿಯೂ ಅದ್ಭುತವಾಗಿರುವವನು. ಆಶ್ಚರ್ಯವತ್ಪಶ್ಯತಿ ಕಶ್ಚಿದೇನಂ (ಗೀತಾ ೨-೨೯) ಶ್ರವಣಾಯಾಪಿ ಬಹುಭಿರ್ಯೋ ನ ಲಭ್ಯಃ ಶೃಣ್ವನ್ತೋಽಪಿ **ಬಹವೋ ಯನ್ನ ವಿದ್ಯುಃ । ಆಶ್ಚರ್ಯೋ ವಕ್ತಾ ಕುಶಲೋಽಸ್ಯ ಲಬ್ಧಾ ಆಶ್ಚರ್ಯೋ ಜ್ಞಾತಾ ಕುಶಲಾನುಶಿಷ್ಟಃ** (ಕಠ. ೧-೨-೭)

896) **ಪ. ಭ. :–** ಎಲ್ಲರಿಂದಲೂ, ಯಾವಾಗಲೂ, ಎಲ್ಲ ರೀತಿ ಗಳಿಂದಲೂ ಅನುಭವಿಸಲ್ಪಡುತ್ತಿದ್ದರೂ ಕೂಡ ಅಪೂರ್ವ (ಹೊಸಬ) ನೋ–ಎಂಬಂತೆ ಆಶ್ಚರ್ಯವನ್ನುಂಟುಮಾಡುವವನು.

ನಿರುಕ್ತಿ :– **ತತ್ಸದಾ ಸರ್ವಥಾ ಸರ್ವೈರ್ಭುಜ್ಯಮಾನೋಽಪ್ಯಪೂರ್ವವತ್ ಸ್ಮಯನೀಯೋಽದ್ಭುತಃ ಪ್ರೋಕ್ತಃ......... ॥**

896) **ಸ. ಸಂ. :–** ಆಶ್ಚರ್ಯರೂಪನು.

* * *

ಸನಾತ್ಸನಾತನತಮಃ ಕಪಿಲಃ ಕಪಿರಪ್ಯಯಃ ।
ಸ್ವಸ್ತಿದಃ ಸ್ವಸ್ತಿಕೃತ್ಸ್ವಸ್ತಿ ಸ್ವಸ್ತಿಭುಕ್ಸ್ವಸ್ತಿದಕ್ಷಿಣಃ ॥೧೦೯॥

896) **ಸನಾತ್** = ಸರ್ವಕಾಲದಲ್ಲಿಯೂ ಇರುವವನು. (ಕಾಲವೂ ಪರಮಾತ್ಮನ ಒಂದು ವಿಕಲ್ಪವೇ.)

897) **ಪ. ಭ. :–** ಮುಕ್ತಾತ್ಮರೊಡನೆ ನಿತ್ಯಸುಖವನ್ನು ಅನುಭವಿಸುವವನು.
ನಿರುಕ್ತಿ :– .... ತೇಷಾಂ ಸಂಭಜನಾತ್ಸನಾತ್ ॥

897) **ಸ. ಸಂ. :–** ಲಾಭವನ್ನು ಹೊಂದಿಸುವವನು.

* * *

897) **ಸನಾತನತಮಃ** = ಅತ್ಯಂತಪುರಾತನನೂ ಮತ್ತು ನಿತ್ಯನೂ ಆಗಿರುವವನು.

ಶಂ. ಭಾ. :– ಸರ್ವಕಾರಣನಾಗಿರುವುದರಿಂದ ಸನಾತನರಾದ ಬ್ರಹ್ಮಾದಿಗಳಿಗಿಂತಲೂ ಅತ್ಯಂತಸನಾತನನಾಗಿರುವವನು.

898) **ಪ. ಭ. :–** ಪುರಾಣತಮನಾದರೂ ನಿತ್ಯನೂತನನೋ–ಎಂಬಂತೆ ಭೋಗ್ಯನಾಗಿರುವವನು.
ನಿರುಕ್ತಿ :– ನಿತ್ಯನೂತನಭೋಗ್ಯತ್ವಾತ್ಸನಾತನತಮಃ ಸ್ಮೃತಃ ।

898) **ಸ. ಸಂ. :–** ಅತ್ಯಂತಸನಾತನನಾದವನು.

* * *

898) **ಕಪಿಲಃ** = ಸಿದ್ಧೇಶ್ವರಕಪಿಲಸ್ವರೂಪನು. **ಸಿದ್ಧಾನಾಂ ಕಪಿಲೋ ಮುನಿಃ ॥** (ಗೀತಾ ೧೦-೨೬) **ಸಿದ್ಧೇಶ್ವರಾಣಾಂ ಕಪಿಲಃ ಸುಪರ್ಣೋಽಹಂ ಪತತ್ರಿಣಾಮ್ ॥** (ಭಾಗವತ ೧೧-೧೬-೧೫)

ಶಂ. ಭಾ. :– ಕಪಿಲ (ಪಿಂಗಳ) ವರ್ಣವುಳ್ಳ ಬಡಬಾನಲರೂಪಿಯು.

899) **ಪ. ಭ. :–** ವಿದ್ಯುನ್ಮಂಡಲಮಧ್ಯದಲ್ಲಿರುವ ನೀಲಮೇಘದಂತೆ ಉಜ್ಜ್ವಲವರ್ಣವುಳ್ಳವನು.
ನಿರುಕ್ತಿ :– ವಿದ್ಯುನ್ಮಣ್ಡಲಮಧ್ಯಸ್ಥನೀಲಮೇಘವದುಜ್ಜ್ವಲಃ ।
ಕಪಿಲಃ ಸ ಸಮಾಖ್ಯಾತಃ ಸಪ್ತವರ್ಣೋ ಮಹಾಮನುಃ ॥

899) **ಸ. ಸಂ. :–** ಹನುಮಂತನನ್ನು ಸ್ವೀಕರಿಸಿದವನು ; ಸುಖರೂಪವಾಗಿ ಜಗತ್ತನ್ನು ಪಾಲಿಸುವವನು ಮತ್ತು ಬಲಗೊಳಿಸುವವನು ; ಲೀಲೆಯಿಂದಲೇ ಸುಖವನ್ನು ಅನುಭವಿಸುವವನು.

* * *

899) **ಕಪಿಃ** = ಸೂರ್ಯರೂಪಿಯು ; ಬಡಬಾನಲಸ್ವರೂಪನು ; ಆಂಜನೇಯರೂಪಿಯು ; ಶ್ರೇಷ್ಠನು ; ಪರಮಸುಖವನ್ನು ಸೇವಿಸುವವನು.

ಶಂ. ಭಾ. :– ಸೂರ್ಯನು ; ವರಾಹಸ್ವಾಮಿಯು.

900) **ಪ. ಭ. :– ಕಪಿರವ್ಯಯಃ** = ಅನಶ್ವರವಾದ ಸುಖವನ್ನು ರಕ್ಷಿಸುವವನು.

ನಿರುಕ್ತಿ :– **ಅನಶ್ವರಸುಖಂ ಪಾತಿ ಸ ಉಕ್ತಃ ಕಪಿರವ್ಯಯಃ ||**

900) **ಸ. ಸಂ. :– ಕಪಿಃ** = ಸುಖವನ್ನು ಪಾನಮಾಡುವವನು.

* * *

900) **ಅಪ್ಯಯಃ** = ಎಲ್ಲವೂ ಯಾವನಲ್ಲಿ ಲೀನವಾಗುವುದೋ–ಅವನು. **ಅವ್ಯಯಃ** = ವಿಕಾರವಿಲ್ಲದವನು.

ಶಂ. ಭಾ. :– ಪ್ರಳಯಕಾಲದಲ್ಲಿ ಜಗತ್ತು ಯಾವನಲ್ಲಿ ಲಯಹೊಂದುತ್ತದೆಯೋ–ಅವನು.

901) **ಸ. ಸಂ. :–** ಪ್ರಳಯಕಾಲದಲ್ಲಿ ಜಗತ್ತು ಯಾವನಲ್ಲಿ ಲಯಹೊಂದುವುದೋ–ಅವನು. **ಅವ್ಯಯಃ** = ರಕ್ಷಣೀಯರಾದವರ ಬಳಿಗೆ ಹೋಗುವವನು.

* * *

901) **ಸ್ವಸ್ತಿದಃ** = ಮಂಗಳದಾಯಕವಾದ ಮನಸ್ಸೇ ಮುಂತಾದುವುಗಳನ್ನು ಕೊಡುವವನು. ಭಕ್ತರಿಗೆ ಒಳ್ಳೆಯ ಜೀವನವನ್ನು ಕೊಡುವವನು.

ಶಂ. ಭಾ. :– ಭಕ್ತರಿಗೆ ಮಂಗಳವನ್ನು ಕೊಡುವವನು.

901) **ಪ. ಭ. :–** ಭಕ್ತರಿಗೆ ಮಂಗಳವನ್ನು ಕೊಡುವವನು.

ನಿರುಕ್ತಿ :– **ಭಕ್ತೇಭ್ಯೋ ಮಙ್ಗಲಂ ಸ್ವಸ್ತಿ ತದ್ದಾನಾತ್ಸ್ವಸ್ತಿದಃ ಸ್ಮೃತಃ**

902) **ಸ. ಸಂ. :–** ಭಕ್ತರಿಗೆ ಮಂಗಳವನ್ನು ಕೊಡುವವನು.

* * *

902) **ಸ್ವಸ್ತಿಕೃತ್** = ಮಂಗಳವನ್ನು ಉಂಟುಮಾಡುವವನು.

ಶಂ. ಭಾ. :– ಮಂಗಳವನ್ನು ಉಂಟುಮಾಡುವವನು.

902) **ಪ. ಭ. :–** ತನ್ನ ಗುಣಗಳಿಂದ ತನ್ನ ಸುಖಭೋಗದ ಆಶೀರ್ವಾದವನ್ನು ಉಂಟುಮಾಡುವವನು.

ನಿರುಕ್ತಿ :– **ಸ್ವಸ್ತಿ ಸ್ವಭೋಗಾಶಿಷಂ ಯಃ ಕರೋತಿ ಸ್ವಸ್ತಿಕೃಚ್ಚ ಸಃ ॥**

903) **ಸ. ಸಂ. :–** ಸತ್ತೆಯನ್ನು ಉಂಟುಮಾಡುವವನು.

* * *

903) **ಸ್ವಸ್ತಿ** = ಪರಮಾನಂದಮಂಗಳಸ್ವರೂಪನು.

ಶಂ. ಭಾ. :– ಪರಮಾನಂದಲಕ್ಷಣವಾದ ಮಂಗಳವಾದ ನಿಜಸ್ವರೂಪವುಳ್ಳವನು.

903) **ಪ. ಭ. :–** ಮಹಾಮಂಗಳರೂಪನಾದವನು.

ನಿರುಕ್ತಿ :– **ಮಹಾಮಙ್ಗಲರೂಪತ್ವಾತ್ಸ್ವಯಂ ಸ್ವಸ್ತೀತಿ ಕಥ್ಯತೇ ॥**

904) **ಸ. ಸಂ. :–** ಎಲ್ಲ ದೇಶ-ಕಾಲಗಳಲ್ಲಿಯೂ ಚೆನ್ನಾಗಿರುವವನು; ಸುಖರೂಪನಾಗಿರುವವನು.

* * *

904) **ಸ್ವಸ್ತಿಭುಕ್** = ಮಂಗಳಾನಂದವನ್ನು ಅನುಭವಿಸುವವನು ; ಮಂಗಳವನ್ನು ಸಂರಕ್ಷಿಸುವವನು.

ಶಂ. ಭಾ. :– ಪರಮಾನಂದಲಕ್ಷಣವಾದ ಮಂಗಳಮಯವಾದ ನಿಜಸ್ವರೂಪವನ್ನೇ ಅನುಭವಿಸುವವನು ; ಭಕ್ತರ ಮಂಗಳವನ್ನು ರಕ್ಷಿಸುವವನು.

904) **ಪ. ಭ. :–** ಮಂಗಳವನ್ನು ಕಾಪಾಡುವವನು.

ನಿರುಕ್ತಿ :– **ಪಾಲನಾನ್ಮಙ್ಗಲಸ್ಯೈವ ಸ್ವಸ್ತಿಭುಕ್ಚೇತಿ ಗಮ್ಯತೇ ॥**

905) **ಸ. ಸಂ. :–** ಸುಖವನ್ನು ಭೋಜನಮಾಡಿಸುವವನು.

* * *

905) **ಸ್ವಸ್ತಿದಕ್ಷಿಣಃ** = ಮಂಗಳವನ್ನುಂಟುಮಾಡುವುದರಲ್ಲಿ ಕುಶಲನಾದವನು ; ಮಂಗಳಮಯವಾದ ಔದಾರ್ಯವುಳ್ಳವನು. ಮಂಗಳಮಯವಾದ ಯಜ್ಞದಕ್ಷಿಣೆಯುಳ್ಳವನು.

ಶಂ. ಭಾ. :– ಮಂಗಳರೂಪದಿಂದ ವೃದ್ಧಿಹೊಂದಿದವನು. ಮಂಗಳವನ್ನುಂಟುಮಾಡಲು ಸಮರ್ಥನಾದವನು ; ಶೀಘ್ರವಾಗಿ (ಸ್ಮರಣಮಾತ್ರದಿಂದಲೇ) ಮಂಗಳವನ್ನುಂಟುಮಾಡಲು ಸಮರ್ಥನಾದವನು. **ಸ್ಮೃತೇ ಸಕಲಕಲ್ಯಾಣಭಾಜನಂ ಯತ್ರ ಜಾಯತೇ । ಪುರುಷಸ್ತಮಜಂ ನಿತ್ಯಂ ವ್ರಜಾಮಿ ಶರಣಂ ಹರಿಮ್ ॥** (ವಿ. ಪು. ೧೩-೧೭)

905) **ಪ. ಭ. :–** ಸ್ವಾತ್ಮದಾನವೆಂಬ ದೀರ್ಘವಾದ ಸತ್ರದಲ್ಲಿ ಋತ್ವಿಜರಿಗೆ–ಅವರು ತನಗೆ ಮಾಡಿದ ಸೇವೆಗೆ ಅನುಗುಣವಾಗಿ–ದಿವ್ಯಶರೀರ-ಶಕ್ತಿಗಳೇ ಮುಂತಾದುವುಗಳನ್ನು ರಕ್ಷಣೆಯನ್ನಾಗಿ ಕೊಡುವವನು.

ನಿರುಕ್ತಿ :– **ಶಕ್ತ್ಯಾದ್ಯಾ ಪ್ರಕೃತಿಃ ಸ್ವಸ್ತಿ ಸ್ವಾತ್ಮದಾನಂ ಚ ದಕ್ಷಿಣಾ ।**
ಆತ್ಮಾರ್ಪಣಾಖ್ಯಯಾಗೇ ತು ಯಸ್ಯಾಸ್ತಿ ಸ್ವಸ್ತಿದಕ್ಷಿಣಃ ॥

906) **ಸ. ಸಂ. :–** ದಕ್ಷಿಣಭಾಗವನ್ನು ಅಲಂಕರಿಸುತ್ತಾ ದಕ್ಷಿಣಾ ಎಂಬ ಹೆಸರುಳ್ಳ ರಮಾದೇವಿಯನ್ನು ಚೆನ್ನಾಗಿ ಹೊಂದಿರುವವನು. ಮಂಗಳಪ್ರದಾನದಲ್ಲಿ ಕುಶಲನಾದವನು.

* * *

ಅರೌದ್ರಃ ಕುಣ್ಡಲೀ ಚಕ್ರೀ ವಿಕ್ರಮ್ಯೂರ್ಜಿತಶಾಸನಃ ।
ಶಬ್ದಾತಿಗಃ ಶಬ್ದಸಹಃ ಶಿಶಿರಃ ಶರ್ವರೀಕರಃ ॥೧೧೦॥

906) **ಅರೌದ್ರಃ** = ರೌದ್ರಗುಣ-ರೂಪಾದಿಗಳಿಲ್ಲದವನು ; ಅತ್ಯಂತ ಸೌಮ್ಯನು.

ಶಂ. ಭಾ. :– ಅವಾಪ್ತಕಾಮನಾದುದರಿಂದ ಕರ್ಮ, ರಾಗ ಮತ್ತು ಕ್ರೋಧಗಳೆಂಬ ಮೂರು ರೌದ್ರಗಳೂ ಇಲ್ಲದವನು.

906) **ಪ. ಭ. :–** ಪರಮೈಶ್ವರ್ಯಸಂಪನ್ನನಾಗಿದ್ದರೂ ಗುಣಶೀತಲ ನಾದವನು.

ನಿರುಕ್ತಿ :– ಸರ್ವೈಶ್ವರ್ಯೇಽಪಿ ಸುಗುಣಃ ಶೀತಲೋಽರೌದ್ರ ಉಚ್ಯತೇ॥

907) **ಸ. ಸಂ. :–** ಕೌರ್ಯವಿಲ್ಲದವನು.

*   *   *

907) **ಕುಣ್ಡಲೀ** = ದಿವ್ಯಕುಂಡಲಗಳನ್ನು ಧರಿಸಿರುವವನು ; ಕುಂಡಲಿನೀಸರ್ಪರೂಪನಾದವನು.

ಶಂ. ಭಾ. :– ಶೇಷರೂಪಧಾರಿಯು ; ಸೂರ್ಯಮಂಡಲದಂತಿರುವ ಕುಂಡಲಗಳನ್ನು ಧರಿಸಿರುವವನು ; ಸಾಂಖ್ಯ ಮತ್ತು ಯೋಗರೂಪಗಳಾದ ಮಕರಕುಂಡಲಗಳುಳ್ಳವನು.

907) **ಪ. ಭ. :–** ದಿವ್ಯಭೂಷಣಗಳುಳ್ಳವನು.

ನಿರುಕ್ತಿ :– ದಿವ್ಯಭೂಷಣವಾನ್ಯೋಽಸೌ ಕುಣ್ಡಲೀತಿ ಪ್ರಕಥ್ಯತೇ ॥

908) **ಸ. ಸಂ. :–** ಮಕರಕುಂಡಲಗಳುಳ್ಳವನು.

*   *   *

908) **ಚಕ್ರೀ** = ಮನಸ್ತತ್ತ್ವರೂಪವಾದ ಸುದರ್ಶನಚಕ್ರವುಳ್ಳವನು ; ಧರ್ಮಚಕ್ರಕ್ಕೆ ಪ್ರವರ್ತಕನಾದವನು ; ಸಂಸಾರಚಕ್ರವನ್ನು ತಿರುಗಿಸುವವನು ; ಮೂಲಾಧಾರವೇ ಮುಂತಾದ ಚಕ್ರಗಳಲ್ಲಿರುವವನು.

ಶಂ. ಭಾ. :– ಸಮಸ್ತಲೋಕಗಳ ರಕ್ಷಣೆಗೋಸ್ಕರ ಮನಸ್ತತ್ತ್ವಾತ್ಮಕ ವಾದ ಸುದರ್ಶನವೆಂಬ ಚಕ್ರವನ್ನು ಧರಿಸಿರುವವನು. **ಚಲತ್ಸ್ವರೂಪ ಮತ್ಯನ್ತಂ ಜವೇನಾನ್ತರಿತಾನಿಲಮ್ । ಚಕ್ರಸ್ವರೂಪಂ ಚ ಮನೋ ಧತ್ತೇ ವಿಷ್ಣುಕರೇ ಸ್ಥಿತಮ್ ॥** (ವಿ. ಪು. ೧-೨೨-೭೧)

908) **ಪ. ಭ. :–** ನಿತ್ಯದಿವ್ಯಾಯುಧಗಳುಳ್ಳವನು.

ನಿರುಕ್ತಿ :– ನಿತ್ಯದಿವ್ಯಾಯುಧಶ್ಚಕ್ರೀ............ ॥

909) **ಸ. ಸಂ. :–** ಸುದರ್ಶನಚಕ್ರವುಳ್ಳವನು.

*   *   *

909) **ವಿಕ್ರಮೀ** = ಅತಿಶಯವಾದ ಪರಾಕ್ರಮವುಳ್ಳವನು. ಅತಿಶಯವಾದ ಪಾದವಿನ್ಯಾಸವುಳ್ಳವನು.

ಶಂ. ಭಾ. :– ಇತರ ಎಲ್ಲ ಪುರುಷರಲ್ಲಿರುವುದಕ್ಕಿಂತಲೂ ವಿಲಕ್ಷಣವಾದ ಪಾದವಿನ್ಯಾಸವುಳ್ಳವನು ಅಥವಾ ಶೌರ್ಯವುಳ್ಳವನು.

909) **ಪ. ಭ. :–** ಗಾಂಭೀರ್ಯಕ್ಕೆ ಅನುಗುಣವಾದ ವಿಲಾಸಗಳುಳ್ಳವನು.

ನಿರುಕ್ತಿ :– **............ ಸ್ಯಾದ್ವಿಲಾಸೀ ತು ವಿಕ್ರಮೀ ॥**

910) **ಸ. ಸಂ. :–** ಪರಾಕ್ರಮಶಾಲಿಯು.

* * *

910) **ಊರ್ಜಿತಶಾಸನಃ** = ಅತ್ಯಧಿಕಬಲ, ಶಕ್ತಿ, ಉತ್ಸಾಹ–ಇವುಗಳಿಂದ ಕೂಡಿದ ಶಾಸನವುಳ್ಳವನು.

ಶಂ. ಭಾ. :– ಶ್ರುತಿ-ಸ್ಮೃತಿರೂಪವಾದ ಅತ್ಯಂತೋತ್ಕೃಷ್ಟವಾದ ಶಾಸನವುಳ್ಳವನು.

ಶ್ರುತಿಸ್ಮೃತೀ ಮಮೈವಾಜ್ಞೇ ಯಸ್ತೇ ಉಲ್ಲಙ್ಘ್ಯ ವರ್ತತೇ ।
ಆಜ್ಞಾಚ್ಛೇದೀ ಮಮ ದ್ವೇಷೀ ಮದ್ಭಕ್ತೋಽಪಿ ನ ವೈಷ್ಣವಃ ॥

910) **ಪ. ಭ. :–** ಬ್ರಹ್ಮಾದಿಗಳೂ ಕೂಡ ಮೀರಲಾಗದಿರುವ ಆಜ್ಞೆಯುಳ್ಳವನು.

ನಿರುಕ್ತಿ :– **ಬ್ರಹ್ಮಾದ್ಯಲಙ್ಘ್ಯಸ್ವಾಜ್ಞೋ ಯಃ ಸ ಸ್ಯಾದೂರ್ಜಿತಶಾಸನಃ**

911) **ಸ. ಸಂ. :–** ಉತ್ಕೃಷ್ಟವಾದ ಶಾಸನವುಳ್ಳವನು ; ತಾನೊಬ್ಬನೇ ಶಾಸಕನಾಗಿರುವವನು. **ಏತಸ್ಯ ವಾ ಅಕ್ಷರಸ್ಯ ಪ್ರಶಾಸನೇ ಗಾರ್ಗಿ ।** (ಛಾಂದೋಗ್ಯ)

* * *

911) **ಶಬ್ದಾತಿಗಃ** = ಶಬ್ದಗಳಿಗೆ ದೊರಕದವನು. ಶಬ್ದಬ್ರಹ್ಮವನ್ನು ಮೀರಿದವನು.

ಶಂ. ಭಾ. :– ಶಬ್ದಪ್ರವೃತ್ತಿಗೆ ಕಾರಣವಾದ ಜಾತಿಯೇ ಮುಂತಾದ ಧರ್ಮಗಳು ಇಲ್ಲದಿರುವುದರಿಂದ ಶಬ್ದದಿಂದ ಹೇಳಲ್ಪಡಲಾಗದವನು.

ನ ಶಬ್ದ ಗೋಚರಂ ಯಸ್ಯ ಯೋಗಿಧ್ಯೇಯಂ ಸನಾತನಮ್ ॥ (ವಿ. ಪು. ೧-೧೭-೨೨)

911) **ಪ. ಭ. :–** ಅನಂತಶಾಖೆಗಳುಳ್ಳ ವೇದಗಳಿಂದಲೂ, ಸಾಕ್ಷಾತ್ ಸರಸ್ವತೀದೇವಿಯಿಂದಲೂ, ಅನಂತಜಿಹ್ವೆಗಳುಳ್ಳ ಅನಂತನಿಂದಲೂ ಹೇಳಲು ಅಸಾಧ್ಯವಾದ ಮಹಿಮೆಯುಳ್ಳವನು.

ನಿರುಕ್ತಿ :– **ಅನನ್ತಶಾಖೈರಾಮ್ನಾಯೈರ್ವಾಗ್ದೇವ್ಯಾನನ್ತಭೋಗಿನಾ ।**
ವಕ್ತುಂ ಹ್ಯಶಕ್ಯಮಹಿಮಾ ಯಸ್ಯ ಶಬ್ದಾತಿಗೋಽಸ್ತಿ ಸಃ ॥

912) **ಸ. ಸಂ. :–** ಶಬ್ದವನ್ನೂ ಮೀರಿರುವವನು ; **ಅದ್ಭುತತ್ವಾದ ವಾಚ್ಯಂ ತತ್ ॥**

* * *

912) **ಶಬ್ದಸಹಃ** = ಶಬ್ದಗಳನ್ನು ಮೀರಿದ್ದರೂ ಎಲ್ಲ ಶಬ್ದಗಳಿಗೂ ವಾಚ್ಯನಾಗಿರುವವನು ; ಶಬ್ದಗಳಿಂದಲೇ ಸ್ತುತಿಸಲ್ಪಡಬೇಕಾದವನು ; ಶತ್ರುಗಳ ನಿಂದಾಶಬ್ದಗಳನ್ನು ತಾಳಿಕೊಳ್ಳುವವನು.

ಶಂ. ಭಾ. :– ಸಮಸ್ತವೇದಗಳೂ ತಾತ್ಪರ್ಯರೂಪದಿಂದ ಯಾವನನ್ನು ಹೇಳುತ್ತವೆಯೋ–ಅವನು. **ಸರ್ವೇ ವೇದಾಃ ಯತ್ಪದಮಾಮನನ್ತಿ ।** (ಕಠ ೨-೧೫) **ವೇದೈಶ್ಚ ಸರ್ವೈರಹಮೇವ ವೇದ್ಯಃ**(ಗೀತಾ ೧೫-೧೫)

912) **ಪ. ಭ. :– ಗಜೇಂದ್ರಮೋಕ್ಷ ಪ್ರಕರಣ :** ಅಸ್ಪಷ್ಟವಾದ ಶಬ್ದಗಳುಳ್ಳ ತಿರ್ಯಕ್ಪ್ರಾಣಿಗಳ ಆರ್ತಶಬ್ದವನ್ನೂ ಅತಿಭಾರದಂತೆ ಸಹಿಸುವವನು.

ನಿರುಕ್ತಿ :– **ಅತಿಭಾರಮಿವಾಸ್ಪಷ್ಟಂ ತಿರಶ್ಚಾಂ ಶಬ್ದಮಾರ್ತಿಜಮ್ ।**
ಸಹತೇ ಯಃ ಶಬ್ದಸಹೋ ವಸ್ವರ್ಣೋ ಮನುರುತ್ತಮಃ ॥

913) **ಸ. ಸಂ. :–** ಭೃಗುವೇ ಮುಂತಾದ ಭಕ್ತರು ಮಾಡಿದ ಬೆದರಿಕೆಯ ಶಬ್ದವನ್ನೂ, ಪ್ರಹಾರವನ್ನೂ ಸಹಿಸಿದವನು.

* * *

913) **ಶಿಶಿರಃ** = ಚಂದ್ರಶೀತಲನಾಗಿರುವವನು. **ಏಷ ಬ್ರಹ್ಮ ಪ್ರವಿಷ್ಟೋಽಸ್ಮಿ ಗ್ರೀಷ್ಮೇ ಶೀತಮಿವ ಹ್ರದಮ್ ॥** (ಮ. ಭಾ. ಮಂ. ಗೀತಾ)

ಶಂ. ಭಾ. :– ತಾಪತ್ರಯಗಳಿಂದ ಸಂತಪ್ತರಾದವರಿಗೆ ವಿಶ್ರಾಂತಿಸ್ಥಾನವಾಗಿರುವವನು.

913) ಪ. ಭ. :– ಗಜೇಂದ್ರನ ಆರ್ತಶಬ್ದವನ್ನು ಕೇಳಿದೊಡನೆಯೇ ಅತ್ಯಂತತ್ವರೆಯಿಂದ ಅವನ ಬಳಿಗೆ ಹಾರಿದವನು.

ನಿರುಕ್ತಿ :– **ಗಜೇನ್ದ್ರಪಾಲನಾರ್ಥಂ ಯಃ ಶಿಶಿರಸ್ತ್ವರಯಾ ಗತಃ ॥**

914) ಸ. ಸಂ. :– ಅತ್ಯಂತಸುಖಿಗಳು ಯಾವನಲ್ಲಿ ರಮಿಸುವರೋ ಅವನು ; ಯಾವನನ್ನು ಕುರಿತು ಭಕ್ತರು ಓಡುತ್ತಾರೆಯೋ ಅವನು. ಶಶಿರಃ = ಚಂದ್ರನಲ್ಲಿ ರಮಿಸುವವನು ; ದೈತ್ಯರನ್ನು ಹಿಂಸೆಮಾಡುವವನು.

* * *

914) **ಶರ್ವರೀಕರಃ** = ಚಂದ್ರರೂಪಿಯು ; ಅಜ್ಞಾನಿಗಳಿಗೆ ಸಂಸಾರವೆಂಬ ಕಾಳರಾತ್ರಿಯನ್ನು ಉಂಟುಮಾಡುವವನು ; ಜ್ಞಾನಿಗಳಿಗೆ ಸಂಸಾರವೂ ಮತ್ತು ಅಜ್ಞಾನಿಗಳಿಗೆ ಪರಮಾತ್ಮನೂ ಕತ್ತಲೆಯಾಗುವಂತೆ ಮಾಡುವವನು.

ಶಂ. ಭಾ. :– (ಸಂಸಾರಿಗಳಿಗೆ ಆತ್ಮವು ರಾತ್ರಿಯಂತೆ ; ಜ್ಞಾನಿಗಳಿಗಾದರೋ ಸಂಸಾರವು ರಾತ್ರಿಯಂತೆ). ಹೀಗೆ ಜ್ಞಾನಿ-ಅಜ್ಞಾನಿಗಳಿಬ್ಬರಿಗೂ ರಾತ್ರಿಯನ್ನು ಉಂಟುಮಾಡುವವನು. **ಯಾ ನಿಶಾ ಸರ್ವಭೂತಾನಾಂ ತಸ್ಯಾಂ ಜಾಗರ್ತಿ ಸಂಯಮೀ ।** (ಗೀತಾ ೨-೬೯)

914) ಪ. ಭ. :– ಶರ್ವರಿಯು–ಎಂದರೆ ಇತರರನ್ನು ಧ್ವಂಸಮಾಡುವ ಹಿಂಸಾಕರವಾದ ಪಂಚಾಯುಧಸಮೂಹವು–ಯಾವನ ಕೈಯಲ್ಲಿರುವುದೋ–ಅವನು.

ನಿರುಕ್ತಿ :– **ಉಚ್ಯತೇ ಶರ್ವರೀಶಬ್ದಾದ್ಧಿಂಸ್ರಾಪರವಿದಾರಿಣೀ ।**
ಪಞ್ಚಾಯುಧೀ ಕರೇ ಚಾಸ್ಯೇತ್ಯುದಿತಃ ಶರ್ವರೀಕರಃ ॥

915) ಸ. ಸಂ. :– ಚಂದ್ರಾಂತರ್ಯಾಮಿಯಾದವನು ; ರಾತ್ರಿಯನ್ನು ಉಂಟುಮಾಡುವವನು. **ಸರ್ವೇ ನಿಮೇಷಾ ಜಜ್ಞಿರೇ ವಿದ್ಯುತಃ ಪುರುಷಾದಧಿ ।** (ಶ್ರುತಿಃ)

* * *

ಅಕ್ರೂರಃ ಪೇಶಲೋ ದಕ್ಷೋ ದಕ್ಷಿಣಃ ಕ್ಷಮಿಣಾಂ ವರಃ ।
ವಿದ್ವತ್ತಮೋ ವೀತಭಯಃ ಪುಣ್ಯಶ್ರವಣಕೀರ್ತನಃ ॥೧೧೧॥

915) **ಅಕ್ರೂರಃ** = ಕ್ರೌರ್ಯವಿಲ್ಲದವನು.

ಶಂ. ಭಾ. :– ಕ್ರೌರ್ಯವಿಲ್ಲದವನು. (ಕ್ರೌರ್ಯವೆನ್ನುವುದು ಒಂದು ಮನೋಧರ್ಮ. ಕೋಪದಿಂದ ಉಂಟಾಗುವುದು. ಆಗ್ರಹದಿಂದ ಕೂಡಿದ ಸಂತಾಪ. ಭಗವಂತನು ಅವಾಪ್ತಸಮಸ್ತಕಾಮನಾಗಿರುವುದರಿಂದ ಅವನಿಗೆ ಕಾಮವಿಲ್ಲ. ಆದುದರಿಂದಲೇ ಕೋಪವೂ ಇಲ್ಲ ; ಕ್ರೌರ್ಯವೂ ಇಲ್ಲ.)

915) **ಪ. ಭ.** :– ಗಜರಾಜನಿಗೆ ತೊಂದರೆಯಾಗುವುದೆಂದು ಮೊಸಳೆಯನ್ನು ತನ್ನ ಕೈಯಲ್ಲಿದ್ದ ಆಯುಧಗಳಿಂದ ಒಡನೆಯೇ ಕತ್ತರಿಸಿದವನು.
ನಿರುಕ್ತಿ :– **ಯೋಽಸೌ ಧೃತಾಯುಧೈರ್ಗ್ರಾಹಮಕ್ರೂರೋ**
ಮಂಕ್ಷ್ವಕೃತ್ತವಾನ್ ।

916) **ಸ. ಸಂ.** :–ಕ್ರೂರನಾಗದವನು ; ಅಕ್ರೂರನಿಗೆ ಪ್ರಿಯನಾದವನು.

* * *

916) **ಪೇಶಲಃ**= ಅತ್ಯಂತಸುಂದರನಾದವನು ; ಸರ್ವಾತ್ಮನಾಸುಂದರನಾದವನು. **ತದೇವ ರಮ್ಯಂ ಪರಮನಯನೋತ್ಸವಕಾರಣಂ ಸಕಲನಿಷ್ಕಲಂ ಆಪೋಜ್ಯೋತಿಸ್ಥಲಂ ನಾರಾಯಣಸ್ಥಲಂ ಚೇತಿ ಯೋಗಶಾಸ್ತ್ರೇಷು ಪ್ರಸಿದ್ಧಮ್** (ರಾಜಯೋಗಭಾಷ್ಯ)

ಶಂ. ಭಾ. :– ಕರ್ಮ, ಮನಸ್ಸು, ವಾಣಿ ಮತ್ತು ಶರೀರ–ಈ ಎಲ್ಲದರಲ್ಲಿಯೂ ಸುಂದರನಾದವನು.

916) **ಪ. ಭ.** :– ಗಜೇಂದ್ರನನ್ನು ರಕ್ಷಿಸುವ ಸಮಯದಲ್ಲಿ ವೇಗಾತಿಶಯಸಂಭ್ರಮಗಳಿಂದ ಮಾಲೆಗಳು, ವಸ್ತ್ರಗಳು ಮತ್ತು ಭೂಷಣಗಳು ಜಾರಿದಾಗ ಅತ್ಯಂತರಮಣೀಯನಾಗಿದ್ದವನು.
ನಿರುಕ್ತಿ :– **ತ್ವರಾತಿಶಯತಃ ಪ್ರಸ್ತಸ್ರಗ್ಭೂಷಾಮ್ಬರಸುನ್ದರಃ ।**
ಗಜೇನ್ದ್ರರಕ್ಷಾಸಮಯೇ ಯೋಽಸೌ ಸ್ಯಾತ್ಪೇಶಲಃ ಸ್ಮೃತಃ ॥

917) **ಸ. ಸಂ. :–** ಮನೋಹರನು ; ಈಶ (ರುದ್ರ) ನನ್ನು ಭಕ್ತನನ್ನಾಗಿ ಸ್ವೀಕರಿಸಿ ರಕ್ಷಿಸುವವನು.

* * *

917) **ದಕ್ಷಃ** = ಸಮರ್ಥನು ; ಶೀಘ್ರವಾಗಿ ಕೆಲಸಮಾಡುವವನು.

ಶಂ. ಭಾ. :– ವೃದ್ಧಿಹೊಂದಿದವನು ; ಶಕ್ತಿಶಾಲಿಯೂ ಮತ್ತು ಶೀಘ್ರವಾಗಿ ಕಾರ್ಯಮಾಡುವವನೂ ಆಗಿರುವವನು.

917) **ಪ. ಭ. :–**ಗಜೇಂದ್ರನ ರಕ್ಷಣೆಗೋಸ್ಕರ ಶೀಘ್ರವಾಗಿ ಬಂದವನು.

ನಿರುಕ್ತಿ :– **ದಕ್ಷೋ ಯೋ ದ್ರುತಮಾಗನ್ತಾ ರಕ್ಷಣಾಯ ಸ ಉಚ್ಯತೇ ll**

918) **ಸ. ಸಂ. :–** ಸಮರ್ಥನು ; ಶತ್ರುಗಳನ್ನು ಸಂಹರಿಸುವವನು ; ಹೋಗುವವನು. **ದಕ್ಷ–ಗತಿಹಿಂಸನಯೋಃ**

* * *

918) **ದಕ್ಷಿಣಃ** = ಉದಾರಿಯು ; ಸರಳಸ್ವಭಾವನು ; ಸಮರ್ಥನು ; ಶೀಘ್ರಕಾರಿಯು ; ಕುಶಲನು.

ಶಂ. ಭಾ. :– ವೃದ್ಧಿಹೊಂದಿದವನು ; ಶಕ್ತಿಶಾಲಿಯು ; ಶೀಘ್ರಕಾರಿಯು ಮತ್ತು ಎಲ್ಲ ಕಡೆಗಳಿಗೂ ಹೋಗುವವನು ; ಎಲ್ಲರನ್ನೂ ಸಂಹರಿಸುವವನು.

918) **ಪ. ಭ. :–** ಶರಣಾಗತನಾದ ಗಜೇಂದ್ರನಲ್ಲಿ ಸುಪ್ರೀತನಾದವನು. ಗಜೇಂದ್ರನನ್ನು ಸಮಾಧಾನಪಡಿಸುತ್ತಾ ಅವನಿಗೆ ಅನುಕೂಲವಾಗಿ ವೃದ್ಧಿಹೊಂದಿದವನು.

ನಿರುಕ್ತಿ :– **ಗಜೇನ್ದ್ರಸ್ಯ ಪ್ರಪನ್ನಸ್ಯ ಯಃ ಪ್ರಿಯೋ ದಕ್ಷಿಣಸ್ತು ಸಃ ll**

919) **ಸ. ಸಂ. :–** ಕುಶಲನು ; ಉದಾರಿಯು ; ಅಭಿವೃದ್ಧನು.

* * *

919) **ಕ್ಷಮಿಣಾಂ ವರಃ** = ಕ್ಷಮಾಶೀಲರಲ್ಲಿ ಶ್ರೇಷ್ಠನಾದವನು, ಸಹನಶಕ್ತಿ (ತಾಳ್ಮೆ) ಯುಳ್ಳವರಲ್ಲಿ ಶ್ರೇಷ್ಠನು.

ಶಂ. ಭಾ. :– ಕ್ಷಮಾಶೀಲರಾದ ಯೋಗಿಗಳಲ್ಲಿ ಶ್ರೇಷ್ಠನು ; ಭಾರವನ್ನು ಹೊತ್ತಿರುವ ಪೃಥಿವಿಯೇ ಮುಂತಾದುವುಗಳಲ್ಲಿ ಶ್ರೇಷ್ಠನು. **ಕ್ಷಮಯಾ**

ಪೃಥಿವೀಸಮಃ (ರಾ. ೧-೧-೧೮) ಇಡೀ ಬ್ರಹ್ಮಾಂಡವನ್ನು ಹೊತ್ತಿದ್ದರೂ ಪೃಥಿವಿಯಂತೆ ಭಾರದಿಂದ ಪೀಡಿತನಾಗದೇ ಅದಕ್ಕಿಂತಲೂ ಶ್ರೇಷ್ಠನಾದ ವನು; ಸರ್ವಶಕ್ತಿಶಾಲಿಯಾಗಿ ಎಲ್ಲ ಕಾರ್ಯಗಳನ್ನೂ ಮಾಡಲು ಸಮರ್ಥ ನಾದುದರಿಂದ ಅತ್ಯಂತಶಕ್ತರಿಗಿಂತಲೂ ಶ್ರೇಷ್ಠನಾದವನು.

919) **ಪ. ಭ. :–** (ವಿಪತ್ತಿನಲ್ಲಿದ್ದು ತನ್ನನ್ನು ನಿರೀಕ್ಷಿಸುತ್ತಿದ್ದ ಭಕ್ತಶ್ರೇಷ್ಠ ನಾದ ಗಜೇಂದ್ರನ ದರ್ಶನದಿಂದ ಆತ್ಮಧಾರಣೆಯನ್ನು ಹೊಂದಿದ್ದುದರಿಂದ) ತಾಳ್ಮೆಯುಳ್ಳವರಲ್ಲಿ ಶ್ರೇಷ್ಠನು.

ನಿರುಕ್ತಿ :– **ಗಜೇನ್ದ್ರದರ್ಶನೇನಾಸೌ ಧೃತಾತ್ಮಾ ಕ್ಷಮಿಣಾಂ ವರಃ ॥**

920) **ಸ. ಸಂ. :–** ಕ್ಷಮಾವಂತರಲ್ಲಿ ಶ್ರೇಷ್ಠನಾದವನು.

* * *

920) **ವಿದ್ವತ್ತಮಃ** = ಎಣೆಯಿಲ್ಲದ ಪರಿಪೂರ್ಣಜ್ಞಾನವನ್ನು ಸದಾ ಹೊಂದಿರುವ ಜ್ಞಾನಿಶ್ರೇಷ್ಠನು.

ಶಂ. ಭಾ. :– ಸದಾ ಸರ್ವಪ್ರಕಾರವಾದ (ಬೇರೆ ಯಾರಿಗೂ ಇಲ್ಲದ) ನಿರತಿಶಯಜ್ಞಾನದಿಂದ ಸಂಪನ್ನನಾದವನು.

920) **ಪ. ಭ. :–** ಗಜೇಂದ್ರನ ಪೀಡೆಗೆ ಚಿಕಿತ್ಸೆಮಾಡುವ ವಿಷಯದಲ್ಲಿ ಅತ್ಯಂತಜ್ಞಾನಿಯಾದವನು.

ನಿರುಕ್ತಿ :– **ಗಜೇನ್ದ್ರಾರ್ತಿಚಿಕಿತ್ಸಾಯಾಂ ವಿದ್ವಾನ್ವಿದ್ವತ್ತಮಸ್ತು ಸಃ ॥**

921) **ಸ. ಸಂ. :–** ಅತ್ಯಂತಜ್ಞಾನಿಯು.

* * *

921) **ವೀತಭಯಃ** = ಸರ್ವಭಯರಹಿತನು ; ಸರ್ವಭಯಪರಿಹಾರ ಕನು.

ಶಂ. ಭಾ. :– ಸರ್ವೇಶ್ವರನೂ–ನಿತ್ಯಮುಕ್ತನೂ ಆಗಿರುವುದರಿಂದ ಸಾಂಸಾರಿಕವಾದ ಅಥವಾ ಸಂಸಾರರೂಪವಾದ ಭಯವಿಲ್ಲದವನು.

921) **ಪ. ಭ. :–** ಗಜೇಂದ್ರನ ಭಯವನ್ನು ನೀಗಿಸಿದವನು.

ನಿರುಕ್ತಿ :– **ವೀತಂ ಭಯಂ ಗಜೇನ್ದ್ರಸ್ಯ ಯಸ್ಮಾದ್ವೀತಭಯಶ್ಚ ಸಃ ।**

922) ಸ. ಸಂ. :– ಭಯಶೂನ್ಯನಾದವನು.

* * *

922) ಪುಣ್ಯಶ್ರವಣಕೀರ್ತನಃ= ಯಾವನ ಶ್ರವಣ ಮತ್ತು ಸಂಕೀರ್ತನೆಗಳಿಂದ ಅತ್ಯಂತಾತಿಶಯವಾದ ಪುಣ್ಯಲಾಭವುಂಟಾಗುತ್ತದೆಯೋ–ಅವನು.

ಶಂ. ಭಾ. :– ಪುಣ್ಯಕರವಾದ ಶ್ರವಣ ಮತ್ತು ಕೀರ್ತನೆಗಳುಳ್ಳವನು.

ಯ ಇದಂ ಶೃಣುಯಾನ್ನಿತ್ಯಂ ಯಶ್ಚಾಪಿ ಪರಿಕೀರ್ತಯೇತ್ ।
ನಾಶುಭಂ ಪ್ರಾಪ್ನುಯಾತ್ಕಿಂಚಿತ್ಸೋಽಮುತ್ರೇಹ ಚ ಮಾನವಃ ॥

(ವಿ. ಸ. ಫಲಶ್ರುತಿ ೧೨೨)

922) ಪ. ಭ. :– 'ಗಜೇಂದ್ರಮೋಕ್ಷವನ್ನು ಕೇಳಿದೊಡನೆಯೇ ಸರ್ವ ಪಾಪಗಳಿಂದಲೂ ಬಿಡುಗಡೆಯುಂಟಾಗುತ್ತದೆ'–ಎಂದು ಹೇಳಿರುವಂತೆ ಯಾವನ ಕೀರ್ತನೆಯು ಪುಣ್ಯವಾಗಿದೆಯೋ ಮತ್ತು ಶ್ರವಣವು ಅತ್ಯಂತ ಪುಣ್ಯಕರವಾಗಿದೆಯೋ–ಅಂತಹವನು.

ನಿರುಕ್ತಿ :– **ಗಜೇಂದ್ರಮೋಕ್ಷಣಂ ಶ್ರುತ್ವಾ ಸದ್ಯಃ ಪಾಪಾತ್ಪ್ರಮುಚ್ಯತೇ ।**
ಯಸ್ಮಾತ್ತತ್ಕೀರ್ತನಂ ಪುಣ್ಯಂ ಶ್ರವಣಂ ಚೇತಿ ಸ ಸ್ಮೃತಃ ।
ದ್ವಾದಶಾರ್ಣೋ ಮನುಶ್ರೇಷ್ಠಃ ಪುಣ್ಯಶ್ರವಣಕೀರ್ತನಃ ॥

923) ಸ. ಸಂ. :– ಯಾವನ ವಿಷಯವಾದ ಶ್ರವಣ ಮತ್ತು ಸಂಕೀರ್ತನೆಗಳು ಪುಣ್ಯಕರವಾಗಿವೆಯೋ–ಅವನು.

* * *

ಉತ್ತಾರಣೋ ದುಷ್ಕೃತಿಹಾ ಪುಣ್ಯೋ ದುಃಸ್ವಪ್ನನಾಶನಃ ।
ವೀರಹಾ ರಕ್ಷಣಃ ಸನ್ತೋ ಜೀವನಃ ಪರ್ಯವಸ್ಥಿತಃ ॥೧೧೨॥

923) **ಉತ್ತಾರಣಃ**= ಸಂಸಾರಸಾಗರದಿಂದ ದಾಟಿಸುವವನು ; ಸರ್ವ ಕಷ್ಟಗಳಿಂದಲೂ ಪಾರುಮಾಡುವವನು.

ಶಂ. ಭಾ. :– ಭವಸಾಗರದಿಂದ ಪಾರುಮಾಡಿಸುವವನು.

923) ಪ. ಭ. :– ಗಜರಾಜನನ್ನು ಸರೋವರದಿಂದ ದಾಟಿಸಿದವನು.

ನಿರುಕ್ತಿ :– **ಸರಸಸ್ತಂ ತಾರಿತವಾನಿತ್ಯುತ್ತಾರಣ ಈರಿತಃ ॥**

924) **ಸ. ಸಂ. :–** ಮೇಲಕ್ಕೆ ದಾಟಿಸುವವನು ; ಸಂನ್ಯಾಸಿಗಳಿಗೆ ಸುಖವನ್ನುಂಟುಮಾಡುವವನು.

* * *

924) **ದುಷ್ಕೃತಿಹಾ** = ದುಷ್ಟಕಾರ್ಯಗಳನ್ನು (ಪಾಪಗಳನ್ನು) ಅಥವಾ ದುಷ್ಟಕಾರ್ಯಮಾಡಿದವರನ್ನು ಸಂಹರಿಸುವವನು.

ಶಂ. ಭಾ. :– ಪಾಪ (ದುಷ್ಕೃತ್ಯ)ಗಳನ್ನು ಅಥವಾ ಪಾಪಕಾರಿಗಳನ್ನು ಸಂಹರಿಸುವವನು.

924) **ಪ. ಭ. :–** (ದುಷ್ಟವಾದ) ಮೊಸಳೆಯನ್ನು ಸೀಳಿಹಾಕಿದವನು.

ನಿರುಕ್ತಿ **:– ಗ್ರಾಹಂ ವಿದಾರಯಾಮಾಸ ಯಸ್ಮಾದ್ದುಷ್ಕೃತಿಹಾ ಚ ಸಃ ।**

925) **ಸ. ಸಂ. :–** ಪಾಪಿಗಳನ್ನು ಸಂಹರಿಸುವವನು.

* * *

925) **ಪುಣ್ಯಃ** = ಪಾವನಮಾಡುವವನು ; ಪುಣ್ಯವನ್ನು ಉಪದೇಶಿಸುವವನು. **ಪುಣ್ಯೋ ಯೋಽಸೌ ಪಾತಕಿಪಾವನಃ**

ಶಂ. ಭಾ. :– ತನ್ನ ಸ್ಮರಣೆಯೇ ಮುಂತಾದುವುಗಳನ್ನು ಮಾಡುವವರನ್ನು ಪುಣ್ಯವಂತರನ್ನಾಗಿ ಮಾಡುವವನು ಅಥವಾ ಶ್ರುತಿ-ಸ್ಮೃತಿರೂಪವಾದ ವಾಣಿಯಿಂದ ಎಲ್ಲರಿಗೂ ಪುಣ್ಯವನ್ನು ಉಪದೇಶಮಾಡುವವನು.

925) **ಪ. ಭ. :–** ಗಜೇಂದ್ರಸಂರಕ್ಷಣಾರೂಪವಾದ ಕೀರ್ತಿಯಿಂದ ನಮ್ಮಂತಹವರನ್ನು ಪಾವನಗೊಳಿಸುವವನು.

ನಿರುಕ್ತಿ **:– ಕೀರ್ತ್ಯಾಸ್ಮದಾದೀನಪಿ ಯೋ ಗಜೇನ್ದ್ರತ್ರಾಣರೂಪಯಾ ।**
ಪುಣ್ಯಃ ಸ ಸ್ಯಾತ್ಪುನಾತೀತಿ ಷಡರ್ಣಃ ಪಾವನತ್ವದಃ ॥

‘ಓಂ ಪುಣ್ಯಾಯ ನಮಃ’–ಎಂಬ ಈ ನಾಮಮಂತ್ರಜಪದಿಂದ ಜಾಪಕನು ಪವಿತ್ರನಾಗುತ್ತಾನೆ.

926) **ಸ. ಸಂ. :–** ಪುಣ್ಯವನ್ನು ಉಪದೇಶಮಾಡುವವನು.

* * *

926) **ದುಃಸ್ವಪ್ನನಾಶನಃ** = ಧ್ಯಾನಿಸುವ ಭಕ್ತರ ಕೆಟ್ಟ ಕನಸುಗಳನ್ನು

ನಾಶಪಡಿಸುವವನು ; ದುಷ್ಟವಾದ ನಿದ್ರೆಯನ್ನು (ಅಜ್ಞಾನವನ್ನು) ಹೋಗಲಾಡಿಸುವವನು.

ಶಂ. ಭಾ. :– ಧ್ಯಾನ, ಸ್ತುತಿ, ಕೀರ್ತನೆ, ಪೂಜೆಗಳನ್ನು ಮಾಡುವ ಭಕ್ತರ (ಮುಂದಿನ ಅನರ್ಥವನ್ನು ಸೂಚಿಸುವ) ಕೆಟ್ಟ ಕನಸುಗಳನ್ನು ನಾಶಪಡಿಸುವವನು.

926) ಪ. ಭ. :– ಗಜೇಂದ್ರಮೋಕ್ಷಣಾಧ್ಯಾಯದ ಜಪದಿಂದ ಶೀಘ್ರವಾಗಿ ದುಷ್ಟಸ್ವಪ್ನಗಳ ಫಲವನ್ನು ನಾಶಮಾಡುವವನು.

ನಿರುಕ್ತಿ :– ಗಜೇನ್ದ್ರಮೋಕ್ಷಣಾಧ್ಯಾಯಜಪಾದ್ದುಃಸ್ವಪ್ನಜಂ ಫಲಮ್
ನಾಶಯತ್ಯಞ್ಜಸಾ ಯೋಽಸಾವಿತಿ ದುಃಸ್ವಪ್ನನಾಶನಃ ॥

927) ಸ. ಸಂ. :– ದುಷ್ಟಸ್ವಪ್ನಗಳನ್ನು ನಾಶಮಾಡುವವನು.

* * *

927) ವೀರಹಾ = ವೀರರಾದ ಒಳ-ಹೊರಶತ್ರುಗಳನ್ನು ಸಂಹರಿಸುವವನು.

ಶಂ. ಭಾ. :– ಮುಕ್ತಿಪ್ರದಾನದಿಂದ ಸಂಸಾರಿಗಳ ವಿವಿಧಗತಿಗಳನ್ನು ನಾಶಪಡಿಸುವವನು.

927) ಪ. ಭ. :– (ಶರಣಾಗತನಾದ ಗಜೇಂದ್ರನನ್ನು ಪಾಶಗಳಿಂದ ಬಿಡಿಸಿ) ಅವನಿಗೆ ಪೀಡೆಯನ್ನುಂಟುಮಾಡುತ್ತಿದ್ದ ಮೃತ್ಯುವನ್ನು ಧ್ವಂಸಮಾಡಿದವನು.

ನಿರುಕ್ತಿ :– ವೀರಂ ತದ್ಬಾಧಕಂ ಮೃತ್ಯುಂ ಹತವಾನ್ಯಃ ಸ ವೀರಹಾ ॥

928) ಸ. ಸಂ. :– ವೀರರನ್ನು (ವಿಶೇಷವಾಗಿ ಮದ್ಯಪಾನಮಾಡುವವರನ್ನು) ಸಂಹರಿಸುವವನು.

* * *

928) ರಕ್ಷಣಃ = ಜಗತ್ತನ್ನು ರಕ್ಷಿಸುವ ಸ್ಥಿತಿಕಾರಕನಾದ ವಿಷ್ಣುವು ; ಭಕ್ತಸಂರಕ್ಷಕನು.

ಶಂ. ಭಾ. :– ಸತ್ತ್ವಗುಣವನ್ನಾಶ್ರಯಿಸಿ ಮೂರು ಲೋಕಗಳನ್ನೂ ರಕ್ಷಿಸುವವನು.

928) ಪ. ಭ. :– ಗಜೇಂದ್ರನನ್ನು ಸ್ಪರ್ಶ, ಆಲಿಂಗನ, ಸಾಂತ್ವನ–ಮುಂತಾದುವುಗಳಿಂದ ರಕ್ಷಿಸಿದವನು.

ನಿರುಕ್ತಿ :– ಸ್ಪರ್ಶಸಂಶ್ಲೇಷಣಾದ್ಯೈಸ್ತಂ ರಕ್ಷತೀತಿ ಸ ರಕ್ಷಣಃ ॥

929) ಸ. ಸಂ. :– ರಕ್ಷಿಸುವವನು ; ಅರಕ್ಷಣಃ= ಅತ್ಯಂತವಾದ ಉತ್ಸವವುಳ್ಳವನು.

* * *

929) ಸನ್ತಃ = ಸತ್ಪುರುಷನು ; ಸತ್ತಾಸ್ವರೂಪನು.

ಶಂ. ಭಾ. :– ವಿದ್ಯೆ ಮತ್ತು ವಿನಯಗಳ ವೃದ್ಧಿಗೋಸ್ಕರ ಸತ್ಪುರುಷರ ರೂಪದಲ್ಲಿ ಬೆಳಗುತ್ತಿರುವವನು.

929) ಪ. ಭ. :– ತನ್ನನ್ನು ಆಶ್ರಯಿಸಿದವರನ್ನು ವೃದ್ಧಿಪಡಿಸು ವವನು; ಅವರ ಇಷ್ಟಾರ್ಥವನ್ನು ಅನುಗ್ರಹಿಸುವವನು ; ಸಂತರಿಗೋಸ್ಕರ ಇರುವವನು.

ನಿರುಕ್ತಿ :– ಯಃ ಸ್ವಾಶ್ರಿತಾನ್ಸನ್ತನೋತಿ ಸ ಸನ್ತ ಇತಿ ಕಥ್ಯತೇ ।
ತೇಷಾಮಸ್ತೀತಿ ವಾ ಸನ್ತೋ ವಚನವ್ಯತ್ಯಯಃ ಸ್ಮೃತಃ ।
ತೇಭ್ಯ ಇಷ್ಟಂ ದತ್ತವಾನ್ವಾ ಸನೋತೇಃ ಸನ್ತ ಉಚ್ಯತೇ ॥

930) ಸ. ಸಂ. :– ನಿರ್ದುಷ್ಟನಾದವನು ; ಎಲ್ಲೆಲ್ಲಿಯೂ ಇರುವವನು.

* * *

930) ಜೀವನಃ = ಆತ್ಮೋಜ್ಜೀವನವನ್ನು ಉಂಟುಮಾಡುವವನು ; ನಿತ್ಯಜೀವನವನ್ನು ಉಂಟುಮಾಡುವವನು.

ಶಂ. ಭಾ. :– ಪ್ರಾಣರೂಪದಿಂದ ಎಲ್ಲ ಪ್ರಜೆಗಳನ್ನೂ ಜೀವಿಸಿರು ವಂತೆ ಮಾಡುವವನು.

930) ಪ. ಭ. :– ತನ್ನ ಹಸ್ತದಿಂದಲೇ ಸಂಹರಿಸಲ್ಪಟ್ಟ ಮೊಸಳೆಗೂ ಕೂಡ ಶಾಪಪರಿಹಾರಮಾಡಿ ಗಂಧರ್ವರೂಪದಿಂದ ಜೀವವು ಬರುವಂತೆ ಮಾಡಿದವನು.

[339]-29

ನಿರುಕ್ತಿ :–

ಸ್ವಹಸ್ತೇನ ಹತಂ ಗ್ರಾಹಂ ಗನ್ಧರ್ವತ್ವೇನ ಜೀವಯನ್ ।
ಪೂರ್ವಶಾಪಂ ನಿರಸ್ಯಾಥ ಯಸ್ತಿಷ್ಠತಿ ಸ ಜೀವನಃ ॥

931) **ಸ. ಸಂ. :–** ಬದುಕಿಸುವವನು.

* * *

931) **ಪರ್ಯವಸ್ಥಿತಃ =** ವಿಶ್ವವನ್ನು ಎಲ್ಲೆಡೆಗಳಲ್ಲಿಯೂ ವ್ಯಾಪಿಸಿರುವವನು. ಎಲ್ಲೆಲ್ಲಿಯೂ ನೆಲೆಸಿರುವವನು.

ಶಂ. ಭಾ. :– ವಿಶ್ವವನ್ನು ಎಲ್ಲೆಡೆಗಳಿಂದಲೂ ವ್ಯಾಪಿಸಿರುವವನು.

931) **ಪ. ಭ. :–** ಶರಣಾಗತವತ್ಸಲನಾಗಿ ವಾತ್ಸಲ್ಯದಿಂದ ಗಜೇಂದ್ರನ ಸುತ್ತಲೂ ಇದ್ದವನು.

ನಿರುಕ್ತಿ :– ವಾತ್ಸಲ್ಯಾದ್ಯೋ ಗಜೇನ್ದ್ರಂ ತು ಪರಿತೋ ವಸನಾಚ್ಚ ಸಃ ।
ಪರ್ಯವಸ್ಥಿತ ಆಖ್ಯಾತೋ ನವಾರ್ಣೋ ಹ್ಯಮಿತಪ್ರದಃ ॥

'**ಓಂ ಪರ್ಯವಸ್ಥಿತಾಯ ನಮಃ**'–ಎಂಬ ಈ ನಾಮಮಂತ್ರಜಪವು ಅಮಿತವಾದ ಫಲವನ್ನು ಕೊಡುತ್ತದೆ.

932) **ಸ. ಸಂ. :–**ರಕ್ಷಣೆಗೋಸ್ಕರ ಎಲ್ಲ ಕಡೆಗಳಲ್ಲಿಯೂ ಇರುವವನು.

* * *

ಅನನ್ತರೂಪೋಽನನ್ತಶ್ರೀರ್ಜಿತಮನ್ಯುರ್ಭಯಾಪಹಃ ।
ಚತುರಶ್ರೋ ಗಭೀರಾತ್ಮಾ ವಿದಿಶೋ ವ್ಯಾದಿಶೋ ದಿಶಃ ॥೧೧೩॥

932) **ಅನನ್ತರೂಪಃ =** ಅನಂತವಾದ ರೂಪಗಳುಳ್ಳವನು ; ನಾಶರಹಿತವಾದ ರೂಪಗಳುಳ್ಳವನು.

ಶಂ. ಭಾ. :– ವಿಶ್ವಪ್ರಪಂಚರೂಪದಿಂದ ಅನಂತರೂಪಗಳುಳ್ಳವನು.

932) **ಪ. ಭ. :–** ಅಸಂಖ್ಯಾತವಾದ ವಿಗ್ರಹಗಳುಳ್ಳವನು.

ನಿರುಕ್ತಿ :– ಅನನ್ತರೂಪಃ ಸ ಸ್ಯಾದ್ವೈ ಯಸ್ಯಾಸಂಖ್ಯೇಯವಿಗ್ರಹಾಃ ॥

933) **ಸ. ಸಂ. :–** ಅಪರಿಮಿತವಾದ ಅಥವಾ ನಾಶರಹಿತವಾದ ರೂಪಗಳುಳ್ಳವನು.

* * *

933) **ಅನಂತಶ್ರೀಃ** = ಅಸಂಖ್ಯಾತವಾದ ಮತ್ತು ನಾಶರಹಿತವಾದ ಸಂಪತ್ತುಗಳುಳ್ಳವನು.

ಶಂ. ಭಾ. :– ಅಪರಿಮಿತವಾದ ಪರಾಶಕ್ತಿಯುಳ್ಳವನು. **ಪರಾಸ್ಯ ಶಕ್ತಿರ್ವಿವಿಧೈವ ಶ್ರೂಯತೇ ॥** (ಶ್ವೇ. ೬-೮)

933) **ಪ. ಭ. :–** ಶರಣಾಗತರಿಗೆ (ಐಹಿಕದಿಂದ ಆರಂಭಿಸಿ) ತನ್ನ ಪ್ರಾಪ್ತಿಯವರೆಗಿನ ಅನಂತವಾದ ಸಂಪತ್ತುಗಳನ್ನು ಕೊಡುವವನು.

ನಿರುಕ್ತಿ :– **ದೇಯಾಃ ಸ್ವಪ್ರಾಪ್ತಿಪರ್ಯನ್ತಾಃ ಶ್ರಿಯೋಽನನ್ತಾಶ್ಚ ನಿತ್ಯಶಃ ।**
ಪ್ರಪನ್ನೇಭ್ಯೋ ಯಸ್ಯ ಸನ್ತಿ ಸೋಽನನ್ತಶ್ರೀರಿತಿ ಸ್ಮೃತಃ

934) **ಸ. ಸಂ. :–** ನಾಶರಹಿತವಾದ ಸ್ವರೂಪಶ್ರೀಯುಳ್ಳವನು. **ಸ್ವರೂಪಶ್ರೀಸ್ತಥಾ ಭಾರ್ಯಾ ದ್ವೇಧಾ ಶ್ರೀಸ್ತು ಹರೇರ್ಮತಾ ॥**

(ಭಾಗವತ ತಾತ್ಪರ್ಯ)

* * *

934) **ಜಿತಮನ್ಯುಃ** = ಕೋಪವನ್ನೂ ಮತ್ತು ದೈನ್ಯವನ್ನೂ ಜಯಿಸಿದವನು ; ಕೋಪವನ್ನೂ, ದೈನ್ಯವನ್ನೂ ಜಯಿಸಲು ಕಾರಣನಾದವನು.

ಶಂ. ಭಾ. :– ಕ್ರೋಧವನ್ನು ಜಯಿಸಿದವನು.

934) **ಪ. ಭ. :–** ಶರಣಾಗತನಾಗಿದ್ದ ಗಜೇಂದ್ರನನ್ನು ದ್ವೇಷಿಸುತ್ತಿದ್ದ ಜಲಕೀಟಾದಿಗಳ ವಿಷಯದಲ್ಲಿ ಹಿಂದೆ ಇದ್ದ ಕೋಪವನ್ನು ಜಯಿಸಿದವನು.

ನಿರುಕ್ತಿ :– **ಗಜೇನ್ದ್ರದ್ವೇಷಿವಾರಿಸ್ಥಕೀಟೇಽಪ್ಯದ್ಯ ಕೃಪಾವಶಾತ್ ।**
ಯೋ ಮನ್ಯುಂ ಜಿತವಾನ್ದೇವಃ ಜಿತಮನ್ಯುಃ ಸ ಕಥ್ಯತೇ ॥

935) **ಸ. ಸಂ. :–** ದೈತ್ಯರ ವಿಷಯದಲ್ಲಿ ಪ್ರಾಪ್ತವಾದ ಕೋಪವುಳ್ಳವನು. ಯಾವನಿಂದ ಯಜ್ಞಗಳು ಉಂಟಾಗುತ್ತವೆಯೋ–ಅವನು.

* * *

935) **ಭಯಾಪಹಃ** = ಎಲ್ಲ ಭಯಗಳನ್ನೂ ಹೋಗಲಾಡಿಸುವವನು.

ಶಂ. ಭಾ. :– ಮನುಷ್ಯರ ಸಂಸಾರಭಯವನ್ನು ನಾಶಪಡಿಸುವವನು.

935) **ಪ. ಭ. :–** ‘ ನಾನು ಅನಾಥನಾಗಿದ್ದೇನೆ ’–ಎಂದು ನಮ್ಮಂತ

ಹವರಿಗೂ ಉಂಟಾಗುವ ಭಯವನ್ನು ತನ್ನ ವಾತ್ಸಲ್ಯದಿಂದಲೇ ಹೋಗಲಾಡಿಸುವವನು.

ನಿರುಕ್ತಿ :– ಅನಾಥತ್ವಭಯಂ ಹನ್ತಿ ವಾತ್ಸಲ್ಯೇನೈವ ಮಾದೃಶಾಮ್ ।
ಭಯಾಪಹಃ ಸಮಾಖ್ಯಾತೋ ವಸ್ವರ್ಣೋ ಮನುರುತ್ತಮಃ ॥

936) **ಸ. ಸಂ. :–** ಭಯಗಳನ್ನು ಹೋಗಲಾಡಿಸುವವನು.

* * *

936) **ಚತುರಶ್ರಃ** = ನ್ಯಾಯಶಾಲಿಯು. ವೈಷಮ್ಯವಿಲ್ಲದೇ ಸರ್ವಸಮನಾಗಿರುವವನು.

ಶಂ. ಭಾ. :– ನ್ಯಾಯಸಂಪನ್ನನಾದವನು ; ಮನುಷ್ಯರಿಗೆ ಕರ್ಮಾನುರೂಪವಾಗಿ ಫಲವನ್ನು ಕೊಡುವವನು.

936) **ಪ. ಭ. :–** ನ್ಯಾಯಯುಕ್ತವಾದುದನ್ನೇ ಮಾಡುವವನು ; ಸರ್ವಸಮನಾದವನು.

ನಿರುಕ್ತಿ :– ಯುಕ್ತಕಾರೀ ಸರ್ವಸಮಃ ಚತುರಶ್ರಃ ಸ ಕೀರ್ತಿತಃ ॥

937) **ಸ. ಸಂ. :– ಚತುರಸ್ರಃ** = ಕುಶಲನಾಗಿ ಹೋಗುವವನು.

* * *

937) **ಗಭೀರಾತ್ಮಾ** = ಹೆಚ್ಚು ಆಳವಾದ ಆತ್ಮಸ್ವರೂಪನು ; ದೇವತೆಗಳಿಗೂ ಅಳೆಯಲು ಅಸಾಧ್ಯವಾದ ಹೆಚ್ಚು ಆಳವಾದ ಮನಸ್ಸುಳ್ಳವನು.

ಶಂ. ಭಾ. :– ಅಳೆಯಲು ಅಸಾಧ್ಯವಾದ ಸ್ವರೂಪವುಳ್ಳವನು ಅಥವಾ ಮನಸ್ಸುಳ್ಳವನು.

937) **ಪ. ಭ. :–** ಬ್ರಹ್ಮಾದಿಗಳು ಕೂಡ ಎದುರಿಸಲು ಅಸಾಧ್ಯವಾದ ಗಾಂಭೀರ್ಯವುಳ್ಳವನು.

ನಿರುಕ್ತಿ :– ಧಾತ್ರಾದೀನಾಮಪ್ರಧೃಷ್ಯಂ ಗಾಮ್ಭೀರ್ಯಂ ಯಸ್ಯ ವಿದ್ಯತೇ ।
ಗಭೀರಾತ್ಮಾ ಸ ವಿಜ್ಞೇಯೋ ವಸ್ವರ್ಣೋ ಮನುರುತ್ತಮಃ ॥

938) **ಸ. ಸಂ. :–**ಗಂಭೀರವಾದ ಮನಸ್ಸುಳ್ಳವನು. **ಅಗಭೀರಾತ್ಮಾ** =

ಗೋವರ್ಧನಪರ್ವತದಿಂದ ಮಳೆಯ ಭಯವನ್ನು ಹೋಗಲಾಡಿಸಿದವನು.

* * *

938) ವಿದಿಶಃ = ಈಶಾನ್ಯ-ವಾಯವ್ಯಗಳೇ ಮುಂತಾದ ಉಪದಿಕ್ಕುಗಳ ರೂಪದಲ್ಲಿರುವವನು ; ವಿವಿಧಫಲಗಳನ್ನು ವಿಶೇಷವಾಗಿ ಕೊಡುವವನು.

ಶಂ. ಭಾ. :– ಆಯಾ ಅಧಿಕಾರಿಗಳಿಗೆ ಬಗೆ-ಬಗೆಯ ಫಲಗಳನ್ನು ವಿಶೇಷವಾಗಿ ಕೊಡುವವನು.

938) ಪ. ಭ. :– ಬ್ರಹ್ಮಾದಿದೇವತೆಗಳ ವಿನಯಗದ್ಗದವಾದ ಸ್ತೋತ್ರಗಳಿಗೂ ದೂರವಾದ ಬಗೆ-ಬಗೆಯ (ಸ್ವರೂಪ-ರೂಪ-ಗುಣ-ವಿಭವಾದಿ ಮಾಹಾತ್ಮ್ಯಗಳ) ಭೂಮಿಗಳನ್ನು ಅಥವಾ ಸ್ಥಾನಗಳನ್ನು ಉಳ್ಳವನು.

ನಿರುಕ್ತಿ :– ವಿನಯಾದ್ಗದ್ಗದಸ್ತೋತ್ರಗಿರಾಮಪಿ ದಿವೌಕಸಾಮ್ ।
ದೂರೇಽಸ್ಯ ವಿವಿಧಾ ದೇಶಾ ವಿದಿಶಃ ಸ ತು ಕೀರ್ತಿತಃ ॥

939) ಸ. ಸಂ. :– ಜ್ಞಾನಿಯಲ್ಲಿ ಸುಖವು ಯಾವನಿಂದ ಉಂಟಾಗುವುದೋ–ಅವನು ; ವಿಸ್ಮಯ ಮತ್ತು ಸುಖಗಳನ್ನು ಉಂಟುಮಾಡುವವನು.

* * *

939) ವ್ಯಾದಿಶಃ = ಸುತ್ತಲೂ ಇರುವ ದಿಕ್ಕುಗಳ ರೂಪನಾದವನು ; ಬಗೆ-ಬಗೆಯ ಆಜ್ಞೆಗಳನ್ನು ಕೊಡುವವನು.

ಶಂ. ಭಾ. :– ಇಂದ್ರನೇ ಮುಂತಾದವರಿಗೆ ಬಗೆ-ಬಗೆಯ ಆಜ್ಞೆಗಳನ್ನು ಕೊಡುವವನು.

939) ಪ. ಭ. :– ಬ್ರಹ್ಮಾದಿಗಳಿಗೆ ಅಭಿಮತವಾದ ಆಯಾ ಸ್ಥಾನಗಳನ್ನು ಸೃಷ್ಟಿಸುವವನು.

ನಿರುಕ್ತಿ :– ಬ್ರಹ್ಮಾದೀನಾಂ ತತ್ತತ್ಸ್ಥಾನಸರ್ಜನಾದ್ವ್ಯಾದಿಶಶ್ಚ ಸಃ ॥

940) ಸ. ಸಂ. :– ಗರುಡನೇ ಮುಂತಾದವರಿಗೆ ಸುಖವನ್ನುಂಟುಮಾಡುವವನು ; ವಿಶೇಷವಾಗಿ ಆಜ್ಞಾಪಿಸುವವನು.

* * *

940) ದಿಶಃ = ಎಲ್ಲ ದಿಕ್ಕುಗಳೂ ಆಗಿರುವವನು ; ಕರ್ಮಫಲಗಳನ್ನು ಅಥವಾ ಇಷ್ಟಾರ್ಥಗಳನ್ನು ಕೊಡುವವನು.

ಶಂ. ಭಾ. :– ವೇದರೂಪದಿಂದ ಎಲ್ಲ ಕರ್ಮಿಗಳಿಗೂ ಅವರವರ ಕರ್ಮಗಳಿಗೆ ಅನುಗುಣವಾಗಿ ಫಲಗಳನ್ನು ಕೊಡುವವನು.

940) ಪ. ಭ. :– ಬ್ರಹ್ಮನೇ ಮುಂತಾದವರನ್ನು ಎಲ್ಲ ಕೆಲಸಗಳ ಲ್ಲಿಯೂ ಸದಾ ಆಜ್ಞಾಪಿಸುವವನು.

ನಿರುಕ್ತಿ :– ಧಾತ್ರಾದೀನ್ಸರ್ವಕೃತ್ಯೇಷು ಹ್ಯಾಜ್ಞಾಪಯತಿ ಯಃ ಸದಾ ।
ದಿಶಃ ಸ ತು ಸಮಾಖ್ಯಾತಃ ಷಡರ್ಣೋ ಮನುರುತ್ತಮಃ ॥

941) ಸ. ಸಂ. :– ಧರ್ಮವೇ ಮುಂತಾದುವುಗಳನ್ನು ಕೊಡುವವನು. ಧರ್ಮಾದಿಗಳನ್ನು ಕೊಡುವವರಿಗೆ ಸುಖವನ್ನುಂಟುಮಾಡುವವನು.

* * *

ಅನಾದಿರ್ಭೂರ್ಭುವೋ ಲಕ್ಷ್ಮೀಃ ಸುವೀರೋ ರುಚಿರಾಙ್ಗದಃ ।
ಜನನೋ ಜನಜನ್ಮಾದಿರ್ಭೀಮೋ ಭೀಮಪರಾಕ್ರಮಃ ॥೧೧೪॥

941) ಅನಾದಿಃ = ಆದಿಯಿಲ್ಲದವನು ; ಸರ್ವಕಾರಣನು.

ಶಂ. ಭಾ. :– ಸರ್ವಕಾರಣನಾದುದರಿಂದ ಕಾರಣರಹಿತನಾದವನು.

941) ಪ. ಭ. :– ಅನ್ಯದೇವತಾಪರಾಯಣರಾದ ಜನರಿಂದಲೂ ಕುತ್ಸಿತ ಜನರಿಂದಲೂ ಸ್ವಾಮಿಯಾಗಿ ಸ್ವೀಕರಿಸಲ್ಪಡದವನು.

ನಿರುಕ್ತಿ :– ದೇವತಾನ್ತರಭಕ್ತೈರ್ಯಃ ಕುತ್ಸಿತೈಶ್ಚಾಪಿ ಸರ್ವದಾ ।
ನಾದೀಯತೇ ಸ್ವಾಮಿತಯಾ ಹ್ಯನಾದಿಃ ಪರಿಕೀರ್ತಿತಃ ॥

942) ಸ. ಸಂ. :– ಮುಖ್ಯಪ್ರಾಣನನ್ನು ಭಕ್ತೋತ್ತಮನನ್ನಾಗಿ ಸ್ವೀಕರಿಸಿದವನು.

* * *

942) ಭೂರ್ಭುವಃ = ಭೂಮಿಯ ಉತ್ಪತ್ತಿಗೆ ಕಾರಣನಾದವನು ; ಭೂಮಿಗೆ ಆಧಾರನಾದವನು ; ಸತ್ತಾಸ್ವರೂಪನು ; ಜಗತ್ತಿನ ಉತ್ಪತ್ತಿಗೆ

ಕಾರಣನು ; ಭೂಃ-ಭುವಃ ಎಂಬ ವ್ಯಾಹೃತಿಗಳ ಸ್ವರೂಪನು ; ಭೂಮಿ ಮತ್ತು ಅಂತರಿಕ್ಷಗಳ ಸ್ವರೂಪನು.

ಶಂ. ಭಾ. :– ಸರ್ವಭೂತಗಳಿಗೂ ಆಶ್ರಯವೆಂದು ಪ್ರಸಿದ್ಧವಾಗಿರುವ ಭೂಮಿಗೂ ಆಧಾರನಾದವನು ; ಭೂಲೋಕ ಮತ್ತು ಭುವೋಲೋಕಗಳೂ ಆಗಿರುವವನು.

942) ಪ. ಭ. :– ತನ್ನ ದಾಸ್ಯಜ್ಞಾನದಿಂದ ಆತ್ಮಲಾಭವನ್ನು ಪಡೆದವನಿಗೆ ತಾನೇ ಪದ (ಸ್ಥಾನ) ವಾಗುವವನು. ನಿವಸಿಷ್ಯಸಿ ಮಯ್ಯೇವ ಹ್ಯತ ಊರ್ಧ್ವಂ ನ ಸಂಶಯಃ ।

ನಿರುಕ್ತಿ :– ತಥ್ಯಸ್ವದಾಸ್ಯಜ್ಞಾನೇನ ಹ್ಯಾತ್ಮಲಾಭವತಃ ಪದಮ್ ।
ಭವತಿ ಸ್ವಯಮೇವೇತಿ ಭೂರ್ಭುವಃ ಸ ಚ ಕಥ್ಯತೇ ॥

943) ಸ. ಸಂ. :– ಪೂರ್ಣನು ; ಜಗತ್ಕಾರಣನು ; ಜಗತ್ತಿನ ಉತ್ಪಾದಕನು.

* * *

943) ಲಕ್ಷ್ಮೀಃ = ಅಷ್ಟಲಕ್ಷ್ಮೀಯೂ ಮತ್ತು ಆತ್ಮಲಕ್ಷ್ಮಿಯೂ ಆಗಿರುವವನು; ನಾರಾಯಣೀಸ್ವರೂಪಿಯು. ಕಾಂತಿಸ್ವರೂಪಿಯು ; ಸರ್ವ ಸಂಪತ್ತೂ ಆಗಿರುವವನು.

ಶಂ. ಭಾ. :– ಆತ್ಮವಿದ್ಯಾಸ್ವರೂಪಿಯು. ಆತ್ಮವಿದ್ಯಾ ಚ ದೇವಿ ತ್ವಂ (ಶ್ರೀಸ್ತುತಿಃ) ಭೂರ್ಭುವೋಲಕ್ಷ್ಮೀಃ = ಭೂಮಿ ಮತ್ತು ಅಂತರಿಕ್ಷಗಳಿಗೆ ಶೋಭೆಯಾಗಿರುವವನು.

943) ಪ. ಭ. :– ಆತ್ಮಲಾಭವುಳ್ಳವರಿಗೆ ಸರ್ವಸಂಪತ್ತೂ ಆಗಿರುವವನು.

ನಿರುಕ್ತಿ :– ಆತ್ಮಲಾಭವತಾಂ ಸರ್ವಸಂಪಲ್ಲಕ್ಷ್ಮೀಃ ಸ ಯತ್ಸ್ಮೃತಃ ॥

944) ಸ. ಸಂ. :– ಪುಣ್ಯವಂತರನ್ನು ನೋಡುವವನು ; ಪುಣ್ಯವಂತರಿಂದ ನೋಡಲ್ಪಡುವವನು.

* * *

944) ಸುವೀರಃ = ಮಹಾವೀರನು.

ಶಂ. ಭಾ. :– ಶೋಭನವಾದ ವಿವಿಧಗತಿಗಳುಳ್ಳವನು ; ಶೋಭನವಾಗಿ ವಿವಿಧವಾಗಿ (ಮತ್ಸ್ಯ-ಕೂರ್ಮಾದಿ ರೂಪಗಳಲ್ಲಿ) ಸ್ಫುರಿಸುವವನು.

944) **ಪ. ಭ. :–** ಭಕ್ತರಿಗೆ ವಿನಿಪಾತವುಂಟಾಗದಂತೆ ಪ್ರತೀಕಾರವನ್ನು ಮಾಡುವ ಮಹಾವೀರನು.

ನಿರುಕ್ತಿ :– **ತೇಷಾಂ ಯೋ ವಿನಿಪಾತಸ್ಯ ಪ್ರತೀಕಾರಂ ಕರೋತಿ ಸಃ ।**
ಸುವೀರ ಇತಿ ವಿಖ್ಯಾತಃ ಸಪ್ತಾರ್ಣೋ ಮನುರುತ್ತಮಃ ॥

945) **ಸ. ಸಂ. :–** ಮುಖ್ಯಪ್ರಾಣನು ಯಾವನಿಂದ ವಿಶಿಷ್ಟನಾಗುವನೋ–ಅವನು.

* * *

945) **ರುಚಿರಾಙ್ಗದಃ** = ಮಂಗಳವಾದ ಮನೋಹರವಾದ ತೋಳ್ಬಳೆಗಳುಳ್ಳವನು.

ಶಂ. ಭಾ. :– ಕಲ್ಯಾಣರೂಪವಾದ ತೋಳ್ಬಳೆಗಳುಳ್ಳವನು.

945) **ಪ. ಭ. :–** ಭಕ್ತರಿಗೆ ತನ್ನನ್ನು ಅನುಭವಿಸಲು ಯೋಗ್ಯವಾದ ಅತಿಮನೋಹರವಾದ ಅಪ್ರಾಕೃತವಾದ ಅಂಗವನ್ನು ಕೊಡುವವನು.

ನಿರುಕ್ತಿ :– **ಪ್ರಪನ್ನೇಭ್ಯಃ ಸ್ವಾನುಭವಯೋಗ್ಯಮಙ್ಗಂ ಮನೋಹರಮ್ ।**
ಅಪ್ರಾಕೃತಂ ಸದಾ ದತ್ತೇ ಯೋಽಸೌಸ್ಯಾದ್ರುಚಿರಾಙ್ಗದಃ ॥

946) **ಸ. ಸಂ. :–** ಮನೋಹರವಾದ ಸ್ವರೂಪದೇಹವನ್ನು ಕೊಡುವವನು ; ಮನೋಹರವಾದ ಬಾಹುಭೂಷಣವುಳ್ಳವನು. **ಅರುಚಿರಾಙ್ಗದಃ** ಮನೋಹರವಲ್ಲದ ಲಿಂಗದೇಹವನ್ನು ಖಂಡಿಸುವವನು.

* * *

946) **ಜನನಃ** = ಪ್ರಾಣಿಗಳ ಜನನಕ್ಕೆ ಕಾರಣನಾದವನು ; (ಕರ್ಮವಶನಾಗದೇ) ಜನನವನ್ನು (ಅವತಾರವನ್ನು) ಸ್ವೀಕರಿಸುವವನು.

ಶಂ. ಭಾ. :– ಜಂತುಗಳನ್ನು ಉತ್ಪಾದನೆಮಾಡುವವನು.

946) **ಪ. ಭ. :–** ತನ್ನನ್ನು ಅನುಭವಿಸಲು ಯೋಗ್ಯವಾದ ಕರಣಗಳಿಂದ ಕೂಡಿದ ಇತರರನ್ನೂ ಸೃಷ್ಟಿಸುವವನು.

ನಿರುಕ್ತಿ :– **ಅಥೋಚ್ಯತೇಽತ್ರ ಭಗವದ್ವ್ಯಾಪಾರಾಣಾಂ ಪ್ರಯೋಜನಮ್ ।
ಜನನಃ ಸ್ವಾನುಭೂತ್ಯರ್ಥಕರಣೋಪೇತಸರ್ಜನಾತ್ ॥**

947) **ಸ. ಸಂ. :–** ಹುಟ್ಟಿಸುವವನು ; ಜನರನ್ನು ಒಯ್ಯುವವನು.

* * *

947) **ಜನಜನ್ಮಾದಿಃ** = ಪ್ರಾಣಿಗಳ ಜನ್ಮಕ್ಕೆ ಮೂಲಕಾರಣನಾದವನು.

ಶಂ. ಭಾ. :– ಜೀವಿಗಳ ಉತ್ಪತ್ತಿಗೆ ಮೂಲಕಾರಣನಾದವನು.

947) **ಪ. ಭ. :–** ಜನರ ಜನ್ಮಕ್ಕೆ ನಿಮಿತ್ತ (ಪ್ರಯೋಜನ) ನಾದವನು. **ಅದ್ಯ ಜನ್ಮ ಯಥಾರ್ಥಂ ಮೇ । ಅದ್ಯ ಮೇ ಸಫಲಂ ಜನ್ಮ ।** (ವಿ. ಪು. ೫-೧-೭೩)

ನಿರುಕ್ತಿ :– **ಜನನೋ ಜನಜನ್ಮಾದಿರ್ನಿರ್ವಾಣೋ ಜನ್ಮನಾಶಕಃ ॥**

'**ಓಂ ಜನಜನ್ಮಾದಯೇ ನಮಃ**'–ಈ ನಾಮಮಂತ್ರಜಪದಿಂದ ಪುನರ್ಜನ್ಮವು ತಪ್ಪುತ್ತದೆ.

948) **ಸ. ಸಂ. :–** ಜನರ ಜನ್ಮವೇ ಮುಂತಾದುವುಗಳು ಯಾವನಿಂದ ಉಂಟಾಗುತ್ತವೆಯೋ–ಅವನು.

* * *

948) **ಭೀಮಃ** = (ದುಷ್ಟರಿಗೆ) ಭಯಂಕರನಾದವನು.

ಶಂ. ಭಾ. :– ಭಯಕ್ಕೆ ಕಾರಣನಾದವನು. **ಮಹದ್ಭಯಂ ವಜ್ರಮುದ್ಯತಮ್** (ಕಠ ೬-೨)

948) **ಪ. ಭ. :–** ತನ್ನ ಮಹತ್ತಾದ ಅನುಗ್ರಹಕ್ಕೆ ವಿಮುಖರಾದವರಿಗೆ ಗರ್ಭ-ಜನ್ಮಗಳೇ ಮುಂತಾದುವುಗಳು ಬರುವಂತೆ ಮಾಡುವವನು.

ನಿರುಕ್ತಿ :– **ಏವಂವಿಧಾನುಗ್ರಹಸ್ಯ ವಿಮುಖಾನಾಂ ನಿರನ್ತರಮ್ ।
ಗರ್ಭಜನ್ಮಾದಿಹೇತುತ್ವಾದ್ಭೀಮ ಇತ್ಯುಚ್ಯತೇ ಬುಧೈಃ ॥**

949) **ಸ. ಸಂ. :–** ಭಯಂಕರನು ; ಪ್ರಾಣಗಳನ್ನು ಧರಿಸುವವನು.

* * *

949) **ಭೀಮಪರಾಕ್ರಮಃ** = ದುಷ್ಟರಿಗೆ ಭಯವನ್ನುಂಟುಮಾಡುವ ಪರಾಕ್ರಮವುಳ್ಳವನು.

ಶಂ. ಭಾ. :– ತನ್ನ ಅವತಾರಗಳಲ್ಲಿ ಅಸುರಾದಿಗಳಿಗೆ ಭಯವನ್ನುಂಟು ಮಾಡುವ ಪರಾಕ್ರಮವುಳ್ಳವನು.

949) **ಪ. ಭ. :–** ಲೋಕಕಂಟಕಕಾರ್ಯಗಳಲ್ಲಿ ನಿರತರಾದ ಹಿರಣ್ಯಾಕ್ಷನೇ ಮುಂತಾದ ರಾಕ್ಷಸರಲ್ಲಿ ಭಯಂಕರವಾದ ಪರಾಕ್ರಮವುಳ್ಳವನು.

ನಿರುಕ್ತಿ :– ಲೋಕಾಹಿತೇಷು ನಿತರಾಂ ಹಿರಣ್ಯಾದಿಷು ಸರ್ವದಾ ।
ಭೀಮಃ ಪರಾಕ್ರಮೋ ಯಸ್ಯ ಸ ಸ್ಯಾದ್ಭೀಮಪರಾಕ್ರಮಃ ॥

950) **ಸ. ಸಂ. :–** ಭೀಮಸೇನನಿಗೆ ಅಥವಾ ರುದ್ರನಿಗೆ ಪರಾಕ್ರಮವು ಯಾವನಿಂದ ಉಂಟಾಗುತ್ತದೆಯೋ–ಅವನು.

* * *

ಆಧಾರನಿಲಯೋಽಧಾತಾ ಪುಷ್ಪಹಾಸಃ ಪ್ರಜಾಗರಃ ।
ಊರ್ಧ್ವಗಃ ಸತ್ಪಥಾಚಾರಃ ಪ್ರಾಣದಃ ಪ್ರಣವಃ ಪಣಃ ॥೧೧೫॥

950) **ಆಧಾರನಿಲಯಃ** = ಎಲ್ಲಕ್ಕೂ ಆಧಾರವೂ ನೆಲೆಮನೆಯೂ ಆಗಿರುವವನು. ಆಧಾರವಾದ ಶೇಷನಾಗನೇ ಮುಂತಾದವರಿಗೂ ನೆಲೆಮನೆಯಾಗಿರುವವನು.

ಶಂ. ಭಾ. :– ಆಧಾರಗಳಾದ ಪೃಥಿವಿಯೇ ಮುಂತಾದ ಪಂಚಭೂತಗಳಿಗೂ ಆಧಾರವಾಗಿರುವವನು.

950) **ಪ. ಭ. :–** ಧಾರ್ಮಿಕರಾಗಿ ಜಗತ್ತಿಗೆ ವಿಶೇಷವಾಗಿ ಆಧಾರವಾಗಿರುವ ಪ್ರಹ್ಲಾದ, ವಿಭೀಷಣ, ಪಾಂಡವರೇ ಮುಂತಾದವರಿಗೆ (ಆಸ್ಪದ) ಸ್ಥಾನವಾಗಿರುವವನು.

ನಿರುಕ್ತಿ :– ಧಾರ್ಮಿಕಾ ಜಗದಾಧಾರಾಃ ಪ್ರಹ್ಲಾದಾದ್ಯಾ ವಿಶೇಷತಃ ।
ತೇಷಾಂ ತು ನಿಲಯಃ ಸ್ಥಾನಮಾಧಾರನಿಲಯಶ್ಚ ಸಃ ॥

951) **ಸ. ಸಂ. :–** ದೈತ್ಯಸಮೂಹಕ್ಕೆ ನರಕರೂಪನಾಗಿರುವವನು ; ಗೋಪಾಲಕರಿಗೆ ಗೋವರ್ಧನಪರ್ವತವನ್ನು ಎತ್ತಿ ಹಿಡಿಯುವುದರ ಮೂಲಕ ಆಶ್ರಯನಾದವನು.

* * *

951) **ಅಧಾತಾ** = ತನಗೆ ಬೇರೆ ಧಾರಕರಿಲ್ಲದವನು. **ಧಾತಾ** = ಎಲ್ಲವನ್ನೂ ಧರಿಸಿ ಪೋಷಿಸುವವನು.

ಶಂ. ಭಾ. :– ಅಧಾತಾ = ತನ್ನನ್ನು ತಾನೇ ಧರಿಸಿರುವುದರಿಂದ ಬೇರೆ ಧಾರಕರಿಲ್ಲದವನು ; **ಧಾತಾ** = ಸಂಹಾರಸಮಯದಲ್ಲಿ ಎಲ್ಲ ಪ್ರಜೆಗಳನ್ನೂ ಕುಡಿದುಬಿಡುವವನು.

951) **ಪ. ಭ. :– ಧಾತಾ** = ತಾನೇ ಧರ್ಮಾಚಾರ್ಯನಾಗಿರುವವನು.
ನಿರುಕ್ತಿ :– **ಸ್ವಯಂ ಚ ಧರ್ಮಾಚಾರ್ಯತ್ವಾದ್ಧಾತೇತಿ ಪರಿಕೀರ್ತ್ಯತೇ ॥**

952) **ಸ. ಸಂ. :–ಧಾತಾ**= ಧಾರಣ-ಪೋಷಣೆಗಳನ್ನು ಮಾಡುವವನು.

* * *

952) **ಪುಷ್ಪಹಾಸಃ** = ಪುಷ್ಪದಂತೆ ಮೃದು-ಮಧುರ-ಮನೋಹರ-ಶುದ್ಧ-ಸುಗಂಧಯುಕ್ತವಾದ ಮಂದಹಾಸವುಳ್ಳವನು.

ಶಂ. ಭಾ. :– ಮೊಗ್ಗಾಗಿರುವ ಹೂವುಗಳು ಅರಳುವಂತೆ ಪ್ರಪಂಚ ರೂಪದಿಂದ ವಿಕಾಸಗೊಳ್ಳುವವನು.

952) **ಪ. ಭ. :–** ಸಾಯಂಕಾಲದ ಪುಷ್ಪದಂತೆ ಸ್ವಾನುಭವಶಕ್ತಿಗಳ ಭೋಗ್ಯತೋಲ್ಲಾಸವುಳ್ಳವನು.
ನಿರುಕ್ತಿ :– **ಸ್ವಾತ್ಮಾನುಭವಶಕ್ತೀನಾಂ ಸಾಯಂ ಪುಷ್ಪವದಸ್ಯ ವೈ ।**
ಹಾಸೋಽಸ್ತಿ ಭೋಗ್ಯತೋಲ್ಲಾಸಃ ಪುಷ್ಪಹಾಸ ಇತಿ ಸ್ಮೃತಃ ॥

953) **ಸ. ಸಂ. :–** ಮಾಘಮಾಸದ ಮಲ್ಲೆಹೂವನ್ನು ಸರಿಹೋಲುವ ನಗುವುಳ್ಳವನು.

* * *

953) **ಪ್ರಜಾಗರಃ** = ಸದಾ ಚೆನ್ನಾಗಿ ಎಚ್ಚರವಾಗಿಯೇ ಇರುವವನು.

ಶಂ. ಭಾ. :– (ನಿತ್ಯಪ್ರಬುದ್ಧಸ್ವರೂಪನಾಗಿ) ಚೆನ್ನಾಗಿ ಎಚ್ಚರವಾಗಿರುವವನು.

953) **ಪ. ಭ. :–** ರೈತನು ಸಸ್ಯಗಳ ವಿಷಯದಲ್ಲಿ ಹೇಗೋ–ಹಾಗೆ ಭಕ್ತರ ವಿಷಯದಲ್ಲಿ ಹಗಲು-ರಾತ್ರಿ ಸದಾ ಚೆನ್ನಾಗಿ ಜಾಗರೂಕನಾಗಿರುವವನು.

ನಿರುಕ್ತಿ :– **ರಾತ್ರಿಂದಿವಂ ಪ್ರಜಾಗರ್ತಿ ಸಸ್ಯೇಷ್ವಿವ ಕೃಷೀವಲಃ ।**
ಭಕ್ತೇಷು ನಿತರಾಂ ಯೋಽಸೌ ಪ್ರಜಾಗರ ಇಹೋಚ್ಯತೇ ॥

954) **ಸ. ಸಂ.** :– ಚೆನ್ನಾಗಿ ಎಚ್ಚರವಾಗಿರುವವನು. ಸೃಷ್ಟಿಸಮಯದಲ್ಲಿ ಪ್ರಜೆಗಳನ್ನು ಕಕ್ಕುವವನು. (ಬಾಯಿಂದ ಹೊರಪಡಿಸುವವನು.) ಚೆನ್ನಾಗಿ ಲೋಕಗಳನ್ನು ಉತ್ಪಾದನೆಮಾಡುವವನು ಮತ್ತು ವೇಂಕಟಾದ್ರಿಯೇ ಮುಂತಾದ ಪರ್ವತಗಳಲ್ಲಿ ರಮಿಸುವವನು.

* * *

954) **ಊರ್ಧ್ವಗಃ** = ಮೇಲಕ್ಕೆ ಹೋಗುವ ವೃತ್ತಿಯುಳ್ಳವನು. ಊರ್ಧ್ವ ಗಾಮಿಯಾದ ವೀರ್ಯವುಳ್ಳವನು. ಊರ್ಧ್ವರೇತಂ ವಿರೂಪಾಕ್ಷಂ (ನಾ. ಉ.)

ಶಂ. ಭಾ. :– ಎಲ್ಲರಿಗಿಂತಲೂ ಮೇಲೆ ಇರುವವನು.

954) **ಪ. ಭ.** :– ಸ್ವಾಭಾವಿಕವಾಗಿಯೇ ಉಚ್ಚನಾಗಿರುವವನು.

ನಿರುಕ್ತಿ :– **ಯೋಽಸೌ ಸ್ವಭಾವತಸ್ತುಙ್ಗ ಊರ್ಧ್ವಗಃಪರಿಕೀರ್ತಿತಃ ॥**

955) **ಸ. ಸಂ.** :– ಊರ್ಧ್ವದಲ್ಲಿರುವ ವೈಕುಂಠಾದಿ ಸ್ಥಾನಗಳಲ್ಲಿ ಇರುವವನು ; ಊರ್ಧ್ವಜೀವಗಳನ್ನು ವೈಕುಂಠಾದಿಸ್ಥಾನಗಳಿಗೆ ಒಯ್ಯುವವನು.

* * *

955) **ಸತ್ಪಥಾಚಾರಃ** = ಸನ್ಮಾರ್ಗದಲ್ಲಿ ನಡೆಯುವವನು.

ಶಂ. ಭಾ. :– ಸತ್ಪುರುಷರ ಕರ್ಮಗಳನ್ನು ಆಚರಿಸುವವನು.

955) **ಪ. ಭ.** :– ಭಕ್ತರನ್ನು ಸ್ವಾಭಾವಿಕವಾದ ಸಾತ್ತ್ವಿಕದಾಸ್ಯಮಾರ್ಗ ದಲ್ಲಿ ನಡೆಸುವವನು.

ನಿರುಕ್ತಿ :– **ಸತ್ಪಥಾಚಾರ ಇತ್ಯುಕ್ತಃ ಸನ್ಮಾರ್ಗೇ ತತ್ಪ್ರವರ್ತನಾತ್ ॥**

956) **ಸ. ಸಂ.** :– ಚಂದ್ರಾದಿಗಳಲ್ಲಿ ಅಂತರ್ಯಾಮಿಯಾಗಿ ನಕ್ಷತ್ರಾದಿ ಗಳಲ್ಲಿ ಚೆನ್ನಾಗಿ ಸಂಚಾರಮಾಡುವವನು. ಯೋಗ್ಯರನ್ನು ಸನ್ಮಾರ್ಗದಲ್ಲಿ ನಡೆಸುವವನು.

* * *

956) **ಪ್ರಾಣದಃ** = ಪ್ರಾಣಸಂಧಾನಮಾಡುವವನು ; ಆತ್ಮೋಜ್ಜೀವನ ವನ್ನು ಉಂಟುಮಾಡುವವನು. **ವಸುರಣ್ವೋ ವಿಭೂರಸಿ ಪ್ರಾಣ್ಯೈಸ್ತ್ವಮಸಿ ಸಂಧಾತಾ |** (ಶ್ರುತಿಃ)

ಶಂ. ಭಾ. :– ಮೃತರಾಗಿದ್ದ ಪರೀಕ್ಷಿತನೇ ಮುಂತಾದವರನ್ನು ಬದು ಕಿಸಿದವನು.

956) **ಪ. ಭ. :–** ವಿಷಯವಿಷದಿಂದ ಮೂರ್ಛಿತರಾಗಿ ನಷ್ಟಾತ್ಮ ರಾದವರಿಗೆ ಆತ್ಮೋಜ್ಜೀವನವನ್ನು ಉಂಟುಮಾಡುವವನು.

ನಿರುಕ್ತಿ :– **ಕಾನ್ತಾದಿವಿಷಯವ್ಯಾಪ್ತ್ಯಾ ನಷ್ಟಾತ್ಮಭ್ಯಃ ಕೃಪಾವಶಾತ್ |**
ಸದಾತ್ಮೋಜ್ಜೀವನಂ ಯೋಽಸೌ ದದಾತಿ ಪ್ರಾಣದಃ ಸ್ಮೃತಃ ||

957) **ಸ. ಸಂ. :–** ಅಧಿಕವಾಗಿ ಗತಿಯನ್ನು ಕೊಡುವವನು ; ಚತು ರ್ಮುಖನಿಗೆ ತೇಜಸ್ಸು-ರೂಪ-ಶಬ್ದಗಳನ್ನು ಅಧಿಕವಾಗಿ ಕೊಡುವವನು.

* * *

957) **ಪ್ರಣವಃ** = ಓಂಕಾರವಾಚ್ಯನು. ಪ್ರಾಣಗಳನ್ನು ತನ್ನಲ್ಲಿ ಪ್ರಣಾಮ ಮಾಡಿಸುವವನು.

ಶಂ. ಭಾ. :– ತನಗೆ ವಾಚಕವಾದ ಪ್ರಣವದಿಂದ (ಔಪಚಾರಿಕವಾದ ಅರ್ಥದಲ್ಲಿ) ಅಭಿನ್ನನಾದವನು.

957) **ಪ. ಭ. :–** ಪ್ರಣವದಿಂದ ಆತ್ಮೋಜ್ಜೀವನಸಂಬಂಧವನ್ನು ಎಚ್ಚರಗೊಳಿಸಿ ತನ್ನ ಪಾದಾರವಿಂದಗಳಲ್ಲಿ ಆ ಭಕ್ತರನ್ನು ಸದಾ ನಮಸ್ಕಾರ ಮಾಡಿಸುವವನು. **ಪ್ರಾಣಾನ್ಸರ್ವಾನ್ಪರಮಾತ್ಮನಿ ಪ್ರಣಾಮಯತಿ ಏತಸ್ಮಾತ್ ಪ್ರಣವ ಇತಿ ||** (ಅಥರ್ವಶಿರಸ್)

ನಿರುಕ್ತಿ :– **ಆತ್ಮೋಜ್ಜೀವನಸಂಬನ್ಧಮುದ್ಬೋಧ್ಯ ಪ್ರಣವೇನ ವೈ |**
ಪಾದಾರವಿನ್ದಯೋಸ್ಸ್ವಾನ್ಯಃ ಪ್ರಣಾಮಯತಿ ನಿತ್ಯಶಃ |
ಪ್ರಣವಃ ಸ ಸಮಾಖ್ಯಾತಃ ಸಪ್ತಾರ್ಣೋ ಮೋಕ್ಷದೋ ಮನುಃ||

'ಓಂ ಪ್ರಣವಾಯ ನಮಃ'–ಎಂಬ ಈ ನಾಮಮಂತ್ರಜಪವು ಮೋಕ್ಷದಾಯಕವು.

958) **ಸ. ಸಂ.** :– ಜಾಗ್ರದವಸ್ಥೆ ಮುಂತಾದವುಗಳನ್ನು ಪ್ರಣಯನ ಮಾಡು (ನಡೆಸು) ವುದರಿಂದ ಪ್ರಣವಶಬ್ದವಾಚ್ಯನು. (ಅತ್ಯಧಿಕಸುಖವುಳ್ಳ) ಮುಕ್ತಾತ್ಮರನ್ನು ನಡೆಸುವವನು.

* * *

958) **ಪಣಃ** = ವ್ಯವಹರಿಸುವವನು ; ಸ್ತುತಿಸಲ್ಪಡುವವನು ; ಪುಣ್ಯ ಪಣವಾಗಿರುವವನು.

ಶಂ. ಭಾ. :– ವ್ಯವಹಾರಮಾಡುವವನು. **ಸರ್ವಾಣಿ ರೂಪಾಣಿ ವಿಚಿತ್ಯಧೀರಃ । ನಾಮಾನಿ ಕೃತ್ವಾಭಿವದನ್‌ಯದಾಸ್ತೇ ।** (ತೈ. ಆ. ೩-೧೨) ಪುಣ್ಯಕರ್ಮಗಳೆಲ್ಲವನ್ನೂ ಪಣರೂಪದಲ್ಲಿ ಸಂಗ್ರಹಿಸಿ ಅಧಿಕಾರಿಗಳಿಗೆ ಅವುಗಳ ಫಲವನ್ನು ಕೊಡುವವನು. (ಲಕ್ಷಣಾರ್ಥದಲ್ಲಿ) ಪಣವೂ ಆಗಿರುವವನು.

958) **ಪ. ಭ.** :– ಸ್ವಾಮ್ಯ-ದಾಸ್ಯವ್ಯವಹಾರಗಳನ್ನು ಭಕ್ತರೊಡನೆ ಇಟ್ಟುಕೊಂಡಿರುವವನು.
ನಿರುಕ್ತಿ :– **ಸ್ವಾಮ್ಯದಾಸ್ಯವ್ಯತೀಹಾರವ್ಯವಹಾರಾತ್ಪಣಃ ಸ್ಮೃತಃ ॥**

959) **ಸ. ಸಂ.** :– ಜನರಿಂದ ಸ್ತುತಿಸಲ್ಪಡುವವನು. ಜನರೊಡನೆ ವ್ಯವಹರಿಸುವವನು.

* * *

ಪ್ರಮಾಣಂ ಪ್ರಾಣನಿಲಯಃ ಪ್ರಾಣಭೃತ್ಪ್ರಾಣಜೀವನಃ ।
ತತ್ತ್ವಂ ತತ್ತ್ವವಿದೇಕಾತ್ಮಾ ಜನ್ಮಮೃತ್ಯುಜರಾತಿಗಃ ॥೧೧೬॥

959) **ಪ್ರಮಾಣಂ**= ಪ್ರಮೆಗೆ (ಯಥಾರ್ಥಜ್ಞಾನದ ಅನುಭವಕ್ಕೆ) ಸಾಧನ ಮತ್ತು ಶ್ರೇಷ್ಠವಾದ ಅಳತೆ ಆಗಿರುವವನು.

ಶಂ. ಭಾ. :– ಪ್ರಮಿತಿರೂಪನೂ, ಸಂವಿದ್ರೂಪನೂ ಅಂದರೆ ಸ್ವಯಂ ಪ್ರಮಾಣರೂಪನೂ ಆಗಿರುವವನು. **ಜ್ಞಾನಸ್ವರೂಪಮತ್ಯನ್ತನಿರ್ಮಲಂ ಪರಮಾರ್ಥತಃ ।** (ವಿ. ಪು. ೧-೨-೬)

959) **ಪ. ಭ.** :– ಸಂಶಯ-ವಿಪರ್ಯಾಸಗಳಿಲ್ಲದ ಪಾರಮಾರ್ಥಿಕ

ವಾದ ವೇದಸಾರರಹಸ್ಯಕ್ಕೆ ನಂಬಿಕೆಯನ್ನುಂಟುಮಾಡುವ ಪ್ರಮಾಣವಾಗಿರುವವನು.

ನಿರುಕ್ತಿ :– **ಪರಮಾರ್ಥತ್ರಯೀಸಾರಪ್ರತ್ಯಾಯಕತಯಾ ಸ್ವಯಮ್ ।**
ಪ್ರಮಾಣಮಿತಿ ವಿಖ್ಯಾತಃ ಸಪ್ತಾರ್ಣೋ ಮನುರುತ್ತಮಃ ॥

960) **ಸ. ಸಂ. :–** ಉತ್ಕೃಷ್ಟವಾದ ಜ್ಞಾನವುಳ್ಳವನು. ಪ್ರಮಿತಿಸ್ವರೂಪನು. ವಿಜ್ಞಾನಮಾನನ್ದಂ ಬ್ರಹ್ಮ । ಕಣ್ಣೇ ಮುಂತಾದ ಇಂದ್ರಿಯಗಳು ಅಂತರ್ಗತನಾಗಿರುವ ಯಾವನಿಂದ ಚೆನ್ನಾಗಿ ಅಳೆಯಲ್ಪಡುತ್ತವೆಯೋ–ಅವನು.

* * *

960) **ಪ್ರಾಣನಿಲಯಃ** = ಪ್ರಾಣಗಳಿಗೆ ಮತ್ತು ಇಂದ್ರಿಯಗಳಿಗೆ ಲಯಸ್ಥಾನನೂ ಮತ್ತು ಆರಾಮಗೃಹವೂ ಆಗಿರುವವನು.

ಶಂ. ಭಾ. :– ಪ್ರಾಣಗಳು (ಇಂದ್ರಿಯಗಳು) ಲೀನವಾಗುವ ಜೀವಸ್ವರೂಪನು. ದೇಹವನ್ನು ಧರಿಸಿರುವ ಪ್ರಾಣಾಪಾನಾದಿಗಳು ಯಾವನಲ್ಲಿ ಲಯವನ್ನು ಹೊಂದುತ್ತವೆಯೋ–ಅವನು. ಜೀವವು ಯಾವ ಪರಮಪುರುಷನಲ್ಲಿ ಲಯಹೊಂದುತ್ತದೆಯೋ–ಅವನು. ಪ್ರಾಣಗಳನ್ನೂ, ಜೀವಗಳನ್ನೂ ತನ್ನಲ್ಲಿ ಉಪಸಂಹಾರಮಾಡಿಕೊಳ್ಳುವವನು.

960) **ಪ. ಭ. :–** ಪಕ್ಷಿಗಳು ತಮ್ಮ ಗೂಡಿನಲ್ಲಿ ಹೇಗೋ ಹಾಗೆ ಪ್ರಾಣ (ಜೀವ)ಗಳು ಮೊದಲಿಗನಾದ ಯಾವನಲ್ಲಿ ಬಂದು ಸೇರಿಕೊಳ್ಳುತ್ತವೆಯೋ–ಅವನು.

ನಿರುಕ್ತಿ :– **ಯಸ್ಮಿನ್ನಿತ್ಯಂ ಪ್ರಲೀಯನ್ತೇ ಪ್ರಾಣಾ ಜೀವಾಃ ಸದಾಽಗ್ರಜೇ ।**
ಶಕುನ್ತಾ ಇವ ನೀಡೇ ಸ್ವೇ ಸ ಪ್ರಾಣನಿಲಯಃ ಸ್ಮೃತಃ ॥

961) **ಸ. ಸಂ. :–** ಪ್ರಾಣನಿಗೆ (ವಾಯುವಿಗೆ) ಆಶ್ರಯನಾದವನು.

* * *

961) **ಪ್ರಾಣಭೃತ್** = ಪ್ರಾಣಕ್ಕೂ ಪ್ರಾಣವಾಗಿದ್ದು ಅದನ್ನು ಪೋಷಿಸುವವನು. "**ಯತ್ ಪ್ರಾಣಸ್ಯ ಪ್ರಾಣಂ**" (ಕೇನ.)

ಶಂ. ಭಾ. :– ಅನ್ನರೂಪದಿಂದ ಪ್ರಾಣಗಳನ್ನು ಪೋಷಿಸುವವನು.

961) **ಪ. ಭ. :– ಪ್ರಾಣಧೃತ್** = ತಾಯಿಯಂತೆ ಪ್ರಾಣಗಳನ್ನು ಧರಿಸಿರುವವನು.

ನಿರುಕ್ತಿ :– ತಾನ್ಮಾತೃವದ್ಧಾರಯತಿ ಪ್ರಾಣಧೃತ್ಸ ಸ್ಮೃತೋ ಬುಧೈಃ ll

962) **ಸ. ಸಂ. :– ಪ್ರಾಣಭೃತ್** = ಪ್ರಾಣಗಳನ್ನು ಅಥವಾ ಇಂದ್ರಿಯಗಳನ್ನು ಭರಿಸುವವನು.

* * *

962) **ಪ್ರಾಣಜೀವನಃ**=ಪ್ರಾಣಗಳಿಗೆ ಚೈತನ್ಯವಾಗಿರುವವನು. ಪ್ರಾಣಕ್ಕೂ ಚೈತನ್ಯವಾಗಿರುವುದರಿಂದ ಪ್ರಾಣಗಳನ್ನೂ ಮತ್ತು ಅವುಗಳ ಮೂಲಕ ಪ್ರಾಣಿಗಳನ್ನೂ ಜೀವಂತರನ್ನಾಗಿ ಮಾಡುವವನು.

ಶಂ. ಭಾ. :– ಪ್ರಾಣಗಳೆಂಬ ವಾಯುಗಳಿಂದ ಪ್ರಾಣಿಗಳನ್ನು ಜೀವಂತರನ್ನಾಗಿ ಇರಿಸುವವನು. (ಇವನಿಂದಲೇ ಪ್ರಾಣಿಗಳು ನಿಜವಾಗಿಯೂ ಮೌಲಿಕವಾಗಿ ಬದುಕಿರುವುದು.) **ನ ಪ್ರಾಣೇನ ನಾಪಾನೇನ ಮರ್ತ್ಯೋ ಜೀವತಿ ಕಶ್ಚನ lಇತರೇಣ ತು ಜೀವನ್ತಿ ಯಸ್ಮಿನ್ನೇತಾವುಪಾಶ್ರಿತೌ** (ಕಠ. ಉ. ೫-೫)

962) **ಪ. ಭ. :–** ಅನ್ನ-ಪಾನಾದಿಗಳಂತೆ ಭಕ್ತಜೀವಗಳನ್ನು ಬದುಕಿಸುವವನು.

ನಿರುಕ್ತಿ :– ಜೀವಯತ್ಯನ್ನವಜ್ಜೀವಾನ್ ಸ ಉಕ್ತಃ ಪ್ರಾಣಜೀವನಃ ll

963) **ಸ. ಸಂ. :–** ಮುಖ್ಯಪ್ರಾಣನಿಂದ ಜನರನ್ನು ಬದುಕಿಸುವವನು. (ಜೀವಂತರನ್ನಾಗಿಸುವವನು.)

* * *

963) **ತತ್ತ್ವಂ :** ಸತ್‌ಸ್ವರೂಪನು. ಎಲ್ಲದರ ಸಾರಾಂಶವಾಗಿರುವವನು.

ಶಂ. ಭಾ. :– ಪಾರಮಾರ್ಥಿಕಸತ್ಸ್ವರೂಪವು. (ಅಮೃತ, ಸತ್ಯ, ಪರಮಾರ್ಥತತ್ತ್ವ–ಇವೆಲ್ಲವೂ ಸತ್ಸ್ವರೂಪವಾದ ಪರಬ್ರಹ್ಮಕ್ಕೇ ವಾಚಕ ಗಳು.)

963) **ಪ. ಭ. :–** (ಚಿತ್ ಮತ್ತು ಅಚಿತ್ತುಗಳನ್ನು ವ್ಯಾಪಿಸಿ ಅವು

ಗಳಿಗೆ ಪ್ರಯೋಜನವಾಗಿರುವುದರಿಂದ) ಚಿದಚಿದಾತ್ಮಕವಾಗಿರುವ ಇಡೀ ಜಗತ್ತಿಗೆ ಸಾರಾಂಶವಾಗಿರುವವನು. **ಏಕತೋ ವಾ ಜಗತ್ಕೃತ್ಸ್ನಂ ಏಕತೋ ವಾ ಜನಾರ್ದನಃ । ಸಾರತೋ ಜಗತಃ ಕೃತ್ಸ್ನಾದತಿರಿಕ್ತೋ ಜನಾರ್ದನಃ ॥**

ನಿರುಕ್ತಿ :– **ಸಾರಾಂಶಭೂತೋ ಜಗತೋ ಯೋಽಸೌ ತತ್ತ್ವಮಿತಿ ಸ್ಮೃತಃ**

964) **ಸ. ಸಂ. :–** ಗುಣಗಳಿಂದ ವಿಸ್ತಾರಗೊಂಡವನು ; ಎಲ್ಲಕ್ಕೂ ಸತ್ತೆಯನ್ನು ಕೊಡುವವನು. **ವದನ್ತಿ ತತ್ತತ್ತ್ವವಿದಸ್ತತ್ತ್ವಂ ಯಜ್ಜ್ಞಾನಮದ್ವಯಮ್ । ಬ್ರಹ್ಮೇತಿ ಪರಮಾತ್ಮೇತಿ ಭಗವಾನಿತಿ ಶಬ್ದ್ಯತೇ** (ಭಾಗವತ) ಅನಾರೋಪಿತವಾದ ನಿಜಸ್ವರೂಪವು.

* * *

964) **ತತ್ತ್ವವಿತ್** = ಸ್ವರೂಪವನ್ನು ಯಥಾವತ್ತಾಗಿ ಅರಿತವನು.

ಶಂ. ಭಾ. :– ಸ್ವರೂಪವನ್ನು ಯಥಾವತ್ತಾಗಿ ತಿಳಿದಿರುವವನು.

964) **ಪ. ಭ. :–** ತನ್ನ ಆತ್ಮತತ್ತ್ವವನ್ನು ತಿಳಿದಿರುವವನು.

ನಿರುಕ್ತಿ :– **ವೇತ್ತಿ ಯಃ ಸ್ವಾತ್ಮನಸ್ತತ್ತ್ವಂ ತತ್ತ್ವವಿತ್ಸ ಚ ಕಥ್ಯತೇ ।**

965) **ಸ. ಸಂ. :–** ಸ್ವಸ್ವರೂಪವನ್ನರಿತವನು.

* * *

965) **ಏಕಾತ್ಮಾ** = ಕೇವಲಾತ್ಮನು ; ಪರಮಾತ್ಮನು ; ಅದ್ವಿತೀಯನಾದ ಆತ್ಮನು.

ಶಂ. ಭಾ. :– ಏಕಮಾತ್ರವಾದ ಆತ್ಮನು. **ಆತ್ಮಾ ವಾ ಇದಮೇಕ ಏವಾಗ್ರ ಆಸೀತ್** (ಐ. ೧-೧)

965) **ಪ. ಭ. :–** ಸಮಸ್ತವಾದ ಚಿತ್-ಅಚಿತ್ತುಗಳ ವರ್ಗಕ್ಕೆ ತಾನೊಬ್ಬನೇ ಶೇಷಿಯೂ, ಭೋಕ್ತೃವೂ, ಅಭಿಮಾನಿಯೂ ಆಗಿರುವವನು.

ನಿರುಕ್ತಿ :– **ಶೇಷೀ ಭೋಕ್ತಾಭಿಮಾನೀ ಚ ಏಕಶ್ಚಿದಚಿತೋಽಸ್ತು ಯಃ ।**
ಏಕಾತ್ಮೇತಿ ಸ ಸಪ್ತಾರ್ಣಃ ಸರ್ವಪ್ರಾಣಪ್ರದೋ ಮನುಃ ॥

'**ಓಂ ಏಕಾತ್ಮನೇ ನಮಃ**'–ಎಂಬ ನಾಮಮಂತ್ರಜಪವು ಸಕಲ ಪ್ರಾಣಗಳನ್ನೂ (ಬಲಗಳನ್ನೂ) ಕೊಡುತ್ತದೆ.

966) **ಸ. ಸಂ. :–** ಮುಖ್ಯನಾದ ಸ್ವಾಮಿಯು.

* * *

966) **ಜನ್ಮಮೃತ್ಯುಜರಾತಿಗಃ** = ಹುಟ್ಟು, ಸಾವು, ಮುಪ್ಪು ಮುಂತಾದ ಸರ್ವವಿಕಾರಗಳನ್ನೂ ಮೀರಿದವನು.

ಶಂ. ಭಾ. :– ಹುಟ್ಟುವಿಕೆ, ಇರುವಿಕೆ, ವೃದ್ಧಿಹೊಂದುವಿಕೆ, ಪರಿಣಾಮ ಹೊಂದುವಿಕೆ, ಕ್ಷೀಣನಾಗುವಿಕೆ, ನಾಶಹೊಂದುವಿಕೆ–ಎಂಬೀ ಆರು ಭಾವ ವಿಕಾರಗಳನ್ನೂ ದಾಟಿಹೋಗುವವನು. **ನ ಜಾಯತೇ ಮ್ರಿಯತೇ ವಾ ವಿಪಶ್ಚಿತ್ ನಾಯಂ ಕುತಶ್ಚಿನ್ನ ಬಭೂವ ಕಶ್ಚಿತ I** (ಕ. ಉ. ೧-೨-೧೮)

966) **ಪ. ಭ. :–**ಚಿತ್-ಅಚಿತ್ತುಗಳ ಧರ್ಮಗಳಿಂದ ರಹಿತನಾದವನು. ನಿರುಕ್ತಿ :– **ಚಿದಚಿದ್ಧರ್ಮಹೀನೋ ಯೋ ಜನ್ಮಮೃತ್ಯುಜರಾತಿಗಃ II**

967) **ಸ. ಸಂ. :–** ಹುಟ್ಟು-ಸಾವು-ಮುಪ್ಪುಗಳೇ ಮುಂತಾದ ಎಲ್ಲ ದೋಷಗಳನ್ನೂ ಮೀರಿರುವವನು.

* * *

ಭೂರ್ಭುವಃಸ್ವಸ್ತರುಸ್ತಾರಃ ಸವಿತಾ ಪ್ರಪಿತಾಮಹಃ I
ಯಜ್ಞೋ ಯಜ್ಞಪತಿರ್ಯಜ್ವಾ ಯಜ್ಞಾಙ್ಗೋ ಯಜ್ಞವಾಹನಃ II

967) **ಭೂರ್ಭುವಃಸ್ವಸ್ತರುಃ** = ಸರ್ವಾಶ್ರಯವಾದ ವ್ಯಾಹೃತಿತ್ರಯ ವೆಂಬ ಮತ್ತು ಜಗತ್ರಯವೆಂಬ ವೃಕ್ಷರೂಪಿಯು. **ಅಕಾರಂ ಚಾಪ್ಯುಕಾರಂ ಚ ಮಕಾರಂ ಚ ಪ್ರಜಾಪತಿಃ I ವೇದತ್ರಯಾನ್ನಿರದುಹದ್ಭೂರ್ಭುವಃ ಸ್ವರಿತೀತಿ ಚ II** (ಮನು. ೨-೭೬) ವಿಶ್ವವೃಕ್ಷಸ್ವರೂಪಿಯು.

ಶಂ. ಭಾ. :– ವೇದಗಳ ಸಾರವೆಂದು (ಋಗ್ವೇದದಲ್ಲಿ) ಹೇಳಲ್ಪಟ್ಟಿ ರುವ ಭೂರ್ಭುವಸ್ಸುವರ್ಗಳೆಂಬ ಮೂರು ವ್ಯಾಹೃತಿರೂಪಗಳ ಮೂಲಕ (ಅವುಗಳಿಂದ ಹೋಮಮಾಡುವಿಕೆ ಇತ್ಯಾದಿಗಳಿಂದ) ಮೂರು ಲೋಕ ಗಳನ್ನೂ (ಮೂರು ಲೋಕಗಳ ಪ್ರಜೆಗಳನ್ನೂ) ದಾಟಿಸುವವನು ಅಥವಾ ತೇಲಿಸುವವನು. **ಅಗ್ನೌ ಪ್ರಾಸ್ತಾಹುತಿಃ ಸಮ್ಯಗಾದಿತ್ಯಮುಪತಿಷ್ಠತೇ I**

ಆದಿತ್ಯಾಜ್ಜಾಯತೇ ವೃಷ್ಟಿರ್ವೃಷ್ಟೇರನ್ನಂ ತತಃ ಪ್ರಜಾಃ । (ಮನು ೩-೭೬) ಭೂಃ-ಭುವಃ-ಸುವಃಗಳೆಂಬ ಲೋಕತ್ರಯರೂಪವಾದ ಸಂಸಾರವೃಕ್ಷವು. ಆ ಮೂರು ಲೋಕಗಳನ್ನೂ ವೃಕ್ಷದಂತೆ ವ್ಯಾಪಿಸಿಕೊಂಡಿರುವವನು.

967) **ಪ. ಭ. :–** ಮಹಾವೃಕ್ಷವು ಪಕ್ಷಿಗಳಿಗೂ ಪಥಿಕರಿಗೂ ಆಶ್ರಯ ವಾಗಿರುವಂತೆ–'ಭೂಃ-ಭುವಃ-ಸುವಃ'ಗಳಿಂದ ಸೂಚಿತವಾದ ಸಮಸ್ತಜೀವ ಗಳಿಗೂ ಆಶ್ರಯನಾಗಿರುವವನು.

ನಿರುಕ್ತಿ :– **ಭೂರಾದಿಭಿರ್ಲಕ್ಷಿತಾನಾಂ ಜೀವಾನಾಂ ಯಃ ಸಮಾಶ್ರಯಃ**
ಭೂರ್ಭುವಃಸ್ವಸ್ತರುಃ ಸ ಸ್ಯಾದ್ದಶಾರ್ಣಃ ಸರ್ವದೋ ಮನುಃ ॥

'**ಓಂ ಭೂರ್ಭುವಃಸ್ವಸ್ತರವೇ ನಮಃ**'–ಎಂಬ ಈ ನಾಮಮಂತ್ರ ಜಪವು ಸಕಲೇಷ್ಟಾರ್ಥಗಳನ್ನೂ ಕೊಡುತ್ತದೆ.

968) **ಸ. ಸಂ. :–** ಪೂರ್ಣನೂ, ಐಶ್ವರ್ಯದಿಂದ ಶ್ರೇಷ್ಠನೂ, ಅನಂತ ಸುಖನೂ ಆಗಿರುವವನು. ಸ್ವಸ್ತರುಃ = ಕಲ್ಪವೃಕ್ಷಸದೃಶನು. ಮಹಾವ್ಯಾಹೃತಿ ಸ್ವರೂಪನೂ ವೃಕ್ಷಸದೃಶನೂ ಆಗಿರುವವನು. ಸ್ವಃ= ಅನಂತಸುಖನು. ತರುಃ = ದಾಟುವವನು. **ಪೂರ್ಣೋ ಭೂತಿವರೋಽನನ್ತಸುಖೋ ಯದ್ವಾ್ಯಹೃತೀರಿತಃ** (ಋಗ್ಭಾಷ್ಯ)

* * *

968) **ತಾರಃ** = ಪ್ರಣವಸ್ವರೂಪಿಯು. ವಾಚಕವಾದ ಪ್ರಣವಕ್ಕೂ ವಾಚ್ಯವಾದ ಪರಮಾತ್ಮನಿಗೂ ಅಭೇದವನ್ನು ಹೇಳಿದೆ. ವಾಚಕವನ್ನು ಅರಿತರೆ ವಾಚ್ಯವು ಪ್ರಸನ್ನವಾಗುತ್ತದೆ. **ವಾಚಕೇಽಪಿ ಚ ವಿಜ್ಞಾತೇ ವಾಚ್ಯ ಏವ ಪ್ರಸೀದತಿ ।**

ಶಂ. ಭಾ. :– ಸಂಸಾರಸಾಗರದಿಂದ ದಾಟಿಸುವವನು ; ಪ್ರಣವಸ್ವರೂಪಿಯು.

968) **ಪ. ಭ. :–** ಭಕ್ತಜೀವಗಳನ್ನು ಸಂಸಾರದಿಂದ ಪಾರುಮಾಡಿಸು ವವನು.

ನಿರುಕ್ತಿ :– **ಸಂಸಾರತಾರಣಾತ್ತೇಷಾಂ ತಾರಃ ಸ್ಯಾತ್ಪ್ರಾಣಿನಾಂ ಸದಾ ॥**

969) **ಸ. ಸಂ. :–** ಓಂಕಾರವು (**ಅಯಂ ವೈ ಲೋಕಃ ಪ್ರಥಮಾ**

ಮಹಾನಾಮ್ನೀ–ಇತ್ಯಾದಿ ಉದಾಹರಣೆಗಳಂತೆ ವಾಚ್ಯ ಮತ್ತು ವಾಚಕಗಳಿಗೆ ಅಭೇದವನ್ನು ಗ್ರಹಿಸಬೇಕು. ಪ್ರಣವವು ವಾಚಕ ; ಪರಮಾತ್ಮನು ವಾಚ್ಯ.)

* * *

969) **ಸವಿತಾ = ಜಗತ್ತನ್ನು ಪ್ರಸವಿಸುವವನು ; ಬುದ್ಧಿಯೇ ಮುಂತಾದುವುಗಳನ್ನು ಪ್ರೇರಿಸುವವನು ; ಅನುಮತಿಸುವವನು.**

ಶಂ. ಭಾ. :– ಸಮಸ್ತಲೋಕಗಳ ಜನಕನು.

969) **ಪ. ಭ. :– ಎಲ್ಲರಿಗೂ ಸಾಕ್ಷಾತ್ತಾಗಿ ಜನಕನಾಗಿರುವವನು. ನಿರುಕ್ತಿ :– ಸಾಕ್ಷಾಜ್ಜನಯಿತಾ ಯೋಽಸೌ ಸರ್ವಸ್ಯ ಸವಿತಾ ಸ್ಮೃತಃ ।**

970) **ಸ. ಸಂ. : (ಸ) ಪಿತಾಪ್ರಪಿತಾಮಹಃ = ಸರ್ವಜನರಿಗೂ ಪ್ರಪಿತಾಮಹನೂ ಬ್ರಹ್ಮನಿಗೆ ತಂದೆಯೂ ಆಗಿರುವವನು. ಪತಿತ್ವೇನ ಶ್ರಿಯೋಪಾಸ್ಯೋ ಬ್ರಹ್ಮಣಾ ಮತ್ಪಿತೇತಿ ಚ । ಪಿತಾಮಹಸ್ತಥಾ ನ್ಯೇಷಾಂ ತ್ರಿದಶಾನಾಂ ಜನಾರ್ದನಃ । ಪ್ರಪಿತಾಮಹೋ ಮೇ ಭಗವಾನಿಹ ಸರ್ವಜನಸ್ಯ ಚ (ವಾರಾಹ) ಸವಿತಾ = ಗುಣಗಳಿಂದ ವಿಸ್ತಾರಗೊಂಡವನು; ಸೃಷ್ಟಿಕರ್ತನು. ಪ್ರಪಿತಾಮಹಃ = ಲೋಕಜನರಿಗೆ ಮುತ್ತಜ್ಜನಾಗಿರುವವನು.**

* * *

970) **ಪ್ರಪಿತಾಮಹಃ = ಪಿತಾಮಹನಾದ ಬ್ರಹ್ಮದೇವನಿಗೂ ತಂದೆ ಯಾದವನು.**

ಶಂ. ಭಾ. :– ಪಿತಾಮಹನಾದ ಬ್ರಹ್ಮದೇವನಿಗೂ ತಂದೆಯಾಗಿರು ವವನು.

970) **ಪ. ಭ. :– ಪಿತಾಮಹ (ಬ್ರಹ್ಮ) ನಿಗೂ ತಂದೆಯಾದವನು. ನಿರುಕ್ತಿ :– ಪಿತಾಮಹಸ್ಯ ಜನಕಃ ಪ್ರಪಿತಾಮಹ ಉಚ್ಯತೇ ॥**

* * *

971) **ಯಜ್ಞಃ = ಯಜ್ಞಸ್ವರೂಪಿಯು. ಯಜ್ಞೋ ವೈ ವಿಷ್ಣುಃ। ಯಜ್ಞೇನ ಯಜ್ಞಮಯಜನ್ತ ದೇವಾಃ (ಪು. ಸೂ.) ಯಜ್ಞದಿಂದ ಪೂಜಿಸಲ್ಪಡಬೇಕಾದವನು.**

ಶಂ. ಭಾ. :– ಯಜ್ಞಾತ್ಮಕನು.

971) ಪ. ಭ. :– ಜಪಯಜ್ಞಸ್ವರೂಪನು. ಯಜ್ಞಾನಾಂ ಜಪ ಯಜ್ಞೋಽಸ್ಮಿ । (ಗೀತಾ)
ನಿರುಕ್ತಿ :– ಜಪಯಜ್ಞಸ್ವರೂಪತ್ವಾದ್ಯಜ್ಯ ಇತ್ಯುಚ್ಯತೇ ಬುಧೈಃ ॥

971) ಸ. ಸಂ. :– ಯಜ್ಞಭೋಕ್ತೃವು ; ಯಾಜ್ಯನಾದವನು.

* * *

972) ಯಜ್ಞಪತಿಃ = ಯಜ್ಞಗಳ ಸ್ವಾಮಿಯು ; ಯಜ್ಞಸಂರಕ್ಷಕನು.

ಶಂ. ಭಾ. :– ಯಜ್ಞಗಳ ರಕ್ಷಕನು ; ಯಜ್ಞಗಳ ಸ್ವಾಮಿಯು. ಅಹಂ ಹಿ ಸರ್ವಯಜ್ಞಾನಾಂ ಭೋಕ್ತಾ ಚ ಪ್ರಭುರೇವ ಚ । (ಗೀತಾ ೯-೨೪)

972) ಪ. ಭ. :– ಯಜ್ಞದ ಫಲವನ್ನು ಕೊಡುವವನು.
ನಿರುಕ್ತಿ :– ಯಜ್ಞಸ್ಯ ಫಲದೋ ಯಸ್ಮಾತ್ತಸ್ಮಾದ್ಯಜ್ಞಪತಿಃ ಸ್ಮೃತಃ ॥

972) ಸ. ಸಂ. :– ಯಜ್ಞಗಳಿಗೆ ಸ್ವಾಮಿಯು ಅಥವಾ ಪೋಷಕನು.

* * *

973) ಯಜ್ವಾ = ಯಜಮಾನಸ್ವರೂಪಿಯು ; ಸೃಷ್ಟಿ-ಸ್ಥಿತಿ-ಲಯ ಗಳೆಂಬ ವಿಶ್ವಯಜ್ಞವನ್ನು ಮಾಡುತ್ತಿರುವವನು. ಯ ಇಮಾ ವಿಶ್ವಾ ಭುವನಾನಿ ಜುಹ್ವದೃಷಿರ್ಹೋತಾ ನಿಷಸಾದಾ ಪಿತಾ ನಃ । (ವಿಶ್ವಕರ್ಮ ಸೂಕ್ತ) ಶ್ರೀರಾಮಾದಿ ರೂಪಗಳಲ್ಲಿ ಯಜ್ಞಗಳನ್ನು ಮಾಡಿದವನು.

ಶಂ. ಭಾ. :– ಯಜಮಾನನ ರೂಪದಲ್ಲಿರುವವನು.

973) ಪ. ಭ. :– ಭಕ್ತರು ಯಜ್ಞಮಾಡಲು ಅಶಕ್ತರಾಗಿದ್ದರೆ ಅವರ ಯಜ್ಞಗಳನ್ನು ತಾನೇ ಮಾಡುವವನು. ತೇಷಾಂ ತು ಪಾವನಾಯಾಹಂ ನಿತ್ಯಮೇವ ಯುಧಿಷ್ಠಿರ । ಉಭೇ ಸಂಧ್ಯೇನುಽತಿಷ್ಠಾಮಿ ಹ್ಯಸ್ಕನ್ನಂ ತದ್ವ್ರತಂ ಮಮ ॥ (ಮಹಾಭಾರತ-ಆಶ್ವಮೇಧಿಕಪರ್ವ-ವೈಷ್ಣವಧರ್ಮ)
ನಿರುಕ್ತಿ :– ಅಶಕ್ತೌ ತು ಸ್ವಯಂ ಯಷ್ಟಾ ತಂ ಯಜ್ವೇತಿ ಪ್ರಚಕ್ಷತೇ ॥

973) ಸ. ಸಂ. :– ಯಜ್ಞಮಾಡುವವನು.

* * *

974) ಯಜ್ಞಾಙ್ಗಃ = ಯಜ್ಞದ ಅಂಗಗಳೂ ತಾನೇ ಆಗಿರುವವನು.

ಯಜ್ಞಗಳನ್ನು ತನ್ನ ಅಂಗಗಳನ್ನಾಗಿ ಹೊಂದಿರುವ ಯಜ್ಞವರಾಹ ಮೂರ್ತಿಯು.

ಶಂ. ಭಾ. :– ಯಜ್ಞಗಳನ್ನು ಅಂಗಗಳನ್ನಾಗಿ ಹೊಂದಿರುವ ಯಜ್ಞ ವರಾಹಸ್ವಾಮಿಯು. **ವೇದಪಾದೋ ಯೂಪದಂಷ್ಟ್ರಃ ಕ್ರತುಹಸ್ತಶ್ಚಿತೀಮುಖಃ । ಅಗ್ನಿಜಿಹ್ವೋ ದರ್ಭರೋಮಾ ಬ್ರಹ್ಮಶೀರ್ಷೋ ಮಹಾತಪಾಃ ॥** (ಹರಿವಂಶ ೩-೩೪, ೩೪ ರಿಂದ ೪೧)

974) **ಪ. ಭ. :–** (ಯಜ್ಞಮಾಡಲು) ಸಮರ್ಥರಾದವರು ಆಚರಿಸಿದ ಇತರ ಯಜ್ಞಗಳೂ ಯಾವನಿಗೆ ಶೇಷಭೂತವಾಗಿವೆಯೋ–ಅವನು.
ನಿರುಕ್ತಿ :– ಶೇಷಃ ಶಕ್ತಕೃತೋ ಯಜ್ಞೋಽಪ್ಯಸ್ಯ ಯಜ್ಞಾಙ್ಗ ಉಚ್ಯತೇ ॥

974) **ಸ. ಸಂ. :–** ಯಜ್ಞಕ್ಕೆ ಉದ್ದೇಶವಾಗಿರುವವನು.

* * *

975) **ಯಜ್ಞವಾಹನಃ** = ಯಜ್ಞವನ್ನು ವಾಹನವನ್ನಾಗಿ ಹೊಂದಿರುವವನು ; ಯಜ್ಞದ ಮೂಲಕವಾಗಿ ಭಕ್ತರ ಬಳಿಗೆ ಬಂದು ಅವರೊಡನೆ ಸ್ವಧಾಮಕ್ಕೆ ಪ್ರಯಾಣಮಾಡುವವನು ; ಋತ-ಸತ್ಯಸ್ವರೂಪಿಯು ; ಯಜ್ಞಗಳನ್ನು ನಡೆಸಿಕೊಡುವವನು.

ಶಂ. ಭಾ. :– ಫಲಕ್ಕೆ ಕಾರಣವಾದ ಯಜ್ಞಗಳನ್ನು ಮಾಡುವಂತೆ ಪ್ರೇರೇಪಿಸುವವನು. (ಫಲಕ್ಕೆ ಸಾಗಿಸುವವನು.)

975) **ಪ. ಭ. :–** ಯಜ್ಞಮಾಡುವ ಭಕ್ತರಿಗೆ ಶಕ್ತಿ, ಶ್ರದ್ಧೆ, ಅಧಿಕಾರಾದಿಗಳನ್ನು ಅನುಗ್ರಹಿಸಿ ಯಜ್ಞವನ್ನು ನಡೆಸುವವನು.
ನಿರುಕ್ತಿ :– ತೇಷಾಂ ಶ್ರದ್ಧಾಧಿಕಾರಾದಿದಾನಾತ್ಸ್ಯಾದ್ಯಜ್ಞವಾಹನಃ ॥

975) **ಸ. ಸಂ. :–** ಯಜ್ಞವನ್ನು ಯಾರು ನಿರ್ವಹಿಸುತ್ತಾರೆಯೋ–ಅವರನ್ನು ಒಯ್ಯುವವನು.

* * *

ಯಜ್ಞಭೃದ್ಯಜ್ಞಕೃದ್ಯಜ್ಞೀ ಯಜ್ಞಭುಗ್ಯಜ್ಞಸಾಧನಃ ।
ಯಜ್ಞಾನ್ತಕೃದ್ಯಜ್ಞಗುಹ್ಯಮನ್ನಮನ್ನಾದ ಏವ ಚ ॥೧೧೮॥

976) **ಯಜ್ಞಭೃತ್** = ಯಜ್ಞವನ್ನು ಧರಿಸಿ ರಕ್ಷಿಸುವವನು.

ಶಂ. ಭಾ. :– ಯಜ್ಞವನ್ನು ಧರಿಸುವವನು ಅಥವಾ ರಕ್ಷಿಸುವವನು.

976) **ಪ. ಭ. :–** ಯಜ್ಞವು ವಿಫಲವಾಗಿದ್ದರೂ ತನ್ನ ಸ್ಮರಣೆ ಮತ್ತು ಪೂರ್ಣಾಹುತಿಗಳಿಂದ ಅದನ್ನು ಪೋಷಿಸುವವನು.

ನಿರುಕ್ತಿ :– **ಪೂರ್ಣಾಹುತಿಸ್ವಸ್ಮೃತಿಭ್ಯಾಂ ವಿಫಲಂ ಯಜ್ಞಮಪ್ಯುತ ।**
ಪುಷ್ಣಾತಿ ಯಜ್ಞಭೃತ್ಸ ಸ್ಯಾತ್ಸಪ್ತಾರ್ಣೋ ಮನುರುತ್ತಮಃ ॥

976) **ಸ. ಸಂ. :–** ಯಜ್ಞವನ್ನು ಭರಿಸುವವನು.

* * *

977) **ಯಜ್ಞಕೃತ್** = ಪ್ರಪಂಚದ ಸೃಷ್ಟಿ-ಸ್ಥಿತಿ-ಲಯರೂಪವಾದ ಯಜ್ಞ ವನ್ನು ಮಾಡುವವನು ; ರಾಮಾದ್ಯವತಾರಗಳಲ್ಲಿ ಯಜ್ಞವನ್ನು ಮಾಡು ವವನು.

ಶಂ. ಭಾ. :– ಜಗತ್ತಿನ ಆರಂಭ ಮತ್ತು ಅಂತ್ಯಗಳಲ್ಲಿ ಯಜ್ಞವನ್ನು ಮಾಡುವವನು ಅಥವಾ ಯಜ್ಞವನ್ನು ಕತ್ತರಿಸುವವನು.

977) **ಪ. ಭ. :–** ಜಗತ್ತಿನ ಹಿತಕ್ಕೋಸ್ಕರವಾಗಿ ಸೃಷ್ಟಿಯ ಆರಂಭದಲ್ಲಿ ಯಜ್ಞವನ್ನು ಮಾಡಿದವನು.

ನಿರುಕ್ತಿ :– **ಜಗದ್ಧಿತಾಯ ಕೃತವಾನ್ಯಜ್ಞಮಾದೌ ಸ ಯಜ್ಞಕೃತ್ ।**

977) **ಸ. ಸಂ. :–** ಯಜ್ಞವನ್ನು ಮಾಡುವವನು. ವಿಜ್ಞಾನಂ ಯಜ್ಞಂ **ತನುತೇ । ಕರ್ಮಾಣಿ ತನುತೇಽಪಿ ಚ (ತೈ. ಉ.)**

* * *

978) **ಯಜ್ಞೀ** = ಯಜ್ಞಗಳನ್ನುಳ್ಳವನು ; ಯಜ್ಞಕ್ಕೆ ಶೇಷಿಯಾಗಿರು ವವನು ; ಯಜ್ಞಗಳು ಯಾವನ ಪ್ರಯೋಜನಕ್ಕಾಗಿ ಇವೆಯೋ–ಅವನು.

ಶಂ. ಭಾ. :– ತನ್ನ ಆರಾಧನಾತ್ಮಕವಾದ ಯಜ್ಞಗಳಿಗೆ ಶೇಷಿಯಾಗಿರು ವವನು. (ಅಂತಹ ಯಜ್ಞಗಳು ಇರುವುದು ಅವನ ಪ್ರಯೋಜನ ಕ್ಕೋಸ್ಕರವೇ)

978) **ಪ. ಭ. :–** ಸಮಸ್ತಯಜ್ಞಗಳಿಗೂ ಶೇಷಿಯಾಗಿರುವವನು.

ನಿರುಕ್ತಿ :– ಯಃ ಸರ್ವೇಷಾಂ ತು ಯಜ್ಞಾನಾಂ ಶೇಷೀ ಯಜ್ಞೀತಿ ಕಥ್ಯತೇ ॥

978) **ಸ. ಸಂ. :–** ಯಜ್ಞವನ್ನುಳ್ಳವನು.

* * *

979) **ಯಜ್ಞಭುಕ್** = ಯಜ್ಞವನ್ನು ಅನುಭವಿಸುವವನು ಅಥವಾ ರಕ್ಷಿಸುವವನು.

ಶಂ. ಭಾ. :– ಯಜ್ಞವನ್ನು ಭೋಗಿಸುವವನು ಅಥವಾ ರಕ್ಷಿಸುವವನು.

979) **ಪ. ಭ. :–** ಯಜ್ಞಗಳನ್ನು ಭುಜಿಸುವವನು ಅಥವಾ ರಕ್ಷಿಸುವವನು.

ನಿರುಕ್ತಿ :– ಭುನಕ್ತಿ ಭುಙ್ಕ್ತೇ ಯಜ್ಞಾನ್ಯಃ ಯಜ್ಞಭುಕ್ಸ ಚ ಕಥ್ಯತೇ ॥

979) **ಸ. ಸಂ. :–** ಯಜ್ಞವನ್ನು ಭುಂಜಿಸುವವನು ಅಥವಾ ಭೋಜನ ಮಾಡಿಸುವವನು.

* * *

980) **ಯಜ್ಞಸಾಧನಃ** = ಯಜ್ಞದ ಉಪಕರಣಗಳೂ ತಾನೇ ಆಗಿರುವವನು ; ಯಜ್ಞಗಳು ಯಾವನನ್ನು ಹೊಂದಲು ಸಾಧನಗಳಾಗಿವೆಯೋ– ಅವನು.

ಶಂ. ಭಾ. :– ಯಜ್ಞಗಳು ಯಾವನ ಪ್ರಾಪ್ತಿಗೆ ಸಾಧನಗಳಾಗಿವೆಯೋ– ಅವನು.

980) **ಪ. ಭ. :–** ಯಜ್ಞಗಳು ಜ್ಞಾನದ ಮೂಲಕ ಯಾವನ ಸಿದ್ಧಿಗೆ ಉಪಾಯವಾಗಿವೆಯೋ–ಅವನು.

ನಿರುಕ್ತಿ :– ಜ್ಞಾನದ್ವಾರಾ ಸಿದ್ಧ್ಯುಪಾಯೋ ಯಃ ಸ ಸ್ಯಾದ್ಯಜ್ಞ ಸಾಧನಃ ॥

980) **ಸ. ಸಂ. :–** ಯಜ್ಞಕ್ಕೆ ಸಾಧನವಾದ ಸ್ರುಕ್, ಸ್ರುವಗಳೇ ಮುಂತಾದುವುಗಳೂ–ಮಂತ್ರಗಳೂ ಯಾವನಿಂದ ಉಂಟಾಗುತ್ತವೆಯೋ– ಅವನು.

* * *

981) **ಯಜ್ಞಾನ್ತಕೃತ್** = ಯಜ್ಞದ ಫಲವನ್ನು ಕೊಡುವವನು ;

ಪೂರ್ಣಗೊಳಿಸುವವನು ; ಅವಿಧಿಪೂರ್ವಕವಾದ ಯಜ್ಞವನ್ನು ಧ್ವಂಸಮಾಡು ವವನು ; ಸೃಷ್ಟಿ-ಸ್ಥಿತಿ-ಯಜ್ಞಗಳನ್ನು ಪ್ರಳಯಕಾಲದಲ್ಲಿ ಧ್ವಂಸಮಾಡುವವನು.

ಶಂ. ಭಾ. :– ಯಜ್ಞದ ಫಲಪ್ರಾಪ್ತಿಯನ್ನು ಉಂಟುಮಾಡುವವನು ; ವೈಷ್ಣವಿಯಾದ ಋಕ್ಕನ್ನು ಉಚ್ಚರಿಸುವುದರಿಂದ ಅಥವಾ ಪೂರ್ಣಾಹುತಿ ಯಿಂದ ಪೂರ್ಣಗೊಳಿಸಿ ಯಜ್ಞಸಮಾಪ್ತಿಯನ್ನು ಮಾಡುವವನು.

981) **ಪ. ಭ. :–** ತನ್ನ ತತ್ತ್ವಜ್ಞಾನವೆಂಬ ಫಲದಿಂದ ಯಜ್ಞವನ್ನು ಸಮಾಪ್ತಿಗೊಳಿಸುವವನು ; ತನ್ನ ತತ್ತ್ವಜ್ಞಾನದಿಂದ ಕ್ಷಣಮಾತ್ರದಲ್ಲಿ ಯಜ್ಞದ ಫಲವು ದೊರೆಯುವಂತೆ ಮಾಡುವವನು.

ನಿರುಕ್ತಿ **:– ಸಮಾಪ್ತಿಂ ಚೈವ ಯಜ್ಞಾನಾಂ ಸ್ವತತ್ತ್ವಜ್ಞಾನತಃ ಕ್ಷಣಾತ್ ।**
ನಿರಪೇಕ್ಷಂ ಯಃ ಕರೋತಿ ಸ ಯಜ್ಞಾನ್ತಕೃದುಚ್ಯತೇ ॥

981) **ಸ. ಸಂ. :–** ಯಜ್ಞದ ನಿರ್ಣಯವನ್ನು ಮಾಡುವವನು ; ಯಜ್ಞ ಗಳನ್ನು ನಾಶಮಾಡುತ್ತಿದ್ದ ಸುಬಾಹು-ಮಾರೀಚಾದಿಗಳನ್ನು ಸಂಹರಿಸಿದವನು.

* * *

982) **ಯಜ್ಞಗುಹ್ಯಂ** = ಯಜ್ಞಗಳ ರಹಸ್ಯವಾಗಿರುವವನು.

ಶಂ. ಭಾ. :– ಜ್ಞಾನಯಜ್ಞರೂಪಿಯಾಗಿ ಅಥವಾ ನಿಷ್ಕಾಮಯಜ್ಞ ರೂಪಿಯಾಗಿ ಇರುವವನು.

982) **ಪ. ಭ. :–** ಯಜ್ಞದ ರಹಸ್ಯವಾಗಿರುವವನು. (ಹವಿಸ್ಸುಗಳ ಅಪೇಕ್ಷೆಯಿಲ್ಲದೇ ನಿತ್ಯತೃಪ್ತನಾಗಿದ್ದರೂ ಯಜ್ಞಗಳಲ್ಲಿ ಪುರೋಡಾಶವೇ ಮುಂತಾದುವುಗಳನ್ನು ಭುಜಿಸಿ ತೃಪ್ತಿಗೊಂಡು ಯಜಮಾನರನ್ನು ತೃಪ್ತಿ ಪಡಿಸುತ್ತಾನೆ–ಎಂಬ ರಹಸ್ಯವನ್ನು ಸ್ಥೂಲದೃಷ್ಟಿಯುಳ್ಳವರು ತಿಳಿಯಲಾರರು. ಸೂಕ್ಷ್ಮದೃಷ್ಟಿಯವರು ಮಾತ್ರವೇ ತಿಳಿಯುವ ರಹಸ್ಯವಿದು.) **ವಿದುಃ ಕೃಷ್ಣಂ ಬ್ರಾಹ್ಮಣಾಸ್ತತ್ತ್ವತೋ ಯೇ ತೇಷಾಂ ರಾಜನ್ಸರ್ವ ಯಜ್ಞಾಃ ಸಮಾಪ್ತಾಃ । ಸರ್ವೇ ವೇದಾಃ ಸರ್ವವೇದ್ಯಾಃ ಸಶಾಸ್ತ್ರಾಃ ಸರ್ವೇ ಯಜ್ಞಾಃ ಸರ್ವ ಇಜ್ಯಾಶ್ಚ ಕೃಷ್ಣಃ॥**

ನಿರುಕ್ತಿ : **ಯಸ್ತರ್ಪಯತಿ ಯಜ್ಞೇಷು ನಿತ್ಯತೃಪ್ತೋऽಪ್ಯತೃಪ್ತವತ್ ಪುರೋಡಾಶಾದಿಕಂ ಭುಕ್ತ್ವಾ ತೃಪ್ಯನ್ನನ್ಯಾನ್ವಿಶೇಷತಃ । ತದ್ಯಜ್ಞ ವಿಧಿ ಗತ್ಯಾದಿವಿದ ಏವ ವಿದನ್ತಿ ಹಿ ॥ ನ ಸ್ಥೂಲಬುದ್ಧಯಸ್ತಸ್ಮಾದ್ಯಜ್ಞ ಗುಹ್ಯಮಿತಿ ಸ್ಮೃತಃ ॥**

982) **ಸ. ಸಂ.** :– ಯಜ್ಞ ಮತ್ತು ಗುಹ್ಯ–ಎಂಬ ಹೆಸರುಗಳುಳ್ಳವನು. ವಿಷ್ಣುವನ್ನು ಕುರಿತು ರಹಸ್ಯವಾಗಿ ಯಜ್ಞಮಾಡಬೇಕೆಂದು ಶ್ರುತಿಯು ಹೇಳುತ್ತದೆ. **ವಿಷ್ಣುರುಪಾಂಶುರ್ಯಷ್ಟವ್ಯಃ ।**

* * *

983) **ಅನ್ನಂ** = ಜ್ಞಾನಿಗಳಿಗೆ ಭೋಗ್ಯವಾದ ಪರಮಾನ್ನವಾಗಿರುವವನು. **ತ್ರೈಗುಣ್ಯಂ ಷಡ್ಗುಣಾಢ್ಯಂ ಚ ದ್ವಿಧಾನ್ನಂ ಪರಿಕೀರ್ತಿತಮ್ ॥** ಜ್ಞಾನಿ ಗಳಿಂದ ಅನುಭವಿಸಲ್ಪಡುವವನು ಮತ್ತು ಪ್ರಳಯಕಾಲದಲ್ಲಿ ಎಲ್ಲವನ್ನೂ ತಿಂದುಹಾಕುವವನು. **ಅದ್ಯತೇऽತ್ತಿ ಚ ಭೂತಾನಿ । ತಸ್ಮಾದನ್ನಂ ತದುಚ್ಯತೇ ॥**

ಶಂ. ಭಾ. :– ಭೂತಗಳಿಂದ ತಿನ್ನಲ್ಪಡುವವನು ಮತ್ತು ಭೂತಗಳನ್ನು ತಿಂದುಹಾಕುವವನು.

983) **ಪ. ಭ.** :– ಭೋಕ್ತೃತ್ವಶಕ್ತಿಗಳನ್ನು ಭಗವಂತನ ಅನುಗ್ರಹದಿಂದ ಪಡೆದ ಭಕ್ತರಿಂದ ಸದಾ ಅನುಭವಿಸಲ್ಪಡುವವನು.

ನಿರುಕ್ತಿ :– **ಏವಂ ನಿಷ್ಪಾದಿತಾನನ್ತಭೋಕ್ತೃಶಕ್ತಿಸಮನ್ವಿತೈಃ ।**
ಭುಜ್ಯತೇ ಯಃ ಸದಾ ಕಾಲಂ ಸೋऽನ್ನಮಿತ್ಯುಚ್ಯತೇ ಬುಧೈಃ ॥

983) **ಸ. ಸಂ.** :– ಎಲ್ಲರಿಗೂ ಉಪಜೀವ್ಯನಾಗಿರುವವನು ಮತ್ತು ಎಲ್ಲವನ್ನೂ ತಿಂದುಹಾಕುವವನು.

* * *

984) **ಅನ್ನಾದಃ** = ಅನ್ನವನ್ನು ತಿನ್ನುವವನು ; ಬ್ರಹ್ಮ-ಕ್ಷತ್ರಗಳೆಂಬ ಅನ್ನವನ್ನು ಮೃತ್ಯುವಿನ ಮೇಲೋಗರದೊಡನೆ ತಿಂದುಹಾಕುವವನು.
ಯಸ್ಯ ಬ್ರಹ್ಮ ಚ ಕ್ಷತ್ರಂ ಚ ಉಭೇ ಭವತ ಓದನಃ ॥

ಶಂ. ಭಾ. :– ಅನ್ನವನ್ನು ತಿನ್ನುವವನು. (ಇಡೀ ಜಗತ್ತು ಭೋಕ್ತೃ-

ಭೋಗ್ಯರೂಪವಾಗಿದೆ ಮತ್ತು ಎಲ್ಲ ಹೆಸರುಗಳಿಗೂ ಒಟ್ಟಿಗೆ ವೃತ್ತಿಯಿರುವುದು ಪರಮಾತ್ಮನಲ್ಲಿಯೇ.)

984) **ಪ. ಭ. :–** ಯಾವನು ಎಲ್ಲವನ್ನೂ (ಎಲ್ಲ ಭೋಗ್ಯವಸ್ತುಗಳನ್ನೂ) ತೆಗೆದುಕೊಂಡು ಭೋಜನಮಾಡುವನೋ–ಅವನು ; ಎಲ್ಲ ಜೀವಿಗಳನ್ನೂ ಭೋಗ್ಯವಾಗಿ ಅನುಭವಿಸುವವನು.

ನಿರುಕ್ತಿ :– ಯ ಆದತ್ತೇ ತಥಾ ಭುಙ್ಕ್ತೇ ಸ್ವಯಂ ಸೋऽನ್ನಾದ ಈರಿತಃ ||

984) **ಸ. ಸಂ. :–** ಅನ್ನವನ್ನು ತಿನ್ನುವವನು. ದ್ವಿಜಪತ್ನಿಯರು ಭಕ್ತಿಯಿಂದ ಅರ್ಪಿಸಿದ ಅನ್ನವನ್ನು ತಿಂದವನು.

* * *

ಆತ್ಮಯೋನಿಃ ಸ್ವಯಂಜಾತೋ ವೈಖಾನಃ ಸಾಮಗಾಯನಃ |
ದೇವಕೀನನ್ದನಃ ಸ್ರಷ್ಟಾ ಕ್ಷಿತೀಶಃ ಪಾಪನಾಶನಃ ||೧೧೯||

985) **ಆತ್ಮಯೋನಿಃ** = ತನಗೆ ತಾನೇ ಕಾರಣನಾದವನು ; ಸ್ವಯಂಭುವು.

ಶಂ. ಭಾ. :– ತನಗೆ ತಾನೇ ಉಪಾದಾನಕಾರಣನಾದವನು. ಕಾರಣಾಂತರವಿಲ್ಲದವನು.

985) **ಪ. ಭ. :–** ಹಾಲಿನೊಡನೆ ಸಕ್ಕರೆಯನ್ನು ಬೆರೆಸುವಂತೆ–ತನ್ನೊಡನೆ ಭಕ್ತಜೀವಿಗಳನ್ನು ಯಾವಾಗಲೂ ಒಂದಾಗಿ ಸೇರಿಸಿಕೊಳ್ಳುವವನು.

ನಿರುಕ್ತಿ :– ಭೋಕ್ತಾರಮಾತ್ಮನಾ ನಿತ್ಯಂ ಯೋ ಯೋಜಯತಿಸರ್ವದಾ
ಆತ್ಮಯೋನಿಃ ಸ ಚೈವೋಕ್ತೋ ವಸ್ವರ್ಣಃಸುಖಭೋಗದಃ

'ಓಂ ಆತ್ಮಯೋನಯೇ ನಮಃ'–ಎಂಬ ಈ ನಾಮಮಂತ್ರಜಪವು ಸುಖಭೋಗಗಳನ್ನು ಕೊಡುತ್ತದೆ.

985) **ಸ. ಸಂ. :–** ಚತುರ್ಮುಖನಿಗೆ ಅಥವಾ ಜೀವಿಗಳಿಗೆ ಕಾರಣನಾದವನು. (ಆತ್ಮರತಿಯುಳ್ಳವನಾದುದರಿಂದ) ತನಗೆ ತಾನೇ ಪತ್ನಿಯಾದವನು. ಚತುರ್ಮುಖನಿಗೆ ಯಾವನು ಯೋನಿಯಾಗಿರುವನೋ–ಅವನು.

* * *

986) **ಸ್ವಯಂಜಾತಃ** = ತನಗೆ ತಾನೇ ಹುಟ್ಟಿದವನು ; ಕರ್ಮಗಳ ವೇಗದಿಂದಲ್ಲದೇ ತನ್ನ ಇಚ್ಛೆಯಿಂದಲೇ ಅವತಾರಮಾಡುವವನು.

ಶಂ. ಭಾ. :– ತನಗೆ ತಾನೇ ನಿಮಿತ್ತಕಾರಣವೂ ಆಗಿರುವವನು. **ಪ್ರಕೃತಿಶ್ಚ ಪ್ರತಿಜ್ಞಾದೃಷ್ಟಾಂತಾನುಪರೋಧಾತ್ ।** (ಬ್ರ. ಸೂ. ೧-೪-೨೩) ಶ್ರೀಹರಿಯು ಜಗತ್ತಿಗೆ ಉಪಾದಾನ ಮತ್ತು ನಿಮಿತ್ತಗಳೆಂಬ ಎರಡೂ ಬಗೆಯ ಕಾರಣಗಳಾಗಿದ್ದಾನೆ–ಎಂಬುದನ್ನು ಈ ಸೂತ್ರದಿಂದ ಸಿದ್ಧಾಂತಿಸಲಾಗಿದೆ.

986) **ಪ. ಭ. :–** ಪ್ರಾರ್ಥನೆಯೇ ಮುಂತಾದುವುಗಳ ಅಪೇಕ್ಷೆಯಿಲ್ಲದೇ ತಾನಾಗಿಯೇ ಹುಟ್ಟುವವನು.

ನಿರುಕ್ತಿ :– ಜಾತೋ ಯೋಽಸೌ ಸ್ವಯಂಜಾತಃ ಪ್ರಾರ್ಥನಾದ್ಯನ –
ಪೇಕ್ಷಯಾ ॥

986) **ಸ. ಸಂ. :–** ತನ್ನಿಂದಲೇ ತಾನಾಗಿಯೇ ಹುಟ್ಟಿದವನು.

* * *

987) **ವೈಖಾನಃ** = ವೈಖಾನಸಾಶ್ರಮ (ವಾನಪ್ರಸ್ಥಾಶ್ರಮ) ಮತ್ತು ವೈಖಾನಸಮುನಿಸ್ವರೂಪನು. ಗೆಣಸುಗಳನ್ನು ಅಗೆದು ತಿನ್ನುವ ತಾಪಸ ಸ್ವರೂಪಿಯು ; ಬ್ರಹ್ಮದೇವಸ್ವರೂಪಿಯು.

ಶಂ. ಭಾ. :– ಭೂಮಿಯನ್ನು ವಿಶೇಷವಾಗಿ ಅಗೆದು ಪಾತಾಳವಾಸಿಯಾಗಿದ್ದ ಹಿರಣ್ಯಾಕ್ಷನನ್ನು ವರಾಹರೂಪದಿಂದ ಸಂಹರಿಸಿದವನು. (ವಿಶೇಷ ರೂಪದಿಂದ ಅಗೆಯುವವನು.)

987) **ಪ. ಭ. :–** ಅವತಾರಮಾಡಿ ಬಗೆ-ಬಗೆಯ ಭವದುಃಖಗಳನ್ನು ತಾನೇ ಅಗೆದುಹಾಕುವವನು.

ನಿರುಕ್ತಿ :– ಜನಿತ್ವಾ ಭವದುಃಖಂ ಯೋ ವಿವಿಧಂ ಖನತಿ ಸ್ವತಃ ।
ವೈಖಾನಃ ಸ ಚ ನಿರ್ದಿಷ್ಟಃ ಸಪ್ತಾರ್ಣೋಽಖಿಲದುಃಖಹಾ ॥

'**ಓಂ ವೈಖಾನಾಯ ನಮಃ**'–ಎಂಬ ಈ ನಾಮಮಂತ್ರಜಪವು ಸಕಲ ದುಃಖಗಳನ್ನೂ ಪರಿಹರಿಸುತ್ತದೆ.

987) **ಸ. ಸಂ. :–** ಮುಕ್ತರಿಗೆ ಸ್ವಾಮಿಯಾದವನು ; ವರಾಹರೂಪ ದಲ್ಲಿ ವಿಶೇಷವಾಗಿ ಭೂಮಿಯನ್ನು ಅಗೆದವನು.

* * *

988) **ಸಾಮಗಾಯನಃ** = ಸಾಮಗಳನ್ನು ಗಾನಮಾಡುವವನು ; ಮುಕ್ತಾತ್ಮರಿಂದ ಸ್ವಾನುಭವರೂಪವಾದ ಸಾಮಗಾನವನ್ನು ಮಾಡಿಸುವವನು.

ಶಂ. ಭಾ. :– ಸಾಮಗಳನ್ನು ಗಾನಮಾಡುವವನು.

988) **ಪ. ಭ. :–** ತನ್ನ ಪ್ರಾಪ್ತಿಯೆಂಬ ಮಧುಪಾನದಿಂದ ಹಾ೩ಉಹಾ೩ಉಹಾ೩ಉ–ಎಂಬ ಸಾಮವನ್ನು ಗಾನಮಾಡುವ ನಿತ್ಯರು ಮತ್ತು ಮುಕ್ತಾತ್ಮರುಳ್ಳವನು.

ನಿರುಕ್ತಿ :– **ಸ್ವಪ್ರಾಪ್ತಿಮಧುಪಾನೇನ ನಿರತಾಃ ಸಾಮಗೀತಿಷು ।**
ನಿತ್ಯಮುಕ್ತಾಃ ಸನ್ತಿ ಯಸ್ಯ ಸ ಉಕ್ತಃ ಸಾಮಗಾಯನಃ ॥

988) **ಸ. ಸಂ. :–** ಸಾಮವನ್ನು ಗಾನಮಾಡುವವನು ; ಸಾಮಗಳಿಗೆ ಗತಿಯಾಗಿರುವವನು.

* * *

989) **ದೇವಕೀನನ್ದನಃ** = ದೇವಕೀದೇವಿಗೆ ಆನಂದವನ್ನುಂಟುಮಾಡಿದ ಸುಪುತ್ರನು.

ಶಂ. ಭಾ. :– ದೇವಕೀಪುತ್ರನು. **ಜ್ಯೋತೀಂಷಿ ಶುಕ್ಲಾನಿ ಹಿ ಸರ್ವ ಲೋಕೇ ತ್ರಯೋ ಲೋಕಾ ಲೋಕಪಾಲಾಸ್ತ್ರಯಶ್ಚ। ತ್ರಯೋಽಗ್ನಯೋ ವ್ಯಾಹೃತಯಶ್ಚ ತಿಸ್ರಃ ಸರ್ವೇ ದೇವಾ ದೇವಕೀ ಪುತ್ರ ಏವ ॥** (ಮ. ಭಾ. ಅನು. ೧೫೮-೨೧)

989) **ಪ. ಭ. :–** ಪರಾಸ್ಥಿತಿಯಲ್ಲಿರುವವನಾಗಿದ್ದರೂ ವಾತ್ಸಲ್ಯದಿಂದ ದೇವಕಿಯ ಪುತ್ರನಾಗಿ ಜನಿಸಿದವನು.

ನಿರುಕ್ತಿ :– **ದೇವಕ್ಯಾಸ್ತನಯತ್ವೇನ ಪರಾವಸ್ಥಃ ಪ್ರಜಜ್ಞಿವಾನ್ ।**
ವಾತ್ಸಲ್ಯಾದವರೋ ಯೋಽಸೌ ದೇವಕೀನನ್ದನಃ ಸ್ಮೃತಃ ॥

989) **ಸ. ಸಂ. :–** ದೇವಕೀಪುತ್ರನು. ಭಾಗೀರಥಿಯನ್ನು ಪುತ್ರಿಯನ್ನಾಗಿ

ಪಡೆದವನು ; ಗಂಗೆಗೆ ಆನಂದವನ್ನುಂಟುಮಾಡುವವನು ; ಲಕ್ಷ್ಮಿಗೆ ಆನಂದ ವನ್ನುಂಟುಮಾಡುವವನು.

* * *

990) **ಸ್ರಷ್ಟಾ** = ಎಲ್ಲವನ್ನೂ ಸೃಷ್ಟಿಮಾಡಿದವನು.

ಶಂ. ಭಾ. :– ಸರ್ವಲೋಕಗಳನ್ನೂ ಸೃಷ್ಟಿಸಿದವನು.

990) **ಪ. ಭ. :–** ಪರಾವಸ್ಥೆಯಲ್ಲಿದ್ದರೂ ವಿಶ್ವವನ್ನು ಸೃಷ್ಟಿಮಾಡು ವವನು.

ನಿರುಕ್ತಿ :– ಪರಾವಸ್ಥಾಂ ಪ್ರಪನ್ನೋಽಸೌ ಸ್ರಷ್ಟೇತಿ ಸರ್ಜನಾತ್ಸ್ಮೃತಃ ।

990) **ಸ. ಸಂ. :–** ಸೃಷ್ಟಿಮಾಡುವವನು.

* * *

991) **ಕ್ಷಿತೀಶಃ** = ಭೂಪತಿಯು ; **ಮಹೀಂ ದೇವೀಂ ವಿಷ್ಣುಪತ್ನೀ ಮಜೂರ್ಯಾಂ ।** ದಶರಥಪುತ್ರ ಶ್ರೀರಾಮನಾಗಿ ಭೂಮಿಯನ್ನು ಆಳಿದವನು.

ಶಂ. ಭಾ. :– ಭೂಮಿಗೆ ಸ್ವಾಮಿಯು. ದಶರಥಪುತ್ರನಾದ ಶ್ರೀ ರಾಮನು.

991) **ಪ. ಭ. :–** ಭೂದೇವಿಯ ಇಷ್ಟದಂತೆ ಆಕೆಯ ಭಾರವನ್ನು ಇಳಿಸಲು ಸಮರ್ಥನಾದವನು ; ಭೂಮಿಯಲ್ಲಿ ಅವತರಿಸಿದವನು.

ನಿರುಕ್ತಿ :– ಭೂಭಾರಕ್ಲೇಶಹಾರೀ ಯಃ ಕ್ಷಿತೀಶಃ ಸ ಚ ಕಥ್ಯತೇ ॥

991) **ಸ. ಸಂ. :–** ಭೂಪತಿಯು.

* * *

992) **ಪಾಪನಾಶನಃ** = ಸ್ಮರಣ-ಜಪ-ಕೀರ್ತನಾದಿಗಳಿಂದ ಪಾಪಗಳನ್ನು ನಾಶಮಾಡುವವನು.

ಶಂ. ಭಾ. :– ಕೀರ್ತನೆ, ಪೂಜೆ, ಧ್ಯಾನ ಮತ್ತು ಸ್ಮರಣೆಗಳನ್ನು ಮಾಡಿದಾಗ ಪಾಪರಾಶಿಯನ್ನು ನಾಶಮಾಡುವವನು. **ಪಕ್ಷೋಪವಾಸಾದ್ಯತ್ಪಾಪಂ ಪುರುಷಸ್ಯ ಪ್ರಣಶ್ಯತಿ । ಪ್ರಾಣಾಯಾಮಶತೇನೈವ ತತ್ಪಾಪಂ ನಶ್ಯತೇ ನೃಣಾಮ್ ॥ ಪ್ರಾಣಾಯಾಮಸಹಸ್ರೇಣ ಯತ್ಪಾಪಂ**

ನಶ್ಯತೇ ನೃಣಾಮ್ । ಕ್ಷಣಮಾತ್ರೇಣ ತತ್ಪಾಪಂ ಹರೇರ್ಧ್ಯಾನಾತ್ಪ್ರಣಶ್ಯತಿ ॥

992) **ಪ. ಭ. :–** ಅವತಾರದಶೆಯಲ್ಲಿ ದೇವಕೀಪುತ್ರನಾಗಿದ್ದರೂ ಕೂಡ ಶರಣಾಗತರ ಒಳ-ಹೊರ ಶತ್ರುಗಳನ್ನು ಸಂಹರಿಸುವವನು.

ನಿರುಕ್ತಿ :– **ದೇವಕೀತನಯತ್ವೇಽಪಿ ಪ್ರಪನ್ನಾನಾಂ ವಿಶೇಷತಃ ।**
ಬಾಹ್ಯಾಂತಃಶತ್ರುಸಂಹಾರೀ ಯಃ ಸ ಸ್ಯಾತ್ಪಾಪನಾಶನಃ ॥

992) **ಸ. ಸಂ. :–** ಪಾಪಗಳನ್ನು ನಾಶಪಡಿಸುವವನು ; ಪಾಪಕೃತ್ಯಕ್ಕೆ ಎಳೆದೊಯ್ಯುವ ದೈತ್ಯರನ್ನು ತಿಂದುಹಾಕುವವನು ; ಕೊಂದುಹಾಕುವವನು.

* * *

ಶಙ್ಖಭೃನ್ನನ್ದಕೀ ಚಕ್ರೀ ಶಾರ್ಙ್ಗಧನ್ವಾ ಗದಾಧರಃ ।
ರಥಾಙ್ಗಪಾಣಿರಕ್ಷೋಭ್ಯಃ ಸರ್ವಪ್ರಹರಣಾಯುಧಃ ॥೧೨೦॥

993) **ಶಙ್ಖಭೃತ್** = (ತಾಮಸಾಹಂಕಾರರೂಪವಾದ ಪಾಂಚಜನ್ಯ) ಶಂಖವನ್ನು ಧರಿಸಿರುವವನು.

ಶಂ. ಭಾ. :– ಭೂತಾದ್ಯಹಂಕಾರರೂಪವಾದ ಪಾಂಚಜನ್ಯವೆಂಬ ಶಂಖವನ್ನು ಧರಿಸಿರುವವನು.

ಪ. ಭ. :– ಪರಮೈಶ್ವರ್ಯಚಿಹ್ನೆಯಾದ ದಿವ್ಯಾಯುಧಗಳನ್ನು ಧರಿಸಿರುವವನು ; ಶಂಖವನ್ನು ಧರಿಸಿರುವವನು.

ನಿರುಕ್ತಿ :– **ಶಙ್ಖಭೃತ್ಪರಮೈಶ್ವರ್ಯಲಕ್ಷಣಾಯುಧಧಾರಣಾತ್ ॥**

993) **ಸ. ಸಂ. :–** ಪಾಂಚಜನ್ಯಶಂಖವನ್ನು ಅಥವಾ ಶಂಖವೆಂಬ ನಿಧಿಯನ್ನು ಧರಿಸಿದವನು.

* * *

994) **ನನ್ದಕೀ** = ವಿದ್ಯಾಮಯವಾದ ನಂದಕವೆಂಬ ಖಡ್ಗವುಳ್ಳವನು.

ಶಂ. ಭಾ. :– ವಿದ್ಯಾಮಯವಾದ ನಂದಕವೆಂಬ ಕತ್ತಿಯುಳ್ಳವನು.

994) **ಪ. ಭ. :–** ತನಗೆ ಆನಂದವನ್ನುಂಟುಮಾಡುವುದು –ಎಂದು

ಭಗವಂತನಿಂದಲೂ ಪ್ರಾರ್ಥಿಸಲ್ಪಡುವ ನಂದಕವೆಂಬ ಖಡ್ಗದೊಡನೆ ನಿತ್ಯ ಸಂಬಂಧವುಳ್ಳವನು.

ನಿರುಕ್ತಿ :– ನನ್ದ್ಯಾನ್ಮಾಮಯಮಿತ್ಯೇವಂ ಪ್ರಾರ್ಥ್ಯೋ ಭಗವ
ವತಾಪಿ ಯಃ ।
ಸ ನನ್ದಕೋ ನಿತ್ಯಯೋಗೀ ಯಸ್ಯಾಸೌ ನನ್ದಕೀ ಸ್ಮೃತಃ ॥

994) ಸ. ಸಂ. :– ನಂದಕವೆಂಬ ಖಡ್ಗವುಳ್ಳವನು.

* * *

995) ಚಕ್ರೀ = ಮನಸ್ತತ್ತ್ವಾತ್ಮಕವಾದ ಸುದರ್ಶನಚಕ್ರವುಳ್ಳವನು.

ಶಂ. ಭಾ. :– ಮನಸ್ತತ್ತ್ವಾತ್ಮಕವಾದ ಸುದರ್ಶನವೆಂಬ ಚಕ್ರವುಳ್ಳವನು. ಸಂಸಾರಚಕ್ರವು ಯಾವನ ಆಜ್ಞೆಯಿಂದ ಸುತ್ತುತ್ತದೆಯೋ–ಅವನು.

995) ಪ. ಭ. :– ಸಮಸ್ತರಾಕ್ಷಸರನ್ನೂ ಮತ್ತು ಅಸುರರನ್ನೂ ಕತ್ತರಿಸಿ ಹಾಕುವ ಚಕ್ರಾಯುಧದೊಡನೆ ನಿತ್ಯಯೋಗವುಳ್ಳವನು.

ನಿರುಕ್ತಿ :– ಸರ್ವರಕ್ಷೋಽಸುರಚ್ಛೇತ್ರಾ ನಿತ್ಯಂ ಚಕ್ರೇಣ ಯೋಗತಃ ।
ಚಕ್ರೀತಿ ಕಥ್ಯತೇ ಸಮ್ಯಗೃತ್ವರ್ಣಃ ಶತ್ರುನಾಶಕಃ ॥

'ಓಂ ಚಕ್ರಪಾಣಯೇ ನಮಃ'–ಎಂಬ ಮಂತ್ರಜಪದಿಂದ ಶತ್ರುಗಳು ವಿನಾಶಹೊಂದುತ್ತಾರೆ.

995) ಸ. ಸಂ. :– ರಾಮ-ಕೃಷ್ಣಾದಿ ರೂಪದಲ್ಲಿ ಸೇನಾಚಕ್ರವನ್ನು ಹೊಂದಿದ್ದವನು ; ಸುದರ್ಶನಚಕ್ರವುಳ್ಳವನು.

* * *

996) ಶಾರ್ಙ್ಗಧನ್ವಾ = ರಾಜಸಾಹಂಕಾರರೂಪವಾದ ಶಾರ್ಙ್ಗವೆಂಬ ಧನುಸ್ಸನ್ನು ಹೊಂದಿರುವವನು.

ಶಂ. ಭಾ. :– ಇಂದ್ರಿಯಾದಿಯಾದ ಅಹಂಕಾರಾತ್ಮಕವಾದ ಶಾರ್ಙ್ಗ ವೆಂಬ ಧನುಸ್ಸುಳ್ಳವನು.

996) ಪ. ಭ. :– ತನ್ನ ಬಾಣಗಳ ಮಳೆಯಿಂದ ಎಲ್ಲ ಶತ್ರುಗಳನ್ನೂ ಸಂಹಾರಮಾಡುವ ತನಗೆ ಅಲಂಕಾರದಿಂದಲೂ ಅನುರೂಪವಾದ ಶಾರ್ಙ್ಗ ಧನುಸ್ಸುಳ್ಳವನು.

ನಿರುಕ್ತಿ :– **ಶಾರ್ಙ್ಗಾಖ್ಯಂ ಧನುರಸ್ಯೇತಿ ಶಾರ್ಙ್ಗಧನ್ವಾ ಪ್ರಕೀರ್ತಿತಃ ॥**

996) **ಸ. ಸಂ. :–** ಶಾರ್ಙ್ಗಧನುಸ್ಸನ್ನು ಹೊಂದಿರುವವನು.

* * *

997) **ಗದಾಧರಃ** = ಮಹತ್ತತ್ತ್ವರೂಪವಾದ ಕೌಮೋದಕೀ–ಎಂಬ ಗದೆಯನ್ನು ಧರಿಸಿರುವವನು.

997) **ಪ. ಭ. :–** ಎಲ್ಲ ಕಡೆಗಳಿಂದಲೂ ಪ್ರಳಯಾಗ್ನಿಯ ಕಿಡಿಗಳನ್ನು ಉಗುಳುತ್ತಿರುವ ಮತ್ತು ತನಗೆ ಆನಂದವನ್ನುಂಟುಮಾಡುವ ಕೌಮೋದಕೀ–ಎಂಬ ಗದೆಯನ್ನು ಧರಿಸಿರುವವನು.

ನಿರುಕ್ತಿ :– **ಕೌಮೋದಕೀಧಾರಣಾಚ್ಚ ಗದಾಧರ ಇತೀರಿತಃ ।**

997) **ಸ. ಸಂ. :–** ಗದೆಯನ್ನು ಧರಿಸಿರುವವನು.

* * *

998) **ರಥಾಙ್ಗಪಾಣಿಃ** = ಕೈಯಲ್ಲಿ ಚಕ್ರವನ್ನು ಧರಿಸಿರುವವನು.

ಶಂ. ಭಾ. :– ಚಕ್ರವನ್ನು ಕೈಯಲ್ಲಿ ಉಳ್ಳವನು.

998) **ಪ. ಭ. :–** ಯಥೋಚಿತವಾದ ಮತ್ತು ಸದಾ ಕಾರ್ಯಕ್ಕೆ ಸಿದ್ಧವಾಗಿರುವ ಸುದರ್ಶನಚಕ್ರವನ್ನು ಸದಾ ಕೈಯಲ್ಲಿ ಉಳ್ಳವನು. ಚಕ್ರೀ–ಎಂಬಲ್ಲಿ ಭಗವಂತನು ಚಕ್ರಕ್ಕೆ ಸ್ವಾಮೀ ಎಂಬ ಭಾವವು ಹೇಳಲ್ಪಟ್ಟಿದೆ. ಇಲ್ಲಿ ಆ ಸುದರ್ಶನಚಕ್ರವು ದುಷ್ಟನಿಗ್ರಹಕ್ಕೆ ಸದಾ ಉತ್ಸುಕವಾಗಿದೆ ಎಂಬುದು ಸೂಚಿತವಾಗಿದೆ.

ನಿರುಕ್ತಿ :– **ಯಥೋಚಿತಂ ರಥಾಙ್ಗಂ ಚ ಪಾಣೌ ಯಸ್ಯಾಸ್ತಿ ನಿತ್ಯಶಃ ।**
ರಥಾಙ್ಗಪಾಣಿರಾಖ್ಯಾತೋ ನವಾರ್ಣೋ ಭಯನಾಶಕಃ ॥

‘**ಓಂ ರಥಾಙ್ಗಪಾಣಯೇ ನಮಃ**’–ಎಂಬ ಈ ನಾಮಮಂತ್ರಜಪವು ಭಯವನ್ನು ಹೋಗಲಾಡಿಸುತ್ತದೆ.

998) **ಸ. ಸಂ. :–** ಚಕ್ರವನ್ನು ಕೈಯಲ್ಲಿ ಉಳ್ಳವನು.

* * *

999) **ಅಕ್ಷೋಭ್ಯಃ** =(ಮೇಲೆ ಹೇಳಿದಂತೆ ಸರ್ವತತ್ತ್ವಗಳಿಗೂ ಅಧಿಪತಿಯಾಗಿರುವುದರಿಂದ) ಕ್ಷೋಭೆಗೊಳಿಸಲು ಅಸಾಧ್ಯನಾದವನು.

ಶಂ. ಭಾ. :– ಮೇಲೆ ಹೇಳಿದ ಆಯುಧಗಳನ್ನು ಧರಿಸಿರುವುದರಿಂದ ಕ್ಷೋಭೆಗೊಳಿಸಲು (ಹಿಮ್ಮೆಟ್ಟಿಸಲು) ಅಸಾಧ್ಯನಾದವನು.

999) **ಪ. ಭ. :–** ಪ್ರಪನ್ನರಿಗೆ ಅಭಯಪ್ರದಾನವನ್ನು ಮಾಡುವ ತನ್ನ ನಿಯಮದಲ್ಲಿ ದೃಢವಾಗಿರುವುದರಿಂದ ತನ್ನ ಮಹಿಮೆಯಿಂದಲೂ ವಿಚಲಗೊಳಿಸಲು ಅಸಾಧ್ಯನಾದವನು.

ನಿರುಕ್ತಿ :– **ಅಭಯಪ್ರದಾನನಿಯಮದಾರ್ಢ್ಯಾದಪಿ ಚ ನಿತ್ಯಶಃ ।**
ಅಚಾಲ್ಯಃ ಸ್ವಮಹಿಮ್ನಾಪಿ ಹ್ಯಕ್ಷೋಭ್ಯ ಇತಿ ಕೀರ್ತಿತಃ ॥

999) **ಸ. ಸಂ. :–** ಕ್ಷೋಭೆಗೊಳಿಸಲು ಅಸಾಧ್ಯನಾದವನು.

* * *

1000) **ಸರ್ವಪ್ರಹರಣಾಯುಧಃ** = ಪ್ರಹರಿಸಲು ಯೋಗ್ಯವಾದ ಎಲ್ಲ ಪದಾರ್ಥಗಳನ್ನೂ ತನ್ನ ಆಯುಧಗಳನ್ನಾಗಿ ಹೊಂದಿರುವವನು ; ಯಾವನ ಸಂಕಲ್ಪಮಾತ್ರದಿಂದ ದರ್ಭ, ಇಷೀಕ, ನಖ–ಇವೇ ಮುಂತಾದ ಯಾವುದೇ ಪದಾರ್ಥವೂ ಅವನಿಗೆ ಆಯುಧವಾಗಬಹುದೋ–ಅವನು.

ಶಂ. ಭಾ. : ಮೇಲೆ ಹೇಳಿದಷ್ಟು ಆಯುಧಗಳು ಮಾತ್ರವಲ್ಲದೇ ಎಲ್ಲ ವಸ್ತುಗಳೂ ಯಾವನಿಗೆ ಆಯುಧಗಳಾಗಬಹುದೋ–ಅವನು. (ಆಯುಧವೆಂದು ಪ್ರಸಿದ್ಧವಾಗದೇ ಇರುವ ಉಗುರೇ ಮುಂತಾದುವುಗಳೂ ಅವನಿಗೆ ಆಯುಧಗಳಾಗುತ್ತವೆ. ಕೊನೆಯಲ್ಲಿ ಬಂದಿರುವ **ಸರ್ವಪ್ರಹರಣಾಯುಧಃ** – ಎಂಬ ಶಬ್ದವು ವಿಷ್ಣುವು ಸತ್ಯಸಂಕಲ್ಪನಾದುದರಿಂದ ಸರ್ವೇಶ್ವರನೆಂಬುದನ್ನು ತೋರಿಸುತ್ತದೆ.) ಎರಡು ಬಾರಿ ಹೇಳಿರುವುದು ಸಮಾಪ್ತಿಯ ಸೂಚಕ.

ಓಂ ನಮಃ = ಓಂಕಾರವು ಮಂಗಳಾರ್ಥವಾಗಿದೆ. ನಮಃ ಎಂದು ಹೇಳಿ ಪರಮಾತ್ಮನನ್ನು ಪೂಜಿಸಿದೆ. **ಭೂಯಿಷ್ಠಾಂ ತೇ ನಮ ಉಕ್ತಿಂ ವಿಧೇಮ ।** ಕೊನೆಯಲ್ಲಿಯೂ ನಮಸ್ಕಾರವನ್ನು ಮಾಡುವುದು ಶಿಷ್ಟಾಚಾರ. ಈ ನಮಸ್ಕಾರದ ಫಲ : ಮೋಕ್ಷ ಮತ್ತು ಅಭಯ. **ಕೃಷ್ಣಪ್ರಣಾಮೀ ನ ಪುನರ್ಭವಾಯ ।** (ಮ. ಭಾ. ಶಾಂ.೪೭-೯೨) **ನ ತೇಷಾಂ ವಿದ್ಯತೇ ಭಯಮ್ ।**

1000) **ಪ. ಭ. :–** ತನ್ನಲ್ಲಿ ನಿಷ್ಠೆಯುಳ್ಳ ಭಕ್ತರ ಎಲ್ಲ ಅನಿಷ್ಟಗಳನ್ನೂ ನಿರ್ಮೂಲಗೊಳಿಸುವ ಅಸಂಖ್ಯಾತವೂ-ನಿಸ್ಸೀಮಶಕ್ತಿಯುತವೂ ಆದ ಸ್ವೋಚಿತವಾದ ಇತರ ದಿವ್ಯಾಯುಧಗಳೂ ಸದಾ ಸರ್ವಪ್ರದೇಶಗಳಲ್ಲಿಯೂ ಯಾವನಲ್ಲಿ ಇರುವುವೋ–ಅವನು.

ನಿರುಕ್ತಿ :– **ಪಾದಮೂಲಂ ಪ್ರಪನ್ನಾನಾಂ ಭಕ್ತಾನಾಂ ಚಾಪಿ ನಿತ್ಯಶಃ ।**
ಅಸಂಖ್ಯೇಯಾನ್ಯಮರ್ಯಾದಸಾಮರ್ಥ್ಯಾನ್ಯಾತ್ಮನಃ ಸದಾ
ಸರ್ವತ್ರ ಸರ್ವಥಾ ಸರ್ವಪ್ರಕಾರಾಶ್ರಿತರಕ್ಷಣೇ ।
ದೀಕ್ಷಿತಾನ್ಯುಚಿತಾನ್ಯನ್ಯಾನ್ಯನನ್ತಾನ್ಯಾಯುಧಾನಿ ಹಿ ।
ಯಸ್ಯ ಸನ್ತಿ ಸ ವೈ ನಿತ್ಯಂ ಸರ್ವಪ್ರಹರಣಾಯುಧಃ ।
ದ್ವಾದಶಾರ್ಣೋ ಮಹಾಮನ್ತ್ರಃ ಸರ್ವದುಃಖವಿನಾಶಕಃ ।

'**ಓಂ ಸರ್ವಪ್ರಹರಣಾಯುಧಾಯ ನಮಃ**'–ಎಂಬ ಈ ನಾಮ ಮಂತ್ರಜಪವು ಸರ್ವದುಃಖಗಳನ್ನೂ ವಿನಾಶಗೊಳಿಸುತ್ತದೆ.

1000) **ಸ. ಸಂ. :–** ಎಲ್ಲ ಶತ್ರುಗಳನ್ನೂ ಪ್ರಹರಿಸುವ ಪ್ರಯೋಜನ ವುಳ್ಳ ಆಯುಧಗಳುಳ್ಳವನು ; ಓಂ ಎಂದರೆ ರಕ್ಷಿಸುತ್ತದೆ. ಜಗದ್ರಕ್ಷಣೆಯನ್ನು ಮಾಡುತ್ತದೆ. ಗುಣಗಳನ್ನು ಪ್ರವೇಶಿಸುತ್ತದೆ. ಗುಣಗಳಿಂದ ಹೊಂದಲ್ಪಡು ತ್ತದೆ. ಪ್ರಳಯಾದಿ ಸಮಯದಲ್ಲಿ ಜಗತ್ತಿನಿಂದ ಪ್ರವೇಶಿಸಲ್ಪಡುತ್ತದೆ. '**ಓಂ ಗುಣಪೂರ್ಣಾಯ ನಮಃ**' ಓಂ ಎಂಬುದು ಪರಮಾತ್ಮನ ಪ್ರಧಾನವಾದ ನಾಮವು. ಜಗತ್ತೆಲ್ಲವೂ ಯಾವನಲ್ಲಿ ಹೆಣೆಯಲ್ಪಟ್ಟಿದೆಯೋ ಅವನು ಸರ್ವೋಚ್ಚತಮನು.

ಸ್ತೋತ್ರದ ಫಲಸ್ತುತಿ*

ಇತೀದಂ ಕೀರ್ತನೀಯಸ್ಯ ಕೇಶವಸ್ಯ ಮಹಾತ್ಮನಃ ।
ನಾಮ್ನಾಂ ಸಹಸ್ರಂ ದಿವ್ಯಾನಾಮಶೇಷೇಣ ಪ್ರಕೀರ್ತಿತಮ್ ॥೧೨೧॥

ಸಂಕೀರ್ತನೆಮಾಡಲು ಯೋಗ್ಯನೂ ಮಹಾತ್ಮನೂ ಆದ ಕೇಶವನನ್ನು ಕುರಿತ ಅಪ್ರಾಕೃತವಾದ ಈ ಸಾವಿರ ನಾಮಗಳನ್ನು ಹೀಗೆ ಸಂಪೂರ್ಣವಾಗಿ ಕೀರ್ತನೆಮಾಡಿಯಾಯಿತು.

---

* ಫಲಶ್ರುತಿಗೆ ಶ್ರೀ ಸತ್ಯಸಂಧರ ವ್ಯಾಖ್ಯಾನವಿರುವುದಿಲ್ಲ.

ಶಂ. ಭಾ. :– ಸಹಸ್ರನಾಮಗಳು ಹೆಚ್ಚು-ಕಡಿಮೆಯಿಲ್ಲದೇ ಸರಿಯಾಗಿ ಹೇಳಲ್ಪಟ್ಟಿವೆ–ಎಂಬುದನ್ನು ಇದು ಸ್ಪಷ್ಟಪಡಿಸುತ್ತದೆ. ದಿವ್ಯಾನಾಂ : ಅಪ್ರಾಕೃತ ವಾದ. ಪ್ರಕೃತಿಸಂಬಂಧವಿಲ್ಲದ ದಿವ್ಯವಾದ ಸಾವಿರ ನಾಮಗಳು ಕೀರ್ತನ ಮಾಡಲ್ಪಟ್ಟುವು–ಎಂದು ಹೇಳುವುದರ ಮೂಲಕ ಮತ್ತೊಂದು ರೀತಿ ಯಿಂದಲೂ ಸಹಸ್ರಸಂಖ್ಯೆಗಳು ಸರಿಯಾಗಿವೆಯೆಂಬುದನ್ನು ಸ್ಪಷ್ಟಗೊಳಿಸಿ ದಂತಾಯಿತು.

ಪ. ಭ. :– ಕೇಶವನು ಸಂಕೀರ್ತನೆಗೆ ಯೋಗ್ಯನು. ಏಕೆಂದರೆ ಅವನು ಮಹಾತ್ಮನು.

ಯ ಇದಂ ಶೃಣುಯಾನ್ನಿತ್ಯಂ ಯಶ್ಚಾಪಿ ಪರಿಕೀರ್ತಯೇತ್ ।
ನಾಶುಭಂ ಪ್ರಾಪ್ನುಯಾತ್ಕಿಞ್ಚಿತ್ಸೋಽಮುತ್ರೇಹ ಚ ಮಾನವಃ ॥

ಯಾವ ಮನುಷ್ಯನು ಇದನ್ನು ಯಾವಾಗಲೂ ಕೇಳುತ್ತಾನೆಯೋ ಮತ್ತು ಯಾವನು ಯಾವಾಗಲೂ ಚೆನ್ನಾಗಿ ಕೀರ್ತನೆಮಾಡುತ್ತಾನೆಯೋ– ಅಂತಹ ಮನುಷ್ಯನಿಗೆ ಇಹಲೋಕದಲ್ಲಾಗಲೀ, ಪರಲೋಕದಲ್ಲಾಗಲೀ ಯಾವ ಅಶುಭವೂ ಉಂಟಾಗುವುದಿಲ್ಲ.

ಶಂ. ಭಾ. :– **ಅಮುತ್ರ**= ಪರಲೋಕದಲ್ಲಿಯೂ, ಪರಲೋಕವನ್ನು ಹೊಂದಿದನಂತರವೂ ಯಯಾತಿ, ನಹುಷ ಮುಂತಾದವರಿಗೆ ಅಶುಭ ವುಂಟಾಯಿತು. ದಿವ್ಯವಾದ ಈ ಸಹಸ್ರನಾಮಗಳ ಶ್ರವಣ-ಕೀರ್ತನೆಗಳನ್ನು ಮಾಡಿದವರಿಗೆ ಅಂತಹ ಪರಲೋಕದ ಅಶುಭವೂ ಉಂಟಾಗುವುದಿಲ್ಲ.

ಪ. ಭ. :– ಅಧಿಕಾರಕ್ಕೆ ಅನುಗುಣವಾಗಿ ಶ್ರವಣವನ್ನಾಗಲೀ–ಸಂಕೀ ರ್ತನೆಯನ್ನಾಗಲೀ ಮಾಡಬಹುದು. ಅದರಿಂದ ಎರಡು ಲೋಕಗಳಲ್ಲಿಯೂ ಅಶುಭನಿವಾರಣೆಯುಂಟಾಗುತ್ತದೆ.

ವೇದಾನ್ತಗೋ ಬ್ರಾಹ್ಮಣಃ ಸ್ಯಾತ್ ಕ್ಷತ್ರಿಯೋ ವಿಜಯೀ ಭವೇತ್ ।
ವೈಶ್ಯೋ ಧನಸಮೃದ್ಧಃ ಸ್ಯಾಚ್ಛೂದ್ರಃ ಸುಖಮವಾಪ್ನುಯಾತ್ ॥

ಇದರ ಶ್ರವಣ-ಕೀರ್ತನೆಗಳನ್ನು ಮಾಡುವವನು ಬ್ರಾಹ್ಮಣನಾಗಿದ್ದರೆ– ವೇದಾನ್ತಜ್ಞಾನಿಯಾಗುತ್ತಾನೆ. ಕ್ಷತ್ರಿಯನಾಗಿದ್ದರೆ–ವಿಜಯಶಾಲಿಯಾಗುತ್ತಾನೆ. ವೈಶ್ಯನಾಗಿದ್ದರೆ–ಧನಸಮೃದ್ಧಿಯನ್ನು ಪಡೆಯುತ್ತಾನೆ. ಶೂದ್ರನಾಗಿದ್ದರೆ– ಸುಖವನ್ನು ಪಡೆಯುತ್ತಾನೆ.

ಶಂ. ಭಾ. :– ಇದನ್ನು ಕೇಳುವವನು ಅಥವಾ ಪಾರಾಯಣಮಾಡುವವನು ಬ್ರಾಹ್ಮಣನಾಗಿದ್ದರೆ **ವೇದಾನ್ತಗಃ ಸ್ಯಾತ್** = ಉಪನಿಷತ್ತುಗಳ ಅರ್ಥವಾದ ಪರಬ್ರಹ್ಮವನ್ನು ಅರಿಯುತ್ತಾನೆ. **ಕಿಂ ಜಪನ್**=ಎಂದು ಹೇಳಿರುವಂತೆ ಕೇವಲ ಜಪಕರ್ಮದಿಂದಲೇ ಮುಕ್ತಿಯೆಂದು ತಿಳಿಯಬಾರದು. ಕರ್ಮಗಳಿಂದ ಸಾಕ್ಷಾತ್ತಾಗಿ ಮುಕ್ತಿಯಿಲ್ಲ. ಅಂತಃಕರಣವನ್ನು ಶುದ್ಧಿಮಾಡುವುದರ ಮೂಲಕವೇ ಅವು ಮೋಕ್ಷಕ್ಕೆ ಕಾರಣವಾಗುವುವು. ಮೋಕ್ಷಕ್ಕೆ ಸಾಕ್ಷಾತ್ತಾಗಿ ಕಾರಣವಾಗುವುದು ಜ್ಞಾನವೇ–ಎಂಬುದನ್ನು ಸೂಚಿಸಲು **ವೇದಾನ್ತಗಃ** – ಎಂಬ ಪದವನ್ನು ಹಾಕಿದೆ. **ಕಷಾಯಪಕ್ತಿಃ ಕರ್ಮಾಣಿ ಜ್ಞಾನಂ ತು ಪರಮಾ ಗತಿಃ । ಕಷಾಯೇ ಕರ್ಮಭಿಃ ಪಕ್ವೇ ತತೋ ಜ್ಞಾನಂ ಪ್ರವರ್ತತೇ ॥ ನಿತ್ಯೈರ್ಜ್ಞಾನಂ ಸಮಾಸಾದ್ಯ ನರೋ ಬಂಧಾತ್ಪ್ರಮುಚ್ಯತೇ ॥ ಧರ್ಮಾತ್ಸುಖಂ ಚ ಜ್ಞಾನಂ ಚ ಜ್ಞಾನಾನ್ಮೋಕ್ಷೋಽಧಿಗಮ್ಯತೇ । ಯೋಗಿನಃ ಕರ್ಮ ಕುರ್ವನ್ತಿ ಸಙ್ಗಂ ತ್ಯಕ್ತ್ವಾತ್ಮಶುದ್ಧಯೇ ॥** ಇತ್ಯಾದಿ ಸ್ಮೃತಿಗಳೂ, **ಬ್ರಹ್ಮವಿದಾಪ್ನೋತಿ ಪರಂ ।** (ತೈ. ಉ.೨-೧) **ತರತಿ ಶೋಕಮಾತ್ಮವಿತ್** (ಛಾ.೭-೧-೩) **ವೇದಾನ್ತವಿಜ್ಞಾನ ಸುನಿಶ್ಚಿತಾರ್ಥಾಃ** (ಮುಂ. ೩-೨-೬) ಇತ್ಯಾದಿ ಶ್ರುತಿಗಳೂ ಇದಕ್ಕೆ ಪ್ರಮಾಣ.

ಪ. ಭ. :– **ವೇದಾನ್ತಗಃ** = ಭಗವದ್ಭಕ್ತಿಗೆ ಇನ್ನೂ ಏರದೇ ಫಲವಿಶೇಷಗಳನ್ನೂ ಬಯಸದೇ ಇರುವವರಿಗೆ ದೊರೆಯುವ ಫಲವನ್ನು ಇಲ್ಲಿ ಹೇಳಿದೆ.

ಧರ್ಮಾರ್ಥೀ ಪ್ರಾಪ್ನುಯಾದ್ಧರ್ಮ-
ಮರ್ಥಾರ್ಥೀ ಚಾರ್ಥಮಾಪ್ನುಯಾತ್ ।
ಕಾಮಾನವಾಪ್ನುಯಾತ್ಕಾಮೀ
ಪ್ರಜಾರ್ಥೀ ಚಾಪ್ನುಯಾತ್ಪ್ರಜಾಮ್ ॥೧೨೪॥

(ಶ್ರವಣ-ಕೀರ್ತನೆಗಳನ್ನು ಮಾಡುವವನು) ಧರ್ಮಕಾಮನಾಗಿದ್ದರೆ– ಧರ್ಮವನ್ನು ಪಡೆಯುತ್ತಾನೆ. ಅರ್ಥವನ್ನು (ಸಂಪತ್ತನ್ನು) ಬಯಸುವವನಾಗಿದ್ದರೆ–ಸಂಪತ್ತನ್ನು ಪಡೆಯುತ್ತಾನೆ. ಕಾಮಗಳ ಅಪೇಕ್ಷೆಯಿದ್ದರೆ– ಕಾಮಗಳನ್ನು ಪಡೆಯುತ್ತಾನೆ. ಸಂತಾನದ ಅಪೇಕ್ಷೆಯಿದ್ದರೆ ಸಂತಾನವನ್ನು ಪಡೆಯುತ್ತಾನೆ.

ಶಂ. ಭಾ. :– ಕಾಮವೆಂದರೆ ಆತ್ಮ (ಚೈತನ್ಯ) ಯುಕ್ತವಾದ ಮನಸ್ಸಿನಿಂದ ಅಧಿಷ್ಠಿತವಾದ ಕಣ್ಣೇ ಮುಂತಾದ ಇಂದ್ರಿಯಗಳು–ತಮ್ಮ ತಮ್ಮ ವಿಷಯಗಳಲ್ಲಿ ಅನುಕೂಲವಾಗಿ ಉಂಟಾಗುವ ಪ್ರವೃತ್ತಿ.

ಪ. ಭ. :– ವರ್ಣವಿಶೇಷಗಳು ತಮ್ಮ ಕಾಮನೆಗೆ ತಕ್ಕಂತೆ ಪಡೆಯುವ ಅಭ್ಯುದಯಫಲವನ್ನು ಈ ಶ್ಲೋಕದಲ್ಲಿ ನೋಡುತ್ತೇವೆ.

ಭಕ್ತಿಮಾನ್ಯಃ ಸದೋತ್ಥಾಯ ಶುಚಿಸ್ತದ್ಗತಮಾನಸಃ ।
ಸಹಸ್ರಂ ವಾಸುದೇವಸ್ಯ ನಾಮ್ನಾಮೇತತ್ಪ್ರಕೀರ್ತಯೇತ್ ॥
ಯಶಃ ಪ್ರಾಪ್ನೋತಿ ವಿಪುಲಂ ಜ್ಞಾತಿಪ್ರಾಧಾನ್ಯಮೇವ ಚ ।
ಅಚಲಾಂ ಶ್ರಿಯಮಾಪ್ನೋತಿ ಶ್ರೇಯಃ ಪ್ರಾಪ್ನೋತ್ಯನುತ್ತಮಮ್ ॥

ಯಾವನು ಯಾವಾಗಲೂ ಭಕ್ತಿಯುತನಾಗಿ, ಎದ್ದು (ಉದ್ಯೋಗಶೀಲನಾಗಿ), ಶುದ್ಧನಾಗಿ, ಏಕಾಗ್ರಚಿತ್ತನಾಗಿ ವಾಸುದೇವನ ಸಾವಿರ ನಾಮಗಳನ್ನು ಸಂಕೀರ್ತನೆಮಾಡುತ್ತಾನೆಯೋ–ಅವನು ಹೇರಳವಾಗಿ ಕೀರ್ತಿಯನ್ನು ಪಡೆಯುತ್ತಾನೆ ; ಬಂಧುಗಳಲ್ಲಿ ಪ್ರಾಮುಖ್ಯವನ್ನು ಪಡೆಯುತ್ತಾನೆ ; ಸ್ಥಿರವಾದ ಸಂಪತ್ತನ್ನು ಪಡೆಯುತ್ತಾನೆ ; ಪರಮೋತ್ತಮವಾದ ಶ್ರೇಯಸ್ಸನ್ನು ಪಡೆಯುತ್ತಾನೆ.

ನ ಭಯಂ ಕ್ವಚಿದಾಪ್ನೋತಿ ವೀರ್ಯಂ ತೇಜಶ್ಚ ವಿನ್ದತಿ ।
ಭವತ್ಯರೋಗೋ ದ್ಯುತಿಮಾನ್ಬಲರೂಪಗುಣಾನ್ವಿತಃ ॥೧೨೭॥

ಅವನಿಗೆ ಎಲ್ಲಿಯೂ ಭಯವುಂಟಾಗುವುದಿಲ್ಲ. ಅವನು ವೀರ್ಯವನ್ನೂ ತೇಜಸ್ಸನ್ನೂ ಪಡೆಯುತ್ತಾನೆ. ರೋಗರಹಿತನೂ, ಕಾಂತಿಯುಕ್ತನೂ, ಬಲ-ರೂಪ-ಗುಣಗಳಿಂದ ಸಂಪನ್ನನೂ ಆಗುತ್ತಾನೆ.

ರೋಗಾರ್ತೋ ಮುಚ್ಯತೇ ರೋಗಾದ್ಬದ್ಧೋ ಮುಚ್ಯೇತ ಬನ್ಧನಾತ್ ।
ಭಯಾನ್ಮುಚ್ಯೇತ ಭೀತಸ್ತು ಮುಚ್ಯೇತಾಪನ್ನ ಆಪದಃ ॥೧೨೮॥

ರೋಗಿಯಾಗಿದ್ದರೆ ರೋಗದಿಂದಲೂ, ಬದ್ಧನಾಗಿದ್ದರೆ ಬಂಧನದಿಂದಲೂ, ಭಯಗ್ರಸ್ತನಾಗಿದ್ದರೆ ಭಯದಿಂದಲೂ, ವಿಪತ್ತಿಗೆ ಸಿಲುಕಿದವನಾಗಿದ್ದರೆ ವಿಪತ್ತಿನಿಂದಲೂ ಬಿಡುಗಡೆಯನ್ನು ಹೊಂದುತ್ತಾನೆ.

ದುರ್ಗಾಣ್ಯತಿತರತ್ಯಾಶು ಪುರುಷಃ ಪುರುಷೋತ್ತಮಮ್ ।
ಸ್ತುವನ್ನಾಮಸಹಸ್ರೇಣ ನಿತ್ಯಂ ಭಕ್ತಿಸಮನ್ವಿತಃ ॥೧೨೯॥

ಯಾವಾಗಲೂ ಭಕ್ತಿಯುಕ್ತನಾಗಿ ಪುರುಷೋತ್ತಮನನ್ನು (ಅವನ ಈ) ಸಹಸ್ರನಾಮಗಳಿಂದ ಸ್ತೋತ್ರಮಾಡುವ ಮನುಷ್ಯನು ಶೀಘ್ರದಲ್ಲಿಯೇ ಎಲ್ಲ ಕಷ್ಟಗಳನ್ನೂ ದಾಟಿಬಿಡುತ್ತಾನೆ.

ವಾಸುದೇವಾಶ್ರಯೋ ಮರ್ತ್ಯೋ ವಾಸುದೇವಪರಾಯಣಃ ।
ಸರ್ವಪಾಪವಿಶುದ್ಧಾತ್ಮಾ ಯಾತಿ ಬ್ರಹ್ಮ ಸನಾತನಮ್ ॥೧೩೦॥

ವಾಸುದೇವನನ್ನು ಆಶ್ರಯಿಸಿ ವಾಸುದೇವನನ್ನೇ ಶ್ರೇಷ್ಠಗತಿಯನ್ನಾಗಿ ನಂಬಿರುವ ಮನುಷ್ಯನು ಎಲ್ಲ ಪಾಪಗಳಿಂದಲೂ ಶುದ್ಧಿಪಡೆದ ಮನಸ್ಸುಳ್ಳವನಾಗಿ ಸನಾತನವಾದ ಪರಬ್ರಹ್ಮವನ್ನು ಪಡೆಯುತ್ತಾನೆ.

ನ ವಾಸುದೇವಭಕ್ತಾನುಮಶುಭಂ ವಿದ್ಯತೇ ಕ್ವಚಿತ್ ।
ಜನ್ಮಮೃತ್ಯುಜರಾವ್ಯಾಧಿಭಯಂ ನೈವೋಪಜಾಯತೇ ॥೧೩೧॥

ವಾಸುದೇವನ ಭಕ್ತರಿಗೆ ಎಲ್ಲಿಯೂ ಅಶುಭವುಂಟಾಗುವುದಿಲ್ಲ. ಹುಟ್ಟು, ಸಾವು, ಮುಪ್ಪು ಮತ್ತು ರೋಗಗಳ ಭಯವೂ ಉಂಟಾಗುವುದಿಲ್ಲ. (ಈ ಯಾವ ಭಯಗಳೂ ಇಲ್ಲದ ಮೋಕ್ಷವನ್ನು ಹೊಂದುತ್ತಾನೆ.)

ಇಮಂ ಸ್ತವಮಧೀಯಾನಃ ಶ್ರದ್ಧಾಭಕ್ತಿಸಮನ್ವಿತಃ ।
ಯುಜ್ಯೇತಾತ್ಮಸುಖಕ್ಷಾನ್ತಿಶ್ರೀಧೃತಿಸ್ಮೃತಿಕೀರ್ತಿಭಿಃ ॥೧೩೨॥

ಶ್ರದ್ಧಾ-ಭಕ್ತಿಗಳಿಂದ ಕೂಡಿದವನಾಗಿ ಈ ಸ್ತೋತ್ರವನ್ನು ಅಧ್ಯಯನ ಮಾಡುವವನು ಆತ್ಮಸುಖ, ಕ್ಷಮೆ, ಸಂಪತ್ತು, ಧೈರ್ಯ, ಸ್ಮೃತಿ, ಮತ್ತು ಕೀರ್ತಿಗಳಿಂದ ಸಂಪನ್ನನಾಗುತ್ತಾನೆ.

ಶಂ. ಭಾ. :– ಭಕ್ತಿಮಾನ್–ಇತ್ಯಾದಿ ಶ್ಲೋಕಗಳು ಭಕ್ತಿಯುಕ್ತನಾಗಿ, ಶುಚಿಯಾಗಿ, ಸದಾ ಉದ್ಯೋಗಶೀಲನಾಗಿ, ಏಕಾಗ್ರಚಿತ್ತನಾಗಿ ಶ್ರದ್ಧಾಳುವಾಗಿರುವ ವಿಶಿಷ್ಟನಾದ ಅಧಿಕಾರಿಗೆ ದೊರೆಯುವ ಫಲವಿಶೇಷವನ್ನು ಹೇಳುತ್ತವೆ. ಶ್ರದ್ಧಾ–ಎಂದರೆ ಆಸ್ತಿಕ್ಯಬುದ್ಧಿ. ಭಕ್ತಿ–ಎಂದರೆ ಸೇವಿಸುವಿಕೆ, ತತ್ಪರತೆ. ಆತ್ಮಸುಖ–ಎಂದರೆ ಆತ್ಮದ ಸುಖ. ಶ್ರದ್ಧಾ-ಭಕ್ತಿಗಳಿಂದ ಈ ಸ್ತೋತ್ರವನ್ನು ಅಧ್ಯಯನಮಾಡುವವನು ಆ ಆತ್ಮಸುಖದಿಂದಲೂ, ಕ್ಷಾನ್ತಿಯೇ ಮುಂತಾದ ಗುಣಗಳಿಂದಲೂ ಸಂಪನ್ನನಾಗುತ್ತಾನೆ.

ಪ. ಭ. :–೧೨೫ ರಿಂದ ೧೨೮ರವರೆಗಿನ ಈ ಶ್ಲೋಕಗಳು ನಿಯಮ

ವಿಶೇಷದಿಂದ ಕೂಡಿ ಜಪರೂಪದಿಂದ ಸಂಕೀರ್ತನೆಯನ್ನು ಮಾಡಿದರೆ ಭಕ್ತನಿಗೆ ಸರ್ವಸಮೃದ್ಧಿಯುಂಟಾಗುತ್ತದೆಯೆಂಬುದನ್ನು ನಿರೂಪಿಸುತ್ತವೆ. ಅನುತ್ತಮವಾದ ಶ್ರೇಯಸ್ಸು ಎಂದರೆ ಮುಕ್ತಿಯೇ. ಉಳಿದುವುಗಳು ಅಭ್ಯುದಯವಿಶೇಷಗಳು.

ಭಗವಂತನಲ್ಲಿ ಪರಮೈಕಾಂತಿಯಾಗಿ ಅನನ್ಯಭಕ್ತಿಯುಳ್ಳವನಿಗೆ ಅವನು ಪ್ರಾರ್ಥಿಸದಿದ್ದರೂ ಅನರ್ಥಗಳ ನಿವೃತ್ತಿಯುಂಟಾಗುತ್ತದೆಯೆಂಬುದನ್ನು ೧೨೯ನೆಯ ಶ್ಲೋಕವು ನಿರೂಪಿಸುತ್ತದೆ. ನಿಯಮಶಾಲಿಯಾದ ಭಕ್ತನಿಗೆ ಅನುಷಂಗಿಕವಾಗಿ ಅಭ್ಯುದಯಗಳು ಸಿದ್ಧಿಸುತ್ತವೆಯೆಂದು ೧೩೨ನೆಯ ಶ್ಲೋಕವು ನಿರೂಪಿಸುತ್ತದೆ. ಶ್ರದ್ಧಾ–ಎಂದರೆ ಗೌರವದಿಂದ ಕೂಡಿದ ತ್ವರೆ. ಆತ್ಮಾ–ಎಂದರೆ ಚೇತನ. ಭಗವಂತನಲ್ಲಿ ಭಕ್ತಿಯು ಮಹಾಸುಕೃತದ ಫಲವಾಗಿಯೇ ದೊರಕುವುದು. **ಗೋವಿಂದಭಕ್ತ್ಯಾಭ್ಯಧಿಕಂ ಶ್ರೇಯಶ್ಚಾನ್ಯನ್ನ ವಿದ್ಯತೇ ।**

ನ ಕ್ರೋಧೋ ನ ಚ ಮಾತ್ಸರ್ಯಂ ನ ಲೋಭೋ ನಾಶುಭಾ ಮತಿಃ ।
ಭವನ್ತಿ ಕೃತಪುಣ್ಯಾನಾಂ ಭಕ್ತಾನಾಂ ಪುರುಷೋತ್ತಮೇ ॥೧೩೩॥

ಪುಣ್ಯಶಾಲಿಯಾದ ಪುರುಷೋತ್ತಮನ ಭಕ್ತರಿಗೆ ಕ್ರೋಧ, ಮಾತ್ಸರ್ಯ, (ಇತರರ ಗುಣಗಳಲ್ಲಿ ದೋಷದೃಷ್ಟಿಯನ್ನಿಡುವಿಕೆ) ಲೋಭ ಮತ್ತು ಅಶುಭವಾದ ಮತಿ–ಇವುಗಳು ಉಂಟಾಗುವುದಿಲ್ಲ.

ದ್ಯೌಃ ಸಚನ್ದ್ರಾರ್ಕನಕ್ಷತ್ರಾ ಖಂ ದಿಶೋ ಭೂರ್ಮಹೋದಧಿಃ ।
ವಾಸುದೇವಸ್ಯ ವೀರ್ಯೇಣ ವಿಧೃತಾನಿ ಮಹಾತ್ಮನಃ ॥೧೩೪॥

ಚಂದ್ರ, ಸೂರ್ಯ ಮತ್ತು ನಕ್ಷತ್ರಗಳಿಂದ ಕೂಡಿದ ಸ್ವರ್ಗ, ಆಕಾಶ, ದಿಕ್ಕುಗಳು, ಭೂಮಿ ಮತ್ತು ಸಮುದ್ರ–ಇವುಗಳೆಲ್ಲವೂ ಮಹಾತ್ಮನಾದ ವಾಸುದೇವನ ವೀರ್ಯದಿಂದಲೇ ಧರಿಸಲ್ಪಟ್ಟಿವೆ.

ಸಸುರಾಸುರಗನ್ಧರ್ವಂ ಸಯಕ್ಷೋರಗರಾಕ್ಷಸಮ್ ।
ಜಗದ್ವಶೇ ವರ್ತತೇದಂ ಕೃಷ್ಣಸ್ಯ ಸಚರಾಚರಮ್ ॥೧೩೫॥

ದೇವತೆಗಳು, ಅಸುರರು, ಗಂಧರ್ವರು, ಯಕ್ಷರು, ಸರ್ಪಗಳು ಮತ್ತು ರಾಕ್ಷಸರಿಂದ ಕೂಡಿದ ಈ ಸಂಪೂರ್ಣವಾದ ಚರಾಚರಜಗತ್ತೂ ಶ್ರೀಕೃಷ್ಣನಿಗೇ ಅಧೀನವಾಗಿದೆ.

ಇನ್ದ್ರಿಯಾಣಿ ಮನೋ ಬುದ್ಧಿಃ ಸತ್ತ್ವಂ ತೇಜೋ ಬಲಂ ಧೃತಿಃ ।
ವಾಸುದೇವಾತ್ಮಕಾನ್ಯಾಹುಃ ಕ್ಷೇತ್ರಂ ಕ್ಷೇತ್ರಜ್ಞ ಏವ ಚ ॥೧೩೬॥

ಇಂದ್ರಿಯಗಳು, ಮನಸ್ಸು, ಬುದ್ಧಿ, ಅಂತಃಕರಣ, ತೇಜಸ್ಸು, ಬಲ, ಧೃತಿ (ಧೈರ್ಯ), ಕ್ಷೇತ್ರ ಮತ್ತು ಕ್ಷೇತ್ರಜ್ಞ–ಇವೆಲ್ಲವನ್ನೂ ಜ್ಞಾನಿಗಳು 'ವಾಸುದೇವಾತ್ಮಕ' ಎಂದೇ ಹೇಳುತ್ತಾರೆ.

ಸರ್ವಾಗಮಾನಾಮಾಚಾರಃ ಪ್ರಥಮಂ ಪರಿಕಲ್ಪತೇ ।
ಆಚಾರಪ್ರಭವೋ ಧರ್ಮೋ ಧರ್ಮಸ್ಯ ಪ್ರಭುರಚ್ಯುತಃ ॥೧೩೭॥

ಎಲ್ಲ ಆಗಮಗಳಲ್ಲಿಯೂ ಎಲ್ಲಕ್ಕಿಂತಲೂ ಮೊದಲು ಆಚಾರವು ಪರಿಗಣಿತವಾಗಿದೆ. (ಆಚಾರವೇ ಧರ್ಮಪ್ರಮಾಣಗಳಲ್ಲಿ ಮೊಟ್ಟಮೊದಲನೆಯದು.) ಆಚಾರದಿಂದಲೇ ಧರ್ಮವು ಉಂಟಾಗುವುದು. ಆ ಧರ್ಮದ ಪ್ರಭುವು ಶ್ರೀ ಅಚ್ಯುತನೇ ಆಗಿದ್ದಾನೆ.

ಋಷಯಃ ಪಿತರೋ ದೇವಾ ಮಹಾಭೂತಾನಿ ಧಾತವಃ ।
ಜಙ್ಗಮಾಜಙ್ಗಮಂ ಚೇದಂ ಜಗನ್ನಾರಾಯಣೋದ್ಭವಮ್ ॥೧೩೮॥

ಋಷಿಗಳು, ಪಿತೃಗಳು, ದೇವತೆಗಳು, ಮಹಾಭೂತಗಳು, ಧಾತುಗಳು ಮತ್ತು ಈ ಚರಾಚರವಾದ ಜಗತ್ತು ನಾರಾಯಣನಿಂದಲೇ ಉತ್ಪನ್ನವಾಗಿವೆ.

ಯೋಗೋ ಜ್ಞಾನಂ ತಥಾ ಸಾಂಖ್ಯಂ ವಿದ್ಯಾಃ ಶಿಲ್ಪಾದಿಕರ್ಮ ಚ ।
ವೇದಾಃ ಶಾಸ್ತ್ರಾಣಿ ವಿಜ್ಞಾನಮೇತತ್ಸರ್ವಂ ಜನಾರ್ದನಾತ್ ॥೧೩೯॥

ಯೋಗ, ಜ್ಞಾನ, ಸಾಂಖ್ಯವೇ ಮುಂತಾದ ವಿದ್ಯೆಗಳು, ಶಿಲ್ಪವೇ ಮುಂತಾದ ಕರ್ಮಗಳು ಮತ್ತು ವೇದ, ಶಾಸ್ತ್ರ ಮತ್ತು ವಿಜ್ಞಾನ–ಇವೆಲ್ಲವೂ ಶ್ರೀಜನಾರ್ದನನಿಂದಲೇ ಉಂಟಾಗಿವೆ.

ಏಕೋ ವಿಷ್ಣುರ್ಮಹದ್ಭೂತಂ ಪೃಥಗ್ಭೂತಾನ್ಯನೇಕಶಃ ।
ತ್ರೀಂಲ್ಲೋಕಾನ್ವ್ಯಾಪ್ಯ ಭೂತಾತ್ಮಾ ಭುಙ್ಕ್ತೇ ವಿಶ್ವಭುಗವ್ಯಯಃ ॥೧೪೦॥

ಏಕಮಾತ್ರನಾದ ವಿಷ್ಣುವೇ ದೊಡ್ಡ ಭೂತವು. (ಮಹತ್ತಾದ ಸತ್ತೆಯು). ಬೇರೆ ಬೇರೆ ಭೂತಗಳು (ಅವನ ಅಂಶವಾಗಿ) ನಾನಾಪ್ರಕಾರವಾಗಿವೆ. ಸರ್ವಭೂತಾತ್ಮನೂ, ವಿಶ್ವಭೋಕ್ತೃವೂ, ಅವ್ಯಯನೂ ಆದ ಆ

ವಿಷ್ಣುವೇ ಮೂರು ಲೋಕಗಳನ್ನೂ ವ್ಯಾಪಿಸಿ ನಾನಾಭೂತಗಳನ್ನು ಬಗೆ-ಬಗೆಯಾಗಿ ಭೋಗಿಸುತ್ತಾನೆ.

ಪ. ಭ. :– ೧೩೪ರಿಂದ ೧೪೦ ನೆಯವರೆಗಿನ ಈ ಶ್ಲೋಕಗಳಲ್ಲಿ ಸ್ತೋತ್ರಾರ್ಹನಾಗಿರುವ ವಾಸುದೇವನ ಮಾಹಾತ್ಮ್ಯವನ್ನು ಹೇಳುವುದರಿಂದ ಮೇಲೆ ಹೇಳಿದ ಫಲಶ್ರುತಿಯು ಸತ್ಯಾರ್ಥದ ಹೇಳಿಕೆಯೇ ಹೊರತು ಅರ್ಥವಾದ (ಅಭಿರುಚಿಯನ್ನು ಉಂಟುಮಾಡಲು ಹೇಳಿರುವ ಮಿಥ್ಯಾಪ್ರಶಂಸೆ) ಅಲ್ಲ–ಎಂದು ತಿಳಿಯಬೇಕು. **ಸರ್ವಾಗಮಾನಾಮಾಚಾರಃ**–ಎಂಬ ಮಧ್ಯದ ವಾಕ್ಯದಿಂದ ಆಚಾರಶೀಲನಿಗೆ ಮಾತ್ರವೇ ಎಲ್ಲ ಧರ್ಮಗಳಲ್ಲಿಯೂ ಅಧಿಕಾರವೆಂಬುದು ತೋರಿಸಲ್ಪಡುತ್ತದೆ.

ವಾಸುದೇವಾತ್ಮಕಾನಿ : ಹೀಗೆ ತತ್ತ್ವಶಾಸ್ತ್ರಗಳೂ ಅನುಷ್ಠಾನಶಾಸ್ತ್ರಗಳೂ ಆ ಪರವಾಸುದೇವನಿಗೆ ಅಧೀನವೆಂಬುದನ್ನು ಹೇಳಿಯಾದ ಬಳಿಕ ಮಂದಾಧಿಕಾರಿಗಳ ಭಯವನ್ನು ಕೂಡ ಹೋಗಲಾಡಿಸಲು **ಸರ್ವಾಗಮಾನಾಂ**–ಎಂಬ ಶ್ಲೋಕವನ್ನು ಹೇಳಿದೆ. ಎಲ್ಲ ಧರ್ಮಪ್ರಮಾಣಗಳಲ್ಲಿ ಮೊದಲು ಪ್ರತಿಪಾದಿಸಲ್ಪಡುವ ಧರ್ಮವು ಆಚಾರವೇ. (ಶೌಚವೇ ಮುಂತಾದುದು ಆ ಆಚಾರ.) ಆ ಆಚಾರಕ್ಕೆ ಅಂಗವಾಗಿದೆ ಶ್ರೌತಧರ್ಮ. ಅವೆಲ್ಲಕ್ಕೂ ಆರಾಧ್ಯನೂ ಫಲಪ್ರದಾಯಕನೂ ಮತ್ತು ಸಹಾಯಕನೂ ಶ್ರೀ ಅಚ್ಯುತನೇ.

ಧರ್ಮಕ್ಕೆ ಅನುಬಂಧಿಗಳಾದ ಋಷಿಗಳೇ ಮುಂತಾದವರು ಆ ಭಗವಂತನಿಂದಲೇ ಉಂಟಾಗಿದ್ದಾರೆ. ಋಷಿಗಳೂ, ಮನುವೇ ಮುಂತಾದ ಸ್ಮೃತಿಕಾರರೂ, ಅನುಷ್ಠಾನಮಾಡುವವರೂ ಮತ್ತು ಮಧ್ಯದಲ್ಲಿ ಆರಾಧಿಸಲ್ಪಡುವ ಪಿತೃಗಳೂ ಮತ್ತು ದೇವತೆಗಳೂ, ಆಕಾಶಾದಿ ಮಹಾಭೂತಗಳೂ, ಅದರ ಕಾರ್ಯಗಳಾದ ಚರ್ಮವೇ ಮುಂತಾದ ಧಾತುಗಳೂ, ಧರ್ಮಫಲವನ್ನು ಉಪಭೋಗಿಸಲು ಬೇಕಾದ ಈ ಉಪಕರಣಗಳೂ ಮತ್ತು ಭೋಕ್ತೃವರ್ಗ, ಚರಾಚರಜಗತ್ತೂ–ಈ ಎಲ್ಲವೂ ನಾರಾಯಣನಿಂದಲೇ ಉಂಟಾಗಿವೆ. ಜ್ಞಾನಕ್ಕೂ ಕೂಡ ಅವನೇ ಕಾರಣನು. ಜ್ಞಾನವೂ, ಸಮಾಧಿಯೋಗ ಮತ್ತು ಕರ್ಮಯೋಗಗಳೂ, ಸಾಂಖ್ಯವೂ (ಸಂಖ್ಯೆಯಿಂದ ತತ್ತ್ವಗಳನ್ನು ನಿರ್ಧರಿಸುವ ಶಾಸ್ತ್ರವೂ), ಧನುರ್ವೇದ-ಗಾಂಧರ್ವವೇದಗಳೇ ಮುಂತಾದ ಉಪವೇದಗಳೂ, ಶಿಲ್ಪಗಳೂ, ಅನುಷ್ಠಾನಕರ್ಮ

ಗಳೂ, ವೇದಗಳೂ, ಸ್ಮೃತಿ-ಇತಿಹಾಸ-ಪುರಾಣಗಳೂ, ಎಲ್ಲ ವಿಜ್ಞಾನವೂ ಜನಾರ್ದನನಿಂದಲೇ ಉಂಟಾಗುತ್ತವೆ.

ಏಕೋ ವಿಷ್ಣುಃ :– ಅವನ ಮಹಾವಿಭೂತಿಯು ವಿಚಿತ್ರವಾದುದು. ಅವನ ನಿರ್ವಹಣೆಯು ದೊಡ್ಡದು. ಅವನು ಒಬ್ಬನೇ ಆಗಿದ್ದು ಅಸಂಖ್ಯವಾಗಿ ರುವ ಮತ್ತು ರೂಪ, ಪ್ರಕಾರ, ಪರಿಣಾಮ ಮತ್ತು ಪ್ರಯೋಜನಗಳಿಂದ ಬೇರೆ ಬೇರೆಯಾಗಿರುವ ಮಹಾಭೂತಗಳನ್ನೂ, ಮೂರು ಲೋಕಗಳನ್ನೂ, ಬದ್ಧ-ಮುಕ್ತ-ನಿತ್ಯರೆಂಬ ಚೇತನರನ್ನೂ ವ್ಯಾಪಿಸಿ, ಅವುಗಳನ್ನೂ ನಿಯಮಿ ಸುತ್ತಾ ಅವುಗಳಿಗೆ ಶೇಷಿಯಾಗಿ, ಆತ್ಮವಾಗಿ ವಿಶ್ವವನ್ನು ಪರಿಪಾಲಿಸುತ್ತಿದ್ದಾನೆ. ಅವ್ಯಯನೂ ಆಗಿದ್ದಾನೆ. ಅವುಗಳ ದೋಷದಿಂದ ತಾನು ಲಿಪ್ತನಾಗದೆ, ಪರಾವಿಭೂತಿಯಿಂದ ಕೂಡಿದ ಮಹಾಭೂತವಾಗಿದ್ದಾನೆ. ಮಾತು-ಮನಸ್ಸು ಗಳಿಗೆ ನಿಲುಕುವುದಿಲ್ಲ. ಈ ಜಗತ್ತಿನಲ್ಲಿ ಭೋಗರಸವನ್ನು ಅನುಭವಿಸುತ್ತಿ ದ್ದಾನೆ ಮಹಾಮಹಿಮನಾದ ಭಗವಂತ.

ಇಮಂ ಸ್ತವಂ ಭಗವತೋ ವಿಷ್ಣೋರ್ವ್ಯಾಸೇನ ಕೀರ್ತಿತಮ್ ।
ಪಠೇದ್ಯ ಇಚ್ಛೇತ್ಪುರುಷಃ ಶ್ರೇಯಃ ಪ್ರಾಪ್ತುಂ ಸುಖಾನಿ ಚ ॥೧೪೧॥

ಶ್ರೇಯಸ್ಸನ್ನೂ ಮತ್ತು ಸುಖವನ್ನೂ ಪಡೆಯುವ ಇಚ್ಛೆಯುಳ್ಳ ಮನುಷ್ಯನು ಶ್ರೀವೇದವ್ಯಾಸರು ಹೇಳಿರುವ ಭಗವಂತನಾದ ವಿಷ್ಣುವಿನ ಈ ಸ್ತೋತ್ರವನ್ನು ಪಠನಮಾಡಬೇಕು. (ಪಾರಾಯಣಮಾಡಬೇಕು.)

ಶಂ. ಭಾ. :– ಸಹಸ್ರಶಾಖೆಗಳಾಗಿ ವಿಸ್ತೃತವಾಗಿರುವ ವೇದಗಳೆಲ್ಲ ವನ್ನೂ ಅರಿತಿರುವ, ಸರ್ವಜ್ಞನಾದ, ಭಗವಾನ್ ಕೃಷ್ಣದ್ವೈಪಾಯನರೂಪಿ ಯಾದ ಸಾಕ್ಷಾತ್ ನಾರಾಯಣನಿಂದಲೇ ರಚಿತವಾದ ಸ್ತೋತ್ರವಿದು. ಆದ್ದ ರಿಂದ ಎಲ್ಲರೂ ಆದರಪೂರ್ವಕವಾಗಿ ಸರ್ವಫಲಸಿದ್ಧಿಗಾಗಿ ಇದನ್ನು ಸೇವಿಸ ಬೇಕು.

ಪ. ಭ. :– ಸ್ತುತಿಸಲ್ಪಡುತ್ತಿರುವವನು ಭಗವಂತನು. ಇಂತಹ ಮಹಾಮಹಿಮನಾದ ಭಗವಂತನನ್ನು ತನ್ನ ಮಾತಿನ ವೈಭವದಿಂದ ಚೆನ್ನಾಗಿ ಸ್ತುತಿಸುತ್ತಿರುವವರು ಭಗವಂತರಾದ ವ್ಯಾಸರು. ಹೀಗೆ ಎರಡು ಮಾಂಗಲ್ಯ ಗಳ ಮಹಿಮೆಯಿಂದ ಕೂಡಿದ ಸ್ತೋತ್ರರತ್ನವಿದು. ಇದರ ಅನುಸಂಧಾನ

ದಿಂದ ಜಗತ್ತಿನ ದಾರಿದ್ರ್ಯವು ನಾಶವಾಗುತ್ತದೆ. ಪರಾವರಶ್ರೇಯಸ್ಸನ್ನು ಬಯಸುವವರೆಲ್ಲರೂ ಯಾವ ಶಂಕೆಯೂ ಇಲ್ಲದೇ ಇದನ್ನು ಸೇವಿಸಲಿ.

ವಿಶ್ವೇಶ್ವರಮಜಂ ದೇವಂ ಜಗತಃ ಪ್ರಭವಾಪ್ಯಯಮ್ ।
ಭಜನ್ತಿ ಯೇ ಪುಷ್ಕರಾಕ್ಷಂ ನ ತೇ ಯಾನ್ತಿ ಪರಾಭವಮ್ ॥೧೪೨॥

ವಿಶ್ವೇಶ್ವರನೂ, ಜನ್ಮರಹಿತನೂ, ಪ್ರಪಂಚದ ಉತ್ಪತ್ತಿ ಮತ್ತು ಲಯಗಳಿಗೆ ಕಾರಣನೂ ಆಗಿರುವ ಸ್ವಾಮೀ ಪುಂಡರೀಕಾಕ್ಷನನ್ನು ಯಾರು ಭಜಿಸುತ್ತಾರೆಯೋ–ಅವರಿಗೆ ಎಂದೂ ಪರಾಭವವು ಉಂಟಾಗುವುದಿಲ್ಲ.

ಶಂ. ಭಾ. :– ಹಾಗೆ ಸ್ತೋತ್ರಮಾಡುವವರೆಲ್ಲರೂ ಶ್ರೀವಿಶ್ವೇಶ್ವರನ ಉಪಾಸನೆಯಿಂದಲೇ ಧನ್ಯರಾಗುತ್ತಾರೆ. ಕರ್ಮಗಳನ್ನು ಮಾಡುವವರು ಪ್ರಮಾದವಶದಿಂದ ಯಜ್ಞದಲ್ಲಿ ಯಾವುದನ್ನಾದರೂ ಜಾರಿಸಿಬಿಟ್ಟರೂ ಶ್ರೀಮಹಾವಿಷ್ಣುವಿನ ಸ್ಮರಣಮಾತ್ರದಿಂದಲೇ ಅದು ಪೂರ್ಣವಾಗುತ್ತದೆ–ಎಂದು ಶ್ರುತಿಯು ಹೇಳುತ್ತದೆ. ಮನುಷ್ಯನು ಹಣಕ್ಕಾಗಿ ಶ್ರೀಮಂತನನ್ನು ಆದರದಿಂದ ಸ್ತುತಿಸುತ್ತಾನೆ. ಅದೇ ರೀತಿಯಲ್ಲಿ ವಿಶ್ವಕರ್ತೃವಾದ ಭಗವಂತನನ್ನು ಸ್ತುತಿಸಿದರೆ ಯಾವನು ತಾನೇ ಮುಕ್ತನಾಗುವುದಿಲ್ಲ?

ಪ. ಭ. :– ಹೀಗೆ ಸ್ವಾಭಾವಿಕವಾಗಿಯೇ ಕಲ್ಯಾಣಗುಣನಿಧಿಯೂ, ಪ್ರಪನ್ನಪಾರಿಜಾತನೂ, ಪುಂಡರೀಕಾಕ್ಷನೂ, ಲಕ್ಷ್ಮೀಪತಿಯೂ ಆದ ಶ್ರೀ ಭಗವಂತನನ್ನು ಭಜಿಸುವವರಿಗೆ ಆತನೇ ಸರ್ವಸ್ವನು. ಅಂತಹ ಪರಮಭಕ್ತರ ಸಂಪತ್ತುಗಳ ಮಾತಿನಿಂದ ವರ್ಣಿಸಲು ಸಾಧ್ಯವಾಗತಕ್ಕುವುಗಳಲ್ಲ. ಸಾಂಸಾರಿಕವಾದ ಪರಿಭವಗಳೂ ಅವನನ್ನು ಮುಟ್ಟುವ ಪ್ರಸಂಗವೇ ಇಲ್ಲ.

ಈ ಅಭಿಪ್ರಾಯವನ್ನು ಶಪಥಮಾಡುತ್ತಾ–ನ ತೇ ಯಾನ್ತಿ ಪರಾಭವಮ್ । ಎಂಬುದನ್ನು ಆವೃತ್ತಿಮಾಡುತ್ತಾರೆ.

೧೪೯ನೆಯ ಅಧ್ಯಾಯವು ಮುಗಿಯಿತು.

೨೯ನೆಯ ಸಂಪುಟವು ಮುಗಿಯಿತು.

ಶ್ರೀಕೃಷ್ಣಾರ್ಪಣಮಸ್ತು
ಶ್ರೀಸದ್ಗುರುಚರಣಾರವಿನ್ದಾರ್ಪಣಮಸ್ತು
ಓಂ ತತ್ಸತ್

ಪರಿಶಿಷ್ಟ-೧

ಶ್ರೀವಿಷ್ಣುಸಹಸ್ರನಾಮಸ್ತೋತ್ರಮ್

ಶುಕ್ಲಾಮ್ಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಮ್ ।
ಪ್ರಸನ್ನವದನಂ ಧ್ಯಾಯೇತ್ಸರ್ವವಿಘ್ನೋಪಶಾನ್ತಯೇ ॥೧॥

ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್ ।
ದೇವೀಂ ಸರಸ್ವತೀಂ ಚೈವ ತತೋ ಜಯಮುದೀರಯೇತ್ ॥೨॥

ವ್ಯಾಸಂ ವಸಿಷ್ಠನಪ್ತಾರಂ ಶಕ್ತೇಃ ಪೌತ್ರಮಕಲ್ಮಷಮ್ ।
ಪರಾಶರಾತ್ಮಜಂ ವನ್ದೇ ಶುಕತಾತಂ ತಪೋನಿಧಿಮ್ ॥೩॥

ವ್ಯಾಸಾಯ ವಿಷ್ಣುರೂಪಾಯ ವ್ಯಾಸರೂಪಾಯ ವಿಷ್ಣವೇ ।
ನಮೋ ವೈ ಬ್ರಹ್ಮನಿಧಯೇ ವಾಸಿಷ್ಠಾಯ ನಮೋ ನಮಃ ॥೪॥

ಅವಿಕಾರಾಯ ಶುದ್ಧಾಯ ನಿತ್ಯಾಯ ಪರಮಾತ್ಮನೇ ।
ಸದೈಕರೂಪರೂಪಾಯ ವಿಷ್ಣವೇ ಸರ್ವಜಿಷ್ಣವೇ ॥೫॥

ಯಸ್ಯ ಸ್ಮರಣಮಾತ್ರೇಣ ಜನ್ಮಸಂಸಾರಬನ್ಧನಾತ್ ।
ವಿಮುಚ್ಯತೇ ನಮಸ್ತಸ್ಮೈ ವಿಷ್ಣವೇ ಪ್ರಭವಿಷ್ಣವೇ ॥೬॥

ನಮಃ ಸಮಸ್ತಭೂತಾನಾಮಾದಿಭೂತಾಯ ಭೂಭೃತೇ ।
ಅನೇಕರೂಪರೂಪಾಯ ವಿಷ್ಣವೇ ಪ್ರಭವಿಷ್ಣವೇ ।
ಓಂ ನಮೋ ವಿಷ್ಣವೇ ಪ್ರಭವಿಷ್ಣವೇ ॥೭॥

ಶ್ರೀ ವೈಶಂಪಾಯನ ಉವಾಚ :

ಶ್ರುತ್ವಾ ಧರ್ಮಾನಶೇಷೇಣ ಪಾವನಾನಿ ಚ ಸರ್ವಶಃ ।
ಯುಧಿಷ್ಠಿರಃ ಶಾನ್ತನವಂ ಪುನರೇವಾಭ್ಯಭಾಷತ ॥೮॥

ಯುಧಿಷ್ಠಿರ ಉವಾಚ :

ಕಿಮೇಕಂ ದೈವತಂ ಲೋಕೇ ಕಿಂ ವಾಪ್ಯೇಕಂ ಪರಾಯಣಮ್ ।
ಸ್ತುವನ್ತಃ ಕಂ ಕಮರ್ಚನ್ತಃ ಪ್ರಾಪ್ನುಯುರ್ಮಾನವಾಃ ಶುಭಮ್ ॥೯॥
ಕೋ ಧರ್ಮಃ ಸರ್ವಧರ್ಮಾಣಾಂ ಭವತಃ ಪರಮೋ ಮತಃ ।
ಕಿಂ ಜಪನ್ಮುಚ್ಯತೇ ಜನ್ತುರ್ಜನ್ಮಸಂಸಾರಬನ್ಧನಾತ್ ॥೧೦॥

ಶ್ರೀ ಭೀಷ್ಮ ಉವಾಚ :

ಜಗತ್ಪ್ರಭುಂ ದೇವದೇವಮನನ್ತಂ ಪುರುಷೋತ್ತಮಮ್ ।
ಸ್ತುವನ್ನಾಮಸಹಸ್ರೇಣ ಪುರುಷಃ ಸತತೋತ್ಥಿತಃ ॥೧೧॥

ತಮೇವ ಚಾರ್ಚಯನ್ನಿತ್ಯಂ ಭಕ್ತ್ಯಾ ಪುರುಷಮವ್ಯಯಮ್ ।
ಧ್ಯಾಯನ್ ಸ್ತುವನ್ನಮಸ್ಯಂಶ್ಚ ಯಜಮಾನಸ್ತಮೇವ ಚ ॥೧೨॥

ಅನಾದಿನಿಧನಂ ವಿಷ್ಣುಂ ಸರ್ವಲೋಕಮಹೇಶ್ವರಮ್ ।
ಲೋಕಾಧ್ಯಕ್ಷಂ ಸ್ತುವನ್ನಿತ್ಯಂ ಸರ್ವದುಃಖಾತಿಗೋ ಭವೇತ್ ॥೧೩॥

ಬ್ರಹ್ಮಣ್ಯಂ ಸರ್ವಧರ್ಮಜ್ಞಂ ಲೋಕಾನಾಂ ಕೀರ್ತಿವರ್ಧನಮ್ ।
ಲೋಕನಾಥಂ ಮಹದ್ಭೂತಂ ಸರ್ವಭೂತಭವೋದ್ಭವಮ್ ॥೧೪॥

ಏಷ ಮೇ ಸರ್ವಧರ್ಮಾಣಾಂ ಧರ್ಮೋಽಧಿಕತಮೋ ಮತಃ ।
ಯದ್ಭಕ್ತ್ಯಾ ಪುಣ್ಡರೀಕಾಕ್ಷಂ ಸ್ತವೈರರ್ಚೇನ್ನರಃ ಸದಾ ॥೧೫॥

ಪರಮಂ ಯೋ ಮಹತ್ತೇಜಃ ಪರಮಂ ಯೋ ಮಹತ್ತಪಃ ।
ಪರಮಂ ಯೋ ಮಹದ್ಬ್ರಹ್ಮ ಪರಮಂ ಯಃ ಪರಾಯಣಮ್ ॥೧೬॥

ಪವಿತ್ರಾಣಾಂ ಪವಿತ್ರಂ ಯೋ ಮಙ್ಗಲಾನಾಂ ಚ ಮಙ್ಗಲಮ್ ।
ದೈವತಂ ದೇವತಾನಾಂ ಚ ಭೂತಾನಾಂ ಯೋಽವ್ಯಯಃ ಪಿತಾ ॥೧೭॥

ಯತಃ ಸರ್ವಾಣಿ ಭೂತಾನಿ ಭವನ್ತ್ಯಾದಿಯುಗಾಗಮೇ ।
ಯಸ್ಮಿಂಶ್ಚ ಪ್ರಲಯಂ ಯಾನ್ತಿ ಪುನರೇವ ಯುಗಕ್ಷಯೇ ॥೧೮॥

ತಸ್ಯ ಲೋಕಪ್ರಧಾನಸ್ಯ ಜಗನ್ನಾಥಸ್ಯ ಭೂಪತೇ ।
ವಿಷ್ಣೋರ್ನಾಮಸಹಸ್ರಂ ಮೇ ಶೃಣು ಪಾಪಭಯಾಪಹಮ್ ॥೧೯॥

ಯಾನಿ ನಾಮಾನಿ ಗೌಣಾನಿ ವಿಖ್ಯಾತಾನಿ ಮಹಾತ್ಮನಃ ।
ಋಷಿಭಿಃ ಪರಿಗೀತಾನಿ ತಾನಿ ವಕ್ಷ್ಯಾಮಿ ಭೂತಯೇ ॥೨೦॥

ಋಷಿರ್ನಾಮ್ನಾಂ ಸಹಸ್ರಸ್ಯ ವೇದವ್ಯಾಸೋ ಮಹಾಮುನಿಃ ।
ಛಂದೋಽನುಷ್ಟುಪ್ತಥಾ ದೇವೋ ಭಗವಾನ್ದೇವಕೀಸುತಃ ॥೨೧॥

ಅಮೃತಾಂಶೂದ್ಭವೋ ಬೀಜಂ ಶಕ್ತಿರ್ದೇವಕಿನನ್ದನಃ ।
ತ್ರಿಸಾಮಾ ಹೃದಯಂ ತಸ್ಯ ಶಾನ್ತ್ಯರ್ಥೇ ವಿನಿಯುಜ್ಯತೇ ॥೨೨॥

ವಿಷ್ಣುಂ ಜಿಷ್ಣುಂ ಮಹಾವಿಷ್ಣುಂ ಪ್ರಭುವಿಷ್ಣುಂ ಮಹೇಶ್ವರಮ್ ।
ಅನೇಕರೂಪಂ ದೈತ್ಯಾನ್ತಂ ನಮಾಮಿ ಪುರುಷೋತ್ತಮಮ್ ॥೨೩॥

ಅಸ್ಯ ಶ್ರೀವಿಷ್ಣೋರ್ದಿವ್ಯಸಹಸ್ರನಾಮಸ್ತೋತ್ರಮಹಾಮನ್ತ್ರಸ್ಯ। ಶ್ರೀವೇದವ್ಯಾಸೋ ಭಗವಾನ್ ಋಷಿಃ। ಅನುಷ್ಟುಪ್ ಛಂದಃ। ಶ್ರೀಮಹಾವಿಷ್ಣುಃ ಪರಮಾತ್ಮಾ ಶ್ರೀಮನ್ನಾರಾಯಣೋ ದೇವತಾ। ಅಮೃತಾಂಶೂದ್ಭವೋ ಭಾನುರಿತಿ ಬೀಜಂ। ದೇವಕೀ ನಂದನಃ ಸ್ರಷ್ಟೇತಿ ಶಕ್ತಿಃ। ಉದ್ಭವಃ ಕ್ಷೋಭಣೋ ದೇವ ಇತಿ ಪರಮೋ ಮಂತ್ರಃ। ಶಂಖಭೃನ್ನಂದಕೀ ಚಕ್ರೀತಿ ಕೀಲಕಂ। ಶಾರ್ಙ್ಗಧನ್ವಾ ಗದಾಧರ ಇತ್ಯಸ್ತ್ರಂ । ರಥಾಙ್ಗಪಾಣಿರಕ್ಷೋಭ್ಯ ಇತಿ ನೇತ್ರಂ । ತ್ರಿಸಾಮಾ ಸಾಮಗಃ ಸಾಮೇತಿ ಕವಚಮ್। ಆನಂದಂ ಪರಬ್ರಹ್ಮೇತಿ ಯೋನಿಃ। ಋತುಃ ಸುದರ್ಶನಃ ಕಾಲ ಇತಿ ದಿಗ್ಬನ್ಧಃ। ಶ್ರೀವಿಶ್ವರೂಪ ಇತಿ ಧ್ಯಾನಮ್। ಶ್ರೀಮಹಾವಿಷ್ಣುಪ್ರೀತ್ಯರ್ಥೇ ಸಹಸ್ರನಾಮಜಪೇ ಪಾರಾಯಣೇ ವಿನಿಯೋಗಃ ॥

ಧ್ಯಾನಮ್

ಕ್ಷೀರೋದನ್ವತ್ಪ್ರದೇಶೇ ಶುಚಿಮಣಿವಿಲಸತ್ಸೈಕತೇ ಮೌಕ್ತಿಕಾನಾಂ
ಮಾಲಾಕ್ಲೃಪ್ತಾಸನಸ್ಥಃ ಸ್ಫಟಿಕಮಣಿನಿಭೈರ್ಮೌಕ್ತಿಕೈರ್ಮಣ್ಡಿತಾಙ್ಗಃ ।

ಶುಭ್ರೈರಭ್ರೈರದಭ್ರೈರುಪರಿ ವಿರಚಿತೈರ್ಮುಕ್ತಪೀಯೂಷವರ್ಷೈ-
ರಾನನ್ದೀ ನಃ ಪುನೀಯಾದರಿನಲಿನಗದಾಶಙ್ಖಪಾಣಿರ್ಮುಕುನ್ದಃ ॥

ಭೂಃ ಪಾದೌ ಯಸ್ಯ ನಾಭಿ-
ರ್ವಿಯದಸುರನಿಲಶ್ಚನ್ದ್ರಸೂರ್ಯೌ ಚ ನೇತ್ರೇ
ಕರ್ಣಾವಾಶಾಃ ಶಿರೋದ್ಯೌ-
ರ್ಮುಖಮಪಿ ದಹನೋ ಯಸ್ಯ ವಾಸೋಽಯಮಬ್ಧಿಃ ॥

ಅನ್ತಃಸ್ಥಂ ಯಸ್ಯ ವಿಶ್ವಂ
ಸುರನರಖಗಗೋಭೋಗಿಗನ್ಧರ್ವದೈತ್ಯೈಃ

ಚಿತ್ರಂ ರಂರಮ್ಯತೇ ತಂ
ತ್ರಿಭುವನವಪುಷಂ ವಿಷ್ಣುಮೀಶಂ ನಮಾಮಿ ॥

ಓಂ ನಮೋ ಭಗವತೇ ವಾಸುದೇವಾಯ ॥

ಶಾನ್ತಾಕಾರಂ ಭುಜಗಶಯನಂ ಪದ್ಮನಾಭಂ ಸುರೇಶಂ
ವಿಶ್ವಾಧಾರಂ ಗಗನಸದೃಶಂ ಮೇಘವರ್ಣಂ ಶುಭಾಙ್ಗಮ್ ।
ಲಕ್ಷ್ಮೀಕಾನ್ತಂ ಕಮಲನಯನಂ ಯೋಗಿಹೃದ್ಧ್ಯಾನಗಮ್ಯಂ
ವನ್ದೇ ವಿಷ್ಣುಂ ಭವಭಯಹರಂ ಸರ್ವಲೋಕೈಕನಾಥಮ್ ॥

ಮೇಘಶ್ಯಾಮಂ ಪೀತಕೌಶೇಯವಾಸಂ
ಶ್ರೀವತ್ಸಾಙ್ಕಂ ಕೌಸ್ತುಭೋದ್ಭಾಸಿತಾಙ್ಗಮ್ ॥
ಪುಣ್ಯೋಪೇತಂ ಪುಣ್ಡರೀಕಾಯತಾಕ್ಷಂ
ವಿಷ್ಣುಂ ವನ್ದೇ ಸರ್ವಲೋಕೈಕನಾಥಮ್ ॥

ಸಶಙ್ಖಚಕ್ರಂ ಸಕಿರೀಟಕುಣ್ಡಲಂ
ಸಪೀತವಸ್ತ್ರಂ ಸರಸೀರುಹೇಕ್ಷಣಮ್ ।
ಸಹಾರವಕ್ಷಃಸ್ಥಲಶೋಭಿಕೌಸ್ತುಭಂ
ನಮಾಮಿ ವಿಷ್ಣುಂ ಶಿರಸಾ ಚತುರ್ಭುಜಮ್ ॥

ಛಾಯಾಯಾಂ ಪಾರಿಜಾತಸ್ಯ ಹೇಮಸಿಂಹಾಸನೋಪರಿ ।
ಆಸೀನಮಮ್ಬುದಶ್ಯಾಮಮಾಯತಾಕ್ಷಮಲಂಕೃತಮ್ ॥
ಚನ್ದ್ರಾನನಂ ಚತುರ್ಬಾಹುಂ ಶ್ರೀವತ್ಸಾಂಕಿತವಕ್ಷಸಮ್ ।
ರುಕ್ಮಿಣೀಸತ್ಯಭಾಮಾಭ್ಯಾಂ ಸಹಿತಂ ಕೃಷ್ಣಮಾಶ್ರಯೇ ॥

ಓಂ ವಿಶ್ವಸ್ಮೈ ನಮಃ

ವಿಶ್ವಂ ವಿಷ್ಣುರ್ವಷಟ್ಕಾರೋ ಭೂತಭವ್ಯಭವತ್ಪ್ರಭುಃ ।
ಭೂತಕೃದ್ಭೂತಭೃದ್ಭಾವೋ ಭೂತಾತ್ಮಾ ಭೂತಭಾವನಃ ॥೧೪॥
ಪೂತಾತ್ಮಾ ಪರಮಾತ್ಮಾ ಚ ಮುಕ್ತಾನಾಂ ಪರಮಾ ಗತಿಃ ।
ಅವ್ಯಯಃ ಪುರುಷಃ ಸಾಕ್ಷೀ ಕ್ಷೇತ್ರಜ್ಞೋಽಕ್ಷರ ಏವ ಚ ॥೧೫॥
ಯೋಗೋ ಯೋಗವಿದಾಂ ನೇತಾ ಪ್ರಧಾನಪುರುಷೇಶ್ವರಃ ।
ನಾರಸಿಂಹವಪುಃ ಶ್ರೀಮಾನ್ ಕೇಶವಃ ಪುರುಷೋತ್ತಮಃ ॥೧೬॥

ಸರ್ವಃ ಶರ್ವಃ ಶಿವಃ ಸ್ಥಾಣುರ್ಭೂತಾದಿರ್ನಿಧಿರವ್ಯಯಃ ।
ಸಂಭವೋ ಭಾವನೋ ಭರ್ತಾ ಪ್ರಭವಃ ಪ್ರಭುರೀಶ್ವರಃ ॥೧೭॥

ಸ್ವಯಂಭೂಃ ಶಂಭುರಾದಿತ್ಯಃ ಪುಷ್ಕರಾಕ್ಷೋ ಮಹಾಸ್ವನಃ ।
ಅನಾದಿನಿಧನೋ ಧಾತಾ ವಿಧಾತಾ ಧಾತುರುತ್ತಮಃ ॥೧೮॥

ಅಪ್ರಮೇಯೋ ಹೃಷೀಕೇಶಃ ಪದ್ಮನಾಭೋಽಮರಪ್ರಭುಃ ।
ವಿಶ್ವಕರ್ಮಾ ಮನುಸ್ತ್ವಷ್ಟಾ ಸ್ಥವಿಷ್ಠಃ ಸ್ಥವಿರೋ ಧ್ರುವಃ ॥೧೯॥

ಅಗ್ರಾಹ್ಯಃ ಶಾಶ್ವತಃ ಕೃಷ್ಣೋ ಲೋಹಿತಾಕ್ಷಃ ಪ್ರತರ್ದನಃ ।
ಪ್ರಭೂತಸ್ತ್ರಿಕಕುಬ್ಧಾಮ ಪವಿತ್ರಂ ಮಂಗಲಂ ಪರಮ್ ॥೨೦॥

ಈಶಾನಃ ಪ್ರಾಣದಃ ಪ್ರಾಣೋ ಜ್ಯೇಷ್ಠಃ ಶ್ರೇಷ್ಠಃ ಪ್ರಜಾಪತಿಃ ।
ಹಿರಣ್ಯಗರ್ಭೋ ಭೂಗರ್ಭೋ ಮಾಧವೋ ಮಧುಸೂದನಃ ॥೨೧॥

ಈಶ್ವರೋ ವಿಕ್ರಮೀ ಧನ್ವೀ ಮೇಧಾವೀ ವಿಕ್ರಮಃ ಕ್ರಮಃ ।
ಅನುತ್ತಮೋ ದುರಾಧರ್ಷಃ ಕೃತಜ್ಞಃ ಕೃತಿರಾತ್ಮವಾನ್ ॥೨೨॥

ಸುರೇಶಃ ಶರಣಂ ಶರ್ಮ ವಿಶ್ವರೇತಾಃ ಪ್ರಜಾಭವಃ ।
ಅಹಃ ಸಂವತ್ಸರೋ ವ್ಯಾಲಃ ಪ್ರತ್ಯಯಃ ಸರ್ವದರ್ಶನಃ ॥೨೩॥

ಅಜಃ ಸರ್ವೇಶ್ವರಃ ಸಿದ್ಧಃ ಸಿದ್ಧಿಃ ಸರ್ವಾದಿರಚ್ಯುತಃ ।
ವೃಷಾಕಪಿರಮೇಯಾತ್ಮಾ ಸರ್ವಯೋಗವಿನಿಃಸೃತಃ ॥೨೪॥

ವಸುರ್ವಸುಮನಾಃ ಸತ್ಯಃ ಸಮಾತ್ಮಾ ಸಂಮಿತಃ ಸಮಃ ।
ಅಮೋಘಃ ಪುಣ್ಡರೀಕಾಕ್ಷೋ ವೃಷಕರ್ಮಾ ವೃಷಾಕೃತಿಃ ॥೨೫॥

ರುದ್ರೋ ಬಹುಶಿರಾ ಬಭ್ರುರ್ವಿಶ್ವಯೋನಿಃ ಶುಚಿಶ್ರವಾಃ ।
ಅಮೃತಃ ಶಾಶ್ವತಃ ಸ್ಥಾಣುರ್ವರಾರೋಹೋ ಮಹಾತಪಾಃ ॥೨೬॥

ಸರ್ವಗಃ ಸರ್ವವಿದ್ಭಾನುರ್ವಿಷ್ವಕ್ಸೇನೋ ಜನಾರ್ದನಃ ।
ವೇದೋ ವೇದವಿದವ್ಯಙ್ಗೋ ವೇದಾಙ್ಗೋ ವೇದವಿತ್ಕವಿಃ ॥೨೭॥

ಲೋಕಾಧ್ಯಕ್ಷಃ ಸುರಾಧ್ಯಕ್ಷೋ ಧರ್ಮಾಧ್ಯಕ್ಷಃ ಕೃತಾಕೃತಃ ।
ಚತುರಾತ್ಮಾ ಚತುರ್ವ್ಯೂಹಶ್ಚತುರ್ದಂಷ್ಟ್ರಶ್ಚತುರ್ಭುಜಃ ॥೨೮॥

ಭ್ರಾಜಿಷ್ಣುರ್ಭೋಜನಂ ಭೋಕ್ತಾ ಸಹಿಷ್ಣುರ್ಜಗದಾದಿಜಃ ।
ಅನಘೋ ವಿಜಯೋ ಜೇತಾ ವಿಶ್ವಯೋನಿಃ ಪುನರ್ವಸುಃ ॥೨೯॥

ಉಪೇನ್ದ್ರೋ ವಾಮನಃ ಪ್ರಾಂಶುರಮೋಘಃ ಶುಚಿರೂರ್ಜಿತಃ ।
ಅತೀನ್ದ್ರಃ ಸಙ್ಗ್ರಹಃ ಸರ್ಗೋ ಧೃತಾತ್ಮಾ ನಿಯಮೋ ಯಮಃ ॥೩೦॥

ವೇದ್ಯೋ ವೈದ್ಯಃ ಸದಾಯೋಗೀ ವೀರಹಾ ಮಾಧವೋ ಮಧುಃ ।
ಅತೀನ್ದ್ರಿಯೋ ಮಹಾಮಾಯೋ ಮಹೋತ್ಸಾಹೋ ಮಹಾಬಲಃ ॥

ಮಹಾಬುದ್ಧಿರ್ಮಹಾವೀರ್ಯೋ ಮಹಾಶಕ್ತಿರ್ಮಹಾದ್ಯುತಿಃ ।
ಅನಿರ್ದೇಶ್ಯವಪುಃ ಶ್ರೀಮಾನಮೇಯಾತ್ಮಾ ಮಹಾದ್ರಿಧೃತ್ ॥೩೨॥

ಮಹೇಷ್ವಾಸೋ ಮಹೀಭರ್ತಾ ಶ್ರೀನಿವಾಸಃ ಸತಾಂ ಗತಿಃ ।
ಅನಿರುದ್ಧಃ ಸುರಾನನ್ದೋ ಗೋವಿನ್ದೋ ಗೋವಿದಾಂ ಪತಿಃ ॥೩೩॥

ಮರೀಚಿರ್ದಮನೋ ಹಂಸಃ ಸುಪರ್ಣೋ ಭುಜಗೋತ್ತಮಃ ।
ಹಿರಣ್ಯನಾಭಃ ಸುತಪಾಃ ಪದ್ಮನಾಭಃ ಪ್ರಜಾಪತಿಃ ॥೩೪॥

ಅಮೃತ್ಯುಃ ಸರ್ವದೃಕ್ಸಿಂಹಃ ಸಂಧಾತಾ ಸನ್ಧಿಮಾನ್ಸ್ಥಿರಃ ।
ಅಜೋ ದುರ್ಮರ್ಷಣಃ ಶಾಸ್ತಾ ವಿಶ್ರುತಾತ್ಮಾ ಸುರಾರಿಹಾ ॥೩೫॥

ಗುರುರ್ಗುರುತಮೋ ಧಾಮ ಸತ್ಯಃ ಸತ್ಯಪರಾಕ್ರಮಃ ।
ನಿಮಿಷೋಽನಿಮಿಷಃ ಸ್ರಗ್ವೀ ವಾಚಸ್ಪತಿರುದಾರಧೀಃ ॥೩೬॥

ಅಗ್ರಣೀರ್ಗ್ರಾಮಣೀಃ ಶ್ರೀಮಾನ್ನ್ಯಾಯೋ ನೇತಾ ಸಮೀರಣಃ ।
ಸಹಸ್ರಮೂರ್ಧಾ ವಿಶ್ವಾತ್ಮಾ ಸಹಸ್ರಾಕ್ಷಃ ಸಹಸ್ರಪಾತ್ ॥೩೭॥

ಆವರ್ತನೋ ನಿವೃತ್ತಾತ್ಮಾ ಸಂವೃತಃ ಸಮ್ಪ್ರಮರ್ದನಃ ।
ಅಹಃ ಸಂವರ್ತಕೋ ವಹ್ನಿರನಿಲೋ ಧರಣೀಧರಃ ॥೩೮॥

ಸುಪ್ರಸಾದಃ ಪ್ರಸನ್ನಾತ್ಮಾ ವಿಶ್ವಧೃಗ್ವಿಶ್ವಭುಗ್ವಿಭುಃ ।
ಸತ್ಕರ್ತಾ ಸತ್ಕೃತಃ ಸಾಧುರ್ಜಹ್ನುರ್ನಾರಾಯಣೋ ನರಃ ॥೩೯॥

ಅಸಂಖ್ಯೇಯೋಽಪ್ರಮೇಯಾತ್ಮಾ ವಿಶಿಷ್ಟಃ ಶಿಷ್ಟಕೃಚ್ಛುಚಿಃ ।
ಸಿದ್ಧಾರ್ಥಃ ಸಿದ್ಧಸಂಕಲ್ಪಃ ಸಿದ್ಧಿದಃ ಸಿದ್ಧಿಸಾಧನಃ ॥೪೦॥

ವೃಷಾಹೀ ವೃಷಭೋ ವಿಷ್ಣುರ್ವೃಷಪರ್ವಾ ವೃಷೋದರಃ ।
ವರ್ಧನೋ ವರ್ಧಮಾನಶ್ಚ ವಿವಿಕ್ತಃ ಶ್ರುತಿಸಾಗರಃ ॥೪೧॥

ಸುಭುಜೋ ದುರ್ಧರೋ ವಾಗ್ಮೀ ಮಹೇನ್ದ್ರೋ ವಸುದೋ ವಸುಃ ।
ನೈಕರೂಪೋ ಬೃಹದ್ರೂಪಃ ಶಿಪಿವಿಷ್ಟಃ ಪ್ರಕಾಶನಃ ॥೪೨॥

ಓಜಸ್ತೇಜೋದ್ಯುತಿಧರಃ ಪ್ರಕಾಶಾತ್ಮಾ ಪ್ರತಾಪನಃ ।
ಋದ್ಧಃ ಸ್ಪಷ್ಟಾಕ್ಷರೋ ಮನ್ತ್ರಶ್ಚನ್ದ್ರಾಂಶುರ್ಭಾಸ್ಕರದ್ಯುತಿಃ ॥೪೩॥

ಅಮೃತಾಂಶೂದ್ಭವೋ ಭಾನುಃ ಶಶಬಿನ್ದುಃ ಸುರೇಶ್ವರಃ ।
ಔಷಧಂ ಜಗತಃ ಸೇತುಃ ಸತ್ಯಧರ್ಮಪರಾಕ್ರಮಃ ॥೪೪॥

ಭೂತಭವ್ಯಭವನ್ನಾಥಃ ಪವನಃ ಪಾವನೋಽನಲಃ ।
ಕಾಮಹಾ ಕಾಮಕೃತ್ಕಾನ್ತಃ ಕಾಮಃ ಕಾಮಪ್ರದಃ ಪ್ರಭುಃ ॥೪೫॥

ಯುಗಾದಿಕೃದ್ಯುಗಾವರ್ತೋ ನೈಕಮಾಯೋ ಮಹಾಶನಃ ।
ಅದೃಶ್ಯೋ ವ್ಯಕ್ತರೂಪಶ್ಚ ಸಹಸ್ರಜಿದನನ್ತಜಿತ್ ॥೪೬॥

ಇಷ್ಟೋಽವಿಶಿಷ್ಟಃ ಶಿಷ್ಟೇಷ್ಟಃ ಶಿಖಣ್ಡೀ ನಹುಷೋ ವೃಷಃ ।
ಕ್ರೋಧಹಾ ಕ್ರೋಧಕೃತ್ಕರ್ತಾ ವಿಶ್ವಬಾಹುರ್ಮಹೀಧರಃ ॥೪೭॥

ಅಚ್ಯುತಃ ಪ್ರಥಿತಃ ಪ್ರಾಣಃ ಪ್ರಾಣದೋ ವಾಸವಾನುಜಃ ।
ಅಪಾಂ ನಿಧಿರಧಿಷ್ಠಾನಮಪ್ರಮತ್ತಃ ಪ್ರತಿಷ್ಠಿತಃ ॥೪೮॥

ಸ್ಕನ್ದಃ ಸ್ಕನ್ದಧರೋ ಧುರ್ಯೋ ವರದೋ ವಾಯುವಾಹನಃ ।
ವಾಸುದೇವೋ ಬೃಹದ್ಭಾನುರಾದಿದೇವಃ ಪುರನ್ದರಃ ॥೪೯॥

ಅಶೋಕಸ್ತಾರಣಸ್ತಾರಃ ಶೂರಃ ಶೌರಿರ್ಜನೇಶ್ವರಃ ।
ಅನುಕೂಲಃ ಶತಾವರ್ತಃ ಪದ್ಮೀ ಪದ್ಮನಿಭೇಕ್ಷಣಃ ॥೫೦॥

ಪದ್ಮನಾಭೋಽರವಿನ್ದಾಕ್ಷಃ ಪದ್ಮಗರ್ಭಃ ಶರೀರಭೃತ್ ।
ಮಹರ್ದ್ಧಿರ್ಋದ್ಧೋ ವೃದ್ಧಾತ್ಮಾ ಮಹಾಕ್ಷೋ ಗರುಡಧ್ವಜಃ ॥೫೧॥

ಅತುಲಃ ಶರಭೋ ಭೀಮಃ ಸಮಯಜ್ಞೋ ಹವಿರ್ಹರಿಃ ।
ಸರ್ವಲಕ್ಷಣಲಕ್ಷಣ್ಯೋ ಲಕ್ಷ್ಮೀವಾನ್ಸಮಿತಿಂಜಯಃ ॥೫೨॥

ವಿಕ್ಷರೋ ರೋಹಿತೋ ಮಾರ್ಗೋ ಹೇತುರ್ದಾಮೋದರಃ ಸಹಃ ।
ಮಹೀಧರೋ ಮಹಾಭಾಗೋ ವೇಗವಾನಮಿತಾಶನಃ ॥೫೩॥

ಉದ್ಭವಃ ಕ್ಷೋಭಣೋ ದೇವಃ ಶ್ರೀಗರ್ಭಃ ಪರಮೇಶ್ವರಃ ।
ಕರಣಂ ಕಾರಣಂ ಕರ್ತಾ ವಿಕರ್ತಾ ಗಹನೋ ಗುಹಃ ॥೫೪॥

ವ್ಯವಸಾಯೋ ವ್ಯವಸ್ಥಾನಃ ಸಂಸ್ಥಾನಃ ಸ್ಥಾನದೋ ಧ್ರುವಃ ।
ಪರರ್ದ್ಧಿಃ ಪರಮಸ್ಪಷ್ಟಸ್ತುಷ್ಟಃ ಪುಷ್ಟಃ ಶುಭೇಕ್ಷಣಃ ॥೫೫॥

ರಾಮೋ ವಿರಾಮೋ ವಿರತೋ ಮಾರ್ಗೋ ನೇಯೋ ನಯೋಽನಯಃ ।
ವೀರಃ ಶಕ್ತಿಮತಾಂ ಶ್ರೇಷ್ಠೋ ಧರ್ಮೋ ಧರ್ಮವಿದುತ್ತಮಃ ॥೫೬॥

ವೈಕುಣ್ಠಃ ಪುರುಷಃ ಪ್ರಾಣಃ ಪ್ರಾಣದಃ ಪ್ರಣವಃ ಪೃಥುಃ ।
ಹಿರಣ್ಯಗರ್ಭಃ ಶತ್ರುಘ್ನೋ ವ್ಯಾಪ್ತೋ ವಾಯುರಧೋಕ್ಷಜಃ ॥೫೭॥

ಋತುಃ ಸುದರ್ಶನಃ ಕಾಲಃ ಪರಮೇಷ್ಠೀ ಪರಿಗ್ರಹಃ ।
ಉಗ್ರಃ ಸಂವತ್ಸರೋ ದಕ್ಷೋ ವಿಶ್ರಾಮೋ ವಿಶ್ವದಕ್ಷಿಣಃ ॥೫೮॥

ವಿಸ್ತಾರಃ ಸ್ಥಾವರಸ್ಥಾಣುಃ ಪ್ರಮಾಣಂ ಬೀಜಮವ್ಯಯಮ್ ।
ಅರ್ಥೋಽನರ್ಥೋ ಮಹಾಕೋಶೋ ಮಹಾಭೋಗೋ ಮಹಾ-
ಧನಃ ॥೫೯॥

ಅನಿರ್ವಿಣ್ಣಃ ಸ್ಥವಿಷ್ಠೋಽಭೂರ್ಧರ್ಮಯೂಪೋ ಮಹಾಮಖಃ ।
ನಕ್ಷತ್ರನೇಮಿರ್ನಕ್ಷತ್ರೀ ಕ್ಷಮಃ ಕ್ಷಾಮಃ ಸಮೀಹನಃ ॥೬೦॥

ಯಜ್ಞ ಇಜ್ಯೋ ಮಹೇಜ್ಯಶ್ಚ ಕ್ರತುಃ ಸತ್ರಂ ಸತಾಂ ಗತಿಃ ।
ಸರ್ವದರ್ಶೀ ವಿಮುಕ್ತಾತ್ಮಾ ಸರ್ವಜ್ಞೋ ಜ್ಞಾನಮುತ್ತಮಮ್ ॥೬೧॥

ಸುವ್ರತಃ ಸುಮುಖಃ ಸೂಕ್ಷ್ಮಃ ಸುಘೋಷಃ ಸುಖದಃ ಸುಹೃತ್ ।
ಮನೋಹರೋ ಜಿತಕ್ರೋಧೋ ವೀರಬಾಹುರ್ವಿದಾರಣಃ ॥೬೨॥

ಸ್ವಾಪನಃ ಸ್ವವಶೋ ವ್ಯಾಪೀ ನೈಕಾತ್ಮಾ ನೈಕಕರ್ಮಕೃತ್ ।
ವತ್ಸರೋ ವತ್ಸಲೋ ವತ್ಸೀ ರತ್ನಗರ್ಭೋ ಧನೇಶ್ವರಃ ॥೬೩॥

ಧರ್ಮಗುಬ್ಧರ್ಮಕೃದ್ಧರ್ಮೀ ಸದಸತ್ಕ್ಷರಮಕ್ಷರಮ್ ।
ಅವಿಜ್ಞಾತಾ ಸಹಸ್ರಾಂಶುರ್ವಿಧಾತಾ ಕೃತಲಕ್ಷಣಃ ॥೬೪॥

ಗಭಸ್ತಿನೇಮಿಃ ಸತ್ತ್ವಸ್ಥಃ ಸಿಂಹೋ ಭೂತಮಹೇಶ್ವರಃ ।
ಆದಿದೇವೋ ಮಹಾದೇವೋ ದೇವೇಶೋ ದೇವಭೃದ್ಗುರುಃ ॥೬೫॥

ಉತ್ತರೋ ಗೋಪತಿರ್ಗೋಪ್ತಾ ಜ್ಞಾನಗಮ್ಯಃ ಪುರಾತನಃ ।
ಶರೀರಭೂತಭೃದ್ಭೋಕ್ತಾ ಕಪೀನ್ದ್ರೋ ಭೂರಿದಕ್ಷಿಣಃ ॥೬೬॥

ಸೋಮಪೋಽಮೃತಪಃ ಸೋಮಃ ಪುರುಜಿತ್ಪುರುಸತ್ತಮಃ ।
ವಿನಯೋ ಜಯಃ ಸತ್ಯಸನ್ಧೋ ದಾಶಾರ್ಹಃ ಸಾತ್ವತಾಂ ಪತಿಃ ॥೬೭॥

ಜೀವೋ ವಿನಯಿತಾಸಾಕ್ಷೀ ಮುಕುನ್ದೋಽಮಿತವಿಕ್ರಮಃ ।
ಅಮ್ಭೋನಿಧಿರನನ್ತಾತ್ಮಾ ಮಹೋದಧಿಶಯೋಽನ್ತಕಃ ॥೬೮॥

ಅಜೋ ಮಹಾರ್ಹಃ ಸ್ವಾಭಾವ್ಯೋ ಜಿತಾಮಿತ್ರಃ ಪ್ರಮೋದನಃ ।
ಆನನ್ದೋ ನನ್ದನೋ ನನ್ದಃ ಸತ್ಯಧರ್ಮಾ ತ್ರಿವಿಕ್ರಮಃ ॥೬೯॥

ಮಹರ್ಷಿಃ ಕಪಿಲಾಚಾರ್ಯಃ ಕೃತಜ್ಞೋ ಮೇದಿನೀಪತಿಃ ।
ತ್ರಿಪದಸ್ತ್ರಿದಶಾಧ್ಯಕ್ಷೋ ಮಹಾಶೃಙ್ಗಃ ಕೃತಾನ್ತಕೃತ್ ॥೭೦॥

ಮಹಾವರಾಹೋ ಗೋವಿನ್ದಃ ಸುಷೇಣಃ ಕನಕಾಙ್ಗದೀ ।
ಗುಹ್ಯೋ ಗಭೀರೋ ಗಹನೋ ಗುಪ್ತಶ್ಚಕ್ರಗದಾಧರಃ ॥೭೧॥

ವೇಧಾಃ ಸ್ವಾಙ್ಗೋಽಜಿತಃ ಕೃಷ್ಣೋ ದೃಢಃ ಸಙ್ಕರ್ಷಣೋಽಚ್ಯುತಃ ।
ವರುಣೋ ವಾರುಣೋ ವೃಕ್ಷಃ ಪುಷ್ಕರಾಕ್ಷೋ ಮಹಾಮನಾಃ ॥೭೨॥

ಭಗವಾನ್ಭಗಹಾನನ್ದೀ ವನಮಾಲೀ ಹಲಾಯುಧಃ ।
ಆದಿತ್ಯೋ ಜ್ಯೋತಿರಾದಿತ್ಯಃ ಸಹಿಷ್ಣುರ್ಗತಿಸತ್ತಮಃ ॥೭೩॥

ಸುಧನ್ವಾ ಖಣ್ಡಪರಶುರ್ದಾರುಣೋ ದ್ರವಿಣಪ್ರದಃ ।
ದಿವಃಸ್ಪೃಕ್ಸರ್ವದೃಗ್ವ್ಯಾಸೋ ವಾಚಸ್ಪತಿರಯೋನಿಜಃ ॥೭೪॥

ತ್ರಿಸಾಮಾ ಸಾಮಗಃ ಸಾಮ ನಿರ್ವಾಣಂ ಭೇಷಜಂ ಭಿಷಕ್ ।
ಸಂನ್ಯಾಸಕೃಚ್ಛಮಃ ಶಾನ್ತೋ ನಿಷ್ಠಾ ಶಾನ್ತಿಃ ಪರಾಯಣಮ್ ॥೭೫॥

ಶುಭಾಙ್ಗಃ ಶಾನ್ತಿದಃ ಸ್ರಷ್ಟಾ ಕುಮುದಃ ಕುವಲೇಶಯಃ ।
ಗೋಹಿತೋ ಗೋಪತಿರ್ಗೋಪ್ತಾ ವೃಷಭಾಕ್ಷೋ ವೃಷಪ್ರಿಯಃ ॥೭೬॥

ಅನಿವರ್ತೀ ನಿವೃತ್ತಾತ್ಮಾ ಸಂಕ್ಷೇಪ್ತಾ ಕ್ಷೇಮಕೃಚ್ಛಿವಃ ।
ಶ್ರೀವತ್ಸವಕ್ಷಾಃ ಶ್ರೀವಾಸಃ ಶ್ರೀಪತಿಃ ಶ್ರೀಮತಾಂ ವರಃ ॥೭೭॥

ಶ್ರೀದಃ ಶ್ರೀಶಃ ಶ್ರೀನಿವಾಸಃ ಶ್ರೀನಿಧಿಃ ಶ್ರೀವಿಭಾವನಃ ।
ಶ್ರೀಧರಃ ಶ್ರೀಕರಃ ಶ್ರೇಯಃ ಶ್ರೀಮನಾ ಲೋಕತ್ರಯಾಶ್ರಯಃ ॥೭೮॥

ಸ್ವಕ್ಷಃ ಸ್ವಙ್ಗಃ ಶತಾನನ್ದೋ ನನ್ದಿರ್ಜ್ಯೋತಿರ್ಗಣೇಶ್ವರಃ ।
ವಿಜಿತಾತ್ಮಾ ವಿಧೇಯಾತ್ಮಾ ಸತ್ಕೀರ್ತಿಶ್ಛಿನ್ನಸಂಶಯಃ ॥೭೯॥

ಉದೀರ್ಣಃ ಸರ್ವತಶ್ಚಕ್ಷುರನೀಶಃ ಶಾಶ್ವತಸ್ಥಿರಃ ।
ಭೂಶಯೋ ಭೂಷಣೋ ಭೂತಿರ್ವಿಶೋಕಃ ಶೋಕನಾಶನಃ ॥೮೦॥

ಅರ್ಚಿಷ್ಮಾನರ್ಚಿತಃ ಕುಮ್ಭೋ ವಿಶುದ್ಧಾತ್ಮಾ ವಿಶೋಧನಃ ।
ಅನಿರುದ್ಧೋಽಪ್ರತಿರಥಃ ಪ್ರದ್ಯುಮ್ನೋಽಮಿತವಿಕ್ರಮಃ ॥೮೧॥

ಕಾಲನೇಮಿನಿಹಾ ವೀರಃ ಶೌರಿಃ ಶೂರಜನೇಶ್ವರಃ ।
ತ್ರಿಲೋಕಾತ್ಮಾ ತ್ರಿಲೋಕೇಶಃ ಕೇಶವಃ ಕೇಶಿಹಾ ಹರಿಃ ॥೮೨॥

ಕಾಮದೇವಃ ಕಾಮಪಾಲಃ ಕಾಮೀ ಕಾನ್ತಃ ಕೃತಾಗಮಃ ।
ಅನಿರ್ದೇಶ್ಯವಪುರ್ವಿಷ್ಣುರ್ವೀರೋಽನನ್ತೋ ಧನಂಜಯಃ ॥೮೩॥

ಬ್ರಹ್ಮಣ್ಯೋ ಬ್ರಹ್ಮಕೃದ್ಬ್ರಹ್ಮಾ ಬ್ರಹ್ಮ ಬ್ರಹ್ಮವಿವರ್ಧನಃ ।
ಬ್ರಹ್ಮವಿದ್ಬ್ರಾಹ್ಮಣೋ ಬ್ರಹ್ಮೀ ಬ್ರಹ್ಮಜ್ಞೋ ಬ್ರಾಹ್ಮಣಪ್ರಿಯಃ ॥೮೪॥

ಮಹಾಕ್ರಮೋ ಮಹಾಕರ್ಮಾ ಮಹಾತೇಜಾ ಮಹೋರಗಃ ।
ಮಹಾಕ್ರತುರ್ಮಹಾಯಜ್ವಾ ಮಹಾಯಜ್ಞೋ ಮಹಾಹವಿಃ ॥೮೫॥

ಸ್ತವ್ಯಃ ಸ್ತವಪ್ರಿಯಃ ಸ್ತೋತ್ರಂ ಸ್ತುತಿಃ ಸ್ತೋತಾ ರಣಪ್ರಿಯಃ ।
ಪೂರ್ಣಃ ಪೂರಯಿತಾ ಪುಣ್ಯಃ ಪುಣ್ಯಕೀರ್ತಿರನಾಮಯಃ ॥೮೬॥

ಮನೋಜವಸ್ತೀರ್ಥಕರೋ ವಸುರೇತಾ ವಸುಪ್ರದಃ ।
ವಸುಪ್ರದೋ ವಾಸುದೇವೋ ವಸುರ್ವಸುಮನಾ ಹವಿಃ ॥೮೭॥

ಸದ್ಗತಿಃ ಸತ್ಕೃತಿಃ ಸತ್ತಾ ಸದ್ಭೂತಿಃ ಸತ್ಪರಾಯಣಃ ।
ಶೂರಸೇನೋ ಯದುಶ್ರೇಷ್ಠಃ ಸನ್ನಿವಾಸಃ ಸುಯಾಮುನಃ ॥೮೮॥

ಭೂತಾವಾಸೋ ವಾಸುದೇವಃ ಸರ್ವಾಸುನಿಲಯೋಽನಲಃ ।
ದರ್ಪಹಾ ದರ್ಪದೋ ದೃಪ್ತೋ ದುರ್ಧರೋಥಾಪರಾಜಿತಃ ॥೮೯॥

ವಿಶ್ವಮೂರ್ತಿರ್ಮಹಾಮೂರ್ತಿರ್ದೀಪ್ತಮೂರ್ತಿರಮೂರ್ತಿಮಾನ್ ।
ಅನೇಕಮೂರ್ತಿರವ್ಯಕ್ತಃ ಶತಮೂರ್ತಿಃ ಶತಾನನಃ ॥೯೦॥

ಏಕೋ ನೈಕಃ ಸವಃ ಕಃ ಕಿಂ ಯತ್ತತ್ಪದಮನುತ್ತಮಮ್ ।
ಲೋಕಬನ್ಧುರ್ಲೋಕನಾಥೋ ಮಾಧವೋ ಭಕ್ತವತ್ಸಲಃ ॥೯೧॥

ಸುವರ್ಣವರ್ಣೋ ಹೇಮಾಙ್ಗೋ ವರಾಙ್ಗಶ್ಚನ್ದನಾಙ್ಗದೀ ।
ವೀರಹಾ ವಿಷಮಃ ಶೂನ್ಯೋ ಘೃತಾಶೀರಚಲಶ್ಚಲಃ ॥೯೨॥

ಅಮಾನೀ ಮಾನದೋ ಮಾನ್ಯೋ ಲೋಕಸ್ವಾಮೀ ತ್ರಿಲೋಕಧೃಕ್ ।
ಸುಮೇಧಾ ಮೇಧಜೋ ಧನ್ಯಃ ಸತ್ಯಮೇಧಾ ಧರಾಧರಃ ॥೯೩॥

ತೇಜೋ ವೃಷೋ ದ್ಯುತಿಧರಃ ಸರ್ವಶಸ್ತ್ರಭೃತಾಂ ವರಃ ।
ಪ್ರಗ್ರಹೋ ನಿಗ್ರಹೋ ವ್ಯಗ್ರೋ ನೈಕಶೃಙ್ಗೋ ಗದಾಗ್ರಜಃ ॥೯೪॥

ಚತುರ್ಮೂರ್ತಿಶ್ಚತುರ್ಬಾಹುಶ್ಚತುರ್ವ್ಯೂಹಶ್ಚತುರ್ಗತಿಃ ।
ಚತುರಾತ್ಮಾ ಚತುರ್ಭಾವಶ್ಚತುರ್ವೇದವಿದೇಕಪಾತ್ ॥೯೫॥

ಸಮಾವರ್ತೋಽನಿವೃತ್ತಾತ್ಮಾ ದುರ್ಜಯೋ ದುರತಿಕ್ರಮಃ ।
ದುರ್ಲಭೋ ದುರ್ಗಮೋ ದುರ್ಗೋ ದುರಾವಾಸೋ ದುರಾರಿಹಾ ॥

ಶುಭಾಙ್ಗೋ ಲೋಕಸಾರಙ್ಗಃ ಸುತನ್ತುಸ್ತನ್ತುವರ್ಧನಃ ।
ಇನ್ದ್ರಕರ್ಮಾ ಮಹಾಕರ್ಮಾ ಕೃತಕರ್ಮಾ ಕೃತಾಗಮಃ ॥೯೭॥

ಉದ್ಭವಃ ಸುನ್ದರಃ ಸುನ್ದೋ ರತ್ನನಾಭಃ ಸುಲೋಚನಃ ।
ಅರ್ಕೋ ವಾಜಸನಃ ಶೃಙ್ಗೀ ಜಯನ್ತಃ ಸರ್ವವಿಜ್ಜಯೀ ॥೯೮॥

ಸುವರ್ಣಬಿನ್ದುರಕ್ಷೋಭ್ಯಃ ಸರ್ವವಾಗೀಶ್ವರೇಶ್ವರಃ ।
ಮಹಾಹ್ರದೋ ಮಹಾಗರ್ತೋ ಮಹಾಭೂತೋ ಮಹಾನಿಧಿಃ ॥೯೯॥

ಕುಮುದಃ ಕುನ್ದರಃ ಕುನ್ದಃ ಪರ್ಜನ್ಯಃ ಪಾವನೋಽನಿಲಃ ।
ಅಮೃತಾಶೋಽಮೃತವಪುಃ ಸರ್ವಜ್ಞಃ ಸರ್ವತೋಮುಖಃ ॥೧೦೦॥

ಸುಲಭಃ ಸುವ್ರತಃ ಸಿದ್ಧಃ ಶತ್ರುಜಿಚ್ಛತ್ರುತಾಪನಃ ।
ನ್ಯಗ್ರೋಧೋದುಮ್ಬರೋಽಶ್ವತ್ಥಶ್ಚಾಣೂರಾನ್ಧ್ರನಿಷೂದನಃ ॥೧೦೧॥

ಸಹಸ್ರಾರ್ಚಿಃ ಸಪ್ತಜಿಹ್ವಃ ಸಪ್ತೈಧಾಃ ಸಪ್ತವಾಹನಃ ।
ಅಮೂರ್ತಿರನಘೋಽಚಿನ್ತ್ಯೋ ಭಯಕೃದ್ಭಯನಾಶನಃ ॥೧೦೨॥

ಅಣುರ್ಬೃಹತ್ಕೃಶಃ ಸ್ಥೂಲೋ ಗುಣಭೃನ್ನಿರ್ಗುಣೋ ಮಹಾನ್ ।
ಅಧೃತಃ ಸ್ವಧೃತಃ ಸ್ವಾಸ್ಯಃ ಪ್ರಾಗ್ವಂಶೋ ವಂಶವರ್ಧನಃ ॥೧೦೩॥

ಭಾರಭೃತ್ಕಥಿತೋ ಯೋಗೀ ಯೋಗೀಶಃ ಸರ್ವಕಾಮದಃ ।
ಆಶ್ರಮಃ ಶ್ರಮಣಃ ಕ್ಷಾಮಃ ಸುಪರ್ಣೋ ವಾಯುವಾಹನಃ ॥೧೦೪॥

ಧನುರ್ಧರೋ ಧನುರ್ವೇದೋ ದಣ್ಡೋ ದಮಯಿತಾ ದಮಃ ।
ಅಪರಾಜಿತಃ ಸರ್ವಸಹೋ ನಿಯನ್ತಾ ನಿಯಮೋ ಯಮಃ ॥೧೦೫॥

ಸತ್ತ್ವವಾನ್ಸಾತ್ತ್ವಿಕಃ ಸತ್ಯಃ ಸತ್ಯಧರ್ಮಪರಾಯಣಃ ।
ಅಭಿಪ್ರಾಯಃ ಪ್ರಿಯಾರ್ಹೋಽರ್ಹಃ ಪ್ರಿಯಕೃತ್ಪ್ರೀತಿವರ್ಧನಃ ॥೧೦೬॥

ವಿಹಾಯಸಗತಿರ್ಜ್ಯೋತಿಃ ಸುರುಚಿರ್ಹುತಭುಗ್ವಿಭುಃ ।
ರವಿರ್ವಿರೋಚನಃ ಸೂರ್ಯಃ ಸವಿತಾ ರವಿಲೋಚನಃ ॥೧೦೭॥

ಅನನ್ತೋ ಹುತಭುಗ್ಭೋಕ್ತಾ ಸುಖದೋ ನೈಕಜೋಽಗ್ರಜಃ ।
ಅನಿರ್ವಿಣ್ಣಃ ಸದಾಮರ್ಷೀ ಲೋಕಾಧಿಷ್ಠಾನಮದ್ಭುತಃ ॥೧೦೮॥

ಸನಾತ್ಸನಾತನತಮಃ ಕಪಿಲಃ ಕಪಿರವ್ಯಯಃ ।
ಸ್ವಸ್ತಿದಃ ಸ್ವಸ್ತಿಕೃತ್ ಸ್ವಸ್ತಿ ಸ್ವಸ್ತಿಭುಕ್ ಸ್ವಸ್ತಿದಕ್ಷಿಣಃ ॥೧೦೯॥

ಅರೌದ್ರಃ ಕುಣ್ಡಲೀ ಚಕ್ರೀ ವಿಕ್ರಮ್ಯೂರ್ಜಿತಶಾಸನಃ ।
ಶಬ್ದಾತಿಗಃ ಶಬ್ದಸಹಃ ಶಿಶಿರಃ ಶರ್ವರೀಕರಃ ॥೧೧೦॥

ಅಕ್ರೂರಃ ಪೇಶಲೋ ದಕ್ಷೋ ದಕ್ಷಿಣಃ ಕ್ಷಮಿಣಾಂ ವರಃ ।
ವಿದ್ವತ್ತಮೋ ವೀತಭಯಃ ಪುಣ್ಯಶ್ರವಣಕೀರ್ತನಃ ॥೧೧೧॥

ಉತ್ತಾರಣೋ ದುಷ್ಕೃತಿಹಾ ಪುಣ್ಯೋ ದುಃಸ್ವಪ್ನನಾಶನಃ ।
ವೀರಹಾ ರಕ್ಷಣಃ ಸನ್ತೋ ಜೀವನಃ ಪರ್ಯವಸ್ಥಿತಃ ॥೧೧೨॥

ಅನನ್ತರೂಪೋಽನನ್ತಶ್ರೀರ್ಜಿತಮನ್ಯುರ್ಭಯಾಪಹಃ ।
ಚತುರಶ್ರೋ ಗಭೀರಾತ್ಮಾ ವಿದಿಶೋ ವ್ಯಾದಿಶೋ ದಿಶಃ ॥೧೧೩॥

ಅನಾದಿರ್ಭೂರ್ಭುವೋ ಲಕ್ಷ್ಮೀಃ ಸುವೀರೋ ರುಚಿರಾಙ್ಗದಃ ।
ಜನನೋ ಜನಜನ್ಮಾದಿರ್ಭೀಮೋ ಭೀಮಪರಾಕ್ರಮಃ ॥೧೧೪॥

ಆಧಾರನಿಲಯೋಽಧಾತಾ ಪುಷ್ಪಹಾಸಃ ಪ್ರಜಾಗರಃ ।
ಊರ್ಧ್ವಗಃ ಸತ್ಪಥಾಚಾರಃ ಪ್ರಾಣದಃ ಪ್ರಣವಃ ಪಣಃ ॥೧೧೫॥

ಪ್ರಮಾಣಂ ಪ್ರಾಣನಿಲಯಃ ಪ್ರಾಣಭೃತ್ಪ್ರಾಣಜೀವನಃ ।
ತತ್ತ್ವಂ ತತ್ತ್ವವಿದೇಕಾತ್ಮಾ ಜನ್ಮಮೃತ್ಯುಜರಾತಿಗಃ ॥೧೧೬॥

ಭೂರ್ಭುವಃಸ್ವಸ್ತರುಸ್ತಾರಃ ಸವಿತಾ ಪ್ರಪಿತಾಮಹಃ ।
ಯಜ್ಞೋ ಯಜ್ಞಪತಿರ್ಯಜ್ವಾ ಯಜ್ಞಾಙ್ಗೋ ಯಜ್ಞವಾಹನಃ ॥೧೧೭॥

ಯಜ್ಞಭೃದ್ಯಜ್ಞಕೃದ್ಯಜ್ಞೀ ಯಜ್ಞಭುಗ್ಯಜ್ಞಸಾಧನಃ ।
ಯಜ್ಞಾನ್ತಕೃದ್ಯಜ್ಞಗುಹ್ಯಮನ್ನಮನ್ನಾದ ಏವ ಚ ॥೧೧೮॥

ಆತ್ಮಯೋನಿಃ ಸ್ವಯಂಜಾತೋ ವೈಖಾನಃ ಸಾಮಗಾಯನಃ ।
ದೇವಕೀನನ್ದನಃ ಸ್ರಷ್ಟಾ ಕ್ಷಿತೀಶಃ ಪಾಪನಾಶನಃ ॥೧೧೯॥

ಶಙ್ಖಭೃನ್ನನ್ದಕೀ ಚಕ್ರೀ ಶಾರ್ಙ್ಗಧನ್ವಾ ಗದಾಧರಃ ।
ರಥಾಙ್ಗಪಾಣಿರಕ್ಷೋಭ್ಯಃ ಸರ್ವಪ್ರಹರಣಾಯುಧಃ ॥೧೨೦॥

ಶ್ರೀ ಸರ್ವಪ್ರಹರಣಾಯುಧ ಓಂ ನಮ ಇತಿ ॥

ವನಮಾಲೀ ಗದೀ ಶಾರ್ಙ್ಗೀ ಶಙ್ಖೀ ಚಕ್ರೀ ಚ ನನ್ದಕೀ ।
ಶ್ರೀಮಾನ್ನಾರಾಯಣೋ ವಿಷ್ಣುರ್ವಾಸುದೇವೋಽಭಿರಕ್ಷತು ॥

❄

ಫಲಶ್ರುತಿಃ

ಇತೀದಂ ಕೀರ್ತನೀಯಸ್ಯ ಕೇಶವಸ್ಯ ಮಹಾತ್ಮನಃ ।
ನಾಮ್ನಾಂ ಸಹಸ್ರಂ ದಿವ್ಯಾನಾಮಶೇಷೇಣ ಪ್ರಕೀರ್ತಿತಮ್ ॥೧॥

ಯ ಇದಂ ಶೃಣುಯಾನ್ನಿತ್ಯಂ ಯಶ್ಚಾಪಿ ಪರಿಕೀರ್ತಯೇತ್ ।
ನಾಶುಭಂ ಪ್ರಾಪ್ನುಯಾತ್ಕಿಂಚಿತ್ಸೋಽಮುತ್ರೇಹ ಚ ಮಾನವಃ ॥೨॥

ವೇದಾನ್ತಗೋ ಬ್ರಾಹ್ಮಣಃ ಸ್ಯಾತ್ಕ್ಷತ್ರಿಯೋ ವಿಜಯೀ ಭವೇತ್ ।
ವೈಶ್ಯೋ ಧನಸಮೃದ್ಧಃ ಸ್ಯಾಚ್ಛೂದ್ರಃ ಸುಖಮವಾಪ್ನುಯಾತ್ ॥೩॥

ಧರ್ಮಾರ್ಥೀ ಪ್ರಾಪ್ನುಯಾದ್ಧರ್ಮ-
ಮರ್ಥಾರ್ಥೀ ಚಾರ್ಥಮಾಪ್ನುಯಾತ್ ।
ಕಾಮಾನವಾಪ್ನುಯಾತ್ಕಾಮೀ
ಪ್ರಜಾರ್ಥೀ ಚಾಪ್ನುಯಾತ್ಪ್ರಜಾಮ್

ಭಕ್ತಿಮಾನ್ಯಃ ಸದೋತ್ಥಾಯ ಶುಚಿಸ್ತದ್ಗತಮಾನಸಃ ।
ಸಹಸ್ರಂ ವಾಸುದೇವಸ್ಯ ನಾಮ್ನಾಮೇತತ್ಪ್ರಕೀರ್ತಯೇತ್ ॥೫॥

ಯಶಃ ಪ್ರಾಪ್ನೋತಿ ವಿಪುಲಂ ಜ್ಞಾತಿಪ್ರಾಧಾನ್ಯಮೇವ ಚ ।
ಅಚಲಾಂ ಶ್ರಿಯಮಾಪ್ನೋತಿ ಶ್ರೇಯಃ ಪ್ರಾಪ್ನೋತ್ಯನುತ್ತಮಮ್ ॥

ನ ಭಯಂ ಕ್ವಚಿದಾಪ್ನೋತಿ ವೀರ್ಯಂ ತೇಜಶ್ಚ ವಿನ್ದತಿ ।
ಭವತ್ಯರೋಗೋ ದ್ಯುತಿಮಾನ್ಬಲರೂಪಗುಣಾನ್ವಿತಃ ॥೭॥

ರೋಗಾರ್ತೋ ಮುಚ್ಯತೇ ರೋಗಾದ್ಬದ್ಧೋ ಮುಚ್ಯೇತ ಬನ್ಧನಾತ್ ।
ಭಯಾನ್ಮುಚ್ಯೇತ ಭೀತಸ್ತು ಮುಚ್ಯೇತಾಪನ್ನ ಆಪದಃ ॥೮॥

ದುರ್ಗಾಣ್ಯತಿತರತ್ಯಾಶು ಪುರುಷಃ ಪುರುಷೋತ್ತಮಮ್ ।
ಸ್ತುವನ್ನಾಮಸಹಸ್ರೇಣ ನಿತ್ಯಂ ಭಕ್ತಿಸಮನ್ವಿತಃ ॥೯॥

ವಾಸುದೇವಾಶ್ರಯೋ ಮರ್ತ್ಯೋ ವಾಸುದೇವಪರಾಯಣಃ ।
ಸರ್ವಪಾಪವಿಶುದ್ಧಾತ್ಮಾ ಯಾತಿ ಬ್ರಹ್ಮ ಸನಾತನಮ್ ॥೧೦॥

ನ ವಾಸುದೇವಭಕ್ತಾನಾಮಶುಭಂ ವಿದ್ಯತೇ ಕ್ವಚಿತ್ ।
ಜನ್ಮಮೃತ್ಯುಜರಾವ್ಯಾಧಿಭಯಂ ನೈವೋಪಜಾಯತೇ ॥೧೧॥

ಇಮಂ ಸ್ತವಮಧೀಯಾನಃ ಶ್ರದ್ಧಾಭಕ್ತಿಸಮನ್ವಿತಃ ।
ಯುಜ್ಯೇತಾತ್ಮಸುಖಕ್ಷಾನ್ತಿಶ್ರೀಧೃತಿಸ್ಮೃತಿಕೀರ್ತಿಭಿಃ ॥೧೨॥

ನ ಕ್ರೋಧೋ ನ ಚ ಮಾತ್ಸರ್ಯಂ ನ ಲೋಭೋ ನಾಶುಭಾಮತಿಃ ।
ಭವನ್ತಿ ಕೃತಪುಣ್ಯಾನಾಂ ಭಕ್ತಾನಾಂ ಪುರುಷೋತ್ತಮೇ ॥೧೩॥

ದ್ಯೌಃ ಸ ಚನ್ದ್ರಾರ್ಕನಕ್ಷತ್ರಂ ಖಂ ದಿಶೋ ಭೂರ್ಮಹೋದಧಿಃ ।
ವಾಸುದೇವಸ್ಯ ವೀರ್ಯೇಣ ವಿಧೃತಾನಿ ಮಹಾತ್ಮನಃ ॥೧೪॥

ಸಸುರಾಸುರಗನ್ಧರ್ವಂ ಸಯಕ್ಷೋರಗರಾಕ್ಷಸಮ್ ।
ಜಗದ್ವಶೇ ವರ್ತತೇದಂ ಕೃಷ್ಣಸ್ಯ ಸಚರಾಚರಮ್ ॥೧೫॥

ಇನ್ದ್ರಿಯಾಣಿ ಮನೋ ಬುದ್ಧಿಃ ಸತ್ತ್ವಂ ತೇಜೋ ಬಲಂ ಧೃತಿಃ ।
ವಾಸುದೇವಾತ್ಮಕಾನ್ಯಾಹುಃ ಕ್ಷೇತ್ರಂ ಕ್ಷೇತ್ರಜ್ಞ ಏವ ಚ ॥೧೬॥

ಸರ್ವಾಗಮಾನಾಮಾಚಾರಃ ಪ್ರಥಮಂ ಪರಿಕಲ್ಪತೇ ।
ಆಚಾರಪ್ರಭವೋ ಧರ್ಮೋ ಧರ್ಮಸ್ಯ ಪ್ರಭುರಚ್ಯುತಃ ॥೧೭॥

ಋಷಯಃ ಪಿತರೋ ದೇವಾ ಮಹಾಭೂತಾನಿ ಧಾತವಃ ।
ಜಙ್ಗಮಾಜಙ್ಗಮಂ ಚೇದಂ ಜಗನ್ನಾರಾಯಣೋದ್ಭವಮ್ ॥೧೮॥

ಯೋಗೋ ಜ್ಞಾನಂ ತಥಾ ಸಾಂಖ್ಯಂ ವಿದ್ಯಾಃ ಶಿಲ್ಪಾದಿ ಕರ್ಮ ಚ ।
ವೇದಾಃ ಶಾಸ್ತ್ರಾಣಿ ವಿಜ್ಞಾನಮೇತತ್ಸರ್ವಂ ಜನಾರ್ದನಾತ್ ॥೧೯॥

ಏಕೋ ವಿಷ್ಣುರ್ಮಹದ್ಭೂತಂ ಪೃಥಗ್ಭೂತಾನ್ಯನೇಕಶಃ ।
ತ್ರೀನ್ ಲೋಕಾನ್ವ್ಯಾಪ್ಯ ಭೂತಾತ್ಮಾ ಭುಙ್ಕ್ತೇ ವಿಶ್ವಭುಗವ್ಯಯಃ ॥೨೦॥

ಇಮಂ ಸ್ತವಂ ಭಗವತೋ ವಿಷ್ಣೋರ್ವ್ಯಾಸೇನ ಕೀರ್ತಿತಮ್ ।
ಪಠೇದ್ಯ ಇಚ್ಛೇತ್ಪುರುಷಃ ಶ್ರೇಯಃ ಪ್ರಾಪ್ತುಂ ಸುಖಾನಿ ಚ ॥೨೧॥

ವಿಶ್ವೇಶ್ವರಮಜಂ ದೇವಂ ಜಗತಃ ಪ್ರಭವಾಪ್ಯಯಮ್ ।
ಭಜನ್ತಿ ಯೇ ಪುಷ್ಕರಾಕ್ಷಂ ನ ತೇ ಯಾನ್ತಿ ಪರಾಭವಮ್ ॥೨೨॥

ನ ತೇ ಯಾನ್ತಿ ಪರಾಭವಮ್-ಓಂ ನಮ ಇತಿ

ನಮೋಽಸ್ತ್ವನನ್ತಾಯ ಸಹಸ್ರಮೂರ್ತಯೇ
ಸಹಸ್ರಪಾದಾಕ್ಷಿಶಿರೋರುಬಾಹವೇ ।
ಸಹಸ್ರನಾಮ್ನೇ ಪುರುಷಾಯ ಶಾಶ್ವತೇ
ಸಹಸ್ರಕೋಟೀಯುಗಧಾರಿಣೇ ನಮಃ ॥

ಆರ್ತಾ ವಿಷಣ್ಣಾಃ ಶಿಥಿಲಾಶ್ಚ ಭೀತಾಃ
ಘೋರೇಷು ಚ ವ್ಯಾಧಿಷು ವರ್ತಮಾನಾಃ ।
ಸಂಕೀರ್ತ್ಯ ನಾರಾಯಣಶಬ್ದಮಾತ್ರಂ
ವಿಮುಕ್ತದುಃಖಾಃ ಸುಖಿನೋ ಭವನ್ತಿ ॥

ಕಾಯೇನ ವಾಚಾ ಮನಸೇನ್ದ್ರಿಯೈರ್ವಾ
ಬುದ್ಧ್ಯಾತ್ಮನಾ ವಾ ಪ್ರಕೃತೇಃ ಸ್ವಭಾವಾತ್ ।
ಕರೋಮಿ ಯದ್ಯತ್ಸಕಲಂ ಪರಸ್ಮೈ
ನಾರಾಯಣಾಯೇತಿ ಸಮರ್ಪಯಾಮಿ ॥

ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್ ।
ತತ್ಸರ್ವಂ ಕ್ಷಮ್ಯತಾಂ ದೇವ ನಾರಾಯಣ ನಮೋಽಸ್ತು ತೇ ॥

॥ ಶ್ರೀ ಸದ್ಗುರುಚರಣಾರವಿನ್ದಾರ್ಪಣಮಸ್ತು ॥
॥ ಶ್ರೀಮನ್ನಾರಾಯಣಚರಣಾರವಿನ್ದಾರ್ಪಣಮಸ್ತು ॥
ಶ್ರೀಕೃಷ್ಣಾರ್ಪಣಮಸ್ತು ಓಂ ತತ್ಸತ್

೨ – ಶ್ರೀವಿಷ್ಣುಸಹಸ್ರನಾಮಾವಲಿಃ

ಓಂ ವಿಶ್ವಸ್ಮೈ ನಮಃ
ಓಂ ವಿಷ್ಣವೇ ನಮಃ
ಓಂ ವಷಟ್ಕಾರಾಯ ನಮಃ
ಓಂ ಭೂತಭವ್ಯಭವತ್ಪ್ರಭವೇ ನಮಃ
ಓಂ ಭೂತಕೃತೇ ನಮಃ
ಓಂ ಭೂತಭೃತೇ ನಮಃ
ಓಂ ಭಾವಾಯ ನಮಃ
ಓಂ ಭೂತಾತ್ಮನೇ ನಮಃ
ಓಂ ಭೂತಾಭಾವನಾಯ ನಮಃ
ಓಂ ಪೂತಾತ್ಮನೇ ನಮಃ
ಓಂ ಪರಮಾತ್ಮನೇ ನಮಃ
ಓಂ ಮುಕ್ತಾನಾಂ ಪರಮಾಯೈ ಗತಯೇ ನಮಃ
ಓಂ ಅವ್ಯಯಾಯ ನಮಃ
ಓಂ ಪುರುಷಾಯ ನಮಃ
ಓಂ ಸಾಕ್ಷಿಣೇ ನಮಃ
ಓಂ ಕ್ಷೇತ್ರಜ್ಞಾಯ ನಮಃ
ಓಂ ಅಕ್ಷರಾಯ ನಮಃ
ಓಂ ಯೋಗಾಯ ನಮಃ
ಓಂ ಯೋಗವಿದಾಂ ನೇತ್ರೇ ನಮಃ
ಓಂ ಪ್ರಧಾನಪುರುಷೇಶ್ವರಾಯ ನಮಃ
ಓಂ ನಾರಸಿಂಹವಪುಷೇ ನಮಃ
ಓಂ ಶ್ರೀಮತೇ ನಮಃ
ಓಂ ಕೇಶವಾಯ ನಮಃ
ಓಂ ಪುರುಷೋತ್ತಮಾಯ ನಮಃ
ಓಂ ಸರ್ವಸ್ಮೈ ನಮಃ
ಓಂ ಶರ್ವಾಯ ನಮಃ
ಓಂ ಶಿವಾಯ ನಮಃ
ಓಂ ಸ್ಥಾಣವೇ ನಮಃ
ಓಂ ಭೂತಾದಯೇ ನಮಃ
ಓಂ ಅವ್ಯಯಾಯ ನಿಧಯೇ ನಮಃ
ಓಂ ಸಂಭವಾಯ ನಮಃ
ಓಂ ಭಾವನಾಯ ನಮಃ
ಓಂ ಭರ್ತ್ರೇ ನಮಃ
ಓಂ ಪ್ರಭವಾಯ ನಮಃ
ಓಂ ಪ್ರಭವೇ ನಮಃ
ಓಂ ಈಶ್ವರಾಯ ನಮಃ
ಓಂ ಸ್ವಯಮ್ಭುವೇ ನಮಃ
ಓಂ ಶಮ್ಭವೇ ನಮಃ
ಓಂ ಆದಿತ್ಯಾಯ ನಮಃ
ಓಂ ಪುಷ್ಕರಾಕ್ಷಾಯ ನಮಃ
ಓಂ ಮಹಾಸ್ವನಾಯ ನಮಃ
ಓಂ ಅನಾದಿನಿಧನಾಯ ನಮಃ
ಓಂ ಧಾತ್ರೇ ನಮಃ
ಓಂ ವಿಧಾತ್ರೇ ನಮಃ
ಓಂ ಉತ್ತಮಾಯಧಾತವೇ ನಮಃ
ಓಂ ಅಪ್ರಮೇಯಾಯ ನಮಃ
ಓಂ ಹೃಷೀಕೇಶಾಯ ನಮಃ
ಓಂ ಪದ್ಮನಾಭಾಯ ನಮಃ

ಓಂ ಅಮರಪ್ರಭವೇ	ನಮಃ	ಓಂ ವಿಕ್ರಮಿಣೇ	ನಮಃ
ಓಂ ವಿಶ್ವಕರ್ಮಣೇ	ನಮಃ	ಓಂ ಧನ್ವಿನೇ	ನಮಃ
ಓಂ ಮನವೇ	ನಮಃ	ಓಂ ಮೇಧಾವಿನೇ	ನಮಃ
ಓಂ ತ್ವಷ್ಟ್ರೇ	ನಮಃ	ಓಂ ವಿಕ್ರಮಾಯ	ನಮಃ
ಓಂ ಸ್ಥವಿಷ್ಠಾಯ	ನಮಃ	ಓಂ ಕ್ರಮಾಯ	ನಮಃ
ಓಂ ಸ್ಥವಿರಾಯ ಧ್ರುವಾಯ	ನಮಃ	ಓಂ ಅನುತ್ತಮಾಯ	ನಮಃ
ಓಂ ಅಗ್ರಾಹ್ಯಾಯ	ನಮಃ	ಓಂ ದುರಾಧರ್ಷಾಯ	ನಮಃ
ಓಂ ಶಾಶ್ವತಾಯ	ನಮಃ	ಓಂ ಕೃತಜ್ಞಾಯ	ನಮಃ
ಓಂ ಕೃಷ್ಣಾಯ	ನಮಃ	ಓಂ ಕೃತಯೇ	ನಮಃ
ಓಂ ಲೋಹಿತಾಕ್ಷಾಯ	ನಮಃ	ಓಂ ಆತ್ಮವತೇ	ನಮಃ
ಓಂ ಪ್ರತರ್ದನಾಯ	ನಮಃ	ಓಂ ಸುರೇಶಾಯ	ನಮಃ
ಓಂ ಪ್ರಭೂತಾಯ	ನಮಃ	ಓಂ ಶರಣಾಯ	ನಮಃ
ಓಂ ತ್ರಿಕಕುಬ್ಧಾಮ್ನೇ	ನಮಃ	ಓಂ ಶರ್ಮಣೇ	ನಮಃ
ಓಂ ಪವಿತ್ರಾಯ	ನಮಃ	ಓಂ ವಿಶ್ವರೇತಸೇ	ನಮಃ
ಓಂ ಪರಸ್ಮೈಮಙ್ಗಳಾಯ	ನಮಃ	ಓಂ ಪ್ರಜಾಭವಾಯ	ನಮಃ
ಓಂ ಈಶಾನಾಯ	ನಮಃ	ಓಂ ಅಹ್ನೇ	ನಮಃ
ಓಂ ಪ್ರಾಣದಾಯ	ನಮಃ	ಓಂ ಸಂವತ್ಸರಾಯ	ನಮಃ
ಓಂ ಪ್ರಾಣಾಯ	ನಮಃ	ಓಂ ವ್ಯಾಳಾಯ	ನಮಃ
ಓಂ ಜ್ಯೇಷ್ಠಾಯ	ನಮಃ	ಓಂ ಪ್ರತ್ಯಯಾಯ	ನಮಃ
ಓಂ ಶ್ರೇಷ್ಠಾಯ	ನಮಃ	ಓಂ ಸರ್ವದರ್ಶನಾಯ	ನಮಃ
ಓಂ ಪ್ರಜಾಪತೇಯ	ನಮಃ	ಓಂ ಅಜಾಯ	ನಮಃ
ಓಂ ಹಿರಣ್ಯಗರ್ಭಾಯ	ನಮಃ	ಓಂ ಸರ್ವೇಶ್ವರಾಯ	ನಮಃ
ಓಂ ಭೂಗರ್ಭಾಯ	ನಮಃ	ಓಂ ಸಿದ್ಧಾಯ	ನಮಃ
ಓಂ ಮಾಧವಾಯ	ನಮಃ	ಓಂ ಸಿದ್ಧಯೇ	ನಮಃ
ಓಂ ಮಧುಸೂದನಾಯ	ನಮಃ	ಓಂ ಸರ್ವಾದಯೇ	ನಮಃ
ಓಂ ಈಶ್ವರಾಯ	ನಮಃ	ಓಂ ಅಚ್ಯುತಾಯ ನಮಃ	॥೧೦೦॥

ಓಂ ವೃಷಾಕಪಯೇ ನಮಃ ಓಂ ವೇದಾಯ ನಮಃ
ಓಂ ಅಮೇಯಾತ್ಮನೇ ನಮಃ ಓಂ ವೇದವಿದೇ ನಮಃ
ಓಂ ಸರ್ವಯೋಗವಿನಿಃಸೃತಾಯ ಓಂ ಅವ್ಯಙ್ಗಾಯ ನಮಃ
ನಮಃ ಓಂ ವೇದಾಙ್ಗಾಯ ನಮಃ
ಓಂ ವಸವೇ ನಮಃ ಓಂ ವೇದವಿದೇ ನಮಃ
ಓಂ ವಸುಮನಸೇ ನಮಃ ಓಂ ಕವಯೇ ನಮಃ
ಓಂ ಸತ್ಯಾಯ ನಮಃ ಓಂ ಲೋಕಾಧ್ಯಕ್ಷಾಯ ನಮಃ
ಓಂ ಸಮಾತ್ಮನೇ ನಮಃ ಓಂ ಸುರಾಧ್ಯಕ್ಷಾಯ ನಮಃ
ಓಂ ಅಸಮ್ಮಿತಾಯ ನಮಃ ಓಂ ಧರ್ಮಾಧ್ಯಕ್ಷಾಯ ನಮಃ
ಓಂ ಸಮಾಯ ನಮಃ ಓಂ ಕೃತಾಕೃತಾಯ ನಮಃ
ಓಂ ಅಮೋಘಾಯ ನಮಃ ಓಂ ಚತುರಾತ್ಮನೇ ನಮಃ
ಓಂ ಪುಣ್ಡರೀಕಾಕ್ಷಾಯ ನಮಃ ಓಂ ಚತುರ್ವ್ಯೂಹಾಯ ನಮಃ
ಓಂ ವೃಷಕರ್ಮಣೇ ನಮಃ ಓಂ ಚತುರ್ದಂಷ್ಟ್ರಾಯ ನಮಃ
ಓಂ ವೃಷಾಕೃತಯೇ ನಮಃ ಓಂ ಚತುರ್ಭುಜಾಯ ನಮಃ
ಓಂ ರುದ್ರಾಯ ನಮಃ ಓಂ ಭ್ರಾಜಿಷ್ಣವೇ ನಮಃ
ಓಂ ಬಹುಶಿರಸೇ ನಮಃ ಓಂ ಭೋಜನಾಯ ನಮಃ
ಓಂ ಬಭ್ರವೇ ನಮಃ ಓಂ ಭೋಕ್ತ್ರೇ ನಮಃ
ಓಂ ವಿಶ್ವಯೋನಯೇ ನಮಃ ಓಂ ಸಹಿಷ್ಣವೇ ನಮಃ
ಓಂ ಶುಚಿಶ್ರವಸೇ ನಮಃ ಓಂ ಜಗದಾದಿಜಾಯ ನಮಃ
ಓಂ ಅಮೃತಾಯ ನಮಃ ಓಂ ಅನಘಾಯ ನಮಃ
ಓಂ ಶಾಶ್ವತಸ್ಥಾಣವೇ ನಮಃ ಓಂ ವಿಜಯಾಯ ನಮಃ
ಓಂ ವರಾರೋಹಾಯ ನಮಃ ಓಂ ಜೇತ್ರೇ ನಮಃ
ಓಂ ಮಹಾತಪಸೇ ನಮಃ ಓಂ ವಿಶ್ವಯೋನಯೇ ನಮಃ
ಓಂ ಸರ್ವಗಾಯ ನಮಃ ಓಂ ಪುನರ್ವಸವೇ ನಮಃ
ಓಂ ಸರ್ವವಿದ್ಭಾನವೇ ನಮಃ ಓಂ ಉಪೇನ್ದ್ರಾಯ ನಮಃ
ಓಂ ವಿಷ್ವಕ್ಸೇನಾಯ ನಮಃ ಓಂ ವಾಮನಾಯ ನಮಃ
ಓಂ ಜನಾರ್ದನಾಯ ನಮಃ ಓಂ ಪ್ರಾಂಶವೇ ನಮ

ಓಂ	ಅಮೋಘಾಯ	ನಮಃ	ಓಂ	ಮಹೇಷ್ವಾಸಾಯ	ನಮಃ
ಓಂ	ಶುಚಯೇ	ನಮಃ	ಓಂ	ಮಹೀಭರ್ತ್ರೇ	ನಮಃ
ಓಂ	ಊರ್ಜಿತಾಯ	ನಮಃ	ಓಂ	ಶ್ರೀನಿವಾಸಾಯ	ನಮಃ
ಓಂ	ಅತೀನ್ದ್ರಾಯ	ನಮಃ	ಓಂ	ಸತಾಂಗತಯೇ	ನಮಃ
ಓಂ	ಸಂಗ್ರಹಾಯ	ನಮಃ	ಓಂ	ಅನಿರುದ್ಧಾಯ	ನಮಃ
ಓಂ	ಸರ್ಗಾಯ	ನಮಃ	ಓಂ	ಸುರಾನನ್ದಾಯ	ನಮಃ
ಓಂ	ಧೃತಾತ್ಮನೇ	ನಮಃ	ಓಂ	ಗೋವಿನ್ದಾಯ	ನಮಃ
ಓಂ	ನಿಯಮಾಯ	ನಮಃ	ಓಂ	ಗೋವಿದಾಂಪತೇಯ	ನಮಃ
ಓಂ	ಯಮಾಯ	ನಮಃ	ಓಂ	ಮರೀಚಯೇ	ನಮಃ
ಓಂ	ವೇದ್ಯಾಯ	ನಮಃ	ಓಂ	ದಮನಾಯ	ನಮಃ
ಓಂ	ವೈದ್ಯಾಯ	ನಮಃ	ಓಂ	ಹಂಸಾಯ	ನಮಃ
ಓಂ	ಸದಾಯೋಗಿನೇ	ನಮಃ	ಓಂ	ಸುಪರ್ಣಾಯ	ನಮಃ
ಓಂ	ವೀರಘ್ನೇ	ನಮಃ	ಓಂ	ಭುಜಗೋತ್ತಮಾಯ	ನಮಃ
ಓಂ	ಮಾಧವಾಯ	ನಮಃ	ಓಂ	ಹಿರಣ್ಯನಾಭಾಯ	ನಮಃ
ಓಂ	ಮಧವೇ	ನಮಃ	ಓಂ	ಸುತಪಸೇ	ನಮಃ
ಓಂ	ಅತೀನ್ದ್ರಿಯಾಯ	ನಮಃ	ಓಂ	ಪದ್ಮನಾಭಾಯ	ನಮಃ
ಓಂ	ಮಹಾಮಾಯಾಯ	ನಮಃ	ಓಂ	ಪ್ರಜಾಪತಯೇ	ನಮಃ
ಓಂ	ಮಹೋತ್ಸಾಹಾಯ	ನಮಃ	ಓಂ	ಅಮೃತ್ಯವೇ	ನಮಃ
ಓಂ	ಮಹಾಬಲಾಯ	ನಮಃ	ಓಂ	ಸರ್ವದೃಶೇ	ನಮಃ
ಓಂ	ಮಹಾಬುದ್ಧಯೇ	ನಮಃ	ಓಂ	ಸಿಂಹಾಯ	ನಮಃ
ಓಂ	ಮಹಾವೀರ್ಯಾಯ	ನಮಃ			॥೨೦೦॥
ಓಂ	ಮಹಾಶಕ್ತಯೇ	ನಮಃ	ಓಂ	ಸನ್ಧಾತ್ರೇ	ನಮಃ
ಓಂ	ಮಹಾದ್ಯುತಯೇ	ನಮಃ	ಓಂ	ಸನ್ಧಿಮತೇ	ನಮಃ
ಓಂ	ಅನಿರ್ದೇಶ್ಯವಪುಷೇ	ನಮಃ	ಓಂ	ಸ್ಥಿರಾಯ	ನಮಃ
ಓಂ	ಶ್ರೀಮತೇ	ನಮಃ	ಓಂ	ಅಜಾಯ	ನಮಃ
ಓಂ	ಅಮೇಯಾತ್ಮನೇ	ನಮಃ	ಓಂ	ದುರ್ಮರ್ಷಣಾಯ	ನಮಃ
ಓಂ	ಮಹಾದ್ರಿಧೃತೇ	ನಮಃ	ಓಂ	ಶಾಸ್ತ್ರೇ	ನಮಃ

ಓಂ ವಿಶ್ರುತಾತ್ಮನೇ ನಮಃ	ಓಂ ವಹ್ನಯೇ ನಮಃ
ಓಂ ಸುರಾರಿಘ್ನೇ ನಮಃ	ಓಂ ಅನಿಲಾಯ ನಮಃ
ಓಂ ಗುರವೇ ನಮಃ	ಓಂ ಧರಣೀಧರಾಯ ನಮಃ
ಓಂ ಗುರುತಮಾಯ ನಮಃ	ಓಂ ಸುಪ್ರಸಾದಾಯ ನಮಃ
ಓಂ ಧಾಮ್ನೇ ನಮಃ	ಓಂ ಪ್ರಸನ್ನಾತ್ಮನೇ ನಮಃ
ಓಂ ಸತ್ಯಾಯ ನಮಃ	ಓಂ ವಿಶ್ವಧೃಷೇ ನಮಃ
ಓಂ ಸತ್ಯಪರಾಕ್ರಮಾಯ ನಮಃ	ಓಂ ವಿಶ್ವಭುಜೇ ನಮಃ
ಓಂ ನಿಮಿಷಾಯ ನಮಃ	ಓಂ ವಿಭವೇ ನಮಃ
ಓಂ ಅನಿಮಿಷಾಯ ನಮಃ	ಓಂ ಸತ್ಕರ್ತ್ರೇ ನಮಃ
ಓಂ ಸ್ರಗ್ವಿಣೇ ನಮಃ	ಓಂ ಸತ್ಕೃತಾಯ ನಮಃ
ಓಂ ವಾಚಸ್ಪತಯ ಉದಾರಧಿಯೇ ನಮಃ	ಓಂ ಸಾಧವೇ ನಮಃ
	ಓಂ ಜಹ್ನವೇ ನಮಃ
ಓಂ ಅಗ್ರಣ್ಯೇ ನಮಃ	ಓಂ ನಾರಾಯಣಾಯ ನಮಃ
ಓಂ ಗ್ರಾಮಣ್ಯೇ ನಮಃ	ಓಂ ನರಾಯ ನಮಃ
ಓಂ ಶ್ರೀಮತೇ ನಮಃ	ಓಂ ಅಸಂಖ್ಯೇಯಾಯ ನಮಃ
ಓಂ ನ್ಯಾಯಾಯ ನಮಃ	ಓಂ ಅಪ್ರಮೇಯಾತ್ಮನೇ ನಮಃ
ಓಂ ನೇತ್ರೇ ನಮಃ	ಓಂ ವಿಶಿಷ್ಟಾಯ ನಮಃ
ಓಂ ಸಮೀರಣಾಯ ನಮಃ	ಓಂ ಶಿಷ್ಟಕೃತೇ ನಮಃ
ಓಂ ಸಹಸ್ರಮೂರ್ಧ್ನೇ ನಮಃ	ಓಂ ಶುಚಯೇ ನಮಃ
ಓಂ ವಿಶ್ವಾತ್ಮನೇ ನಮಃ	ಓಂ ಸಿದ್ಧಾರ್ಥಾಯ ನಮಃ
ಓಂ ಸಹಸ್ರಾಕ್ಷಾಯ ನಮಃ	ಓಂ ಸಿದ್ಧಸಂಕಲ್ಪಾಯ ನಮಃ
ಓಂ ಸಹಸ್ರಪದೇ ನಮಃ	ಓಂ ಸಿದ್ಧಿದಾಯ ನಮಃ
ಓಂ ಆವರ್ತನಾಯ ನಮಃ	ಓಂ ಸಿದ್ಧಿಸಾಧನಾಯ ನಮಃ
ಓಂ ನಿವೃತ್ತಾತ್ಮನೇ ನಮಃ	ಓಂ ವೃಷಾಹಿಣೇ ನಮಃ
ಓಂ ಸಂವೃತಾಯ ನಮಃ	ಓಂ ವೃಷಭಾಯ ನಮಃ
ಓಂ ಸಂಪ್ರಮರ್ದನಾಯ ನಮಃ	ಓಂ ವಿಷ್ಣವೇ ನಮಃ
ಓಂ ಅಹಃಸಂವರ್ತಕಾಯ ನಮಃ	ಓಂ ವೃಷಪರ್ವಣೇ ನಮಃ

ಓಂ ವೃಷೋದರಾಯ ನಮಃ
ಓಂ ವರ್ಧನಾಯ ನಮಃ
ಓಂ ವರ್ಧಮಾನಾಯ ನಮಃ
ಓಂ ವಿವಿಕ್ತಾಯ ನಮಃ
ಓಂ ಶ್ರುತಿಸಾಗರಾಯ ನಮಃ
ಓಂ ಸುಭುಜಾಯ ನಮಃ
ಓಂ ದುರ್ಧರಾಯ ನಮಃ
ಓಂ ವಾಗ್ಮಿನೇ ನಮಃ
ಓಂ ಮಹೇನ್ದ್ರಾಯ ನಮಃ
ಓಂ ವಸುದಾಯ ನಮಃ
ಓಂ ವಸವೇ ನಮಃ
ಓಂ ನೈಕರೂಪಾಯ ನಮಃ
ಓಂ ಬೃಹದ್ರೂಪಾಯ ನಮಃ
ಓಂ ಶಿಪಿವಿಷ್ಟಾಯ ನಮಃ
ಓಂ ಪ್ರಕಾಶನಾಯ ನಮಃ
ಓಂ ಓಜಸ್ತೇಜೋದ್ಯುತಿಧರಾಯ ನಮಃ
ಓಂ ಪ್ರಕಾಶಾತ್ಮನೇ ನಮಃ
ಓಂ ಪ್ರತಾಪನಾಯ ನಮಃ
ಓಂ ಋದ್ಧಾಯ ನಮಃ
ಓಂ ಸ್ಪಷ್ಟಾಕ್ಷರಾಯ ನಮಃ
ಓಂ ಮನ್ತ್ರಾಯ ನಮಃ
ಓಂ ಚನ್ದ್ರಾಂಶವೇ ನಮಃ
ಓಂ ಭಾಸ್ಕರದ್ಯುತಯೇ ನಮಃ
ಓಂ ಅಮೃತಾಂಶೂದ್ಭವಾಯ ನಮಃ
ಓಂ ಭಾನವೇ ನಮಃ
ಓಂ ಶಶಬಿನ್ದವೇ ನಮಃ
ಓಂ ಸುರೇಶ್ವರಾಯ ನಮಃ
ಓಂ ಔಷಧಾಯ ನಮಃ
ಓಂ ಜಗತಃ ಸೇತವೇ ನಮಃ
ಓಂ ಸತ್ಯಧರ್ಮಪರಾಕ್ರಮಾಯ ನಮಃ
ಓಂ ಭೂತಭವ್ಯಭವನ್ನಾಥಾಯ ನಮಃ
ಓಂ ಪವನಾಯ ನಮಃ
ಓಂ ಪಾವನಾಯ ನಮಃ
ಓಂ ಅನಲಾಯ ನಮಃ
ಓಂ ಕಾಮಘ್ನೇ ನಮಃ
ಓಂ ಕಾಮಕೃತೇ ನಮಃ
ಓಂ ಕಾನ್ತಾಯ ನಮಃ
ಓಂ ಕಾಮಾಯ ನಮಃ
ಓಂ ಕಾಮಪ್ರದಾಯ ನಮಃ
ಓಂ ಪ್ರಭವೇ ನಮಃ
ಓಂ ಯುಗಾತಿಕೃತೇ ನಮಃ||೩೦೦||
ಓಂ ಯುಗಾವರ್ತಾಯ ನಮಃ
ಓಂ ನೈಕಮಾಯಾಯ ನಮಃ
ಓಂ ಮಹಾಶನಾಯ ನಮಃ
ಓಂ ಅದೃಶಾಯ ನಮಃ
ಓಂ ವ್ಯಕ್ತರೂಪಾಯ ನಮಃ
ಓಂ ಸಹಸ್ರಜಿತೇ ನಮಃ
ಓಂ ಅನನ್ತಜಿತೇ ನಮಃ
ಓಂ ಇಷ್ಟಾಯ ನಮಃ

ಓಂ ಅವಿಶಿಷ್ಟಾಯ ನಮಃ
ಓಂ ಶಿಷ್ಟೇಷ್ಟಾಯ ನಮಃ
ಓಂ ಶಿಖಣ್ಡಿನೇ ನಮಃ
ಓಂ ನಹುಷಾಯ ನಮಃ
ಓಂ ವೃಷಾಯ ನಮಃ
ಓಂ ಕ್ರೋಧಘ್ನೇ ನಮಃ
ಓಂ ಕ್ರೋಧಕೃತ್ಕರ್ತ್ರೇ ನಮಃ
ಓಂ ವಿಶ್ವಬಾಹವೇ ನಮಃ
ಓಂ ಮಹೀಧರಾಯ ನಮಃ
ಓಂ ಅಚ್ಯುತಾಯ ನಮಃ
ಓಂ ಪ್ರಥಿತಾಯ ನಮಃ
ಓಂ ಪ್ರಾಣಾಯ ನಮಃ
ಓಂ ಪ್ರಾಣದಾಯ ನಮಃ
ಓಂ ವಾಸವಾನುಜಾಯ ನಮಃ
ಓಂ ಅಪಾಂ ನಿಧಯೇ ನಮಃ
ಓಂ ಅಧಿಷ್ಠಾನಾಯ ನಮಃ
ಓಂ ಅಪ್ರಮತ್ತಾಯ ನಮಃ
ಓಂ ಪ್ರತಿಷ್ಠಿತಾಯ ನಮಃ
ಓಂ ಸ್ಕನ್ದಾಯ ನಮಃ
ಓಂ ಸ್ಕನ್ದಧರಾಯ ನಮಃ
ಓಂ ಧುರ್ಯಾಯ ನಮಃ
ಓಂ ವರದಾಯ ನಮಃ
ಓಂ ವಾಯುವಾಹನಾಯ ನಮಃ
ಓಂ ವಾಸುದೇವಾಯ ನಮಃ
ಓಂ ಬೃಹದ್ಭಾನವೇ ನಮಃ
ಓಂ ಆದಿದೇವಾಯ ನಮಃ
ಓಂ ಪುರನ್ದರಾಯ ನಮಃ
ಓಂ ಅಶೋಕಾಯ ನಮಃ
ಓಂ ತಾರಣಾಯ ನಮಃ
ಓಂ ತಾರಾಯ ನಮಃ
ಓಂ ಶೂರಾಯ ನಮಃ
ಓಂ ಶೌರಯೇ ನಮಃ
ಓಂ ಜನೇಶ್ವರಾಯ ನಮಃ
ಓಂ ಅನುಕೂಲಾಯ ನಮಃ
ಓಂ ಶತಾವರ್ತಾಯ ನಮಃ
ಓಂ ಪದ್ಮಿನೇ ನಮಃ
ಓಂ ಪದ್ಮನಿಭೇಕ್ಷಣಾಯ ನಮಃ
ಓಂ ಪದ್ಮನಾಭಾಯ ನಮಃ
ಓಂ ಅರವಿನ್ದಾಕ್ಷಾಯ ನಮಃ
ಓಂ ಪದ್ಮಗರ್ಭಾಯ ನಮಃ
ಓಂ ಶರೀರಭೃತೇ ನಮಃ
ಓಂ ಮಹರ್ದ್ಧಯೇ ನಮಃ
ಓಂ ಋದ್ಧಾಯ ನಮಃ
ಓಂ ವೃದ್ಧಾತ್ಮನೇ ನಮಃ
ಓಂ ಮಹಾಕ್ಷಾಯ ನಮಃ
ಓಂ ಗರುಡಧ್ವಜಾಯ ನಮಃ
ಓಂ ಅತುಲಾಯ ನಮಃ
ಓಂ ಶರಭಾಯ ನಮಃ
ಓಂ ಭೀಮಾಯ ನಮಃ
ಓಂ ಸಮಯಜ್ಞಾಯ ನಮಃ
ಓಂ ಹವಿರ್ಹರಯೇ ನಮಃ
ಓಂ ಸರ್ವಲಕ್ಷಣಲಕ್ಷಣ್ಯಾಯ ನಮಃ

ಓಂ ಲಕ್ಷ್ಮೀವತೇ ನಮಃ
ಓಂ ಸಮಿತಿಂಜಯಾಯ ನಮಃ
ಓಂ ವಿಕ್ಷರಾಯ ನಮಃ
ಓಂ ರೋಹಿತಾಯ ನಮಃ
ಓಂ ಮಾರ್ಗಾಯ ನಮಃ
ಓಂ ಹೇತವೇ ನಮಃ
ಓಂ ದಾಮೋದರಾಯ ನಮಃ
ಓಂ ಸಹಾಯ ನಮಃ
ಓಂ ಮಹೀಧರಾಯ ನಮಃ
ಓಂ ಮಹಾಭಾಗಾಯ ನಮಃ
ಓಂ ವೇಗವತೇ ನಮಃ
ಓಂ ಅಮಿತಾಶನಾಯ ನಮಃ
ಓಂ ಉದ್ಭವಾಯ ನಮಃ
ಓಂ ಕ್ಷೋಭಣಾಯ ನಮಃ
ಓಂ ದೇವಾಯ ನಮಃ
ಓಂ ಶ್ರೀಗರ್ಭಾಯ ನಮಃ
ಓಂ ಪರಮೇಶ್ವರಾಯ ನಮಃ
ಓಂ ಕರಣಾಯ ನಮಃ
ಓಂ ಕಾರಣಾಯ ನಮಃ
ಓಂ ಕರ್ತ್ರೇ ನಮಃ
ಓಂ ವಿಕರ್ತ್ರೇ ನಮಃ
ಓಂ ಗಹನಾಯ ನಮಃ
ಓಂ ಗುಹಾಯ ನಮಃ
ಓಂ ವ್ಯವಸಾಯಾಯ ನಮಃ
ಓಂ ವ್ಯವಸ್ಥಾನಾಯ ನಮಃ
ಓಂ ಸಂಸ್ಥಾನಾಯ ನಮಃ
ಓಂ ಸ್ಥಾನದಾಯ ನಮಃ
ಓಂ ಧ್ರುವಾಯ ನಮಃ
ಓಂ ಪರರ್ದ್ಧಯೇ ನಮಃ
ಓಂ ಪರಮಸ್ಪಷ್ಟಾಯ ನಮಃ
ಓಂ ತುಷ್ಟಾಯ ನಮಃ
ಓಂ ಪುಷ್ಟಾಯ ನಮಃ
ಓಂ ಶುಭೇಕ್ಷಣಾಯ ನಮಃ
ಓಂ ರಾಮಾಯ ನಮಃ
ಓಂ ವಿರಾಮಾಯ ನಮಃ
ಓಂ ವಿರತಾಯ ನಮಃ
ಓಂ ಮಾರ್ಗಾಯ ನಮಃ
ಓಂ ನೇಯಾಯ ನಮಃ
ಓಂ ನಯಾಯ ನಮಃ
ಓಂ ಅನಯಾಯ ನಮಃ ॥೪೦೦॥
ಓಂ ವೀರಾಯ ನಮಃ
ಓಂ ಶಕ್ತಿಮತಾಂ ಶ್ರೇಷ್ಠಾಯ ನಮಃ
ಓಂ ಧರ್ಮಾಯ ನಮಃ
ಓಂ ಧರ್ಮವಿದುತ್ತಮಾಯ ನಮಃ
ಓಂ ವೈಕುಂಠಾಯ ನಮಃ
ಓಂ ಪುರುಷಾಯ ನಮಃ
ಓಂ ಪ್ರಾಣಾಯ ನಮಃ
ಓಂ ಪ್ರಾಣದಾಯ ನಮಃ
ಓಂ ಪ್ರಣವಾಯ ನಮಃ
ಓಂ ಪೃಥವೇ ನಮಃ
ಓಂ ಹಿರಣ್ಯಗರ್ಭಾಯ ನಮಃ

ಓಂ ಶತ್ರುಘ್ನಾಯ ನಮಃ ಓಂ ಧರ್ಮಯೂಪಾಯ ನಮಃ
ಓಂ ವ್ಯಾಪ್ತಾಯ ನಮಃ ಓಂ ಮಹಾಮಖಾಯ ನಮಃ
ಓಂ ವಾಯವೇ ನಮಃ ಓಂ ನಕ್ಷತ್ರನೇಮಯೇ ನಮಃ
ಓಂ ಅಧೋಕ್ಷಜಾಯ ನಮಃ ಓಂ ನಕ್ಷತ್ರಿಣೇ ನಮಃ
ಓಂ ಋತವೇ ನಮಃ ಓಂ ಕ್ಷಮಾಯ ನಮಃ
ಓಂ ಸುದರ್ಶನಾಯ ನಮಃ ಓಂ ಕ್ಷಾಮಾಯ ನಮಃ
ಓಂ ಕಾಲಾಯ ನಮಃ ಓಂ ಸಮೀಹನಾಯ ನಮಃ
ಓಂ ಪರಮೇಷ್ಠಿನೇ ನಮಃ ಓಂ ಯಜ್ಞಾಯ ನಮಃ
ಓಂ ಪರಿಗ್ರಹಾಯ ನಮಃ ಓಂ ಇಜ್ಯಾಯ ನಮಃ
ಓಂ ಉಗ್ರಾಯ ನಮಃ ಓಂ ಮಹೇಜ್ಯಾಯ ನಮಃ
ಓಂ ಸಂವತ್ಸರಾಯ ನಮಃ ಓಂ ಕ್ರತವೇ ನಮಃ
ಓಂ ದಕ್ಷಾಯ ನಮಃ ಓಂ ಸತ್ರಾಯ ನಮಃ
ಓಂ ವಿಶ್ರಾಮಾಯ ನಮಃ ಓಂ ಸತಾಂಗತಯೇ ನಮಃ
ಓಂ ವಿಶ್ವದಕ್ಷಿಣಾಯ ನಮಃ ಓಂ ಸರ್ವದರ್ಶಿನೇ ನಮಃ
ಓಂ ವಿಸ್ತಾರಾಯ ನಮಃ ಓಂ ವಿಮುಕ್ತಾತ್ಮನೇ ನಮಃ
ಓಂ ಸ್ಥಾವರಸ್ಥಾಣವೇ ನಮಃ ಓಂ ಸರ್ವಜ್ಞಾಯ ನಮಃ
ಓಂ ಪ್ರಮಾಣಾಯ ನಮಃ ಓಂ ಉತ್ತಮಾಯ ಜ್ಞಾನಾಯ
ಓಂ ಅವ್ಯಯಾಯ ಬೀಜಾಯ ನಮಃ
ನಮಃ ಓಂ ಸುವ್ರತಾಯ ನಮಃ
ಓಂ ಅರ್ಥಾಯ ನಮಃ ಓಂ ಸುಮುಖಾಯ ನಮಃ
ಓಂ ಅನರ್ಥಾಯ ನಮಃ ಓಂ ಸೂಕ್ಷ್ಮಾಯ ನಮಃ
ಓಂ ಮಹಾಕೋಶಾಯ ನಮಃ ಓಂ ಸುಘೋಷಾಯ ನಮಃ
ಓಂ ಮಹಾಭೋಗಾಯ ನಮಃ ಓಂ ಸುಖದಾಯ ನಮಃ
ಓಂ ಮಹಾಧನಾಯ ನಮಃ ಓಂ ಸುಹೃದೇ ನಮಃ
ಓಂ ಅನಿರ್ವಿಣ್ಣಾಯ ನಮಃ ಓಂ ಮನೋಹರಾಯ ನಮಃ
ಓಂ ಸ್ಥವಿಷ್ಠಾಯ ನಮಃ ಓಂ ಜಿತಕ್ರೋಧಾಯ ನಮಃ
ಓಂ ಅಭುವೇ ನಮಃ ಓಂ ವೀರಬಾಹವೇ ನಮಃ

ಓಂ ವಿದಾರಣಾಯ ನಮಃ
ಓಂ ಸ್ವಾಪನಾಯ ನಮಃ
ಓಂ ಸ್ವವಶಾಯ ನಮಃ
ಓಂ ವ್ಯಾಪಿನೇ ನಮಃ
ಓಂ ನೈಕಾತ್ಮನೇ ನಮಃ
ಓಂ ನೈಕಕರ್ಮಕೃತೇ ನಮಃ
ಓಂ ವತ್ಸರಾಯ ನಮಃ
ಓಂ ವತ್ಸಲಾಯ ನಮಃ
ಓಂ ವತ್ಸಿನೇ ನಮಃ
ಓಂ ರತ್ನಗರ್ಭಾಯ ನಮಃ
ಓಂ ಧನೇಶ್ವರಾಯ ನಮಃ
ಓಂ ಧರ್ಮಗುಪೇ ನಮಃ
ಓಂ ಧರ್ಮಕೃತೇ ನಮಃ
ಓಂ ಧರ್ಮಿಣೇ ನಮಃ
ಓಂ ಸತೇ ನಮಃ
ಓಂ ಅಸತೇ ನಮಃ
ಓಂ ಕ್ಷರಾಯ ನಮಃ
ಓಂ ಅಕ್ಷರಾಯ ನಮಃ
ಓಂ ಅವಿಜ್ಞಾತ್ರೇ ನಮಃ
ಓಂ ಸಹಸ್ರಾಂಶವೇ ನಮಃ
ಓಂ ವಿಧಾತ್ರೇ ನಮಃ
ಓಂ ಕೃತಲಕ್ಷಣಾಯ ನಮಃ
ಓಂ ಗಭಸ್ತಿನೇಮಯೇ ನಮಃ
ಓಂ ಸತ್ತ್ವಸ್ಥಾಯ ನಮಃ
ಓಂ ಸಿಂಹಾಯ ನಮಃ
ಓಂ ಭೂತಮಹೇಶ್ವರಾಯ ನಮಃ

ಓಂ ಆದಿದೇವಾಯ ನಮಃ
ಓಂ ಮಹಾದೇವಾಯ ನಮಃ
ಓಂ ದೇವೇಶಾಯ ನಮಃ
ಓಂ ದೇವಭೃದ್ಗುರವೇ ನಮಃ
ಓಂ ಉತ್ತರಾಯ ನಮಃ
ಓಂ ಗೋಪತಯೇ ನಮಃ
ಓಂ ಗೋಪ್ತ್ರೇ ನಮಃ
ಓಂ ಜ್ಞಾನಗಮ್ಯಾಯ ನಮಃ
ಓಂ ಪುರಾತನಾಯ ನಮಃ
ಓಂ ಶರೀರಭೂತಭೃತೇ ನಮಃ
ಓಂ ಭೋಕ್ತ್ರೇ ನಮಃ ॥೫೦೦॥
ಓಂ ಕಪೀನ್ದ್ರಾಯ ನಮಃ
ಓಂ ಭೂರಿದಕ್ಷಿಣಾಯ ನಮಃ
ಓಂ ಸೋಮಪಾಯ ನಮಃ
ಓಂ ಅಮೃತಪಾಯ ನಮಃ
ಓಂ ಸೋಮಾಯ ನಮಃ
ಓಂ ಪುರಜಿತೇ ನಮಃ
ಓಂ ಪುರುಸತ್ತಮಾಯ ನಮಃ
ಓಂ ವಿನಿಯಾಯ ನಮಃ
ಓಂ ಜಯಾಯ ನಮಃ
ಓಂ ಸತ್ಯಸನ್ಧಾಯ ನಮಃ
ಓಂ ದಾಶಾರ್ಹಾಯ ನಮಃ
ಓಂ ಸಾತ್ವತಾಂ ಪತಯೇ ನಮಃ
ಓಂ ಜೀವಾಯ ನಮಃ
ಓಂ ವಿನಯಿತಾಸಾಕ್ಷಿಣೇ ನಮಃ
ಓಂ ಮುಕುನ್ದಾಯ ನಮಃ

ಓಂ ಅಮಿತವಿಕ್ರಮಾಯ ನಮಃ
ಓಂ ಅಮ್ಭೋನಿಧಯೇ ನಮಃ
ಓಂ ಅನನ್ತಾತ್ಮನೇ ನಮಃ
ಓಂ ಮಹೋದಧಿಶಯಾಯ ನಮಃ
ಓಂ ಅನ್ತಕಾಯ ನಮಃ
ಓಂ ಅಜಾಯ ನಮಃ
ಓಂ ಮಹಾರ್ಹಾಯ ನಮಃ
ಓಂ ಸ್ವಾಭಾವ್ಯಾಯ ನಮಃ
ಓಂ ಚಿತಾಮಿತ್ರಾಯ ನಮಃ
ಓಂ ಪ್ರಮೋದನಾಯ ನಮಃ
ಓಂ ಆನನ್ದಾಯ ನಮಃ
ಓಂ ನನ್ದನಾಯ ನಮಃ
ಓಂ ನನ್ದಾಯ ನಮಃ
ಓಂ ಸತ್ಯಧರ್ಮಣೇ ನಮಃ
ಓಂ ತ್ರಿವಿಕ್ರಮಾಯ ನಮಃ
ಓಂ ಮಹರ್ಷಯೇ
ಕಪಿಲಾಚಾರ್ಯಾಯ ನಮಃ
ಓಂ ಕೃತಜ್ಞಾಯ ನಮಃ
ಓಂ ಮೇದಿನೀಪತಯೇ ನಮಃ
ಓಂ ತ್ರಿಪದಾಯ ನಮಃ
ಓಂ ತ್ರಿದಶಾಧ್ಯಕ್ಷಾಯ ನಮಃ
ಓಂ ಮಹಾಶೃಙ್ಗಾಯ ನಮಃ
ಓಂ ಕೃತಾನ್ತಕೃತೇ ನಮಃ
ಓಂ ಮಹಾವರಾಹಾಯ ನಮಃ
ಓಂ ಗೋವಿನ್ದಾಯ ನಮಃ

ಓಂ ಸುಷೇಣಾಯ ನಮಃ
ಓಂ ಕನಕಾಙ್ಗದಿನೇ ನಮಃ
ಓಂ ಗುಹ್ಯಾಯ ನಮಃ
ಓಂ ಗಭೀರಾಯ ನಮಃ
ಓಂ ಗಹನಾಯ ನಮಃ
ಓಂ ಗುಪ್ತಾಯ ನಮಃ
ಓಂ ಚಕ್ರಗದಾಧರಾಯ ನಮಃ
ಓಂ ವೇಧಸೇ ನಮಃ
ಓಂ ಸ್ವಾಙ್ಗಾಯ ನಮಃ
ಓಂ ಅಜಿತಾಯ ನಮಃ
ಓಂ ಕೃಷ್ಣಾಯ ನಮಃ
ಓಂ ಧೃಢಾಯ ನಮಃ
ಓಂ ಸಙ್ಕರ್ಷಣಾಯಚ್ಯುತಾಯನಮಃ
ಓಂ ವರುಣಾಯ ನಮಃ
ಓಂ ವಾರುಣಾಯ ನಮಃ
ಓಂ ವೃಕ್ಷಾಯ ನಮಃ
ಓಂ ಪುಷ್ಕರಾಕ್ಷಾಯ ನಮಃ
ಓಂ ಮಹಾಮನಸೇ ನಮಃ
ಓಂ ಭಗವತೇ ನಮಃ
ಓಂ ಭಗಘ್ನೇ ನಮಃ
ಓಂ ಆನನ್ದಿನೇ ನಮಃ
ಓಂ ವನಮಾಲಿನೇ ನಮಃ
ಓಂ ಹಲಾಯುಧಾಯ ನಮಃ
ಓಂ ಆದಿತ್ಯಾಯ ನಮಃ
ಓಂ ಜ್ಯೋತಿರಾದಿತ್ಯಾಯ ನಮಃ
ಓಂ ಸಹಿಷ್ಣವೇ ನಮಃ
ಓಂ ಗತಿಸತ್ತಮಾಯ ನಮಃ

ಓಂ ಸುಧನ್ವನೇ ನಮಃ
ಓಂ ಖಣ್ಡಪರಶವೇ ನಮಃ
ಓಂ ದಾರುಣಾಯ ನಮಃ
ಓಂ ದ್ರವಿಣಪ್ರದಾಯ ನಮಃ
ಓಂ ದಿವಃಸ್ಪೃಶೇ ನಮಃ
ಓಂ ಸರ್ವದೃಗ್ವ್ಯಾಸಾಯ ನಮಃ
ಓಂ ವಾಚಸ್ಪತಯೇಽಯೋನಿಜಾಯ ನಮಃ
ಓಂ ತ್ರಿಸಾಮ್ನೇ ನಮಃ
ಓಂ ಸಾಮಗಾಯ ನಮಃ
ಓಂ ಸಾಮ್ನೇ ನಮಃ
ಓಂ ನಿರ್ವಾಣಾಯ ನಮಃ
ಓಂ ಭೇಷಜಾಯ ನಮಃ
ಓಂ ಭಿಷಜೇ ನಮಃ
ಓಂ ಸಂನ್ಯಾಸಕೃತೇ ನಮಃ
ಓಂ ಶಮಾಯ ನಮಃ
ಓಂ ಶಾನ್ತಾಯ ನಮಃ
ಓಂ ನಿಷ್ಠಾಯೈ ನಮಃ
ಓಂ ಶಾನ್ತಯೇ ನಮಃ
ಓಂ ಪರಾಯಣಾಯ ನಮಃ
ಓಂ ಶುಭಾಙ್ಗಾಯ ನಮಃ
ಓಂ ಶಾನ್ತಿದಾಯ ನಮಃ
ಓಂ ಸ್ರಷ್ಟ್ರೇ ನಮಃ
ಓಂ ಕುಮುದಾಯ ನಮಃ
ಓಂ ಕುವಲೇಶಯಾಯ ನಮಃ
ಓಂ ಗೋಹಿತಾಯ ನಮಃ
ಓಂ ಗೋಪತಯೇ ನಮಃ
ಓಂ ಗೋಪ್ತ್ರೇ ನಮಃ
ಓಂ ವೃಷಭಾಕ್ಷಾಯ ನಮಃ
ಓಂ ವೃಷಪ್ರಿಯಾಯ ನಮಃ
ಓಂ ಅನಿವರ್ತಿನೇ ನಮಃ
ಓಂ ನಿವೃತ್ತಾತ್ಮನೇ ನಮಃ
ಓಂ ಸಂಕ್ಷೇಪ್ತ್ರೇ ನಮಃ
ಓಂ ಕ್ಷೇಮಕೃತೇ ನಮಃ
ಓಂ ಶಿವಾಯ ನಮಃ ||೬೦೦||
ಓಂ ಶ್ರೀವತ್ಸವಕ್ಷಸೇ ನಮಃ
ಓಂ ಶ್ರೀವಾಸಾಯ ನಮಃ
ಓಂ ಶ್ರೀಪತಯೇ ನಮಃ
ಓಂ ಶ್ರೀಮತಾಂವರಾಯ ನಮಃ
ಓಂ ಶ್ರೀದಾಯ ನಮಃ
ಓಂ ಶ್ರೀಶಾಯ ನಮಃ
ಓಂ ಶ್ರೀನಿವಾಸಾಯ ನಮಃ
ಓಂ ಶ್ರೀನಿಧಯೇ ನಮಃ
ಓಂ ಶ್ರೀವಿಭಾವನಾಯ ನಮಃ
ಓಂ ಶ್ರೀ ಶ್ರೀಧರಾಯ ನಮಃ
ಓಂ ಶ್ರೀಕರಾಯ ನಮಃ
ಓಂ ಶ್ರೇಯಸೇ ನಮಃ
ಓಂ ಶ್ರೀಮತೇ ನಮಃ
ಓಂ ಲೋಕತ್ರಯಾಶ್ರಯಾಯ ನಮಃ
ಓಂ ಸ್ವಕ್ಷಾಯ ನಮಃ
ಓಂ ಸ್ವಙ್ಗಾಯ ನಮಃ

ಓಂ ಶತಾನನ್ದಾಯ	ನಮಃ	ಓಂ ವೀರಾಯ	ನಮಃ
ಓಂ ನನ್ದಯೇ	ನಮಃ	ಓಂ ಶೌರಯೇ	ನಮಃ
ಓಂ ಜ್ಯೋತಿರ್ಗಣೇಶ್ವರಾಯ		ಓಂ ಶೂರಜನೇಶ್ವರಾಯ	ನಮಃ
	ನಮಃ	ಓಂ ತ್ರಿಲೋಕಾತ್ಮನೇ	ನಮಃ
ಓಂ ವಿಜಿತಾತ್ಮನೇ	ನಮಃ	ಓಂ ತ್ರಿಲೋಕೇಶಾಯ	ನಮಃ
ಓಂ ಅವಿಧೇಯಾತ್ಮನೇ	ನಮಃ	ಓಂ ಕೇಶವಾಯ	ನಮಃ
ಓಂ ಸತ್ಕೀರ್ತಯೇ	ನಮಃ	ಓಂ ಕೇಶಿಘ್ನೇ	ನಮಃ
ಓಂ ಛಿನ್ನಸಂಶಯಾಯ	ನಮಃ	ಓಂ ಹರಯೇ	ನಮಃ
ಓಂ ಉದೀರ್ಣಾಯ	ನಮಃ	ಓಂ ಕಾಮದೇವಾಯ	ನಮಃ
ಓಂ ಸರ್ವತಶ್ಚಕ್ಷುಷೇ	ನಮಃ	ಓಂ ಕಾಮಪಾಲಾಯ	ನಮಃ
ಓಂ ಅನೀಶಾಯ	ನಮಃ	ಓಂ ಕಾಮಿನೇ	ನಮಃ
ಓಂ ಶಾಶ್ವತಸ್ಥಿರಾಯ	ನಮಃ	ಓಂ ಕಾನ್ತಾಯ	ನಮಃ
ಓಂ ಭೂಶಯಾಯ	ನಮಃ	ಓಂ ಕೃತಾಗಮಾಯ	ನಮಃ
ಓಂ ಭೂಷಣಾಯ	ನಮಃ	ಓಂ ಅನಿರ್ದೇಶ್ಯವಪುಷೇ	ನಮಃ
ಓಂ ಭೂತಯೇ	ನಮಃ	ಓಂ ವಿಷ್ಣವೇ	ನಮಃ
ಓಂ ವಿಶೋಕಾಯ	ನಮಃ	ಓಂ ವೀರಾಯ	ನಮಃ
ಓಂ ಶೋಕನಾಶನಾಯ	ನಮಃ	ಓಂ ಅನನ್ತಾಯ	ನಮಃ
ಓಂ ಅರ್ಚಿಷ್ಮತೇ	ನಮಃ	ಓಂ ಧನಂಜಯಾಯ	ನಮಃ
ಓಂ ಅರ್ಚಿತಾಯ	ನಮಃ	ಓಂ ಬ್ರಹ್ಮಣ್ಯಾಯ	ನಮಃ
ಓಂ ಕುಮ್ಭಾಯ	ನಮಃ	ಓಂ ಬ್ರಹ್ಮಕೃತೇ	ನಮಃ
ಓಂ ವಿಶುದ್ಧಾತ್ಮನೇ	ನಮಃ	ಓಂ ಬ್ರಹ್ಮಣೇ	ನಮಃ
ಓಂ ವಿಶೋಧನಾಯ	ನಮಃ	ಓಂ ಬ್ರಹ್ಮಣೇ	ನಮಃ
ಓಂ ಅನಿರುದ್ಧಾಯ	ನಮಃ	ಓಂ ಬ್ರಹ್ಮವಿವರ್ಧನಾಯ	ನಮಃ
ಓಂ ಅಪ್ರತಿರಥಾಯ	ನಮಃ	ಓಂ ಬ್ರಹ್ಮವಿದೇ	ನಮಃ
ಓಂ ಪ್ರದ್ಯುಮ್ನಾಯ	ನಮಃ	ಓಂ ಬ್ರಾಹ್ಮಣಾಯ	ನಮಃ
ಓಂ ಅಮಿತವಿಕ್ರಮಾಯ	ನಮಃ	ಓಂ ಬ್ರಹ್ಮಿಣೇ	ನಮಃ
ಓಂ ಕಾಲನೇಮಿನಿಘ್ನೇ	ನಮಃ	ಓಂ ಬ್ರಹ್ಮಜ್ಞಾಯ	ನಮಃ

ಓಂ ಬ್ರಾಹ್ಮಣಪ್ರಿಯಾಯ ನಮಃ
ಓಂ ಮಹಾಕ್ರಮಾಯ ನಮಃ
ಓಂ ಮಹಾಕರ್ಮಣೇ ನಮಃ
ಓಂ ಮಹಾತೇಜಸೇ ನಮಃ
ಓಂ ಮಹೋರಗಾಯ ನಮಃ
ಓಂ ಮಹಾಕ್ರತವೇ ನಮಃ
ಓಂ ಮಹಾಯಜ್ವನೇ ನಮಃ
ಓಂ ಮಹಾಯಜ್ಞಾಯ ನಮಃ
ಓಂ ಮಹಾಹವಿಷೇ ನಮಃ
ಓಂ ಸ್ತವ್ಯಾಯ ನಮಃ
ಓಂ ಸ್ತವಪ್ರಿಯಾಯ ನಮಃ
ಓಂ ಸ್ತೋತ್ರಾಯ ನಮಃ
ಓಂ ಸ್ತುತಯೇ ನಮಃ
ಓಂ ಸ್ತೋತ್ರೇ ನಮಃ
ಓಂ ರಣಪ್ರಿಯಾಯ ನಮಃ
ಓಂ ಪೂರ್ಣಾಯ ನಮಃ
ಓಂ ಪೂರಯಿತ್ರೇ ನಮಃ
ಓಂ ಪುಣ್ಯಾಯ ನಮಃ
ಓಂ ಪುಣ್ಯಕೀರ್ತಯೇ ನಮಃ
ಓಂ ಅನಾಮಯಾಯ ನಮಃ
ಓಂ ಮನೋಜವಾಯ ನಮಃ
ಓಂ ತೀರ್ಥಕರಾಯ ನಮಃ
ಓಂ ವಸುರೇತಸೇ ನಮಃ
ಓಂ ವಸುಪ್ರದಾಯ ನಮಃ
ಓಂ ವಸುಪ್ರದಾಯ ನಮಃ
ಓಂ ವಾಸುದೇವಾಯ ನಮಃ
ಓಂ ವಸವೇ ನಮಃ
ಓಂ ವಸುಮನಸೇ ನಮಃ
ಓಂ ಹವಿಷೇ ನಮಃ
ಓಂ ಸದ್ಗತಯೇ ನಮಃ
ಓಂ ಸತ್ಕೃತಯೇ ನಮಃ ॥೨೦೦॥
ಓಂ ಸತ್ತಾಯೈ ನಮಃ
ಓಂ ಸದ್ಭೂತಯೇ ನಮಃ
ಓಂ ಸತ್ಪರಾಯಣಾಯ ನಮಃ
ಓಂ ಶೂರಸೇನಾಯ ನಮಃ
ಓಂ ಯದುಶ್ರೇಷ್ಠಾಯ ನಮಃ
ಓಂ ಸನ್ನಿವಾಸಾಯ ನಮಃ
ಓಂ ಸುಯಾಮುನಾಯ ನಮಃ
ಓಂ ಭೂತಾವಾಸಾಯ ನಮಃ
ಓಂ ವಾಸುದೇವಾಯ ನಮಃ
ಓಂ ಸರ್ವಾಸುನಿಲಯಾಯ ನಮಃ
ಓಂ ಅನಲಾಯ ನಮಃ
ಓಂ ದರ್ಪಘ್ನೇ ನಮಃ
ಓಂ ದರ್ಪದಾಯ ನಮಃ
ಓಂ ದೃಪ್ತಾಯ ನಮಃ
ಓಂ ದುರ್ಧರಾಯ ನಮಃ
ಓಂ ಅಪರಾಜಿತಾಯ ನಮಃ
ಓಂ ವಿಶ್ವಮೂರ್ತಯೇ ನಮಃ
ಓಂ ಮಹಾಮೂರ್ತಯೇ ನಮಃ
ಓಂ ದೀಪ್ತಮೂರ್ತಯೇ ನಮಃ
ಓಂ ಅಮೂರ್ತಿಮತೇ ನಮಃ
ಓಂ ಅನೇಕಮೂರ್ತಯೇ ನಮಃ

ಓಂ ಅವ್ಯಕ್ತಾಯ ನಮಃ
ಓಂ ಶತಮೂರ್ತಯೇ ನಮಃ
ಓಂ ಶತಾನನಾಯ ನಮಃ
ಓಂ ಏಕಸ್ಮೈ ನಮಃ
ಓಂ ನೈಕಸ್ಮೈ ನಮಃ
ಓಂ ಸವಾಯ ನಮಃ
ಓಂ ಕಾಯ ನಮಃ
ಓಂ ಕಸ್ಮೈ ನಮಃ
ಓಂ ಯಸ್ಮೈ ನಮಃ
ಓಂ ತಸ್ಮೈ ನಮಃ
ಓಂ ಅನುತ್ತಮಾಯ ಪದಾಯ ನಮಃ
ಓಂ ಲೋಕಬನ್ಧವೇ ನಮಃ
ಓಂ ಲೋಕನಾಥಾಯ ನಮಃ
ಓಂ ಮಾಧವಾಯ ನಮಃ
ಓಂ ಭಕ್ತವತ್ಸಲಾಯ ನಮಃ
ಓಂ ಸುವರ್ಣವರ್ಣಾಯ ನಮಃ
ಓಂ ಹೇಮಾಙ್ಗಾಯ ನಮಃ
ಓಂ ವರಾಙ್ಗಾಯ ನಮಃ
ಓಂ ಚನ್ದನಾಙ್ಗದಿನೇ ನಮಃ
ಓಂ ವೀರಘ್ನೇ ನಮಃ
ಓಂ ವಿಷಮಾಯ ನಮಃ
ಓಂ ಶೂನ್ಯಾಯ ನಮಃ
ಓಂ ಘೃತಾಶಿಷೇ ನಮಃ
ಓಂ ಅಚಲಾಯ ನಮಃ
ಓಂ ಚಲಾಯ ನಮಃ
ಓಂ ಅಮಾನಿನೇ ನಮಃ
ಓಂ ಮಾನದಾಯ ನಮಃ
ಓಂ ಮಾನ್ಯಾಯ ನಮಃ
ಓಂ ಲೋಕಸ್ವಾಮಿನೇ ನಮಃ
ಓಂ ತ್ರಿಲೋಕಧೃತೇ ನಮಃ
ಓಂ ಸುಮೇಧಸೇ ನಮಃ
ಓಂ ಮೇಧಜಾಯ ನಮಃ
ಓಂ ಧನ್ಯಾಯ ನಮಃ
ಓಂ ಸತ್ಯಮೇಧಸೇ ನಮಃ
ಓಂ ಧರಾಧರಾಯ ನಮಃ
ಓಂ ತೇಜೋವೃಷಾಯ ನಮಃ
ಓಂ ದ್ಯುತಿಧರಾಯ ನಮಃ
ಓಂ ಸರ್ವಶಸ್ತ್ರಭೃತಾಂ ವರಾಯ ನಮಃ
ಓಂ ಪ್ರಗ್ರಹಾಯ ನಮಃ
ಓಂ ನಿಗ್ರಹಾಯ ನಮಃ
ಓಂ ವ್ಯಗ್ರಾಯ ನಮಃ
ಓಂ ನೈಕಶೃಙ್ಗಾಯ ನಮಃ
ಓಂ ಗದಾಗ್ರಜಾಯ ನಮಃ
ಓಂ ಚತುರ್ಮೂರ್ತಯೇ ನಮಃ
ಓಂ ಚತುರ್ಬಾಹವೇ ನಮಃ
ಓಂ ಚತುರ್ವ್ಯೂಹಾಯ ನಮಃ
ಓಂ ಚತುರ್ಗತಯೇ ನಮಃ
ಓಂ ಚತುರಾತ್ಮನೇ ನಮಃ
ಓಂ ಚತುರ್ಭಾವಾಯ ನಮಃ
ಓಂ ಚತುರ್ವೇದವಿದೇ ನಮಃ
ಓಂ ಏಕಪದೇ ನಮಃ
ಓಂ ಸಮಾವರ್ತಾಯ ನಮಃ

ಓಂ ಅನಿವೃತ್ತಾತ್ಮನೇ ನಮಃ
ಓಂ ದುರ್ಜಯಾಯ ನಮಃ
ಓಂ ದುರತಿಕ್ರಮಾಯ ನಮಃ
ಓಂ ದುರ್ಲಭಾಯ ನಮಃ
ಓಂ ದುರ್ಗಮಾಯ ನಮಃ
ಓಂ ದುರ್ಗಾಯ ನಮಃ
ಓಂ ದುರಾವಾಸಾಯ ನಮಃ
ಓಂ ದುರಾರಿಘ್ನೇ ನಮಃ
ಓಂ ಶುಭಾಙ್ಗಾಯ ನಮಃ
ಓಂ ಲೋಕಸಾರಙ್ಗಾಯ ನಮಃ
ಓಂ ಸುತನ್ತವೇ ನಮಃ
ಓಂ ತನ್ತುವರ್ಧನಾಯ ನಮಃ
ಓಂ ಇನ್ದ್ರಕರ್ಮಣೇ ನಮಃ
ಓಂ ಮಹಾಕರ್ಮಣೇ ನಮಃ
ಓಂ ಕೃತಕರ್ಮಣೇ ನಮಃ
ಓಂ ಕೃತಾಗಮಾಯ ನಮಃ
ಓಂ ಉದ್ಭವಾಯ ನಮಃ
ಓಂ ಸುನ್ದರಾಯ ನಮಃ
ಓಂ ಸುನ್ದಾಯ ನಮಃ
ಓಂ ರತ್ನನಾಭಾಯ ನಮಃ
ಓಂ ಸುಲೋಚನಾಯ ನಮಃ
ಓಂ ಅರ್ಕಾಯ ನಮಃ
ಓಂ ವಾಜಸನಾಯ ನಮಃ
ಓಂ ಶೃಙ್ಗಿಣೇ ನಮಃ
ಓಂ ಜಯನ್ತಾಯ ನಮಃ
ಓಂ ಸರ್ವವಿಜ್ಜಯಿನೇ ನಮಃ
ಓಂ ಸುವರ್ಣಬಿನ್ದವೇ ನಮಃ
॥೮೦೦॥
ಓಂ ಅಕ್ಷೋಭ್ಯಾಯ ನಮಃ
ಓಂ ಸರ್ವವಾಗೀಶ್ವರೇಶ್ವರಾಯ ನಮಃ
ಓಂ ಮಹಾಹ್ರದಾಯ ನಮಃ
ಓಂ ಮಹಾಗರ್ತಾಯ ನಮಃ
ಓಂ ಮಹಾಭೂತಾಯ ನಮಃ
ಓಂ ಮಹಾನಿಧಯೇ ನಮಃ
ಓಂ ಕುಮುದಾಯ ನಮಃ
ಓಂ ಕುನ್ದರಾಯ ನಮಃ
ಓಂ ಕುನ್ದಾಯ ನಮಃ
ಓಂ ಪರ್ಜನ್ಯಾಯ ನಮಃ
ಓಂ ಪಾವನಾಯ ನಮಃ
ಓಂ ಅನಿಲಾಯ ನಮಃ
ಓಂ ಅಮೃತಾಶಾಯ ನಮಃ
ಓಂ ಅಮೃತವಪುಷೇ ನಮಃ
ಓಂ ಸರ್ವಜ್ಞಾಯ ನಮಃ
ಓಂ ಸರ್ವತೋಮುಖಾಯ ನಮಃ
ಓಂ ಸುಲಭಾಯ ನಮಃ
ಓಂ ಸುವ್ರತಾಯ ನಮಃ
ಓಂ ಸಿದ್ಧಾಯ ನಮಃ
ಓಂ ಶತ್ರುಜಿತೇ ನಮಃ
ಓಂ ಶತ್ರುತಾಪನಾಯ ನಮಃ
ಓಂ ನ್ಯಗ್ರೋಧಾಯ ನಮಃ
ಓಂ ಉದುಮ್ಬರಾಯ ನಮಃ

ಓಂ ಅಶ್ವತ್ಥಾಯ	ನಮಃ	ಓಂ ಯೋಗೀಶಾಯ	ನಮಃ
ಓಂ ಚಾಣೂರಾನ್ಧ್ರನಿಷೂದನಾಯ	ನಮಃ	ಓಂ ಸರ್ವಕಾಮದಾಯ	ನಮಃ
		ಓಂ ಆಶ್ರಮಾಯ	ನಮಃ
ಓಂ ಸಹಸ್ರಾರ್ಚಿಷೇ	ನಮಃ	ಓಂ ಶ್ರಮಣಾಯ	ನಮಃ
ಓಂ ಸಪ್ತಜಿಹ್ವಾಯ	ನಮಃ	ಓಂ ಕ್ಷಾಮಾಯ	ನಮಃ
ಓಂ ಸಪ್ತೈಧಸೇ	ನಮಃ	ಓಂ ಸುಪರ್ಣಾಯ	ನಮಃ
ಓಂ ಸಪ್ತವಾಹನಾಯ	ನಮಃ	ಓಂ ವಾಯುವಾಹನಾಯ	ನಮಃ
ಓಂ ಅಮೂರ್ತಯೇ	ನಮಃ	ಓಂ ಧನುರ್ಧರಾಯ	ನಮಃ
ಓಂ ಅನಘಾಯ	ನಮಃ	ಓಂ ಧನುರ್ವೇದಾಯ	ನಮಃ
ಓಂ ಅಚಿನ್ತ್ಯಾಯ	ನಮಃ	ಓಂ ದಣ್ಡಾಯ	ನಮಃ
ಓಂ ಭಯಕೃತೇ	ನಮಃ	ಓಂ ದಮಯಿತ್ರೇ	ನಮಃ
ಓಂ ಭಯನಾಶನಾಯ	ನಮಃ	ಓಂ ದಮಾಯ	ನಮಃ
ಓಂ ಅಣವೇ	ನಮಃ	ಓಂ ಅಪರಾಜಿತಾಯ	ನಮಃ
ಓಂ ಬೃಹತೇ	ನಮಃ	ಓಂ ಸರ್ವಸಹಾಯ	ನಮಃ
ಓಂ ಕೃಶಾಯ	ನಮಃ	ಓಂ ನಿಯನ್ತ್ರೇ	ನಮಃ
ಓಂ ಸ್ಥೂಲಾಯ	ನಮಃ	ಓಂ ಅನಿಯಮಾಯ	ನಮಃ
ಓಂ ಗುಣಭೃತೇ	ನಮಃ	ಓಂ ಅಯಮಾಯ	ನಮಃ
ಓಂ ನಿರ್ಗುಣಾಯ	ನಮಃ	ಓಂ ಸತ್ತ್ವವತೇ	ನಮಃ
ಓಂ ಮಹತೇ	ನಮಃ	ಓಂ ಸಾತ್ತ್ವಿಕಾಯ	ನಮಃ
ಓಂ ಅಧೃತಾಯ	ನಮಃ	ಓಂ ಸತ್ಯಾಯ	ನಮಃ
ಓಂ ಸ್ವಧೃತಾಯ	ನಮಃ	ಓಂ ಸತ್ಯಧರ್ಮಪರಾಯಣಾಯ	
ಓಂ ಸ್ವಾಸ್ಯಾಯ	ನಮಃ		ನಮಃ
ಓಂ ಪ್ರಾಗ್ವಂಶಾಯ	ನಮಃ	ಓಂ ಅಭಿಪ್ರಾಯಾಯ	ನಮಃ
ಓಂ ವಂಶವರ್ಧನಾಯ	ನಮಃ	ಓಂ ಪ್ರಿಯಾರ್ಹಾಯ	ನಮಃ
ಓಂ ಭಾರಭೃತೇ	ನಮಃ	ಓಂ ಅರ್ಹಾಯ	ನಮಃ
ಓಂ ಕಥಿತಾಯ	ನಮಃ	ಓಂ ಪ್ರಿಯಕೃತೇ	ನಮಃ
ಓಂ ಯೋಗಿನೇ	ನಮಃ	ಓಂ ಪ್ರೀತಿವರ್ಧನಾಯ	ನಮಃ

ಓಂ ವಿಹಾಯಸಗತಯೇ ನಮಃ
ಓಂ ಜ್ಯೋತಿಷೇ ನಮಃ
ಓಂ ಸುರುಚಯೇ ನಮಃ
ಓಂ ಹುತಭುಜೇ ನಮಃ
ಓಂ ವಿಭವೇ ನಮಃ
ಓಂ ರವಯೇ ನಮಃ
ಓಂ ವಿರೋಚನಾಯ ನಮಃ
ಓಂ ಸೂರ್ಯಾಯ ನಮಃ
ಓಂ ಸವಿತ್ರೇ ನಮಃ
ಓಂ ರವಿಲೋಚನಾಯ ನಮಃ
ಓಂ ಅನನ್ತಾಯ ನಮಃ
ಓಂ ಹುತಭುಜೇ ನಮಃ
ಓಂ ಭೋಕ್ತ್ರೇ ನಮಃ
ಓಂ ಸುಖದಾಯ ನಮಃ
ಓಂ ನೈಕಜಾಯ ನಮಃ
ಓಂ ಅಗ್ರಜಾಯ ನಮಃ
ಓಂ ಅನಿರ್ವಿಣ್ಣಾಯ ನಮಃ
ಓಂ ಸದಾಮರ್ಷಿಣೇ ನಮಃ
ಓಂ ಲೋಕಾಧಿಷ್ಠಾನಾಯ ನಮಃ
ಓಂ ಅದ್ಭುತಾಯ ನಮಃ
ಓಂ ಸನಾತೇ ನಮಃ
ಓಂ ಸನಾತನತಮಾಯ ನಮಃ
ಓಂ ಕಪಿಲಾಯ ನಮಃ
ಓಂ ಕಪಯೇ ನಮಃ
ಓಂ ಅವ್ಯಯಾಯ ನಮಃ
॥೯೦೦॥
ಓಂ ಸ್ವಸ್ತಿದಾಯ ನಮಃ
ಓಂ ಸ್ವಸ್ತಿಕೃತೇ ನಮಃ
ಓಂ ಸ್ವಸ್ತಿನೇ ನಮಃ
ಓಂ ಸ್ವಸ್ತಿಭುಜೇ ನಮಃ
ಓಂ ಸ್ವಸ್ತಿದಕ್ಷಿಣಾಯ ನಮಃ
ಓಂ ಅರೌದ್ರಾಯ ನಮಃ
ಓಂ ಕುಣ್ಡಲಿನೇ ನಮಃ
ಓಂ ಚಕ್ರಿಣೇ ನಮಃ
ಓಂ ವಿಕ್ರಮಿಣೇ ನಮಃ
ಓಂ ಊರ್ಜಿತಶಾಸನಾಯ ನಮಃ
ಓಂ ಶಬ್ದಾತಿಗಾಯ ನಮಃ
ಓಂ ಶಬ್ದಸಹಾಯ ನಮಃ
ಓಂ ಶಿಶಿರಾಯ ನಮಃ
ಓಂ ಶರ್ವರೀಕರಾಯ ನಮಃ
ಓಂ ಅಕ್ರೂರಾಯ ನಮಃ
ಓಂ ಪೇಶಲಾಯ ನಮಃ
ಓಂ ದಕ್ಷಾಯ ನಮಃ
ಓಂ ದಕ್ಷಿಣಾಯ ನಮಃ
ಓಂ ಕ್ಷಮಿಣಾಂ ವರಾಯ ನಮಃ
ಓಂ ವಿದ್ವತ್ತಮಾಯ ನಮಃ
ಓಂ ವೀತಭಯಾಯ ನಮಃ
ಓಂ ಪುಣ್ಯಶ್ರವಣಕೀರ್ತನಾಯ ನಮಃ
ಓಂ ಉತ್ತಾರಣಾಯ ನಮಃ
ಓಂ ದುಷ್ಕೃತಿಘ್ನೇ ನಮಃ
ಓಂ ಪುಣ್ಯಾಯ ನಮಃ
ಓಂ ದುಃಸ್ವಪ್ನನಾಶನಾಯ ನಮಃ
ಓಂ ವೀರಘ್ನೇ ನಮಃ

ಓಂ ರಕ್ಷಣಾಯ	ನಮಃ	ಓಂ ಊರ್ಧ್ವಗಾಯ	ನಮಃ
ಓಂ ಸನ್ತಾಯ	ನಮಃ	ಓಂ ಸತ್ಪಥಾಚಾರಾಯ	ನಮಃ
ಓಂ ಜೀವನಾಯ	ನಮಃ	ಓಂ ಪ್ರಾಣದಾಯ	ನಮಃ
ಓಂ ಪರ್ಯವಸ್ಥಿತಾಯ	ನಮಃ	ಓಂ ಪ್ರಣವಾಯ	ನಮಃ
ಓಂ ಅನನ್ತರೂಪಾಯ	ನಮಃ	ಓಂ ಪಣಾಯ	ನಮಃ
ಓಂ ಅನನ್ತಶ್ರಿಯೇ	ನಮಃ	ಓಂ ಪ್ರಮಾಣಾಯ	ನಮಃ
ಓಂ ಜಿತಮನ್ಯವೇ	ನಮಃ	ಓಂ ಪ್ರಾಣನಿಲಯಾಯ	ನಮಃ
ಓಂ ಭಯಾಪಹಾಯ	ನಮಃ	ಓಂ ಪ್ರಾಣಭೃತೇ	ನಮಃ
ಓಂ ಚತುರಶ್ರಾಯ	ನಮಃ	ಓಂ ಪ್ರಾಣಜೀವನಾಯ	ನಮಃ
ಓಂ ಗಭೀರಾತ್ಮನೇ	ನಮಃ	ಓಂ ತತ್ತ್ವಾಯ	ನಮಃ
ಓಂ ವಿದಿಶಾಯ	ನಮಃ	ಓಂ ತತ್ತ್ವವಿದೇ	ನಮಃ
ಓಂ ವ್ಯಾದಿಶಾಯ	ನಮಃ	ಓಂ ಏಕಾತ್ಮನೇ	ನಮಃ
ಓಂ ದಿಶಾಯ	ನಮಃ	ಓಂ ಜನ್ಮಮೃತ್ಯುಜರಾತಿಗಾಯ	
ಓಂ ಅನಾದಯೇ	ನಮಃ		ನಮಃ
ಓಂ ಭುವೋಭುವೇ	ನಮಃ	ಓಂ ಭೂರ್ಭುವಃಸ್ವಸ್ತರವೇ	ನಮಃ
ಓಂ ಲಕ್ಷ್ಮ್ಯೈ	ನಮಃ	ಓಂ ತಾರಾಯ	ನಮಃ
ಓಂ ಸುವೀರಾಯ	ನಮಃ	ಓಂ ಸವಿತ್ರೇ	ನಮಃ
ಓಂ ರುಚಿರಾಙ್ಗದಾಯ	ನಮಃ	ಓಂ ಪ್ರಪಿತಾಮಹಾಯ	ನಮಃ
ಓಂ ಜನನಾಯ	ನಮಃ	ಓಂ ಯಜ್ಞಾಯ	ನಮಃ
ಓಂ ಜನಜನ್ಮಾದಯೇ	ನಮಃ	ಓಂ ಯಜ್ಞಪತಯೇ	ನಮಃ
ಓಂ ಭೀಮಾಯ	ನಮಃ	ಓಂ ಯಜ್ವನೇ	ನಮಃ
ಓಂ ಭೀಮಪರಾಕ್ರಮಾಯ	ನಮಃ	ಓಂ ಯಜ್ಞಾಙ್ಗಾಯ	ನಮಃ
ಓಂ ಆಧಾರನಿಲಯಾಯ	ನಮಃ	ಓಂ ಯಜ್ಞವಾಹನಾಯ	ನಮಃ
ಓಂ ಅಧಾತ್ರೇ	ನಮಃ	ಓಂ ಯಜ್ಞಭೃತೇ	ನಮಃ
ಓಂ ಪುಷ್ಪಹಾಸಾಯ	ನಮಃ	ಓಂ ಯಜ್ಞಕೃತೇ	ನಮಃ
ಓಂ ಪ್ರಜಾಗರಾಯ	ನಮಃ	ಓಂ ಯಜ್ಞಿನೇ	ನಮಃ

ಓಂ ಯಜ್ಞಭುಜೇ ನಮಃ
ಓಂ ಯಜ್ಞಸಾಧನಾಯ ನಮಃ
ಓಂ ಯಜ್ಞಾನ್ತಕೃತೇ ನಮಃ
ಓಂ ಯಜ್ಞಗುಹ್ಯಾಯ ನಮಃ
ಓಂ ಅನ್ನಾಯ ನಮಃ
ಓಂ ಅನ್ನಾದಾಯ ನಮಃ
ಓಂ ಆತ್ಮಯೋನಯೇ ನಮಃ
ಓಂ ಸ್ವಯಂಜಾತಾಯ ನಮಃ
ಓಂ ವೈಖಾನಾಯ ನಮಃ
ಓಂ ಸಾಮಗಾಯನಾಯ ನಮಃ
ಓಂ ದೇವಕೀನನ್ದನಾಯ ನಮಃ
ಓಂ ಸ್ರಷ್ಟ್ರೇ ನಮಃ
ಓಂ ಕ್ಷಿತೀಶಾಯ ನಮಃ
ಓಂ ಪಾಪನಾಶನಾಯ ನಮಃ
ಓಂ ಶಙ್ಖಭೃತೇ ನಮಃ
ಓಂ ನನ್ದಕಿನೇ ನಮಃ
ಓಂ ಚಕ್ರಿಣೇ ನಮಃ
ಓಂ ಶಾರ್ಙ್ಗಧನ್ವನೇ ನಮಃ
ಓಂ ಗದಾಧರಾಯ ನಮಃ
ಓಂ ರಥಾಙ್ಗಪಾಣಯೇ ನಮಃ
ಓಂ ಅಕ್ಷೋಭ್ಯಾಯ ನಮಃ
ಓಂ ಸರ್ವಪ್ರಹರಣಾಯುಧಾಯ ನಮಃ

॥೧೦೦೦॥

ಓಂ ಶ್ರೀಮಹಾವಿಷ್ಣವೇ ನಮಃ–ಸಹಸ್ರನಾಮಪೂಜಾಂ ಸಮರ್ಪಯಾಮಿ
ಹರಿಃ ಓಂ ಶ್ರೀಕೃಷ್ಣಾರ್ಪಣಮಸ್ತು
॥ ಶ್ರೀಸದ್ಗುರುಚರಣಾರವಿನ್ದಾರ್ಪಣಮಸ್ತು ॥

ಓಂ ತತ್ಸತ್

License No. WPP-13 Licensed to Post without pre-payment of postage
Posted at Thayagaraja Nagar Post Office

Reg. No. K.R.N.U. 86, BHARATHA DARSHANA R.N. 13245/57



Edited by : "Viswamitra", Printed & Published by
K. S. Kowshik at Bharatha Darshana Press, Bangalore - 560 028.